ಇತಿಹಾಸ ದರ್ಶನ

ಸಂಪುಟ ೧೫/೨೦೦೦

KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧೫/೨೦೦೦

೧೯೯೯ರಲ್ಲಿ ಹರಪನಹಳ್ಳಿಯಲ್ಲಿ ಸಮಾವೇಶಗೊಂಡಿದ್ದ
ಕರ್ನಾಟಕ ಇತಿಹಾಸ ಅಕಾದೆಮಿಯ ಹದಿಮೂರನೆಯ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು
ಮಂಡಿಸಿದ ಪ್ರಬಂಧಗಳ ಸಂಕಲನ

ಸಂಪಾದಕರು

* ಎಂ. ಜಿ. ನಾಗರಾಜ್

* ಡಾ॥ ಪಿ. ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA

Proceedings of the Thirteenth Annual Conference of
The Karnatāka Itihasa Academy (Regd.)
held at Harapanahalli on 11th, 12th & 13th June 1999

Volume 15, June 2000

Edited by : ***M. G. Nagaraj***
Dr. P. V. Krishna Murthy

Published by : ***Karnataka Itihasa Academy (Regd.)***
Gokhale Institute of Public Affairs Premises
Basavanagudi Road, Narasimharaja Colony
Bangalore - 560 019

ಬೆಲೆ : ರೂ. ೧೫೦-೦೦

ಪ್ರಬಂಧಕಾರರ ಗಮನಕ್ಕೆ

ಈ ಸಂಪುಟದ ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆ. ಅವು ಅಕಾದೆಮಿಯ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲ. ಕರ್ನಾಟಕ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲುವ ಬರಹಗಳಿಗೆ ಇತಿಹಾಸ ದರ್ಶನ ಮೀಸಲಾಗಿದೆ. ಲೇಖನಗಳು ಹಸ್ತಲಿಖಿತ ೧೦ ಪುಟಗಳ ಪರಿಮಿತಿಯಲ್ಲಿ ಇರುವುದು ಸೂಕ್ತ. ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ **ಸ್ಫುಟವಾದ ಅಕ್ಷರಗಳಲ್ಲಿ** ಬರೆದಿರಬೇಕು. **ಬೆರಳಚ್ಚು** ಮಾಡಿಸಿದ್ದರೆ **ಅಗತ್ಯವಿರುವೆಡೆ ತಿದ್ದುಪಡಿ** ಮಾಡಿರಬೇಕು. ಅಡಿಟಿಪ್ಪಣಿಗಳನ್ನು, ಗ್ರಂಥಲೇಖನಾಧಾರ ವಿವರಗಳನ್ನು ಈಗಾಗಲೇ ಸಂಶೋಧನ ಬರಹಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಕ್ರಮದಲ್ಲಿ ನೀಡುವುದು ಉತ್ತಮ. ಈಗಿನ ೧೪ನೇ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳನ್ನು ಅನಿವಾರ್ಯ ಕಾರಣಗಳಿಂದ ಅಲ್ಲಿಯೇ ಕೊಡಲಾಗದಿರುವ ಅಕಾದೆಮಿಯ ಸದಸ್ಯ ಲೇಖಕರು, ದಯಮಾಡಿ ತಮ್ಮ ಪೂರ್ಣ ವಿಳಾಸದೊಡನೆ ಸಮ್ಮೇಳನ ಮುಗಿದ ಎರಡು ತಿಂಗಳ ಒಳಗಾಗಿ, *ಸಂಪಾದಕರು, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಗೋಖಲೆ ಸಾರ್ವಜನಿಕ ಸಂಸ್ಥೆ ಆವರಣ, ಬಸವನಗುಡಿ ರಸ್ತೆ, ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯,* ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ. ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು ಬೇರೆಡೆ ಪ್ರಕಟ ಮಾಡಿದ್ದರೆ ಅಥವಾ ಬೇರೆಡೆ ಪ್ರಕಟನೆಗೆ ಕಳುಹಿಸಿದ್ದರೆ ದಯವಿಟ್ಟು ತಿಳಿಸಬೇಕೆಂದು ವಿನಂತಿ.

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೬೬೧೩೧೨೩, ೬೬೧೮೭೫೨

ಸಂಪಾದಕೀಯ

ಹಂಪೆಯು ನಿಸರ್ಗ ನಿರ್ಮಿತ ಪರಿಸರದ ಒಂದು ಸುಂದರ ಪೌರಾಣಿಕ, ಐತಿಹಾಸಿಕ ಸಾಹಿತ್ಯಕ ಅಭಿವ್ಯಕ್ತಿ. ಹರಿವ ತುಂಗಭದ್ರೆ ಈ ಪರಿಸರದ ಹರಿವಿನ ಹಾದಿಯುದ್ದ ಹಸಿರಿನ ಸಿರಿ, ನಿಸರ್ಗ ಶಿಲಾಶಿಲ್ಪಗಳ ಪ್ರತಿಬಿಂಬಗಳ ಸೆರಗುಟ್ಟು ನಲಿದು, ಬಳುಕಿ ಸಾಗುತ್ತಾಳೆ. ದೈವದ ಕೃಪೆಯೋ, ಪ್ರಕೃತಿಯ ಪ್ರಸಾದವೋ, ಮಾನವ ಭಾವುಕ ಮಿಡಿತವೋ, ಸಾಹಿತ್ಯದ ಸೃಷ್ಟಿಯೋ, ಇತಿಹಾಸದ ನೇಯ್ಗೆಯೋ ಇವೆಲ್ಲ ಹಂಪೆಗೆ ಪೆಂಪು ತಂದಿವೆ. ಪಂಪಾದೇವಿ, ವಿರೂಪಾಕ್ಷ, ಮಹಾಬಲ, ವೀರಭದ್ರ, ಹನುಮಂತ, ರಾಮಲಕ್ಷ್ಮಣ ಯಾರೆಲ್ಲರ ಕುರಿತ ಅವಿನಾಭಾವ, ಅವಿಭಾಜ್ಯತೆ ಪುರಾಣೋ-ಇತಿಹಾಸದ ಸಂಗಮದ ಫಲವೇ ಆಗಿದೆ. ರಾಮಾಯಣದ ಕಾಯಕ ಕಳಾಚೈತನ್ಯ ಹನುಮಂತ! ಹಂಪೆಯು ಅವನ ಕ್ಷೇತ್ರವಾದ ಕಿಷ್ಕಿಂಧೆಯೂ ಆಗಿ ಹಾಗು ನಿಸ್ಸೀಮ ನಿಲುವಿನ ವೀರಭದ್ರನ ಕ್ಷೇತ್ರವೂ ಆಗಿ ಜನಮಾನಸದಲ್ಲಿ ಸಾಂಸ್ಕೃತಿಕ ಚೆಲುವಿನ ನೆಲೆ ಎನಿಸಿದೆ. ಸ್ಕಾಂದಪುರಾಣ, ಮೂಡಲಪಾಯ ಬಯಲಾಟ, ಇತ್ಯಾದಿಗಳಲ್ಲಿ ವೀರಭದ್ರ-ಹನುಮಂತರ ಆತ್ಮೀಯ ದೈವಿಕ ಸಂಬಂಧಗಳು ಉಕ್ತವಾಗಿವೆ. 'ಮಹಾಬಲ' ಎಂಬ ಹೆಸರು ವಾಯು, ಶಿವ, ಬುದ್ಧರಿಗೆಲ್ಲ ಅನ್ವಯ. ಹೀಗಾಗಿ ಮಹಾಬಲದೇವರ ನೆಲೆ ಇಲ್ಲಿದ್ದರೂ ಮಹಾಬಲ ಶಿವನೆನಿಸಿ ಹೇಮಕೂಟದ ವಿರೂಪಾಕ್ಷ **ಹಂಪೆಯ ವಿರೂಪಾಕ್ಷನಾಗಿ** ನೆಲೆಗೆ ಹೆಸರು ತಂದುಕೊಟ್ಟು ಶಾಶ್ವತ ಮಾಡಿದ. 'ವಿರೂಪಾಕ್ಷ ಲಿಂಗ' ಎಂದೇ ವೀರಭದ್ರನಿಗಿರುವ ಪ್ರಾಚೀನ ರೂಢಿ ಇಂದಿಗೂ ಕರ್ನಾಟಕದ ಹಲವಾರು ಕ್ಷೇತ್ರಗಳಲ್ಲಿರುವುದು, ವಿರೂಪಾಕ್ಷ - ವೀರಭದ್ರ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಇದು ಉದ್ದಾನ ವೀರಭದ್ರನ ಗುಡಿಯ ದೀಪ ಸ್ತಂಭದ 'ಯೋಗಲಿಂಗ' ಶಿಲ್ಪದಲ್ಲಿ ಪರಂಪರೆಯ ಸಂಕೇತವಾಗಿ ಮೂಡಿಬಂದಿದೆ. ಹೀಗೆಯೆ ಹಂಪೆಯ ನರಸಿಂಹ, ವಿಜಯವಿಠಲ, ಕೃಷ್ಣಸ್ವಾಮಿ, ಅಚ್ಯುತರಾಯ, ಅನಂತಶಯನ, ಮಲ್ಲಿಕಾರ್ಜುನ, ಹಜಾರರಾಮ, ರಘುನಾಥ, ಬಡವಿಲಿಂಗ ಇತ್ಯಾದಿ ಗುಡಿಗಳ ಸಂಗಮ ಪ್ರಸಾರಗಳು, ಪಂಪಾ ಸರೋವರ, ಮಾಲ್ಯವಂತ, ಮಾತಂಗ ಪರ್ವತದಂತಹ ಗಾಂಭೀರ್ಯ ಗಿರಿಗಳು ಕಲ್ಯಾಣಿ ಚಾಲುಕ್ಯರಿಂದ ಹಿಡಿದು ಸಂಗಮ, ಸಾಳುವ, ತುಳುವ, ಅರವೀಡು ವಂಶಗಳ ವಿಜಯನಗರವಾಗಿ ಮೆರೆದ ಹಂಪೆ, ಜೈನಬಸದಿ, ಬೌದ್ಧ ಕುರುಹುಗಳನ್ನು ಪ್ರಾಗೈತಿಹಾಸಿಕ ಕುರುಹುಗಳ ಸಹಿತವಾಗಿ ಹೊಂದಿದೆ; ಮುಸ್ಲಿಂ ಗೋರಿಗಳನ್ನು ಹೊಂದಿ, ಸಾಮರಸ್ಯದ ಇತಿಹಾಸವನ್ನು ಸಾರಿದೆ. ಕಮಲ ಮಹಲ್, ಆನೆ ಸಾಲು ಕಟ್ಟಡಗಳ, ಆಕರ್ಷಕ ಇಂಡೋ-ಮುಸ್ಲಿಂ ಶೈಲಿಯ ವಾಸ್ತು, ನಮ್ಮ ಮನಸ್ಸನ್ನು ಸೆಳೆವಂತೆ, ನೆರೆಯ ಆನೆಗೊಂದಿಯ ಇತಿಹಾಸವೂ ನಮ್ಮ ಐತಿಹಾಸಿಕ ಶ್ರದ್ಧೆಯನ್ನು ಬೆಳೆಸುವಂತಿದೆ. ಕಾಶೀವಿಲಾಸ ಕ್ರಿಯಾಶಕ್ತಿ ಹಾಗೂ ವಿದ್ಯಾರಣ್ಯರ ನೆರವಿನಿಂದ ವಿಜಯನಗರವನ್ನು ಕಟ್ಟಿದ ಹಕ್ಕಬುಕ್ಕರ ಇತಿಹಾಸವೂ ನಮಗೆ ಹೆಮ್ಮೆ ತಂದಿದೆ; ಹರಿಹರ, ರಾಘವಾಂಕ, ಚಾಮರಸರ ನೆನಪುಗಳನ್ನು ತಂದಿದೆ. ಅಂದಿನ ಹಂಪೆ ಇಂದಿಲ್ಲದೆ ಹಳೆಯ ಐತಿಹಾಸಿಕ ನೆನಪುಗಳನ್ನು ಕೆದಕುವಂತೆ ಮಾಡಿರುವ, ಹಂಪೆಯ ಅವಶೇಷಗಳನ್ನು ಸಾಂಸ್ಕೃತಿಕ ಆಸ್ತಿಯನ್ನಾಗಿಸಿಕೊಳ್ಳುವ ಪ್ರಯತ್ನಗಳಿಗೆ ವಿರುದ್ಧವಾಗಿ ಹಂಪೆಯ ಪರಿಸರದಲ್ಲಿ ಸೇತುವೆಯಂತಹ ಯಾಂತ್ರಿಕ ಸೌಕರ್ಯಕ್ಕಾಗಿ ಪರ್ಯಾಯ ನೆಲೆಯನ್ನು ಹುಡುಕದೆ ಆ ಪರಿಸರವನ್ನೇ ಮತ್ತೂ ಶಿಥಿಲಗೊಳಿಸಿರುವ, ಶಿಥಿಲಗೊಳಿಸುವ ಪ್ರಯತ್ನಗಳನ್ನು ತೊಡೆದು ಹಾಕಬೇಕಿದೆ; ಐತಿಹಾಸಿಕ ಎಚ್ಚರಗಳ ಚಾಲನೆ ಆಗಬೇಕಿದೆ. ಈ ಹಿನ್ನೆಲೆಗಳ ಹಂಪೆಯ ಪ್ರದೇಶದಲ್ಲಿ ಕನ್ನಡಿಗರ ಹೆಮ್ಮೆಯ ಬಳುವಳಿ ಎನಿಸಿಕೊಂಡಿರುವ 'ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ ಆವರಣ'ದಲ್ಲಿ ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ೧೪ನೇ ವಾರ್ಷಿಕ ಸಮ್ಮೇಳನವು, ೨೦೦೦ದ ಜುಲೈ ೮-೧೦ರವರೆಗೆ ನಡೆಯುತ್ತಿರುವುದು ನಮ್ಮ ಸಂತಸಕ್ಕೆ ಕೋಡು ಮೂಡಿದಂತಾಗಿದೆ.

ಖ್ಯಾತ ಪುರಾತತ್ವಜ್ಞ ಶ್ರೀ ಸಿ. ಟಿ. ಎಂ. ಕೊಟ್ರಯ್ಯ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಗೊಂಡಿರುವುದು ವಿದ್ವತ್ತಿಗೆ, ಇತಿಹಾಸ ಸಲಿಲಕ್ಕೆ ಸಂದ ಗೌರವವೆನಿಸುತ್ತದೆ. ಇತಿಹಾಸ ಅಕಾದೆಮಿಯ ೮ನೇ ವಾರ್ಷಿಕ ಸಮ್ಮೇಳನ (೧೯೯೪)ದ ಸರ್ವಾಧ್ಯಕ್ಷರೂ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳೂ ಆದ ಮಾನ್ಯ ಡಾ|| ಎಂ. ಎಂ. ಕಲಬುರ್ಗಿ ಅವರು ಇತಿಹಾಸ ದರ್ಶನದ ೧೫ನೇ ಸಂಪುಟವನ್ನು ಅನಾವರಣಗೊಳಿಸುತ್ತಿರುವುದು ಒಂದು ಸಾಂಸ್ಕೃತಿಕ ವಿದ್ವತ್ ಮಾನ್ಯತೆ ಎನಿಸುತ್ತದೆ. ಈ ಸಂದರ್ಭದಲ್ಲಿ ಸಮ್ಮೇಳನದ ಉದ್ಘಾಟನೆ ಮಾಡಲಿರುವ ಕೇಂದ್ರ ಸಚಿವ ಮಾನ್ಯ ಶ್ರೀ ಅನಂತ ಕುಮಾರ್ ಹಾಗು ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಲಿರುವ ರಾಜ್ಯ ಸರ್ಕಾರದ ಮಾನ್ಯ ಸಚಿವೆ ಶ್ರೀಮತಿ ರಾಣಿ ಸತೀಶ್ ಹಾಗು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿರುವ ವಿದ್ವಾಂಸರು, ಪ್ರತಿನಿಧಿಗಳು ಹಾಗು ಸದಸ್ಯರೆಲ್ಲರಿಗೂ **ಇತಿಹಾಸ ದರ್ಶನ**ದ ಅಭಿಮಾನಗಳಿವೆ.

ಈ ಸಂಪುಟದಲ್ಲಿ ಕಳೆದ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯ ವಿದ್ವಾಂಸರು ಮಂಡಿಸಿದವುಗಳಲ್ಲಿ ನಮಗೆ ತಲುಪಿರುವ ಪ್ರಬಂಧಗಳನ್ನು ಪ್ರಕಟಿಸಲಾಗಿದೆ. ಅವುಗಳಲ್ಲಿ ನಮ್ಮ ಗಮನಕ್ಕೆ ಬಂದ ಬೇರೆಡೆ ಪ್ರಕಟ ಮಾಡಿಕೊಂಡಿರುವ ಪ್ರಬಂಧವನ್ನು ಇಲ್ಲಿ ಕೈಬಿಟ್ಟಿದೆ.

ಅಕಾದೆಮಿಯ ಪ್ರತಿ ಪದಾಧಿಕಾರಿಗಳು ಅವರವರ ಪಾಲಿನ ಕಾರ್ಯಗಳನ್ನು ಹಂಚಿಕೊಂಡು ಮೊತ್ತದಲ್ಲಿ ಒಂದು ತಂಡವಾಗಿ ಅಕಾದೆಮಿಯ ಘಟಕಗಳು ಹಾಗು ಸದಸ್ಯರ ಸಹಕಾರದೊಡನೆ, ನಿರ್ವಹಿಸುತ್ತಿರುವ ಫಲ ಅಕಾದೆಮಿ ನಡೆದು ಬಂದಿರುವ ಯಶಸ್ಸಿನ ಹಾದಿ ಹಾಗು ನಡೆದು ಬಂದಿರುವ ಸಮ್ಮೇಳನಗಳು ಎಂದು ವಿನಮ್ರವಾಗಿ ನಿವೇದಿಸಬಹುದು. ಈ ದೃಷ್ಟಿಯಿಂದ ನಮ್ಮೆಲ್ಲ ಕಾರ್ಯಗಳಲ್ಲಿ ನೆರವಾಗುತ್ತಿರುವ ಅಕಾದೆಮಿಯ ಸದಸ್ಯರು, ಕಾರ್ಯಕಾರಿ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಗು ಕಛೇರಿ ಕಾರ್ಯದರ್ಶಿ ಶ್ರೀ ವೇ. ಬು. ಸೋಮಶೇಖರ್, ಸಂಪುಟವನ್ನು ಅಂದವಾಗಿ ಮುದ್ರಿಸಿ ಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಮಾಲೀಕ ಶ್ರೀ ಅಶೋಕ್ ಕುಮಾರ್, ವ್ಯವಸ್ಥಾಪಕ ಶ್ರೀ ವೆಂಕಟೇಶ್ ಹಾಗು ಅಲ್ಲಿನ ಸಿಬ್ಬಂದಿ ವರ್ಗದ ಶ್ರೀಮತಿ ಜಿ. ಸತ್ಯಕುಮಾರಿ, ಶ್ರೀ ಭೀಮೇಶ್, ಶ್ರೀ ಮಂಜುನಾಥ್, ಶ್ರೀಮತಿ ಗಾಯತ್ರಿ ಅವರಿಗೆಲ್ಲ ನಾವು ಆಭಾರಿ.

ಲೇಖನ ಸೂಚಿ ತಯಾರಿಸಲು ನೆರವಾದ ಕು|| ಎಸ್. ಕೆ. ವೀಣಾ ಅವರಿಗೂ ನಮ್ಮ ಹಾರೈಕೆಗಳಿವೆ.

೩.೭.೨೦೦೦ : ಬೆಂಗಳೂರು

ಶ್ರೀ ವಿಕ್ರಮ ಸಂವತ್ಸರ ಆಷಾಢ, ಶುದ್ಧ ದ್ವಾದಶಿ

ಸೋಮವಾರ

★ ಎಂ. ಜಿ. ನಾಗರಾಜ್

★ ಡಾ|| ಪಿ. ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಬೆಂಗಳೂರು

ಹರಪನಹಳ್ಳಿಯಲ್ಲಿ ನಡೆದ
ಹದಿಮೂರನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರು



ಡಾ|| ಶ್ರೀನಿವಾಸ ಹಾವನೂರ



ಶ್ರೀಮತಿ ವಿಶಾಲಾಕ್ಷಿ ಅಭಿಶಂಕರ್ ಅವರು ಕೈ॥ ಕೆ. ಅಭಿಶಂಕರ್ ಅವರ
ಸ್ಮರಣಾರ್ಥ ಸಮ್ಮೇಳನಾಧ್ಯಕ್ಷರಿಗೆ ನೀಡಿದ ನೆನಪಿನ ಶಿಲ್ಪ ಕಾಣಿಕೆ
ಪ್ರತಿವರ್ಷ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನಾಧ್ಯಕ್ಷರಿಗೆ ಈ ಕಾಣಿಕೆ ನೀಡಲು
ಶ್ರೀಮತಿ ವಿಶಾಲಾಕ್ಷಿ ಅಭಿಶಂಕರ್ ಅವರು ಪುದುವಟ್ಟು ಇಟ್ಟಿದ್ದಾರೆ.
(ಶಿಲ್ಪ ಕಲಾವಿದೆ : ಶ್ರೀಮತಿ ಕನಕಮೂರ್ತಿ)



ಸಮ್ಮೇಳನದ ಉದ್ಘಾಟನಾ
ಸಮಾರಂಭದಲ್ಲಿ
ಮಾನ್ಯ ಸಚಿವ
ಡಿ. ನಾರಾಯಣದಾಸ್
ಅವರು ಜ್ಯೋತಿ
ಬೆಳಗುತ್ತಿರುವುದು.



ಕನ್ನಡ ವಿಶ್ವವಿದ್ಯಾಲಯದ
ಕುಲಪತಿ
ಡಾ|| ಎಂ. ಎಂ. ಕಲಬುರ್ಗಿ
ಅವರಿಂದ 'ಇತಿಹಾಸದರ್ಶನ'
ಸಂಪುಟ-೧೪ ಬಿಡುಗಡೆ.




ಸ್ವಾಗತ ಸಮಿತಿ ಅಧ್ಯಕ್ಷರಾದ
ಮಾನ್ಯ ಸಚಿವ
ಶ್ರೀ ಡಿ. ನಾರಾಯಣದಾಸ್
ಅವರಿಂದ ಸಮ್ಮೇಳನದ
ಅಧ್ಯಕ್ಷ ಶ್ರೀನಿವಾಸ
ಹಾವನೂರ ಅವರಿಗೆ
ಪ್ರಶಸ್ತಿ ಫಲಕ ನೀಡಿಕೆ.



ಡಾ।। ಜಿ. ಎಸ್. ದೀಕ್ಷಿತ್ ಅವರಿಂದ ಡಾ।। ಚನ್ನಕ್ಕ ಪಾವಟೆ ಅವರ 'ರಾಷ್ಟ್ರಕೂಟ ಸಾಮಂತ ಚಲ್ಲಕೇತನ' ಕೃತಿ ಬಿಡುಗಡೆ




ಡಾಕ್ಟರೇಟ್ ಪದವಿ ಪಡೆದ ಅಕಾದೆಮಿಯ ಸದಸ್ಯರಿಗೆ ಸನ್ಮಾನ



ಅತಿಥಿ ಗಣ್ಯರೊಂದಿಗೆ ಸಮ್ಮೇಳನದ ಸಮಾರಂಭದ ಒಂದು ದೃಶ್ಯ : ಅತಿಥಿ ಗಣ್ಯರೊಂದಿಗೆ ಸಮ್ಮೇಳನದ ಆಯೋಜಕ ಶ್ರೀ ಕುಂ. ಬಾ. ಸದಾಶಿವಪ್ಪನವರು.



ಸಮ್ಮೇಳನದ ಉದ್ಘಾಟನಾ ಸಮಾರಂಭದ ಪ್ರೇಕ್ಷಕ ವೃಂದ



ಸರ್ವಸದಸ್ಯರ ಸಭೆಯಲ್ಲಿ ಅಕಾದೆಮಿಯ ಲೆಕ್ಕಪತ್ರಗಳ ಮಂಡನೆ



ಇತಿಹಾಸ ಪರಂಪರೆ ಉಳಿಸಿ ೧೯೯೯, ಬೆಂಗಳೂರು ವಿ. ವಿ. ಕುಲಪತಿ ಡಾ।। ಕೆ. ಸಿದ್ಧಪ್ಪ, ಪುರಾತತ್ವ ಇಲಾಖೆಯ ನಿರ್ದೇಶಕ ಡಾ।। ಎಂ. ವಿ. ಕೃಷ್ಣಪ್ಪ, ಡಾ।। ಸೂರ್ಯನಾಥ ಕಾಮತ್

ಪರಿವಿಡಿ

ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು
೧.	೧೫-೧೭ ಮೇ ೧೯೮೭	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ|| ಎಂ. ಚಿದಾನಂದ ಮೂರ್ತಿ
೨.	೨೩-೨೪ ಅಕ್ಟೋಬರ್ ೧೯೮೮	ತುಮಕೂರು	ಸಿದ್ದಗಂಗಾಕ್ಷೇತ್ರ : ಡಾ|| ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು	ಡಾ|| ಜಿ. ಎಸ್. ಗಾಯಿ
೩.	೧೦-೧೧ ಜೂನ್ ೧೯೮೯	ಗದಗ	ಶ್ರೀ ಮ.ನಿ.ಪ್ರ. ಜ|| ಡಾ|| ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ	ಡಾ|| ಶ್ರೀನಿವಾಸ ರಿತ್ತಿ
೪.	೨೧-೨೨ ಜುಲೈ ೧೯೯೦	ದಾವಣಗೆರೆ	ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ	ಡಾ|| ಎಸ್. ಆರ್. ರಾವ್
೫.	೧೨-೧೪ ಜುಲೈ ೧೯೯೧	ಚಿತ್ರದುರ್ಗ	ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ	ಡಾ|| ಬಾ. ರಾ. ಗೋಪಾಲ್
೬.	೧೧-೧೩ ಜುಲೈ ೧೯೯೨	ರಾಯಚೂರು	ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ, ರಾಯಚೂರು	ಡಾ|| ಕೆ. ವಿ. ರಮೇಶ್
೭.	೨೩-೨೫ ಜುಲೈ ೧೯೯೩	ಮೈಸೂರು	ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು	ಡಾ|| ಅ. ಸುಂದರ
೮.	೯-೧೧ ಜುಲೈ ೧೯೯೪	ಸೊಂಡೂರು	ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ ಸೊಂಡೂರು	ಡಾ|| ಎಂ. ಎಂ. ಕಲಬುರ್ಗಿ
೯.	೯-೧೧ ಸೆಪ್ಟೆಂಬರ್ ೧೯೯೫	ಬೆಳಗಾವಿ	ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರ ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ, ಬೆಳಗಾವಿ	ಡಾ|| ಎ. ವಿ. ನರಸಿಂಹ ಮೂರ್ತಿ
೧೦.	೭-೯ ಜೂನ್ ೧೯೯೬	ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ.ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ, ಧಾರವಾಡ	ಡಾ|| ಜಿ. ಎಸ್. ದೀಕ್ಷಿತ್
೧೧.	೨೫-೨೭ ಅಕ್ಟೋಬರ್ ೧೯೯೭	ಸಿರಸಿ	ಶ್ರೀ ಸೋಂದಾಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸಿರಸಿ	ಪ್ರೊ|| ಕೆ. ಅಭಿಶಂಕರ್
೧೨.	೧೪-೧೬ ನವೆಂಬರ್ ೧೯೯೮	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ|| ಎಸ್. ನಾಗರಾಜು
೧೩.	೧೧-೧೩ ಜೂನ್ ೧೯೯೯	ಹರಪನಹಳ್ಳಿ	ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕ ಶ್ರೀ ಕುಂ. ಬಾ. ಸದಾಶಿವಪ್ಪ ಸ್ವಾಗತ ಸಮಿತಿ, ಹರಪನಹಳ್ಳಿ	ಡಾ|| ಶ್ರೀನಿವಾಸ ಹಾವನೂರ

ಕರ್ನಾಟಕ ಇತಿಹಾಸ ಅಕಾದೆಮಿ ಹದಿಮೂರನೆಯ ವಾರ್ಷಿಕ ಸಮ್ಮೇಳನ, ಹರಪನಹಳ್ಳಿ ೧೧-೧೨ ಜೂನ್ ೧೯೯೯

ಸಮ್ಮೇಳನಾಧ್ಯಕ್ಷರು : ಡಾ॥ ಶ್ರೀನಿವಾಸ ಹಾವನೂರ*

ಅಧ್ಯಕ್ಷ ಭಾಷಣ

ಸನ್ಮಾನ್ಯರೇ, ಸಹೃದಯರೇ

ನನಗೆ ಅನಿಸಿತ್ತು - ಇತಿಹಾಸ ಸಮ್ಮೇಳನದ ಅಧ್ಯಕ್ಷನಾಗುವ ಸುಯೋಗ ನನಗೂ ಒದಗುವುದು ಎಂದು. ಇಷ್ಟು ಬೇಗ ಅಲ್ಲ; ಏಳೆಂಟು ವರ್ಷಗಳಾದ ಮೇಲೆ - ಎಂದು ಭಾವಿಸಿದ್ದೆ. ಅಧ್ಯಕ್ಷತೆಗೆ ಸೂಕ್ತವಾದ ವಯಸ್ಸಾಗಿದ್ದರೂ, ನಾನು ಇತಿಹಾಸ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದವನಲ್ಲ. ಅರ್ಥಾತ್ ಅದರ ಪೂರ್ಣಾವಧಿಯ ಅಭ್ಯಾಸಿಗನಲ್ಲ. ಇತಿಹಾಸ ಸಂಶೋಧನೆಯು ನನ್ನಲ್ಲಿ 'ಪ್ರಿಯತಮೆ'ಯ ಸ್ಥಾನದಲ್ಲಿದೆ, ಒಪ್ಪುವೆ. ಆದರೆ 'ಧರ್ಮಪತ್ನಿ'ಯ ಸ್ಥಾನದಲ್ಲಿರೋದು ಸಾಹಿತ್ಯ. ಆದಾಗ್ಯೂ ಈ ಹಿಂದಿನ ಎರಡು ಸಮ್ಮೇಳನಗಳಲ್ಲಿ ಸಾಹಿತಿಗಳೆಂದೇ ಗಣಿಸಲ್ಪಟ್ಟ ಇಬ್ಬರು ಗಣ್ಯರು ಅಧ್ಯಕ್ಷರಾಗಿ ನಿಯುಕ್ತರಾಗಿದ್ದರಿಂದ ಈ ಸ್ಥಾನದಲ್ಲಿ ನನ್ನನ್ನು ಕುಳ್ಳಿರಿಸಿದವರು ಅಂಥಾ ದೊಡ್ಡ ತಪ್ಪನ್ನೇನೂ ಮಾಡಿಲ್ಲ! ಅಲ್ಲದೆ ಹಿಂದಿನ ಅಧಿವೇಶನಗಳಲ್ಲಿ ಗೋಷ್ಠಿಯೊಂದರ ಅಧ್ಯಕ್ಷನನ್ನಾಗಿ ನನ್ನನ್ನು ಪ್ರತಿವರ್ಷ ಗೊತ್ತುಮಾಡುತ್ತಿದ್ದವರು ಈ ವರ್ಷ ಒಂದು ರೀತಿಯ 'ಪ್ರಮೋಶನ್' ಕೊಟ್ಟಿದ್ದಾರೆ. ಅಂತೂ ಅವರ ಸದಿಚ್ಛೆಗೆ, ನಿಮ್ಮೆಲ್ಲರ ಅಭಿಮಾನಕ್ಕೆ ತಲೆಬಾಗಿದ್ದೇನೆ.

ಇಷ್ಟಕ್ಕೂ ಸಾಹಿತ್ಯ ಮತ್ತು ಇತಿಹಾಸ - ಇವು ಸಂಶೋಧನ ಪ್ರಕ್ರಿಯೆಯಲ್ಲಿ ಸಮಾನಸ್ತರದಲ್ಲಿವೆ. ಎಷ್ಟೋ ಸಂದರ್ಭಗಳಲ್ಲಿ ಪರಸ್ಪರ ಪೂರಕವಾಗಿವೆ. ಇತಿಹಾಸ ಸಂಶೋಧನೆಯಲ್ಲಿ ಶಾಸನಗಳಿಗೆ ಅಗ್ರಸ್ಥಾನ. ಅದರ ಅನಂತರದ್ದು? ಕಾವ್ಯ ಸಾಹಿತ್ಯಕ್ಕೇ ಸಲ್ಲತಕ್ಕುದು. ಈ ಸಾಹಿತ್ಯ ಪ್ರಕಾರದಲ್ಲಿ 'ಕಂಠೀರವ ನರಸರಾಜ ವಿಜಯ'ದಂತಹ ನೇರವಾದ ಇತಿಹಾಸ ಕಾವ್ಯಗಳಿವೆ; ಸರಿಯೇ. ಆದರೆ ಅನೇಕಾನೇಕ ಕನ್ನಡ ಕಾವ್ಯಗಳಲ್ಲಿ ಚರಿತ್ರೆಯ ಅಂಶಗಳು ಪರ್ಯಾಯವಾಗಿಯೋ ಸೂಕ್ಷ್ಮರೀತಿಯಾಗಿಯೋ ಹುದುಗಿಕೊಂಡಿರುತ್ತವೆ. ಎದ್ದು ಕಾಣುವ ಒಂದು ಉದಾಹರಣೆ ಎಂದರೆ ಬೆಟಗೇರಿ ಕೃಷ್ಣಶರ್ಮರು ಬರೆದ 'ಕನಕದಾಸರು ಕಂಡ ವಿಜಯನಗರ' ಎಂಬ ಸುದೀರ್ಘ ಪ್ರಬಂಧ. 'ಮೋಹನ ತರಂಗಿಣಿ' ಕಾವ್ಯವನ್ನು ಆಧರಿಸಿ ಆ ಕಾಲದ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ಕೆಲವು ವಿನೂತನ ಅಂಶಗಳನ್ನು ಹೊರಗೆಡವಿದ್ದಾರೆ.

ಕೆಲವೆಡೆ ಇತಿಹಾಸ ಘೋಷಿತ ಆಕರಗಳಿಗಿಂತ ಕಾವ್ಯಗಳೇ ಹೆಚ್ಚಿನ ಆಧಾರಗಳನ್ನು ಒದಗಿಸುತ್ತವೆ. ಮಧ್ಯಯುಗೀನ ಕಾಲದಲ್ಲಿ 'ಜೋಳವಾಳಿ', 'ವೇಳೆವಾಳಿ'ಗಳಿದ್ದಂತೆ 'ತುರ್ಚಿಲಾಟ್ಗಳ್' ಎಂಬ ಶೂರರ-ಕಲಿಗಳ ಪರಂಪರೆ ಇದ್ದಿತು. ಈ ಪಡೆಯ ವಿಶೇಷತೆ ಯೇನು? ಯಾವ ಪ್ರಸಂಗಗಳಲ್ಲಿ ಅವರು ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದರು? ಇವರಿಗೂ ಜೋಳವಾಳಿಗಳಿಗೂ ಏನು ಭೇದ? ಇವಾವ ಅಂಶಗಳೂ ಶಾಸನಗಳಿಂದ ಸ್ಪಷ್ಟವಾಗುವುದಿಲ್ಲ. ಬದಲಿಗೆ ೧೦ ರಿಂದ ೧೩ನೆಯ ಶತಮಾನದ ವರೆಗಿನ ಹಲವಾರು ಕನ್ನಡ ಕಾವ್ಯಗಳಲ್ಲಿ ಅವರ ಪ್ರಸಕ್ತಿ ಬಂದಿದೆ.

ಪರಿಸ್ಥಿತಿ ಹೀಗಿರುತ್ತ ಇತಿಹಾಸದ ಅಭ್ಯಾಸಿಗಳು ಈ ಮಹತ್ವಪೂರ್ಣ ಆಕರಗಳತ್ತ ಸಾಕಷ್ಟು ಗಮನ ಕೊಡುತ್ತಿಲ್ಲ. ('ಇತಿಹಾಸ ದರ್ಶನ' ಸಂಪುಟಗಳಲ್ಲಿ ಪ್ರಕಟವಾಗಿರುವ ಸುಮಾರು ೮೦೦ ಪ್ರಬಂಧಗಳಲ್ಲಿ ಪರಿಚಿತ ಐತಿಹಾಸಿಕ ಕಾವ್ಯಗಳನ್ನುಳಿದು ಕೇವಲ ಏಳೆಂಟು ಕಾವ್ಯಗಳು ಪ್ರಸ್ತಾಪಗೊಂಡಿವೆ: ಲೋಕೋಪಕಾರ, ಸಿರುಮಣನಾಯಕನ ಸಾಂಗತ್ಯ, ರಾಜಾವಳೀ ಕಥೆ, ಉಳಿವೆಯ ಮಹಾತ್ಮೆ ಇತ್ಯಾದಿ. ಸಂಸ್ಕೃತ ಕಾವ್ಯಗಳಲ್ಲಿ ಅಮುಕ್ತಮಾಲ್ಯದ, ಶಿವತತ್ವರತ್ನಾಕರದಂತಹ ನೇರ ಸಾಮಗ್ರಿಯನ್ನೊದಗಿಸುವ ಕೆಲವನ್ನು ಬಿಟ್ಟರೆ ಇತರ ಕಾವ್ಯಗಳ ಪ್ರಸ್ತಾಪ ಕಡಿಮೆಯೇ.) ಅದೇ, ಸಾಹಿತ್ಯ ಸಂಶೋಧಕರು ಇತಿಹಾಸದ ಪ್ರಮುಖ ಆಕರವೆನಿಸಿದ ಶಾಸನಗಳನ್ನು ಧಾರಾಳವಾಗಿ ಬಳಸಿಕೊಳ್ಳುತ್ತಾರೆ. ಅಂತೂ ಇತಿಹಾಸದ ಅಭ್ಯಾಸಿಗಳು ಒಂದು ನಿರ್ದಿಷ್ಟ ಕಾಲದಲ್ಲಿಯ

* ೩೭, ವಿನಾಯಕ ಲೇಔಟ್, ವಿಜಯನಗರ ೨ನೇ ಹಂತ, ಬೆಂಗಳೂರು - ೪೦.

ಚರಿತ್ರೆಯನ್ನು ರೂಪಿಸುವಾಗ ಆ ಕಾಲದ ಕಾವ್ಯಗಳನ್ನೂ ಪರಿಶೀಲಿಸುವುದು ಒಳ್ಳೆಯದು.

ಕಾವ್ಯಗಳಂತೆಯೇ, ಇತಿಹಾಸಕಾರರ ಅವಜ್ಞೆಗೊಳಗಾದ ಇನ್ನೊಂದು ಆಕರವೆಂದರೆ **ಕಾಗದದ ದಾಖಲೆಗಳು**. ಮಧ್ಯೋತ್ತರ (post - mediaeval) ಕಾಲದ ಸ್ಥಿತಿಗತಿಯನ್ನು ತಿಳಿಯುವಲ್ಲಿ ಶಾಸನಗಳಿಗಿಂತ ಇವುಗಳೇ ಪ್ರಯೋಜನಕಾರಿ. ಶಾಸನಗಳಲ್ಲಿಯ ಇತಿಹಾಸದ ಅಂಶಗಳು ನಾರಿಕೇಳ ಪಾಕದಂತಿದ್ದರೆ ಇವುಗಳದ್ದು ದ್ರಾಕ್ಷಾಪಾಕ; ಬಲು ಬೇಗ ಕರಗತವಾಗುತ್ತವೆ. ಕಳೆದ ಮೂರು ನೂರು ವರ್ಷಗಳಲ್ಲಿ ರೂಪಿತಗೊಂಡ ಇವುಗಳು ಲಕ್ಷಗಟ್ಟಲೆ ಹುಟ್ಟಿಕೊಂಡಿವೆ. ಪತ್ತೆ ಹಚ್ಚಿ ಸಂಗ್ರಹಿಸಬೇಕು, ಮಾತ್ರ. ಮಹಾರಾಷ್ಟ್ರದಲ್ಲಿಯಂತೂ ಇವುಗಳನ್ನು ಕೋಟಿ ಸಂಖ್ಯೆಯಲ್ಲಿ ಗಣಿಸಿದ್ದಾರೆ. ಅವನ್ನು ವ್ಯವಸ್ಥಿತವಾಗಿ ಇರಿಸಿಕೊಂಡದ್ದೇ ಅಲ್ಲದೆ ವಿಷಯಾನುಸಾರ ಪ್ರಕಟಿಸುತ್ತಿದ್ದಾರೆ- 'ಪೇಶ್ವೆ; ಸಾಮಾಜಿಕ ವ ಧಾರ್ಮಿಕ' 'ಮರಾಠೀ ರಿಯಾಸತ' ಇತ್ಯಾದಿ. 'The Karnatak Expeditions of Peshwa Madhavarao-I' ಎಂಬ ಸದರಿನಲ್ಲಿ ಆಗಿನ ಕಾಗದಪತ್ರಗಳು ಪ್ರಕಟವಾಗಿವೆ. ಅವು ನಮಗೆ ನೇರ ಸಂಬಂಧಿಸಿದವುಗಳು. ತತ್ಸಮಾನ ದಾಖಲೆಗಳು ನಮ್ಮಲ್ಲಿಯೂ ದೊರೆಯಬಲ್ಲವು. ಆದರೆ ನಾವು ಯಾವ ಪ್ರಯತ್ನವನ್ನೂ ಮಾಡಿಲ್ಲ. ಒಟ್ಟಾರೆ ಕಾಗದಪತ್ರಗಳಿಗೆ ಸಲ್ಲಬೇಕಾದ ಪ್ರಾಶಸ್ತ್ಯ ಸಂದಿಲ್ಲ.

ಅಕಸ್ಮಾತ್ತಾಗಿ ನನ್ನ ಕಣ್ಣಿಗೆ ಬಿದ್ದ ಕಾಗದಪತ್ರಗಳಲ್ಲಿಯ ಒಂದೆರಡು ಅಂಶಗಳನ್ನು ಇಲ್ಲಿ ಕಾಣಿಸುವೆ. ಓರ್ವ ಇನಾಂದಾರರ ಮನೆಯಲ್ಲಿದ್ದ ಒಂದು ಲೆಕ್ಕಪತ್ರದ ದಾಖಲೆಯಲ್ಲಿ 'ದೀಪದ ಖೋಬ್ರಿ' ಎಂಬ ನಮೂದು ಕಾಣಿಸಿತು. ಏನಿದರ ಇಂಗಿತ? ತುಸು ವಿಚಾರಿಸಿದಾಗ ಆಗರ್ಭ ಶ್ರೀಮಂತರು ತಮ್ಮ ದೌಲತ್ತನ್ನು ಮೆರೆಯಿಸಲು ಹಗಲಿನಲ್ಲಿ ದೀಪ ಹಚ್ಚಿಸಿಕೊಂಡು ಸಾಗುತ್ತಿದ್ದರು. ಮತ್ತು ಆ ದೀಪಕ್ಕೆ ಎಣ್ಣೆಯನ್ನು, ಕೊಬ್ಬರಿಯನ್ನೇ ಉರಿಸಿ ಒದಗಿಸುತ್ತಿದ್ದರಂತೆ. ಮಂಗಳೂರ ಕಡೆಯ ಒಂದು ವಂಶಾವಳಿ ಯಲ್ಲಿ ಕೆಥಲಿಕರೊಬ್ಬರು ಪ್ರೊಟೆಸ್ಟಂಟ್ ಮತವನ್ನು ಸೇರಿದ ವಿಷಯ ಇದ್ದಿತು. ಅಪೂರ್ವ ಪ್ರಸಂಗವಿದು. ಇನ್ನೊಂದೆಡೆ ದೊರೆತದ್ದು ಕೈಯಲ್ಲಿ ಬರೆದ, ಕೆಂಪು ಬಾರ್ಡರಿನಲ್ಲಿಯ ವಿವಾಹದ ಆಮಂತ್ರಣ ಪತ್ರಿಕೆ. ಒಂದು ದಿನದ್ದಲ್ಲ, ಏಳು ದಿನಗಳ ಕಾರ್ಯಕ್ರಮ ಅದರಲ್ಲಿದ್ದಿತು. ಇಂಥ ಬಿಡಿ ಅಂಶಗಳು, ನಮ್ಮ ಸಮೀಪ - ಗತಕಾಲದ (immediate past) ಜನಜೀವನದ ಬಗೆಯನ್ನು ಅರಿಯಲು ಅತ್ಯಂತ ಸಹಾಯಕಾರಿ. ನಮ್ಮ ಇಂದಿನ ಬದುಕಿಗೆ ವಿಶೇಷವಾಗಿ ಅನ್ವಯಿಸುವ ಜನಜೀವನ ಸಮೀಪ-ಗತಕಾಲದ್ದೇ ತಾನೇ.

ಇನ್ನೂ ಒಂದು ಕಾರಣದಿಂದ ನಾವು ಈ ಮಧ್ಯೋತ್ತರ ಕಾಲದ ದಾಖಲೆಗಳತ್ತ ಗಮನ ಹರಿಸಲೇಬೇಕಾಗಿದೆ. ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ, ಮುಂತಾದ ರಾಜಮನೆತನಗಳ ಬಗ್ಗೆ ವ್ಯಾಪಕವಾದ ಸಂಶೋಧನೆ ನಡೆದು ಉದ್ಗ್ರಂಥಗಳು ಪ್ರಕಟವಾಗಿವೆ. ಅದರಂತೆ ಕೆಲವು ಮಾಂಡಲಿಕ ಸ್ಥಾನದ ಮೈಸೂರು, ಚಿತ್ರದುರ್ಗ, ಕೆಳದಿ - ಇವುಗಳ ಬಗ್ಗೆಯೂ ಅಧಿಕೃತವಾಗಿ ತಿಳಿದುಕೊಂಡಿದ್ದೇವೆ. ಈ ದರ್ಜೆಗಿಂತ ಕೆಳಗಿನ ಸ್ಥಾನದಲ್ಲಿರುವ ಪಾಳೆಯಗಾರರು, ಸಂಸ್ಥಾನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಿ ಹೋಗಿದ್ದಾರೆ. ಅವರಲ್ಲಿ ಹಾಗಲವಾಡಿ, ಸೊಂಡೂರು, ಕಿತ್ತೂರು, ಮತ್ತೆ ಹಲವೇ ಜನರ ಚರಿತ್ರೆ ಲಭ್ಯವಿದೆ. ಮಿಕ್ಕೆಲ್ಲ ಪಾಳೆಯ ಗಾರರು, ಸಂಸ್ಥಾನಿಕರ ಕುರಿತ ಪೂರ್ಣ ಸ್ವರೂಪದ ಚರಿತ್ರೆ ಬೇಡವೇನು?

ಇದಕ್ಕೂ ಒಂದು ಹೆಜ್ಜೆ ಕೆಳಗಿಳಿದರೆ, ಅನೇಕಾನೇಕ ಗೌಡ-ಪಟೇಲರು, ದೇಸಾಯಿ-ಇನಾಂದಾರರುಗಳಿದ್ದಾರೆ: ನರಗುಂದ - ನವಲಗುಂದ, ತರೀಕೆರೆ - ಬಸವಾಪಟ್ಟಣ, ಡಂಬಳ - ಮುಂಡರಗಿ, ಸ್ವತಹ ಈ ಹರಪನಹಳ್ಳಿಯಲ್ಲಿ, ಅತಿ ಸೀಮಿತವೇ ಆಗಲಿ ಒಡೆತನ ನಡೆಸಿದವರು. ಸಣ್ಣ ದೊಡ್ಡ ಕಾಳಗಗಳಲ್ಲಿ ಪಾಲ್ಗೊಂಡಿದ್ದವರು. ಆ ಆ ಸೀಮೆಯ ಚರಿತ್ರೆ ನಿರ್ಮಾಣದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದವರು. ಎಲ್ಲಕಿಂತ ಹೆಚ್ಚಾಗಿ ತಮ್ಮ ಜನರೊಂದಿಗೆ ನಿಕಟ ಸಂಪರ್ಕ ಹೊಂದಿ ಜನಮನವನ್ನು ಗೆದ್ದವರು.* ಇವರನ್ನು ಕುರಿತು ಹೇಳಬೇಕಾದ ಮಾತುಗಳು ಕಡಿಮೆ ಇದ್ದರೂ ನಾವು ಅವರ ಚರಿತ್ರೆಯನ್ನು ದಾಖಲಿಸುವುದೆಂದರೆ ಕರ್ನಾಟಕವೆಂಬ ಬೃಹತ್ ಸೌಧ ನಿರ್ಮಾಣಕ್ಕೆ ಚೀಪುಗಲ್ಲುಗಳನ್ನು ಒದಗಿಸಿದ ಹಾಗೆ.

ನನಗೆ ಚೆನ್ನಾಗಿ ಗೊತ್ತು; ಸಿದ್ಧ ಆಕರಗಳ ಅಭಾವ, ಅದರಂತೆ ಅವುಗಳಿಂದ ಇತಿಹಾಸದ ಎಳೆಗಳನ್ನು ನೇಯುವ ಕೆಲಸ - ಇವು ಈ ವಿಷಯದಲ್ಲಿ ಮುಂದುವರಿಯಲು ಆತಂಕದಾಯಕವೇ. ಆದರೆ ಇತಿಹಾಸ ಪ್ರಜ್ಞೆಯುಳ್ಳ ಸ್ಥಳೀಕರೇ ತಂತಮ್ಮ ಊರುಗಳಲ್ಲಿಯ ಪ್ರಮುಖರ ಮನೆಗಳಿಗೆ ಹೋಗಿ ಹಳೆಯ ಕಾಗದಪತ್ರಗಳನ್ನು - ಅವು ಗಣ್ಯ, ನಗಣ್ಯ ಎಂಬ ಅಂತರ ಇಡದೇ ಕಲೆಹಾಕಬೇಕು.

---

* ಇದಕ್ಕೆ ನಿದರ್ಶನವಾಗಿ ಬೆಳಗಾವಿಯಲ್ಲಿದ್ದ ಸ್ಟೋಕ್ಸ್ ಎಂಬ ಬ್ರಿಟಿಶ್ ಅಧಿಕಾರಿಯು ಕಿತ್ತೂರಿನ ದೇಸಾಯರ ಬಗ್ಗೆ ಹೇಳಿದ ಮಾತುಗಳನ್ನು ಗಮನಿಸಬಹುದು: The Desays of Kittur had always been regarded with affection by the poorer classes. Mallasarja - the last Desay - but one, who ruled for thirty years and is the best remembered, has not spared the wealthier classes from whom he often pretexts to make large extractions. Measures of this sort only increased his popularity with the humbler classes. ಶ್ರೀಮಂತರಿಂದ ಸೆಳೆದು ಬಡವರಿಗೆ ನೆರವಾಗಬೇಕೆನ್ನುವ ಈ ಸಮಾಜವಾದೀ ಸಮತಾವಾದದ ಬಗೆಯನ್ನು ಗಮನಿಸಬೇಕು.

ಇತಿಹಾಸ ಅಕಾದೆಮಿಯು ಪ್ರತಿವರ್ಷ ಕೈಕೊಳ್ಳುವ 'ಪರಂಪರೆ ಉಳಿಸಿ' ಎನ್ನುವ ಕಾರ್ಯಕ್ರಮದಲ್ಲಿ ಇದು ಅಡಕವಾಗಿದೆ.

ಅಧ್ಯಕ್ಷ ಭಾಷಣದ ನಿಮಿತ್ತದಿಂದ ನಾನು 'ಇತಿಹಾಸ ದರ್ಶನ'ದ ಎಲ್ಲ ಸಂಪುಟಗಳನ್ನು ತಿರುವಿ ಹಾಕಿದೆ. ಹೆಚ್ಚಿನವು ಗಳಲ್ಲಿಯ ವಿಚಾರ ಮಂಡನೆ ಪರಂಪರಾಗತವಾಗಿ ಬಂದದ್ದು, ಏಕಪ್ರಕಾರದ್ದು ಎನಿಸಿತು. ಹೊಸ ಅಂಶಗಳೇನೊ ವ್ಯಕ್ತವಾಗಿವೆ. ಮೌಲಿಕ ಕೊಡಗೆ ಎನ್ನಬಹುದಾದ ಲೇಖನಗಳೂ ಇವೆ. ಆದರೆ ಸಂಶೋಧನ ಕ್ರಮದಲ್ಲಿ ಏನಾದರೂ ಹೊಸತನ, ಹೊಸಮಾರ್ಗ ಇದೆಯೆ? ಆಕರಗಳ ಆಧಾರಗಳನ್ನು ಬಳಸಿ ಬರುವಲ್ಲಿ ವೈಶಿಷ್ಟ್ಯವೇನಾದರೂ ಕಂಡುಬರುವುದೆ? ಇದನ್ನು ಖಚಿತವಾಗಿ ಹೇಳುವುದೆ ಕಷ್ಟ.

ಈ ನಿಮಿತ್ತ ಮಾಡಿಕೊಂಡು ಸಂಶೋಧನ ವಿಧಾನದಲ್ಲಿ ಈಚೆಗೆ ಬಳಕೆಯಲ್ಲಿರುವ ಎರಡು ಉಪಕ್ರಮಗಳನ್ನು ಹೇಳಬೇಕು ಎಂದುಕೊಂಡಿದ್ದೇನೆ. ಒಂದನೆಯದು ವಸ್ತು ವಿಶ್ಲೇಷಣೆ (content analysis) ಎಂಬ ವಿಧಾನ. ಯಾವುದೊಂದು ಸಮಸ್ಯೆ, ಇಲ್ಲವೆ ಸಂದೇಹವನ್ನು ನೀಗಲು ಆಧಾರಗಳನ್ನಿಟ್ಟುಕೊಂಡಿರುತ್ತೇವೆ. ಅವುಗಳಲ್ಲಿಯ ವಿಚಾರಗಳನ್ನು (contents) ವ್ಯವಸ್ಥಿತವಾಗಿ ವಿಂಗಡಿಸಿ ಇಟ್ಟುಕೊಳ್ಳುವುದು ಮುಖ್ಯ ಕೆಲಸ. ವಿಂಗಡಿಸುವುದು ಎಂದರೆ ಪಾರಿವಾಳದ ಗೂಡುಗಳಂತೆ (pigeon holes) ವಿಭಾಗಗಳನ್ನು ಮಾಡಿಕೊಳ್ಳುವುದು. ಆಮೇಲೆ ಒಂದೊಂದಾಗಿ ಎತ್ತಿಕೊಂಡು ವಿಶ್ಲೇಷಣೆಗೆ, ಹೆಚ್ಚಿನ ಅಭ್ಯಾಸಕ್ಕೆ ತೊಡಗಿ ನಿರ್ಣಯಕ್ಕೆ ಬರುವುದು. ಮೊತ್ತ ರೂಪದ ಸಾಮಗ್ರಿಯನ್ನು ಹೀಗೆ ಮೌಲ್ಯಕ್ಕೆ ತಿರುಗಿಸುವುದರಿಂದ, ನಮ್ಮ ನಿರ್ಣಯಕ್ಕೆ ಖಚಿತತೆ, ಅದಕ್ಕಿಂತ ವಸ್ತುನಿಷ್ಠತೆ ಪ್ರಾಪ್ತವಾಗುತ್ತದೆ. ಸಂಶೋಧನೆಯಲ್ಲಿ ನಮಗೆ ಬೇಕಾದದ್ದು ಇದೆ ತಾನೇ.

ಕಂಪ್ಯೂಟರ್

ಇತಿಹಾಸ ಸಂಶೋಧನೆಗೆ ನೆರವಾಗುವ ಇನ್ನೊಂದು ಪ್ರಮುಖ ಸಾಧನೆಯೇ ಕಂಪ್ಯೂಟರ್. ಕಂಪ್ಯೂಟರ್ ಬಗ್ಗೆ ನಮ್ಮಲ್ಲಿ ಇರಬಹುದಾದ ಯಾವುದೇ ಪೂರ್ವಗ್ರಹವನ್ನು ಬಿಸುಡಬೇಕು. ಅದೀಗ ನಮ್ಮ ಮನೆ ಬಾಗಿಲಿಗೇ ಬಂದಿದೆ. ಎಂದರೆ ಮಾಹಿತಿ ಯನ್ನು ಕನ್ನಡದಲ್ಲೇ ಪೂರೈಸಿ, ಕನ್ನಡದಲ್ಲಿಯೇ ಅದರಿಂದ process ಮಾಡಿಸಿ ನಮ್ಮ ಲಿಪಿಯಲ್ಲಿಯೇ ನಮಗೆ ಬೇಕಾದ ಫಲಿತಾಂಶ ವನ್ನು ಪಡೆಯಬಹುದು. ಇದುವರೆಗೆ ಬರಿಯ ಡಿಟಿಪಿ ಈಚೆಗೆ ಮುದ್ರಣಕ್ಕೆಂದು ಇದ್ದದ್ದು ಈಚೆಗೆ ಅದನ್ನು ಸಂಶೋಧನ ಕಾರ್ಯಕ್ಕೆ ಬಳಸುವಂತಾದದ್ದು ದೊಡ್ಡ ಸಾಧನೆ.

ಕಂಪ್ಯೂಟರ್ ಬಳಕೆಗೆ ಮೂಲತಃ ಬೇಕಾದ್ದದ್ದು ಅಪಾರ ವಾದ ಮಾಹಿತಿ (data). ಇತಿಹಾಸದ ವಿಷಯಗಳಲ್ಲಿ ಅದರ ಅಭಾವವೇ ಇರದು. ಈಗ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿ ನಾವು ಅದನ್ನು ಹೇಗೆ ಬಳಸಬೇಕು - ಎನ್ನುವುದಕ್ಕೆ ಒಂದೆರಡು ಮಾದರಿಗಳನ್ನು ಕೊಡುವೆ.

ಶಾಸನಗಳನ್ನೇ ತೆಗೆದುಕೊಳ್ಳೋಣ. '... ಈ ಜಿಲ್ಲೆಯ ಶಾಸನಗಳು; ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸದರಿನಲ್ಲಿ ಅಲ್ಲಲ್ಲಿ ಅಭ್ಯಾಸ ನಡೀತಿದೆ. ಆ ಜಿಲ್ಲೆಯ ಶಾಸನಗಳ ಕಾಲ, ಸ್ವರೂಪ ಮುಂತಾದ ಬಾಹ್ಯ ಅಂಶಗಳನ್ನು ಮೊದಲು ಹೇಳ ಬಹುದು. ಅನಂತರ ಅದರಲ್ಲಿ ಬಂದಿರುವ ದೇವಸ್ಥಾನ, ರಾಜಮನೆತನ, ರಾಜ-ರಾಣಿಯರು, ಅಧಿಕಾರಿಗಳು, ಧಾರ್ಮಿಕ ವ್ಯಕ್ತಿಗಳು, ಅದರಂತೆ ಊರುಗಳು, ಬಿರುದುಗಳು, ಯುದ್ಧಗಳು ಹಾಗೂ ವಿಶಿಷ್ಟಾರ್ಥದ ಶಬ್ದಗಳನ್ನು ಕಂಪ್ಯೂಟರಿಗೆ ಸೇರಿಸುತ್ತ ಹೋಗಬೇಕು. ಈ ಪ್ರಕಾರದ ಯಾವದೊಂದು ಹೆಸರು ಅಥವಾ ಶಬ್ದ ಎಲ್ಲೆಲ್ಲಿ ಬರುವುದೋ, ಕಂಪ್ಯೂಟರ್ ಪ್ರತ್ಯೇಕವಾಗಿ ಹಿಡಿದಿಟ್ಟು ನಮಗೆ ಎಷ್ಟು ಬೇಕೋ ಅಷ್ಟನ್ನು ಚೊಕ್ಕಟವಾಗಿ ಒದಗಿಸುವುದು. *ತಲಕಾಡಿನ ಗಂಗರು* - ಈ ರಾಜ ಮನೆತನದ ಬಗ್ಗೆ, ಇಲ್ಲವೆ ಕಲ್ಯಾಣದ ಚಾಳುಕ್ಯರು ಮತ್ತು ಚೋಳರೊಡನೆ ನಡೆದ ಯುದ್ಧ ಪ್ರಸಂಗಗಳ ವಿವರ ಬೇಕೆಂದರೆ ಆ ಒಂದು ಶಬ್ದವನ್ನು ಕೊಟ್ಟರೆ ಸಾಕು, ಸಂಬಂಧಿಸಿದ ಎಲ್ಲ ಶಾಸನಗಳನ್ನು ಪಟ್ಟಿ ಮಾಡಿಕೊಡುವುದು. ಹೀಗೆ ಮುಂದಿನ ಅಭ್ಯಾಸಕ್ಕೆ ಸಿದ್ಧ ಸಾಮಗ್ರಿ ಒದಗಿಬರುವುದು.

ಇನ್ನು ಕರ್ನಾಟಕದ ಸಮಗ್ರ ಅಧ್ಯಯನಕ್ಕೆ ನೆರವಾಗುವಂತಹ ಎರಡು ಯೋಜನೆಗಳನ್ನು ಪ್ರಸ್ತಾಪಿಸುವೆ. ಒಂದನೆಯದು ಕಾಲಾನುಕ್ರಮದಲ್ಲಿ ಸಂಕ್ಷಿಪ್ತವಾಗಿ ಘಟನೆಗಳನ್ನು ಕೊಡುವಂಥ ಒಂದು ಡಿರೆಕ್ಟರಿ. (Chronology of Karnataka History). ನಿರೂಪಿತವಾದ ಘಟನೆಯಲ್ಲಿ ಬರುವ ವ್ಯಕ್ತಿಗಳು, ರಾಜಮನೆತನ, ಯುದ್ಧಪ್ರಸಂಗ, ಊರುಗಳನ್ನು ಮೇಲೆ ಹೇಳಿದ ಕ್ರಮದಂತೆಯೇ ಕಂಪ್ಯೂಟರ್ ಪ್ರತ್ಯೇಕವಾಗಿ ಹಿಡಿದಿಟ್ಟುಕೊಂಡು ಅಭ್ಯಾಸಕ್ಕೆ ಬೇಕಾಗಿರುವಷ್ಟನ್ನು ಶೀಘ್ರವಾಗಿ ಒದಗಿಸುತ್ತದೆ. ಇದೊಂದು ಮಾದರಿ:

೧೭೯೯ ಮೇ ೪

(ಟೀಪು ಸುಲ್ತಾನ) ಮತ್ತು (ಬ್ರಿಟಿಶ)ರ ನಡುವೆ (ಮೈಸೂರು ೪ನೆಯ ಯುದ್ಧ) - (ಶ್ರೀರಂಗಪಟ್ಟಣ)ದಲ್ಲಿ. ಬ್ರಿಟಿಶರಿಗೆ (ನಿಜಾಮ) ಹಾಗೂ (ಮರಾಠ)ರ ಸಹಾಯ. (ಯುದ್ಧ)ದಲ್ಲಿ ಟೀಪೂ ಸುಲ್ತಾನನ ಸಾವು. ಅವನ ಸೀಮಿತ ರಾಜ್ಯವನ್ನು (ಮೈಸೂರು ಒಡೆಯರ ಮನೆತನ)ಕ್ಕೆ ಒಪ್ಪಿಸಲಾಯಿತು. (ಪೂರ್ಣಯ್ಯ)ನ (ದಿವಾನ) ಗಿರಿಯಲ್ಲಿ (ಮುಮ್ಮಡಿ ಕೃಷ್ಣರಾಜ)ರಿಗೆ ಪಟ್ಟ.

ಕಂಸಿನಲ್ಲಿ ಬಂದ ಘಟಕಗಳನ್ನೆಲ್ಲ ಕಂಪ್ಯೂಟರ್ ಪ್ರತ್ಯೇಕವಾಗಿ ಹಿಡಿದು ಇಟ್ಟುಕೊಡಿರುತ್ತದೆ. ವರ್ಷ, ವ್ಯಕ್ತಿ, ಸ್ಥಳ, ಅಧಿಕಾರ ಸ್ಥಾನ ಯಾವುದೇ ಘಟಕವಿರಲಿ, ಸಮಗ್ರ ಮಾಹಿತಿ ದೊರೆಯುತ್ತದೆ.

ಎರಡನೆಯದು, ಸಮಗ್ರ ಕರ್ನಾಟಕದ ನಾನಾ ವಿಧವಾದ ಆಕರಗಳನ್ನು ಒಂದೆಡೆ ಶೇಖರಿಸುವುದು. ಗ್ರಾಮನಾಮಗಳು ನಮಗೆ ಗೊತ್ತಿರುವ ಹಾಗೆ ಶಾಸನಗಳು, ಕಾವ್ಯಗಳು, ಕಾಗದಪತ್ರಗಳು ಇವುಗಳಲ್ಲದೆ, ಪ್ರವಾಸೀ ವರ್ಣನೆಗಳು, ಶಿಲ್ಪಗಳು, ಜಾನಪದ, ನಾಣ್ಯಗಳು - ಈ ಒಂದೊಂದು ಪ್ರಕಾರದ, ಎಲ್ಲ ಲಭ್ಯ ವಿವರಗಳನ್ನು ಕಂಪ್ಯೂಟರಿನಲ್ಲಿ ಶೇಖರಿಸಬಹುದು. ಅದರಿಂದ ಕರ್ನಾಟಕಕ್ಕೆ ಸಂಬಂಧಿಸಿದ ಯಾವುದೇ ಸಣ್ಣ, ದೊಡ್ಡ ಅಂಶವಿರಲಿ, ಥಟ್ಟನೆ ಮಾಹಿತಿ ಸಿಗುತ್ತದೆ. ಮುಂದಿನ ಅಧ್ಯಯನ ಸುಲಭವಾಗುತ್ತದೆ. ಶ್ರವಣಬೊಳ್ಗೊಳದ ಗೊಮ್ಮಟನ ಅಧ್ಯಯನ ಮಾಡಬಯಸುವವರಿಗೆ, ಆ ಮೂರ್ತಿಯ ಶಿಲ್ಪ ವಿವರ ಮಾತ್ರವಲ್ಲ, ಅಲ್ಲಿಯ ಶಾಸನಗಳು, ಸ್ತುತಿಪರ ಕಾವ್ಯಗಳು, ಬಾಹುಬಲಿಯ ಕಥೆ - ಏಕಕಾಲಕ್ಕೆ ದೊರೆಯುವುದು; ಅಭ್ಯಾಸಕ್ಕೆ ಪರಿಪೂರ್ಣತೆ ಬರುವುದು.

ಇತ್ತ ನಮ್ಮ ಅಕಾದೆಮಿಯ ಪದಾಧಿಕಾರಿಗಳ ಗಮನಕ್ಕೆ ತರಬೇಕಾದ ಒಂದೆರಡು ವಿಷಯಗಳಿವೆ. ಹನ್ನೆರಡು ವರ್ಷಗಳ ತನ್ನ ಅಸ್ತಿತ್ವದಲ್ಲಿ ಅಕಾದೆಮಿಯು ನಾಡಿನ ಇತಿಹಾಸದ ಪರಿಧಿಯನ್ನು ಬಹುವಾಗಿ ವಿಸ್ತರಿಸಿದೆ. ಎಷ್ಟೋ ಹೊಸ ಅಂಶಗಳನ್ನು ಬೆಳಕಿಗೆ ತಂದಿದೆ. ಅದರಂತೆ ಇದುವರೆಗೆ ಗಮನಕ್ಕೆ ಬಂದಿರದ ಅನೇಕ ಆಕರಗಳೂ ಹೊರಬಂದಿವೆ. ಅವೆಲ್ಲ ನಮಗೆ ಪರಿಚಿತವಾದ ಭಾಷೆಗಳಲ್ಲಿರುವಂತಹವು. ಆದರೆ ಪೋರ್ಚುಗೀಜ್, ಡಚ್, ಲ್ಯಾಟಿನ್, ಇಟಾಲಿಯನ್ ಮೊದಲಾದ ಭಾಷೆಗಳಲ್ಲಿಯೂ ಕರ್ನಾಟಕ ಇತಿಹಾಸಕ್ಕೆ ಪೋಷಕವಾಗುವಂತಹ ದಾಖಲೆಗಳಿವೆ. ನಮ್ಮ ಪಾಲಿಗೆ ಅವು ಇದ್ದೂ ಇಲ್ಲದಂತೆಯೇ. ಆದ್ದರಿಂದ ಈ ಭಾಷೆಗಳನ್ನು ತುಸು ಮಟ್ಟಿಗೆ ಅರ್ಥ ಮಾಡಿಕೊಳ್ಳುವಷ್ಟು ಕಲಿಯುವವರಿಗೆ ಅನುದಾನವನ್ನು ಕೊಡುವ ಯೋಜನೆಯನ್ನು ರೂಪಿಸಿಕೊಳ್ಳಬಹುದು. ಅದರಿಂದ ಒಬ್ಬರಿಬ್ಬರು ಮಾತ್ರ ಮುಂದೆ ಬಂದು ಕಲಿತರೂ ಪ್ರಯೋಜನಕಾರಿಯಾದೀತು. ಇದಕ್ಕಿಂತ ಸುಲಭವಾದದ್ದು ಮೋಡಿ, ತಿಗಳಾರಿ ಮುಂತಾದ ಮೃತ ಲಿಪಿಗಳನ್ನು ಕಲಿಯುವುದು. ಈ ಲಿಪಿಗಳನ್ನು ತಿಳಿದವರ ಸಂಖ್ಯೆ ಈಗ ಕಡಿಮೆಯಾಗುತ್ತಲಿದೆ. ಇದಕ್ಕೂ, ಅಲ್ಪ ಮೊತ್ತದ್ದೇ ಆಗಲಿ, ಅನುದಾನವನ್ನು ಕೊಡಮಾಡಬಹುದು.

ನಮ್ಮ ಇತಿಹಾಸದ ಪರಿಧಿ ವಿಸ್ತಾರಗೊಂಡಿದೆ - ಎಂದೆನಷ್ಟೆ. ಆ ರಭಸದಲ್ಲಿ ಕೆಲವೊಂದು ವಿಷಯಗಳು ಉಳಿದು ಬಿಡುವುದು ಸಹಜ. ಅಂಥವುಗಳನ್ನು ಗುರುತಿಸಿ ಕ್ರಮ ಕೈಕೊಳ್ಳಬೇಕು. ಸುಮಾರು ೮೦ ವರ್ಷಗಳ ಹಿಂದಿನ ಮಾತು. ಆಗ ಕರ್ನಾಟಕ ಇತಿಹಾಸದ ಬಗ್ಗೆ ವಿಲ್ಕ್ಸರ *History of Mysore*, ರೈಸರ E.C. ಸಂಪುಟಗಳು ಮತ್ತು ಫ್ಲೀಟರ *Dynasties* - ಇವಷ್ಟೇ ಎದ್ದು ಕಾಣುವಂತಿದ್ದುವು. ಕರ್ನಾಟಕದ ವಿವಿಧ ರಾಜಮನೆತನಗಳಿಗೆ ಪ್ರತ್ಯೇಕವಾದ ಇತಿಹಾಸದ ರಚನೆಯಾಗಿಲ್ಲವೆಂದು ಫಾದರ್ ಹೆರಾಸ್ ಅವರಿಗೆ ತೋಚಿತು. ಅವರು ಕೆಲವು ತರುಣ ವಿದ್ಯಾರ್ಥಿಗಳನ್ನು ಗುರುತಿಸಿ, ಒಬ್ಬೊಬ್ಬರಿಗೆ ಒಂದೊಂದು ರಾಜಮನೆತನವನ್ನು ಅಭ್ಯಸಿಸ ಹೇಳಿದರು. ಕದಂಬರನ್ನು ಕುರಿತು ಮೊರೇಸ್, ರಾಷ್ಟ್ರಕೂಟರ ಬಗ್ಗೆ ಅಳತೇಕರ, ಬಾದಾಮಿ ಚಾಲುಕ್ಯರ ಬಗ್ಗೆ ಭೀಮರಾವ ಚಿಟಗುಪ್ಪಿ - ಇವರು ಕರ್ನಾಟಕದ ಇತಿಹಾಸವನ್ನು ಅಭ್ಯಾಸ ಮಾಡಿದ್ದು ಹೀಗೆ. ಇತ್ತ ಸಾಲೆತ್ತೂರರಿಗೆ, ವಿಜಯನಗರದ ವಿಷಯ ಸೂಚಿಸಿದ್ದರೂ ಅವರು ಅದನ್ನು ಲಂಡನ್ನಿನಲ್ಲಿ ಮುಗಿಸಿ ಡಿಗ್ರಿ ಪಡೆದರು. ಹೊಯ್ಸಳ ರಾಜರನ್ನು ಕುರಿತು ಹೆರಾಸರು ಸಿ.ಎಸ್. ಚಂದ್ರಶೇಖರ ಶರ್ಮರಿಗೆ ಮಾರ್ಗದರ್ಶನ ಮಾಡಿದ್ದರಾದರೂ ಶರ್ಮರು ಆ ಮಧ್ಯೆ ತೀರಿಕೊಂಡರು. ಇರಲಿ.

ಸದ್ಯದ ಕಾಲದಲ್ಲಿಯೂ ಇಂಥ ಹಲವಾರು gaps ಇವೆ. ಅವನ್ನು ಗುರುತಿಸಿ ಆಸ್ಥೆ ಇದ್ದವರು ಅದರಲ್ಲಿ ತೊಡಗುವಂತಾಗಬೇಕು. ರೈಸರನ್ನು ಫ್ಲೀಟ್‌ರನ್ನು ಸದಾ ಕಾಲ ನೆನಪಿಸಿಕೊಳ್ಳುತ್ತೇವೆ. ಅವರ ಕೃತಿಗಳನ್ನು ಉದ್ಧರಿಸುತ್ತೇವೆ. ಆದರೆ ಅವರ ಜೀವನ ಹಾಗೂ ಕೃತಿ ಪರಾಮರ್ಶೆಗಳನ್ನೊಳಗೊಂಡ ಪೂರ್ಣ ಸ್ವರೂಪದ ಗ್ರಂಥ ಒಂದೂ ಇಲ್ಲ. ಪಾಳೆಯಗಾರರ ಸಂಸ್ಥಾನಿಕರ ಚರಿತ್ರೆ ಪುಸ್ತಕಗಳು ಹೊರ ಬರಬೇಕೆಂದು ಈ ಮುಂಚೆ ಹೇಳಿಯೇ ಇದ್ದೇನೆ.

ಅದಕ್ಕಿಂತ ಎದ್ದು ಕಾಣುವ ಕೊರತೆ ಎಂದರೆ, ವಿಜಯನಗರೋತ್ತರ ಕಾಲದ, ಎಂದರೆ ೧೫೬೫ರಿಂದ ಬ್ರಿಟಿಶರ ಆಳ್ವಿಕೆ ಆರಂಭವಾಗುವ (೧೮೦೦ರ) ವರೆಗಿನ ಕರ್ನಾಟಕದ ಚರಿತ್ರೆ (ಹೈದರ್ - ಟೀಪೂ ಮತ್ತು ಬಿಜಾಪುರದ ಆದಿಲಶಾಹಿಗಳನ್ನು ಬಿಟ್ಟರೆ) ಮಸಮಸಕಾಗಿಯೇ ಇದೆ. ಈ ಕುರಿತು ಒಂದು ಸೆಮಿನಾರ್ ಏರ್ಪಡಿಸಿ, ಆ ಪ್ರಬಂಧಗಳನ್ನು ಪ್ರಕಟಿಸಬಹುದು.

ಹಲವಾರು ವರ್ಷಗಳಿಂದ ಇತಿಹಾಸ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಕೇಳಿಸಿಕೊಂಡ ನನಗೆ ಒಂದು ಅಂಶ ಚೋದ್ಯವಾಗಿ ಕಂಡಿದೆ. ಪ್ರಬಂಧಕಾರರಲ್ಲಿ ಹೆಚ್ಚಿನವರು ತಮ್ಮದೊಂದು ನಚ್ಚಿನ ವಿಷಯದಲ್ಲಿ ನಿಷ್ಣಾತರು. ಇದು ಒಳ್ಳೆಯದೇ. ಆದರೆ ಶ್ರೀ..... ಇವರು ಈ ವರ್ಷ ಪ್ರಬಂಧ ಮಂಡಿಸುವುದಿದ್ದಲ್ಲಿ, ಅದು ಹಿಂದಿನ ವರ್ಷಗಳಲ್ಲಿ ಹೇಳಿದ್ದ ವಿಷಯದ ಹತ್ತಿರದ್ದೇ ಎಂದು ಅಂದಾಜು ಮಾಡಿಬಿಡಬಹುದು. ಹೊಸ ಶಾಸನಗಳನ್ನು ಹುಡುಕುವಲ್ಲಿ ಒಲವಿದ್ದವರ ಈ ವರ್ಷದ ಪ್ರಬಂಧವನ್ನು "ಹಾಂ. ಇನ್ನೊಂದು ಶಾಸನ ಹುಡುಕಿ, ಅದರ ಬಗ್ಗೆ ಹೇಳಲಿದ್ದಾರೆ' ಎಂದು ಊಹಿಸಿದರೆ ತಪ್ಪೇನಿಲ್ಲ. ಇನ್ನು ಕೆಲವರು ತಮ್ಮ ನಚ್ಚಿನ ಸೀಮೆ, ಇಲ್ಲವಾದರೆ ಅದೊಂದು ಉದ್ಯಮ - ವೃತ್ತಿಯ ಕುರಿತೇ ಪ್ರಬಂಧ ಮಂಡಿಸಬಹುದು. ನನಗೂ ಈ ಮಾತು ಅನ್ವಯಿಸುತ್ತದೆ. ಬ್ರಿಟಿಶರ ಕಾಲದ ಕರ್ನಾಟಕದ ಪರಿಧಿಯಲ್ಲಿಯೇ ನನ್ನ ಪ್ರಬಂಧಗಳಿರುತ್ತವೆ.

ಆದರೆ ಹಾಗಾಗಬಾರದು ಎಂದು ಮನಸಾ ಇಚ್ಛಿಸುತ್ತೇನೆ. ಹೊಸ ಹೊಸ ವಿಷಯಗಳನ್ನು ಅರಸಿಕೊಂಡು ಹೋಗುವ

ಮನೋಧರ್ಮವನ್ನು ನಾವು ಬೆಳೆಸಿಕೊಳ್ಳಬೇಕು. ಒಂದೇ ವಿಷಯಕ್ಕೆ ಅಂಟಿಕೊಂಡರೆ ನಾವು 'ತಜ್ಞ' ಎನ್ನಿಸಿಕೊಳ್ಳಬಹುದಲ್ಲದೆ, 'ಸಂಶೋಧಕ' ಎಂದಲ್ಲ. ಮತ್ತೆ ಸಂಶೋಧಕ ತಜ್ಞನೇ ಆಗಿರಬೇಕು ಎಂದೇನೂ ಇಲ್ಲ. ನವನವೋನ್ಮೇಷದ ವಿಚಾರಗಳು ಅವನಲ್ಲಿ ಸ್ಫುರಿಸುತ್ತಾ ಇರಬೇಕು. ಅಂದಾಗಲೇ ಮೌಲಿಕ ಸಂಶೋಧನೆ (fundamental research) ಸಾಧ್ಯವಾಗುತ್ತದೆ.

ಮೌಲಿಕ ಸಂಶೋಧನೆ - ಎಂದರೆ ಯಾವುದು? ಇದಕ್ಕೆ ಗೃಹಕೃತ್ಯದ ಒಂದು ದೃಷ್ಟಾಂತವನ್ನು ಕೊಡುವೆ. ಹಾಲಿನಿಂದ ಮೊಸರು ಮಾಡಲು ಬರುವುದನ್ನು ಕಂಡು ಹಿಡಿದದ್ದು ಒಂದು ಶೋಧ. ಮೊಸರನ್ನು ಕಡೆದರೆ ಬೆಣ್ಣೆ ಬರುವುದೆಂಬುದನ್ನು ಪತ್ತೆ ಹಚ್ಚಿದುದೂ ಶೋಧವೇ. ಆದರೆ ಬೆಣ್ಣೆ ಬಂದುದರ ಮೂಲ ಕಾರಣ - ಹಾಲಿನಲ್ಲಿ ಸ್ನಿಗ್ಧಾಂಶ ಇರುತ್ತದೆ ಎಂಬುದಾಗಿ ಗುರುತಿಸಿದ್ದುದು ಸಂಶೋಧನೆ ಎನ್ನಿಸಿಕೊಳ್ಳುತ್ತದೆ - ನನ್ನ ದೃಷ್ಟಿಯಲ್ಲಿ. ಇದು ಮೌಲಿಕವಾದದ್ದು - ಏಕೆಂದರೆ ಹಾಲಿನ ಸ್ನಿಗ್ಧತ್ವವನ್ನು ಅರಿತುಕೊಂಡು ಬೇರೆ ರೀತಿಯಲ್ಲಿ ಅದನ್ನು ಅನ್ವಯಿಸುವ ಇಲ್ಲವೆ ಪ್ರಯೋಗಿಸುವ ಸಾಧ್ಯತೆ ಇದ್ದೇ ಇದೆ. ಅರ್ಥಾತ್ ಹೀಗೆ ಕಂಡುಕೊಂಡ ಯಾವುದೇ ಸಂಶೋಧನೆಯು ಸಾಮಾನ್ಯೀಕರಣಕ್ಕೆ ಒಗ್ಗುವಂತಿರಬೇಕು. 'ಇತಿಹಾಸ ದರ್ಶನ ೩'ರಲ್ಲಿ ಬಂದ *'ಕನ್ನಡಿಗ - ಒಂದು ಐತಿಹಾಸಿಕ ಚಿತ್ರ'* ಇಂಥ ಮೌಲಿಕ ಸಂಶೋಧನ ಸದರಿನಲ್ಲಿ ಬರುವಂತಹದಾಗಿದೆ.

ಶೋಧ(ನ) ಮತ್ತು ಸಂಶೋಧನ - ಈ ಪದಗಳ ಅರ್ಥವನ್ನು ಇನ್ನಷ್ಟು ಸ್ಪಷ್ಟಗೊಳಿಸಬೇಕು. ಹಳಗನ್ನಡ ಕಾವ್ಯದ ಒಂದು ಮಹತ್ವದ ಹಸ್ತಪ್ರತಿಯನ್ನು ಕಂಡುಹಿಡಿದು ಅಭ್ಯಾಸಮಾಡಿ ಅದಕ್ಕೆ ವಿದ್ವತ್‌ಪೂರ್ಣವಾದ ಮುನ್ನುಡಿ ಬರೆದರೆ, ಅದು ಸಾಹಿತ್ಯ ವಿಮರ್ಶೆ ಎನಿಸಿಕೊಳ್ಳುತ್ತದೆ. ಸಾಹಿತ್ಯ ಸಂಶೋಧನೆ ಅಲ್ಲ. ಅದೇ ಬಗೆಯ ಪರಿಶ್ರಮವನ್ನು ಇತಿಹಾಸ ವಿಷಯದಲ್ಲಿ ತೋರಿದ್ದಾದರೆ ಇದು ಶೋಧದ ಹೆಜ್ಜೆಯನ್ನು ದಾಟಿಕೊಂಡು ಸಂಶೋಧನದ ಸದರಿನಲ್ಲಿ ಬರಬಹುದು.

ಯಾವುದೇ ಸಂಶೋಧನಕ್ಕೆ ತಳಹದಿಯಾಗಿ ನಮ್ಮಲ್ಲಿ ಮೊದಲು ಆ ಬಗ್ಗೆ ಜಿಜ್ಞಾಸೆ ಅಥವಾ ಸಂದೇಹ ಮೂಡಿರುತ್ತದೆ. ಇದು ಉತ್ಕಟವಾದಷ್ಟೂ ಸಂಶೋಧನ ಕಾರ್ಯ ಮೌಲಿಕವೆನಿಸೀತು. ಇತಿಹಾಸ ಸಂಶೋಧಕನಂತೂ ಇದು ಹೇಗೆ ಆಯಿತು? ಏಕಾಯಿತು? ಎಂದು ಸದಾ ಯೋಚಿಸುತ್ತಲೇ ಇರಬೇಕು. ನೆಪೋಲಿಯನ್ನನು ಉದರ ರೋಗದಿಂದ ಸತ್ತ ಎಂದು ಕಳೆದ ೧೫೦ ವರ್ಷಗಳಿಂದ ನಂಬಿಕೊಂಡು ಬಂದಿದ್ದೆವು. ಆದರೆ ಸ್ವೀಡನ್ನಿನ ಓರ್ವ ದಂತವೈದ್ಯನಿಗೆ ಏನೋ ಒಂದು ಸಂದೇಹ. ಹಲ್ಲಿನ ವಿಷಾಣುಗಳ ರೋಗದ ರೀತಿಯನ್ನು ಬಲ್ಲ ಆತನಿಗೆ ಅದಕ್ಕೂ ನೆಪೋಲಿಯನ್ನನ ಉದರ ರೋಗದ ರೀತಿಗೂ ಸಾಮ್ಯ ಕಂಡಿತು. ಎರಡು ದಶಕಗಳವರೆಗೆ ಅವ್ಯಾಹತ ಪ್ರಯತ್ನ ಮಾಡಿ 'ನೆಪೋಲಿಯನ್ ವಿಷಪ್ರಾಶನ ಮಾಡಿಸಿದ್ದರಿಂದ ಸತ್ತ; ಅದು ಕೊಲೆ.' ಎಂದು ತೋರಿಸಿಕೊಟ್ಟ. ಅವನೇನೂ ಸಂಶೋಧನ ತಜ್ಞನಲ್ಲ. ಕುತೂಹಲವೇ ಅವನನ್ನು ಮುಂದಕ್ಕೆ ಸೆಳೆದೊಯ್ಯಿತು. ಇಲ್ಲಿ ಈ ದಂತವೈದ್ಯನ ಕಾರಣದಿಂದ, ನಾವು ತಿಳಿಯಬೇಕಾದ ಇನ್ನೊಂದು ಮಾತಿದೆ. ಇತಿಹಾಸದಲ್ಲಿ ಯಾವುದೊಂದು *ನೆಲೆಗೊಂಡ ವಿಷಯವಿದ್ದರೂ, ಹೇಳಿದವರು ಖ್ಯಾತನಾಮ ಇತಿಹಾಸಕಾರರಿದ್ದರೂ ಅದನ್ನು ಕಣ್ಣುಮುಚ್ಚಿ ಸ್ವೀಕರಿಸೋಣ ಬೇಡ.* ಸಲ್ಪ ಸಂದೇಹ ಬಂದರೂ, ಮರುಪರಿಶೀಲನೆಗೆ ಒಳಪಡಿಸುವುದರಲ್ಲಿ ಹಿಂಜರಿಯಬಾರದು. ಚಂದ್ರವಳ್ಳಿಯ ಶಾಸನದ ಭಾಷೆ ಪ್ರಾಕೃತವಲ್ಲ; ಸಂಸ್ಕೃತವೆಂದು ಕಂಡುಹಿಡಿದದ್ದು ಇದಕ್ಕೊಂದು ಉತ್ತಮ ನಿದರ್ಶನ.

ಸಮಾಂತರ ವಿಚಾರ

ಒಮ್ಮೊಮ್ಮೆ ನಾವು ಹಾಗಿರಬಾರದಿತ್ತು; ಹೀಗಿದ್ದರೆ ಹೇಗೆ? ಎಂಬ ವಿರುದ್ಧ ದಿಕ್ಕಿನ ಯೋಚನೆ ಮಾಡಿದರೂ ತಪ್ಪಿಲ್ಲ. ಇದನ್ನೆ lateral thinking ಎಂದು ಕರೆಯಲಾಗುತ್ತದೆ. ವಿಷಯವೊಂದಕ್ಕೆ ಸಮಾಂತರವಾಗಿ ಅದೇ ದಿಕ್ಕಿನಲ್ಲಿಯೋ ವಿರುದ್ಧ ದಿಕ್ಕಿನಲ್ಲಿಯೋ ನಮ್ಮ ವಿಚಾರಗಳನ್ನು ಸಾಗಿಸಬೇಕು. ಪೃಥ್ವಿಯ ಸುತ್ತು ಸೂರ್ಯ ತಿರುಗುತ್ತಾನೆಂಬುದನ್ನು ನಾವು ಈಗಲೂ ನೋಡುತ್ತೇವಲ್ಲವೆ? ಒಬ್ಬ ವಿಜ್ಞಾನಿಗೆ - ಅವನೇ ಕೋಪರ್ನಿಕಸ್ - ಸಂಶಯ ಬಂತು. ಪೃಥ್ವಿಗಿಂತ ಎಷ್ಟೋ ಪಟ್ಟು ಪ್ರಚಂಡಶಾಲಿಯಾದ ಸೂರ್ಯನು ಸುತ್ತುಹಾಕುವುದು ಸರಿ ಕಾಣದಲ್ಲ! ಎಂಬ ಸಂದೇಹ ಅವನನ್ನು ಕಾಡಿತು. ಹೇಗೂ ಆತ ಖಗೋಳ ವಿಜ್ಞಾನಿ. ಆ ತನ್ನ ಸಂದೇಹವನ್ನು ಬೆಳೆಸಿಕೊಂಡು ಕೊನೆಯಲ್ಲಿ ಪೃಥ್ವಿಯೇ ಸೂರ್ಯನ ಸುತ್ತಲೂ ತಿರುಗುವುದೆಂದು ಸಿದ್ಧಮಾಡಿ ತೋರಿದ.

Lateral thinking ನ ಪರಿಣಾಮದ ಬಗ್ಗೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಮುದ್ದಣ - ಮನೋರಮೆಯರ ರಸಿಕ ಸಂವಾದವನ್ನು ನಾವು ಬಲ್ಲೆವು. ಅದರಿಂದ ಮನೋರಮೆ ಅತ್ಯಂತ ರಸಿಕಳಿದ್ದಳೆಂದು ಗ್ರಹಿಸಿಬಿಟ್ಟಿದ್ದೇವೆ. ಆದರೆ ಹೀಗೂ ಯೋಚಿಸಬಹುದಲ್ಲವೆ? 'ಅವಳು ರಸಿಕ ಪತ್ನಿಯೇ ಆಗಿದ್ದರೆ ಕವಿ ಹೇಳಹೋಗುತ್ತಲೇ ಇರಲಿಲ್ಲ. ಆಕೆ ಸಾದಾ ಸಪ್ಪೆ ಕವಿಕಲ್ಪನೆ ಈ ರೀತಿ ಹರಿದಿರಬಹುದು.' ಯೇಸು ಕ್ರಿಸ್ತನ ಬಗ್ಗೆಯೂ ಹೀಗೆಯೇ - ಎಂದರೆ 'ಅವನು ಗೋದಲೆಯಲ್ಲಿ ಹುಟ್ಟಿದ ಬಡವ' ಎಂದು ಸಾಮಾನ್ಯ ಗ್ರಹಿಕೆ ಇರುವಾಗ, ಒಬ್ಬಾತ 'ಇಲ್ಲ, ಯೇಸುವಿನ ಮುಂದಿನ ಜನಸಂಪರ್ಕ ಗಮನಿಸಿದ್ದರೆ ಮಧ್ಯಮ ವರ್ಗದ ಸಂಸ್ಕಾರವಂತನಿದ್ದ' ಎಂದು ತೋರಿಸಿಕೊಟ್ಟ. ಈ ರೀತಿಯಲ್ಲಿ ಸಮಾಂತರ ವಿಚಾರ ಹೊಳೆಯಬೇಕಾದರೆ, ನಮ್ಮ ಖಾಸಾ ವಿಷಯ ಬಿಟ್ಟು ಬೇರೆ ವಿಷಯಗಳಲ್ಲಿಯೂ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಅಂದಾಗ ನಾವು ಮಾಡುತ್ತಿರುವ ಸಂಶೋಧನ ಕಾರ್ಯದ ಗುಣಮಟ್ಟ ಹೆಚ್ಚುತ್ತದೆ. ಮೌಲಿಕವೆನಿಸುತ್ತದೆ.

ಸಮ್ಮೇಳನ ನಡೆದ ಸ್ಥಳವಾದ ಹರಪನಹಳ್ಳಿಯ ಪರಿಚಯವನ್ನು ಶ್ರೀ ಕುಂ. ಬಾ. ಸದಾಶಿವಪ್ಪನವರು ಈ ಕೆಳಗೆ ಮಾಡಿಕೊಟ್ಟಿದ್ದಾರೆ. ಶಾಸನ ಪಾಳೆಯಗಾರರ ಪುಸ್ತಕ, ಕಂಚಿನ ಪತ್ರ ಪ್ರಾಚೀನ ಹಸ್ತಪ್ರತಿ, ಹಿರಿಯರ ಹೇಳಿಕೆ, ಕೆಳದಿ ನೃಪವಿಜಯ ಮುಂತಾದ ಆಕರಗಳನ್ನು ಬಳಸಿಕೊಂಡಿದ್ದಾರೆ. ಸಮ್ಮೇಳನ ಅಧ್ಯಕ್ಷರ ಆಶಯದ ಮೇರೆಗೆ ಲೇಖಕರು ಇದನ್ನು ಬರೆದುಕೊಟ್ಟಿದ್ದಾರೆ.

ಹರಪನಹಳ್ಳಿ - ಒಂದು ಪರಿಚಯ

ಹರಪನಹಳ್ಳಿ ಹೆಸರಿನ ಮೂಲ

೧೪೦ ಮಾಸಿವಾಡಿ - ಮಸಲ್ವಾಡದ ಬೊಪ್ಪಯ್ಯ ಅರಸನ ಮೇಲೆ ಗಂಡರಾದಿತ್ಯನ ಹೊಳಲು ಮಹಾಜನಗಳು ದೂರು ಸಲ್ಲಿಸಿದರು. ಆಗ ಚಕ್ರವರ್ತಿ ತ್ರಿಭುವನ ಮಲ್ಲದೇವನು ಹಿರೇಕುರುವತ್ತಿಗೆ ಆಗಮಿಸಿ, ಸಿಂಹಾಸನ ಕಟ್ಟೆಯ ಮೇಲೆ ಕುಳಿತು, ಒಂದು ತೀರ್ಮಾನ ತೆಗೆದುಕೊಳ್ಳುವನು. ಈ ಸಂದರ್ಭದಲ್ಲಿ ಹರಪನಹಳ್ಳಿ ಸುತ್ತಾಮುತ್ತಾ ಇದ್ದ ೧೨ರ ಬೆನ್ನವುರು, ನೀರಗುಂದ, ಎರಡೂ ಹಡಂಗಿಲೆಗಳು, ಮಾಗೊಳ, ಬಿದಿರಹಳ್ಳಿ ಹ - ಹನೂರು (ಈಗಿನ ಹಾವನೂರು) ಹೊಂನವಳಿ ಕುರುವತ್ತಿ ಬಾಳ್ಗುಳಿ ಇತ್ಯಾದಿ ಸ್ವತಂತ್ರ ಅರಸರನ್ನು ಅಲ್ಲಿಗೆ ಕರೆಸಲಾಗಿದ್ದಿತು. ಆದರೆ ಹರಪನಹಳ್ಳಿ ಅರಸ ಅಲ್ಲಿರಲಿಲ್ಲ. ಅಂದರೆ ಹರಪನಹಳ್ಳಿ ಆಗ ಸ್ವತಂತ್ರ ರಾಜ್ಯವಾಗಿರದೆ ಅದು ಮೂವತ್ತರ ಮುತ್ತಿಗೆಗೆ ಸೇರಿದ ಒಂದು ಅಗ್ರಹಾರವಾಗಿತ್ತೆಂದು ಕ್ರಿ.ಶ. ೧೧೦೪ರ ಹಿರೇಕುರುವತ್ತಿ ಶಾಸನದಿಂದ ತಿಳಿದುಬರುವುದು.

ಬೆಣ್ಣೆಹಳ್ಳಿ ಪಂಪಾಪತಿ ದೇವಾಲಯದ ಶಾಸನದಲ್ಲಿ ಬ್ರಹ್ಮಪುರಿಯ ೧೨ ಬ್ರಾಹ್ಮಣರ ವಿಚಾರ ಬರುತ್ತದೆ. ಬೆಣ್ಣೆಹಳ್ಳಿ, ಮೂವತ್ತರ ಮುತ್ತಿಗೆ, ಹರಪನಹಳ್ಳಿ ೧೦ ಕಿಲೋ ಮೀಟರ್ ಅಂತರದಲ್ಲಿವೆ.

ಮೂವತ್ತರ ಮುತ್ತಿಗೆ ಕೋಗಳಿನಾಡಿನ ೭೦ ಉಪವಿಭಾಗ. ಇದಕ್ಕೆ ಬ್ರಾಹ್ಮಣ ವಿಷ್ಣುನಾಯಕನ ಪುತ್ರ ಹರಿಯಣ್ಣ ಹೆಗ್ಗಡೆತನ ಮಾಡುತ್ತಿದ್ದ. ಅವನಿಗೆ ಹರಿಯಣ್ಣ, ಹರಿಹರ, ಹರಿಯಪ್ಪ ಎಂದು ಕರೆಯುತ್ತಿದ್ದರು. ಹರಿಯಪ್ಪನ ಹೆಸರಿನಲ್ಲಿ ಸ್ಥಾಪನೆ ಆದ ಒಂದು ಅಗ್ರಹಾರವೇ ಬ್ರಹ್ಮಪುರಿ - ಹರಪನಹಳ್ಳಿ ಮುತ್ತಿಗೆ ಬ್ರಹ್ಮಪುರಿ - ಹರಪನಹಳ್ಳಿ. ಮುತ್ತಿಗೆ ಬ್ರಾಹ್ಮಣ ಶಾನುಭೋಗರು ಈಗಲೂ ಹರಪನಹಳ್ಳಿಯಲ್ಲಿರುವರು. ಹರಿಯಪ್ಪನ ವಂಶದವರೂ ಹೊಸಪೇಟೆಯಲ್ಲಿರುವರು.

ಹದಿಮೂರನೇ ಶತಮಾನದಲ್ಲಿ ಈ, ಅಗ್ರಹಾರ ಬಾಗಳಿ ರಾಜ್ಯಕ್ಕೆ ಸೇರಿದೆ. ಈ ವಿಷಯ ಬಾಗಳಿ ಕಂಚಿನ ಪತ್ರದಿಂದ ತಿಳಿದು ಬರುತ್ತದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ೧೯೪೭ರಲ್ಲಿ ಹರಪನಹಳ್ಳಿಯಲ್ಲಿ ಸೇರಿದಾಗ ಶ್ರೀ ವೈ. ನಾಗೇಶಶಾಸ್ತ್ರಿಗಳು ತಮ್ಮ ಪ್ರಬಂಧದಲ್ಲಿ 'ಹರಿಪುರ' ಎಂದು ಬರೆದಿದ್ದರು. ಲಿಂಗಣ್ಣ ಕವಿವಿರಚಿತ ಕೆಳದಿನೃಪವಿಜಯದಲ್ಲಿ ಹರಪನಹಳ್ಳಿ ಪಾಳೆಯಗಾರ ಮೊದಲ ಸೋಮಶೇಖರನಿಗೆ "ಹರಪುರಾಧೀಶ್ವರ" ಎಂದು ಸಂಬೋಧಿಸಿದೆ. ಪಾಳೆಯಗಾರರ ಕಾಲದಲ್ಲಿ ಹರಿಪುರ, ಹರಿಯಪ್ಪನಹಳ್ಳಿ ಹರಪನಹಳ್ಳಿ ಎಂದಾಗಿದೆ. ಡಾ|| ಎಂ. ಎಂ. ಕಲಬುರ್ಗಿಯವರು ಸಂಪಾದಿಸಿರುವ ಬಳ್ಳಾರಿ ಜಿಲ್ಲೆ ಕೈಫಿಯತ್ತಿನಲ್ಲಿ ಹಾರಸ್ಪಹಳ್ಳಿ, ಹರುಪ್ಪಹಳ್ಳಿ, ಹರುಪನಹಳ್ಳಿ ಹರುಪನಹಳ್ಳಿ ಸೀಮೆ ಎಂದು ಕರೆದಿದೆ. ಹರಪನಹಳ್ಳಿ ಸುತ್ತಮುತ್ತ ಗ್ರಾಮಗಳ ಶಾಸನಗಳಲ್ಲಿ ಹರಿಹರ ದೇವರ, ಹರಿಹರ ಅರಸರ ವಿಚಾರ ಬರುತ್ತದೆ. ಹರಪನಹಳ್ಳಿ ಪೂರ್ವಕ್ಕೆ ಹೊಂಬಳಗಟ್ಟ ಗ್ರಾಮ ಪಶ್ಚಿಮಕ್ಕೆ ಹಾರ್ಕನಾಳು ಹೂಲಿಕಟ್ಟೆ ಗ್ರಾಮ. ಉತ್ತರಕ್ಕೆ ಹಡಗಲಿ ದಕ್ಷಿಣಕ್ಕೆ ಹರಿಹರಪಟ್ಟಣಗಳು ಬರುವುದು.

ಹನ್ನೆರಡು ಜನ ಬ್ರಾಹ್ಮಣರು ಬ್ರಹ್ಮಪುರಿಯಿಂದ ಆಗಮಿಸಿದ್ದರು, ಎಂಬುದರ ಸಂಕೇತವೋ? ಹರಪನಹಳ್ಳಿಯಲ್ಲಿ ಹನ್ನೆರಡು ಅಗಸಿಗಳು, ಹನ್ನೆರಡು ಮಸೀದಿಗಳು. ಹನ್ನೆರಡು ಗರಡಿ ಮನೆಗಳು ಇರುವುವು.

ಚಿಕ್ಕ ಅಗ್ರಹಾರ ಪಟ್ಟಣವಾದ ಬಗೆ

ವಿಜಯನಗರ ಸೈನ್ಯದಲ್ಲಿ ಸೇನಾಧಿಕಾರಿಯಾಗಿದ್ದ ದಾದೇ ನಾಯಕ ಅವನ ಸೋದರ ರಂಗಣ್ಣ ನಾಯಕರು ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ಬಾಗಳಿಗೆ ಬಂದು ಒಂದು ಚಿಕ್ಕ ಬೇಡರ ಪಡೆಯನ್ನು ರಚಿಸಿದರು. ನಿತ್ಯ ನಾಲ್ಕಾರು ಹಳ್ಳಿಗಳ ಗೌಡರನ್ನು ಹೆದರಿಸಿ ಮೂವತ್ತು ಮೂರು ಹಳ್ಳಿಗಳನ್ನು ತಮ್ಮ ಸ್ವಾಧೀನ ಪಡಿಸಿದರು. ದುಷ್ಟರನ್ನು ಕಳ್ಳರನ್ನು ಓಡಿಸಿ, ಜನಸಾಮಾನ್ಯರಿಗೆ ಶಾಂತಿಯಿಂದ ಬಾಳಲು ಭದ್ರತೆ ಒದಗಿಸಿದರು.

ಕ್ರಿ.ಶ. ೧೫೬೫ ರಿಂದ ೨೬ ವರ್ಷಗಳ ಕಾಲ ದಾದೇ ನಾಯಕ ರಾಜ್ಯವಾಳಿದ. ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕನ ಮಗಳು ಹೊನ್ನನಾಗತಿಯನ್ನು ಮಡದಿಯನ್ನಾಗಿ ಸ್ವೀಕರಿಸಿದ. ಹರಪನಹಳ್ಳಿ, ಉಚ್ಚಂಗಿ ದುರ್ಗಗಳನ್ನು ಪ್ರಮುಖ ರಾಜಧಾನಿಗಳನ್ನಾಗಿ ಮಾಡಿಕೊಂಡು ರಾಜ್ಯವಾಳಿದ.

೧೫ ಜನ ಪುರುಷರು ಪಟ್ಟವಿಲ್ಲದೇ ಓರ್ವಸ್ತ್ರೀ ಹರಿಯಮ್ಮ ಗಂಡನ ಹೆಸರಿನಲ್ಲಿಯೇ ರಾಜ್ಯವಾಳಿದಳು. ಗಂಡ ಮಡಿದ ಮೇಲೂ ದತ್ತುಪುತ್ರರನ್ನು ನೇಮಿಸಿ ಬಹುಕಾಲ ರಾಜ್ಯ ಆಳಿದ ಮೊದಲ

ಸೋಮಶೇಖರನ ಮಡದಿ ಸೋಮಮ್ಮಾಜಿಯ ಪಾತ್ರ ಅತ್ಯಂತ ಪ್ರಮುಖ. ೧೬ ಜನ ನಾಯಕ - ನಾಗತಿಯರಲ್ಲಿ ಪ್ರಮುಖರೆಂದರೆ ದಾದಯ್ಯ, ರಂಗಣ್ಣ, ಭರ್ಮಣ್ಣ, ಮೊದಲ ಸೋಮಶೇಖರ, ಬಸಪ್ಪ ಎಂಬುವವರು ಪ್ರಮುಖರು, ಇವರ ಕಾಲದಲ್ಲಿ 'ಬ್ರಹ್ಮಪುರಿ' ಬೆಳೆದು ದೊಡ್ಡ ಪಟ್ಟಣವಾಯಿತು. ಇವರು ಸುಮಾರು ಎರಡು ನೂರಾಮೂವತ್ತು ಮೂರು ವರ್ಷಗಳ ಕಾಲ ರಾಜ್ಯ ಆಳಿದರು. ಬ್ರಿಟಿಷರಿಗೆ ಸಿಂಹಸ್ವಪ್ನ ಆದರು. ರಾಜ್ಯದ ವಿಸ್ತೀರ್ಣ ೩೬೪೦ ಚ. ಮೈಲು, ಪೂಹುಲಿಗಿ-ಹೊಸೂರು. ಪಶ್ಚಿಮಕ್ಕೆ ಸೋಮಲಾ ಪುರ, ಹಿರೇ ಕುರುವತ್ತಿ - ಮೈಲಾರ, ಉತ್ತರಕ್ಕೆ ಮೊದಲ ಗಟ್ಟೆ, ದಕ್ಷಿಣಕ್ಕೆ ಮಾಗಾನಹಳ್ಳಿ ಗ್ರಾಮ. ಹೀಗೆ ಬಳ್ಳಾರಿ ಜಿಲ್ಲೆಯ ಪಶ್ಚಿಮದ ನಾಲ್ಕುವರೆ ತಾಲೂಕುಗಳಷ್ಟು ಭೂಭಾಗವನ್ನು ಒಳಗೊಂಡಿದ್ದಿತು. ಹರಪನಹಳ್ಳಿ ಪಟ್ಟಣದಲ್ಲಿ ಶ್ರೀ ವೆಂಕಟೇಶ್ವರ ದೇವಾಲಯ, ಜೈತನ ಬಸದಿ, ಕೋಟೆ ಆಂಜನೇಯ ಕಲ್ಯಾಳ ದುರುಗಮ್ಮ. ಉಚ್ಚಂಗಮ್ಮ, ಪರ್ವತ ರಾಮೇಶ್ವರ, ಮೈಲಾರಲಿಂಗ ಸ್ವಾಮಿ ದೇವಾಲಯ, ಗೋಕರ್ಣೇಶ್ವರ ಪ್ರಸನ್ನ ವೆಂಕಟರಮಣ ನಗರೇಶ್ವರ, ವೀರಭದ್ರ ಗಂಗಾಧರೇಶ್ವರ, ಕೆಂಪಯ್ಯನ ಮಠ, ಅರಸು ಮಠಗಳು, ಗುರುಪಾದ ದೇವರ ಮಠ, ತೆಗ್ಗಿನ ಮಠ, ಸುರುಪಾಲ ದೇವರ ಮಠ, ಕಲ್ಲುಮಠ, ಗುಂಜಿಹಳ್ಳಿಮಠ, ಹರಿಯಮ್ಮನಹಳ್ಳಿ ಮಠ, ವಾದಿರಾಜ ಮಠ, ಮಾಧ್ವಮಠ, ಶಂಕರಮಠ, ರಾಘವೇಂದ್ರ ಮಠ, ಚಿದಂಬರಮಠ, ೧೨ ಮಸೀದಿಗಳು ಇರುವುವು.

ಹರಪನಹಳ್ಳಿಪಟ್ಟಣ ತಾಲೂಕು ಕೇಂದ್ರ. ಹಿಂದೆ ಬಳ್ಳಾರಿ ಜಿಲ್ಲೆಗಿತ್ತು. ಈಗ ದಾವಣಗೆರೆ ಜಿಲ್ಲೆಗೆ ಸೇರಿದೆ. ೨೩೬ ಕಂದಾಯದ ಹಳ್ಳಿಗಳನ್ನು ಒಳಗೊಂಡಿದೆ. ಶಿಕ್ಷಣ ಸಂಸ್ಥೆಗಳಿಗೆ ಹೆಸರು ಮಾಡಿದೆ.

ಕೃಷಿ: ಮರಳು ಮಿಶಿತ ಕೆಂಪು ಮಣ್ಣು. ಅಂತರ ಜಲದ ಆಳ ಬಹು ದೂರ. ರೈತರು ಮಳೆ ಆಶ್ರಿತ ಬೆಳೆ ಬೆಳೆಯುವರು. ಎಂಟು ಕೆರೆಗಳಿದ್ದರೂ ಹೂಳು ತುಂಬಿ ಕಡಿಮೆ ನೀರು ನಿಲ್ಲುವುದು. ಹತ್ತಿ, ಹೈಬ್ರೀಡ್ ಜೋಳ, ಮಕ್ಕೆಜೋಳ ಸೂರ್ಯಕಾಂತಿ, ತೊಗರಿ, ಹೆಸರು, ರಾಗಿ, ತಂಬಾಕು, ತರಕಾರಿ ಹೂವು ಪ್ರಮುಖ ಬೆಳೆಗಳು. ನದಿದಂಡೆಗೆ ಸೇರಿದ ಗ್ರಾಮಗಳಲ್ಲಿ ನೀರಾವರಿ ಪೈರು (ಹಣದಬೆಳೆ) ಸಾಕಷ್ಟು ಬೆಳೆಯುವರು. ನಿಸರ್ಗ ಸೌಂದರ್ಯದ ಹಿನ್ನೆಲೆಯಲ್ಲಿ ಕಂಗೊಳಿಸುವ ಈ ಊರು ಸಾಮರಸ್ಯದ ನೆಲೆ ಆಗಿದೆ.

ಹದಿಮೂರನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾದ

ಡಾ।। ಶ್ರೀನಿವಾಸ ಹಾವನೂರ ಅವರ

ಜೀವನ ಪರಿಚಯ-ಪಕ್ಷಿ ನೋಟ

೧೨-೧-೧೯೨೮	-	ಧಾರವಾಡ ಜಿಲ್ಲೆ, ಹಾವನೂರಲ್ಲಿ ಜನನ
ತಂದೆ	:	ನರಸಿಂಹಾಚಾರ್ಯ
ತಾಯಿ	:	ರಮಾಬಾಯಿ

ವಿದ್ಯಾರ್ಹತೆ

೧೯೩೩-೩೬	:	**ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ**, ಹಾವನೂರು
೧೯೩೬-೪೩	:	**ಪ್ರೌಢಶಾಲಾ ವಿದ್ಯಾಭ್ಯಾಸ**, ಹಾವೇರಿ-ಧಾರವಾಡ
೧೯೪೩-೪೭	:	**ಕಾಲೇಜು ವಿದ್ಯಾಭ್ಯಾಸ**, ಧಾರವಾಡ-ಸಾಂಗ್ಲಿ
೧೯೪೭	:	ಬಿ. ಎ. ಆನರ್ಸ್ (ಕನ್ನಡ), ಬಾಂಬೆ ವಿಶ್ವವಿದ್ಯಾಲಯ
೧೯೫೯	:	ಎಂ. ಎ. (ಕನ್ನಡ), ಪೂನಾ ವಿಶ್ವವಿದ್ಯಾಲಯ
೧೯೭೧	:	ಪಿಎಚ್.ಡಿ. ಪದವಿ (ವಿಷಯ: ಹೊಸಗನ್ನಡ ಅರುಣೋದಯ) ಪೂನಾ ವಿಶ್ವವಿದ್ಯಾಲಯ

ವೃತ್ತಿಬಾಹುಳ್ಯ

೧೯೪೭-೪೮	:	ಟ್ಯೂಟರ್ ಫಾರ್ ಇಂಗ್ಲಿಷ್ ವಿಲಿಂಗ್‌ಡನ್ ಕಾಲೇಜು, ಸಾಂಗ್ಲಿ
೧೯೬೯-೧೯೮೨	:	ಲೈಬ್ರರಿಯನ್, ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್
೧೯೮೨-೮೪	:	ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು, ಮಂಗಳೂರು ವಿಶ್ವವಿದ್ಯಾಲಯ
೧೯೮೪-೮೯	:	ಕನ್ನಡ ಪ್ರಾಧ್ಯಾಪಕರು, ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು ಮುಂಬಯಿ ವಿಶ್ವವಿದ್ಯಾಲಯ ಇದಲ್ಲದೆ ಹಲವಾರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾಗದರ್ಶನ ಮಾಡಿದ್ದಾರೆ.
೧೯೯೬ರಿಂದ	:	ಬೆಂಗಳೂರಿನಲ್ಲಿ ಹಾಲಿ ವಾಸ್ತವ್ಯ

ಕೃತಿ ಸಂಪದ

ಸಾಹಿತ್ಯಕ

೧೯೬೬	-	ಗೋವಿಂದ ಪೈ ವಾಙ್ಮಯ ದರ್ಶನ
೧೯೭೪	-	ಹೊಸಗನ್ನಡದ ಅರುಣೋದಯ (ಸಂಪ್ರಬಂಧ) (ತಿದ್ದಿದ ಆವೃತ್ತಿ ಪುಸ್ತಕ ಪ್ರಾಧಿಕಾರದಿಂದ - ಕ್ರಿ. ಶ. ೨೦೦೦ದಲ್ಲಿ)
೧೯೮೨	-	ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ
೧೯೮೩	-	ಗೋವಿಂದ ಪೈಗಳ ಕೃತಿ-ಸಮೀಕ್ಷೆ
೧೯೯೧	-	ಶ್ರೀಪಾದರಾಜರ ತೀರ್ಥಪ್ರಬಂಧ (ಕಾವ್ಯಾತ್ಮಕ ಸಮೀಕ್ಷೆ)
೧೯೫೬	-	ಅವಿವಾಹಿತೆ (ಸಾಮಾಜಿಕ ವಿಶ್ಲೇಷಣೆ)
೧೯೯೬	-	ಪ್ರೇಕ್ಷಣೀಯ ಕರ್ನಾಟಕ (ಸಚಿತ್ರ ಪರಿಚಯ)

ಸಂಪಾದಿತ

೧೯೭೦	-	ಡಾ।। ರಂ. ಶ್ರೀ. ಮುಗಳಿ - ಸವಿಪರಿಚಯ
೧೯೮೪	-	ಬೆಂಗೇರಿಯವರ ಬರಹಗಳು
೧೯೮೭	-	ಪತ್ರಗಳು ಚಿತ್ರಿಸಿದ ಗೋವಿಂದ ಪೈಗಳು
೧೯೯೩	-	ಹಟ್ಟಿಯಂಗಡಿ ನಾರಾಯಣರಾಯ - ಸಾಹಿತ್ಯ ವಾಚಿಕೆ
೧೯೯೯	-	ತುರಮರಿಯವರ 'ಶಬ್ದಮಂಜರಿ'
೧೯೯೯	-	ಪಂ. ಮ. ಪ್ರ. ಪೂಜಾರರ 'ಹಳೆಗನ್ನಡ ಕವಿಕಾವ್ಯ ಮಹೋನ್ನತಿ'

೧೯೮೭	-	ಎಪಿಗ್ರಾಫಿಕಲ್ ಸ್ಟಡೀಸ್ - ಎಸ್.ಎಲ್.ಎನ್.ರಾವ್ (ಸಂ. ಡಾ. ಎಚ್. ಎಸ್. ಗೋಪಾಲ ರಾವ್)

ಚರಿತ್ರೆಗಳು

೧೯೫೮	-	ಇತಿಹಾಸ ಸಂಶೋಧಕ ನಾ. ಶ್ರೀ. ರಾಜಪುರೋಹಿತರು
೧೯೭೧	-	ಗಳಗನಾಥ ಮಾಸ್ತರರು (ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಮರುಪ್ರಕಟನೆ ೧೯೯೯)
೧೯೭೩	-	ಹೈದರಾಬಾದಿನ ವೀರಕನ್ನಡಿಗ - ಚಿಮ್ಮಲಗಿಯವರು
೧೯೭೩	-	ರೆ. ಎಫ್. ಕಿಟೆಲ್
೧೯೭೮	-	ಶಾಸನಪಿತಾಮಹ ಬಿ.ಎಲ್. ರೈಸ್
೨೦೦೦	-	ಡಾ. ಎಚ್. ಜೆ. ಬಾಬಾ

ಸಣ್ಣಕತೆ - ಲಲಿತ ಪ್ರಬಂಧ

೧೯೪೮	-	ಅವರು ಮತ್ತು ದೇವಕ್ಕ (ನೀಳ್ಗತೆಗಳು)
೧೯೫೯	-	ಕಾಗೆಗೆ ಹೇಳಿದ ಕತೆ. (ಸಣ್ಣ ಕತೆಗಳು - ಕ. ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತ)
೧೯೮೩	-	ಕುಚೋದ್ಯದ ಕತೆಗಳು
೧೯೯೯	-	ಒಂದಿಷ್ಟು ಲಘು, ಒಂದಿಷ್ಟು ಗಂಭೀರ

ಕಾದಂಕಥನಗಳು

೧೯೮೩	-	ಮಾತಂಗಿ ಮತ್ತು ಇತರ ಕಾದಂ-ಕಥನಗಳು
೧೯೮೭	-	ಕುಮುದಿನಿ ಹಾಗೂ ಇತರ ಕಾದಂ-ಕಥನಗಳು
೧೯೯೯	-	ಎಸ್.ಎಲ್.ಭೈರಪ್ಪ ಅವರ ಕಾದಂ-ಕಥನಗಳು
೧೯೯೯	-	ಕಟ್ಟೀಮನಿಯವರ 'ಮಾಡಿ ಮಡಿದವರು'

ಕೆಲವು ಮಹತ್ವದ ಮೌಲಿಕ ಶೋಧಗಳು

- ಕನ್ನಡದ ಪ್ರಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ' ಎಂಬುದನ್ನು ಕಂಡುಹಿಡಿದದ್ದು (೧೮೪೩)
- ರಾಮಾಯಣಗಳನ್ನು ಬರೆದಿದ್ದರೂ ಮುದ್ದಣನು ಪರಮ ಶಿವಭಕ್ತನಿದ್ದನೆಂಬುದನ್ನು ಕಂಪ್ಯೂಟರ್ ಬಳಸಿ ತೋರಿಸಿದ್ದು.
- ಬಾಸೆಲ್ ಮಿಶನ್ನಿನವರ ಸಾದ್ಯಂತ ಇತಿಹಾಸ : ಮೊಗ್ಲಿಂಗ್, ಕಿಟೆಲ್ ಮೊದಲಾದವರ ವಿಶಿಷ್ಟ ಸೇವೆಯ ವಿವರಗಳು.
- ಅದರಂತೆ, ೧೯ನೆಯ ಶತಮಾನದ ಬ್ರಿಟಿಶ್ ಅಧಿಕಾರಿಗಳಾದ ಮೆಡೋಸ್ - ಟೇಲರ್, ಎಲಿಯೆಟ್, ಫ್ಲೀಟ್ - ಮುಂತಾದವರ ಸಾಧನೆ.
- ದಕ್ಷಿಣ ಕನ್ನಡದ ಅಧ್ವರ್ಯುಗಳಾದ ಮುದ್ದಣ, ಗೋವಿಂದ ಪೈ ಮತ್ತು ಶಿವರಾಮ ಕಾರಂತ - ಇವರುಗಳ ಬಗ್ಗೆ ಆತ್ಮೀಯ ಚಿಂತನೆ.
- ಸಮಗ್ರ ಕನ್ನಡ ಪತ್ರಿಕೋದ್ಯಮದ ೧೫೦ ವರ್ಷಗಳ ಸಿಂಹಾವಲೋಕನ.
- ಕಿತ್ತೂರ ದೇಸಗತಿ, ಮತ್ತು ಸಂಗೊಳ್ಳಿ ರಾಯಣ್ಣ - ಇವರ ಕುರಿತು ವಿದೇಶಗಳಿಂದ ತಂದ ಅಪೂರ್ವ ಮಾಹಿತಿ.
- ಗಣಕಯಂತ್ರಕ್ಕೆ ಹರಿದಾಸ ಸಾಹಿತ್ಯದ ಮಾಹಿತಿಯನ್ನು ಕನ್ನಡ ಲಿಪಿಯಲ್ಲಿ ಪೂರೈಸಿ ಕನ್ನಡ ಲಿಪಿಯಲ್ಲಿಯೆ ಪ್ರೊಸೆಸ್ ಮಾಡಿದ್ದು.
- ಉತ್ತರ ಕನ್ನಡ ಜಿಲ್ಲೆ (೧೮೬೨) ನಿರ್ಮಾಣವಾದದ್ದು ಹೇಗೆ? ಅದಕ್ಕೆ ಅಮೆರಿಕನ್ ಸಿವಿಲ್ ವಾರ್ ಮೂಲ ಕಾರಣವೆಂಬುದನ್ನು ಕಂಡು ಹಿಡಿದದ್ದು.
- ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರುಗಳ ನಡುವಣ ಸಾಂಸ್ಕೃತಿಕ ವಿಭಜನೆಯ ಐತಿಹಾಸಿಕ ಮೀಮಾಂಸೆ.

ಪದವಿ ಗೌರವಗಳು

- ಕರ್ನಾಟಕ ಇತಿಹಾಸ ಸಮ್ಮೇಳನಗಳಲ್ಲಿ ಹಾಗೂ ಹಲವಾರು ಗೋಷ್ಠಿಗಳ ಅಧ್ಯಕ್ಷತೆ.

ಗ್ರಂಥಾಲಯ ವಿಜ್ಞಾನ

ಮುಂಬಯಿ 'ಟಾಟಾ ಇನ್ಸ್ ಟಿಟ್ಯೂಟ್ ಆಫ್ ಫಂಡಮೆಟಲ್ ರಿಸರ್ಚ್'ನಲ್ಲಿ ಗ್ರಂಥಪಾಲರಾಗಿದ್ದುದು.

ವಿದೇಶ ಯಾತ್ರೆ

ಕನ್ನಡದ ಅಪೂರ್ವ ಮಾಹಿತಿಗಾಗಿ, ಮತ್ತು ಕನ್ನಡಕ್ಕಾಗಿ ಕಂಪ್ಯೂಟರ್ ಅಳವಡಿಕೆಯ ಕುರಿತು ಸೆಮಿನಾರ್ ಭಾಷಣಗಳಿಗಾಗಿ ಹಲವಾರು ಬಾರಿ ವಿದೇಶಗಳಿಗೆ ಯಾತ್ರೆ.

ಮರಾಠೀ - ಕನ್ನಡ ಬಾಂಧವ್ಯ

ಪುಣೆಯ ಮ-ಕ ಸ್ನೇಹ ಕೇಂದ್ರದ ಉಪಾಧ್ಯಕ್ಷ ಅಲ್ಲಿಯ ಕನ್ನಡ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷ, ಮರಾಠಿಗರಿಗೆ ಕನ್ನಡ ಕಲಿಕೆ.

ಕಂಪ್ಯೂಟರ್ ಬಳಕೆ

ಭಾರತೀಯ ಸಾಹಿತ್ಯ ಇತಿಹಾಸಗಳ ಅಧ್ಯಯನದಲ್ಲಿ ಮೊದಲ ಬಾರಿಗೆ ಕಂಪ್ಯೂಟರ್ ಅಳವಡಿಕೆ, ಕರ್ನಾಟಕಕ್ಕಂತೂ ಸರಿಯೇ. ಕನ್ನಡ ಶಾಸನಗಳ ವಿಶ್ಲೇಷಣೆ, ಸ್ಥಳನಾಮ, ಕ. ವೈಜ್ಞಾನಿಕ ಪದಕೋಶ ಇವುಗಳಿಗೆ ಕಂಪ್ಯೂಟರ್ ಬಳಕೆಯ ಯೋಜನೆ ಸಿದ್ಧಪಡಿಸಿರುವುದು.

ಸದ್ಯದ ಕೆಲಸಗಳು

ಕರ್ನಾಟಕ ಸರಕಾರದ 'ಸಮಗ್ರ ದಾಸವಾಙ್ಮಯ ಪ್ರಕಟನ ಯೋಜನೆ' - ಇದರ ಕಾರ್ಯವಾಹಕ ಸಂಪಾದಕತ್ವ - ಕಾರ್ಯಗತ ಯೋಜನೆಗಳು

ಅ) ಹರಿದಾಸರ, ಸಾಹಿತ್ಯದ ಮಾಹಿತಿ ಕೋಶ - ಕಂಪ್ಯೂಟರ್‌ನಲ್ಲಿ.

ಆ) Chronology of Karnataka History & Culture - Through Computer.

ಪ್ರಶಸ್ತಿ ಸನ್ಮಾನಗಳು

ಮಿಥಿಕ್ ಸೊಸೈಟಿ, ಸೊಲ್ಲಾಪುರ ಹೊರನಾಡ ಕನ್ನಡಿಗರ ಕೂಟ, ಕಿಟೆಲ್ ಸ್ಮಾರಕ ಪ್ರಶಸ್ತಿ, 'ದೆಹಲಿ ಕನ್ನಡಿಗ' ಮುಂತಾದವುಗಳಿಂದ. ೧೯೯೩ ರಲ್ಲಿ (ಕಾರಂತರು ಆಯ್ಕೆಯ ಅಧ್ಯಕ್ಷರಿದ್ದಾಗ) ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ.

೧೯೯೯ರಲ್ಲಿ ೧೩ನೆಯ ಕರ್ನಾಟಕ ಇತಿಹಾಸ ಸಮ್ಮೇಳನದ ಅಧ್ಯಕ್ಷತೆ. ೧೯೯೯ ರಲ್ಲಿ ಪುತ್ತೂರು ಕರ್ನಾಟಕ ಸಂಘದವರ ವಿಶೇಷ ಸನ್ಮಾನ. ೧೯೯೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ.

ಇತಿಹಾಸ ದರ್ಶನ

ಡಾ॥ ಕೆ. ಬಿ. ಶಿವತಾರಕ್*

ತುಮಕೂರು ಜಿಲ್ಲಾ ಪ್ರದೇಶದ ಸೂಕ್ಷ್ಮಶಿಲಾಯುಗ ಸಂಸ್ಕೃತಿ

ಕರ್ನಾಟಕವು ಶಿಲಾಯುಗದ ತವರೂರಾಗಿದ್ದು, ವಿವಿಧ ಸಾಂಸ್ಕೃತಿಕ ಹಂತಗಳಿಗೆ ಸಂಬಂಧಿಸಿದ ವೈವಿಧ್ಯ ಪ್ರಾಚ್ಯಾವಶೇಷ ಹಾಗೂ ನಿರ್ಮಿತಿಗಳನ್ನು ಶೋಧಿಸಿ ಹೆಚ್ಚಿನ ಭಾಗವನ್ನು ಸರ್ವೇಕ್ಷಿಸಿ ಸಾಧ್ಯವಾದಷ್ಟುಮಟ್ಟಿಗೆ ಮಾಹಿತಿಯನ್ನು ಪಡೆದುಕೊಳ್ಳಲಾಗಿದ್ದರೂ ಇನ್ನೂ ಕೆಲವು ಜಿಲ್ಲೆಗಳ ಬಗೆಗಿನ ಪ್ರಾಗಿತಿಹಾಸದ ವಿವರಣೆಯನ್ನು ತಿಳಿಯಲು ಸಾಧ್ಯವಾಗಿಲ್ಲ. ಅಂತಹ ಒಂದು ಪ್ರದೇಶವಾದ ತುಮಕೂರು ಜಿಲ್ಲೆಯ ಪ್ರಾಗಿತಿಹಾಸದ ಕೂಲಂಕಷ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ಅಲ್ಲಿ ದೊರೆತ ವಿವಿಧ ಶಿಲಾಯುಗ ಸಂಸ್ಕೃತಿಯ ಹಂತಗಳ ಬಗೆಗೆ ತಿಳಿದುಬಂದಿದ್ದು, ಈಗಾಗಲೇ ಹಳೇಶಿಲಾಯುಗ ಸಂಸ್ಕೃತಿಯ ವಿವರವನ್ನು ತಿಳಿಯಪಡಿಸಲಾಗಿದೆ (ಇತಿಹಾಸದರ್ಶನ, ಸಂಪುಟ - ೧೧ : ೧೯೯೬). ಅದೇ ರೀತಿ ಮುಂದಿನ ಹಂತವಾದ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಬಗೆಗೆ ಪ್ರಸ್ತುತ ಸಂಪ್ರಬಂಧದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಹಿನ್ನೆಲೆ

ತುಮಕೂರು ಜಿಲ್ಲಾ ಪ್ರದೇಶದಲ್ಲಿ ಈ ಮೊದಲು ಕೇವಲ ಮೂರು ಸ್ಥಳಗಳಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳಿರುವುದನ್ನು ಗುರುತಿಸಲಾಗಿತ್ತು. *ಹೊಳಕಲ್ಲುಬೆಟ್ಟ* (ಶಿರಾ ತಾಲ್ಲೂಕು) ಮತ್ತು ಮಿನಾಕ್ಷಯ್ಯ ಎಸ್ಟೇಟ್ (ತುಮಕೂರು ತಾಲ್ಲೂಕು)ಗಳ ನೆಲೆಗಳನ್ನು ಭೂವಿಜ್ಞಾನಿಗಳಾದ ಸಾಂಬಶಿವ ಐಯ್ಯರ್ ಮತ್ತು ಕಿನ್ಲಿಯಡ್ ಲೀ ಇವರುಗಳು ಸಂಗ್ರಹಿಸಿದ ಉಪಕರಣಗಳ ವಿವರಣೆಯನ್ನು ರಾಬರ್ಟ್ ಬ್ರೂಸ್‌ಫೂಟ್ *(The Foote Collection of Indian Pre-historic and Proto-historic Antiquities, Notes on their ages and Distribution, 1916)* ರವರು ಪ್ರಕಟಿಸಿರುವರು. ೧೯೫೨ರಲ್ಲಿ ಕಿಬ್ಬನಹಳ್ಳಿ ನೆಲೆಯನ್ನು ಅಲ್ಚಿನ್‌ರವರು ಸಂಶೋಧಿಸಿ, ದೊರೆತ ಉಪಕರಣಗಳ ಪ್ರಾಮುಖ್ಯತೆಯನ್ನು ತಿಳಿಸುತ್ತಾ ಇದೊಂದು ಗಮನಾರ್ಹ ನೆಲೆಯಾಗಿದೆ ಎಂದು ತಿಳಿಸಿರುವರು. ಇವುಗಳ ಅಧ್ಯಯನದ ಹಿನ್ನೆಲೆಯಲ್ಲಿ ಈ ಪ್ರದೇಶದ ಪ್ರಾಗಿತಿಹಾಸದ ಅಧ್ಯಯನವನ್ನು ಕೈಗೊಂಡು ಈ ಸಂಸ್ಕೃತಿಯ ಒಟ್ಟು ೬೬ ನೆಲೆಗಳನ್ನು ಶೋಧಿಸಲಾಗಿದೆ.

ಸೂಕ್ಷ್ಮಶಿಲಾಯುಗ ಸಂಸ್ಕೃತಿ

ಈ ಪ್ರದೇಶದ ಸರ್ವೇಕ್ಷಣೆಯ ಸಮಯದಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಒಟ್ಟು ೬೬ ಸ್ಥಳಗಳಲ್ಲಿ ವೈವಿಧ್ಯ ಉಪಕರಣಗಳು ದೊರಕಿದ್ದು, ಕೆಲವು ನೆಲೆಗಳಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಉಪಕರಣಗಳು ದೊರೆತಿದ್ದರೆ ಮತ್ತೆ ಕೆಲವು ನೆಲೆಗಳಲ್ಲಿ ಅತಿ ಹೆಚ್ಚು ಸಂಖ್ಯೆಯ ಉಪಕರಣಗಳು ಕಂಡುಬಂದಿವೆ. ಇಂತಹ ನೆಲೆಗಳು ಇರುವ ಪ್ರಾಕೃತಿಕ ಹಿನ್ನೆಲೆ, ದೊರೆತ ಉಪಕರಣ ವೈವಿಧ್ಯ ಹಾಗೂ ಉಪಕರಣಗಳನ್ನು ಸಿದ್ಧಗೊಳಿಸಲು ಬಳಸಿದ ತಾಂತ್ರಿಕತೆ ಇವುಗಳನ್ನು ಗಮನದಲ್ಲಿರಿಸಿಕೊಂಡು ಒಟ್ಟು ನೆಲೆಗಳನ್ನು ಮೂರು ಹಂತಕ್ಕೆ ಸೇರಿದವುಗಳೆಂದು ಅಭಿಪ್ರಾಯಪಡಲಾಗಿದೆ. ಇಂತಹ ಮೂರು ಹಂತಗಳೆಂದರೆ ೧. *ಹಳೇಶಿಲಾಯುಗ ಸಂಸ್ಕೃತಿಯ ನೆಲೆಗಳ ಜೊತೆಗಿರುವ ನೆಲೆಗಳು.* ೨. *ಯಾವುದೇ ಸಾಂಸ್ಕೃತಿಕ ಹಂತಗಳೊಂದಿಗಿರದ ಸ್ವತಂತ್ರ ನೆಲೆಗಳು* ಹಾಗೂ ೩. *ಮುಂದಿನ ಸಾಂಸ್ಕೃತಿಕ ಹಂತಗಳಾದ ನೂತನ/ಬೃಹತ್ ಶಿಲಾಸಂಸ್ಕೃತಿಯ ನೆಲೆಗಳೊಂದಿಗಿರುವ ಸೂಕ್ಷ್ಮಶಿಲಾಯುಗದ ನೆಲೆಗಳು* ಈ ರೀತಿಯ ವರ್ಗೀಕರಣ ಮುಖ್ಯವಾಗಿ ಅಂದಿನ ಮಾನವನು ಹಿಂದಿನ ಹಂತದ ನೆಲೆಯಲ್ಲಿಯೇ ಮುಂದುವರಿದಿರುವುದು ಅಥವಾ ಇಲ್ಲಿಯೇ ಈ ಹಂತ ಆರಂಭವಾಗಿರುವುದು ಹಾಗೂ ಈ ಹಂತದಿಂದ ಆರಂಭವಾಗಿ ಮುಂದಿನ ಹಂತಗಳಲ್ಲಿಯೂ ಈ ನೆಲೆಗಳು ಪ್ರಮುಖವಾಗಿರುವುದನ್ನು ಕಾಣಬಹುದು. ಹೀಗಾಗಲು ಮುಖ್ಯ


* ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ, ಸೆಂಟ್ ಮೆರೀಸ್ ಸಿರಿಯನ್ ಕಾಲೇಜ್, ಬ್ರಹ್ಮಾವರ - ೫೭೬ ೨೧೩.

ಕ್ರಮ ಸಂಖ್ಯೆ	ನೆಲೆ	ಮೊದಲನೆಯ ಹಂತ ಹಳಶಿಲಾಯುಗದ ನೆಲಗಳ ಜೊತೆ-ಗಿರುವ ಸೂಕ್ಷ್ಮ ಶಿಲಾಯುಗದ ನೆಲೆಗಳು	ಎರಡನೆಯ ಹಂತ ಕೇವಲ ಸೂಕ್ಷ್ಮ ಶಿಲಾಯುಗದ ನೆಲೆಗಳು	ಮೂರನೆಯ ಹಂತ ನೂತನ, ಬೃಹತ್ ಶಿಲಾನೆಲೆ-ಗಳೊಂದಿಗಿರುವ ಸೂಕ್ಷ್ಮ ಶಿಲಾ-ಯುಗದ ನೆಲೆಗಳು
೧	ಆದ್ಲಗೆರೆ	✓		
೨	ಅಪ್ಪಾನಹಳ್ಳಿ	✓		
೩	ಅವರಗಿಲ್ಲು			✓
೪	ಅಳಿಲ್ಲುಘಟ್ಟ	✓		
೫	ಅಂಕನಬಾವಿ			✓
೬	ಇರಕಸಂದ್ರ ಕಾಲೋನಿ	✓		
೭	ಉನಗನಾಲ	✓		
೮	ಒಬಳಾಪುರ	✓		
೯	ಕತ್ತಿರಾಜನಹಳ್ಳಿ			✓
೧೦	ಕರಡಿ	✓		
೧೧	ಕಾರೇಕುರ್ಚಿ	✓		
೧೨	ಕಾವಲಹಟ್ಟಿ	✓		
೧೩	ಕೈಮರ			✓
೧೪	ಗಳಿಗೆಕೆರೆ	✓		
೧೫	ಗುಟ್ಟೆ	✓		
೧೬	ಗುರಮ್ಮನಕಟ್ಟೆ			✓
೧೭	ಗೊಲ್ಲರಹಟ್ಟಿ			✓
೧೮	ಚಿಕ್ಕೇಗೌಡನರೊಪ್ಪ	✓		
೧೯	ಚಿನಗೆ			✓
೨೦	ಚಿನವಾರ			✓
೨೧	ಜೋಗಿಹಳ್ಳಿ	✓		
೨೨	ಧಣಾಪುರ	✓		
೨೩	ತ್ಯಾಗಟೂರು	✓		
೨೪	ಥರಟೆ			✓
೨೫	ದಬ್ಬೆಗಟ್ಟ		✓	
೨೬	ದೊಡ್ಡಗುಣಿ	✓		
೨೭	ನಾಗಲಾಪುರ			✓
೨೮	ನಿಡುಗಲ್ಲು			✓
೨೯	ಬಣ್ಣಿಗಾನಹಳ್ಳಿ	✓		
೩೦	ಬಿಜ್ಜಾವರ		✓	
೩೧	ಬೆಟ್ಟದಹಳ್ಳಿ			✓
೩೨	ಬೆಳ್ಳಿಬಿಟ್ಟಲಹಳ್ಳಿ			✓
೩೩	ಬೊಮ್ಮೇನಹಳ್ಳಿ	✓		
೩೪	ಬೋಗಸಂದ್ರ	✓		
೩೫	ಬಂಡನಹಳ್ಳಿ	✓		
೩೬	ಮಧುಗಿರಿ			✓
೩೭	ಮಾರನಾಯಕನಪಾಳ್ಯ			✓
೩೮	ಮಿಡಿಗೇತಿ			✓
೩೯	ಮುದಿಪುರ	✓		
೪೦	ಮೂಗನಾಯಕನಕೋಟೆ	✓		
೪೧	ಮಂಚಕಲ್‌ಕುಪ್ಪೆ	✓		
೪೨	ಮಂಚಲ್ದೊರೆ	✓		
೪೩	ಯಕ್ಕಲಕಟ್ಟೆ	✓		
೪೪	ಯಲ್ಲಾಪುರ	✓		
೪೫	ರಜತಾದ್ರಿಪುರ	✓		
೪೬	ವೀರಾಪುರ	✓		
೪೭	ಶಿವಪುರ	✓		
೪೮	ಶೆಟ್ಟಹಳ್ಳಿ	✓		
೪೯	ಸಾಕಸಂದ್ರ	✓		
೫೦	ಸಾಲುಕಟ್ಟೆ	✓		
೫೧	ಸಿದ್ದರಬೇಟ್ಟ			✓
೫೨	ಸಿದ್ಧಗಂಗಾಬೇಟ್ಟ			✓
೫೩	ಸಿದ್ಧಾಪುರ			✓
೫೪	ಸಿದ್ದೇಹಳ್ಳಿ	✓		
೫೫	ಸೀಗೆಪಾಳ್ಯ			✓
೫೬	ಸೌರನಕೋಟೆ	✓		
೫೭	ಸಂಪಿಗೆ			✓
೫೮	ಹರೇನಹಳ್ಳಿ	✓		
೫೯	ಹಿಮಗಿರಿ	✓		
೬೦	ಹಿರೇಗುಂಡುಗಲ್ಲು			✓
೬೧	ಹಿರೇಹಳ್ಳಿ	✓		
೬೨	ಹುಲಿಯಾರದುರ್ಗ		✓	
೬೩	ಹೂವಿನಕಟ್ಟೆ			
೬೪	ಹೋನ್ನೇಮಾರನಹಳ್ಳಿ	✓		
೬೫	ಹೊಸಕೆರೆ	✓		
೬೬	ಹೊಸಹಳ್ಳಿ			✓


ಕಾರಣವೆಂದರೆ ಈ ಹಂತದ ಒಟ್ಟು ಕಾಲಮಾನದಲ್ಲಿ ಹಂತಹಂತವಾಗಿ ಮಾರ್ಪಾಟಾಗುತ್ತಾ ಬಂದಿರಬಹುದೆಂದು ತಿಳಿಯಬಹುದಾಗಿದೆ. ಆದ್ದರಿಂದ ಈ ಪ್ರದೇಶದಲ್ಲಿ ದೊರೆತ ಒಟ್ಟು ನೆಲೆಗಳನ್ನು ಮೂರು ಕಾಲಮಾನಕ್ಕೆ ಸೇರಿರಬಹುದೆಂದು ತಿಳಿಯಬೇಕಾಗುತ್ತದೆ. ಈ ಮೂರೂ ಹಂತದ ನೆಲೆಗಳಲ್ಲಿಯೂ ಉಪಕರಣದ ವೈವಿಧ್ಯತೆ ಹಾಗೂ ಪ್ರಮಾಣದಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಒಟ್ಟು ನೆಲೆಗಳಲ್ಲಿ ೩೮ ನೆಲೆಗಳು ಮೊದಲನೆಯ ಹಂತಕ್ಕೂ, ೩ ನೆಲೆಗಳು ಎರಡನೆಯ ಹಂತಕ್ಕೂ ಹಾಗೂ ೨೫ ನೆಲೆಗಳು ಮೂರನೆಯ ಹಂತಕ್ಕೂ ಸೇರಿದವುಗಳಾಗಿವೆ.

ದೊರೆತ ಒಟ್ಟು ನೆಲೆಗಳು ಹಾಗೂ ಅವುಗಳು ಸೇರುವ ವಿವಿಧ ಹಂತದ ವಿವರಣೆಯನ್ನು ಹಿಂದಿನ ಪುಟದಲ್ಲಿರುವಂತೆ ಪಟ್ಟೀಕರಿಸಬಹುದಾಗಿದೆ.

ದಾಗಿದ್ದರೂ ಅದನ್ನೇ ಉಪಯೋಗಿಸಿ ತನಗೆ ಬೇಕಿದ್ದ ವೈವಿಧ್ಯಮಯ ಶಿಲಾ ಉಪಕರಣಗಳನ್ನು ರೂಪಿಸುವಲ್ಲಿ ತನ್ನ ಕಾರ್ಯ ಚತುರತೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದು. ಅದೇ ರೀತಿ ಅಪರೂಪವಾಗಿ ಅತಿ ಕಡಿಮೆ ಪ್ರಮಾಣದಲ್ಲಿ ದೊರೆತ ಫೆಲ್ಸಪಾರ್ ಶಿಲೆಯನ್ನೂ ಬಳಸಲಾಗಿದೆ. ಒಂದು ಮುಖ್ಯ ಸಂಗತಿ ಎಂದರೆ ಈ ಪ್ರದೇಶಕ್ಕೆ ಬೇರಾವುದೇ ಪ್ರದೇಶದಿಂದ ಉತ್ತಮ ಜಾತಿಯ ಶಿಲಾ ಮಾದರಿಯನ್ನು ಆಮದು ಮಾಡಿಕೊಂಡ ಯಾವುದೊಂದು ಉದಾಹರಣೆಯೂ ದೊರಕುವುದಿಲ್ಲ. ಸ್ಥಳೀಯವಾಗಿಯೇ ದೊರಕುವ ಶಿಲಾಮಾದರಿಯನ್ನೇ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ತನ್ನೆಲ್ಲಾ ಅಗತ್ಯತೆಗಳನ್ನು ಸ್ಥಳೀಯವಾಗಿಯೇ ದೊರಕುವ ಕಚ್ಚಾವಸ್ತುಗಳನ್ನು ಬಳಸಿಕೊಂಡು ತನ್ನ ಬೇಡಿಕೆಯನ್ನು ಪೂರೈಸಿಕೊಂಡಿರುವುದು ತಿಳಿದುಬರುತ್ತದೆ.



ಸೂಕ್ಷ್ಮಶಿಲಾಯುಗದ ನೀಳ ಚಕ್ಕೆಯಂತಹ ಚಿಕ್ಕೆ, ಒಬ್ಬದಿ, ಇಬ್ಬದಿ ಮತ್ತು ಕರುನೀಳ ಚಕ್ಕೆ ಉಪಕರಣಗಳು



ಸೂಕ್ಷ್ಮಶಿಲಾಯುಗದ ಬಾಣದ ಮೊನೆ ಕೊರೆಗ, ಕೊರೆಯುಳಿ, ಅರ್ಧಚಂದ್ರಾಕೃತಿ, ದಬ್ಬಳ ಮತ್ತು ಮೂಲಗಟ್ಟಿ ಉಪಕರಣಗಳು

ಶಿಲಾಮಾದರಿ

ಈ ಸಾಂಸ್ಕೃತಿಕ ಹಂತಕ್ಕೆ ಸೇರುವ ಒಟ್ಟು ಶಿಲೋಪಕರಣಗಳನ್ನು ಶಿಲಾ ಮಾದರಿಗಳನ್ವಯದಂತೆ ಕ್ವಾರ್ಟ್ಜ್ (ಒಟ್ಟು ಉಪಕರಣ ೧೪೨೯ ಶೇ. ೭೬.೭೦), ಅದಿರುಯುಕ್ತ ಕ್ವಾರ್ಟ್ಜ್ (೧೭೦ ಶೇ. ೯.೧೨) ಜಾಸ್ಪರ್ (೧೦೬ ಶೇ. ೮.೩೭), ಅದಿರುಯುಕ್ತ ಜಾಸ್ಪರ್ (೧೫೬ ಶೇ. ೫.೬೯) ಮತ್ತು ಫೆಲ್ಸಪಾರ್ (೨ ಶೇ. ೦.೧೧) ಗೆ ಸೇರಿದವುಗಳಾಗಿವೆ. ಕ್ವಾರ್ಟ್ಜ್‌ಶಿಲೆಯನ್ನು ಹೆಚ್ಚಾಗಿ ಬಳಸಲಾಗಿದ್ದು, ಸ್ಥಳೀಯವಾಗಿ ದೊರಕುವ ಶಿಲೆಯನ್ನೇ ಉಪಯೋಗಿಸಲಾಗಿದೆ. ಈ ಕ್ವಾರ್ಟ್ಜ್‌ಶಿಲೆಯು ಕೀಳು ದರ್ಜೆಯ

ಉಪಕರಣ ವೈವಿಧ್ಯ

ಒಟ್ಟು ನೆಲೆಗಳಲ್ಲಿ ದೊರೆತಿರುವ ಉಪಕರಣಗಳನ್ನು ವಿವಿಧ ವೈವಿಧ್ಯ ಮಾದರಿಗಳಾಗಿ ವರ್ಗೀಕರಿಸಬಹುದು. ಮೂಲ ಶಿಲಾಗಟ್ಟಿಯೂ ಒಳಗೊಂಡಂತೆ ಒಟ್ಟು ಒಂಬತ್ತು ವೈವಿಧ್ಯಮಯ ಉಪಕರಣ ಮಾದರಿಯಲ್ಲಿವೆ. ಮೊದಲ ಮತ್ತು ಮೂರನೆಯ ಹಂತಗಳಲ್ಲಿ ಈ ಎಲ್ಲಾ ಮಾದರಿಗಳೂ ಕಂಡುಬಂದಿವೆ. ಆದರೆ ಎರಡನೆಯ ಹಂತದಲ್ಲಿ ಕೇವಲ ಆರು ಮಾದರಿಗಳು ಕಂಡುಬಂದಿವೆ. ದೊರೆತ ಒಟ್ಟು ಉಪಕರಣಗಳನ್ನು ವಿವಿಧ ಹಂತ ಹಾಗೂ ವಿವಿಧ ಮಾದರಿಗಳನ್ವಯದಂತೆ ಈ ಕೆಳಕಂಡಂತೆ ವಿಭಾಗಿಸಬಹುದಾಗಿದೆ.

ಸೂಕ್ಷ್ಮಶಿಲಾಯುಗದ ಉಪಕರಣ ವೈವಿಧ್ಯ

ಕ್ರಮ ಸಂಖ್ಯೆ	ಉಪಕರಣ ಮಾದರಿ	ಮೊದಲ ಹಂತ		ಎರಡನೆ ಹಂತ		ಮೂರನೆ ಹಂತ	
		ಒಟ್ಟು ಉಪಕರಣ	ಶೇ.	ಒಟ್ಟು ಉಪಕರಣ	ಶೇ.	ಒಟ್ಟು ಉಪಕರಣ	ಶೇ.
೧.	ನೀಳಚಕ್ಕೆ ಮಾದರಿ	೫೭೪	೪೨.೯೩	೫	೨೭.೭೭	೨೨೭	೪೪.೬೮
೨.	ಹೆರೆಚಕ್ಕೆ ಮಾದರಿ	೩೩೬	೨೫.೧೩	೪	೨೨.೨೨	೧೨೬	೨೪.೮೦
೩.	ಮೊನೆ ಮಾದರಿ	೨೧೦	೧೫.೭೦	೪	೨೨.೨೨	೭೬	೧೪.೯೬
೪.	ಬಾಣದ ಮೊನೆ	೬೭	೫.೦೧	೧	೫.೫೫	೧೯	೩.೭೪
೫.	ಕೊರೆಗ	೩೫	೨.೬೧	-	-	೧೫	೨.೯೫
೬.	ಕೊರೆಯುಳಿ	೧೩	೦.೯೭	-	-	೧೧	೨.೧೬
೭.	ಅರ್ಧ ಚಂದ್ರಾಕೃತಿ	೫೦	೩.೭೩	-	-	೧೧	೨.೧೬
೮.	ದಬ್ಬಳ	೧೬	೧.೧೯	೧	೫.೫೫	೧೬	೩.೧೪
೯.	ಮೂಲ ಶಿಲಾಗಟ್ಟಿ	೩೬	೨.೬೯	೬	೧೬.೬೬	೭	೧.೩೭
	ಒಟ್ಟು	೧೩೩೭		೨೧		೫೦೮	

ಮೊದಲ ಮೂರು ಮಾದರಿಗಳಾದ ನೀಳಚಕ್ಕೆ, ಹೆರೆಚಕ್ಕೆ ಮತ್ತು ಮೊನೆ ಮಾದರಿಗಳಲ್ಲಿ ಮತ್ತೆ ಉಪಗುಂಪುಗಳಿರುವುದನ್ನು ಕಂಡುಕೊಳ್ಳಲಾಗಿದೆ. ನೀಳಚಕ್ಕೆ ಮಾದರಿಯಲ್ಲಿ ಏಳು, ಹೆರೆಚಕ್ಕೆ ಮಾದರಿಯಲ್ಲಿ ಆರು ಹಾಗೂ ಮೊನೆ ಮಾದರಿಯಲ್ಲಿ ಐದು ಉಪಗುಂಪುಗಳಿರುವುದು ತಿಳಿದುಬಂದಿದೆ. ಅವುಗಳೆಂದರೆ

ನೀಳಚಕ್ಕೆ ಮಾದರಿ ಉಪಕರಣ	ಮೊದಲ ಹಂತ ಒಟ್ಟು ಉಪಕರಣ	ಎರಡನೆ ಹಂತ ಒಟ್ಟು ಉಪಕರಣ	ಮೂರನೆ ಹಂತ ಒಟ್ಟು ಉಪಕರಣ	ಒಟ್ಟು	ಶೇ.
೧. ನೀಳಚಕ್ಕೆಯಂತಹ ಚಕ್ಕೆ	೧೦೬	-	೪೫	೧೫೧	೧೮.೭೩
೨. ಒಬ್ಬದಿ ನೀಳಚಕ್ಕೆ	೧೦೯	-	೫೯	೧೬೮	೨೦.೮೪
೩. ಇಬ್ಬದಿ ನೀಳಚಕ್ಕೆ	೧೫೭	೬	೫೯	೨೨೨	೨೭.೧೭
೪. ದ್ವಿತೀಯ ಶ್ರೇಣಿ ಮರುಚಕ್ಕೆ ಎಬ್ಬಿಸಿರುವ ಚಕ್ಕೆ	೨೬	-	೫	೩೧	೩.೮೪
೫. ಕಿರು ನೀಳಚಕ್ಕೆ	೧೫೯	೧	೫೨	೨೧೨	೨೬.೩೦
೬. ಕೈಚಾಕು ನೀಳಚಕ್ಕೆ	೧೧	-	೨	೧೩	೧.೬೧
೭. ಗರಗಸದಂತಹ ನೀಳಚಕ್ಕೆ	೬	೧	೫	೧೨	೧.೪೮
	೫೭೪	೮	೨೨೭	೮೦೯	

ಹೆರೆಚಕ್ಕೆ ಮಾದರಿ	ಮೊದಲ ಹಂತ ದೊರೆತ ಉಪಕರಣ	ಎರಡನೆ ಹಂತ ದೊರೆತ ಉಪಕರಣ	ಮೂರನೆ ಹಂತ ದೊರೆತ ಉಪಕರಣ	ಒಟ್ಟು ಉಪಕರಣ	ಶೇ.
೧. ಒಬ್ಬದಿ ಹೆರೆಚಕ್ಕೆ	೫೯	-	೩೩	೯೨	೧೪.೭೪
೨. ಇಬ್ಬದಿ ಹೆರೆಚಕ್ಕೆ	೭೦	೨	೩೪	೧೦೬	೨೨.೭೪
೩. ತುದಿ ಹೆರೆಚಕ್ಕೆ	೧೦೧	೧	೩೩	೧೩೫	೨೮.೯೬
೪. ದುಂಡು ಹೆರೆಚಕ್ಕೆ	೨೮	-	೭	೩೫	೭.೫೧
೫. ಒಳಬಾಗಿದಂಚಿನ ಹೆರೆಚಕ್ಕೆ	೩೪	-	೯	೪೩	೯.೨೨
೬. ಮೂಲಗಟ್ಟಿ ಹೆರೆಚಕ್ಕೆ	೪೪	೧	೧೦	೫೫	೧೧.೮೦
	೩೩೬	೪	೧೨೬	೪೬೬	

ಮೊನೆ ಮಾದರಿ ಉಪಕರಣ	ಮೊದಲ ಹಂತ ದೊರೆತ ಉಪಕರಣ	ಎರಡನೇ ಹಂತ ದೊರೆತ ಉಪಕರಣ	ಮೂರನೇ ಹಂತ ದೊರೆತ ಉಪಕರಣ	ಒಟ್ಟು	ಶೇ.
೧. ಸಾಮಾನ್ಯ ಮೊನೆ	೯೫	೬	೩೪	೧೩೨	
೨. ತ್ರಿಭುಜಾಕಾರದ ಮೊನೆ	೩೧	-	೨೪	೫೫	
೩. ಕೊಕ್ಕು ಮೊನೆ	೬೨	-	೪	೬೬	
೪. ಅರ್ಧ ಚಂದ್ರಾಕೃತಿ ಮೊನೆ	೬೯	೧	೧೪	೨೪	
೫. ಗೂಟವಿರುವ ಮೊನೆ	೧೩	-	-	೧೩	
	೨೭೦	೭	೭೬	೨೯೦	

ದೊರೆತ ವೈವಿಧ್ಯ ಉಪಕರಣಗಳ ವೈಜ್ಞಾನಿಕ ಅಧ್ಯಯನ, ಉಪಕರಣ ರೂಪಣಾ ವಿಧಾನ. ಅವುಗಳನ್ನು ಬಳಸಲು ಕೈಗೊಂಡ ಕಾರ್ಯತತ್ಪರತೆ ಹಾಗೂ ದೊರೆತ ಅಂಕಿ ಅಂಶಗಳಿಂದ ತಿಳಿದುಬರುವ ಮುಖ್ಯ ವಿಷಯವೆಂದರೆ ತನ್ನ ಜೀವನ ವಿಧಾನದಲ್ಲಾದ ಮಾರ್ಪಾಟಿಗೆ ಪೂರಕವಾಗುವಂತಹ ವಿವಿಧ ಮಾದರಿಯ ಉಪಕರಣಗಳನ್ನು ರೂಪಿಸಿಕೊಂಡು ತನ್ನ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಪ್ರಯತ್ನ ನಡೆಸಲಾಗಿದೆ. ಅದೇ ರೀತಿ ನಿಧಾನವಾಗಿ ಬೆಳವಣಿಗೆ ಹೊಂದುತ್ತಿದ್ದ ಮುಂದಿನ ಹಂತಕ್ಕೆ ಮಾರ್ಪಾಟುಗಳನ್ನು ಮಾಡುತ್ತಾ ಬಂದಿರುವ ಅಂಶವನ್ನೂ ಗಮನಿಸಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ಸೂಕ್ಷ್ಮತೆಯ ಕೆಲಸಗಳಿಗೆ ಬೇಕಾಗುವಂತಹ ಉಪಕರಣಗಳಾದ ಕೊರೆಗ (ಒಟ್ಟು ಉಪಕರಣ ೩೫), ಕೊರೆಯುಳಿ (೧೩) ಮತ್ತು ದಬ್ಬಳ (೧೬) ಗಳನ್ನು ರೂಪಿಸಿ ಬಳಸಿರುವುದು ಗಮನಾರ್ಹ ಅಂಶವಾಗಿದೆ. ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಮಾನವನ ಅಲೆಮಾರಿ ಹಂತದಿಂದ ಒಂದು ಕಡೆ ನೆಲೆಯಾಗಿ ನಿಲ್ಲಲು ಮಾರ್ಪಾಟು ಮಾಡಿಕೊಂಡಿರುವುದನ್ನು ಈ ಹಂತದಲ್ಲಿ ಸೂಕ್ಷ್ಮವಾಗಿ ಕಂಡುಕೊಳ್ಳಬಹುದಾಗಿದೆ.

ತಾಂತ್ರಿಕತೆಯಲ್ಲಿಯೂ ಸಾಕಷ್ಟು ಮಾರ್ಪಾಡುಗಳನ್ನು ಕಂಡುಕೊಂಡಿರುವುದನ್ನು ಕಾಣಬಹುದು. ವಿಶೇಷ ರೀತಿಯ ಜ್ಯಾಮಿತೀಯ ಆಕೃತಿಗಳನ್ನು ರೂಪಿಸಲು ಮತ್ತು ಕಚ್ಚುಗಳನ್ನುಂಟು ಮಾಡಿ ಉಪಕರಣಗಳನ್ನು ಬಳಸಿರುವುದು ಕಂಡುಬರುತ್ತದೆ. ಸಂಯುಕ್ತ ಉಪಕರಣಗಳ ಬಳಕೆಯೂ ಹೆಚ್ಚಾಗಿದ್ದುದು ತಿಳಿದುಬರುತ್ತದೆ. ಒಟ್ಟಿನಲ್ಲಿ ಪರಿಷ್ಕೃತ ತಾಂತ್ರಿಕತೆಯ ಕೌಶಲ್ಯತೆಯನ್ನು ಪ್ರದರ್ಶಿಸಲಾಗಿದೆ.

ಅಧ್ಯಯನ ಪ್ರದೇಶದಲ್ಲಿ ಈ ಸಂಸ್ಕೃತಿಗೆ ಸೇರಿದ ಅತಿ ಹೆಚ್ಚು ನೆಲೆಗಳು ಶೋಧವಾಗಿದ್ದು ಜಿಲ್ಲೆಯಾದ್ಯಂತ ಇವು ದೊರಕಿದ್ದು ಅತಿ ಮುಖ್ಯವಾಗಿ ದಕ್ಷಿಣದ ಭಾಗದಲ್ಲಿ ಹೆಚ್ಚು ನೆಲೆಗಳಿದ್ದು, ಪಶ್ಚಿಮದಿಂದ ಪೂರ್ವ ಭಾಗಕ್ಕೆ ವಿಸ್ತರಿಸಿರುವುದನ್ನು ಕಾಣಬಹುದು. ಈ ಪ್ರದೇಶದಲ್ಲಿ ಗ್ರಾನೈಟ್‌ಶಿಲೆಯ ಗುಡ್ಡಗಳಿದ್ದು ಇಲ್ಲಿ ಕ್ವಾರ್ಟ್ಸ್‌ಶಿಲೆಯ ಪ್ರಮಾಣವೂ ಹೆಚ್ಚಾಗಿರುವುದು ಕಂಡುಬರುತ್ತದೆ. ಗುಡ್ಡಗಾಡು ಪ್ರದೇಶವಾದ್ದರಿಂದ ಕಾಡುಪ್ರಾಣಿಗಳ ಪ್ರಮಾಣವೂ ಹೆಚ್ಚಿದ್ದು ಅವುಗಳನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಈ ಸಂಸ್ಕೃತಿಯ ಜನಸಾಂದ್ರತೆ ಪೂರ್ವಭಾಗಕ್ಕೆ ವಿಸ್ತಾರವಾಗಿರುವುದು ಪ್ರಮುಖ ಸಂಗತಿಯಾಗಿದೆ.

ಒಟ್ಟಿನಲ್ಲಿ ಮುಂದಿನ ಹಂತದಲ್ಲಿ ನೆಲೆಯಾಗಿ ನಿಂತು ಕೃಷಿ ಹಾಗೂ ಪಶುಪಾಲನೆ ಹಂತಕ್ಕೆ ಪೀಠಿಕೆ ಎನ್ನುವ ಹಾಗೆ ಜೀವನ ಕ್ರಮವನ್ನು ರೂಪಿಸಿಕೊಂಡಿರುವುದು ಕಂಡುಬರುತ್ತದೆ

ಹೆಚ್. ತಿಪ್ಪೇಸ್ವಾಮಿ*

ನುಂಕೆಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ

ಭೂವೈಜ್ಞಾನಿಕ ಕಾಲಮಾನಾನುಸಾರವಾಗಿ ಶಿಲಾಯುಗವು ಬಹಳ ಹಿಂದಿನ ಚಾತುರ್ಥಿಕ (ಕ್ವಾರ್ಟರ್ನರಿ ಏಜ್) ಭೂ-ಯುಗಕ್ಕೆ ಸೇರಿದೆ. ಭೂ-ಇತಿಹಾಸವು ಒಟ್ಟು ನಾಲ್ಕು ಸಾವಿರದ ಐದುನೂರು ಮಿಲಿಯದಿಂದ ಐದುಸಾವಿರದ ಮಿಲಿಯನ್ ವರ್ಷಗಳಷ್ಟು ಹಳೆಯದು. ಚಾತುರ್ಥಿಕ ಭೂಯುಗವು ಭೂ-ವಿಕಾಸ ಇತಿಹಾಸದ ಕೊನೆಯ ಭಾಗವಾಗಿದೆ.

ಮೊದಲಿನ ಎಲ್ಲ ಭೂ ಕಾಲಗಳಿಗಿಂತಲೂ ಚಾತುರ್ಥಿಕ ಕಾಲವು ವೈಶಿಷ್ಟ್ಯ ಪೂರ್ಣ ಹಾಗೂ ವಿಸ್ಮಯಕರ. ಇದೇ ಕಾಲದಲ್ಲಿ ಮಾನವನು ಗೊರಿಲ್ಲಾ - ಚಿಂಪಾಂಜಿ ತರಹದ ತನ್ನ ಪೂರ್ವಜ ರಿಂದ ವಿಕಾಸ ಹೊಂದುತ್ತಾ ತನ್ನ ಇಂದಿನ ದೈಹಿಕ ಸ್ವರೂಪವನ್ನು ತಳೆದನು. ಈಚೆಗೆ ಆಫ್ರಿಕೆಯಲ್ಲಿ ನಡೆದ ಪ್ರಾಚೀನ ಮಾನವ ಶಾಸ್ತ್ರೀಯ *(Palaeo Anthropological)* ಸಂಶೋಧನೆಗಳ ಪ್ರಕಾರ ಮಾನವನ ಪ್ರಾಚೀನತೆಯು ಇಂದಿಗೆ ೩.೫ ಮಿಲಿಯದಿಂದ ೪ ಮಿಲಿಯ ವರ್ಷಗಳಷ್ಟು ಪೂರ್ವಕ್ಕೆ ಹೋಗುತ್ತದೆ.(೧)

ಕೇವಲ ಬೇಟೆಯಿಂದಲೇ ಜೀವನ ನಡೆಸುತ್ತಿದ್ದ ಮಾನವರ ಕಾಲವನ್ನು ಪ್ರಾಗಿತಿಹಾಸ ಕಾಲವೆಂದು ಹೇಳಬಹುದು. ಈ ಕಾಲವನ್ನು ಶಿಲಾಯುಗ ಮತ್ತು ಲೋಹಯುಗವೆಂದು ಎರಡು ಭಾಗವಾಗಿ ವಿಂಗಡಿಸಿದೆ. ಪ್ರಾಗಿತಿಹಾಸ ಕಾಲದ ಆರಂಭದಲ್ಲಿ ಶಿಲೆಯನ್ನು ಮಾನವ ತನ್ನ ವಿವಿಧ ಕೆಲಸಗಳಿಗೆ ಬಳಕೆ ಮಾಡುತ್ತಿದ್ದುದನ್ನು ಆಧಾರವಾಗಿಟ್ಟುಕೊಂಡು, ಈ ಕೆಳಗಿನಂತೆ ವಿಭಾಗಿಸಲಾಗಿದೆ.

೧. **ಹಳೆಯ ಶಿಲಾಯುಗ** (Palaeolithic) ಕ್ರಿ. ಪೂ. ಸು. ೩೫೦೦೦ ದಿಂದ ೨೦,೦೦೦
೨. **ಸೂಕ್ಷ್ಮ ಶಿಲಾಯುಗ** (Megalithic) ಕ್ರಿ. ಪೂ. ಸು. ೨೦,೦೦೦ ದಿಂದ ೧೦,೦೦೦
೩. **ನವಶಿಲಾಯುಗ** (Neolithic) ಕ್ರಿ. ಪೂ. ಸು. ೧೦,೦೦೦ ದಿಂದ ೩,೦೦೦

ತದನಂತರ ಮಾನವನು ಶಿಲೆಯ ಜೊತೆ ಜೊತೆಗೆ ದೀರ್ಘಕಾಲ ಬಾಳಿಕೆ ಬರುವ ಮತ್ತು ಉಳಿಯುವ ಲೋಹವನ್ನು ಶಿಲಾಯುಗದ ಅಂತಿಮ ಹಂತದಲ್ಲಿ ಕಂಡುಕೊಂಡಿದ್ದು ಗಮನಾರ್ಹ. ಇದರಲ್ಲಿ ತಾಮ್ರ *ಶಿಲಾಯುಗ* ಸು. ಕ್ರಿ. ಪೂ. ೮,೦೦೦ ದಿಂದ ೨,೨೦೦ ಮತ್ತು *ಕಬ್ಬಿಣಯುಗ* (ಬೃಹತ್ ಶಿಲಾಯುಗ ಕ್ರಿ. ಪೂ. ೨೨೦೦-೮೦೦) ರವರೆಗೆ ಎಂದು ವಿಂಗಡಿಸಿದೆ.

ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಪ್ರಾಗೈತಿಹಾಸಿಕ ಅವಶೇಷಗಳ ತಾಣವೆಂದರೂ ತಪ್ಪಲ್ಲ. ಭಾರತದ ಇತರೆ ಪ್ರಾಂತ್ಯಗಳಂತೆ ಪ್ರಾಗಿತಿಹಾಸಕಾಲದ ವಿಭಿನ್ನ ಕಾಲಘಟ್ಟಗಳ ಮಾನವ ಬಾಳಿ ಬದುಕಿ ಬಿಟ್ಟುಹೋದ ಅವಶೇಷಗಳು ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ, ನುಂಕೆಮಲೆ, ಹಳೇಕೆರೆ, ಪೌಜಾರಹಟ್ಟಿ, ಮೊದಲಾದೆಡೆ ನಡೆದ ಅನ್ವೇಷಣೆ ಮತ್ತು ಉತ್ಖನನಗಳಿಂದ ಪತ್ತೆ ಆಗಿವೆ.

ನುಂಕಪ್ಪನಗುಡ್ಡ, ದೇವರಗುಡ್ಡ, ಮೇಲುದುರ್ಗ ಎಂಬ ಹೆಸರುಗಳಿಂದ ಪ್ರಸಿದ್ಧಿಯಾದ ನುಂಕೆಮಲೆ ಇರುವುದು ಇದೇ ತಾಲೂಕಿನಲ್ಲಿ. "ಪರಶಿವನ ಅಪ್ಪಣೆಯನ್ನು ಪಾಲಿಸಲು ಭೂಲೋಕಕ್ಕೆ ಬಂದು ಭಕ್ತರ ಕಷ್ಟ ಕೋಟಲೆಗಳನ್ನೆಲ್ಲಾ ತೀರಿಸಿದ ಶ್ರೀ ಕಾಲಭೈರವೇಶ್ವರ **ನುಂಕಪ್ಪ** ಮತ್ತು **ಮಲಯಪ್ಪ** ಎಂಬ ತನ್ನ ಇಬ್ಬರು ರಾಕ್ಷಸ ಭಕ್ತರ ಮನೋ ಅಭಿಲಾಷೆಯಂತೆ ನುಂಕೆಮಲೆ ಸಿದ್ಧೇಶ್ವರ ಎಂಬ ಹೆಸರಿಟ್ಟುಕೊಂಡು ನೆಲಸಿದ ಕ್ಷೇತ್ರವೇ ***ನುಂಕಪ್ಪನ ಬೆಟ್ಟ***"ವೆಂಬುದು ಸ್ಥಳೀಯರ ಐತಿಹ್ಯ.


ತಾಲೂಕು ಕೇಂದ್ರವಾದ ಮೊಳಕಾಲ್ಮೂರುವಿನಿಂದ ಪಶ್ಚಿಮಕ್ಕೆ ಮೂರು-ನಾಲ್ಕು ಕಿಲೋಮೀಟರ್ ದೂರ ಸಾಗಿದರೆ

* ಸಂಶೋಧನ ವಿದ್ಯಾರ್ಥಿ, ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ಸಮುದ್ರ ಮಟ್ಟದಿಂದ ಸುಮಾರು ೯೨೧ ಅಡಿ ಎತ್ತರವಿರುವ ನುಂಕಪ್ಪನಬೆಟ್ಟ ಸಿಗುತ್ತದೆ. ಇದು ಬೃಹದಾಕಾರದ ಗ್ರಾನೈಟ್ ಬಂಡೆಗಳಿಂದ ಆವೃತವಾಗಿದೆ. ಕಡಿದಾದ ಪ್ರಪಾತಗಳು, ಪ್ರಕೃತಿ ನಿರ್ಮಿತ ಗುಹೆಗಳು ಇಲ್ಲಿವೆ. ಸದಾ ನೀರಿರುವ ಬಾವಿ, ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳಗಳು ಮತ್ತು ಕೆರೆಗಳು ಇಲ್ಲಿವೆ. ಈ ಬೆಟ್ಟದಿಂದ ಸುಮಾರು ಹನ್ನೆರಡು ಕಿ.ಮೀ. ದೂರದಲ್ಲಿ ಬ್ರಹ್ಮಗಿರಿಬೆಟ್ಟ ಮತ್ತು ಎಂಟು ಕಿ.ಮೀ. ದೂರದಲ್ಲಿ ಜಟ್ಟಿಂಗ ರಾಮೇಶ್ವರಬೆಟ್ಟಗಳಿವೆ. ಚಿಕ್ಕಹಗರಿ ನದಿಯ ದಂಡೆ (River bed)ಯ ಸಮೀಪವೆಂದು ಹೇಳಬಹುದಾದ ನುಂಕೆಮಲೆ ಮತ್ತು ಅದರ ಸಮೀಪದ ಹಳೇಕೆರೆ, ಪೋಜಾರಹಟ್ಟಿ, ನೆಲೆಗಳಲ್ಲಿ ಅನ್ವೇಷಣೆ ಕೈಗೊಂಡು ಸೂಕ್ಷ್ಮ ಶಿಲಾಯುಧಗಳು, ನವ ಶಿಲಾಯುಧಗಳು, ಕಲ್ಲಾಶ್ರಯದಲ್ಲಿ ರೇಖಿಸಿದ ರೇಖಾ ಚಿತ್ರಗಳು ಬೂದು ಮತ್ತು ಕೆಂಪು ಕಪ್ಪು ಬಣ್ಣದ ಮಡಿಕೆ ಚೂರುಗಳು ಹಾಗೆಯೇ ಬೃಹತ್ ಶಿಲಾಯುಗ ಕಾಲದ ವಿಭಿನ್ನ ಶಿಲಾ ಸಮಾಧಿಗಳು ಮತ್ತು ಅಸ್ಥಿ ಅವಶೇಷಗಳನ್ನು ಗುರುತಿಸಿ, ಕೆಲವನ್ನು ಸಂಗ್ರಹಿಸಿ ಕೊಳ್ಳಲಾಗಿದೆ.

ಸೂಕ್ಷ್ಮ ಶಿಲಾಯುಧಗಳು


ಹಳೇಶಿಲಾಯುಗ ಕಾಲದಲ್ಲಿ ಒರಟಾದ ಕಲ್ಲುಗಳನ್ನು ಆಯುಧವನ್ನಾಗಿ ಮಾಡಿಕೊಳ್ಳುತ್ತಿದ್ದ ಮಾನವ ಸೂಕ್ಷ್ಮ ಶಿಲಾಯುಗದಲ್ಲಿ ತನ್ನ ಸೂಕ್ಷ್ಮ ಕೆಲಸಗಳನ್ನು ನಿಭಾಯಿಸಿಕೊಳ್ಳಲು ಚಾರ್ಟ್, ಜಾಸ್ಪರ್, ಬೆಣಚುಕಲ್ಲುಗಳಿಂದ ಆಯುಧಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದ. ಈ ಬೆಟ್ಟದಿಂದ (ನುಂಕೆಮಲೆ) ಪಶ್ಚಿಮಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿನ ಹಳೇಕೆರೆ ಮತ್ತು ಪೋಜಾರಟ್ಟಿಗಳ ಮಧ್ಯ ಹರಿಯುವ ಹಳ್ಳದ ಬದಿಯಲ್ಲಿ ಬ್ಲೇಡ್, ಬರೀನ್, ಕೋರ್‌ಗಳು ದೊರೆತಿವೆ.



ಇವುಗಳಲ್ಲಿ ಕೆಲವು ತುಂಡಾಗಿವೆ. ಇಲ್ಲಿನ ಸೂಕ್ಷ್ಮ ಶಿಲಾಯುಧಗಳನ್ನು 'ಲೆವಾಲ್ವ' ತಂತ್ರದಿಂದ ತಯಾರಿಸಲಾಗಿದೆ.[೨] ಇವುಗಳನ್ನು ಚರ್ಮದಲ್ಲಿ ಅಥವಾ ತೊಗಟೆಯಲ್ಲಿ ರಂಧ್ರಮಾಡಲು ಅಥವಾ ಆಳವಾಗಿ ತಿವಿಯಲು, ಮೊನಚುಗಳಿಂದ ಚುಚ್ಚಲು ಹಾಗೂ ಇವುಗಳ ತೀಕ್ಷ್ಣ ಭಾಗವನ್ನು ಭರ್ಜಿಯಂತೆ ಬಳಸಿಕೊಂಡು ಕಾಡು ಮೃಗಗಳ ಬೇಟೆಯಾಡಲು, ಬಾಗಿದ ಅಲಗುಗಳನ್ನು ಒಂದೆಡೆ ಸೇರಿಸಿ (Composite Tools) ಕುಡುಗೋಲಿನಂತೆ ಸೇರಿಸಿ ಪೈರನ್ನು ಕೊಯ್ಯಲು ಬಳಸಿರುವ ಸಾಧ್ಯತೆ ಇದೆ.

ನವ ಶಿಲಾಯುಧಗಳು ಮತ್ತು ಇತರೆ ಕುರುಹುಗಳು

ನವಶಿಲಾಯುಗ ಕಾಲದ ಮಾನವ ವ್ಯವಸಾಯ ಕಂಡು ಕೊಂಡಿದ್ದು. ಒಂದು ಕಡೆ ವಾಸ್ತವ್ಯ ಮಾಡಿದ್ದು, ಜೊತೆಗೆ ಬೆಂಕಿ ಮತ್ತು ಚಕ್ರದ ಸಹಾಯದಿಂದ ಮಡಿಕೆ ಮಾಡಲು ಆರಂಭಿಸಿದ್ದು ಒಂದು ಕ್ರಾಂತಿಕಾರಕ ಬದಲಾವಣೆ ಎನ್ನಬಹುದು. ಡಾಲೋರೈಟ್ ಡೈಕ್‌ಶಿಲೆಯಿಂದ ಉಜ್ಜಿ ನಯಮಾಡಿದ ಮೇಲ್ಮೈಯುಳ್ಳ ಕೊಡಲಿಗಳು, ಕೈಬಾಚಿಗಳು, ಕಲ್ಲಿನ ಆಯುಧಗಳು, ಉಳಿಗಳು ಮುಂತಾದವುಗಳನ್ನು ಮರದ ಹಿಡಿಕೆಗಳಿಂದ ಗಟ್ಟಿಯಾಗಿ ಜೋಡಿಸಿ ಮಾಡಿದ ಸಂಲಗ್ನ ಉಪಕರಣಗಳು, ಈ ಸಾಂಸ್ಕೃತಿಕ ಕಾಲ ಘಟ್ಟದಲ್ಲಿ ಕಾಣಬರುವ ವಿಶೇಷ ಆಯುಧಗಳಾಗಿವೆ.



ಡಾಲೋರೈಟ್ ಡೈಕ್‌ಶಿಲೆಯಿಂದ ಉಜ್ಜಿ ನಯಗೊಳಿಸಿದ ನಾಲ್ಕು ಕೈಕೊಡಲಿಗಳು ನುಂಕೆಮಲೆಬೆಟ್ಟದಲ್ಲಿ ದೊರೆತಿವೆ. ಇವುಗಳಲ್ಲಿ ಎರಡರ ಬಾಯಿಯ ಭಾಗ ಸ್ವಲ್ಪ ತ್ರುಟಿತವಾಗಿರುವುದನ್ನು ಕಾಣಬಹುದು. ಉಳಿದ ಬಾಯಿಭಾಗ ಹರಿತವಾಗಿದ್ದು, ತುದಿ ಭಾಗವು ಚೂಪಾಗಿರುವುದರಿಂದ ಅದನ್ನು ಆ ಕಾಲದ ಮಾನವ ತನ್ನ ವಿಭಿನ್ನ ಕೆಲಸಗಳಿಗಾಗಿ ಉಪಯೋಗಿಸಿರುವ ಸಾಧ್ಯತೆ ಇದೆ. ಇದೇ ನೆಲೆಯಲ್ಲಿ ಬೂದುಬಣ್ಣದ ಮಡಿಕೆ ಚೂರುಗಳು ದೊರೆತಿದ್ದು ಅವುಗಳಲ್ಲಿ ಗಡಿಗೆಯ ಬಾಯಿ, ವಿಭಿನ್ನ ಬಟ್ಟಲುಗಳ ತ್ರುಟಿತ ಭಾಗಗಳು ದೊರಕಿವೆ.

ಅರಳಯ್ಯ ಗುಡಿಯ ಸಮೀಪದಲ್ಲಿರುವ ಕಲ್ಲಾಶ್ರಯವೊಂದರಲ್ಲಿ ಕೆಮ್ಮಣ್ಣು ಮತ್ತು ಸುಣ್ಣವನ್ನು ಬಳಸಿ ಸಸ್ಯಾದಾಕೃತಿಯ ರೇಖಾಚಿತ್ರಗಳನ್ನು* ಚಿತ್ರಿಸಿರುವುದನ್ನು ನೋಡಬಹುದು.

---

* ಚೌಕ ಪಟ್ಟಿಕೆಗಳಲ್ಲಿ ಬಿಡಿಸಿರುವಂತೆಯೂ ಛಾಯಾಚಿತ್ರದಲ್ಲಿ ಕಾಣಿಸುವುದರಿಂದ ತಾಂತ್ರಿಕ ಪೂಜಾ ಸಂಕೇತಗಳೆಂದೂ ಯೋಚಿಸಬಹುದೇ? - (ಸಂ.)



ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಧಾರ್ಮಿಕ ಫಲವಂತಿಕೆಯ ಸಂಕೇತವಿರಬಹುದೇ? ಎನಿಸುತ್ತದೆ. ಹಾಗೆಯೇ ಇಲ್ಲಿನ ಬೇರೆ ಕಲ್ಲಾಶ್ರಯಗಳಲ್ಲಿ ಕೆಂಪು ಮತ್ತು ಬಿಳಿಬಣ್ಣದಿಂದ ರೇಖಿಸಿದ ಮನುಷ್ಯ ರೂಪಿ ಚಿತ್ರಗಳು ನಶಿಸಿಹೋಗುತ್ತಿರುವುದನ್ನು ಕಾಣಬಹುದು.


ಬೃಹತ್ ಶಿಲಾಸಮಾಧಿಗಳು ಮತ್ತು ಇತರೆ ಅವಶೇಷಗಳು

ಕಬ್ಬಿಣದ ಆವಿಷ್ಕಾರ ಈ ಕಾಲದಲ್ಲಿ ಆಗಿದ್ದರಿಂದ ಈ ಯುಗವನ್ನು ಕಬ್ಬಿಣಯುಗವೆಂದು ಸಹಾ ಕರೆಯುತ್ತಾರೆ. ಶವ ಸಂಸ್ಕಾರಕ್ಕಾಗಿ ಹೆಚ್ಚಾಗಿ ಕಲ್ಲನ್ನೆ ಬಳಸಿ ಸಮಾಧಿಗಳನ್ನು ನಿರ್ಮಿಸಿರುವ ಕಾರಣಕ್ಕಾಗಿ ಬೃಹತ್‌ಶಿಲಾ ಸಮಾಧಿ ಸಂಸ್ಕೃತಿ ಎನ್ನುತ್ತಾರೆ. ಶಿಲಾಸಮಾಧಿಗಳನ್ನು ನಿರ್ಮಿಸಲು ಕಲ್ಲೇ ಪ್ರಧಾನ ವಾಗಿದ್ದರಿಂದ ಈ ಎಲ್ಲಾ ಸೌಕರ್ಯವಿರುವ ಬೆಟ್ಟಗುಡ್ಡಗಳ ಬದಿಯ ಪ್ರದೇಶವನ್ನು ಈ ಯುಗದ ಜನರು ಆರಿಸಿಕೊಂಡಿರು ವುದು ವಿಶೇಷವೆನಿಸಿದೆ.

ಕರ್ನಾಟಕದ ಇತರೆ ನಿವೇಶನಗಳಲ್ಲಿ ಕಾಣಬರುವ ವಿಭಿನ್ನ ಶಿಲಾ ಸಮಾಧಿಗಳಂತೆ ಇಲ್ಲಿಯೂ ಸಹಾ ನೈಸರ್ಗಿಕವಾಗಿ ದೊರೆಯುವ ಕಲ್ಲನ್ನೇ ಬಳಸಿಕೊಂಡು ಸಮಾಧಿಗಳನ್ನು ನಿರ್ಮಿಸಲಾಗಿದೆ. ನುಂಕೆಮಲೆ ಬೆಟ್ಟದ ಪೂರ್ವದಲ್ಲಿನ ನಿವೇಶನದಲ್ಲಿ ವೃತ್ತಾಕಾರದ, ಸ್ವಸ್ತಿಕ್ ಆಕಾರದ, ಆಯತಾಕಾರದ, ಶಿಲಾಸಮಾಧಿಗಳು, ಡಾಲ್ಮನ್‌ಗಳು, ಬಿದ್ದು ಹೋದ ನಿಲಿಸು ಗಲ್ಲುಗಳು, ಶಿಲಾದಿಣ್ಣೆಗಳು ಮೊದಲಾದ ಒಟ್ಟು ೩೬-೪೦ ರಷ್ಟು ವಿವಿಧ ರೀತಿಯ ಶಿಲಾಗೋರಿಗಳನ್ನು ಶಿಲೆಯಿಂದ ನಿರ್ಮಿಸಿದ್ದನ್ನು ನೋಡಬಹುದು. ಇಲ್ಲಿನ ಹಾಸುಬಂಡೆಯ ಕಲ್ಗೋರಿ (ಡಾಲ್ಮನ್) ಯೊಂದನ್ನು ನೈಸರ್ಗಿಕವಾಗಿ ದೊರೆಯುವ ಬಂಡೆಗಳನ್ನು ಉಪಯೋಗಿಸಿ ನಾಲ್ಕು ದಿಕ್ಕಿನಲ್ಲೂ ಬಂಡೆಗಳನ್ನು ನೆಟ್ಟು ಮೇಲ್ಗಡೆಗೆ ಅಗಲವಾದ ಬಂಡೆಯೊಂದನ್ನು ಹಾಕಿ ರೂಪಿಸ ಲಾಗಿದೆ. ಮಕ್ಕಳಿಗಾಗಿಯೇ ಪ್ರತ್ಯೇಕ ಆಯತಾಕಾರದ ಮತ್ತು ಸ್ವಸ್ತಿಕ್ ಆಕಾರದ ಶಿಲಾಗೋರಿಗಳನ್ನು ನಿರ್ಮಿಸಿರುವುದನ್ನು ನೋಡಿದರೆ ಮಕ್ಕಳನ್ನು ಪ್ರತ್ಯೇಕವಾಗಿ ಶವಸಂಸ್ಕಾರ ಮಾಡುತ್ತಿದ್ದರೆನ್ನಬಹುದು.

ಹಳೇಕೆರೆಯಲ್ಲಿ ಮೊದಲಿದ್ದ ಸಮಾಧಿಗಳು ಹಾಳಾಗಿದ್ದು ಅವುಗಳಲ್ಲಿ ಎರಡು ಡಾಲ್ಮನ್‌ಗಳು ಮಾತ್ರ ಉಳಿದಿದ್ದು, ಇವೆರಡಕ್ಕೂ ರಂಧ್ರ (ಕಿಂಡಿ)ವನ್ನು ಕೊರೆದಿರುವುದು ಮತ್ತು ಒಂದನ್ನು ಶಿಲಾ ವೃತ್ತದೊಳಗಡೆ ನಿರ್ಮಿಸಿರುವುದು ಈ ಪ್ರದೇಶದ ವಿಶೇಷವೆನ್ನಬಹುದು. ಈ ರೀತಿಯ ಶಿಲಾ ಸಮಾಧಿ (ಕಲ್ಗೋರಿ) ಗಳನ್ನು ಕಟ್ಟುವ ಮೊದಲೇ ಮೃತ ವ್ಯಕ್ತಿಯ ಶರೀರ ಮತ್ತು ಅವನು ದಿನನಿತ್ಯ ಉಪಯೋಗಿಸುವ ಆಹಾರ ಧಾನ್ಯಗಳನ್ನು ಇಟ್ಟು ಮುಚ್ಚಿ ಅದರ ಮೇಲ್ಗಡೆ ಸ್ಮರಣಾರ್ಥವಾಗಿ ಈ ರೀತಿಯ ಕಲ್ಗೋರಿಗಳನ್ನು ನಿರ್ಮಿಸಿರಬಹುದು.

ಈ ಮೇಲಿನ ನೆಲೆಗಳಲ್ಲಿ ಕೆಂಪು, ಕಪ್ಪು ಬಣ್ಣದ ಮಡಿಕೆಯ ಚೂರುಗಳು ದೊರೆತಿದ್ದು ಅವುಗಳಲ್ಲಿ ಧೂಪದ ಬಟ್ಟಲು, ಗಡಿಗೆಯ ಬಾಯಿಯ ಭಾಗ, ಇತ್ಯಾದಿಗಳ ಚೂರಾದ ಭಾಗಗಳು ದೊರೆತಿವೆ.



ಒಟ್ಟಿನಲ್ಲಿ ನುಂಕೆಮಲೆ ಪರಿಸರದ ಪ್ರಾಗೈತಿಹಾಸಿಕ ನೆಲೆಗಳಲ್ಲಿ ದೊರೆತ ಅವಶೇಷಗಳು ಬ್ರಹ್ಮಗಿರಿಯಲ್ಲಿ ದೊರೆತ ಅವಶೇಷಗಳಿಗೆ ಹೋಲಿಕೆಯಾಗುವುದರ ಜೊತೆಗೆ ಅಷ್ಟೇ ಮಹತ್ವದಾಯಕವೆನಿಸುತ್ತವೆ. ಈ ನೆಲೆಗಳ ಹೆಚ್ಚಿನ ಅಧ್ಯಯನದ ತುರ್ತು ಅವಶ್ಯಕತೆ ಇದೆ

(ವಿಭಾಗದ ಮುಖ್ಯಸ್ಥರು ಮತ್ತು ನನ್ನ ಮಾರ್ಗದರ್ಶಕರೂ ಆದ ಶ್ರೀ ಬಾಲಸುಬ್ರಹ್ಮಣ್ಯಂ, ಪ್ರೊ॥ ಲಕ್ಷ್ಮಣ್ ತೆಲಗಾವಿ, ಮತ್ತು ವಿಭಾಗದ ಉಳಿದ ಗುರುಗಳಿಗೆ ಮತ್ತು ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಮಾವ ಎಂ. ಸಿದ್ದೇಶಿಯವರಿಗೆ ಮತ್ತು 'ಡಿಸ್ಕವರಿ ಟ್ರೂಪ್' ಸದಸ್ಯರಿಗೆ ಕೃತಜ್ಞತೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಚರಿತ್ರೆ ಸಂಪುಟ - ೧**, ಪುಟ - ೯೫.

*೨. ಆಯ್ದ ಚರ್ಟ್ ಅಥವಾ ಜಾಸ್ಪರ್ ಕಲ್ಲಿನ ತುಂಡನ್ನು ಡುಬ್ಬಾದ ಅಂದರೆ ಆಮೆಯಾಕಾರಕ್ಕೆ ತಂದು ಮೇಲ್ಭಾಗವನ್ನು ಸಮತಟ್ಟು ಮಾಡಿ, ಅಂಚಿನಲ್ಲಿ ಒಂದರ ಪಕ್ಕದಲ್ಲೊಂದರಂತೆ ಚಕ್ಕೆಗಳನ್ನು ಎಬ್ಬಿಸುವುದು, ಇದು ಫ್ರಾನ್ಸ್ ದೇಶದ 'ಲೆವಾಲ್ವ್' ಎಂಬಲ್ಲಿ ಮೊದಲು ಕಂಡುಬಂದಿದ್ದರಿಂದಾಗಿ ಆ ಹೆಸರು ಬಂದಿದೆ.

*೩. Nagaraja Rao, M. S. (Ed) : *Progress of Archaeology in Karnataka (1956-1972) - 1978,* Directorate of Archaeology and Museum, Mysore.

*೪. Rao K. P. : *Deccan Megaliths, 1988*, Sundeep Prakashan, Delhi.

*೫. Sundara A. : *Early Megalithic Chamber Tombs of South India - 1975,* Pustaka Prakashana, Delhi.

*೬. ಪ್ರೊ॥ ಷೇಕ್ ಅಲಿ ಬಿ. ಮತ್ತು ಪ್ರೊ॥ ಸುಂದರ. ಅ.: **ಕರ್ನಾಟಕ ಚರಿತ್ರೆ ಸಂಪುಟ - ೧ ೧೯೯೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ.

ಅಶೋಕ ಕೆ. ಕಂದಗಲ್*
ಎಚ್. ಆರ್. ದೇಸಾಯಿ**

ಹೆರಕಲ್ ನೆಲೆಯಲ್ಲಿ ಇತ್ತೀಚಿಗೆ (೧೯೯೯) ದೊರೆತ ಪ್ರಾಗೈತಿಹಾಸಿಕ ಅವಶೇಷಗಳು

ಹೆರಕಲ್ಲ ಘಟಪ್ರಭಾ ನದಿ ದಂಡೆಯ ಮೇಲಿನ ಒಂದು ಸಣ್ಣ ಗ್ರಾಮ. ಜಿಲ್ಲಾಕೇಂದ್ರವಾದ ಬಾಗಲಕೋಟೆಯಿಂದ ೩೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಿಂದ ಒಂದು ಫರ್ಲಾಂಗ್ ದೂರದಲ್ಲಿ ನದಿಯ ದಂಡೆಯ ಮೇಲೆ ಬ್ಯಾಳಿಕಲ್ಲುಗುಡ್ಡ ಎಂಬ ಸಣ್ಣ ಬೆಟ್ಟದ ಸಾಲು ಇದೆ. ಆ ಬೆಟ್ಟದ ಪಾದದಲ್ಲಿ ಗ್ರಾಮವಿದ್ದು, ಆ ಬೆಟ್ಟಗಳು ಕೋಟೆಯ ಗೋಡೆಯಂತೆ ಕಪ್ಪು ಕಲ್ಲುಗಳನ್ನೊಳಗೊಂಡಿದ್ದು, ನಾಲ್ಕು ಕಡೆಗಳಲ್ಲಿ ಕಂಡುಬರುತ್ತವೆ. ಈ ಬೆಟ್ಟಗಳ ಇಳಿಜಾರಿನಲ್ಲಿ ಹಾಳು ಮಣ್ಣು ಇದ್ದು ಅದನ್ನು ಈ ಊರಿನ ಜನರು ಮನೆಗಳನ್ನು ಕಟ್ಟಲು ಮತ್ತು ಗೋಡೆಗಳಿಗೆ ಬಳಿಯಲು ಉಪಯೋಗಿಸುತ್ತಾರೆ. ಇಲ್ಲಿ ಇತಿಹಾಸ ಕಾಲದ ಪ್ರಾಚ್ಯಾವಶೇಷಗಳು ದೊರೆತಿದ್ದು,(೧) ಹಲವಾರು ಸಂಶೋಧಕರು ಇಲ್ಲಿ ಸಂಶೋಧನೆಯನ್ನು ಮಾಡಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಮೊದಲ ನಿರ್ದೇಶಕರಾಗಿದ್ದ ಆರ್. ಎಸ್. ಪಂಚಮುಖಿಯವರು ಇಲ್ಲಿ ಪ್ರಾಚೀನ ಜನವಾಸ್ತವ್ಯದ ನೆಲೆಯನ್ನು ಗುರುತಿಸಿದರು. ಅವರಿಗೆ ಆ ನೆಲೆಯಲ್ಲಿ ದೊರೆತ ಪ್ರಾಚ್ಯಾವಶೇಷಗಳ ಆಧಾರದ ಮೇಲೆ ಅದೊಂದು ಮಹತ್ವದ ಪ್ರಾಚೀನ ನೆಲೆಯೆಂದು ಅಭಿಪ್ರಾಯ ಪಟ್ಟರು. ಎ ಪ್ರಿಲಿಮಿನರಿ ನೋಟ್ ಆನ್ ದಿ ಎಕ್ಸ್‌ಪ್ಲೊರೇಶನ್ ಆಫ್ ಏನಿಸಿಯಂಟ್ ಸೈಟ್ಸ್ ಇನ್ ಬಾಂಬೆ ಕರ್ನಾಟಕ ಎಂಬ ಒಂದು ಪ್ರತ್ಯೇಕ ಟಿಪ್ಪಣಿ ಪ್ರಕಟಿಸಿದರು. ಆನಂತರ ಸಂಕಾಲಿಯಾ ಮತ್ತು ಅವರ ಶಿಷ್ಯರಾದ ಚಾಟೇಕರ ಘಟಪ್ರಭಾ ನದಿ ಪ್ರದೇಶವನ್ನು ಪ್ರಾಗೈತಿಹಾಸದ ಸಂಸ್ಕೃತಿ ದೃಷ್ಟಿಯಿಂದ ಪರಿಶೀಲನೆ ಮಾಡುವ ಕಾಲದಲ್ಲಿ ಹೆರಕಲ್ ಪ್ರದೇಶದ ಸುತ್ತಮುತ್ತಲು ಮಧ್ಯ ಹಳೇ ಶಿಲಾಯುಗದ ಕೆಲವೊಂದು ಕಲ್ಲಿನ ಉಪಕರಣಗಳನ್ನು ಸಂಗ್ರಹಿಸಿದರು. ೧೯೫೦ರ ದಶಕದ ಆದಿಭಾಗದಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ಪುರಾತತ್ವ ಸರ್ವೇಕ್ಷಣಾಧಿಕಾರಿಗಳಾಗಿದ್ದ ಬಿ. ಕೆ. ಥಾಪರ್ ಅವರು ಕರ್ನಾಟಕ ಭಾಗದಲ್ಲಿ ಉತ್ಖನನ ಮಾಡಬೇಕೆಂಬ ಉದ್ದೇಶ ವಿಟ್ಟುಕೊಂಡು ಹೆರಕಲ್ ಮತ್ತು ಅಶೋಕನ ಶಾಸನವಿರುವ ಮಸ್ಕಿ ನೆಲೆಯನ್ನು ಪರಿಶೀಲಿಸಿದರು. ಹೆರಕಲ್ ನೆಲೆಯು ತುಂಬಾ ದುಸ್ಥಿತಿಯಲ್ಲಿದ್ದುದರಿಂದ ಅದನ್ನು ಬಿಟ್ಟು ಮಸ್ಕಿಯನ್ನು ಆಯ್ದುಕೊಂಡು ಉತ್ಖನನ ಮಾಡಿದರು. ಆತ ಉತ್ಖನನ ವರದಿಯಲ್ಲಿ ಹೆರಕಲ್ ನೆಲೆಯ ಅಂಶಗಳನ್ನು ಬರೆದಿದ್ದಾರೆ. ಆ ನೆಲೆಯಲ್ಲಿ ಕೆಲವೊಂದು ತಾಮ್ರದ ನಾಣ್ಯಗಳು ದೊರೆತಿದ್ದವು. ಅವು ಬಹುಮಟ್ಟಿಗೆ ಶಾತವಾಹನರ ಕಾಲದವು. ಆದರೆ ಅವು ಕೂಡಾ ಕಾಲಾಂತರದಲ್ಲಿ ತುಂಬಾ ವಿರೂಪಗೊಂಡಿದ್ದವು. ೧೯೬೭೦ರ ದಶಕದಲ್ಲಿ ಈ ನೆಲೆಯನ್ನು ಅ. ಸುಂದರ ಅವರು ಪರಿಶೀಲಿಸಿದಾಗ ಈ ನೆಲೆಯಲ್ಲಿ ಶಾತವಾಹನರ ಕಾಲಕ್ಕಿಂತಲೂ ಪೂರ್ವದ ಅಂದರೆ ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಇದ್ದಿರಬಹುದೆ? ಎಂಬುದು ಅನ್ವೇಷಣೆಯ ಕಾಲದಲ್ಲಿ ಅವರ ಪ್ರಶ್ನೆಯಾಗಿತ್ತು. ಆದರೆ ಸ್ಪಷ್ಟವಾಗಿ ಆ ಸಂಸ್ಕೃತಿಯ ಅವಶೇಷಗಳೇನು ಆಗ ದೊರಕಲಿಲ್ಲ. ಈಗ್ಗೆ ಒಂದು ವರ್ಷದ ಹಿಂದೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯ ವಿಭಾಗದ ಶ್ರೀ ವಾಸುದೇವಬಡಿಗೇರ ಮತ್ತೆ ಈ ನೆಲೆಯನ್ನು ಪರಿಶೀಲಿಸಿದರು. ಅವರಿಗೆ ಕೆಲವು ಮಧ್ಯ ಹಳೇ ಶಿಲಾಯುಗದ ಕಲ್ಲಿನ ಚಕ್ಕೆ ಉಪಕರಣಗಳು ದೊರೆತವು ಮತ್ತು ಕುಳಿತುಕೊಳ್ಳಲು ಅನುಕೂಲವಾಗಿದ್ದ ಒಂದು ಕಲ್ಲಿನ ಪೀಠವನ್ನು ಗುರುತಿಸಿದರು.

ಪ್ರಾಚೀನ ನೆಲೆಯ ಸ್ಥಳೀಯ ಹೆಸರು

ಈ ಗ್ರಾಮದ ಪ್ರಾಚೀನ ಹೆಸರಿನ ಬಗ್ಗೆ ಎರಡು ಪ್ರಕಾರದ ದಂತಕತೆಗಳಿವೆ.

* ಸಂಶೋಧನ ವಿದ್ಯಾರ್ಥಿಗಳು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩.

೧) ಹೆರತಕಲ್ಲು : ಊರಿನ ಪೂರ್ವ ದಿಕ್ಕಿನಲ್ಲಿರುವ ಗುಡ್ಡದ ಸಾಲು, ಈ ಗುಡ್ಡವನ್ನು ಹೆರತಕಲ್ಲು ಅಂದರೆ ಗುಡ್ಡ ಹೆಪ್ಪುಗಟ್ಟಿದ ಹಾಗೆ ಕಾಣಿಸುತ್ತಿತ್ತೇನೊ?(*) ಆದ್ದರಿಂದ ಇದಕ್ಕೆ ಹೆರತಕಲ್ಲು ಎನ್ನುತ್ತಿದ್ದಿರಬಹುದು. ಮುಂದೆ ಜನರ ಆಡುಭಾಷೆಯಲ್ಲಿ ಹೆರಕಲ್ಲು ಆಯಿತು.

೨) ಹಿರಿಯಕಲ್ಲು : ಊರಿನ ಸುತ್ತಲು (ದೊಡ್ಡ) ಹಿರಿಯದಾದ ಕಲ್ಲು (ಗುಡ್ಡ) ಇರುವದರಿಂದ(**) ಹಿರಿಯ ಕಲ್ಲು - ಹಿರಿಯದಾದ ಕಲ್ಲು - ಹಿರೆಕಲ್ಲು ಮುಂದೆ ಜನರ ಆಡು ಭಾಷೆಯಿಂದ ಹೆರಕಲ್ಲು ಆಯಿತು.

ನಾವು ಈ ಗ್ರಾಮದ ನಿವಾಸಿಗಳಾದ ಶಶಿಕಾಂತ, ರಂಗನಗೌಡ, ಪಾಟೀಲರಿಗೆ ದೊರೆತ ಅತ್ಯಂತ ಅಪರೂಪದ ವರಾಹಮುಖಿ ನೀರಿನ ಪಾತ್ರೆಯನ್ನು ನೋಡಿ ಕುತೂಹಲದಿಂದ, ಹೆರಕಲ್ಲ ನೆಲೆಯನ್ನು ಪರಿಶೀಲಿಸಿ ಆ ನೆಲೆಯಿಂದ ತಕ್ಕಮಟ್ಟಿನ ಪ್ರಮಾಣದಲ್ಲಿ ಮೃತ್ಪಾತ್ರೆಗಳನ್ನು ಮತ್ತು ಇಟ್ಟಿಗೆಯ ತುಂಡುಗಳನ್ನು ಸಂಗ್ರಹಿಸಿದೆವು. ಇವೆಲ್ಲವುಗಳನ್ನು ಅ. ಸುಂದರ ಅವರಿಗೆ ತೋರಿಸಲಾಗಿ, ಅವರ ಸೂಚನೆಯಂತೆ ಸಂಗ್ರಹಿಸಿದ ಮೃತ್ಪಾತ್ರೆಗಳನ್ನು ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿ, ಇವುಗಳ ಕಾಲಮಾನ ಸುಮಾರು ಕ್ರಿ. ಪೂ. ೩೦೦ ಕ್ರಿ. ಶ. ೨೦೦ ರ ಆದಿ ಇತಿಹಾಸದ ಮೃತ್ಪಾತ್ರೆಗಳು ಎಂದು ನಿರ್ಧರಿಸಲಾಯಿತು.

ಈ ಸಂಸ್ಕೃತಿಯ ಮೃತ್ಪಾತ್ರೆಗಳು ಅತೀ ದಪ್ಪ ಬಳೆಯಂತಹ ಹಿಡಿಕೆಯುಳ್ಳ ಕೆಂಪು ವರ್ಣದ ದೊಡ್ಡ ದೊಡ್ಡ ಗಡಿಗೆಗಳು, ಮಧ್ಯಮ ಪ್ರಮಾಣದ ಸ್ವಲ್ಪ ಎತ್ತರದ ಪಾತ್ರೆಗಳು ಮತ್ತು ಒರಟು ಮೈಯಿನ ಲೋಟಗಳಂತೆ ಕಾಣಬರುತ್ತವೆ.



ಪ್ರಮುಖ ಪ್ರಕಾರಗಳು

ದೊಡ್ಡ ದೊಡ್ಡ ಪಾತ್ರೆಯ ಹಿಡಿ ಹೊರಚಾಚಿದ್ದು ಒಳಬದಿಯ ಅಂಚು ಉಬ್ಬಿದೆ. ಹೊರ ಬದಿಯಲ್ಲಿ ಹೊಸೆದ ಹುರಿಯಂತೆ ಅಲಂಕರಣವಿದೆ. ಮಧ್ಯಮ ಪ್ರಮಾಣದ ಒಂದು ಪಾತ್ರೆ ಕುತೂಹಲಕಾರಿಯಾಗಿದೆ. ಇದರ ಹೊರಮೈನಲ್ಲಿ ಸಮಾನ ಅಂತರದ ಓರೆ ರೇಖಾಗುಚ್ಚಗಳು ಒಂದನ್ನೊಂದು ಭೇದಿಸಿದಂತೆ ಚಿತ್ರಿಸಲಾಗಿದೆ. ಈ ರೇಖೆಗಳು ಬಿಳಿಯ ಬಣ್ಣದವು. ಈ ಚಿತ್ರಗಳ ಮೇಲೆ ತೆಳುವಾಗಿ ಕೆಂಪು ಬಣ್ಣದ ಲೇಪನವಿದೆ. ಆಂಗ್ಲ ಭಾಷೆಯಲ್ಲಿ ಇಂತಹ ವಿಶಿಷ್ಟ ಪಾತ್ರೆಯನ್ನು 'ರಸೆಟ್ ಕೋಟೆಡ್ ವೈಟ್ ಪೇಂಟೆಡ್ ಪಾಟ್ರಿ' ಎನ್ನುವರು ಅಂದರೆ ಕೆಂಪು ಲೇಪನ ಆಚ್ಛಾದಿತ ಬಿಳಿ ರೇಖಾಚಿತ್ರಿತ ಪಾತ್ರೆಗಳು. ಇಂತಹ ಪಾತ್ರೆಗಳು ಪುರಾತತ್ವ ಸಂಶೋಧನೆಯಿಂದ ಕ್ರಿ. ಶ. ೨ನೇ ಶತಮಾನದವರೆಗೆ ಕರ್ನಾಟಕ ಹಾಗೂ ನೆರೆ ಹೊರೆಯ ಪ್ರದೇಶಗಳಲ್ಲಿ ಬಳಕೆಯಿತ್ತು. ಆದ್ದರಿಂದ ಹೆರಕಲ್ಲ ನೆಲೆಯಲ್ಲಿ ಕೂಡಾ ಆದಿ ಇತಿಹಾಸ ಕಾಲದ ಸಂಸ್ಕೃತಿ ಅವಶೇಷಗಳು ಇದ್ದುದರಲ್ಲಿ ಸಂಶಯವಿಲ್ಲ.

ಮೃತ್ಪಾತ್ರೆಗಳ ಮೇಲೆ ಸಾಮಾನ್ಯವಾಗಿ ರೇಖಾಚಿತ್ರಗಳಿದ್ದು, ಪಾತ್ರೆಗಳ ಅಲಂಕರಣಕೋಸ್ಕರ ಬಿಡಿಸಲಾಗಿದೆ. ಮಣ್ಣಿನ ಪಾತ್ರೆಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿದ ಮೇಲೆ ಭಟ್ಟಿಯಲ್ಲಿ ಸುಡುವದಕ್ಕೆ ಮುಂಚೆಯೇ ಅವುಗಳ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಬಣ್ಣ ಒಣಗಿದ ಮೇಲೆ ಆ ಪಾತ್ರೆಗಳನ್ನು ಭಟ್ಟಿಯಲ್ಲಿ ಸುಡಲಾಗಿದೆ. ಹೀಗೆ ಮಾಡುವದರಿಂದ ಆ ಪಾತ್ರೆಗಳನ್ನು ನೀರಿನಲ್ಲೆ ತೊಳೆದರೂ ಅವುಗಳ ಮೇಲಿನ ಬಣ್ಣ, ಚಿತ್ರಗಳು ಅಳಿಸಿ ಹೋಗುವುದಿಲ್ಲ ಸಾವಿರಾರು ವರ್ಷಗಳಿಂದಲೂ ಇಂಥ ಪಾತ್ರೆಗಳ ಚೂರುಗಳು ಮಣ್ಣಿನಲ್ಲಿದ್ದರೂ ಮಳೆ-ಬಿಸಿಲು ಗಾಳಿಗಳಿಗೆ ಸೋಕಿದರೂ ಇವುಗಳ ಚಿತ್ರಗಳು ಸ್ವಲ್ಪಮಟ್ಟಿಗೆ ಮುಸುಕಾದರೂ ನಾಶವಾಗಿಲ್ಲ.

ವಿವಿಧ ಪ್ರಕಾರಗಳಲ್ಲಿ ಮೃತ್ಪಾತ್ರೆಗಳನ್ನು ಅಲಂಕರಿಸುವ ಪದ್ಧತಿ ಹರಪ್ಪಾ ನಾಗರಿಕತೆ (ಕ್ರಿ. ಪೂ. ಸು. ೨೫೦೦-೧೭೫೦) ಸೇರಿದಂತೆ ಇದಕ್ಕೂ ಪೂರ್ವದಲ್ಲಿ ಬಲೂಚಿಸ್ಥಾನ ಅಫಾನಿಸ್ತಾನ ಪ್ರದೇಶದ ಕಂಚಿನ ಯುಗದ ಸಂಸ್ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತದೆ.

ವರ್ಣಚಿತ್ರಗಳುಳ್ಳ ಮೃತ್ಪಾತ್ರೆಗಳು ಈ ಸಂಸ್ಕೃತಿಗಳ ನಿವೇಶನಗಳ ಉತ್ಖನನಗಳಲ್ಲಿ ದೊರೆತಿವೆ. ಇವೆಲ್ಲವೂ ಈ ಪ್ರದೇಶದಲ್ಲಿಯ ಕಲೆಯ ಪ್ರಾಚೀನತೆ, ವಿವಿಧ ಪರಿಕಲ್ಪನೆಗಳು,

---

* 'ಹೆರತ' ಎಂದರೆ 'ಅನ್ಯ', 'ಮತ್ತೊಂದು', 'ಬೇರೆಯ' ಎಂದೆಲ್ಲ ಅರ್ಥಗಳೂ ಇರುವುದರಿಂದ 'ಊರ ಹೊರಗಿನ ಕಲ್ಲು' ಎಂಬ ಹೆಸರೇ ಊರಿಗೆ ಆ ಸ್ಥಳನಾಮವನ್ನು ಕೊಟ್ಟಿರಬಹುದೇ?

** ಆಗ ಹಿರಿಸುತ್ತಗಲ್ಲು ಅಥವಾ ಹಿರೇಸುತ್ತುಕಲ್ಲು ಎಂದಾಗಬಹುದೇ? - (ಸಂ.)

ಶೈಲಿ ಪ್ರಕಾರ, ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳು ಮೊದಲಾದವುಗಳನ್ನು ತಿಳಿಯಲು ತುಂಬಾ ಸಹಕಾರಿಯಾಗುತ್ತವೆ.

ಈ ನೆಲೆಯಲ್ಲಿ ಬಹುಮಟ್ಟಿಗೆ ಶಾತವಾಹನರ ಕಾಲದ ಇಟ್ಟಿಗೆ ಕಟ್ಟಡಗಳು ಇದ್ದಿರಬೇಕು. ಚಂದ್ರವಳ್ಳಿ, ಬನವಾಸಿ, ವಡಗಾಂವ ಮಾಧವಪುರ ಮುಂತಾದ ನೆಲೆಗಳ ಉತ್ಖನನದಲ್ಲಿ ಹಲವಾರು ಇಟ್ಟಿಗೆ ಕಟ್ಟಡಗಳು ದೊರೆತಿವೆ. ಇವೆಲ್ಲವು ಬಹುಮಟ್ಟಿಗೆ ಆ ಕಾಲದಲ್ಲಿ ನಗರಗಳಾಗಿದ್ದವು. ಹೆರಕಲ್ ಕೂಡಾ ಇಂತಹ ನಗರವಾಗಿದ್ದಿರಬೇಕೆಂಬ ಸಂಶಯ ಉಂಟಾಗುತ್ತದೆ.

ಈ ಮೇಲೆ ಹೇಳಿದ ಮೃತ್ಪಾತ್ರೆಯ ವಸ್ತುಗಳ ಜೊತೆಗೆ ಈ ಹೆರಕಲ್ ಪ್ರದೇಶವು ಬೃಹತ್ಪ್ರಮಾಣದ ಕಬ್ಬಿಣದ ಆಯುಧಗಳನ್ನು ಒಳಗೊಂಡಿದ್ದು, ಇದು ಶಿಲಾಯುಗದಲ್ಲಿ ದಕ್ಷಿಣ ಭಾರತದಲ್ಲಿನ ಪ್ರಮುಖ ಕಬ್ಬಿಣ ಕೈಗಾರಿಕೆಯ ಪ್ರದೇಶವಾಗಿತ್ತೆಂದು ತೋರಿಸುತ್ತದೆ. ಮತ್ತೊಂದು ಬಗೆಯ ಮೃತ್ಪಾತ್ರೆಗಳು ಈ ನೆಲೆಯಲ್ಲಿ ಕಂಡುಬಂದಿದ್ದು ಅವು ಒರಟು ಮೈಯಿನ ಲೋಟಗಳಾಗಿವೆ. ಇವು ಅಗಲವಾದ ಬಾಯಿಯ ಚಿಕ್ಕದಾದ ತಳಭಾಗವನ್ನು ಹೊಂದಿದ ಬಟ್ಟಲುಗಳು ಕುಡಿಯಲು ಉಪಯೋಗಿಸುವ ಕಪ್ಪುಗಳ ಆಕಾರದಲ್ಲಿವೆ. ಇವುಗಳು ಮೌರ್ಯ ಮತ್ತು ಶಾತವಾಹನ ಕಾಲದ ನೆಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಈ ರೀತಿಯ ಮೃತ್ಪಾತ್ರೆಗಳು ಪ್ರಾಚೀನ ನೆಲೆಗಳಾದ ಪಟ್ಟದಕಲ್ಲು, ಶಿರಹಟ್ಟಿ ತಾಲ್ಲೂಕಿನ ತುಂಗಭದ್ರಾ ನದಿ ದಂಡೆಯ ಇಟಗಿಯಲ್ಲಿ, ಶಿರಹಟ್ಟಿಯಿಂದ ೧೨ ಮೈಲು ದೂರದಲ್ಲಿರುವ ಬೆಳ್ಳಟ್ಟಿ ಮತ್ತು ಕೋಲ್ಲಾಪುರದ ಪಂಚಗಂಗಾ ನದಿ ಬಳಿಯ ಬ್ರಹ್ಮಪುರಿಯಲ್ಲಿ ದೊರೆತಿವೆ.

ಸಂಗ್ರಹಿಸಿದ ಮುರುಕು ಮಣ್ಣಿನ ಪಾತ್ರೆಗಳಲ್ಲಿ ಈ ನೆಲೆಯಿಂದ ಗ್ರಾಮಸ್ಥರು ಸಂಗ್ರಹಿಸಿದ ವರಾಹಮುಖಿ ನೀರಿನ ಹೂಜಿ (ಪಾತ್ರೆ) ಇದೊಂದು ಅತ್ಯಂತ ಅಪರೂಪದ ಮಣ್ಣಿನ ಪಾತ್ರೆಯಾಗಿದೆ. ಇದು ಹೆಚ್ಚು ಆಳವಿಲ್ಲದ ಅಸಮ ಎರಡು ಅಗಲವಾದ ಬಟ್ಟಲಗಳನ್ನು ಒಂದಕ್ಕೊಂದು ಜೋಡಿಸಿ ಒಂದು ಬಟ್ಟಲದ ಹೊರಬದಿಯಲ್ಲಿ ನೀರು ಬೀಳುವ ಮೂತಿ ಮತ್ತು ಮಧ್ಯದಲ್ಲಿ ವರಾಹ ಮುಖವನ್ನು ಅತ್ಯಂತ ಸುಂದರವಾಗಿ ರೂಪಿಸಲಾಗಿದೆ. ಮತ್ತೊಂದು ಬಟ್ಟಲದ ಬುಡದಲ್ಲಿ ಈ ಪಾತ್ರೆ ನೆಲದ ಮೇಲೆ ಕೂರಿಸಲು ಅನುಕೂಲವಾಗುವಂತೆ ಒಂದು ಬಳೆಯಿದೆ. ವರಾಹದ ಮುಖದ ತಲೆಯ ಬದಿಗೆ ಹಿಡಿಕಿಯಿದೆ. ಕೆಳಭಾಗದ ಬಟ್ಟಲದ ಮೇಲಂಚಿನಲ್ಲಿ ಓರೆ-ಕೋರೆಯಾದ ನೀರು ಚಿತ್ರವಿದೆ.

ಈ ವರಾಹಮುಖಿ ನೀರಿನ ಹೂಜಿಯು ಎರಡು ಅಗಲವಾದ ಬಟ್ಟಲಗಳನ್ನು ಒಂದಕ್ಕೊಂದು ಜೋಡಿಸಿದಂತಿದ್ದು ಇದರ ಸುತ್ತಳತೆಯು ೮೦ ಸೆಂ.ಮೀ. ಇದೆ. ಮೇಲ್ಭಾಗದ ಬಟ್ಟಲದ



ಮಧ್ಯದಲ್ಲಿರುವ ವರಾಹದ ಕುತ್ತಿಗೆಯ ಸುತ್ತಳತೆ ೩.೨ ಸೆಂ.ಮೀಟರ್ ಇದ್ದರೆ ಹೊರಬದಿಯಲ್ಲಿ ನೀರು ಬೀಳುವ ಮೂತಿಯು ೩ ೧/೨ ಸೆಂ.ಮೀ. ಇದೆ. ಹೂಜಿಯ ಮೇಲಿನ ಬಟ್ಟಲವು ಮೇಲಿನಿಂದ ಕೆಳಕ್ಕೆ ೮ ಸೆಂ.ಮೀ. ಇದ್ದರೆ ಕೆಳಗಿನ ಬಟ್ಟಲವು ಮೇಲಿನಿಂದ ಕೆಳಕ್ಕೆ ೧೨ ಸೆಂ.ಮೀ. ನಷ್ಟಿದೆ. ವರಾಹವು ೩ ಸೆಂ.ಮೀ. ಎರಡು ಕೋರೆ ಹಲ್ಲುಗಳನ್ನು ಹೊಂದಿದ್ದರೆ, ೭ ಸೆಂ.ಮೀ. ಉಳ್ಳ ೨ ಮುಂಗಾಲುಗಳನ್ನು ಹೊಂದಿದೆ. ಈ ಪಾತ್ರೆ ಕೂರಿಸಲು ಅನುಕೂಲವಾಗುವಂತಿರುವ ಬಳೆಯು ೩೩ ಸೆಂ.ಮೀ. ಇರುತ್ತದೆ.

ವರಾಹ ಮುಖದ ಆಕೃತಿ ನೀರಿನ ಹೂಜಿಯ ಆಕಾರ ಮತ್ತು ಓರೆ ಕೋರೆಯ ಗೀರು ಚಿತ್ರವು ಈ ಪಾತ್ರೆಯು ಮಧ್ಯಯುಗೀನ ಕಾಲದ್ದೆಂದು ಸೂಚಿಸುತ್ತದೆ; ಎಂದು ಅ. ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಅದೇ ರೀತಿ ಈ ಹೂಜಿಯ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರಿ ನಿರ್ದೇಶಕರಾದ ಡಾ॥ ರು. ಮ. ಷಡಕ್ಷರಯ್ಯನವರ ಅಭಿಪ್ರಾಯದಂತೆ ಹೂಜಿಯ ಬಣ್ಣ ವಿನ್ಯಾಸ ಅದರ ನುಣುಪು ಇವೆಲ್ಲವುದರ ಜೊತೆಗೆ ಹೂಜಿಯು ಒಳಗೊಂಡಿರುವ ವರಾಹ ಮೂರ್ತಿಯು ವೈದಿಕ ಸಂಸ್ಕೃತಿಯ ಲಕ್ಷಣಗಳನ್ನು ಬಿಂಬಿಸುವದರಿಂದ ಇದು ಕ್ರಿ. ಶ. ೧-೨ನೇ ಶತಮಾನಕ್ಕೆ ಸೇರಿದೆ ಎಂದಿರುವರು. ಹಿರಿಯ ವಿದ್ವಾಂಸರಾದ ಡಾ॥ ಎಸ್. ನಾಗರಾಜು ಅವರು ಸಹ ಇವರ ಅಭಿಮತಕ್ಕೆ ಸಹಮತ ವ್ಯಕ್ತಪಡಿಸಿರುವರು.

ಈ ಮೇಲಿನ ವಿದ್ವಾಂಸರ ಅಭಿಪ್ರಾಯಗಳನ್ನು ತುಲನೆ ಮಾಡಿದಾಗ ಇನ್ನೂ ಹೆಚ್ಚಿನ ಸಂಶೋಧನೆಗಳನ್ನು ಈ ನೆಲೆಯ ಬಗ್ಗೆ ನಡೆಸಿದರೆ ಅದರ ಕಾಲದ ಬಗ್ಗೆ ನಿಖರವಾದ ಮಾಹಿತಿ ಲಭ್ಯವಾಗಬಹುದು. ಅಲ್ಲಿಯವರೆಗೆ ಇದು ವಾದ-ವಿವಾದಗಳಿಗೆ ಆಸ್ಪದ ಕೊಡುತ್ತದೆ.

ಒಟ್ಟಿನಲ್ಲಿ ಮಧ್ಯಯುಗೀನ ಕಾಲದ ಮೃತ್ಪಾತ್ರೆಗಳಲ್ಲಿ ಇದೊಂದು ಅಪರೂಪ ಮಾದರಿಯ ಸಾಮಾನ್ಯ ಕುಶಲಕರ್ಮಿಗಳ ಒಂದು ಕಲಾಕೃತಿಯೆಂದು ಹೇಳಬಹುದು. ಇದುವರೆಗೆ ತಿಳಿದ ಮಟ್ಟಿಗೆ ಇಂತಹ ಮೃತ್ಪಾತ್ರೆಗಳು ಕರ್ನಾಟಕದಲ್ಲಿ ಎಲ್ಲೂ ಕಂಡುಬಂದಿರುವದಿಲ್ಲ

(ಈ ಸಂಶೋಧನಾ ಪ್ರಬಂಧವನ್ನು ರಚಿಸಲು ನೆರವಾದಂತಹ ಡಾ|| ಅ. ಸುಂದರರವರಿಗೆ ಡಾ|| ರು. ಮ. ಷಡಕ್ಷರಯ್ಯ, ಡಾ|| ಆಯ್. ಕೆ. ಪತ್ತಾರ ಮತ್ತು ಡಾ|| ಎಚ್. ಆರ್. ರಘುನಾಥ ಭಟ್ಟರವರನ್ನು ಸ್ಮರಿಸುವೆವು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. R. S. Panchamukhi : *A Preliminary Note on the Exploration of Ancient sites in Bombay Karnataka.*

*೨. ಅ. ಸುಂದರ : **ಪ್ರಾಗೈತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ.**

ಮೈಸೂರು ನಾಗರಾಜ ಶರ್ಮ*

ಬೊಮ್ಮನಹಳ್ಳಿಯ ನವಶಿಲಾಯುಗದ ನೆಲೆ

ಮೈಸೂರು ಜಿಲ್ಲೆಯಲ್ಲಿ ಅನೇಕ ಪ್ರಾಗೈತಿಹಾಸಿಕ ನೆಲೆಗಳು ಕಂಡುಬರದಿದ್ದರೂ, ಅವುಗಳು ಪ್ರಾತಿನಿಧಿಕವಾಗಿ ಶಿಲಾಯುಗ ದಿಂದ ಹಿಡಿದು, ಕಬ್ಬಿಣಯುಗದವರೆಗೆ ಕೆಲವು ಕಡೆ ಗೋಚರಕ್ಕೆ ಬಂದಿವೆ ಎಂದು ಹೇಳಬಹುದು. ಅವುಗಳಲ್ಲಿ ಬಹು ಮುಖ್ಯವಾದ ಪ್ರಾಗೈತಿಹಾಸಿಕ ನೆಲೆಗಳೆಂದರೆ, ತಿರುಮಕೂಡಲುನರಸೀಪುರ,[೧] ಹೆಮ್ಮಿಗೆ[೨] ಮತ್ತು ತಲಕಾಡುಗಳು - ಈ ನೆಲೆಗಳು ಕಾವೇರಿ ನದೀತೀರದಲ್ಲಿ ಕಂಡುಬಂದಿದ್ದು, ಸಂಪೂರ್ಣ ಕೃಷಿ ಅವಲಂಬಿತ ನವಶಿಲಾಯುಗದ ಬದುಕಿನ ಸ್ಪಷ್ಟ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾಗಿವೆ.

ಇತ್ತೀಚೆಗೆ ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದ ಪ್ರಾಗೈತಿಹಾಸಿಕ ನೆಲೆ ಎಂದರೆ, ಮೈಸೂರು ಜಿಲ್ಲೆಯ ನರಸೀಪುರ ಹೋಬಳಿಯ ಬನ್ನೂರಿನ ಸಮೀಪದ 'ಬೊಮ್ಮನಹಳ್ಳಿ' ಎಂಬ ಒಂದು ಕುಗ್ರಾಮ. ಈ ಶ್ರೀಮಂತ ಪ್ರಾಗೈತಿಹಾಸಿಕ ನೆಲೆಯು ನವಶಿಲಾಯುಗದಿಂದ ಹಿಡಿದು ಮಧ್ಯಕಾಲೀನದವರೆಗೆ ಅನೇಕ ಪ್ರಾಚ್ಯಾವಶೇಷಗಳನ್ನು ಹೊಂದಿದ್ದು ಪುರಾತತ್ವ ಭೂಪಟದಲ್ಲಿ ಒಂದು ಪ್ರಮುಖ ನೆಲೆಯಾಗುವ ಲಕ್ಷಣಗಳನ್ನು ಹೊಂದಿದೆ.

ಬೊಮ್ಮನಹಳ್ಳಿಯ ಪಕ್ಕದಲ್ಲಿನ ಗುಡ್ಡವೊಂದು ನೆಲಮಟ್ಟದಿಂದ ಸುಮಾರು ಇನ್ನೂರು ಮೀಟರ್ ಎತ್ತರಕ್ಕೆ ಏರಿದ್ದು ಗ್ರಾಮಸ್ಥರು ಈ ಗುಡ್ಡವನ್ನು 'ಕಾರೇಮಾಳ' 'ಬೂದಿತಿಟ್ಟು' ಮತ್ತು 'ಜೇನುಗಲ್ಲುಗುಡ್ಡ' ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ. ಕುರುಚಲು ಗಿಡಗಳಿಂದ ತುಂಬಿರುವ ಈ ಗುಡ್ಡದ ತುಂಬ ಬೃಹತ್ತಾದ ಕಣಶಿಲೆಯ ಬಂಡೆಗಳ ರಾಶಿಗಳು ಅಲ್ಲಲ್ಲಿ ಗೋಪುರದಂತೆ ರಾಶಿ ಬಿದ್ದಿದ್ದು, ತಮ್ಮ ಒಡಲಿನಲ್ಲಿ ಅನೇಕ ಗುಹೆ-ಕಂದರಗಳನ್ನು ತುಂಬಿಕೊಂಡಿದೆ. ಗುಡ್ಡದ ಮೇಲೆ ಪ್ರಾರಂಭಕ್ಕೆ ಆಕರ್ಷಿಸಿದ ಪ್ರಾಚ್ಯವಸ್ತುಗಳೆಂದರೆ, ಅಲ್ಲಲ್ಲಿ ಕಂಡುಬಂದ ಆದಿಚರಿತ್ರ ಕಾಲಕ್ಕೆ ಸೇರಬಹುದಾದ ಮಡಕೆಯ ಚೂರುಗಳು. ಹೊಳಪಿನ ಮೈಯುಳ್ಳ ಅಲಂಕಾರಿಕ ವಿನ್ಯಾಸಗಳ ಮತ್ತು ನಯಗಾರಿಕೆಯಿಂದ ಕೂಡಿದ ಮುಚ್ಚಳಗಳು. ಈ ವಸ್ತುಗಳು ಈ ತಾಣವನ್ನು ಒಂದು ಪುರಾತತ್ವ ನೆಲೆಯೆಂಬ ನಿರ್ಣಯಕ್ಕೆ ಕೊಂಡೊಯ್ದುವು. ಆದರೆ ಸಂಪೂರ್ಣ ತಪಾಸಣೆಯಿಂದ ಈ ನೆಲೆಯಲ್ಲಿ ನವಶಿಲಾಯುಗಕ್ಕೆ ಸೇರಬಹುದಾದ ಹತ್ತು ಹಲವು ಪ್ರಾಚ್ಯವಸ್ತುಗಳು ಲಭ್ಯವಾಗಿ, ಈ ತಾಣದ ಪ್ರಾಚೀನತೆಯನ್ನು ಮತ್ತಷ್ಟು ಹೆಚ್ಚಿಸಿದುವು.

ನವಶಿಲಾಯುಗ

ಈ ಜೇನುಗಲ್ಲು ಗುಡ್ಡದಲ್ಲಿ ಅಪಾರವಾಗಿ ಲಭ್ಯವಿರುವ ಕಣಶಿಲೆಯ ಆಸೆಯಿಂದ ಕಲ್ಲು ಗಣಿಗಾರಿಕೆಯ ಜನ ಈ ಗುಡ್ಡವನ್ನು ನಾಶಪಡಿಸುವ ಕೆಲಸದಲ್ಲಿ ತೊಡಗಿದ್ದು, ಅದರೊಂದಿಗೆ ಇಲ್ಲಿ ಹುದುಗಿರುವ ಪ್ರಾಚ್ಯಾವಶೇಷಗಳೂ ಹೊರಕ್ಕೆ ಬಂದು ನಾಶವಾಗುತ್ತಿವೆ. ಅನೇಕ ಕಡೆ ಹೊರಚೆಲ್ಲಿರುವ ಮಣ್ಣಿನ ರಾಶಿಯಲ್ಲಿ ತಪಾಸಣೆ ನಡೆಸಿದಾಗ, ಹತ್ತಾರು ನಯವಾದ ಕಲ್ಲಿನ ಕೊಡಲಿಗಳು, ಹಾಗೂ ಕುಂಬಾರ ಚಕ್ರಗಳ ಸಹಾಯವಿಲ್ಲದೆ ತಯಾರಿಸಿದ ಹಸ್ತನಿರ್ಮಿತ ಮಡಕೆಯ ಭಾಗಗಳು, ಅಲ್ಲದೆ, ಧಾನ್ಯವನ್ನು ಅರೆಯುವ ಅರೆಗಲ್ಲುಗಳೂ ಲಭ್ಯವಾದುವು. ಹಸ್ತನಿರ್ಮಿತ ಮಡಕೆಗಳು ದಪ್ಪನೆಯ ಮೈಯನ್ನು ಹೊಂದಿದ್ದು, ಒರಟಾದ ಮೇಲ್ಮೈಯನ್ನು ಹೊಂದಿವೆ. ಕಮಂಡಲವನ್ನು ನೆನಪಿಗೆ ತರುವಂತಹ ಪಾತ್ರೆಯ ಪ್ರಣಾಳದ (Spout) ಭಾಗವು ದೊರೆತಿದೆ. ನವಶಿಲಾಯುಗದ ಅಂತ್ಯಭಾಗದ ಚಕ್ರನಿರ್ಮಿತ ಕಪ್ಪು ಬಣ್ಣದ ಮಡಕೆಗಳು ಸಹ *(Burnished Grey Ware)* ಹೇರಳವಾಗಿ ಲಭ್ಯವಾಗಿವೆ.

ಬೊಮ್ಮನಹಳ್ಳಿಯಲ್ಲಿ ದೊರೆತ ನವಶಿಲಾಯುಗದ ಪ್ರಾಚ್ಯವಸ್ತುಗಳಲ್ಲಿ ದೊರೆತ ಅಮೂಲ್ಯ ವಸ್ತುವೆಂದರೆ, ನವಶಿಲಾಯುಗಕ್ಕೆ ಸೇರಬಹುದಾದ ಸುಟ್ಟ ಮಣ್ಣಿನ ಶಿರೋಪೀಠ

* ಛಾಯಾಗ್ರಾಹಕ ಮತ್ತು ಸಂಶೋಧಕ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು - ೫೭೦ ೦೦೫.



(Head rest). ಈಗಾಗಲೇ ನರಸೀಪುರದ ಉತ್ಖನನದಲ್ಲಿ ಪರಿಚಿತವಾದ[೩] ತಲೆ ದಿಂಬಿನಂತಹ ಶಿರೋಪೀಠವನ್ನು ಹೋಲುವ ಈ ವಸ್ತುವು ಈ ಹಿಂದೆ ಪುರಾತತ್ವಜ್ಞ ಆಲ್ಚಿನ್‌ರ ವರಿಂದ ತಮ್ಮ 'ಪಿಕ್ಲಿಹಾಳ'ದ ಸಂಶೋಧನಾ ವರದಿಯಲ್ಲಿ ಉಲ್ಲೇಖಿತವಾಗಿತ್ತಾದರೂ[೪], ಅದು ಅಲ್ಲಿನ ಕಲ್ಲಿನ ಮೇಲಿನ ಕೊರೆತದ ಚಿತ್ರದಿಂದ ಮಾತ್ರವಾಗಿದ್ದು, ಪ್ರಾಚ್ಯವಸ್ತುವು ಮಾತ್ರ ಲಭ್ಯವಾಗಿಯೇ ಇರಲಿಲ್ಲ! ಅನಂತರ ನರಸೀಪುರದ ಸಮೀಪದ ಹೆಮ್ಮಿಗೆಯಲ್ಲಿ[೫] ದೊರೆತ ಮತ್ತೊಂದು ಉದಾಹರಣೆಯನ್ನು ಬಿಟ್ಟರೆ, ಹಳ್ಳೂರಿನಲ್ಲಿ ಮುಂದಿನ ಅವಧಿಯಲ್ಲಿ ಲಭ್ಯ ವಾಯಿತು.[೬] ಈಗ ದೊರೆತಿರುವ ಶಿರೋಪೀಠವು ಉತ್ಖನನ ವಿಲ್ಲದೆ ಕ್ಷೇತ್ರಕಾರ್ಯದ ವೇಳೆ ದೊರೆತ ಮೊದಲನೆಯ 'ಶಿರೋಪೀಠ' ಎಂದು ಹೇಳಬೇಕು. ಲಭ್ಯವಾಗಿರುವ ಭಾಗಗಳು ಎರಡು ಮೂರು ಪೀಠಗಳದ್ದಾಗಿದ್ದು, ಸಮೀಪದಲ್ಲಿ ಮಾನವನ ಅಪಾರ ಮೂಳೆಗಳು ದೊರೆತಿರುವುದರಿಂದ, ಇದು ನವ ಶಿಲಾಯುಗದ ಒಂದು ಸಮಾಧಿ ತಾಣವೆಂಬುದನ್ನು ಖಚಿತ ಪಡಿಸುತ್ತದೆ.

ನವಶಿಲಾಯುಗದ ಸ್ಪಷ್ಟ ಕುರುಹುಗಳಾದ ಕಲ್ಲಿನ ಕೊಡಲಿಗಳು (Stone axes) ಈ ನಿವೇಶನದಲ್ಲಿ ಹೇರಳವಾಗಿ ದೊರೆತಿದ್ದು, ವಿವಿಧ ಅಳತೆ ಮತ್ತು ಆಕಾರಗಳನ್ನು ಹೊಂದಿವೆ. ಸುಸ್ಥಿತಿಯಲ್ಲಿರುವ ಹಲವು ಕೊಡಲಿಗಳೊಂದಿಗೆ ಒಡೆದ ಅನೇಕ ಚೂರುಗಳೂ ಕಂಡುಬಂದಿವೆ. ಇವುಗಳ ಅಳತೆಗಳು ೮-೧೦ ಸೆಂ.ಮೀ. ಉದ್ದದಿಂದ ಹಿಡಿದು, ೨೧ ಸೆಂ.ಮೀ. ಉದ್ದದವರೆಗೆ ವ್ಯಾಪ್ತಿಯನ್ನು ಹೊಂದಿವೆ. ಈ ಕೊಡಲಿಗಳ ನಿರ್ಮಾಣಕ್ಕಾಗಿ ವಿವಿಧ ಜಾತಿಯ ಕಲ್ಲುಗಳನ್ನು ಬಳಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾಗಿ ಡಾಲರೈಟ್ (Dolerite), ಫೆಲಸೈಟ್ (Felsite) ಮತ್ತು ಕ್ವಾರಟ್ಜೈಟ್ಗಳೇ (Quartzite) ಅಲ್ಲದೆ ಅಗ್ನಿಶಿಲೆಯಿಂದಲೂ (Volcanic rock) ಇವುಗಳನ್ನು ತಯಾರಿಸಿರುವ ಮಾದರಿಗಳು ಕಂಡುಬರುತ್ತವೆ. ಇವುಗಳೊಂದಿಗೆ ಧಾನ್ಯವನ್ನು ಅರೆಯುವ ಅರೆಗಲ್ಲುಗಳು (Rubbers) ಮತ್ತು ಧಾನ್ಯವನ್ನು ಕುಟ್ಟಲು ಬಳಸುತ್ತಿದ್ದ ಕುಟ್ಟುಗಲ್ಲುಗಳು (Pounders) ಅಲ್ಲದೆ, ಬೇಟೆಗಾಗಿ ಬಳಸುತ್ತಿದ್ದ ದಪ್ಪ ದಪ್ಪ ಗೋಲಿಗಳಂತಹ (ಕವಣೆ) ಕಲ್ಲಿನ ಗುಂಡುಗಳೂ ಕೆಲವು ದೊರೆತಿವೆ. ಬಹುಪಾಲು ಕೊಡಲಿಗಳನ್ನು ಡಾಲರೈಟ್ ಶಿಲೆಯನ್ನೇ ಬಳಸಿ ತಯಾರಿಸಿರು ವುದು ಕಂಡುಬರುತ್ತದೆಯಾದರೂ, ಒಂದು ಕಿ.ಮೀ. ಉದ್ದದ ಈ ವಿಶಾಲ ಗುಡ್ಡದಮೇಲೆ ಎಲ್ಲಿಯೂ ಒಂದೇ ಒಂದು ಡಾಲರೈಟ್ ಬಂಡೆಯೂ ಲಭ್ಯವಿಲ್ಲ ಎಂಬುದು ಒಂದು ಕುತೂಹಲಕರ ಅಂಶ.

ಬೃಹತ್ ಶಿಲಾಸಂಸ್ಕೃತಿ

ಸಂಗ್ರಹದಲ್ಲಿ ದೊರೆತ ಪ್ರಾಚ್ಯವಸ್ತುಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಅಥವಾ ಕಬ್ಬಿಣಯುಗಕ್ಕೆ ಅನ್ವಯಿಸಬಹುದಾದ ಕೆಲವು ವಸ್ತುಗಳೂ ದೊರೆತಿದ್ದು ಇಲ್ಲಿ ಜನವಸತಿಯು ಮುಂದುವರೆದಿ ರುವುದನ್ನು ಸೂಚಿಸುತ್ತದೆ. ದಪ್ಪ ಮೈಯ್ ಹಾಗೂ ನುಣುಪಾದ ಮೇಲ್ಮೈಯನ್ನು ಪಡೆದಿರುವ ಅನೇಕ ಮಡಕೆಯ ಚೂರುಗ ಳೊಂದಿಗೆ ತೆಳು ದೇಹದ ಕಪ್ಪು-ಕೆಂಪು ಬಣ್ಣದ ಮೃತ್‌ಪಾತ್ರೆಗಳೂ ಸೇರಿವೆ. ಇವುಗಳ ಆಕಾರಗಳು ಪರಿಚಿತ ಬೃಹತ್ ಶಿಲಾ ಸಂಸ್ಕೃತಿಯ ಆಕಾರ ಮತ್ತು ಅಳತೆಗಳನ್ನು ಹೊಂದಿರುವುದೇ ಅಲ್ಲದೆ, ಅನೇಕ ಮಡಕೆಗಳ ಮೇಲೆ ಗೀರು ವಿನ್ಯಾಸಗಳೂ (Grafiti) ಸ್ಪಷ್ಟವಾಗಿ ಕಂಡುಬಂದಿವೆ. ದೊಡ್ಡ ದೊಡ್ಡ ಅಳತೆಯ ಮಡಕೆಗಳು ತಳದಲ್ಲಿ ಗುಮ್ಮಟದಂತಹ ಪಾದಗಳನ್ನು ಹೊಂದಿವೆ. ಸಾಮಾನ್ಯವಾಗಿ ಬೃಹತ್ ಶಿಲಾ ಸಂಸ್ಕೃತಿಗಳ ನೆಲೆಗಳು ಪ್ರಥಮಕ್ಕೆ ಗೋಚರಿಸುವುದು ದೊಡ್ಡಗಾತ್ರದ ಸಮಾಧಿಗಳಿಂದಲೇ. ಆದರೆ ಈ ನೆಲೆಯಲ್ಲಿ ಸುತ್ತಮುತ್ತ ನಾಲ್ಕೈದು ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲೂ ಬೃಹತ್ ಶಿಲಾಸಮಾಧಿಗಳೇ ಕಂಡುಬರದಿರುವುದು ಕುತೂಹಲಕರ ಸಂಗತಿಯಾಗಿದೆ. ಒಂದು ವೇಳೆ ಅಂತಹ ನೆಲೆಗಳನ್ನು ನಂತರದ ಕಾಲದಲ್ಲಿ ಕೃಷಿಗಾಗಿ ಪರಿವರ್ತಿಸಿ ಹಾಳಾಗಿರಬಹುದು ಎಂದು ಭಾವಿಸಿದರೂ, ಅದು ಸಾಧುವೆನಿಸು ವುದಿಲ್ಲ. ಗುಡ್ಡದ ಸುತ್ತಲೂ ಕೃಷಿಗೆ ಬಳಸಿಲ್ಲದ ನೂರಾರು ಎಕರೆ ಪ್ರದೇಶಗಳು ಅಬಾಧಿತವಾಗಿ ಹಾಗೆಯೇ ಉಳಿದಿದ್ದು ಈ ಸ್ಥಳಗಳಲ್ಲಿ ಸಮಾಧಿಗಳ ಕುರುಹುಗಳೇನೂ ಕಂಡುಬರುವುದಿಲ್ಲ.

ಆದರೆ, ಸುತ್ತಮುತ್ತಲ ಪ್ರದೇಶವನ್ನು ಬೃಹತ್ ಶಿಲಾ ಸಮಾಧಿಗಳ ನಿರೀಕ್ಷೆಯಿಂದ ತೀವ್ರ ತಪಾಸಣೆ ನಡೆಸಿದಾಗ, ಅವುಗಳು ಕಂಡುಬರದೆ, ಸ್ಥಳೀಯ ವಿಶೇಷ ಸಮಾಧಿ ಪದ್ಧತಿ ಯಾದ 'ಕಲ್ಲುಮಲ್ಲಯ್ಯ' ಎಂಬ ಶವ ಸಂಸ್ಕಾರ ವಿಧಾನವೊಂದು ಪತ್ತೆಯಾಯಿತು. ಈ ಪದ್ಧತಿಯೆಂದರೆ ಮೃತಹೊಂದಿದ ವ್ಯಕ್ತಿಯನ್ನು ಬೆಟ್ಟದ ಮೇಲಿನ ಬಂಡೆಯೊಂದಕ್ಕೆ ಒರಗಿಸಿ ಕುಳ್ಳಿರಿಸಿ ಅದರ ಮೇಲೆ ಸಣ್ಣ ಪುಟ್ಟ ಕಲ್ಲುಗಳ ರಾಶಿಯನ್ನು ಪೇರಿಸಿ ಗುಡ್ಡೆ ಮಾಡಿ

ಶವಸಂಸ್ಕಾರವನ್ನು ಮುಗಿಸುವುದೇ ಆಗಿದೆ.[೭] ಕರ್ನಾಟಕದ ಇತರ ಕೆಲ ಭಾಗಗಳಲ್ಲಿ ತುಸು ಭಿನ್ನವಾಗಿ ಕಂಡುಬರುವ ಇಂತಹ ಪದ್ಧತಿಗಳು ಬೃಹತ್ ಶಿಲಾ ಸಂಸ್ಕೃತಿಯಿಂದ ಟಿಸಿಲೊಡೆದ ರೂಪಗಳಿರಬಹುದೇ? ಎಂಬ ಪ್ರಶ್ನೆಗೆ ಇಲ್ಲಿನ ಕಲ್ಲುಮಲ್ಲಯ್ಯ ಪದ್ಧತಿಯು ಸಾಕಷ್ಟು ಗ್ರಾಸವನ್ನು ಒದಗಿಸುವ ಸಾಧ್ಯತೆ ಇದೆ.[*]

ಆದಿಚರಿತ್ರ ಕಾಲ

ಸಂಗ್ರಹದಲ್ಲಿ ಲಭ್ಯವಾದ ಪ್ರಾಚ್ಯವಸ್ತುಗಳನ್ನು ಕಾಲಾನು ಕ್ರಮಣಿಕೆಯಲ್ಲಿ ವಿಂಗಡಿಸುವಾಗ ಅನಂತರದ ಕಾಲದ ಲಭ್ಯ ವಸ್ತುಗಳೆಂದರೆ, ಕ್ರಿ. ಶ. ಆರಂಭದ ಆಸುಪಾಸಿನ ಕಾಲಕ್ಕೆ ಸೇರುವ ಆದಿಚರಿತ್ರಕಾಲದ ಪ್ರಾಚ್ಯವಸ್ತುಗಳು. ಇವು ತೆಳುದೇಹದ ನಯವಾದ ಮೈಯುಳ್ಳ ಶುದ್ಧಮಣ್ಣಿನ ವಸ್ತುಗಳು. ಇವುಗಳಲ್ಲಿ ಕೆಂಪು ಲೇಪನ ಕಂಡುಬಂದಿದ್ದು, (Red slipped pottery) ಆ ಕಾಲದ ಆಕರ್ಷಕ ಮಡಕೆಗಳ ಸಾಲಿಗೆ ಸೇರಬಹುದಾಗಿದೆ. ಇತರ ಆದಿಚರಿತ್ರ ನೆಲೆಗಳಲ್ಲಿ ದೊರೆತ ಉದ್ದನೆಯ ಗಾಜಿನಮಣಿಗಳು ಇಲ್ಲಿ ಲಭ್ಯವಾಗಿದ್ದು, ಮಧ್ಯದಲ್ಲಿ ದಾರವನ್ನು ಪೋಣಿಸಲು ರಂಧ್ರವನ್ನು ಕೊರೆಯಲಾಗಿದೆ. ಸುಮಾರು ಒಂದು ಸೆಂ.ಮೀ. ಉದ್ದವಾದ ಚಪ್ಪಟೆಯ ಬದಿಗಳನ್ನುಳ್ಳ ಈ ಮಣಿಯನ್ನು ಹಸಿರು ಕಲ್ಲಿನಿಂದ ತಯಾರಿಸಲಾಗಿದೆ.

ಒಂದು ಕಿ.ಮೀ. ವಿಸ್ತಾರವಾದ ಈ ಗುಡ್ಡದ ರಾಶಿಯ ಮೇಲೆ ಬಹುಪಾಲು ಸಮತಟ್ಟಾದ ಭೂಮಿಯು ಕಂಡುಬಂದಿದ್ದು, ಇದು ಪಶ್ಚಿಮಕ್ಕೆ ನಡೆದಂತೆ ವಿಸ್ತಾರಗೊಳ್ಳುತ್ತದೆ. ಅಲ್ಲದೆ ಪಶ್ಚಿಮ ಭಾಗದಲ್ಲಿ ವಾಸಯೋಗ್ಯವಾದ ಅನೇಕ ವಿಸ್ತಾರ ಗುಹೆಗಳಿದ್ದು, ಅವುಗಳನ್ನೆಲ್ಲ ನಂತರದ ಮಧ್ಯಕಾಲೀನ ಯುಗದಲ್ಲಿ ಧಾರ್ಮಿಕ ಸ್ಥಳಗಳನ್ನಾಗಿ ಪರಿವರ್ತಿಸಿರುವ ಕಾರಣ ಅಲ್ಲಿನ ಪುರಾತತ್ವ ಪರಿಸರವೆಲ್ಲವೂ ನಾಶವಾಗಿದೆ. ಪಶ್ಚಿಮದ ತುದಿಯಲ್ಲಿ ಗುಡ್ಡವು ಅತಿ ಎತ್ತರವಾಗಿದ್ದು, ಒಂದು ಬೃಹತ್ತಾದ ಗವಿಯಲ್ಲಿ ರಂಗನಾಥ ಸ್ವಾಮಿಯ ದೇಗುಲವೊಂದನ್ನು ನಂತರದ ಕಾಲದಲ್ಲಿ ನಿರ್ಮಿಸಿ ಪೂಜಿಸಲಾಗುತ್ತಿದೆ. **ವಡ್ಡಗಲ್ಲು ರಂಗನಾಥಸ್ವಾಮಿ ಬೆಟ್ಟ** ಎಂದೇ ಖ್ಯಾತವಾಗಿರುವ ಈ ಗಿರಿದೇಗುಲವು ಸುತ್ತಮುತ್ತಲ ಜನರಿಗೆ ಇಂದಿಗೂ ಒಂದು ಪ್ರಸಿದ್ಧ ಯಾತ್ರಾಸ್ಥಳ. ಇಲ್ಲಿನ ಸುಂದರ ಗುಹೆಗಳಲ್ಲಿ ಇತ್ತೀಚಿನ ಶತಮಾನಗಳಲ್ಲಿ ಸಾಧು-ಸಂತರುಗಳು ಮನೆ ಮಾಡಿಕೊಂಡಿದ್ದು, ಒಳ ಪರಿಸರವನ್ನೆಲ್ಲಾ ಸುಣ್ಣದಿಂದ ಮುಚ್ಚಿಬಿಟ್ಟಿರುವುದೇ ಅಲ್ಲದೆ, ನೆಲವನ್ನು ಆಳವಾಗಿ ಅಗೆದು ಶುದ್ಧೀಕರಿಸಲಾಗಿದ್ದು ಮೂಲ ಪ್ರಾಚ್ಯಪರಿಸರವನ್ನೆಲ್ಲಾ ಹಾಳುಗೆಡವಲಾಗಿದೆ. ಆದರೆ ನಮ್ಮ ಅಧ್ಯಯನದ ಸ್ಥಳವು ಜನಸಂಪರ್ಕದಿಂದ ದೂರವಾಗಿ ಉಳಿದಿರುವ ಪೂರ್ವದ ಅಂಚಿನ ಭಾಗವಾಗಿದ್ದು ಇಲ್ಲಿಗೆ ಜನಪ್ರವೇಶವೇ ಇಲ್ಲದ ಕಾರಣ ಹಾಗೆಯೇ ಉಳಿದು ಬಂದಿದೆ.

ಉಪಸಂಹಾರ

ಮೈಸೂರು ಜಿಲ್ಲೆಯಲ್ಲಿ ಈವರೆಗೆ ಪತ್ತೆಯಾಗಿರುವ ಶಿಲಾಯುಗದ ನೆಲೆಗಳು ಕಾವೇರಿ ನದೀತೀರದಲ್ಲಿ ಮಾತ್ರ ಕಂಡುಬಂದಿದ್ದು, ಈಗ ಪತ್ತೆಯಾಗಿರುವ ಬೊಮ್ಮನಹಳ್ಳಿ ನೆಲೆಯು ನದೀತೀರದಿಂದ ಏಳೆಂಟು ಕಿ.ಮೀ.ಗಳ ದೂರದಲ್ಲಿ ಕಂಡುಬಂದಿರುವುದು ಒಂದು ಅಧ್ಯಯನಯೋಗ್ಯ ಅಂಶವಾಗಿದೆ. ಕಾವೇರೀ ತೀರದ ನಿವಾಸಿಗಳು ಸಂಪೂರ್ಣ ಕೃಷಿ ಆಧಾರಿತ ಬದುಕನ್ನು ಅವಲಂಬಿಸಿದ್ದ ಸ್ಪಷ್ಟ ಕುರುಹುಗಳು ಅಲ್ಲಿ ದೊರೆತಿರುವ ಪ್ರಾಚ್ಯವಸ್ತುಗಳಿಂದ ದೃಢಪಟ್ಟಿದೆ. ಹಾಗೂ ಅಲ್ಲಿನ ನದಿಯ ಸಾಮೀಪ್ಯತೆ ಕೃಷಿಗೆ ಪುಷ್ಟಿ ನೀಡುವ ಮತ್ತೊಂದು ಅಂಶ. ಆದರೆ, ಬೊಮ್ಮನಹಳ್ಳಿಯ ಗುಡ್ಡದ ನಿವೇಶನವು, ಸನಿಹದಲ್ಲಿ ಯಾವುದೇ ಸ್ವಾಭಾವಿಕ ನೀರಿನ ಹರಿವನ್ನೂ ಪಡೆಯದಿದ್ದು, ಕಾವೇರೀ ನದೀಪಾತ್ರದಿಂದ ಏಳೆಂಟು ಕಿ.ಮೀ.ಗಳಷ್ಟು ದೂರದಲ್ಲಿದೆ. ಅಲ್ಲದೆ ಸಮತಟ್ಟಾದ ನೆಲದಮೇಲೆ ಇವರು ಇನ್ನೂ ನೆಲೆಯೂರದೆ ಬೆಟ್ಟವನ್ನು ಆಶ್ರಯಿಸುವ ಅಂಶವು ಇಲ್ಲಿನ ಜನರು ಕೃಷಿಯನ್ನು 'ಅವಲಂಬಿಸಿರಲಿಲ್ಲ' ಎಂಬ ಅಂಶಕ್ಕೆ ಇಂಬು ನೀಡುತ್ತದೆ. ಆದರೆ, ಇಲ್ಲಿ ಲಭ್ಯವಾಗಿರುವ ಧಾನ್ಯವನ್ನು ಅರೆಯುವ ***ಅರೆಗಲ್ಲು*** (Rubbers) ಮತ್ತು **ಕುಟ್ಟುಗಲ್ಲುಗಳು** (Pounders) ಇವರಿಗೆ

---

* i. ಅಚ್ಚರಿ ಎಂದರೆ ಬೆಂಗಳೂರು ಜಿಲ್ಲೆ ಗುಡೇಮಾರನಹಳ್ಳಿ ಪ್ರದೇಶದಲ್ಲಿಯ ವೀರಶೈವರಲ್ಲಿ ಗರ್ಭಿಣಿ ಸ್ತ್ರೀ ಸತ್ತಾಗ ಊರಿನ ಬಳಿಯ ಗುಡ್ಡದ ಬಳಿಗೆ ಆ ಶರೀರವನ್ನು ಒಯ್ದು ಬಂಡೆಯ ಮಧ್ಯೆ ಕೂಡಿಸಿ ಸುತ್ತ ಕಲ್ಲುಗಳನ್ನು ಇಡುತ್ತಾರೆ. ಇದಕ್ಕೆ ಕಲ್ಲುಸೇವೆ, ಕಲ್ಲು ಬಾಣಸೇವೆ ಎನ್ನುತ್ತಾರೆ. ಕಲ್ಲುಸೇವೆ ಮಾಡಿದ ಬಳಿಕ ಆಕೆಯ ಗಂಡ ೧೧ ದಿನಗಳ ಕಾಲ ಮನೆಗೆ ಬರದೆ ಭಿಕ್ಷೆ ಬೇಡಿ, ಬಂದ ಕಾಸನ್ನು ದೇಗುಲಗಳಿಗೆ ಹೋಗಿ ದಾನ ಮಾಡಿ ಹಿಂದಿರುಗಬೇಕು. ಪ್ರತಿವರ್ಷ ಕಲ್ಲುಸೇವೆ ಶವ ಸಂಸ್ಕಾರದ ಸ್ಥಳದಲ್ಲಿ ಕಳಸ ಪೂಜೆ ಮಾಡುತ್ತಾರೆ. ಇದು ಇತ್ತೀಚಿನವರೆಗೂ ನಡೆದುಬಂದ ಪದ್ಧತಿ.


ii. ಕೆಲ ಆದಿವಾಸಿಗಳಲ್ಲಿ ಸತ್ತವರಿಗೆ ನೆಲ ಅಗೆದು ಗುಂಡಿ ತೆಗೆದು ದಕ್ಷಿಣಕ್ಕೆ ಶವದ ತಲೆಯಿಟ್ಟು ಎಡಮಗ್ಗುಲಾಗಿ ಮಲಗಿಸಿ ಹೂತು, ಮಣ್ಣು ತುಂಬಿದ ಮೇಲೆ ಕಲ್ಲು ಜೋಡಿಸುವುದುಂಟು. ಇದಕ್ಕೆ ಕಲ್ಲುಸೇವೆ ಎನ್ನುತ್ತಾರೆ. ಕುಷ್ಠ ರೋಗಿಗಳನ್ನು ದುಷ್ಟ ಪ್ರಾಣಿಗಳಿಂದ ಕೊಲ್ಲಲ್ಪಟ್ಟವರನ್ನು ಹೂಳುವಾಗ ಕಲ್ಲು ಜೋಡಿಸಬೇಕೆಂಬ ನಿಯಮ ಪಾಲಿಸುತ್ತಾರೆ. ಇದಕ್ಕೆ 'ಕಲ್ಲು ಮಲ್ಲಯ್ಯ' ಎನ್ನುತ್ತಾರೆ. (ನೋಡಿ ಎಚ್. ಎಸ್. ಸಿದ್ಧಗಂಗಪ್ಪ : ಧಾರ್ಮಿಕ ವಿಧಿಗಳ ಸಮೀಕ್ಷೆ, ಬೆಂಗಳೂರು, ಪು. ೭೩, ೭೬)

ಪ್ರಾಚೀನ ಪದ್ಧತಿಗಳು ಆಧುನಿಕ ಪರಿಸ್ಥಿತಿಯಲ್ಲಿಯೂ ಪರಂಪರಾಗತ ಸ್ಮರಣೆಯಾಗಿ ವೈವಿಧ್ಯತೆಯೊಡನೆ ತೋರಿಕೊಂಡಿರುವುದು ಕಾಣಬರುತ್ತವೆ. ಆದರೆ ಕೇವಲ ಆಸೀನ ಭಂಗಿಬಿಟ್ಟು, ಶಯನ ಭಂಗಿಯಲ್ಲಿ ಕೂಡಿದ ಸಂಸ್ಕಾರಕ್ಕೆ ಕಲ್ಲುಸೇವೆ ಕಲ್ಲುಮಲ್ಲಯ್ಯಗಳ ಅನ್ವಯ ಬಾಯ್ದೆರೆಯಲ್ಲೂ ಚಾಲ್ತಿಗೊಂಡಿರುವುದೂ ಗಮನಾರ್ಹ. ಈ ಬಗೆಗೂ ಗಮನಿಸಲು ಚಿಂತನೆಗೆ ಶ್ರೀ ಮೈ. ನಾ. ಶರ್ಮ ಅವರು ಗ್ರಾಸ ಒದಗಿಸಿದ್ದೂ ಸ್ವಾಗತಾರ್ಹ. - (ಸಂ.)


ಧಾನ್ಯವನ್ನು ಬೆಳೆಯುವ ಕಲೆ ಪರಿಚಿತವಿದ್ದಿರಬಹುದಾದ ಅಂಶವನ್ನು ಪುಷ್ಠೀಕರಿಸುತ್ತದೆ. ಅಂದಮೇಲೆ ಇವರು ಇನ್ನೂ ಸಂಪೂರ್ಣವಾಗಿ ಕೃಷಿಯನ್ನು ಅವಲಂಬಿಸದ - ಆದರೆ ಕೃಷಿಯ ಪ್ರಯತ್ನ ಹಾಗೂ ಪ್ರಯೋಗಗಳಲ್ಲಿ ನಿರತರಾಗಿರುವ ಮತ್ತು ಬೆಟ್ಟಗಳ ಮೇಲಣ ಮತ್ತು ಸಮಭೂಮಿಯ ಬದುಕಿನ ನಡುವಣ ಹಂತಾಂತರ ಕಾಲವಾಗಿರುವ (Transitional period) ಮಾಹಿತಿಯನ್ನು ಒದಗಿಸುವಲ್ಲಿ ಯಶಸ್ವಿಯಾಗುತ್ತದೆ.

ಈ ನೆಲೆಯಲ್ಲಿ ಹಸ್ತನಿರ್ಮಿತ ಮಡಕೆಗಳು (Hand-made) ಹಾಗೂ ಚಕ್ರನಿರ್ಮಿತ (Wheel-made) ಮಡಕೆಗಳು ಲಭ್ಯವಾಗಿರುವ ಅಂಶವು ಆದಿ ಹಾಗೂ ಅಂತ್ಯಶಿಲಾಯುಗಗಳ ಅಸ್ತಿತ್ವವನ್ನು ಸಮರ್ಥಿಸುತ್ತವೆ ಎಂದಾಯಿತು. ಒಟ್ಟಿನಲ್ಲಿ ನವಶಿಲಾಯುಗದ ಆದಿಭಾಗ (Early Neolithic) ಮತ್ತು ನವಶಿಲಾಯುಗದ ಅಂತ್ಯಭಾಗಗಳ (Late Neolithic) ಮಿಲನರೇಖೆಯು (Meeting point) ಈ ಪ್ರಾಚ್ಯನೆಲೆಯಲ್ಲಿ ಕಂಡುಬರುತ್ತದೆ. ಬೇಟೆಯ ಹಂತದಿಂದ ಕೃಷಿಯ ಬೆಳವಣಿಗೆಗೆ ರೂಪಾಂತರ ಹೊಂದಿದ ಪರ್ವಕಾಲ ಇದಾಗಿರುವುದು ಸ್ಪಷ್ಟವಾಗುತ್ತದೆ. ಅಂತೆಯೇ, ಈ ಕಾಲ ಸಮೀಪದ ಶಿಲಾ ತಾಮ್ರ ನೆಲೆಗಳಾದ ನರಸೀಪುರ ಮತ್ತು ಹೆಮ್ಮಿಗೆಗಳಿಗೆ ತುಸು ಮುನ್ನಿನ ಅವಧಿ (ಕ್ರಿ. ಪೂ. ೨೦೦೦ಕ್ಕೆ ಮುನ್ನಿನ ಕಾಲ) ಎಂದು ತರ್ಕಿಸಬಹುದು.

ಇನ್ನು ನವಶಿಲಾಯುಗಕ್ಕೆ ಸೇರುವ ಮತ್ತೊಂದು ಮುಖ್ಯ ಪ್ರಾಚ್ಯವಸ್ತುವೆಂದರೆ, ***ಕೊರಳುಪೀಠ***. ನರಸೀಪುರ ಮತ್ತು ಹೆಮ್ಮಿಗೆಗಳಲ್ಲಿ ದೊರೆತಿರುವ ಕೊರಳುಪೀಠದ ಮಾದರಿಯಲ್ಲಿಯೇ



ಇಲ್ಲಿಯೂ ದೊರಕಿದೆ. ಈಜಿಪ್ಟಿನ ಮಮ್ಮಿಗಳ ತಲೆಯಡಿಯಲ್ಲಿ ಇಟ್ಟಿರುವ ಇಂತಹ ಕೊರಳುಪೀಠಗಳ ಪರಿಚಯ ಪುರಾತತ್ವಜ್ಞರಿಗೆ ಇತ್ತಾದರೂ, ಅದು ಭಾರತದಲ್ಲಿ ದೊರೆಯುವ ಸಾಧ್ಯತೆಗಳ ಬಗೆಗೆ ಅರಿವಿರಲಿಲ್ಲ. ಆದರೆ ಒಮ್ಮೆ ಪುರಾತತ್ವಜ್ಞ ಡಾ. ಆಲ್ಚಿನ್‌ರವರಿಂದ ಈ ಕೊರಳುಪೀಠದ ಮಾಹಿತಿ ನಮೂದಿತವಾಗಿತ್ತಾದರೂ, ಅದು ಲಭ್ಯವಾಗಿಯೇ ಇರಲಿಲ್ಲ! ಆದರೆ ೧೯೭೦ರಲ್ಲಿ ನರಸೀಪುರದ ಉತ್ಖನನದಲ್ಲಿ ಇದು ಹೊರಬಂದಾಗ, ಒಮ್ಮೆಲೇ ಪುರಾತತ್ವ ಲೋಕವನ್ನು ಬೆರಗುಗೊಳಿಸಿತ್ತು. ಈಜಿಪ್ಟಿನಲ್ಲಿ ಹೆಣಗಳ ಕೊರಳ ಕೆಳಗೆ ಇಟ್ಟ ವಸ್ತುವು ಪ್ರಶಸ್ತಶಿಲೆ ಅಥವಾ ಅಮೂಲ್ಯ ಲೋಹಗಳಿಂದ ಮಾಡಲ್ಪಟ್ಟಿದ್ದರೆ, ಭಾರತದಲ್ಲಿ ಅದು ಸುಟ್ಟ ಮಣ್ಣಿನಲ್ಲಿ ಲಭ್ಯವಾಯಿತು. ಈ ಕೊರಳುಪೀಠದ ಅಪರೂಪದ ಮಾದರಿಯು ನರಸೀಪುರ ಮತ್ತು ಹೆಮ್ಮಿಗೆಗಳಿಗೆ ಎಂಟು-ಹತ್ತು ಕಿ.ಮೀ. ಸನಿಹದ ಬೊಮ್ಮನಹಳ್ಳಿಯಲ್ಲಿ ದೊರೆತಿರುವುದು ಎರಡೂ ನೆಲೆಗಳ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.



ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ವಿಶ್ಲೇಷಿಸಿದಾಗ, ಬೃಹತ್‌ಶಿಲಾ ಸಮಾಧಿಗಳು ಬೊಮ್ಮನಹಳ್ಳಿಯ ಸುತ್ತಮುತ್ತಲೂ ಕಂಡುಬರುವುದೇ ಇಲ್ಲ! ಹಾಗಾದರೆ, ಕಬ್ಬಿಣಯುಗದ ಇಲ್ಲಿನ ಜನರ ಶವಸಂಸ್ಕಾರದ ಪದ್ಧತಿಯೇನು ? ಎಂಬುದು ಚಿಂತನಾರ್ಹ ಪ್ರಶ್ನೆ.[೮]

ಅನಂತರದ ಕಾಲವಾದ ಆದಿಚರಿತ್ರ ಕಾಲಕ್ಕೆ ಸಂಬಂಧಿಸಿದ ಪ್ರಾಚ್ಯವಸ್ತುಗಳನ್ನು ಅವಲೋಕಿಸಿದಾಗ, ಈ ನಿವೇಶನದಲ್ಲಿ ಆ ಕಾಲದ ಸ್ಪಷ್ಟ ಕುರುಹಾದ ಬಿಳಿಯ ಪಟ್ಟೆಗಳ ಮಡಕೆಗಳು (Kevelin painted ware) ಕಂಡುಬರುವುದಿಲ್ಲ! ಅಥವಾ ಯಾವುದೇ ಬಗೆಯ ನಾಣ್ಯಗಳೂ ಈ ನಿವೇಶನದಲ್ಲಿ ಲಭ್ಯವಿಲ್ಲ. ಮತ್ತೊಂದು ವಿಭಿನ್ನ ಅಂಶವೆಂದರೆ, ಈವರೆಗೆ ಪತ್ತೆಯಾಗಿರುವ *ಆದಿಚರಿತ್ರಕಾಲದ ಎಲ್ಲ ನಿವೇಶನಗಳೂ ಕೇವಲ ನದೀ ತೀರದಲ್ಲಿ ಅಥವಾ ಸಮತಟ್ಟಾದ ನೆಲದ ಮೇಲೆ ಮಾತ್ರ ಕಂಡುಬಂದಿದ್ದು, ಪ್ರಸ್ತುತ ಬೊಮ್ಮನಹಳ್ಳಿಯ ನೆಲೆಯು ಗುಡ್ಡವೊಂದರ ಮೇಲೆ ಕಂಡು ಬಂದಿರುವುದು ಒಂದು ವಿಶೇಷ ಅಂಶವಾಗಿ ಕಂಡುಬರುತ್ತದೆ.*

ಒಟ್ಟಾರೆ, ಪ್ರಸ್ತುತ ಬೊಮ್ಮನಹಳ್ಳಿಯ ಪುರಾತತ್ವ ನೆಲೆಯು ನವಶಿಲಾಯುಗದ ಆದಿಭಾಗದಿಂದ ಪ್ರಾರಂಭವಾಗಿ, ನವಶಿಲಾಯುಗದ ಅಂತ್ಯಭಾಗದವರೆಗೆ ಮುಂದುವರೆದು, ಬೃಹತ್ ಶಿಲಾ ಸಂಸ್ಕೃತಿಯನ್ನೂ ಮೈಗೂಡಿಸಿಕೊಂಡಿದೆ. ಅಲ್ಲದೆ,

ಆದಿಚರಿತ್ರಕಾಲದ ಮತ್ತು ಮಧ್ಯಕಾಲೀನ ಯುಗದವರೆಗೆ ಮಾನವನ ಸಂಸ್ಕೃತಿಗೆ ನಿರಂತರ ಆಶ್ರಯ ನೀಡಿರುವ ಕರ್ನಾಟಕದ ಕೆಲವೇ ತಾಣಗಳಲ್ಲಿ ಒಂದಾಗಿದೆ ಎಂದು ಹೇಳಬಹುದು. ಅಲ್ಲದೆ ಬೃಹತ್ ಶಿಲಾ ಸಮಾಧಿಗಳ ಅಲಭ್ಯತೆ, ಆದಿಚರಿತ್ರಕಾಲದಲ್ಲೂ ಬೆಟ್ಟದಲ್ಲೇ ಉಳಿದಿದ್ದ ಕೆಲ ವಿಷಯಗಳು ಈ ಪ್ರಾಚ್ಯನೆಲೆಯು ಇತರೆಡೆಗಳಿಗಿಂತ ಭಿನ್ನವಾಗಿರುವ ಅಂಶಗಳಾಗಿವೆ.

ಒಟ್ಟಿನಲ್ಲಿ ಸರ್ವೇಕ್ಷಣದಲ್ಲಿಯೇ, ದಾಖಲೆ ಸಂಖ್ಯೆಯ ಪ್ರಾಚ್ಯವಸ್ತುಗಳನ್ನು ನೀಡಿರುವ ಈ ನಿವೇಶನದಲ್ಲಿ ಶಾಸ್ತ್ರೀಯ ಉತ್ಖನನವು ನಡೆದಲ್ಲಿ, ಮತ್ತಷ್ಟು ನಿಖರ ಚಿತ್ರಣಗಳು ದೊರೆಯುವುದೇ ಅಲ್ಲದೆ, ಕರ್ನಾಟಕದ ಪ್ರಾಗೈತಿಹಾಸಿಕ ಭೂಪಟದಲ್ಲಿ ಬೊಮ್ಮನಹಳ್ಳಿಯು ಒಂದು ಪ್ರಮುಖ ಪುರಾತತ್ತ್ವ ನೆಲೆಯಾಗಿ ನಿಲ್ಲುವ ಸಾಧ್ಯತೆ ಇದೆ

(ಈ ಲೇಖನವನ್ನು ಸಿದ್ಧಪಡಿಸುವಲ್ಲಿ ತಮ್ಮ ಅಮೂಲ್ಯ ಅಭಿಪ್ರಾಯಗಳಿಂದ ಈ ಲೇಖನದ ಮೌಲ್ಯವನ್ನು ಹೆಚ್ಚಿಸಿದ ಪುರಾತತ್ತ್ವ ವಿದ್ವಾಂಸರಾದ ಡಾ|| ಎಸ್. ನಾಗರಾಜು ಹಾಗೂ ಡಾ|| ಎಮ್. ಎಸ್. ಕೃಷ್ಣಮೂರ್ತಿ ಅವರುಗಳಿಗೆ ಲೇಖಕ ಋಣಿ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ನರಸೀಪುರದ ಉತ್ಖನನದ ವರದಿ, ಡಾ|| ಎಂ. ಶೇಶಾದ್ರಿ, ೧೯೭೧.
*೨. ಹೆಮ್ಮಿಗ ಉತ್ಖನನದ ವರದಿ, ಎಂ. ಹನುಮಂತ ರಾವ್ ಮತ್ತು ಎಸ್. ನಾಗರಾಜು.
*೩. ನರಸೀಪುರದ ಉತ್ಖನನದ ವರದಿ, ಡಾ. ಎಂ. ಶೇಶಾದ್ರಿ, ೧೯೭೧.
*೪. ಆಲ್ಚಿನ್, ಪಿಕ್ಲಿಹಾಳದ ಉತ್ಖನನದ ವರದಿ.
*೫. ಹೆಮ್ಮಿಗೆ ಉತ್ಖನನದ ವರದಿ, ಎಂ. ಹನುಮಂತ ರಾವ್ ಮತ್ತು ಎಸ್. ನಾಗರಾಜು.
*೬. ಡಾ|| ಎಮ್. ಎಸ್. ನಾರಾಜಾರಾವ್.
*೭. ಮೈ. ನಾ. ಶರ್ಮ : 'ಕಲ್ಲು ಮಲ್ಲಯ್ಯ - ಒಂದು ಅಪರೂಪದ ಶವ ಸಂಸ್ಕಾರ ಪದ್ಧತಿ', ಇತಿಹಾಸ ದರ್ಶನ, ೧೪, ೧೯೯೮, ಪು. ೬-೭.
*೮. ಡಾ. ಎಂ. ಎಸ್. ಕೃಷ್ಣಮೂರ್ತಿ: 'ಕಲ್ಸೇವೆ' - ಇತಿಹಾಸ ದರ್ಶನ, ೧೪, ೧೯೯೯, ಪು. ೩.

ಜೆ. ಟಿ. ಜಯರಾಮಯ್ಯ*
ಲೋಕೇಶ ಎಂ.**
ರಾಜೇಶ್‌ಬಾಬು ಬಿ. ಎಸ್.***

ಬಯಲು ಬಂಡೆಚಿತ್ರ ಮತ್ತು ಶಿಲಾಯುಗದ ನೆಲೆ ವೇದಿಕ್ ನಗರ ಮತ್ತು ಬಯಲುಬಂಡೆಚಿತ್ರದ ನೆಲೆ ದಾಬಾನುಗುಂಡು

ಬಹಳ ಕಾಲದ ಹಿಂದೆ ಅತ್ಯಂತ ನಿಕಟವರ್ತಿಯಾಗಿ ನಿಸರ್ಗದೊಂದಿಗೆ ಹೊಂದಿಕೊಂಡು ಮನುಷ್ಯನು ಪಶು-ಪಕ್ಷಿಗಳೊಡನೆ, ಗಿಡ-ಮರಗಳ, ಹೂ-ಬಳ್ಳಿಗಳ, ನದಿ-ಬೆಟ್ಟಗಳ, ಕಾಡು-ಮೇಡುಗಳ ಪರಿಸರದಲ್ಲಿ ತನ್ನ ಜೀವನವನ್ನು ಸುಧಾರಿಸಿ ಕೊಳ್ಳುತ್ತಾ ಸಾಗಿಸುತ್ತಿದ್ದಾಗ, ಸಹಜವಾಗಿಯೇ ಅವನ ವಿಕಸಿಸುತ್ತಿದ್ದ ಮನಸ್ಸು, ಹೃದಯ ಇವೆಲ್ಲ ಚೆಲುವಿನ ಕಡೆಯೇ ಹರಿಯಿತು. ಇದರಿಂದ ಅವನಲ್ಲಿ ಅವರ್ಣನೀಯ ಸಂತೋಷ ಉಂಟಾಗಿರ ಬೇಕು. ಇದನ್ನು ವ್ಯಕ್ತಪಡಿಸುವ ಸಂದರ್ಭವೇ ಕಲಾಸೃಷ್ಟಿಗೆ ನಾಂದಿಯಾಯಿತು. ಈತನು ಚಿತ್ರಪಟದಂತಿರುವ ಕಲ್ಲಾಸರೆಯ ಮೇಲೆಯೇ ಅಲ್ಲಲ್ಲಿ ಬಿದ್ದಿದ್ದ 'ಕೆಂಪು, ಹಸಿರು, ಕಪ್ಪು, ಹಳದಿ, ಬಿಳಿ' ಮಣ್ಣಿನ ಗಟ್ಟಿಗಳಿಂದ ಬಣ್ಣ ದ್ರವ್ಯಗಳನ್ನು ಮತ್ತು ಗಿಡದ ಟೊಂಗೆಯ ತುದಿಯನ್ನು ಜಜ್ಜಿ ಇಲ್ಲವೇ ಪ್ರಾಣಿಗಳ ಕೂದಲನ್ನು ಒಟ್ಟು ಮಾಡಿ ಕಟ್ಟಿ ಮಾಡಿದ ಕುಂಚಗಳಿಂದ ಅಥವಾ ಉದ್ದನೆಯ ಕಲ್ಲು ತುಂಡಿನಿಂದ ಬಯಲು ಬಂಡೆಯ ಮೇಲೆ ಒಂದೇ ಪ್ರಕಾರವಾಗಿ ಕುಟ್ಟುವುದರಿಂದ, ಕೊರೆಯುವುದರಿಂದ ಅಥವಾ ಗಾಳಿಸಿದ ಕಲಸು ಮಣ್ಣಿನಿಂದ ಬೇಕಾದ ಗಾತ್ರದ ಚಿತ್ರವನ್ನು ಕೆತ್ತುವುದರಿಂದ ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಂಡ ಚಿತ್ರಗಳನ್ನೋ, ಗೊಂಬೆಗಳನ್ನೋ ಸೃಷ್ಟಿಸಲು ಶುರು ಮಾಡಿದ.

ನಮ್ಮ ದೇಶದಲ್ಲಿಯೂ ಗವಿವರ್ಣ ಮತ್ತು ಬಂಡೆ ಚಿತ್ರಗಳ ಶೋಧನೆ ಆಕಸ್ಮಿಕವಾಗಿ ಅಲ್ಲಲ್ಲಿ ೧೮೪೦ ರಿಂದ ಪ್ರಾರಂಭ ವಾಯಿತೆನ್ನಬಹುದು. 'ಹೂಬರ್ಟ್‌ನಾಕ್ಸ್' ಬಳ್ಳಾರಿಯ ಸಮೀಪದಲ್ಲಿರುವ 'ಕುಪ್ಪಗಲ್ಲು' ಗ್ರಾಮದಲ್ಲಿರುವ ಗುಡ್ಡಗಳಲ್ಲಿ ದೊಡ್ಡ-ದೊಡ್ಡ ಗುಂಡು ಕಲ್ಲುಗಳ ಮೇಲೆ ಕುಟ್ಟಿ/ಗೀರಿ ಬಿಡಿಸಿದ ಚಿತ್ರಗಳನ್ನು ಸುಮಾರು ೧೮೪೦ರ ಸಮಯದಲ್ಲಿ ನೋಡಿ, ಅವುಗಳ ಛಾಯಾಚಿತ್ರವನ್ನೂ ತೆಗೆದು ರಾಬರ್ಟ್ ಬ್ರೂಸ್‌ಫುಟ್ ರವರಿಗೆ ಕಳುಹಿಸಿಕೊಟ್ಟರು. ಕರ್ನಾಟಕದಲ್ಲಿ ೧೯೩೫ ರಲ್ಲಿ 'ಲಿಯೋನಾರ್ಡೋ ಮನ್' ಅವರು ಹಿರೇಬೆನಕಲ್ ಗುಡ್ಡಗಳಲ್ಲಿ ಸ್ವಾರಸ್ಯಕರವಾದ ಮೂರು ಗವಿವರ್ಣಚಿತ್ರಗಳನ್ನು ಸುಮಾರು ಅದೇ ಸಮಯದಲ್ಲಿ ಭಿಲ್ಲಮರಾಯನಗುಡ್ಡದಲ್ಲಿ ಕುಟ್ಟಿದ ಮತ್ತು ಗೀರು ಚಿತ್ರಗಳನ್ನು (Burnsings & Engravings) ಕಂಡು ಹಿಡಿದರು.

ಈ ಚಿತ್ರಗಳಲ್ಲಿ ಎರಡು ವಿಧ : ೧) ಗವಿಯೊಳಗೆ ಅಥವಾ ಕಲ್ಲಾಸರೆಯ ಒಳಬದಿಯಲ್ಲಿ ಕೆಮ್ಮಣ್ಣಿನ ಬಣ್ಣದಲ್ಲಿ ಬಿಡಿಸಿದ ಚಿತ್ರಗಳು. ಮತ್ತು ೨) ಬಯಲು ಬಂಡೆಯ ಮೇಲೆ ಕುಟ್ಟಿ ಅಥವಾ ಚೂಪಾದ ಸಾಧನದಿಂದ ಸ್ಪಷ್ಟ ಗೆರೆಗಳನ್ನು ಮೂಡಿಸಿದ ಚಿತ್ರಗಳು.

ನಮ್ಮ ಇತ್ತೀಚಿನ ಕ್ಷೇತ್ರಕಾರ್ಯದ ಸಮಯದಲ್ಲಿ ಮಂಡ್ಯದ ಹತ್ತಿರದ ತೂಬಿನಕೆರೆ ಬಳಿ ಇರುವ (ಮಂಡ್ಯ - ಮೈಸೂರು ಹೆದ್ದಾರಿ) ವೇದಿಕ್ ನಗರದ ಬಳಿ ಇರುವ ಗುಡ್ಡದಲ್ಲಿ ಬಯಲು ಬಂಡೆಯಲ್ಲಿ ರೇಖಾಚಿತ್ರಗಳನ್ನು ಮತ್ತು ಶಿಲಾಯುಗದ ನೆಲೆಗಳನ್ನು ಪತ್ತೆ ಹಚ್ಚಿದೆವು. ಒಂದೇ ಸ್ಥಳದಲ್ಲಿ ಬಂಡೆಯ ಮೇಲಿನ ರೇಖಾಚಿತ್ರಗಳು ಮತ್ತು ಶಿಲಾಯುಗದ ನೆಲೆಗಳು ಕಂಡುಬರುವುದು ಅಪರೂಪವೆನ್ನಲಾಗಿದೆ. ಕ್ವಾರಿ ಕೆಲಸ ನಡೆಯುತ್ತಿರುವುದರಿಂದ ಹಲವಾರು ಶಿಲಾಸಮಾಧಿಗಳು ಹಾಳಾಗಿವೆ. ಕೆಲವು ಕಲ್ಲಾಸರೆ ಮತ್ತು ಬಂಡೆಗಳ ಮೇಲೆ ರೇಖಾಚಿತ್ರಗಳು ಉಳಿದುಕೊಂಡಿವೆ. ಬೆಟ್ಟದ ಮೇಲೆ ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿಯೇ ವೃತ್ತಾಕಾರದ ಸಮಾಧಿಗಳಿವೆ.

ಈ ಬಯಲು ಬಂಡೆಯಲ್ಲಿ ನಮಗೆ ದೊರೆತಿರುವ ಚಿತ್ರ 'ಚಕ್ರವ್ಯೂಹ' ಆಗಿದೆ. ಇಂತಹ ಬಯಲುಬಂಡೆ ಚಿತ್ರಗಳಲ್ಲಿ ಸಾಮಾನ್ಯವಾಗಿ ಗೂಳಿಗಳೇ ಬಹಳ. ಕಾಡುಕೋಣ, ಜಿಂಕೆಗಳು ಕಡಿಮೆ; ಮನುಷ್ಯನ ಚಿತ್ರವೂ ತೀರ ಕಡಿಮೆ. ಈ ಚಿತ್ರವ್ಯೂಹದ ವೈಶಿಷ್ಟ್ಯತೆ ಎಂದರೆ ಬೃಹದಾಕಾರವಾದ ಬಂಡೆಯ ಪಕ್ಕದಲ್ಲಿ ಸಣ್ಣ ಪ್ರಮಾಣದ ಚಪ್ಪಟೆಯ ಕಲ್ಲಿನ ಮೇಲೆ ಒಂದು ಅಡಿ ವ್ಯಾಸವುಳ್ಳ ಚಕ್ರವ್ಯೂಹವನ್ನು ಬಿಡಿಸಿ ಕೆಂಪು ಬಣ್ಣವನ್ನು ಗೆರೆಗಳಿಗೆ

* ಉಪನ್ಯಾಸಕರು, ವಿವೇಕಾನಂದ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು - ೫೬೦ ೦೧೦.
** ಸಂಖ್ಯೆ ೩೨೩೭, ೩ನೇ ಕ್ರಾಸ್, 'ಲಲಿತ ಸದನ' ರಾಜ್ಯೋತ್ಸವನಗರ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು - ೫೬೦ ೦೭೮.
*** ಸಂಖ್ಯೆ ೨೯, ೧೨ನೇ ಮುಖ್ಯರಸ್ತೆ (ಪುಟ್ಟಯ್ಯ ರಸ್ತೆ), ವೃಷಭಾವತಿನಗರ, ಕಾಮಾಕ್ಷಿಪಾಳ್ಯ ಬೆಂಗಳೂರು - ೫೬೦ ೦೭೯.


ತುಂಬಲಾಗಿದೆ. ಈ ಚಕ್ರವ್ಯೂಹವು ಏಳು ಸುತ್ತುಗಳನ್ನು ಒಳಗೊಂಡಿದ್ದು, ಏಳು ಸುತ್ತಿನ ಕೋಟೆ ವಿನ್ಯಾಸದ ಒಂದು ಗಮನಾರ್ಹ ಅಂಶವಾಗಿದೆ.

ಇದೇ ತರಹದ ಚಕ್ರವ್ಯೂಹವು ಗೋವಾ ಪ್ರದೇಶದಲ್ಲಿ ಸಿಕ್ಕಿರುತ್ತದೆ. ಡಾ|| ಅ. ಸುಂದರ ಅವರ "ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ" ಎಂಬ ಪುಸ್ತಕದ ಚಿತ್ರ : ೪೪ರಲ್ಲಿ ದೊರೆತಿರುವ ಚಕ್ರವ್ಯೂಹವನ್ನು ತೋರಿಸಿದ್ದಾರೆ. ಇದೇ ಮಾದರಿಯಲ್ಲೇ ವೇದಿಕ್ ನಗರದಲ್ಲಿ ದೊರೆತಿರುವ ಬಯಲು ಬಂಡೆಯ ಮೇಲೆ ಏಳುಸುತ್ತಿನ ಚಕ್ರವ್ಯೂಹವು ನಮಗೆ ಕಂಡುಬರುವುದು ಕರ್ನಾಟಕದಲ್ಲಿಯೇ ಪ್ರಥಮ ಸ್ಥಾನವನ್ನೂ, ಭಾರತದ ಬಯಲು ಬಂಡೆ ಚಿತ್ರಗಳಲ್ಲಿ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ ಎಂದು ತಿಳಿಸಲು ನಮಗೆ ಹೆಮ್ಮೆ ಎನಿಸುತ್ತದೆ. ಆದಾಗ್ಯೂ ಬಯಲು ಬಂಡೆ ಚಿತ್ರಗಳ ಹಾಗೂ ಶಿಲಾಯುಗದ ನೆಲೆಯಾಗಿಯೂ ಸಹ ವೇದಿಕ್‌ನಗರ ತನ್ನ ಸ್ಥಾನವನ್ನು ಗಳಿಸಿಕೊಂಡಿದೆ. ಇಲ್ಲಿ ಶಿಲಾಯುಗದ ಕಾಲದ ಸಮಾಧಿಗಳು, ಕಲ್ಲುಗೋರಿಗಳನ್ನು ಕಾಣಬಹುದು. ನಮ್ಮ ಪೂರ್ವಜರು ಬಳಸುತ್ತಿದ್ದ ಆಯುಧಗಳನ್ನು ಇಲ್ಲಿಯ ವಡ್ಡರು ಅವುಗಳನ್ನು ಮೂರು ಗುಡಿಗಳಲ್ಲಿ ಇಟ್ಟು ಅದನ್ನು **ವಡ್ಡರ ಗುಡಿ** ಎಂದು ತಿಳಿದು ಭಯ-ಭಕ್ತಿಗಳಿಂದ, ಪೂಜಿಸುತ್ತ ಬಂದಿದ್ದಾರೆ.



ಬಯಲುಬಂಡೆಚಿತ್ರ ಮತ್ತು ಶಿಲಾಯುಗದ ಸಮಾಧಿಗಳು ಹಾಗೂ ಆಯುಧಗಳು ಮೊಟ್ಟ ಮೊದಲನೆಯದಾಗಿ ಕಂಡುಬರುವುದು ಕರ್ನಾಟಕದಲ್ಲಿಯೇ ಎಂದು ಹೇಳಿದರೆ ತಪ್ಪಾಗಲಾರದು.

ವೇದಿಕ್ ನಗರದ ಪೂರ್ವ ದಿಕ್ಕಿನ 'ರಾಗಿ ಮುದ್ದನಹಳ್ಳಿಯ ಶ್ರೀ ಶನೇಶ್ವರ ದೇವಾಲಯ'ದ ಮುಂಭಾಗದಲ್ಲಿ ನಮಗೆ ೧೦ ರಿಂದ ೧೪ರ ವರೆಗೆ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಶಿಥಿಲಾವಸ್ಥೆಯಲ್ಲಿರುವುದು ಕಂಡುಬಂದಿತು.



ಬಯಲು ಬಂಡೆ ಚಿತ್ರದ ನೆಲೆಯಾಗಿ ದಾಬಾನು ಗುಂಡು: ದಾಬಾನು ಗುಂಡು ಎಂಬ ಹೆಸರೇ ಒಂದು ಸೋಜಿಗದ ಸಂಗತಿಯಾಗಿದೆ. ನಾವು ಚನ್ನಪಟ್ಟಣದಲ್ಲಿ ಇಳಿದು ಖಾಸಗಿ ಮೆಟಡೋರ್ ಮೂಲಕ ಹೋದರೆ 'ಪುಟ್ಟಪ್ಪನ ದೊಡ್ಡಿ' ಸಿಗುತ್ತದೆ. ಈ ದೊಡ್ಡಿಯ ಹಿಂಭಾಗದಲ್ಲಿ ಅಂದರೆ ಪೂರ್ವದಿಕ್ಕಿನಲ್ಲಿ ಬೃಹದಾಕಾರದ ಎರಡು ಬಂಡೆಗಳು ನಮಗೆ ಕಾಣುತ್ತವೆ. ಬೆಟ್ಟದ ತಳಭಾಗದಲ್ಲಿ ಶಿವನ ದೇವಾಲಯವಿದೆ. ದೊಡ್ಡ ಬೆಟ್ಟದ ಪಕ್ಕದಲ್ಲಿ ಸುಮಾರು ಗಾತ್ರದ ಬಂಡೆಯ ಕಲ್ಲಾಸರೆಯಲ್ಲಿ ನಮಗೆ ಕಾಣುವ ಆ ಚಿತ್ರವು ಕಲ್ಲಾಸರೆಯ ಸಮತಲ ಮುಖದಲ್ಲಿ(Plane) ಬಾಣದ ಮೊನಚು, ಮನುಷ್ಯನ ನೀಳ ಚಲನ ಭಂಗಿ ಹಾಗೂ ಸೂಕ್ಷ್ಮವಾದ ಪದ್ಮಾಸನದಲ್ಲಿ ಕುಳಿತಿರುವ ಮನುಷ್ಯ ಎತ್ತಿದ ಎಡಗೈ, ಇಳಿಬಿಟ್ಟ ಕಾಲಿನ ಮನುಷ್ಯ ಇತ್ಯಾದಿ ಮನುಷ್ಯಾಕೃತಿಗಳು ಕಂಡುಬರುತ್ತವೆ. ಅಲ್ಲದೆ ೨ ಭೇದನ ರೂಪಿ ವೃತ್ತವ್ಯಾಸಗಳನ್ನು ಪರಿಧಿಯಲ್ಲಿ ಕೊನೆಗೊಂಡಂತಿರುವ ಚಕ್ರವೊಂದರ ಚಿತ್ರವೂ ಇದೆ. ಚಕ್ರದ ತಳದಲ್ಲಿ ಮೂರು ನಾಮದಂತಹ ಚಿತ್ರ ಅಂಟಿಕೊಂಡಂತಿದೆ.

ಸಾಮಾನ್ಯವಾಗಿ ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳು ಒಂದೆಡೆಯಲ್ಲಿ ಕಂಡುಬರುವುದಿಲ್ಲ. ಆದರೆ ಇಲ್ಲಿಯೂ ಸಹ ನಮಗೆ ಬಯಲು ಬಂಡೆಯ ಕಲ್ಲಾಸರೆಗಳಲ್ಲಿ ಅವು ಕಾಣಸಿಗುತ್ತವೆ. ಇದರ ಕಾಲಮಾನವನ್ನು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಾಗುತ್ತಿಲ್ಲ

(ಈ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಅಭಿರುಚಿ ಅಡ್ವೆಂಚರರ್ಸ್ ಕ್ಲಬ್‌ನ ಸದಸ್ಯರಾದ ಶ್ರೀ ಎಂ. ಎಸ್. ಮರಿದೇವರು ಮತ್ತು ಶ್ರೀ ಎಸ್. ಅರವಿಂದ ಅವರಿಗೆ ನಮ್ಮ ವಂದನೆಗಳು.)


ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಡಾ|| ಅ. ಸುಂದರ : **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ೧೯೯೪, ಬೆಂಗಳೂರು.

ಡಾ॥ ಆರ್. ಗೋಪಾಲ್*

ಶ್ರೀರಂಗರಾಯನ ಒಂದು ಅಪ್ರಕಟಿತ ತಾಮ್ರದ ನಾಣ್ಯ

ಕೊಳ್ಳೇಗಾಲದಲ್ಲಿ ಶ್ರೀ ಎಂ ಮಾದೇಶ್ ಅವರ ನಾಣ್ಯ ಸಂಗ್ರಹವನ್ನು ವೀಕ್ಷಿಸುತ್ತಿದ್ದಾಗ ಈ ನಾಣ್ಯವು ನನ್ನಲ್ಲಿ ಕುತೂಹಲ ವನ್ನುಂಟು ಮಾಡಿತು. ಹೆಚ್ಚು ಗಮನ ಹರಿಸಿದಂತೆ ಇದೊಂದು ಅಪ್ರಕಟಿತ ನಾಣ್ಯ ಎಂದು ಕಂಡುಬಂದಿತು. ಆದ್ದರಿಂದ ಸಂಗ್ರಹಕಾರರ ಅನುಮತಿಯೊಂದಿಗೆ ಈ ನಾಣ್ಯದ ಬಗ್ಗೆ ಲೇಖನವನ್ನು ಮಂಡಿಸುತ್ತಿದ್ದೇನೆ.



ನಾಣ್ಯದ ವಿವರ

ಮುಂಭಾಗ : ಎಡಭಾಗಕ್ಕೆ ಮುಖಮಾಡಿ ನಿಂತಿರುವ ಸಿಂಹದ ಚಿತ್ರವಿದೆ. ಬಲಗಾಲನ್ನು ಮೇಲಕ್ಕೆ ಎತ್ತಿ ರಾಜಗಾಂಭೀರ್ಯ ದಿಂದ ನಡೆಯುತ್ತಿರುವಂತೆ ಕಾಣುತ್ತದೆ. ಬಾಲವನ್ನು ಮೇಲ್ಭಾಗದಲ್ಲಿ ಸುರುಳಿಯಂತೆ ಮಾಡಿದ್ದು ಸಿಂಹವನ್ನು ಸುಂದರವಾಗಿ ಚಿತ್ರಿಸಲಾಗಿದೆ.

ಹಿಂಭಾಗ : ಎರಡು ಸಾಲಿನ ಕನ್ನಡ ಆಲೇಖವಿದೆ. ಮೇಲ್ಭಾಗದಲ್ಲಿ "ಶ್ರೀ" ಎಂದೂ ಎರಡನೇ ಸಾಲಿನಲ್ಲಿ ಆಯತಾಕಾರದ ಚೌಕಟ್ಟಿನ ಒಳಗೆ "ರಂಗ" ಎಂದಿದೆ.

ಲೋಹ : ತಾಮ್ರ	*ದಪ್ಪ :* ೩ ಮಿ.ಮೀ.
ಆಕಾರ : ವೃತ್ತ	*ತೂಕ :* ೭.೭೮೦ ಗ್ರಾಂ
ಅಗಲ : ೨.೧ ಸೆಂ.ಮೀ	

ಈ ನಾಣ್ಯವನ್ನು ಮೊದಲಿಗೆ ನೋಡಿದಾಗ ಹಾಗೂ ವಿಜಯನಗರ ಕಾಲದಲ್ಲಿ ಯಥೇಚ್ಛವಾಗಿ ತಾಮ್ರದ ನಾಣ್ಯಗಳು ದೊರೆಯುವುದರಿಂದ ಇದು ಸಹ ವಿಜಯನಗರ ಕಾಲದ ನಾಣ್ಯವಿರಬಹುದು ಎಂಬ ಭಾವನೆ ಬರುತ್ತದೆ. ಆದರೆ ನಾಣ್ಯದ ತೂಕ, ಅಗಲ ಮತ್ತು ವಿನ್ಯಾಸಗಳನ್ನು ಗಮನಿಸಿದಾಗ, ಇದು ವಿಜಯನಗರ ಕಾಲದ ನಾಣ್ಯವಲ್ಲ ಎಂದು ಹೇಳಬಹುದಾಗಿದೆ. ಸಾಮಾನ್ಯವಾಗಿ ವಿಜಯನಗರ ಕಾಲದ ತಾಮ್ರದ ನಾಣ್ಯಗಳು ಅಗಲವಾಗಿ ಮತ್ತು ದಪ್ಪವಾಗಿ ಇರುತ್ತವೆ. ಆದರೆ ಈ ನಾಣ್ಯ ಅಗಲವಾಗಿ ಮತ್ತು ತೆಳುವಾಗಿದೆ. ಜೊತೆಗೆ ಲಿಪಿಯ ಲಕ್ಷಣಗಳನ್ನು ನೋಡಿದಾಗ, ವಿಜಯನಗರ ಕಾಲದ ನಾಣ್ಯಗಳಲ್ಲಿ ಕಾಣಬರುವ ಆಲೇಖಗಳು ಅಂದರೆ "ಶ್ರೀ ಪ್ರತಾಪ" ಮತ್ತು ಹೆಸರಿನ ನಂತರ "ರಾಯ" ಬರುವುದು ಸಾಮಾನ್ಯ. ಉದಾಹರಣೆಗೆ ಇದು ವಿಜಯನಗರದ ನಾಣ್ಯವಾಗಿದ್ದರೆ, "ಶ್ರೀ ಪ್ರತಾಪ ರಂಗರಾಯ" ಎಂದು ಇರಬೇಕಾಗಿರುತ್ತದೆ. ಇಲ್ಲಿ ಕೇವಲ "ಶ್ರೀ ರಂಗ" ಎಂಬ ಆಲೇಖ ಮಾತ್ರ ಇರುವುದರಿಂದ ವಿಜಯನಗರದ ನಾಣ್ಯವಲ್ಲ ಎಂದು ಸುಲಭವಾಗಿ ಹೇಳಬಹುದಾಗಿದೆ. ಅಲ್ಲದೆ ಪ್ರಮುಖವಾಗಿ ಸಿಂಹದ ಚಿತ್ರವಿರುವ ತಾಮ್ರದ ನಾಣ್ಯಗಳು ವಿಜಯನಗರ ಕಾಲದ ನಾಣ್ಯಗಳಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಈ ನಾಣ್ಯವು ವಿಜಯನಗರ ಕಾಲದ ನಾಣ್ಯವಲ್ಲ ಎಂದು ತಿಳಿಯಬಹುದಾಗಿದೆ.

ಇನ್ನು ವಿಜಯನಗರ ಕಾಲದ ನಂತರ ನಮ್ಮ ಗಮನಕ್ಕೆ ಬರುವುದು ಮೈಸೂರು ಒಡೆಯರ ಕಾಲದ ನಾಣ್ಯಗಳು. ಮೈಸೂರು ಒಡೆಯರ ಕಾಲದಲ್ಲಿ ಸಿಂಹದ ಚಿತ್ರವಿರುವ ನಾಣ್ಯಗಳು ನಮಗೆ ಬಹಳಷ್ಟು ದೊರೆಯುತ್ತವೆ. ಈ ತರಹದ ನಾಣ್ಯಗಳಲ್ಲಿ ಮುಂಭಾಗದಲ್ಲಿ ಸಿಂಹವೂ ಮತ್ತು ಹಿಂಭಾಗದಲ್ಲಿ ರಾಜನ ಹೆಸರು ಸಹಿತ ನಾಣ್ಯದ ವಿವರ ಕಂಡುಬರುತ್ತದೆ. ಆದರೆ ಈ ನಾಣ್ಯದ ಮುಂಭಾಗದಲ್ಲಿ ಸಿಂಹವೂ ಮತ್ತು ಹಿಂಭಾಗದಲ್ಲಿ ಶ್ರೀರಂಗ ಮಾತ್ರ

* ಉಪನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು - ೫೭೦ ೦೦೧.

ಇರುವುದರಿಂದ ಮತ್ತು ಶ್ರೀರಂಗ ಎಂಬವರು ರಾಜಒಡೆಯರ ವಂಶಾವಳಿಯಲ್ಲಿ ಯಾರೊಬ್ಬರೂ ಇಲ್ಲದಿರುವುದರಿಂದ, ಇದು ಒಡೆಯರ್ ನಾಣ್ಯವಲ್ಲ ಎಂದು ಹೇಳಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ವೈಶಿಷ್ಟ್ಯವೆಂದರೆ "ರಂಗ" ಎಂಬ ಹೆಸರು ಆಯತಾಕಾರದ ಚೌಕಟ್ಟಿನಲ್ಲಿ ಇರುವುದು. ಈ ರೀತಿ ಚೌಕಟ್ಟಿನ ಒಳಗೆ ಹೆಸರನ್ನು ನಮೂದಿಸಿರುವಂತಹ ನಾಣ್ಯಗಳನ್ನು ವಿಜಯನಗರದ ಅರಸರಾಗಲೀ ಅಥವಾ ಮೈಸೂರು ಒಡೆಯರ ಯಾವ ರಾಜರಾಗಲೀ ಹೊರಡಿಸಿರುವುದಿಲ್ಲ. ಆದ್ದರಿಂದ ಸದರಿ ನಾಣ್ಯವು ವಿಜಯನಗರ ಅಥವಾ ಮೈಸೂರು ಒಡೆಯರಿಗೆ ಸೇರಿದ ನಾಣ್ಯವಲ್ಲ ಎಂದು ಹೇಳಬಹುದು. ಸಾಮಾನ್ಯವಾಗಿ ಸಾಮಂತ ರಾಜರು ಮಾತ್ರ ಈ ರೀತಿ ಚೌಕಟ್ಟಿನ ಒಳಗೆ ತನ್ನ ಹೆಸರಿರುವ ನಾಣ್ಯವನ್ನು ಹೊರಡಿಸಿರುವದು ಕಂಡುಬರುತ್ತದೆ.

ಶ್ರೀ ವಾಸುದೇವ ಭಾವಸಾರ್ ಅವರು ಹಾಗಲವಾಡಿ ಪಾಳೇಗಾರರ ನಾಣ್ಯ ಒಂದನ್ನು ಪ್ರಕಟಿಸಿದ್ದು[೧] ಮುಂಭಾಗದಲ್ಲಿ ಆನೆಯ ಚಿತ್ರವು ಮತ್ತು ಹಿಂಭಾಗದಲ್ಲಿ ಚೌಕಟ್ಟಿನ ಒಳಗೆ "ಮು" ಎಂಬ ಅಕ್ಷರವು ಕಾಣಬರುತ್ತದೆ. ಇದನ್ನು ಮುದ್ದು ವೀರಪ್ಪನಾಯ್ಕ ನಾಣ್ಯವೆಂದು ಪ್ರಕಟಿಸಿದ್ದಾರೆ.

ಈ ನಾಣ್ಯದ ಮುಂಭಾಗದಲ್ಲಿ ಸಿಂಹವಿರುವುದರಿಂದ ಮತ್ತು *ಶ್ರೀರಂಗ* ಎಂಬ **ಅಧೀನ** ರಾಜನ ಹೆಸರು ಇರುವುದರಿಂದ ಮತ್ತು ಸದರಿ ನಾಣ್ಯ ಮೈಸೂರು ಒಡೆಯರ ಅಧೀನದಲ್ಲಿ ಶ್ರೀರಂಗ ಎಂಬ ಸಾಮಂತ ರಾಜನೊಬ್ಬ ಹೊರಡಿಸಿರುವ ನಾಣ್ಯವಾದ್ದರಿಂದ "ಶ್ರೀ ರಂಗ" ಯಾರು? ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ.

ಶ್ರೀರಂಗಪಟ್ಟಣವು ಶ್ರೀರಂಗರಾಯ ಎಂಬ ವಿಜಯನಗರದ ರಾಜ್ಯಪಾಲನ ಅಧೀನದಲ್ಲಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಇವರ ಹೆಂಡತಿಯರು ಶ್ರೀರಂಗಮ್ಮ ಮತ್ತು ಅಲಮೇಲಮ್ಮ. ಅಲಮೇಲಮ್ಮನವರು ತಲಕಾಡಿನ ಇತಿಹಾಸ ದಲ್ಲಿ ರಾಜಒಡೆಯರಿಗೆ ಶಾಪಕೊಟ್ಟು ಮೈಸೂರಿನ ಒಡೆಯರಿಗೆ ಮಕ್ಕಳೇ ಇಲ್ಲದಂತೆ ಮಾಡಿದಳೆಂಬುದು ಐತಿಹ್ಯ.[೨] ಆಗ ಶ್ರೀ ರಾಜಒಡೆಯರು (೧೫೭೮-೧೬೧೭) ಮೈಸೂರಿನ ದೊರೆ ಯಾಗಿದ್ದರು. ಇವರು ಬಹಳ ಶೂರರಾಗಿದ್ದುದು ಮಾತ್ರವಲ್ಲದೇ ವಿಜಯನಗರ ರಾಜ್ಯಪಾಲನನ್ನು ಕಡೆಗಣಿಸಿದ್ದರು. ಶ್ರೀರಂಗ ಸುಮಾರಾಗಿ ಸಾಮಂತ ರಾಜನ ಹಂತಕ್ಕೆ ಇಳಿದಿದ್ದನು. ಆದುದರಿಂದ ರಾಜಒಡೆಯರನ್ನು ಮೆಚ್ಚಿಸುವ ಸಲುವಾಗಿ ಶ್ರೀರಂಗರಾಯನು ತನ್ನ ಹೆಸರಿನಲ್ಲಿ ಅಂದರೆ ಮೈಸೂರು ಒಡೆಯರ ನಮೂನೆಯಲ್ಲಿ ಈ ತಾಮ್ರದ ನಾಣ್ಯವನ್ನು ಅಚ್ಚುಹಾಕಿಸಿರ ಬೇಕು.[೩] ಇದರಲ್ಲಿ ವಿಜಯನಗರ ಅರಸುಗಳಿಗಿದ್ದ **ರಾಯ** ಎನ್ನುವ ಬಿರುದು ಮಾಯವಾಗಿ ಇವನನ್ನು ಕೇವಲ **ಶ್ರೀರಂಗ** ಎಂದು ಹೆಸರಿಸಿರು ವುದು ಮುಖ್ಯವಾಗಿ ಗಮನಿಸಬೇಕಾದ ಅಂಶ.

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ, ಇದು ಮೈಸೂರು ಒಡೆಯರ ಆಶ್ರಯದಲ್ಲಿ ಶ್ರೀರಂಗಪಟ್ಟಣದ ರಾಜ್ಯಪಾಲನಾಗಿದ್ದ ಶ್ರೀರಂಗರಾಯನು ಟಂಕಿಸಿದ ನಾಣ್ಯವೆಂದು ತೀರ್ಮಾನಿಸ ಬಹುದು. ಇದು ಮೈಸೂರು ಒಡೆಯರ ಕಾಲದ ಹೊಸ ನಾಣ್ಯ. ಸಾಮಾನ್ಯವಾಗಿ ಈ ನಾಣ್ಯ ಪಾಳೆಯಗಾರರ ನಾಣ್ಯಗಳನ್ನು ಹೋಲುತ್ತದೆ ಎಂಬುದು ಗಮನಾರ್ಹವಾದ ಅಂಶ. ಹಾಗೂ ಪಾಳೆಯಗಾರರ ನಾಣ್ಯಗಳು ಇದುವರೆಗೆ ನಮಗೆ ದೊರಕಿರುವುದು ಬಹಳ ಕಡಿಮೆ. ಆದುದರಿಂದ ಈ ನಾಣ್ಯ ಕರ್ನಾಟಕ ನಾಣ್ಯ ಸಂಪತ್ತಿಗೆ ಒಂದು ಹೊಸ ಸೇರ್ಪಡೆ ಎಂದು ಹೇಳಬಹುದು

(ಲೇಖನಕ್ಕೆ ತಮ್ಮಲ್ಲಿದ್ದ ನಾಣ್ಯವನ್ನು ಪ್ರಕಟಿಸಲು ನೀಡಿದ ಶ್ರೀ ಎಂ. ಮಾದೇಶ್, ಮಾಲೀಕರು, ನಿಮಿಷಾಂಬ ಜ್ಯುವೆಲ್ಲರ್ಸ್, ಕೊಳ್ಳೇಗಾಲ ಇವರಿಗೆ ಆಭಾರಿಯಾಗಿದ್ದೇನೆ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಪ್ರೊ॥ ಎ. ವಿ. ನರಸಿಂಹ ಮೂರ್ತಿ: **ವಿಜಯನಗರ ನಾಣ್ಯ ಸಂಪತ್ತು**, ಪುಟ ೩೦-೩೨.

*೨. **ಮೈಸೂರು ಗೆಜೆಟಿಯರ್**, ತಲಕಾಡು, ಪುಟ - ೬೨೦.

*೩. **ಸೌತ್ ಇಂಡಿಯನ್ ನ್ಯೂಮಿಸ್‌ಮ್ಯಾಟಿಕ್ಸ್ ಜರ್ನಲ್**, ಸಂಪುಟ ೭, ಪುಟ ೧೩೩-೧೩೫.

ಡಾ॥ ಹೆಚ್. ಚಂದ್ರಶೇಖರ್*

ಬಳ್ಳಾರಿ ಕೋಟೆಯ ರಚನೆಯಲ್ಲಿ ಭೂಸಾದೃಶ್ಯಗಳ ಪಾತ್ರ

ಇಂದಿನ ಬಳ್ಳಾರಿ ನಗರದ ಪಶ್ಚಿಮ ದಿಕ್ಕಿನಲ್ಲಿರುವ ಬಳ್ಳಾರಿ ಕೋಟೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಇದು ವಿಜಯನಗರ ಕಾಲದ ರಚನೆ ಎಂಬುದು ವ್ಯಕ್ತವಾಗುತ್ತದೆ. ಆದರೆ ಬಳ್ಳಾರಿ ನಗರ ಮತ್ತು ಬಳ್ಳಾರಿ ಕೋಟೆಯನ್ನು ಹೊಯ್ಸಳರ ಮೂರು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ[೧]. ಹೊಯ್ಸಳರ ಕಾಲದ ಶಾಸನಗಳ ಕಾಲ ೧೨ ನೆಯ ಶತಮಾನ. ಆ ಕಾಲದಲ್ಲಿದ್ದ ಕೋಟೆಯ ಅವಶೇಷಗಳು ಇಂದು ಕಾಣಸಿಗುವದಿಲ್ಲ. ಈಗಿರುವ ಕೋಟೆಯನ್ನು ಹಂಡೆಯ ಪಾಳೆಗಾರರು ಕಟ್ಟಿಸಿದರೆಂದು ಶಾಮಲ ಅವರು ಅಭಿಪ್ರಾಯಪಡುತ್ತಾರೆ.[೨] ಈಗ ಬಳ್ಳಾರಿ ಕೋಟೆಯೊಳಗಿರುವ ದೇವಾಲಯಗಳನ್ನೂ ಕೋಟೆಯ ಶಿಖರ ಪ್ರಸ್ಥಭೂಮಿಯಲ್ಲಿರುವ ದೇವಾಲಯಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದು ಸರಿ ಅನಿಸುತ್ತದೆ. ಹೊರ ಕೋಟೆ ಗೋಡೆಯೊಳಗಿರುವ ಮಲ್ಲೇಶ್ವರ ದೇವಾಲಯ, ಮತ್ತು ಗುಡ್ಡವನ್ನು ಹತ್ತಲು ಆರಂಭಿಸುವಾಗ, ಒಳಕೋಟೆಯು ಆರಂಭವಾಗುವ ಮುನ್ನ ಕಾಣಬರುವ ಬಸವಣ್ಣನ ಗುಡಿ, ಮತ್ತು ಆ ಗುಡಿಯ ಒಳ ಆವರಣದಲ್ಲಿರುವ ದೀಪಸ್ತಂಭದ ಮೇಲೆ ಇರುವ ವೀರಭದ್ರನ ಉಬ್ಬುಶಿಲ್ಪ ಇವುಗಳು, ಲಿಂಗಾಯತ ಧರ್ಮವನ್ನು ಅಪ್ಪಿಕೊಂಡ ನಂತರ ಹಂಡೆಪಾಳೆಗಾರರು ಈ ಕೋಟೆಯನ್ನು ಕಟ್ಟಿಸಿದರು ಎಂಬುದು ಸ್ಪಷ್ಟವಾಗುತ್ತದೆ. ಕೋಟೆಯೊಳಗಿರುವ ದೇವಾಲಯಗಳು ದೀಪಸ್ತಂಭಗಳು, ಕೋಟೆಯ ಹೆಬ್ಬಾಗಿಲುಗಳ ಮೇಲೆ ಕೆತ್ತಲಾಗಿರುವ ಸೂರ್ಯ, ಚಂದ್ರ, ನವಿಲಿನ ಉಬ್ಬು ಶಿಲ್ಪಗಳು ಲಿಂಗಾಯಿತ ಧರ್ಮವನ್ನು ಅನುಸರಿಸಿದ ಹಂಡೆ ಪಾಳೆಗಾರರು ವೈಷ್ಣವ ಧರ್ಮಕ್ಕೂ ಅನ್ವಯವಾಗುವ ದೇವಾಲಯ ಗಳನ್ನು ಕಟ್ಟಿಸಿದರು ಎಂಬುದು ತಿಳಿದುಬರುತ್ತದೆ.[೩]


ಇಲ್ಲಿಯ ಪುರಾತತ್ವ ಮತ್ತು ಶಿಲ್ಪಗಳ ಅಧ್ಯಯನವೇ ಒಂದು ಸಂಪ್ರಬಂಧಕ್ಕೆ ತಕ್ಕುದಾದ ವಿಷಯವಾಗುವದರಿಂದ ಅವುಗಳ ವಿವರಣೆ ಮತ್ತು ಚರ್ಚೆಗೆ ಇಲ್ಲಿ ತೊಡಗುವದಿಲ್ಲ. ಆದರೆ ಇಲ್ಲಿಯ ಎಲ್ಲಾ ಪುರಾತತ್ವ ಅವಶೇಷಗಳು ಈ ಕೋಟೆಯನ್ನು ಹೈದರ್ ಆಗಲೀ ಟೀಪುಸುಲ್ತಾನವಾಗಲಿ ಕಟ್ಟಿಸಿದನೆಂಬ ನಂಬಿಕೆಯು ನಿರಾಧಾರವಾದುದು ಎಂದು ಸಾಬೀತು ಮಾಡುತ್ತವೆ. ಆ ಮಟ್ಟಿಗೆ ಶಾಮಲ ಅವರ ಅಭಿಪ್ರಾಯ ಸರಿಯಾದುದಲ್ಲ. ಇಷ್ಟು ಈ ಕೋಟೆಯ ಐತಿಹಾಸಿಕ ಹಿನ್ನೆಲೆಯನ್ನು ಸಂಕ್ಷಿಪ್ತದಲ್ಲಿ ಹೇಳಿ, ಈ ಕೋಟೆಯ ನಿರ್ಮಾಣದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಭೂವೈಜ್ಞಾನಿಕ ವೈಶಿಷ್ಟ್ಯತೆಗಳು ಮತ್ತು ಭೂ ಸಾದೃಶ್ಯಗಳು ಯಾವ ಪಾತ್ರವನ್ನು ವಹಿಸಿವೆ ಎಂಬುದನ್ನು ಮುಂದೆ ಚರ್ಚಿಸಲಾಗಿದೆ.

ಕೋಟೆ ಗುಡ್ಡದ ಎತ್ತರ

ಬಳ್ಳಾರಿ ಕೋಟೆಯು ನಗರದ ಪಶ್ಚಿಮ ದಿಕ್ಕಿನಲ್ಲಿದೆ. ಈ ಕೋಟೆಯನ್ನು ಬಳಸಿಕೊಂಡು ಗುಂತ್ಕಲ್ಲು - ಹೊಸಪೇಟೆ ರೈಲು ಮಾರ್ಗ ದಕ್ಷಿಣ ದಿಕ್ಕಿನಲ್ಲಿ ಸಾಗುತ್ತದೆ. ಉತ್ತರದಲ್ಲಿ ಈ ಕೋಟೆ ಮತ್ತು ಮುಖಬೆಟ್ಟ (Face Hill) ಇವುಗಳ ಮಧ್ಯದಲ್ಲಿ ಬಳ್ಳಾರಿ - ಹೊಸಪೇಟೆ ರಸ್ತೆ ಸಾಗುತ್ತದೆ. (ಭೂಪಟ ನೋಡಿ)

ಕೋಟೆಯ ಹೊರಗೋಡೆ ಒಂದು ಸಮತಟ್ಟಾದ ಪ್ರದೇಶದ ಮೇಲೆ ಇದೆ. ಇದರ ಎತ್ತರ ಸಮುದ್ರ ಪಾತಳಿಯಿಂದ ಸುಮಾರು ೧೪೮೬ ಅಡಿ ಇದೆ. ಹೊರಗೋಡೆಯ ಸುತ್ತಲೂ ಕಂದಕ ಇದೆ. ಈ ಹೊರಕೋಟೆಯ ಮಧ್ಯಭಾಗದಲ್ಲಿ ಕಣಶಿಲೆಯ (Granite) ಗುಡ್ಡ ಇದೆ. ಈ ಗುಡ್ಡವನ್ನು ದಾಖಲೆಗಳಲ್ಲಿ ಕೋಟೆಗುಡ್ಡ (Fort Hill) ಎಂದೇ ದಾಖಲಿಸಲಾಗಿದೆ. ಈ ಗುಡ್ಡದ ಶಿಖರದ ಎತ್ತರ ೧೯೬೬ ಅಡಿ ಅಂದರೆ ನೆಲಮಟ್ಟದಿಂದ ೪೮೦ ಅಡಿ ಎತ್ತರವಿರುವ ಈ ಗುಡ್ಡ ಅತಿ ಕಡಿದಾದ ಇಳುಕಲನ್ನು (Steep gradient) ಹೊಂದಿದೆ. ಈ ಕಡಿದಾದ ಇಳುಕಲೇ ಈ ಕೋಟೆಯನ್ನು ಈ ಗುಡ್ಡದ ಮೇಲೆ ಕಟ್ಟಲು ನಿರ್ಧರಿಸಿರುವದಕ್ಕೆ ಮೊಟ್ಟ ಮೊದಲ ಕಾರಣ. ಮೇಲೇರಿ ಬರುವ ವೈರಿಗಳ ಸೈನಿಕರನ್ನು

* ಸಂಗಮ, ಎಂ.ಐ.ಜಿ.-೬೬, ೬ನೇ ಕ್ರಾಸ್, ೬ನೇ ಮೇನ್, ಕೆ.ಎಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರ ನಗರ, ಬೆಂಗಳೂರು-೫೬೦ ೦೭೯.




ಚಿತ್ರ ೧. ಬಳ್ಳಾರಿಕೋಟೆ ಮತ್ತು ಅದರ ಪರಿಸರ




ಮೇಲೆ ಇರುವ ಕೋಟೆಯೊಳಗಿನಿಂದಲೇ ಸುಲಭವಾಗಿ ಘಾಸಿಗೊಳಿಸಬಹುದು. ಆದ್ದರಿಂದ ಈ ನಿವೇಶನದ ಆಯ್ಕೆ ಸೈನಿಕ ಕಾರ್ಯಾಚರಣೆಯ ದೃಷ್ಟಿಯಿಂದ ಸಮರ್ಪಕವಾಗಿದೆ.

ಭೂವೈಜ್ಞಾನಿಕ ವೈಶಿಷ್ಟ್ಯತೆಗಳು ಮತ್ತು ರಕ್ಷಣಾ ವ್ಯವಸ್ಥೆ

ದೂರದಿಂದ ಏಕಶಿಲಾ ಬೆಟ್ಟದಂತೆ ಕಾಣುವ ಈ ಕಣಶಿಲೆಯ ಬೆಟ್ಟವನ್ನು ಭೂವೈಜ್ಞಾನಿಕ ನಿಯೋಗಿಗಳು ಹಲವಾರು ಕಡೆಗಳಲ್ಲಿ ಹಲವು ದಿಕ್ಕುಗಳಲ್ಲಿ ಭೇದಿಸಿವೆ (Fracturing) ಮತ್ತು ನಗ್ನೀಕರಿಸಿವೆ (Weathering). ಈ ಗುಡ್ಡದ ಪೂರ್ವ ಭಾಗವು ಭೇದಿತವಾಗಿ ಕಡಿದಾದ ದೊಡ್ಡ ದೊಡ್ಡ ಗುಂಡುಗಳಿಂದ (Boulders) ಕೂಡಿದೆ. ಎಂಥ ಬಲವಾದ ತೋಪು ಗುಂಡುಗಳನ್ನು ಹಾರಿಸಿದರೂ ಈ ಕಲ್ಲಿನ ಗುಂಡುಗಳು ಅಲುಗಾಡಲಾರವು. ಇಂಥ ಗುಂಡುಗಳ ಮಧ್ಯದಲ್ಲಿ ಇರುವ ಖಾಲಿ ಜಾಗದಲ್ಲಿ ಬಲವಾದ ಕೋಟೆ ಗೋಡೆಯನ್ನು ಕಟ್ಟಲಾಗಿದೆ. ಒಂದು ರೀತಿಯಲ್ಲಿ ಇದು ಮಾನವನ ಕೈಗಳು ಮತ್ತು ನಿಸರ್ಗದ ಕಾಣದ ಕೈಗಳು ಕೂಡಿ ಕಟ್ಟಿದ ಭದ್ರವಾದ ಕೋಟೆ ಇದಾಗಿದೆ.



ಈ ಕೋಟೆಯೊಳಕ್ಕೆ ಹೋಗಬೇಕಾದರೆ ಕಟ್ಟಲಾಗಿರುವ ಮೆಟ್ಟಲುಗಳನ್ನು ಹತ್ತಿಯೇ ಹೋಗಬೇಕು. ಈ ಮೆಟ್ಟಲುಗಳ ದಾರಿಯನ್ನು ಮುಚ್ಚಿದರೆ ಒಳಕ್ಕೆ ಪ್ರವೇಶವಿಲ್ಲ. ಇದು ರಕ್ಷಣೆಯ ಎರಡನೆಯ ಆಯ್ಕೆ. ನಂತರ ಕೆಲವೆಡೆ, ಬಹುದೊಡ್ಡ ಗುಂಡುಗಳು ಒಂದಕ್ಕೊಂದು ಮೇಲೆ ಸೇರಿ ಕೆಳಗಡೆ ಪೊಳ್ಳನ್ನು ನಿರ್ಮಿಸಿವೆ. ಇದೊಂದು ರೀತಿಯ ಸುರಂಗ ಮಾರ್ಗ. ಈ ಸುರಂಗ ಮಾರ್ಗದ ಪ್ರವೇಶ ದ್ವಾರಗಳಲ್ಲಿ ಬಲವಾದ ಕಾವಲನ್ನು ಇಟ್ಟರೆ ಅಥವಾ ಮೇಲಿನ ದ್ವಾರವನ್ನು ಮುಚ್ಚಿದರೆ ವೈರಿ ಮೇಲೇರಿ ಬರಲಾರನು. ನಿಸರ್ಗ ನಿರ್ಮಿಸಿದ ಈ ವೈಶಿಷ್ಟ್ಯತೆಗಳನ್ನು, ಈ ಕೋಟೆಯನ್ನು ಯೋಜಿಸಿದ ಸ್ಥಪತಿಗಳು ತುಂಬಾ ಜಾಣ್ಮೆಯಿಂದ ಸೂಕ್ತವಾಗಿ ತಮ್ಮ ರಕ್ಷಣಾ ವ್ಯವಸ್ಥೆಗಾಗಿ ಉಪಯೋಗಿಸಿದ್ದಾರೆ. ಆದರೆ ಈ ಗುಡ್ಡದ ಪಶ್ಚಿಮ ಭಾಗ ಸುಲಭವಾದ ಇಳುಕಲಿನ ಹಾಸು ಬಂಡೆಗಳಿಂದ ಕೂಡಿದೆ. ಆದ್ದರಿಂದ ಇಲ್ಲಿ ಸ್ಥಪತಿಗಳು ಉದ್ದಕ್ಕೂ ಕೋಟೆಯನ್ನು ದೊಡ್ಡ ದೊಡ್ಡ ಸೈಜು ಕಲ್ಲುಗಳಿಂದ ನಿರ್ಮಿಸಿದ್ದಾರೆ.



ಇದಿಷ್ಟು ರಕ್ಷಣಾ ವ್ಯವಸ್ಥೆಯಲ್ಲಿ ಬಳಸಿಕೊಳ್ಳಲಾದ ಭೂವೈಜ್ಞಾನಿಕ ವಿಶಿಷ್ಟತೆಗಳ ವಿವರಣೆಯಾಯಿತು. ಮುಂದೆ ಜಲಸಂಗ್ರಹಣಾ ವ್ಯವಸ್ಥೆಯ ಬಗ್ಗೆ ತಿಳಿಯೋಣ.

ಜಲ ಸಂಗ್ರಹಣಾ ವ್ಯವಸ್ಥೆ

ಈ ಗುಡ್ಡದ ಶಿಖರ ಒಂದು ಪ್ರಸ್ಥಭೂಮಿಯಂತಿದೆ. ಅಲ್ಲಲ್ಲಿ ಗುಂಡುಗಳಿದ್ದರೂ ಇದು ಹಾಸು ಬಂಡೆಯ (Sheet rock) ಪ್ರಸ್ತ ಭೂಮಿಯೇ. ಈ ಗುಡ್ಡದ ಶಿಖರ ಪ್ರದೇಶದಲ್ಲಿ ನೈಸರ್ಗಿಕ ಕ್ರಿಯೆಗಳಿಂದಾಗಿ ಕಣಶಿಲೆಯಲ್ಲಿ ಬೋಗಣಿಗಳು (Basins) ಮತ್ತು ಗಟಾರಗಳು (Gutter) ನಿರ್ಮಾಣಗೊಂಡಿವೆ. ಈ ಬೋಗಣಿಗಳು ಕೆಲವು ಒಂದೆರಡು ಅಡಿಗಳಷ್ಟು ಅಗಲವಾಗಿದ್ದರೆ ಕೆಲವು ೧೫-೨೦ ಅಡಿಗಳಷ್ಟು ಅಗಲವಾಗಿವೆ. ಇವುಗಳ ಆಳಗಳು (Depths) ಕೂಡ ಒಂದೆರಡು ಅಡಿಗಳಿಂದ ೫-೧೦ ಅಡಿಗಳವರೆಗೆ ಇವೆ. ಇವುಗಳಲ್ಲಿ ಮಳೆನೀರು ಸಂಗ್ರಹಿತವಾಗುತ್ತದೆ. ಕೆಲವು ಕಡೆ ಅವಶ್ಯಕತೆ ಇದ್ದಲ್ಲಿ ಅಡ್ಡಕಟ್ಟೆಗಳನ್ನು ಕಟ್ಟಿ ನೀರು ಹರಿದು ಹೋಗದಂತೆ ವ್ಯವಸ್ಥೆ ಮಾಡಲಾಗಿದೆ. ಈ ಬೋಗಣಿಗಳನ್ನು ಮತ್ತು ಗಟಾರಗಳನ್ನು ನೀರಿನ ಸಂಗ್ರಹಣೆಗಾಗಿ ಟ್ಯಾಂಕುಗಳಂತೆ ಬಳಸಲಾಗಿದೆ. ಈ ತಗ್ಗುಗಳ (Depressions)



ನಿರ್ಮಾಣವೂ ಒಂದು ರೋಚಕ ಸಂಗತಿ. ಕಣಶಿಲೆಯು (Granite) ಬಹಳ ಕಠಿಣ ಶಿಲೆಯಾಗಿದೆ. ಆದರೆ ಇಂಥ ಕಠಿಣ ಶಿಲೆಯ ಮಧ್ಯದಲ್ಲಿ ಅಲ್ಲಲ್ಲಿ ತುಲನಾತ್ಮಕವಾಗಿ ಮೃದುಶಿಲೆಯಾದ ಪದರ ಶಿಲೆಯು (Sehist) ತುಂಡುಗಳಾಗಿ (Patches) ಸಿಕ್ಕಿಕೊಂಡಿರುತ್ತದೆ. ಇಂಥ ತುಂಡುಗಳನ್ನು Caught up patches ಎಂದು ಕರೆಯಲಾಗುತ್ತದೆ. ಈ ರೀತಿಯಾಗಿ ಸಿಕ್ಕಿಕೊಂಡಿರುವ ಮೃದುಶಿಲೆಯ ತುಂಡುಗಳು ಲಕ್ಷಾವಧಿ ವರ್ಷಗಳ ಅವಧಿಯಲ್ಲಿ ಮಳೆ, ಗಾಳಿ, ಶಾಖಗಳ ಹೊಡೆತಕ್ಕೆ ಸಿಕ್ಕು ಸವೆದು ಹೋದಾಗ ತಗ್ಗು ಪ್ರದೇಶಗಳಾಗುತ್ತವೆ. ಇಂಥ ತಗ್ಗು ಪ್ರದೇಶಗಳನ್ನು ತುಂಬಾ ಜಾಣ್ಮೆಯಿಂದ ನೀರಿನ ಟ್ಯಾಂಕುಗಳನ್ನಾಗಿ ಮಾರ್ಪಡಿಸಿದ್ದಾರೆ ಈ ಕೋಟೆಯ ನಿರ್ಮಾಪಕರು, ಯೋಜಕರು ಮತ್ತು ಕಾರ್ಮಿಕರು.

ಕೆರೆ

ಈ ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟೆ ಕಟ್ಟಿ ನಿರ್ಮಿಸಲಾಗಿದೆ. ಈ ಕಟ್ಟೆಗೆ, ಪಶ್ಚಿಮದಿಂದ ಹರಿದು ಬರುವ ಒಂದು ಸಣ್ಣ ಹಳ್ಳದ ನೀರೇ ಆಧಾರ. ಕೇವಲ ೩೦ ವರ್ಷಗಳ ಹಿಂದೆ ಈ ಕೆರೆ ತುಂಬಿದ್ದುದನ್ನು ನಾನು ನೋಡಿದ್ದೇನೆ. ಈ ಕೆರೆಯ ನೀರನ್ನು ಕಾಲುವೆ ಮೂಲಕ ಹೊರ ಕೋಟೆಯ ಸುತ್ತಲೂ ಇರುವ ಕಂದಕಕ್ಕೆ ಬಿಡಲಾಗುತ್ತಿತ್ತು. ಇದರಿಂದಾಗಿ ವೈರಿಯು ಹೊರಕೋಟೆ ಗೋಡೆಯನ್ನು ಮೆಟ್ಟಲು ಕಷ್ಟ ಸಾಧ್ಯ. ಆದರೆ ಇತ್ತೀಚಿಗೆ ದುರದೃಷ್ಟವಶಾತ್, ಕೆರೆಯ ಅಂಗಳವನ್ನೂ, ಕಂದಕ ಪ್ರದೇಶವನ್ನೂ ನಿವೇಶನಗಳನ್ನಾಗಿ ಪರಿವರ್ತಿಸಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ ಕೆರೆಯನ್ನು ಬತ್ತಿಸಿದ ದುಷ್ಪರಿಣಾಮ ಬಳ್ಳಾರಿ ನಗರದ ಅಂತರ್ಜಲದ ಮೇಲಾಗಿದೆ.

ಹೀಗೆ ಈ ಕೋಟೆಯನ್ನು ನಿರ್ಮಿಸಿದ ಹಂಡೆಪಾಳೆಗಾರರು, ಅವರ ಸ್ಥಪತಿಗಳು ಸ್ಥಳೀಯವಾಗಿ ಲಭ್ಯವಿರುವ ಭೂಮ್ಯಾಕೃತಿಗಳನ್ನೂ (Landscapes), ಭೂವೈಜ್ಞಾನಿಕ ವಿಶಿಷ್ಟತೆಗಳನ್ನೂ (Geological features), ಮಳೆನೀರನ್ನೂ, ಹರಿದು ಬರುವ ಮೇಲುಜಲವನ್ನೂ (Surface Run off) ಅತ್ಯಂತ ಜಾಣ್ಮೆಯಿಂದ ಕೋಟೆಯ ಭದ್ರತೆಗಾಗಿ ಮತ್ತು ಜಲ ಪೂರೈಕೆಗಾಗಿ ಉಪಯೋಗಿಸಿದ್ದಾರೆ

(ಹೊಯ್ಸಳರ ಕಾಲದ ಶಾಸನಗಳನ್ನು ನನ್ನ ಗಮನಕ್ಕೆ ತಂದು ಅವುಗಳ ಆಕರಗಳ ವಿವರಗಳ ಮಾಹಿತಿಯನ್ನು ನೀಡಿದ ಡಾ॥ ಸಿ. ಎಸ್. ಪಾಟೀಲರಿಗೂ, ತಮ್ಮ ಅಪ್ರಕಟಿತ ಲೇಖನದ ಪ್ರತಿಯನ್ನು ನೀಡಿದ ಡಾ॥ ಮೃತ್ಯುಂಜಯ ರುಮಾಲೆ ಅವರಿಗೂ ಹಾಗು ರೇಖಾ ಚಿತ್ರದ ಶುದ್ಧ ಪ್ರತಿಯನ್ನು ಸಿದ್ಧ ಮಾಡಿಕೊಟ್ಟ ಶ್ರೀ ಪ್ರಭುಲಿಂಗಪ್ಪನವರಿಗೂ ಈ ಲೇಖಕ ಕೃತಜ್ಞನಾಗಿದ್ದಾನೆ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಅ) ಎಪಿಗ್ರಾಫಿಯಾ ಕರ್ನಾಟಕ ಹಳೆಯ ಸಂಪುಟ ೫, ಬೇಲೂರು ೧೩೭, ಪುಟ ೨೬೬.
ಆ) ಅದೇ, ೧೯೩, ಪುಟ ೩೧೫.
ಇ) ಅದೇ, ಸಂಪುಟ ೭ (ಪರಿಷ್ಕೃತ ಆವೃತ್ತಿ), ನಾಗಮಂಗಲ ೧೧೮, ಹಟ್ಟಣ.

*೨. ಸಿ. ಆರ್. ಶಾಮಲ : 'ಬಳ್ಳಾರಿ ಗುಡ್ಡದ ಮೇಲಿನ ದೇವಾಲಯಗಳು', ಇತಿಹಾಸ ದರ್ಶನ, ಸಂಪುಟ ೧೪, ೧೯೯೯ ಇತಿಹಾಸ ಅಕಾದೆಮಿ, ಬೆಂಗಳೂರು.

*೩. ಮೃತ್ಯುಂಜಯ ರುಮಾಲೆ, 'ಹಂಡೆ ಪಾಳೆಯಗಾರರ ಧಾರ್ಮಿಕ ಸೇವೆ', ಅಪ್ರಕಟಿತ ಲೇಖನ, (೧೯೯೯).

ವಿರೂಪಾಕ್ಷ ಪೂಜಾರಹಳ್ಳಿ*

ಹೂಡೇಂ ಗ್ರಾಮದ ಪ್ರಾಚ್ಯಾವಶೇಷಗಳು (ಮೌಖಿಕ ಚರಿತ್ರೆಯ ಹಿನ್ನಲೆಯಲ್ಲಿ)

ಹೂಡೇಂ ಎಂಬ ಗ್ರಾಮ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಆಗ್ನೇಯ ದಿಕ್ಕಿಗಿದೆ. ಕೂಡ್ಲಿಗಿಯಿಂದ ಸುಮಾರು ೪೦ ಕಿ. ಮೀ. ಇದ್ದು, ಚಿತ್ರದುರ್ಗ ಜಿಲ್ಲೆಯ ಗಡಿಭಾಗಕ್ಕೆ ಹೊಂದಿಕೊಂಡಂಥ ಕೊನೆ ಗ್ರಾಮ. ಇದು ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು, ಮೂರು ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ ಹೊಂದಿದೆ. 'ಚಿನ್ನಹಗರಿ' ನದಿಯ ಎಡದಂಡೆ ಮೇಲಿರುವ ಕುಮತಿಗೆ ನಾಲ್ಕು ಕಿ.ಮೀ. ಸಮೀಪದಲ್ಲಿದ್ದು, ಅನೇಕ ಪುರಾತತ್ವ ಅವಶೇಷಗಳನ್ನು ಹೊಂದಿದೆ. ಸ್ಥಳೀಯರ ಮೌಖಿಕ ಚರಿತ್ರೆಯ ಆಕರಗಳೂ ಇಲ್ಲಿವೆ.

'ಹೂಡೇಂ' ಗ್ರಾಮವನ್ನು ಉಡೆವು, ವುಡೆಮ್, ಹೂಡೇಮು ಎಂಬಿತ್ಯಾದಿ ಹೆಸರುಗಳಿಂದ ಕರೆಯುವರು. 'ಊಡೆ' ಎಂದರೆ ಆಲದ ಮರದ ಬಿಳಲು ಎಂಬ ಅರ್ಥವಿದೆ.(೧) ನಂತರ 'ಹೂಡೆ' ಎಂಬ ಪದಕ್ಕೆ ಕೋಟೆಯ ಬುರುಜು, ಬತೇರಿ ಮತ್ತು ಕಾವಲು ಸ್ಥಳ ಎಂದು ಅರ್ಥೈಸಲಾಗಿದೆ.(೨) 'ಹುಡೆವು' ಬುರುಜಿನ ಒಳಭಾಗ; ಶ್ರೀಮಂತರು ವಾಸಿಸುತ್ತಿದ್ದ ಪ್ರದೇಶವೆಂದು ಗುರುತಿಸ ಬಹುದು. ಕಾಲಾಂತರದಲ್ಲಿ ಜನಸಾಮಾನ್ಯರು ಈ ಪ್ರದೇಶದಲ್ಲಿ ವಾಸಿಸಿರಬೇಕು. ಹೀಗಿದ್ದರೂ 'ಹೂಡೆಯ' ಎಂಬುದು ತೆಲುಗು ಪದವೆನ್ನಲು ಶಕ್ಯವಿದೆ. ಅಂದರೆ 'ವಾಡೆಗಳು', ದವಸ, ಧಾನ್ಯ ಸಂಗ್ರಹಿಸುವ ಸ್ಥಳ. ಹೂಡೆಯ ಎಂಬ ಹೆಸರು ಕ್ರಮೇಣ ಹೂಡೆವು > ಹೂಡೇಂ ಆಗಿರಬೇಕು. ಅಲ್ಲದೆ, ದಾಳಿಕಾರರ ಅನಿರೀಕ್ಷಿತ ಆಕ್ರಮಣದಿಂದ ರಕ್ಷಿಸಿಕೊಳ್ಳಲು ಕೋಟೆಯ ಮೇಲ್ಭಾಗದಲ್ಲಿ ಬುರುಜನ್ನು ನಿರ್ಮಿಸುತ್ತಿದ್ದರು. ಇಂಥ ಕೊತ್ತಲ ಅಥವಾ ಬುರುಜಿನ ರೀತಿಯ ವೃತ್ತಾಕಾರದ ಕಲ್ಲಿನ ಕಟ್ಟಡಗಳು ಇಲ್ಲಿರುವುದರಿಂದ ಹೂಡೇಂ ಗ್ರಾಮ ಮೇಲಿನಂತೆ ನಿರ್ಮಾಣಗೊಂಡಿರಬೇಕು.(೩)

ಸ್ಥಳೀಯ ಅರಸನೋ ಅಥವಾ ಸಾಮಂತನೋ ಇಲ್ಲಿ ಕೋಟೆ, ಮೂರು ಬುರುಜು, ಊರು ಬಾಗಿಲು ಮತ್ತು ದೇವಾಲಯಗಳನ್ನು ಕಟ್ಟಿಸಿದ್ದಾನೆ. ಇಂದಿಗೂ ಈ ಗ್ರಾಮದಲ್ಲಿ ಕೋಟೆ ಪ್ರದೇಶ, ಮೂರು ಬುರುಜುಗಳು ಸಹಾ ಶಿಥಿಲಾವಸ್ಥೆ ಯಲ್ಲಿವೆ. ಚಿನ್ನಹಗರಿ ನದಿ ದಂಡೆಯ ಮೇಲಿರುವ ಹೂಡೇಂನಲ್ಲಿ ವಿಶಿಷ್ಟವಾದ ಬುಡ್ಡೆಕಲ್ಲೊಂದಿದೆ. ಸ್ಥಳೀಯರು ಇದನ್ನು **ಯಂತ್ರದ ಕಲ್ಲು** ಎನ್ನುವರು. ಭೂತದ ಲಕ್ಷಣವಿರುವ ಶಿಲ್ಪವನ್ನು ಕೆತ್ತಿ ಊರಿನ ದ್ವಾರದ ಎಡಭಾಗಕ್ಕೆ ನಿಲ್ಲಿಸಲಾಗಿದೆ. ಬುಡ್ಡೆಕಲ್ಲು ನೆಲದಲ್ಲಿದ್ದು, ಊರಿನ ಮಹಾದ್ವಾರ ಅಥವಾ ಮುಂಭಾಗದಲ್ಲಿರುತ್ತದೆ.(೪) ಇದೇ ಗ್ರಾಮದ ಪರಿಸರದಲ್ಲಿರುವ ಬೋರೆದೇವರ ಗುಡಿಯು ಪ್ರಮುಖವಾದದ್ದು. ಇಲ್ಲಿ ವಿಷ್ಣು, ಸೂರ್ಯ, ಭೈರವ ಮತ್ತು ಜಿನ (ಪಾರ್ಶ್ವನಾಥ)ರ ಅಪೂರ್ವ ಶಿಲ್ಪಗಳಿವೆ.(೫) 'ನಡುಗಡ್ಡೆ ನಾಯಕ'ನೆಂದು ಹೇಳಲಾಗುವ ವೀರಗಲ್ಲೊಂದು ಗ್ರಾಮದ ಮಧ್ಯದಲ್ಲಿದ್ದು, ಆರಾಧನೆಗೊಳಪಟ್ಟಿದೆ.(೬) ಈ ಬೋರೆ ದೇವರ ಸ್ಥಳದಿಂದ ವಾಯವ್ಯ ದಿಕ್ಕಿಗೆ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಕುದುರೆಗಳ ರಕ್ಷಣೆಗಾಗಿ ಹೋರಾಡಿ ಮಡಿದ ವೀರನೊಬ್ಬನನ್ನು ಬಿಂಬಿಸುವ ವೀರಗಲ್ಲಿದೆ. ತಲೆಮಾರುಗಳಿಂದ ಈ ಗ್ರಾಮದ ಆಡಳಿತ ಇತರ ಜವಾಬ್ದಾರಿಯನ್ನು ನೋಡುತ್ತ ಬಂದಿರುವ ***ನಡುಗಡ್ಡೆನಾಯಕ*** ಮತ್ತು ***ಬೋಸೆಮಲ್ಲಿನಾಯಕ*** ಎಂಬ ಮನೆತನಗಳಿವೆ. ಇವರನ್ನು ಬೇಡ ಜನಾಂಗದ ಕಟ್ಟೇಮನೆಯ ಮುಖ್ಯಸ್ಥ ಅಥವಾ ನಾಯಕನೆಂದು ನೇಮಿಸಿರು ತ್ತಾರೆ. ಇಲ್ಲಿ ಕಂಡುಬರುವ ಪ್ರಮುಖ ಪ್ರಾಚ್ಯಾವಶೇಷಗಳನ್ನು ಸ್ಥಳೀಯ ಸಾಂಸ್ಕೃತಿಕ ಲಕ್ಷಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು.

ಬೋರೆದೇವರ ಗುಡಿ

ಹೂಡೇಂ ಗ್ರಾಮದಿಂದ ತಾಯಕನಹಳ್ಳಿಗೆ ಹೋಗುವ ಮಾರ್ಗಮಧ್ಯದಲ್ಲಿ ಬಳಿಗೇರರ (ಜಯಣ್ಣ ಮತ್ತು ಲಕ್ಷ್ಮಪ್ಪನವರ ಹೊಲದಲ್ಲಿ) ಈ ದೇವರ ದೇವಾಲಯವಿದೆ. ಸ್ಥಳೀಯರು 'ಭೈರವ'ನಿಗೆ ಬೋರೆದೇವರೆಂದು ಕರೆಯುತ್ತಾರೆ. ಇದರ

* ಅಧ್ಯಾಪಕ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ಬಲಭಾಗಕ್ಕೆ 'ಚಿನ್ನಹಗರಿ' ನದಿ ಹರಿಯುತ್ತದೆ. ಇದರ ಸುತ್ತಲೂ ಗಿಡ-ಮರ, ಪೊದೆಗಳಿವೆ. ಇದನ್ನು ಕಟ್ಟಿಸಿದ ಕಾಲಮಾನ ತಿಳಿದುಬಂದಿಲ್ಲ. ಹಿಂದಿದ್ದ ಪ್ರಾಚೀನ ದೇಗುಲ ಶಿಥಿಲಗೊಂಡಾಗ ಮುಂದೆ ಜೀರ್ಣೋದ್ಧಾರಗೊಂಡ ದೇಗುಲವಿದು. ಇಲ್ಲಿದ್ದ ಪ್ರಮುಖ ಶಿಲ್ಪಗಳು ಶಿಥಿಲಗೊಂಡು, ಸ್ಥಳಾಂತರಗೊಂಡಿವೆ. ಹೀಗಾಗಿ ದೇವಾಲಯದಲ್ಲಿನ ಶಿಲ್ಪಗಳನ್ನು ಹೊರತುಪಡಿಸಿದರೆ ಇತರೆ ಆಧಾರಗಳು ದೊರೆತಿಲ್ಲ. ಬೋರೆದೇವರ ದೇವಾಲಯವು ಸ್ಥಳೀಯ ಕಣಶಿಲೆಯಿಂದ ನಿರ್ಮಾಣಗೊಂಡಿದ್ದು, ಸ್ಥಳೀಯ ಪಾಳೆಯಗಾರರ ಶೈಲಿಯನ್ನು ಹೋಲುವಂತಿದೆ. ಗರ್ಭಗುಡಿ ಮಾಂತ್ರ ಸುಮಾರು ೯ ಅಡಿ ಅಗಲ, ೭ ಅಡಿ ಎತ್ತರ ಮತ್ತು ೯ ಅಡಿ ಉದ್ದವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಸುಂದರವಾದ ಮತ್ತು ದೊಡ್ಡ ಗಾತ್ರದ ಭೈರವನ ವಿಗ್ರಹವಿದೆ. ಪಕ್ಕದಲ್ಲಿ ಚಿಕ್ಕದಾದ ಗಣೇಶನ ವಿಗ್ರಹವುಂಟು. ಇತ್ತೀಚೆಗೆ ದೇವಾಲಯಕ್ಕೆ ಬಂಡೆಗಳನ್ನು ಹಾಸಿದ್ದು, ನಾಲ್ಕು ಕಲ್ಲಿನ ಕಂಬಗಳನ್ನು ಆಸರೆಗೆ ನಿಲ್ಲಿಸಲಾಗಿದೆ. ಮುಖ ಮಂಟಪದ ಕಟ್ಟಡ ಬಿದ್ದು ಹೋಗಿದ್ದು, ಅವಶೇಷಗಳು ಮಾತ್ರ ಇವೆ. ಇದರ ವಿಸ್ತೀರ್ಣ ಸು. ೧೯ ಅಡಿ ಅಗಲ, ೧೫ ಅಡಿ ಉದ್ದವಿದ್ದು, ನೋಡಲು ಆಕರ್ಷಕವಾಗಿರದೇ ಪೊದೆಗಳಿಂದ ಮುಚ್ಚಿಹೋಗಿರುವುದು ದುರದೃಷ್ಟಕರ. ಕರ್ನಾಟಕದಲ್ಲಿ ಬೇಡರು ಮತ್ತು ಒಕ್ಕಲಿಗರು ಹೆಚ್ಚಾಗಿ ಈ ದೇವತೆಯ ಆರಾಧಕ ರಾಗಿರುವರು.

ಈ ಪ್ರದೇಶದಲ್ಲಿ ಗಂಗ, ಕದಂಬ, ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ಸ್ಥಳೀಯ ಪಾಳೆಯಗಾರರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಹೀಗಾಗಿ ಈ ದೇವಾಲಯವನ್ನು ನಿರ್ಮಿಸಿದವರು ಯಾರೆಂಬುದು ತಿಳಿದುಬಂದಿಲ್ಲ. ಪ್ರಾಚೀನ ಶೈಲಿಯ ದೇವಾಲಯವೆಂದರೂ ಜೀರ್ಣೋದ್ಧಾರವು (ಮಧ್ಯ ಕಾಲದ ನಂತರ) ಸ್ಥಳೀಯ ಬೇಡರ ನಾಯಕನಾಗಿದ್ದ ನಡುಗಡ್ಡೆ ನಾಯಕನಿಂದ ನಡೆಯಿತು ಎಂದು ತಿಳಿದುಬರುತ್ತದೆ. ಹೀಗಾಗಿ ಈ 'ನಡುಗಡ್ಡೆ ನಾಯಕ' ನ ಮನೆತನ, ಆಳ್ವಿಕೆ, ನಿರ್ಮಾಣ ಕಾರ್ಯಗಳ ಬಗೆಗೆ ಪರಿಶೀಲನೆಯಾಗಬೇಕಿದೆ.

ಬೋರೆದೇವರ ವಿಗ್ರಹ ಮೂಲತಃ ಇಲ್ಲಿಯದಲ್ಲ ಎನ್ನುವ ಸಂಗತಿ ಕ್ಷೇತ್ರಕಾರ್ಯದಿಂದ ತಿಳಿದುಬಂದಿತು. ಸ್ಥಳೀಯರ ಪ್ರಕಾರ ಚಿಂತಗುಂಟ್ಲ ಬೋರವನೇ ಇದಕ್ಕೆ ಮೂಲ. ಅಲ್ಲಿಂದ ಹುಟ್ಟಿ ಇಲ್ಲಿಗೆ ತರಲಾಗಿದೆ ಎನ್ನುವುದುಂಟು.(೨) ವಾಸ್ತವವಾಗಿ ಇವೆರಡು ದೇವಾಲಯಗಳ ವಾಸ್ತು ಶಿಲ್ಪ ಸಮುಚ್ಚಯ ಇತರ ಲಕ್ಷಣಗಳಿಂದ ಬೇರೆ ಬೇರೆ ಎನ್ನಬಹುದು.

ಈ ಚಿಂತಗುಂಟ್ಲ ಬೋರವನಿಗೆ ಮತ್ತು ಹೂಡೇಂನ ಬೋರೆದೇವರಿಗೆ ಸಾಂಸ್ಕೃತಿಕವಾಗಿ ಭಿನ್ನತೆಯಿದೆ. ಸ್ಥಳೀಯರು ಬೋರೆದೇವರನ್ನು ಉದ್ಭವಲಿಂಗವೆಂದು ನಂಬಿದರೂ, ಸ್ವಾಭಾವಿಕ ಕಾಡುಕಲ್ಲುಲಿಂಗ ರೂಪದಲ್ಲಿದೆ. ಇದಕ್ಕೆ ನಡುಗಡ್ಡೆ ನಾಯಕರು ಹೂಡೇಂನಲ್ಲಿ ಪೂಜಾರಿಗಳಾದರೆ, ಚಿಂತಗುಂಟ್ಲ ಬೋರವನಿಗೆ ಗೊಡಗುದಾಸರಿ ಬೆಡಗಿನವರು (ನಾಯಕ) ಪೂಜಾರಿಗಳು. ಹೀಗಾಗಿ ಎಲ್ಲ ವಿಧದಲ್ಲಿಯೂ ಬೋರೆ ದೇವರುಗಳು ಬೇರೆ ಬೇರೆ. ಐತಿಹಾಸಿಕವಾಗಿ ಪ್ರಾಮುಖ್ಯ ಪಡೆದ ಹೂಡೇಂನ ಬೋರೆದೇವರು ಸಾಂಸ್ಕೃತಿಕವಾಗಿಯೂ ಖ್ಯಾತಿಯನ್ನು ಪಡೆದಿದೆ. ಈ ಪೂಜಾರಿಗಳು ತಿಳಿಸುವಂತೆ : ಮ್ಯಾಸಬೇಡರ ಮಂದಲವಾರು ಬೆಡಗಿನ ನಡುಗಡ್ಡೆನಾಯಕರು ಇದರ ವಾರಸುದಾರರು. ಈ ನಡುಗಡ್ಡೆ ನಾಯಕರು ಹಿಂದೆ ರಾಜ್ಯಾಳ್ವಿಕೆ ನಡೆಸಿದ ಮನೆತನ ವಾದಂತಿದೆ. ಇವರಿಂದು ತುಂಬಾ ಹೀನಾಯ ಸ್ಥಿತಿಯಲ್ಲಿದ್ದಾರೆ. ಹೂಡೇಂ ಸುತ್ತ-ಮುತ್ತಲಿನ ಪ್ರದೇಶಗಳ ಜವಾಬ್ದಾರಿಯನ್ನು ನೋಡಿಕೊಳ್ಳಲು ಆನೆಗೊಂದಿ ಅರಸರು ಅಪ್ಪಣೆ ಕೊಟ್ಟಿದ್ದರೆಂದು ತಿಳಿದುಬರುತ್ತದೆ. ಇಂದಿಗೂ ಇವರಿಗೆ ಅರಮನೆ ಮತ್ತು ಗುರುಮನೆ ಆನೆಗುಂದಿಯೆ ಆಗಿರುವುದರಿಂದ ಮೇಲಿನ ಸಂಶಯವನ್ನು ದೃಢಪಡಿಸುವುದು ಕಷ್ಟ. ನಡುಗಡ್ಡೆ ನಾಯಕನ ರಾಜ್ಯವು ಹೀಗಿತ್ತು: ಉತ್ತರಕ್ಕೆ ವಿಜಯನಗರ - ಜರಿಮಲೆ ಮತ್ತು ಗುಡೆಕೋಟೆ, ಪೂರ್ವಕ್ಕೆ ರಾಯದುರ್ಗ, ಮೊಳಕಾಲ್ಮೂರು ಮತ್ತು ನಿಡಗಲ್ಲು ಪಾಳೇಯಗಾರರು, ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ನಾಯಕನಹಟ್ಟಿ, ಹರ್ತಿಕೋಟೆ ಮತ್ತು ಚಿತ್ರದುರ್ಗ ಮೊದಲಾದ ಪಾಳೆಯಗಾರರ ಆಳ್ವಿಕೆಯಿತ್ತು. ಈ ಮಧ್ಯೆಯಿರುವ ಚಿನ್ನಹಗರಿ ಮತ್ತು ವೇದಾವತಿ ನದಿಗಳ ಮಧ್ಯದ ಭೂಭಾಗವನ್ನು 'ನಡುಗಡ್ಡೆ' ಎನ್ನುತ್ತಿದ್ದರು. ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದವನಿಗೆ ನಡುಗಡ್ಡೆ ನಾಯಕ ಎಂದು ಕರೆಯಲಾಯಿತು. ಹೀಗಾಗಿ 'ನಡುಗಡ್ಡೆ' ಭೌಗೋಳಿಕ ಪ್ರದೇಶವಾಗಿದ್ದು, 'ನಾಯಕ' ಎಂಬುದು ಅಧಿಕಾರಯುಕ್ತ ಪದವಿ ಇರಬೇಕು. ಇಲ್ಲಿನ ನಾಯಕನಿಗೂ ಮತ್ತು ಪೂಜಾರಹಳ್ಳಿಯ ಸಮೀಪದ ಚನ್ನಪಟ್ಟಣಕ್ಕೂ ಅವಿನಾಭಾವ ಸಂಬಂಧ ಬೆಳೆದ ಸಾಧ್ಯತೆಯಿದೆ.(೮)

ಗರ್ಭಗೃಹದಲ್ಲಿ ಭೈರವನ ನಗ್ನಮೂರ್ತಿಯಿದ್ದು, ಅಗಲವಾದ ಮುಖ, ಗಂಭೀರ ಮುಖಮುದ್ರೆ, ಕರ್ಣಕುಂಡಲ, ತ್ರಿಶೂಲ, ಢಮರುಗ, ಪಾಶ, ಪಾನಪಾತ್ರೆ ಮತ್ತು ಅಕ್ಷಮಾಲೆ ಯಿದೆ. ಹೆಗಲಿನಿಂದ ಸೊಂಟದವರೆಗೆ ಯಜ್ಞೋಪವೀತ, ಕಟಿಸೂತ್ರ, ಮಾಲ್ಯಗಳು ಕಂಡುಬರುತ್ತವಲ್ಲದೆ, ಜಟಾಬಂಧದಲ್ಲಿ ಜಟಾಮಂಡಲಗಳಿವೆ. ಗಂಗರ ಕಾಲದ ಭೈರವ ಶಿಲ್ಪವನ್ನು ಹೋಲುತ್ತದೆ.

ಕರ್ನಾಟಕ, ಮಹಾರಾಷ್ಟ್ರದಲ್ಲಿಯೂ ಗ್ರಾಮರಕ್ಷಕನಿಗೆ ಭೈರವ ಪೂಜೆ ಮಾಡುವುದುಂಟು. ಅಲ್ಲದೆ ಕೆರೆಗಳ ರಕ್ಷಕನೆಂದು 'ಕೋಡಿಭೈರವ' ಎಂದು ಪ್ರತಿಷ್ಠಾಪಿಸುತ್ತಾರೆ. ಮಹಾರಾಷ್ಟ್ರದಲ್ಲಿ *'ಬಹಿ ಶೋಬಾ'* ಎಂಬ ಹೆಸರಿನ ದೇವಾಲಯವಿದೆ. ಪಂಜಾಬಿನಲ್ಲಿ

ಮೃತ್ಯುಭಯ ನಿವಾರಕನಾದ ದೇವರೆಂದು ಭೈರವನನ್ನು ಆರಾಧಿಸಲಾಗುತ್ತದೆ. ರಾಜಸ್ಥಾನದಲ್ಲಿ ಶಮೀಮರದ ಕೆಳಗೆ ಭೈರವನ ಮೂರ್ತಿ ಸಂಕೇತವಾಗಿಟ್ಟು ಪೂಜಿಸುತ್ತಾರೆ. ಕರ್ನಾಟಕದಲ್ಲಿ ಸೀತಿಬೆಟ್ಟ, ಆದಿಚುಂಚನಗಿರಿಯಲ್ಲಿ ಭೈರವನ ಭಕ್ತರು (ನಾಥಪಂಥ) ಒಕ್ಕಲಿಗರಿದ್ದಾರೆ.[೯] ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರುವಿನ ನುಂಕೆಮಲೆಯಲ್ಲಿ ಭೈರವಸಿದ್ಧರೆಂಬ ಪಂಥ ಬೆಳೆದುಬಂದಿದೆ. ಈ ಹಿನ್ನೆಲೆಯಲ್ಲಿ ಹೂಡೇಂ ಗ್ರಾಮದ ಭೈರವನನ್ನು ಅವಲೋಕಿಸಬಹುದಾಗಿದೆ.

ಇಲ್ಲಿ ಕಂಡುಬರುವ ಇತರ ದೇವಾಲಯಗಳೆಂದರೆ : ಕಂಪಳದೇವರಗುಡಿ, ಈಶ್ವರ ಗುಡಿ, ಬಸವಣ್ಣನ ಗುಡಿ, ಉಜ್ಜಿನಿ ಸಿದ್ದೇಶ್ವರ ಸ್ವಾಮಿ ದೇವಸ್ಥಾನ (ಮಠ), ಊರುಮಾರಮ್ಮ, ಚೌಡಮ್ಮ, ಗಾಣಗಟ್ಟೆ ಮಲಿಯಮ್ಮ, ದೇಗುಲಗಳಲ್ಲದೆ ನಿಲುವುಗಲ್ಲುಗಳೂ ಇವೆ.



ಶಿಲ್ಪಗಳು

ಚಿನ್ನಹಗರಿ ನದಿಯ ಪರಿಸರದಲ್ಲಿ ಅನೇಕ ಶಿಲ್ಪಾವಶೇಷಗಳು ಕಂಡುಬರುತ್ತವೆ. ಈ ವ್ಯಾಪ್ತಿಗೆ ಹೂಡೇಂ ಗ್ರಾಮ ಒಳಪಡುತ್ತದೆ. ಇಲ್ಲಿನ ಬೋರೆದೇವರ ದೇವಸ್ಥಾನದಲ್ಲಿ ಭೈರವ, ವಿಷ್ಣು, ಸೂರ್ಯ, ಪಾರ್ಶ್ವನಾಥ ಮತ್ತು ವಿಘ್ನೇಶ್ವರ ಶಿಲ್ಪಗಳಿವೆ. ಈ ಐದು ಶಿಲ್ಪಗಳನ್ನು ಪಂಚ ಭೂತಗಳ ದೇವತೆಗಳೆಂದು ಕರೆಯಬಹುದು. ವಿಷ್ಣು-ಆಕಾಶ, ಸೂರ್ಯ-ಗಾಳಿ, ಶಿವ-ಭೂಮಿ, ವಿಘ್ನೇಶ್ವರ-ನೀರು ಮತ್ತು ದೇವಿಯನ್ನು ಬೆಂಕಿಗೆ ಹೋಲಿಸಲಾಗಿದೆ. ಹೀಗೆ ಪ್ರತಿಯೊಂದಕ್ಕೂ ಸಮಾನವಾದ ಸ್ಥಾನ-ಮಾನ ಕಲ್ಪಿಸಲಾಗಿರಬೇಕು. ವೈದಿಕ ಸಂಪ್ರದಾಯದ ಶೈವರಾಗಲಿ ವೈಷ್ಣವರಾಗಲೀ ನಿತ್ಯಪೂಜೆಯಲ್ಲಿ ಶಿವನಿಗೂ, ವಿಷ್ಣುವಿಗೂ ಭೇದವೆಣಿಸುವುದಿಲ್ಲ; ಶಿವರೂಪದ ವಿಷ್ಣುವಿಗೂ ವಿಷ್ಣುರೂಪದ ಶಿವನಿಗೂ ಸಮಾನವಾಗಿಯೇ ಪೂಜೆ ಸಲ್ಲುತ್ತದೆಂಬ ಮಾತನ್ನು ಇದಕ್ಕನ್ವಯಿಸಿ ಒಪ್ಪಿಕೊಳ್ಳಬಹುದು.[೧೦] ಸ್ಥಳೀಯ ಶೈವ ಮತ್ತು ವೈಷ್ಣವರು ಇದರ ಬಗೆಗಿನ ರೂಢಿ-ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಷ್ಟಲ್ಲದೆ ನಾಥಪಂಥಕ್ಕೆ ಸಂಬಂಧಿಸಿದ ಬೇಡರು ಪ್ರಾಣಿ ಬಲಿಯನ್ನು ಕೊಡುವುದು ಗಮನಾರ್ಹ.

ಭೈರವ : ಗರ್ಭಗೃಹದಲ್ಲಿ ಭೈರವನ ವಿಗ್ರಹ ಆರಾಧನೆಗೊಳಗಾಗಿದೆ. ೪ ಅಡಿ ಎತ್ತರ, ೩ ಅಡಿ ಅಗಲವಿದ್ದು, ಸ್ಥಳೀಯ ಕಣಶಿಲೆಯಿಂದ ಕೆತ್ತಲಾಗಿದೆ. ಇದನ್ನೇ ಬೋರವನೆಂದು ಕರೆಯುತ್ತಾರೆ. ಬ್ರಹ್ಮ, ತ್ರಿಮೂರ್ತಿಗಳಲ್ಲಿ ತಾನೇ ಶ್ರೇಷ್ಟನೆಂದು ಹೆಮ್ಮೆಗೊಂಡಾಗ ಶಿವನು ಭೈರವನನ್ನು ಸೃಜಿಸಿ ಬಿಡಲು, ಅವನು ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಲು, ಅದು ಅವನ ಕೈಗಂಟಿಕೊಂಡಿತು. ಭೈರವನು ಕಾಪಾಲಿಕನಾಗಿ ತಿರುಗುತ್ತ ಕಾಶೀ ಕ್ಷೇತ್ರಕ್ಕೆ ಬರಲು ಆ ಕಪಾಲವು ಆತನ ಕೈಯಿಂದ ಜಾರಿತು ಎಂದು ತಿಳಿದುಬರುತ್ತದೆ.[೧೧] ಭೈರವ ವಿಗ್ರಹದಲ್ಲಿ ಕಮಂಡಲು, ಧನು, ಬಾಣ, ಕಪಾಲ, ವಜ್ರಾಯುಧ, ಶತಘ್ನಿ, ಖಡ್ಗ, ಪಟ್ಟಿಶ, ಶೂಲ, ಸ್ರುವ ಧರಿಸಿದ್ದಾನೆ. ದಕ್ಷಿಣಕ್ಕೆ ಅಭಿಮುಖವಾದ ಭಾಗ ನಗ್ನ ಸ್ಥಿತಿಯಲ್ಲಿದೆ. ಇದೇ ಗ್ರಾಮದ ಯರ್ರಿಬೋರಯ್ಯನವರು ಇದರ ಪೂಜಾರಿಗಳಾಗಿದ್ದಾರೆ.

ವಿಷ್ಣು : ವಿಷ್ಣುವಿನ ಶಿಲ್ಪ ಶಿಥಿಲಗೊಂಡಿರುವ ದೇವಾಲಯದ ಮುಖಮಂಟಪದಲ್ಲಿದೆ. ಸೀಗೆ ಮರದ ಬುಡದಲ್ಲಿ ವಿಷ್ಣು, ಸೂರ್ಯ, ಜಿನ (ಪಾರ್ಶ್ವನಾಥ) ಇತರ ಶಿಲ್ಪಗಳಿವೆ. ವಿಷ್ಣುವಿನ ಅವತಾರಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಹಿಡಿದಿರುವುದು ನೋಡಿದರೆ ಕೇಶವನಂತೆ ಕಂಡರೂ; ಬಲದಿಂದ ಚಕ್ರ, ಶಂಖ, ಗದಾ, ಪದ್ಮ ಹಿಡಿದಿರುವುದರಿಂದ ಜನಾರ್ಧನನೆಂದು ಹೇಳಬಹುದು. ಈ ಶಿಲ್ಪ ೩ ಅಡಿ ಎತ್ತರ, ೧೧/೨ ಅಡಿ ಅಗಲವಿದೆ. ಕಪ್ಪು ಕಲ್ಲಿನಿಂದ ನಿರ್ಮಾಣವಾಗಿದ್ದು, ಶಿಥಿಲಗೊಂಡು ಸ್ಥಾನಾಂತರಗೊಂಡಿದೆ.

ಸೂರ್ಯ : ದೇವಾಲಯದ ಮುಂಭಾಗದಲ್ಲಿ ಈ ಶಿಲ್ಪವಿದೆ. ಸೂರ್ಯನಿಗೆ ಆದಿತ್ಯ, ರವಿ, ಭಾಸ್ಕರ, ವೈವಸ್ವತನೆಂದು ಪುರಾಣದಲ್ಲಿ ಕರೆಯುವರು. ಪ್ರಸ್ತುತ ಶಿಲ್ಪ ೩ ಅಡಿ ಎತ್ತರ, ೧೧/೨ ಅಡಿ ಅಗಲವಿದ್ದು, ಕಪ್ಪು ಕಲ್ಲಿನಿಂದ ನಿರ್ಮಿಸಿದ್ದಾರೆ. ಶಿಲ್ಪ ಪೂರ್ವಾಭಿಮುಖವಾಗಿದೆ. ಈ ಶಿಲ್ಪದ ವೈಶಿಷ್ಟ್ಯವೆಂದರೆ : ಪ್ರಸನ್ನ ಮೊಗದ ಈ ಶಿಲ್ಪಕ್ಕೆ ಉದ್ದನೆಯ ಕಿರೀಟ, ಮಕರ ಕುಂಡಲ, ಕತ್ತಿನಲ್ಲಿ ಚಿಕ್ಕದಾದ ಉದ್ದನೆಯ ಗಂಟೆಗಳ ಸರ, ಯಜ್ಞೋಪವೀತಗಳಿವೆ. ಮುಂಗೈಗಳಲ್ಲಿ ದಪ್ಪನಾದ ಕಡಗಗಳಿದ್ದು, ಉದರ ಬಂಧವೂ ಇದೆ. ಎರಡು ಕೈಗಳನ್ನು ಪಕ್ಕಕ್ಕೆ ತಂದು ಕಮಲದ ಮೊಗ್ಗುಗಳನ್ನು ಹೆಗಲ ಮೇಲೆ ಇರಿಸಿಕೊಂಡಂತೆ ಕೆತ್ತಲಾಗಿದೆ.



ನಡುಬಂಧದಿಂದ ಎರಡೂ ಕಡೆ ಬಟ್ಟೆ ಇಳಿಬಿದ್ದಿದ್ದು ಅದರ ಮಧ್ಯ ಭಾಗವನ್ನು ಎತ್ತಿ ಸಿಕ್ಕಿಸಲಾಗಿದೆ. ಆಶ್ಚರ್ಯವೆಂದರೆ : ಶಿಲ್ಪದ ಹಿಂಭಾಗದಲ್ಲಿ ನವಿಲಿನ ಚಿತ್ರವನ್ನು ಕೆತ್ತಿರುವುದು. ಇದನ್ನು ಸ್ಕಂಧ ಅಥವಾ ಕಾರ್ತಿಕೇಯನೆಂದು ಊಹಿಸಲು ಸಾಧ್ಯವಿದೆ. ಸಾಮಾನ್ಯವಾಗಿ ಕುದುರೆ ಚಿತ್ರವನ್ನು ಸೂರ್ಯ ಶಿಲ್ಪಗಳಲ್ಲಿ ಕೆತ್ತಿರುವುದು ನೋಡುತ್ತೇವೆ.(೧೨) ಅಂದರೆ ಇದು ಈ ಭಾಗದಲ್ಲಿದ್ದ ಸೂರ್ಯಾರಾಧನೆ ಬಗ್ಗೆ ದೃಢಪಡಿಸುತ್ತದೆ. ಗಂಗರ ಕಾಲದಲ್ಲಿ ಈ ತರದ ಸೂರ್ಯಶಿಲ್ಪಗಳನ್ನು ಕಂಪಲಾಪುರ (ಪಿರಿಯಾಪಟ್ಟಣ ತಾ.), ಗಂಗವಾಡಿ, ತಲಕಾಡು, ಕಮ್ಮಸಂದ್ರ ಮುಂತಾದವುಗಳಲ್ಲಿ ಕಾಣಬಹುದು. ಹೂಡೇಂ ಭಾಗದಲ್ಲಿ ಸೂರ, ಸೂರಪ್ಪ, ಸೂರಯ್ಯ, ಸೂರಮ್ಮನೆಂಬ ಹೆಸರುಗಳನ್ನು ಈ ಹಿನ್ನೆಲೆಯಲ್ಲಿ ಇಟ್ಟುಕೊಂಡಿರಬೇಕು.

ಜಿನ ಮೂರ್ತಿ : ಈ ಮೂರ್ತಿ ದೇವಾಲಯದ ಮುಂಭಾಗದಲ್ಲಿದ್ದು, ಜಿನ, ಪಾರ್ಶ್ವನಾಥನೆಂದು ಹೇಳಲಾಗುತ್ತದೆ. ಶಿಲ್ಪ ಶಿಥಿಲಗೊಂಡಿರುವುದರಿಂದ ಖಚಿತವಾಗಿ ಏನೆಂದು ಗುರುತಿಸಲಾಗುವುದಿಲ್ಲ.(೧೩) ಇದೇ ರೀತಿಯ ಶಿಲ್ಪವೊಂದು ಗುಡೆಕೋಟೆಯಲ್ಲಿದೆ. ಕುಳಿತಿರುವ ಭಂಗಿಯನ್ನು ನೋಡಿದರೆ, ಪಾಣಿಪೀಠದ ಮೇಲೆ ಜಿನನಂತೆ ಕಾಣಬರುತ್ತದೆ. ಆದರೂ ಪಾರ್ಶ್ವನಾಥನೆಂದು ಹೇಳುವ ಅಂಗಾಗಳೆಲ್ಲ ಮತ್ತು ಮಹಾವಿಷ್ಣುವಿಗಿರುವ ನಾಲ್ಕು ಕೈಗಳೆಂದು ಹೇಳಲು ಶಿಲ್ಪ ಶಿಥಿಲಗೊಂಡಿದೆ. ಇತಿಹಾಸ ಅಕಾದೆಮಿ ಸಮ್ಮೇಳನದ ಚರ್ಚೆಯ ಸಂದರ್ಭದಲ್ಲಿ 'ಧರಣೇಂದ್ರ' ಇರಬಹುದೆಂದು ಅಭಿಪ್ರಾಯಿಸಿದ್ದಾರೆ. ಜಿನಮೂರ್ತಿ ಎನ್ನಲು : ಮುಚಲಿಂದ ಬುದ್ಧನ ಮೂರ್ತಿ, ಪಾರ್ಶ್ವನಾಥ ತೀರ್ಥಂಕರನ ಮೂರ್ತಿಗಳಲ್ಲಿಯೂ ತಲೆಯ ಮೇಲೆ ಏಳುಹೆಡೆ ಸರ್ಪವಿರುತ್ತದೆ. ಶಿಲ್ಪದಲ್ಲಿ ಹಾವನ್ನು ದೇವತಾ ಕಲ್ಪನೆಗೆ ಅಳವಡಿಸಿಕೊಂಡಿರುವುದು ಸೈಂಧವ ಸಂಸ್ಕೃತಿಯ ಕಾಲದಿಂದಲೂ ಸಾಗಿಬಂದಿದೆ ಎನ್ನಲಾಗಿದೆ.(೧೪) ದಕ್ಷಿಣ ಭಾರತದಲ್ಲಿ ಇಂಥ ಶಿಲ್ಪಗಳಿರುವುದು ಅಪರೂಪ. ಜೈನಧರ್ಮದ ಶಾಖೆಗಳು ಈ ಭಾಗದಲ್ಲಿದ್ದವು ಎಂಬುದಕ್ಕೆ ಇದು ಒಂದು ಕಾರಣವಾಗುತ್ತದೆ.

ಕುದುರೆ ಕಾಳಗದ ವೀರಗಲ್ಲು : ಬೋರೆದೇವರ ಗುಡಿಯಿಂದ ವಾಯವ್ಯಕ್ಕೆ ಒಂದು ಕಿ.ಮೀ. ಅಂತರದಲ್ಲಿರುವ ಕುರುಬರ ಕರಿಯಜ್ಜಿಯ (ಹೂಡೇಂ-ತಾಯ್ಕನಹಳ್ಳಿ ರಸ್ತೆ) ವರ ಹೊಲದಲ್ಲಿ ಈ ವೀರಗಲ್ಲಿದೆ. ಇದು ಸು. ೬ ಅಡಿ ಎತ್ತರ, ೨ ೧/೨ ಅಡಿ ಅಗಲವಿದೆ. ಇಂದು ಜನರ ಅವಜ್ಞೆಗೊಳಗಾಗಿ ವಾಯವ್ಯ - ಆಗ್ನೇಯ ದಿಕ್ಕಿಗೆ ಲಂಬವಾಗಿ ಬಿದ್ದಿದೆ. ಸ್ಥಳೀಯರು ಇದರ ಕೆಲಭಾಗವನ್ನು ಶಿಥಿಲಗೊಳಿಸಿದ್ದಾರೆ. ವೀರಗಲ್ಲಿನಲ್ಲಿ ನಾಲ್ಕು ಹಂತಗಳ ಪಟ್ಟಿಕೆಗಳಿವೆ : ಕೆಳಭಾಗದಲ್ಲಿ ಅಲಂಕೃತಗೊಂಡ ಕುದುರೆ (ಅಶ್ವ) ಚಿತ್ರಣವಿದೆ. ಈ ಕುದುರೆಯ ರಕ್ಷಣೆಗಾಗಿ ವೀರ ಬಿಲ್ಲಿಡಿದು ಹೋರಾಡುವುದು ಎರಡನೇ ಪಟ್ಟಿಕೆಯಲ್ಲಿದೆ. ಮಡಿದ ವೀರನ ಮಡದಿಯನ್ನು ಗಂಧರ್ವರು ಅಥವಾ ದೇವಕನ್ಯೆಯರು ಸ್ವರ್ಗಕ್ಕೆ ಕೊಂಡೊಯ್ಯುವರು. ಕೊನೆಯಲ್ಲಿ ಸೂರ್ಯ, ಚಂದ್ರ ಮತ್ತು ಶಿವಲಿಂಗಗಳಿವೆ. ಆರ್ಥಿಕವಾಗಿ ಅತೀ ಹಿಂದುಳಿದ ಪ್ರದೇಶವಾಗಿರುವ ಈ ಸ್ಥಳದಲ್ಲಿ ಹಿಂದೊಮ್ಮೆ ಕುದುರೆ ಕಾಳಗ ನಡೆದಿರಬೇಕೆಂಬುದಕ್ಕೆ ಇದು ಸಾಕ್ಷಿ. ನಾನಾ ಕಾರಣಗಳಿಗಾಗಿ ಕುದುರೆ ಸವಾರ ಹೋರಾಡಿ ರಕ್ಷಿಸಿದ ಶ್ಲಾಘನೀಯ ಕಾರ್ಯಕ್ಕೆ ವೀರಗಲ್ಲು* ನೆಟ್ಟಿರಬೇಕು.

ನಡುಗಡ್ಡೆನಾಯಕನ ವೀರಗಲ್ಲು : ಹೂಡೇಂ ಗ್ರಾಮದ ಮಧ್ಯದಲ್ಲಿ (ಮುಷ್ಠಲಗುಮ್ಮಿದಾಂ) ಭಗ್ನಗೊಂಡ ದೇವಾಲಯದೊಳಗೆ ಈ ವೀರಗಲ್ಲಿದೆ. ಬೊಗ್ಗುಲಾರು, ಮಲ್ಲಿನಾಯಕ ಇತರ ಬೇಡರ ಮುಖಂಡರು 'ನಮ್ಮ ವಂಶದ ರಾಜನಾದ ನಡುಗಡ್ಡೆ ನಾಯಕ ರಾಜ್ಯವಾಳಿ ಮಡಿದಾಗ ಇಲ್ಲಿ ಸಮಾಧಿ ಮಾಡಿದರಂತೆ' ಎಂಬ ಸಂಗತಿಯನ್ನು ತಿಳಿಸುತ್ತಾರೆ. ಈ ನಡುಗಡ್ಡೆನಾಯಕನ ಅನುಯಾಯಿಗಳೇ ಆರಾಧಿಸುವುದರಿಂದ ಹಾಗು ಬೋರೆದೇವರ ಪೂಜಾರಿಗಳಾಗಿರುವುದರಿಂದ ಆ ದೇವಾಲಯಕ್ಕೂ ಇವನಿಗೂ

ಸಂಬಂಧವಿದೆ ಎನ್ನಬಹುದು. ರಾಜಕೀಯವಾಗಿ ಇವರ ಪಾತ್ರವನ್ನು ಅಧ್ಯಯನಿಸಲು ಆಧಾರಗಳ ಕೊರತೆಯಿಂದಾಗಿ ಮೌಖಿಕ ಆಕರಗಳ ಮೊರೆ ಹೋಗಬೇಕಾಗುತ್ತದೆ.

ಈ ಗ್ರಾಮದಲ್ಲಿ ಶಿಥಿಲವಾದ ಹಳೆಯ ಕಾಲದ ಕೋಟೆ, ಬುರುಜು, ದ್ವಾರಗಳು ಕಂಡುಬಂದಂತೆ ಆಧುನಿಕ ದೇವಾಲಯ, ಗುಡಿ ಮತ್ತು ಶಿಲ್ಪಗಳೂ ಗೋಚರಿಸುತ್ತವೆ. ಮೌಖಿಕವಾಗಿ ಕಟ್ಟಿಕೊಂಡು ಬಂದಿರುವ ಚರಿತ್ರೆಯ ಸಂಗತಿಗಳಿಂದ ಮೇಲಿನಂತೆ ತಿಳಿಸಬಹುದಾಗಿದೆ. ಒಬ್ಬ ನಿಯೋಜಿತ ಅಧಿಕಾರಿ ಆಳ್ವಿಕೆ ಇದ್ದಾಗ, ಪ್ರಾಚೀನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರಬೇಕು, ಇಲ್ಲವೆ ಸ್ವತಃ ನಿರ್ಮಿಸಿರಬೇಕು. ಈಗ ಕಂಡುಬರುವ ದೇವಾಲಯ ವಿಜಯನಗರೋತ್ತರಕ್ಕೆ ಸೇರಿದೆ. ಪ್ರಸ್ತುತ ಕಂಡುಬರುವ ನಡುಗಡ್ಡೆನಾಯಕ ಬೆಡಗಿನವರು ಬೋರೆದೇವರನ್ನು ಚಿನ್ನಹಗರಿ ನದಿಯಲ್ಲಿ ವರ್ಷಕ್ಕೊಮ್ಮೆ (ಮಾಘ ಮಾಸದಲ್ಲಿ) ಗಂಗೆ ಸ್ನಾನ ಮಾಡಿಸುತ್ತಾರೆ. ವೀರಶೈವ ಗಾಣಿಗ, ಸಜ್ಜನರಿಗೂ ಇದು ಮನೆ ದೇವರು. ಪೂಜಾರಿಗಳು ಮಾತ್ರ ಬೇಡರೆಂಬುದು ವಿಶೇಷ. ಹೀಗಾಗಿ ಹಿಂದೊಮ್ಮೆ ಬೇಡರ ಸಂಸ್ಥಾನವಾಗಿದ್ದು ಅವನತಿಯ ನಂತರ ಅನುಯಾಯಿಗಳ ಗತಪರಂಪರೆಯ ಪ್ರತೀಕವಾಗಿ ಅರಸನನ್ನು ಆರಾಧಿಸುವ ಕ್ರಮವನ್ನು ಬೆಳೆಸಿಕೊಂಡಿರಬೇಕು

(ಪ್ರಬಂಧದ ಸಿದ್ಧತೆಯಲ್ಲಿ ನೆರವಾದ ಬೊಗ್ಗಲು ಸೂರಯ್ಯ, ಯರ‍್ರಿ ಬೋರಯ್ಯ, ಹುಚ್ಚೋಬಯ್ಯ ಹಾಗು ಇತರ ಹೊಡೇಂ ಗ್ರಾಮಸ್ಥರು, ಮಾಹಿತಿ ನೀಡಿದ ಸಿದ್ದೇಶ್ವರ ಸ್ವಾಮಿ ಮತ್ತು ಛಾಯಾಚಿತ್ರಗಳನ್ನು ತೆಗೆದುಕೊಟ್ಟ ಜಂಗಳಿ ಪಾಲಯ್ಯನವರಿಗೂ ಕೃತಜ್ಞತೆಗಳು).

*[ಇಲ್ಲಿ ಶಿಲ್ಪದ ಚಿತ್ರವನ್ನು ಒದಗಿಸಿಲ್ಲವಾದರೂ ಲೇಖಕರ ವರ್ಣನೆಯನ್ನು ಗಮನಿಸಿದರೆ ವರ್ಣನೆಯ ರೀತ್ಯಾ, ಅಲಂಕೃತ ಕುದುರೆಯ ರಕ್ಷಣೆಗೆ ವೀರ ಹೋರಾಡಿದ ದೃಶ್ಯವೆಂದರೆ ಬಹುಶಃ ರಾಜಾಶ್ವ, ಪಟ್ಟದ ಕುದುರೆ ಅಥವಾ ಬೋರೆದೇವರ ಕುದುರೆ ಅಥವಾ ಬೊಮ್ಮ ಪೂಜಾ ಸಂಬಂಧೀ ಅದಾಗಿರಬಹುದು. ಕೊಡಗಿನ ಪಾರಣಮಾನಿಯ ಕುದುರೆವಧೆ (ಈಗ ಬಿದಿರು ಕುದುರೆ) ಯಂತೆ, ಇಲ್ಲಿಯೂ ಸ್ಥಳೀಯ ಜನಪದ ಅಶ್ವಮೇಧ ಕುದುರೆಯ ಅಪಹರಣದ ಸಂದರ್ಭದಲ್ಲಿ ಆದ ಕಾಳಗವೂ ಇರಬಹುದೆ? ಅದರ ಅಪಹರಣ ನಡೆದಾಗ ವೀರ ಹೋರಾಡಿರಬೇಕು. ಅಪ್ಸರಾ ಸಹಯಾನ ಹಂತದಲ್ಲಿ ವೀರ ಹಾಗು ವೀರನ ಮಡದಿ ಅಥವಾ ವೀರನು ಅಪ್ಸರೆಯರೊಡನೆ ಸಾಗುವ ಚಿತ್ರವಿರುತ್ತದೆ. ಲೇಖಕರ ವಿವರಣೆಯಲ್ಲಿ 'ವೀರನ ಮಡದಿ'ಯ ಅಪ್ಸರಾ ಸಹಯಾನ ಮಾತ್ರವಿದೆ. ಹಾಗಿದ್ದರೆ, ಇದು ವೀರೆಯ ಅಶ್ವಕಾಳಗವಿರಬಹುದೇ? ವೀರೆಯ ಕಾಳಗದ ಶಿಲ್ಪವೇ ಎಂದಾದರೆ ಇದೊಂದು ಅಪೂರ್ವ ಕುದುರೆಗೋಳ! (ತುರುಗೋಳದಂತೆ)ದ ಶಿಲ್ಪವಾಗಬಹುದು. ಶಿಲ್ಪದ ಮೇಲಿನ ಹಂತದ ವಿವರಣೆ ವೀರಗಲ್ಲು ಶಾಸನ ಪರಿಭಾಷೆಯಲ್ಲಿ ಕೈಲಾಸಕ್ಕೆ ಸಂಬಂಧಿಸಿದ್ದೆಂದು ತೋರುತ್ತದೆ - (ಸಂ.)]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಕನ್ನಡ ನಿಘಂಟು**, ಸಂ -೧, ೧೯೭೦, ಪು. ೧೦೧೪.

*೨. ಪಂಡಿತ ಚಿ. ವಿ. ಕವಲಿ (ಸಂ) : **ಸಚಿತ್ರ ಕನ್ನಡ-ಕನ್ನಡ ಕಸ್ತೂರೀಕೋಶ**, ಧಾರವಾಡ, ಪು. ೯೪೪.

*೩. **ಕನ್ನಡ ನಿಘಂಟು**, ಸಂ.೭, ಪು. ೮೯೩೪.

*೪. **ಇತಿಹಾಸ ದರ್ಶನ**, ಸಂ - ೧೧, ಪು. ೨೩.

*೫. ನೋಡಿ. ಅದೇ : ೨೬.

*೬. ಅದೇ : ೨೬.

*೭. ಚಿಂತಗುಂಟ್ಲ ಬೋರೆ ದೇವರು ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ, ಕುದಾಪುರ ಸಮೀಪ ಬೋರೆ ದೇವರ ಹಟ್ಟಿಯಲ್ಲಿದೆ. ಮೊಳಕಾಲ್ಮೂರು ತಾಲೂಕಿನ ಮರ್ಲಹಳ್ಳಿ, ಚಳ್ಳಕೆರೆ ತಾಲೂಕಿನ ನಾಯಕನ ಹಟ್ಟಿಯಲ್ಲಿ ದೊರೆತ ಪ್ರಾಚೀನ ಕಾಗದ ಪತ್ರಗಳಲ್ಲಿನ ವಿಷಯಗಳು ಮತ್ತು ಈ ದೇವರ ಭಕ್ತರು ತಿಳಿಸುವ ವಿಷಯಗಳು ಪರಸ್ಪರ ಭಿನ್ನವಾಗಿವೆ. ಚಿಂತಗುಂಟ್ಲ ಬೋರವ ಎಂಬುದು ಉದ್ಭವಲಿಂಗವೆಂಬುದು ಸ್ಥಳೀಯರ ಅಭಿಪ್ರಾಯ. ರಾಕ್ಷಸಿ ಸ್ವರೂಪದ, ದುಷ್ಟರಾಜನಾದ ಕೊಡಗಲು ಬೊಮ್ಮನಿಂದ (ಮುತ್ತಿಗಾರಹಳ್ಳಿ ಪ್ರದೇಶದಲ್ಲಿದ್ದ ಕಿರು ಪಾಳೆಯಗಾರ) ಜನರು ತತ್ತರಿಸಿ ಹೋಗಿದ್ದರು. ಎತ್ತು, ಟಗರು, ಹೋತು, ಬೆಣ್ಣೆ, ಮೊಸರು ಸೇರಿದಂತೆ ಅನೇಕ ವಿಧದ ಸುಂಕಗಳನ್ನು ವಿಧಿಸಿ ಬರ್ಬರ ಆಡಳಿತ ನಡೆಸುತ್ತಿದ್ದನಂತೆ. ಈ ನಿರಂಕುಶ ಪ್ರಭುವನ್ನು ಹತ್ತಿಕ್ಕಲು ನಾಯಕ ಜನಾಂಗದ ಹಿರಿಯರು 'ಚಿಂತನಾಸಭೆ' ನಡೆಸಿದ ಸ್ಥಳಕ್ಕೆ 'ಚಿಂತಗುಂಟ್ಲ' ಎಂದು ಕರೆದು ದೇವಾಲಯ ನಿರ್ಮಿಸಿದರಂತೆ.

ಬೊಮ್ಮನು ಸಾಯಬೇಕೆಂದು ಎಲ್ಲ ಜನರು ಸೇರಿ ಯಜ್ಞ, ಹೋಮಗಳನ್ನು ಮಾಡುತ್ತಿದ್ದರು. ವಾಸೆ (ನಿವಾಳಿ) ಕೊಯ್ಯುವ ಸರದಿ ಬಂದಾಗ ಯರಮಂಚಿನಾಯಕ ಇನ್ನು ಬಂದಿರಲಿಲ್ಲ (ಓಬಣ್ಣನ ಹಳ್ಳಿ, ಮೊಳಕಾಲ್ಮೂರು ತಾ||). ಕಾರ್ಯಗಳು ಬಿರುಸಾಗಿ ನಡೆಯುತ್ತಿದ್ದವು. ನಾಯಕ ತಡವಾಗಿ ಬಂದಾಗ ಕೆಲವು ಕಾರ್ಯಗಳು ಮುಗಿದಿದ್ದವು. ಆಗ ಕರೆ ಹೋತು ಸಿಗಲಿಲ್ಲದ ಕಾರಣ ತನ್ನ ಏಕೈಕ ಮಗನನ್ನೇ ಏಳು ಬಾರಿ ಕಡಿದು, ಸೂರ್ಯನಿಗೆ

ಕೈಮುಗಿದು (ಸೂರ್ಯ ಮೊಕ್ಕು), ಕಪ್ಪು ಬಣ್ಣದ ಹಾಲು ಕರೆಯಬೇಕು, ಒಣಗಿದ ಮರ ಚಿಗುರಬೇಕು, ಚಿಗುರಿದ ಮರ ಒಣಗಬೇಕು ಎಂದು ಪಂಥ ಕಟ್ಟಿಕೊಂಡು ಇವೆಲ್ಲವು ಈಡೇರಿದರೆ ಕೊಡಗಲು ಬೊಮ್ಮನು ಸಾಯುತ್ತಾನೆ. ಯರಮಂಚಿನಾಯಕನ ಪಂಥದಂತೆ (ಷರತ್ತು) ಎಲ್ಲವೂ ನಡೆದವು. ಕೊಡಗು ಬೊಮ್ಮನು ಸತ್ತ ಸುದ್ದಿ, ಕೇಳಿ ಸುಟ್ಟ ಹೊಗೆ - ನೋಡಿದಾಕ್ಷಣ ಎಲ್ಲರೂ ವಿಮುಕ್ತರಾದೆವೆಂದು ಬೋರುವಸಿಗೆ 'ಪರುವು' ಮಾಡಿದರು.

ಈ ದೇವರಿಗೆ ಗಂಡಾಧಿಗಂಡು ಬೋರವ, ಚಿಂತಗುಂಟ್ಲು ಬೋರವ, ಚಿಗುರುಗುಟ್ಲು ಬೋರವ, ಪಾಲಜಟ್ಲು ಪರಮೇಶ್ವರ. ಶ್ರೀಶೈಲ ಮಲ್ಲಿಕಾರ್ಜುನ ಎಂದೆಲ್ಲ ಕರೆದುಕೊಳ್ಳುತ್ತಾರೆ. ಪಶ್ಚಿಮ ದಿಕ್ಕಿನಿಂದ ಬಂದ ಮೂರು ಜನ ರಸಸಿದ್ಧರು ಶ್ರೀಶೈಲಕ್ಕೆ ಯಾತ್ರೆ ಹೋಗುವ ದಾರಿ ಮಧ್ಯದಲ್ಲಿ ಬೋರವನ ಕುದುರೆಯನ್ನು ತಡೆದರಂತೆ. ಬಹುಶಃ 'ಬೋರವ' ಎಂಬುವನು ಭೈರವನ ವಿಗ್ರಹ ಪ್ರತಿಷ್ಠಾಪನೆ ಮಾಡಿದ ಮೇಲೆ ಅಧಿಕಾರದಿಂದ ಅವಸಾನಹೊಂದಿರಬೇಕು. ಪೂರ್ವದಲ್ಲಿ ನಡೆದ ಸಂಗತಿಗಳನ್ನು ಅವರಿಗೆ ವಿವರಿಸಿದನಂತರ ಅವನನ್ನು ಹಿಂದಕ್ಕೆ ಕರೆತಂದರು. ಬಂದಂಥ ರಸಸಿದ್ಧರು ಇಲ್ಲಿಯೇ ಐಕ್ಯರಾದರೆಂಬ ಪ್ರತೀತಿಯಿದೆ. ಇವರ ಸಮಾಧಿಗಳಿಂದು ಬೋರವನ ದೇವಾಲಯದ ಹಿಂದೆ ಇದ್ದು ಇವು ನಿತ್ಯವು ಪೂಜಾಕಾರ್ಯಗಳಿಂದ ವಿಜೃಂಭಿಸುತ್ತವೆ. ಬೋರವಸಿಗೆ ಬೇಟೆ ಕಡಿಯುವುದಿಲ್ಲ; ಸಸ್ಯಾಹಾರ ಮಾತ್ರ ನೈವೇದ್ಯ. ರಸಸಿದ್ಧರ ಸಮಾಧಿಗೆ ಬೇಟೆ ಕಡಿದು ಎಡೆ ಹಾಕುತ್ತಾರೆ. ಯರಮಂಚಿನಾಯಕನೆಂಬ ದೊರೆ ಕರೆ ಬಂತು. ಕಡಿಯುವಾಗ ಉಂಟಾಗ ಉದ್ರಿಕ್ತ ಪರಿಸ್ಥಿತಿ ಇಂದಿಗೂ ಎಲ್ಲರ ನೆನಪಿನಲ್ಲಿದೆ. ಇದರಲ್ಲಿ 'ನಲಗೇತಿ'ಗೆ ಒಂದು ಭಾಗದ ಪೂಜೆ ಮಾಡುವ ಅಧಿಕಾರವಿದೆ. 'ಗೊಡಗುದಾಸರಿ; ಇದರ ಪೂಜಾರಿಗಳು. ಇಲ್ಲಿರುವ ಗಂಧದ ಪಾದರಕ್ಷೆಗಳನ್ನು ಉಜ್ಜೇನಿ ಸ್ವಾಮಿಗಳು ಕೊಂಡೊಯ್ದರಂತೆ. ಇದರ ಸಮೀಪದಲ್ಲಿ ಬೂದಿದಿಬ್ಬವಿದ್ದು (ಪದಿ ಮುತ್ತಿಗಾರು ಐಕ್ಯರಾದರೆಂಬ ಪ್ರತೀತಿ) ನವಶಿಲಾಯುಗಕ್ಕೆ ಸೇರಿದ ನಿವೇಶನವಾಗಿದೆ. ಹೀಗೆ ಜನಪದರ ಆಶಯದಿಂದ 'ದುಷ್ಟರನ್ನು ಶಿಕ್ಷಿಸುವ', ಶಿಷ್ಟರನ್ನು ಪರಿಪಾಲನೆ ಮಾಡುವ ಧ್ಯೇಯ ತಿಳಿದುಬರುತ್ತದೆ. ಒಟ್ಟಾರೆ ಇಲ್ಲಿ 'ಬೊಮ್ಮ' ನೆಂಬುವನು ಪಾಳೆಯಗಾರನಿರಬೇಕು. ರಾಜ್ಯಾಳ್ವಿಕೆಯಲ್ಲಿ ಏರ್ಪಟ್ಟ ನ್ಯೂನ್ಯತೆಗಳಿಂದ ಅವನನ್ನು ಹತ್ತಿಕ್ಕಿದ್ದು, 'ಬೋರವ'ನೆಂಬ ವ್ಯಕ್ತಿ ಆಗಿದ್ದರಿಂದ ಈ ವೀರ ಮಡಿದನಂತರ ಅವನ ಹೆಸರಿನಲ್ಲಿ ದೇವಾಲಯ ನಿರ್ಮಿಸಿರಬೇಕು.

*೮. **ಸಂಯುಕ್ತ ಕರ್ನಾಟಕ** (ಸಾ. ಸೌ.), ೨-೮-೯೮, ಪು. ೩.

*೯. ಡಾ. ಸೂರ್ಯನಾಥ ಕಾಮತ್ (ಸಂ) : **ಶ್ರೀ ಭೈರವ ಸೀತಿಬೆಟ್ಟ**, ಶ್ರೀ ಭೈರವೇಶ್ವರ ಮತ್ತು ಶ್ರೀಪತೇಶ್ವರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸೀತಿಗ್ರಾಮ, ೧೯೯೬, ಪು. ೫ + ೮.

*೧೦. ಎಸ್. ಕೆ. ರಾಮಚಂದ್ರರಾವ್: **ಮೂರ್ತಿ ಶಿಲ್ಪ ನೆಲೆ - ಹಿನ್ನೆಲೆ**, ಬೆಂ. ವಿ. ವಿ. ಬೆಂಗಳೂರು, ೧೯೭೫, ಪು. ೪೦.

*೧೧. ಯಜ್ಞನಾರಾಯಣ ಉಡುಪ; **ಪುರಾಣ ಭಾರತ ಕೋಶ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೪, ಪು. ೪೪೬.

*೧೨. ನೋಡಿ : ಟಿ. ಎ. ಗೋಪಿನಾಥ ರಾವ್; *Elements of Hindu Iconography, P. Lxxi.* ಈ ಕೃತಿಯಲ್ಲಿ ನುಗ್ಗೇನಹಳ್ಳಿ, ಬೇಲೂರು, ಅಜ್ಮೀರು ಮುಂತಾದ ಕಡೆ ಸೂರ್ಯ ವಿಗ್ರಹಗಳು ಕಂಡುಬರುತ್ತವೆ. ಇವುಗಳಲ್ಲಿ ಐದು ಕುದುರೆಗಳ ರಥದ ಮೇಲೆ ಸೂರ್ಯನಿಂತಿದ್ದಾನೆ. ಇಲ್ಲಿ ನವಿಲು ಹಿಂಬಂಧಿಯಲ್ಲಿರುವುದು ಸೂರ್ಯ ಮತ್ತು ಸ್ಕಂಧನ ಸಂಬಂಧವನ್ನು ಎತ್ತಿ ತೋರಿಸುತ್ತದೆ.

*೧೩. ಇದು ನಾಗದೇವತೆಯನ್ನು ಹೋಲುವಂತಿದೆ. ಆದಿ ಕಾಲದಿಂದಲೂ ನಾಗಾರಾಧನೆಯನ್ನು ಈ ಮೂಲಕ ಗುರುತಿಸಬಹುದು. ಬೇಡರ 'ಪಾಮುಡ್ಲಾರು' (ಹಾವಿನವರು) ಈ ಭಾಗದಲ್ಲಿರುವುದರಿಂದ ನಾಗಾರಾಧನೆ ಇದ್ದಿರಬೇಕು. ವೃಕ್ಷ ಪೂಜೆಯೊಂದಿಗೆ 'ನಾಗಪೂಜೆ' ಹಾಸುಹೊಕ್ಕಾಗಿ ಸಾಗಿಬಂದಿದೆ. ಹಿಂದೆ ಗ್ರೀಸ್, ರೋಮ್ ಮತ್ತು ಈಜಿಪ್ಟ್‌ಗಳಲ್ಲಿತ್ತು. ಕರ್ನಾಟಕದಲ್ಲಿ ಹುತ್ತಕ್ಕೆ ಹಾಲೆರೆದು, ಅರಳಿ ಮರದ ಕೆಳಗೆ ನಾಗರಕಲ್ಲುಗಳು ಇಡುವುದನ್ನು ನಾಗುರಾಧನೆಯ ಲಕ್ಷಣವೆನ್ನಬಹುದು.

*೧೪. ಎಸ್. ಕೆ. ರಾಮಚಂದ್ರರಾವ್; **ಮೂರ್ತಿ ಶಿಲ್ಪ ನೆಲೆ - ಹಿನ್ನೆಲೆ**, ಪು. ೨೦.

ಮುತ್ತುರಾಜು*


ಸಂಬಾಪುರ ಪ್ರಾಗೈತಿಹಾಸಿಕ ಕಾಲದಿಂದ (ಸು. ಕ್ರಿ. ಪೂ. ೩೦೦೦) ಇಂದಿನವರೆವಿಗೆ - ಒಂದು ಶೋಧನೆ

ಸಂಬಾಪುರವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲೂಕಿನ ಬಸವನಬೆಟ್ಟ ಅರಣ್ಯದಲ್ಲಿರುವ ಒಂದು ಪುಟ್ಟಗ್ರಾಮ. ಈ ಗ್ರಾಮದ ಹೆಸರು ಇದೇ ತಾಲೂಕಿನ ಹರಿಹರ ಗ್ರಾಮದಲ್ಲಿನ ವಿಜಯನಗರ ಕಾಲದ ಶಾಸನವೊಂದರಲ್ಲಿ ಚಂಬಾಪುರ[೧] ಎಂದು ಉಲ್ಲೇಖವಾಗಿದೆ. ಈ ಪರಿಸರದ ಮುತ್ತತ್ತಿ[೨] ಮತ್ತು ಬ್ಯಾಟರಾಯನ ಗುಡಿಯ ಬಳಿಯಲ್ಲಿ[೩] ನವಶಿಲಾಯುಗದ ಆಯುಧಗಳಾದ ಕೈಕೊಡಲಿ ಮತ್ತು ಕೈ ಬಾಚಿಗಳು ಕಂಡುಬಂದಿವೆ (ಕಾಲ ಕ್ರಿ. ಪೂ. ಸುಮಾರು ೩೦೦೦ ದಿಂದ ೮೦೦) ಅಲ್ಲದೇ ಗದ್ದೆಮಡಿನಕ್ಕಲು,[೪] ಕೋಣಗೊಂದಿ ಉಳ್ಳಿಬೋರೆ, ಹರಿಹರಗಳ[೫] ಬಳಿ ಬೃಹತ್ ಶಿಲಾಯುಗದ (ಕಾಲ ಕ್ರಿ. ಪೂ. ಸು. ೮೦೦) ಶಿಲಾಗೋರಿಗಳು ವಿಪುಲ ಸಂಖ್ಯೆಯಲ್ಲಿ ಕಂಡುಬಂದಿದ್ದು ಸಂಬಾಪುರವು ಪ್ರಾಗೈತಿಹಾಸಿಕ ಕಾಲದ ಪರಿಸರದಿಂದ ಸುತ್ತುವರಿದಿದೆ. ಇಲ್ಲಿನ ಕೊಕ್ಕಲ್ಲು ಮಠ[೬]



ಎಂಬ ಎತ್ತರವಾದ ಸ್ಥಳದಲ್ಲಿ ೭೦ಕ್ಕೂ ಹೆಚ್ಚು ಬೃಹತ್ ಶಿಲಾಯುಗದ ಶಿಲಾವೃತ್ತಗಳು ಮತ್ತು ಕಂಡಿಕಲ್ಲು ಗೋರಿಗಳು ಕಂಡುಬಂದಿವೆ; ಕೆಲವು ಶಿಲಾವೃತ್ತಗಳು ೩೦ ಅಡಿ ವೃತ್ತಾಕಾರದ ಅಳತೆಯನ್ನು ಹೊಂದಿವೆ. ವೃತ್ತಕ್ಕೆ ಒತ್ತಾಸರೆಯಾಗಿ ಪುಟ್ಟ ಪುಟ್ಟ ಕಲ್ಲುಗಳನ್ನು ಕೆಲವು ಕಡೆ ದುಂಡನೆಯ ಬಂಡೆಗಳನ್ನು ಉಪಯೋಗಿಸಲಾಗಿದೆ. ಕಂಡಿಕಲ್ಲು ಗೋರಿಗಳಲ್ಲಿನ ಉತ್ತರ ದಿಕ್ಕಿನ ಕಲ್ಲಿಗೆ ೨ ಅಡಿ ವೃತ್ತದ ಕಂಡಿಯನ್ನು ಮಾಡಲಾಗಿದೆ. ಕೆಲವು ಶಿಲಾಗೋರಿಗಳ ಒಳಗಡೆ ಹಾಸುಕಲ್ಲುಗಳಿವೆ. ಬಹುತೇಕ ಶಿಲಾಗೋರಿಗಳ ಟೋಪಿಕಲ್ಲುಗಳು ಇಲ್ಲವಾಗಿವೆ. ಈ ಸಮಾಧಿಗಳ ಒಳಗಡೆ ಕೆಂಪು ಬಣ್ಣದ ಮಡಕೆಯ ಚೂರುಗಳು ದೊರೆತಿವೆ.

ನಂತರ ಈ ಪ್ರದೇಶವು ಗಂಗ, ಹೊಯ್ಸಳ, ಚೋಳರ ಆಳ್ವಿಕೆಗೆ ಒಳಪಟ್ಟಿದ್ದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಶಾಸನಗಳು ಲಭ್ಯವಾಗಿವೆ. ಅಲ್ಲದೇ ವೀರಭದ್ರ ವಿಗ್ರಹ, ವೀರಗಲ್ಲುಗಳು[೭] ಲಭ್ಯವಾಗಿವೆ. ನಂತರ ಸುಮಾರು ಕ್ರಿ. ಶ. ಸುಮಾರು ೧೫ನೇ ಶತಮಾನದ ಶಾಸನಗಳಲ್ಲಿ ಈ ಪ್ರದೇಶದ ಉಲ್ಲೇಖ ಕಂಡುಬಂದಿದ್ದು,[೮] ಸಂಬಾಪುರದ ಕಂಬದ ರಾಯನಗುಡಿ ಎಂಬಲ್ಲಿಯೇ ಒಂದು ಅಪ್ರಕಟಿತ ಶಾಸನ ಕಂಡುಬಂದಿದೆ.



ಕಡಿದಾದ ವಿಸ್ತಾರವಾದ ಬಂಡೆಯೊಂದರ ಮೇಲೆ ಕೆತ್ತಲಾಗಿರುವ ೧೧ ಸಾಲುಗಳ ಈ ಶಾಸನದಲ್ಲಿ ೬ ಸಾಲುಗಳನ್ನು ಓದಬಹುದಾಗಿದೆ.

* ಕನ್ನಡ ಉಪಾಧ್ಯಾಯರು, ಜವಾಹರ್ ನವೋದಯ ವಿದ್ಯಾಲಯ, ರೋಶನಾಬಾದ್, ಹರಿದ್ವಾರ ಜಿಲ್ಲೆ, ಉತ್ತರ ಪ್ರದೇಶ - ೨೪೯ ೪೦೨.

ಶಾಸನ

೧ ೦ ವಿಕ್ರಮ ಸಂವತ್ಸರದ ಕಾರ್ತಿಕ ಶುದ್ಧ (ಕ)
೨ ೦ ಬ ಸಮುದ್ರದ ಮಲ್ಲಪ್ಪನ ಮಕ್ಕಳು
೩ ೦ ಮರಯ ದೆವಪ್ಪ ಚಿಕ್ಕದೇವಪ್ಪ ಮರಪ್ಪ
೪ ೦ ಸದೆಯ ಸಂಣಪ್ಪನ ಮಗ ದೊಡದೆ
೫ ೦ ವಪ್ಪ ನಿಲಿಸಿದ ವಿಜಮಲೆಯ ಕಂ
೬ ೦ ಲ ಕಂಬ ದೆಒಜನ ಮಗ ಕೆಂಪೊಜನ ಮಕ್ಕಳು

ಲಿಪಿಯ ದೃಷ್ಟಿಯಿಂದ ಶಾಸನವು ಕ್ರಿ. ಶ. ಸುಮಾರು ೧೫ನೇ ಶತಮಾನದ ವಿಜಯನಗರ ಕಾಲಕ್ಕೆ ಸೇರುತ್ತದೆ. ಶಾಸನದಲ್ಲಿ ಉಕ್ತವಾಗಿರುವ ವಿಜಮಲೆಯ ಕಂಬ ಈಗ ಇಲ್ಲಿಯೇ ತುಂಡಾಗಿ ಬಿದ್ದಿದೆ. ಹೋರಾಟವೊಂದರಲ್ಲಿ ದೊಡ್ಡ ದೇವಪ್ಪನ ಕಡೆಯವರು ಸಾಧಿಸಿದ ವಿಜಯದ ಸಂಕೇತ ಈ ಕಲ್ಲು ಕಂಬವಾಗಿದೆ. ಈ ಶಾಸನದಲ್ಲಿ ಹಲವಾರು ವ್ಯಕ್ತಿ ನಾಮಗಳು ಬರುತ್ತವೆ.

ಈ ಶಾಸನವಿರುವ ಬಂಡೆಯ ಮೇಲೆ ವಿಶಾಲ ಸ್ಥಳದಲ್ಲಿ ಪುಟ್ಟ ಹೆಂಚಿನ ಮನೆಯು ಕಂಬದ ರಾಯನಗುಡಿ ಆಗಿದೆ. ಪೂರ್ವದಿಕ್ಕಿಗೆ ಮುಖ ಮಾಡಿರುವಂತೆ ಇರುವ ಕಕ್ಕೆಮರದಲ್ಲಿ ಮೂಡಿಸಿರುವ ಒಂದುವರೆ ಅಡಿ ಎತ್ತರದ ಆಂಜನೇಯನ ಮೂರ್ತಿ ಇದೆ. ಈ ಪರಿಸರದಲ್ಲೇ ಇರುವ ಪಾದ್ದಾರೆ ಮತ್ತು ಮುತ್ತತ್ತಿಗಳಲ್ಲಿ ಇರುವ ಆಂಜನೇಯನ ಮೂರ್ತಿಗಳನ್ನು ಮೂಲತಃ ಕಂಬದಿಂದಲೇ ಪ್ರಾರಂಭದಲ್ಲಿ ಮೂಡಿಸಲಾಗಿತ್ತು ಎಂಬುದು ಗಮನಾರ್ಹ. ಕಂಬದಲ್ಲಿ ಮೂಡಿಸಿರುವುದರಿಂದ ಜಾನಪದರು ಇತಿಹಾಸದ ಆರಂಭ ಕಾಲದಿಂದಲೂ ಇಂದಿನವರೆವಿಗೂ ಮಾನವನು ತನ್ನ ಜೀವನೋಪಾಯಕ್ಕಾಗಿ ಧಾರ್ಮಿಕ ಸಾಮಾಜಿಕ ಕಾರಣಕ್ಕಾಗಿ ತನ್ನ ಒಡನಾಟವನ್ನು ಇಲ್ಲಿ ಇರಿಸಿಕೊಂಡು ಬಂದಿದ್ದಾನೆ. ಕನಕಪುರ ತಾಲೂಕಿನ ಇತಿಹಾಸದ ಅಧ್ಯಯನದಲ್ಲಿ ಸಂಬಾಪುರವೂ ಸಹ ಹಿರಿದಾದ ಪಾತ್ರವನ್ನು ಹೊಂದಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಎಪಿಗ್ರಾಫಿಯ ಕರ್ನಾಟಕ** (ಹಳೆಯ ಆವೃತ್ತಿ) ೯, ಶಾಸನ ಸಂಖ್ಯೆ ೭೩, ಹರಿಹರ.
*೨. **ಕರ್ನಾಟಕ ವಿಷಯ ವಿಶ್ವಕೋಶ**, ಮೈಸೂರು, ಪುಟ ೧೧೧೩.
*೩. **ಕನ್ನಡಪ್ರಭ**, ಪುಟ ೫, ದಿ. ೪.೧೧.೧೯೯೭.
*೪. ಮುತ್ತುರಾಜು : 'ಕನಕಪುರ ತಾಲೂಕಿನ ಕೆಲವು ಬೃಹತ್ ಶಿಲಾಯುಗದ ಶಿಲಾಗೋರಿಗಳು - ಹೊಸ ಶೋಧನೆ'. **ಇತಿಹಾಸ ದರ್ಶನ**, ಸಂಪುಟ ೧೧/೧೯೯೬ ಪುಟ ೩೯.
*೫. ಮುತ್ತುರಾಜು : 'ಹರಿಹರ ಗ್ರಾಮದ ಪ್ರಾಚ್ಯಾವಶೇಷಗಳು - ಒಂದು ಹೊಸ ಶೋಧನೆ'. **ಇತಿಹಾಸ ದರ್ಶನ**, ಸಂಪುಟ ೧೩/೧೯೯೮. ಕ. ಇ. ಅಕಾಡೆಮಿ.
*೬. **ಉದಯವಾಣಿ**, ಪುಟ ೭, ೦೯-೧೧-೧೯೯೭.
*೭. **ಪ್ರಜಾವಾಣಿ**, ಪುಟ ೫, ೦೬-೧೨-೧೯೯೬.
*೮. ಅದೇ ಎ. ಕ. ೯, ಶಾಸನ ಸಂಖ್ಯೆ ೭೩.

ಡಾ|| ಎಚ್. ಎಸ್. ಗೋಪಾಲರಾವ್*

ಮಣ್ಣೆಯಲ್ಲಿ ಇತ್ತೀಚಿನ ಶೋಧಗಳು

ಕರ್ನಾಟಕದ ಇತಿಹಾಸವನ್ನು ಬಲ್ಲವರಿಗೆ ಮಣ್ಣೆಯ ಹೆಸರು, ಸುಪರಿಚಿತವಲ್ಲದಿದ್ದರೂ ಅಪರಿಚಿತವಲ್ಲ. ಗಂಗರಸರ ಉಪರಾಜಧಾನಿಯಾಗಿ, ರಾಷ್ಟ್ರಕೂಟರ ಆಡಳಿತಕ್ಕೆ ಸೇರಿದ್ದ ಮಾನ್ಯಖೇಟ ಅಥವಾ ಮಣ್ಣೆಯು ಕ್ರಿ. ಶ. ಸು. ೭ನೆಯ ಶತಮಾನ ದಿಂದಲೂ ರಾಜಕೀಯವಾಗಿ ಮಾತ್ರವಲ್ಲದೆ, ಸಾಂಸ್ಕೃತಿಕ ವಾಗಿಯೂ ಮಹತ್ವದ ಸ್ಥಾನವನ್ನು ಗಳಿಸಿದ್ದ ಒಂದು ಸ್ಥಳ. ಇಂತಹ ಇತಿಹಾಸ ಪ್ರಸಿದ್ಧ ಸ್ಥಳದ ಬಗೆಗೆ ಬಹು ಹಿಂದೆ ತಿಳಿದಿದ್ದ ವಿಷಯಗಳನ್ನು ಹೊರತುಪಡಿಸಿದರೆ, ಇತ್ತೀಚೆಗೆ ಕುತೂಹಲಕಾರಿ ಹಾಗೂ ಮಹತ್ವದ್ದೆನ್ನುವ ಹಲವು ವಿಷಯಗಳನ್ನು ಕುರಿತು ಕೆಲವರಿಗೆ ಆಸಕ್ತಿ ಮತ್ತು ಅನುಮಾನಗಳು ತಲೆದೋರುವವರೆಗೆ ಯಾವುದೇ ಬಗೆಯ ಆಕರ್ಷಣೆ ಉಳಿದಿರಲಿಲ್ಲ. ಮಣ್ಣೆಯ ಹಲವು ಶಾಸನಗಳು ಪ್ರಕಟಗೊಂಡಿವೆ. ಹಲವು ದೇವಾಲಯಗಳು ಆಸಕ್ತರ ಗಮನ ಸೆಳೆದಿವೆ. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ತುಂಬಾ ಕುತೂಹಲವಿರಿಸಿಕೊಂಡಿರುವ ಕೆಲವು ಸಂಶೋಧಕರ ವಿನಹ ಉಳಿದವರಿಗೆ ಅದೊಂದು ಅಂತಹ ಪ್ರಮುಖವಾದ ಸ್ಥಳವೇನಲ್ಲ.

೧೯೭೮ರ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಸ್ಥಳೀಯ ರೈತರೊಬ್ಬರಿಗೆ ದೊರೆತ ಎರಡು ತಾಮ್ರಪಟಗಳಲ್ಲಿ ಒಂದು ಗಂಗ ದೊರೆ ಶ್ರೀವಿಕ್ರಮನ ಕಾಲಕ್ಕೆ ಸೇರಿದ್ದು, ಇದು ಈವರೆಗೆ ದೊರೆತಿರುವ ಅವನ ಒಂದೇ ಒಂದು ತಾಮ್ರಶಾಸನವಾಗಿದೆ. ಅವನ ಆಳ್ವಿಕೆಯ ಉಲ್ಲೇಖವಿರುವ ಎರಡು ಶಿಲಾಶಾಸನಗಳು ಮಾತ್ರ ಈವರೆಗೆ ದೊರೆತಿದ್ದುವು. ಅಂದೇ, ಅದೇ ವ್ಯಕ್ತಿಗೆ ಮತ್ತು ಅದೇ ಸ್ಥಳದಲ್ಲಿ ದೊರೆತ ಮತ್ತೊಂದು ತಾಮ್ರಶಾಸನವು ಯುವರಾಜ ಮಾರಸಿಂಹನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಅದರ ಮೂಲಕ ತಿಳಿದ ವಿಷಯವು ಅಂದಿನಿಂದ ಇಂದಿನವರೆಗೆ ಕುತೂಹಲಗಳನ್ನು ಕೆರಳಿಸುತ್ತಾ, ಆ ಕುತೂಹಲಗಳಿಗೆ ಸಮಾಧಾನಗಳನ್ನು ಒದಗಿಸುತ್ತಾ ಇದೆ. ಪ್ರಸ್ತಾಪಿಸಿದ ಶಾಸನವು ಮಾನ್ಯಪುರದಲ್ಲಿ ಶ್ರೇಷ್ಠಿಗಣ ನಿರ್ಮಿಸಿದ್ದ ಆದಿತ್ಯ (ಸೂರ್ಯ) ದೇವಾಲಯಕ್ಕೆ ಪೊನ್ನುಡಿಕೆ ವಿಷಯದ **ಮಸೆಕ್ಕಲಿ** ಎಂಬ ಗ್ರಾಮವನ್ನು ದಾನವಾಗಿ ನೀಡಿರುವುದನ್ನು ತಿಳಿಸಿದೆ.[೧] ಆವರಿಗೆ ಮಣ್ಣೆಯಲ್ಲಿ ಸೂರ್ಯ ದೇವಸ್ಥಾನವೊಂದು ಇತ್ತು ಎಂಬುದೇ ತಿಳಿದಿರಲಿಲ್ಲ. ಅನಂತರ ಈಗಿನ ಕಪಿಲೇಶ್ವರ ದೇವಾಲಯದ ಉತ್ತರಕ್ಕಿರುವ ಗದ್ದೆಯ ಬಯಲಿನಲ್ಲಿ ಸೂರ್ಯನ ವಿಗ್ರಹವೂ ದೊರೆಯಿತು. ಹಾಗಾದರೆ ಆಗ ಇದ್ದ ಮತ್ತು ಈಗ ಕಾಣದಿರುವ ಸೂರ್ಯ ದೇವಾಲಯ ಇದ್ದ ಸ್ಥಳ ಯಾವುದು ಎಂಬ ಪ್ರಶ್ನೆ ಉಳಿಯಿತು. ಇತ್ತೀಚೆಗೆ ಪ್ರೊ|| ಕ. ವೆಂ. ರಾಜಗೋಪಾಲ ಅವರು ಈಗ ಹಾಳಾಗಿ ಉಳಿದಿರುವ ಕಪಿಲೇಶ್ವರ ದೇವಾಲಯವೇ ಆಗಿನ ಸೂರ್ಯದೇವಾಲಯ ಎಂಬ ಪ್ರಮೇಯವೊಂದನ್ನು ಮುಂದಿಟ್ಟಿದ್ದಾರೆ. ಹೀಗೆ ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ವಿಷಯಗಳನ್ನು ಬಹಿರಂಗಗೊಳಿಸುತ್ತಾ ಇರುವ ಮಣ್ಣೆಗೆ ಕೆಲವು ತಿಂಗಳ ಹಿಂದೆ ನೆಲಮಂಗಲದ ಶ್ರೀಸಿದ್ಧಗಂಗಾ ಪದವಿ ಕಾಲೇಜಿನ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರವಾಸಕ್ಕೆಂದು ಕರೆದುಕೊಂಡು ಹೋಗಿದ್ದಾಗ, ಸುಮಾರು ಮೂವತ್ತು ವರ್ಷಗಳ ನಿರಂತರ ಸಂಪರ್ಕ ಇದ್ದರೂ, ಗಮನಕ್ಕೆ ಬಾರದಿದ್ದ ಒಂದು ಮುಖ್ಯ ವಿಷಯವನ್ನು ಮಣ್ಣೆಯ ಸ್ನೇಹಿತ ಶ್ರೀ ಮಾ. ಗೋ. ವೆಂಕಟೇಶ್ ಗಮನಕ್ಕೆ ತಂದರು.

ಮಣ್ಣೆಯ ಅಕ್ಕತಂಗಿಯರ ದೇವಾಲಯದಿಂದ ಸ್ವಲ್ಪ ಮುಂದೆ ಹೊಲವೊಂದರಲ್ಲಿ ೧೯೭೮ರಲ್ಲಿ ಎರಡು ತಾಮ್ರಪಟಗಳು ದೊರೆತ ಸ್ಥಳದ ಸಮೀಪ ಒಂದು ಮಂಟಪವಿದ್ದು, ಅದರ ಗೋಡೆಗಳಿಗೆ ಬಳಸಿರುವ ಇಟ್ಟಿಗೆಗಳು ಈ ಕಾಲದ ಇಟ್ಟಿಗೆ ಗಳಂತಿಲ್ಲದೆ, ಬೇರೆ ರೀತಿಯಲ್ಲಿವೆ. ಆ ಇಟ್ಟಿಗೆಗಳ ಅಗಲ ಮತ್ತು ಉದ್ದ ಹೆಚ್ಚು; ಆದರೆ ದಪ್ಪ ಕಡಿಮೆ. ಅವುಗಳನ್ನು ನೋಡಿದ

* 'ಸ್ವಸ್ತಿ ಶ್ರೀ ಸ್ಕಂದ', ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು - ೫೬೨ ೧೨೩.

ಕ್ಷಣ ನನಗೆ ನೆನಪಾದದ್ದು ಬನವಾಸಿ, ತಾಳಗುಂದ ಇತ್ಯಾದಿ ಪ್ರದೇಶಗಳಲ್ಲಿ ಕಂಡಿದ್ದ ಕದಂಬರ ಕಾಲದ ಇಟ್ಟಿಗೆಗಳು. ಆ ಇಟ್ಟಿಗೆಗಳ ನಡುವೆ ಇದ್ದ ಸುಡಾವೆ ಮಣ್ಣಿನ ಬೊಂಬೆಗಳನ್ನು ಶ್ರೀ ವೆಂಕಟೇಶ್ ತೋರಿಸಿದಾಗ ನಾನು ಚಕಿತನಾದೆ. ಅವುಗಳಲ್ಲಿ ಗಣೇಶನ ಒಂದು ಬೊಂಬೆಯನ್ನು ನೆನಪಿಗಾಗಿ, ಪುರಾವೆಗಾಗಿ, ಅಧ್ಯಯನಕ್ಕಾಗಿ ತೆಗೆದುಕೊಂಡು ಬಂದೆ. ಭಿನ್ನವಾಗಿರುವ ಈ ಬೊಂಬೆಗೆ ಎಲ್ಲ ಸರಳ ಅಲಂಕಾರಗಳೂ ಇವೆ. ಸೊಂಡಿಲು ಮುರಿದಿರುವ ಈ ಬೊಂಬೆಯ ಕಣ್ಣುಗಳು ವಿಶೇಷ ಗಮನ ಸೆಳೆಯುತ್ತವೆ. ಸಹಜ ಮಣ್ಣಿನ ಬಣ್ಣದ ಈ ಬೊಂಬೆಯ ಕಣ್ಣಿನ ಒಳಭಾಗ ಬಿಳಿಯ ಬಣ್ಣವಾಗಿದ್ದು, ಅದರ ಮೇಲೆ ಕಪ್ಪು ಗುಡ್ಡೆಗಳು ಸ್ಪಷ್ಟವಾಗಿವೆ. ಇವು ಬಹುತೇಕ ದೇವಾಲಯದ ಮೇಲೆ ಸುತ್ತಲೂ ಅಲಂಕರಣಕ್ಕೆ ಇಡಲಾಗುತ್ತಿದ್ದ ಬೊಂಬೆಗಳು ಎಂದು ಊಹಿಸ ಬಹುದು. ಕಾಲದ ದೃಷ್ಟಿಯಿಂದ ಕ್ರಿ. ಶ. ಸು. ೯-೧೦ನೆಯ ಶತಮಾನಕ್ಕೆ ಸೇರಬಹುದಾದ ಈ ಬೊಂಬೆಗಳು ಗಂಗರು ಆ ಭಾಗದಲ್ಲಿ ಪ್ರಬಲರಾಗಿದ್ದಾಗ ಸುಡಾವೆ ಮಣ್ಣಿನ ತಯಾರಿಕೆಯಲ್ಲಿ ನಡೆಸಿದ್ದ ಕಾರ್ಯ ಚಟುವಟಿಕೆ ಹಾಗೂ ಪರಿಣಿತಿಗಳ ಪರಿಚಯ ಮಾಡಿಕೊಡುತ್ತವೆ ಎಂದು ಭಾವಿಸಲಾಗಿದೆ. ಈ ಭಾಗದಲ್ಲಿ ಸಹಜವಾಗಿ ಲಭ್ಯವಿರುವ ಮಣ್ಣನ್ನೇ ಬಳಸಿ ತಯಾರಿಸಿರುವ ಈ ಬೊಂಬೆಗಳ ನಿರ್ಮಾಣ ಕೇಂದ್ರವು ಬಹುತೇಕ ಮಣ್ಣೆ ಅಥವಾ ಆಸುಪಾಸಿನ ಯಾವುದೋ ಸ್ಥಳವಾಗಿರಬೇಕೆಂದು ಊಹಿಸ ಲಾಗಿದೆ.

ಶ್ರೀ ವೆಂಕಟೇಶ್ ನೀಡಿದ ಮತ್ತೊಂದು ವಸ್ತು ಪಂಚಲೋಹದ ಒಂದು ಉಂಗುರ. ನನಗೆ ಅದು ದೊರೆತಾಗ ಅದರ ತುಂಬಾ ಮಣ್ಣು ತುಂಬಿಕೊಂಡಿತ್ತು. ಅದನ್ನು ಕಬ್ಬಿಣದ ಉಂಗುರ ವಿರಬೇಕೆಂದು ತಿಳಿದಿದ್ದೆ. ಆದರೆ ಸ್ವಲ್ಪ ಮಟ್ಟಿಗೆ ತೊಳೆದ ಮೇಲೆ ತಿಳಿದದ್ದು ಅದು ಪಂಚಲೋಹದ ಉಂಗುರ ಎಂದು; ಆ ಉಂಗುರವು ಪ್ರಾಯದವರ ಕಿರುಬೆರಳಿಗೂ ಆಗುವುದಿಲ್ಲ. ಸು. ೧.೬ ಸೆಂ. ಮೀ. ವ್ಯಾಸವುಳ್ಳ ಉಂಗುರದ ಮೇಲೆ ನಾಲ್ಕು ದಳದ ಕಮಲ ಪುಷ್ಪದ ಮೇಲೆ ಮೂರು ವೃತ್ತಗಳ ಮೂಲಕ ಮೇಲೇರಿ ಸು. ೦.೫ ಸೆಂ. ಮೀ. ವ್ಯಾಸದ ವೃತ್ತದಲ್ಲಿ ಕೊನೆಗೊಳ್ಳುವ ಚಕ್ರಾಕಾರವಿದೆ. ವೃತ್ತಗಳು ಉಬ್ಬಿದ ಸಣ್ಣ ಸಣ್ಣ ವೃತ್ತಗಳಿಂದ ಆಗಿದೆ. ಇದು ಯಾರಾದರೂ ದಿನನಿತ್ಯ ಧರಿಸುವ ಉಂಗುರದಂತೆ ತೋರುವುದಿಲ್ಲ. ಅಕಸ್ಮಾತ್ ಧರಿಸಿದರೂ ಅದು ಸು. ೭-೮ ವರ್ಷದ ಹುಡುಗ / ಹುಡುಗಿ ಧರಿಸುವಂತಿದೆ. ಆ ವಯಸ್ಸಿನಲ್ಲಿ ಸಾಮಾನ್ಯವಾಗಿ ಯಾರೂ ಪಂಚಲೋಹದ ಉಂಗುರವನ್ನು ಧರಿಸುವಂತೆ ತೋರುವುದಿಲ್ಲ. ಅದ್ದರಿಂದ ಈ ಉಂಗುರವು ದಿನನಿತ್ಯ ಧರಿಸುಂತಹ ಉಂಗುರವಲ್ಲದೆ, ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸುವಂತಹ ಉಂಗುರ ಎಂದು ತಿಳಿಯಬೇಕಾಗುತ್ತದೆ. ವೃತ್ತಾಕಾರದ ಮೇಲ್ಭಾಗ ಇರುವುದರಿಂದ ಇದು ಶ್ರೀಚಕ್ರವನ್ನೇ ನಾದರೂ ಪ್ರತಿನಿಧಿಸುತ್ತದೆಯೇ ಎಂದು ಪರಿಶೀಲಿಸಬೇಕಾಗುತ್ತದೆ. ಹಾಗೇನಾದರೂ ನಮ್ಮ ಅನುಮಾನ ಸರಿ ಎಂದಾದರೆ, ಸು. ೯-೧೦ನೆಯ ಶತಮಾನಕ್ಕಾಗಲೇ ಶ್ರೀಚಕ್ರದ ಪೂಜೆ ಆರಂಭ ವಾಗಿತ್ತೆಂದು ತಿಳಿಯಬೇಕಾಗುತ್ತದೆ. ಇದು ಒಂದು ಪ್ರಮೇಯ; ಅಷ್ಟೇ ಹೊರತು ತೀರ್ಮಾನವಲ್ಲ. ಅಂತೂ ಮಣ್ಣೆಯಲ್ಲಿ ದೊರೆತ ಸುಡಾವೆ ಮಣ್ಣಿನ ಗಣಪತಿಯ ಬೊಂಬೆ ಹಾಗೂ ಎಳೆಯರ ಅಥವಾ ಯಾವುದೋ ಒಂದು ವಿಗ್ರಹದ ಬೆರಳುಗಳಿಗೆ ಮಾತ್ರ ಹಾಕಬಹುದಾದ ಪಂಚಲೋಹದ ಉಂಗುರ ಇವು ಮಣ್ಣೆಯ ಒಡಲಲ್ಲಿ ಇನ್ನೂ ಹುದುಗಿರಬಹುದಾದ ಅನೇಕ ವಸ್ತು ವಿಶೇಷಗಳತ್ತ ಬೆರಳುಮಾಡಿ ತೋರುತ್ತಿವೆ.

ಮಣ್ಣೆಯ ಒಡಲಲ್ಲಿ ಇನ್ನೂ ಎಷ್ಟು ಶಾಸನಗಳು ಅಡಗಿವೆಯೋ ಹೇಳುವುದು ಕಷ್ಟ. ಈಗಾಗಲೇ ಪ್ರಸ್ತಾಪಿಸಿರುವಂತೆ ೧೯೭೮ರಲ್ಲೂ ಎರಡು ತಾಮ್ರಪಟಗಳು ದೊರೆತಿವೆ. ಇತ್ತೀಚಿನ ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಒಂದು ತ್ರುಟಿತ ಶಾಸನ ಪತ್ತೆಯಾಗಿದೆ. ನಿವೃತ್ತ ಉಪಾಧ್ಯಾಯರಾಗಿದ್ದು ಈಗ ದಿವಂಗತರಾಗಿುವ ಶ್ರೀ ಚಿಕ್ಕತಿಮ್ಮಯ್ಯನವರು ಮನೆ ಕಟ್ಟಿಸುತ್ತಿದ್ದಾಗ, ತಳಪಾಯದಲ್ಲಿ ದೊರೆತ ಕಲ್ಲೊಂದರಲ್ಲಿ ಶಾಸನವಿದೆ. ದೊರೆತ ಶಾಸನವು ಅಪೂರ್ಣವಾಗಿದ್ದು, ಶಾಸನವಿರುವ ಕಲ್ಲು, ಬಹುತೇಕ ಮೂರು ಭಾಗಗಳಾಗಿ ಒಡೆದುಹೋಗಿದ್ದು, ನಮಗೆ ಅದರ ಮೊದಲ ಭಾಗ ಮಾತ್ರ ದೊರೆತಿದೆ ಎಂದೂ ಊಹಿಸಲಾಗಿದೆ. ಈ ಶಾಸನದ ಪಾಠ ಕೆಳಕಂಡಂತಿವೆ:

೧ (ಸ್ವ)ಸ್ತಿ ಶ್ರೀ ಮರೆಮಱ಼ಿದ ಮಾರಸಿಙ್ಘ.............
೨ ಮಡಿದ ಮಣ್ಣೆಯ ಪಿಟಿಲಬ್ಬೆಗೆ.....................
೩ ಯ್ಯುಬ್ಚಿ . ರವಿಱ್ದುನಿಱ಼ಿಸಿದ..........................
೪ ತ್ತಿ ಪಿರಿಯ ಮದವನು ಪೆಣೆ........................
೫ ಯ ಪಾಱಿದನು ಪಿಱ್ದು ವಿರಾಮ....................
೬ ಕೆ ಕಪ್ಪುರವಳ್ಳದಿ ವಿನುಕೊ...........................
೭ . ಲಿವರ ಗನ್ದಿಗಲ್ವೊಣ್ಣನು...............................
೮ ಪಾರಮಾರಮ್ಮನು ಪುನ್ನಾಡ........................

ಅಕ್ಷರಗಳಿರುವ ಭಾಗ ಮಾತ್ರ ನಮಗೆ ಲಭ್ಯವಿದ್ದು, ಉಳಿದ ಭಾಗಗಳು ಕೈತಪ್ಪಿಹೋಗಿವೆ. ಈಗಿರುವ ಎಂಟು ಸಾಲುಗಳ ನಂತರವೂ ಶಾಸನ ಇರುವ ಸಾಧ್ಯತೆ ಇದ್ದು ಈ ಭಾಗವೂ ಲಭ್ಯವಿಲ್ಲ. ಸದಕ್ಕೆ ಲಭ್ಯವಿರುವ ಪಾಠದಿಂದ ಬಹುತೇಕ ಮಾರಸಿಂಹನ ಆಳ್ವಿಕೆಯ ಕಾಲದಲ್ಲಿ ಪಿಟಿಲಬ್ಬೆ ಎಂಬೊಬ್ಬ ಹೆಂಗಸು ಇಲ್ಲಿ ಸತ್ತು, ಆಕೆಗೆ ಯಾರೋ ನಿಸಿದಿಯೊಂದನ್ನು, ಹಾಕಿಸಿರಬೇಕೆಂದು ಊಹಿಸಬಹುದಾಗಿದೆ. ಕ್ರಿ. ಶ. ಸು. ೯-೧೦ನೆಯ ಶತಮಾನದ ಲಿಪಿ ಸ್ವರೂಪವಿರುವ ಈ ಶಾಸನವು,

ಮಣ್ಣೆಯಲ್ಲಿ ಜೈನ ಧರ್ಮವು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಾಖಲಾಗಿದೆ ಎಂದು ಊಹಿಸಬೇಕಾಗಿದೆ.

ಮಣ್ಣೆ ಮತ್ತು ಜೈನ ಧರ್ಮ ಎಂದೊಡನೆ ಇತಿಹಾಸಕಾರರಿಗೆ ನೆನಪಿಗೆ ಬರುವುದು ಇಲ್ಲಿಯ ಶ್ರೀವಿಜಯ ಜಿನಾಲಯ, ಅರ್ಥಾತ್ ಈಗಿನ ಸೂಳೆಯರ ಗುಡಿ. ಕ್ರಿ. ಶ. ೭೯೭ರ ಯುವರಾಜ ಮಾರಸಿಂಹನ ಶಾಸನದ ಪ್ರಕಾರ ಮಾರಸಿಂಹನ ಅನುಮತಿಯಂತೆ, ಶ್ರೀವಿಜಯ ಎಂಬ ಅಧಿಕಾರಿಯು ಮಾನ್ಯಪುರದಲ್ಲಿ ಜಿನಾಲಯವನ್ನು ನಿರ್ಮಾಣ ಮಾಡಿಸಿದ.[೨] ಆ ಬಸದಿಗೆ ದೇವಭೋಗವಾಗಿ ಕಿಱುವೆಕ್ಕೂರ ಗ್ರಾಮವನ್ನು ದಾನ ನೀಡಿದ ವಿವರಗಳು ಶಾಸನದಲ್ಲಿದೆ. ಅಲ್ಲಿಯದೇ ಮತ್ತೊಂದು ಶಾಸನದ[೩] ಕಾಲ ಕ್ರಿ. ಶ. ೮೦೨; ಅದು ರಾಷ್ಟ್ರಕೂಟ ಪ್ರಭೂತ ವರ್ಷನ ಆಳ್ವಿಕೆಯನ್ನು ಉಲ್ಲೇಖಿಸಿದ್ದು, ಮಾನ್ಯಪುರದ ಪಶ್ಚಿಮ ಭಾಗದಲ್ಲಿ, ಶ್ರೀವಿಜಯನು ನಿರ್ಮಿಸಿದ್ದ ಜಿನಾಲಯದಲ್ಲಿ 'ವಾರವಿಲಾಸಿನೀ ವಿರಚಿತ ನೃತ್ತಗೀತ ಬಾದ್ಯ ಬಲಿ ವಿಲೇಪನ ದೇವಪೂಜಾ ನವಕರ್ಮ್ಮಾ ಪ್ರವರ್ತ್ತನಾರ್ಥಂ ಎಡೆದಿಣ್ಣೆ ವಿಷಯ ಮಧ್ಯವರ್ತ್ತಿ ಪೆರ್ವ್ವಡಿಯೂರ್ನ್ನಾಮ ಗ್ರಾಮ'ವನ್ನು ಸರ್ವಬಾಧಾ ಪರಿಹಾರವಾಗಿ ನೀಡಿದ್ದನ್ನು ದಾಖಲಿಸಿದೆ. ಈ ಶ್ರೀವಿಜಯ ಯಾರಿರಬಹುದು ಎಂಬ ಪ್ರಶ್ನೆಗೆ ಉತ್ತರವಾಗಿ ಅತ್ಯಂತ ದುರ್ಬಲ ಎನಿಸಬಹುದಾದ ಒಂದು ಪ್ರಮೇಯವಿದೆ. ಈ ದುರ್ಬಲ ಪ್ರಮೇಯಕ್ಕೆ ಡಾ|| ಎಂ. ಎಂ. ಕಲಬುರ್ಗಿ ಅವರು ಮಾತಿನ ಮೂಲಕ ಸಮರ್ಥನೆ ನೀಡಿದ್ದಾರೆ. ಆ ದುರ್ಬಲ ಪ್ರಮೇಯ ವೆಂದರೆ, ಮಾನ್ಯಪುರದಲ್ಲಿ ಜಿನಾಲಯವನ್ನು ಕಟ್ಟಿಸಿದ ಶ್ರೀವಿಜಯ ಮತ್ತು 'ಕವಿರಾಜ ಮಾರ್ಗ'ದ ಶ್ರೀವಿಜಯ ಇಬ್ಬರೂ ಒಬ್ಬರೇ ಆಗಿರಬೇಕು. ಕಾಲದ ದೃಷ್ಟಿಯಿಂದ ಸುಮಾರು ೫೦ ವರ್ಷಗಳ ಅಂತರ ಇರುವುದರಿಂದ ಈ ಪ್ರಮೆಯವನ್ನು ಮೊದಲ ಹಂತದಲ್ಲೇ ನಿರಾಕರಿಸಬಹುದು; ಆದರೆ ಕವಿರಾಜ ಮಾರ್ಗಕಾರ ಗೋದಾವರಿಯ ಬಗೆಗೆ ಹೇಳುವಾಗ ***ಆ ಗೋದಾವರಿ*** ಎಂದಿದ್ದಾನೆ. ಅದ್ದರಿಂದ ಅವನು ಗೋದಾವರಿಗೆ ದೂರ ದಲ್ಲಿದ್ದವನೂ, ಕಾವೇರಿಗೆ ಹತ್ತಿರದಲ್ಲಿದ್ದವನು ಎಂದು ಭಾವಿಸುವುದಾದರೆ, ನಮ್ಮ ಅನುಮಾನಕ್ಕೆ ಸ್ವಲ್ಪ ಮಟ್ಟಿನ ಬೆಂಬಲ ದೊರೆಯಬಹುದು. ಅದರೂ ಇದು ಚರ್ಚೆಗೆ ಒಳಪಡಬೇಕಾದ ವಿಷ**ಯ**

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. M.S. Nagaraja Rao & K. V. Ramesh, Ed: *Copper plate Inscriptions from Karnataka: Recent Discoveries,* Mysore, 1985., pp. 29

*೨. EC, IX, Nelamangala 60.

*೩. Ibid, 61.

ಡಾ|| ಎಸ್. ಕೆ. ಜೋಶಿ*

ದೈವೀ ಕಲ್ಪನೆಯಿಂದ ದೇವಸ್ಥಾನದವರೆಗೆ : ಚಿಂತನೆ

ಸೃಷ್ಟಿ ಚೇತನವನ್ನು, ಲೌಕಿಕ-ಚೆಲುವನ್ನು, ಸುತ್ತಲಿನ ನೈಸರ್ಗಿಕ-ವಿಲಾಸವನ್ನು, 'ಭಗವದ್ ವಿಲಾಸ'ವೆಂತಲೂ ಅರ್ಥವಾಗದ 'ದರ್ಶನ ಪ್ರಭಾವಳಿ' ಎಂತಲೂ ಮಾನವ ಕರೆದ. ಮಾನವನ ಕೈಕುಶಲತೆಯ 'ನಿರ್ಗುಣ' ರೂಪವು 'ಸಗುಣ'ದಲ್ಲಿ - ಶಿಲೆಯಲ್ಲಿ ಮೂರ್ತಿಯಾಗಿ ಆವಿರ್ಭವಿಸತೊಡಗಿತು. 'ಪ್ರತಿಮಾ-ಆಗಮ' ಶಾಸ್ತ್ರಗಳಲ್ಲಿ ನಿರ್ದಿಷ್ಟ ನಿಯಮಗಳಿಂದ, ರೇಖೆಗೊಂಡು, ಶಿಲ್ಪಿಯ ಕೈಯಿಂದ ಶಾಸ್ತ್ರಬದ್ಧವಾಗಿ ಪ್ರಮಾಣಬದ್ಧವಾಗಿ ಮೂರ್ತಿಗಳು ನಿರ್ಮಾಣವಾಗ ತೊಡಗಿದವು. *'Wisdom first speaks into images - W. B. Keats'.*

ಶತಕಗಳು ಕಳೆದಂತೆ, ಮೂರ್ತಿ-ಮಂದಿರಗಳ ಬಗ್ಗೆ 'ವಾಸ್ತು' ಹಾಗೂ 'ಶಿಲ್ಪಕಲೆ'ಗಳು ನಾಡು-ನಾಡಿಗೆ, ಹಳ್ಳಿ-ಹಳ್ಳಿಗೆ ತಾಣ-ತಾಣಕ್ಕೆ ಮಹತ್ತಿನಲ್ಲಿ, ಜನಪ್ರಿಯತೆಯ ರಸಯಾತ್ರೆಯಲ್ಲಿ, ಭಾವೋನ್ಮಾದ ಭಕ್ತಿಯಲ್ಲಿ, ಬೆಳೆದುಬಂದವು. ಬೇಗುದಿಗೊಂಡ ಮನಕ್ಕೆ 'ಸಾಂತ್ವನ', 'ಶಾಂತಿ' ನೀಡಲು ಮೂರ್ತಿಗಳು, ದೇವಮಂದಿರಗಳು 'ಸಗುಣ ರೂಪ'ದಲ್ಲಿ ಬೇಕಾದವು ಮಾನವನಿಗೆ. ಜೀವನದ ಅರ್ಥ- ಸಾರ್ಥಕಗೊಳಿಸುವ ನಡೆಯಲ್ಲಿ, ನೆಮ್ಮದಿಯ ಉಸಿರೆಳೆವ ಬಗೆಯಲ್ಲಿ, ಮಹತ್ತಿನೊಡನೆ ಮೂರ್ತಿಗಳು - ಮಂದಿರಗಳು ಮಾನವನಿಗೆ ಮನಶ್ಶಾಂತಿ ನೀಡಿದವು, ಅವುಗಳ ದರುಶನದಲ್ಲಿ ಪೂರ್ಣತೆ ದೊರಕಿತು.

> *"ನಿನ್ನ ದರುಶನ ಪೂರ್ಣ, ಕೂಸು ಕಣ್ತೆರೆದಂತೆ,*
> *ಮೊಗ್ಗೆಯೆಲರಿಗೆ ಅರಳಿದಂತೆ, ಚಿಪ್ಪಿನ ಸ್ವಾತಿ*
> *ಹನಿ ಮುತ್ತಾದಂತೆ, ಚಣಚಣಕು ಪರಿಪೂರ್ಣ ನೀನು,*
> *ಕುಣಿದೇ ದಣಿವೆ, ನನಗೆ ಪೂರ್ಣತೆಯೆಂದೋ,*
> *ನಾನು ದಣಿದೇ ತಣಿದೆ"*
>
> - ಬೇಂದ್ರೆ.


- ಹೀಗೆಂದು, ಮಾನವನು ಸಚೇತನ ಮೂರ್ತಿಗಳಲ್ಲಿ ದರುಶನ ಪೂರ್ಣತೆ ಪಡೆದ. ಅವನ ಅಸ್ಪಷ್ಟ, ಹಸಿವಾದ, ಅರಸುವ ಬುಧ್ಯಾತ್ಮಕ್ಕೆ ಶಾಂತಿ ದೊರೆಯಿತು. ಇದರ ಫಲವಾಗಿ ದೇವಾರಾಧನೆ, ದೈವಾರಾಧನೆ, ಮೂರ್ತಿ ಪೂಜೆ, ಸಾಕಾರ ಭಾವಗಳು ಮೈಗೂಡಿಸಿದವು.

ಹಾಗೆ ನೋಡಿದಲ್ಲಿ, ವಿಸ್ತೃತವಾಗಿ ಹರಡಿದ ಮಾನವ ಇತಿಹಾಸದಲ್ಲಿ, ಆತ ದೂಕಿದ ಕಾಲದ ಆಳದಲ್ಲಿ, ತನ್ನ ಕೌಟುಂಬಿಕ ಹಿರಿಯನನ್ನು, ಜೇಷ್ಠನನ್ನು ಕಾಲ ಕರೆದೊಯ್ದಾಗ, ಆತನಲ್ಲಿ ಇರಿಸಿದ್ದ ಆದರ - ಭಕ್ತಿ - ಕೃತಜ್ಞತೆಗಳನ್ನು ಸಲ್ಲಿಸಲು, ಆತ ನಿರ್ಮಿಸಿದ ಬೃಹದ್ ಶಿಲಾಯುಗದ ಗೋರಿಗಳೇ (The Megalithic Tombs), ಸಾಕ್ಷಿ. ಬೇರೆ ಬೇರೆ ವಿನ್ಯಾಸಗಳಲ್ಲಿ, ಬೇರೆ ಬೇರೆ ವ್ಯವಸ್ಥೆಗಳಲ್ಲಿ, ಬೇರೆ ಬೇರೆ ಅವನಿರಿಸಿದ ನಂಬುಗೆಗಳಲ್ಲಿ ಈ ಬೃಹದ್ ಶಿಲಾಯುಗದ ಗೋರಿಗಳು ಅವರ ಶ್ರದ್ಧೆಯ ಪುಜಾ - ಸ್ಥಾನಗಳಾದವು. ಮಾತೃದೇವಿ (Mother Goddess), ದೇವ-ಮಾನವಾಕೃತಿ (Anthropomorphic figures in stones at megalithic sites), ಮುಂತಾದವು ಬೃಹದ್ ಶಿಲಾಯುಗದ ಮಾನವನ ನಂಬುಗೆಯನ್ನು ಸಷ್ಟೀಕರಿಸುತ್ತವೆ (ಡಾ|| ಅ. ಸುಂದರ). ಇವು ಮಾನವನ ಇತಿಹಾಸದಲ್ಲಿ ನಿರ್ಮಿತ ಪ್ರಪ್ರಥಮ ದೇವಸ್ಥಾನಗಳು. *(The first temples built by man : the megalithic Tombs).*


ಬೃಹದ್ ಶಿಲಾಯುಗದ ತರತರದ, ವಾಸ್ತು-ವಿನ್ಯಾಸದ, ಗೋರಿಗಳು, ಚತುಷ್ಕೋನ, ಚತುಷ್ಕೋನಕ್ಕೆ ಅಳವಡಿಸಿದ ದಾರಿ, ದ್ವಿ-ಚತುಷ್ಕೋನ, ವರ್ತುಲ, ದ್ವಿವರ್ತುಲ, ಮುಂತಾದ ಭೂಮಿತಿ ಆಕೃತಿಗಳಲ್ಲಿ ರಚಿಸಲ್ಪಟ್ಟು, ತದನಂತರ, ಇತಿಹಾಸ ಕಾಲದಲ್ಲಿ ರಚಿಸಲ್ಪಟ್ಟ, ಮಂಟಪ, ಮುಖಮಂಟಪ, ಅಂತರಾಳ, ಪ್ರದಕ್ಷಿಣಪಥ, ಗಜಪೃಷ್ಠಾಕೃತಿಗಳೆಂಬ ದೇವಾಲಯಗಳ ಮುಖ್ಯಾಂಗಗಳಿಗೆ ಎಡೆಮಾಡಿದವೆಂಬ ಸಿದ್ಧಾಂತ ಸಾಧಿಸಲಾಗಿದೆ.

* ಪುರಾತತ್ವವಿದ, ೬೦, 'ಶ್ರೀ ಕೃಪಾ' ಸಿಲ್ವರ್ ಆರ್ಚರ್ಡ್, ಕೆಲಗೇರಿ ರಸ್ತೆ, ಧಾರವಾಡ – ೫೮೦ ೦೦೧.


ದೈವಿ ಕಲ್ಪನೆ - ಬೃಹತ್ ಶಿಲಾಯುಗದಿಂದ ಪ್ರಾರಂಭ




ತೇರದಾಳ



ಹಳಿಂಗಳಿ






ತೇರದಾಳ - ಹಳಿಂಗಳಿ (ಬಿಜಾಪುರ ಜಿಲ್ಲೆ)
ಬೃಹದ್ ಶಿಲಾಯುಗದ ಗೋರಿಗಳ ವಿವಿಧ ವಿನ್ಯಾಸ ಮುಂಬಂದ ದೇವಾಲಯಗಳಿಗೆ ನಾಂದಿ ಹಾಡಿದವು.







ತೇರದಾಳ ಐಹೊಳೆ ಕುರ್ಡಿ-ಗೋವೆ

ಬೃಹತ್ ಶಿಲಾಯುಗದ ನಂಬಿಕೆಯ ದೈವತಗಳು
Anthropomorphic figures of mother Goddess



'ಪಶುಪತಿನಾಥ' (Seating) ಸಿಂಧೂ ತೀರ ಸಂಸ್ಕೃತಿಯಲ್ಲಿ ಪ್ರಥಮವಾಗಿ ಮೂಡಿಬಂದ ದೈವ ಕಲ್ಪನೆ




ಆರ್ಯ ದೈವತಗಳ ಕಲ್ಪನೆ: ಪ್ರಕೃತಿ ಶಕ್ತಿಗಳ, ವಿಶ್ವ ಚೇತನಗಳ ಆರಾಧನೆ. ಸಗುಣ ಪೂಜೆ.
'ಓಂ ತತ್ ಸವಿತುಃ ವರೇಣ್ಯಂ............
ಧಿಯೋಯೋನಃ ಪ್ರಚೋದಯಾತ್'.

- ಗಾಯಿತ್ರಿ

- ಬುದ್ಧ ಅವನೆದ್ದ (ದ. ರಾ. ಬೇಂದ್ರೆ) ಬೌದ್ಧನ ದೈವ ನಂಬಿಕೆ ಇಲ್ಲವೇ ಇಲ್ಲ. ಆ ಧರ್ಮ ಮಾರ್ಗ ಸಜ್ಜನಿಕೆಯ ಜೀವನವನ್ನೇ ಪ್ರತಿಪಾದಿಸಿದೆ.


ಬೆಳೆಯುತ್ತಿರುವ ಸಗುಣ ಸಾಧನೆ (ಚಾಲುಕ್ಯ ಸಮಯ)



ದ್ರಾವಿಡ ವಿಮಾನ
ಪಟ್ಟದಕಲ್ಲು - ವಿರೂಪಾಕ್ಷ ದೇವಸ್ಥಾನ




ನಾಗರ ಶಿಖರ
ಪಟ್ಟದಕಲ್ಲು - ಜಂಬುಲಿಂಗ ಗುಡಿ



'ಅಹಂ ಬ್ರಹ್ಮಾಸ್ಮಿ' - ಆದಿಶಂಕರ.
ಇಹಲೋಕ ಪರಲೋಕ ತಾನಿದ್ದಲ್ಲಿಯೇ! ಸೂರ್ಯ ಚಂದ್ರ ತಾರಾಮಂಡಲ ತಾನಿದ್ದಲ್ಲಿಯೇ!!

- ನಿರ್ಗುಣ ಪೂಜೆ




ಜಗದಗಲ ಮುಗಿಲಗಲ ಮಿಗೆ..... ಪಾತಾಳದಿಂದತ್ತತ್ತ ನಿಮ್ಮ ಚರಣ ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ..... ಅಗೋಚರ ಅಗಮ್ಯ ಲಿಂಗವೇ ಕೂಡಲ ಸಂಗಮ ದೇವಯ್ಯಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

- ಬಸವೇಶ್ವರ

ನೂರಾರು ದೇವಾಗಾರಗಳು ಸಗುಣ ಸಾಧನೆಗಳು

ಕಲ್ಯಾಣಚಾಲುಕ್ಯರ ಕಾಲ ಹಾಗೂ ತದನಂತರ, ಹೊಯ್ಸಳ, ವಿಜಯನಗರ ಕಾಲಗಳಲ್ಲೂ ಬೆಳೆದು ಬಂದವು.



ಇಂಡಿಯಾದ ಇತಿಹಾಸದ ಅರುಣೋದಯ ಕಾಲದಲ್ಲಿ, *(Proto-historic period)* ಸಿಂಧುನದಿ ತೀರದ ಸಂಸ್ಕೃತಿಯ ಸಮಯದಲ್ಲಿ, ಅಲ್ಲಿಯ ತಾಣಗಳಾದ ಹರಪ್ಪ-ಮೊಹೆಂಜೊದಾರೋಗಳಲ್ಲಿಯ ಉತ್ಖನನಗಳಲ್ಲಿ (೧೯೩೦-೩೨) ದೊರೆತ '**ಪಶುಪತಿನಾಥ**' ಮೃತ್ತಿಕಾ ಮುದ್ರೆಯು ಅವರ ಪ್ರಪ್ರಥಮ ದೇವರು ದೈವರ-ನಂಬುಗೆಗಳನ್ನು ಸೂಚಿಸುತ್ತದೆ. *(Sir John Marshall and Chakravarti, Harappa - Mohenjodaro: Indus Civilisation)* ಈ 'ಪಶುಪತಿನಾಥ' ಮುದ್ರೆಯು* ಮುಂದೆ ಶತ-ಶತಮಾನಗಳ ನಂತರ ಪರಿಪೂರ್ಣತೆ ಎಡೆಗೆ ಸಾಗಿಬಂದ ಧ್ಯಾನಮುದ್ರೆಯ ಶಿವ ಪ್ರತಿಮೆಗೆ** ನಾಂದಿ ಹಾಕಿತು ಎಂದು ಪ್ರಾಚ್ಯ ಸಂಶೋಧಕರ ಅಭಿಮತ.

ವೇದ ಕಾಲೀನ ನಂಬುಗೆಯು, ವಿಶ್ವಚೇತನ ಶಕ್ತಿಗಳಾದ ಚಂದ್ರ, ಸೂರ್ಯ, ವರುಣ, ಮರುತ್, ಪೃಥ್ವಿ, ಆಕಾಶ ಮುಂತಾದ ನಿಸರ್ಗ ಸೃಷ್ಟಿಕೃತಿಗಳನ್ನೇ ಆರಾಧಿಸಲು ಅನುವು ಮಾಡಿಕೊಟ್ಟಿತು. ನಿರ್ಗುಣ - ನಿರಾಕಾರ - ಪ್ರಕೃತಿ ಪೂಜೆಯಿಂದ ಮೂರ್ತಿಗಳ ಉಗಮಕ್ಕೆ ಅಷ್ಟು ಪ್ರಾಧಾನ್ಯತೆ ದೊರೆಯಲಿಲ್ಲ.

ತದನಂತರ ಗತಿಸಿದ ಇತಿಹಾಸದ ಪೂರ್ವಕಾಲದಲ್ಲಿ *(Early Historical period)* ವಾಸ್ತುಶಾಸ್ತ್ರ, ಪ್ರತಿಮಾ ಶಾಸ್ತ್ರಗಳ ನಿರ್ದಿಷ್ಟತೆಯ ಗೆರೆಗಳನ್ನು ಹಾಕುವ ಕೌಟಿಲ್ಯನ ಅರ್ಥಶಾಸ್ತ್ರ (ಕ್ರಿ. ಪೂ. ೩ನೇ ಶತಕ), ಮಯಮತ, ಮಾನಸಾರ (ಕ್ರಿ. ಶ. ೫ನೇ ಶತಮಾನದ ಸುತ್ತಮುತ್ತ) ಮುಂತಾದ ಉದ್ಗ್ರಂಥಗಳು ಬರೆಯಲ್ಪಟ್ಟು, ದೇವಾಗಾರಗಳಿಗೆ, ದೇವಮೂರ್ತಿಗಳಿಗೆ ಒಂದು ನಿರ್ದಿಷ್ಟ ಮೂರ್ತಸ್ವರೂಪ ಕೊಟ್ಟವು. ಈ ಹಿನ್ನೆಲೆಯಲ್ಲಿ ರಾಜಸ್ವ, ಧನಸ್ವ ಶಕ್ತಿಗಳು ಸಮಾಜದಲ್ಲಿ ತಲೆ ಎದ್ದು, ಸಗುಣ - ಸಾಕಾರ ಭಾವಗಳಿಗೆ ಒತ್ತು ಕೊಟ್ಟು, 'ದೇವ ಮೂರ್ತಿಗಳೂ' ಹಾಗೂ 'ಅವುಗಳ ಮನೆಗಳಿಗೂ' *(Icons and Temples)* ಬೆಳೆಯಲು ಆಸ್ಪದ ಮಾಡಿದವು. ಉತ್ತರ ಭಾರತದಲ್ಲಿ ಗುಪ್ತರು ದಕ್ಷಿಣ ಭಾರತದಲ್ಲಿ ಬಾದಾಮಿಚಾಲುಕ್ಯರ ಕಾರಣ ಸ್ತರಸ್ತರಗಳಿಂದ ಮೇಲೇರುವ ದೇವಸ್ಥಾನಗಳೇ *(Structural temples)* ಇದಕ್ಕೆ ಸಾಕ್ಷಿ; ತೀರ ದಕ್ಷಿಣದಲ್ಲಿ ಪಲ್ಲವರೂ ದೇವಸ್ಥಾನಗಳ ನಿರ್ಮಿತಿಗೆ ಸರಿಸಾಟಿಯಾಗಿ, ಆಗ, ನಿಂತರು.

ತದನಂತರ ೮ನೇ ಶತಕದಿಂದ ೧೨ನೇ ಶತಕಗಳವರೆಗೆ, ರಾಷ್ಟ್ರಕೂಟರು, ಗಂಗರು, ಹೊಯ್ಸಳರು, ಉತ್ತರ ಚಾಲುಕ್ಯರು *(Later chalukyas)*, ಕರ್ನಾಟಕದಲ್ಲಿ ವಾಸ್ತುಕಲೆ, ಶಿಲ್ಪಕಲೆಯ ಪ್ರಾಯೋಗಿಕ ಹುಮ್ಮಸ್ಸಿನಲ್ಲಿ ಸಾವಿರಾರು ದೇವಾಲಯಗಳನ್ನು ನಿರ್ಮಿಸಿದರು. ದೇವಾಲಯಗಳ ನಿರ್ಮಾಣ ನಿರಂತರ, ಅವಿಶ್ರಾಂತ ಕಾರ್ಯವಾಯಿತು.

ದೇವಾಲಯಗಳ ಉಗಮ ಹಾಗೂ ಬೆಳವಣಿಗೆಯು - ಇಡಿಯಾಗಿ ಉತ್ಕ್ರಾಂತಿ - ರೇಖಿಸುತ್ತ, ೧೨ನೆಯ ಶತಮಾನದ ಕರ್ನಾಟಕಕ್ಕೆ ಬಂದಿಳಿದಾಗ ಕಾಣುವುದೇನು? ಇದೇ ಈ ಪ್ರಬಂಧದ ಕಾಂಡ ಭಾಗ!

ನಾನಭ್ಯಸಿಸಿದಂತೆ, ನಾಕಂಡಂತೆ, ೧೨ನೆಯ ಶತಮಾನದ ಆಧ್ಯಾತ್ಮಿಕ ಇತಿಹಾಸದಲ್ಲಿ ಬಸವಾದಿ ಪ್ರಮಥರು 'ಚೈತನ್ಯ ಪೂಜೆ' - 'ನಿರ್ಗುಣ ಪೂಜೆ' ಪ್ರತಿಪಾದಿಸಿದರೂ,

"ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ,
ಅಗೋಚರ ಅಗಮ್ಯ ಅಪ್ರತಿಮ ಲಿಂಗವೇ,
ಕೂಡಲ ಸಂಗಮ ದೇವಯ್ಯಾ, ಎನ್ನ
ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ",

*

"ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡಲಿ? ಬಡವನಯ್ಯಾ.
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯಾ, ಕೂಡಲಸಂಗಮ ದೇವ
ಕೇಳಯ್ಯಾ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"

*

"ಕೆರಹಳ್ಳ ಬಾವಿಗಳು ಮೈದೆರೆದರೆ,
ಗುಳ್ಳೆ-ಗೊರಕೆ - ಚಿಪ್ಪುಗಳ ಕಾಣಬಹುದು.
ವಾರಿಧಿ ಮೈದೆರೆದರೆ, ರತ್ನಂಗಳ ಕಾಣಬಹುದು,
ನಮ್ಮ ಕೂಡಲ ಸಂಗನ ಶರಣರು ಮನದೆರೆದು
ಮಾತನಾಡಿದರೆ, ಲಿಂಗವೇ ಕಾಣಬಹುದು".

ಎಂತಾಗಿ ನಿರಾಕಾರ, ನಿರ್ಗುಣ ಪ್ರಣವ ಸ್ವರೂಪಿ ದೇವನನ್ನು ಇಷ್ಟಲಿಂಗವೆಂತಾಗಿ ಧರಿಸಲು ಬೋಧಿಸಿದರೂ ಕೂಡ, *"ಇಹಲೋಕ ಪರಲೋಕ ಬೇರಿಲ್ಲ ಕಾಣಿರೋ, ಸತ್ಯವ ನುಡಿವುದೇ*

---

* ಈ ಮುದ್ರೆಯ ಶಿಲ್ಪವನ್ನು ಮಾರ್ಷೆಲ್ 'ಶಿವ ಪಶುಪತಿ' ಎಂದಿದ್ದಾರೆ; ಸಾಲೆತೊರೆ 'ಅಗ್ನಿ' ಎಂದಿದ್ದಾರೆ. ಇದಕ್ಕೆ ವೈರುಧ್ಯವೇನಿಲ್ಲ. ಶಿವ ಅಥವಾ ರುದ್ರರ ಒಂದು ರೂಪ ಅಗ್ನಿಯೆ. ಋಗ್ವೇದದಲ್ಲಿ 'ಅಗ್ನಿರ್ ಅಪಿ ರುದ್ರ ಉಚ್ಯತೇ; ತ್ವಂ ಅಗ್ನೇ ರುದ್ರೋ...ತ್ವಮಗ್ನೇ ಪ್ರಥಮೋಽಂಗಿರಾ ಋಷಿರ್ದೇವೋ ದೇವಾನಾಮ ಭವಃ ಶಿವ ಸಖಾಃ....' ಎಂದಿರುವುದನ್ನು ವಿದ್ವಾಂಸರು ವಿವರಿಸಿದ್ದಾರೆ. ಡಾ।। ಶ್ರೀ ಜಚನಿ ಅವರು 'ರುದ್ರಪಶುಪತಿ' ಎಂದೂ ಶಿವಪಶುಪತಿಗೆ ಹೆಸರಿಸಿದ್ದಾರೆ.

** ಡಾ।। ಶ್ರೀ ಜಚನಿ ಅವರು ಈ ಧ್ಯಾನಮುದ್ರಾ ಶಿವನನ್ನು 'ಭಾಲಾಕ್ಷ ಸಿದ್ಧಿಯ ಮುನಿವರೇಣ್ಯ; ಸಿಂಧೂ ಸಂಸ್ಕೃತಿಯ ಜೀವನಾದರ್ಶ ಪ್ರತಿಮೆ ಶ್ರೀ ರುದ್ರದೇವ' ಎಂದಿದ್ದಾರೆ - ಹೀಗೆಲ್ಲ ಓದುಗರಿಗೆ ಚಿಂತಿಸಲು ಲೇಖಕರು ಪ್ರೇರಣೆ ನೀಡಿರುವುದು ಸ್ವಾಗತಾರ್ಹ - (ಸಂ).

ಸ್ವರ್ಗಲೋಕ, ಮಿಥ್ಯನ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂತಾಗಿ ಸತ್ಯಸ್ಯ ಸತ್ಯ ನುಡಿದರೂ, *"ಮರ್ತ್ಯ ಲೋಕವು ಕರ್ತಾರನ ಕಮ್ಮಟವಯ್ಯಾ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲ ಸಂಗಮದೇವ"* - ಇವುಗಳೆಲ್ಲ ಬಯಲಲಿ ಬರೆದ ಕಾವ್ಯ ರೂಪ. ಮನ ಕದಡಿದ ರಸಮಯ ಭಾವವನ್ನು ಶಬ್ದ ಅರ್ಥೈಸುವದೇ? ಪ್ರಶ್ನಾರ್ಥಗಳಾದವು.

"ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಸಂಕಲ್ಪ-ಸಿದ್ಧಾಂತಗಳ ಪ್ರತಿಪಾದನೆಯಾದರೂ, "ಚೈತನ್ಯ ಪೂಜೆ" ಹಾಗೂ 'ಮೂರ್ತಿ ಪೂಜೆ' ಗಳೆಂಬ ದ್ವಂದ್ವ ಸಾರ್ಥವಾಹರಲ್ಲಿ, ಚೈತನ್ಯ ಪೂಜೆಯ ಸಾಧಕರು ಕೇವಲ ಕೆಲವೇ ಮಂದಿಯಾದರೆ, 'ಮೂರ್ತಿ ಪೂಜೆ'ಯ ಮಗ್ನರು ನೂರಾರು ಸಾವಿರಾರು! ಏಕೆ? ಹೀಗಿದ್ದರೂ ಸಾವಿರಾರು ಗುಡಿ ಗುಂಡಾರಗಳು ಕಟ್ಟಲ್ಪಟ್ಟವೇಕೆ?

'ಜ್ಞಾನಮಾರ್ಗ', 'ಕರ್ಮಮಾರ್ಗ' ಹಾಗೂ 'ಭಕ್ತಿ ಮಾರ್ಗ'ಗಳೆಂಬ ತ್ರಿಮಾರ್ಗಗಳು ಸಾಕ್ಷಾತ್ಕಾರದ ದಾರಿಗಳೇನೋ ನಿಜ. ಆದರೆ, ಆಯಾ ಬುಧ್ಯಾತ್ಮ ಸಾಧಕನಿಗೆ, ತನಗೊಗ್ಗುವ, ತನಗೊಪ್ಪುವ, ತನಗತಿಸರಳವಾದ ದಾರಿಯ ಆಯ್ಕೆಯನ್ನು, ಅವನ ಬೌದ್ಧಿಕ ನಿಲುವಿಗೆ - ಆತನಿಂದ ಎತ್ತರಕ್ಕೆ ಬಿಟ್ಟ ವಿಷಯ. ಜ್ಞಾನ ಮಾರ್ಗವು ತರ್ಕ-ವಿತರ್ಕಗಳ ಹರಿತವಾದರೆ, ಕರ್ಮಮಾರ್ಗವು ಪಾದಾರ್ಥಿಕ ಕೊಡುಗೆಗಳ ಮಹತಿಯನ್ನು ನೀಡುವ ಸಾಧನವಾದರೆ, 'ಭಕ್ತಿಮಾರ್ಗ'ವು ಮುಗ್ಧಮಗುವಿನಂತೆ ತನ್ನನ್ನು ತಾನೇ ಸಮರ್ಪಿಸುವ 'ಆತ್ಮವ್ಯವಸ್ಥೆ'ಯ ಸಮಷ್ಠಿ ಕುಲ.

ಭಕ್ತಿಮಾರ್ಗಕ್ಕೆ, ಜನಸಾಮಾನ್ಯನಿಗಾಗಿ, ಒಂದು ಮಾಧ್ಯಮ ಬೇಕು ತಾನೇ? ಅದಾಗಿ, ವಿವಿಧ ಮೂರ್ತಿಗಳು, ಪ್ರತಿಮೆಗಳು, ಸಾಕಾರಗಳು ಭಕ್ತಿಮಾರ್ಗದ ಸಾಧನೆಯ ಮಾರ್ಗಗಳಾದವು. ವಿಶೇಷವಾಗಿ ಕಲ್ಯಾಣ ಕ್ರಾಂತಿಯ ನಂತರ ಹರಿದ ಭಕ್ತಿಪಂಥದ ಮಾರ್ಗವು, ಕರ್ನಾಟಕ - ಮಹಾರಾಷ್ಟ್ರಗಳಲ್ಲಿ, ಆಧ್ಯಾತ್ಮದ ತಳಸ್ತರದ, ತೃಣಮೂಲದ, ಸರಳ-ಸಾಮಾನ್ಯ ಸಾಧನವಾದುದರಿಂದ, ಸಮಾಜದ ಸಾವಿರಾರು, ಲಕ್ಷಗಟ್ಟಲೆ, ಜನರ, ಭಕ್ತಿ ತೃಷೆ ನೀಗಿಸುವಿಕೆಗಾಗಿ, ಮೂರ್ತಿಪೂಜೆಗಾಗಿ, ಸಾವಿರಾರು ದೇವಾಲಯಗಳು ನಿರ್ಮಾಣಗೊಂಡವು. ರಾಜಸ್ವ, ಧನಸ್ವ, ಪ್ರತಿಷ್ಠಿತಸ್ವ ಸತ್ವಗಳು ಈ ನಿರ್ಮಾಣಕ್ಕೆ ಸಹಾಯಕವಾದವು. ನಿರಾಕಾರದ ನೀಲಾಕಾಶದಲ್ಲಿ ಏಕಾಗ್ರತೆಗೆ ಚಿನ್ಹೆ ಕಾಣದ ಕಾರಣ ವಿವಿಧ ಮೂರ್ತಿಗಳೇ ಭಕ್ತಿ ಮಾರ್ಗಕ್ಕೆ, ಚಿತ್ತೈಕಾಗ್ರತೆಗೆ ಸಾಧನಗಳಾದವು. ಈ ಪ್ರಕ್ರಿಯೆಯಲ್ಲಿ, ಕರ್ನಾಟಕದ ೧೨ನೆಯ ಶತಮಾನ ಹಾಗೂ ತದನಂತರದ ಕಾಲದಲ್ಲಿ ಇಣುಕಿ ನೋಡಿದಾಗ, ಆಗ ಚೈತನ್ಯ ಪೂಜೆಯ ಪ್ರತಿಪಾದನೆಯಾದರೂ ಕೂಡ, ಸಾವಿರಾರು ಸ್ಥಾವರ ದೇವಾಲಯಗಳು ನಿರ್ಮಾಣವಾದದ್ದು ಸ್ಪಷ್ಟ ಇತಿಹಾಸ.

ದೇವಾಲಯಗಳು ಕರ್ನಾಟಕದಲ್ಲಿ ಬೆಳೆದು ಬಂದ ತಾಣಗಳನ್ನು ಹೆಸರಿಸಬೇಕಾದರೆ, ಬಾದಾಮಿ ಚಾಲುಕ್ಯರ ಸಾಮ್ರಾಜ್ಯವಂತೂ ಸರಿಯೇ ಸರಿ, ರಾಷ್ಟ್ರಕೂಟರ ಅಮೋಘ ದೇವಾಲಯಗಳೂ (ಎಲ್ಲೋರದಂಥ ತಾಣ ಈಗ ಮಹಾರಾಷ್ಟ್ರಕ್ಕೆ ಸೇರಿದೆ), ಕಲ್ಯಾಣ ಚಾಲುಕ್ಯರ ತಾಣಗಳಾದ ಕಲ್ಯಾಣ, ಧಾರವಾಡ, ಮಾಗಳ, ಅಬಲೂರು, ಬಾಗಳ, ನೀಲಗುಂದ, ಕುರುವತ್ತಿ, ಹಾರ್ಲಹಳ್ಳಿ, ಚೌಡದಾನಪುರ, ಡಂಬಳ, ಗದಗ, ಕೊಪ್ಪಳ, ಲಕ್ಕುಂಡಿ, ಅಬಲೂರು, ಹಾವೇರಿ, ಬಂಕಾಪುರ, ಉಣಕಲ್, ರಾಯಾಪುರ, ಅಳಗವಾಡಿ, ಉಜ್ಜನಿ, ಹಿರೇಗುಡಾಳ್ ಮುಂತಾದವು 'ನಿರ್ಗುಣ' - 'ಶೂನ್ಯ ಸಂಪಾದನೆ' ತತ್ವಜ್ಞಾನ ಪ್ರಭಾವವಾಗಿದ್ದ ಸಮಯದಲ್ಲಿಯೇ ದೇವಾಲಯಗಳನ್ನು ಸಾಕಾರವಾಗಿ ಹೊಂದಿದವು.

ರಾಜಸ್ವ, ಧನಸ್ವ, ಸಂಘಸ್ವಗಳು ಐಹಿಕವಾಗಿದ್ದು, ಅವು (Down to the earth), ಸ್ಥಾವರಗಳಿಗೆ, ಕಲೆ ಸಾಹಿತ್ಯ ನೃತ್ಯ ಕಲಾರಾಧಕರಿಗೆ, ಸಂಬಂಧಿತ ಶಕ್ತಿಗಳಾಗಿ ಪ್ರೋತ್ಸಾಹ ನೀಡಿದವು. ಗೃಹಸ್ಥಾಶ್ರಮಿಗಳು, ಮಠ - ಮಠಾಧೀಶರೂ ಕೂಡ ತಮ್ಮ ವ್ಯಕ್ತಿತ್ವದ ಉಳಿತಾಯಕ್ಕೆ ಮನೆ-ಮಠಗಳನ್ನೂ ದೇವಾಗಾರಗಳನ್ನೂ ನಿರ್ಮಿಸಿದರು. ಸ್ಥಾವರಗಳಲ್ಲಿ, ದೇವಾಲಯಗಳಲ್ಲಿ, ಮೂರ್ತಿಗಳಲ್ಲಿ 'ಸಗುಣತ್ವದಲ್ಲಿ ಚೇತನ'ವನ್ನು ಒಡಮೂಡಿಸಿದರು, ಆರಾಧಿಸಿದರು. ಮಾನವನು ದೈವೀಕಲ್ಪನೆಯಿಂದ ದೇವಸ್ಥಾನದವರೆಗೆ 'ಸಾರ್ಥವಾಹ'ನಾಗಿ ನಡೆದು ಬಂದ ದಾರಿಯನ್ನು ಈ ರೀತಿ ಚಿಂತಿಸಲಾಗಿದೆ

ಎಂ. ಎನ್. ಪ್ರಭಾಕರ್*

ದಾಕ್ಷಿಣಾತ್ಯ ದೇವಾಲಯ : ಒಂದು ವಿಸ್ತೃತ ವಿವರಣೆ

ಕರ್ನಾಟಕದ ಮಹಾಕೂಟ, ಬಾದಾಮಿ ಪಟ್ಟದಕಲ್ಲುಗಳಲ್ಲಿ ದಾಕ್ಷಿಣಾತ್ಯ ಸಂಪ್ರದಾಯದ ಮೂರು ಶೈಲಿಗಳ ಆರಂಭದ ಮಾದರಿಗಳಿವೆ. ಈ ಸಂಪ್ರದಾಯದ ಇನ್ನಿತರ ಪ್ರಮುಖ ದೇವಾಲಯಗಳನ್ನು ಬೇಗೂರು, ನಂದಿ, ಕಂಬದಹಳ್ಳಿ, ಶ್ರವಣ ಬೆಳಗೊಳಗಳಲ್ಲಿ ಕಾಣಬಹುದು. ಕರ್ನಾಟಕದ ಇನ್ನಿತರ ದೇವಾಲಯಗಳಲ್ಲಿ ಹೆಚ್ಚಿನ ಪಾಲು ಔತ್ತರೇಯ ಸಂಪ್ರದಾಯದ ದ್ರಾವಿಡ ಶೈಲಿಗೆ ಸೇರಿದ್ದು, ಇದನ್ನು ನಾಗರಿಕ ದ್ರಾವಿಳ ಶೈಲಿ ಎಂದೂ ಗುರುತಿಸಲಾಗಿದೆ. ಈ ಶೈಲಿಯ ವಿಕಾಸ ರಾಷ್ಟ್ರಕೂಟರ ಕಾಲದಲ್ಲಿ ಆರಂಭಗೊಂಡಿದ್ದು, ಹತ್ತನೆಯ ಶತಮಾನದ ವೇಳೆಗೆ ಸ್ಪಷ್ಟ ಚಿತ್ರಣ ದೊರೆಯಿತು. ಈ ದೇವಾಲಯಗಳಿಗೆ ದಾಕ್ಷಿಣಾತ್ಯ ದೇವಾಲಯಗಳ ಹಿನ್ನೆಲೆ ಇದೆ. ಆದ್ದರಿಂದ ದಾಕ್ಷಿಣಾತ್ಯ ದೇವಾಲಯಗಳನ್ನು ಮೊದಲು ಅಭ್ಯಸಿಸಿ, ಇನ್ನಿತರ ದೇವಾಲಯ ಗಳ ಅಧ್ಯಯನಕ್ಕೆ ತೊಡಗಬೇಕು. ಇದಕ್ಕಾಗಿ ಶಾಸ್ತ್ರಗ್ರಂಥಗಳು ಗುರುತಿಸುವ ದೇವಾಲಯಗಳ ಲಕ್ಷಣಗಳನ್ನು ಸಂಕ್ಷೇಪವಾಗಿ ವಿವರಿಸಲಾಗಿದೆ. ಈ ವಿವರಗಳು ಅಧ್ಯಯನಕ್ಕೆ ನೆರವಾಗಬಹುದು.

ಊರ್ಧ್ವಕ್ರಮ

ಉಪಪೀಠ : ಪ್ರಭೇದಗಳು

ವೇದೀಭದ್ರ *:* ಸರಳವಾದ ರಚನೆ - ಪುನಃ ಪ್ರಭೇದಗಳು: ಮೂರು ಅಷ್ಟಾಂಗ : ಎಂಟು ಸ್ತರಗಳು - ಪಾದುಕ, ಪದ್ಮಕ್ಷೇಪ್ಷಣ್ಣ, ಕಂಠ, ಕಂಪ, ಪದ್ಮ, ವಾಜನ ಮತ್ತು ಕಂಪ.

ಷಡಂಗ : ಆರು ಸ್ತರಗಳು - ಅಷ್ಟಾಂಗ ರಚನೆಯಲ್ಲಿರುವ ಪದ್ಮ ರಚನೆಯನ್ನು ಬಿಟ್ಟು ಷಡಂಗ ರಚನೆ.

ಪಂಚಾಂಗ : ಐದು ಸ್ತರಗಳು - ಷಡಂಗ ರಚನೆಯ ವಾಜನವನ್ನು ಬಿಟ್ಟು ಪಂಚಾಂಗ ರಚನೆ.

ಪ್ರತಿಭದ್ರ *:* ಪ್ರಮುಖವಾಗಿ ಕಪೋತ, ಪ್ರತಿ ಮತ್ತು ವಾಜನ ಸ್ತರಗಳು

ಸ್ತರಗಳು : ಪಾದುಕ, ಪದ್ಮ, ಕಂಪ, ಕಂಠ, ಉತ್ತರ, ಕಪೋತ, ಆಲಿಂಗ, ಪಟ್ಟಿಕಾ, ಪ್ರತಿ ಮತ್ತು ವಾಜನ

ಸುಭದ್ರ *:* ಹಲವು ಸ್ತರಗಳ ರಚನೆ - ಕಂಠ ಭಾಗದಲ್ಲಿ ಆನೆ, ಸಿಂಹ ಇತ್ಯಾದಿ.,

ಸ್ತರಗಳು : ಉಪಾನ, ಪದ್ಮ, ಕಂಠ, ಪದ್ಮ, ಮಹಾಪದಿ, ಪದ್ಮ, ಕಂಠ, ಕಂಪ ಮತ್ತು ಪದ್ಮ

ಅಧಿಷ್ಠಾನ ಪ್ರಭೇದಗಳು

ಪಾದಬಂಧ *:* ಅಧಿಷ್ಠಾನದ ನಡುವೆ ದ್ವಾರ, ಗೋಪುರ, ಸ್ತಂಭ ರಚನೆ ಇದ್ದಲ್ಲಿ ಪಾದಬಂಧ :

ಸ್ತರಗಳು : ೧) ಉಪಾನ, ಜಗತಿ, ಕುಮುದ, (ಕಂಪ), ಕಂಠ, (ಕಂಪ) ಪಟ್ಟಿಕಾ ೨) ಉಪಾನ, ಜಗತಿ, ಪದ್ಮ, ಕುಮುದ, ಪದ್ಮ, ಕಂಠ, ಪಟ್ಟಿಕಾ ಸಾಮಾನ್ಯವಾಗಿ ತ್ರಿಪಟ್ಟ ಕುಮುದ; ಕುಮುದದ ಕೆಳಗೆ ಮತ್ತು ಮೇಲ್ಗಡೆ ಪದ್ಮ ರಚನೆ ಇದ್ದಲ್ಲಿ ವೃತ್ತ ಕುಮುದ

ಪ್ರತಿಬಂಧ *:* ಅಧಿಷ್ಠಾನದ ಮೇಲ್ಗಡೆ ಸ್ತಂಭ, ದ್ವಾರ, ಜಾಲಂದ್ರ ಇತ್ಯಾದಿ., ಮತ್ತು ವೃತ್ತಕುಮುದ ರಚನೆ

ಸ್ತರಗಳು : ೧) ಉಪಾನ, ಜಗತಿ, (ವೃತ್ತ) ಕುಮುದ, ಕಂಠ, ಪ್ರತಿ, ವಾಜನ; ೨) ಉಪಾನ, ಜಗತಿ, (ವೃತ್ತ) ಕುಮುದ, ಆಲಿಂಗ, ಅಂತರಿತ, ಪ್ರತಿ ಮತ್ತು ವಾಜನ

ಕಪೋತ ಬಂಧ : ಕಪೋತ ರಚನೆ ಇದ್ದಲ್ಲಿ ಕಪೋತ ಬಂಧ

ಪಟ್ಟಿಕಾಂಗ : ಅಧಿಷ್ಠಾನದ ಸ್ತರಗಳಲ್ಲಿ ಪಟ್ಟಿಕೆ ಇದ್ದಲ್ಲಿ ಪಟ್ಟಿಕಾಂಗ.

ಪ್ರತ್ಯಂಗ : ಅಧಿಷ್ಠಾನದ ಸ್ತರಗಳಲ್ಲಿ ಪ್ರತಿ, ವಾಜನ ಸ್ತರಗಳಿದ್ದರೆ ಪ್ರತ್ಯಂಗ.

ವೇದಿಕಾ : ಅಧಿಷ್ಠಾನದ ಮೇಲ್ಗಡೆ ವೇದಿಕಾ ರಚನೆ

* 'ಪದ್ಮಪ್ರಭಾ' ಸಂ. ೪೨, ಬ್ಲಾಕ್ ೧೬, ಶ್ರೀರಾಂಪುರ ಎರಡನೇ ಹಂತ, ಮೈಸೂರು - ೫೭೦ ೦೨೩.

ಸ್ತರಗಳು : ಕಂಠ, ಕಂಪ, ಪದ್ಮ, ಕಂಪ; ಗಲ ಭಾಗದಲ್ಲಿ ಗಲಪಾದ

ಪಾದ : ಪ್ರಭೇದಗಳು :

ಹೋಮಸ್ತಂಭ : ಅಧಿಷ್ಠಾನ ಅಥವಾ ಭೂಮಿಯಲ್ಲಿ ನೆಟ್ಟ ಸ್ತಂಭ.

ಪ್ರತಿಸ್ತಂಭ : ಅಧಿಷ್ಠಾನ ಅಥವಾ ಪ್ರತಿ ಸ್ತರದ ಮೇಲೆ ನಿಂತ ಸ್ತಂಭ.

ಝುಷಾಲಸ್ತಂಭ : ಝುಷ ಭಾಗ ಅಥವಾ ತೋರಣವುಳ್ಳ ಸ್ತಂಭ.

ಸ್ತಂಭದ ಭಾಗಗಳು :

ಪಾದಮೂಲ : ಸ್ತಂಭದ ಪೀಠ ಭಾಗ - ಪದ್ಮಾಸನವುಳ್ಳದ್ದು

ಪಾದಮಧ್ಯ : ಸಾಶ್ರಯ ಮತ್ತು ನಿರಾಶ್ರಯ

ಸಾಶ್ರಯ : ಪದ್ಮಾಸನದ ಮೇಲೆ ಪಾದಮಧ್ಯದಲ್ಲಿ ಸಿಂಹ, ಗಜ, ವ್ಯಾಳಿ, ಹಂಸ ಮತ್ತು ದಂಡ ಇತ್ಯಾದಿ ರಚನೆ

ನಿರಾಶ್ರಯ : ಪದ್ಮಾಸನದ ಮೇಲೆ ಕೇವಲ ದಂಡ ಭಾಗ ಮಾತ್ರ ಪಾದಾಗ್ರ/ಸ್ತಂಭ ಭೂಷಣ/ವಿಷ್ಕಂಭ : ಬೋದಿಗೆಯಿಂದ ಮಾಲಾಸ್ಥಾನದವರೆಗಿನ ಸ್ತರಗಳು

ಸ್ತರಗಳು : ಬೋದಿಗೆ, ವೀರಕಂಠ, ಫಲಕ, ಪದ್ಮ, ಮಧ್ಯಮೂಲ, ಕುಂಭ, ಕಂಠ, ಆಸ್ಯ, ಲಶುನ, ಮಾಲಾಸ್ಥಾನ ಇತ್ಯಾದಿ.,

ಬೋದಿಗೆ : ಕ್ಷೇಪಣ ಮತ್ತು ಛಾಯಾ ಭಾಗ

೧) ತರಂಗ ೨) ಮುಷ್ಟಿಬಂಧ ೩) ಪದ್ಮಮುಕುಳಾಕಾರ

ತರಂಗ ಬೋದಿಗೆ : ಛಾಯಾಭಾಗದ ಮಧ್ಯದಲ್ಲಿ ಮಧ್ಯಪಟ್ಟ, ಇಕ್ಕೆಲಗಳಲ್ಲಿ ತರಂಗ ರಚನೆ.

ಮುಷ್ಟಿಬಂಧ : ಸುರುಳಿಯಾಕಾರದಲ್ಲಿ ಕ್ಷೇಪಣದ ಮುಂಚಾಚುವಿಕೆ, ಮುಂಭಾಗದಲ್ಲಿ ವ್ಯಾಳಿ, ಯಾಳಿ ರಚನೆ; ಛಾಯಾಭಾಗವು ಸರಳವಾಗಿ ಹಿಂದಕ್ಕೆ ಬಾಗಿದೆ.

ಪದ್ಮಮುಕುಳಾಕಾರ : ಕ್ಷೇಪಣದ ಕೆಳಗೆ ಛಾಯಾಭಾಗದಲ್ಲಿ ಊರ್ಧ್ವಪದ್ಮ ಮತ್ತು ಅಧೋಪದ್ಮ; ಅಧೋಪದ್ಮವು ಊರ್ಧ್ವಪದ್ಮವನ್ನು ಬಳಸಿ ಬಾಳೇಹೂವಿನಂತೆ ಮುಂದಕ್ಕೆ ಬಾಗಿದೆ.

ವೀರಕಂಠ (ವೀರಗಂಡ/ಗಂಡ) : ಬೋದಿಗೆ ಮತ್ತು ಫಲಕಗಳ ಮಧ್ಯೆ ಕಿರಿದಾದ ಚತುರಶ್ರ ರಚನೆ

ಫಲಕ ಮತ್ತು ಪದ್ಮ : ವೀರಕಂಠದ ಕೆಳಗೆ ಅಗಲವಾದ ಫಲಕ, ಅದಕ್ಕೆ ಹೊಂದಿಕೊಂಡಂತೆ ಊರ್ಧ್ವಪದ್ಮ : ಮಂಡ

ಮಧ್ಯಮೂಲ : ವೀರಕಂಠದಂತೆ ಪದ್ಮ ಮತ್ತು ಕುಂಭಗಳ ನಡುವೆ ಕಿರಿದಾದ ರಚನೆ

ಕುಂಭ : ಮಧ್ಯಮೂಲದ ಕೆಳಗೆ ಕುಂಭ ರಚನೆ (ವಿವರಣೆ : ಕುಂಭ ಮಂಡಾದಿ ಸಹಿತಂ)

ಆಸ್ಯ : ಕುಂಭದ ಕೆಳಗೆ ಆಸ್ಯ - ಒಂದರ ಮೇಲೊಂದು ತಟ್ಟೆಗಳನ್ನು ಜೋಡಿಸಿದಂತೆ

ಪದ್ಮ : ಆಸ್ಯದ ಕೆಳಗೆ ಪದ್ಮ

ಲಶುನ : ಕುಂಭಕ್ಕಿಂತ ಕೊಂಚ ನೀಳವಾದ, ಅಗಲವಾದ ಕಂಠವುಳ್ಳ ರಚನೆ

ಮಾಲಾಸ್ಥಾನ : ಸ್ತಂಭಾಗ್ರದ ಕೆಳಗಿನ ಸ್ತರ, ಪೋಣಿಸಿದ ಮುತ್ತಿನ ಸರಗಳ ಮಾಲೆಗಳನ್ನೊಳಗೊಂಡ ಉಬ್ಬುಕೆತ್ತನೆ

ಮೇಲ್ಕಂಡ ಎಲ್ಲಾ ಸ್ತರಗಳನ್ನೂ, ಎಲ್ಲಾ ಸ್ತಂಭ ರಚನೆಗಳಲ್ಲಿ ಕಾಣಲಾಗದು

ಸ್ತಂಭಗಳ ಆಕಾರ

ಚತುರಶ್ರ	- ಬ್ರಹ್ಮಕಾಂತ
ಪಂಚಾಶ್ರ	- ಶಿವಸ್ಕಾಂತ
ಷಡಶ್ರ	- ಸ್ಕಂದಕಾಂತ
ಅಷ್ಟಾಶ್ರ	- ವಿಷ್ಣುಕಾಂತ
ಷೋಡಶಾಶ್ರ	- ಚಂದ್ರಕಾಂತ
ವೃತ	- ರುದ್ರಕಾಂತ

ಸ್ತಂಭಮೂಲ : ಚತುರಶ್ರ, ಸ್ತಂಭಮಧ್ಯ : ವಸ್ವಶ್ರ/ ಷೋಡಶಾಶ್ರ

ಸ್ತಂಭಾಗ್ರ : ವೃತ್ತ

ಸಂಯೋಗ ಸ್ತಂಭಗಳು : ೧-೨-೪-೬-೮ ಉಪಪಾದಗಳು

ಉಪಪಾದಗಳಲ್ಲಿ ಯಾಳಿ, ಗಜ, ಸಿಂಹ ಇತ್ಯಾದಿ ರಚನೆಗಳು

ಭಿತ್ತಿಗಳು

ಜಾಲಕ ಭಿತ್ತಿ : ಜಾಲಂಧ್ರಗಳ ಪ್ರಭೇದಗಳು - ಗವಾಕ್ಷ, ಕುಂಜರಾಕ್ಷ, ಗುಳಿಕಾಜಾಲಕ, ಇತ್ಯಾದಿ.,

ಗವಾಕ್ಷ : ವಿಷಮ ಸಂಖ್ಯೆಯ ಬಾಹು/ಕೋನಗಳುಳ್ಳ ರಂಧ್ರಗಳು

ಕುಂಜರಾಕ್ಷ : ಸಮ ಸಂಖ್ಯೆಯ ಬಾಹು/ಕೋನಗಳುಳ್ಳ ರಂಧ್ರಗಳು

ಗುಳಿಕಾಜಾಲಕ : ವೃತ್ತಾಕಾರದ ರಂಧ್ರಗಳು; ಇವಲ್ಲದೆ ನಾಗಬಂಧ, ಪುಷ್ಪಬಂಧ, ವಲ್ಲೀಬಂಧ, ಮುಂತಾದ ರಚನೆಗಳುಂಟು.

ಫಾಲಕ ಭಿತ್ತಿ : ಫಲಕಗಳಿಂದ ಕೂಡಿದ ಭಿತ್ತಿ

ಇಷ್ಟಿಕಾ ಭಿತ್ತಿ : ಇಟ್ಟಿಗೆಗಳಿಂದ ರಚಿತವಾದ ಭಿತ್ತಿ

ಭಿತ್ತಿಯ ಅಲಂಕಾರ : ಉಬ್ಬುಕೆತ್ತನೆಗಳು : ತೋರಣ, ಕುಂಭಲತಾ, ವೃತ್ತಸ್ಫುಟಿತ ಇತ್ಯಾದಿ.,

ತೋರಣಗಳು

ಕುಡ್ಯ ತೋರಣ : ೧) ಪತ್ರ ತೋರಣ ೨) ಚಿತ್ರ ತೋರಣ ೩) ಮಕರ ತೋರಣ

ಪತ್ರ ತೋರಣ : ಭಿತ್ತಿಯ ಭದ್ರ ಭಾಗದಲ್ಲಿ ಅಮುಕು ಸ್ತಂಭಗಳ ಮೇಲೆ ಅರ್ಧಚಂದ್ರಾಕಾರ ಅಥವಾ ಪತ್ರರಾಜಿಯುಳ್ಳ ರಚನೆ

ಮಕರ ತೋರಣ : ಅಣುಕು ಸ್ತಂಭಗಳ ಮೇಲೆ ತೋರಣ ಭಾಗದಲ್ಲಿ ಪಂಚವಕ್ತ್ರ, ಮಕರಾನನ, ಮಧ್ಯೆ ಪೂರಿಮ

ಚಿತ್ರ ತೋರಣ : ತೋರಣ ಸ್ತಂಭಗಳ ಮೇಲೆ ಮಕರಾನನ, ಪಂಚವಕ್ತ್ರ

ಮಧ್ಯೆ ಪೂರಿಮ : ಸಿಂಹ, ಗಜ, ವ್ಯಾಳಿ, ದೇವ/ವಿದ್ಯಾಧರರ ರಚನೆ

ಸ್ತಂಭ ತೋರಣ : ಅಂತರಾಳದ ಭಾಗದಲ್ಲಿ ಎರಡು ಪೂರ್ಣ ಪ್ರಮಾಣದ ತೋರಣ ಸ್ತಂಭಗಳು; ತೋರಣ/ಝುಷ ಭಾಗದಲ್ಲಿ ವಿವಿಧ ಅಲಂಕಾರ

ಅಷ್ಟಮಂಗಲಗಳು : ತೋರಣ ಅಥವಾ ಝುಷ ಭಾಗದಲ್ಲಿ ಎಂಟು ಮಂಗಳ ಸೂಚಕ ಚಿಹ್ನೆಗಳು ದರ್ಪಣ, ಪೂರ್ಣಕುಂಭ, ವೃಷಭ, ಯುಗ್ಮ ಚಾಮರ, ಶ್ರೀವತ್ಸ, ಸ್ವಸ್ತಿಕ, ಶಂಖ, ದೀಪ ಇತ್ಯಾದಿ., ಮಧ್ಯೆ ಶ್ರೀವತ್ಸ ಅಥವಾ ಶೂಲ ರಚನೆ ಇದಲ್ಲದೆ ದ್ವಾರ ತೋರಣವೂ ಉಂಟು.

ಕುಂಭಲತಾ : ೧) ಕುಂಭಕುಂಭಲತಾ ೨) ಸ್ತಂಭ ಕುಂಭಲತಾ ಮತ್ತು ೩) ಚಿತ್ರಕುಂಭಲತಾ

ಕುಂಭಕುಂಭಲತಾ : ಪದ್ಮಾಸನವುಳ್ಳ ಪೀಠದ ಉಬ್ಬುಕೆತ್ತನೆ, ನಂತರ ಪೂರ್ಣಕುಂಭ, ಕುಂಭ ಮುಖದಿಂದ ಸ್ತಂಭ ಹಾಗೂ ಲತಾಮಂಡಲ ವಿಷ್ಕಂಭ ಭಾಗದಲ್ಲಿ ವೀರಕಂಠ ರಚನೆ ಇಲ್ಲ; ಫಲಕದ ಮೇಲೆ ಪದ್ಮ, ಪಂಜರ, ಶಾಲಾ, ಶುಕನಾಸಿ, ಕುಂಭ ಅಥವಾ ಕೂಟ ರಚನೆ

ಸ್ತಂಭಕುಂಭಲತಾ : ಪದ್ಮಾಸನವುಳ್ಳ ಪೀಠ, ಪೂರ್ಣಕುಂಭ, ಕುಂಭ-ಮುಖದಿಂದ ಸ್ತಂಭ, ಲತಾಮಂಡಲ; ವಿಷ್ಕಂಭ ಭಾಗದಲ್ಲಿ ಬೋದಿಗೆ ಇಲ್ಲ ಫಲಕದ ಮೇಲೆ ಕೂಟ, ಪಂಜರ, ಶಾಲಾ, ಶುಕನಾಸಿ ಅಥವಾ ಕುಂಭ

ಚಿತ್ರಕುಂಭಲತಾ : ಕುಂಭಲತಾ ರಚನೆಯೊಂದಿಗೆ ಸ್ತಂಭ ತೋರಣ (?) ಕುಂಭಕುಂಭಲತಾ/ಪದ್ಮಕುಂಭಲತಾ/ಕುಂಭಪಂಜರ : ಪರ್ಯಾಯ ಪದಗಳು

ವೃತ್ತಸ್ಫುಟಿತ : ಭಿತ್ತಿಯಲ್ಲಿ ತೋರಣ ಸ್ತಂಭಗಳಂತೆ ಎರಡು ಉಬ್ಬು ಸ್ತಂಭರಚನೆಗಳು ಸ್ತಂಭಗಳ ಮೇಲ್ಭಾಗದಲ್ಲಿ ಪಂಜರ, ಶಾಲಾ ಅಥವಾ ಶಿಖರಾಕೃತಿಗಳು ಗುಹಾಭಾಗದಲ್ಲಿ ಮೂರ್ತಿಶಿಲ್ಪ.

ಪ್ರಸ್ತರ : ೧) ಕಪೋತ ಪೂರ್ವ ಭಾಗ, ೨) ಕಪೋತ, ೩) ಕಪೋತೋತ್ತರ ಭಾಗ

ಕಪೋತ ಪೂರ್ವ ಭಾಗ : ಸ್ತರಗಳು - ಉತ್ತರ, ವಾಜನ, ವಲಭೀ

ಉತ್ತರ = ತುಲಾ, ವಾಜನ = ಮುಂಚಾಚಿದ ಪಟ್ಟಿ, ವಲಭೀ = ಭೂತಮಾಲ/ಹಂಸಮಾಲ ಇತ್ಯಾದಿ., ಉತ್ತರ, ವಾಜನ ಭಾಗದಲ್ಲಿ ಸ್ತಂಭದ ಮೇಲೆ ನಾಟಕ - ಯಕ್ಷ ವಿಧ್ಯಾಧರರ ಶಿಲ್ಪ; ವಲಭೀ ನಂತರ ಕೆಲವೆಡೆ ಮುಷ್ಟಿಬಂಧ/ಪದ್ಮ/ವಾಜನ

ಕಪೋತ : ಕಪೋತ ರಚನೆ - ಕಪೋತದ ಮೇಲೆ ಕಪೋತನಾಸೀ/ಕ್ಷುದ್ರನಾಸೀ; ಮೂಲೆಗಳಲ್ಲಿ ವಲ್ಲೀಮಂಡಲ. ಕರ್ಣ ಹಾಗೂ ಭದ್ರಭಾಗಗಳ ನಡುವೆ ಕಪೋತ ಪಂಜರ; ಕ್ಷುದ್ರನಾಸಿಯು ಜೋಡಿಯಾಗಿದ್ದಲ್ಲಿ ನೇತ್ರನಾಸೀ, ಅದಕ್ಕೆ ಹೊಂದಿಕೊಂಡಂತೆ ಭಿತ್ತಿಯಲ್ಲಿ ನಾಸೀಪಾದ ಕಪೋತವು ವಲಭೀ ಭಾಗದವರೆಗೆ ಮುಂಚಾಚುವಿಕೆ (ಗೋಪಾನ)

ಕಪೋತೋತ್ತರ ಭಾಗ : ಆಲಿಂಗ, ಅಂತರಿತ, ಪ್ರತಿ, ವಾಜನ ಪ್ರತಿ ಭಾಗದಲ್ಲಿ (ಸ)ಮಕರ, ಚಿತ್ರಖಂಡ, ನಾಗವಕ್ತ್ರ, ಹಸ್ತಿರೂಪ ಇತ್ಯಾದಿ., ಪ್ರಸ್ತರದ ಮೇಲ್ಗಡೆ ಮೂಲೆಗಳಲ್ಲಿ ನಂದೀ ಮುಂತಾದ ವಾಹನ ರಚನೆ

ಭೂಮಿ / ತಲ ರಚನೆ

ಹಾರ : ಕರ್ಣಕೂಟ, ಹಾರಾಂತರ, ಪಂಜರ, ಅಲ್ಪನಾಸೀ, ಕೋಷ್ಠ, ಇತ್ಯಾದಿ.,

ಕರ್ಣಕೂಟ = ಕೂಟ : ಸಮಚತುರಶ್ರ, ಅಷ್ಟಾಶ್ರ ಅಥವಾ ವೃತ್ತಾಕಾರ ಸ್ತರಗಳು - ಸ್ತಂಭ, ಪ್ರಸ್ತರ, ಮಸ್ತಕ ಅಥವಾ ಕರ್ಣಶೀರ್ಷ ಮತ್ತು ಸ್ತೂಪಿ ಕರ್ಣಶೀರ್ಷ ಭಾಗದಲ್ಲಿ ನಾಲ್ಕು ದಿಕ್ಕಿನಲ್ಲಿ ನಾಸಿಕಾ ರಚನೆ ಗುಹಾ ಭಾಗದಲ್ಲಿ ದೇವತಾ ಶಿಲ್ಪ

ಕೋಷ್ಠ = ಶಾಲಾ : ಆಯತಾಕಾರ ರಚನೆ, ಮುಂಭಾಗದಲ್ಲಿ ನಾಸಿಕಾ, ಎರಡೂ ಪಾರ್ಶ್ವಗಳಲ್ಲಿ ಪಟ್ಟಿಕೆಗಳಿಂದ ಕೂಡಿದ ಲಲಾಟ ನಾಸಿಕಾ ನಾಸೀ = ಅಲ್ಪನಾಸೀ = ಕ್ಷುದ್ರಪಂಜರ - ಮೂರು ಪ್ರಭೇದಗಳು

೧) ಶಕ್ತಿಧ್ವಜ ಸಹಿತ ೨) ಸ್ವಸ್ತಿಕಾಕಾರ ೩) ಅರ್ಧಕೋಟಿ ಸಮನ್ವಿತ

ಶಕ್ತಿಧ್ವಜ ಸಹಿತ : ಸ್ತರಗಳು - ನಾಸ ಮತ್ತು ಶಕ್ತಿಧ್ವಜ

ನಾಸ - ಮುಖಪಟ್ಟಿಕೆ ಮತ್ತು ವಲ್ಲೀ ಮಂಡಲದಿಂದ ಆವೃತವಾದ ಕುಕ್ಷಿ ಅಥವಾ ಗಾಢ; ಶಕ್ತಿಧ್ವಜ - ಗಲ ಮತ್ತು ಕಿನ್ನರೀ ವಕ್ತ್ರ

ಪಂಜರ : ಮುಂಭಾಗ - ನಾಸಿಕಾಕಾರ/ಶಾಲಾಕಾರ, ಹಿಂಭಾಗ-ಹಸ್ತಿಪೃಷ್ಠ/ಹಂಸತುಂಡ

ಸ್ತರಗಳು : ಅಧಿಷ್ಠಾನ, ಪಾದ, ಪ್ರಸ್ತರ, ನಾಸ ಮತ್ತು ಶಕ್ತಿಧ್ವಜ ವೇದಿಕಾ ಭಾಗವನ್ನು ಅಧಿಷ್ಠಾನಕ್ಕೆ ಪರ್ಯಾಯವಾಗಿ ಗುರುತಿಸಬೇಕು ಪ್ರಭೇದಗಳು ೧) ಸಿಂಹಸಂಜ್ಞಕ ಪರ್ಯಾಯವಾಗಿ

ಗುರುತಿಸಬೇಕು ಪ್ರಭೇದಗಳು ೧) ಸಿಂಹಸಂಜ್ಞಕ ೨) ಅರ್ಧ ಪಂಜರ ೩) ಪಂಜರ ೪) ನಿರ್ಯೂಹಪಂಜರ ೫) ಲಂಬನಾಸಿಕ ೬) ಸಿಂಹ ಶೋತ್ರ ೭) ಖಂಡ ನಿರ್ಯೂಹಕ ಮತ್ತು ಝುಷಪಂಜರ

ಈ ಪ್ರಭೇದಗಳನ್ನು ಖಚಿತವಾಗಿ ಗುರುತಿಸಲು ಸಾಧ್ಯ ವಾಗಿಲ್ಲ

ಗ್ರೀವ : ದೇವಾಲಯದ ಶೈಲಿಯನ್ನು ಅನುಸರಿಸಿ ಗ್ರೀವದ ಆಕಾರ; ನಾಗರ-ಚತುರಶ್ರ, ವೇಸರ-ವೃತ್ತ, ದ್ರಾವಿಡ-ಷಡಶ್ರ ಅಥವಾ ಅಷ್ಟಾಶ್ರ ಶಿಖರದಲ್ಲಿ ರಚನೆಗೊಳ್ಳುವ ವೃತ್ತಸ್ಫುಟಿತದ ಪಾದಭಾಗ; ಸ್ತರಗಳು - ಉತ್ತರ, ವಾಜನ, ಮುಷ್ಠಿಬಂಧ, ಮೃಣಾಲಿಕಾ, ದಂಡಿಕಾ, ವಲಯ

ಶಿಖರ : ದೇವಾಲಯದ ಶೈಲಿಯನ್ನು ಅನುಸರಿಸಿದ ಕಂಠದಂತೆ ಶಿಖರದ ಆಕಾರ ಕಂಠ ಹಾಗೂ ಶಿಖರ ರಚನೆಯಲ್ಲಿ ಸಾಮ್ಯವಿದೆ; ಶಿಖರದಲ್ಲಿ ಮಹಾನಾಸೀ ಅಥವಾ ಭದ್ರನಾಸೀ; ವೃತ್ತಸ್ಫುಟಿತದ ನಾಸಿಕಾ ಭಾಗ, ನಾಸಿಕಾ ರಚನೆಯಲ್ಲಿ ಮುಖಪಟ್ಟಿಕೆ ಯಿಂದ ಆವರಿಸಿದ ಕುಕ್ಷಿ, ಗಲ ಮತ್ತು ಕಿನ್ನರೀವಕ್ತ್ರ; ನಾಸಿಕಾ ರಚನೆಯ ಎರಡೂ ಪಕ್ಕಗಳಲ್ಲಿ ಕಪೋಲ; ಕರ್ಣಭಾಗದಲ್ಲಿ ಲತಾಲಂಕಾರ; ಶಿಖರದ ತುದಿಯಲ್ಲಿ ವಲಿಕಾ ಮಂಡಲ, ಮಂಡಲ ಮಧ್ಯದಲ್ಲಿ ಪದ್ಮದೊಂದಿಗೆ ಸ್ತೂಪೀ ರಚನೆ

ಸ್ತೂಪಿ : ಸ್ತರಗಳು : ಪದ್ಮ, ವಲಗ್ರ, ಕುಂಭ, ಕಂಧರ, ಪಾಲೀ ಮತ್ತು ಕುಡ್ಮಲ

ತಿರ್ಯಕ್‌ಕ್ರಮ

ಗರ್ಭಗೃಹ, ಅಂತರಾಳ/ಅರ್ಧಮಂಟಪ, ಪ್ರತಿಮಾ ಮಂಟಪ/ನವರಂಗ, ನೃತ್ಯ ಮಂಟಪ/ನೃತ್ಯಶಾಲಾ, ಮುಖಮಂಟಪ ಇತ್ಯಾದಿ.,

ಪ್ರಾಕಾರ : ಐದು ಪ್ರಾಕಾರಗಳು : ೧) ಅಂತರ್‌ಮಂಡಲ ೨) ಅಂತರ್‌ಹಾರ ೩) ಮಧ್ಯಹಾರ ೪) ಮರ್ಯಾದ ಮತ್ತು ೫) ಮಹಾಮರ್ಯಾದ; ಪ್ರಾಕಾರ ಭಿತ್ತಿ=ಸಾಲಾ, ಸಾಲಶೀರ್ಷವು ಅಲಂಕಾರದಿಂದ ಕೂಡಿದೆ. ಮೊದಲ ಎರಡು ಪ್ರಾಕಾರಗಳಲ್ಲಿ ಆವೃತ ಮಂಡಪಗಳು, ಮುಖಶಾಲಾ ಅಥವಾ ಪಟ್ಟಶಾಲಾ ರಚನೆ; ಆವೃತ ಮಂಡಪಗಳಲ್ಲಿ ಪರಿವಾರ ದೇವತೆಗಳು; ಕೆಲವೊಮ್ಮೆ ಜಾಲಂದ್ರಗಳ ರಚನೆ

ಗೋಪುರ : ಐದು ಗೋಪುರಗಳು - ೧) ದ್ವಾರ ಶೋಭಾ ೨) ದ್ವಾರ ಶಾಲಾ ೩) ದ್ವಾರ ಪ್ರಾಸಾದ ೪) ದ್ವಾರ ಹರ್ಮ್ಯ ಮತ್ತು ೫) ದ್ವಾರ ಗೋಪುರ ಈ ಗೋಪುರಗಳಲ್ಲಿ ಕ್ರಮವಾಗಿ ೩-೪-೫-೬-೭ ತಲ/ಭೂಮಿ ರಚನೆ ಮಹಾನಾಸಿಯುಳ್ಳ ಶಾಲಾಕಾರ ಶಿಖರ, ಹಲವು ಸ್ತೂಪೀ ರಚನೆ; ತಲರಚನೆಯಲ್ಲಿ ಕರ್ಣಕೂಟ, ಪಂಜರ, ಕ್ಷುದ್ರನೀಡ, ಶಾಲಾ ಅಥವಾ ಕೋಷ್ಠ

ಮೂರ್ತಿಶಿಲ್ಪ

ದೇವಾಲಯಗಳಲ್ಲಿ ಮೂಲವಿಗ್ರಹವಲ್ಲದೆ, ಇನ್ನಿತರ ದೇವ ದೇವತೆಗಳ ವಿಗ್ರಹಗಳಿಗೂ ಅವಕಾಶವಿದೆ. ಈ ವ್ಯವಸ್ಥೆಗೆ ಶಾಸ್ತ್ರಗಳ ಸಮ್ಮತಿ ಇದ್ದು, ನಿಗದಿತ ಸ್ಥಳಗಳನ್ನು ಗುರುತಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಪರಿವಾರ ದೇವತೆಗಳು, ವಿಮಾನ ತಲ ದೇವತೆಗಳು ಬೆಳಕಿಗೆ ಬಂದವು. ಇವಲ್ಲದೆ ಪ್ರತಿಮಾ ಮಂಟಪ, ಗೋಪುರ, ದ್ವಾರಗಳಲ್ಲಿ ದೇವ ದೇವತೆಗಳ ವಿಗ್ರಹಗಳು ಸ್ಥಾಪಿಸಲ್ಪಟ್ಟವು.

ದ್ವಾರ ದೇವತೆಗಳು : ಶಿವ ಹರ್ಮ್ಯ - ನಂದಿ ಮತ್ತು ಮಹಾಕಾಳ ವಿಷ್ಣುಹರ್ಮ್ಯ - ಚಂಡ ಮತ್ತು ಪ್ರಚಂಡ

ಮಂಟಪ : ಗರ್ಭಗೃಹ/ಅಂತರಾಳದ ಹೊರಭಾಗದ ಭಿತ್ತಿಯಲ್ಲಿ

ಬಲ ಭಾಗ : ದಕ್ಷಿಣ ಕೋಷ್ಠ - ನೃತ್ಯ ಮೂರ್ತಿ ಅಥವಾ ವಿನಾಯಕ; ಎಡ ಭಾಗ : ಸೌಮ್ಯ ಕೋಷ್ಠ - ದುರ್ಗಾ (ಅಥವಾ ಸರಸ್ವತಿ)

ಪ್ರಾಸಾದ ಭಿತ್ತಿ / ಗರ್ಭಗೃಹ ಭಿತ್ತಿ : ಹೊರಾವರಣ

ದಕ್ಷಿಣ ಭಾಗ : ಮಧ್ಯಕೋಷ್ಠ - ವ್ಯಾಖ್ಯಾನ ದಕ್ಷಿಣಾ ಮೂರ್ತಿ, ಗ್ರೀವ ಭಾಗ - ಗೇಯ ಮೂರ್ತಿ/ವೀರಭದ್ರ

ಪಶ್ಚಿಮ ಭಾಗ : ಮಧ್ಯ ಕೋಷ್ಠ - ಲಿಂಗೋದ್ಭವ ಮೂರ್ತಿ ಅಥವಾ ಅರ್ಧನಾರೀಶ್ವರ, ಗ್ರೀವ ಕೋಷ್ಠ - ಕೇಶವ, ನರಸಿಂಹ ಅಥವಾ ಅಚ್ಯುತ

ಉತ್ತರ ಭಾಗ : ಮಧ್ಯಕೋಷ್ಠ - ಸ್ಥಾನಕಬ್ರಹ್ಮ, ಗ್ರೀವಕೋಷ್ಠ - ಧನದ/ಕಮಲಜ

ಪೂರ್ವ ಭಾಗ : ಗ್ರೀವಕೋಷ್ಠ - ಗಜಾರೂಢ ಇಂದ್ರ, ಪುರಂದರ ಅಥವಾ ಸುಬ್ರಹ್ಮಣ್ಯ

ಪರಿವಾರದೇವತೆಗಳು : ೮ - (೧೨)-೧೬-೩೨ ವಿಗ್ರಹಗಳು ಅಂತರಮಂಡಲದಲ್ಲಿ ಎಂಟು ಅಂತರ್‌ಹಾರ ಮತ್ತು ಮಧ್ಯಹಾರದಲ್ಲಿ ಹದಿನಾರು ಪರಿವಾರ ದೇವತೆಗಳು

ಎಂಟು : ವೃಷಭ, ಗಣಾಧಿಪ, ಕಮಲಜ, ಮಾತೃ, ಗುಹ, ಆರ್ಯ, ಅಚ್ಯುತ ಮತ್ತು ಚಂಡೇಶ

೨) ವಷಭ, ಆರ್ಯಕ, ಸಪ್ತಮಾತೃಕ, ಗಣೇಶ್ವರ, ಸುಬ್ರಹ್ಮಣ್ಯ, ಜ್ಯೇಷ್ಠಾದೇವಿ ಮತ್ತು ಭಾಸ್ಕರ

ಹನ್ನೆರಡು : ವೃಷಭ, ಕಮಲಜ, ಗುಹ, ಹರಿ, ರವಿ, ಗಜವದನ, ಯಮ, ಮಾತೃ, ಜಲೇಶ, ದುರ್ಗಾ, ಧನದ ಮತ್ತು ಚಂಡ

ಹದಿನಾರು : ಪರಿವಾರ ದೇವತೆಗಳಲ್ಲಿ ಇನ್ನಿತರ ದೇವತೆಗಳು - ಅನಲ, ವೀರಭದ್ರ, ಕಾತ್ಯಾಯಿನಿ, ವಿಷ್ಣು, ಅಶ್ವಿನಿದೇವತೆಗಳು, ಪಿತಾಮಹ, ವೈವಸ್ವತ, ರೋಹಿಣಿ, ಮರುತ್, ರುದ್ರ, ಸರಸ್ವತಿ, ಲಕ್ಷ್ಮಿ, ಇತ್ಯಾದಿ

ಎಸ್. ಎಂ. ನಾಗಭೂಷಣ*

ಮುಳಗುಂದ ಶೈವ ದೇವಾಲಯಗಳ ವಾಸ್ತು-ಶಿಲ್ಪ - ಒಂದು ಅಧ್ಯಯನ

ಮುಳಗುಂದ ಕರ್ನಾಟಕದ ಪ್ರಾಚೀನ ಪಟ್ಟಣಗಳಲ್ಲಿ ಖ್ಯಾತಿ ಪಡೆದ ಒಂದು ಪಟ್ಟಣ. ಇದು ಧಾರವಾಡ ಜಿಲ್ಲೆಯಿಂದ ಹೊಸದಾಗಿ ರಚಿತವಾದ ಗದಗ ಜಿಲ್ಲೆ ಹಾಗು ತಾಲೂಕಿನಲ್ಲಿದೆ. ಗದಗಿನಿಂದ ದಕ್ಷಿಣಕ್ಕೆ ೨೨ ಕಿ.ಮೀ. ಅಂತರದಲ್ಲಿದೆ. ಸಾವಿರ ವರ್ಷಗಳಷ್ಟು ಪ್ರಾಚೀನವಾದ ದೇವಾಲಯಗಳು ಶಿಲಾಶಾಸನಗಳು ಹಾಗು ಅಳಿದುಳಿದ ಸಾವಿರಾರು ಶಿಲ್ಪಾವಶೇಷಗಳು ಈ ನಗರದ ತುಂಬೆಲ್ಲ ತುಂಬಿವೆ. ಅನಾದಿ ಕಾಲದ ಈ ನಗರ ಚತುರ್ಯುಗ ಪಟ್ಟಣವೆಂದು ಇಲ್ಲಿನ ಶಾಸನಗಳು ಉಲ್ಲೇಖಿಸುತ್ತಿವೆ.

ರಾಷ್ಟ್ರಕೂಟ ಸಾಮ್ರಾಟ ಅಮೋಘವರ್ಷನ ಕ್ರಿ. ಶ. ೮೬೭ ರ ನೀಲಗುಂದ ಶಾಸನದಲ್ಲಿ ಮೊಟ್ಟಮೊದಲು ಈ ಗ್ರಾಮನಾಮ "ಮುಳುಗುಂದ" ಎಂದು ಉಲ್ಲೇಖ ಸಿಗುತ್ತದೆ. ಆನಂತರದ ಹಲವಾರು ಶಾಸನಗಳಲ್ಲಿ ಕಾವ್ಯಗಳಲ್ಲಿ ಈ ಗ್ರಾಮನಾಮ ಉಲ್ಲೇಖ ಸಿಗುತ್ತದೆ. ಮುಳುಗುಂದಪಟ್ಟಣ ಗ್ರಾನೈಟ್ ಹೆಬ್ಬಂಡೆಗಳ ಬೆಟ್ಟಗಳಿಂದ ರಮ್ಯ ಪ್ರಾಕೃತಿಕ ಸೌಂದರ್ಯಗಳಿಂದ ಸುತ್ತುವರೆದ ಗ್ರಾಮವಾಗಿದ್ದು, ಈ ಬೆಟ್ಟಗಳಲ್ಲಿ ಪ್ರಾಚೀನ ಕಾಲದಲ್ಲಿ ಅನೇಕ ಜೈನಮುನಿಗಳು ವಾಸವಾಗಿದ್ದುದರಿಂದ **ಮುನಿಗುಂದ** ಎಂದು ಕರೆಯಲ್ಪಟ್ಟು ನಂತರ ಮುಳಗುಂದ ಎಂದು ಪರಿವರ್ತಿತವಾಗಿದೆ ಎಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಈಗಲೂ ಇಲ್ಲಿ ಅನೇಕ ಜೈನಬಸದಿಗಳು ಇದ್ದು, ಇಲ್ಲಿ ಅನೇಕ ಜೈನಕವಿಗಳು, ಆಚಾರ್ಯರು ಆಗಿ ಹೋಗಿದ್ದಾರೆಂದು ಶಾಸನಗಳಿಂದ ಕಾವ್ಯಗಳಿಂದ ತಿಳಿದುಬರುತ್ತದೆ. ಖ್ಯಾತ ಜೈನಕವಿ ನಯಸೇನ ಹುಟ್ಟಿ ಬಾಳಿದ ಪಟ್ಟಣವಿದು. ವೀರಶೈವಧರ್ಮದ ಇತ್ತೀಚಿನ ಪವಾಡ ಪುರುಷರಲ್ಲೊಬ್ಬರಾದ ಶ್ರೀ ಬಾಲಲೀಲಾ ಮಹಂತ ಶಿವಯೋಗಿಗಳ ನೆಲವೀಡು.

ಕರ್ನಾಟಕದ ಬೆಳ್ವಲನಾಡಿನ ಈ ಪಟ್ಟಣ ಧಾರ್ಮಿಕ ಕ್ಷೇತ್ರವಾಗಿ ರಾಜಕೀಯ ರಾಜಧಾನಿಯಾಗಿ ಕಾಲಕಾಲಕ್ಕೆ ಬೇರೆ ಬೇರೆ ಅರಸರ ಆಡಳಿತ ಕೇಂದ್ರವಾಗಿ ಖ್ಯಾತಿ ಪಡೆದಿದೆ. ಮುಖ್ಯವಾಗಿ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಹೊಯ್ಸಳ, ಸೇವಣರು, ಆಡಳಿತ ಮಾಡಿದ್ದಾರೆ. "ಮುಳುಗುಂದ ಸಿಂದರು" ಎಂದು ಹೆಸರಾದ ಸಾಮಂತ ಅರಸರು ಮಂಡಲಿಕರಾಗಿ ಸಾಮಂತರಾಗಿ ಮಹಾಸಾಮಂತರಾಗಿ ಮುಳಗುಂದ-೧೨ನ್ನು ಆಳಿದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಇವರಿಗಿದ್ದ ಮುಳಗುಂದು ಪುರವರಾಧೀಶ್ವರ ಎಂಬ ಬಿರುದುಗಳಿಂದ ಇವರು ಮೂಲತಃ ಮುಳುಗುಂದದವರೆಂದು ತಿಳಿದುಬರುತ್ತದೆ. ಈ ಅರಸರು ಈ ಪ್ರಾಂತದಲ್ಲಿ ತಮ್ಮ ಹೆಸರಿನಲ್ಲಿಯೇ ದೇವಾಲಯಗಳನ್ನು ಕಟ್ಟಿಸಿದ್ದಾರೆ.

ಮುಳಗುಂದದಲ್ಲಿ ಇದುವರೆಗೆ ಸಿಕ್ಕ ಶಾಸನಗಳಲ್ಲಿ ಅನೇಕ ದೇವಾಲಯಗಳ ಉಲ್ಲೇಖಗಳಿವೆಯಾದರೂ ಅನೇಕ ದೇವಾಲಯಗಳು ಹಾಳಾಗಿದ್ದು ಕೆಲವೇ ದೇವಾಲಯಗಳು ಮಾತ್ರ ಉಳಿದಿವೆ. ಈ ಪಟ್ಟಣದ ಅತೀ ಪ್ರಾಚೀನ ದೇವಾಲಯವೆಂದರೆ, ಶೋಭಾನೇಶ್ವರ ದೇವಾಲಯ. ಚಾಲುಕ್ಯ ೨ನೇ ತೈಲಪನ ಕಾಲದಲ್ಲಿ ಬೆಳ್ವೊಲ-೩೦೦ ಪುಲಗೇರಿ(ಲಕ್ಷ್ಮೇಶ್ವರ)ಯ ಪ್ರಾಂತದ ಅಧಿಪತಿಯಾದ ಶೋಭಾನರಸನು ಈ ದೇವಾಲಯ ಕಟ್ಟಿಸಿದ. ಆದ್ದರಿಂದ ಈ ದೇವಾಲಯಕ್ಕೆ ಶೋಭಾನೇಶ್ವರ ದೇವಾಲಯ ವೆಂದು ಹೆಸರು ಬಂದಿದೆ. ಈ ದೇವಾಲಯ ಪೂರ್ಣ ಹಾಳಾಗಿದ್ದು. ಅಳಿದುಳಿದ ಅವಶೇಷಗಳನ್ನು ನೋಡಬಹುದು. ಅದರಂತೆ ಹಾಳಾಗಿರುವ ವಿದುರೇಶ್ವರ, ಭೀಮೇಶ್ವರ ಸ್ವಯಂ ಭೂದೇವ, ಬಿಲ್ಲೇಶ್ವರ, ಗುಣದಬೇಶ್ವರ, ದೇವೇಶ್ವರ, ತಲ್ಲಿಗೇಶ್ವರ ಹಾಗು ಭೋಗೇಶ್ವರ ಮುಂತಾದ ದೇವಾಲಯಗಳು ಹಾಳಾಗಿವೆ. ಈಗ ನೋಡಲು ಸಿಗುವಂಥ ಸುಂದರ ದೇವಾಲಯಗಳೆಂದರೆ, ಸಿದ್ಧೇಶ್ವರದೇವಾಲಯ, ಅನ್ನದಾನೇಶ್ವರ, ನಗರೇಶ್ವರ, ಭೈರವೇಶ್ವರ,

* ಇತಿಹಾಸ ಉಪನ್ಯಾಸಕರು, ಮಹಾಲಕ್ಷ್ಮೀ ಪ್ರಥಮ ದರ್ಜೆ ಮಹಾವಿದ್ಯಾಲಯ, ಧಾರವಾಡ - ೫೮೦ ೦೦೬.

ಪೇಟೆಬಸವೇಶ್ವರ ಇವು ಶೈವ ದೇವಾಲಯಗಳಾದರೆ, ಜೈನ ಧರ್ಮದ ಚಂದ್ರಪ್ರಭಾ ಬಸದಿ, ಪಾರ್ಶ್ವನಾಥ ಬಸದಿಗಳಿವೆ ಯಾದರೂ ಇವುಗಳ ಸ್ಥಿತಿ ಬಹು ಚಿಂತಾಜನಕ. ಅಲ್ಲದೆ "ನಗರಬಸದಿ" ಎಂಬ ಮತ್ತೊಂದು ಬಸದಿ ಇತ್ತೆಂದು ಇತ್ತೀಚೆಗೆ ಲಭ್ಯವಾದ ಶಾಸನದಿಂದ ತಿಳಿದುಬರುತ್ತದೆ. ಹಾಗು ಹೆಬ್ಬಂಡೆಯಲ್ಲಿ ಅಪೂರ್ಣವಾದ ಬಾಹುಬಲಿ ಶಿಲ್ಪವನ್ನು ನೋಡಬಹುದು. ಅಲ್ಲದೆ ಪಟ್ಟಣದ ತುಂಬೆಲ್ಲ ಹೊಡೆದು ಬಿದ್ದ ಶಿಲ್ಪಾವಶೇಷಗಳಿಂದ, ಈ ಗ್ರಾಮದಲ್ಲಿದ್ದ ಅಸಂಖ್ಯಾತ ದೇವಾಲಯಗಳ ಕಲ್ಪನೆ ಯಾರಿಗಾದರೂ ಬರಬಹುದು. ಇಲ್ಲಿ ಸಿಗುವ ಶೈವ ದೇವಾಲಯಗಳ ಅಧ್ಯಯನದಿಂದ ಅನೇಕ ಸಾಂಸ್ಕೃತಿಕ ಅಂಶಗಳು ಹೊರಬರುತ್ತವೆ.

ಸಿದ್ಧೇಶ್ವರ ದೇವಾಲಯ : ಸಿದ್ಧೇಶ್ವರ ದೇವಾಲಯ ಮುಳಗುಂದ ಪಟ್ಟಣದ ದೇವಾಲಯಗಳಲ್ಲಿಯೇ ಅತಿ ವಿಸ್ತಾರವಾದ ತ್ರಿಕೂಟ ದೇವಾಲಯ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯ ಪಟ್ಟಣದ ದಕ್ಷಿಣ ಭಾಗದಲ್ಲಿದೆ. ಎತ್ತರವಾದ ಕದಂಬನಾಗರ ಶೈಲಿಯ ಅಂದರೆ ಪಿರಿಮಿಡ್ ಆಕಾರದ ಮೆಟ್ಟಿಲುಗಳಿಂದ ಕೂಡಿದ ಮೂರು ಗೋಪುರಗಳು ಸುಂದರವಾಗಿದ್ದು, ನೋಡುಗರನ್ನು ದೂರದಿಂದಲೇ ಆಕರ್ಷಿಸುತ್ತದೆ.



ತ್ರಿಕೂಟಾಚಲದ ಈ ದೇವಾಲಯ ಮೂರು ಗರ್ಭಗೃಹ ಅಂತರಾಳಗಳು ಒಂದೇ ನವರಂಗ ಅನಂತರ ಸಭಾಮಂಟಪ, ಸಭಾಮಂಟಪಕ್ಕೆ ಮೂರು ಕಡೆ ದ್ವಾರಗಳಿವೆ. ಎದುರಿಗೆ ಅಲ್ಲದೆ ಎರಡೂ ಪಾರ್ಶ್ವಗಳಲ್ಲಿ ದ್ವಾರಗಳಿವೆ. ಮುಂಭಾಗದಲ್ಲಿ ದ್ವಾರ ಮಂಟಪ ದಾಟಿದ ನಂತರ ಆಯಾತಾಕಾರದ ಸುಂದರ ಸಭಾಮಂಟಪ (ಕೋಳ) ದೇವಾಲಯದ ಸುತ್ತಲೂ ಬಿದ್ದು ಹಾಳಾಗಿರುವ ಕಾಂಪೌಂಡ್ ಗೋಡೆ, ಇದು ಹೊರಭಾಗದಲ್ಲಿ ಕಾಣುವ ದೃಶ್ಯ. ಹೊಸ ದ್ವಾರಮಂಟಪ ಪ್ರವೇಶಿಸುತ್ತಿದ್ದಂತೆ ಬಿದ್ದು ಹಾಳಾಗಿದ್ದು, ಕೆಳಭಾಗ ಮಾತ್ರ ಸುಂದರ ಹಾಸು ಬಂಡೆಗಳಿಂದ ಕೂಡಿದ ಆಯಾತಾಕಾರದ ಸಭಾಮಂಟಪ ಕಾಣುತ್ತದೆ. ಈ ಸಭಾಮಂಟಪ ಭಾಗ ಕೆಳಭಾಗದಲ್ಲಿ ಇಕ್ಕೆಲಗಳು ಪ್ರವೇಶಿಸಲು ಆರು ಕಡೆ ಮೆಟ್ಟಿಲುಗಳಿವೆ. ಇದು ೨೧/೨" ಕೆಳಗಿದೆ. ಇದನ್ನು ಡಾ|| ರಿತ್ತಿಯವರು ಕೊಳವೆಂದು ವರ್ಣಿಸಿದ್ದಾರೆ. ಆದರೆ, ಇದು ಕೊಳವೆನ್ನಲು ಯಾವ ಆಧಾರಗಳೂ ಇಲ್ಲ. ಇದು ಸಭಾ ಮಂಟಪವೆಂದು ನನ್ನ ಅಭಿಪ್ರಾಯ. ಇದನ್ನು ದಾಟಿ ಮುಂದೆ ಹೋದರೆ ಮತ್ತೊಂದು ಪ್ರವೇಶದ್ವಾರ, ಸುತ್ತಲ ಪ್ರಾಕಾರ ಬಿದ್ದು ಹಾಳಾಗಿದೆ. ಇದರ ಮಧ್ಯಭಾಗದಲ್ಲಿಯೇ ಸಿದ್ಧೇಶ್ವರ ದೇವಾಲಯ. ಪಶ್ಚಿಮಾಭಿಮುಖವಾಗಿರುವ ಪ್ರವೇಶದ್ವಾರ; ದ್ವಾರವು ಅನೇಕ ಶಾಖೆಗಳಿಂದ ಅಲಂಕೃತವಾಗಿದ್ದು ಎರಡೂ ಪಕ್ಕದಲ್ಲಿ ಶೈವದ್ವಾರ ಪಾಲಕರಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಈ ಸಭಾಮಂಟಪ ಪ್ರವೇಶಿಸುತಿದ್ದಂತೆ ನವರಂಗ ಕೂಡಿದ ಸಭಾ ಮಂಟಪ, ಇದಕ್ಕೆ ಪಾರ್ಶ್ವದಲ್ಲಿ ಮತ್ತೆರಡು ದ್ವಾರಗಳಿವೆ. ನವರಂಗದ ಕಂಭಗಳು ಚೌಕಾಕಾರ ಹಾಗು ಅಷ್ಟಕೋನಾಕಾರಗಳಿಂದ ಮಾಡಿದ ನಾಲ್ಕು ಕಂಭಗಳಿಂದ ಕೂಡಿದ ಸಭಾಮಂಟಪದ ಛತ್ತಿನಲ್ಲಿ ಕಮಲ ವಿನ್ಯಾಸವಿದೆ. ಈ ಸಭಾಮಂಟಪ ದಾಟಿ ಮುಂದೆ ಹೋದರೆ ಮತ್ತೊಂದು ನವರಂಗ, ಇಲ್ಲಿ ದುಂಡನೆಯ ವಿನ್ಯಾಸಗಳುಳ್ಳ ಕರಿಕಲ್ಲಿನ ಹೊಳಪುಳ್ಳ ನಾಲ್ಕು ಕಂಬಗಳು ನವರಂಗದ ರಂಗಮಂಟಪ ವೃತ್ತಾಕಾರದಲ್ಲಿದೆ. ಈ ನವರಂಗದ ಎದುರಿಗೆ ಹಾಗು ಎರಡೂ ಬದಿಗೆ ೩ ಅಂತರಾಳಗಳು ಹಾಗು ಗರ್ಭಗೃಹಗಳು, ತ್ರಿಕೂಟಾಚಲ ದೇವಾಲಯ. ಈ ನವರಂಗ ಕಂಬಗಳು ಕೆಳಭಾಗದಲ್ಲಿ ಚೌಕಾಕಾರ ನಂತರ ಅಷ್ಟಕೋನ ನಂತರ ದುಂಡನೆ ವಿನ್ಯಾಸಗಳನ್ನು ಹೊಂದಿದೆ. ದೇವಕೋಷ್ಠಕಗಳಲ್ಲಿ ಯಾವುದೇ ವಿಗ್ರಹಗಳಿಲ್ಲ. ಮೂರು ಕಡೆ ಅಂತರಾಳಗಳಲ್ಲಿ ಪ್ರವೇಶ ದ್ವಾರಗಳಲ್ಲಿ ಶಾಖೆಗಳಿದ್ದು ಕ್ರಮವಾಗಿ ಲತಾಸುರುಳಿ, ರತ್ನ, ಸ್ತಂಭ, ಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪಗಳಿವೆ. ಛತ್ತಿನಲ್ಲಿ ಅರಳಿದ ಕಮಲ. ಗರ್ಭಗೃಹ ದ್ವಾರಗಳಲ್ಲಿಯೂ ಸಹ ಇದೇ ರೀತಿ ಶಾಖೆಗಳಿದ್ದು ಗರ್ಭಗೃಹಗಳಲ್ಲಿ ಈಶ್ವರಲಿಂಗಗಳಿವೆ. ಗರ್ಭಗೃಹಗಳ ಛತ್ತಿನ ಚೌರಸಗಳಲ್ಲಿ ಅರಳಿದ ಕಮಲ ವಿನ್ಯಾಸಗಳಿವೆ. ದೇವಾಲಯದ ಗರ್ಭಗೃಹ ಅಂತರಾಳ, ನವರಂಗ, ಒಂದು ಕಾಲದ್ದಾದರೆ ಸಭಾಮಂಟಪ ಕೆಲಕಾಲದ ನಂತರ ಕಟ್ಟಿದ್ದಾಗಿದೆ. ಕಾರಣ, ಒಳ ದೇವಾಲಯ ಕರಿಕಲ್ಲಿನಿಂದ ನಿರ್ಮಿಸಿದ್ದು, ಮುಂಭಾಗದ ಸಭಾಮಂಟಪ ಗ್ರಾನೈಟ್‌ನಲ್ಲಿ ಕಟ್ಟಲಾಗಿದೆ ಅಲ್ಲದೇ ಎರಡೂ ಕಡೆ ಶಿಲ್ಪವಿನ್ಯಾಸಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಹೊರಭಾಗದ ಛತ್ತಿಯಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗಿ ಕಾಣಬಹುದಾಗಿದೆ. ದೇವಾಲಯದ ಹೊರಭಾಗ, ಗೋಪುರಗಳು ಕದಂಬನಾಗರ ಶೈಲಿಯಲ್ಲಿದ್ದು ಕೆಳಭಾಗದ ಅಧಿಷ್ಠಾನ ಭೂಮಿಕೆ, ಜಗತಿ, ಕಂಠ, ಭೂಮಿಕೆ ಇವು ಸಾದ ಪಟ್ಟಿಕೆಗಳಿಂದ ಕೂಡಿದ್ದು ಯಾವುದೇ ಮೂರ್ತಿಶಿಲ್ಪಗಳು ಉಬ್ಬುಶಿಲ್ಪಗಳಿಲ್ಲ. ಅತಿ ಸರಳವಾದ ಪಟ್ಟಿಕೆಗಳಿಂದ ಕೂಡಿದ ಜಗತಿ ದ್ವಿಪಟ್ಟಿ ಕಂಠ ಪಟ್ಟಿಕೆಗಳಿಂದ

ಕೂಡಿದೆ. ಈ ಅಧಿಷ್ಠಾನದ ಮುಖ್ಯ ಕಾರ್ಯವೆಂದರೆ, ದೇವಾಲಯದ ಗೋಪುರ ಹಾಗು ಭಿತ್ತಿಗೆ ಭದ್ರ ಬುನಾದಿಯನ್ನೊದಗಿಸುತ್ತದೆ. ದೇವಾಲಯದ ಭಾರವನ್ನು ನಿಯಂತ್ರಿಸುತ್ತದೆ. ದೇವಾಲಯ ಎದ್ದು ಕಾಣುವಂತೆ ಸಹಾಯ ಮಾಡುತ್ತದೆ. ಹಾಗು ಮಳೆಗಾಲದಲ್ಲಿ ದೇವಾಲಯ ಸುತ್ತ ನೀರು ದೇವಾಲಯದ ಒಳ ಹೋಗದಂತೆ ಎತ್ತರದಲ್ಲಿರುತ್ತದೆ. ಭಿತ್ತಿಯ ಸರಳ ಸ್ತಂಭಗಳು ಅಮೃತ ಕಳಸಗಳಿಂದ ಪಟ್ಟಿಕೆಗಳಿಂದ ಅಲಂಕೃತವಾಗಿದೆ. ದೇವಾಲಯದ ಪ್ರತಿ ಗೋಪುರಗಳ ಕೆಳ ಭಿತ್ತಿಯಲ್ಲಿ ಮೂರು ಕಡೆಗಳಲ್ಲಿ ದೇವಕೋಷ್ಠಕಗಳಿವೆ. ಆದರೆ ವಿಗ್ರಹಗಳಿಲ್ಲ. ಈ ದೇವಕೋಷ್ಠಕಗಳಿಗೆ ಸುಂದರ ದ್ವಾರವಿನ್ಯಾಸಗಳು, ಮೇಲೆ ಗೋಪುರಗಳ ವಿನ್ಯಾಸಗಳಿವೆ. ಮೂರು ಗರ್ಭ ಗೃಹಗಳ ಮೇಲಿರುವ ಮೂರು ಗೋಪುರಗಳು ಕದಂಬನಾಗರ ಶೈಲಿಯ ೧೨ ಮೆಟ್ಟಿಲಗಳು ಮೇಲೇರುತ್ತಾ ಪಿರಿಮಿಡ್‌ನಂತೆ ಚಿಕ್ಕದಾಗುತ್ತಾ ಚೌಕಾಕಾರದಲ್ಲಿ ಕೊನೆಗೆ ಕಳಸಗಳಿವೆ. ಗೋಪುರದ ಪ್ರತಿಯೊಂದು ಹಂತದಲ್ಲಿ ಮೇಲೇರಿದಂತೆ ಫಲಕಗಳಲ್ಲಿ ನಟರಾಜನ ಉಬ್ಬುಶಿಲ್ಪಗಳಿವೆ. ದೇವಾಲಯದ ಗರ್ಭಗೃಹ ಅಧಿಷ್ಠಾನ ಸರಳ ಪಟ್ಟಿಕೆಗಳಿಂದ ಕೂಡಿದೆ. ಈ ಭಾಗ ಬಳಪದ ಕಲ್ಲಿನಿಂದ ನಿರ್ಮಿಸಲಾಗಿದೆ.

ಸಭಾಮಂಟಪದ ಹೊರಭಾಗ ಭಿತ್ತಿಯ ಕೆಳಭಾಗ ಅಧಿಷ್ಠಾನ ಗರ್ಭಗೃಹದ ಅಧಿಷ್ಠಾನದಂತೆ ಸಾದಾ ಪಟ್ಟಿಕೆಗಳಿದ್ದು ಮೂರ್ತಿಶಿಲ್ಪಗಳಿವೆ. ಸಭಾಮಂಟಪದ ಅಧಿಷ್ಠಾನ ನಾಲ್ಕು ಪಟ್ಟಿಕೆಗಳಿಂದ ಕೂಡಿದ್ದು ಭೂಮಿಕೆ ಕುಮುದ, ಗಜ ಇವುಗಳ ಪಟ್ಟಿಕೆಗಳಲ್ಲಿ ಸೈನಿಕರು ಸಾಲಾಗಿ ಆಯುಧಗಳನ್ನಿಡಿದು ಹೋಗುತ್ತಿರುವ ದೃಶ್ಯ ಕುದುರೆ, ಆನೆ ಹಾಗು ಹಂಸಗಳ ಉಬ್ಬುಶಿಲ್ಪಗಳಿವೆ. ಒಂದು ವಿಶೇಷವೆಂದರೆ ಈ ಪಟ್ಟಿಕೆಯಲ್ಲಿ ಒಂದೆರಡು ಕಡೆ ಒಂಟೆಗಳ ಶಿಲ್ಪವನ್ನು ನಿರ್ಮಿಸಲಾಗಿದೆ. ಒಂಟೆಗಳ ಮೇಲೆ ಸೈನಿಕರು ಕುಳಿತು ಸಾಗುವ ಅಪರೂಪದ ಶಿಲ್ಪದಿಂದ ಉತ್ತರ ಭಾರತದ ರಾಜಸ್ಥಾನದ ಸಂಪರ್ಕವಿತ್ತೆಂದು ದಾಖಲಿಸುತ್ತದೆ. ಅಲ್ಲದೆ ಈ ಪಟ್ಟಿಕೆಗಳಲ್ಲಿ ಶಿಲ್ಪಸುಂದರಿಯರು ವಿವಿಧ ನಾಟ್ಯ ಭಂಗಿಗಳು, ವಾದ್ಯಸುಂದರಿಯರ ಶಿಲ್ಪಗಳನ್ನು ಕಾಣಬಹುದು. ಅಲ್ಲದೇ ಎರಡು ಕಡೆ ಪಂಚತಂತ್ರ ಕಥೆಗೆ ಸಂಬಂಧಿಸಿದ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಸಭಾಮಂಟಪದ ಭಿತ್ತಿ ಸರಳವಾಗಿದ್ದು ಯಾವುದೇ ವಿನ್ಯಾಸಗಳಿಲ್ಲ. ಈ ಎಲ್ಲಾ ಶಿಲ್ಪಗಳಿಗೆ ಗ್ರಾನೈಟ್ ಕಲ್ಲು ಬಳಸಿದ್ದಾರೆ. ಸಭಾಮಂಟಪದ ದ್ವಾರದ ಕಕ್ಷಾಸನದಲ್ಲಿ ಸುಂದರ ಶಿಲ್ಪಸುಂದರಿಯರ ವಿವಿಧ ನಾಟ್ಯ ಭಂಗಿಗಳನ್ನು ಹಾಗು ವಾದ್ಯ ಸುಂದರಿಯರನ್ನು ಒಳಗೊಂಡ ಶಿಲ್ಪಗಳಿವೆ. ಈ ಸಭಾಮಂಟಪ ಗ್ರಾನೈಟ್‌ನಿಂದ ನಿರ್ಮಿಸಿದ್ದು ಹಾಗು ವಾದ್ಯಸುಂದರಿಯರನ್ನು ಒಳಗೊಂಡ ಶಿಲ್ಪಗಳಿರುವುದರಿಂದ ಹಾಗು ವಿವಿಧ ವಿನ್ಯಾಸದ ಉಬ್ಬುಶಿಲ್ಪ ಮೂರ್ತಿಗಳಿರುವುದರಿಂದ ಈ ಭಾಗವನ್ನು ಅನಂತರದಲ್ಲಿ ಕಟ್ಟಿರಬಹುದು. ಇಲ್ಲಿ ಸಿಗುವ ವಾಸ್ತುಶಿಲ್ಪ ಮೂರ್ತಿಶಿಲ್ಪ ಅಧ್ಯಯನದಿಂದ ಆ ಕಾಲದ ಅಲ್ಲಿನ ಜನರ ಸಂಗೀತ ಕಲೆ, ಜನಗಳ ವೇಷ ಭೂಷಣ ಒಡವೆ ವಸ್ತುಗಳು ಸೇವಾ ವಿಭಾಗಗಳು, ಆಯುಧಗಳು ಧಾರ್ಮಿಕ ವಿಧಿಗಳು ಆರ್ಥಿಕ ವ್ಯವಸ್ಥೆ ಮುಂತಾದ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ.

ನಗರೇಶ್ವರ ದೇವಾಲಯ : ಪೂರ್ವಾಭಿಮುಖವಾಗಿರುವ ಈ ದೇವಾಲಯ ನಗರದ ಉತ್ತರದಲ್ಲಿರುವ ನಗರಬಸದಿಕೆರೆಯ ದಕ್ಷಿಣ ಭಾಗದಲ್ಲಿದೆ. ಈ ದೇವಾಲಯವನ್ನು ೧೧ನೇ ಶತಮಾನದ ಪಟ್ಟಣದ ನಖರರು ಅಥವಾ ನಗರರು, ಅಂದರೆ, ಸೆಟ್ಟಿಯರು (ವ್ಯಾಪಾರಸ್ಥ ಸದಸ್ಯರು) ಕಟ್ಟಿಸಿದರೆಂದು ಶಾಸನ ಉಲ್ಲೇಖಿಸುತ್ತದೆ. ನಗರರು ಕಟ್ಟಿಸಿರುವುದರಿಂದ ಈ ದೇವಾಲಯವನ್ನು ನಗರೇಶ್ವರ ದೇವಾಲಯವೆಂದು ಕರೆಯುತ್ತಾರೆ. ಈ ಪಟ್ಟಣದ ಸೆಟ್ಟಿಗಳಾದ ಬಲ್ಲವಶೆಟ್ಟಿ, ಧರ್ಮಸೆಟ್ಟಿ, ಕೃತಯುಗದಸೆಟ್ಟಿ, ಕೊಳಗಾರಸೆಟ್ಟಿ ಮುಂತಾದ ಸೆಟ್ಟಿಯರು ಈ ದೇವಾಲಯಕ್ಕೆ ದಾನ ಮಾಡಿದ ಕ್ರಿ. ಶ. ೧೦೬೨ರ ಶಿಲಾಶಾಸನ, ದೇವಾಲಯದ ಹೊರಗಡೆ ಇದೆ. ಇತ್ತೀಚಿಗೆ ಬೆಳಕಿಗೆ ಬಂದ ಮತ್ತೊಂದು ಶಾಸನ, ಹೊಯ್ಸಳ ೨ನೇ ವೀರಬಲ್ಲಾಳ ಹಾಗು ಸೇವುಣರ ೨ನೇ ಸಿಂಗಣನ ಶಾಸನ ಇದೇ ದೇವಾಲಯ ನವರಂಗದ ಅರ್ಧಗೋಡೆಯಲ್ಲಿದೆ. ಇದರಲ್ಲಿ ದೇವಾಲಯಕ್ಕೆ ದತ್ತಿದಾನಗಳ ಹಾಗು ಆಚಾರ್ಯರ ಉಲ್ಲೇಖಗಳಿವೆ.

ಈ ದೇವಾಲಯಗಳ ಮುಖ್ಯ ಭಾಗಗಳೆಂದರೆ ನವರಂಗ, ಅಂತರಾಳ, ಗರ್ಭಗೃಹ. ನವರಂಗದಲ್ಲಿ ಪೂರ್ವ ಹಾಗು ದಕ್ಷಿಣ ದಿಕ್ಕಿಗೆ ಎರಡು ದ್ವಾರಗಳಿವೆ. ನವರಂಗದ ನಾಲ್ಕು ಕಂಬಗಳು ಕೆಳಭಾಗದಲ್ಲಿ ಚೌಕಾಕಾರವಾಗಿ ನಂತರ ಅಷ್ಟಕೋನ ಚೌಕಾಕಾರದ ಮೇಲೆ ದುಂಡನೆ ಗಾಲಿಗಳಿದ್ದು, ಮೇಲಿನ ಛತ್ತು ಚೌರಸಗಳಿಂದ ಅರಳಿದ ಕಮಲವಿದೆ. ನವರಂಗದ ರಂಗಮಂಟಪ ಕಂಬಗಳು ಕೆಳಭಾಗದಲ್ಲಿ ಚೌಕಾಕಾರವಾಗಿ ನಂತರ ಅಷ್ಟಕೋನ ಚೌಕಾಕಾರದಲ್ಲಿ ಮೇಲೆ ದುಂಡನೆ ಗಾಲಿಗಳಿದ್ದು, ಮೇಲೆ ಛತ್ತು ಚೌರಸಗಳಿಂದ ಅರಳಿದ ಕಮಲ ವಿನ್ಯಾಸದಿಂದ ಕೂಡಿದೆ. ನವರಂಗದ ರಂಗಮಂಟಪ ಚೌಕಾಕಾರವಿದ್ದು ೧/೨ ಅಡಿ ಎತ್ತರದಲ್ಲಿದೆ. ನವರಂಗದ ದೇವಕೋಷ್ಠಗಳಲ್ಲಿ ಯಾವುದೇ ದೇವರ ವಿಗ್ರಹಗಳಿಲ್ಲ. ನವರಂಗದ ಅಂತರಾಳ ದ್ವಾರಮಂಟಪ ಹಾಗು ಗರ್ಭಗೃಹದ ದ್ವಾರಗಳು ಅನೇಕ ಶಾಖೆಗಳಿಂದ ಕೂಡಿದ್ದು ಅಂತರಾಳ ದ್ವಾರದ ಎರಡು ಕಡೆ ಜಾಲಂಧ್ರಗಳಿವೆ. ಗರ್ಭಗೃಹದಲ್ಲಿ ಮೂರು ಅಡಿ ಎತ್ತರದಲ್ಲಿ ಈಶ್ವರ ಲಿಂಗವಿದೆ. ಎದುರಿಗೆ ಅಂತರಾಳದಲ್ಲಿ ಎರಡೂವರೆ ಅಡಿ ಎತ್ತರದ ನಂದಿ ವಿಗ್ರಹವಿದೆ.

ಗರ್ಭಗೃಹದ ಭಿತ್ತಿನಲ್ಲಿ, ಚೌರಸಗಳಿಂದ ಕೂಡಿ, ಮಧ್ಯದಲ್ಲಿ ಅರಳಿದ ಕಮಲ ವಿನ್ಯಾಸವಿದೆ. ಹೊರಭಾಗದಲ್ಲಿ ಕದಂಬನಾಗರ ಶೈಲಿಯ ಗೋಪುರವಿದ್ದು, ಭಿತ್ತಿ ಸರಳವಾಗಿದೆ. ಈ ದೇವಾಲಯಕ್ಕೆ ಭೂಮಿಕೆ ಅಥವಾ ಜಗತಿ ಇಲ್ಲ. ಹೊರಭಾಗದ ಭಿತ್ತಿಯಲ್ಲಿ ಯಾವುದೇ ವಿನ್ಯಾಸವಿಲ್ಲ. ದಕ್ಷಿಣದ ದ್ವಾರ ಸಾದಾ ಪಟ್ಟಿಕೆಯಿಂದ ಕೂಡಿದೆ. ಹೊರಗಿನ ಎಡಭಾಗದ ಭಿತ್ತಿಯಲ್ಲಿ ಒಂದು ಶಾಸನವಿದೆ. ಮುಂಭಾಗದ ಪೂರ್ವಾಭಿಮುಖದ ದ್ವಾರ ಶಾಖೆಗಳು ಸರಳ ಪಟ್ಟಿಕೆಗಳಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.



ಅನ್ನದಾನೇಶ್ವರ ದೇವಾಲಯ : ಈ ದೇವಾಲಯ ಪಟ್ಟಣದ ಉತ್ತರ ಭಾಗದ ಹೊಂಡದ ದಂಡೆಯಲ್ಲಿದೆ. ದಕ್ಷಿಣಾಭಿಮುಖವಾಗಿದ್ದು, ತ್ರಿಕೂಟಾಚಲ ದೇವಾಲಯ ಈಗ ಪೂರ್ಣ ಹಾಳಾಗಿದ್ದು, ಎರಡು ಗರ್ಭಗೃಹಗಳು ಹಾಗು ಒಂದು ಗೋಪುರ ಮಾತ್ರ ಉಳಿದಿವೆ. ಒಳಗಡೆ ನವರಂಗವಿದೆ. ಉಳಿದೆಲ್ಲ ಭಿತ್ತಿಯನ್ನು ಪುನಃ ದುರಸ್ತಿ ಮಾಡಲಾಗಿದೆ. ಮೂಲ ತ್ರಿಕೂಟ ದೇವಾಲಯ ಹಾಳಾಗಿದ್ದು ದಕ್ಷಿಣ ಸುಂದರ ಗೋಪುರ ಮಾತ್ರ ಉಳಿದಿದೆ. ದಕ್ಷಿಣ ಹಾಗೂ ಉತ್ತರದ ಗರ್ಭಗೃಹ ಉಳಿದಿದ್ದು ಈಗ ಗೋಡೆ ಕಟ್ಟಿದ್ದಾರೆ. ದಕ್ಷಿಣಾಭಿಮುಖವಾಗಿದ್ದ ದ್ವಾರ ಮಂಟಪ ಅನೇಕ ಶಾಖೆಗಳಿಂದ ಕೂಡಿ ಗಜಲಕ್ಷ್ಮಿ ಉಬ್ಬು ಶಿಲ್ಪವಿದೆ. ದಕ್ಷಿಣ ದ್ವಾರಮಂಟಪದಲ್ಲಿ ಸ್ತಂಭ, ರತ್ನ ಹಾಗು ಲತಾಸುರುಳಿ ಶಾಖೆಗಳಿಂದ ಸುಂದರವಾಗಿದೆ. ಈ ದ್ವಾರಮಂಟಪ ಪ್ರವೇಶಿಸಿದೊಡನೆ ನವರಂಗವಿದೆ. ನಾಲ್ಕು ಕಂಬದ ನಡುವೆ ಸ್ವಲ್ಪ ಎತ್ತರದಲ್ಲಿರುವ ರಂಗಮಂಟಪ ಕಂಬಗಳು ಕೆಳಭಾಗ ಚೌಕಾಕಾರವಾಗಿದ್ದು, ಮೇಲೆ ಅಷ್ಟಕೋನ ಆ ನಂತರ ದುಂಡನೆ ವಿನ್ಯಾಸಗಳಿಂದ ಕೂಡಿದೆ. ನವರಂಗದ ದಕ್ಷಿಣ ಕಂಬಗಳಲ್ಲಿ ಕ್ರಿ. ಶ. ೧೨೨೪ ರ ಶಾಸನವು ಸ್ವಯಂಭೂ ದೇವಾಲಯದ ನಂದಾದೀವಿಗೆಗಾಗಿ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಇದರಿಂದ ಈ ದೇವಾಲಯವು ಸ್ವಯಂ ಭೂಮಿಯಿಂದ ಉದ್ಭವವಾಗಿದೆ ಎಂದು ಈಗಲೂ ಪ್ರತೀತಿ ಇದೆ. ಕರಿಕಲ್ಲಿನಲ್ಲಿ ಕಟ್ಟಿರುವ ಈ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಬಹುದಾಗಿದೆ.

ವೇಸರ ಶೈಲಿಯ ಗೋಪುರ ಅಲ್ಲಲ್ಲಿ ಶಿಥಿಲವಾಗಿದೆ. ದೇವಾಲಯದ ಸುತ್ತಲೂ ಅನೇಕ ಶಿಲ್ಪಾವಶೇಷಗಳು ಬಿದ್ದಿವೆ. ಈ ದೇವಾಲಯವು ಜೀರ್ಣಾವಸ್ಥೆಯಲ್ಲಿದೆ.

ಭೈರವೇಶ್ವರ ದೇವಾಲಯ : ನಗರದ ಮುಖ್ಯ ಬೀದಿಯಲ್ಲಿರುವ ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು, ಸುಮಾರು ೧೫ ಅಡಿ ಎತ್ತರವಾಗಿದೆ. ಇದೊಂದು ವಿಶಿಷ್ಟ ದೇವಾಲಯವಾಗಿದ್ದು, ಹೊರ ಭಾಗದ ದ್ವಾರಮಂಟಪ ಸರಳವಾಗಿದ್ದು ೧೦ ಅಡಿ ಎತ್ತರವಾಗಿದೆ. ಎರಡು ಪಕ್ಕದಲ್ಲಿ ದ್ವಾರ ಪಾಲಕರ ಉಬ್ಬು ಶಿಲ್ಪಗಳೂ ಬಲಗೈಯಲ್ಲಿ ಕತ್ತಿ ಗುರಾಣಿ, ಹಿಂಬದಿಯ ಕೈಗಳಲ್ಲಿ ಡಮರು ತ್ರಿಶೂಲ ರುಂಡಮಾಲೆಗಳಿಂದ ಕೂಡಿದ ವಿಗ್ರಹ; ಭೀತಿ ಬರಿಸುವಂತಿದೆ. ಭಿತ್ತಿನಲ್ಲಿ ಅಲ್ಲಲ್ಲಿ ಅರಳಿದ ಕಮಲ ವಿನ್ಯಾಸಗಳಿವೆ. ದೇವಾಲಯಕ್ಕೆ ಹೊಂದಿಕೊಂಡು ಮನೆಗಳಿರುವುದರಿಂದ ಹೊರ ಬದಿಯು ಮುಚ್ಚಿಹೋಗಿದೆ. ವಿಗ್ರಹದ ಜಟೆ ಹಾಗು ಶಿಲ್ಪ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ. ಹೊರಭಾಗದಲ್ಲಿ ಸಹ ಶಿಥಿಲವಾದ ಇಂತಹದೇ ಜಟಾ ಮುಕುಟವಿರುವ ಶಿವನ ಹಾಗು ಚಂದ್ರಶೇಖರನ ವಿಗ್ರಹಗಳು, ವೀರಗಲ್ಲುಗಳು ನಿಂತಿವೆ.



ವಿಶಿಷ್ಟ ಭೈರವನ ವಿಗ್ರಹ : ಅನ್ನದಾನೇಶ್ವರ ದೇವಾಲಯದ ಬಳಿ ಇರುವ ಈ ಚಿಕ್ಕ ವಿಗ್ರಹ ಸುಮಾರು ೨ ಅಡಿ ಎತ್ತರವಿದ್ದು ಕಾಲುಗಳು ಮುರಿದು ಹೋಗಿವೆ. ಕೈ-ಕಾಲು ಹಾಗು ಮೇಲಿನ ಪ್ರಭಾವಳಿ ಸಹ ಶಿಥಿಲವಾಗಿದೆ. ಸುರುಳಿ ಗೂದಲಿನ ತಲೆಗೆ ನಾಗಬಂಧ, ಶಾಂತ ಮುಖಭಾವ, ಹೊಂದಿ ಕೊರಳು ಅನೇಕ ಆಭರಣಗಳಿಂದ ಅಲಂಕೃತವಾಗಿದೆ. ಸೊಂಟದಲ್ಲಿ ಸಹ ಆಭರಣ ಅಲಂಕಾರವಿದ್ದು, ಬೆತ್ತಲೆ ಇರುವ ಈ ವಿಗ್ರಹ ಭೈರವ ಎಂದು ಹೇಳಬಹುದು. ಎರಡು ಬದಿಯ ಕೈಗಳು ಶಿಥಿಲವಾಗಿರುವುದರಿಂದ ಆಯುಧಗಳು ತಿಳಿದುಬರುತ್ತಿಲ್ಲ. ಇದೊಂದು ವಿಶೇಷ ಭೈರವನ ವಿಗ್ರಹ.

ಇದಲ್ಲದೆ ಈ ಪಟ್ಟಣದಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದ ಅನೇಕ ಮೂರ್ತಿಶಿಲ್ಪಗಳು ಶಿಥಿಲವಾಗಿ ಬಿದ್ದಿವೆ. ಸಿದ್ಧೇಶ್ವರ ದೇವಾಲಯದ ಹೊರಭಾಗದಲ್ಲಿ, ಸರಕಾರಿ ಆಸ್ಪತ್ರೆ ಹಿಂಭಾಗದಲ್ಲಿ "ಆಕಾಶ ಬಸವನ" ವಿಗ್ರಹ, ಪೇಟೆಬಸಪ್ಪನ ದೇವಾಲಯದ ಸಮೀಪದ ಈಶ್ವರ ವಿಗ್ರಹ, ಹಾಗೂ ಅನೇಕ ಶೈವ ಧರ್ಮದ ವಿಗ್ರಹಗಳು ಹಾಳಾಗಿ ಬಿದ್ದಿವೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

ಡಾ|| ಶ್ರೀನಿವಾಸ ರಿತ್ತಿ : **ಮುಳಗುಂದ ನಾಡು**, ಧಾರವಾಡ.
ಡಾ|| ಚೆನ್ನಬಸವಯ್ಯ ಹಿರೇಮಠ : **ಕುರುಗೋಡು ಸಿರದರು**
ಡಾ|| ಎಸ್. ರಾಜಶೇಖರ : **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ**
ಡಾ|| ಸೂರ್ಯನಾಥ ಯು. ಕಾಮತ್ : **ಧಾರವಾಡ ಜಿಲ್ಲೆ ಗ್ಯಾಸೆಟಿಯರ್**, ಬೆಂಗಳೂರು.

ಡಾ|| ರು. ಮ. ಷಡಕ್ಷರಯ್ಯ*

ಗುಲ್ಬರ್ಗಾ ಜಿಲ್ಲೆಯಲ್ಲಿ ಕಂಡುಬಂದ ಹೆಚ್ಚಿನ ದೇವಾಲಯ ಶಿಲ್ಪಗಳು

ಗುಲ್ಬರ್ಗಾ ಜಿಲ್ಲೆಯ ಹಳ್ಳಿ ಹಳ್ಳಿಗಳ ಪುರಾತತ್ವ ಅನ್ವೇಷಣೆಯನ್ನು ಅನೇಕ ವರ್ಷಗಳಿಂದ ಕೈಗೊಂಡಿದ್ದು ಈ ಸಂದರ್ಭದಲ್ಲಿ ಬೆಳಕಿಗೆ ಬಂದ ಸ್ಮಾರಕ, ಶಿಲ್ಪ ಮುಂತಾದವುಗಳನ್ನು ಅಧ್ಯಯನ ಮಾಡಿ ವಿವಿದೆಡೆ ಪ್ರಕಟಿಸುತ್ತ ಬರಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಈ ಜಿಲ್ಲೆಯ ಚಿತಾಪುರ ತಾಲೂಕಿನ ಇಪ್ಪತ್ತೆರಡು ಹಳ್ಳಿಗಳಲ್ಲಿ ಕಂಡುಬಂದ ವಿವಿಧ ಧರ್ಮದ ಸ್ಮಾರಕ ಶಿಲ್ಪ ಮತ್ತು ಲೌಕಿಕ ಸ್ಮಾರಕಗಳ ವಾಸ್ತು ವೈಶಿಷ್ಟ್ಯವನ್ನು ನೀಡಲಾಗಿದೆ. ಬೆಳಕಿಗೆ ಬಂದ ಸ್ಥಳೀಯ ಶಾಸನ ಮತ್ತು ಲೇಖನ ಕೃತಿ ಇತ್ಯಾದಿ ಸಾಹಿತ್ಯಕ ಸಾಮಗ್ರಿಗಳಲ್ಲಿ ಉಲ್ಲೇಖಗೊಂಡ ಈ ಭಾಗದ ಮಾಹಿತಿಯನ್ನು ಅವಶ್ಯವೆನಿಸಿದಲ್ಲಿ ಪರಿಶೀಲಿಸಲಾಗಿದೆ. ಹೀಗಾಗಿ ಈ ಅಧ್ಯಯನವು ಈ ಭಾಗದ ರಚನೆಗೆ ತುಂಬಾ ಪ್ರಯೋಜನಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಅಧ್ಯಯನದಲ್ಲಿ ಸೀಮಿತಗೊಂಡ ಹೆಚ್ಚಿನ ಹಳ್ಳಿಗಳು ಪ್ರಾಚೀನ ಆಡಳಿತ ಕೇಂದ್ರವೆನಿಸಿದ ಅಱಳು - ೩೦೦ರಲ್ಲಿ ಸಮಾವೇಶಗೊಂಡಿವೆ. ಅವುಗಳು ನಾಗಾವಿ, ದಿಗ್ಗಾವಿ, ಸಾತನೂರು, ಹೊಸೂರು, ಬಂಕಲಗ, ಡೊಣಗಾಲ, ರಾವೂರ, ಲಕ್ಷ್ಮೀಪುರವಾಡಿ, ಇಂಗಳಗಿ, ಹಲ್ಕಟ್ಟಾ, ಕಮ್ಮಾರವಾಡಿ, ಸೂಲಹಳ್ಳಿ, ಆಲೂರು, ಬೊಮ್ಮನಹಳ್ಳಿ, ಕದರಳ್ಳಿ, ಯರಗಲ್ಲು, ಕದ್ದರಗಿ, ಜೀವಣಗಿ, ಶಂಕರವಾಡಿ ಮತ್ತು ಮಾಲಗಿತ್ತಿ.

ಶಾಸನಗಳಲ್ಲಿ ನಾಗಾಯಿ, ನಾಗವಾಹಿ, ದಿಗ್ಗಾವಿ, ದಿರ್ಗ್ವವಿ ಅಥವಾ ದಿಗ್ಭಾವಿ, ಹಲ್ಲಕಟ್ಟಾ (ಹಲಕರಟ್ಟ) ಪಲ್ಲಕರಂಟೆ ಅಥವಾ ಹಲಕಟ್ಟೆ, ಇಂಗಳಗಿ, ಯಿಂಗುಳಿಗೆ ಅಥವಾ ಯಿಂಗಿಣಿಗೆ, ಮುದ್ದೂರು ಎಂದು ಮೂಲವಾಗಿ ಕರೆಸಿಕೊಂಡಿವೆ. ಇನ್ನಿತರ ಹಳ್ಳಿಗಳ ಮೂಲ ಹೆಸರುಗಳ ಬಗ್ಗೆ ತಿಳಿಯಬೇಕಾಗಿದೆ. ಅವುಗಳಲ್ಲಿ ನಾಗಾವಿಯು ಮಹಾ ಅಗ್ರಹಾರ, ಘಟಿಕಸ್ಥಾನ ಅಥವಾ ಕಾಳಿಯರಸನ ಅಗ್ರಹಾರವೆಂತಲೂ,[೧] ದಿಗ್ಗಾವಿಯು ಸರ್ವನಮಶ್ಯ ಅಗ್ರಹಾರವೆಂತಲೂ, ಹಲ್ಕಟ್ಟ ಭತ್ತಗ್ರಾಮ ಲಪ್ಪಕರಂಟೆ ಅಥವಾ ಹಲಕಟ್ಟೆ ಎಂತಲೂ; ಮುದ್ದೂರು ಎಂತಲೂ ಪ್ರಸಿದ್ಧಿಯಾಗಿದ್ದವು. ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯ ಅಗ್ರಹಾರಗಳು ಕಲ್ಯಾಣ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಬೆಳಕಿಗೆ ಬಂದವು. ಈ ಅಗ್ರಹಾರಗಳು ಪ್ರಾಚೀನ ವಿದ್ಯಾಕೇಂದ್ರಗಳು.

ಇಂಥವುಗಳಲ್ಲಿ ಈ ಭಾಗದ ನಾಗಾವಿ ಅಗ್ರಹಾರ ಅಥವಾ ಘಟಿಕದ ತ್ರೈಪುರುಷ ಶಾಲೆಯು ಈ ಪ್ರಾಂತದಲ್ಲೇ ಒಂದು ಮಹತ್ವದ ಪ್ರಾಚೀನ ಶಿಕ್ಷಣಕೇಂದ್ರವಾಗಿದ್ದಿತೆಂದು ಸ್ಥಳೀಯ ಶಾಸನಗಳು ಹೇಳಿವೆ. ಇದಲ್ಲದೆ ಅಲ್ಲಿಯ ಇನ್ನಿತರ ದೇವಾಲಯಗಳಲ್ಲಿ ರಾಮತೀರ್ಥ, ರಾಮೇಶ್ವರ, ಲೋಕೇಶ್ವರ, ಸಿದ್ಧೇಶ್ವರ, ಮಧುಸೂದನ ಮತ್ತು ಕೇಶವ ಹಾಗೂ ಕೋಟಿಮಠವು ಪ್ರಮುಖವೆನಿಸಿದ್ದವು.[೨] ಆ ಸ್ಥಳವು ಇಂದು ಹಾಳು ಸುರಿಯುತ್ತಿದೆ. ಅದರಲ್ಲಿ ಅನೇಕ ಭಗ್ನಾವಶೇಷಗಳಿವೆ. ಅಲ್ಲಿಯ ಸ್ಮಾರಕಗಳಲ್ಲಿ ತ್ರೈಪುರುಷಶಾಲೆಯನ್ನು ಮಾತ್ರ ಗುರುತಿಸಲಾಗಿದೆ. ಅದರ ಮತ್ತು ಇನ್ನಿತರ ದೇವಾಲಯಗಳ ವಾಸ್ತು ವೈವಿಧ್ಯ ತಿಳಿದಿಲ್ಲ. ಈ ಶಾಲೆಯಲ್ಲಿ ವೇದಾಧ್ಯಯನ, ಶಾಸ್ತ್ರಾಧ್ಯಯನ, ಭಟ್ಟದರ್ಶನ, ನ್ಯಾಸ, ಪ್ರಕಾರ ವಿಷಯಗಳನ್ನು ಕಲ್ಪಿಸಲಾಗಿತ್ತು. ಸರಸ್ವತಿ ಭಂಡಾರಿ, ಉಪಾಧ್ಯಾಯರು, ಮಾಣಿಗಳು ಮತ್ತು ಘಟಿಕ ಪ್ರಹಾರಿ ಇನ್ನಿತರ ಸಿಬ್ಬಂದಿ ಅಲ್ಲಿದ್ದಿತು. ಮೂವತ್ತು ದೇವರುಗಳಲ್ಲದೆ ರಾಮೇಶ್ವರ, ಲೋಕೇಶ್ವರ, ಮಧುಸೂದನ, ಸಿದ್ಧೇಶ್ವರ, ಕೇಶವ, ಲಕ್ಷ್ಮೀಶ್ವರ ದೇವಾಲಯಗಳು, ಕೋಟೇಶ್ವರ ಎಂಬ ಮಠ ಅಲ್ಲಿದ್ದವು. ಅಲ್ಲೊಂದು ರಾಮತೀರ್ಥವಿದ್ದಿತು. ಈ ಮಾಹಿತಿಗಳನ್ನು ಸ್ಥಳೀಯ ನಾಲ್ಕು ಶಾಸನಗಳು ಹೇಳುತ್ತವೆ.[೩] (ಕ್ರಿ. ಶ. ೧೦೫೮ - ಕ್ರಿ. ಶ. ೧೦೯೨). ಈ ಮಠ ಮತ್ತು ದೇವಾಲಯಗಳು ಈಗ ಎಲ್ಲಿವೆ ಎಂಬುದು ತಿಳಿದಿಲ್ಲ.

* ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ, ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩


ತ್ರೈಪುರುಷ ದೇವಾಲಯುದ ಹಿಂಬದಿಗೆ ನಾಲ್ಕು ಕಿರು ದೇವಾಲಯಗಳಿವೆ ಮತ್ತು ಒಂದು ತೀರ್ಥವಿದೆ. ಅವುಗಳಲ್ಲಿ ಪೂರ್ವಮುಖಿ ಮೂರು ದೇವಾಲಯಗಳು ಮತ್ತು ಒಂದು ಮಾತ್ರ ಪಶ್ಚಿಮಮುಖಿ ಆಗಿದೆ. ತೀರ್ಥದ ಬದಿಗಿನ ಒಂದು ದೇವಾಲಯ ಇನ್ನೊಂದು ದೇವಾಲಯಕ್ಕೆ ಎದುರಿಗಿದೆ. ಸ್ಥಳೀಕರು ಒಂದನ್ನು ಲಕ್ಷಣೇಶ್ವರ ಎಂದು ಕರೆಯುವರು. ಕ್ರಿ. ಶ. ೧೦೯೨ರ ಅಲ್ಲಿಯ ಒಂದು ಶಾಸನದಲ್ಲಿ ರಾಮೇಶ್ವರ ದೇವರ ಮುಂದಣ ಲಕ್ಷೇಶ್ವರ ದೇವರೆಂದು ಹೇಳಿದೆ. ಹೀಗಾಗಿ ಲಕ್ಮೇಶ್ವರ ದೇವಾಲಯವೇ ಈಗಿನ **ಲಕ್ಷ್ಮಣೇಶ್ವರ** ಎಂದು ಗುರುತಿಸಬಹುದು. ಅದರ ಬದಿಗಿನ ಪೂರ್ವಕ್ಕೆ ಮುಖ ಮಾಡಿದ ಇನ್ನೆರಡು ದೇವಾಲಯಗಳು ಶೈವ ಧರ್ಮಕ್ಕೆ ಸೇರಿದ್ದು, ಅವುಗಳು ಆಗಿನ ಲೋಕೇಶ್ವರ ಮತ್ತು ಸಿದ್ಧೇಶ್ವರಗಳಾಗಿರಬೇಕು. ಸಿದ್ಧೇಶ್ವರ ದೇವರಿಗೆ ಆಗ ತ್ರಿಕಾಲ ಪೂಜೆಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಈ ತೀರ್ಥದ ಉತ್ತರಕ್ಕೆ ಒಂದು ಹಾಳಾದ ಸ್ಮಾರಕ, ಮಠದ ತಳಪಾಯದ ವಾಸ್ತುವನ್ನು ಹೋಲುತ್ತದೆ. ಹೀಗಾಗಿ ಅದು ಆಗಿನ ಕೋಟೇಶ್ವರ ಮಠವಿರಬಹುದು. ಈ ಸ್ಥಳದ ಕೆಲ ದೇವಾಲಯಗಳಾದ ಮಧುಸೂದನ, ಕೇಶವ, ಲೋಕೇಶ್ವರ ಇವುಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಪ್ರದೇಶದಲ್ಲಿ ದಂಡನಾಯಕರಾಗಿ (ಸಾಮಂತರಾಗಿ) ಆಳಿದವರ ಹೆಸರುಗಳಲ್ಲಿ ನಿರ್ಮಿತವಾಗಿರ ಬಹುದು.

ಈ ಪ್ರದೇಶದ ಇನ್ನೊಂದು ಸ್ಥಳ ಇಂಗಳಗಿ, ಅದು ಯಿಂಗಳಿಗೆ, ಇಂಗುಳಿಗೆ, ಯಿಂಗುಣಿಗೆ ಎಂದು ಕರೆಸಿಕೊಂಡಿದೆ. ಈ ಸ್ಥಳದಲ್ಲಿ ಕಲ್ಯಾಣ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನು ತನ್ನ ರಾಣಿಯಾದ ಜಕ್ಕಲದೇವಿಗೆ ಕೊಡಿಸಿದ ಸುಂದರ ಜಿನ ವಿಗ್ರಹವನ್ನು ಇಂಗಳಿಗೆಯಲ್ಲಿ ಪ್ರತಿಷ್ಠಾಪಿಸಿದಳು. ಅದಕ್ಕೆ ಜಿನೇಂದ್ರ ಗೃಹ(ಬಸದಿ)ಯನ್ನು ಕಟ್ಟಿಸಿದ ಳೆಂದು ಶಾಸನದಲ್ಲಿ ಉಕ್ತವಾಗಿದೆ.(೪) ಈ ಸ್ಥಳದಿಂದ ಈ ರಾಣಿ ಈ ಪ್ರದೇಶವನ್ನು ಆಗ ಆಳುತ್ತಿದ್ದಳು. ಈ ವಿಗ್ರಹವು ಯಾವುದೆಂದು ತಿಳಿದಿಲ್ಲ. ಈ ಸ್ಥಳದ ಪ್ರಾಚೀನ ದೇವಾಲಯಗಳು ಮೂಲಸ್ಥಾನ ಲೋಕೇಶ್ವರ, ಸಿದ್ಧರಾಮನಾಥ, ಬಿಜ್ಜೇಶ್ವರ, ತೇವಣೇಶ್ವರ, ಕಂನ್ನೇಶ್ವರ, ಕೇದಾರ, ನಾಗೇಶ್ವರ ಎಂದಾಗಿ ಮುಖ್ಯವಾಗಿದ್ದವು. ಮಠಗಳು - ಲೋಕೇಶ್ವರ ದೇವರ ಮಠ (ಕ್ರಿ. ಶ. ೧೦೭೫), ಪಂಚಮಠ (ಕ್ರಿ. ಶ. ೧೧೪೮) ಮತ್ತು ಗಣಮಠ (ಕ್ರಿ. ಶ. ೧೨೦೯)ಗಳು. ಆ ಸ್ಥಳದ ಬಡಗಲಿಗೆ ಕೋಟೆಯಿದ್ದಿತು.(೫) ಈ ಸ್ಥಳದ ಕುತೂಹಲ ಸಂಗತಿ ಕ್ರಿ. ಶ. ೧೨೦೯ರ ಕಾಲದ್ದೆಂದರೆ ಅಲ್ಲಿಯ ಮಹಾಗಣಂಗಳ ಮತ್ತು ಶರಣರ ಕುರಿತ ಒಂದು ಶಾಸನದ ವರ್ಣನೆ. ಗಣಂಗಳ ಬಗ್ಗೆ ಮಹಾಲಿಂಗದೇವರ ಮುಂಗಣ್ಣ ಜ್ವಾಲೆಯಿಂದ ಉದಯಿಸಿದ **ಮಹಾವೀರಗಣಂಗಳಸಂಖ್ಯಾತರ ಮಹಿಮೆ** ಎನ್ನಲಾಗಿದೆ. ಶರಣರ ಬಗ್ಗೆ "ಕರಕರದುಂ ಸೆಂಡಾಡುವರುರಗಪ್ಪನಂ ಕಿಲರಲಿ ಬಿಟ್ಟು ಬಿಟ್ಟಿಕ್ಕುವರಾಗಿರಿಕುಳಮಂ ಕಿತ್ತಿತ್ತು ಮರಯೊಳು ಪರಿವೈರಿ ನಾಡುತಿರ್ಪ್ಪರು ಸರಣರು" ಎನ್ನಲಾಗದೆ. ಅದೇ ಶಾಸನ ಅಲ್ಲಿದ್ದ ಒಬ್ಬ ಶರಣೆಯ ವಿಷಯ ತಿಳಿಸುತ್ತದೆ. "ಸನ್ಯಾಸಿ ಮಹಾನುಭಾವೆಯನುಮಪ್ಪ ಚಲವೈಗಳ ಕಾಲತೊಳೆದು" ಅನೇಕ ದೇವಾಲಯಗಳಿಗೆ ದತ್ತಿ ನೀಡಿದ್ದನ್ನು ಹೇಳುತ್ತದೆ. ಈ ಧರ್ಮವನ್ನು ಪಾಳಿಸಿದವರು ಗಣಂಗಳ ಕೂರ್ವರು ಮತ್ತು ಪ್ರತಿಕೂಲರಾದವರು ಶಿವದ್ರೋಹರು ಗಣಂಗಳು ಮುನಿಪರು ಎನ್ನಲಾಗಿದೆ.(೬) ಇದೇ ಕಾಲದ ಇನ್ನೊಂದು ಶಾಸನದಲ್ಲಿ ಒಬ್ಬ ಶೈವಯತಿ ಲೋಕೇಶ್ವರ ದೇವರ (ಸ್ಥಾನಾಚಾರ್ಯ) 'ಕತ್ತರ ಜೀಯರ್ಗ್ಗೆ' ಎಂದಿದೆ.(೭) ಈ ಎರಡು ಸಂಗತಿಗಳು ಒಂದೇ ಕಾಲದ್ದಾಗಿವೆ. ಒಂದರಲ್ಲಿ ವೀರಶೈವ ಧರ್ಮಕ್ಕೆ ಸೀಮಿತವಾದ 'ಸರಣ', ಕಣಂಗಳ ಮತ್ತು ಅವರ ಆಂದೋಲನದ ಕ್ರಾಂತಿಕಾರಕ ವಿಷಯಗಳಿವೆ. ಇನ್ನೊಂದರಲ್ಲಿ ಶೈವ ಪರಂಪರೆಯ ಆಚಾರ್ಯನನ್ನು ಹೆಸರಿಸುವ ಕೊನೆಯಲ್ಲಿ 'ಜೀಯ' ಕಾಣುವುದು. ಇವು ಮಹತ್ವದ ವಿಷಯ. ಮೌನೇಶ್ವರ ದೇವಾಲಯದಲ್ಲಿ ಹದಿನಾರು ಶಿವಲಿಂಗವುಳ್ಳ ದೇವಾಲಯ ಸಂಕಿರಣವಿದೆ. ಅದರ ಆಗಿನ ಹೆಸರೇ **ಮೂಲಸ್ಥಾನ** ದೇವರಿರಬಹುದು. ಸ್ವಯಂಭು ಅದರ ಮುಂದಿನ ನಾಲ್ಕು ಗರ್ಭಗೃಹಗಳು ಮತ್ತು ಬದಿಗಿನ ಕಿರು ದೇವಾಲಯಗಳು ಸೇವುಣರ ಕಾಲದಲ್ಲಿದ (ಕ್ರಿ. ಶ. ೧೨೦೯) ಸಿದ್ಧರಾಮನಾಥ, ಬಿಜ್ಜೇಶ್ವರ, ದೇವಣಸಿದ್ಧೇಶ್ವರ, ಕಂನ್ನೇಶ್ವರ, ಕೇದಾರ, ನಾಗೇಶ್ವರ ಮುಂತಾದ ಲಿಂಗಗಳನ್ನು ಹೊಂದಿರಬಹುದು. ಈಗಿನ ವೀರಭದ್ರ ದೇವಾಲಯ ಆಗಿನ ಲೋಕೇಶ್ವರವಿರಬಹುದು.

ಇನ್ನೊಂದು ಸ್ಥಳವಾದ ದಿಗ್ಗಾವಿಯು ದಿರ್ಗ್ಘವಿ, ದಿಗ್ಘಾವಿ ಎಂದು ಕರೆಸಿಕೊಂಡಿದೆ.(೮) ಅಲ್ಲಿಯ ಪ್ರಾಚೀನ ದೇವಾಲಯಗಳು, ಸ್ವಯಂಭು ದೇವರು, ಸೋಮೇಶ್ವರ ದೇವರುಗಳಾಗಿವೆ. ಈ ಸ್ಥಳದಲ್ಲಿರುವ ಇಂದಿನ ಶಾಂತಲಿಂಗೇಶ್ವರ ದೇವಾಲಯು ಪ್ರಾಚೀನ ಸ್ವಯಂಭು ದೇವಾಲಯವಿರಬಹುದು. ಅಲ್ಲಿಯ ಇನ್ನಿತರ ದೇವಾಲಯ ಶಿಲ್ಪಗಳು ಮಹತ್ವವೆನಿಸಿವೆ. ಹಲಕರಟ್ಟಿ(೯) (ಹಲ್ಕಟ್ಟಾ) ಎಂಬ ಗ್ರಾಮದ ಪ್ರಾಚೀನ ಹೆಸರು ಪಲ್ಲಕರಂಟಿ, ಹಲಕಟ್ಟೆ ಎಂದು ಕರೆಸಿಕೊಂಡಿತ್ತು. ಆಗ ಬ್ರಹ್ಮೇಶ್ವರ, ಬಿಜ್ವೇಶ್ವರ ದೇವಾಲಯಗಳಿದ್ದವು. ಈ ಹೆಸರಿನ ದೇವಾಲಯಗಳು ಅಲ್ಲಿ ಕಾಣುವುದಿಲ್ಲ. ಆದುದರಿಂದ ಈ ದೇವಾಲಯ ಗಳನ್ನು ಗುರುತಿಸುವ ಪ್ರಯತ್ನ ನಡೆಯಬೇಕಾಗಿದೆ. ಹೀಗೆ ಅನೇಕ ಸ್ಥಳಗಳ ವೈವಿಧ್ಯಮಯ ಮಾಹಿತಿಯನ್ನು ಪ್ರಸ್ತಾಪಿಸಲಾಗಿದೆ. ಸಂಗಡ ಅವುಗಳ ವಾಸ್ತು ವೈವಿಧ್ಯವನ್ನು ಅರಿಯಬಹುದು.

ದೇವಾಲಯುಗಳು

ಈ ಪ್ರದೇಶದ ದೇವಾಲಯಗಳು ಶೈವ, ವೈಷ್ಣವ, ವೀರಶೈವ, ಜೈನ ಸಂಪ್ರದಾಯದ್ದಾಗಿವೆ. ಶಾಕ್ತ ವಿರಳ. ಈಗಾಗಲೇ ಈ ಭಾಗದ ಕೆಲವು ದೇವಾಲಯಗಳ ಬಗ್ಗೆ ಅಲ್ಲಲ್ಲಿ ಪ್ರಸ್ತಾಪಿಸಿದ್ದರೂ ಸಹ ಮಹತ್ವದ ವಾಸ್ತು ಲಕ್ಷಣವನ್ನು ಪರಾಮರ್ಶಿಸಿಲ್ಲ. ಉದಾಹರಣೆಗೆ ನಾಗಾಯಿಯ ತ್ರೈಪುರುಷ ಶಾಲೆ (ದೇವಾಲಯ), ಇಂಗಳಗಿ ಜೈನಬಸದಿ ಇತ್ತಾದಿ.



ನಾಗಾಯಿ : ಈ ದೇವಾಲಯವು ಪೂರ್ವಮುಖಿ ಎತ್ತರದ ಜಗತಿ ಮೇಲಿದೆ. ಮಾಳಿಕೆಯ ಭಾಗ ಅಲ್ಲಲ್ಲಿ ಜೀರ್ಣೋದ್ಧಾರಗೊಂಡಿದೆ. ಅದರ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಗರ್ಭಗೃಹದ ಚೌಕಾಕಾರದ ಪೀಠ ಮೇಲೆ ಕೂಡಿಸಿದ್ದ ವಿಗ್ರಹಗಳಾದ ತ್ರಿಮೂರ್ತಿಗಳು ಈಗಿಲ್ಲ. ಪೀಠದ ಮೇಲೆ ಅವುಗಳ ರಂಧ್ರಗಳಿವೆ. ಮುಂಭಾಗದಲ್ಲಿ ಈ ತ್ರಿಮೂರ್ತಿಗಳ ವಾಹನಗಳನ್ನು ಚಿತ್ರಿಸಲಾಗಿದೆ. ಈ ಗರ್ಭಗೃಹದ ಬದಿಗಳ ಗೋಡೆಗಳಿಗೆ ಹೊಂದಿ ಎರಡು ಕಿರು ಗರ್ಭಗೃಹಗಳಿವೆ. ಛತ್ತಿಗೆ ಹೊಂದಿದ ಶಿಖರವಿರುವುದಿಲ್ಲ. ಅದರ ದ್ವಾರಪಟ್ಟಿಯಲ್ಲಿ ಮೂರು ಸರಳ ಶಾಖೆಗಳಿವೆ. ಅರ್ಧಮಂಟಪವು ಮುಂದೆ ಎರಡು ವೃತ್ತಾಕಾರದ ಕಂಬಗಳಿಂದ ಆವೃತ್ತಗೊಂಡಿದೆ. ಸಭಾಮಂಟಪದ ಮಧ್ಯಭಾಗದಲ್ಲಿ ಒಂದು ಬಚ್ಚಲಿರುವುದು ಗಮನೀಯ. ಅದರ ಛತ್ತಿನ ಭಾಗ ತೆರೆದಿದೆ. ಬಚ್ಚಲಿಗೆ ಕಿಂಡಿ ಇದ್ದು, ಉತ್ತರ ಕಡೆಯ ಜಗತಿಯಲ್ಲಿ ತೆರೆದಿದೆ. ಇದರಿಂದ ಬಚ್ಚಲಿನಲ್ಲಿ ಬಿದ್ದ ನೀರು ಹರಿದು ಹೊರಹೋಗಲನುಕೂಲ. ಯಾವ ಕಾರಣಕ್ಕಾಗಿ ಈ ಬಚ್ಚಲನ್ನು ನಿರ್ಮಿಸಲಾಯಿತು?



ಈ ಕುರಿತು ಪರಾಮರ್ಶಿಸಿದ್ದಾಗಿ ಈ ದೇವಾಲಯವು ಒಂದು ಶಾಲೆಯಾಗಿದ್ದು ಅಲ್ಲಿ ವಿದ್ಯಾರ್ಥಿಗಳು ಕಲಿಯುವುದಲ್ಲದೆ ಊಟೋಪಚಾರವಿದ್ದು ಅವರು ಊಟ ಮಾಡಿದ ತಟ್ಟೆಗಳನ್ನು ಅಲ್ಲಿ ತೊಳೆಯಲು ಈ ಬಚ್ಚಲನ್ನು ಉಪಯೋಗಿಸುತ್ತಿದ್ದರು. ಅಥವಾ ಯಜ್ಞಯಾಗಾದಿ ನಡೆಸಲು ಅದನ್ನು ಮಾಡಿದ್ದಿರಬಹುದು. ಯಜ್ಞವನ್ನು ಆಚರಿಸಿದ್ದರೆ ಅದೊಂದು ಯಜ್ಞಕುಂಡವಿರಬಹುದು. ಈ ಬಚ್ಚಲಿನ ಭಾಗ ಆಯತಾಕಾರವಾಗಿದ್ದು, ಅದು ಸುಮಾರು ೪೦ ಸೆಂ. ಮೀ. ಆಳವಿದೆ. ಇಲ್ಲಿ ಎರಡು ಚೌಕದಲ್ಲಿನ ಎಂಟು ಕಂಬಗಳ ಪೈಕಿ ನಾಲ್ಕು ಕಂಬಗಳು ದುಂಡಾಗಿ ಮತ್ತು ಉದ್ದವಾಗಿವೆ. ಬದಿಗಳಲ್ಲಿ ಅಡ್ಡವಾಗಿ ಆರು ಸಾಲುಗಳಲ್ಲಿ ಮತ್ತು ಉದ್ದವಾಗಿ ಎಂಟು ಸಾಲಿನಲ್ಲಿ ಒಟ್ಟು ೪೮ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಕಂಬಗಳ ಮಧ್ಯ ಸಾಲಿನ ಕಂಬಗಳು ಹಾಗೂ ಇನ್ನಿತರ ಸಾಲಿನ ಕೆಲವು ಕಂಬಗಳು ದುಂಡಾಗಿವೆ. ಸಭಾಮಂಟಪದ ಗೋಡೆ ಒಳಮಗ್ಗಲಿನ ಅರ್ಧಗಂಬಗಳಲ್ಲಿ ಚಿತ್ರಗಳಿವೆ. ಅದರ ದ್ವಾರಫಲಕಕ್ಕೆ ಎಂಟು ಶಾಖೆಗಳಿವೆ. ಅವುಗಳ ಬುಡದಲ್ಲಿ ಶೈವ ದ್ವಾರಪಾಲಕರ ಚಿತ್ರಗಳಿವೆ.

ಜಗತಿಯು ಸುಮಾರು ಒಂದು ಮೀಟರ ಎತ್ತರವಿದ್ದು ಸುತ್ತಲೂ ಹೊರ ಪ್ರದಕ್ಷಿಣಾಪಥವಿದೆ. ಅದಕ್ಕೆ ೪ - ೫ ತಳಗಳಿವೆ. ಅಧಿಷ್ಠಾನಕ್ಕೆ ೩ ತಳಗಳಿವೆ ಮತ್ತು ಅದು ತ್ರಿರಥ ಮಾದರಿಯಲ್ಲಿ ಬುಡದಿಂದ ಕಪೋತದವರೆಗೆ ಒಂದೇ ರೀತಿಯಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ಸುತ್ತಲೂ ಎತ್ತರ ಪ್ರಾಕಾರ ಗೋಡೆಯಿದ್ದು ಅಲ್ಲಲ್ಲಿ ಅದು ಜೀರ್ಣೋದ್ಧಾರಗೊಂಡಿದೆ. ಪ್ರಾಕಾರ ಮತ್ತು ದೇವಾಲಯದ ಮಧ್ಯೆ ವಿಶಾಲ ಆವರಣವಿದೆ. ಪ್ರವೇಶದಲ್ಲಿ ಮೆಟ್ಟಿಲುಗಳನ್ನು ಅಳವಡಿಸಲಾಗಿದೆ. ಈ ವಿಶಾಲ ದೇವಾಲಯದ ಸಭಾಮಂಟಪದಲ್ಲಿ ಅಳವಡಿಸಿದ ಬಚ್ಚಲುಳ್ಳ ತಳಪಾಯ ಬೇರೆಲ್ಲೂ ಕಂಡಿಲ್ಲ. ಆದರೆ ಅದರ ಸಾಂಸ್ಕೃತಿಕ ಮಹತ್ವವನ್ನು ಅರಿಯಬೇಕಾಗಿದೆ.

ಅಲ್ಲಿಯ ರಾಮತೀರ್ಥದ ಬದಿಗಿರುವ ದೇವಾಲಯವೇ ಲಕ್ಷ್ಮಣೇಶ್ವರ. ಅದಕ್ಕೆ ಅರ್ಧಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗ, ನವರಂಗದಲ್ಲಿ ನಂದಿಯಿದೆ. ಅದರ ಎದುರಿಗಿನ ದೇವಾಲಯವೇ ರಾಮೇಶ್ವರ. ಅದಕ್ಕೆ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಲಕ್ಷ್ಮಣೇಶ್ವರದ ಎಡಗಡೆ ಪೂರ್ವಕ್ಕೆ


ಮುಖ ಮಾಡಿದ ಎರಡು ದೇವಾಲಯಗಳಿವೆ. ಒಂದಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. (ಲೋಕೇಶ್ವರ) ಬದಿಗಿನ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ್ಪ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗ ದ್ವಾರಕ್ಕೆ ಹೊಂದಿ ಮನುಷ್ಯನ ಎತ್ತರದ ಶೈವ ದ್ವಾರಪಾಲಕರಿದ್ದಾರೆ. ಈ ದ್ವಾರಕ್ಕೆ ಮಕರತೋರಣದಲ್ಲಿ ತ್ರಿಮೂರ್ತಿಗಳವೆ. ಎತ್ತರದ ಈ ದೇವಾಲಯ ಬಹುಶಃ ಸಿದ್ಧೇಶ್ವರನದಿರಬಹುದು. ಒಟ್ಟಾರೆ ನಾಗಾಯಿಯ ಈ ದೇವಾಲಯಗಳ ಕಾಲ ಸು. ಕ್ರಿ. ಶ. ೧೧ - ೧೨ನೇ ಶತಮಾನ.

ರಾಮತೀರ್ಥ : ಲಕ್ಷ್ಮಣೇಶ್ವರ ದೇವಾಲಯದ ಹಿಂಬದಿಗೆ ಆಯತಾಕಾರದ ಒಂದು ಸರಳ ತೀರ್ಥವಿದ್ದು ಅದರಲ್ಲಿ ಸದಾ ನೀರಿರುತ್ತದೆ. ಬಹುಶಃ ಶಾಸನದಲ್ಲಿ ಹೇಳಿದ ರಾಮತೀರ್ಥವೇ ಇದಾಗಿರಬಹುದು.

ಮಠ : ಲಕ್ಷ್ಮಣೇಶ್ವರ ದೇವಾಲಯದ ದಕ್ಷಿಣಕ್ಕೆ ಒಂದು ಸ್ಮಾರಕವಿದೆ. ಅದರಲ್ಲಿ ಒಬ್ಬ ಸ್ವಾಮಿಗಳ ಗದ್ದುಗೆಯು ಗರ್ಭಗೃಹದ ಮಧ್ಯ ಇದೆ. ಅದರ ಛತ್ತಿನಲ್ಲಿ ಅರ್ಧವೃತ್ತಾಕಾರದ ಗೊಮ್ಮಟವಿದೆ. ಅದರ ಎದುರಿಗೆ ವಿಶಾಲ ಆವರಣ, ಸುತ್ತಲೂ ಪ್ರಾಕಾರ ಗೋಡೆಯಿದೆ. ಇದು ಬಹುಶಃ ಮಠವಿರಬಹುದು. ಅದರ ಕಾಲ ಸು. ಕ್ರಿ. ಶ. ೧೬ನೇ ಶತಮಾನ.

ಮಾರುತಿ ಮಂದಿರ : ಹಾಳಾಗಿರುವ ನಾಗಾಯಿ ನೆಲೆಯ ಪಶ್ಚಿಮದ ಅಂಚಿನಲ್ಲಿ ಒಂದು ಸು. ಕ್ರಿ. ಶ. ೧೬ನೇ ಶತಮಾನದ ಮಾರುತಿ ಮಂದಿರವಿದೆ. ಅದಕ್ಕೆ ವಿಶಾಲ ಸಭಾಮಂಟಪವಿದೆ. ಅದರ ಗರ್ಭಗೃಹದಲ್ಲಿ ಮಾರುತಿ ವಿಗ್ರಹವಿದೆ. ಈ ದೇವಾಲಯದ ಭಿತ್ತಿ ಮೇಲಿನ ಕಪೋತ ಭಾಗದಲ್ಲಿ ಕಥಾನಕ ಚಿತ್ರವುಳ್ಳ ಫಲಕಗಳ ಅಳವಡಿಕೆ ಗಮನಾರ್ಹ.

ಮಸೀದಿ : ಲಕ್ಷ್ಮಣೇಶ್ವರ ದೇವಾಲಯದ ಹತ್ತಿರ ಉತ್ತರಕ್ಕೆ ಒಂದು ಮಸೀದಿ ಇದೆ. ಇದಕ್ಕೆ ಮೂರು ಕಮಾನುಗಳಿವೆ. ಕಮಾನುಗಳನ್ನು ಹೊತ್ತ ಕಂಬಗಳು ಸು. ಕ್ರಿ. ಶ. ೧೨ನೇ ಶತಮಾನದವು.



ದಿಗ್ಗಾವಿ : ದಿಗ್ಗಾವಿ ಗ್ರಾಮದಲ್ಲಿ ಸುಮಾರು ಮುಖ್ಯವಾಗಿ ಶೈವ ಮತ್ತು ವೈಷ್ಣವ ಸಂಪ್ರದಾಯದ ಹದಿನಾರು ದೇವಾಲಯಗಳಿದ್ದು ಅವುಗಳಲ್ಲಿ ಕೆಲವು ಮಾತ್ರ ಇತ್ತೀಚಿನ ಕಾಲದ್ದಾಗಿವೆ. ಇಲ್ಲಿ ಶಾಂತೇಶ್ವರ, ಅನಸ್ತೇಶ್ವರ, ಸಿದ್ಧಲಿಂಗೇಶ್ವರ ಮತ್ತು ಅನಂತ ಶಯನ ಮುಖ್ಯವೆನಿಸಿವೆ. ಸ್ಥಳೀಯ ಮಲ್ಲಿಕಾರ್ಜುನ ದೇವಾಲಯದ ಶಿವಲಿಂಗದ ಬ್ರಹ್ಮಸೂತ್ರವು ಕ್ರಿ. ಶ. ೧೩ನೇ ಶತಮಾನದ್ದು. ಅದರ ಹೊರಗಡೆ ಈ ಕಾಲದ ಸೂರ್ಯ ಮತ್ತು ಭೈರವ ವಿಗ್ರಹಗಳಿವೆ. ಅಲ್ಲಿಯ ಇನ್ನೊಂದು ದೇವಾಲಯ ಬಸವೇಶ್ವರ. ಅದರಲ್ಲಿ ಯತಿ, ಗಣೇಶ, ನಾಗ ಮತ್ತು ನಂದಿ ವಿಗ್ರಹಗಳಿವೆ. ಕುತೂಹಲ ಸಂಗತಿಯೆಂದರೆ ಯತಿಯು ತನ್ನ ಎಡಗೈಯಲ್ಲಿ ಒಂದು ಮಗುವನ್ನು ಹಿಡಿದು ನಿಂತಿರುವುದು. ಗಣೇಶ ಆಸೀನ ಮತ್ತು ಚತುರ್ಭುಜ. ನಾಗವು ಹಾವಿನ ರೂಪದಲ್ಲಿದೆ. ನಂದಿಯನ್ನು ಹೊರಗಡೆ ಇಡಲಾಗಿದೆ. ಸಿದ್ಧಲಿಂಗ ದೇವಾಲಯದ ದ್ವಾರ ಮುಖ್ಯವೆನಿಸಿದೆ. ಅದಕ್ಕೆ ನಾಲ್ಕು ಶಾಖೆಗಳಾದ ಪತ್ರ, ವೃತ್ತಾಕಾರದ ಅರ್ಧಗಂಬ, ಮೇಲಿಂದ ಕೆಳಕ್ಕೆ ಉದ್ದ ಪಟ್ಟಿಕೆಯಲ್ಲಿ ನಾಲ್ಕು ಬಾಲಕರು ನಿಂತಿದ್ದಾರೆ ಮತ್ತು ಪತ್ರದ ಅಲಂಕಾರಗಳಿವೆ. ಕೆಳಗಡೆ ದ್ವಾರಪಾಲಕ ತ್ರಿಭಂಗಿಯಲ್ಲಿದ್ದು ಒಂದು ಕೈಯಲ್ಲಿ ಕಮಂಡಲನ್ನು ಹಿಡಿದಿರುವುದು ವೈಶಿಷ್ಟ್ಯವೆನಿಸಿದೆ. ಲಲಾಟದ ಮಧ್ಯ ಕೀರ್ತಿಮುಖವಿರುವುದು ಮತ್ತು ಉತ್ತರಾಂಗದ ಪಟ್ಟಿಯ ಮೇಲೆ ಗಜಲಕ್ಷ್ಮಿಯನ್ನು ತೋರಿಸಿರುವುದು ಗಮನೀಯ. ಈ ದೇವಾಲಯದ ಒಳಗಡೆ ಒಂದು ಪೀಠವಿದ್ದು ಅದಕ್ಕೆ ಗರುಡನ ಚಿತ್ರವಿದೆ. ಇದರಿಂದ ಇದೊಂದು ವಿಷ್ಣುವಿಗ್ರಹದ ಪೀಠವಾಗಿದೆ. ದೇವಾಲಯದ ದ್ವಾರಪಟ್ಟಿಕೆಯ ಕಾಲ ಸು. ಕ್ರಿ. ಶ. ೧೦ನೇ ಶತಮಾನ. ಉಳಿದವುಗಳ ಕಾಲ ಸು. ಕ್ರಿ. ಶ. ೧೨ನೇ ಶತಮಾನ.

ಅನಸ್ತೇಶ್ವರ ದೇವಾಲಯ : ಪೂರ್ವಕ್ಕೆ ಮುಖ ಮಾಡಿದ ಈ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗಗಳಿವೆ. ಅದಕ್ಕೆ ಮೂರು ಪ್ರವೇಶಗಳುಂಟು. ಗರ್ಭಗೃಹದಲ್ಲಿ ಶಯನಭಂಗಿಯ ಅನಂತಶಯನ ವಿಗ್ರಹವನ್ನು ಅನಸ್ತೇಶ್ವರನೆಂದು ಕರೆಯುವರು. ನವರಂಗದ ಛತ್ತಿನಲ್ಲಿ ಸರಳ ಭುವನೇಶ್ವರಿ ಫಲಕವಿದೆ. ಕಾಲ ಸು. ಕ್ರಿ. ಶ. ೧೨ನೇ ಶತಮಾನ.

ಶಾಂತಲಿಂಗೇಶ್ವರ ದೇವಾಲಯ : ಈ ದೇವಾಲಯ ಸಂಕೀರ್ಣವು ಒಟ್ಟು ಹನ್ನೊಂದು ಪ್ರತ್ಯೇಕ ದೇವಾಲಯಗಳನ್ನು ಶಾಂತಲಿಂಗೇಶ್ವರ ದೇವಾಲಯ ಹೊಂದಿದ್ದು ಸುತ್ತಲೂ ಪ್ರಾಕಾರ ಗೋಡೆಯಿದೆ. ಪಕ್ಕ ಹಳ್ಳದ ದಂಡೆಯ ಮುಖ್ಯವೆನಿಸಿರುವ ಶಾಂತೇಶ್ವರ ದೇವಾಲಯದ ಸುತ್ತ ಒಂಬತ್ತು ಕಿರು ದೇವಾಲಯ



ಗಳಿದ್ದು ಎರಡು ಮಾತ್ರ ಏಕಗರ್ಭಗೃಹಗಳನ್ನೊಳಗೊಂಡ ಇತ್ತೀಚಿನ ಕಾಲದ್ದಾಗಿವೆ. ಒಂದರಲ್ಲಿ ಶಿವಲಿಂಗವಿದೆ, ಇನ್ನೊಂದು ಖಾಲಿ ಇದೆ. ಉಳಿದ ಏಳು ಕಿರು ದೇವಾಲಯಗಳು ಗರ್ಭಗೃಹ ಮತ್ತು ಎರಡು ಕಂಬವುಳ್ಳ ಅರ್ಧಮಂಟಪವನ್ನು ಹೊಂದಿವೆ. ಕ್ರಮವಾಗಿ ಈ ದೇವಾಲಯಗಳಲ್ಲಿ (೧) ಶಿವಲಿಂಗ (ಪಶ್ಚಿಮಮುಖಿ), (೨) ಸೂರ್ಯ (ದಕ್ಷಿಣಮುಖಿ), (೩) ಶಿವಲಿಂಗ (ದಕ್ಷಿಣಮುಖಿ), (೪) ಶಿವಲಿಂಗ (ಪೂರ್ವಮುಖಿ), (೫) ವೀರಭದ್ರ (ಪೂರ್ವಮುಖಿ) ಇವೆ. ನಾಲ್ಕು ಶಾಖೆಗಳಾದ ರತ್ನ, ಅರ್ಧಗಂಬ, ಸಿಂಹಸವಾರರು, ಪತ್ರಗಳ ಅಲಂಕರಣ, ಕೆಳಗಡೆ ಇರುವ ವೈಷ್ಣವ ದ್ವಾರಪಾಲಕನ ಕೆಳಗಡೆ ಹೊಸ್ತಿಲಿನಲ್ಲಿ ಸಿಂಹಗಳಿವೆ. ಅರ್ಧ ಮಂಟಪದ ಎರಡು ಕಂಬಗಳು ದುಂಡಾಕೃತಿಯಲ್ಲಿವೆ. ನವರಂಗ ದಲ್ಲಿ ನಾಲ್ಕು ಕಂಬಗಳಿವೆ; ಭುವನೇಶ್ವರಿ ಭಾಗ ಉಳಿದಿದೆ. ನವರಂಗದ ಪೂರ್ವದ್ವಾರಕ್ಕೆ ಆರು ಶಾಖೆಗಳಾದ ರತ್ನ, ಅರ್ಧಗಂಬ, ನಿಧಿಗಳು, ಅರ್ಧಗಂಬ, ನಾಲ್ಕು ಹುಡುಗರು (ಒಬ್ಬರ ಮೇಲೊಬ್ಬರು ನಿಂತಿರುವರು) ಮತ್ತು ಪತ್ರದ ಅಪಂಕರಣ ವಿದೆ. ಹೊಸ್ತಿಲಿನ ಹುಡದ ಅಂಚಿನಲ್ಲಿ ಆನೆಗಳ ಚಿತ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ತೋರಣದಲ್ಲಿ ನಿಧಿಗಳು ಮತ್ತು ಕೀರ್ತಿಮುಖಗಳ ಅಲಂಕರಣವಿದೆ.

ವೇಗುಲ : ಈ ಗ್ರಾಮದ ದಕ್ಷಿಣಕ್ಕೆ ಒಂದು ಹೊಲದಲ್ಲಿರುವ ದೇಗುಲಕ್ಕೆ ಗರ್ಭಗೃಹ, ಅರ್ಧಮಂಟಪ, ನವರಂಗವಿದ್ದು ಎದುರಿಗೆ ಇನ್ನೊಂದು ಅರ್ಧಮಂಟಪವಿದೆ. ವಿಶಿಷ್ಟ ಸಂಗತಿಯೆಂದರೆ ನವರಂಗದ ಛತ್ತಿನ ಬದಿಯ ತುದಿಯು ಇಳಿಜಾರಾಗಿದೆ. ಅದರ ಪಶ್ಚಿಮ ಬದಿಗೆ ಪ್ರವೇಶವಿದೆ. ಗರ್ಭಗೃಹದಲ್ಲಿರುವ ಶಿವಲಿಂಗ ಇತ್ತೀಚಿನದು. ಅದರ ದ್ವಾರಕ್ಕೆ ಮೂರು ಶಾಖೆಗಳಾದ ರತ್ನ, ಅರ್ಧಗಂಬ, ಮತ್ತು ಸರಳ ಅಲಂಕರಣವಿದೆ. ಕೆಳಗಡೆ ಶೈವ ದ್ವಾರಪಾಲಕರಿದ್ದಾರೆ. ಅವರ ಬದಿಗಳಲ್ಲಿ ಚೌರಿ ಬೀಸುವ ಸೇವಕಿಯರು ಮತ್ತು ಕುಳ್ಳರಿದ್ದಾರೆ (ಕುಬ್ಜ). (೬) ಶಿವಲಿಂಗ (ಪೂರ್ವಮುಖಿ) ಮತ್ತು (೭) ಶಿವಲಿಂಗ (ಪಶ್ಚಿಮಮುಖಿ) ವಿಗ್ರಹಗಳಿವೆ. ಅರ್ಧಮಂಟಪಕ್ಕೆ ಎರಡು ಕಂಬಗಳಿವೆ.

ಮೊದಲನೆಯ ದೇವಾಲಯದ ದ್ವಾರಪಟ್ಟಿಕೆಗಳಿಗೆ ಮೂರು ಶಾಖೆಗಳಾದ ರತ್ನ, ಅರ್ಧಗಂಬ ಮತ್ತು ಪತ್ರಗಳಿವೆ. ಕೆಳಗಡೆ ಶೈವ ದ್ವಾರಪಾಲಕ, ಆತನ ಒಂದು ಕಡೆ ಚೌರಿ, ಇನ್ನೊಂದು ಕಡೆ ಚೌರಿ ಬೀಸುವ ಹೆಂಗಸು ಇದ್ದಾಳೆ. ಹೊಸ್ತಿಲಿನ ಮುಂಭಾಗ ಪಟ್ಟಿಯಲ್ಲಿ ರತ್ನಾಲಂಕಾರ ಸಾಲಿದೆ. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಅದಕ್ಕೆ ಕದಂಬನಾಗರ ಶೈಲಿಯ ಶಿಖರವಿದೆ. ಅದರ ದ್ವಾರಶಾಖೆಗಳು ಹೊಸ್ತಿಲು, ಲಲಾಟ ಮತ್ತು ಶಿಖರವು ಮೂರನೇ ದೇವಾಲಯವನ್ನು ಹೋಲುತ್ತವೆ. ಆದರೆ ಅದರ ಶಿಖರ ಶಿಥಿಲವಾಗಿದೆ; ಹಿಂದೆ ಚಿಕ್ಕ ಬಾವಿ ಇದೆ.

ಎರಡನೇ ದೇವಾಲಯದ ಗರ್ಭಗೃಹದಲ್ಲಿ ಸೂರ್ಯನಲ್ಲದೆ ಆತನ ಪೀಠವು ಇವೆ. ಅದರ ಅರ್ಧಮಂಟಪದ ಗೋಡೆಯಲ್ಲಿ ಎರಡು ಗೂಡುಗಳಿದ್ದು ಒಂದರಲ್ಲಿ ಶಿಥಿಲಗೊಂಡ ಉಗ್ರನರ ಸಿಂಹನ ವಿಗ್ರಹವಿದೆ. ಅರ್ಧಮಂಟಪಕ್ಕೆ ಎರಡು ಅರ್ಧಗಂಬ ಗಳಿದ್ದು ಅವುಗಳ ಮೇಲೆ ಕೀರ್ತಿಮುಖಗಳಿವೆ. ಅದಕ್ಕೂ ಕದಂಬ ನಾಗರಶೈಲಿಯ ಶಿಖರವಿದೆ. ಅದರ ಹೊಸ್ತಿಲು ಇತ್ಯಾದಿ ಮೊದಲನೇ ದೇವಾಲಯದಂತಿದೆ.

ಮೂರನೇ ದೇವಾಲಯದ ಶಿಖರದ ಸುಖನಾಸಿ (ಗೂಡಿ)ಯ ವಿಗ್ರಹ ಸ್ಥಾನಪಲ್ಲಟಗೊಂಡಿದೆ. ಅದರ ಭಿತ್ತಿಯು ಸರಳ ತ್ರಿರಥ ಮಾದರಿಯಲ್ಲಿದೆ. ಅದಕ್ಕೆ ಹೊಂದಿ ಅರ್ಧಗಂಬಗಳ ಸಾಲಿದೆ. ಅಧಿಷ್ಠಾನವು ನಾಲ್ಕು ತರಗಳಿದ್ದು ಮೂರು ತರಗಳು ಸರಳವಾಗಿವೆ.

ನಾಲ್ಕನೇ ದೇವಾಲಯದ ದ್ವಾರಪಟ್ಟಿಕೆಯ ಶಾಖೆಗಳು, ಲಲಾಟ, ಶಿಖರವು ಈ ಮೇಲಿನ ಒಂದು ಮತ್ತು ಮೂರರ ದೇವಾಲಯಗಳನ್ನೇ ಹೋಲುತ್ತವೆ. ಅದರಲ್ಲಿರುವ ಶೈವ ದ್ವಾರಪಾಲಕರ ಬದಿಗಳಲ್ಲಿ ಚೌರಿ ಬೀಸುವ ಸೇವಕಿ ಮತ್ತು ಕುಬ್ಜರ ಚಿತ್ರಗಳಿವೆ. ಅರ್ಧಮಂಟಪದ ಗೋಡೆಗಳಲ್ಲಿ ಇಲ್ಲಿಯೂ ಎರಡು ಗೂಡುಗಳಿವೆ. ಐದನೇ ದೇವಾಲಯದ ದ್ವಾರ ಸರಳವಾಗಿದೆ. ಅದಕ್ಕೂ ಕದಂಬ ನಾಗರ ಶೈಲಿಯ ಶಿಖರವಿದೆ. (ವೀರಭದ್ರ). ಆರನೇ ದೇವಾಲಯ ದ್ವಾರಪಟ್ಟಿಕೆಯ ಶಾಖೆಗಳು ಅದರ ಶೈವ ದ್ವಾರಪಾಲಕರು, ಲಲಾಟ, ಶಿಖರ ಇವುಗಳು ಒಂದು, ಮೂರು ಮತ್ತು ನಾಲ್ಕರ ದೇವಾಲಯಗಳನ್ನು ಹೋಲುತ್ತವೆ. ಆದರೆ ಅದರ ಹೊಸ್ತಿಲಿನ ಮುಂಭಾಗ ಪಟ್ಟಿಯಲ್ಲಿ ಎರಡು ಆನೆಗಳ ಮಧ್ಯ ಕೀರ್ತಿಮುಖ ಚಿತ್ರವಿದೆ. ಕೊನೆಯ ಏಳನೆಯ ದೇವಾಲಯವು ಈ ಮೇಲಿನಂತಿದೆ.

ಅಲ್ಲಿಯ ಪ್ರಮುಖ ಲಿಂಗೇಶಾಂತೇಶ್ವರ ದೇವಾಲಯ ಪೂರ್ವ ಮುಖಿ ಆಗಿದೆ. ಅದರ ಗರ್ಭಗೃಹದಲ್ಲಿರುವ ಶಿವಲಿಂಗಕ್ಕೆ ಮುಖವಾಡವಿದೆ. ಅದರ ದ್ವಾರಕ್ಕೆ ನಾಲ್ಕು ಶಾಖೆಗಳಾದ ಪತ್ರ,

ಅರ್ಧಗಂಬ, ಸಿಂಹ ಸವಾರರು ಮತ್ತು ಪತ್ರಗಳಿವೆ. ಅದರ ದ್ವಾರಪಾಲಕರು ದ್ವಿಭುಜರು. ಲಲಾಟದಲ್ಲಿ ಗಜಲಕ್ಷ್ಮಿ, ಕಪೋತದಲ್ಲಿ ಕೆಳಮಗ್ಗಲು ಹಂಸಪಕ್ಷಿಗಳ ಸಾಲಿರುವುದು ಗಮನೀಯ, ಅರ್ಧಮಂಟಪದ ಕಂಬಗಳು ಕಬ್ಬಿಣದ ದಂಟಿ ನಂತಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳಲ್ಲಿ ಚೌಕದ ಕೆಳಭಾಗದ ನಾಲ್ಕು ಮುಖಗಳಲ್ಲಿ ಹಾರಗಳ ಅಲಂಕರಣವಿದೆ. ನವರಂಗದ ದ್ವಾರಕ್ಕೆ ಪಂಚಶಾಖೆಗಳಾದ ಲತಾಸುರುಳಿ, ಅರ್ಧಗಂಬ, ಮೂರು ನಿಧಿಗಳು, ಅರ್ಧಗಂಬ, ಆರು ಹುಡುಗರು (ಒಬ್ಬರ ಮೇಲೊಬ್ಬರಂತೆ) ಮತ್ತು ಪತ್ರಗಳಿವೆ. ಕೆಳಗಡೆ ದ್ವಾರಪಾಲಕರ ಬದಿಗೆ ಚೌರಿ ಬೀಸುವ ಸೇವಕಿಯರಿದ್ದಾರೆ. ಮಕರತೋರಣದ ಲತಾಸುರುಳಿಗಳಲ್ಲಿ ಅಪ್ಸರೆಯರಿದ್ದು ಮಧ್ಯ ಕೀರ್ತಿಮುಖ ಚಿತ್ರವಿದೆ. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಕಪೋತದ ಕೆಳಗಡೆ ಅಷ್ಟನಿಧಿಗಳಿರುವರು. ಕಪೋತದ ಮೇಲೆ ಚೈತ್ಯ ನಮೂನೆ ಇದೆ. ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ. ಉತ್ತರ ಪ್ರವೇಶ ದ್ವಾರದಲ್ಲೂ ಹೀಗೆಯೆ ಭಾಗಗಳಿವೆ. ಪೂರ್ವ ದ್ವಾರಪಟ್ಟಿಕೆಯಂತೆ ಇನ್ನಿತರ ಚಿತ್ರಗಳಿವೆ. ದಕ್ಷಿಣದ ದ್ವಾರಕ್ಕೂ ಮೇಲಿನಂತಹ ನಾಲ್ಕು ಶಾಖೆ ಮತ್ತು ಚಿತ್ರಗಳಿವೆ. ಕಪೋತಕ್ಕೆ ಹಂಸಮಾಲದ ಚಿತ್ರಗಳಿವೆ. ಅದರ ಮೇಲೆ ಚೈತ್ಯ ನಮೂನೆ ಮತ್ತು ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ದ್ವಾರಪಾಲಕರು ಶೈವ ಧರ್ಮಕ್ಕೆ ಸೇರಿದ್ದು ಕೈಗಳಲ್ಲಿ ಅಭಯ, ತ್ರಿಶೂಲ, ಡಮರು ಮತ್ತು ಗದೆಗಳಿವೆ. ತೆರೆದ ಮಂಟಪ (ಪೂರ್ವ)ದ ಮಧ್ಯ ನಂದಿ ಇದ್ದು ಅದು ಹೆಚ್ಚು ಅಲಂಕೃತಗೊಂಡಿದೆ. ಎರಡು ತಳವುಳ್ಳ ಸರಳ ಅಧಿಷ್ಠಾನವಿದೆ. ಭಿತ್ತಿ ಸರಳವಾಗಿದೆ. ಶಿಖರ ಇತ್ತೀಚಿನದು.

ಅಲ್ಲಿಯ ಇನ್ನೊಂದು ಮಹತ್ವದ ದೇವಾಲಯವಾದ ವಿಶ್ವಕರ್ಮದೇಗುಲವು ತ್ರಿಕೂಟ ಮಾದರಿಯಲ್ಲಿದೆ. ಮೂರು ಗರ್ಭಗೃಹ, ಮೂರು ಅಂತರಾಳ, ಒಂದು ನವರಂಗ ಮತ್ತು ಒಂದು ಮುಖಮಂಟಪವಿದೆ. ಉತ್ತರ ಮತ್ತು ದಕ್ಷಿಣದ ಗರ್ಭ ಗೃಹಗಳು ಮತ್ತು ಮುಖಮಂಟಪ ಹಾಳಾಗಿವೆ. ಒಂದರಲ್ಲಿ ಮೂರು ಮುಖದ ಕಾರ್ತಿಕೇಯ, ಇನ್ನೊಂದರಲ್ಲಿನ ಶಿವಲಿಂಗಕ್ಕೆ ಬ್ರಹ್ಮಸೂತ್ರವಿದೆ. ಪೂರ್ವ ಮತ್ತು ಪಶ್ಚಿಮದ ಗರ್ಭಗೃಹಗಳ ದ್ವಾರಕ್ಕೆ ಶೈವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಛತ್ತಿನಲ್ಲಿ ನಕ್ಷತ್ರಾಕಾರದ ಅಲಂಕೃತ ಭುವನೇಶ್ವರಿ ಯಿದೆ. ಅದರ ನಾಲ್ಕು ಮುಖಗಳಲ್ಲಿ ಕೀರ್ತಿಮುಖಗಳಿವೆ. ಪಶ್ಚಿಮ ಗರ್ಭಗೃಹದ ಗೋಡೆಯ ಗೂಡುಗಳಲ್ಲಿ ಕಾಳಿಕಾ ಮತ್ತು ಮಹಿಷಾಸುರಮರ್ದಿನಿಯರಿದ್ದಾರೆ.

ಪಶ್ಚಿಮದ ಪ್ರಾಕಾರ ದ್ವಾರದಲ್ಲಿ ಸ್ತಂಭಗಳಿದ್ದು ಅಲ್ಲಿ ನಾಗ, ಲಿಂಗ, ಗಣೇಶ ಮತ್ತು ನಂದಿ ಇತ್ಯಾದಿ ಮಹತ್ವದ ಶಿಲ್ಪಗಳಿವೆ.

ಡೋಣಗಾಂ : ಈ ಸ್ಥಳದ ಸು. ಕ್ರಿ. ಶ. ೧೨ನೇ ಶತಮಾನದ ರಾಮಲಿಂಗೇಶ್ವರ ದೇವಾಲಯಕ್ಕೆ ಅರ್ಧಮಂಟಪವಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ದ್ವಾರದಲ್ಲಿ ಮೂರು ಶಾಖೆಗಳಾದ ರತ್ನ, ಅರ್ಧಗಂಬ ಮತ್ತು ಪತ್ರಗಳಿವೆ. ಶೈವ ಮತ್ತು ವೈಷ್ಣವ ದ್ವಾರಪಾಲಕರಿದ್ದಾರೆ. ಗಜಲಕ್ಷ್ಮಿ ಲಲಾಟದಲ್ಲಿದ್ದಾಳೆ. ಅರ್ಧಮಂಟಪದ ಬದಿಗಿನ ಗೋಡೆಗಳಲ್ಲಿ ನಾಲ್ಕು ಗೂಡುಗಳಿವೆ.

ರಾವೂರ : ಈ ಗ್ರಾಮದ ವೆಂಕಟೇಶ್ವರ ದೇವಾಲಯ ನೆಲಮಟ್ಟಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿದ್ದು ಅದು ತ್ರಿಕೂಟ ಮಾದರಿಯದು. ಅವುಗಳಲ್ಲಿ ಶಿವಲಿಂಗ, ಹನುಮ (ಸಂಜೀವ ಮೂರ್ತಿ) ಮತ್ತು ವೆಂಕಟೇಶ್ವರನ ವಿಗ್ರಹಗಳಿವೆ. ವೆಂಕಟೇಶ್ವರನ ಬದಿಗೆ ಕೇಶವನ ಮೂರ್ತಿಯಿದೆ. ವೆಂಕಟೇಶ್ವರನ ವಿಗ್ರಹ ಇತ್ತೀಚಿನದು. ಮೂರು ಗರ್ಭಗೃಹಗಳಿವೆ. ಒಂದಕ್ಕೆ ಅಂತರಾಳ. ಇನ್ನೆರಡಕ್ಕೆ ಅರ್ಧಮಂಟಪ ಮತ್ತು ಒಂದು ನವರಂಗವಿದೆ. ಪೂರ್ವಕ್ಕೆ ಮುಖ ಮಾಡಿದ ಈ ದೇವಾಲಯದ ಪ್ರವೇಶಕ್ಕೆ ಮೇಲಿಂದ ಕೆಳಕ್ಕೆ ಮೆಟ್ಟಿಲುಗಳಿವೆ. ಅಂತರಾಳ ದ್ವಾರಪಟ್ಟಿಯಲ್ಲಿ ಮೂರು ಶಾಖೆಗಳಿವೆ. ಅದರಲ್ಲಿ ಸೇವಕಿಯರಿದ್ದರೆ ಉತ್ತರಾಂಗದಲ್ಲಿ ತ್ರಿಮೂರ್ತಿಯರಿದ್ದು ಮಧ್ಯ ಶಿವ ನಟರಾಜನ ವೇಷದಲ್ಲಿದ್ದಾನೆ. ಇಲ್ಲಿನ ಸು. ಕ್ರಿ. ಶ. ೧೩ನೇ ಶತಮಾನದ ಅನಂತಶಯನ ದೇವಾಲಯದ ಗರ್ಭಗೃಹದಲ್ಲಿ ಈ ಮೂರ್ತಿ ಇದೆ. ಊರ ಹೊರಗಡೆ ಒಂದು ದೇಗುಲವಿದ್ದು ಅದು ತ್ರಿಕೂಟದಲ್ಲಿದೆ. ಈ ಮೂರು ಕೂಟಗಳಿಗೆ ಮೂರು ಅಂತರಾಳಗಳಿವೆ. ದಕ್ಷಿಣಕ್ಕೆ ಮುಖ ಮಾಡಿದೆ. ಅದು ಹೆಚ್ಚು ಹಾಳಾಗಿದೆ. ಅಲ್ಲಿಯ ಇನ್ನೊಂದು ದೇವಾಲಯ ರಾಮಲಿಂಗೇಶ್ವರ. ಅದು ದ್ವಿಕೂಟದಲ್ಲಿದೆ. ಅವು ಪೂರ್ವ ಮತ್ತು ದಕ್ಷಿಣ ಮುಖಿ. ಪೂರ್ವ ಗರ್ಭಗೃಹದಲ್ಲಿ ಸು. ಕ್ರಿ. ಶ. ೧೨ನೇ ಶತಮಾನದ ಶಿವಲಿಂಗವಿದ್ದು ಅದಕ್ಕೆ ಬ್ರಹ್ಮ ಸೂತ್ರವಿದೆ.

ಇಂಗಳಗಿ : ಈ ಸ್ಥಳದಲ್ಲಿ ಮೌನೇಶ್ವರ ಪ್ರಸಿದ್ಧಿ ಪಡೆದಿದೆ. ಅದು ಈಗ ಏಳು ಕೂಟದಲ್ಲಿದ್ದು ಮೂಲತಃ ತ್ರಿಕೂಟದಲ್ಲಿದೆ. ಅದರ ಬಲಬದಿಗೆ ಪೂರ್ವ ಮುಖಿ ನಾಲ್ಕು ಕಿರು ದೇವಾಲಯ ಗಳಿವೆ. ಅವುಗಳಿಗೆ ಏಕಕೂಟವುಳ್ಳ ಗರ್ಭಗೃಹ ಮತ್ತು ಅಂತರಾಳ ಗಳಿವೆ. ಅದರ ಉತ್ತರ ಪ್ರಾಕಾರಕ್ಕೆ ಹೊಂದಿ ಎರಡು ಗರ್ಭಗೃಹಗಳಿವೆ. ಪೂರ್ವಕ್ಕೆ ಪ್ರಾಕಾರಕ್ಕೆ ಹೊಂದಿ ಒಂದು ಗರ್ಭಗೃಹವುಳ್ಳ ದೇವಾಲಯವಿದೆ.

ಷಟ್‌ಕೂಟವುಳ್ಳ ದೇವಾಲಯದ ಮಧ್ಯ ಗರ್ಭಗೃಹದಲ್ಲಿ ಬದಿಗಿನ ಗರ್ಭಗೃಹಗಳಿಗೆ ಅರ್ಧಮಂಟಪ ಅಥವಾ ಅಂತರಾಳ ಗಳಿಲ್ಲ. ಉಳಿದವುಗಳಿಗೆ ಇವೆ. ಮುಂದೆ ಮುಖಮಂಟಪವಿದೆ. ಅದಕ್ಕೆ ಒಂದು ನವರಂಗ ಮತ್ತು ಮಹಾಮಂಟಪಗಳಿವೆ. ಮಹಾಮಂಟಪದಲ್ಲಿ ಆರು ಕಂಬಗಳಿವೆ. ಪ್ರಾಯಶಃ ಮೂಲತಃ ಅದು ತ್ರಿಕೂಟ ದೇವಾಲಯ. ಅದನ್ನು ತದನಂತರ ವೃದ್ಧಿಗೊಳಿಸ ಲಾಗಿದೆ. ಬದಿಗಿನ ದೇವಾಲಯಕ್ಕೆ ಗರ್ಭಗೃಹ ಮತ್ತು ಅಂತರಾಳ ಗಳಿವೆ. ನವರಂಗಕ್ಕೆ ಎರಡು ಪ್ರವೇಶಗಳಿವೆ. ಗರ್ಭಗೃಹದಲ್ಲಿ

ಲಿಂಗಗಳಿವೆ. ಅವುಗಳ ದ್ವಾರಗಳಲ್ಲಿ ಪೂರ್ಣಕುಂಭಗಳಿವೆ. (ಕಾಲ ಕ್ರಿ. ಶ. ೧೨೦೯). ಉತ್ತರದ ಪ್ರಾಕಾರಕ್ಕೆ ಹೊಂದಿ ದೇವಾಲಯವಿದ್ದು ಅದರಲ್ಲಿ ಪೂರ್ಣಕುಂಭಗಳಿವೆ. ಅಲ್ಲಿಯ ಶಿಲ್ಪಗಳಲ್ಲಿ ದಂಪತಿಗಳದ್ದು ಮಹತ್ವದ್ದು.

ಈ ಗ್ರಾಮದ ದಕ್ಷಿಣದಲ್ಲಿ ದ್ವಿಕೂಟ ಮಾದರಿ ದೇಗುಲವಿದೆ. ಒಂದಕ್ಕೆ ಅರ್ಧಮಂಟಪವಿದೆ. ಬದಿಗಿನ ಗೋಡೆಯಲ್ಲಿ ಗೂಡುಗಳಿವೆ. ಗರ್ಭಗೃಹದಲ್ಲಿ ಒಂದರ ಶಿವಲಿಂಗ ಕ್ರಿ. ಶ. ೧೨ನೇ ಶತಮಾನದ್ದು, ಇನ್ನೊಂದರದ್ದು ಇತ್ತೀಚಿನದು. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅದು ನೆಲಮಟ್ಟದಿಂದ ಕೆಳಗಿರುವುದು ವಿಶಿಷ್ಟವಾಗಿದೆ. ಗರ್ಭಗೃಹ ದ್ವಾರದ ಕೆಳಗಡೆ ಪೂರ್ಣಕುಂಭಗಳಿವೆ. ಅದನ್ನು ಈಶ್ವರ ಗುಡಿ ಎನ್ನುವರು. ಊರ ಮಧ್ಯ ವೀರಭದ್ರ ದೇವಾಲಯವಿದ್ದು ಅದು ಅಲ್ಲಲ್ಲಿ ಕುಸಿದು ಬಿದ್ದಿದೆ. ಅದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಕಾಲ ಸು. ಕ್ರಿ. ಶ. ೧೨ನೇ ಶತಮಾನ.



ಅಲ್ಲಿ ಒಂದೇ ಜೈನ ಬಸದಿ ಇದೆ. ಬಹುಶಃ ಈ ಬಸದಿಯಲ್ಲೇ ಈ ಮೇಲೆ ಹೇಳಿದ ಜಾಕಬ್ಬೆ ಜಿನ ವಿಗ್ರಹವನ್ನು ಸ್ಥಾಪಿಸಿರಬಹುದು. ಗರ್ಭಗೃಹದಲ್ಲಿ ಪಾರ್ಶ್ವನಾಥನ ವಿಗ್ರಹವಿದೆ. ಅದಕ್ಕೆ ಸಿಂಹಪೀಠವಿದೆ. ಅದೇ ಆಕೆ ನಿಲ್ಲಿಸಿದ ವಿಗ್ರಹವೇ ಹೇಗೆ ತಿಳಿಯಬೇಕಾಗಿದೆ. ಅದರ ದ್ವಾರಕ್ಕೆ ಮೂರು ಶಾಖೆಗಳಿವೆ. ಲಲಾಟದಲ್ಲಿ ನವರಂಗದಲ್ಲಿ ನಾಲ್ಕು ಕಂಬ ಇವೆ. ಭುವನೇಶ್ವರಿಯು ಸರಳ ಕಮಲದ ಅಲಂಕರಣ ಹಾಗೂ ಅಂಬಿಕಾ ಯಕ್ಷಿಯ ವಿಗ್ರಹ ಹೊಂದಿದೆ. ನವರಂಗ ದ್ವಾರಕ್ಕೆ ಐದು ಶಾಖೆಗಳಿವೆ. ಅದಕ್ಕೆ ತೀರ್ಥಂಕರರು, ಲಲಾಟಕ್ಕೆ ಗಜಲಕ್ಷ್ಮಿ ಮತ್ತು ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ. ಕಾಲ ಸು. ಕ್ರಿ. ಶ. ೧೨ನೇ ಶತಮಾನ. ಅರ್ಧಮಂಟಪವೂ ಬಸದಿಗಿದೆ.

ಹಲ್ಕಟ್ಟಾ (ಹಲಕರಟ) : ಈ ಸ್ಥಳದ ಲಿಂಗಯ್ಯನ ದೇವಾಲಯ ತ್ರಿಕೂಟ ಮಾದರಿಯಿದ್ದು ಅವುಗಳು ಒಂದೇ ಸಾಲಿನಲ್ಲಿವೆ. ಅದರ ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಅವುಗಳ ಅಂತರಾಳದ ಗೋಡೆಗಳಲ್ಲಿ ಗೂಡುಗಳಿವೆ. ನವರಂಗದಲ್ಲಿ ೨೪ ಕಂಬಗಳು, ಆರು ಉದ್ದ ಸಾಲಿನಲ್ಲಿ, ನಾಲ್ಕು ಅಡ್ಡ ಸಾಲಿನಲ್ಲಿವೆ. ಅದರಲ್ಲಿ ಗಣೇಶ, ಸರಸ್ವತಿ, ವಿಷ್ಣು ಶಿಲ್ಪಗಳಿವೆ. ಕಾಲ ಸು. ಕ್ರಿ. ಶ. ೧೨ನೇ ಶತಮಾನ. ಅದರ ಪಕ್ಕದ ಗಣೇಶ ದೇವಾಲಯ ನೆಲಮಟ್ಟದಿಂದ ಕೆಳಗಡೆಯಿದೆ. ಅದಕ್ಕೆ ಗರ್ಭಗೃಹ ಮತ್ತು ಅರ್ಧಮಂಟಪವಿದೆ. ಅದರಲ್ಲಿ ಗಣೇಶನಿರುವನು. ಆದರೆ ದ್ವಾರದಲ್ಲಿ ಪೂರ್ಣಕುಂಭವಿದೆ. ಅರ್ಧಮಂಟಪದಲ್ಲಿ ವೃತ್ತಾಕಾರದ ಎರಡು ಕಂಬಗಳಿವೆ. ಕಾಲ ಸು. ಕ್ರಿ. ಶ. ೧೦ನೇ ಶತಮಾನ.

ಈ ಸ್ಥಳದ ವೀರಭದ್ರೇಶ್ವರ ದೇವಾಲಯದ ಸಂಕಿರಣದಲ್ಲಿ ಕೆಲವು ದೇವಾಲಯಗಳಿದ್ದು ಅವುಗಳಲ್ಲಿ ಸು. ಕ್ರಿ. ಶ. ೧೩ನೇ ಶತಮಾನದ ಶಿವದೇವಾಲಯವು ತ್ರಿಕೂಟ ಮಾದರಿಯಲ್ಲಿದೆ. ಅದಕ್ಕೆ ಮೂರು ಗರ್ಭಗೃಹಗಳು, ಒಂದು ಅಂತರಾಳ, ಎರಡು ಅರ್ಧಮಂಟಪ ಮತ್ತು ಮುಖಮಂಟಪಗಳು ಇವೆ. ಮೂಲ ಗರ್ಭಗೃಹಕ್ಕೆ ಮಾತ್ರ ಅಂತರಾಳವಿದೆ. ಅದರ ಬದಿಗಿನ ಗೋಡೆಯಲ್ಲಿ ಗೂಡುಗಳಿವೆ. ಅದರ ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ಮತ್ತು ಅರ್ಧ ಮಂಟಪಗಳಲ್ಲಿ ಎರಡು ಕಂಬಗಳಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ರೇವಣಸಿದ್ಧೇಶ್ವರ ದೇವಾಲಯದಲ್ಲಿ ಆತನ ವಿಗ್ರಹವಿದ್ದು ಅದಕ್ಕೆ ಮುಖವಾಡವಿದೆ. ಇದು ಇತ್ತೀಚಿನದ್ದು. ವೀರಭದ್ರನ ದೇವಾಲಯ ವಿಸ್ತಾರವಾದದ್ದು. ಅದರಲ್ಲಿ ಎತ್ತರದ ವೀರಭದ್ರನ ವಿಗ್ರಹವಿದೆ; ಬದಿಗೆ ಕಾಳಮ್ಮನ ವಿಗ್ರಹವಿದೆ. ಭಿತ್ತಿಯಲ್ಲಿ ಕೆಲವು ಚಿತ್ರಗಳಿವೆ. ಕಾಲ ಸು. ಕ್ರಿ. ಶ. ೧೭ನೇ ಶತಮಾನ. ಈ ದೇವರ ಭಕ್ತರು ವಿಜಾಪುರ ಇನ್ನಿತರ ಕಡೆ ಹರಡಿರುವರು.

ಕಮರವಾಡಿ : ಈ ಸ್ಥಳದ ಕ್ರಿ. ಶ. ೧೨ನೇ ಶತಮಾನದ ಶಂಭುಲಿಂಗನ ದೇವಾಲಯಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳ ಬದಿಗಿನ ಗೋಡೆಗಳಲ್ಲಿ ಗೂಡುಗಳಿದ್ದು ಅವುಗಳಲ್ಲಿ ಸೂರ್ಯ ಮತ್ತು ಮಹಿಷಾಸುರಮರ್ದಿನಿಯರ ಶಿಲ್ಪಗಳಿವೆ.

ಕರ್ದಾಳ್ : ಈ ಸ್ಥಳದಲ್ಲಿ ಬಯಲು ಬಸವೇಶ್ವರ ದೇವಾಲಯ ಪ್ರಾಚೀನದ್ದು. ಅದಕ್ಕೆ ಮೂರು ಗರ್ಭಗೃಹಗಳಿವೆ. ಒಂದರಲ್ಲಿ ಶಿವಲಿಂಗವಿದೆ. ಎರಡಕ್ಕೆ ಮಾತ್ರ ಅರ್ಧಮಂಟಪಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಮಧ್ಯ ನಂದಿ ವಿಗ್ರಹವಿದೆ. ಕಾಲಮಾನ ಸು. ಕ್ರಿ. ಶ. ೧೨ನೇ ಶತಮಾನ.

ಶಿಲ್ಪಗಳು

ಈ ಪ್ರದೇಶದ ಶಿಲ್ಪಗಳು ಶೈವ, ವೈಷ್ಣವ, ವೀರಶೈವ, ಶಾಕ್ತ ಮತ್ತು ಜೈನ ಧರ್ಮಕ್ಕೆ ಸೇರಿವೆ. ಶೈವದಲ್ಲಿ ಗಣೇಶ, ಶಿವಲಿಂಗ, ನಂದಿ, ನಟರಾಜ, ವೀರಭದ್ರ. ಕಾರ್ತಿಕೇಯ; ವೈಷ್ಣವದಲ್ಲಿ ಕೇಶವ,

ಉಗ್ರನರಸಿಂಹ, ಅನಂತಶಯನ, ಗರುಡ, ಶಾಕ್ತದಲ್ಲಿ ಮಹಿಷಾಸುರಮರ್ದಿನಿ, ಕಾಳಿಕಾ ಮುಖ್ಯವೆನಿಸಿವೆ. ಇವಲ್ಲದೆ ಸ್ಮಾರಕ ಶಿಲ್ಪಗಳಾದ ಯತಿ, ದಂಪತಿಗಳು, ವೀರಗಲ್ಲುಗಳು ಸೇರಿವೆ. ಈ ಭಾಗದ ಪ್ರತಿಯೊಂದು ಗ್ರಾಮದಲ್ಲಿ ಕನಿಷ್ಠ ನಂದಿ, ಗಣೇಶ, ವೀರಭದ್ರ, ಶಿವಲಿಂಗಗಳಿವೆ. ಮುಖ್ಯ ಶಿಲ್ಪಗಳನ್ನು ಇಲ್ಲಿ ಪ್ರಸ್ತಾವನೆ ಮಾಡಲಾಗಿದೆ.

ಗಣೇಶ : ದಿಗ್ಗಾವಿಯ ಚತುರ್ಭುಜ ಗಣೇಶನು ತನ್ನ ದೇಹಕ್ಕೆ ಧರಿಸಿದ ಯಜ್ಞೋಪವೀತವು ನಾಗರಹಾವಿನಂತೆ ಇದ್ದು ಗಮನೀಯ. ಇದು ಅಲ್ಲಿಯ ಸಿದ್ಧಲಿಂಗನ ದೇವಾಲಯದಲ್ಲಿದೆ (ಕ್ರಿ. ಶ. ೧೨ನೇ ಶತಮಾನ). ರಾವೂರದ ವೆಂಕಟೇಶ್ವರ ದೇವಾಲಯದ ಗರ್ಭಗೃಹ ದ್ವಾರದ ಲಲಾಟದಲ್ಲಿ ಗಣೇಶನಿರುವನು. ಹಲ್ಕಟ್ಟಾದ ಮಾರುತಿ ಮಂದಿರದಲ್ಲಿ ದ್ವಿಭುಜ ಗಣೇಶನ ವಿಗ್ರಹವಿದೆ. ಈ ಸ್ಥಳದ ಗಣೇಶ ದೇವಾಲಯದ ಈ ವಿಗ್ರಹಕ್ಕೂ ದ್ವಿಭುಜವಿದೆ. ಕೈಗಳಲ್ಲಿ ದಂತ ಮತ್ತು ಪರಶುಗಳಿವೆ. ಉದರಕ್ಕೆ ನಾಗನನ್ನು ಸುತ್ತಿಕೊಂಡಿರುವನು. ಕೊರಳಲ್ಲಿ ಗಂಟೆಗಳ ಹಾರವನ್ನು ಕಟ್ಟಿರುವನು. (ಕ್ರಿ. ಶ. ೧೦ನೇ ಶತಮಾನ).

ಭೈರವ : ದಿಗ್ಗಾವಿಯ ಭೈರವನ ಶಿಲ್ಪವು ತ್ರಿಭಂಗಿಯ ಬತ್ತಲೆಯ ಶಿಲ್ಪ. ರುಂಡಮಾಲವಿದೆ. ಬದಿಗೆ ಪ್ರೇತರು ನಿಂತಿದ್ದಾರೆ.

ವಿಷ್ಣು : ಹಲ್ಕಟ್ಟಾದ ಮಾರುತಿ ಗುಡಿಯ ವಿಷ್ಣು ಶಿಲ್ಪದಲ್ಲಿ ಆತನ ದಶಾವತಾರ ಚಿತ್ರಗಳಿವೆ. ಅಲ್ಲಿಯ ಲಿಂಗಯ್ಯನ ಗುಡಿ ಶಿಲ್ಪದಲ್ಲಿ ಭೂದೇವಿ ಮತ್ತು ಶ್ರೀದೇವಿಯರಿದ್ದಾರೆ. ನಾಲ್ಕು ಕೈಗಳು ಮುರಿದಿವೆ. ಮಕರತೋರಣ ತ್ರಿಕೋನಾಕಾರದಲ್ಲಿದೆ. ಅದರ ಸುತ್ತ ಲತಾಸುರುಳಿ, ಮಧ್ಯ ಕೀರ್ತಿಮುಖವಿದೆ. ತೋರಣದ ಅರ್ಧ ಗಂಬಗಳಿಗೆ ಆಯತಾಕಾರ ಪಟ್ಟಿಕೆಗಳಿವೆ. ದಿಗ್ಗಾವಿಯ ಕೇಶವ ಶಿಲ್ಪದಲ್ಲಿ ಭೂದೇವಿ, ಶ್ರೀದೇವಿಯರಲ್ಲದೆ ಗರುಡನಿರುವನು. ಕೇಶವನ ನಾಲ್ಕು ಕೈಗಳು ಮುರಿದಿವೆ. ಆತನ ಮಕರತೋರಣದಲ್ಲಿ ಇಳಿಬಿದ್ದ ಗೊಂಚಲಗಳ ಅಲಂಕರಣವಿದೆ.



ಅನಂತಶಯನ : ರಾವೂರಿನ ಅನಂತಶಯನ ದೇವಾಲಯದಲ್ಲಿ ಅನಂತಶಯನನು ಹಾವಿನ ದೇಹಾಂಗದ ಮೇಲೆ ಮಲಗಿದ್ದು, ಅವನ ನಾಭಿಯಿಂದ ಹೊರಬಂದ ಕಮಲದಲ್ಲಿ ಬ್ರಹ್ಮನು ಕುಳಿತಿರುವನು. ಈ ಶಿಲ್ಪಕ್ಕೆ ಅರ್ಧವೃತ್ತಾಕಾರದ ಮಕರತೋರಣದ ಅಲಂಕಾರವಿದೆ. ಮೇಲೆ ಮಧ್ಯ ಕೀರ್ತಿಮುಖ ಇರುವುದು.

ಸೂರ್ಯ : ಭಿನ್ನಹಸ್ತಗಳ ಹಾಗೂ ಸಮಭಂಗದ ಸೂರ್ಯನ ದಿಗ್ಗಾವಿ ಶಿಲ್ಪದಲ್ಲಿ ಉಷಾ ಮತ್ತು ಪ್ರತ್ಯುಷೆಯರ ನಿಂತಿದ್ದಾರೆ. ಆತನ ಕೈಗಳು ಒಡೆದಿವೆ. ಎರಡು ಅರ್ಧಗಂಬಗಳ ಮೇಲೆ ಮಕರ ತೋರಣ ಮಧ್ಯ ಈತನನ್ನು ಚಿತ್ರಿಸಲಾಗಿದೆ.

ದಂಪತಿಗಳು : ದಂಪತಿಗಳಿಬ್ಬರು ಬಹುಶಃ ಅಶ್ವತ್ಥ ಮರದ ಕೆಳಗಡೆ ನಿಂತಿದ್ದಾರೆ. ಇಬ್ಬರು ಕೈಗಳಲ್ಲಿ ಕಮಲ ಮತ್ತು ಕಪಾಲ(?) ಗಳನ್ನು ಹಿಡಿದಿದ್ದಾರೆ.

ಜೈನ ಶಿಲ್ಪಗಳು

ಅಂಬಿಕೆ: ಇಂಗಳಗಿಯ ಜೈನ ಬಸದಿಯ ನವರಂಗದಲ್ಲಿ ಅಂಬಿಕ ಯಕ್ಷಿಯ ಶಿಲ್ಪವು ಸು. ಕ್ರಿ. ಶ. ೧೦ನೇ ಶತಮಾನದ್ದು. ಆಕೆಯ ಎಡಬದಿಗೆ ನಿಂತ ಹುಡುಗ, ಬಲಗಡೆ ಕುಳಿತ ಸಿಂಹವಿದೆ. ಮೇಲಿನ ಅರ್ಧಭಾಗ ದುಂಡಾಕೃತಿಯಲ್ಲಿದೆ. ಈಕೆಯ ತುರುಬು, ಕಿವಿ ಓಲೆಗಳು ಹೆಚ್ಚು ದಪ್ಪ ಮತ್ತು ಅಲಂಕೃತಗೊಂಡಿವೆ. ಈ ಶಿಲ್ಪವೂ ಭಾರವಾಗಿದೆ. ಕಾಲದೃಷ್ಟಿಯಿಂದ ಒಂದು ಶತಮಾನ



ಪ್ರಾಚೀನ. ಈ ವಿಗ್ರಹದಂತಹ ಈ ಕಾಲದ ಅಂಬಿಕೆ ಯಕ್ಷಿ ಹರಸಗುಂಡಿಯಲ್ಲಿದೆ.

ಪಾರ್ಶ್ವನಾಥ : ಇಂಗಳಗಿಯ ಜೈನಬಸದಿಯಲ್ಲಿ ಎರಡು ಶಿಲ್ಪಗಳಿವೆ. ಅವು ಪಾರ್ಶ್ವನಾಥ ಮತ್ತು ಯಕ್ಷಿ ಅಂಬಿಕ. ಅದರ ಗರ್ಭಗೃಹದಲ್ಲಿ ಸಿಂಹಪೀಠದ ಮೇಲೆ ಪಾರ್ಶ್ವನಾಥನ ಕುಳಿತ ಶಿಲ್ಪವಿದೆ. ಆಯತಾಕಾರದ ದಿಂಬು ಈತನಿಗಿದೆ. ಅದರ ಅಂಚಿನಲ್ಲಿ ಸೇವಕರಿದ್ದಾರೆ ಮತ್ತು ಮೇಲೆ ಮಕರಗಳಿವೆ. ಕಾಲ ಸು. ಕ್ರಿ. ಶ. ೧೨ನೇ ಶತಮಾನ. ಇನ್ನೊಂದರ ಕಾಲ ಸು. ಕ್ರಿ. ಶ. ೧೦ನೇ ಶತಮಾನ. ಇದರಿಂದ ಇದುವೇ ಜಾಕಬ್ಬೆ ಪ್ರತಿಷ್ಠಾಪಿಸಿದ ಜಿನಬಿಂಬವೆಂದು ಅಭಿಪ್ರಾಯಪಡಲು ಕಷ್ಟಸಾಧ್ಯ. ಏಕೆಂದರೆ ಭಾರವಾದ ಈ ಶಿಲ್ಪವನ್ನು ವ್ಯಾಪಾರಿ ಹೇಗೆ ಅವರ ಸ್ಥಳದಲ್ಲಿ ಹೊತ್ತು ತೋರಿಸಲು ಸಾಧ್ಯ?

ಯತಿ / ಶರಣರು : ದಿಗ್ಗಾವಿಯ ಶಾಂತಲಿಂಗೇಶ್ವರ ದೇವಾಲಯ ಮುಂದೆ ಸಮಭಂಗದ ಒಬ್ಬ ಯತಿಯ ಶಿಲ್ಪವಿದೆ. ಬಲಗೈಯಲ್ಲಿ ಪುಷ್ಪವಿಡಿದು ಎದೆಗೆ ಇಟ್ಟಿದ್ದು ಎಡಗೈಯಲ್ಲಿ ಶಿವಲಿಂಗವನ್ನು ಹಿಡಿದಿರುವನು. ಆತನಿಗೆ ಉದ್ದವಾದ ಕೇಶಗಳಿವೆ. ಈತ ಹಿಡಿದ ಇಷ್ಟಲಿಂಗದಿಂದ ಈತನೊಬ್ಬ ವೀರಶೈವನೆಂದು ಹೇಳಬಹುದು. ಹಲ್ಕಟ್ಟಾದ ಅಂಬಿಗರ ಚೌಡಯ್ಯನ ಗುಡಿಯಲ್ಲಿ ಶಿವಶರಣ ಚೌಡಯ್ಯ ದಂಪತಿಗಳ ಶಿಲ್ಪವಿದೆ. ಚೌಡಯ್ಯ ಕೈಮುಗಿದು ಕುಳಿತಿದ್ದರೆ ಆತನ ಪತ್ನಿಯು ಕೈಗಳಲ್ಲಿ ಇಷ್ಟಲಿಂಗ ಹಿಡಿದು ಕುಳಿತಿರುವಳು. ಇದೊಂದು ಇತ್ತೀಚಿನ ವಿಗ್ರಹವಾಗಿದೆ. ಇಂಗಳಗಿಯ ಮೌನೇಶ್ವರ ದೇವಾಲಯ ಸಂಕಿರಣದ ಒಂದು ಶಿಲ್ಪದಲ್ಲಿ ಯತಿಯೊಬ್ಬನು ತನ್ನ ಎಡಗೈಯಲ್ಲಿ ಪಾನಲೋಟ ಹಿಡಿದು ಕುಳಿತಿದ್ದಾನೆ. ಕೊರಳಲ್ಲಿ ಸರಳ ಮಣಿಗಳ ಹಾರವಿದೆ. ಆತನ ಜಟಾಮುಕುಟ ಉದ್ದವಾಗಿದೆ. ಅಲ್ಲಿಯ ಕ್ರಿ. ಶ. ೧೨೦೯ರ ಶಾಸನದಲ್ಲಿ ಕಾಣುವ ಶೈವ ಯತಿ 'ಜೀಯ' ರಿಗೆ ಸಂಬಂಧಿಸಿದ್ದು ಇದಾಗಿರಬಹುದು. ಆದರೆ ಇದರಲ್ಲಿ ವೀರಶೈವ ಲಕ್ಷಣವೇನೂ ಇರುವುದಿಲ್ಲ. ಕಾಲ ಸು. ಕ್ರಿ. ಶ. ೧೩ನೇ ಶತಮಾನ. ಹೊಸೂರಿನ ಈಶ್ವರ ಗುಡಿಯಲ್ಲಿಯ ಒಂದು ಶಿಲ್ಪದಲ್ಲಿ ಯತಿಯೊಬ್ಬ ನಿಂತಿದ್ದಾನೆ. ಆತನ ತಲೆ ಹಿಂದೆ ಏಳು ಹೆಡೆಗಳಿರುವುದರಿಂದ ಇದೊಂದು ಪಾರ್ಶ್ವನಾಥನ ವಿಗ್ರಹವೆಂದು ಹೇಳಬಹುದು. ಇಂಗಳಗಿಯ ಮೌನೇಶ್ವರ ದೇವಾಲಯ ಸಂಕಿರಣದಲ್ಲಿರುವ ಇನ್ನೊಂದು ಶಿಲ್ಪದಲ್ಲಿ ದಂಪತಿಗಳ ಚಿತ್ರವಿದೆ. ಗಂಡನಾದವನು ಬಲಗೈಯಲ್ಲಿ ಹಿಡಿದ ಕತ್ತಿ ಭಾಗ ಮುರಿದಿದೆ. ಎಡಗೈಯಿಂದ ತನ್ನ ಹೆಂಡತಿಯನ್ನು ಅಪ್ಪಿಕೊಂಡಿದ್ದಾನೆ. ಅವನು ಕೊರಳಲ್ಲಿ





ಇಷ್ಟಲಿಂಗವುಳ್ಳ ಚೌಕವನ್ನು, ತಲೆಯ ಕೂದಲಿನ ತುರುಬನ್ನೂ, ಉದ್ದ ಮೀಸೆಯನ್ನೂ, ಬಳೆ, ಪಟ್ಟಿಗಳನ್ನೂ ಮತ್ತು ಸೊಂಟಕ್ಕೆ ಪಾದದವರೆಗೆ ಪಂಚೆಯನ್ನು ಇಳಿಬಿಟ್ಟು ಕಟ್ಟಿರುವನು. ಹೆಂಡತಿ ಆತನನ್ನು ಬಲಗೈಯಿಂದ ಅಪ್ಪಿ ಹಿಡಿದಿರುವಳು. ಅವಳು ತನ್ನ ಸೀರೆಯನ್ನು ಪಾದದವರೆಗೆ ಇಳಿಬಿಟ್ಟು ಉಟ್ಟಿರುವಳು. ತನ್ನ ತಲೆಯ ಕೂದಲನ್ನು ಎಡಕ್ಕೆ ಇಳಿಬಿಟ್ಟು ಹೆರಳನ್ನು ಹಾಕಿರುವಳು. ಸರ, ಬಳೆ, ಪಟ್ಟಿಗಳನ್ನು ಧರಿಸಿರುವಳು. ಇದೊಂದು ವೀರಶೈವ ದಂಪತಿಯ ಶಿಲ್ಪವಿರಬೇಕು. ಕಾಲ ಸು. ಕ್ರಿ. ಶ. ೧೩ನೇ ಶತಮಾನ. ಈ ಸ್ಥಳದ ಕ್ರಿ. ಶ. ೧೨೦೯ರ ಒಂದು ಶಾಸನವೂ ವೀರಶೈವ ಶರಣರ ಶಿವ ಆಂದೋಲನದ ಸಂಗತಿಯನ್ನು ಪ್ರಸ್ತಾಪಿಸಿದೆ. ಹೀಗಾಗಿ ವೀರಶೈವ ಮತದ ಸಂಗತಿಯು ಶಿಲ್ಪದಲ್ಲೂ ಇಲ್ಲಿ ಕಾಣಿಸಿರುವುದು ಗಮನೀಯ.

ಲಜ್ಜಾಗೌರಿ : ಕರ್ದಳ್ಳಿ ಮತ್ತು ದಿಗ್ಗಾವಿ ಗ್ರಾಮಗಳಲ್ಲಿ ಲಜ್ಜಾಗೌರಿ(?) ಶಿಲ್ಪಗಳಿವೆ. ಈ ಶಿಲ್ಪಗಳಲ್ಲಿ ದೇವಿಯು ಕುಳಿತ ಭಂಗಿ ಬತ್ತಲೆ ಇರಬಹುದೆಂದು ಸಂಶಯಪಡಲು ಕಷ್ಟವಾಗಿದೆ. ಏಕೆಂದರೆ ಯೋನಿ ಭಾಗವು ಸ್ಪಷ್ಟವಾಗಿಲ್ಲ. ಇದರಿಂದ ಇವು ಬೇರೆ ಶಿಲ್ಪಗಳಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಕಾಲ ಸು. ಕ್ರಿ. ಶ. ೧೨ನೇ ಶತಮಾನ.

ಸ್ಮಾರಕಗಳು

ಈ ಪ್ರದೇಶದಲ್ಲಿ ವೀರಗಲ್ಲು ಮತ್ತು ಸತಿ ಕಲ್ಲುಗಳು ಇವೆ. ಸತಿಗಲ್ಲುಗಳು ವಿರಳವಿದ್ದು ಅವು ಈ ಪ್ರದೇಶದ ಕಾಳ್ಗಿ, ಕರ್ದಳ್ಳಿ ಮತ್ತು ಆಲೂರಿನಲ್ಲಿವೆ. ಸತಿ ಹೋದವಳು ಎತ್ತಿಹಿಡಿದ ಬಲಗೈ ಭಾಗವನ್ನು ನಿಂತ ಕಂಬಕ್ಕೆ ಕೂಡಿಸಿ ಚಿತ್ರಿಸಲಾಗಿದೆ. ಕಾಲಮಾನ ಸು. ಕ್ರಿ. ಶ. ೧೬-೧೭ನೇ ಶತಮಾನ. ವೀರಗಲ್ಲುಗಳಲ್ಲಿ ಕರ್ದಳ್ಳಿ, ಕಮರವಾಡಿ, ಕದರಗಿ, ದಿಗ್ಗಾವಿ, ಜೀವಣಗಿ ಶಿಲ್ಪಗಳು ಮುಖ್ಯವೆನಿಸಿವೆ. ದಿಗ್ಗಾವಿಯ ಶಾಂತಲಿಂಗ ದೇವಾಲಯ ಮತ್ತು ಕಮರವಾಡಿಯ ಶಂಭುಲಿಂಗ ದೇವಾಲಯದ ವೀರಗಲ್ಲುಗಳು ಗೋಗ್ರಹಣಕ್ಕೆ ಸಂಬಂಧಿಸಿವೆ. ಕರ್ದಳ್ಳಿಯ ಒಂದರ ಶಿಲ್ಪದಲ್ಲಿ ವೀರ ಹಾಗು ಕುದುರೆ ಸವಾರನ ಹೋರಾಟ ದೃಶ್ಯವಿದೆ. ಇನ್ನೊಂದರಲ್ಲಿ ವೀರ ಹಾಗು ಕತ್ತಿ ಮತ್ತು ಗುರಾಣಿ ಹಿಡಿದು ನಿಂತ ಯೋಧನಿದ್ದಾನೆ. ಕದ್ದರಗಿಯ ಶಿಲ್ಪಗಳಲ್ಲಿ ಒಂದರಲ್ಲಿ ಕುದುರೆ ಸವಾರ, ಮೂರರಲ್ಲಿ ಕೇವಲ ನಿಂತ ವೀರ, ಒಂದು ಒಡೆದಿದ್ದು ಅದರಲ್ಲಿ ವೀರನನ್ನು ಅಪ್ಸರೆಯರು ಒಯ್ಯುತ್ತಿರುವ ಮತ್ತು ಅವನು ಶಿವಲಿಂಗದ ಮುಂದೆ ಕುಳಿತಿರುವ ಚಿತ್ರಗಳಿವೆ. ಅಲ್ಲಿಯ ಒಂದು ವೀರಗಲ್ಲಿನಲ್ಲಿ ಐದು ಫಲಕಗಳಿವೆ. ಒಂದನೇ ಫಲಕದಲ್ಲಿ ಹತ್ತು ವೀರರು ಬಂದೂಕನ್ನು (ಕೋಲು) ಹಿಡಿದು ನಿಂತಿದ್ದಾರೆ. ಎರಡನೆಯ ಫಲಕದಲ್ಲಿ ನಾಲ್ವರು ಬಂದೂಕ (ಕೋಲು) ಹಿಡಿದು ನಿಂತಿದ್ದಾರೆ. ಮೂರನೆಯದರಲ್ಲಿ ಇಬ್ಬರು ಕತ್ತಿ ಹಿಡಿದ ಕುದುರೆ ಸವಾರರು ಮತ್ತು ಒಬ್ಬ ಕಾಲ್ದಳ, ನಾಲ್ಕನೆಯದರಲ್ಲಿ ಮೂವರು ಕುದುರೆ ಸವಾರರು ಇದ್ದರೆ ಕೊನೆಯ ಭಾಗದಲ್ಲಿ ಮಡಿದ ವೀರನು ಶಿವಲಿಂಗದ ಮುಂದೆ ಕುಳಿತಿರುವನು. ಕಾಲ ಸು. ಕ್ರಿ. ಶ. ೧೩ನೇ ಶತಮಾನ. ಈ ವೀರಗಲ್ಲಿನಲ್ಲಿ ವೀರರು ಕೈಗಳಲ್ಲಿ ಬಂದೂಕನ್ನು ಹಿಡಿದಿರುವ ದೃಶ್ಯ ವಿಶಿಷ್ಟವೆನಿಸಿದೆ.

ವೀರಶೈವ ಮಠಗಳು : ಈ ಭಾಗದಲ್ಲಿ ಅನೇಕ ವೀರಶೈವ ಮಠಗಳಿವೆ. ಅವುಗಳಲ್ಲಿ ರಾವೂರು, ಹಲ್ಕಟ್ಟಾ, ಡೋಣಗಾಂ ಮುಖ್ಯವೆನಿಸಿವೆ. ಅವುಗಳ ಸಾಂಸ್ಕೃತಿಕ ಚಟುವಟಿಕೆಗಳು ವೈಶಿಷ್ಟ್ಯ ಪೂರ್ಣವಾಗಿ ಜರುಗುತ್ತವೆ; ***ಮಸೀದಿಗಳು*** : ಈ ಭಾಗದಲ್ಲಿ ಮುಸ್ಲಿಮರ ಮಸೀದಿ, ದರ್ಗಾಗಳು ಅನೇಕ ಗ್ರಾಮದಲ್ಲಿವೆ. ಅವುಗಳಲ್ಲಿ ಇಂಗಳಗಿ, ನಾಗಾವಿ, ಹಲ್ಕಟ್ಟಾ ಮುಖ್ಯವೆನಿಸಿವೆ. ಇಂಗಳಗಿಯ ಮೀನಾರಗಳು ಬಹು ಎತ್ತರವಾಗಿವೆ. ಕಾಲ ಸು. ಕ್ರಿ. ಶ. ೧೬ನೇ ಶತಮಾನ. ಅಲ್ಲಿಯ ಮಸೀದಿಯು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ.

ಊರಗಸಿ : ಈ ಭಾಗದ ಪ್ರತಿಯೊಂದು ಹಳ್ಳಿಗಳಿಗೆ ಊರಗಸಿಗಳಿವೆ. ವಿರಳವಾಗಿ ಅಲ್ಲಲ್ಲಿ ಬುರುಜುಗಳಿವೆ.

ಈ ಎಲ್ಲ ಸ್ಮಾರಕ ಶಿಲ್ಪಾವಶೇಷಗಳ ಅಧ್ಯಯನದಿಂದ ಅನೇಕ ಮಹತ್ವದ ಮತ್ತು ವೈಶಿಷ್ಟ್ಯಪೂರ್ಣ ಸಂಗತಿಗಳು ತಿಳಿದುಬರುತ್ತವೆ. ವೀರಶೈವ ಮತ್ತು ಮುಸ್ಲಿಂ ಮತಗಳ ಸ್ಮಾರಕಗಳ ಬಗ್ಗೆ ಹೆಚ್ಚಿನ ಅಧ್ಯಯನ ಕೈಕೊಳ್ಳುವ ಅವಶ್ಯಕತೆ ಇರುತ್ತ**ದೆ**

(ನಾನು ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಗುಲ್ಬರ್ಗ ಜಿಲ್ಲೆಯ ಪುರಾತತ್ವ ಅನ್ವೇಷಣೆ ಮತ್ತು ಅಧ್ಯಯನ ಕೈಕೊಂಡು ಈ ಪ್ರಬಂಧವನ್ನು ಪ್ರಕಟಿಸಲು ಅವಕಾಶವಿತ್ತ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ|| ಎ. ಎಂ. ಪಠಾಣ ಮತ್ತು ಕುಲಸಚಿವ ಡಾ|| ಎಸ್. ರಾಜಶೇಖರ ಅವರಿಗೆ ಮತ್ತು ಅನ್ವೇಷಣೆಯ ಸಂದರ್ಭದಲ್ಲಿ ಸಹಾಯ ಸಹಕಾರ ನೀಡಿದ ಚಿ. ಸಂತೋಷಕುಮಾರ ಇನ್ನಿತರರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಎಪಿಜಿಎಎಸ್ - ೩
*೨. ಅದೇ.
*೩. ಅದೇ.
*೪. ವಿ. ಎಸ್. ಕುಲಕರ್ಣಿ : ಹಿಸ್ಟಾರಿಕಲ್ ಅಂಡ್ ಕಲ್ಚರಲ್ ಸ್ಟಡೀಸ್ ಆಫ್ ದಿ ರೀಜನ್ ಅರೌಂಡ್ ಬಸವಕಲ್ಯಾಣ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ. ಧಾರವಾಡ.
*೫. ಅದೇ.
*೬. ಅದೇ.
*೭. ಅದೇ.
*೮. ಎಪಿಜಿಎಎಸ್‌ನ ೯. ವಿ. ಎಸ್. ಕುಲಕರ್ಣಿ, ಅದೇ.

ಡಾ|| ಬಿ. ಪಾಂಡುಕುಮಾರ್*

ಹಾರನಹಳ್ಳಿಯ ಲಕ್ಷ್ಮೀನರಸಿಂಹ ಮತ್ತು ಸೋಮೇಶ್ವರ ದೇವಾಲಯಗಳು - ಒಂದು ತೌಲನಿಕ ಅಧ್ಯಯನ

ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಹಾರನಹಳ್ಳಿಯ ಲಕ್ಷ್ಮೀನರಸಿಂಹ ಮತ್ತು ಸೋಮೇಶ್ವರ ದೇವಾಲಯಗಳು ಒಂದೇ ಗ್ರಾಮದಲ್ಲಿ ಸಮೀಪವೇ ಇದ್ದು ಮೊದಲ ನೋಟಕ್ಕೆ ಶುದ್ಧ ಹೊಯ್ಸಳ ದೇವಾಲಯಗಳಂತೆ ಕಂಡರೂ ಈ ದೇವಾಲಯಗಳಲ್ಲಿ ಕೆಲವಾರು ಹೋಲಿಕೆ ವ್ಯತ್ಯಾಸಗಳನ್ನು ಕಾಣಬಹುದು. ಸಾಮಾನ್ಯವಾಗಿ ಹೊಯ್ಸಳರ ದೇವಾಲಯಗಳು ಒಂದೇ ಊರಿನಲ್ಲಿ ಎರಡು ದೇವಾಲಯಗಳಿದ್ದರೂ ಅವುಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳಲ್ಲಿ ಅಷ್ಟೇನೂ ವಿಶೇಷಗಳು ಕಂಡು ಬರುವುದಿಲ್ಲ. ಆದರೆ ಈ ಮೇಲ್ಕಂಡ ದೇವಾಲಯಗಳ ಸೂಕ್ಷ್ಮ ಅವಲೋಕನದಲ್ಲಿ ಅದು ಕಾಣಬರುತ್ತದೆ.

ಹಾರನಹಳ್ಳಿಯ ಸೋಮೇಶ್ವರ ದೇವಾಲಯವು ಶುದ್ಧ ಹೊಯ್ಸಳ ದೇವಾಲಯವಾಗಿದ್ದರೂ ಅದರ ಕಾಲಮಾನ, ಮುಖ್ಯ ಸ್ಥಪತಿ, ದೇವಾಲಯಕ್ಕೆ ಕೊಟ್ಟ ದಾನದತ್ತಿ ಇತ್ಯಾದಿ ವಿವರಗಳು ಶೋಧನೆಯಿಂದ ತಿಳಿದುಬರುತ್ತದೆ. ಈ ಲಕ್ಷ್ಮೀನರಸಿಂಹ ದೇವಾಲಯವು ಕ್ರಿ. ಶ. ೧೨೩೪ರಲ್ಲಿ ಅದೇ ಗ್ರಾಮದ ಯುವ ಶಿಲ್ಪಿಗಳಾದ ಪೆರಿಯಾಂಡಹೆಗ್ಗಡೆ, ಸೋಣ್ಣೆ ಸೋದರರು ರೂವಾರಿ ಮಲ್ಲಿತಮ್ಮನನ್ನು ಮುಖ್ಯಸ್ಥಪತಿಯನ್ನಾಗಿ ಮಾಡಿ ಕೊಂಡು ನಿರ್ಮಾಣ ಮಾಡಿದ ಬಗ್ಗೆ ಅಲ್ಲಿನ ಶಾಸನವು ತಿಳಿಸುತ್ತದೆ.

ಲಕ್ಷ್ಮೀನರಸಿಂಹ ದೇವಾಲಯವು ನಿರ್ಮಾಣಗೊಂಡ ಕೆಲವೇ ದಿನಗಳಲ್ಲಿ ಅದರ ಸಮೀಪ ಸೋಮೇಶ್ವರ ದೇವಾಲಯವು ನಿರ್ಮಾಣಗೊಂಡಿರಬಹುದೆಂಬ ಸಂದೇಹ ಮೂಡುತ್ತದೆ. ಇದರ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಾಗಿಲ್ಲ. ಸೋಮೇಶ್ವರ ದೇವಾಲಯವು ಲಕ್ಷ್ಮೀನರಸಿಂಹ ದೇವಾಲಯಕ್ಕಿಂತಲೂ ವಾಸ್ತುಶಿಲ್ಪ, ಶಿಲ್ಪಕಲೆ, ವಿನ್ಯಾಸದಲ್ಲಿ ಕಡಿಮೆ ಇಲ್ಲ. ಆದರೆ ಇದರ ಮುಖ್ಯಸ್ಥಪತಿ, ಇತರ ಶಿಲ್ಪಿಗಳು, ದಾನಿಗಳು ಮುಂತಾದ ವಿವರಗಳು ಲಭ್ಯವಾಗಿಲ್ಲ. ಇಂದಿಗೂ ಇದು ಸಂಶಯಾತ್ಮಕ ವಾಗಿದೆ. ಆ ಬಗೆಗೆ ಒಂದು ತೌಲನಿಕ ಅಧ್ಯಯವನ್ನಿಲ್ಲಿಡಲಾಗಿದೆ.

ಹೋಲಿಕೆ ಮತ್ತು ವ್ಯತ್ಯಾಸಗಳು

ಲಕ್ಷ್ಮೀನರಸಿಂಹ ದೇವಾಲಯ

೧. ತ್ರಿಕೂಟ

೨. ನವರಂಗ ದ್ವಾರಗಳು - ೧

೩. ಮುಖ್ಯಸ್ಥಪತಿ - ಮಲ್ಲಿತಮ್ಮ

೪. ರೂವಾರಿಗಳ ಹೆಸರು ಬಣೆ, ಪೇಯಾಂಡ, ಬೊಳ, ಷಣ್ಮುಖದಾಸ

೫. ದೇವಾಲಯದ ಬಗ್ಗೆ ಶಾಸನವಿದೆ

೬. ಹೊರಭಿತ್ತಿಯ ಒಟ್ಟು ದೇವಮೂರ್ತಿಗಳ ಸಂಖ್ಯೆ - ೧೪೬

೭. ಶಿವನ ಮೂರ್ತಿಗಳ ಸಂಖ್ಯೆ - ೩

೮. ಕೇಶವ ದೇವಾಲಯವು ವಿಷ್ಣು ದೇವಾಲಯವಾಗಿದೆ

೯. ಗರ್ಭಗೃಹದಲ್ಲಿ ಇರುವ ದೇವರುಗಳು ಕೇಶವ, ವೇಣುಗೋಪಾಲ, ಲಕ್ಷ್ಮೀನರಸಿಂಹ

ಸೋಮೇಶ್ವರ ದೇವಾಲಯ

೧. ಏಕಕೂಟ

೨. ದ್ವಾರಗಳು - ೩

೩. ಮುಖ್ಯ ಸ್ಥಪತಿಯ ಹೆಸರಿಲ್ಲ.

೪. ರೂವಾರಿಗಳ ಹೆಸರಿರುವುದಿಲ್ಲ.

೫. ಶಾಸನ ದೊರಕಿಲ್ಲ.

೬. ದೇವಮೂರ್ತಿಗಳ ಸಂಖ್ಯೆ - ೮೦

೭. ಶಿವನ ಮೂರ್ತಿಗಳ ಸಂಖ್ಯೆ - ೧೦

೮. ಸೋಮೇಶ್ವರ ದೇಗುಲವು ಈಶ್ವರ ದೇಗುಲವಾಗಿದೆ

೯. ಗರ್ಭಗುಡಿಯಲ್ಲಿ ಲಿಂಗವಿದೆ.

* ಇತಿಹಾಸ ಪ್ರಾಧ್ಯಾಪಕರು, ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು - ೫೬೦ ೦೫೫.

೧೦. ದೇವಾಲಯದ ನಿರ್ಮಾಣದ ಕಾಲ ಕ್ರಿ. ಶ. ೧೨೩೪ ಆಗಿದೆ.	೧೦. ನಿರ್ಮಾಣದ ಕಾಲದ ಬಗ್ಗೆ ಶಾಸನ ದೊರೆತಿಲ್ಲ.
೧೧. ದೇವಾಲಯದ ಪ್ರಾಂಗಣದಲ್ಲಿ ಹೊಯ್ಸಳರ ನಂತರದ ಕಾಲದ ಆಳರಸರು ಕಟ್ಟಿದ ಗುಡಿ ಇದೆ.	೧೧. ದೇವಾಲಯುದ ಪ್ರಾಂಗಣದಲ್ಲಿ ಇತರ ಯಾವುದೇ ಕಟ್ಟಡವಿರುವುದಿಲ್ಲ.
೧೨. ದೇವಾಲಯದ ಪ್ರಾಂಗಣ ಪ್ರವೇಶದಲ್ಲಿ ಮುಖ್ಯ ದ್ವಾರ ಮಂಟಪವಿದೆ.	೧೨. ದ್ವಾರಮಂಟಪವಿರುವುದಿಲ್ಲ.
೧೩. ದೇವಾಲಯದ ಹೊರಭಾಗದಲ್ಲಿ ದೇವಕೋಷ್ಠಗಳ ಸಂಖ್ಯೆ - ೪	೧೩. ದೇವಕೋಷ್ಠಗಳ ಸಂಖ್ಯೆ - ೧೨
೧೪. ಹೊರಭಿತ್ತಿಯಲ್ಲಿ ದೇವಮೂರ್ತಿಗಳನ್ನು ಸಂಪೂರ್ಣವಾಗಿ ಕೆತ್ತಲಾಗಿದೆ.	೧೪. ಕೆಲವು ದೇವಮೂರ್ತಿಗಳ ಕೆತ್ತನೆ ಅಪೂರ್ಣ
೧೫. ದೇವಾಲಯದ ಪೂರ್ವಭಾಗದಿಂದ ಮೂರ್ತಿಗಳನ್ನು ಕಂಡರಿಸಲಾಗಿದ್ದು ಮೊದಲನೆಯ ದೇವಮೂರ್ತಿಯೆ ಗಣಪತಿ.	೧೫. ಪ್ರಾರಂಭದ ದೇವಮೂರ್ತಿ ಮಾರುತಿ
೧೬. ಅಪರೂಪದ ದೇವಮೂರ್ತಿ ಪಾಂಡುರಂಗ ಮತ್ತು ರುಕ್ಮಿಣಿ	೧೬. ವಿಶೇಷವಾದ ದೇವಮೂರ್ತಿ ಯಾವುದೂ ಇರುವುದಿಲ್ಲ.
೧೭. ಎರಡು ಮಂಗಗಳು ಹಲಸಿನ ಹಣ್ಣಿಗಾಗಿ ಕಿತ್ತಾಡುತ್ತಿರುವ ಶಿಲ್ಪವು ಪೂರ್ಣಗೊಂಡಿದೆ.	೧೭. ಶಿಲ್ಪವು ಅಪೂರ್ಣವಾಗಿದೆ.
೧೮. ನವರಂಗದ ವಿಸ್ತಾರ ೧೬ ಅಂಕಣವಿದೆ.	೧೮. ೧೫ ಅಂಕಣದ ನವರಂಗವಿದೆ.
೧೯. ಗಡ್ಡಧಾರಿ ಬ್ರಹ್ಮನ ದೈವಮೂರ್ತಿಯು ಹೊರಭಿತ್ತಿಯಲ್ಲಿದೆ.	೧೯. ಹೊರಭಿತ್ತಿಯಲ್ಲಿ ಗಡ್ಡವಿಲ್ಲದ ದೇವಮೂರ್ತಿ ಇದೆ.

ಮಲ್ಲಿತಮ್ಮನು ಸ್ಥಪತಿಯಾಗಿ ಕೆಲಸ ಮಾಡಿರುವ ಈ ಕೆಳಕಂಡ ದೇವಾಲಯಗಳಲ್ಲಿ ಗಡ್ಡಧಾರಿ ಬ್ರಹ್ಮನ ದೇವಮೂರ್ತಿಗಳನ್ನು ಕೆತ್ತಿದ್ದಾನೆ.

೧) ಹೊಸಹೊಳಲು, ೨) ನುಗ್ಗೇನಹಳ್ಳಿ, ೩) ಹಾರನಹಳ್ಳಿ - ಲಕ್ಷ್ಮೀನರಸಿಂಹ ದೇಗುಲಗಳಲ್ಲಿ ಹಾಗು ಜಾವಗಲ್ಲಿನ ಮತ್ತು ಸೋಮನಾಥಪುರದ - ಕೇಶವ ದೇಗುಲದಲ್ಲಿ ಈ ದೇವಶಿಲ್ಪವಿದೆ.

ಈ ಎರಡೂ ದೇವಾಲಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಳಗಿನ ಅಂಶಗಳು ವಿದಿತವಾಗುತ್ತವೆ.

೧) ಈ ಮೇಲ್ಕಂಡ ಎರಡೂ ದೇವಾಲಯಗಳು ಶುದ್ಧ ಹೊಯ್ಸಳ ದೇವಾಲಯವೆಂದು ಮೊದಲ ನೋಟದಲ್ಲೇ ಕಂಡುಬರುತ್ತದೆ.

೨) ಹೊಯ್ಸಳ ಕಲೆ ಮತ್ತು ವಾಸ್ತುಶಿಲ್ಪದ ಎಲ್ಲಾ ಸಾಮಾನ್ಯ ಲಕ್ಷಣಗಳೂ ಕಂಡುಬರುತ್ತವೆ. ಅರ್ಥಾತ್ ಜಗತಿ, ಅಧಿಷ್ಠಾನ, ಗೋಪುರ, ಲೇತ್‌ನಿಂದ ಕಡೆದ ಕಂಬಗಳು ಇತ್ಯಾದಿ.

೩) ಎರಡೂ ದೇವಾಲಯಗಳಲ್ಲಿ ಪೌರಾಣಿಕ ಕಥಾ ಪ್ರಸಂಗದ ಅಡ್ಡಪಟ್ಟಿಯ ಕೆತ್ತನೆ ಕೆಲಸ ಮಾಡಿರುವುದಿಲ್ಲ.

೪) ಎರಡೂ ದೇವಾಲಯಗಳ ಹೊರಭಿತ್ತಿಯಲ್ಲಿರುವ ದೇವಮೂರ್ತಿಗಳ ಎತ್ತರ, ಗಾತ್ರ, ಪ್ರಮಾಣ, ಲಕ್ಷಣ ಒಂದೇ ಆಗಿರುತ್ತದೆ.

೫) ನವರಂಗಗಳಲ್ಲಿರುವ ಕಂಬಗಳು ಲೇತ್‌ನಿಂದ ಕಡೆದ ಕಂಬಗಳಂತೆ ಕಂಡುಬರುತ್ತವೆ.

೬) ಸೋಮೇಶ್ವರ ದೇವಾಲಯವು ಈಶ್ವರನಿಗೆ ಸಂಬಂಧಿಸಿದ ದೇವಾಲಯವಾದರೂ ಕೇಶವ ದೇವಾಲಯದಂತೆ ಅತ್ಯಲ್ಪ ಪ್ರಮಾಣದಲ್ಲಿ ಶಿವನಮೂರ್ತಿಗಳಿದ್ದು ಉಳಿದಂತೆ ಬಹುತೇಕ ಮೂರ್ತಿಗಳು ವಿಷ್ಣುವಿನದಾಗಿದೆ.

೭) ಎರಡು ದೇವಾಲಯಗಳ ರೂವಾರಿಗಳು ಪೌರಾಣಿಕ ನೆಲೆ, ಹಿನ್ನೆಲೆ ಮತ್ತು ಪ್ರತಿಮಾಶಾಸ್ತ್ರದಲ್ಲಿ ಪಾಂಡಿತ್ಯವನ್ನು ಹೊಂದಿದ್ದರೆಂದು ದೇವಾಲಯಗಳ ಮೂರ್ತಿಗಳನ್ನು ನೋಡಿದಾಗ ತಿಳಿಯುತ್ತದೆ.

ಈ ಕೆಳಕಂಡ ದೇವಮೂರ್ತಿಗಳು ಎರಡೂ ದೇವಾಲಯಗಳ ಹೊರಭಿತ್ತಿಯಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

೧. ನಾಟ್ಯ ಸರಸ್ವತಿ
೨. ಉಗ್ರನರಸಿಂಹ
೩. ಹರಿಹರ
೪. ಷಡ್ಭುಜ ಶಾರದೆ
೫. ನೃತ್ಯಗಣಪತಿ
೬. ಮಹಿಷಾಸುರ ಮರ್ದಿನಿ
೭. ಗೋವರ್ಧನ ಗಿರಿಧಾರಿ
೮. ಬ್ರಹ್ಮ
೯. ಭೈರವ
೧೦. ಕೋದಂಡರಾಮ
೧೧. ತಾಂಡವೇಶ್ವರ
೧೨. ಎರಡು ಮಂಗಗಳು, ಹಲಸಿನ ಹಣ್ಣಿಗಾಗಿ ಕಿತ್ತಾಡುತ್ತಿರುವುದು.

ಈ ಮೇಲ್ಕಂಡ ಅಂಶಗಳನ್ನು ಅವಲೋಕಿಸಿದಾಗ ಹಾರನಹಳ್ಳಿಯ ಸೋಮೇಶ್ವರ ದೇವಾಲಯವು ಲಕ್ಷ್ಮೀನರಸಿಂಹ ದೇವಾಲಯದ ನಿರ್ಮಾಣವಾದ ೫೦ ವರ್ಷಗಳ ನಂತರ ನಿರ್ಮಾಣವಾಗಿದೆ ಎಂದೇ ಹೇಳಬಹುದು

ಎಸ್. ಕೆ. ಮೇಲಾಕಾರ*

ಮಾಧನಬಾವಿಯಲ್ಲಿ ಶೋಧಿಸಲ್ಪಟ್ಟ ೧೨ನೇ ಶತಮಾನದ ಸರಸ್ವತಿ ವಿಗ್ರಹ

ಮಾಧನಬಾವಿಯು ಧಾರವಾಡ ತಾಲೂಕಿನ ಒಂದು ಚಿಕ್ಕ ಹಳ್ಳಿ. ಈ ಊರು ಧಾರವಾಡದಿಂದ ವಾಯುವ್ಯಕ್ಕೆ ೨೨ ಕಿ.ಮೀ. ದೂರದಲ್ಲಿ ಕಿತ್ತೂರು ಮತ್ತು ತಡಕೋಡ ರಸ್ತೆಯ ಮೇಲಿರುವುದು. ೧೯೭೧ರ ಜನಗಣತಿಯ ಪ್ರಕಾರ ಒಟ್ಟು ೨,೩೩೩ ರಷ್ಟು ಜನಸಂಖ್ಯೆಯನ್ನೊಳಗೊಂಡು ಸಕಲ ಸೌಲಭ್ಯಗಳನ್ನೂ ಹೊಂದಿರುವ ಈ ಊರು ಪ್ರಾಚೀನ ಕಾಲದಲ್ಲಿಯೂ ಸಹ ಎಲ್ಲಾ ದೃಷ್ಟಿಯಿಂದ ಸಮೃದ್ಧಿಯನ್ನು ಸಾಧಿಸಿತ್ತೆಂದು ಅಲ್ಲಿ ದೊರೆತ ಪ್ರಾಚ್ಯ ಅವಶೇಷಗಳು ಹಾಗೂ ಶಾಸನಗಳಿಂದ ತಿಳಿಯುತ್ತದೆ.[೧]

ಸರಸ್ವತಿ ವಿಗ್ರಹ ಶೋಧನೆ

ಮಾಧನಬಾವಿಯ ಗ್ರಾಮದ ಯುವಕ ಮಂಡಳಿಯವರು, ಅಲ್ಲಿಯ ಹಾಲಿನ ಡೇರಿಯ ಕಟ್ಟಡಕ್ಕಾಗಿ ಬಸ್ ನಿಲ್ದಾಣದ ಹತ್ತಿರ, ಪ್ರಾಚೀನ ಕಾಲದ ರಾಮಲಿಂಗ ದೇವಾಲಯದ ಪಕ್ಕದಲ್ಲಿ ಎತ್ತರವಾಗಿದ್ದ ದಿಬ್ಬವನ್ನು ಅಗೆಯುವಾಗ ನೆಲದಲ್ಲಿ ದೊರೆತ ಈ ವಿಗ್ರಹವನ್ನು ಹೊರಗೆ ತೆಗೆದರು. ಮುಂದೆ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಗೆ ಪತ್ರ ಬರೆದು ವಿನಂತಿಸಿದ ಪ್ರಕಾರ ನಾನು ವಿಶ್ವವಿದ್ಯಾಲಯದ ಅಧಿಕಾರಿಗಳ ಪರವಾನಿಗೆ ಪಡೆದು ಅಲ್ಲಿಗೆ ಹೋಗಿ ಆ ವಿಗ್ರಹದ ಛಾಯಾಚಿತ್ರ ಮಾಡಿಕೊಂಡು ಬಂದು ನೋಡಲಾಗಿ ಅದು ಸರಸ್ವತಿಯ ವಿಗ್ರಹವೆಂದು ಕಂಡುಬಂತು. ನಂತರ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ಸಂಶೋಧಕರ ಮತ್ತು ಸಾರ್ವಜನಿಕರ ಗಮನವನ್ನು ಈ ಕುರಿತು ಸೆಳೆಯಲಾಯಿತು. ಈ ಸರಸ್ವತೀ ದೇವಿಯ ವಿಗ್ರಹದ ವಿವರಣೆ ಕೆಳಗಿನಂತಿದೆ:

ಹೀಗೆ ಸಂಶೋಧನೆಯ ಫಲವಾಗಿ ಬೆಳಕಿಗೆ ಬಂದ ಈ ಸರಸ್ವತೀ ದೇವಿಯು ಚತುರ್ಭುಜಗಳೊಂದಿಗೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಕೆಳಗಿನೆರಡು ಕೈಗಳಲ್ಲಿ ಬಲಗೈ ಚಿನ್ಮುದ್ರೆಯಲ್ಲಿದ್ದು ಅಕ್ಷಮಾಲೆಯನ್ನು ಧರಿಸಿದ್ದಾಳೆ. ಎಡಗೈಯಲ್ಲಿ ಪುಸ್ತಕವನ್ನು ಹಿಡಿದಿರುವಳು. ಮೇಲಿನೆರಡು ಕೈಗಳಲ್ಲಿ : ಬಲಗೈಯಲ್ಲಿ ಅಂಕುಶ, ಎಡಗೈಯಲ್ಲಿ ಪಾಶವನ್ನು ಹಿಡಿದಿರುವುದನ್ನು ಕಾಣುತ್ತೇವೆ ಮತ್ತು ದೇವಿಯ ಎರಡೂ ಕಿವಿಗಳಲ್ಲಿ ಮಕರಕುಂಡಲಗಳನ್ನು ರತ್ನಕುಂಡಲಗಳನ್ನು ಧರಿಸಿರುತ್ತಾಳೆ. ಕೊರಳಲ್ಲಿ ಸುಂದರವಾದ ಪದಕದ ಹಾರಗಳನ್ನು ಕೆತ್ತಲಾಗಿದೆ. ಮೇಖಲೆಯ ಮುಕ್ತಾವಳಿಯು ಕಾಲಿನವರೆಗೆ ಇಳಿಬಿಟ್ಟಿದೆ. ಕಾಲ್ಗಳಲ್ಲಿ ಕಡಗಗಳು, ಕೈಗಳಲ್ಲಿ ಬಳೆಗಳು, ತಲೆಯ ಮೇಲೆ ಕಿರೀಟ ಅದರ ಮೇಲೆ ಕೀರ್ತಿಮುಖ, ದೇವಿಯ ಸುತ್ತಲೂ ಪ್ರಭಾವಳಿ, ಪ್ರಭಾಮಂಡಲ ವಿವಿಧ ರೀತಿಯಲ್ಲಿ ಕೈಯಲ್ಲಿ ಆಭರಣಗಳನ್ನು ಈ ವಿಗ್ರಹದಲ್ಲಿ ಬಿಡಿಸಿರುವುದನ್ನು ಕಾಣುತ್ತೇವೆ.[೨]

ಸಾಮಾನ್ಯವಾಗಿ ಸರಸ್ವತಿಯ ವಿಗ್ರಹಗಳು ಧಾರವಾಡ ಜಿಲ್ಲೆಯ ಅನೇಕ ಪ್ರಮುಖ ಸ್ಥಳಗಳಲ್ಲಿ ದೊರೆಯುವುದನ್ನು ನೋಡಿದರೆ ಶಿಕ್ಷಣಕ್ಕೆ ಈ ಪ್ರದೇಶ ಪ್ರಸಿದ್ಧವಾಗಿತ್ತೆಂದು ನಿಚ್ಚಳವಾಗಿ ತೋರುತ್ತದೆ. ಇದಕ್ಕೆ ಪೂರಕವಾಗಿ ಈ ಜಿಲ್ಲೆಯ ವಿವಿಧ ಸ್ಥಳಗಳಲ್ಲಿರುವ ಅಂದರೆ ಗದಗಿನಲ್ಲಿಯ ಸರಸ್ವತಿ, ಬಾಳೂರಿನ ಸರಸ್ವತಿ, (ಸದ್ಯದ ಕೆ.ಆರ್.ಆಯ್. ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವುದು), ಬಾಳೆಹಳ್ಳಿಯ ಸಿದ್ಧೇಶ್ವರ ಬಯಲು ಆವರಣದಲ್ಲಿರುವ ಸರಸ್ವತಿ, ಹಾನಗಲ್ಲಿನ ಸೋಮೇಶ್ವರ ದೇವಾಲಯದಲ್ಲಿಯ ಸರಸ್ವತಿ, ನರೇಗಲ್ ಸೋಮೇಶ್ವರ ದೇವಾಲಯದ ನವರಂಗದಲ್ಲಿಯ ಸರಸ್ವತಿ, ಅರಳೇಶ್ವರದ ಕದಂಬೇಶ್ವರ ದೇವಾಲಯದ ನವರಂಗದಲ್ಲಿಯ ಸರಸ್ವತಿ, ಅಬ್ಲೂರಿನ ಬ್ರಹ್ಮೇಶ್ವರ ದೇವಾಲಯದ ಮುಂಭಾಗದಲ್ಲಿಯ ಸರಸ್ವತಿ ಮುಂತಾದ ಸರಸ್ವತೀ ವಿಗ್ರಹಗಳೇ ಇದಕ್ಕೆ ಸಾಕ್ಷಿಯಾಗಿವೆ.

ಸರಸ್ವತೀ ದೇವಿಯ ಆರಾಧನೆ ಬಗ್ಗೆ ನಾವು ಗಮನಿಸಿದರೆ ಈಗಲೂ ನಾಡಿನ ಪ್ರತಿ ಹಳ್ಳಿಗಳಲ್ಲಿ ಪರಂಪರೆಯಿಂದ

* ಮ್ಯೂಸಿಯಂ ಮೇಲ್ವಿಚಾರಕರು, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩.



ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಶೃಂಗೇರಿಯ ಶಾರದೆ, ಬಾಗಳಿಯ ಸರಸ್ವತಿ, ಹಳೇಬೀಡಿನ ಅಡಗೂರಿನಲ್ಲಿಯ ಸರಸ್ವತಿಯ ಶಿಲ್ಪಗಳೂ ಇಂದಿಗೂ ನಿರಂತರವಾಗಿ ಪೂಜೆಗೊಳ್ಳುವುದನ್ನು ನೋಡಿದಾಗ ಈ ಸರಸ್ವತಿಯ ಆರಾಧನೆ ಮಹತ್ವ ಕುರಿತು ಸ್ಪಷ್ಟ ಚಿತ್ರಣ ನಮಗೆ ಲಭ್ಯವಾಗುವುದು.[೩] ಅದರಂತೆ ಪ್ರಸ್ತುತ ಮಾಧನಬಾವಿಯ ಸರಸ್ವತಿಯ ವಿಗ್ರಹವು ಸಹ ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ ಬಗ್ಗೆ ಇಲ್ಲಿ ಕಾಣುತ್ತೇವೆ.[೪] ಮಾಧನಬಾವಿಯಲ್ಲಿ ದೊರೆತ ಸರಸ್ವತಿ ವಿಗ್ರಹಕ್ಕೆ ವಾಹನವಾಗಲಿ, ವೀಣೆಧರಿಸಿದ ಬಗ್ಗೆಯಾಗಲಿ ಕಂಡುಬರುವುದಿಲ್ಲ ಮತ್ತು ಶಾಸನವು ಕೂಡಾ ಸರಸ್ವತಿಗೆ ಸಂಬಂಧಿಸಿದಂತೆ ಏನನ್ನೂ ಹೇಳಿಲ್ಲ.

ಈ ವಿಗ್ರಹ ದೊರೆತ ಸ್ಥಳದಲ್ಲಿ ಈ ಸರಸ್ವತಿಯ ದೇವಾಲಯದ ಬಗ್ಗೆ ತಿಳಿಯಬೇಕಾದರೆ ಅಲ್ಲಿ ಹೆಚ್ಚಿನ ಉತ್ಖನನ ಕೈಕೊಳ್ಳುವುದು ಸಮಂಜಸವೆನಿಸುತ್ತದೆ. ಆದರೆ ಪಕ್ಕದಲ್ಲಿ ಮನೆಕಟ್ಟಿದ ಕಾರಣ ಮತ್ತು ಹೊಸದಾಗಿ ಒಂದು ದೇವಾಲಯ ಕಟ್ಟಿದ್ದರಿಂದ ಉತ್ಖನನ ಮಾಡುವುದು ಸಾಧ್ಯವಾಗದೆಂದು ಅಲ್ಲಿಯ ಜನರು ಅನ್ನುತ್ತಾರೆ. ನನ್ನ ಅಭಿಪ್ರಾಯದಲ್ಲಿ ಅಲ್ಲಿ ಪ್ರಾಚೀನ ಕಾಲದ ರಾಮಲಿಂಗ ದೇವಾಲಯವಿದ್ದು ಆ ಬಗ್ಗೆ ಕ್ರಿ. ಶ. ಸುಮಾರು ೧೧೩೪ರ ಶಾಸನವೊಂದು ದೊರೆತಿದೆ. ಈ ದೇವಾಲಯದ ಹತ್ತಿರವೇ ಪ್ರಸ್ತುತ ಸರಸ್ವತಿಗೆ ಒಂದು ಪ್ರತ್ಯೇಕ ಆಲಯವಿತ್ತೆಂದು ಹೇಳಬಹುದಾಗಿದೆ. ಏಕೆಂದರೆ ಮುಸ್ಲಿಂರ ಆಳ್ವಿಕೆ ಕಾಲಕ್ಕೆ ಅಲ್ಲಿಯ ಜನರು ಈ ದೇವಾಲಯ ಹಾಗೂ ವಿಗ್ರಹ ರಕ್ಷಣೆಗಾಗಿ ಮಣ್ಣು ಮುಚ್ಚಿರಬೇಕು. ಆ ಸಂದರ್ಭದಲ್ಲಿ ಈ ಸರಸ್ವತೀ ವಿಗ್ರಹ ದಿಬ್ಬದಲ್ಲಿದ್ದು ಈಗ ಬೆಳಕಿಗೆ ತರಲಾಗಿದೆಂದು ಹೇಳಬಹುದಾಗಿದೆ.

ಕಾಲಮಾನ

ಅಲ್ಲಿ ಸಿಕ್ಕಂಥ ಕ್ರಿ. ಶ. ೧೧೩೪ರ ಶಾಸನ ಮತ್ತು ಸರಸ್ವತಿಗೆ ಬಳಸಿದ ಕಲ್ಲನ್ನು ಗಮನಕ್ಕೆ ತೆಗೆದುಕೊಂಡು ನೋಡಿದಾಗ ಸರಸ್ವತಿ ವಿಗ್ರಹವು ಸು. ಕ್ರಿ. ಶ. ೧೧೫೦ - ೧೨೦೦ರ ಅವಧಿಯದ್ದೆಂದು ಹೇಳಬಹುದಾಗಿದೆ.

ಸರಸ್ವತಿ ವಿಗ್ರಹ ದೊರೆತೆಡೆ ಇರುವ ಇತರ ಪ್ರಮುಖ ದೇವಾಲಯಗಳೆಂದರೆ ಪ್ರಾಚೀನ ರಾಮಲಿಂಗೇಶ್ವರ ದೇವಾಲಯ - ಅದರ ಹಿಂದಗಡೆ ಜೀರ್ಣೋದ್ಧಾರವಾಗಿರುವ ಹನುಮಾನ್‌ನ[೫] ದೇವಾಲಯ, ಹಾಗು ಗುಡ್ಡದ ಮೇಲಿರುವ ಶೈವ ದೇವಾಲಯಗಳು.

ಶಾಸನದ ಸಂಕ್ಷಿಪ್ತ ವಿವರಣೆ

ಈ ಸರಸ್ವತಿ ಶಿಲ್ಪ ಸಿಕ್ಕ ಸ್ಥಳದಲ್ಲಿ ಕ್ರಿ. ಶ. ೧೧೩೪ರ ಪ್ರಕಟಿತ ಶಾಸನವಿದ್ದು ಇದರ ಮೊದಲ ೩೦ ಸಾಲುಗಳು ಸವೆದುಹೋಗಿವೆ. ಶಾಸನದ ೨ನೇ ಭಾಗದಿಂದ ಮಾತ್ರ ವಿಷಯ ಲಭ್ಯವಿರುವುದು.[೬] ಈ ಶಾಸನವು ಗೋವೆಯ ಕದಂಬ ಅರಸ ೨ನೇ ಜಯಕೇಶಿಯ ಕುರಿತು ಉಲ್ಲೇಖ ನೀಡುತ್ತಿದ್ದು ಭೂಲೋಕ ಮಲ್ಲಸೋಮೇಶ್ವರನು ಚಕ್ರವರ್ತಿಯಾಗಿ ಆಳುತ್ತಿರುವಾಗ ಮಹಾರಾಣಿ ಮೈಳಲಾದೇವಿಯು ಯುವರಾಜ ಪೇರ್ಮಾಡಿದೇವ ಕುಮಾರ ವಿಜಯಾದಿತ್ಯನೊಡನೆ ಭೋಗೂರು ನೆಲೆವೀಡಿನಲ್ಲಿದ್ದ ೨ನೇ ಜಯಕೇಶಿಯು ಮಂದೂರ (ಮಾಧನಬಾವಿ) ಕಲಿದೇವ ಸ್ವಾಮಿಗೆ ಆರು ಮತ್ತರು ಭೂಮಿ, ದಾನ ನೀಡಿದ ಕುರಿತು, ಹಾಗೂ ಗದ್ಯಾಣ ೧, ಪೆರ್ಗ್ಗ, ಸೇನಭೋವ ಪಣ ೧, ಅಂಗಡಿ, ಮಡಿವಾಳು ಹಾಗ ೨, ತೆಲ್ಲಿಗರಲ್ಲಿ ಮನ್ನಣೆಯನ್ನು ನಾಲ್ವರು ತಳಾರಿ ೧, ಹಾಗೂ ೨, ಕುಮ್ಮಾರ ಹಾಗ ೨ ಮದುವೆಹಂದರ ಪಣ ೧, ಮುಮ್ಮರಿ ದಣ್ಣುಗಳ ಕುರಿತು ಈ ಶಾಸನ ಉಲ್ಲೇಖಿಸುವುದು.

ಶಾಸನದಲ್ಲಿ **ಮುಂದೂರು** ಎಂದು ಉಲ್ಲೇಖಿಗೊಂಡ ಮಾಧನಭಾವಿಯ ಪ್ರಾಚೀನತೆಯನ್ನು ಗುರುತಿಸುವಲ್ಲಿ ಅಲ್ಲಿ

ದೊರೆತ ದೇವಾಲಯ, ಶಾಸನ ಹಾಗೂ ಈ ಸರಸ್ವತಿಯ ವಿಗ್ರಹಗಳು ನಮಗೆ ಆಧಾರಭೂತ ಆಕರಗಳಾಗಿ ತೋರುತ್ತವೆ. ಈಗ ಕರೆಯುವ ಮಾಧನಬಾವಿಯ ಹೆಸರು ಪ್ರಾಚೀನ ಕಾಲದಲ್ಲಿ ಮುಂದೂರು ಆಗಿತ್ತೆಂದು ತಿಳಿಯುವುದು. ಹೀಗೆ ನಾಡಿನ ಇತಿಹಾಸ ಶ್ರೀಮಂತಗೊಳಿಸುವಲ್ಲಿ ಇಂತಹ ಹಳ್ಳಿಗಳಲ್ಲಿ ದೊರಕುವ ಪ್ರಾಚ್ಯಾವಶೇಷಗಳ ಪಾತ್ರ ಗಣನೀಯವಾಗಿದೆ

(ಈ ಮೂರ್ತಿಯ ಶೋಧನೆಗೆ, ಕಾಲಮಾನ ಗುರ್ತಿಸುವಲ್ಲಿ - ನೆರವಾದ ಡಾ|| ಎಸ್. ರಾಜಶೇಖರ್, ಡಾ|| ರಘುನಾಥಭಟ್, ಡಾ|| ರು. ಮ. ಷಡಕ್ಷರಯ್ಯ, ಡಾ|| ದೇವರಕೊಂಡಾರೆಡ್ಡಿ, ಡಾ|| ಚನ್ನಕ್ಕ ಪಾವಟೆ, ಶ್ರೀಮತಿ ಹನುಮಾಕ್ಷಿ ಗೋಗಿ, ಶ್ರೀ ಬಿ. ಆರ್. ರಾಠೋಡ ಉಪನ್ಯಾಸಕರು, ಎಸ್. ಬಿ. ದೇಸನೂರ ಶಿಕ್ಷಕರು ಈ ಎಲ್ಲಾ ವಿದ್ವಾಂಸರಿಗೆ ನಾನು ಇಲ್ಲಿ ಸ್ಮರಿಸಿಕೊಂಡಿರುವೆನು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಡಾ|| ಎಂ. ಎಂ. ಕಲಬುರ್ಗಿ : **ಧಾರವಾಡದ ಜಿಲ್ಲಾ ಶಾಸನ ಸೂಚಿ.**

*೨. ಕೆ. ವಸಂತಲಕ್ಷ್ಮಿ., *ಕರ್ನಾಟಕದಲ್ಲಿ ಸರಸ್ವತಿ ಶಿಲ್ಪಗಳು,* **ಇತಿಹಾಸ ದರ್ಶನ** - ಸಂ. ೫, ೧೯೯೦, ಪುಟ ೭೪. ಈ ಲೇಖನದಿಂದ ಸರಸ್ವತಿಯ ಬಗ್ಗೆ ತಿಳಿಯಲು ಅನುಕೂಲವಾಯಿತು.

*೩. ಈ ಮೂರ್ತಿಗಳ ಬಗ್ಗೆ ಆ ಕ್ಷೇತ್ರದಲ್ಲಿ ಸ್ವತಃ ಕ್ಷೇತ್ರಕಾರ್ಯಕ್ಕೆ ಹೋದಾಗ ಪ್ರತ್ಯಕ್ಷವಾಗಿ ನೋಡಿದ ಡಾ|| ಚನ್ನಕ್ಕ ಪಾವಟೆ, ಶ್ರೀಮತಿ ಹನುಮಾಕ್ಷಿ ಗೋಗಿಯವರು ಯಾದಿಯನ್ನು ನೀಡಿದ್ದಕ್ಕಾಗಿ ಅವರನ್ನು ಇಲ್ಲಿ ಸ್ಮರಿಸಬಹುದು.

*೪. ಸರಸ್ವತಿ ವಿಗ್ರಹದ ಛಾಯಾಚಿತ್ರ ಗಮನಿಸಿರಿ.

*೫. ಜೀರ್ಣೋದ್ಧಾರವಾದ ಹನುಮಾನ ಮೂರ್ತಿ ಕಾಣಬಹುದು. ಛಾಯಾಚಿತ್ರ ಗಮನಿಸಿರಿ.

*೬. ಧಾರವಾಡ ತಾಲೂಕಿನ ಶಾಸನಗಳು ಎಂಬ ಪುಸ್ತಕದಲ್ಲಿ ಇದರ ಪಠ್ಯ ಪ್ರಕಟವಾಗಿರುವುದು.

*

೧. ಡಾ|| ಎಂ. ಎಂ. ಕಲಬುರ್ಗಿ : **ಧಾರವಾಡ ತಾಲೂಕಿನ ಶಾಸನಗಳು** - ಕ. ವಿ. ವಿ., ಧಾರವಾಡ, ೧೯೭೬.

೨. ಪ್ರೊ|| ಎಸ್. ಕೆ. ರಾಮಚಂದ್ರರಾವ್ : **ಮೂರ್ತಿಶಿಲ್ಪ ನೆಲೆ ಹಿನ್ನೆಲೆ**, ಬೆಂಗಳೂರು ವಿ. ವಿ. ೧೯೭೫.

೩. ಪ್ರೊ|| ನಿರಂಜನ ಮತ್ತು ಪ್ರೊ|| ಘೋಷ್ : **ಶ್ರೀ ಸರಸ್ವತಿ ಇನ್ ಇಂಡಿಯನ್ ಆರ್ಟ್ ಆ್ಯಂಡ್ ಲಿಟರೇಚರ್**, ದೆಹಲಿ, ೧೯೮೪.

೪. ಟಿ. ಎ. ಗೋಪಿನಾಥರಾವ್ : **ಹಿಂದೂ ಎಕನೋಗ್ರಾಫೀ ವ್ಯಾಲೂಮ್** - ೧, ದೆಹಲಿ - ೧೯೭೪.

೫. ರಾಟೆಜೀತೇಂದ್ರನಾಥ ಬ್ಯಾನರ್ಜಿ : **ದ ಡೆವಲಪ್‌ಮೆಂಟ್ ಆಫ್ ಹಿಂದೂ ಎಕನೋಗ್ರಾಫೀ**, ದೆಹಲಿ, ೧೯೭೪.

ಡಾ॥ ಕೆ. ಬಿ. ಸುದರ್ಶನ್*

ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಸೂರ್ಯನಿಗೆ ಸಂಬಂಧಿಸಿದ ಕೆಲವು ಶಾಸನಗಳು ಮತ್ತು ಸೂರ್ಯಮೂರ್ತಿಗಳ ವೈಶಿಷ್ಟ್ಯ

ಉತ್ತರ ಭಾರತ ಅಥವಾ ಮಧ್ಯ ಭಾರತದಲ್ಲಿ ಕಂಡ ಸೂರ್ಯಾರಾಧನೆಯ ಬಹುಜನ ಪ್ರಿಯತೆ, ನಮ್ಮ ಕರ್ನಾಟಕದಲ್ಲಿ ಕಾಣದೇ ಇದ್ದರೂ, ಅದರ ಅಸ್ತಿತ್ವವನ್ನು ಅನೇಕ ಹಂತಗಳಲ್ಲಿ ಕಾಣಬಹುದು. ವಿಜಯನಗರ, ಹಂಪೆ, ಬೇಗೂರು ಮತ್ತು ಗೋಕರ್ಣ ಇವುಗಳು ಭಾಸ್ಕರ ಕ್ಷೇತ್ರಗಳೆಂದು ಪ್ರಖ್ಯಾತಿಯಾಗಿದ್ದವು. ಬಹುಶಃ ಈ ಸ್ಥಳಗಳು, ಸೌರಾರಾಧನೆಯ ಕೇಂದ್ರಗಳಾಗಿದ್ದವು. ಕ್ರಿ. ಶ. ೧೧೯೦ರಲ್ಲಿ ಕನ್ನಡದ ಕವಿ ಬ್ರಹ್ಮಶಿವನು, ತನ್ನ ಕೃತಿಯಾದ **ಸಮಯ ಪರೀಕ್ಷೆಯಲ್ಲಿ**, ಇತರ ಮತಗಳನ್ನು ಟೀಕಿಸುವಾಗ, ಸೌರಮತವನ್ನೂ ಸಹ ಟೀಕಿಸುತ್ತಾನೆ : ಆದ್ದರಿಂದ ಸೌರಮತವು ಕರ್ನಾಟಕದಲ್ಲಿ ಸಾಕಷ್ಟು ಜನಪ್ರಿಯವಾಗಿತ್ತೆಂದು ಹೇಳಬಹುದು.(೧)

ಈಗ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಸೂರ್ಯನಿಗೆ ಸಂಬಂಧಿಸಿದ ಶಾಸನಗಳನ್ನು ಗಮನಿಸೋಣ:

ಹರಪನಹಳ್ಳಿ ತಾಲ್ಲೂಕಿನ ಬಾಗಳಿಯ ಕಲ್ಲೇಶ್ವರ ದೇವಾಲಯದ ಉತ್ತರಕ್ಕೆ ನಿಲ್ಲಿಸಿರುವ ಶಾಸನದ ಪ್ರಕಾರ, ಕ್ರಿ. ಶ. ೯೮೭ನೆಯ ಆದಿತ್ಯವಾರದಂದು, ಆಹವಮಲ್ಲನ ಆಳ್ವಿಕೆಯಲ್ಲಿ, ಅವನ ಸಾಮಂತ ಕೋಗಿಲೆಯನ್ನು ಆಳುತ್ತಿರಲು, ಬಾಗಳಿಯ ಜನರು, ದುಗ್ಗಿಮಯ್ಯ ಪ್ರತಿಷ್ಠಾಪಿಸಿದ, ಆದಿತ್ಯ ದೇವರಿಗೆ ತೋಟವನ್ನು ನೀಡುತ್ತಾರೆ.(೨)

ಕ್ರಿ. ಶ. ೯೮೭ರ ಬಾಗಳಿಯ ಸೂರ್ಯದೇವ ಸ್ಥಾನವು ಈ ಪ್ರಾಂತ್ಯದಲ್ಲಿ ಅತ್ಯಂತ ಪ್ರಾಚೀನವಾದದ್ದಾದರೆ, ಹಂಪೆಯಲ್ಲಿ, ಕಂಪಿಲರಾಯನಿಂದ ನಿರ್ಮಿಸಿದ ಸೂರ್ಯ ಮಂದಿರವು ಈಚಿನದು. ಅಂದರೆ ೧೪ನೆಯ ಶತಮಾನದ್ದು ಎಂದು ಹೇಳಬಹುದು.

ಹಿರೇಹಡಗಲಿಯ ಮಹಾಮಾನ್ಯ ದೇಮರಸನು ಕಟ್ಟಿಸಿದ, ದಾನೇಶ್ವರದೇವಸ್ಥಾನದ ಒಳಾಂಗಣದ ಗೂಡುಗಳಲ್ಲಿ ಶಿವ ಮತ್ತು ಸೂರ್ಯನನ್ನು ಕಾಣಬಹುದು. ಸೂರ್ಯ, ತನ್ನ ಎರಡೂ ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಧರಿಸಿದ್ದಾನೆ.(೩) ತುಂಗಭದ್ರಾ ನದಿಯ ದಂಡೆಯ ಮೇಲಿರುವ ಹಡಗಲಿ ತಾಲ್ಲೂಕಿನ ರಂಗಾಪುರದಲ್ಲಿ ತ್ರಿಕೂಟ ದೇವಸ್ಥಾನವಿದೆ. ಶಾಸನದ ಪ್ರಕಾರ ಇದು ಕ್ರಿ. ಶ. ೧೦೫೮ ಕ್ಕೆ ಸೇರುತ್ತದೆ. ಈ ತ್ರಿಕೂಟದ ಒಳಾಂಗಣದಲ್ಲಿ, ಗಣೇಶ ಮತ್ತು ಸೂರ್ಯನನ್ನು ಪ್ರತಿಷ್ಠಾಪಿಸಿದ್ದಾರೆ. ಗರ್ಭಗೃಹದ ಬಳಿ ಇರುವ, ಈ ಸೂರ್ಯಮೂರ್ತಿಯು, ಮಕರ ತೋರಣದ ಮಧ್ಯೆ ಇದೆ. ಉಷಾ ಮತ್ತು ಪ್ರತ್ಯುಷೆಯರು ಮಕರದ ಮೇಲೆ ಆಸೀನರಾಗಿದ್ದಾರೆ. ಇಂತಹ ಇನ್ನೊಂದು ಮೂರ್ತಿಯನ್ನು ಕಲ್‌ಹೇರಿ (ಹಾವೇರಿ ತಾ॥ ಧಾರವಾಡ ಜಿಲ್ಲೆ) ಯಲ್ಲಿ ಕಾಣಬಹುದು. ಬಳ್ಳಾರಿ ತಾಲೂಕಿನ ಕುರುಗೋಡು ಎಂಬಲ್ಲಿ ಕಲ್ಲೇಶ್ವರ ದೇವಸ್ಥಾನವಿದೆ (ಕಲಚೂರಿಗಳ ಕಾಲದ್ದು ಕ್ರಿ. ಶ. ೧೧೭೬).

ಈ ದೇವಸ್ಥಾನದ ಪಶ್ಚಿಮದ ಗೋಡೆಯಲ್ಲಿ ಉಷಾ ಮತ್ತು ಪ್ರತ್ಯುಷೆಯರ ಮಧ್ಯೆ ಸೂರ್ಯನನ್ನು ಕಾಣಬಹುದು. ಮೂರ್ತಿಯು ಬಳ್ಳಿಯಾಕಾರದ ತೋರಣಗಳಿಂದ ಅಲಂಕೃತ ವಾಗಿದೆ. ಇನ್ನೊಂದು ಕಲ್ಲೇಶ್ವರ ದೇವಸ್ಥಾನವು ಹಡಗಲಿ ತಾಲ್ಲೂಕಿನ ಅನಗೂರ್ ಎಂಬಲ್ಲಿ ಪ್ರಸಿದ್ಧವಾಗಿದೆ. ಇಲ್ಲಿ ಶಿವ, ಜನಾರ್ಧನರ ಮಧ್ಯೆ ಸೂರ್ಯನನ್ನು ಕಾಣಬಹುದು. ಕ್ರಿ. ಶ. ೧೧ನೆಯ ಶತಮಾನಕ್ಕೆ ಸೇರಿದ, ಈ ಮೂರ್ತಿಯು ಗರ್ಭಗೃಹದ, ಸೂರ್ಯ ಪೀಠದ ಮೇಲೆ ಪ್ರತಿಷ್ಠಾಪಿಸಿದೆ.(೫)

ಚಾಲುಕ್ಯ ಜಗದೇಕಮಲ್ಲನ ಕ್ರಿ. ಶ. ೧೧೪೭ರ ಶಾಸನದಲ್ಲಿ ಫಣಿವಂಶದ ರೇವಗಾವುಂಡನು ಸೋಮೇಶ್ವರ, ಮಲ್ಲಿಕಾರ್ಜುನ, ಆದಿತ್ಯ, ವಿಘ್ನೇಶ್ವರ, ಭೈರವ ದೇವಾಲಯಗಳನ್ನು ಬಳ್ಳಾರಿ ತಾಲ್ಲೂಕು ಕೋಳೂರಿನಲ್ಲಿ ಕಟ್ಟಿಸಿದ ವಿವರ ಬಂದಿದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕು ಕೋಗಳಿ ಎಂಬಲ್ಲಿ ತ್ರುಟಿತ, ಕಾಲನಿರ್ದೇಶನವಿಲ್ಲದ ಶಾಸನ, ಸುಮಾರು ಕ್ರಿ. ಶ.

* ಪ್ರಾಧ್ಯಾಪಕರು, ಎ. ವಿ. ಪುರಂ, ಕಲೆ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು - ೫೬೦ ೦೦೪.

ಎಂಟನೆಯ ಶತಮಾನಕ್ಕೆ ಸೇರಿದುದಾಗಿದ್ದು 'ದಿವಸಕರ' (ಸೂರ್ಯನಿಗೆ ಸಂಬೋಧಿಸುತ್ತಾರೆ)ನ ವಿಗ್ರಹವನ್ನು ಶಿವನಂದಿಯ ಮೊಮ್ಮಗ ಮಾಡಿದನೆಂದು ಹೇಳಿದೆ.(೬)

ಹಡಗಲೀ ತಾಲ್ಲೂಕು ಮಾಗಳದ ಕ್ರಿ. ಶ. ೧೨೦೯ರ ಶಾಸನದ ಪ್ರಕಾರ ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನು, ವಿಜಯ ಸಮುದ್ರವೆಂಬ ಊರಿನಲ್ಲಿ, ಶಿಬಿರದಲ್ಲಿದ್ದಾಗ, ಕಾಳಿಮಯ್ಯನ ಮಗ ಮರ್ಮರಸನು, ಶಿವ, ವಿಷ್ಣು, ಸೂರ್ಯರಿಗಾಗಿ ತ್ರಿಕೂಟ ದೇವಾಲಯವನ್ನು ಕಟ್ಟಿಸಿದ.(೭)

ಹರಪನಹಳ್ಳಿ ತಾಲ್ಲೂಕು, ಬೆಸ್ತರಹಳ್ಳಿಯಲ್ಲಿರುವ ಶಂಕರ ಲಿಂಗಸ್ವಾಮಿ ದೇವಾಲಯದ ಬಳಿ ಇರುವ ಶಾಸನದ ಕಾಲವನ್ನು ಸುಭಾನು (ಸ್ವಭಾನು) ಸಂವತ್ಸರ ಎಂದು ಹೆಸರಿಸಿದ್ದು, ಇಮ್ಮಡಿ ನೊಳಂಬನು ಕೋಗಳಿ ಮತ್ತು ಕದಂಬಳಿಗೆ ನಾಡನ್ನು ಆಳುತ್ತಿದ್ದಾಗ, ದುಗ್ಗತಿ ಪಂಡಿತನ ಶಿಷ್ಯನಾದ ಮಲ್ಲಿಕಯ್ಯನು, ಆದಿತ್ಯ, ಮಾತೃಕೆ, ವಿನಾಯಕ ಮುಂತಾದ ಪ್ರತಿಮೆಗಳನ್ನು ಮಾಡಿಸಿದ ಎಂಬ ಉಲ್ಲೇಖವಿದೆ.(೮)

ಕ್ರಿ. ಶ. ೧೧೪೭ರ ಕೋಳೂರು ಶಾಸನದಲ್ಲಿ, ಜಗದೇಕ ಮಲ್ಲನ ಸಾಮಂತನಾದ ಫಣಿವಂಶದ ರೇವಗಾವುಂಡನು, ಸೋಮೇಶ್ವರ, ಮಲ್ಲಿಕಾರ್ಜುನ, ಆದಿತ್ಯ ಗೃಹ, ವಿಷ್ಣು ಗೃಹ, ಭೈರವ ಭವನಗಳಲ್ಲದೆ, ವಿಸ್ತಾರವಾದ ಶಿವದೇವಾಲಯವನ್ನು ನಿರ್ಮಿಸಿದನು ಎಂದಿದೆ.(೯)

ಕ್ರಿ. ಶ. ೧೫೨೮ರಲ್ಲಿ ಕೃಷ್ಣದೇವರಾಯನು ಆಳುತ್ತಿದ್ದಾಗ, ಮೊರಬದಲ್ಲಿ (ಕೂಡ್ಲಿಗಿ ತಾ।।) ತನ್ನ ತಾಯಿ ವೀರಮ್ಮನಿಗೆ ಪುಣ್ಯವಾಗಬೇಕೆಂದು, ಮಲ್ಲಿಪುರದಲ್ಲಿ ಅಂಗಡಿಯನ್ನು ಕಟ್ಟಿಸಿ, ಸ್ವಲ್ಪ ಭೂಮಿಯನ್ನು ಸೂರ್ಯನಾರಾಯಣದೇವರಿಗೆ ಬಿಡುತ್ತಾನೆ.(೧೦)

ಇದಲ್ಲದೆ, ಆದಿತ್ಯ ಎಂಬ ಪದ, ಕೆಲವು ಸಂದರ್ಭಗಳಲ್ಲಿ ಅರ್ಥಗರ್ಭಿತವಾಗಿ ಸ್ಥಳನಾಮ, ನಾಮವಾಚಕ ಅಥವಾ ಅಳತೆಯ ಸಾಧನವಾಗಿ ಪ್ರಯೋಗವಾಗಿರುವುದುಂಟು. ಉದಾಹರಣೆಗೆ, ಕ್ರಿ. ಶ. ೯೯೨ರಲ್ಲಿ, ಚಾಳುಕ್ಯ ಅರಸನು ಆಳ್ವಿಕೆ ನಡೆಸುತ್ತಿರುವಾಗ, ಆತನ ಸಾಮಂತನಿಗೆ ಯಜ್ಞಾಶ್ವಮೇಧ ದೀಕ್ಷಿತ ಎಂಬ ಬಿರುದು ಇತ್ತು. ಆತನ ಹೆಸರು ಆದಿತ್ಯಪದ್ಮರಸ ಎಂಬುದಾಗಿತ್ತು.(೧೧)

ಕ್ರಿ. ಶ. ೧೦೪೫ರ ಬಳ್ಳಾರಿ ಜಿಲ್ಲೆಯ ಶಾಸನದಲ್ಲಿ, ನೊಳಂಬ ಸಾಮಂತನಾಗಿದ್ದ, ಉದಯಾದಿತ್ಯ ಸಿಂದರಸನ ಉಲ್ಲೇಖವಿದೆ. ಕ್ರಿ. ಶ. ೧೦೪೬ರಲ್ಲಿ ಮಹಾಮಾಂಡಲೀಕ ಗಂಡರಾದಿತ್ಯನು ಆಳುತ್ತಿದ್ದನು. ನೊಳಂಬ ಅರಸರು, ವಿಕ್ರಮಾದಿತ್ಯ, ವಿಜಯಾದಿತ್ಯರ ಹೆಸರಿನಲ್ಲಿ, ತಮ್ಮ ಹೆಸರನ್ನು ಸೇರಿಸಿಕೊಳ್ಳುತ್ತಾರೆ. (ನೊಳಂಬ ಉದಯಾದಿತ್ಯರ ಹಾಗೆ) ಕೊಲ್ಲೂರಿನ ಕದಂಬರ ಒಬ್ಬನ ಹೆಸರು ಆದಿತ್ಯವೆಂಬುದಾಗಿದೆ.

ಕ್ರಿ. ಶ. ೧೧೨೩ರಲ್ಲಿ ಚಾಳುಕ್ಯರಾಜ ತ್ರಿಭುವನ ಮಲ್ಲನು ಕಲ್ಯಾಣಪುರವನ್ನು ಆಳುತ್ತಿದ್ದಾಗ, ಆತನು ಬನವಾಸಿಯಲ್ಲಿ ತಂಗಿದ್ದು, ಆದಿತ್ಯಗ್ರಾಮಕ್ಕೆ ತೆರಿಗೆ ಮಾನ್ಯ ಮಾಡುತ್ತಾನೆ.(೧೧)

ಕ್ರಿ. ಶ. ೧೧೪೭ರಲ್ಲಿ ಜಗದೇಕಮಲ್ಲ ಎಂಬ ಪಾಂಡ್ಯ ದೇವನು, ದೇವರ ಪೂಜಾರ್ಥವಾಗಿ ಭೂದಾನ ನೀಡುವಾಗ, ಆ ಶಾಸನಗಳಲ್ಲಿ ಪ್ರಸ್ತಾಪವಾಗುವ, ಇತರ ಹೆಸರುಗಳೊಡನೆ ಆದಿತ್ಯಸಾಹಣೀ ಎಂಬುದೂ ಒಂದು. ಇದು ಒಬ್ಬ ವ್ಯಕ್ತಿಯ ಹೆಸರು.

ಕ್ರಿ. ಶ. ೧೨೦೬, ಕುರುವತ್ತಿ ಶಾಸನದಲ್ಲಿ, ರಾಜಗುರು, ಸೂರ್ಯಾಭರಣ ಪಂಡಿತನು. ಆ ಕಾಲದ ಪ್ರಮುಖ ವ್ಯಕ್ತಿಯಾಗಿದ್ದನು.

ಬೇರೆ ಬೇರೆ ಪ್ರದೇಶಗಳಲ್ಲಿ, ಬೇರೆ ಬೇರೆ ಅಳತೆಯ ಭೂಮಾಪನಗಳು ಪ್ರಚಲಿತದಲ್ಲಿದ್ದವು. ಹಡಗಲಿ ತಾಲ್ಲೂಕಿನ ಹುಚ್ಚೋಳಿಯಲ್ಲಿ *'ಆದಿತ್ಯ ದೇವರ ಕೋಲು'* (ಸಿರಗು - ೧೦), ತೆಕ್ಕಲ ಕೋಟೆಯ ಶಾಸನದಲ್ಲಿ ಹರಿಯ ಕೋಲು (ಸಿರಗು-೫೪) ಅಳತೆಯ ಸಾಧನವಾಗಿತ್ತು.

ಸೂರ್ಯಾರಾಧನೆಯ ಕಲ್ಪನೆ, ಹೇಗಿತ್ತು ಎಂಬ ಅಂಶವನ್ನು ನೋಡಿದಾಗ, ಕೆಲವು ನಿದರ್ಶನಗಳನ್ನು ಕೊಡಬಹುದು. ರಾಜರುಗಳೇ ಆಗಲಿ ಅಥವಾ ಸಾಮಂತರೇ ಆಗಲಿ ಅಥವಾ ಮಾಂಡಲೀಕರಾಗಲೀ, ದಾನಮಾಡುವಾಗ, ದೇವಾಲಯವನ್ನು ನಿರ್ಮಿಸುವಾಗ, ಒಳ್ಳೆಯ ಕಾರ್ಯಗಳನ್ನು ನಿಯೋಜಿಸಲು, ಕಾರ್ಯ ರೂಪಿಸುವಾಗ, ಕೆಲವು ನಿರ್ದಿಷ್ಟ ದಿನಗಳನ್ನು ನಿಗದಿಪಡಿಸಿ ಕೊಳ್ಳುತ್ತಿದ್ದರು. ಉದಾಹರಣೆಗೆ ಭಾನುವಾರವನ್ನು (ಆದಿತ್ಯವಾರ) ಬಳಸುತ್ತಿದ್ದರು, ಹಾಗೆಯೇ ಉತ್ತರಾಯಣ ಸಂಕ್ರಾಂತಿ ಹಾಗೂ ಸೂರ್ಯಗ್ರಹಣ ಇನ್ನೂ ಮುಂತಾದವು. ಈ ದಿನಗಳು, ಸೂರ್ಯನಿಗೆ ಸಂಬಂಧಿಸಿದ ಪ್ರಶಸ್ತವಾದ ದಿನಗಳು. ಈ ದಿನಗಳನ್ನು ಗಮನ ದಲ್ಲಿಟ್ಟುಕೊಂಡು ಕಲ್ಯಾಣಕರವಾದ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುತ್ತಿದ್ದರು. ಕೆಲವು ವೇಳೆ, ಶಾಸನಗಳಲ್ಲಿ ನಿರೂಪಿತ ವಾಗಿರುವ ಆ ದಿನಗಳು ಅದಲು ಬದಲಾಗಿರುತ್ತದೆ. ಏನೇ ಆಗಲಿ, ಒಂದಂಶವಂತೂ ನಿಜ. ಸೂರ್ಯರಾಧನೆಯ ಕಲ್ಪನೆ ಅವರ ಮನಸ್ಸಿನಲ್ಲಿ ದೃಢವಾಗಿ ನಾಟಿತ್ತು. ಸೂರ್ಯನನ್ನು ಗಮನಿಸಿಯೇ ಪುಣ್ಯ ಕಾರ್ಯವನ್ನು ಮಾಡುತ್ತಿದ್ದರು.

ಬಳ್ಳಾರಿ ಜಿಲ್ಲೆಯ ಸೂರ್ಯಮೂರ್ತಿಗಳ ವೈಶಿಷ್ಟ್ಯವನ್ನು ಪರಿಗಣಿಸಿದಾಗ, ಮುಖ್ಯವಾಗಿ ಕುರುವತ್ತಿ, ಮಾಗಳ ಮತ್ತು ಹಂಪಿಯ ಸೂರ್ಯಮೂರ್ತಿಗಳು ಗಣನೆಗೆ ಅರ್ಹವಾಗಿವೆ.

ಈ ಮೂರ್ತಿಗಳಲ್ಲಿ ಕಂಡುಬರುವ ಸಾಮಾನ್ಯಾಂಶಗಳು ಯಾವುದೆಂದರೆ, ಸಮಭಂಗದಲ್ಲಿ ಇರುವುದು. ಎರಡೂ ಕೈಗಳಲ್ಲಿ ಕಮಲದ ಮೊಗ್ಗು, ಚಾಮರ ಧಾರಿಣಿಯರು, ಪ್ರಭಾವಳಿಯ ಎರಡೂ ಕಡೆ ಇದ್ದಾರೆ. ಕೆಲವು ವೇಳೆ, ಉಷೆ - ಪ್ರತ್ಯುಷೆಯರ, ಜೊತೆ ಜೊತೆಯಾಗಿಯೇ ಇದ್ದಾರೆ. ಏಳು ಕುದುರೆಗಳನ್ನು ನಡೆಸುವ ಅರುಣನೂ ಸಹ ಕಾಣುತ್ತಾನೆ. ಮಕರ ತೋರಣದ ಪ್ರಭಾವಳಿ ಉತ್ಕರ್ಷವಾಗಿದೆ.(೧೪)

ಆದರೆ, ಈ ಮೂರೂ ಸೂರ್ಯ ಮೂರ್ತಿಗಳನ್ನು ಪ್ರತ್ಯೇಕವಾಗಿ ಅವಲೋಕಿಸಿದಾಗ, ಅವು ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿವೆ.

ಕುರುವತ್ತಿಯ ಸೂರ್ಯಮೂರ್ತಿಯು, **ಸುಂದರ ತರುಣಿಯಂತಿದ್ದರೆ**, ಹಂಪಿಯ ಮೂರ್ತಿಯು ಗಾಂಭೀರ್ಯದ **ಧೀರ ಪುರುಷನಂತಿದೆ.** ಚಾಲುಕ್ಯ ಚಕ್ರವರ್ತಿಗಳನ್ನು ಭೂಲೋಕ ಮಲ್ಲದೇವ, ಜಗದೇಕಮಲ್ಲ, ತ್ರಿಭುವನಮಲ್ಲ ಮುಂತಾದ ಯಾವ ವಿಶೇಷಣಗಳೊಡನೆ, ಸಂಬೋಧಿಸುತ್ತಿದ್ದರೋ ಅಂತಹ ಪ್ರತಿರೂಪವೇ, ಮಾಗಳದ ಸೂರ್ಯನಲ್ಲಿ ವ್ಯಕ್ತವಾಗುತ್ತದೆ. ಅಷ್ಟೊಂದು, ಧೀಮಂತತೆಯಿಂದ ಈ ಸೂರ್ಯಮೂರ್ತಿಯು ಇದೆ.

ಕುರುವತ್ತಿಯ, ಸೂರ್ಯನ ಶಿರಸ್ಸಿನ ಮೇಲೆ, ಏಳು ಹೆಡೆಯ ಹಾವನ್ನು ಕಾಣಬಹುದು. ಪ್ರಭಾವಳಿಯ ಮೇಲಿರುವ ಮಕರ ತೋರಣವು. ನವಿಲುಗರಿಯಂತೆ ಭಾಸವಾಗುತ್ತದೆ. ಕಮಲದ ಮೊಗ್ಗು ತ್ರಿಶೂಲದಂತಿದೆ. ಉಪವೀತ ಹಾಗೂ ಯಜ್ಞೋಪವೀತ ಎರಡೂ ಇದೆ. ಉಷಾ ಮತ್ತು ಪ್ರತ್ಯುಷೆಯರ ಬದಲು, ದ್ವಿಭಂಗದಲ್ಲಿರುವ ಚಾಮರ ಧಾರಿಣಿಯರನ್ನು ಕಾಣಬಹುದು. ಈ ಮೂರ್ತಿಯ ವಿಶೇಷವೆಂದರೆ, ಸರ್ಪಾಭರಣದಿಂದ ಅಲಂಕೃತವಾಗಿರುವುದು. ಇದೇ ರೀತಿಯಲ್ಲಿರುವ, ಇನ್ನೊಂದು ಮೂರ್ತಿಯನ್ನು, ಹೊಯ್ಸಳರ ಕಾಲದ ಹಾಸನ ಜಿಲ್ಲೆಯ, ಕೊರವಂಗಲದಲ್ಲಿರುವ ಸೂರ್ಯಗುಡಿಯ ಉತ್ತರ ಭಾಗದಲ್ಲಿ ಕಾಣಬಹುದು.

ಮಾಗಳದ ಸೂರ್ಯನು, ಧೀರೋದಾತ್ತತೆಯ ಲಕ್ಷಣವನ್ನು ಒಳಗೊಂಡಿದ್ದಾನೆ, ಎಂಬುದನ್ನು ಹಿಂದೆಯೇ ಹೇಳಿದೆ. ಗವಾಕ್ಷಿಗಳ ಮಾದರಿಯಲ್ಲಿ, ಮಕರತೋರಣ ಇದೆ. ಹನ್ನೆರಡು ಜನ ಆದಿತ್ಯರು, ಈ ಪ್ರಭಾವಳಿಯ ಮೇಲಿದ್ದಾರೆ. ಉಷಾ ಮತ್ತು ಪ್ರತ್ಯುಷೆಯರು, ಮಕರದ ಮೇಲೆ ಕುಳಿತು ಬಾಣವನ್ನು ಗುರಿಯಿಟ್ಟಿದ್ದಾರೆ. ಮೂರ್ತಿಯು ಧರಿಸಿರುವ ಹಾರಗಳು, ಕಟೀಬಂಧ, ಉಪವೀತ, ವೈಜಯಂತೀ ಮಾಲಾ, ಹೀಗೆ ನಾನಾ ಆಕಾರಗಳಾಗಿ ಬದಲಾಯಿಸಿದೆ. ಅಂಗವಿನ್ಯಾಸ ಹರಡಿಕೊಂಡಿದೆ. ಕೀರ್ತಿಮುಖ ಪ್ರಭಾವಶಾಲಿಯಾಗಿದೆ. ದೃಷ್ಟಿ ಚೇತೋಹಾರಿಯಾಗಿದೆ. ಕಮಲದ ಮೊಗ್ಗು ಚಾಮರದಂತಿದ್ದು, ಕಟಿಭಾಗದ ಆಭರಣಗಳು ವಸ್ತ್ರದಂತೆ ಕಾಣುತ್ತದೆ.

ಕಂಪಿಲರಾಯನಿಂದ ನಿರ್ಮಿಸಿದ ಹಂಪಿಯ ಸೂರ್ಯ ಮಂದಿರ, ೧೪ನೆಯ ಶತಮಾನದ್ದು.(೧೫) ಜಟಾಮಕುಟ, ಗಿಣಿಯ ಆಕಾರದ ಮೂಗು, ಕೋಲುಮುಖ ಮತ್ತು ಧ್ಯಾನದ ಭಂಗಿಯಲ್ಲಿದ್ದು, ಇಡೀ ಮೂರ್ತಿಯು ಗಾಂಭೀರ್ಯದಿಂದ ಕೂಡಿದೆ. ಎರಡೂ ಕೈಗಳಲ್ಲಿರುವ ಕಮಲವು Trophy ಯ ಆಕಾರದಲ್ಲಿದೆ. ಅಗಲವಾದ ಪ್ರಭಾವಳಿಯಾಗಲೀ, ಅಥವಾ ಮಕರ ತೋರಣವಾಗಲೀ ಇಲ್ಲ. ಕಲ್ಯಾಣದ ಚಾಲುಕ್ಯರ ಶಿಲ್ಪಗಳಲ್ಲಿರಬೇಕಾದ ಎಲ್ಲಾ ಆಭರಣಗಳು ಕರಾರುವಕ್ಕಾಗಿ ಸೇರ್ಪಡೆಯಾಗಿದೆ. ಅವೆಲ್ಲವೂ ಅಷ್ಟೇ ಸ್ಪಷ್ಟವಾಗಿವೆ. ಕಂಠೀ, ಕಂಠಾದಾರ, ಉದರಬಂಧ, ಕಟಿಬಂಧ, ವೈಜಯಂತಿ ಮಾಲೆ, ಈ ಆಭರಣಗಳು ಸ್ಪಷ್ಟರೂಪ ತಾಳಿ, ಮೂರ್ತಿಯು ವಸ್ತ್ರಾಲಂಕಾರದಿಂದ, ಅಲಂಕೃತವಾಗಿ ದೆಯೋ ಎಂಬಂತಿದೆ. ದ್ವಿಭಂಗದಲ್ಲಿರುವ ಚಾಮರ ಧಾರಿಣಿಯರ ಮೇಲ್ಭಾಗದಲ್ಲಿ ಉಷೆ ಮತ್ತು ಪ್ರತ್ಯುಷೆಯರು, ಬಾಣ ಬಿಡುವ ಭಂಗಿಯಲ್ಲಿದ್ದಾರೆ.

ಹೊಯ್ಸಳರ ಮೂರ್ತಿಶಿಲ್ಪವು ವಿಶ್ವವಿಖ್ಯಾತವಾಗ ಬೇಕಾದರೆ, ಕಲ್ಯಾಣಿ ಚಾಲುಕ್ಯರ ಶೈಲಿ, ಅದಕ್ಕೆ ಪೋಷಕವಾಗಿತ್ತು ಎಂಬುದನ್ನು ಮರೆಯಬಾರದು.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ವಿಷಯ ವಿಶ್ವಕೋಶ (ಕರ್ನಾಟಕ)**, ಮೈಸೂರು, ೧೯೭೭, ಪು. ೧೦೭೭.
*೨. *A.R. No. 81 of 1904 : S.I.I. Vol. IX*, pt. I, No. 75.
*೩. *S.I.I. Vol. IX*, part. I, No. 118
*೪. *S.I.I. Vol IX*, part I, No. 296
*೫. *A.R. No. 353, of 1935*
*೬. *A.R. No. 522 of 1914*
*೭. *A.R. No. 523 of 1913; S.I.I. IX*, pt. I, No. 329
*೮. *A.R. No. 297 of 1918, S.I.I. IX*, pt. II, No. 61
*೯. *S.I.I. Vol. IX*, part I, No. 300
*೧೦. *A.R. No. 323 of 1925; S.I.I. Vol. IX*, pt. I, No. 523
*೧೧. *A.R. No. 522 of 1914*
*೧೨. *A.R. No. 1913 No. 8*
*೧೩. *A.R. No. 282 of 1918; S.I.I. Vol. IX* pt. No. 247
*೧೪. Channabasappa S. Patil., *Temples of Raichur and Bellary District 1000-1325; A.D.*, Mysore, 1992.
*೧೫. Ibid.

ದ. ಕ. ಚಿತ್ತಯ್ಯಪೂಜಾರ್*

ಅಪರೂಪದ 'ಕೋಣ ಕಾಳಗದ ಶಿಲ್ಪ'

ನಿಡುಗಲ್ಲು ದುರ್ಗವು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಪಶ್ಚಿಮಕ್ಕೆ ಸುಮಾರು ೨೫ ಕಿಲೋಮೀಟರ್ ದೂರದಲ್ಲಿದೆ.

ಈ ನಿಡುಗಲ್ಲುದುರ್ಗದ ಹಿಂಬದಿಯಲ್ಲಿ ಪಾವಗಡ ಚಿತ್ರದುರ್ಗ ಹೆದ್ದಾರಿಯಲ್ಲಿರುವ ದೊಡ್ಡೇನಹಳ್ಳಿಗೆ ಹೊಂದಿಕೊಂಡಂತೆ ಸ್ವಲ್ಪ ದೂರದ ಬೆಟ್ಟಸಾಲಿನ ಮಧ್ಯದಲ್ಲಿನ *ಹಳೇರಂಗಸಮುದ್ರವೆಂ*ಬ ಹಾಳು ನೆಲೆಯಲ್ಲಿ ನೆಲಗಣಜ, ತುಪ್ಪದ ಕಣಜ, ಹಾಳು ಬಿದ್ದ ದೇವಸ್ಥಾನದ ವಿಗ್ರಹ ಮತ್ತು ಕಂಬಗಳು, ಮನೆಗಳ ತಳಪಾಯಗಳು, ವೀರಗಲ್ಲುಗಳು, ಕಂಡುಬರುತ್ತವೆ. ಇದರಿಂದ ನಿಡುಗಲ್ಲು ಶಾಸನಗಳಲ್ಲಿ ಕಂಡುಬರುವ *ರಂಗಸಮುದ್ರ* ಇದೇ ಇರಬಹುದೆಂದು ಹೇಳಬಹುದು.

ಈ ಹಾಳು ರಂಗಸಮುದ್ರದ ಮಧ್ಯ ಕಾವಲುಗಾರ ಬುಡ್ಡಯ್ಯನೆಂದು ಕರೆಸಿಕೊಳ್ಳುತ್ತಿರುವ ಒಂದು ಹಳತಾದ ಕೋಣನೊಡನೆ ಹೋರಾಡುತ್ತಿರುವ ವೀರ ಮತ್ತು ಕೋಣನ ಚಿತ್ರ ಹೊಂದಿರುವ ಮೂರು ಅಡಿ ಎತ್ತರ ಎರಡು ಅಡಿ ಅಗಲವಿರುವ ಒಂದು ವೀರಗಲ್ಲು ಕಂಡುಬಂದಿದೆ. ಪೊದೆಯ ನಡುವೆ ಹಾಳು ಮಂಟಪದಂತಿರುವ ನಾಲ್ಕು ಕಂಬಗಳು ಮತ್ತು ಎರಡು ಬಂಡೆಗಳು ಆವರಣದಲ್ಲಿವೆ. ಬಹುಶಃ ನಿಧಿ ನಿರೀಕ್ಷೆಯಲ್ಲಿ ಪೊದೆ ಕತ್ತರಿಸಿ ಮಣ್ಣು ಅಗೆದು ಏನೂ ಕಾಣದೆ ವೀರಗಲ್ಲನ್ನು ಉಳಿಸಿ ಹೋಗಿದ್ದ ನಿಧಿಗಳ್ಳರಿಂದಾಗಿ, ಕಣ್ಣಿಗೆ ಬಿದ್ದ ಈ ವೀರಗಲ್ಲು ನನ್ನ ಕ್ಷೇತ್ರ ಕಾರ್ಯದ ಶೋಧವಾಯಿತು.



ಸುಂದರವಾದ ಈ ವೀರಗಲ್ಲು ಶಿಲ್ಪವು ಒರಟು ಕಲ್ಲಿನಲ್ಲಿ ಕೆತ್ತಿದ್ದರೂ ಬಹಳ ಸೂಕ್ಷ್ಮ ಹಾಗು ನಾವೀನ್ಯ ಶೈಲಿಯನ್ನು ಹೊಂದಿದೆ. ಇಲ್ಲಿ ವೀರನನ್ನು ಕೋಣಕ್ಕಿಂತ ಎತ್ತರವಾಗಿ ಚಿತ್ರಿಸಿರುವುದು ಅವನ ಶೌರ್ಯವನ್ನು ತಿಳಿಸುವುದಕ್ಕಷ್ಟೆ. ವೀರನ ವೀರಮುಡಿಯು ಬಲ ಭಾಗಕ್ಕೆ ವಾಲಿದಂತೆ ಕಟ್ಟಿದೆ. ಬಲಗೈಯಲ್ಲಿ ಒಂದು ಕೊಡಲಿಯನ್ನು ಹಿಡಿದು ಮೇಲಕ್ಕೆ ಎತ್ತಿದ್ದಾನೆ. ಎಡಗೈಯಲ್ಲಿ ರೋಷದಿಂದ ಮೇಲೆ ನುಗ್ಗುತ್ತಿರುವ ಕೋಣದ ಬಲಕೋಡನ್ನು ಹಿಡಿದು ನಿಂತಿದ್ದಾನೆ ಜೊತೆಗೆ ಎರಡೂ ಕೈಯಲ್ಲಿ ಕಡಗಗಳನ್ನು ತೊಟ್ಟು, ತೋಳುಗಳಲ್ಲಿಯೂ ಬಳೆ ಹಾಕಿರುವುದು ಕಂಡುಬರುತ್ತದೆ. ಕುತ್ತಿಗೆ ಮತ್ತು ಎದೆಯಮೇಲೆ ಕೆಲವು ಆಭರಣಗಳನ್ನು ಧರಿಸಿ, ಸೊಂಟದಲ್ಲಿ ದಟ್ಟಿ ಸುತ್ತಿದ್ದಾನೆ. ಅದು ಕಾಲಿನ ಮಧ್ಯಭಾಗದಲ್ಲಿ ನೆಲದವರೆಗೂ ನೇತುಬಿದ್ದಿದೆ. ಎರಡು ಕಾಲುಗಳಲ್ಲಿಯೂ ಕಡಗ ಹಾಕಿದ್ದಾನೆ.

* ಸಂಶೋಧನ ವಿದ್ಯಾರ್ಥಿ, ಕನ್ನಡ ವಿಭಾಗ, ಜ್ಞಾನಭಾರತಿ, ಬೆಂಗಳೂರು - ೫೬೦ ೦೫೬.

ಮೊದಲೆ ಹೇಳಿದಂತೆ ಕೋಣವು ವೀರನ ಮೇಲೆ ರೋಷದಿಂದ ನುಗ್ಗುತ್ತಿದ್ದು, ಮುಂದಿನ ಬಲಗಾಲು ಮತ್ತು ಹಿಂದಿನ ಬಲಗಾಲನ್ನು ಮೇಲಕ್ಕೆ ಎತ್ತಿದ್ದು, ಬಾಲವನ್ನು ಸಿಟ್ಟಿನಿಂದ ಪೂರ್ತಿ ಮೇಲಕ್ಕೆ ಎತ್ತಿದೆ. ನಿಮಿರಿರುವ ಅದರ ಕಿವಿಗಳು, ನಯ ಮಾಡಿದಂತೆ ಕಾಣುವ ಅದರ ಕೋಡುಗಳು ಸ್ಪಷ್ಟವಾಗಿ ಕೆತ್ತಿರುವ ಅದರ ಗೊರಸುಗಳನ್ನು ಕಂಡ ತಕ್ಷಣ ಗೂಳಿ ಎನ್ನುವಂತೆ ಕಂಡುಬಂದರೂ ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೋಣವೆಂದು ಖಚಿತವಾಗುತ್ತದೆ.

ಈ ವೀರಗಲ್ಲಿನಲ್ಲಿ ಬಳ್ಳಿ ಅಥವಾ ಮರದ ಚಿತ್ರಣವನ್ನು ಕಾಡಿನ ಸಂಕೇತವಾಗಿ ಬಿಡಿಸಲಾಗಿದೆ.

ಇಲ್ಲಿ ಸ್ವರ್ಗಲೋಕ ಬಿಡಿಸಿರುವ ಹಂತದ ಶಿಲ್ಪವಿಲ್ಲದೆ ಒಂದೇ ಹಂತವಿದೆ. ವೀರ, ಕೋಣ, ಬಳ್ಳಿಯನ್ನು ಬಿಟ್ಟು ಬೇರೆಯಾವ ಚಿತ್ರಣವೂ ಕಂಡುಬರುವುದಿಲ್ಲ. ಹೋರಾಟದಲ್ಲಿ ವೀರ ಸತ್ತನೋ, ಕೋಣ ಸತ್ತಿತೋ ಎಂಬ ವಿಚಾರ ಸ್ಪಷ್ಟವಾಗಿ ತಿಳಿಯುವುದಿಲ್ಲ ಎಂದರೂ ಸ್ಥಳೀಯರು ಹೇಳುವಂತೆ ವೀರನೇ ಕೋಣವನ್ನು ಸಾಯಿಸುತ್ತಾನೆ ಎನ್ನುವ ಒಂದು ಕಥೆಯನ್ನೇ ಹೇಳುತ್ತಾರೆ. ಇದರ ಕಾಲಮಾನದ ಬಗ್ಗೆ ಖಚಿತವಾಗಿ ಹೇಳಲು ಕುರುಹು ಇಲ್ಲದಿದ್ದರೂ (ಇದರ ವರಟು ಕಲ್ಲನ್ನು ಗಮನಿಸಿ ಗಂಗರ ಕಾಲದ್ದೆಂದು ಹೇಳಲು ಗಂಗರ ಯಾವುದೇ ಶಾಸನ ಈ ಪ್ರಾಂತದಲ್ಲಿ ಲಭಿಸಿದಂತೆ ಕಾಣುವುದಿಲ್ಲ). ಒಟ್ಟಾರೆಯಾಗಿ ವೀರನ ಉಡುಪು, ಮತ್ತು ಪ್ರಾಣಿಗಿಂತ ವೀರನ ಚಿತ್ರವನ್ನೆ ದೊಡ್ಡದಾಗಿ ಕೆತ್ತಿರುವುದರಿಂದ ಇದು ಪಾಳೆಯಗಾರರ ಕಾಲದ್ದೆಂದು ೧೬-೧೭ನೇ ಶತಮಾನವಿರಬಹುದೆಂದು ಹೇಳಬಹುದಾಗಿದೆ.

ಇದುವರೆಗೂ ಹಂದಿಬೇಟೆ, ಹುಲಿಬೇಟೆ, ತುರುಗಾಳಗ ಮುಂತಾದ ವೀರಗಲ್ಲುಗಳು ದೊರಕಿದ್ದು, ಇದು ಅವೆಲ್ಲಕ್ಕಿಂತಲೂ ಭಿನ್ನವಾಗಿರುವುದು ಅಧ್ಯಯನ ಯೋಗ್ಯವಾಗಿದೆ.

ಒಟ್ಟಾರೆಯಾಗಿ ವೀರಗಲ್ಲುಗಳ ಪ್ರಕಾರಕ್ಕೆ ಒಂದು ಹೊಸ ಸೇರ್ಪಡೆ ಈ ವೀರಗಲ್ಲಿನಿಂದ ಲಭಿಸಿದಂತೆ ಆಗಿದೆ ಎಂಬುದು ನನ್ನ ನಂಬಿಕೆ

[ಈ ವೀರಗಲ್ಲು ಶಿಲ್ಪದಲ್ಲಿ ಬಲಕ್ಕಿರುವ ವೀರನ ಕ್ರಿಯಾಭಂಗಿ , ಎಡಕ್ಕೆ ಎತ್ತಿದ ಕೊಡಲಿಯ ಶೈಲಿ, ಕೋಣವು(!) ಬಲಗಾಲು ಹಾಗು ಬಾಲ ಎತ್ತಿ ನಿಂತಿರುವ ಹೋರಾಟದ ಭಂಗಿ, ಹಿನ್ನೆಲೆಗಿರುವ ವೃಕ್ಷಸಂಕೇತ ಇವೆಲ್ಲ, ಹಾವಳಿಗೈಯುತ್ತಿದ್ದ ಕಾಡುಕೋಣದೊಡನೆ ಹೋರಾಡಿ ಆ ಕೋಣವನ್ನು ಕೊಂದ ವೀರನ ಶಿಲ್ಪವನ್ನು ಸೂಚಿಸಬಹುದೆ? ವೀರನು ಹೋರಾಡಲು ಬಳಸಿರುವ ಆಯುಧ ದೊಡ್ಡ ಬಾಚಿ ಕೊಡಲಿ ಆಗಿರುವುದು, ಬೆಟ್ಟದ ಸಾಲು ಹಾಗು ದುರ್ಗದ ಹಿಂಬದಿ ಪರಿಸರವು ಇರುವುದನ್ನು ಗಮನಿಸಿದರೆ ಶಿಲ್ಪದಲ್ಲಿನ ಪ್ರಾಣಿ, ಕಾಡುಕೋಣವಾಗಿರಬಹುದೆನ್ನಲು ಒಂದು ಕುರುಹು ಆಗಿರಬಹುದೆ? ವೀರಗಲ್ಲಿನ ಕೆಳಗಿನ ಪಟ್ಟಿಕೆಯು ಸವೆದಿದ್ದರೂ ಕುರುಹುಗಳು ಈ ಶಿಲ್ಪದ ಕಾಲವನ್ನು ವಿಜಯನಗರ ಕಾಲಕ್ಕೆ ಒಯ್ಯುವ ಸೂಚನೆ ನೀಡಿರಬಹುದೆ? ಕಾಡಿನಲ್ಲಿ ಇದರಂತೆಯೆ ನರಭಕ್ಷಕ ಹುಲಿಯೊಡನೆ ಹೋರಾಡಿದ ವೀರರ ಶಿಲ್ಪಗಳೂ ಕಾಡಿನ ವೃಕ್ಷಗಳ ಹಿನ್ನೆಲೆಯಲ್ಲಿ ಬಿಡಿಸಲ್ಪಟ್ಟ ವೀರಶಿಲ್ಪಗಳೂ ಇವೆ. - (ಸಂ.)]

ಡಾ|| ಎಂ. ಜಿ. ಮಂಜುನಾಥ*

ನವಶೋಧಿತ ಗುಂಡಬ್ರಹ್ಮಯ್ಯಗಳ ವಿಗ್ರಹಗಳು

ನೂತನ ಯುಗದ ಶಿವಶರಣರಲ್ಲಿ ಗುಂಡಬ್ರಹ್ಮಯ್ಯರು ಅತ್ಯಂತ ಪ್ರಮುಖರಾದವರು. ಓರಂಗಲ್ಲು ಪಟ್ಟಣದಲ್ಲಿದ್ದ ಈ ಗುಂಡಬ್ರಹ್ಮಯ್ಯರನ್ನು ಪರೀಕ್ಷಿಸಲು ಒಮ್ಮೆ ಪರಮೇಶ್ವರನು ಕಾಕತೀಯ ಅರಸನ ಮನೆಯಲ್ಲಿ ಕಳ್ಳತನ ಮಾಡಿ ಗುಂಡ ಬ್ರಹ್ಮಯ್ಯರಲ್ಲಿಗೆ ಹೋಗಿ ರಕ್ಷಣೆ ಬೇಡುತ್ತಾನೆ. ಮೊರೆ ಹೊಕ್ಕವನನ್ನು ಸಂರಕ್ಷಿಸಲು ಹೋಗಿ ಈ ಶಿವಶರಣರು ತಾವೇ ಸ್ವತಃ ಶೂಲವನ್ನೇರಿ ಪ್ರಾಣ ಬಿಡುತ್ತಾರೆ. ಕೈಲಾಸವನ್ನು ಸೇರಿ ಸದ್ಗತಿಪಡೆಯುತ್ತಾರೆ. ಈ ಕಥೆಯು ಹಲವಾರು ವೀರಶೈವ ಪುರಾಣಗಳಲ್ಲಿ ಚಿತ್ರಿತವಾಗಿದೆ.

ಗುಂಡಬ್ರಹ್ಮಯ್ಯಗಳ ವಿಗ್ರಹಗಳು ಸಾಧಾರಣವಾಗಿ ಜೋಡಿಯಾಗಿಯೇ ಇರುತ್ತವೆ. ಕೈಯ್ಯಲ್ಲಿ ಇಷ್ಟಲಿಂಗವನ್ನು ಹಿಡಿದು ಶೂಲದ ಮೇಲೆ ಕುಳಿತಿರುವ ಅಥವಾ ಶೂಲದ ಪಕ್ಕದಲ್ಲಿ ನಿಂತಿರುವ ಭಂಗಿಯಲ್ಲಿ ಈ ವಿಗ್ರಹಗಳು ದೊರೆಯುತ್ತವೆ. ಇದು ಗುಂಡ ಬ್ರಹ್ಮಯ್ಯಗಳ ವಿಗ್ರಹಗಳ ಸಾಮಾನ್ಯ ಸ್ವರೂಪ.

ಗುಂಡ ಬ್ರಹ್ಮಯ್ಯನ ಸುವ್ವಿ, ಓರುಗಲ್ಲು ಸೂರೆ, ಕವಿ ಚೆನ್ನನ ಗುಂಡ ಬ್ರಹ್ಮಯ್ಯಗಳ ಚರಿತ್ರೆ (ತ್ರಿಪದಿ ಕಾವ್ಯ). ಗುಂಡ ಬ್ರಹ್ಮಯ್ಯನ ಲಾಲಿಪದ, ಗುಂಡ ಬ್ರಹ್ಮಯ್ಯಗಳ ಕಥೆ ಮುಂತಾದ ಕೃತಿಗಳಲ್ಲಿ ಗುಂಡ ಬ್ರಹ್ಮಯ್ಯಗಳ ಸಾಹಸಗಾಥೆಯೇ ಕಾವ್ಯದ ವಸ್ತುವಾಗಿದೆ. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಗುಂಡಬ್ರಹ್ಮಯ್ಯ ಗಳ ಕಥೆಯು ಆನುಷಂಗಿಕವಾಗಿ ಚಿತ್ರಿತವಾಗಿದೆ.

ಕ್ರಿ. ಶ. ೧೧೬೦ ರಲ್ಲಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ತಮ್ಮ 'ಗಣಸಹಸ್ರ ನಾಮಾವಳಿ' ಕೃತಿಯಲ್ಲಿ ಈ ಶಿವಶರಣರನ್ನು *ಗುಂಡದ ಬ್ರಹ್ಮಯ್ಯ, ಶೂಲದ ಬ್ರಹ್ಮಯ್ಯ* ಎಂದು ಕರೆದಿದ್ದಾರೆ. ಕ್ರಿ. ಶ. ೧೫೫೦ ರಲ್ಲಿದ್ದ ನಂಜುಂಡ ದೇವನು ತನ್ನ ಕೃತಿಯಲ್ಲಿ *ಗುಂಡು ಬೊಮ್ಮಿಗಳೆಂದು* ಕರೆದಿದ್ದಾನೆ. ಕ್ರಿ. ಶ. ೧೫೬೦ರ ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರನ ಪುರಾಣದಲ್ಲಿ *ಗುಂಡು ಬ್ರಹ್ಮರು* ಎಂದು ಕರೆಯಲಾಗಿದೆ. ಕ್ರಿ. ಶ. ೧೫೮೫ರ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ *ಧೀರ ಗುಂಡ ಬೊಮ್ಮಯ್ಯ* ಎಂದು ಹೇಳಲಾಗಿದೆ. ಕ್ರಿ. ಶ. ೧೫೮೭ರ ದೇವ ಕವಿಯ ಮರುಳ ಸಿದ್ಧ ಕಾವ್ಯದಲ್ಲಿ *ಗುಂಡಯ್ಯ ಬೊಮ್ಮಯ್ಯ* ಎಂದು ಗುಂಡ ಬ್ರಹ್ಮಯ್ಯರನ್ನು ಉಲ್ಲೇಖಿಸಲಾಗಿದೆ.

ಹೀಗೆ ಸುಪ್ರಸಿದ್ಧರಾದ ಗುಂಡ ಬ್ರಹ್ಮಯ್ಯಗಳ ವಿಗ್ರಹಗಳು ಹಾಗೂ ದೇವಾಲಯಗಳು ಕರ್ನಾಟಕದಾದ್ಯಂತ ಅಲ್ಲಲ್ಲಿ ದೊರೆತಿವೆ. ಗುಂಡ ಬ್ರಹ್ಮಯ್ಯಗಳ ವಿಗ್ರಹಗಳನ್ನು *ಶೂಲಬ್ರಹ್ಮ* ಎಂದೂ ಸಹ ಕರೆಯಲಾಗುತ್ತದೆ. ಗುಂಡೇನಹಳ್ಳಿಯಲ್ಲಿ ಗುಂಡಬ್ರಹ್ಮಯ್ಯಗಳ ದೇವಾಲಯ, ವಿಗ್ರಹ ಹಾಗೂ ಶೂಲಸ್ತಂಭ ಗಳಿವೆ. ಇದುವರೆಗೆ ಗುಂಡ ಬ್ರಹ್ಮಯ್ಯಗಳ ವಿಗ್ರಹಗಳು ಹಾವೇರಿ, ಗುಂಡೇನಹಳ್ಳಿ, ಕುಸಕೂರು, ಚಿತ್ರದುರ್ಗ, ಬನವಾಸಿ, ನೀತಿಗೆರೆ, ಬಳ್ಳಾರಿ, ಯಳಂದೂರು, ಹರದನಹಳ್ಳಿ ಮುಂತಾದ ಕಡೆ ಪತ್ತೆಯಾಗಿದ್ದವು. ಬನವಾಸಿಯಲ್ಲಿ ದೊರೆತ ಗುಂಡ ಬ್ರಹ್ಮಯ್ಯಗಳ ಶಿಲ್ಪದ ಕೆಳಭಾಗದಲ್ಲಿ ಅವರ ಹೆಸರನ್ನು ಶಾಸನ ರೂಪದಲ್ಲಿ ಗುಂಡಯ್ಯ ಬ್ರಹ್ಮಯ್ಯ ಎಂದು ಬರೆಯಲಾಗಿದೆ.

ಇತ್ತೀಚೆಗೆ ಕ್ಷೇತ್ರಕಾರ್ಯದ ವೇಳೆಯಲ್ಲಿ ನನಗೆ ದೊರೆತ ಕೆಲವು ಗುಂಡ ಬ್ರಹ್ಮಯ್ಯಗಳ ವಿಗ್ರಹಗಳ ಬಗ್ಗೆ ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

ದೊಡ್ಡ ಗದ್ದವಳ್ಳಿಯ ಗುಂಡ ಬ್ರಹ್ಮಯ್ಯಗಳ ಶಿಲ್ಪಗಳು: ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯಕ್ಕೆ ಹೋಗುವ ದಾರಿಯಲ್ಲಿ ಬಲಭಾಗದ ಒಂದು ಸಣ್ಣ ದಿಣ್ಣೆಯ ಮೇಲೆ ಈಗ ಶಿವಾಲಯವಾಗಿ ಪರಿವರ್ತಿತ ವಾಗಿರುವ ಒಂದು ಜೈನ ಬಸದಿಯಿದೆ. ಆ ದೇವಾಲಯದ ಮುಖಮಂಟಪದ ಹೊರಗೆ ಎರಡೂ ಬದಿಗಳಲ್ಲಿ ಗುಂಡ ಬ್ರಹ್ಮಯ್ಯರ ವಿಗ್ರಹಗಳಿವೆ.


* ಕನ್ನಡ ಉಪನ್ಯಾಸಕರು, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.



ತಿಳಿಹಸಿರು ಬಣ್ಣದ ಬಳಪದ ಕಲ್ಲಿನಲ್ಲಿ ಈ ವಿಗ್ರಹಗಳನ್ನು ಕೆತ್ತಲಾಗಿದೆ. ತಮ್ಮ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ತ್ರಿಭಂಗಿಯಲ್ಲಿ ನಿಂತಿರುವ ಗುಂಡ ಬ್ರಹ್ಮಯ್ಯರು ಕೊರಳಿನಲ್ಲಿ ರುದ್ರಾಕ್ಷಿಯ ಹಾರ ಹಾಗೂ ಜನಿವಾರದ ರೀತಿಯಲ್ಲಿ (ಶಿವದಾರ) ರುದ್ರಾಕ್ಷಿಯ ಸರವನ್ನೇ ಧರಿಸಿದ್ದಾರೆ.* ತೋಳುಗಳಲ್ಲಿ ತೋಳ ಬಂದಿ, ಕೈಗಳಲ್ಲಿ ಕಂಕಣ, ಕಾಲುಗಳಲ್ಲಿ ಕಾಲಂದುಗೆ, ಕಿವಿಗಳಲ್ಲಿ ಕರ್ಣಕುಂಡಲ, ತಲೆಯ ಮೇಲೆ ಕರಂಡ ಮಕುಟಗಳನ್ನು ಧರಿಸಿದ್ದಾರೆ. ಅವರು ಧರಿಸಿರುವ ಕಚ್ಚೆ ಪಂಚೆ ಹಾಗೂ ಕಟಿವಸ್ತ್ರಗಳು ಸಹಾ ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ನೈಪುಣ್ಯತೆಯಿಂದ ಕಂಡರಿಸಿದ್ದಾನೆ.

ಸಾಧಾರಣವಾಗಿ ಗುಂಡಬ್ರಹ್ಮಯ್ಯಗಳ ವಿಗ್ರಹಗಳು ಒಂದೇ ಶಿಲಾಫಲಕವ ಮೇಲೆ ಜೋಡಿಯಾಗಿರುವುದು ಕಂಡು ಬರುತ್ತದೆ. ಆದರೆ ದೊಡ್ಡಗದ್ದವಳ್ಳಿಯಲ್ಲಿ ಪ್ರಸ್ತುತ ದೊರೆತಿರುವ ಶಿಲ್ಪಗಳು ಮಾತ್ರ ಬೇರೆ ಬೇರೆಯಾಗಿ ಎರಡು ಪ್ರತ್ಯೇಕ ಶಿಲ್ಪಗಳಾಗಿರುವುದು ಒಂದು ವಿಶೇಷವೆಂದು ಹೇಳಬಹುದು.

ಹಾರನ ಹಳ್ಳಿಯ ಶಿಲ್ಪಗಳು : ಹಾಸನ ಜಿಲ್ಲೆಯ ಹಾರನಹಳ್ಳಿಯ ಈಶ್ವರ ದೇವಾಲಯದ ನವರಂಗದಲ್ಲಿನ ದೇವಕೋಷ್ಠದಲ್ಲಿ ಗುಂಡಬ್ರಹ್ಮಯ್ಯಗಳ ವಿಗ್ರಹವಿರುವ ಒಂದು ಶಿಲಾಫಲಕವಿದೆ. ಎರಡು ಅಡಿ ಅಗಲ ಹಾಗೂ ಒಂದು ಅಡಿ ಎತ್ತರದ ನಸುಗಪ್ಪು ಬಣ್ಣದ ಬಳಪದ ಕಲ್ಲಿನ ಫಲಕದಲ್ಲಿ ಉಬ್ಬು ಶಿಲ್ಪದಂತೆ ಈ ವಿಗ್ರಹಗಳನ್ನು ಕೆತ್ತಲಾಗಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ತ್ರಿಲೋಕಮಂಟಪದ ಪೀಠದಲ್ಲಿರುವ ಗುಂಡ ಬ್ರಹ್ಮಯ್ಯಗಳ ವಿಗ್ರಹಗಳನ್ನು ಹೋಲುವ ಈ ಶಿಲ್ಪಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಶಿಲ್ಪಗಳ ವೈಶಿಷ್ಟ್ಯತೆ ತಿಳಿಯುತ್ತದೆ. ಬನವಾಸಿಯ ಶಿಲ್ಪದಲ್ಲಿರುವಂತೆ ಇಲ್ಲಿಯೂ ಎರಡು ತ್ರಿಶೂಲಗಳ ಇಕ್ಕೆಲಗಳಲ್ಲಿ ಗುಂಡಬ್ರಹ್ಮಯ್ಯರು ನಿಂತಿರುವಂತೆ ಕೆತ್ತಲಾಗಿದೆ. ಆದರೆ ಬನವಾಸಿಯ ಶಿಲ್ಪದಲ್ಲಿ ಗುಂಡ ಬ್ರಹ್ಮಯ್ಯರು ಸಮಪಾದ ಭಂಗಿಯಲ್ಲಿ ಕೈಗಳನ್ನು ಮುಗಿದು ನಿಂತಿದ್ದರೆ, ಹಾರನಹಳ್ಳಿಯ ಶಿಲಾಫಲಕದಲ್ಲಿನ ಎಡ ಭಾಗದಲ್ಲಿರುವ ಶಿಲ್ಪವು ಕಮಂಡಲುವನ್ನು ಬಲತೋಳಿನಲ್ಲಿ ತೂಗು ಹಾಕಿಕೊಂಡು ತನ್ನ ಬಲಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ತನ್ನ ಎಡಗೈಯಲ್ಲಿ ಕಠಾರಿಯನ್ನು ಹಿಡಿದು ಬಲಗಾಲನ್ನು ಮುಂದಿಟ್ಟು ಆಲೀಢಾಸನದಲ್ಲಿ ನಿಂತಿರುವಂತೆ ಶಿಲ್ಪಿತವಾಗಿದೆ. ಶಿಲಾಫಲಕದ ಬಲಭಾಗದಲ್ಲಿನ ಶಿಲ್ಪವು ಎಡಗಡೆಯಲ್ಲಿರುವ ಶಿಲ್ಪಕ್ಕೆ ಸಂಪೂರ್ಣವಾಗಿ ವಿರುದ್ಧ ಭಂಗಿಯದಾಗಿದೆ. ಅಂದರೆ ತನ್ನ ಎಡಗಾಲನ್ನು ಮುಂದಿಟ್ಟು ಎಡಗೈಯಲ್ಲಿ ಕಮಂಡಲುವನ್ನು ತೂಗುಹಾಕಿಕೊಂಡು



ಬಲಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ನಿಂತಿರುವಂತೆ ಈ ಶಿಲ್ಪವನ್ನು ಕೆತ್ತಲಾಗಿದೆ. ಈ ಎರಡೂ ಶಿಲ್ಪಗಳ ಮಧ್ಯದಲ್ಲಿ ಎರಡು ತ್ರಿಶೂಲಗಳಿವೆ.

---

* ಗುಂಡಬ್ರಹ್ಮಯ್ಯರು ಲೇಖನದಲ್ಲಿರುವಂತೆ ಬಸವ ಪೂರ್ವಯುಗದವರೆಂಬ ಅಭಿಪ್ರಾಯವಾದರೆ, ಬಸವ ಪೂರ್ವಯುಗದಲ್ಲಿಯೆ ಇಷ್ಟಲಿಂಗಧಾರಿ ವೀರಶೈವರಲ್ಲಿ ಶಿವದಾರದಂತೆ ರುದ್ರಾಕ್ಷಿ ಶಿವದಾರ ಧಾರಣೆ ಪ್ರಚಲಿತವಿತ್ತೆನ್ನಲು ಈ ಶಿಲ್ಪಗಳೂ ಸಾಕ್ಷಿ ಎಂಬುದಾದರೆ ಈ ಶೋಧ ಮತ್ತೂ ಗಮನಾರ್ಹ.
- (ಸಂ.)

ನಂದಿಯ ಶಿಲ್ಪಗಳು : ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಬೆಟ್ಟದ ಮೇಲಿರುವ ಯೋಗನಂದೀಶ್ವರ ದೇವಾಲಯದ ನವರಂಗದಲ್ಲಿ ಗುಂಡ ಬ್ರಹ್ಮಯ್ಯಗಳ ವಿಗ್ರಹವಿರುವ ಒಂದು ಶಿಲಾಫಲಕವಿದೆ. ಎರಡು ಅಡಿ ಅಗಲ ಹಾಗೂ ಎರಡು ಅಡಿ ಉದ್ದದ ಬಳಪದ ಕಲ್ಲಿನ ಫಲಕದ ಮೇಲೆ ಈ ವಿಗ್ರಹಗಳನ್ನು ಕೆತ್ತಲಾಗಿದೆ. ಹಾವೇರಿಯ ಹಾಗೂ ಗುಂಡೇನ ಹಳ್ಳಿಯ ವಿಗ್ರಹಗಳಂತೆ ಈ ವಿಗ್ರಹವನ್ನು ಸಹ ಶೂಲಗಳ ಮೇಲೆ ಗುಂಡ ಬ್ರಹ್ಮಯ್ಯರು ಕುಳಿತಿರುವಂತೆ ಕೆತ್ತಲಾಗಿದೆ. ಆದರೆ ಹಾವೇರಿಯ ಹಾಗೂ ಗುಂಡೇನಹಳ್ಳಿಯ ವಿಗ್ರಹಗಳ ಕೈಗಳಲ್ಲಿ ಕಠಾರಿಗಳಿಲ್ಲ. ನಂದಿಯ ಈ ಶಿಲ್ಪಗಳ ಎಡಗೈಗಳಲ್ಲಿ ಇಷ್ಟಲಿಂಗ ವಿದ್ದರೆ ಬಲಗೈಗಳಲ್ಲಿ ಕಠಾರಿಗಳಿವೆ.



ದೊಡ್ಡ ಗದ್ದವಳ್ಳಿ ಹಾಗೂ ಹಾರನಹಳ್ಳಿಯವು ಹೊಯ್ಸಳರ ಕಾಲದ್ದಾಗಿದ್ದು ಕ್ರಿ. ಶ. ಸುಮಾರು ಹದಿಮೂರನೆಯ ಶತಮಾನಕ್ಕೆ ಸೇರಿದ ಶಿಲ್ಪಗಳೆಂದು ಗುರುತಿಸಬಹುದು. ನಂದಿಯ ಶಿಲ್ಪಗಳು ಕ್ರಿ. ಶ. ಸುಮಾರು ಹದಿನೈದನೆಯ ಶತಮಾನದ್ದೆಂದು ಅವುಗಳ ಶಿಲ್ಪ ಸ್ವರೂಪದಿಂದ ಗುರುತಿಸಬಹುದು.

ಈ ಮೂರೂ ಶಿಲ್ಪಗಳಿಗಿಂತಲೂ *ಶಿವಮೊಗ್ಗದಲ್ಲಿರುವ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯ ದಲ್ಲಿರುವ ಗುಂಡಬ್ರಹ್ಮಯ್ಯಗಳ ಶಿಲ್ಪವು* ಸುಂದರವಾಗಿದೆಯೆಂದು ಹೇಳಬಹುದು. ತುಂಬಾ ಸೂಕ್ಷ್ಮವಾದ ಕುಸುರಿ ಕೆಲಸದಿಂದ ಕೂಡಿರುವ ಈ ಶಿಲ್ಪವು ಅತ್ಯಂತ ಆಕರ್ಷಕವಾಗಿದೆ. ಈ ವಿಗ್ರಹಗಳ ತಲೆಯ ಮೇಲೆ ಬೆಳ್ಗೊಡೆಯಿದೆ. ಹಿಂಭಾಗದಲ್ಲಿ ಪ್ರಭಾವಳಿಯಿದ್ದು ಪ್ರಭಾವಳಿಯ ಮೇಲ್ಭಾಗದಲ್ಲಿ ಸಿಂಹಲಲಾಟವಿದೆ. ಈ ವಿಗ್ರಹವು ಮೂಲತಃ ಎಲ್ಲಿತ್ತೆಂಬ ಮಾಹಿತಿ ಉಪಲಬ್ಧವಿಲ್ಲ.

ಡಾ|| ಎಂ. ಎಂ. ಕಲ್ಬುರ್ಗಿಯವರು "ಶಾಸನಗಳಲ್ಲಿ ಶಿವಶರಣರು" ಎಂಬ ಕೃತಿಯಲ್ಲಿ ಗುಂಡ ಬ್ರಹ್ಮಯ್ಯರು ಬಸವೋತ್ತರ ಯುಗದ ಶಿವಶರಣರು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧] ಡಾ|| ವಿ. ಶಿವಾನಂದ ಅವರೂ ಸಹ ಗುಂಡಬ್ರಹ್ಮಯ್ಯರು ಕಾಕತೀಯ ದೊರೆ ಗಣಪತಿ ರಾಜನ ಕಾಲದಲ್ಲಿ (ಕ್ರಿ. ಶ. ೧೧೯೯-೧೨೬೨) ಶೂಲಕ್ಕೇರಿದರು ಎಂದು ಅಭಿಪ್ರಾಯಪಟ್ಟಿದ್ದಾರೆ.[೨]

ಆದರೆ ಶ್ರೀ ಮ. ಮಲ್ಲಪ್ಪನವರು ತಮ್ಮ **ಓರುಗಲ್ಲು ಸೂರೆ** *ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಗುಂಡ ಬ್ರಹ್ಮಯ್ಯರು ಬಸವಪೂರ್ವ ಯುಗದವರೆಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಪ್ರಕಾರ ಕ್ರಿ. ಶ. ೧೦೧೨ರಲ್ಲಿದ್ದ ರಾಜೇಂದ್ರಚೋಳನ ನೆರೆಯ ರಾಜ ಘನಪತಿರಾಯ. ಈತನೂ ಸಹ ಚೋಳ ವಂಶದವನೇ. ಈತನ ಸಮೀಪದ ಕಾಲದಲ್ಲಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯ (ಕ್ರಿ. ಶ. ೧೧೬೦) ಗುಂಡ ಬ್ರಹ್ಮಯ್ಯನ ಹಿರಿಮೆಯನ್ನು ಮನಗಂಡು ತನ್ನ ಗಣಸಹಸ್ರ ನಾಮಾವಳಿಯಲ್ಲಿ ಗುಂಡ ಬ್ರಹ್ಮಯ್ಯಗಳ ಹೆಸರನ್ನು ಉಲ್ಲೇಖಿಸಿದ್ದಾನೆ. ಆದ್ದರಿಂದ ಗುಂಡ ಬ್ರಹ್ಮಯ್ಯನ ಕಾಲ ಕ್ರಿ. ಶ. ೧೦೧೨ ಎಂದು ಮಲ್ಲಪ್ಪನವರ ಅಭಿಪ್ರಾಯ.*[೩]

ಗುಂಡ ಬ್ರಹ್ಮಯ್ಯಗಳ ವೀರ ವ್ರತ, ನೇಮ-ನಿಷ್ಠೆಗಳಿಗೆ ಮಾರುಹೋದ ಬಸವಣ್ಣನು ನನಗೆ ಇಕ್ಕುವ ಶೂಲ ಪ್ರಾಪ್ತಿಸಲಿ ಎಂದು ಪ್ರಾರ್ಥಿಸಿದ್ದಾನೆ. ಈ ಎಲ್ಲಾ ಆಧಾರಗಳಿಂದ ಗುಂಡ ಬ್ರಹ್ಮಯ್ಯರು ಬಸವ ಪೂರ್ವಯುಗದವರೆಂದು ಹೇಳಬಹುದು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಡಾ|| ಎಂ. ಎಂ. ಕಲ್ಬುರ್ಗಿ : **ಶಾಸನಗಳಲ್ಲಿ ಶಿವಶರಣರು**, ಪುಟ ೧೧೩.

*೨. ಡಾ|| ವಿ. ಶಿವಾನಂದ : **ಗುಂಡ ಬ್ರಹ್ಮಯ್ಯಗಳ ಚರಿತ್ರೆ, ಪೀಠಿಕೆ**, ಪುಟ ೧೪.

*೩. ಮ. ಮಲ್ಲಪ್ಪ : **ಓರುಗಲ್ಲು ಸೂರೆ**, ಪುಟ ೫.

ಡಾ|| ಕೆ. ರವೀಂದ್ರನಾಥ*

ಗುಂಡಬ್ರಹ್ಮಯ್ಯಗಳು : ಒಂದು ದಾಖಲೆ

ಕಲ್ಯಾಣ ಕ್ರಾಂತಿಯಿಂದ ಕೆಲಕಾಲ ನೆಲದ ಮರೆಯ ನಿಧಾನ ದಂತಿದ್ದ ಶರಣರನ್ನು, ಶರಣ ಸಾಹಿತ್ಯ ನಿಕ್ಷೇಪವನ್ನು ಸಂರಕ್ಷಿಸಿ ಸಂಕಲಿಸುವ ಗುರುತರವಾದ ಜವಾಬ್ದಾರಿಯನ್ನು ನಾಡಿನ ಕೆಲವು ಅರಮನೆ ಗುರುಮನೆಗಳು ಹೊತ್ತುಕೊಂಡವು. ಓರಂಗಲ್ಲಿನ ಕಾಕತೀಯರು, ವಿಜಯನಗರದ ಸಂಗಮ ಅರಸರು, ನೂರಾರು ವೀರಶೈವ ಮಠ-ಮಾನ್ಯಗಳ ತೀವ್ರ ಕಾಳಜಿಯಿಂದಾಗಿ ವೀರಶೈವ ಧರ್ಮ, ಸಾಹಿತ್ಯ ಸಂಸ್ಕೃತಿಯ ಕೆಲವು ಮಹತ್ವದ ದಾಖಲೆಗಳು ದೊರೆಯುವಂತಾಗಿವೆ. ಅವುಗಳಲ್ಲಿ ಗುಂಡಬ್ರಹ್ಮಯ್ಯಗಳ ಚರಿತ್ರೆಯೂ ಒಂದು.(೧)


ಗುಂಡಬ್ರಹ್ಮಯ್ಯಗಳ ಉಲ್ಲೇಖ ಕನ್ನಡ ಕಾವ್ಯ ಪುರಾಣ ಗಳಾದ ಗಣ ಸಹಸ್ರನಾಮಾವಳಿ (ಮಲ್ಲಿಕಾರ್ಜುನ ಪಂಡಿತಾರಾಧ್ಯ - ೧೧೬೦); ಸಾನಂದಪುರಾಣ (ಕುಮಾರ ಪದ್ಮರಸ - ೧೨೬೫); ಪದ್ಮರಾಜಪುರಾಣ (ಪದ್ಮಣಾಂಕ - ೧೩೮೫); ಬಸವ ಪುರಾಣ (ಭೀಮಕವಿ - ೧೩೬೯); ಶಿವತತ್ವ ಚಿಂತಾಮಣಿ (ಲಕ್ಕಣ್ಣದಂಡೇಶ - ೧೪೩೦); ವೀರಶೈವಾಮೃತ ಪುರಾಣ (ಗುಬ್ಬಿ ಮಲ್ಲಣಾರ್ಯ - ೧೫೧೩); ಭೈರವೇಶ್ವರ ಕಾವ್ಯ (ನಂಜುಂಡದೇವ - ೧೫೫೦); ಪಾಲ್ಕುರಿಕೆ ಸೋಮೇಶ್ವರ ಪುರಾಣ (ವಿರಕ್ತ ತೋಂಟದಾರ್ಯ - ೧೫೬೦); ಮರುಳ ಸಿದ್ಧಕಾವ್ಯ (ದೇವಕವಿ - ೧೫೮೭); ಗುರುರಾಜ ಚಾರಿತ್ರ (ಸಿದ್ಧನಂಜೇಶ - ೧೬೫೦); ಬಸವೇಶ್ವರ ವಚನ ಕಥಾಸಾರ (ಪರ್ವತ ಶಿವಯೋಗಿ - ೧೬೫೦); ಮುಂತಾದವುಗಳಲ್ಲದೆ, ಉತ್ತರ ಕರ್ನಾಟಕದ ಹಂತಿಯ ಹಾಡುಗಳಲ್ಲಿ; ದಕ್ಷಿಣ ಕರ್ನಾಟಕದ ವೃತ್ತಿಗಾಯಕರಾದ ನೀಲಗಾರರು ಹಾಗೂ ಕಂಸಾಳೆಯವರಲ್ಲಿ ಸುದೀರ್ಘವಾದ ಜನಪದ ಕಾವ್ಯ ಹುಟ್ಟಿಕೊಂಡು ಬಂದಿದೆ.

ಈ ಮೇಲೆ ಉಲ್ಲೇಖಿಸಲಾದ ಕಾವ್ಯಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಗುಂಡ ಬ್ರಹ್ಮಯ್ಯರ ಜೀವನ ವೃತ್ತಾಂತ ಮೊರೆಹೊಕ್ಕ ಶಿವನ ಸಂರಕ್ಷಣೆಗಾಗಿ ಶೂಲವೇರಿ ಸಾವನ್ನಪ್ಪಿ ಕೈಲಾಸ ಪದವಿ ಪಡೆದ ವೀರಭಕ್ತರ ಚರಿತ್ರೆಯಂತೆ ನಿರೂಪಿತವಾಗಿದೆ. ಚನ್ನಬಸವ ಪುರಾಣದಲ್ಲಿ ಮಾತ್ರ ಬಿಜ್ಜಳನನ್ನು ಕೊಂದ ಜಗದೇವ - ಮಲ್ಲಿಬೊಮ್ಮಣ್ಣರೇ, ಶಿವನಾಜ್ಞೆಯಂತೆ ಓರಂಗಲ್ಲು ಪಟ್ಟಣದಲ್ಲಿ ಗುಂಡ ಬ್ರಹ್ಮಯ್ಯರಾಗಿ ಜನಿಸಿದರು. ಇವರ ಭಕ್ತಿ ಪರೀಕ್ಷೆಗಾಗಿ ಕಳ್ಳನ ವೇಷಧಾರಿಯಾದ ಶಿವನು ಕಾಕತೀಯ ಗಣಪತಿರಾಯನ ಮನೆಗೆ ಕನ್ನವಿಕ್ಕಿ ಓಡಿಬಂದು ಗುಂಡಬ್ರಹ್ಮಯ್ಯರ ಆಶ್ರಯ ಬಯಸುತ್ತಾನೆ. ಆಶ್ರಿತರಿಗೆ ಅಭಯಹಸ್ತ ನೀಡಿ ಸಂರಕ್ಷಿಸುವ ಕರ್ತವ್ಯಕ್ಕೆ ಕಟ್ಟುಬಿದ್ದ ಇವರು ರಾಜಾಜ್ಞೆಯಂತೆ ಶೂಲವೇರಲು ಮುಂದಾದರೆಂದು ಇತರ ಕಾವ್ಯಗಳಿಗಿಂತ ಭಿನ್ನವಾಗಿ ಇವರ ಜನನ ವೃತ್ತಾಂತವನ್ನು ತಿಳಿಸುತ್ತಾನೆ. ಪ್ರಸ್ತುತ ದಾಖಲೆಯ ಪ್ರಕಾರ ಗುಂಡ ಬ್ರಹ್ಮಯ್ಯರ ಜನನ - ಜನನಕ್ಕೆ ಕಾರಣ, ಸ್ಥಳನಾಮ, ವಂಶಾವಳಿ, ದೀಕ್ಷಾ, ಕಾಯಕ, ಪಾಪಸೂತಕ ಹಾಗೂ ಸಾಂಸ್ಕೃತಿಕ ಆಚಾರ-ವಿಚಾರಗಳನ್ನು ಕುರಿತ ಸಂಗತಿಗಳು ತಿಳಿದುಬರುತ್ತವೆ.

ದಾಖಲೆಯ ಸ್ವರೂಪ : ಕೋರಿಕಾಗದದಲ್ಲಿ ಬರೆದು ಕಾಗದ ಹಿಂಬದಿಯಲ್ಲಿ ತೆಳ್ಳನೆಯ ಅರಿವೆ (ಬಟ್ಟೆ)ಯನ್ನು ರಕ್ಷಣೆಗಾಗಿ ಅಂಟಿಸಲಾಗಿದೆ, ಸುರುಳಿ ಮಾಡಿರುತ್ತದೆ. ೭೮" ಉದ್ದ ೧೩" ಅಗಲವಿರುವ ಈ ದಾಖಲೆಯಲ್ಲಿ ಪತ್ರಕ್ಕೆ ಸಂಬಂಧಿಸಿದಂತೆ ರೇಖಾಚಿತ್ರ ಹಾಕಲಾಗಿದೆ. ಶಾಸನೋಕ್ತ ಶೈವ ಸ್ತುತಿ "ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರ ಚಾರವೇ!....." ಎಂಬ ಶ್ಲೋಕದಿಂದ ದಾಖಲೆ ಪ್ರಾರಂಭವಾಗುತ್ತದೆ. ಪ್ರತಿಕಾರರ ಹೆಸರು ಹಾಗೂ ಪ್ರತಿ ಮಾಡಿದ ಕಾಲದ ಉಲ್ಲೇಖ ಇರುವುದಿಲ್ಲ. ಗುಂಡಬ್ರಹ್ಮಯ್ಯರ ಜನನಕ್ಕೂ ಮೊದಲು ಜಗತ್ ಸೃಷ್ಟಿಯ ಬಗೆಯನ್ನು ಸುದೀರ್ಘವಾದ ಗದ್ಯ ಪ್ರಕಾರದಲ್ಲಿ ತಿಳಿಸುತ್ತದೆ.

ಗುಂಡಬ್ರಹ್ಮಯ್ಯರ ಜನನ - ವಂಶಾವಳಿ ವಿಚಾರ : ಬಿಜ್ಜಳನನ್ನು ಕೊಂದು ಶಿವನಾಜ್ಞೆಯಂತೆ ಜಗದೇವ ಮಲ್ಲಿಬೊಮ್ಮಣ್ಣರಾಗಿ ಓರಂಗಲ್ಲಿನಲ್ಲಿ ಗುಂಡು ಬ್ರಹ್ಮಯ್ಯರಾಗಿ ಜನಿಸಿದವರಾಗಿರದೆ, ಆದಿರುದ್ರನ ಸೇವೆಯಲ್ಲಿದ್ದ ಕಚರನೆಂಬ

* ಅಧ್ಯಾಪಕರು, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ, ಕಮಲಾಪುರ - ೫೮೩ ೨೭೧.




ಗುಂಡಗ ಬ್ರಹ್ಮಯ್ಯರ ದಾಖಲೆ ಪ್ರತಿ

ಶಾಪಗ್ರಸ್ತ ಗಾಂಧರ್ವನೆ ಗುಂಡಬ್ರಹ್ಮಯ್ಯರ ಜನನಕ್ಕೆ ಆದಿಪುರುಷ ನೆಂಬುದನ್ನು ದಾಖಲೆ ಹೀಗೆ ವಿವರಿಸುತ್ತದೆ.

"ಆದಿ ರುದ್ರಮೂರ್ತಿ ತ್ರಿಪುರವನ್ನು ಸಂಹಾರ ಮಾಡಿ ಬರುವಾಗ ಕಚರನೆಂಬ ಗಾಂಧರ್ವನು ಆದಿರುದ್ರನ ಹತ್ತಿರ ಸೇವೆಯಲ್ಲಿದ್ದನು. ದಕ್ಷಿಣ ದಿಕ್ಕಿನಲ್ಲಿ ಘಟಚಕ್ರದಾಕಾರವಾಗಿ ವಾಸನವೆಂಬ ಕುಂಬೇಶ್ವರ ಲಿಂಗವು। ವಾಯುವೆಂಬ ಶಕ್ತ ಆಧಾರದಿಂದ ತಿರುಗುತ್ತಯಿತ್ತು। ಯಿೂ ಗಾಂಧರ್ವನು ನೋಡಿ ಪ್ರಕಾಶ ಜ್ವಾಲ ಬಂಧನಗಳಿಂದ। ತಪವಂ ಬಲಿದು ಆದಿರುದ್ರನನ್ನು ವಲಿಸಿದನು। ಯಿವನ ತಪೋಬಲಕ್ಕೆ ಮೆಚ್ಚಿ ಯೇನು ಬೇಡುತ್ತಿ ಬೇಡು ಯನಲು ಸ್ವಾಮಿ ಯಿೂ ವಾಯು ಆಧಾರವಾಗಿ ತಿರುಗುವ ಲಿಂಗವು ಯಾಕೆ ತಿರುಗುತ್ತದೆ ಯಿದನ್ನು ಯಾರು ಮಾಡಿದರು। ಯೆಂದು ಕೇಳಲು। ಆದಿರುದ್ರನು ಕೋಪವನ್ನು ತಾಳಿ ಶಾಪವಂ ಕೊಟ್ಟನು। ಯಿೂ ಶಾಪ ನನಗೆ ಸಂಭವಿಸಿತೆಂದು। ಲಿಂಗವಂ ಪಿಡಿದು ನಿಂತುಕೊಳ್ಳಲು। ರುದ್ರನು ನಂದೀಶ್ವರನಂ ಪಿಡಿದು। ಯಿೂ ಗಾಂಧರ್ವನಿಗೆ ಲಿಂಗಾ ಪ್ರತಿಷ್ಠೆ ಮಾಡಿಕೊಟ್ಟನು। ಸ್ವಾಮಿ ಯಿೂ ಶಾಪ ಹ್ಯಗೆ ನಿಶ್ಯಾಪವಾಗುತ್ತವುದೆಂದು ಕೇಳಲು। ರುದ್ರಮೂರ್ತಿಯು ಹೇಳಿದನು ಯಲೋ ಗಾಂಧರ್ವನೇ ಯಿದೇ ಚಕ್ರದ ಮ್ಯಲೆ। ಮ್ರುತ್ಯುಶಿಯ ಬಾಂಡಗಳು। ಲಿಂಗಾಕೃತಿಯ ಮಾಡಿ ಶಿವಜಂಗಮದ ಶೇವೆ ಮಾಡಿದರೆ ಯಿೂ ಶಾಪ ನಿಶ್ಯಾಪ ಆಗುವುದೆಂದು ಹೇಳಲು। ಸ್ವಾಮಿ ಚಕ್ರವು ಹ್ಯಗೆ ನನಗೆ ಸಾಧ್ಯವಾಗುವುದು ಯಿದರ ಅಭಿಪ್ರಾಯವೆನೆಂದು। ಕೇಳಲು। ಆವಾಗ ರುದ್ರಮೂರ್ತಿಯು ಹೇಳಿದನು। ಅಕಾರವೇ ಆಡಿಯ ಸೂಲದ ಗೂಟ। ಚಕಾರವೇ ಚಕ್ರ ಬಕಾರವೇ ಬ್ಯೆತ್ರ ಶಿಕಾರವೇ ಶೀಳುವ ಜನಿವಾರ। ಯಿೂ ಪ್ರಕಾರ ಚಕ್ರದ ಆಧಾರ। ನಿನಗೆ। ಪಂಚಾಕ್ಷರಿಯೇ ಆಧಾರ। ಗುರುಪಂಚಾಕ್ಷರೀ। ಹರಪಂಚಾಕ್ಷರಿ। ಶಿವಪಂಚಾಕ್ಷರಿ। ಪಾರ್ವತಿ ಪಂಚಾಕ್ಷರಿ। ಆತ್ಮ ಪಂಚಾಕ್ಷರಿ। ಯಿವುಗಳನ್ನು ಜಪಿಸಿದರೆ ನಿನಗೆ ಸಾಧ್ಯವಾಗುವುದೆಂದು ಹೇಳಿ ಅದೃಶ್ಯವಾದನೂ। ಯಿೂ ಗಾಂಧರ್ವನು ಗಧಗಧ ನಡುಗಿ ಅದೃಶ್ಯವಾಗಿ। ಆದಿರುದ್ರನ ಪಾದಧೂಳದಲ್ಲಿ ಜನಿಸಿ ಕೋಲಾಹಲ ಗುಂಡ್ಯೆಯ್ಯನೆಂದು ಪೆಸರಂ ಪಡೆದನು। ಯಿತಗೆ ಕುಲಮಹಾಸ್ವಾಮಿ ಕುಂಭೇಶ್ವರಾಲಿಂಗ। ಯಿೂತನ ಗೋತ್ರ ವೃಷಭ ಗೋತ್ರ। ದರಗ ಸಿಂಹಾಸನ। ಚಕ್ರದ ಮಡನೊಳಕಲ್ಲು ಬ...ಯಿೂ ಪ್ರಕಾರ ಕೊಟ್ಟು। ಯಿತನು ಯಿದೆ ಚಕ್ರದ ಮ್ಯಲೆ ಮ್ರುತ್ಯುಕಿಯ ಬಾಂಡಗಳು ಗಿಳಿಯಲು ಲಿಂಗದ ಭಟ್ಟಲುಗಳಂ ಮಾಡಿ ಶಿವಜಂಗಮ ಶೇವೆಯಲ್ಲು ಯಿಧನು। ಆವಾಗ। ತ್ರೈತಾಯುಗದಲ್ಲು ಕುಂಭಜ ರುಷಿಯ ಕರುಣದಿಂದ ಯಿಭರು ಮಕ್ಕಳಂ ಪಡೆದನು। ಯಿವರ ನಾಮಾ। ಗುಂಡಯ್ಯ ಬ್ರಹ್ಮಯ್ಯ। ನೆಂದು ಪ್ಯೆಸರಂ ನಿಟ್ಟು। ಗುಂಡಯ್ಯಗೆ ಶಿವಕ್ಕ ಬ್ರಹ್ಮಯ್ಯಗೆ ಮಹದೇವಕ್ಕ ಯಿವರ ಲಗ್ನ ಮಾಡಿ ಬಳಿಕಾ। ಕುಂಬೇಶ್ವರನ ಕರುಣದಿಂದ ಗಂಡು ಮಕ್ಕಳಂ ಪಡೆದರು। ಯಿವರ ನಾಮ ಆದಿತ್ಯ ಗುಂಡ ಚಕ್ರಿಯ ಗುಂಡ। ಯಿವರ ಮಕ್ಕಳು ಗುಂಡಪ್ಪ ಬ್ರಹ್ಮಪ್ಪ। ಯಿವರು ಕ್ಯೆಲಾಸಪುರದ ಶಿವಮಯ್ಯನ ಮಗಳು ಚನ್ನಮ್ಮನ ಗುಂಡ್ಯೆಯ್ಯಗೆ ಲಗ್ನ ಮಾಡಿದ ಬಳಿಕಾ। ಕ್ಯೆಲಾಸಪುರದಲ್ಲಿ ಶಿವಜಂಗಮದ ಶೇವಾದಲ್ಲು ಯಿಧರು।

ಈ ಮೇಲಿನ ವಿವರಣೆಯಿಂದ ಗುಂಡ ಬ್ರಹ್ಮಯ್ಯರ ಜನನ-ವಂಶಾವಳಿಯನ್ನು ಈ ರೀತಿ ಕಟ್ಟಿಕೊಡಬಹುದು:



೧. *ಗುಂಡಬ್ರಹ್ಮಯ್ಯರ ವಂಶ ಆದಿರುದ್ರನ ಸೇವಕನಾದ ಕಚರನೆಂಬ ಶಾಪಗ್ರಸ್ಥ ಗಾಂಧರ್ವನಿಂದ ಪ್ರಾರಂಭ ವಾಗುತ್ತದೆ.*

೨. *ಶೂಲವೇರಿದ ಗುಂಡಬ್ರಹ್ಮಯ್ಯರ ತಂದೆ ತಾಯಿಂದಿರು ಬೇರೆ ಬೇರೆ. ಇವರ ತಾಯಿಂದಿರ ಹೆಸರು ತಿಳಿದುಬಂದಿಲ್ಲ. ಇವರಿಬ್ಬರ ಸಂಬಂಧ ಭಾವ ಮೈದುನ ಸಂಬಂಧವಲ್ಲ ಬದಲಾಗಿ ಸಹೋದರ ಸಂಬಂಧ.*[೨]

೩. *ಕುಂಭಜ ಋಷಿಯ ಕರುಣದಿಂದ ಕೋಲಾಹಲ ಗುಂಡನಿಗೆ ಹುಟ್ಟಿದ ಗುಂಡಯ್ಯ ಬ್ರಹ್ಮಯ್ಯರು ಶೂಲವೇರಿದ ಗುಂಡಬ್ರಹ್ಮಯ್ಯರ ತಾತಂದಿರು.*

೪. *ಶೂಲವೇರಿದ ಗುಂಡಬ್ರಹ್ಮರಲ್ಲಿ ಚನ್ನಮ್ಮನೊಡನೆ ಗುಂಡಯ್ಯಗೆ ಮಾತ್ರ ಮದುವೆಯಾಗಿತ್ತು. ಬ್ರಹ್ಮಯ್ಯನ ಮದುವೆ ಪ್ರಸ್ತಾಪ ಈ ದಾಖಲೆಯಲ್ಲಿ ಉಲ್ಲೇಖಿಸಿಲ್ಲ.*

೫. *ಶಿವನು ಗುಂಡ ಬ್ರಹ್ಮಯ್ಯರ ಪರೀಕ್ಷೆಗಾಗಿ ಗಣಪತಿರಾಜನ ಅರಮನೆಗೆ ಕನ್ನವಿಕ್ಕಿ ಗುಂಡಬ್ರಹ್ಮಯ್ಯರಲ್ಲಿ ಆಶ್ರಯ ಕೋರಿದನು. ಶಿವನಿಗೆ ಆಶ್ರಿತರಾದ ಇವರು ಗಣಪತಿ ರಾಜನ ದ್ವೇಷಕ್ಕೆ ಕಾರಣರಾಗಿ ಶೂಲವೇರುವ ಶಿಕ್ಷೆಗೆ ಗುರಿಯಾಗುತ್ತಾರೆ. ಒಣಕಟ್ಟಿಗೆಯಿಂದ ತಯಾರಿಸಿದ ಶೂಲ ಇವರ ಸ್ಪರ್ಶದಿಂದ ಚಿಗುರಿ ವನ ನಿರ್ಮಾಣವಾಗುವುದು. ಇವರು ದೊಡ್ಡವರೆಂದು ಗೌರವಿಸಿ ಕಾಣಿಕೆ ನೀಡುತ್ತಾನೆ; ಗಣಪತಿ ರಾಜ. ಇವರ ಭಕ್ತಿಗೆ ಮೆಚ್ಚಿ ಕೈಲಾಸಕ್ಕೆ ಕರೆದೊಯ್ಯುವ ಶಿವನಿಗೆ ಗುಂಡಬ್ರಹ್ಮಯ್ಯರು ತಮ್ಮ ವಂಶ ಭೂಲೋಕದಲ್ಲಿ ಉಳಿಯಬೇಕೆಂದು ಅರಿಕೆ ಮಾಡಿಕೊಳ್ಳುತ್ತಾರೆ. ಶಿವನ ಆಣತಿಯಂತೆ ೧೨ ಜನ ಗುಂಡಯ್ಯಗಳು ಕ್ಷತ್ರಿಯರ ಗರ್ಭದಲ್ಲಿ ಜನಿಸುತ್ತಾರೆ. ಅವರ ಹೆಸರು ಹೀಗಿವೆ: ೧. ಆದಿಗುಂಡ ೨. ಚಕ್ರಿಯಗುಂಡ ೩. ತ್ರಿಭುವನ ಮೂಲ ಚಕ್ರಗುಂಡ ೪. ಭೂದಂಡ ೫. ಬ್ರಹ್ಮಾಂಡ*

ಬಾಂಡಕ ೬. ಜೀವಮೇರು ಅಜಂಡಾ ೭. ಬಾಂಡೋಧರ ೮. ಬಾದರಾಯಿಣಿ ೯. ಬಾದಮೈಯ್ಯ ೧೦. ಬಾರಿಗುಂಡ (ಭೂಮಿಗುಂಡ) ೧೧. ಪಂಚಕಲಶ ಪ್ರತಿಷ್ಠಾಪನಾಗುಂಡ ೧೨. ಪಂಚಕಲಶಕ್ಕೆ ಆಜ್ಞಾಧಾರಕ ಗುಂಡ.

ದೀಕ್ಷೆ-ದಿಕ್ಕು ವಿಚಾರ : ಮೇಲಿನ ೧೨ ಜನ ಗುಂಡಯ್ಯರಲ್ಲಿ ೧೦ ಜನರಿಗೆ ಮಾತ್ರ ಪಂಚಾಚಾರ್ಯರಿಂದ ವೀರಶೈವ ದೀಕ್ಷೆ ಪ್ರಾಪ್ತವಾಯಿತು ಎಂದು ತಿಳಿಸುವ ದಾಖಲೆ ಅವರ ಮೂಲ ದಿಕ್ಕುಗಳನ್ನು ಉಲ್ಲೇಖಿಸುತ್ತದೆ.

೧. ಜೀವಮೇರು ಅಜಂಡಾ ಮತ್ತು ಬಾಂಡೋಧರ ಗುಂಡರು *ರೇವಣಾರಾಧ್ಯರಿಂದ;* ಇವರದಿಕ್ಕು ವರುಣ. ೨. ಆದಿಗುಂಡ ಮತ್ತು ಬಾರಿಗುಂಡ(ಭೂಮಿಗುಂಡ)ರು ವಿಶ್ವಾರಾಧ್ಯರಿಂದ; ಇವರದಿಕ್ಕು ಈಶಾನ್ಯ. ೩. ಚಕ್ರಿಯ ಗುಂಡ ಮತ್ತು ತ್ರಿಭುವನ ಮೂಲ ಚಕ್ರಗುಂಡರು *ಪಂಡಿತಾರಾಧ್ಯರಿಂದ;* ಇವರ ದಿಕ್ಕು ಯಮ. ೪. ಪಂಚಕಲಶ ಪ್ರತಿಷ್ಠಾಪನಾ ಮತ್ತು ಪಂಚಕಲಶಕ್ಕೆ ಆಜ್ಞಾಧಾರಕ ಗುಂಡರು *ಶ್ರೀ ಮರುಳಾರಾಧ್ಯರಿಂದ;* ಇವರ ದಿಕ್ಕು ಕುಭೇರ. ೫. ಬ್ರಹ್ಮದಂಡ ಭೂದಂಡ ಮತ್ತು ಬ್ರಹ್ಮಾಂಡ ಬಾಂಥಕ ಗುಂಡರು *ಏಕೋರಾಮಾರಾಧ್ಯರಿಂದ;* ಇವರದಿಕ್ಕು ವಾಯುವ್ಯ. ಹೀಗೆ ಈ ೧೦ ಜನ ವೀರಶೈವ ದೀಕ್ಷೆಯನ್ನು ಹೊಂದಿದರು. ಉಳಿದ ಭಾದರಾಯಿಣಿ ಮತ್ತು ಬಾದಮೈಯ ಗುಂಡರು ಹೊಂದಲಿಲ್ಲವೆಂದು ದಾಖಲೆ ತಿಳಿಸುತ್ತದೆ.

ಕಾಯಕ ವಿಚಾರ : ಕಾಯಕ ಯೋಗಿಗಳಾದ ಶಿವಶರಣ ಗುಂಡಯ್ಯಗಳು ತಮ್ಮ ಕುಲಕಸಬನ್ನು ಯಾವ ರೀತಿ ಹಂಚಿ ಕೊಂಡು ಮಾಡಿಕೊಂಡಿರಬೇಕೆಂಬುದನ್ನು ದಾಖಲೆ ತಿಳಿಸುತ್ತದೆ. ಭೂಮಿಗುಂಡ ಆದಿಗುಂಡ ಮುತ್ತುಕಿಯ (ಪವಿತ್ರವಾದ ಮಣ್ಣು; ಮಡಿಕೆ ಮಾಡುವ ಮಣ್ಣು) ತಂದು ಮಾರಿಕೊಂಡು ಶಿವ ಜಂಗಮ ಸೇವೆ ಮಾಡಬೇಕು. ಜೀವ ಮೇರು ಅಜಂಡಗುಂಡ ತಿಗುರಿಗೂಟ ಸ್ಥಾಪನೆ ಮಾಡಬೇಕು. ಬಾಂಡೋಧರಗುಂಡ ಮ್ಯುತ್ಯುಕಿಯ ಬಾಂಡಳ (ಗಡಿಗೆ) ಮಾಡಬೇಕು. ಪಂಚ ಕಳಶ ಪ್ರತಿಷ್ಠಾಪನಾ ಗುಂಡ ಮ್ಯುತ್ಯುಕಿಯ ಕಲಶಗಳ (ಕೊಡ ಇಲ್ಲವೆ ಪೂಜೆಯಲ್ಲಿ ನೀರು ತುಂಬಿಡುವ ಚೆಂಬು) ಮಾಡಬೇಕು. ಪಂಚಕಲಶ ಆಜ್ಞಾಧಾರಕಗುಂಡ ಬಾಂಡಗಳ ಮಾಡುವವರಿಗೆ ಮುದ್ರಿಗಳ ಮಾಡಿಕೊಡಬೇಕು.

ಈ ಮೇಲೆ ವಿವರಿಸಿದ ಕಾಯಕದ ಹಂಚಿಕೆಯನ್ನು ಗಮನಿಸಿದರೆ ಕುಂಬಾರ ವೃತ್ತಬಾಂಧವರಲ್ಲಿ ನಿಯೋಜಿತ ಕೆಲಸ ಮಾಡುವ ವರ್ಗವಿಶೇಷಣ ವ್ಯಕ್ತಿಗಳಿರುವುದು ಖಚಿತವಾಗುತ್ತದೆ. ಮಡಿಕೆ ಮಾಡಲಿಕ್ಕೆ ಬೇಕಾದ ಕಚ್ಚಾ ಸಾಮಗ್ರಿ ಮಣ್ಣನ್ನು ಒದಗಿಸುವುದರಿಂದ ಹಿಡಿದು, ಚಕ್ರದ ಸೂಚಿ ಪ್ರತಿಷ್ಠಾಪನೆ, ಮಡಿಕೆಗಳಿಗೆ ಮುದ್ರಿಕೆ ಹಾಕುವುದು ಮುಂತಾದವುಗಳನ್ನು ನೋಡಿದರೆ ಆಯಾ ಕೆಲಸವನ್ನು ಆ ಜನಾಂಗದ ವಿಶಿಷ್ಟ ವ್ಯಕ್ತಿಗಳು ಮಾತ್ರ ನೆರವೇರಿಸುತ್ತಿದ್ದರೆಂಬುದು ತಿಳಿದುಬರುತ್ತದೆ. ಪ್ರಾಯಶಃ ಈ ವರ್ಗೀಕರಣ ಪ್ರಾರಂಭದಲ್ಲಿ ವೃತ್ತಿಯಲ್ಲಿ ಆ ಮನೆತನದವರು ತಮ್ಮನ್ನು ತೊಡಗಿಸಿಕೊಳ್ಳುವಾಗ ಕಾಯಕ ಅನುಷ್ಠಾನ (ಉದ್ಘಾಟನೆ) ಶುಭ ಸಂದರ್ಭದಲ್ಲಿ ಇರಬಹುದಾದ ಕಾಯಕ ನಿಯಮ ಪರಿಪಾಲನೆಯ ಕಟ್ಟುಪಾಡುಗಳಿವಿರಬೇಕು.

ಪಾಪಸೂತಕ ನಂಬಿಕೆ : ಪ್ರತಿಯೊಬ್ಬರು ತಾವು ಮಾಡುವ ಕೆಲಸದಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ತಪ್ಪನ್ನು ಮಾಡುವುದು ಸಹಜ. ಈ ತಪ್ಪು ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಪಾಪವಾಗಿ ಕಾಡುತ್ತದೆ. ತಾವು ಮಾಡುವ ಕೆಲಸ ಶಿವಮಯವೆಂದು ತಿಳಿದರಂತೂ ಅಲ್ಲಿಯ ತಪ್ಪಿಗೆ ಖಂಡಿತಾ ನರಕ ಪ್ರಾಪ್ತಿಯೆಂಬ ನಂಬಿಕೆಯಿತ್ತು. ಹೀಗಾಗಿ ಪ್ರಸ್ತುತ ದಾಖಲೆ ಕುಂಬಾರರು ಮಾಡುವ ಪಾಪವನ್ನು ಆ ಪಾಪಕ್ಕೆ ಪರಿಹಾರವನ್ನು ಸೂಚಿಸುತ್ತದೆ. ತಿಗುರಿಯ ಮೇಲೆ ಲಿಂಗಾಕೃತಿಯಂತೆ ಮಡಿಕೆಗಳನ್ನು ಮಾಡಿ ನೂಲು ಎಳೆಯಿಂದ ಛೇದಿಸುವುದು ಕುಂಬಾರರು ಮಾಡುವ ಪಾಪಕಾರ್ಯ. ಇದು ಲಿಂಗಹತ್ಯ ದೋಷಕ್ಕೆ ಸಮವಾದದ್ದು. ಗಾಣಿಗ, ಸೂಳೆ, ರಾಜ ಮುಂತಾದ ಹತ್ತಾರು ಜನ ಕುಲಕಸಬು ದಾರರು ಮಾಡುವ ಪಾಪವನ್ನು ಒಬ್ಬ ಕುಂಬಾರ ಈ ಮೂಲಕ ಮಾಡುತ್ತಾನೆಂಬುದು ಇಲ್ಲಿಯ ನಂಬಿಕೆ. ಇದರ ವಿಮೋಚನೆಗಾಗಿ ಯತಿ ಚರಜಂಗಮರಿಗೆ ಮಡಿಕೆಗಳ ಮಾಡಿದಾಗಲೊಮ್ಮೆ (ಆವಿಗೆಗೊಮ್ಮೆ) ಕರ್ಪೂರ ಬಟ್ಟಲು ಕಮಾಂಡಲ ಕೊಟ್ಟು ಮುಕ್ತರಾಗಬೇಕೆಂಬ ಶೃತಿ ವಾಕ್ಯ ಪಾಪ ಪರಿಹಾರವಾಗಿದೆ.

ಧಾರ್ಮಿಕ ಪದ್ಧತಿ : ಕುಂಬಾರರ ಧಾರ್ಮಿಕ ವಿಧಿ ವಿಧಾನದಲ್ಲಿ ಕುಂಬೇಶ್ವರ ದೇವರನ್ನು ಮಾಡುವ ಉಪಕ್ರಮ ವಿರುತ್ತದೆ. ಅದನ್ನು ಕುರಿತು ದಾಖಲೆ ಶಾಸ್ತ್ರೀಯವಾದ ಮಾಹಿತಿಯನ್ನು ಒದಗಿಸುತ್ತದೆ. ಚಕ್ರದಾಕಾರದಲ್ಲಿ ರಂಗೋಲಿ ಹಾಕಿ ಅದರ ಮೇಲೆ ತಿಗುರಿಯನ್ನು ಇಟ್ಟು, ತಿಗುರಿಯ ಮೇಲೆ ಗಂಧದ ಕಟ್ಟಿಗೆಯಿಂದ ಕೂಡಿದ ತುಂಬಿದ ಕೊಡವನ್ನು ಸ್ಥಾಪಿಸಬೇಕು. ಈಶ್ವರನಾಕೃತಿಯ ಶೀಲದ ಶಿವಲಿಂಗವನ್ನು ಇಟ್ಟು ಸುರಿಗಿ ಸುತ್ತುತ್ತಾರೆ. ಇದನ್ನು ದಕ್ಷಿಣಾಭಿಮುಖವಾಗಿ ಮಾಡಿದರೆ; ಇದರ ಮುಂದುಗಡೆ ಉತ್ತರಾಭಿಮುಖವಾಗಿ ಪಂಚಕಲಶ ಸ್ಥಾಪನೆ ಮಾಡಿರುತ್ತಾರೆ.

ಕುಂಬೇಶ್ವರನ ಏಳು ಪರಡಿಯನ್ನು ಕಟ್ಟುವುದು. ಆ ಪರಡಿಯಲ್ಲಿ ೭ ಕೊಬ್ಬರಿ ಬಟ್ಟಲು, ೭ ಉತ್ತುತ್ತಿ ಹಣ್ಣು, ೭ ಬೆಟ್ಟುಡಿಕೆ, ೭ ಅರಿಷಿಣಕೊಂಬು, ೩೫ ದುಟ್ಟರೊಕ್ಕ (ದುಡ್ಡು ರೊಕ್ಕ) ಇಡಬೇಕು. ಇದನ್ನು ಗುಂಡಯ್ಯಗಳು ತೆಗೆದುಕೊಳ್ಳುತ್ತಾರೆ. ಅದೇ ರೀತಿ ಇತರ ಪರಡಿ ಕಟ್ಟಿ ಅದನ್ನು ಜಂಗಮರಿಗೆ ಸಮರ್ಪಿಸಬೇಕು. ದೇವರು ಮಾಡಿದಾಗ ಕಲಶ ಸ್ಥಾಪನೆ ಮಾಡಿ ಪೂರ್ವಾಭಿಮುಖವಾಗಿ ಮಾಂಗಲ್ಯಧಾರಣ ಮಾಡಬೇಕೆಂಬುದು ಇಲ್ಲಿರುವ ನಿಯಮ. ಚಕ್ರಕ್ಕೆ ಸೂಲದ ಗೂಟಕ್ಕೆ ನಮಸ್ಕರಿಸಬೇಕು.

ಸಾಂಘಿಕ ಜೀವನ : ಸಮಾಜದ ಸ್ವಾಸ್ಥ್ಯಕ್ಕೆ ಹಾಗೂ ವ್ಯಕ್ತಿಗತ ಆರೋಗ್ಯಪೂರ್ಣ ಬದುಕಿಗೆ ಮನುಷ್ಯ ಸಂಘ ಜೀವಿಯಾಗಿರುವುದು ಅನಿವಾರ್ಯ. ಹೀಗಾಗಿ ಪ್ರತಿಯೊಂದು ಜನಾಂಗದಲ್ಲಿ ಕೆಲವು ಆಚಾರ ವಿಚಾರಗಳನ್ನು ನಿರ್ವಹಿಸಿಕೊಂಡು ಹೋಗುವ ಹಕ್ಕು ಬಾಧ್ಯತೆಯನ್ನು ಹೊಂದಿರುತ್ತಾರೆ. ಹೀಗಾಗಿ

ಪ್ರಸ್ತುತ ದಾಖಲೆ ***ಕುಂಬಾರ ಗುಂಡಯ್ಯಗಳ ಮೂಲ ಪುರುಷ ತಿರುನೀಲಕಂಠರೆಂದು*** ತಿಳಿಸಿ, ಕುಂಬೇಶ್ವರದೇವರ ಪೂಜೆ ಮಾಡುವುದಕ್ಕೆ ಬಾಧ್ಯರಾದ ಮನೆತನಗಳನ್ನು ವಿವರಿಸುತ್ತದೆ ಅವರಲ್ಲಿ ಕಟ್ಟಿಮನಿ ೧, ಕಸಬಿ ಮನಿ ೧, ಚತಾದ್ರಿಮನಿ ೧, ಸ್ವಯಂಬುಶೆಟ್ಟಿ ಮನಿ ೧, ಗೌಡಮನಿ ೧, - ಈ ೫ ಜನರು ಸೇರಿ ನ್ಯಾಯ ನಿರ್ಣಯವನ್ನು ಕಟ್ಟಿ ಮನೆಯವರಲ್ಲಿ ನಡೆಸುತ್ತಿದ್ದರು ಅಂದರೆ ಅದು ಪ್ರಾಚೀನ ನ್ಯಾಯನಿರ್ಣಯದ ಪಂಚಾಯಿತ ಕಟ್ಟೆಯಾಗಿರುತ್ತಿತ್ತು.

ಕಟ್ಟಿಮನಿಯವರು ವೀರಶೈವ ದೀಕ್ಷೆ ಕೊಡುತ್ತಿದ್ದರು. ಈತ ಬ್ರಹ್ಮಚಾರಿ ಆಶ್ರಮದಲ್ಲಿದ್ದು ಮದುವೆ ಕಾರ್ಯಕ್ಕೆ ೫ ಟಂಕಿ ರೊಕ್ಕ, ಉಡುಕಿ ಮದುವೆಯಾದರೆ ೨ ಟಂಕಿ ರೊಕ್ಕ ಚಾಜ ತೆಗೆದು ಕೊಳ್ಳುತ್ತಿದ್ದರಂತೆ. ಈತನ ಆಗ್ನೆಯಯಂತೆ ಕಸಬಿಯಾತನು ನಡೆಯುತ್ತಿದ್ದನು. ಜಿತಾದ್ರಿಯೆಂಬಾತ ಕುಂಬೇಶ್ವರ ದೇವರ ಪೂಜೆ ಮಾಡಿಕೊಳ್ಳುತ್ತಿದ್ದನು, ಶೆಟ್ಟಿಯೆಂಬಾತ ಅಪ್ಪ ತಪ್ಪು ತಕರಾರು ಗಳಾದಲ್ಲಿ ವಿಚಾರ ಮಾಡಿ ಗೌಡರಿಗೆ ತಿಳಿಸುವುದು, ಗೌಡ ಕಟ್ಟಿಮನಿಯವರಿಗೆ ತಿಳಿಸಿ ಅಲ್ಲಿ ನ್ಯಾಯ ನಿರ್ಣಯವಾಗುತ್ತಿತ್ತು.

ಕುಂಬಾರರ ಕುರಿತ ಲೋಕೋಕ್ತಿ : ಈ ದಾಖಲೆಯ ಪ್ರಕಾರ ಕುಂಬಾರರು ಮೊದಲಿಗೆ ಮಡಿಕೆಗಳನ್ನು ಸುಡುತ್ತಿದ್ದಿಲ್ಲ ವೆಂತಲೂ, ಗುಂಡಯ್ಯನು ಭಾಂಡಗಳ ಬಡಿಯುವ ತಾಳಕ್ಕೆ ಶಿವನು ನಾಟ್ಯವಾಡಿದ ಒಂದು ಪ್ರಸಂಗದಲ್ಲಿ ಮಡಿಕೆ ಸುಡುವ ಪದ್ಧತಿ ಬಂದಿತೆಂದು ತಿಳಿದುಬರುತ್ತದೆ. ಗುಂಡಯ್ಯನೆದುರಿಗೆ ನಾಟ್ಯ ವಾಡುತ್ತಿದ್ದ ಶಿವನನ್ನು ಕಂಡು ಇವನಿಗೆ ಅಹಂಮಿಕೆ ಬಂದು ನಾನು ಶ್ರೇಷ್ಠನಾದೆನಲ್ಲ ಎಂಬ ಬಿಗುಮಾನಕ್ಕೆ ಕಾರಣವಾಯಿತು. ಕುಣಿದು ದಣಿದ ಶಿವನು ಭಾಂಡ ಬಡಿಯುವುದನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ನೀರಿನ ಅರುವಿಯನ್ನು ಒಣಗಿಸಿದ. ಸೋಲಬಾರ ದೆಂಬ ಹಠದಿಂದ ಗುಂಡಯ್ಯನು ಬಾಯಿಂದ ಅರವಿ ಮೇಲೆ ಉಗುಳಿ ಬಡಿಯಹತ್ತಿದನು. ಇದನ್ನು ಕಂಡ ಶಿವ ಅಯ್ಯಾ! ಕುಂಬಾರ ಕರ್ಮ ನಿನ್ನ ಬಿರಿದಿಗೆ ಬಂತು, ಸುಡಲೆ ಅಂತ ಹೇಳಿದನಂತೆ. ಆಗಿನಿಂದ ಮಡಿಕೆಗಳನ್ನು ಸುಡಹತ್ತಿದರೆಂಬ ಉಲ್ಲೇಖವಿದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ "ಅಯ್ಯಾ! ಕುಂಬಾರ ಕರ್ಮ ನಿನ್ನ ಬಿರುದಿಗೆ ಬಂತು" - ಎಂಬ ಮಾತು. ಉತ್ತರ ಕರ್ನಾಟಕ ಭಾಗದಲ್ಲಿ ಈ ವೃತ್ತಿ ಬಾಂಧವರನ್ನು ಗೇಲಿ ಮಾಡುವುದಕ್ಕೋ; ಇಲ್ಲವೇ ರೇಗಿಸುವುದಕ್ಕೋ "ಮಾಡಿದ ಬದುಕಿಗೆ ಬೆಂಕಿ ಇಡುವ ಜನ" - ಎಂಬ ಲೋಕೋಕ್ತಿಯಿದೆ. ಇಲ್ಲಿ ಬದುಕುಯೆಂದರೆ ಸಂಪತ್ತು. ಕುಂಬಾರನ ಸಂಪತ್ತು ಮಡಿಕೆಗಳು.[೩] ಅಂದವಾಗಿ ಮಡಿಕೆಗಳನ್ನು ಮಾಡಿ ಅವುಗಳನ್ನು ಆವಿಗೆಯಲ್ಲಿ ಹಾಕಿ ಸುಡುವ ಅವನ ಈ ಕರ್ಮ (ಕಾಯಕ) ಬದುಕಿಗೆ ಬೆಂಕಿ ಇಡುವವನೆಂಬ ಅಣಕವಾಡುವ ಮಾತಾಗಿದೆ. ಪ್ರಾಯಶಃ ಅಯ್ಯಾ ಕುಂಬಾರ ಕರ್ಮ ನಿನ್ನ ಬಿರಿದಿಗೆ ಬಂತು ಎಂಬ ಮಾತಿನ ಹಿಂದಿರುವ ಧಾಟಿ ಈ ಲೋಕೋಕ್ತಿಯ ಸೂಚಕವಾದಂತಿದೆ.

ಸ್ಥಳನಾಮ ವಿಚಾರ : ಡಾ|| ವಿ. ಶಿವಾನಂದ ಅವರು ಗುಂಡಬ್ರಹ್ಮಯ್ಯರ ಸ್ಥಳ ಕುರಿತು ಚಾರಿತ್ರಿಕ ಕೆಲವು ಕುರುಹು ಗಳನ್ನುಳ್ಳ ಚಿಕ್ಕ ಮಗಳೂರು ಜಿಲ್ಲೆ ಕಡೂರು ತಾಲೂಕಿನ ಆಣೆಗೆರೆ (ದೊಡ್ಡಾಣೆಗೆರೆ) ಮತ್ತು ಧಾರವಾಡ ಜಿಲ್ಲೆ ಬ್ಯಾಡಿಗಿ ತಾಲೂಕಿನ ಗುಂಡೇನಹಳ್ಳಿ ಎಂಬುವು ಇವರ ಸ್ಥಳವಾಗಿದ್ದು ನಂತರ ಆಂಧ್ರನಾಡಿನ ಓರಂಗಲ್ಲಿಗೆ ಹೋಗಿರಬೇಕೆಂದು ಊಹಿಸುತ್ತಾರೆ. ಪ್ರಸ್ತುತ ದಾಖಲೆ ಬ್ಯಾಡಗಿ ತಾಲೂಕಿನ ಕೆಲವು ಗ್ರಾಮನಾಮಗಳನ್ನು ಐತಿಹ್ಯ ಅಂಶಗಳಿಂದ ಹೀಗೆ ತಿಳಿಸಿಕೊಡುತ್ತದೆ. ಗಣಪತಿ ರಾಜನ ಅರಮನೆಗೆ ಕನ್ನವಿಕ್ಕಿ ಓಡಿ ಬಂದ ಶಿವನು:

೧. *ಹರಿಮೊಲಿಯಿಂದ ಬರುವಾಗ ಅಲ್ಲಿ ನಿಂತನು ಅದು ಹರುಮಗಟ್ಟೆಯೆಂಬ ಗ್ರಾಮವಾಯಿತು.*
೨. *ಕೆಂದೂಳು ಮುಸುಕಿದ ಕಾರಣ ಅಲ್ಲಿ ನಿಂತನು ಅದು ಕೆಂಗೊಂಡವೆಂಬ ಗ್ರಾಮವಾಯಿತು.*
೩. *ಅರುವಿಲ್ಲದೆ ಹೋಗುವಲ್ಲಿ ಅಲ್ಲಿ ನಿಂತನು ಅದು ಅರುಬು ಗೊಂಡವೆಂಬ ಗ್ರಾಮವಾಯಿತು.*

ಮೇಲಿನ ಕೆಂಗೊಂಡ ಹಾಗೂ ಅರುಬುಗೊಂಡವೆಂಬ ಗ್ರಾಮಗಳು ಬ್ಯಾಡಿಗಿ ತಾಲೂಕಿನಲ್ಲಿವೆ. ಹೀಗಾಗಿ ಡಾ|| ಶಿವಾನಂದರು ಊಹಿಸಿದ ಗುಂಡೇನಹಳ್ಳಿ (ಗುಂಡಯ್ಯನ ಹಳ್ಳಿ) ಉಲ್ಲೇಖದ ಜೊತೆಗೆ ಅಲ್ಲಿ ಏನಾದರೂ ಪ್ರಾಚೀನ ಕುರುಹುಗಳು ದೊರೆತಲ್ಲಿ ಗುಂಡಬ್ರಹ್ಮಯ್ಯರ ಸ್ಥಳ ಕಡೂರು ತಾಲೂಕಿನ ದೊಡ್ಡ ಆಣೆಗೆರೆ ಎಂಬುವುದಕ್ಕಿಂತ, ಬ್ಯಾಡಿಗಿ ತಾಲೂಕಿನ ಗುಂಡೇನ ಹಳ್ಳಿಯೆಂದು ಹೇಳಲು ಸಾಧ್ಯವಾಗುತ್ತ**ದೆ****

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಡಾ|| ವಿ. ಶಿವಾನಂದ ಅವರು **ಗುಂಡಬ್ರಹ್ಮಯ್ಯಗಳ ಚರಿತ್ರೆ** (ಸುವ್ವಿ) ಯನ್ನು ಅಖಂಡೇಶ್ವರ ಗ್ರಂಥಮಾಲೆ ಜೇವರ್ಗಿ; ೧೯೭೪ರಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

*೨. ***ಗುಂಡಬ್ರಹ್ಮಯ್ಯಗಳ ಚರಿತ್ರೆ*** ಸಂಪಾದಿಸಿದ ಡಾ|| ವಿ. ಶಿವಾನಂದ ಅವರು "ಶಿವನು ಮೈದುನನು ಭಾವದೊಳಿಬ್ಬರು ಜೀವವೊಂದಾಗಿ ಇರುತಿಹರು....." ಎಂಬ ಪದ್ಯದಿಂದ ಭಾವಮೈದುನ ಸಂಬಂಧ ಕಲ್ಪಿಸುತ್ತಾರೆ. ಪುಟ ೧೯.

*೩. ಕುರಿ-ಆಡುಗಳನ್ನು "ಬದುಕು" - ಎಂದು ಕರೆಯುತ್ತಾರೆ. ಹೀಗಾಗಿ "ಕುರುಬನ ಬದುಕು (ಸಂಪತ್ತು) ಅಂಗಳದಲ್ಲಿ" - ಎಂಬ ಲೋಕೋಕ್ತಿ ಪ್ರಚಲಿತದಲ್ಲಿದೆ. ಇಲ್ಲಿ ಬದುಕು = ಕುರಿ (ನಾ), ಸಂಪತ್ತು (ಗುಣ ವಿಶೇಷ) ದಿಂದ ಬಳಕೆಗೊಂಡಿದೆ.

** ಈ ದಾಖಲೆಯನ್ನು ನೀಡಿದ ಬಳ್ಳಾರಿ ಜಿಲ್ಲೆ, ಹ. ಬೊ. ಹಳ್ಳಿ ತಾಲೂಕು ಕೋಗಳಿ ಗ್ರಾಮದ ಚಕ್ರಸಾಲಿ ದೊಡ್ಡ ವೀರಪ್ಪನವರಿಗೆ ಕೃತಜ್ಞತೆಗಳು. ಸದ್ಯ ಹಂಪಿ ಕನ್ನಡ ವಿ. ವಿ. ಹಸ್ತಪ್ರತಿ ಶಾಸ್ತ್ರ ವಿಭಾಗದ ಭಾಂಡಾರದಲ್ಲಿ (ಕ್ರ. ಸಂ. ೨೬೩) ಸಂರಕ್ಷಿಸಲಾಗಿದೆ.

ಡಾ।। ಜ್ಯೋತ್ಸ್ನಾ ಕಾಮತ್*

ವಿಜಯನಗರ ಕಾಲೀನ ಕನ್ನಡಿತಿಯರ ಸೀರೆಗಳು

ಕೊರಳು ನೋಯಿಸಿಕೊಂಡು ಲೇಪಾಕ್ಷಿಯ ಭಿತ್ತಿ ಚಿತ್ರಗಳನ್ನು ವೀಕ್ಷಿಸುತ್ತಿದ್ದಂತೆ, ಅಂದಿನ ಕನ್ನಡ ಕಲಾಕಾರರ ಚಿತ್ರ ನೈಪುಣ್ಯದ ಬಗ್ಗೆ ಅಭಿಮಾನ ಉಕ್ಕಿ ಹರಿಯುತ್ತದೆ. ರಾಮಾಯಣ, ಮಹಾಭಾರತ ಶಿವಪುರಾಣಗಳ ಸನ್ನಿವೇಶಗಳನ್ನು ಚಿತ್ರಿಸುವಾಗ, ಸಹಜವಾಗಿಯೇ ತನಗೆ ಪರಿಚಿತವಿದ್ದ ಅಂದಿನ ಹೆಣ್ಣು ಮಕ್ಕಳು ಉಡುತ್ತಿದ್ದ ಬಗೆಬಗೆಯ ಬಣ್ಣಗಳ, ಚಿತ್ರ, ಆಕೃತಿ ವಿನ್ಯಾಸಗಳ ಸೀರೆಗಳ ಪ್ರತಿಕೃತಿಯನ್ನು ಅವರು ಹೊಂದಿಸಿದ್ದಾರೆ. ಉಮೆಯನ್ನು ವಿವಾಹಕ್ಕೆ ಅಣಿಗೊಳಿಸುವವರು, ವಧುವಿನ ಅಲಂಕಾರಗಳಲ್ಲಿ ನೆರವಾಗುವ ಸ್ತ್ರೀಯರು, ಪತಿಯೊಂದಿಗೆ ದೇವದರ್ಶನಕ್ಕೆ ಹೊರಟವರು, ಶಿವನಿಗೆ ಹಣ್ಣು ಹೂಕಾಯಿ ಅರ್ಪಿಸುತ್ತಿರುವವರು. ಆಶೀರ್ವಾದವನ್ನು ಕೋರುತ್ತಿರುವವರು, ಭಿತ್ತಿ ಚಿತ್ರಗಳಲ್ಲಿದ್ದಾರೆ. ಅವನ್ನು ನೋಡುತ್ತಿದ್ದಂತೆ ಸೀರೆಯ ಚರಿತ್ರೆಯ ಪುಟಗಳು ನೆನಪಿಗೆ ಬರಲಾರಂಭಿಸುತ್ತವೆ.

ಶತಮಾನಗಳಿಂದ ಕರ್ನಾಟಕದ ನಾರು, ಹತ್ತಿ, ರೇಷ್ಮೆಯ ಸೀರೆಗಳು ನಾಡಿನ ಹೆಂಗಳೆಯರ ಕಲಾಪ್ರಜ್ಞೆಯನ್ನು ಮೆರೆಸುವದರ ಜೊತೆಗೆ ಹೊರನಾಡುಗಳಲ್ಲಿಯೂ ಹೆಸರು ಗಳಿಸಿದ್ದು ನೆನಪಾಗುತ್ತದೆ. ಇಷ್ಟು ಸಾಲದೆಂಬಂತೆ ಭಾರತದ ಬೇರೆ ಬೇರೆ ರಾಜ್ಯಗಳಿಂದಲೂ ಬಗೆಬಗೆಯ ಸೀರೆಗಳು ಆಯಾತವಾಗುತ್ತಿದ್ದ ವೆಂಬುದಕ್ಕೆ ರಟ್ಟ ನಾಲ್ಮಡಿ ಕಾರ್ತವೀರ್ಯನ ೧೨೦೮ರ ಶಾಸನವೊಂದು ಸಾಕ್ಷಿಯಾಗಿದೆ. "ಹೊರಗಣಿಂಬಂದ ಸೀರೆ" ಗಳಲ್ಲದೇ "ಚಿನ್ನಗೆಯಿಕ್ಕಿದ ಚಿನ್ನಗೆಯಿಕ್ಕದ ಚೀರಗಳನ್ನು ದೂಸಿಗವಸರ"ಗಳನ್ನು ವೇಣುಗ್ರಾಮ ಅಥವಾ ಈಗಿನ ಬೆಳಗಾಂವದಲ್ಲಿ ಆಗಿನ Supermarketದ ಕೊಡುಕೊಳುಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಹೆಸರಿಸುತ್ತದೆ.[೧] ಉತ್ಕಟ ಕನ್ನಡಾಭಿಮಾನಿ, ಆಂಡಯ್ಯ ಕವಿ ಸುಮಾರು ಇದೇ ಕಾಲದಲ್ಲಿ ತುಂಬ ಹೆಸರುವಾಸಿಯಾಗಿದ್ದ ದೇವಗಿರಿ, ಹೂಲಿ, ಮಗರಿ, ಕಾಡಿಗೆ ನೀರಿನ ಸೀರೆ[೨]ಗಳಿಂದ ತನ್ನ ನಾಡಿನ ಸೀರೆ ಮಳಿಗೆಗಳು ನಳನಳಿಸುತ್ತಿದ್ದವೆಂದು ಉದ್ಗರಿಸಿದ್ದಾನೆ. ಮಾರ್ಕೊಪೋಲೋ, ದಕ್ಷಿಣದ ಜೇಡರ ಬಲೆಯಷ್ಟು ನಾಜೂಕಾದ ಸೀರೆಗಳನ್ನು ಕಂಡು ಅಚ್ಚರಿಪಟ್ಟಿದ್ದ. ಬಾಹ್ಮನಿ ಚರಿತ್ರಕಾರ ಇಸಾಮಿಯು, ಬೀದರ್, ಗುಲ್ಬರ್ಗ ಪ್ರದೇಶದಲ್ಲಿ ತಯಾರಾಗುತ್ತಿದ್ದ ಬಟ್ಟೆ, ಪ್ರಪಂಚದ ಯಾವುದೇ ರಾಜ-ರಾಣಿಯರು ಸಂಭ್ರಮದಿಂದ ತೊಡುವಂತಹ ದಾಗಿತ್ತು! ಎಂದು ಅಭಿಮಾನದಿಂದ ಬರೆದಿದ್ದಾನೆ.

ಹೊರಗಿನ ನಾಡುಗಳ ಬಟ್ಟೆ ಅಥವಾ ಈಗಿನ 'ಫಾರಿನ್' ಬಟ್ಟೆಯ ಹುಚ್ಚು ಕೂಡ ತುಂಬ ಪ್ರಾಚೀನವಾದದ್ದೇ! ಚೀನ, ಮಹಾಚೀನ, ಸಿಂಹಳ ದ್ವೀಪದ ರೇಷ್ಮೆ, ರಾಷ್ಟ್ರಕೂಟರ ಕಾಲದಿಂದಲೂ ಇಲ್ಲಿ ಜನಪ್ರಿಯವಾಗಿದ್ದರೆ, ಕಲ್ಯಾಣದ ಚಾಲುಕ್ಯರ ಕಾಲದಲ್ಲೂ ಅದು ಮುಂದುವರಿಯಿತು. ಜೊತೆಗೆ ಪೊದ್ದಲಪುರ, ಚೇರಪಲ್ಲಿ, ನಾಗಪಟ್ಟಣ, ತೊಂಡಮಂಡಲ, ಚೋಳದೇಶ, (ಎಲ್ಲವೂ ಈಗಿನ ತಮಿಳುನಾಡು) ಆನಹಿಲವಾಡ (ಗುಜರಾಥ), ಮೂಲಸ್ಥಾನ (ಮುಲ್ತಾನ್) ವಂಗ, ಕಳಿಂಗಗಳಿಂದಲೂ ಚೀರ ಅಥವಾ ಸೀರೆಗಳನ್ನು ಕಲ್ಯಾಣದ ಚಾಲುಕ್ಯರ ಓಲಗದ ಓರಣ ಪ್ರಿಯರು ಧರಿಸುತ್ತಿದ್ದದ್ದು, ಸೋಮೇಶ್ವರನ ಮಾನಸೋಲ್ಲಾಸದಿಂದ ತಿಳಿದುಬರುತ್ತದೆ.[೩] ಬಸವ ಪುರಾಣದಲ್ಲಿ (೧೪ನೇ ಶತಮಾನ) ಕಟ್ಟುಬಣ್ಣದ ಬಲ್ಲಾಳ ಪಟ್ಟೆ, ಭೂಸಲೆ ಮೇಘವರ್ಣದ ಪಟ್ಟೆ, ಗುಜ್ಜರಾಷ್ಟ್ರ ಪಟ್ಟೆ, ವಾರಣಾಸಿಯ ದಸರಿಯ ಉಲ್ಲೇಖ ಬರುತ್ತದೆ.[೪] ಅಂದರೆ ಗುಜರಾತದ ಪಟೋಲಾ, ಬನಾರಸದ ರೇಷ್ಮೆಯ ಸೀರೆಗಳ ಚರಿತ್ರೆ ಅರಿಯಬಯಸುವವರಿಗೆ ಕನ್ನಡ ಕಾವ್ಯಗಳಲ್ಲಿ ಆಧಾರ ಸಿಗುತ್ತದೆ! ಬಲ್ಲಾಳ, ಭೋಸಲೆ ಎಂದು ಆಳರಸರ ಹೆಸರುಗಳನ್ನು ಪ್ರಸಿದ್ಧ ರೇಷ್ಮೆ ಬಟ್ಟೆ ಪ್ರಕಾರಗಳಿಗೆ ಇಡುತ್ತಿದ್ದಿರಲು ಸಾಕು!

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಲೇಪಾಕ್ಷಿಯಲ್ಲಿರುವ

* ೧೧೦, ಶಶಿಕಿರಣ, ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೫೫.

ಲೇಪಾಕ್ಷಿ ಸೀರೆ ಮಾದರಿಗಳು



1



2




3



4




5



6



7



೮

೧. ಸೀರೆಯ ಉದ್ದಕ್ಕೂ ಓಡುವ ಗೀರುಗಳು.
೨. ದಪ್ಪ-ತೆಳು ಗೀರುಗಳ ಸಂಯೋಜನೆ.
೩. ಸಮಾನಾಂತರ ರೇಖೆಗಳು.
೪. ಉದ್ದ, ಅಗಲ ಗೀರುಗಳಿಂದ ಚೌಕುಗಳನ್ನು ಮಾಡಬಹುದು.
೫. ರಬ್ಬಾದ ಚೌಕುಡಿ.
೬. ನಯ-ನಾಜೂಕಿನ ಚೌಕುಡಿ.
೭. ವರ್ತುಲ, ಗೋಲಕಗಳನ್ನು ಬಳಿಸಿದ ನಕ್ಷೆ.
೮. ಕುಸುರಿನ ಕೆಲಸದ ಸೀರೆ.

ಪಾಪನಾಶೇಶ್ವರ ದೇವಾಲಯದ ಒಳಹೊರಗೆ ವಿಜಯನಗರ ಕಾಲದ ಕನ್ನಡ ಶಾಸನಗಳಿವೆ. ನಂದಿಲಕ್ಕಿ ಶೆಟ್ಟಿ (ನಂದಿಲಕ್ಷ್ಮಿಶೆಟ್ಟಿ) ಮತ್ತು ಮುದ್ದಮ್ಮ ಅವರ ಮೂವರು ಪುತ್ರರಲ್ಲಿ ಹಿರಿಯವನಾದ ವಿರೂಪಣ್ಣನು, ವಿಜಯನಗರದ ಆಳರಸು ಅಚ್ಯುತ ದೇವರಾಯನ (ಕ್ರಿ. ಶ. ೧೫೩೦-೪೨) ಕಾಲದಲ್ಲಿ ಪ್ರತೀಹಾರಿಯಾಗಿ ತನ್ನ ಕಾರ್ಯದಕ್ಷತೆ, ಹಾಗೂ ಸ್ವಾಮಿನಿಷ್ಠೆಗಳಿಂದ ಪೆನುಗೊಂಡೆ ಮತ್ತು ಚಂದ್ರಗಿರಿ ಪ್ರಾಂತಗಳ ಆಡಳಿತಾಧಿಕಾರಿಯ ಹುದ್ದೆಗೇರಿದ. ಇದರಿಂದಾಗಿ ಅವನಿಗೆ ಈ ಭವ್ಯ ದೇವಾಲಯದ ನಿರ್ಮಾಣ ಹಾಗೂ ವಿಸ್ತಾರಕ್ಕಾಗಿ ಭಕ್ತರಿಂದ, ಪ್ರಜೆಗಳಿಂದ ಹಣವನ್ನು ಶೇಖರಿಸುವದು ಸಾಧ್ಯವಾಯಿತು; ಸುಲಭವಾಯಿತು. ತನ್ನ ಸೋದರ ವೀರಣ್ಣನಾಯಕನ ಸಹಾಯದಿಂದ ಈ ದೇವಾಲಯ ವನ್ನು ವಿರೂಪಣ್ಣನು ಹಿಗ್ಗಿಸಿದನೆಂದು ಕ್ರಿ. ಶ. ೧೫೩೩ರ ಶಾಸನವು ಸಾರುತ್ತದೆ. ಈ ದೇವಾಲಯದ ಮುಚ್ಚಿಗೆಯ ಚಪ್ಪಡಿ ಕಲ್ಲುಗಳಿಗೆ ಗಾರೆಯನ್ನು ಮೆತ್ತಿ ಒಳಮೈಯನ್ನು ಭಿತ್ತಿ ಚಿತ್ರಗಳಿಗಾಗಿ ಬಳಸಲಾಗಿದೆ. ನಾಲ್ಕು ಶತಮಾನಗಳ ಸುದೀರ್ಘ ಅಲಕ್ಷ, ಬಿರುಬಿಸಿಲು, ಮಳೆ, ಕಾಯಂ ತೇವುಗಳಿಂದಾಗಿ, ಭಿತ್ತಿ ಚಿತ್ರಗಳು ಬಣ್ಣಗೇಡಿಯಾಗಿದ್ದರೂ, ಅಂದಿನವರ ಸೀರೆಯ ಸೊಬಗಿನ ಮಾದರಿಗಳನ್ನು ಅರ್ಥೈಸಲು ಸಾಕಷ್ಟು ಸಹಾಯಕಾರಿಯಾಗಿವೆ.

ಚಿತ್ರಗಳಲ್ಲಿ ಸ್ತ್ರೀಯರಿಗೇ ಸಿಂಹಪಾಲು! ಒಮ್ಮೆ ನೋಡಿದರೆ ಸಾಲದು, ಪದೇ ಪದೇ ನೋಡಬೇಕೆನ್ನಿಸುವ ಲಾವಣ್ಯವತಿಯರು. ಅವರೆಲ್ಲ ಸುಂದರ ಕೃಶಾಂಗಿಯರು. ಒಬ್ಬಳಿಗೂ ಒಂದು ಗುಂಜಿಯ ಕೊಬ್ಬಾಗಲಿ, ಬೊಜ್ಜು ಆಗಲಿ ಇಲ್ಲ. ಸೀರೆಯಂಥ ಸರ್ವ ಸಾಧಾರಣ ಉಡಿಗೆಯನ್ನು ಎಷ್ಟು ಕಲಾತ್ಮಕವಾಗಿ ಧರಿಸಬಹು ದೆಂಬುದಕ್ಕೆ ಉತ್ತಮ ನಿದರ್ಶನಗಳನ್ನು ಕೂಡ ಮಾಡಿದ್ದಾರೆ! ಆ ಯುಗದಲ್ಲಿ ರವಕೆ, ಕಂಚುಳಿಕೆ, ಕುಪ್ಪಸಗಳಾಗಲಿ, ಅಂಗದಟ್ಟ ಅಥವಾ ಅಂಗವಟ್ಟವೆಂದು ಕರೆಯಲ್ಪಡುತ್ತಿದ್ದ ಪೆಟಿಕೋಟ್ ಅಥವಾ ಲಂಗವಾಗಲಿ ಸಾಕಷ್ಟು ಪರಿಚಿತವಿದ್ದವು. ಆದರೆ ಈ ಲೇಪಾಕ್ಷಿಯ ಲಲನೆಯರಿಗೆ ಅವುಗಳ ಅವಶ್ಯಕತೆ ಇದ್ದಂತಿಲ್ಲ. ಸೀರೆಯೊಂದನ್ನೆ ಅತ್ಯಂತ ಮಾಟವಾಗಿ ಹೆಣ್ಣುತನವನ್ನು ಅನವಶ್ಯ ವಾಗಿ ಪ್ರದರ್ಶಿಸದೇ, ದೇಹದ ಆಕರ್ಷಕತೆಯನ್ನು ಹೆಚ್ಚಿಸುವ ಕಲೆಯನ್ನು ತಮ್ಮದನ್ನಾಗಿಸಿದ್ದಾರೆ! ಸೀರೆಯ ನಿರಿಗೆಗಳನ್ನು ಪಾದಗಳವರೆಗೆ ಇಳಿಬಿಟ್ಟು, ಅವು ಹೊತ್ತ ನಕ್ಷೆ, ಕುಸುರಿನ ಕೆಲಸಗಳು ಸುಂದರವಾಗಿ ಗೋಚರಿಸುವಂತೆ ಉಟ್ಟಿದ್ದಾರೆ. ವಕ್ಷಸ್ಥಳವನ್ನು ಹಾಯ್ದುಹೋದ ಸೆರಗನ್ನು ಓರಣವಾಗಿ ಹೊದೆದ ರೀತಿ ಒಂದೆಡೆ ಅಪೂರ್ವವಾಗಿದೆ.

ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ[೫] ಮಾಯೆಗೆ ಸೀರೆಯುಡಿಸಿದ ರೀತಿ ಇಲ್ಲಿ ರೂಪುಗೊಂಡಿದೆ :

ಪರಿವಿಡಿಯ ನಿರಿವಿಡಿದು ನಾಭಿಯ ಸಂಸದಲಿ
ಪಸರಿಸುತೆ ಜಘನಕೆ ಪರುಠವಿಸಿ ನಸುದೋರುವಂತೆ...

ಲೇಪಾಕ್ಷಿಯ ಅಳಿದುಳಿದ ಸೀರೆಗಳ ಮಾದರಿಗಳನ್ನು ಹತ್ತಾರು ಬಗೆಯಲ್ಲಿ ವರ್ಗೀಕರಿಸಬಹುದು. ಚಳಿಗಾಳಿಗಳಿಂದ ಸಂರಕ್ಷಿಸಿಕೊಳ್ಳ ಬಹುದಾದಂಥ ಉರುಟು ಸೀರೆಗಳು: ಇವು ಕನ್ನಡ ನಾಡಿನಲ್ಲಿ ಎಲ್ಲ ವರ್ಗದವರೂ ಉಡುವಂಥವುಗಳಾಗಿದ್ದವು. ಉಳ್ಳಾಳದ ರಾಣಿಯ ಸೀರೆ ಹಾಗೂ ಮೈಮೇಲೆ ಹೊದ್ದ ಬಟ್ಟೆಗಳು ಇಂಥವೇ! ಎಂದು ಇಟಾಲಿಯನ್ ಪ್ರವಾಸಿ ಪೀಟ್ರೊಡೆಲ್ಲಾ ವಾಲೆ ಗಮನಿಸಿದ್ದ.[೬] ಇದಕ್ಕಿಂತ ನವಿರಾದದ್ದು ಈಗಿನ ಅರವತ್ತು ನಂಬರ ಗಿರಣಿ ನೂಲಿನವು. ತೀರ ಜಿನುಗಾದ ನೂಲಿನ ಪಾರದರ್ಶಕ ಸೀರೆಗಳೂ ಇದ್ದು, ತೊಟ್ಟ ಆಭರಣಗಳನ್ನು ಸೀರೆಯಾಚೆಯಿಂದ ನೋಡಬಹುದಾಗಿತ್ತು. ಶುಭ್ರ ಬಿಳಿಯ ಇಲ್ಲವೇ ತಿಳಿಬಣ್ಣಗಳ ಮೈ ಉಳ್ಳ ಸೀರೆಗಳಿಗೆ ರಬ್ಬಾದ ಅಂಚುಗಳು ಇರುವದನ್ನು ಕೆಲವರು ಉಟ್ಟಿದ್ದಾರೆ. ಇವಕ್ಕೆ ಹಳದಿ ಕೆಂಪು, ಹಸಿರು ಬಣ್ಣಗಳನ್ನು ಬಳಸಲಾಗಿದೆ. ತಿರುಗಿ ಇವೇ ಮಾದರಿಯ ಸೀರೆಗಳನ್ನು ತೀರ ಇತ್ತೀಚೆಗೆ ಕೆಲವು ಮಾಡೆಲ್‌ಗಳು ಪ್ರದರ್ಶಿಸಿದ್ದನ್ನು ವಿಶೇಷವಾಗಿ ಉಲ್ಲೇಖಿಸಬೇಕು!

ತಳಿರ್‌ಗಾವಿಯ, ಹೊಂಬಣ್ಣದ, ಚಿಂಗಣಗಿಲೆ, ಮಾಣಿಕದ ಹೊಳಪಿನ ಪೊಂಬರಹದ ಕಿತ್ತಳೆ ಕಾವಿಯ ಸೀರೆಗಳನ್ನು ದೇವಪ್ಪಕವಿಯ ರಾಮ ವಿಜಯ ಕಾವ್ಯದಲ್ಲಿ ಕಾಣಬಹುದು.[೭] "ಮಿಸುಪ ಕೆಂಪಿನ ಪದ್ಮರಾಗದ। ರಸದ ರೇಖೆಯ ದಡಿಗಳಲಿ ಚಿತ್ರಿಸಿದ ಕುಸುಮಗಳ ರಚನೆಯ ಸೆರಗಿನ ಸೀರೆ"ಯನ್ನು ಚಾಮರಸ ವರ್ಣಿಸಿರುವ[೮] ಚಂದ್ರಗಾವಿ ಸೀರೆಯ ಉಲ್ಲೇಖ ಕಾವ್ಯಗಳಲ್ಲಿ ಬರುತ್ತದೆ. ಇಂಥ ಸೀರೆಯೊಂದನ್ನು ಲೇಪಾಕ್ಷಿಯಲ್ಲಿ ಗುರುತಿಸ ಬಹುದು. ಗೀರು ಸೀರೆಗಳ ಸೊಗಸೇ ಬೇರೆ. ಅವನ್ನು ಒಂಟಿ ಇಲ್ಲವೇ ಜೋಡಿಯಾಗಿ ಸೀರೆಯುದ್ದಕ್ಕೂ ಹರಡುವಂತೆ ನೋಡಿಕೊಳ್ಳುತ್ತಿದ್ದರು. ಕೆಲವೊಮ್ಮೆ ಸಮಾನಾಂತರ ರೇಖೆಗಳಿರು ತ್ತಿದ್ದವು. ಕೂದಲೆಳೆಯಷ್ಟು ಸಪುರ, ಓಂ ಪುಡಿಯಷ್ಟು ಮಧ್ಯಮ, ಬೆರಳ ಸೇವಗೆಯಷ್ಟು ದಪ್ಪ! ಗೆರೆಗಳಿಗೆ ಕಪ್ಪು, ಕೆಂಪು, ನೀಲಿಗಳಂಥ ರಬ್ಬಾದ ಬಣ್ಣಗಳನ್ನು ಬಳಸುವದೇ ಹೆಚ್ಚು. ಕೆಲವೊಮ್ಮೆ ಕಡಪಾದ ರೇಖೆಯ ಇಕ್ಕೆಲದಲ್ಲಿ ತಿಳಿವರ್ಣ ರೇಖೆಗಳನ್ನು ಬಳಸಿ ಕಣ್ಣಿಗೆ ಆಕರ್ಷಕವಾಗಿ ಕಾಣುವಂತೆ ಮಾಡುವದೂ ಉಂಟು. ಚಚ್ಚೌಕ, ಕಾಟಕೋನ, ಚೌಕೋನಗಳನ್ನು ಅದೆಷ್ಟು ಪರಿಯಲ್ಲಿ ರಚಿಸಿದಾ ರೆಂದು ಹೇಳಲಿಕ್ಕಿಲ್ಲ! ಚೌಕೋನಗಳಲ್ಲಿ ಹೂಗೊಂಚಲು ಕುಸುರಿನ ಕೆಲಸಗಳನ್ನು ಸೇರಿಸಿದಾಗ ಅವುಗಳ ಅಂದ-ಚೆಂದ ಶಿಖರಕ್ಕೇರು ತ್ತದೆ. ಇದರಂತೆ ಸೀರೆಗಳ ಆಕರ್ಷಣೆ ಹೆಚ್ಚಿಸಲು ವರ್ತುಲಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಹತ್ತಾರು ಚಕ್ರಗಳು, ನೂರಾರು ವರ್ತುಣಿಗಳು, ಸಾವಿರಾರು ಗೋಲಕಗಳು, ಲಕ್ಷಾಂತರ

ಬಿಂದುಗಳನ್ನು ಸೀರೆಯುದ್ದಕ್ಕೂ ಹರಿಸಿದ್ದಾರೆ. ಕೆಲವೆಡೆ ನೋಡುಗರಿಗೆ ಆಹ್ಲಾದಕಾರಿ ಅನುಭವವಾಗುವದಕ್ಕಾಗಿ ರೇಖೆ, ಚೌಕೋನ, ವರ್ತುಲಗಳನ್ನು ಸಂಯುಕ್ತವಾಗಿಯೇ ಬಳಸಲಾಗಿದೆ. 'ಬರಹ'ದ ಸೀರೆಗಳ ಉಲ್ಲೇಖ ಕಾವ್ಯಗಳಲ್ಲಿ ಬರುತ್ತದೆ. ವರ್ತುಲಗಳನ್ನು ಓಡಿಸಿ, ಮಣಿಸಿ, ತಿರುವಿ ಮುದುಡಿ ಮಾಡಿ, ಸುಂದರ ಲತಾ-ಬಳ್ಳಿಗಳನ್ನು ರಚಿಸುವ ಕಲೆ ಅಂದಿನವರಿಗೆ ಕೈಗೂಡಿತ್ತೆಂದು ಈ ಭಿತ್ತಿಚಿತ್ರಗಳನ್ನು ಪರೀಕ್ಷಿಸುವಾಗ ಅರಿವಾಗುವದು.

ಇಂಥ ಸುಂದರ ಚಿತ್ತಾರಗಳ ಸೀರೆಗಳನ್ನು ಹೇಗೆ ಸಿದ್ಧಮಾಡುತ್ತಿದ್ದರು? ಎಂದು ನಿರ್ಧರಿಸುವದು ಬಿಕ್ಕಟ್ಟಿನ ಕೆಲಸ! ನೇಯುವಾಗಲೇ ಹಾಸು-ಹೊಕ್ಕುಗಳಲ್ಲಿ ವಿವಿಧ ವರ್ಣಗಳ ನೂಲು, ಜರಿಗಳನ್ನು ಬಳಸಿ ಚಮತ್ಕಾರಿಕ ಡಿಝೈನ್‌ಗಳನ್ನು ನಿರ್ಮಿಸುತ್ತಿದ್ದಿರಬಹುದು. ತೊರವೆ ರಾಮಾಯಣದಲ್ಲಿ ಸೀರೆಗಳಿಗೆ ಪಲ್ಲವಾವಳಿ, ಮಕರ, ಭೃಂಗ, ಆನೆ, ಸಿಂಹ, ನವಿಲು, ಹಂಸಾವಳಿ, ಸುವರ್ಣಫಳಿ ಅಥವಾ ಚಿನ್ನದ ಜರಿಯ ಚಿತ್ರಗಳು, ಸಣ್ಣ ರತ್ನ, ಹರಳು, ಮುತ್ತು ಕೋದ ಸೆರಗುಗಳ ಉಲ್ಲೇಖ ಬರುತ್ತದೆ.[೯] ಅದರಂತೆ ಮಾನಸೋಲ್ಲಾಸದ ಕಾಲಕ್ಕಾಗಲೇ ಯಂತ್ರಗಳಿಂದ ಬಣ್ಣ ಹಾಕುವ ಕಲೆ ಕರಗತವಾಗಿದ್ದು ನಾನಾವರ್ಣ ರೇಖೆ, ಪಂಚವರ್ಣದ ಅಂಚುಗಳ, ಸೂಕ್ಷ್ಮರೇಖೆ ಬಿಂದು. ಚಕ್ರ ವರ್ತುಳಗಳ ವಿವಿಧಾಕೃತಿಗಳು ಚಿರಪರಿಚಿತವಾಗಿದ್ದವು.[೧೦] ಬರಹದ ಸೀರೆಗಳೆಂದರೆ ಏಕವರ್ಣೀಯ ಸೀರೆಗಳ ಮೇಲೆ ವಿವಿಧ ಅಚ್ಚುಗಳನ್ನು ಒತ್ತಿ ಮಾಡಿದ ಚೀಟಿನವು. ಇದಕ್ಕೆ **ಕಲಂಕಾರಿ** ಎಂದು ಆ ಬಳಿಕದ ಉರ್ದು ಶಬ್ದ ಜಾರಿಗೆ ಬಂದಿತು. ಆಂಧ್ರ ಒಂದರಲ್ಲಿ, ಈ ಒಂದು ಕಾಲಕ್ಕೆ ವೈಭವದಿಂದ ಮೆರೆದ ಅಚ್ಚಿನ ಅಥವಾ ಕುಂಚಗಳನ್ನು ಬಣ್ಣದಲ್ಲಿ ಅದ್ದಿ ಸೀರೆಯುದ್ದಕ್ಕೂ ವಿವಿಧ ನಕ್ಷೆಗಳನ್ನು ಬಿಡಿಸುವ ಕಲೆ ಬರಹದ ಬಟ್ಟೆ ಉಳಿದುಕೊಂಡಿದೆ. ಜರತಾರಿಯ ಚಿತ್ತಾರವಂತೂ ಕಬಾಯಿ, ಕುಲಾವಿ, ಶಾಲು, ಸೀರೆಗಳ ಮೇಲೆ ಭರ್ಜರಿಯಾಗಿ ಕಂಗೊಳಿಸುತ್ತಿತ್ತು. ಅತ್ಯಾಧುನಿಕ ಸೀರೆಯ ತಯಾರಕರು ಲೇಪಾಕ್ಷಿಯ ಚಿತ್ತಾರಗಳನ್ನು ಬಳಸುವಷ್ಟು ನಿತ್ಯನೂತನವಾಗಿವೆ. ಆಳವಾದ ಅಧ್ಯಯನಕ್ಕೆ ಯೋಗ್ಯವಾಗಿವೆ. ನಿರಿಗೆಗಳಿಗೆ ಗೊಂಡೆ ಹಚ್ಚಿದ ಸೀರೆಗಳಿರುತ್ತಿದ್ದವೆಂದು ರಾಮ ವಿಜಯ ಕಾವ್ಯ ತಿಳಿಸಿದರೆ ಚೌಕುಡಿ ಸೀರೆಯ ಕೊನೆಗೆ "ಫ್ರಿಲ್"ಗಳನ್ನು ಹಚ್ಚಿದ್ದು ಲೇಪಾಕ್ಷಿ ಸೀರೆಯಲ್ಲಿ ನೋಡಬಹುದು. ಡ್ರೆಸ್, ಚೂಡಿದಾರಗಳ ಯುಗದಲ್ಲಿ ಹಳೇಕಾಲದ ಉಡಿಗೆ ಎನಿಸಿಕೊಂಡ ಸೀರೆಯೇ ಎಷ್ಟೊಂದು ಫ್ಯಾಶನೆಬಲ್ ಕಾಣಲು ಸಾಧ್ಯ! ಎಂದು ಲೇಪಾಕ್ಷಿ ಲಲನೆಯರು ತೋರಿಸಿಕೊಟ್ಟಿದ್ದಾರೆ!

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. Epigraphia Indica, Vol. XIII, p. 18, 1024 A.D.

*೨. ಆಂಡಯ್ಯ ಕವಿ ವಿರಚಿತ **ಕಬ್ಬಿಗರ ಕಾವಂ**, ಕನ್ನಡ ಸಾಹಿತ್ಯ ಪರಿಷತ್ತು, ಪ್ರಕಟನೆ ೧೯೭೭.

*೩. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ ವಿರಚಿತ **ಮಾನಸೋಲ್ಲಾಸ**, (ಕನ್ನಡ ಅನುವಾದ) ಪ್ರಧಾನ ಸಂಪಾದಕರು; ಡಾ|| ಎಂ. ಎಂ. ಕಲಬುರ್ಗಿ, ಧಾರವಾಡ. ಪ್ರಥಮ ಸಂಪುಟ ೧೯೯೮ (ಮಾನ) ವಸ್ತ್ರೋಪಭೋಗ ಪದ್ಯ ೧೦೧೭ - ೧೦೨೦ ಪು. ೩೦೩.

*೪. ಭೀಮಕವಿಯ **ಬಸವಪುರಾಣ** (ಸಂ., ಆರ್. ಸಿ. ಹಿರೇಮಠ, ಧಾರವಾಡ ೧೯೫೮ ಅಧ್ಯಾಯ ೭, ಕಾಂಡ ೩.

*೫. ಚಾಮರಸನ **ಪ್ರಭುಲಿಂಗಲೀಲೆ**, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟನೆ, ಅಧ್ಯಾಯ ೪, ಪದ್ಯ ೨೧.

*೬. **ಪ್ರವಾಸಿಕಂಡ ಇಂಡಿಯ**, ಸಂಪುಟ ೨ (ಸಂ. ಎಚ್. ಎಲ್. ನಾಗೇಗೌಡ), ಪುಟ ೨೬೫.

*೭. ದೇವಪ್ಪ ಕವಿ ವಿರಚಿತ **ರಾಮವಿಜಯಕಾವ್ಯ**, ಕ.ಸಾ.ಪ. ೧೯೭೭, ಅಧ್ಯಾಯ ೮, ಪದ್ಯ ೬೫.

*೮. **ಪ್ರಭುಲಿಂಗ ಲೀಲೆ**, ಅಧ್ಯಾಯ ೪, ಪದ್ಯ ೩೦.

*೯. ಕುಮಾರವಾಲ್ಮೀಕಿ ವಿರಚಿತ **ತೊರವೆರಾಮಾಯಣ**, ೮ನೇ ಸಂಧಿ ಪದ್ಯ - ೧೫-೨೦.

*೧೦. **ಮಾನಸೋಲ್ಲಾಸ** - ೧, ಉಪರೋಕ್ತ ಪದ್ಯ - ೧೦೨೩, ಪು. ೩೦೪.

ಡಾ|| ಬೆಂ. ಶಾ. ಶಾಮಲಾ ರತ್ನಕುಮಾರಿ*

ಬಂಗಾರಮಕ್ಕಿ ಪ್ರಸನ್ನವೀರಾಂಜನೇಯ ಸ್ವಾಮಿ ದೇವಾಲಯದಲ್ಲಿನ ಮಂಡಲ ಚಿತ್ರಗಳು

ಉತ್ತರ ಕನ್ನಡ ಜಿಲ್ಲೆಯ ಬಂಗಾರಮಕ್ಕಿಯು ಶರಾವತಿ ನದಿಯ ಉತ್ತರದ ದಂಡೆಯ ಮೇಲಿದೆ; ದಕ್ಷಿಣದ ದಂಡೆಯ ಮೇಲೆ ಗೇರಸೊಪ್ಪವೂ ಇದೆ. ಗೇರಸೊಪ್ಪ ಮೂಲಕ ಹೊನ್ನಾವರಕ್ಕೆ ಹೋಗುವ ಬಸ್ಸುಗಳು ಬಂಗಾರಮಕ್ಕಿಯ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯದ ಮುಂದೆ ನಿಲ್ಲುತ್ತವೆ. ಈ ದೇವಾಲಯವನ್ನು ಗೇರಸೊಪ್ಪದಲ್ಲಿನ ಮಾರುತಿ ದೇವಾಲಯದ ಅರ್ಚಕ ಯಜುರ್ವೇದೀ ಅದ್ವೈತ ಸಂಪ್ರದಾಯದ ಹವ್ಯಕ ಮನೆತನದ ಶ್ರೀಗಣೇಶಭಟ್ಟರೆಂಬುವರು ಕಟ್ಟಿಸಿದ್ದಾರೆ. ದೇವಾಲಯದಲ್ಲಿನ ಶಿಲಾಲೇಖದಿಂದ ದೇವರ ಪ್ರತಿಷ್ಠಾಪನೆಯು ಕ್ರೋಧನ ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ಅಂದರೆ ೩೦.೩.೧೯೮೬ ರಂದು ನೆರವೇರಿತೆಂದು ತಿಳಿದುಬರುತ್ತದೆ. ಪುನರ್ ಪ್ರತಿಷ್ಠಾ ಮಹೋತ್ಸವವನ್ನು ೨೯.೩.೯೭ ರಂದು ದೀವಗಿಯ ಶ್ರೀ ಶ್ರೀ ಶ್ರೀ ಅವಧೂತ ರಾಮಾನಂದ ಸ್ವಾಮೀಜಿ ಮತ್ತು ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿ ಗೋರೆ ನೆರವೇರಿಸಿದ್ದಾರೆ. ಪುನರ್ ಪ್ರತಿಷ್ಠಾಪನೆಯ ನಂತರ ದೇವಾಲಯದ ಒಳಗೋಡೆಗಳ ಮೇಲೆ ಮಂಡಲ ಚಿತ್ರಗಳನ್ನು ಬರೆಯಿಸಲಾಗಿದೆ. ಒಟ್ಟು ಮೂವತ್ತೊಂದು ಮಂಡಲ ಚಿತ್ರಗಳಿದ್ದು ಅವುಗಳ ಹೆಸರನ್ನು (ಕೆಲವು ಚಿತ್ರಗಳನ್ನು ಹೊರತುಪಡಿಸಿ) ಕ್ರಮಾಗತವಾಗಿ ಮುಂದಿನಂತೆ ಕೊಡಲಾಗಿದೆ :

ದಕ್ಷಿಣ ಪಾರ್ಶ್ವ ಭಿತ್ತಿಯಲ್ಲಿ - *೧) ಸಹಸ್ರ ಸಂಖ್ಯಾಕ ಕೈಲಾಸ ಮಹಾಯಂತ್ರ ೨) ಶ್ರೀ ಚಕ್ರ (ಅಪೂರ್ಣ) ೩) ಚಕ್ರಾರವಿಂದ ೪) ಚತುರಸ್ರ ಗ್ರಹಮಂಡಲ ೫) ವರ್ತುಲ ಗ್ರಹಮಂಡಲ ೬) ವಾಸ್ತುಮಂಡಲ ೭) ಶ್ರೀ ಗಣಪತಿಯಂತ್ರ ೮) ಸ್ವಯಂವರ ಯಂತ್ರ,* *ಪಶ್ಚಿಮ ಭಿತ್ತಿಯಲ್ಲಿ* *೯) ಹನುಮತ್ ಯಂತ್ರ ೧೦) ಹನುಮತ್ ಯಂತ್ರ ೧೧) ಶ್ರೀ ಲಕ್ಷ್ಮೀ ಪೂಜನಯಂತ್ರ ೧೨) ಶ್ರೀ ಚಕ್ರ ೧೩) ಏಕಲಿಂಗತೋಭದ್ರ ೧೪) ಶ್ರೀಚಕ್ರ ೧೫) ಸರ್ವತೋಭದ್ರ ೧೬) ಶ್ರೀ ಲಕ್ಷ್ಮೀ ಪೂಜನ ಯಂತ್ರ ೧೭) ನವನಾಭಿಮಂಡಲ ೧೮) ಅಪೂರ್ಣ ಚಿತ್ರ,* *ಉತ್ತರ ಭಿತ್ತಿಯಲ್ಲಿ* *೧೯) ಅಪೂರ್ಣ ಚಿತ್ರ ೨೦) ಜನನ ಯಂತ್ರ ೨೧) ನಾಮಾಂಕಿತವಿಲ್ಲದ ಚಿತ್ರ ೨೨) ಚತುರ್ಲಿಂಗತೋಭದ್ರ ೨೩) ಅಷ್ಟಲಿಂಗತೋಭದ್ರ ೨೪) ದ್ವಾದಶ ಲಿಂಗತೋಭದ್ರ ೨೫) ರುದ್ರ ಪೀಠಮಹಾಯಂತ್ರ ೨೬) ವರುಣ ಮಂಡಲ ೨೭) ಸ್ವಸ್ತಿಕ ಮಂಡಲ ೨೮) ವಾಸ್ತುಮಂಡಲ (೨೯, ೩೦) ನಾಮಾಂಕಿತವಿಲ್ಲದ ಚಿತ್ರಗಳು ೩೧) ದಶ ದಿಕ್ಕುಗಳ ಸಂಕೇತ ಚಿತ್ರಗಳು ಕಂಡುಬರುತ್ತವೆ.*

ಮಾನವನು ಧರ್ಮಾರ್ಥಕಾಮಗಳೆಂಬ ಪುರುಷಾರ್ಥ ಸಿದ್ಧಿಗಾಗಿ ನಿತ್ಯ ನೈಮಿತ್ತಿಕ ಕಾಮ್ಯಗಳೆಂಬ ಮೂರು ವಿಧದ ಕರ್ಮಗಳನ್ನು ನಡೆಸಬೇಕೆಂದು ಧಾರ್ಮಿಕ ಗ್ರಂಥಗಳು ವಿಧಿಸುತ್ತವೆ. ಈ ಕರ್ಮಗಳ ಆಚರಣೆಯಲ್ಲಿ ಮಂತ್ರಪಠಣ, ಮಂತ್ರಜಪ, ಚಕ್ರ ಅಥವಾ ಯಂತ್ರಗಳ ಅರ್ಚನೆ, ಮಂಡಲ ವಿಧಿ ಹವನ ಹೋಮಗಳನ್ನು ನಡೆಸಲಾಗುತ್ತದೆ. ಕಾಮ್ಯ ಕರ್ಮಾನುಷ್ಠಾನ ಸಂದರ್ಭದಲ್ಲಿ ಕಾಮ್ಯ ಅಥವಾ ಇಷ್ಟಾರ್ಥ ಸಿದ್ಧಿಗಾಗಿ ಇಷ್ಟದೇವತೆಯನ್ನು ಮಂತ್ರ ಪೂರ್ವಕವಾಗಿ ಮಂಡಲದಲ್ಲಿ ಆಹ್ವಾನಿಸಿ ಹೋಮಕಾರ್ಯದ ಮೂಲಕ ಹವಿಸ್ಸನ್ನು ದೇವತೆಗೆ ಸಮರ್ಪಿಸಿ ಕಾಮ್ಯಾರ್ಥ ಸಿದ್ಧಿಯನ್ನು ಪಡೆಯಲಾಗುತ್ತದೆ.

'ಮಂಡಲ' ಎಂದರೆ ನೈಮಿತ್ತಿಕ, ಕಾಮ್ಯ ಕರ್ಮಾನುಷ್ಠಾನದಲ್ಲಿ ಕಾಮ್ಯ ದೇವತೆಯನ್ನು ಮಂತ್ರಪೂರ್ವಕವಾಗಿ ಆಹ್ವಾನಿಸಿ, ಆ ದೇವತೆಯು ಮಂಡಿಸಲು ಆಸನರೂಪವಾಗಿ ಪರಿಗ್ರಹಿಸಲ್ಪಡುವ ಸಾಂಕೇತಿಕ ಚಿತ್ರ.

ಮಂಡಲ, ಚಕ್ರ, ಯಂತ್ರ ರಚನಾ ವಿಧಾನಗಳನ್ನು ಶ್ರುತ್ಯಾಗಮ ಸ್ಮೃತಿ ಗ್ರಂಥಗಳಲ್ಲಿ ಹೇಳಲಾಗಿದೆ. ಮಂಡಲ ರಚನೆಯನ್ನು ಋಗ್ವೇದೀಯ ಮತ್ತು ಕೃಷ್ಣ ಯಜುರ್ವೇದದ ಬೋಧಾಯನ ಪರಂಪರೆಗಳಿಗನುಗುಣವಾಗಿ ಸಿದ್ಧಗೊಳಿಸ

* ೨೭ (೯), ವಿಶಾಲಾಕ್ಷೀ ಕೃಪ, ೨ನೇ ಬ್ಲಾಕ್, ೨ನೇ ಮುಖ್ಯರಸ್ತೆ, ತ್ಯಾಗರಾಜನಗರ, ಬೆಂಗಳೂರು - ೫೬೦ ೦೨೮.

ಲಾಗುತ್ತದೆ. 'ಮಂತ್ರ ಮಹೋದಧಿ' ಮತ್ತು 'ಮಂತ್ರ ಮಹಾರ್ಣವ' ಗ್ರಂಥಗಳಲ್ಲಿ ಮಂಡಲ ಚಿತ್ರಗಳಿಗೆ ಸಂಬಂಧಿಸಿದಂತೆ ವಿಪುಲವಾಗಿ ವಿವರಗಳು ದೊರೆಯುತ್ತವೆ.

ಜಪ ಹಾಗೂ ಅರ್ಚನೆಗಾಗಿ ವಿಧಿಸಿದ ಮಂತ್ರ, ಯಂತ್ರ ಅಥವಾ ಚಕ್ರಗಳಲ್ಲಿ ಋಷಿ ಪ್ರಣೀತ ಇಷ್ಟದೇವತಾ ಸಂಬಂಧಿ ಬೀಜಾಕ್ಷರವಿರುತ್ತದೆ. ಆದರೆ ಆಹ್ವಾನಿತ ಇಷ್ಟದೇವತಾ ಮಂಡನಕ್ಕಾಗಿ ಪೂಜಾ ಸಂದರ್ಭದಲ್ಲಿ ಆಸನರೂಪ ಮಂಡಲವನ್ನು ಸ್ಥಾಪಿಸಲಾಗುವುದರಿಂದ ನೆಲದ ಮೇಲೆಯೇ ನಿರ್ದಿಷ್ಟ ಹಾಗೂ ವಿಭಿನ್ನ ಆಕೃತಿಯನ್ನುಳ್ಳ ಮಂಡಲ ಚಿತ್ರಗಳನ್ನು ಬರೆಯಲಾಗುತ್ತದೆ. ಆದ್ದರಿಂದ ಮಂಡಲ ಚಿತ್ರಗಳಲ್ಲಿ ಬೀಜಾಕ್ಷರಗಳನ್ನು ಬರೆಯಲಾಗು ವುದಿಲ್ಲ. ಚತುರಸ್ರ, ತ್ರಿಕೋಣ, ಅರ್ಧಚಂದ್ರ, ವರ್ತುಲ ಮುಂತಾದ ಆಕಾರಗಳನ್ನು ಕಾಮ್ಯದೇವತಾ ಲಕ್ಷಣ ಹಾಗೂ ಉದ್ದೇಶಗಳಿಗನುಗುಣವಾಗಿ ರಚಿಸಲಾಗುತ್ತದೆ ಹಾಗೂ ಪಂಚ ಭೂತಗಳ ಸಂಕೇತವಾಗಿ ಹಸಿರು, ಕೆಂಪು ಹಳದಿ, ಕಪ್ಪು ವರ್ಣಗಳನ್ನೂ ಬಳಸಲಾಗುತ್ತದೆ. ಅಂತೆಯೇ ಪೃಥ್ವೀ ಮತ್ತು ಅಪ್ ತತ್ತ್ವಗಳನ್ನೂ, ಸತ್ವಗುಣವನ್ನು ಬಿಳಿ ವರ್ಣದಲ್ಲಿ, ತೇಜಸ್ಸನ್ನು ರಜೋಗುಣವನ್ನು ಕೆಂಪು ವರ್ಣದಲ್ಲಿ, ವಾಯು ತತ್ತ್ವವನ್ನು ಹಳದಿ ಅಥವಾ ಅರಿಶಿನ ವರ್ಣದಲ್ಲಿ, ಆಕಾಶತತ್ತ್ವವನ್ನು ತಮೋಗುಣವನ್ನು ಕಪ್ಪು ವರ್ಣದಲ್ಲಿ ಹಾಗೂ ವಲ್ಲಿಕಾ ರಚನೆಯಲ್ಲಿಯೂ ಸಮೃದ್ಧಿಗಾಗಿಯೂ ಹಸಿರು ವರ್ಣದಲ್ಲಿ ರಚಿಸಲಾಗುತ್ತದೆ.

ಈಗ ಬಂಗಾರಮಕ್ಕಿ ವೀರಾಂಜನೇಯ ದೇವಾಲಯ ದೊಳಗಣ ಮಂಡಲ ಚಿತ್ರಗಳ ವಿವರಗಳ ಬಗ್ಗೆ ಪರಿಶೀಲಿಸ ಬಹುದಾಗಿದೆ.

ಶತರುದ್ರೀಯ, ಮಹಾರುದ್ರ, ಅತಿರುದ್ರ ಮುಂತಾದ ರುದ್ರ ದೇವತಾನುಷ್ಠಾನಗಳಲ್ಲಿ **'ಏಕಲಿಂಗತೋಭದ್ರ'**, **'ಚತುರ್ಲಿಂಗ ತೋಭದ್ರ'**, **'ಅಷ್ಟಲಿಂಗತೋಭದ್ರ'** ಹಾಗೂ **'ದ್ವಾದಶ ಲಿಂಗತೋಭದ್ರ'** ಮಂಡಲ ಚಿತ್ರಗಳನ್ನು ಬರೆಯುವುದು ಕಂಡು ಬರುತ್ತದೆ. ರುದ್ರಪೀಠ ಮಹಾಯಂತ್ರದ ಬಳಕೆಯು ರುದ್ರಾನುಷ್ಠಾನ ಸಂಬಂಧದಲ್ಲಿಯೇ ಕಂಡುಬರುತ್ತದೆ. ರುದ್ರಹೋಮ ಸಂದರ್ಭ ದಲ್ಲಿ ರುದ್ರನ ಪಂಚಾವರಣ ಆವಾಹನೆಗಾಗಿ ಅಷ್ಟದಿಕ್ಕುಗಳಲ್ಲಿ ಅಷ್ಟನಾಗಗಳನ್ನು ಹೊಂದಿರುವ **'ರುದ್ರ ಪೀಠ ಮಹಾಯಂತ್ರ'** ವನ್ನು ರಚಿಸಲಾಗುತ್ತದೆ. ಅಂತೆಯೇ ಪಾರ್ಥಿವೇಶ್ವರ ಪೂಜೆಯ ಸಂದರ್ಭದಲ್ಲಿ **'ಸಹಸ್ರ ಸಂಖ್ಯಾಕ ಕೈಲಾಸ ಮಹಾಯಂತ್ರ'**ವನ್ನು ರಚಿಸಲಾಗುತ್ತದೆ.

'ಶ್ರೀ ಚಕ್ರ'ವನ್ನು ರಾಜರಾಜೇಶ್ವರೀ ದೇವತಾ ಪ್ರೀತ್ಯರ್ಥ ಸಾಮಾನ್ಯವಾಗಿ ಸರ್ವಕಾರ್ಯಸಿದ್ಧಿಗಾಗಿಯೂ ವಿಶೇಷವಾಗಿ ವಿದ್ವಜ್ಜನರು ಜ್ಞಾನಪ್ರಾಪ್ತಿಗಾಗಿಯೂ ವಿರಕ್ತರು ಮೋಕ್ಷ ಪ್ರಾಪ್ತಿ ಗಾಗಿಯೂ ಅರ್ಚಿಸುತ್ತಾರೆ. ಇದೊಂದು ಪೂಜಾಯಂತ್ರವಾಗಿದ್ದು ಅಷ್ಟಮಿ ನವಮಿ ಚತುರ್ದಶಿ ತಿಥಿಗಳಂದು ಹಾಗೂ ಶುಕ್ರವಾರ ದಂದು ಶ್ರೀಚಕ್ರದ ಪೂಜೆಯನ್ನು ಮಾಡಲಾಗುತ್ತದೆ. ವೀರಾಂಜನೇಯ ದೇವಾಲಯದಲ್ಲಿ 'ತಂತ್ರಸಾರ' ಗ್ರಂಥೋಕ್ತ ರೀತ್ಯಾ ಮೇರುಪೃಷ್ಠ, ಭೂಪೃಷ್ಠ ಭಾಗಗಳನ್ನೊಳಗೊಂಡ 'ಅಷ್ಟದಳಯುಕ್ತ ಶ್ರೀಚಕ್ರಮಂಡಲ', 'ಷೋಡಶದಳಯುಕ್ತ ಶ್ರೀಚಕ್ರಮಂಡಲ' ಮತ್ತು ಸಾಮಾನ್ಯ 'ಶ್ರೀ ಚಕ್ರಮಂಡಲ' ಎಂಬುದಾಗಿ ಮೂರು ರೀತಿಯ ಮಂಡಲ ಚಿತ್ರಗಳನ್ನು ನೋಡಬಹುದಾಗಿದೆ.


ದುರ್ಗಾ ಹೋಮದ ಅನುಷ್ಠಾನದಲ್ಲಿ ಅರ್ಚನೆಗಾಗಿ ಬಳಸುವ ಬಿಂದು ಮಕರಂದ ಮಂಡಲದ ಮಧ್ಯಭಾಗ ಮತ್ತು ಭೂಪುರ (ಮಂಡಲದ ಹೊರಭಾಗ)ಗಳನ್ನೊಳಗೊಂಡ **'ದುರ್ಗಾಯಂತ್ರ'** ದ ಚಿತ್ರವಿದೆ. ಆದರೆ ಈ ಚಿತ್ರವನ್ನು ಹೆಸರಿಸಿಲ್ಲ.

ವಿವಾಹಕ್ಕೆ ತಡೆಯಾಗುವ ಪ್ರತಿಬಂಧಕಗಳ ನಿವೃತ್ತಿಗಾಗಿ ಸ್ವಯಂವರ ಪಾರ್ವತಿ ಮಂಡಲವು ರಚಿಸಲ್ಪಡುತ್ತದೆ; ಹೋಮದ ನಂತರ ಯಂತ್ರಧಾರಣೆಗಾಗಿಯೂ ಬಳಸಲಾಗುತ್ತದೆ. ಸುಖ ಪ್ರಸವಕ್ಕಾಗಿಯೂ, ಗರ್ಭಸಂರಕ್ಷಣಕ್ಕಾಗಿಯೂ ಪ್ರಯೋಕ್ತವಾಗುವ 'ಜನನ ಮಹಾಯಂತ್ರ', 'ಗರ್ಭಾಂತರ ಯಂತ್ರ'ಗಳ ಚಿತ್ರಗಳನ್ನೂ ಇಲ್ಲಿ ಕಾಣಬಹುದಾಗಿದೆ.


'ಗ್ರಹಮಂಡಲ' ಕ್ಕೆ ಸಂಬಂಧಿಸಿದಂತೆ ಎರಡು ಚಿತ್ರಗಳಿವೆ. **ಮೊದಲನೆಯ** ಗ್ರಹಮಂಡಲ ಚಿತ್ರವು ವರ್ತುಲಾಕಾರದಲ್ಲಿದ್ದು ಮಧ್ಯಭಾಗದಲ್ಲಿ ಗ್ರಹಗಳನ್ನು, ಅದರ ಸುತ್ತಲೂ ೨೭ ನಕ್ಷತ್ರಗಳನ್ನು ಅದರ ಸುತ್ತ ೧೨ ರಾಶಿಗಳನ್ನೂ ಮತ್ತು ಹೊರ ಸುತ್ತಿನಲ್ಲಿ ಅಷ್ಟದಿಕ್ಪಾಲಕರನ್ನೂ ಹಾಗೂ ಕೆಳಭಾಗದಲ್ಲಿ ದುರ್ಗಾದಿ ಅಷ್ಟದೇವತೆಗಳನ್ನೂ ಒಳಗೊಂಡಿದೆ. **ಎರಡನೆಯ** ಗ್ರಹಮಂಡಲ ಚಿತ್ರವು ಚತುರಸ್ರ ಆಕಾರದಲ್ಲಿದ್ದು ನವಗ್ರಹಗಳನ್ನು ಅವುಗಳ ಸಂಕೇತಗಳೊಂದಿಗೆ ಹೆಸರಿಸಲಾಗಿದೆ. ಮೊದಲನೆಯ ಗ್ರಹಮಂಡಲದಲ್ಲಿ ಎರಡನೆಯ ಗ್ರಹಮಂಡಲದ ನವಗ್ರಹ ಸಂಕೇತಗಳನ್ನು ಅಳವಡಿಸಿದರೆ ಮಾತ್ರ ಶಾಸ್ತ್ರೀಯವಾದ ಬೋಧಾಯನೋಕ್ತ ಗ್ರಹಮಂಡಲವಾಗುವುದು.

'ವಾಸ್ತು ಮಂಡಲ'ಕ್ಕೆ ಸಂಬಂಧಿಸಿದಂತೆಯೂ ಎರಡು ಚಿತ್ರಗಳಿವೆ. ಗ್ರಹವಾಸ್ತು ಮತ್ತು ಪ್ರಾಸಾದವಾಸ್ತು ಎಂದು ವಾಸ್ತುಮಂಡಲ ಎರಡು ವಿಧವಾಗಿವೆ. ಹೊಸಮನೆಯ ಗೃಹಪ್ರವೇಶ, ದುರಸ್ತಿಯ ನಂತರ ಕಟ್ಟಡ ಪ್ರವೇಶ ಹಾಗೂ ಮನೆ ಬದಲಾಯಿಸಿದಾಗ ವಾಸ್ತು ಹೋಮ ಮತ್ತು ವಾಸ್ತು ಮಂಡಲದ ಅರ್ಚನೆ ನಡೆಸಲಾಗುತ್ತದೆ. ಪ್ರಾಸಾದ ವಾಸ್ತುಮಂಡಲದಲ್ಲಿ ೮೧ ದೇವತೆಗಳೂ ಗ್ರಹವಾಸ್ತು ಮಂಡಲದಲ್ಲಿ ೬೪ ದೇವತೆಗಳೂ ಅಳವಡಿಸಲ್ಪಟ್ಟಿರುತ್ತಾರೆ. ಇಲ್ಲಿನ ಎರಡು ವಾಸ್ತುಮಂಡಲವನ್ನು ಋಗ್ವೇದೀಯ ರೀತ್ಯಾ ಮತ್ತು ಶೌನಕೋಕ್ತರೀತ್ಯಾ ರಚಿಸಲಾಗಿದೆ.


ಬಂಗಾರಮಕ್ಕಿ ಪ್ರಸನ್ನ ವಿರಾಂಜನೇಯ ಸ್ವಾಮಿ ದೇವಾಲಯದಲ್ಲಿನ ಮಂಡಲ ಚಿತ್ರಗಳು



ಗ್ರಹಮಂಡಲಂ




ವಾಸ್ತುಮಂಡಲಂ



ಶ್ರೀ ಗಣಪತಿ ಯಂತ್ರಂ



ಸ್ವಯಂವರ ಯಂತ್ರ




ಶ್ರೀ ಚಕ್ರಂ




ಏಕಲಿಂಗತೋಭದ್ರಂ




ಸರ್ವತೋಭದ್ರಂ



ಶ್ರೀಲಕ್ಷ್ಮೀ ಪೂಜೆಯ ಯಂತ್ರಂ




ಜನನ ಯಂತ್ರಂ




ದಶ ದಿಕ್ಕುಗಳ ಸಂಕೇತ ಚಿತ್ರಗಳು




ಚತುರ್ಲಿಂಗತೋಭದ್ರಂ




ಅಷ್ಟಲಿಂಗತೋಭದ್ರಂ




ರುದ್ರಪೀಠ ಮಹಾಯಂತ್ರ



ವರುಣ ಮಂಡಲ



ಸ್ವಸ್ತಿಕ ಮಂಡಲ



ದುರ್ಗಾ ಯಂತ್ರ

ನವ ಹೋಮ ಕುಂಡ ರಚನಾವಿಧಾನವನ್ನು ನಿರೂಪಿಸುವ ಚಿತ್ರವೂ ಇಲ್ಲಿದೆ. ಇದು 'ಕುಂಡಾರ್ಕ' ಗ್ರಂಥದ 'ನವಕುಂಡಿಕಾ ವಿಧಾನ' ರೀತ್ಯಾ ರಚಿತವಾಗಿದೆ. ನವಕುಂಡ ರಚನಾ ವಿಧಾನದ ವಿವರಗಳು ಇಂತಿವೆ :

ಆಕೃತಿ	ದೇವತೆ	ದಿಕ್ಕು
ವರ್ತುಲಕುಂಡ	ವಿಷ್ಣು	ಪಶ್ಚಿಮ
ಚತುರಸ್ರಕುಂಡ	ದೇವಿ	ಆಗ್ನೇಯ
ಅಶ್ವತ್ಥಪತ್ರ ಅಥವಾ ಯೋನಿಯಾಕೃತಿ	ದೇವಿ	ಆಗ್ನೇಯ
ಅರ್ಧಚಂದ್ರ	ಅಭಿಚಾರಕ್ರಿಯಾ ದೋಷನಿವಾರಕ ದೇವತೆ	ದಕ್ಷಿಣ
ತ್ರಿಕೋಣ	ಅಭಿಚಾರಕ್ರಿಯಾ ದೋಷನಿವಾರಕ ದೇವತೆ	ನೈರುತ್ಯ
ಷಡಸ್ರ	ಸಾಂದರ್ಭಿಕ ಇಷ್ಟದೇವತೆ	ವಾಯುವ್ಯ
ಪದ್ಮಾಕ	ಸ್ತ್ರೀದೇವತೆ	ಉತ್ತರ
ಅಷ್ಟಸ್ರ	ಸಾಂದರ್ಭಿಕ ಇಷ್ಟದೇವತೆ	ಈಶಾನ್ಯ

ಇತ್ತೀಚೆಗೆ ಚಿಂತಾಮಣಿ ತಾಲೂಕಿನ ಕೈವಾರ ಕ್ಷೇತ್ರದಲ್ಲಿನ ಯಾಗಶಾಲೆಯಲ್ಲಿ, ಮೇಲೆ ವಿವರಿಸಿದಂತೆ ನವ ಹೋಮಕುಂಡ ಗಳನ್ನು ನಿರ್ಮಿಸಲಾಗಿದೆ. ಹವ್ಯಕ ಬ್ರಾಹ್ಮಣರನ್ನೇ ಕರೆಸಿ ಹೋಮಕಾರ್ಯವನ್ನು ನಡೆಸಲಾಗುತ್ತಿದೆ.

'ಸರ್ವತೋಭದ್ರ'ವು ಶುಭಪ್ರದ ಮಂಡಲವಾಗಿದೆ. ಸರ್ವದೇವತಾತ್ಮಕ ಮಂಡಲವಾಗಿದ್ದು ಸಂಕೀರ್ಣಕಾಂಡದಲ್ಲಿ ವಿವರಿಸಲ್ಪಟ್ಟಿದೆ. ಪ್ರತಿಷ್ಠಾಪನೆ, ಶಾಂತಿ ಮತ್ತು ಎಲ್ಲ ರೀತಿಯ ಕಾಮ್ಯಕರ್ಮಾನುಷ್ಠಾನದಲ್ಲಿ ಬಳಕೆಗೊಳ್ಳುತ್ತದೆ.

ಸ್ವಸ್ತಿಕ ಮಂಡಲವೂ ಸರ್ವತೋಭದ್ರದಂತೆ ಮಂಗಳ ಮತ್ತು ಅಭಿವೃದ್ಧಿಕಾರಕ ಸಂಕೇತವಾಗಿ ಬಳಕೆಯಾಗುತ್ತದೆ. ಇದು ಅತ್ಯಂತ ಜನಪ್ರಿಯವಾದ ಹಾಗೂ ಸರ್ವೇಸಾಮಾನ್ಯವಾಗಿ ಕಂಡುಬರುವ ಮಂಡಲ ಚಿತ್ರವಾಗಿರುತ್ತವೆ.

ಸ್ವಸ್ತಿಕ ಮತ್ತು ಸರ್ವತೋಭದ್ರ ಚಿತ್ರಗಳನ್ನು ಕುರಿತು ತ್ರಿವಿಕ್ರಮಭಟ್ಟನು ತನ್ನ 'ನಳಚಂಪು' ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ. ನೈಷಧರಾಜ ನಳನು ವೈದರ್ಭಿ ರಾಜಕುಮಾರಿ ದಮಯಂತಿಯ ಸ್ವಯಂವರದಲ್ಲಿ ಭಾಗಿಯಾಗಲು ವಿದರ್ಭ ದೇಶಕ್ಕೆ ಹೋಗಿದ್ದಾಗ ಜನಸಾಮಾನ್ಯರು ಈ ಶುಭ ಸಂಭ್ರಮದ ಮಹೋತ್ಸವದ ಸಂಕೇತವಾಗಿ ತಮ್ಮ ಮನೆಗಳ ಹೊರಗೋಡೆಗಳ ಮೇಲೆ ಸ್ವಸ್ತಿಕ ಮತ್ತು ಸರ್ವತೋಭದ್ರದ ಚಿತ್ರಗಳನ್ನು ಅತ್ಯಂತ ಕೌಶಲ್ಯಪೂರ್ಣ ವಾಗಿ ಸುಂದರವಾಗಿ ರಚಿಸಿದ್ದನ್ನು* ವೀಕ್ಷಿಸಿದ ನಳನು ಚಿತ್ರಲೇಖನ ಕಲಾಕೌಶಲವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದನ್ನು ಉಲ್ಲೇಖಿಸು ವುದರ ಮೂಲಕ ತ್ರಿವಿಕ್ರಮ ಭಟ್ಟನು ಮಂಡಲ ಚಿತ್ರಗಳ ಬಗ್ಗೆ ತನ್ನ ಮೆಚ್ಚುಗೆಯನ್ನೂ ವ್ಯಕ್ತಗೊಳಿಸಿದ್ದಾನೆ.

ಇಂದು ಈ ಮಂಡಲ ಚಿತ್ರಗಳು ಪಶ್ಚಿಮ ಕರಾವಳಿಯ ಪ್ರದೇಶದ ಧಾರ್ಮಿಕ ಸಾಮಾಜಿಕ ಚಿತ್ರಕಲಾ ಪ್ರಕಾರವಾಗಿ ಜನಜೀವನದಲ್ಲಿ ಹಾಸು ಹೊಕ್ಕಾಗಿ ಉಳಿದು ಬಂದಿವೆ. ಹವ್ಯಕ ಬ್ರಾಹ್ಮಣರು ಹವನ ಹೋಮ ಶಾಂತಿ ಅರ್ಚನೆ ಅನುಷ್ಠಾನಗಳಲ್ಲಿ ಮಂಡಲವರ್ಣ ಚಿತ್ರಗಳನ್ನು ರಚಿಸಿ ಅರ್ಚಿಸುವುದರಿಂದ ಸಾಮಾಜಿಕರಲ್ಲಿ ಈ ಕಲೆಯ ಬಗ್ಗೆ ಧಾರ್ಮಿಕ ಶ್ರದ್ಧೆ ಮೂಡಿ ಬಂದಿದೆ. ಆ ಮೂಲಕ ಐಹಿಕ ಸುಖ ಸಾಧನೆ ಸಾಧ್ಯವೆಂಬ ವಿಶ್ವಾಸವೂ ಬೆಳೆದುಬಂದಿದೆ. ಆದುದರಿಂದ ಪಶ್ಚಿಮ ಕರಾವಳಿ ಪ್ರದೇಶದ ಹಾಗೂ ಹವ್ಯಕ ಬ್ರಾಹ್ಮಣರ ವಿಶಿಷ್ಟವಾದ ಈ ಮಂಡಲ ಚಿತ್ರಕಲೆಯ ಪರಿಚಯವನ್ನು ಎಲ್ಲರಿಗೂ ಮಾಡಿಕೊಡು ವುದಕ್ಕಾಗಿಯೇ ಈ ಲೇಖನ

(ಮಂಡಲ ಚಿತ್ರಗಳ ಬಗ್ಗೆ ಅತ್ಯಮೂಲ್ಯ ಮಾಹಿತಿ ನೀಡಿ, ಲೇಖನದ ಕರಡನ್ನು ಓದಿ ತಿದ್ದಿಕೊಟ್ಟ ಪೂಜ್ಯರಾದ ವೇದಮೂರ್ತಿ ಮಂಜುನಾಥ ಭಟ್ಟರಿಗೂ, ಶ್ರೀ ಮಂಜುನಾಥ ಭಟ್ಟರನ್ನು ನನಗೆ ಪರಿಚಯ ಮಾಡಿಕೊಟ್ಟ ನನ್ನ ಪೂಜ್ಯ ಗುರುಗಳಾದ ವಿದ್ವಾನ್ ಶೇಷಾಚಲ ಶರ್ಮರಿಗೂ ನನ್ನ ಕೃತಜ್ಞತಾಪೂರ್ವಕ ನಮನಗಳು ಹಾಗೂ ಛಾಯಾಚಿತ್ರ ತೆಗೆಯುವ ಕಾರ್ಯದಲ್ಲಿ ಸಹಕರಿಸಿದ ನನ್ನ ವಿದ್ಯಾರ್ಥಿ ಮಿತ್ರರೂ ಅಭಿರುಚಿ ಅಡ್ವೆಂಚರರ್ಸ್ ಕ್ಲಬ್ಬಿನ ಸದಸ್ಯರಾದ ಚಿ|| ವೆಂಕಟೇಶ್, ಚಂದ್ರಶೇಖರ್, ರಾಜೇಶ್ ಬಾಬು, ಲೋಕೇಶ್, ಮರಿದೇವರು, ಅರವಿಂದರಿಗೂ ವಂದನೆಗಳು.)

*[ಈ ಬಗೆಯ ಚಿತ್ರಪರಂಪರೆಗೆ ಪ್ರೇರಣಾ ಮೂಲ ಯಾವುದು? - ಪ್ರಾಗೈತಿಹಾಸಿಕ ಕಾಲದ ಬಂಡೆ ಭಿತ್ತಿ ಚಿತ್ರಗಳೋ; ಮಾತೃಕಾ ನಿಘಂಟು ಬೀಜಾಕ್ಷರ ಕೋಶ ಇತ್ಯಾದಿ ತಾಂತ್ರಿಕ ಗ್ರಂಥಾಧಾರಿತ ತಾಂತ್ರಿಕ ಮತಾಚರಣೆಯಲ್ಲಿ ಬರುವ ಮಾತೃದೇವತೆ ಲಿಂಗವೃಕ್ಷ ವೃಷಭನಾಗ ಪೂಜಾವಿಧಿಗಳ ಶಕ್ತಿ ದೇವತಾಪರವಾದ ಚಿತ್ರಗಳೋ; ಸೈಂಧವ ಸಂಸ್ಕೃತಿಯ ಪ್ರತೀಕಗಳೋ; ಪ್ರೇರಣೆ ನೀಡಿವೆಯೇ ಎಂಬ ಬಗ್ಗೆ ಹಾಗು ಶ್ರುತ್ಯಾಗಮ, ಮಂತ್ರಮಹೋದಧಿ, ಮಂತ್ರ ಮಹಾರ್ಣವ ಇತ್ಯಾದಿ ಅಧಿಕೃತ ಗ್ರಂಥಗಳಲ್ಲಿ ಮಂಡಲ ಚಿತ್ರ ಕುರಿತ ವಿವರಗಳಿರುವಲ್ಲಿ ಚಿತ್ರಗಳಿಗೆ ಪ್ರೇರಣಾ ಮೂಲವನ್ನು ತಿಳಿಸಿವೆಯೇ ಎಂಬುದನ್ನೂ ಪರಿಶೀಲಿಸಬಹುದು. (ಸಂ.)]

ಕರುಣಾ ಮಂಗಳವೇಢೆ*

ನಾಡಕಳಸಿಯ ರೇಖಾಚಿತ್ರಗಳು

ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಐದು ಮೈಲಿ ಈಶಾನ್ಯಕ್ಕೆ ಇರುವ ಗ್ರಾಮ ನಾಡಕಳಸಿ. ನಾಡಕಳಿಸಿ ಗ್ರಾಮದಲ್ಲಿ ಸುಮಾರು ಹದಿಮೂರನೇ ಶತಮಾನದ ಆದಿಭಾಗದಲ್ಲಿ, ಹೊಯ್ಸಳಶೈಲಿಯಲ್ಲಿ ನಿರ್ಮಿತವಾದ ಎರಡು ದೇವಾಲಯಗಳು ಇವೆ. ಶ್ರೀ ಶ್ರೀಕಂಠಶಾಸ್ತ್ರಿಗಳು ತಮ್ಮ **ಹೊಯ್ಸಳವಾಸ್ತುಶಿಲ್ಪ** ಎಂಬ ಪುಸ್ತಕದಲ್ಲಿ ಇತರ 'ಸಣ್ಣ ಹೊಯ್ಸಳ ದೇವಾಲಯಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ನಾಡಕಳಸಿಯ ಈ ಎರಡು ದೇವಾಲಯಗಳನ್ನು ದಾಖಲಿಸಿದ್ದಾರೆ.(೧)

ನಾಡಕಳಸಿಯ ಈ ಎರಡೂ ದೇವಾಲಯಗಳು ಉತ್ತರಾಭಿಮುಖವಾಗಿ ನಿರ್ಮಿತವಾಗಿವೆ. ಮೊದಲ ದೇವಾಲಯವು ರಾಮೇಶ್ವರ ದೇವಾಲಯವೆಂದೂ, ಎರಡನೆಯ ದೇವಾಲಯವು ಮಲ್ಲಿಕಾರ್ಜುನ ದೇವಾಲಯವೆಂದೂ ಪ್ರಸಿದ್ಧಿಯಲ್ಲಿದೆ. ಎಫಿಗ್ರಾಫಿಯಾ ಕರ್ನಾಟಿಕಾ ಸಂಪುಟ VII (ಹಳೆಯ ಅವೃತ್ತಿ) ಯಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿಗೆ ಸಂಬಂಧಪಟ್ಟಂತೆ ನಾಡಕಳಸಿಗ್ರಾಮದ ಮೂರು ಶಾಸನಗಳಿವೆ. ಈ ಶಾಸನಗಳಲ್ಲಿ ಇಂದಿನ ರಾಮೇಶ್ವರ ದೇವಾಲಯದ ಶಿವನನ್ನು ಬಿಲ್ಲೇಶ್ವರ ಎಂಬ ಹೆಸರಿನಿಂದ ಕರೆಯುತ್ತಿದ್ದುದರ ದಾಖಲೆ ಸಿಗುತ್ತದೆ.(೨) ಎರಡನೇ ಮಲ್ಲಿಕಾರ್ಜುನ ದೇವಾಲಯವನ್ನು ಸೋಮನಾಥ ದೇವಾಲಯದ ಹೆಸರಿನಿಂದ ನಿರ್ಮಿಸಿರುವುದರ ಶಾಸನ ದಾಖಲೆ ಸಿಗುತ್ತದೆ.(೩)

ರಾಮೇಶ್ವರ ದೇವಾಲಯ

ರಾಮೇಶ್ವರ ದೇವಾಲಯವು ಏಕದ್ವಾರವನ್ನು ಹೊಂದಿದೆ. ಮುಖಮಂಟಪ, ಗರ್ಭಗುಡಿ ಇವೆ. ಮುಖಮಂಟಪದಲ್ಲಿ ಆರು ಕಂಬಗಳಿವೆ. ಕಕ್ಷಾಸನವಿದೆ. ಮುಖಮಂಟಪವನ್ನು ಬಳಸಿ ಗರ್ಭಗೃಹಕ್ಕೆ ಪ್ರದಕ್ಷಿಣಾಪಥವಿದೆ. ಪ್ರದಕ್ಷಿಣಾಪಥವು ವಿಶೇಷವಾಗಿದೆ. ನವರಂಗದಲ್ಲಿರುವ ಆರು ಕಂಬಗಳಲ್ಲಿ ಮೊದಲ ಎರಡು ಕಂಬಗಳ ಬುಡದಲ್ಲಿ ಶಾಸನವಿದೆ. ಎಲ್ಲ ಕಂಬಗಳಲ್ಲಿ ಉಬ್ಬು ಚಿತ್ರಗಳಿವೆ. ಇವುಗಳಲ್ಲಿ ಗರ್ಭಗುಡಿಯಿಂದ ಎಡಭಾಗದ ಮೂರನೇ ಕಂಬದಲ್ಲಿ ನೃತ್ಯಕಲೆಗೆ ಸಂಬಂಧಪಟ್ಟಂತೆ ಎರಡು ಉಬ್ಬು ಚಿತ್ರಗಳಿವೆ. ನೃತ್ಯಭಂಗಿಯಲ್ಲಿ ಕೊರೆದಿರುವ ಒಬ್ಬ ಸ್ತ್ರೀ ಉಬ್ಬು ಚಿತ್ರ ಬಹಳ ಸುಂದರವಾಗಿದೆ.(೪)

ಮಲ್ಲಿಕಾರ್ಜುನ ದೇವಾಲಯ

ರಾಮೇಶ್ವರ ದೇವಾಲಯದ ಎಡಮಗ್ಗುಲಿಗೆ ಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯವು ರಾಮೇಶ್ವರ ದೇವಾಲಯಕ್ಕಿಂತ ಹೆಚ್ಚು ವಿಶಾಲವಾಗಿದೆ. ದೇವಾಲಯವು ಒಟ್ಟು ಮೂರು ದ್ವಾರಗಳನ್ನು ಹೊಂದಿದೆ. ಮುಖ್ಯದ್ವಾರ ಉತ್ತರಾಭಿಮುಖವಾಗಿದೆ. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಗಭಿಮುಖವಾಗಿ ಇನ್ನೆರಡು ದ್ವಾರಗಳಿವೆ. ಮುಖ್ಯದ್ವಾರದಿಂದ ಗರ್ಭಗುಡಿಯವರೆಗೆ ವಿಶಾಲವಾದ ಮುಖಮಂಟಪವಿದೆ. ಮುಖಮಂಟಪದಲ್ಲಿ ನವರಂಗದ ವೇದಿಕೆ ಇದೆ. ವೇದಿಕೆಯಲ್ಲಿ ಒಟ್ಟು ಎಂಟು ಕಂಬಗಳಿವೆ. ಸುತ್ತಲೂ ಅತಿ ಎತ್ತರವಾದ ವಿಶಾಲವಾದ ಕಕ್ಷಾಸನವಿದೆ. ನವರಂಗದ ವೇದಿಕೆ ಮತ್ತು ಕಕ್ಷಾಸನಗಳ ಮಧ್ಯೆ ಎರಡರಂತೆ ಇಕ್ಕೆಲಗಳಲ್ಲಿ ಒಟ್ಟು ನಾಲ್ಕು ಕಂಬಗಳಿವೆ. ಗರ್ಭಗುಡಿಯ ದ್ವಾರದ ಇಕ್ಕೆಲಗಳಲ್ಲಿ ಸುಂದರವಾದ ಅಗಲವಾದ ಬಳ್ಳಿಗಳ ಜಾಲಂಧ್ರಗಳಿದ್ದು ಅದರಲ್ಲಿ ನರ್ತಕರ ವಾದಕರ ವಿವಿಧ ವಾದ್ಯಗಳ ಸುಂದರ ಶಿಲ್ಪಗಳನ್ನು ಕಾಣಬಹುದು.

ರೇಖಾಚಿತ್ರಗಳು

ಮಲ್ಲಿಕಾರ್ಜುನ ದೇವಾಲಯದಲ್ಲಿ ಒಟ್ಟು ಹನ್ನೆರಡು ಹೊಯ್ಸಳಶೈಲಿಯ ನಯವಾದ ಕಂಬಗಳ ಮಧ್ಯದಲ್ಲಿ ರೇಖಾಚಿತ್ರಗಳನ್ನು ಕೊರೆಯಲಾಗಿದೆ. ಕಂಬದ ಅಡಿಯಿಂದ ಸುಮಾರು ಐದರಿಂದ ಆರು ಕಂಬಗಳಲ್ಲಿ ತೊಂಭತ್ತಾರು (೯೬) ರೇಖಾಚಿತ್ರಗಳನ್ನು ಗುರುತಿಸಬಹುದಾಗಿದೆ. ಈ ರೇಖಾಚಿತ್ರಗಳು

* ೮೬೬, ೧೪ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು - ೫೬೦ ೦೮೬.

ಬಹಳ ಸುಂದರವಾಗಿವೆ. ಪ್ರಾಣಿಗಳು, ಪಕ್ಷಿಗಳು, ಬಳ್ಳಿಗಳನ್ನೊಳಗೊಂಡಂತೆ ರೇಖಾಚಿತ್ರಗಳನ್ನು ಕೊರೆಯಲಾಗಿದೆ. ೯೬ ಚಿತ್ರಗಳಲ್ಲಿ ಒಟ್ಟು ಐವತ್ತೈದು (೫೫) ಚಿತ್ರಗಳು ನೃತ್ಯವಿಷಯಕ್ಕೆ ಸಂಬಂಧಪಟ್ಟವು ಎಂಬುದು ನಮ್ಮ ಊಹೆಯಾಗಿದೆ. ಗರ್ಭಗುಡಿಯಿಂದ ಎಡಭಾಗಕ್ಕೆ ಇರುವ ಕಂಬಗಳಲ್ಲಿನ ಚಿತ್ರಗಳು ಸ್ಪಷ್ಟರೇಖೆಗಳುಳ್ಳ ರೇಖಾಚಿತ್ರಗಳಾಗಿವೆ. ನಂತರ ಬಲಭಾಗದ ಕೊನೆ ಕೊನೆಗೆ ಬರಬರುತ್ತಾ ರೇಖಾಚಿತ್ರಗಳು ಬಹಳ ಅಸ್ಪಷ್ಟವಾಗುತ್ತಾ ಹೋಗುತ್ತವೆ. ಹೀಗಿದ್ದರೂ ರೇಖಾಚಿತ್ರಗಳು ಬಹಳ ಸುಂದರವಾಗಿ ಕೊರೆದ ಚಿತ್ರಗಳಾಗಿವೆ. ಈ ರೇಖಾಚಿತ್ರಗಳನ್ನು ಗಮನವಿಟ್ಟು ವೀಕ್ಷಿಸಿದಾಗ ಅತ್ಯಂತ ಸಣ್ಣ ಸಣ್ಣ ವಿವರಗಳು ಬಹಳ ಸ್ಪಷ್ಟವಾಗಿ ಕಣ್ಣಿಗೆ ಗೋಚರಿಸುತ್ತವೆ. ಬಹಳ ಸೂಕ್ಷ್ಮವಾಗಿ ರೇಖೆಗಳನ್ನು ಕೊರೆಯುತ್ತಾ ಈ ರೇಖಾಚಿತ್ರಗಳನ್ನು ಬಿಡಿಸಲಾಗಿದೆ.

ಪ್ರೊ॥ ಎಸ್. ಸೆಟ್ಟರ್ The Hoysala Temples ಎಂಬ ಗ್ರಂಥದಲ್ಲಿ ಹೊಯ್ಸಳ ಕಾಲದ ರೇಖಾಚಿತ್ರಗಳ ಬಗ್ಗೆ ವಿವರಿಸುತ್ತಾ ಈ ರೇಖಾಚಿತ್ರಗಳು ಶಿಲ್ಪಗಳನ್ನು ಕೊರೆಯುವ ಮೊದಲು ಬರೆದುಕೊಳ್ಳುತ್ತಿದ್ದ ವಿವರವಾದ ರೇಖೆಗಳು. ಅದರ ಕುರುಹನ್ನು ಸೋಮನಾಥಪುರ ಮತ್ತು ನಾಡಕಲಸಿಯಲ್ಲಿ ನೋಡಬಹುದು ಎಂದು ಹೇಳುತ್ತಾರೆ.[೫]



ಡಾ। ಚೂಡಾಮಣಿ ನಂದಗೋಪಾಲ್ ತಮ್ಮ Dance & Music in temple Architecture ಎಂಬ ಗ್ರಂಥದಲ್ಲಿ ನಾಡಕಲಸಿಯ ಚಿತ್ರಗಳು ಅತ್ಯಂತ ಸುಂದರ ಚಿತ್ರಗಳು ಹಾಗೂ ಹೊಯ್ಸಳ ಕಾಲದ ಶೈಲಿಯಲ್ಲಿ ಪ್ರತಿಬಿಂಬಿಸುವ ವಿಶೇಷ ಚಿತ್ರಗಳು ಎಂದು ಹೇಳುತ್ತಾರೆ.[೬]

ನಾಡಿನ ಪ್ರಸಿದ್ಧ ಶಿಲ್ಪಿಯಾದ ಶ್ರೀ ಡಿ. ವಾದಿರಾಜ್ ಅವರ ಶಿಷ್ಯೆ ಶ್ರೀಮತಿ ಕನಕಾಮೂರ್ತಿಯವರನ್ನು ಸಂದರ್ಶಿಸಿದಾಗ ಅವರು ಹೀಗೆ ಹೇಳಿದರು: 'ಪ್ರಾಮಾಣಿಕವಾದ ಶಾಸ್ತ್ರಬದ್ಧ ಶಿಲ್ಪರಚನೆಗೆ ರೇಖಾಚಿತ್ರಗಳೇ ಮೂಲಾಧಾರ. ರೇಖಾಚಿತ್ರದ ಚೌಕಟ್ಟಿನಲ್ಲಿಯೇ ಶಿಲ್ಪದ ಕೆತ್ತನೆಯಾಗಬೇಕು. ಶಿಲ್ಪದಲ್ಲಿ ಕಾಣುವ ಪ್ರತಿಯೊಂದು ಸೂಕ್ಷ್ಮಕೆತ್ತನೆಯೂ ರೇಖಾಚಿತ್ರವನ್ನು ಅವಲಂಬಿಸಿರುತ್ತದೆ. ನಾಡಕಲಸಿಯ ರೇಖಾಚಿತ್ರಗಳು ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ದಾಖಲಾಗಿವೆ...'

ಈ ಎಲ್ಲ ವಿದ್ವಾಂಸರ ಅಭಿಪ್ರಾಯದಂತೆ ನಾಡಕಲಸಿಯ ರೇಖಾಚಿತ್ರಗಳು ಹೊಯ್ಸಳರ ಕಾಲದ ಶಿಲ್ಪಕಲೆಯ ಮೊದಲ ಹಂತವನ್ನು ತೋರಿಸಿಕೊಡುವ ಒಂದು ಅತ್ಯುತ್ತಮ ದಾಖಲೆ ಎಂಬುದು ಸ್ಪಷ್ಟವಾಗುತ್ತದೆ.

ಶಾಸನಗಳು

ಇದುವರೆಗೆ ನಾಡಕಲಸಿಯ ದೇವಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು ಮೂರು ಶಾಸನಗಳು ದೊರಕಿವೆ.[೭]

ಮೊದಲ ಎರಡು ಶಾಸನಗಳು ವೀರಗಲ್ಲುಗಳಾಗಿವೆ. ಈ ಶಾಸನದ ಕಾಲವನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. ಈ ಎರಡೂ ಶಾಸನಗಳಲ್ಲಿ ಬೀರೇದೇವರಸ ಮಾಂಡಲಿಕನ ಬಗ್ಗೆ ಮತ್ತು ಬಿಲ್ಲೇಶ್ವರ ದೇವರಿಗೆ ಪೂಜೆ ನಡೆಯುತ್ತಿದ್ದುದರ ಬಗ್ಗೆ ದಾಖಲೆಗಳು ಸಿಗುತ್ತವೆ.[೮]

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ VII (ಹಳೆಯ ಅವೃತ್ತಿ) ಸಾಗರ ೧೫, ನಮಗೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಿಕೊಡುತ್ತದೆ. ಶಾಸನದ ಕಾಲ ಸ್ಪಷ್ಟವಾಗಿ ಕ್ರಿ.ಶ.೧೨೧೮ ಎಂಬುದು ತಿಳಿದು ಬರುತ್ತದೆ. ರಾಜ-ಇಮ್ಮಡಿ ವೀರಬಲ್ಲಾಳ. ವೀರಬಲ್ಲಾಳನ ಮಾಂಡಲಿಕ ಬಂಮರಸ. ಈತ [ಕೊ]ಡುನಾಡು, ಕುಂದನಾಡು ಕೊಡನಾಡಿಗೆ ಒಡೆಯನಾಗಿದ್ದ. ಈ ಬಂಮರಸ ಮತ್ತು ಲಚ್ಚಿಯಬ್ಬರಸಿಗೆ ಹುಟ್ಟಿದ ಮಕ್ಕಳು ಕಾಳರಸ, ಬಾಳೆಯಂಮವೆಗ್ಗಡೆ, ಕೆಳೆಯಬ್ಬರಸಿ. ಈ ಕೆಳೆಯಬ್ಬರಸಿಯ ಮಗಳು ಬಿಯಬ್ಬರಸಿ. ಈ ಬಿಯಬ್ಬರಸಿ ಮತ್ತು ಗೊಂಗಣಂಗೆ ಬಾಳೆಯಂಮವೆರ್ಗಡೆ ಮಗನಾಗಿ ಹುಟ್ಟಿದ. ಈತ ಬಲ್ಲವೆರ್ಗ್ಗಡೆಯ ಅಳಿಯನಾಗಿದ್ದ. ಈ ಬಾಳೆಯಂಮವೆರ್ಗಡೆ ಕ್ರಿ.ಶ.೧೨೧೮ರಲ್ಲಿ ಕಲಿಸೆಯಲ್ಲಿ ಶ್ರೀಸೋಮನಾಥದೇವರ ದೇವಾಲಯವನ್ನು ಮಾಡಿಸಿದ.[೯]

ಮುಂದಿನ ಸಾಲುಗಳಲ್ಲಿ ಮಾಂಡಲಿಕ ಬಾಳೆಯಂಮವೆರ್ಗ್ಗಡೆಯ ಶೌರ್ಯ ಸಾಹಸಗಳನ್ನು ವಿವರಿಸುವ, ಛಂದೋಗತಿಯಲ್ಲಿರುವ ಸುಂದರವಾದ ಕಾವ್ಯವನ್ನು ನಾವು ಕಾಣಬಹುದು. ೨೭ರಿಂದ ೫೮ರ ವರೆಗಿನ ಶಾಸನದ ಸಾಲುಗಳಲ್ಲಿ ಬಾಳೆಯಂಮವೆರ್ಗಡೆಯ ಶೌರ್ಯ, ಸಾಹಸ, ವೀರತ್ವವನ್ನು ದಾಖಲಾಗಿದೆ. ಅವನ್ನು ಹಲವು ಅನೇಕ ಸಾಲುಗಳಲ್ಲಿ

ವರ್ಣಿಸಿರುವುದು ಭೀಭತ್ಸರಸಕ್ಕೆ ಅತ್ಯಂತ ಉತ್ತಮವಾದ ಉದಾಹರಣೆಯಾಗಿದೆ.[೧೦] ಇಲ್ಲಿಯ ಒಂದು ಸಾಲು, ಸತ್ತು ಪಿಶಾಚಿಗಳಾದ ಸೂಳೆಯರು ಶತ್ರುಗಳ ಹಸಿತೊಗಲನ್ನು ಉಟ್ಟು ಆಭರಣಗಳಾಗಿ ಮೂಳೆಗಳನ್ನು ಧರಿಸಿ, ಹಸಿ-ಬಿಸಿ ಮೆದುಳನ್ನು ಕೈಯಲ್ಲಿ ಹಿಡಿದು, ತಮ್ಮ ಬಾಳೆಯಂಮವೆರ್ಗಡೆಯ ಶೌರ್ಯವನ್ನು ನೃತ್ಯದ ಮೂಲಕ ಬಣ್ಣಿಸಿ ಸತ್ತ ಸೈನಿಕರನ್ನೇ ಹೆದರಿಸಿ ಓಡಿಸಿದರು ಎಂಬ ಸಾಲುಗಳು ಮೈನವಿರೇಳಿಸುತ್ತವೆ.

ಇದುವರೆವಿಗೆ ನಮಗೆ ಮಲ್ಲಿಕಾರ್ಜುನ ದೇವಾಲಯದಲ್ಲಿ ದೊರಕಿರುವ ರೇಖಾಚಿತ್ರಗಳನ್ನು ಗಮನಿಸಿದಾಗ ರೇಖಾ ಚಿತ್ರಗಳಿಗೂ ಶಾಸನ ಸಂಖ್ಯೆ ೧೫ರಲ್ಲಿ ವರ್ಣಿತವಾಗಿರುವ ವಿಷಯಗಳಿಗೂ ನೇರ ಸಂಬಂಧವಿದೆ ಎಂಬ ಅನುಮಾನ ಬರುತ್ತದೆ. ಶಾಸನದಲ್ಲಿ ವರ್ಣಿತವಾದ ಎಲ್ಲ ಸಾಲುಗಳೂ ಸಚಿತ್ರ ದಾಖಲೆಯಾಗಿ ಈ ರೇಖಾಚಿತ್ರಗಳಲ್ಲಿ ಒದಗಿ ಬಂದಿದೆ ಎಂಬ ನಮ್ಮ ಅನುಮಾನವನ್ನು ಪುಷ್ಟೀಕರಿಸುವಂತೆ ಕೆಲವು ಚಿತ್ರಗಳನ್ನು ಇಲ್ಲಿ ಗುರುತಿಸಬಹುದು.

ಗರ್ಭಗುಡಿಯಿಂದ ಎಡಭಾಗದ ಮೊದಲನೇ ಕಂಬದಲ್ಲಿ ಕೊರೆಯಲಾದ ಚಿತ್ರಗಳು ಸ್ಪಷ್ಟವಾಗಿ ದಂಪತಿಗಳ ಚಿತ್ರಗಳೆಂದು ಗುರುತಿಸಬಹುದು. ಈ ಚಿತ್ರಗಳಲ್ಲಿ 'ಅಶ್ಲೀಲತೆ'-Erotic ಅಂಶವು ಗೋಚರಿಸುವುದಿಲ್ಲ. ಈ ಇಬ್ಬರು ದಂಪತಿಗಳ ಚಿತ್ರ ಬಹಳ ಸುಂದರವಾಗಿದೆ. ಇದು ಬಹುಶಃ ಬಾಳೆಯಂಮವೆರ್ಗಡೆ ಮತ್ತು ಆತನ ಪತ್ನಿಯದ್ದಾಗಿರಬೇಕು. ಕಕ್ಷಾಸನದ ಎಡಭಾಗದ ಒಂದನೇ ಕಂಬದಲ್ಲಿನ ಚಿತ್ರ [ಸಂ] ಮಲ್ಲಯುದ್ಧದ ಚಿತ್ರವಾಗಿದೆ. ಯುದ್ಧದ ಒಂದು ಭಾಗವಾಗಿರಬಹುದಾದ ಈ ಚಿತ್ರ ಬಾಳೆಯಂಮವೆರ್ಗಡೆಯ ಚಿತ್ರವಾಗಿರಬಹುದು.

ಇಪ್ಪತ್ತೇಳರಿಂದ ಐವತ್ತೆಂಟರವರೆಗಿನ ಅನೇಕ ಸಾಲುಗಳನ್ನು ಚಿತ್ರ-೧೧, ಚಿತ್ರ-೩೪, ಚಿತ್ರ-೩೮, ಚಿತ್ರ-೪೬ ಪುಷ್ಟೀಕರಿಸುವುದನ್ನು ನಾವು ಗುರುತಿಸಬಹುದು.

ಮಲ್ಲಿಕಾರ್ಜುನ ದೇವಾಲಯದ ರಂಗಮಂಟಪ, ಕಕ್ಷಾಸನ, ರಂಗವೇದಿಕೆ, ವೇದಿಕೆಯ ಕಂಬಗಳಲ್ಲಿ, ಗರ್ಭಗುಡಿಯ ಜಾಲಂಧ್ರಗಳಲ್ಲಿ ಉಕ್ತವಾಗಿರುವ ರೇಖಾಚಿತ್ರ ಶಿಲ್ಪಗಳನ್ನು ಗಮನಿಸಿದಾದ ಮಲ್ಲಿಕಾರ್ಜುನ ದೇವಾಲಯದಲ್ಲಿ ರಂಗಭೋಗವು ನಡೆಯುತ್ತಿದ್ದುದರ ಸ್ಪಷ್ಟ ದಾಖಲೆ ಒದಗಿಬರುತ್ತದೆ. ಅಷ್ಟೇ ಅಲ್ಲದೆ ಆ ಕಾಲಕ್ಕೆ ರಂಗಭೋಗ ಪರಿವಾರದವರ ಜೀವನ ಶೈಲಿ, ಅವರಲ್ಲಿ ಹಿರಿಯ ಕಿರಿಯ ಕಲಾವಿದರಲ್ಲಿ ಇದ್ದ ಅಂತರ, ರಂಗಭೋಗ ಸೇವೆ ನಡೆಯುತ್ತಿದ ರೀತಿ, ರಂಗಭೋಗ ಸೇವೆಯಲ್ಲಿ ಮುಖ್ಯವಾಗಿ ನೃತ್ಯ ಪ್ರದರ್ಶನಕ್ಕೆ ಈ ದೇವಾಲಯದ ರಂಗಭೋಗ ಪರಿವಾರದವರು ಅಳವಡಿಸಿಕೊಂಡಿದ್ದ ಕಥಾಮಾಧ್ಯಮ, ಇವುಗಳಲ್ಲದೆ ಸೂಳೆವಳ, ನೃತ್ಯ ಸಂಗೀತ ಶಿಕ್ಷಣ ಇವುಗಳ ಬಗ್ಗೆ ಇಲ್ಲಿನ ರೇಖಾಚಿತ್ರಗಳು ಸಂಪೂರ್ಣ ಮಾಹಿತಿಯನ್ನು ಒದಗಿಸಿ ಕೊಟ್ಟಿರುವುದು ಗಮನಾರ್ಹ ಅಂಶವಾಗಿದೆ.

ನಾಡಕಳಿಸಿ ಮಲ್ಲಿಕಾರ್ಜುನ ದೇವಾಲಯದಲ್ಲಿ ದೊರಕಿರುವ ಈ ರೇಖಾಚಿತ್ರಗಳ ಆಧಾರದಲ್ಲಿ, ಒದಗಿರುವ ದಾಖಲೆಗಳ ಹಿನ್ನೆಲೆಯಲ್ಲಿ 'ರಂಗಭೋಗ' ವಿಷಯದ ಬಗ್ಗೆ ವಿವರವಾದ ಅಧ್ಯಯನ ನಡೆಸಲು ಅವಕಾಶವಿದೆ. ನೃತ್ಯ-ಗೀತ, ವೇಷಭೂಷಣಗಳನ್ನೊಳಗೊಂಡಂತೆ ಅನೇಕ ಮಾಹಿತಿಗಳನ್ನು ನಾಡಕಳಸಿ ರೇಖಾಚಿತ್ರಗಳು ಒದಗಿಸಿ**ವೆ**

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಡಾ|| ಎಸ್. ಶ್ರೀಕಂಠಶಾಸ್ತ್ರಿ : **ಹೊಯ್ಸಳ ವಾಸ್ತುಶಿಲ್ಪ, ಭಾಗ – ೪**, 'ಇತರ ಸಣ್ಣ ಹೊಯ್ಸಳ ದೇವಾಲಯಗಳು' : ಪುಟ - ೧೯೮.

*೨. **ಎಪಿಗ್ರಾಫಿಯ ಕರ್ನಾಟಿಕ ಸಂಪುಟ** ೮ (ಹಳೆಯ ಆವೃತ್ತಿ) ಶಾಸನ ಸಂ. ೧೫, ಸಾಲು - ೨೫, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು.

*೩. **ಎಪಿಗ್ರಾಫಿಯ ಕರ್ನಾಟಿಕ ಸಂಪುಟ** ೮ (ಹಳೆಯ ಆವೃತ್ತಿ) ಶಾಸನ ಸಂ. ೧೫, ಸಾಲು - ೨೦, ೨೧, ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು.

*೪. ರಾಮೇಶ್ವರ ದೇವಾಲಯದ ಚಿತ್ರ - ೧.

*೫. ಎಸ್. ಸೆಟ್ಟರ್: ದಿ **ಹೊಯ್ಸಳ ಟೆಂಪಲ್ಸ್**, ಕಲಾಯಾತ್ರಾ ಪಬ್ಲಿಕೇಶನ್ಸ್ - ೧೯೯೨ ಪುಟ ೧೩೬.

*೬. ಡಾ|| ಚೂಡಾಮಣಿ ನಂದಗೋಪಾಲ್ - **ಡಾನ್ಸ್ ಅಂಡ್ ಮ್ಯೂಸಿಕ್ ಇನ್ ಟೆಂಪಲ್ ಆರ್ಕಿಟೆಕ್ಚರ್**, ಆಗಮ ಪಬ್ಲಿಕೇಶನ್, ೧೯೯೦ ಪುಟ ೧೧೮.

*೭. **ಎಪಿಗ್ರಾಫಿಯ ಕರ್ನಾಟಿಕ ಸಂಪುಟ** ೮ (ಹಳೆಯ ಆವೃತ್ತಿ) ಶಾಸನ ಸಂ. ೧೩ ಸಾಲು - ೪, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು.

*೮. **ಎಪಿಗ್ರಾಫಿಯ ಕರ್ನಾಟಿಕ ಸಂಪುಟ** ೮ (ಹಳೆಯ ಆವೃತ್ತಿ) ಶಾಸನ ಸಂ. ೧೩, ಸಾಲು - ೪, ಶಾಸನ - ೧೪, ಸಾಲು - ೩, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು.

*೯. **ಎಪಿಗ್ರಾಫಿಯ ಕರ್ನಾಟಿಕ ಸಂಪುಟ** ೮ (ಹಳೆಯ ಆವೃತ್ತಿ) ಶಾಸನ ಸಂ. ೧೫, ಸಾಲು - ೧೮ ರಿಂದ ೨೧, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು.

*೧೦. ರೇಖಾಚಿತ್ರಗಳು

ಡಾ|| ಕೆ. ವಸಂತಲಕ್ಷ್ಮಿ*

ಹೆಬ್ಬೂರಿನ ಅಪ್ರಕಟಿತ ಶಾಸನ

ತುಮಕೂರು ತಾಲೂಕಿನ ಹೆಬ್ಬೂರು ಗ್ರಾಮವು, ವಿಜಯನಗರದ ಅರಸರ ಕಾಲದಲ್ಲಿ ಹೆಬ್ಬೂರು ಸೀಮೆಯೆಂದು ಪ್ರಸಿದ್ಧವಾಗಿತ್ತು. ಹೆಬ್ಬೂರಿನ ಪ್ರಾಚೀನವಾದ ಬೇಟೆರಾಯ ಸ್ವಾಮಿ ದೇವಾಲಯವು ಭವ್ಯವಾದ ದೇವಾಲಯವಾಗಿದ್ದು, ಇಲ್ಲಿ ಪೂಜೆ, ಉತ್ಸವಗಳು ಸಾಂಗವಾಗಿ ನಡೆಯಲೆಂದು ದಾನ ಬಿಟ್ಟದ್ದನ್ನು ಈ ಶಾಸನವು ತಿಳಿಸುತ್ತಿದೆ.

ಬೇಟೆರಾಯಸ್ವಾಮಿ ದೇವಾಲಯದ ಮುಂದಿನ ಆವರಣಕ್ಕೆ ಹಾಕಿರುವ ಬೇಲಿಯ ಪೊದೆಯ ನಡುವೆ ಹಿಮ್ಮೊಗವಾಗಿ ನಿಂತಿದ್ದ ಶಾಸನವು ಬಳ್ಳಿಗಳಿಂದ ಮುಚ್ಚಿ ಹೋಗಿತ್ತು. ದೊಡ್ಡ ಹಾಸುಗಲ್ಲನ್ನು ಗಮನಿಸಿ, ಕುತೂಹಲದಿಂದ ಬಳ್ಳಿಗಳನ್ನು ಕತ್ತರಿಸಿದಾಗ ಶಾಸನದ ಲಿಪಿ ಬೆಳಕಿಗೆ ಬಂತು. ಸುಮಾರು ೪' ಎತ್ತರದ ಹಾಸುಗಲ್ಲಿನ ಮೇಲೆ ಕಲ್ಲನ್ನು ನಯಗೊಳಿಸದೇ ಶಾಸನವನ್ನು ಕೊರೆಯಲಾಗಿದೆ. ಶಾಸನ ಪಾಠದ ಮೇಲ್ಭಾಗದಲ್ಲಿ ಸೂರ್ಯ, ಚಕ್ರ, ನಾಮ, ಶಂಖ ಮತ್ತು ಚಂದ್ರನನ್ನು ಕೆತ್ತಲಾಗಿದೆ. ಒರಟು ಕಲ್ಲಿನ ಮೇಲೆ ಅಕ್ಷರಗಳನ್ನು ಆಳವಾಗಿ ಕೊರೆದಿಲ್ಲ. ಮೂವತ್ತು ಸಾಲು ಪಾಠವಿರುವ ಈ ಶಾಸನದ ಮಧ್ಯಭಾಗದಲ್ಲಿ ಕಲ್ಲು ಸವೆದಿದ್ದು, ಅಕ್ಷರಗಳು ಮಸಕಾಗಿವೆ. ಅಕ್ಷರಗಳ ಗಾತ್ರ ಚಿಕ್ಕದು. ಶಾಸನದ ಕೆಳಭಾಗವನ್ನು ಮಾತ್ರ ಸ್ಪಷ್ಟವಾಗಿ ಕೊರೆಯಲಾಗಿದೆ. ಶಾಸನದ ಪಾಠದಲ್ಲಿ ಹಲವೆಡೆ ಒತ್ತಕ್ಷರಗಳು ಬಿಟ್ಟು ಹೋಗಿವೆ. ಸಂಸ್ಕೃತ ಶ್ಲೋಕಗಳಿಂದ ಕೂಡಿದ ಶಾಪಾಶಯದ ಭಾಗವನ್ನು ಹೆಚ್ಚು ಎಚ್ಚರಿಕೆಯಿಂದ ಕೆತ್ತಲಾಗಿದ್ದು, ಇಲ್ಲಿ ಮಾತ್ರ ಒತ್ತಕ್ಷರಗಳನ್ನೂ ಕಾಣುತ್ತೇವೆ. ಶಾಸನದ ಪಾಠವನ್ನು ದಾನಿಯಾದ ಕಾಳಪ್ಪ ನಾಯಕನು ಬರೆದನೆಂದು ಶಾಸನ ತಿಳಿಸುತ್ತಿದೆ.

ಶಾಸನದ ಪಾಠ

೧ ಶ್ರೀ ಗಣಾಧಿಪತಯೆ ನಮಃ।। ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮ

೨ ರ ಚಾರವೆ। ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಬುವೆ।। ಸ್ವಸ್ತಿ ಶ್ರೀ ವಿಜಯಾ

೩ ಭ್ಯುದಯ ಶಾಲಿವಾಹನ ಶಕ ವರುಷ ೧೪೫೨ನೆಯ ನಂದನ ಸಂವತ್ಸರದ ಮಾಘ ಬ ೧೪

೪ ಶಿವರಾತ್ರೆ ಪುಂಣ್ಯಕಾಲದಲೂ ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ

೫ ವೀರ ಪ್ರತಾಪ ಶ್ರೀ ಅಚ್ಯುತರಾಯ ಮಹಾರಾಯರೂ ಕಾಮೆನಾಯಕ ಅಯ್ಯನವರಿಗೆ ಪಾಲಿ

೬ ಸಿದ ಹೆಬೂರ ಸೀಮೆಯೊಳಗೆ ಕಾಮೆನಾಯಕ ಅಯ್ಯನವರ ಕಾರ್ಯಕೆ ಕರ್ತರಾದ ತಿಪಣ

೭ ನಾಯಕರ ಮಗ ಅಳಿಯ ಕಾಳಪನಾಯಕರು ಹೆಬೂರ ಬೇಟೆಯ ತಿರುವೆಂಗಳ ನಾಥ ದೇವ

೮ ರ ಶ್ರೀ ಪಾದಕೆ ಮಾಡಿ ಕೊಟ್ಟಂಥ ಸೇವೆ। ಕಾಮೆ ನಾಯಕರ ಕೊಮಾರತಿ ಮುದಾ

೯ ಜಿಯು ಕಾಲವ ಮಾಡಿದಾಗ ಅವಗ ಪುಣ್ಯಲೋಕ ಧರ್ಮ ಪ್ರಾಪ್ತವಾಗಬೇಕೆಂದು ನಿಡುವಳಲ ಸ್ಥ

೧೦ ಳದಲಿ ಮುದಲಾಪುರವೆಂಬ ಗ್ರಾಮವನೂ ವಸ್ತಾಗಿ ಕಟ್ಟಿಸಿ ಸಂಥೆ ಕಟ್ಟಿಸಿ ಸಾಲು ಮರವ ನಿಡಿಸಿ

೧೧ ದೇವರ ಅಮೃತಪಡಿಗೆ ಸಲುವ ದೇವರಪುರ ಮುದಲಾ ಪುರ ದೇವರಮುಂದೆ ಅಧಿವಾ (ನ?)ವಾಗಿ ಕಟ್ಟಿಸಿದ ಯಾಗಶು - (ಶಾಲೆ?)

೧೨ ಮಂಟಪ ದೇವರ ಅಂಗ ರಂಗ ವಯಿಭವಕೆ.. ಗಿ ಸಮಸ್ತ ಬಣಜ ನೆಲ ಬಿಡಲು ವಪಿ (?) ಧಾರೆಯ

* ಸಂಖ್ಯೆ ೩೫೬, ಔಟ್‌ಹೌಸ್, ೧೧ನೇ ಮುಖ್ಯರಸ್ತೆ, ಶ್ರೀನಿವಾಸನಗರ, ಬೆಂಗಳೂರು - ೫೬೦ ೦೫೦.

೧೩ ನೆರೆದು ಕೊಟ ಮೂಲೆ ವಾಸುದೇವರನ್ತ... ಸಿಗೆಯ ನಿರಿಸಿ ಬಾಗಿಲನಿಲಿಸಿ ಮಾಳಿಗೆ ಮಾಡಿಸಿ (?)

೧೪ - ವೆಯನು ಕಟ್ಟಿಸಿ ಮುತುವರಯ ಕಟ್ಟಿ ತೆಂಗು..; ವಸಂತಮಂಟಪವನು ಕಟಿಸಿ.. ಸಲಿಯನೂ

೧೫ ಮಾಡಿಸಿ ಕೊಟದೂ ದೇವರಿಗೆ ಸಲುವುದು/ದೇವರು ಬಿಜಮಾಡುವಗ ಪೂಜಿಸಿ ಕೊಟ್ಟ ಚಟ

೧೬ ಆ ಮುದಾಜಿಗೆ ಅವ ಮಾಡುವ ಅವಸಾನ ಕಾಲವಾಗಿ ಅವರಿಗೆ ಪುಣ್ಯಲೋಕ ಪ್ರಾಪ್ತಿಯಾಗ ಬೇ

೧೭ ಕೆಂದು ಭೂದಾನವಾಗಿ ಚೆಂನು ಗ್ರಾಮದವರ ಕಯಲು ಕೊಂಡು ಮುಳಕುಂಠಿಯ ನಾರಸಿ

೧೮ ಹ ಆರಾಧ್ಯರ ಮಕ್ಕಳು ಹೊನ್ನಪ್ಪಯ್ಯನವರಿಗೆ ಕಾಳ ನಾಯಕರು ಧಾರೆಯ ನೆರೆದು ಕೊಟ್ಟ ಕಾಮಲಾಪುರದ

೧೯ ಅಗ್ರಾರ । ಆ ಮುದಾಜಿಯನೂ ಹೆಬೂರ ಸ್ಥಳದಲಿ ಮಂಟಪವ ಕಟ್ಟಿಸಿ ಲೋ (ತೋ?) ಪವಿಕ್ಕಿಸಿ ಆಕೆಗೆ ಪುಣ್ಯ

೨೦ ಲೋಕ ಪ್ರಾಪ್ತಿಯಾಗಬೇಕೆಂದು ನಂಜನಾಥ ಭಟ್ಟರ ಮಕ್ಕಳು ತಿಂಮರಾಯರಸರಿಗೆ ಕಾಳಪನಾಯಕ

೨೧ ರೂ ಭೂದಾನವಾಗಿ ಧಾರೆನೆರೆದು ಕೊಪನ ಚತುಸ್ಸೀಮೆಗೆ ವಾಮನ ಮುದ್ರೆ ಕಲ್ಲು ಹಾಕಿಸಿ ಕೊಟ ಕೊ -

೨೨ ಯೀ ಧರ್ಮಗಳಿಗೆ ಆವನೊಬ್ಬ (ನು?) ಅಳುಪಿ.. ಮಾಡಿದರೆ ಆಕೃತಿ ಬ್ರಂಮ್ಹೇತಿ ಗೋವಧೆ ಶ್ರೀವಧೆ ಪತ್ತ

೨೩ ರುಕರ್ಪಕ ಸುವನು ಸ್ತಯ ಯಿಂತೀ ಪಂಚಮಹಾಪಾತಕವ ಮಾಡಿದಂಥಾ ದೋಷಕೆ ವೋಹರು

೨೪ ದಾನ ಪಾಲನಯೋರ್ಮಧ್ಯೇ ದಾನಛ್ರೇಯೋನುಪಾಲನಂ ದಾನಾಸ್ವರ್ಗ ಮವಾಪ್ನೋತಿ ಪಾಲನಾದ

೨೫ ಚುತಂ ಪದಂ। ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನುಂ ಪರದತ್ತಾಪಹಾರೇಣ

೨೬ ಸ್ವದತ್ತಂ ನಿಷ್ಪಲ. ಭವೇತು।। ಸ್ವದತ್ತಾ ಪರದತ್ತಾಂ ವಾಯೋಹರೇತಿ ವಸುಂಧರಾಮ ಸಷ್ಟಿವರ್ಷ

೨೭ ಸಹಸ್ರಣ ವ್ರಿಷ್ಟಾಯಾಂ ಜಾಯತೇ ಕ್ರಿಮಿ।। ಯೆ ಕೈವ ಭಗಿನೀ ಲೋಕೇ ಸರ್ವೇ

೨೮ ಶಾಮೇವಾ ಭೂಭೂಜಾಂ।। ನ ಭೋಜ್ಯಂ ನಕರ ಗ್ರಾಹ್ಯಾ ವಿಪ್ರದತ್ತಾ ವಸುಂಧರಾ।। ಪರದಃ

೨೯ (ಸಾಲಿನ ಅಕ್ಷರಗಳು ಸವೆದಿದೆ)......

೩೦ ....

೩೧. ಪ ಹಾರಕಾ।। ಕಾಳಪ್ಪ ನಾಯಕರ ಬರಹ

ಶಾಸನದ ಅರ್ಥ

ಶಾಸನವು ಗಣಪತಿ ಮತ್ತು ಶಿವನ ಪ್ರಾರ್ಥನೆಯೊಂದಿಗೆ ಆರಂಭವಾಗಿದೆ. ಶಕ ೧೪೫೨ನೆಯ ನಂದನ ಸಂವತ್ಸರದ ಮಾಘ ಬ ೧೪ ರಂದಿನ ಶಿವರಾತ್ರಿಯನ್ನು ದಾಖಲಿಸಿದೆ. ಆದರೆ ಎಫಿಮರೀಸ್ ಪ್ರಕಾರ ಶಕ ೧೪೫೨ 'ವಿಕೃತ ಸಂವತ್ಸರ'ವಾಗಿದ್ದು ಮಾಘ ಬಹುಳ ೧೪ರ, ವಿವರವು ೧೬.೨.೧೫೨೧ ಗುರುವಾರ ಆಗುತ್ತದೆ. ನಂದನ ಸಂವತ್ಸರವು ಶಕ ೧೪೫೪ರಲ್ಲಿ ಬಂದಿದ್ದು ಅದರ ಮಾಘ ಬಹುಳ ೧೪ ಆಗಿದ್ದಲ್ಲಿ ಅದು ೨೨, ೨೩ ಫೆಬ್ರವರಿ - ಕ್ರಿ. ಶ. ೧೫೩೩ - ಶನಿವಾರ ಮತ್ತು ಭಾನುವಾರಕ್ಕೆ ಸರಿಹೊಂದುತ್ತಿದೆ.

ವಿಜಯನಗರದ ಅರಸು ಅಚ್ಚುತ ಮಹಾರಾಯರು, ಹೆಬ್ಬೂರ ಸೀಮೆಯನ್ನು ಕಾಮೇನಾಯಕರಿಗೆ ವಹಿಸಿಕೊಟ್ಟದ್ದನ್ನು ದಾಖಲಿಸಿದೆ.

ಕಾಮೇನಾಯಕರ ಕಾರ್ಯಕರ್ತರಾದ ತಿಪ್ಪಣನಾಯಕರ ಮಗ, ಕಾಮೇನಾಯಕರ ಅಳಿಯನೂ ಆಗಿದ್ದ ಕಾಳಪ್ಪ ನಾಯಕನು ಹೆಬ್ಬೂರಿನ ಬೇಟೆಯ ತಿರುವೆಂಗಳನಾಥ ದೇವರಿಗೆ ಮಾಡಿಕೊಟ್ಟ ಸೇವೆಯನ್ನು ದಾಖಲಿಸುವುದು ಶಾಸನದ ಉದ್ದೇಶವಾಗಿದೆ. ಕಾಳಪ್ಪನಾಯಕನು ಕಾಮೆನಾಯಕರ ಮಗಳು ಮುದಾಜಿ ಅವಸಾನವಾದಾಗ, ಅವಳಿಗೆ ಪುಣ್ಯಲೋಕ ಪ್ರಾಪ್ತಿಯಾಗಲೆಂದು, ನಿಡುವಳಲ ಸ್ಥಳದಲ್ಲಿ ಹೊಸದಾಗಿ ಮುದಲಾಪುರವೆಂಬ ಗ್ರಾಮವನ್ನು ಮಾಡಿಸಿ, ಸಂತೆ ಕಟ್ಟಿಸಿ, ಸಾಲು ಮರವನ್ನು ನೆಡೆಸಿ, ಈ ಗ್ರಾಮವನ್ನು ದೇವರ ಅಮೃತಪಡಿಗಾಗಿ ದಾನ ಬಿಡುತ್ತಾನೆ. ದೇವರ ಮುಂದೆ ಯಾಗಶಾಲೆ ಮಂಟಪವನ್ನು ಕಟ್ಟಿಸಿ, ದೇವರ ಅಂಗ ರಂಗ ವೈಭವಕ್ಕೆಂದು ಸಮಸ್ತ ಬಣಜಿಗರು ಒಪ್ಪಿ ಭೂದಾನ ಮಾಡುತ್ತಾರೆ ಎಂದು ಶಾಸನ ತಿಳಿಸಿದೆ.

ಇದೇ ಶಾಸನವು ಮೂಲೆ ವಾಸುದೇವರ ದೇವಾಲಯಕ್ಕೆ ಬಾಗಿಲನ್ನು ನಿಲ್ಲಿಸಿ ಮಾಳಿಗೆ ಮಾಡಿಸಿ ವಸಂತ ಮಂಟಪವನ್ನು ಕಟ್ಟಿಸಿದ್ದನ್ನು ದಾಖಲಿಸಿದೆ. ದೇವರು ಉತ್ಸವದಲ್ಲಿ ಬಿಜಯ ಮಾಡಿದಾಗ ಪೂಜೆ ನಡೆಸಲು ದಾನ ಬಿಟ್ಟದ್ದನ್ನು ತಿಳಿಸುತ್ತಿದೆ. ಇದನ್ನು ಕಾಳಪ್ಪನಾಯಕನು ಮುದಾಜಿಗೆ ಪುಣ್ಯವಾಗಲೆಂದು ಮಾಡಿಸಿದ್ದು, ಚೆಂನ್ನು ಗ್ರಾಮದವರ ಕೈಯಲ್ಲಿ ಕೊಂಡುಕೊಂಡ ಭೂಮಿಯನ್ನು ಮುಳುಕುಂಠೆಯ ನಾರಸಿಂಹ ಆರಾಧ್ಯರ ಮಕ್ಕಳು ಹೊನ್ನಪ್ಪಯ್ಯನವರಿಗೆ ಧಾರೆ ಎರೆದು ಕೊಡುತ್ತಾರೆ. ಈ ಭೂಭಾಗವನ್ನು ಶಾಸನವು "ಕಾಮಲಾಪುರದ ಅಗ್ರಾರ"ವೆಂದೇ ಕರೆದಿದೆ. ಹೆಬ್ಬೂರ ಸ್ಥಳದಲ್ಲಿ ಮುದಾಜಿಗೆ ಪುಣ್ಯವಾಗಲೆಂದು ಮಂಟಪವನ್ನು ಕಟ್ಟಿಸಿ ತೋಪನಿಕ್ಕಿಸಿದ ಕಾಳಪ್ಪ ನಾಯಕನು ನಂಜನಾಥಭಟ್ಟರ ಮಕ್ಕಳಾದ ತಿಂಮರಾಯರಸರಿಗೆ ಚತುಸ್ಸೀಮೆಗೆ ವಾಮನ ಮುದ್ರೆ ಕಲ್ಲನ್ನು ಹಾಕಿಸಿ ಭೂದಾನ ನೀಡಿದ್ದನ್ನು ಶಾಸನ ತಿಳಿಸುತ್ತಿದೆ.

ಈ ಶಾಸನ ಧರ್ಮವನ್ನು ಅಳಿಸಿದವರು, ಗೋಹತ್ಯೆ ಬ್ರಹ್ಮಹತ್ಯೆ, ಸ್ತ್ರೀಹತ್ಯೆ, ಸುವರ್ಣಸ್ತಯ,...... ಮೊದಲಾದ

ಪಂಚಮಹಾಪಾತಕಗಳನ್ನು ಮಾಡಿದ ದೋಷಕ್ಕೆ ಸಲ್ಲುವರೆಂದು ಶಾಸನ ತಿಳಿಸಿದೆ. ಪಂಚಮಹಾಪಾತಕಗಳನ್ನು ಹೆಸರಿಸಿರುವ ಈ ಶಾಸನದಲ್ಲಿ ಆಕೃತಿ > ಅಶ್ವೇತಿ (ಅಶ್ವಹತ್ಯೆ) ಇರಬಹುದು; ಅದಲ್ಲದೇ, ಪತ್ತರು ಕರ್ಪಕ ಈ ಪದ ಸ್ಪಷ್ಟವಾಗುತ್ತಿಲ್ಲ. ಪಂಚ ಮಹಾಪಾತಕಗಳನ್ನು ತಿಳಿಸುವಲ್ಲಿ ಮೇಲೆ ಸೂಚಿಸಿದ ನಾಲ್ಕರ ಜೊತೆಗೆ 'ಗುರುತಲ್ಪಗಮನ'ವೆಂಬ ಮತ್ತೊಂದು ಪಾತಕ ಉಲ್ಲೇಖವಾಗಿದೆ. ಈ ಪದವೇ ಇಲ್ಲಿ ಕೊರೆದಿರುವ ಪದವಿರ ಬಹುದು. ಈ ಸೂಚನೆಯ ಜೊತೆಗೆ ದಾನವನ್ನು ನಾಶಪಡಿಸಿದರೆ, ಅಪಹರಿಸಿದರೆ, ಸಾವಿರಾರು ವರ್ಷ ಕ್ರಿಮಿಯಾಗಿ ಕೊಳೆಯುವ ರೆಂದು ತಿಳಿಸುವ ಶ್ಲೋಕಗಳನ್ನು ಕೆತ್ತಲಾಗಿದೆ. ಈ ಶಾಸನಾಂತ್ಯದಲ್ಲಿ ಬರೆದವನು ಕಾಳಪ್ಪನಾಯಕನೆಂಬ ಉಲ್ಲೇಖವೂ ಇದೆ.

ಈ ಶಾಸನವು ಹೆಬ್ಬೂರು ಸೀಮೆಯ ಬೇಟೆ ತಿರುವೆಂಗಳ ನಾಥ ದೇವಾಲಯದ ಮತ್ತು ಮೂಲೆ ವಾಸುದೇವ ದೇವಾಲಯದ (ವರದರಾಜ ಸ್ವಾಮಿದೇವಾಲಯ?) ಪೂಜಾ ವೈಭವವನ್ನು ತಿಳಿಸುತ್ತಾ, ಮುದಲಾಪುರವೆಂಬ ಅಗ್ರಹಾರ ನಿರ್ಮಿಸಿದ್ದನ್ನು ತಿಳಿಸುತ್ತಿದೆ. ಆದರೆ ಇಂದು ನಿಡುವೊಳಲು ಗ್ರಾಮವಿದೆಯಾದರೂ 'ಮುದಲಾಪುರ'ವೆಂಬ ಊರು ನಶಿಸಿರುವಂತಿದೆ

(ಈ ಶಾಸನ ಪಾಠವನ್ನು ಪರಿಷ್ಕರಿಸಲು ಸಹಕರಿಸಿದ ಡಾ|| ದೇವರ ಕೊಂಡಾರೆಡ್ಡಿ, ಶ್ರೀಮತಿ ಕೂ.ಸ. ಅಪರ್ಣ ಅವರಿಗೂ ಶಾಸನವಿದ್ದ ಪೊದೆ ಪರಿಸರವನ್ನು ಬಹುಪರಿಶ್ರಮದಿಂದ ಸರಿಪಡಿಸಿ ಶಾಸನದಚ್ಚು ತೆಗೆದುಕೊಳ್ಳಲು ಸಹಕರಿಸಿದ ಹೆಬ್ಬೂರಿನ ವಿಪ್ರ ವಿದ್ಯಾಸಂಸ್ಥೆಯವರಿಗೆ ನಾನು ಋಣಿ.)

ಕೆ. ನಂಜುಂಡ ಪ್ರಸಾದ್*
ಡಾ|| ಎಂ. ಜಿ. ಮಂಜುನಾಥ**

ಹುಳಿಯಾರ್‌ನ ಅಪ್ರಕಟಿತ ಶಾಸನ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರ್‌ನ ಮಲ್ಲಿಕಾರ್ಜುನ ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ಭೂಮಿಯಲ್ಲಿ ಒಂದು ದೊಡ್ಡ ಶಿಲಾಶಾಸನ ದೊರೆಯಿತು. ಆ ಶಾಸನವನ್ನು ಈಗ ಅಲ್ಲಿಯೇ ಮಲ್ಲಿಕಾರ್ಜುನ ದೇವಾಲಯದ ಮುಂದಿನ ಆವರಣದಲ್ಲಿ ಸಂರಕ್ಷಿಸಿಡಲಾಗಿದೆ.

ಆ ಶಾಸನವು ಐದು ಅಡಿ ಎತ್ತರ ಹಾಗೂ ಎರಡು ಅಡಿ ಅಗಲದ ನಸುಗಪ್ಪು ಬಣ್ಣದ ಬಳಪದ ಕಲ್ಲಿನ ಫಲಕದ ಮೇಲೆ ಕೊರೆಯಲ್ಪಟ್ಟಿದೆ. ಶಾಸನ ಫಲಕದ ಮೇಲ್ಭಾಗದಲ್ಲಿ ಒಂದು ಅಡಿಯಷ್ಟು ಎತ್ತರ ಹಾಗೂ ಎರಡು ಅಡಿ ಅಗಲದ ಸ್ಥಳದಲ್ಲಿ ಶಿಲ್ಪವನ್ನು ಕೊರೆಯಲಾಗಿದೆ.

ಶಾಸನದ ಶಿಲ್ಪ : ಶಾಸನ ಫಲಕದಲ್ಲಿನ ಬರಹದ ಮೇಲ್ಭಾಗದಲ್ಲಿ ತ್ರಿಭಂಗಿಯಲ್ಲಿ ನಿಂತಿರುವ ದಂಪತಿಗಳಿಬ್ಬರ ಶಿಲ್ಪವಿದೆ. ಆ ದಂಪತಿಗಳಲ್ಲಿ ಸ್ತ್ರೀಯು ತನ್ನ ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದು ಬಲಗೈಯಲ್ಲಿ ತನ್ನ ಪತಿಯ ಸೊಂಟವನ್ನು ತಬ್ಬಿ ಹಿಡಿದಿದ್ದಾಳೆ. ಆ ಪುರುಷನು ತನ್ನ ಎಡಗೈಯನ್ನು ತನ್ನ ಎಡಬದಿಯಲ್ಲಿ ನಿಂತಿರುವ ಪತ್ನಿಯ ಭುಜದ ಮೇಲಿಟ್ಟುಕೊಂಡು ಬಲಗೈಯಲ್ಲಿ ಚಾವಟಿಯನ್ನು ಹಿಡಿದಿದ್ದಾನೆ. ಬಹುಶಃ ಇದು *ಮೈಲಾರ* ಮತ್ತು *ಮಾಳಚಿಯರ* ಶಿಲ್ಪವೆಂದು ತೋರುತ್ತದೆ. ಮೈಲಾರನ ತಲೆಯ ಮೇಲೆ ಎರಡು ಕೊಂಬುಗಳಿಂದ ಕೂಡಿದ ಶಿರೋಭೂಷಣವಿದೆ. ಮಾಳಚಿಯ ಎಡಭಾಗದಲ್ಲಿ ಜೀನು ಲಗಾಮುಗಳಿಂದ ಅಲಂಕೃತವಾದ ಕುದುರೆಯ ಶಿಲ್ಪವಿದೆ. ಮೈಲಾರನ ಬಲಭಾಗದಲ್ಲಿ ಕೈಗಳನ್ನು ಮುಗಿದುಕೊಂಡು ನಿಂತಿರುವ ಗಡ್ಡಧಾರಿ ಪುರುಷನೊಬ್ಬನ ಶಿಲ್ಪವಿದೆ.


ಶಾಸನದ ಐತಿಹಾಸಿಕ ಸಾಂಸ್ಕೃತಿಕ ಅಂಶಗಳು : ನಲವತ್ತನಾಲ್ಕು ಸಾಲುಗಳ ಈ ಶಾಸನದ ಪ್ರಾರಂಭದಲ್ಲಿ ಓಂ ನಮಃ ಶಿವಾಯ ಎಂಬ ಬರಹವಿದ್ದು ನಂತರ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ' ಎಂಬ ಶಿವಸ್ತುತಿಪರವಾದ ಶ್ಲೋಕವಿದೆ.

ತದನಂತರದ ಭಾಗದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಪೆರ್ಮಾಡಿ ದೇವರು ಕಲ್ಯಾಣ ಪಟ್ಟಣದಲ್ಲಿ ಆಳ್ವಿಕೆ ನಡೆಸುತ್ತಿದ್ದ ವಿವರಗಳಿವೆ. ಹಾಗೂ ಆತನ ಕೈಕೆಳಗೆ ಹೊಯ್ಸಳ ವಂಶದ ವಿಷ್ಣುವರ್ಧನನು ಮಹಾಮಂಡಲೇಶ್ವರನಾಗಿ ಆಳ್ವಿಕೆ ನಡೆಸುತ್ತಿದ್ದ ವಿವರಗಳಿವೆ. ಶಾಸನದ ನಂತರದ ಭಾಗದಲ್ಲಿ ವಿಷ್ಣುವರ್ಧನನ ಮೊಮ್ಮಗನಾದ ವೀರಬಲ್ಲಾಳನ ಆಳ್ವಿಕೆಯ ಬಗ್ಗೆ ವಿವರಿಸಲಾಗಿದೆ. ವೀರ ಬಲ್ಲಾಳನು ಚಕ್ರವರ್ತಿಯಾಗಿ ದ್ವಾರ ಸಮುದ್ರದ ನೆಲೆವೀಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಆತನ ಮಂತ್ರಿಯಾಗಿದ್ದ ಗೋವಿದೇವನು ಪಾರ್ಶ್ವನಾಥ ತೀರ್ಥಂಕರನ ಭಕ್ತನಾಗಿದ್ದನು. ಅವನು ರಣರಂಗದಲ್ಲಿ ಕಡುಗಲಿಯಂತಿದ್ದನು.

ಈಶ್ವರ, ನಂದೀಶ್ವರ, ಸಿಡಿಲು, ಬಡಬಾಗ್ನಿ (ಪ್ರಳಯಾಗ್ನಿ), ಭೀಮ, ಅರ್ಜುನ, ಇವರನ್ನು ಹೇಗೆ ಯಾರೂ ಎದುರಿಸಲು ಸಾಧ್ಯವಿಲ್ಲವೋ ಹಾಗೆಯೇ ಗೋವಿದೇವನನ್ನು ಯಾರೂ ಎದುರಿಸಲು ಸಾಧ್ಯವಿಲ್ಲ ಎಂದು ಶಾಸನ ಕವಿ ವರ್ಣಿಸಿದ್ದಾನೆ. ಶಾಸನದ ಮುಂದಿನ ಭಾಗದಲ್ಲಿ ಗೋವಿದೇವನು ತನ್ನ ಊರಿನ ಬ್ರಹ್ಮೇಶ್ವರ ದೇವರ ಅಂಗಭೋಗಕ್ಕೆ, ಆಹಾರ ದಾನಕ್ಕೆ ದೇವರ ಅರ್ಚಕನಾದ ದೇವರ ಮಾಳ್ಯನ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ಕೆರೆಯ ಕೆಳಗಿನ ಗದ್ದೆ, ತೋಟ

* ೧೭, ಕೆ. ೧೭ನೆಯ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು - ೫೬೦ ೦೨೬.
** ಕನ್ನಡ ಉಪನ್ಯಾಸಕ, ಬೆಂ. ವಿ. ವಿ. ಸ್ನಾತಕೋತ್ತರ ಕೇಂದ್ರ, ಕೋಲಾರ.

ಮುಂತಾದವುಗಳನ್ನು ದಾನವಾಗಿ ಕೊಟ್ಟ ವಿವರಗಳಿವೆ. ಶಾಸನದ ಕಡೆಯ ಭಾಗದಲ್ಲಿ ಶಾಪಾಶಯಗಳಿವೆ. ಪ್ರಸ್ತುತ ಶಾಸನದಲ್ಲಿ ಕಾಲದ ಉಲ್ಲೇಖವಿರುವ ಭಾಗ ಸ್ವಲ್ಪ ಮಟ್ಟಿಗೆ ತ್ರುಟಿತವಾಗಿದ್ದರೂ ಸಹ ಶಾಸನದ ಕಾಲ ನಿರ್ಧರಿಸಲು ಹೆಚ್ಚಿನ ತೊಂದರೆಗಳಿಲ್ಲ. ಪ್ರಭವ ಸಂವತ್ಸರದ ಚೈತ್ರ ಮಾಸದ ಬಹುಳ ಪ್ರಥಮಾ ಶಶಾಂಕನ ವಾರವು ಕ್ರಿ. ಶ. ೧೨೦೮ನೆಯ ಇಸವಿ ಮಾರ್ಚ್ ೯ರ ಸೋಮವಾರಕ್ಕೆ ಪ್ರಸ್ತುತ ಶಾಸನೋಕ್ತ ಕಾಲವು ಸರಿ ಹೊಂದುತ್ತದೆ.



ಶಾಸನ ಪಾಠ

೧ ಓಂ ನಮಃ ಸಿವಾಯ ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾ
೨ ರವೇ ತ್ರೈಲೋಕ್ಯ ನಗರಾರಂಬ ಮೂಲಸ್ತಂಭಾಯ ಸಂಭವೇ
೩ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾ
೪ ರಾಜಾಧಿರಾಜ ಪರಮೇಸ್ವರ ಪರಮಭಟ್ಟಾರ
೫ ಕಂ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ ಶ್ರೀಮಜ್ಜಗ
೬ ದೇಕ ಮಲ್ಲರಾಯ ಪೆಂರ್ಮ್ಮಾಡಿ ದೇವರು ಕಲ್ಯಾಣದ ನೆಲೆ
೭ ವೀಡಿನೊಳು ಸಪಾದಲಕ್ಷ ಭೂಮಿಯಂ ದುಷ್ಟ ನಿಗ್ರಹ ಸಿ
೮ ಷ್ಟ ಪ್ರತಿಪಾಳನಂಗೆಯುತ್ತ ಸುಕ ಸಂಕಥಾ ವಿನೋದದಿಂ ರಾಜ್ಯಂ
೯ ಗೆಯ್ಯುತ್ತಿರೆ।। ತತ್ಪಾದ ಪದುಮೋಪ ಜೀವಿ।। ನಂಗಲಿ
೧೦ ಕೊಂಗು ಸಿಂಗಮಲೆ ವಾಯಪುರಂ ತಳಕಾಡು ರೊದವಾಬರಗಿ
೧೧ ವೊಸಗಿರಿ ಬಂಕಪುರಂ ಬನವಾಸೆ ಕೊಯತೂರ್ತ್ತುಂಗ ಪರಾ
೧೨ ಕ್ರಮಂ ವಿಜಯವರ್ದ್ಧನನೆ ಕಲಿ ವಿಷ್ಣುವರ್ದ್ಧನಂ।। ಸ್ವಸ್ತಿಸಮ
೧೩ ಧಿಗತ ಪಂಚ ಮಹಾಶಬುದ ಮಹಾಮಂಡಳೇಸ್ವರಂ ದ್ವಾ
೧೪ ರಾವತಿ ಪುರವರಾಧೀಸ್ವರಂ ಯಾದವಾಂ ಸ್ವಯಾತ್ತುಂಗ ವಾ
೧೫ ಸಂತಿಕಾದೇವಿ ಲಬ್ದವರ ಪ್ರಸಾದನಸಹಾಯ ಶೂರಂ ನಿಸ್ಸಂಕ
೧೬ ಪ್ರತಾಪ ಚಕ್ರವರ್ತಿ ವೀರಬಲ್ಲಾಳ ದೇವರು ದ್ವಾರಸಮುದ್ರದ ನೆ
೧೭ ಲೆ ವೀಡಿನೊಳು ಸುಕಸಂಕತಾ ವಿನೋದದಿಂ ರಾಜ್ಯಂಗೈಯ್ಯುತಿ
೧೮ ರೆ ತತುಪಾದ ಪಾದುಮೋಪ ಜೀವಿ।। ಮುದದಿಂ ದೀರ್ಗ್ಘಾಯು
೧೯ ಮಂಶ್ರೀಯುಮನನವರತಂ ಮಾಳಿಲೋಕೈಕನಾತಂ ತ್ರಿ
೨೦ x x ಸಂಶ್ರೀ ಇಂದ್ರ ವಿದ್ಯಾಧರಾಮರ x ಶ್ರೇಣಿ
೨೧ x x x ಳ ಗಾಜತ್ಪದ ಪದುಮ ಪಾರಿಸ್ವತೀರ್ತೆಸ್ವರನ
೨೨ ಮಿತ ವಧೂನಿತ್ರಸಾರವರಿರ್ಯ್ಯರೂಪಂ ಭುವನ
೨೩ ಸೇಬ್ಯಂ ಗೋವಿದೇವಂಗಮಳ ಗುಣಯಶೌ ಘಂಸಿ
೨೪ ರೋಚಂದ್ರ ತಾರಂ।। ಕಡುಗಲಿ ಬಲಂಧುರದೊಳು ತೊಡ
೨೫ ರ್ದ್ಧಂಗಾರೀಷ ನಂನ್ನಂದೀಸ್ವರನಂನ್ನಂ ಸಿಡಿಲಂನಂ ಕಲ್ಪಾಂತದ ಕಡಲಂ
೨೬ ನಂ ಭೀಮನಂನನ್ನರ್ಜುನನ್ನಂ।। ನಡವ ಚಳುಕ್ಯ ವಿಕ್ರಮನಬಂ
೨೭ x x x x x ಯಾಗೆ ಸಂದೊಡರಿಸಿ ಬಂದುದೆ ಪ್ರತುಮೆಯಿಂ

೨೮ ಪ್ರಭವದ ಚೈತ್ರ ಮಾಸದಿಂಗಡಣಿಸೆ ಬಾಹುಳಂ ದಿನದ
೨೯ x x ಸಶಾಂಕನ ವಾರ ಮುತ್ತರ೦ ಪ್ರತಮ
೩೦ ದೊಳು ಕೊಟ್ಟನೆ ಸಂಕುಳಭೂಮಿ ದಾನಮಂ।। ಅಂತುಗೋವಿ
೩೧ ದೇವನು ತಂನೂರ ಬ್ರಂಮದೇವರಿಗೆ ಬಿಟ್ಟ ಭೂಮಿ
೩೨ ಯಂತೆಂದರೆ।। ಸುರಪತಿ ಲೀಲೆಯಿಂದೆಸೆಪೂ
೩೩ ಗಳ ಸತ್ತಿಗೆಗಳ ತಂದು ಗಂಗೆಯಾ ಪರಿವ ಜಳಾಗಮಂ
೩೪ ಮೊಗೆದು ಮಂತ್ರಿ ಮಹೋಛವದಿಂದ ದೇವ ಸಂಕರನ ಪ
೩೫ ದ ದ್ವಯಂಗಳನೆ ಪೂಜಿಸುತಿರೆ ದೇವರ ದೇವಂ ಚರಣ
೩೬ ಮನರ್ತ್ತಿಯಿಂ ಪೂಗಳಿಂ ಪೂಜಿಸುವಂ ಭಯಭಕ್ತ ಗೋವಿ
೩೭ ದೇವಂ।। ಯಿಂತು ಗೋವಿದೇವಂ ತಂನ್ನೂರ ಬ್ರಂಮ್ಮ ದೇವರ
೩೮ ಂಗ ಭೋಗಕಂ ಆಹಾರದಾನಕ್ಕಂ ದೇವ x x x x ದೇ
೩೯ ವರ ಮಾಳಯನಂ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ
೪೦ ಹಿರಿಯ ಕೆಱೆಯ ಕೆಳಗೆ ಬಿಟ್ಟ ಭೂಮಿ ಗಟ್ದೆ ಸಲ್ವಕೆಯಿ
೪೧ ಬಲ ಹೊಱಗಣ ತಲದ ತೋಟ ಸಲಗೆಯಾಗಿ
೪೨ ಹಾಗಱಹಾ ದಾರಿಯ ಎಡಭಾಗದ ಕೆಱೆಯ
೪೩ x x x x x x x x x x x x x x x x

ಶಿಲಾಫಲಕದ ಮೇಲ್ಭಾಗದಲ್ಲಿನ ಶಿಲ್ಪದ ಪ್ರಭಾವಳಿಯ ಸುತ್ತಲಿನ ಬರಹ

೪೪ ಸ್ವದತ್ತಂ ಪರದತ್ತಂ ವಾಯೋ ಹರೇತ ವಸುಂಧರಾ ಷಷ್ಟಿರ್ವರ್ಷ ರಿಸ ಸಹಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ

ಜಗದೀಶ ಎಂ. ಎಚ್. ಅಗಸಿಬಾಗಲವರ*

ದೊಡ್ಡಸಂಕಣ್ಣನಾಯಕನ ಅಪ್ರಕಟಿತ ತೋಟಗಂಟೆ ಶಾಸನ

ಇಮ್ಮಡಿ ಸದಾಶಿವನಾಯಕನ ಪುತ್ರನಾದ ದೊಡ್ಡ ಸಂಕಣ್ಣ ನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕವಾಗಿ ಅಧಿಕಾರಕ್ಕೆ ಬಂದನು. ಸದಾಶಿವನಾಯಕನು ವಿಜಯನಗರ ಅರಸರ ಸಹಾಯಕ್ಕೆ ಬಂದಂತೆ, ದೊಡ್ಡಸಂಕಣ್ಣನಾಯಕನು ವಿಜಯನಗರ ಸಾಮ್ರಾಜ್ಯದ ರಾಮರಾಯನ ಸನ್ನಿಧಿಯಲ್ಲಿದ್ದು ಅವನ ಕಾರ್ಯದಲ್ಲಿ ನೆರವಾಗುತ್ತಿದ್ದನು. ಈ ಸಮಯದಲ್ಲಿ ಅವನಿಗೆ ಇಬ್ಬರು ಗಂಡು ಮಕ್ಕಳು ಜನಿಸಿದರು. ಹಿರಿಯವನಾದ ರಾಮರಾಜ, ಕಿರಿಯವನು ಶತ್ರುವಂಶಕ್ಕೆ ಯಮನಂತಿರುವ ವೆಂಕಟಪ್ಪನಾಯಕ. ರಾಮರಾಯ (ವಿಜಯನಗರ) ಈ ಮಕ್ಕಳನ್ನು ನೋಡಿ ಕುಮಾರರ ಹಾಲು ಬೆಣ್ಣೆ ಉಂಬಳಿಯಾಗಿ ಮಾಸೂರು, ಮಲ್ಲೂರು ಮತ್ತು ಹೊಳೆಹೊನ್ನೂರುಗಳನ್ನು ಭೂಮಿಗೆ ಇಂದ್ರ ನೆನಿಸಿದ ಸಂಕಣ್ಣನಾಯಕರಿಗೆ ಕೊಟ್ಟು ಮನ್ನಿಸಿದನು.(೧)

ಬಿ. ರಾಮರಾವು ಮತ್ತು ವಿದ್ವಾನ್ ಪಿ. ಸುಂದರಶಾಸ್ತ್ರಿಯವರು ಸಂಪಾದಿಸಿರುವ ಶಿವತತ್ತ್ವ ರತ್ನಾಕರದಲ್ಲಿ ರಾಮರಾಜನು ನೀಡಿರುವ ಗ್ರಾಮಗಳನ್ನು ಹೊಳೆಹೊನ್ನೂರು, ಮಾಸೂರು ಮತ್ತು **ಜೀವಿಮಲ್ಲೂರು** ಎಂದು ಉಲ್ಲೇಖಿಸಿದ್ದು(೨) ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಇವರ ಮೂರು ಸಂಪುಟಗಳಲ್ಲಿ ಹಾಗೂ ಶ್ರೀಮತಿ ರಾಧಾ ಕೃಷ್ಣಮೂರ್ತಿಯವರ(೩) ಶಿವತತ್ತ್ವರತ್ನಾಕರ ಎ ಕಲ್ಚರಲ್ ಸ್ಟಡಿ ಗ್ರಂಥದಲ್ಲಿ ರಾಮರಾಜನು ನೀಡಿದ ಗ್ರಾಮಗಳು ಹೊಳೆಹೊನ್ನೂರು, ಮಾಸೂರು ಮತ್ತು ಬೇಲಿಮಲ್ಲೂರು ಎಂದು ಉಲ್ಲೇಖವಿದೆ.

ಹೊಳೆಹೊನ್ನೂರು ಮತ್ತು ಮಾಸೂರು ಗ್ರಾಮಗಳ ಹೆಸರು ಎಲ್ಲಾ ಗ್ರಂಥಗಳಲ್ಲಿ ಒಂದೇ ಆಗಿದ್ದು, ಇವು ಕ್ರಮವಾಗಿ ಭದ್ರಾವತಿ ತಾಲೂಕು ಮತ್ತು ಹಿರೇಕೆರೂರು ತಾಲೂಕಿನಲ್ಲಿವೆ. ಇನ್ನೊಂದು ಗ್ರಾಮ ಮಾತ್ರ ಮಲ್ಲೂರು, ಜೀವಿಮಲ್ಲೂರು ಮತ್ತು ಬೇಲಿಮಲ್ಲೂರು ಎಂದು ಬೇರೆ ಬೇರೆಯಾಗಿ ಉಲ್ಲೇಖವಾಗಿದೆ. ಹೊಳೆಹೊನ್ನೂರು (ಭದ್ರಾವತಿ ತಾ.) ಮತ್ತು ಮಾಸೂರು (ಹಿರೇಕೆರೂರು ತಾ.) ಇವುಗಳ ನಡುವೆ ನಮಗೆ ಹೊನ್ನಾಳಿ ತಾಲೂಕು ಇದೆ. ಈ ಹೊನ್ನಾಳಿ ತಾಲೂಕಿನಲ್ಲಿ ನಮಗೆ ಮಲ್ಲೂರು ಹೆಸರಿನ ಎರಡು ಗ್ರಾಮಗಳಿದ್ದು ಅವು ತುಂಗಭದ್ರಾನದಿಯ ಬಲದಂಡೆಗೆ ಸಮೀಪವಾಗಿ ಕೋಟೆಮಲ್ಲೂರು ಮತ್ತು ಬೇಲಿಮಲ್ಲೂರು ಆಗಿವೆ. ಕೆಳದಿ ನೃಪವಿಜಯದಲ್ಲಿನ ಮಲ್ಲೂರು, ಶಿವತತ್ತ್ವರತ್ನಾಕರದ ಬೇಲಿ ಮಲ್ಲೂರು ಆಗಿರಬೇಕೆಂದು ತಿಳಿಯ ಬಹುದು.

ದೊಡ್ಡಸಂಕಣ್ಣನಾಯಕನು ತನ್ನ ತಮ್ಮ ಚಿಕ್ಕಸಂಕಣ್ಣ ನಾಯಕನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಉತ್ತರ ಭಾರತದ ಯಾತ್ರೆಯನ್ನು ಕೈಗೊಂಡು ಹಿಂತಿರುಗಿ ಬರುವಾಗ ಪೈಠಣದಲ್ಲಿ ಮೂವತ್ತೆರಡು ಕರಕಮಲಗಳಿಂದ ಶೋಭಿಸುವ ಅಘೋರ ಮೂರ್ತಿಯನ್ನು ಕಂಡು, ಅದರ ಆಕಾರವನ್ನು ಯಥಾರೀತಿಯಲ್ಲಿ ಕಾಗದದಲ್ಲಿ ಚಿತ್ರಿಸಿಕೊಂಡು, ಅಲ್ಲಿಂದ ಪಂಪಾಕ್ಷೇತ್ರಕ್ಕೆ ಬಂದು, ಮಾಸೂರು ಸೀಮೆಯಲ್ಲಿನ ಅಲವಳ್ಳಿಯಲ್ಲಿ ಸರೋವರದಲ್ಲಿದ್ದ ವೀರಭದ್ರ ಸ್ವಾಮಿಯನ್ನು ಪಡೆದುಕೊಂಡು ಇಕ್ಕೇರಿ ಪಟ್ಟಣಕ್ಕೆ ಬಂದು ಕೆಳದಿಯಲ್ಲಿ ಸುರಾಸುರರ ಎದೆಗೆಡಿಸಬಲ್ಲ ವೀರಭದ್ರ ಮೂರ್ತಿಯನ್ನು ರಾಮೇಶ್ವರ ಲಿಂಗದ ದಕ್ಷಿಣ ಭಾಗದಲ್ಲಿ ಪ್ರತಿಷ್ಠಾಪಿಸಿದ ಮತ್ತು ಇಕ್ಕೇರಿಯಲ್ಲಿ ಅಘೋರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ.(೪)

ಶಿವತತ್ತ್ವರತ್ನಾಕರದಲ್ಲಿ, ದೊಡ್ಡ ಸಂಕಣ್ಣನಾಯಕನು ಮಾಸೂರು ದೇಶವನ್ನು ತಲುಪಿ ವಟವಲ್ಲಿಯಲ್ಲಿ ವಿಶ್ರಾಂತಿಯನ್ನು ಪಡೆದು ಅಲ್ಲಿಯೇ ಮಲಗಿರುವಾಗ ಕನಸಿನಲ್ಲಿ ಯೋಗಿಯು ಕಂಡುಬಂದ. ನಾನು ವೀರಭದ್ರಸ್ವಾಮಿ, ಈ ಗ್ರಾಮದ ಸಮೀಪ ದಲ್ಲೇ ಇರುವ ಸುಂದರವೂ ಮಹತ್ತರವೂ ಆದ ಕೆರೆಯ ದಡದಲ್ಲಿ ನಾನು ವಾಸಮಾಡುತ್ತಾ ಇದ್ದೇನೆ. ನನ್ನನ್ನು ತೆಗೆದುಕೊಂಡು ನಿನ್ನ

* ನಂ. ೬೬, ಹೊಸಮನೆ ಬಡಾವಣೆ, ಶಿವಮೊಗ್ಗ - ೫೭೭ ೨೦೧.

ದೇಶದಲ್ಲಿ ಸ್ಥಾಪಿಸಿದರೆ ಪದೇ ಪದೇ ಒಳ್ಳೆಯದಾಗುತ್ತದೆಂದನು. ಈ ರೀತಿಯಲ್ಲಿ ಕನಸಿನಲ್ಲಿ ಕೇಳಿದಂಥ ಅರಸ ಬೆಳಗಾಗೆದ್ದು ನಂತರದಲ್ಲಿ ಹುಡುಕಿಸಿ ಮಹಾತಟಾಕದ ಒಳಗಿದ್ದ ವೀರಭದ್ರ ವಿಗ್ರಹವನ್ನು ಪಡೆದು, ಮೇಲಕ್ಕೆತ್ತಿ ತನ್ನ ದೇಶ ತಲುಪಿ ಕೆಳದಿಯಲ್ಲಿ ವೀರಭದ್ರಸ್ವಾಮಿಯನ್ನು ಮತ್ತು ಇಕ್ಕೇರಿಯಲ್ಲಿ ಅಘೋರೇಶ್ವರ ದೇವರನ್ನು ಪ್ರತಿಷ್ಠಾಪಿಸಿದನು.[೫]

ಮಾಸೂರು ಸೀಮೆಯಲ್ಲಿ **ಆಲವಳ್ಳಿ** ಮತ್ತು **ವಟಪಲ್ಲಿ** ಈ ಎರಡೂ ಗ್ರಾಮಗಳಿಲ್ಲ. ಈ ಎರಡೂ ಗ್ರಾಮಗಳನ್ನು ನಿರ್ಧರಿಸಲು ಪ್ರಸ್ತುತ ನಮಗೆ ದೊರೆತ ತೋಟಗಂಟೆಯ ಮೈಲಾರದೇವರ ಗುಡಿಯ ಹೊರಗೋಡೆಯಲ್ಲಿರುವ ದೊಡ್ಡ ಸಂಕಣ್ಣನಾಯಕನ ೧೩ ಸಾಲಿನ ಶಾಸನ ಸಹಾಯ ಮಾಡುತ್ತದೆ.

ತೋಟಗಂಟೆ (ಹಿರೇಕೆರೂರು ತಾಲೂಕು) ಶಾಸನವು ಕ್ರಿ.ಶ. ೧೫೩೬ ಜೂನ್ ೪ ಭಾನುವಾರದಂದು ಹಾಕಿಸಲಾಗಿದ್ದು, ನರಸಪ್ಪನಾಯಕನ ಮಗ ಅಂಣ್ಣನಾಯಕನು ಸಂಕಣ್ಣ ನಾಯಕರಿಗೆ ಮತ್ತು ವುದಿ(ಡಿ)ಸಿನಾಯಕರಿಗೆ ರಾಜ್ಯಾಭ್ಯುದಯ ಐಶ್ವರ್ಯವಾಗ ಬೇಕೆಂದೂ ಒಂದು ವರ್ಷದಲ್ಲಿ ಮೈಲಾರದೇವರ ಗುಡಿಯನ್ನು ಕಟ್ಟಿಸಿ ತೋಡಗಟ್ಟೆ ಗ್ರಾಮವನ್ನು ಸರ್ವಮಾನ್ಯವಾಗಿ ಅರ್ಪಿಸುತ್ತಾರೆ. ತೋಡಗಟ್ಟೆ ಗ್ರಾಮವು ಇಂದಿನ ಗ್ರಾಮ ತೋಟಗಂಟೆ ಆಗಿರುತ್ತದೆ. ಈ ಗ್ರಾಮವು ಮಾಸೂರಿಗೆ ೮ ಕಿ. ಮೀ. ದೂರದಲ್ಲಿದೆ. ಮೈಲಾರದೇವರ ಗುಡಿಯನ್ನು ಒಂದೇ ವರ್ಷದಲ್ಲಿ ಕಟ್ಟಿಸಿರುವು ದನ್ನು ನೋಡಿದರೆ ದೊಡ್ಡಸಂಕಣ್ಣನಾಯಕನು ಉತ್ತರಭಾರತದ ಯಾತ್ರೆಗೆ ಹೋಗುವ ಸಮಯದಲ್ಲಿ ಇಲ್ಲಿಗೆ ಬಂದಿರಬಹುದೆಂದೂ ಆಗ ಇಲ್ಲಿನ ನಾಯಕರು ಅಪ್ಪಣೆ ಪಡೆದು ಗುಡಿಕಟ್ಟಲು ಶುರುಮಾಡುತ್ತಾರೆಂದೂ ಆನಂತರ ಸಂಕಣ್ಣ ನಾಯಕರು ಹಿಂತಿರುಗಿಬರುವಾಗ ಗುಡಿಯ ಕೆಲಸ ಪೂರ್ಣವಾಗಿದ್ದು, ತೋಡಗಟ್ಟೆ (ತೋಟಗಂಟೆ) ಗ್ರಾಮವನ್ನು ಸರ್ವಮಾನ್ಯವಾಗಿ ಪಡೆಯುತ್ತಾರೆ. ದೊಡ್ಡ ಸಂಕಣ್ಣನಾಯಕನು ತನ್ನ ಮಕ್ಕಳ ಹಾಲು ಬೆಣ್ಣೆ ಉಂಬಳಿಯಾಗಿ ಪಡೆದ ಮಾಸೂರ ಸೀಮೆಯಲ್ಲಿ ತೋಟಗಂಟೆ ಗ್ರಾಮವು ಬರುತ್ತದೆ. ಈ ಗ್ರಾಮವು ಕುಮದ್ವತಿ ನದಿಯ ಬಲ ದಂಡೆಯ ಮೇಲಿದೆ.

ಶಿವತತ್ತ್ವರತ್ನಾಕರದಲ್ಲಿನ ವಟಪಲ್ಲಿ ಗ್ರಾಮವು ರಟಪಲ್ಲಿ - ರಟ್ಟೆಹಳ್ಳಿ ಆಗಿರಬೇಕು, ಇದು ಕುಮದ್ವತಿ ನದಿಯ ಎಡ ದಂಡೆಯ ಮೇಲಿದೆ ಮತ್ತು ತೋಟಗಂಟೆ ಹಾಗೂ ರಟ್ಟೆಹಳ್ಳಿ, ನದಿಯ ಅಕ್ಕ ಪಕ್ಕದ ಗ್ರಾಮಗಳಾಗಿವೆ.

ಕೆಳದಿನೃಪವಿಜಯದಲ್ಲಿನ - "ಮಾಸೂರ ಸೀಮೆಯೊಳಿಸೆ ವಾಲವಳ್ಳಿಯೆಂಬ ಗ್ರಾಮಮಂ" ಎಂಬುದನ್ನು ಮಾಸೂರು ಸೀಮೆಯ ಅಲವಳ್ಳಿ ಎಂದು ತಿಳಿಯಲಾಗಿದೆ. ಮಾಸೂರು ಸೀಮೆಯಲ್ಲಿ ಆಲವಳ್ಳಿ ಎಂಬ ಗ್ರಾಮವು ಇಲ್ಲ. ಆದರೆ ಶಾಸನೋಕ್ತ ತೋಟಗಂಟೆಯ ೨ ಕಿ. ಮೀ. ದೂರದಲ್ಲಿ - ಕುಮದ್ವತಿಯ ಬಲ ದಂಡೆಯಲ್ಲಿ ಎಲಿವಾಳ ಎಂಬ ಗ್ರಾಮವಿದೆ. ಇದು ಮಾಸೂರು ಗ್ರಾಮಕ್ಕೆ ೭ ಕಿ. ಮೀ. ದೂರದಲ್ಲಿದೆ. ಆದ್ದರಿಂದ ಈ ಶಾಸನದಿಂದ ದೊಡ್ಡ ಸಂಕಣ್ಣನಾಯಕನು ವೀರಭದ್ರ ಮೂರ್ತಿಯನ್ನು ಪಡೆದ ಪ್ರದೇಶವು ಮಾಸೂರು ಸೀಮೆ ಎಂದು ದೃಢಪಡುತ್ತದೆಯಲ್ಲದೇ ಆ ಗ್ರಾಮವು ರಟ್ಟೆಹಳ್ಳಿ ಅಥವಾ ಎಲಿವಾಳ ಆಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ದೊಡ್ಡ ಸಂಕಣ್ಣನಾಯಕನಿಗೆ ಸಹಾಯಕರಾದ ನಾಯಕರಲ್ಲಿ; ತೋಟಗಂಟೆಯಲ್ಲಿ ನರಸಪ್ಪನಾಯಕ ಮತ್ತು ಆತನ ಮಗ ಅಂಣ್ಣನಾಯಕ ಮತ್ತು ಹಂಸಬಾವಿಯ ಆತನ ಕಾರ್ಯಕರ್ತರಾದ ಅ(ಖೆ)ಯನಾಯಕರು[೬] ಈ ಭಾಗದಲ್ಲಿದ್ದರೆಂದು ತಿಳಿಯುತ್ತದೆ.

ಶಾಸನ ಪಾಠ

೧ ಶುಭಮಸ್ತು ನಮಸ್ತು(ಂ)ಗ ಶಿರಃಸ್ತುಂಬಿ ಚಂದ್ರಚಾಮರ ಚಾರವೇ ತ್ರೈಲೋ

೨ ಕ್ಯ ನಗರಾರಂಭ ಮೂಲ ಸ್ತಂಭಾಯ ಶಂಬವೆ॥ ಸ್ವಸ್ತಿ ಶ್ರೀ ಜಯಾ(ಭ್ಯು)

೩ ದ ಶಾಲಿವಾಹನ ಶಕ ವರ್ಷ ೧೪೫೮ ನೆಯ ದುರ್ಮುಖಿ ಸಂತವ್ಸರದ

೪ ಜೇಷ್ಟ ಶುದ್ಧ ೧೫ ರ್ರವಿವಾರದಲ್ಲೂ ನರಸಪ್ಪನಾಯಕ್ಕರ ಮಕ್ಕಳು ಅಂಣ

೫ ನಾಯಕ್ಕರು ತಂನ್ನ ಸ್ವಾಮ್ಮಿ ಸಂಕ್ಕಣನಾಯಕರಿಗೂ ವಿದಿಸಿನಾಯ

೬ ಕರಿಗೂ.... ರಾಜ್ಯಾಭ್ಯುದಯ ಐಶರ್ಯವಾಗಬೇಕೆಂದೂ ತೊಡ

೭ ಗಟ್ಟಿನ ಮೈಲಾರದೇವರಿಗೆ ಆ ಚಂದ್ರಾರ್ಕಸ್ಥಾಯಿಯಲಿಹರ ಬೇ

೮ ಕೆಂದು ಫಲವರುಷದಲ್ಲಿ ಗುಡಿಯನು ಕಟ್ಟಿಸಿ ತೊಡಗಟ್ಟಿನ ಗ್ರಾಮವ


೯ ಸರ್ವಮಾನ್ಯವಾಗಿ ಮೈಲಾರ ದೇವರಿಗೆ ಸಮರ್ಪಿಸಿದೆವು ಆ ಚಂದ್ರಾರ್ಕ

೧೦ ವಾಗಿ ಭೋಗಿಸುವರು॥ ದಾನಪಾಲನಯೋರ್ಮಧ್ಯೆ ದಾನಾಶ್ರೇಯೋನು

೧೧ ಪಾಲನಂ ದಾನಾತ್ ಸ್ವರ್ಗ ಮವಾಪ್ನೋತಿ ಪಾಲನಾದಚುತಂ ಪದಂ॥ ನವಿಷಂವಿಷ

೧೨ ಯಿತ್ಯಾಂಹು ದೇವಸ್ವಂ ವಿಷಮುಚ್ಯತೇ ವಿಷಮೇಕಾಕಿನಂ ಹಂತಿ ದೇವಸ್ವಂ

೧೩ ಪುತ್ರಪೌತ್ರಕಂ॥ ಶುಭಮಸ್ತು॥



ಇದೇ ದೇವಾಲಯದ ಅಂಕಣದ ಕಂಬವೊಂದರ ಮೇಲೆ ಕ್ರಿ.ಶ.ಸು. ೧೬-೧೭ನೇ ಶತಮಾನದ ೪ ಸಾಲಿನ ಶಾಸನವಿದ್ದು ಅದರ ಪಾಠ ಹೀಗಿದೆ

೧ ಬಾ ಸುಚಿಗೌಂಡನ ಮ
೨ ಗ ಬರ[ಮಿ]ಕಂಚಣ
೩ ನ ಹೊಂನ ಕುದರೆ ಅ
೪ ಂಕಣವ ಕಟಿಸಿದನೊ

(ಈ ಶಾಸನದ ಮೂಲಪಾಠವನ್ನು ಒದಗಿಸಿದ ಡಾ।। ಶ್ರೀನಿವಾಸ ರಿತ್ತಿಯವರಿಗೆ ನನ್ನ ಕೃತಜ್ಞತೆಗಳು. ಈ ವಿಷಯದ ಬಗ್ಗೆ ನನ್ನೊಂದಿಗೆ ಚರ್ಚಿಸಿ ಸಲಹೆ ನೀಡಿದ ಡಾ।। ಅ. ಸುಂದರ, ಡಾ।। ಕೆಳದಿ ವೆಂಕಟೇಶ ಜೋಯಿಸ್ ಮತ್ತು ಡಾ।। ಜ. ವಿ. ಕಲ್ಲಾಪುರ ಅವರಿಗೆ ನನ್ನ ವಂದನೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಕೆಳದಿ ನೃಪವಿಜಯ - ಲಿಂಗಣ್ಣ ಕವಿ - ಗದ್ಯಾನುವಾದ ಕೆಳದಿ ಗುಂಡಾಜೋಯಿಸ್ ಪುಟ, ೭೪.

*೨. ಶ್ರೀ ಶಿವತತ್ತ್ವರತ್ನಾಕರ - ಬಸವಭೂಪಾಲ - (ಸಂಪಾದಕರು) ಬಿ. ರಾಮರಾವು ಮತ್ತು ವಿದ್ವಾನ್ ಪಿ. ಸುಂದರ ಶಾಸ್ತ್ರಿಯರ್, ಮದ್ರಾಸ್, ೧೯೨೭, ಪುಟ ೩೪.

*೩. ಶಿವತತ್ತ್ವರತ್ನಾಕರ - ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಸಂಪುಟಗಳು ೫, ಕಲ್ಲೋಲ ೮, ತರಂಗ ಶ್ಲೋಕ ೫೧ - ಶ್ರೀಮತಿ ರಾಧಾ ಕೃಷ್ಣಮೂರ್ತಿ - ಎ ಕಲ್ಚರಲ್ ಸ್ಟಡಿ, ಪುಟ ೧೦೭.

*೪. ಕೆಳದಿ ನೃಪವಿಜಯ - ಪುಟ ೯೭-೯೮.

*೫. ಶಿವತತ್ತ್ವ ರತ್ನಾಕರ – ೫ ಕಲ್ಲೋಲ ೯ ತರಂಗ, ಶ್ಲೋಕ ೭೧.

*೬. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ - ಸಂಪುಟ ೪, ಶಾಸನ ನಂ. ೮, ಸಾತೇನಹಳ್ಳಿ ಕ್ರಿ. ಶ. ೧೫೮೧, ಜನವರಿ ೧೯.

ಹೊ. ನ. ನೀಲಕಂಠೇಗೌಡ*
ಡಾ॥ ಎಂ. ಜಿ. ಮಂಜುನಾಥ**

ಮೂಡಬಿದರೆಯ ನಾಲ್ಕು ಅಪ್ರಕಟಿತ ತಾಮ್ರಶಾಸನಗಳು

ಜೈನರ ಕಾಶಿಯೆಂದು ಸುಪ್ರಸಿದ್ಧವಾಗಿರುವ ಮೂಡಬಿದರೆಯ ಜೈನಮಠದ ಸಂಗ್ರಹದಲ್ಲಿ ದೊರೆತ ನಾಲ್ಕು ಅಪ್ರಕಟಿತ ತಾಮ್ರಶಾಸನಗಳ ಬಗ್ಗೆ ಪ್ರಸ್ತುತ ಸಂಪ್ರಬಂಧ ರಚಿಸಲಾಗಿದೆ. ನಮಗೆ ದೊರೆತಿರುವ ನಾಲ್ಕು ಪ್ರತ್ಯೇಕವಾದ ತಾಮ್ರ ಪತ್ರಗಳಲ್ಲಿ ನಾಲ್ಕು ಪ್ರತ್ಯೇಕವಾದ ಬೇರೆ ಬೇರೆ ಶಾಸನಗಳಿವೆ.

ಇವುಗಳಲ್ಲಿ ಒಂದನೆಯ ತಾಮ್ರಪಟವು ೨೭ ಸೆಂಟಿಮೀಟರ್ ಅಗಲ ಹಾಗೂ ೧೩.೫ ಸೆಂ.ಮೀ. ಉದ್ದವಾಗಿದೆ. ಎರಡನೆಯ ತಾಮ್ರಪಟವು ೨೧.೫ ಸೆಂ.ಮೀ. ಅಗಲ ಹಾಗೂ ೯ ಸೆಂ.ಮೀ. ಉದ್ದವಾಗಿದೆ. ಮೂರನೆಯ ತಾಮ್ರಪಟವು ೨೯ ಸೆಂ.ಮೀ. ಅಗಲ ಹಾಗೂ ೧೫ ಸೆಂ.ಮೀ. ಉದ್ದವಾಗಿದೆ. ನಾಲ್ಕನೆಯ ತಾಮ್ರಪಟವು ೧೫ ಸೆಂ.ಮೀ. ಅಗಲ ಹಾಗೂ ೧೨ ಸೆಂ.ಮೀ. ಉದ್ದವಾಗಿದೆ. ಒಂದನೆಯ ಹಾಗೂ ಎರಡನೆಯ ಶಾಸನಗಳಲ್ಲಿ ಜೈನಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ *"ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾತ್ರೈಲೋಕ್ಯ ನಾಥಸ್ಯ ಶಾಸನಂ ಜಿನಶಾಸನಂ"* ಎಂಬ ಅಕಳಂಕನ *'ಪ್ರಮಾಣ ಸಂಗ್ರಹ'* ಕೃತಿಯಲ್ಲಿನ ಶ್ಲೋಕವಿದೆ. ಮೂರನೆಯ ಶಾಸನವು *ಶ್ರೀ ಚಂದ್ರನಾಥಾಯ ನಮಃ* ಎಂದು ಆರಂಭವಾಗುತ್ತದೆ. ನಾಲ್ಕನೆಯ ಶಾಸನದಲ್ಲಿ ಯಾವುದೇ ರೀತಿಯ ಮಂಗಳ ಶ್ಲೋಕವಾಗಲೀ ಜಿನಸ್ತುತಿಯಾಗಲೀ ಕಂಡುಬರುವುದಿಲ್ಲ. ಈ ನಾಲ್ಕೂ ಶಾಸನಗಳು ದಾನ ಶಾಸನಗಳಾಗಿದ್ದು ಹಲವಾರು ಮಂದಿ ಶ್ರಾವಕರು ಮೂಡಬಿದರೆಯ ಜೈನಬಸದಿಗಳಿಗೆ ನೀಡಿದ ದಾನ ದತ್ತಿಗಳ ಬಗ್ಗೆ ವಿವರಗಳನ್ನು ನೀಡುತ್ತವೆ.

ಒಂದನೆಯ ತಾಮ್ರಪಟದಲ್ಲಿ ಒಟ್ಟು ೧೭ ಸಾಲುಗಳ ಬರಹವಿದೆ. ಈ ಶಾಸನವು ಶಾಲಿವಾಹನ ಶಕವರ್ಷ ೧೬೪೩ನೆಯ ಪ್ಲವನಾಮ ಸಂವತ್ಸರದ ಮಾಘ ಶುದ್ಧ ದಶಮಿ ಅಂದರೆ ಕ್ರಿ. ಶ. ೧೭೨೧ನೆಯ ಇಸವಿ ಜನವರಿ ೧೪ ಭಾನುವಾರದಂದು ರಚಿತವಾಗಿದೆ. ಈ ಶಾಸನದಲ್ಲಿ ಮೂಡಬಿದರೆಯ ಕಲ್ಲುಬಸದಿಯ ಚಂದ್ರನಾಥಸ್ವಾಮಿಯ ಭಂಡಾರಕ್ಕೆ ಅಜಿಲರಸೀಮೆಯ ಕೆಳದ ಮಾಗಣೆ ಮರೋವಾಡಿ ಗ್ರಾಮದ ಶಾಂತಬಲ್ಲಾಳನು ತನಗೆ ಸೇರಿದ್ದ ಗದ್ದೆಯನ್ನು ಹಾಗೂ ಹತ್ತು ವರಹ ಹಣವನ್ನು ಧರ್ಮಪೂರ್ವಕವಾಗಿ ಕೊಟ್ಟು ಈ ಧರ್ಮವನ್ನು ಮೂಡಬಿದರೆಯ ಜೈನ ಮಠಾಧೀಶರು ಹಾಗೂ ಚಂದ್ರಮತಿ ಅವ್ವಗಳು ಆ ಚಂದ್ರಾರ್ಕವಾಗಿ ಪ್ರತಿಪಾಲಿಸುವರು ಎಂದು ನೀಡಿದ ದಾನದ ವಿವರಗಳಿವೆ. ಈ ಶಾಸನದ ಕಡೆಯ ಭಾಗದಲ್ಲಿ ಈ ದಾನಕ್ಕೆ ತಪ್ಪಿದವರಿಗೆ ಕಾಶಿಯಲಿ ಕಪಿಲೆಯನ್ನು ಕೊಂದ ಪಾಪ ಹಾಗೂ ಊರ್ಜಯಂತಗಿರಿಯಲ್ಲಿ ಮುನಿಗಳ ಕೊಂದ ಪಾಪ ಬರುತ್ತದೆಂಬ ಶಾಪಾಶಯವಿದೆ. ಈ ತಾಮ್ರ ಪತ್ರವನ್ನು ಬರೆದವನು ಮೊರೆಯ ಗುಮ್ಮಟಶೆಟ್ಟಿ ಎಂದು ಈ ಶಾಸನದಿಂದ ತಿಳಿದುಬರುತ್ತದೆ.

ಎರಡನೆಯ ತಾಮ್ರಪತ್ರದಲ್ಲಿ ೭ ಸಾಲುಗಳ ಬರಹವಿದೆ. ಈ ಶಾಸನವು ಶಾಲಿವಾಹನ ಶಕವರ್ಷ ೧೫೩೬ನೆಯ ಪ್ರಮಾದೀಚ ಸಂವತ್ಸರದ ಆಷಾಡ ಶುದ್ಧ ದಶಮಿ ಗುರುವಾರ ಅಂದರೆ ಕ್ರಿ. ಶ. ೧೬೧೪ನೆಯ ಇಸವಿ ಆಗಸ್ಟ್ ೪ರ ಗುರುವಾರದಂದು ರಚಿತವಾಗಿದೆ. ಮಹೇಂದ್ರಕೀರ್ತಿದೇವರ ಶಿಷ್ಯರಾದ ಮಾಧವಚಂದ್ರ ದೇವರು ದೇವರಾಯಸೆಟ್ಟಿ ಬಸದಿಯ ಮೇಗಣ ನೆಲೆಯಲ್ಲಿ ಅಂದರೆ ಗರ್ಭಗೃಹದ ಮೇಲಿನ ಮತ್ತೊಂದು ಗರ್ಭಗೃಹದಲ್ಲಿ ಇರಿಸಿದ ಚೌವೀಸ ತೀರ್ಥಂಕರರ ಪ್ರತಿಮೆಗೆ ಅಮೃತಪಡಿಗೆಂದು ಕೊಟ್ಟ ೧೦ ವರಹದ ದಾನದ ವಿವರಗಳನ್ನು ದಾಖಲಿಸಿದೆ.

ಮೂರನೆಯ ತಾಮ್ರಪತ್ರದ ಎರಡೂ ಬದಿಗಳಲ್ಲಿ ಬರಹವಿದ್ದು ಒಂದನೆಯ ಬದಿಯಲ್ಲಿ ೧೨ ಸಾಲುಗಳು, ಎರಡನೆಯ ಬದಿಯಲ್ಲಿ ೭ ಸಾಲುಗಳು ಒಟ್ಟು ೧೯ ಸಾಲುಗಳ ಬರಹವಿದೆ. ಈ ಶಾಸನವು ಶಾಲಿವಾಹನಶಕ ಸಂವತ್ಸರ ೧೬೭೧ನೆಯ ಶುಕ್ಲ ಸಂವತ್ಸರದ ಮಾಘ ಬಹುಳ ೧೩ ಅಂದರೆ ಕ್ರಿ. ಶ. ೧೭೪೯ನೆಯ ಇಸವಿ ಫೆಬ್ರವರಿ ೨೩ ಶುಕ್ರವಾರದಂದು

* ಕನ್ನಡ ಉಪನ್ಯಾಸಕ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬಂಗಾರಪೇಟೆ, ಕೋಲಾರ ಜಿಲ್ಲೆ.
** ಕನ್ನಡ ಉಪನ್ಯಾಸಕ, ಬೆಂ. ವಿ. ವಿ., ಸ್ನಾತಕೋತ್ತರ ಕೇಂದ್ರ, ಕೋಲಾರ.

ರಚಿತವಾಗಿದೆ. ಮೂಡಬಿದಿರೆಯ ಅರಸರಾದ ತಿಮ್ಮಣ್ಣ ಅಜಿಲರು ಈ ಹಿಂದೆ ತಮ್ಮ ಪೂರ್ವಿಕರು ಮೂಡಬಿದರೆಯ ಚಂದ್ರನಾಥ ಸ್ವಾಮಿ ದೇವಾಲಯಕ್ಕೆ ನೀಡಿದ್ದ ದಾನದತ್ತಿಗಳು ನಷ್ಟವಾದದ್ದನ್ನು ತಿಳಿದು ೬೯೩ ಗದ್ಯಾಣ ಹಾಗೂ ೨೦ ಮುಡಿ ಅಕ್ಕಿ ಗೇಣಿ ಬರುವಂತಹ ಭೂಮಿಯನ್ನು ದೇವರ ಅಭಿಷೇಕ, ಪೂಜೆ ಮತ್ತಿತರ ಕಾರ್ಯಗಳಿಗೆಂದು ದಾನವಾಗಿ ಬಿಟ್ಟ ವಿವರಗಳನ್ನು ದಾಖಲಿಸಿದೆ. ಶಾಸನದ ಕಡೆಯ ಭಾಗದಲ್ಲಿ ಶಾಪಾಶಯಗಳ ನಂತರ ಶ್ರೀ ಸೋಮನಾಥ ಎಂಬ ಒಪ್ಪವಿದೆ. ಇಲ್ಲಿ ಸೋಮನಾಥನೆಂದರೆ ಚಂದ್ರನಾಥನೆಂಬ ತೀರ್ಥಂಕರನ ಹೆಸರು. ತಿಮ್ಮಣ್ಣ ಅಜಿಲರ ಇಷ್ಟದೈವ ಚಂದ್ರನಾಥನಾಗಿದ್ದುದರಿಂದ ಅವರು ವಿಜಯನಗರದ ಅರಸರು ಶ್ರೀವಿರೂಪಾಕ್ಷ ಎಂದು ಒಪ್ಪ ಹಾಗುತ್ತಿದ್ದಂತೆ ಶ್ರೀ ಸೋಮನಾಥ ಎಂದು ಒಪ್ಪ ಹಾಕಿದ್ದಾರೆಂದು ತೋರುತ್ತದೆ.


ನಾಲ್ಕನೆಯ ಶಾಸನದಲ್ಲಿ ಒಟ್ಟು ೧೧ ಸಾಲುಗಳಿವೆ. ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ ಈ ಶಾಸನದ ಲಿಪಿ ಸ್ವರೂಪದಿಂದ ಇದನ್ನು ೧೭ನೆಯ ಶತಮಾನದ್ದೆಂದು ಗುರ್ತಿಸಬಹುದು. ಮೂಡಬಿದರೆಯ ಚಂಡೋಗ್ರ ಪಾರ್ಶ್ವನಾಥ ದೇವರ ಶಾಲೆಗೆ ದೇವರ ಪೂಜೆಗೆ, ಚತುಸ್ಸಂಘದ ಆಹಾರ, ಅಭಯ, ಭೈಷಜ್ಯ ಹಾಗೂ ಶಾಸ್ತ್ರ ದಾನಕ್ಕೆಂದು ನಿತ್ಯದಾನ ಹಾಗೂ ಪೂಜೆ ಆಚಂದ್ರಾರ್ಕವಾಗಿ ನಡೆಯುವಂತೆ ಪಾರ್ಶ್ವನಾಥನ ಸನ್ನಿಧಿಯಲ್ಲಿ ಪಂಡಿತದೇವರ ಅಂದರೆ ಅಲ್ಲಿಯ ಮಠಾಧೀಶರ ಪಾದವನ್ನು ತೊಳೆದು ಹಿರಿಯಶಾಂತಿಸೆಟ್ಟಿ ೫೦೦ ಗದ್ಯಾಣವನ್ನು ಹಾಗೂ ಆತನ ಅಳಿಯ ಅಲ್ಲಾಳಸೆಟ್ಟಿ ೨೫೦೦ ಗದ್ಯಾಣ ಹಣವನ್ನು ದಾನವಾಗಿ ಕೊಟ್ಟಿದ್ದನ್ನು ಈ ಶಾಸನ ದಾಖಲಿಸಿದೆ.

ಒಂದನೆಯ ತಾಮ್ರಶಾಸನ ಕಾಲ : ಕ್ರಿ.ಶ. ೧೭೨೧

೧ ಶ್ರೀ ಮತ್ಪರಮ ಗಾಂಭೀರ। ಸ್ಯದ್ವಾದಮೋಘ ಲಾಂಛನಂ। ಜೀಯತ್ರೈಲೋಕ್ಯನಾಥಸ್ಯ। ಶಾಸನಂ ಜಿನಶಾಸನಂ॥ ಸ್ವಸ್ತಿ

೨ ಶ್ರೀ ಜಯಾಭ್ಯುದಯ ಶಾಲಿವಾಹನ ಸಕ ವರ್ಷ ೧೬೪೩ನೆಯ ಪ್ಲವನಾಮ ಸಂವಸ್ಛರದ। ಮಾಘ ಶುದ್ಧ ೧೦ಲು

೩ ಮುಡಬಿದುರೆಯ ಕಲ್ಲಬಸ್ತಿ ಚಂದ್ರನಾಥಸ್ವಾಮಿಯವರ ಭಂಡರಕ್ಕೆ ಅಜಿಲರಸೀಮೆ ಕೆಳದ ಮಾಗಣೆ ಮರೊ



೪ ವಾಡಿ ಗ್ರಾಮದ ಶಾ(ಂ)ತ ಬೆಳಿಬಲ್ಲಾಳನು ಬರಸಿಕೊಟ್ಟ ಶಾಸನದ ಪಟ್ಟೆ ಕ್ರಮಯೆಂತೆಂದರೆ ನಾನು ನಂನ ಅನು

೫ ಪತ್ಯನಿಮಿತ್ಯವಾಗಿ ನಂನ ಬಗೆ ವಳಗಣ ಕಲಾಯಿಯೆಂಬ ಕಂಬಳ ಗದ್ದೆ ಕಟ್ಟಮಣೆ ಕೆಳಗಣ ಪೊದುಪಲನಂ

೬ ಬಗದ್ದೆ ಕೆಳಗ। ಮಾಕಾಳಿಯೇರುಬ ಗದ್ದೆ ಮೇಲಣ ಹಿಮಿಯೆಂಬ ಬಯಿಲು ಗದೆ ೧ರ ಬಿತುವ ಬೀಜ ಸಂಣ

೭ ಮುಡಿ ೩ ಮೂರು ಯೀಗದ್ದೆಗೆ ಅರಮನೆ ತೆರು ಗ /೧। ಹಣ ಹಾಗ ಅದಕ್ಕೆ ಕಟ್ಟಿದ ಗೇಣೆ ಅಕ್ಕಿ ಮುಡಿ ೬ ಅರು


೮ ವಟ್ಟುವತಾಡ ಪಗುಧಿ ಕಾಣಿಕೆ ಯೇನಿದ್ದರು ನನಗೆ ಕೂಡಿದೆಂದು ಅಭೂಮಿಯ ಅಗ್ರಾಮದವರ ಮುಂತ್ತಿ


೯ ಟ್ಟು ದಾರ್ಮಪೂರ್ವ್ವಕವಾಗಿ ಕೊಟ್ಟು ಪುದುವೆಟ್ಟಿನ ಚಂದ್ರಮತಿ ಅವ್ವಗಳು ಜೀಯ್ಯನವರು ಅಚಂದ್ರಾರ್ಕ್ಕ


೧೦ ಸ್ಥಾಯಿಯಾಗಿ ಕಾಲಕಾಲಂ ಪ್ರತಿಯಲ್ಲೂ ನಡದು ಬಾಹದಶಲಾಕ್ಷಣಿಕ ನೋಹಿ ಸಂಮಂದ ನಿ

೧೧ ಂಮ ಹಸ್ತಧಿಂದ ತೆಗದುಕೊಂಡದೂ ವಳಿತು ವರಗ ೧೦ ಅಕ್ಷರದಲ್ಲೂಯಿದೇ ಹತ್ತು ವರಹ

5AF







೧೨ ನ ತೆಗದುಕೊಂಡು ಯೀ ಗದ್ದೆಯ ನೀವೇ ಅನುಭವಿಸಿ ಕೊಂಬುದೆಂದು ಬರಸಿಕೊಟ್ಟ ಪಟ್ಟಿಯಿಂದ

೧೩ ತಪ್ಪುದಕ್ಕೆ ಸಾಕ್ಷಿಗಳು ಕೆಳದ ಪೇಟೆ ಕುವಾರಿ ಪಾಂಡಿಸೆಟ್ಟಿ ಮಗ ಅಂತಮುಸೆಟ್ಟಿ ಕರಿಯ ಬ್ರಂ

೧೪ ಮ ಸೆಟ್ಟಿಮಗ ಗುಂಮುಸೆಟ್ಟಿ ಆರಂಬೆಟ್ಟಿನ ಗುತ್ತಿನ ಅಗ್ಗ ಕೊಂಬ ಅರಸಮನ ಮಗ ದೇವೇಟಿಕಾಂ

೧೫ ತಬೆಳಿಕಂತ ಮುಟ್ಟಿದ ಗುರುತು ಸಾಕ್ಷಿಗಳ ವಪ್ಪಿತಯೀ ಧರ್ಮ್ಮಕ್ಕೆತಪ್ಪಿದವರು ಕಾಸಿಯಲಿ ಕಪಿ

೧೬ ಲೆಕೊಂದ ಪಾಪ ಊರ್ಜಿಯಂತ ಗಿರಿಯಲ್ಲಿ ಮುನಿಗಳ ಕೊಂದ ಪಾಪ ಯಿಂತಿವರ ಉಭಯದಿಂದ

೧೭ ಯೀ ಪಟ್ಟಿ ಬರದಾತ ಮೊರೆಯ ಗುಂಮಟಶೆಟ್ಟಿ ಭದ್ರಂಭೂಯಾತ್ ವರ್ದ್ಧತಾಂಜಿನ ಶಾಸನಂ ಶ್ರೀ ಶ್ರೀ

ಎರಡನೆಯ ತಾಮ್ರಶಾಸನ ಕಾಲ : ಕ್ರಿ.ಶ. ೧೬೧೪

೧ ಶ್ರೀ ಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾತ್ತ್ರೈಲೋಕ್ಯ ನಾ(ಥ)

೨ ಸ್ಯ ಸಾಸನಂ ಜಿನಸಾಸನಂ ಸ್ವಸ್ತಿಶ್ರೀ ವಿಜೆಯಾಭ್ಯುದಯ ಸಾಲಿವಾಹನ ಸ

೩ ಕವರುಸ ೧೫೩೬ ಪ್ರಮಾದೀಚ ಸಂವತ್ಸರದ ಆಶಾಡ ಶುದ್ಧ ೧೦ ಗುರುವಾರದ

೪ ಲ್ಲು ಮಹೇಂದ್ರ ಕೀರ್ತ್ತಿದೇವರ ಸಿಷ್ಯರಾದ ಮಾಧವ ಚಂದ್ರದೇವ

೫ ರು ದೇವರಾಯ ಸೆಟ್ಟಿ ಬಸ್ತಿಯ ಮೇಗಣ ನೆಲೆಯಲ್ಲಿ ಇರಿಸಿದ

೬ ಚೌವೀಶ ತಿರ್ಥ್ಥಕರ ಪ್ರತಿಮೆಗೆ ಅಮ್ರುತಪಡಿಗೆ ಕೊಟ್ಟವರಗ

೭ ದ್ಯಾಣ ೧೦ ಅಕ್ಷರದಲ್ಲು ಹತ್ತು ವರಾಹ

ಮೂರನೆಯ ತಾಮ್ರಶಾಸನದ ಕಾಲ : ಕ್ರಿ.ಶ. ೧೭೪೯

ಒಂದನೆಯ ಬದಿಯ ಬರಹ

೧ ನಿರ್ವಿಘ್ನಮಸ್ತು। ಶ್ರೀ ಚಂದ್ರನಾಥಾಯ ನಮಃ। ಸ್ವಸ್ತಿ ಶ್ರೀ ವಿಜಯಾದ್ಬುದಯ ನ್ರುಪಷಾಲಿವಾಹನಷ

೨ ಖ ವರುಷ ೧೬೭೧ನೆಯ। ವರ್ತಮಾನಕ್ಕೆ ಸಲುವಾ ಶುಕ್ಲ ಸಂವತ್ಸರದ ಮಗ ಬ ೧೩ಲ್ಲೂ। ಶ್ರೀಮತೂ ತಿಂ

೩ ಮಣರಸರಾದ ಅಜಿಲರೂ। ಮೂಡಬಿದಿರ್ರೆ ಚಂದ್ರನಾಥಾ ಸ್ವಾಮಿಯವರ ಸಂನಿಧಿಯಲ್ಲು। ನಡವ ದೇವ

೪ ತಾ ಸೇವೆ ಬಗ್ಯೆ ಪ್ರಾಕು। ನಂಮ ಹಿರೀಯವರೂ। ಪೆರಂಜದ ಮಾಗಣೆ ಪಡುವ ಕೋಡ್ಯಿ ಗ್ರಾಮದಲ್ಲೂ। ಬಜದಪಂ

೫ ಮ್ಯುಬಾಳಿಕ್ಕೆಯಿಂದ ಉತ್ತಾರವ ಬಿಡಿಸಿದಲ್ಲಿ। ಊ ಭೂಮಿಯು ಅರುಪವಾಗಿ ನಷ್ಟ। ಬಿದ್ಯು। ದೇವ ತಾವೆ।

೬ ಚಕೆ ಸಂದು ಬಾರದೆ ನಿಂತ್ತಲ್ಲಿ। ಯೀ ದೇ ತಿಥಿಯಲೂ ಮುಡಬಿದಿರೇ ಪೇಶೇಹಲ್ಲರು। ಪೂರ್ವ ಪ್ರಾಮಾಣು

೭ ದೇವತಾ ಸೇವೇನಡದು ಬಹರೀತೀಗೆ। ಅಪ್ಪಣೆ ಊಗ ಬೇಕೆಂದು। ಹೇಳಿಕೊಂಡ ಸಮಂದ ಯೀ ಭೂಮಿ

೮ ಗೆ ಯಿಳಿದು ಹೊಕು ನೋಡಿನಷ್ಟಾದಿದ ಹುಟ್ಟುವಳಿ ಮಾಡಿದ ಬಗೆಯಲ್ಲಿ ಸಾಹಾಕಟ್ಟಿದ ಸಿಸ್ತು

೯ ೦ಗ ೪/೩। ನಾಲ್ಕು ವರಹಾಂನ್ನು ಮುರಣ ಹಾಗು ವೀಸದ ಸಿಸ್ತಿಗೆ ಮೇಲುವಾಸಿ ಊಗಿ ಅರ

೧೦ ಮನೆಗೆ ತ್ತೆತು ಬಾಹಕಟುಗುತ್ತಿಗೆ ರೋಖ ಗ ೧ ತುಧಗ ೩/೩। ಕೆ ಸಿಸ್ತಿನ ಕ್ರಯದಲು ಅ

೧೧ ಕ್ಕಿ ಮುಡ್ಯಿ ೨೦ ಯಿಪ್ಪತ್ತು ಮುಡಿ ಅಕ್ಕಿ ಗೇಣಿ ಸ್ತಳವಂನ್ನು। ಚಂದ್ರಾನಾಥ ಸ್ವಾಮಿಯವರ ಸಂನ್ನಿಧಿ

೧೨ ಯಲು ಕಾರ್ತ್ತಿಕ ಶು ೧ಲು ಪರ್ವತಿಥಿಯಲು ನಂಮ ಹೆಸರಲು ಕಾಲಕಾಲಂ ಪ್ರತೀಯಲು। ನಡದು

೩ನೆಯ ತಾಮ್ರ ಶಾಸನದ ಎರಡನೆಯ ಬದಿಯ ಬರಹ

೧೩ ಬಾಹ ಅಭಿಷೇಕ ಪೂಜೆ ಬಗ್ಗೆ ದಾರದತ್ತವಾಗಿ ಉತ್ತಾರ ಬಿಟ್ಟೆವಾಗಿಯಂದ್ಯು ಬರಸಿಕೊಟ್ಟ ಮೂಲ ಶಾಸನಪ

೧೪ ಟ್ಟಿ ॥ ಯಿದಕ್ಕೆ ಧರ್ಮಸಾಕ್ಷಿಗಳು। ಊದಿತ್ಯ ಚಂದ್ರಾವನಿಲೋನಶ್ಯ। ಮೇಘಾಧಿನಾಗ। ಪ್ರಮು

೧೫ ಕಾಶ್ಯ ಸಾಕ್ಷಿಸಾಕ್ಷಿಯ ಶ್ರೀಧಿಗ್ದಶದಾಧಿ ನಾಥಾ। ಸಾಕ್ಷಿ ಸಚಿವೇಂದ್ರ ಸುಸತ್ಯ ಸಾಕ್ಷಿ॥ ದಾನಪಾ

೧೬ ಲನಯೋರ್ಮದ್ಯೇ। ದಾನಾಛ್ರೇಯೋನಪಾಲನಂ। ದಾನಾ ಸ್ವಾರ್ಗಮವಾಪ್ನೋತೀ ಪಲನದಚ್ಯು ತಂಪ


೧೭ ದಂ। ಸ್ವದತ್ತಾ ದ್ವಿಗುಣಂ ಪುಣ್ಯಂ। ಪರದತ್ತಾನು ಪಾಲನಂ। ಪರದತ್ತಾಪ ಹಾರೇಣ। ಸ್ವಾದತ್ತಾ ನಿಸ್ಪಲಂ

೧೮ ಭವೇತ್॥ ಸ್ವದತ್ತಾ ಪುತ್ರಿಕಾದಾತ್ರಿ। ಪಿತ್ರುದತ್ತಾ ಸಹೋದರೋಪರದತ್ತಾ ಸ್ವಯಂಮಾತಾದತ್ತಾಂ

೧೯ ಭೂಮಿ ಪರಿತ್ಯಜೇತ್॥ ಶ್ರೀ ಸೋಮನಾಥ।

ನಾಲ್ಕನೆಯ ತಾಮ್ರಶಾಸನ ಕಾಲ : ಕ್ರಿ.ಶ. ೧೭ನೇ ಶತಮಾನ

೧ ಶ್ರೀ ಚಂಡೋಗ್ರ ಪಾರ್ಶ್ವ ದೇವರ ಧರ್ಮ್ಮಶಾಲೆಗೆ ಶಾಸ
೨ ನಾರೋಪಿತ ಗ್ರಾಮ ಕ್ಷೇತ್ರ ವಿತರಣರೂ ಪವ
೩ ಹದೇವ ಪೂಜೆ ಸಂಘ ಸಮುದಾಯದ ಆಹಾ
೪ ರಾಭಯ ಬೇಷಜ ಶಾಸ್ತ್ರ ದಾನಾರ್ತ್ಥ ನಿತ್ಯ ದಾನಪೂ
೫ ಜೆ ಆಚಂದ್ರಾರ್ಕ್ಕವಾಗಿ ನಡವ ಹಂಗೆ ಶ್ರೀ ಚಂ
೬ ಡೋಗ್ರ ಪಾರ್ಶ್ವ ದೇವರ ಸಂನಿಧಿಯಲು ಪಂಡಿತದೇವ
೭ ರ ಪಾದವ ತೊಳದು ಧಾರಾಪೂರ್ವ್ವಕವಾಗಿ ಆ ಇ
೮ ರಿ ಶಾಂತಿಸೆಟ್ಟಿ ಕೊಟ್ಟದು ಕೊಟೆ ಕಠಾರಿ ಗ ೫೦೦
೯ ಆತನ ಅಳಿಯ ತೆಮುಳ ಅಲ್ಲಾಳಸೆಟ್ಟಿ ಕೊಟ್ಟದು
೧೦ ಕಾಟಿಯ ಕಠಾರಿ ಗ ೨೫೦೦ ವರ್ದ್ಧತಾಂ ಜೈನ ಶಾ
೧೧ ಸನಂ ಶ್ರೀ ಶ್ರೀ ಶ್ರೀ




ಎಂ. ಜಿ. ನಾಗರಾಜ್*

ಕೊಡಗಿನ ಎರಡನೇ ಲಿಂಗರಾಜೇಂದ್ರ ಒಡೆಯನ ಓಂಕಾರೇಶ್ವರ ದೇಗುಲದ ಅಪ್ರಕಟಿತ ನಿರೂಪ

ಎರಡನೇ ಲಿಂಗರಾಜೇಂದ್ರ ಒಡೆಯ ಹಾಲೇರಿ ವಂಶದವ. ಕ್ರಿ. ಶ. ೧೮೦೯ರಿಂದ ೧೮೨೦ರ ವರೆಗೆ ಕೊಡಗಿನ ದಕ್ಷರಾಜನಾಗಿ ಆಡಳಿತ ನಡೆಸಿದವ. ಮಡಿಕೇರಿಯ ಓಂಕಾರೇಶ್ವರ ದೇಗುಲವನ್ನು ೧.೬.೧೮೧೭ರಲ್ಲಿ ಕಟ್ಟಲಾರಂಭಿಸಿ ೨ ವರ್ಷ ೯ ತಿಂಗಳು ೨೫ ದಿನಗಳ ಕಾಲ ತೆಗೆದುಕೊಂಡು ೧೮೨೦ರಲ್ಲಿ ಪೂರ್ಣ ಮಾಡಿದ.(೧) ಇಂಡೋ-ಆದಿಲ್‌ಶಾಹಿ ಶೈಲಿಯಲ್ಲಿ ದೇಗುಲವನ್ನು ನಿರ್ಮಿಸಿ ಧರ್ಮೋ-ಸಾಂಸ್ಕೃತಿಕ ಸಾಮರಸ್ಯವನ್ನು ತೋರಿದ.

ಈ ದೇಗುಲ ನಿರ್ಮಾಣದ ಹಿಂದೆ ಕೆಲವು ಕತೆಗಳಿವೆ : ಪುತ್ತೂರು ಕಡೆಯಿಂದ ತಾನಾಗಿ ರಾಜನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಬಂದ ಬಡ ಬ್ರಾಹ್ಮಣನ ಕನ್ಯೆಯನ್ನು ರಾಜನು ಮದುವೆಯಾಗಲು ಅಡ್ಡಿಯಾದ ಕರಣಿಕ ಸುಬ್ಬರಸಯ್ಯನನ್ನು ರಾಜ ಕೊಲ್ಲಿಸಿದನಂತೆ. ಅವನು ಬ್ರಹ್ಮರಾಕ್ಷಸನಾಗಿ ರಾಜನನ್ನು ಕಾಡಲು ಈ ದೇಗುಲ ನಿರ್ಮಿಸಿದನಂತೆ; ಎರಡನೇ ಕತೆ: ವೀರಶೈವ ಜಂಗಮನೊಬ್ಬ ರಾಜನ ಆಸ್ಥಾನಕ್ಕೆ ಬಂದಾಗ ಅನಾದರಿಸಿ ಅಗೌರವ ತೋರಿದ ಕಾರಣ ಅವನು ಶಾಪವಿಟ್ಟ! ಆಗ ರಾಜ ಪ್ರಾರ್ಥಿಸಲು ಅದರ ನಿರಸನಕ್ಕಾಗಿ ಜಂಗಮನೇ ಸಲಹೆ ನೀಡಿದಂತೆ ಈ ದೇಗುಲ ಕಟ್ಟಿಸಲಾಯಿತು; ಲಿಂಗರಾಜೇಂದ್ರ ಒಡೆಯನಿಗೆ ಒಂದು ಕೈಬೆರಳು ಇಲ್ಲದಿದ್ದ ಕಾರಣ. ಅಂಗವಿಕಲನೆಂದು ಜಂಗಮ ಭಿಕ್ಷೆ ಸ್ವೀಕರಿಸದಿದ್ದಾಗ ರಾಜನಿಗೆ ಸಿಟ್ಟು ಬಂತು. ನಿಂದಿಸಿದ. ಆಗ ಜಂಗಮನು, ನಿನ್ನ ವಂಶದಲ್ಲಿ ಇನ್ನು ಮುಂದೆ ಯಾರೂ ಆಳದೆ, ಹೋಗಲಿ ಎಂದು ಶಪಿಸಿದ. ಹಿತೈಷಿಗಳ ಸಲಹೆಯಂತೆ ರಾಜ ಜಂಗಮನ ಕ್ಷಮೆ ಬೇಡಿ ಗೌರವಿಸಿ, ಉಪಚರಿಸಿದ. ಆಗ ಜಂಗಮನು ಕಾಶಿಯಿಂದ ಲಿಂಗತರಿಸಿ ದೇಗುಲ ಕಟ್ಟಿಸಿ ಪ್ರತಿಷ್ಠಾಪಿಸು. ನಿನ್ನ ಮುಂದಿನ ತಲೆಮಾರಾಗಿ ನಿನ್ನ ಕುಮಾರ ಮಾತ್ರ ಕೆಲಕಾಲ ಆಳುತ್ತಾನೆ. ಆದರೆ ಅವನ ಮುಂದಿನ ವಂಶ ಈ ರಾಜ್ಯದಲ್ಲಿ ನಿಲ್ಲದು. ಅಷ್ಟೆ ನಿನ್ನ ಯೋಗ ಎಂದ.(೨) ಇದಲ್ಲದೆ ಸುಬ್ಬರಸಯ್ಯನ ಮಗಳು ಚಿತ್ರಾ ಈ ರಾಜನನ್ನು ಪ್ರೀತಿಸುತ್ತಿದ್ದಳು. ಪ್ರೇಮಿಗಳು ಸುಖವಾಗಿದ್ದರು. ಆಕಸ್ಮಿಕವಾಗಿ ಚಿತ್ರಾ ದೇಗುಲದ ಮುಂದಿದ್ದ ಸಣ್ಣ ಕೊಳದಲ್ಲಿ ಕಾಲುಜಾರಿ ಮುಳುಗಿ ಅಸುನೀಗಿದ ಳಂತೆ. ಅವಳ ನೆನಪಿಗಾಗಿ ದೇಗುಲದ ಮುಂದಿನ ಪುಷ್ಕರಿಣಿ ಹಾಗು ಕುಠಲಮಂಟಪವನ್ನು ರಾಜ ಕಟ್ಟಿಸಿದನೆಂದೂ ಕತೆ ಇದೆ.



ಕುಕ್ಲೂರು ಕುಂದ ಗ್ರಾಮದ ತಾತಂಡ ಜನರ ಮನೆಯಲ್ಲಿರುವ ಎರಡನೇ ಲಿಂಗ ರಾಜೇಂದ್ರ ಒಡೆಯ ಹಾಗು ತಾತಂಡ ಸುಬ್ಬಯ್ಯನ ೧೮೧೧ರ ಅಪ್ರಕಟಿತ ಚಿತ್ರ

ಇಂತೆಲ್ಲ ಹಿನ್ನೆಲೆಯ ಕತೆಗಳಿದ್ದರೂ ಓಂಕಾರೇಶ್ವರ ದೇಗುಲ ನಿರ್ಮಾಣವಂತು ಚಾರಿತ್ರಿಕ ಸತ್ಯ. ಬ್ರಹ್ಮರಾಕ್ಷಸನ ಕತೆಯ ಸಂಬಂಧದ ಯಾವ ಆಚರಣೆ ಹಾಗು ಕುರುಹುಗಳು, ದೇಗುಲದ ನಿರೂಪದಲ್ಲಿ ಎಲ್ಲೂ ಸೂಚಿತವಿಲ್ಲವಾದ ಕಾರಣ ಆ ಕತೆಯ ಮಿಥ್ಯೆಯು ವಿದಿತವಾಗುತ್ತದೆ. ಅದು ೧೮೪೧-೬೩ರ ಸಮಯ ದಲ್ಲಿ ಯಾರೋ ಸೃಷ್ಟಿಸಿದ ಕತೆಯಾಗಿದೆ. ನಿರೂಪದ ವಸ್ತುವಾದರೋ ಮುಖ್ಯವಾಗಿ, ಶ್ರೀ ಓಂಕಾರೇಶ್ವರ ದೇಗುಲದ

* ೨೨೧, ೬೮ನೇ ತಿರುವು, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦.

ದೇವಸಮೂಹದ ನಿತ್ಯಗಟ್ಲೆ ಪೂಜಾಚರಣೆಗೆ - ಅಮೃತಪಡಿ, ನಂದಾದೀಪ ವಿಶೇಷಕಟ್ಲೆ ಪೂಜಾಚರಣೆ, ಹಬ್ಬ, ಉತ್ಸವಾದಿಗಳಿಗೆ ಸಂಬಂಧಿಸಿದಂತಿದ್ದು, ಕ್ರಿ. ಶ. ೧೮೨೦ರಲ್ಲಿ ಅಂದರೆ ದೇಗುಲಾ ರಂಭದಲ್ಲಿ ನೀಡಿರುವ ನಿರೂಪವಿದಾಗಿದೆ. ಫುಲ್‌ಸ್ಕೇಪ್ ಹಾಳೆಯ ೧೭ ಪುಟಗಳಷ್ಟಿರುವ ಸಂಪೂರ್ಣ ವ್ಯವಸ್ಥಾ ವಿವರಗಳ ಸುದೀರ್ಘ ನಿರೂಪವಿದಾಗಿದೆ. ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಹಾಗು ಆಡಳಿತ ವ್ಯವಸ್ಥೆಗಳ ತುಣುಕುಗಳ ಮೊತ್ತ ತುಂಬಿಕೊಂಡ ನಿರೂಪವೆನಿಸುತ್ತದೆ.

ಓಂಕಾರೇಶ್ವರ ದೇಗುಲಾವರಣದಲ್ಲಿ ಮುಖ್ಯ ದೇವರು ಶ್ರೀ ಓಂಕಾರೇಶ್ವರ. ಪರಿವಾರ ದೇವತೆಗಳಾಗಿ ಗಣಾಧೀಶ್ವರ (ಗಣಪತಿ), ಕುಮಾರೇಶ್ವರ, ಹಾಗು ನಂದೀಶ್ವರ ದೇವರುಗಳಿವೆ. ಈ ದೇವ ಸಮೂಹಕ್ಕೆ ದೈನಂದಿನ ತ್ರಿಕಾಲ ಪೂಜೆ, ನೈವೇದ್ಯ ನಂದಾದೀಪ, ಅಮೃತಪಡಿಯಿಂದ ಹಿಡಿದು ತಿಥಿ, ವಾರ, ಪಕ್ಷ, ಮಾಸಿಕ, ವಾರ್ಷಿಕ ಹಬ್ಬ ಉತ್ಸವಾದಿಗಳಿಗೆ ಆಡಳಿತವು ಒದಗಿಸ ಬೇಕಾದ ಪರಿಕರಗಳ ನಿಖರ ಪಟ್ಟಿಯನ್ನು ಪರಿಮಾಣ ಸಹಿತವಾಗಿ ಲೆಖ್ಖ ಮಾಡಿ ವಿವರ ಪೂರ್ಣವಾಗಿ, ವರ್ತಮಾನದ ಗಣಿತ ಶಾಸ್ತ್ರೀಯ ಸಂಕೇತ ಸಹಿತವಾಗಿ ಕನ್ನಡ ಅಂಕಿಗಳಲ್ಲಿ ಈ ನಿರೂಪದಲ್ಲಿ ದಾಖಲಿಸಲಾಗಿದೆ. ಆಗಮೋಕ್ತವಾದ ಪೂಜಾ ವಿಧಾನಕ್ಕೆ ಅನುಗುಣವಾದ ಸರಬರಾಜಿನ ವ್ಯವಸ್ಥೆಯ ದಾಖಲೆ ಈ ನಿರೂಪವಾಗಿದೆ.

ನಿರೂಪದಲ್ಲಿ ಅಮೃತಪಡಿಗೆ ಅಕ್ಕಿಯ ಪ್ರಮಾಣ, ನಂದಾದೀಪಕ್ಕೆ ಹಸುವಿನ ತುಪ್ಪ, ವಳ್ಳೆಂಣೆ, ಪರಮಾನ್ನ ನೈವೇದ್ಯಕ್ಕೆ ಅಕ್ಕಿ ಬೆಲ್ಲ ತೆಂಗು, ಏಲಕ್ಕಿ; ದಧ್ಯಾಂನ್ನ ನೈವೇದ್ಯಕ್ಕೆ ಅಕ್ಕಿ ಮೊಸರು, ಹಸಿಶುಂಠಿ; ಪಂಚಾಮೃತ ಅಭಿಷೇಕಕ್ಕೆ ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ, ಕಬ್ಬಿನ ರಸ, ಯಳನೀರು, ನಿಂಬೆ, ಕರ್ಪೂರ ಸಾಂಬ್ರಾಣಿ, ತೆಂಗು, ಅಡಕೆ ಹೋಳು, ಬಾಳೆಹಣ್ಣು, ವೀಳ್ಯೆದೆಲೆ ಇತ್ಯಾದಿ., ಹೀಗೆಯೇ ಮಹಾನ್ಯಾಸ ರುದ್ರಾಭಿಷೇಕಕ್ಕೆ, ಪೂಜಾ ನೈವೇದ್ಯ ಮಂಗಳಾರತಿಗೆ ನೀಡಬೇಕಾದ ಪರಿಕ್ರಮವನ್ನು ಸೂಚಿಸಲಾಗಿದೆ. ಇಲ್ಲಿ ಕ್ರಮವಾಗಿ ದಿನವೊಂದಕ್ಕೆ ಬೇಕಾಗುವ ಪ್ರಮಾಣವನ್ನು ಹೇಳಿ ವರುಷಕ್ಕೆ ಆಗುವ ಒಟ್ಟು ಪ್ರಮಾಣವನ್ನು ಎದ್ದು ಕಾಣುವಂತೆ ನಮೂದಿಸಿದೆ.

ಅಕ್ಕಿಯ ಪ್ರಮಾಣವನ್ನು ೮೦ ಸೇರಿನ ಮಾನವಾದ ಹೇರು ಭಟ್ಟಿಯಲ್ಲಿ, ಹೇರು ಸೇರುಗಳಲ್ಲಿ ನಮೂದಿಸಿದೆ. (೧ ಹೇರುಬಟ್ಟೆ = ೮೦ ಸೇರು = ೬೪೦೦ ರೂ. ತೂಕ; ೧ ಪಾಟ ಭಟ್ಟೆ = ೧೦೦ ಸೇರು = ೮೦೦೦ ರೂ. ತೂಕ) ತುಪ್ಪ, ಎಣ್ಣೆ, ಮೊಸರು, ಹಾಲು, ಧಾನ್ಯ, ಗೋದಿ, ಉಪ್ಪು, ಸೀಗೆಪುಡಿ ಇತ್ಯಾದಿಗಳನ್ನು ಹೇರು ಮಾನದಲ್ಲಿಯೆ ಹೇಳಿದೆ. ಬೆಲ್ಲ ಸಕ್ಕರೆ ಅರಳೆ ಅಡಿಕೆ ಶ್ರೀಗಂಧ ಹುಣಸಿ ಮೆಣಸಿನಕಾಯಿ ಕೊತ್ತಂಬರಿ ಆರಿಶಿನ ಕರ್ಪೂರ ಊದುಬತ್ತಿ ವಗೈರೆಗಳನ್ನು 'ನಡವಮಾನ'ಗಳಲ್ಲಿ (ಬಹುಶಃ ಎತ್ತಿನ ಹೇರುಗಳ ಬದಲಿಗೆ, ಚಾಲ್ತಿಮಾನ ಅಥವಾ ಮನುಷ್ಯರು ಹೊತ್ತು ತರುವ ವಸ್ತುಗಳಿಗೆ ನಿಗದಿಪಡಿಸಿದ್ದ ತೂಕದ ಮಾನವಿದೆಂದು ತೋರುತ್ತದೆ) ಅಂದರೆ ಇದು 'ತೂಕ'ದ ಅಳತೆಯಾಗಿಯೂ ಬಳಕೆಗಿತ್ತೆನಿಸುತ್ತದೆ. ಕಾರಣ ೧ ಪಾಟಮಣ = ೧೩೭೫ ರೂ. ತೂಕ, ೧ ನಡವಮಣ = ೧೧೦೦ ರೂ. ತೂಕ; = ೪೦ ಸೇರು. ಹೇರು ಸೇರು, ನಡವ ಸೇರು ಎಂಬ ಮಾನಗಳೂ ಇದ್ದುವು. ಸಾಂಬ್ರಾಣಿ, ಕರ್ಪೂರ, ಏಲಕ್ಕಿ ಇತ್ಯಾದಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುವ ಸಂದರ್ಭಗಳಲ್ಲಿ 'ನಡವಮಾನ'ದಲ್ಲಿ ಸೂಚಿಸಿರುವುದೂ ಇಲ್ಲುಂಟು. ತೆಂಗು, ನಿಂಬೆ, ವೀಳ್ಯದೆಲೆ, ಬಾಳೆ, ಎಳನೀರು, ಅಡಕೆ ಹೋಳು, ಊದುಬತ್ತಿ, ಬಚ್ಚಕಾನಿ ಧೋತ್ರ, ಕರಡೆ ಕಾಗದದ ಗಡ್ಡೆ, ಹಚ್ಚಡ ಇತ್ಯಾದಿಗಳನ್ನು ಸಂಖ್ಯಾ ಪ್ರಮಾಣದಲ್ಲಿ ಸೂಚಿಸಲಾಗಿದೆ.

ಸಾಮಾನ್ಯವಾಗಿ ಅಳತೆಕೋಷ್ಟಕದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು, ಹಾನೆ (೧ ಹಾನೆ = ೨ ಸೇರು) ಪ್ರಮಾಣವನ್ನು '೯' ಎಂಬ ಸಂಕೇತದ ಮುಂದೆ ನೀಳಗೀಟುಗಳನ್ನಿಟ್ಟು ಸೂಚಿಸಲಾಗಿದೆ. ಅದಕ್ಕಿಂತ ಕಡಿಮೆ ಭಿನ್ನಾಂಶಗಳಿದ್ದಾಗ '೦' ಸಂಕೇತವಿಟ್ಟು ಸೂಚಿಸ ಲಾಗಿದೆ. ಪೂರ್ಣಾಂಕದ ಸಂದರ್ಭದಲ್ಲಿ ಪರಿಮಾಣದ ಮುಂದೆ '೦' ಸಂಕೇತವಿಲ್ಲದಿದ್ದರೂ ವಸ್ತು ವಿಶೇಷವನ್ನನುಸರಿಸಿ ಭಟ್ಟಿಮಾನವು ಬಂದಾಗ ಹಾಗು ವರಹ, ಹಣ ಇತ್ಯಾದಿ ನಾಣ್ಯ ಕೋಷ್ಟಕ ಸಂಬಂಧದಲ್ಲಿ ಹಿಂದಿನ ಹೆಚ್ಚಿನ ಮಾನದ ನಮೂದು ಇಲ್ಲದಿದ್ದಾಗ ಅದಕ್ಕಿಂತ ಕೆಳಗಿನ ಮಾನದ ನಮೂದು ಬರುವ ಹಿಂದೆ '೦' ಸಂಕೇತವನ್ನು ಬಳಸಲಾಗಿದೆ. ಹಣದ ಮೌಲ್ಯಮಾನಗಳಾಗಿ 'ಕಂಟೀರಾಯಿ ಹಣ, ವರಹ, ಮುಪ್ಪಾಗು, ಬೇಳೆ, ಅಡ್ಡ, ವೀಸ, ಕಾಣಿ'ಗಳಲ್ಲಿ ಬೆಲೆಗಳನ್ನು ಹೇಳಿದೆ. ವರ್ಷದ ದಿನಗಳ ಸಂಖ್ಯೆ ೩೬೦ ಎಂಬ ಲೆಖ್ಖಾಚಾರದಲ್ಲಿ ಈ ದೇಗುಲಕ್ಕೆ ಪಡಿಪದಾರ್ಥಗಳನ್ನು ನಿಗದಿ ಮಾಡಿದೆ. ಕಾರಣ ಸಾವನ ಸಂವತ್ಸರ ಪದ್ಧತಿಯಲ್ಲಿ ಪ್ರತಿ ತಿಂಗಳಿಗೂ ೩೦ ದಿನಗಳಂತೆ ೧೨ ತಿಂಗಳ ವರ್ಷಕ್ಕೆ ೩೬೦ ದಿನಗಳಾಗಿ ಜ್ಯೋತಿಶ್ಶಾಸ್ತ್ರಕ್ಕೆ ಸಮ್ಮತವಿಲ್ಲದಿದ್ದರೂ ವ್ಯವಹಾರಕ್ಕೆ ಈ ಎಣಿಕೆ ಪದ್ಧತಿ, ಸರಲ ಸುಲಭ (ಬೆಟಗೇರಿ ಕೃಷ್ಣಶರ್ಮ : ನಮ್ಮ ಸಂಸ್ಕೃತಿ ಪರಂಪರೆ, ಪು. ೨) ಎಂದು ಲಿಂಗರಾಜೇಂದ್ರ ಒಡೆಯನಿಗೆ ಜನ ವ್ಯವಹಾರ ಮುಖ್ಯವಾಗಿ ಅವನು ಈ ಜನಪ್ರಿಯ ಪದ್ಧತಿಯನ್ನು ಅನುಸರಿಸಿದಂತಿದೆ.

ದೇಗುಲದ ದೇವಪರಿವಾರಕ್ಕೆ ಚೈತ್ರದಿಂದ ವೈಶಾಖದವರೆಗೆ, ವಸಂತಪೂಜೆ, ನವರಾತ್ರಿ, ಕಾರ್ತಿಕ ದೀಪಾವಳಿ, ಶಿವರಾತ್ರಿ, ಉತ್ಥಾನದ್ವಾದಶಿ ಇತ್ಯಾದಿ ಮಾಸಿಕ ಪೂಜಾ ವಿಶೇಷಗಳಿಗೆ ನೀಡಿರುವ ಪೂಜಾಸಾಹಿತ್ಯ, ಪೂಜಾವೈವಿಧ್ಯಗಳ ಚಿತ್ರಣ ವಿರುವಂತೆಯೆ, ದೇಗುಲದ ವಿವಿಧ ಸೇವಾಕಾರ್ಯಗಳಲ್ಲಿ ಅಂದರೆ ಕಟ್ಟಿಗೆ ಚಾಕ್ರಿ, ಶ್ಯಾನುಭೋಗಿಕೆ, ಅಡಿಗೆ ಜನ, ಶಾಂತಿಕಾರ (ಅರ್ಚಕ), ಉಪಾಧ್ರಿ, ಪಾರುಪತ್ಯೆಗಾರ, ಪರಿಚಾಕ್ರಿ, ಉಗ್ರಾಣದ ಚಾಕ್ರಿ, ಇತ್ಯಾದಿ ೨೭ ಜನವರ್ಗದ ಸಂಖ್ಯಾ ವಿವರ ಹಾಗು ನೀಡುವ ನಿಗದಿತ ಸಂಬಳದ ವಿವರವನ್ನು ಹೇಳಿದೆ. ಇವರ ಜೊತೆಗೆ ಬಿಲ್ಪತ್ರೆ ತರುವ ಜನ,

ಶ್ರುತಿಮುಉರ್ರಿ ಊದುವ ಜನ, ಡವಣೆಜನ, ಡೋಲಿನ ಜನ, ತಾಳದ ಜನ, ಶಂಕಜಾಗಟೆ ಜನ, ಮೇಳದ ಹೆಣ್ಣುಜನ, ಮದ್ದಳೆಜನ ಇತ್ಯಾದಿ ಜನರ ಕಾಯಕ, ಅವರ ಸಂಖ್ಯೆ ಹಾಗು ಸಂಬಳದ ವಿಷಯವನ್ನು ಬಹಳ ನಿಖರವಾಗಿ ನಿರೂಪವು ತಿಳಿಸಿದೆ. ಪರಸ್ಥಳದಿಂದ ಬರುವ ಅತಿಥಿ ಬ್ರಾಹ್ಮಣ ಜನಕ್ಕೆ ಅರಮನೆ ಉಗ್ರಾಣದಿಂದ ಪಾಕ ಸಾಮಗ್ರಿಗಳನ್ನು ನೀಡಬೇಕಾದ ಕುರಿತು ಹೇಳಿದೆ; ಖರ್ಚುವೆಚ್ಚಗಳ ವಾರ್ಷಿಕ ತಪಾಸಣೆ ಮಾಡಬೇಕಾದ ಬಗ್ಗೆಯೂ ಹೇಳಿರುವುದು, ಆಡಳಿತದ ಎಚ್ಚರವೇ ಆಗಿದೆ.

ದೇಗುಲದ ಎಲ್ಲ ಪೂಜಾಚರಣೆ, ಉತ್ಸವ ವಿಶೇಷಗಳಿಗೆ ಬಳಸಲಾಗುವ ಎಲ್ಲ ಸರಕು ಸಾಹಿತ್ಯದ ದರ ಹಾಗು ವಾರ್ಷಿಕವಾಗಿ ಬೇಕಾಗುವ ಅವುಗಳ ಪ್ರಮಾಣಕ್ಕೆ ತಗಲುವ ಮೌಲ್ಯವನ್ನು ಬಹಳ ನಿಖರವಾಗಿ ದಾಖಲಿಸಲಾಗಿದೆ. ದೇಗುಲದ ಆಭರಣಗಳು ಹಳತಾದಾಗ, ಒಡಕಾದಾಗ ಹೊಸದಾಗಿ ಅರಮನೆಯಿಂದ ಮಾಡಿಸಿಕೊಡಬೇಕಾದ ಹೊಣೆಯನ್ನು ತಿಳಿಸಲಾಗಿದೆ. ನಿರೂಪದ ಆರಂಭದಲ್ಲಿ ಅರಮನೆ ದಿವಾನ್ ಕಛೇರಿದಾರ ಕರಣೀಕನಿಗೆ ಈ ಎಲ್ಲ ತಸ್ತೀಕು ವಿವರಗಳನ್ನು ದೇಗುಲದ ಸಂಬಂಧದಲ್ಲಿ ನಡೆಸಿಕೊಂಡು ಬರುವ ಬಗ್ಗೆ ಅಪ್ಪಣೆ ಕೊಡಿಸಿರುವ ಬಗ್ಗೆ ನಮೂದಿಸಿದೆ. ನಿರೂಪದ ಕೊನೆಯ ೧೪ ಸಾಲುಗಳು ಕ್ರಿ. ಶ. ೧೮೨೦ರ ಓಂಕಾರೇಶ್ವರ ದೇಗುಲ ತಾಮ್ರಶಾಸನವಾದ ಮಡಿಕೇರಿಯ ೧೧ನೇ ಶಾಸನ[ಎ. ಕ. ೧ (ಹೊಸತು)]ದ ಕೊನೆಯ ೮ ಸಾಲುಗಳ ತದ್ವತ್‌ರೂಪವಾಗಿದೆ. ಶಾಸನ ಹಾಗು ನಿರೂಪವನ್ನು ಬರೆದವರು ಬೇರೆ ಬೇರೆ ವ್ಯಕ್ತಿಗಳೆನಿಸಿದರೂ, (ಶಾಸನದಲ್ಲಿ ಬರೆದವನ ಹೆಸರಿಲ್ಲ) ನಿರೂಪ ಬರೆದವನಂತು ಕರಣಿಕ ಲಿಂಗಪ್ಪೆಯ ಎಂದಿದೆ. ನಿರೂಪ ಹಾಗು ಶಾಸನದಲ್ಲಿ ನಿತ್ಯಗಟ್ಲೆ, ಕೊಡಿಶಿ, ಅಪ್ಪಣೆ - ಹೀಗೆ ಅನೇಕ ಶಬ್ದಗಳು ರೂಪಭೇದ ಹೊಂದಿವೆ.

ದೇಗುಲ ಸಂಬಂಧದ ಪರಿಕರಗಳ ಮಾನ, ಪರಿಮಾಣ, ಪ್ರಮಾಣಗಳ ಸಂಕೇತಸಹಿತವಾದ ನಮೂದುಗಳೂ ಅಂದಿನ ವಾಣಿಜ್ಯ ವ್ಯವಹಾರಗಳ, ಆರ್ಥಿಕ ಜಾಯಮಾನಗಳ ಸಂಗತಿಗಳನ್ನು ಗರ್ಭೀಕರಿಸಿಕೊಂಡು ಆಸಕ್ತಿ ಕೆರಳಿಸುತ್ತವೆ; ಚಲಾವಣೆಯಲ್ಲಿದ್ದ ನಾಣ್ಯ, ತೂಕದ ಮಾನಗಳ ಕನಿಷ್ಠ ಭಿನ್ನಾಂಶಗಳವರೆಗಿನ ವಿಷಯಗಳನ್ನು ಮನದಟ್ಟು ಮಾಡಿಕೊಡುತ್ತವೆ. ದೇಗುಲ ನಿರ್ವಹಣಾ ವ್ಯವಸ್ಥೆಯಲ್ಲಿ ಅಡಕಗೊಂಡ ಸಿಬ್ಬಂದಿಯ ಬಗ್ಗೆ ಕಲ್ಪನೆ ಒದಗುತ್ತದೆ; ಉಗ್ರಾಣದ ಬಳಿ ಸಲಾಮಿನ ದೀವಟಿಗೆಗೆ ವಳ್ಳೆಂಣೆ ಬಳಕೆ, ದೇಗುಲ ಪಾರ್ಶ್ವಗಳಲ್ಲಿ ಹತ್ತಿಸುವ ಕಂದೀಲುವಿಗೆ ತೆಂಗಿನ ಎಣ್ಣೆಯ ಬಳಕೆ, ನಡೆಯಾಲದ ಬಳಿ (ದೇಗುಲದ ನಡೆ ಹಾದಿ) ದೀಪಕ್ಕೆ ಹರಳೆಣ್ಣೆಯ ಬಳಕೆ ಇದ್ದು ಅಂದಿನ ಬೆಳಕಿನ ವ್ಯವಸ್ಥೆಯ ಬಗ್ಗೆ ಕಲ್ಪನೆ ಒದಗಿಸುತ್ತದೆ.

ಈ ನಿರೂಪದಲ್ಲಿ ಮಾನಗಳಿಗೆ ಬಳಸಿರುವ ಸಂಕೇತಗಳು ಕುತೂಹಲಕಾರಿ ಆಗಿವೆ. ಹೇರು ಮಾನಗಳನ್ನು ಬಳಸುವಾಗ ಭಟ್ಟಿ, ಹಾನೆ ಇತ್ಯಾದಿ ಶಬ್ದಗಳು ಪ್ರಯೋಗವಾಗಿವೆ. '೩।೫' ಎಂಬ ಮಾನದ ಸಂಕೇತವು ಮೂರುಕಾಲು ಭಟ್ಟಿ (೩।), ಐದು ಹಾನೆ (೫) ಎಂದು ಸೂಚಿಸುತ್ತದೆ. ಇಲ್ಲಿ '।' ಎಂಬ ಸಂಕೇತ ನಾಲ್ಕನೇ ಒಂದು ಭಾಗ ಸೂಚಿಸುವ ಗೀಟು - ಭಿನ್ನರಾಶಿ.

'೯' ಸಂಕೇತವು (ಅಳೆವ ಮಾನ) ಹೇರುಮಾನದಲ್ಲಿ 'ಭಟ್ಟಿ' ಎಂಬುದರ ಸಂಕೇತವಾದರೆ ನಡೆವ ಮಾನ (ತೂಕಮಾನ!) ದಲ್ಲಿ 'ಮಣ'ವನ್ನು ಸಂಕೇತಿಸುತ್ತದೆ. '೧೯೫' ಎಂದರೆ ಹೇರುಮಾನ ರೀತ್ಯಾ ೧ ಭಟ್ಟಿ ೫ ಹಾನೆ (೮೦+೧೦=೯೦ ಸೇರು); ನಡೆವ ಮಾನದ ರೀತ್ಯಾ ೨ ಮಣ ೧೦ ಸೇರು ಆಗುತ್ತದೆ. '೯' ಸಂಕೇತವು ಸಂಖ್ಯೆಯ ಹಿಂದೆ ಇದ್ದಾಗ (೯೨।।) ಎರಡೂವರೆ ಎಂಬ ಭಿನ್ನಾಂಶವನ್ನು ಸೂಚಿಸುತ್ತದೆ. ಮುಂದೆ ಇದ್ದಾಗ ಪೂರ್ಣಾಂಕದಲ್ಲಿ ಭಟ್ಟಿ ಹಾಗು ಮಣಗಳನ್ನು ಸೂಚಿಸುತ್ತದೆ.

ಇನ್ನು ನಾಣ್ಯಗಳ ಸಂಕೇತದಲ್ಲಿ '▽' ಎಂಬುದು 'ವರಹ'ದ ಚಿಹ್ನೆ ಆಗಿ ಬಳಕೆಗೊಂಡಿದೆ. ಈ ಚಿಹ್ನೆಯ ಹಿಂದಿನ ಸಂಖ್ಯೆಗಳು, 'ಪೂರ್ಣಾಂಕ'ಗಳಾಗಿ ಸೂಚನೆಗೊಳ್ಳುತ್ತವೆ; ಚಿಹ್ನೆಯ ಮುಂದೆ ಒಳಗೆ ಬಂದಾಗ ವರಹದ ಭಿನ್ನಾಂಶಗಳಾಗಿ ತೋರಿಕೊಳ್ಳುತ್ತವೆ. ಇದಕ್ಕೆ (ಕೋಷ್ಠಕ ನೀಡಿದೆ) ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಅಳತೆ ಮತ್ತು ತೂಕ ಕೋಷ್ಟಕ

೧ ಹೇರುಭಟ್ಟಿ = ೮೦ ಸೇರು = ೪೦ ಹಾನೆ

೧ ಹೇರು ಹಾನೆ = ೨ ಸೇರು

೧ ಹೇರು ಮಾನ = ೧/೪ ಸೇರು (ಭಾಗ)?

೧ ನಡವ ಮಣ = ೪೦ ಸೇರು = ೧/೨ ಹೇರುಭಟ್ಟಿ

೧ ನಡವಸೇರು = ೧/೨ ಹೇರು ಸೇರು

೧ ರೂ ತೂಕ = ೧೬ ಭಾಗ; ೧/೪ ಭಾಗದ ಸಂಕೇತ । ಗೀಟು. ಅರ್ಧದ ಸಂಕೇತ, ಎರಡು ನೇರ ಗೀಟುಗಳು ।। ಅಥವಾ U ಆಕಾರ. ಮುಕ್ಕಾಲಿನ ಸಂಕೇತ ।।। ಅಥವಾ ಒಂದು ಜೊತೆ U ಆಕಾರ

ಬೇಳೆ = ಸೇರಿನ ೧/೮ ಭಾಗ : ಸಂಕೇತ ◡

[(ಸಂ)ವತ್ಸರಕ್ಕೆ ೩೬೦ ದಿನಗಳ ಲೆಖ್ಖಾಚಾರ (ಸಾವನ ಸಂವತ್ಸರ ಪದ್ಧತಿ)]

೧।।।೭ ಅಕ್ಕಿ ದಿನ ೧ಕ್ಕೆ ಹೇರುಹಾನೆ ೧ ವಂದರಲ್ಲು ದಿನ ೭೭ಕ್ಕೆ ಹೇರು ವಂದೂ ಮುಕ್ಕಾಲು ಬಟ್ಟಿಯ ಏಳು ಹಾನೆ. ಅಂದರೆ
೭೭ ದಿನಕ್ಕೆ x ೧ ಹೇರುಹಾನೆ = ೭೭x೨=೧೫೪ ಸೇರು
೮೦+೬೦+೧೪=(೧ ಬಟ್ಟಿ + ೩/೪ ಬಟ್ಟಿ) + ೭ ಹಾನೆ
= ವಂದೂ ಮುಕ್ಕಾಲು ಬಟ್ಟಿ ೭ ಹಾನೆ
= ೧।।।೭ (ಸಂಕೇತ)

೩।೫ ಹಸುವಿನ ತುಪ್ಪ ನಂದಾದೀಪ ೧ಕ್ಕೆ ದಿನ ೧ಕ್ಕೆ ಹೇರು ಸೇರು

।।। ಮುಕ್ಕಾಲರಲ್ಲು ವರುಷ ೧ಕ್ಕೆ ಹೇರು ಮೂರು ಕಾಲು ಭಟ್ಟಿ ಉೖಯಿದು ಹಾನೆ. ಅಂದರೆ

ದಿನಕ್ಕೆ ಹೇರುಸೇರು ಮುಕ್ಕಾಲು = ೩/೪ = ।।।

೩೬೦ ದಿನ (ವರ್ಷ ೧) x ೩/೪=೨೭೦ ಸೇರು

೨೭೦ = ೨೪೦ + ೨೦ + ೧೦

= ೩ ಭಟ್ಟಿ + ೧/೪ ಭಟ್ಟಿ + ೫ ಹಾನೆ

= ೩।೫ (ಸಂಕೇತ)

೯॥ ತುಪ್ಪ ದಿನ ೧ಕ್ಕೆ ಹೇರುಮಾನ ॥೦ ಅರೆಯಲ್ಲು ದಿನ ೭೭ಕ್ಕೆ ಹೇರು ವಂಬತ್ತು ವರೆಯು ಬೇಳೆ

ಹೇರುಮಾನ ಅರೆಯಲ್ಲು ॥೦=೧/೪x೧/೨=೧/೮ ಸೇರು

ಅಂದರೆ ೭೭ ದಿನಕ್ಕೆ x ೧/೮ ಸೇರು = ೭೭/೮ = (೭೨+೪+೧)/೮ = ೭೨/೮ + ೪/೮ + ೧/೮

= (೯ + ೧/೨) + ೧/೮ = ಒಂಬತ್ತುವರೆಯು, ಬೇಳೆ

= ೯॥ (ಸಂಕೇತ)

ಇಲ್ಲಿ ಭಟ್ಟಿಗಿಂತ ಕಡಿಮೆ ಮಾನ ಎಂಬುದು '।' ಸಂಕೇತದಿಂದ ಸೂಚಿತ.

೧೯೫ ತುಪ್ಪ ದಿನ ೧ಕ್ಕೆ ನಡವ ಸೇರು ಬೇಳೆಯಲ್ಲು ವರುಷ ೧ಕ್ಕೆ ನಡವ ವಂದುಮಣ ಉೖದು ಸೇರು.

೧ ನಡೆವ ಮಣ = ೪೦ ಸೇರು, ಬೇಳೆ = ೧/೮ ಸೇರು

(ವರುಷಕ್ಕೆ) ೩೬೦ x ೧/೮=೪೫=೪೦ + ೫

= ವಂದುಮಣ ೫ ಸೇರು = ೧೯೫ (ಸಂಕೇತ)

ನಾಣ್ಯ ಕೋಷ್ಟಕ:

ವರಹದ ಚಿಹ್ನೆ: '⌐⊽', ೧ ವರಹ = ೧⊽೦ ಅಥವಾ

೧ ವರಹ = ೧ ಗದ್ಯಾಣ = ೨ ಹೊನ್ನು = ೧೦ ಹಣ = ⊽೦

೧ ಹೊನ್ನು = ೫ ಹಣ; ೧ ಹಣ = ೨ ಅಡ್ಡ; ಅಡ್ಡದ ಸಂಕೇತ '॥'

೧ ಅಡ್ಡ = ೨ ಹಾಗ; ೧ ಹಾಗ (=ಹಾಗು)ದ ಸಂಕೇತ '।'

೧ ಹಾಗ=೨ ಬೇಳೆ; ೧ ಬೇಳೆಯ ಸಂಕೇತ '◡'

೧ ಬೇಳೆ = ೨ ವೀಸ, ೧ ವೀಸದ ಸಂಕೇತ '◡'

೧ ವೀಸ = ೨ ಅರೆವೀಸ, ಅರೆವೀಸದ ಸಂಕೇತ ೦॥ ಅಥವಾ ಬೇಳೆ ಅಥವಾ ವೀಸದ ನಂತರ ಬರುವ ॥

೧ ಅರೆವೀಸ = ೧ ಕಾಣಿ, ಸಂಕೇತ : ವೀಸದ ನಂತರ ಬರುವ ಒಂದು ಗೀಟು ।

ಉದಾಹರಣೆಗಳು:

೧೮⊽೦ = ೧೮ ವರಹ

೮೨⊽೨।।। = ಎಂಬತ್ತೆರಡು ವರಹ ಎರಡು ಹಣ ಮುಪ್ಪಾಗು (೩ ಹಾಗ) ಮೂರು ವೀಸ.

೯⊽।।೪।◡। = ಉಪ್ಪು ಕಂಟಿರಾಯಿ ⊽೧ ವಂದಕ್ಕೆ ಹೇರುಹಾನೆ ೩ ಮೂರರಲ್ಲು ಹೇರುಭಟ್ಟಿ ೭।೮ ಯೇಳು ಕಾಲು ಬಟ್ಟಿಯು ಯಂಟು ಹಾನೆಗೆ ಕ್ರಯ ಕಂಟಿರಾಯಿ ವಂಬತ್ತು *ವರಹಾಲು ವಂಬತ್ತು ಹಣ ಹಾಗು* (ಹಾಗ) *ವೀಸು ಕಾಣಿ*

ಸಂಖ್ಯೆ ೯ ವರಹ ಚಿಹ್ನೆಯ ಹೊರಗಿದ್ದು ೯ ವರಹದ ಸೂಚನೆ ಆಗಿದೆ. ವರಹ ಚಿಹ್ನೆಯ ಒಳಗೆ ಮೊದಲು ಬರುವ ಪ್ರತಿ ಗೀಟುಗಳ ಮೌಲ್ಯ ೨೧/೨ ಹಣ. ಹಾಗಾಗಿ ೨ ಗೀಟುಗಳ ಮೌಲ್ಯವಾಗಿ ೫ ಹಣ + ೪ ಹಣ = ೯ ಹಣ; ಹಾಗಕ್ಕೆ ಒಂದು ತುಸು ನೇರ ಗೀಟು, ವೀಸಕ್ಕೆ ಒಂದು ವಕ್ರ ಗೀಟು, ನಂತರದ ತುಸು ನೇರ ಗೀಟು ಕಾಣಿಯ ಸಂಕೇತ.

ಗ(ಗದ್ಯಾಣ) ೧॥೦=೧೦ ಹಣ + ೫ ಹಣ = ೧೫ ಹಣ ಎಂದರ್ಥ.

೮⊽॥೩।।।೦ = ೮ ವರಹ, ೮ ಹಣ, ಮುಪ್ಪಾಗ

೨೫⊽೧।।।◡।।। = ೨೫ ವರಹ, ೧ ಹಣ, ಮುಪ್ಪಾಗು, ಬೇಳೆ, ಮುಕ್ಕಾಣಿ

ಕೆಲವು ವೇಳೆ ವರಹದ ಚಿಹ್ನೆ ಬಳಸದೆ ನಿರೂಪದ ೧೬ ನೇ ಪುಟದಲ್ಲಿ ಮಾನ ಹೇಳಿರುವುದೂ ಉಂಟು.


ಉದಾ :

೧॥೪॥೦ = ಕಂಟಿರಾಯಿ ಒಂದು ವರಹಾಲು, ವಂಬತ್ತು ಹಣ, ಅಡ್ಡ

ಸಾಂದರ್ಭಿಕವಾಗಿ ಇವುಗಳನ್ನು ಅರ್ಥ ಮಾಡಿಕೊಳ್ಳಬೇಕು. ಹೀಗೆ ಅಂದಿನ ಅಳತೆ, ತೂಕ ಹಾಗು ನಾಣ್ಯಕೋಷ್ಟಕವನ್ನು ತಿಳಿಯಲು ಈ ನಿರೂಪ ನೆರವಾಗುತ್ತದೆ. ಇಲ್ಲಿನ ಈ ಸಂಕೇತಗಳ ರೇಖಾಚಿತ್ರವನ್ನು ಗಮನಿಸಿದರೆ ಓದುಗರಿಗೆ ಸ್ಪಷ್ಟತೆ ದೊರೆತು ಬಹಳ ಅನುಕೂಲವಾಗುತ್ತದೆ.

ನಿರೂಪವು ಒಂದು ರೀತಿ ಪೂಜಾ ಸಾಹಿತ್ಯದ ಅಂಕಿ ಅಂಶಗಳ ಯಾಂತ್ರಿಕ ನೇಯ್ಗೆಯೆ? ಎಂಬ ಅನುಮಾನ ಮೇಲು ನೋಟದಲ್ಲಿ ಬರಬಹುದು. ವಿವರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ, ನಿರೂಪದಲ್ಲಿ ಅಡಗಿರುವ ಸಾಂಸ್ಕೃತಿಕ ಎಳೆಗಳ ಸುಂದರ ನೇಯ್ಗೆಯ ಪರಿಚಯವಾಗುತ್ತದೆ. ದೇಗುಲ ನಡಾವಳಿಗಳ ಆರ್ಥಿಕ ವ್ಯವಹಾರಗಳ ಸಂಬಂಧದ ಪಾರಿಭಾಷಿಕ ಶಬ್ದಗಳ ಪರಿಚಯವಾಗುತ್ತದೆ. ನಿರೂಪಗಳಲ್ಲಿ ಚಾಲ್ತಿಗಿರುವ 'ಅಪ್ಪಣೆ ಭಾಷೆ' ಇಲ್ಲಿ ಹಣಿಕು ಹಾಕುತ್ತಿದ್ದರೂ ಉತ್ಸವ ವೈವಿಧ್ಯ, ಪರಿಕರ, ಸಿಬ್ಬಂದಿಗಳ ಹೊಣೆ ಕುರಿತು ನಿಖರವಾಗಿ, ನಿರ್ದಿಷ್ಟವಾಗಿ ಹೇಳುವ ಬಗೆಯು ನಿರೂಪಕ್ಕೆ ವಿಶಿಷ್ಟ ಶೈಲಿಯನ್ನು ಒದಗಿಸಿದೆ. ಶಬ್ದಗಳು ಅನಗತ್ಯವಾಗಿ ಸಂಸ್ಕೃತ ಭೂಯಿಷ್ಠವಾಗದೆ 'ಕನ್ನಡ ಶಬ್ದಗಳು' ಸಲಿಲವಾಗಿ ಹರಿದಾಡಿರುವುದು ಕಾಣಬರುತ್ತದೆ. ವಾಣಿಜ್ಯ ವ್ಯವಹಾರದ, ಆರ್ಥಿಕ ಸಂಬಂಧದ ಕನ್ನಡ ಶಬ್ದಗಳೂ ಎಷ್ಟೊಂದು ಆತ್ಮೀಯವಾಗಿರಬಲ್ಲವು ಎಂಬುದಕ್ಕೆ ಈ ನಿರೂಪ ಒಂದು ಉದಾಹರಣೆ ಆಗಿದೆ. ಕಂಟರಾಯಿ ವರಹ, ಹಣ, ಅಡ್ಡ, ಹಾಗ, ವೀಸ, ಬೇಳೆ, ಕಾಣಿ ಇತ್ಯಾದಿಗಳು ಕನ್ನಡ ಅಂಕಿಗಳಲ್ಲಿ ಸೂಚಿತವಾಗಿರುವುದು ಗಮನಾರ್ಹ. ಆದರೆ ಒಂಬತ್ತು ಅಂಕಿಗಳಷ್ಟು ವಿವರವಾಗಿ ಅಂಕ, ಗೀಟುಗಳು ನಾಲ್ಕೈದು ರೂಪಗಳಲ್ಲಿ ಒಂದು ವಸ್ತುವಿನ ಬೆಲೆಯನ್ನು ನಮೂದಿಸುವ ಅಂದಿನ ರೂಢಿ ಇಂದಿನವರಿಗೆ ಸಂಕೀರ್ಣವೆನಿಸಿದರೂ ಅಂದಿನ ಆರ್ಥಿಕ ಶಿಸ್ತು ಹಾಗು

ನಿಖರತೆಯ ಚಿತ್ರವನ್ನು ನೀಡಿರುವುದಂತೂ ಅಚ್ಚುಕಟ್ಟಾಗಿದೆ. ಒಟ್ಟಾರೆ ಒಂದು ಶಿಸ್ತಿನ ಶಾಸ್ತ್ರೀಯ, ಸಾಂಸ್ಕೃತಿಕ ನಿರೂಪವಿದಾಗಿ ಧರ್ಮೋ-ಸಾಂಸ್ಕೃತಿಕ ಪಾವಿತ್ರ್ಯತೆಯನ್ನು ಪಡೆದಿದೆ. ನಿರೂಪದ ಪೂರ್ಣಪಾಠವು ಮುಂದಿನಂತಿದೆ.



ನಿರೂಪದ ಮೊದಲ ಪುಟ ಮತ್ತು ಕೊನೆ ಪುಟ

ಶ್ರೀ ಓಂಕಾರೇಶ್ವರ ದೇಗುಲದ (ಅಪ್ರಕಟಿತ) ನಿರೂಪ

(ಆಕರ : ಕೊಡಗು ದೇ. ದ. ನಿ. ಸಮಿತಿ ಕಛೇರಿಯಲ್ಲಿರುವ ಮೂಲ ನಿರೂಪ)

ಶ್ರೀ ರುದ್ರ

ಮಹಾರಾಜ ಲಿಂಗರಾಜೇಂದ್ರ

ವಡೆಯರವರು ಸಂಸ್ಥಾನ ಕೊಡಗು

ಶ್ರೀಮತು।। ಮಡಿಕೇರಿ ಅರಮನೆ ದಿವಾನ್ ಕಚೇರ್ರಿದಾರ। ಕರಣೀಕನಿಗೆ ಸಹಾ ಅಪ್ಪಣೆ ಕೊಡಿಶಿದ ತಸ್ತೀಕು ನಿರೂಪದ ಕ್ರಮವೆಂತೆಂದರೆ। ಮಡಿಕೇರ್ರಿ ಅರಮನೆ ಬಳಿಯಲ್ಲು ಹೊಸ್ತಾಗಿ ಪ್ರತಿಷ್ಠೆ ಯಾಗಿ ಯಿರುವ। ಓಂಕಾರೇಶ್ವರ ಗಣಾಧೀಶ್ವರ। ಕುಮಾರೇಶ್ವರ। ಶ್ರೀ ನಂದೀಶ್ವರ ದೇವರ್ರಿಗೆ ಸಹಾ ನಿತ್ಯಗಟ್ಲೆ ಅಮೃತಪಡಿ। ನಂದಾದೀಪ ಪಿಶೇಷಗಟ್ಲೆ ಮುಂತ್ತಾದ್ದು ಶ್ವಾಶ್ವಿತವಾಗಿ ನಡದು ಬರತಕ್ಕ ಬಗ್ಗೆ ಅಪ್ಪಣೆ ಕೊಡಿಶಿ ಯಿರುವ ತಸ್ತೀಕಿನ ವಿವರಾ -

ಓಂಕಾರೇಶ್ವರ ದೇವರ್ರಿಗೆ। ಶ್ರೀ ನಂದೀಶ್ವರ ದೇವರ್ರಿಗೆ ಸಹಾ ತ್ರಿಕಾಲದ ಪೂಜೆಗೆ ಕೊಡತಕ್ಕ ವಿವರಾ -

ಅಮೃತಪಡಿ ಬಗ್ಯೆ ದೇವರು ೨ ಕ್ಕೆ ವರುಷ ೧ಕ್ಕೆ -

೨೭೦೦ ಅಕ್ಕಿ ದಿನ ೧ಕ್ಕೆ ಹೇರು ಸೇರು ೭ ಯೇಳರಲ್ಲು ವರುಷ ೧ಕ್ಕೆ ಹೇರುಬಟ್ಟಿ ಯಿಪ್ಪತ್ತೇಳು

ಯೀ ನೈವೇದ್ಯವಂನ್ನು ಪರ್ರಿ ಚಾಕ್ರಿ ಜನ ೫ ಉಗ್ರಾಣದ ಜನ ೧ ಉಭಯಂ ಜನ ೬ ಆರಕ್ಕೆ ಕೊಡಿಶಿ ಕೊಡುವುದೂ-

ನಿತ್ಯಗಟ್ಲೆ ನಡದು ಬರುವಂಥಾ ನಂದಾದೀಪ ೨ಕ್ಕೆ ವರುಷ ೧ಕ್ಕೆ-

೩।೫ ಹಸುವಿನ ತುಪ್ಪದ ನಂದಾದೀಪ ೧ಕ್ಕೆ ದಿನ ೧ಕ್ಕೆ ಹೇರು ಸೇರು।।। ಮುಕ್ಕಾಲರಲ್ಲೂ ವರುಷ ೧ಕ್ಕೆ ಹೇರು ಮೂರು ಕಾಲುಬಟ್ಟಿಯು ಯ್ಯೆಯಿದು ಹಾನೆ

೨।೦ ವಳ್ಳೆಂಣೆ ನಂದಾದೀಪ ೧ಕ್ಕೆ ದಿನ ೧ಕ್ಕೆ ಹೇರು ಸೇರು।।೦ ಅರೆಯಲ್ಲು ವರುಷ ೧ ಕ್ಕೆ ಹೇರು ಬಟ್ಟಿ ಯರಡು ಕಾಲು ಉಭಯಂ ಬಗೆ ಯರಡು

ಪರಮಾಂನ್ನ ನೈವೇದ್ಯಕ್ಕೆ ವರುಷ ೧ ಕ್ಕೆ -

೨।೦ ಅಕ್ಕಿ ದಿನ ೧ಕ್ಕೆ ಹೇರು ಸೇರು ।।೦ ಅರೆಯಲ್ಲು ವರುಷ ೧ಕ್ಕೆ ಹೇರುಬಟ್ಟಿ ಯರಡು ಕಾಲು

೧೮ ಬೆಲ್ಲ ದಿನ ೧ಕ್ಕೆ ನಡವ ಸೇರು ೨ ಯರಡರಲ್ಲು ವರುಷ ೧ಕ್ಕೆ ನಡವ ಮಣ ಹದಿನೆಂಟು

೩೬೦ ತೆಂಗಿನಕಾಯಿ ದಿನ ೧ಕ್ಕೆ ೧ ವಂದರಲ್ಲು ವರುಷ ೧ಕ್ಕೆ ಮುಂನೂರ ಅರವತ್ತು.

೯೦ ಯಾಲಕ್ಕಿ ತೀರ್ಥಕ್ಕೆ ಸಹಾ ದಿನ ೧ಕ್ಕೆ ರುಪಾಯಿ ತೂಕ ೧೦ ಕಾಲರಲ್ಲು ವರುಷ ೧ಕ್ಕೆ ರುಪಾಯಿ ತೂಕ ತೊಂಬತ್ತು - ಅಂತ್ತು ಬಗೆ ನಾಲ್ಕು.

ಯೀನೈವೇದ್ಯವಂನ್ನು ಪರ್ರಿಚಾಕ್ರಿ ಜನಕ್ಕೆ ಕೊಡಿಶಿ ಕೊಡುವುದೂ -

ದದ್ಯಾಂನ್ನ ನೈವೇದ್ಯಕ್ಕೆ ವರುಷ ೧ಕ್ಕೆ -

೨।೦ ಅಕ್ಕಿ ದಿನ ೧ಕ್ಕೆ ಹೇರು ಸೇರು ।।೦ ಅರೆಯಲ್ಲು ವರುಷ ೧ಕ್ಕೆ ಹೇರುಬಟ್ಟಿ ಯರಡು ಕಾಲು

೨।೦ ಮೊಸರು ದಿನ ೧ಕ್ಕೆ ಹೇರು ಸೇರು ।।೦ ಅರೆಯಲ್ಲು ವರುಷ ೧ಕ್ಕೆ ಹೇರುಬಟ್ಟಿ ಯರಡು ಕಾಲು.

೩೬೦ ಹಶಿ ಶುಂಟ್ಟಿ ದಿನ ೧ಕ್ಕೆ ರುಪಾಯಿ ತೂಕ ೧ ವಂದರಲ್ಲು ವರುಷ ೧ಕ್ಕೆ ರುಪಾಯಿ ತೂಕ ಮುಂನೂರ ಅರವತ್ತು

- ಅಂತ್ತು ಬಗೆ ಮೂರು.

ಯೀ ನೈವೇದ್ಯವಂನ್ನು ಪರ್ರಿಛಾಕ್ರಿ ಜನಕ್ಕೆ ಕೊಡಿಶಿ ಕೊಡುವದೂ

ಪಂಚಾಮೃತ ಅಭಿಷೇಕಕ್ಕೆ ವರುಷ ೧ಕ್ಕೆ -

೧೯೫ ಹಾಲು ದಿನ ೧ಕ್ಕೆ ಹೇರು ಸೇರು ।೦ ಕಾಲದಲ್ಲು ವರುಷ ೧ಕ್ಕೆ ಹೇರು ವಂದು ಬಟ್ಟಿಯು ಆ್ಯದು ಹಾನೆ.

೧೯೫ ಮೊಸರು ದಿನ ೧ಕ್ಕೆ ಹೇರು ಸೇರು ।೦ ಕಾಲರಲ್ಲು ವರುಷ ೧ಕ್ಕೆ ಹೇರು ವಂದು ಬಟ್ಟಿಯು ಆ್ಯಯಿದು ಹಾನೆ.

೧೯೫ ತುಪ್ಪ ದಿನ ೧ಕ್ಕೆ ನಡವ ಸೇರು ◡ ಬೇಳೆಯಲ್ಲು ವರುಷ ೧ಕ್ಕೆ ನಡವ ವಂದು ಮಣು ಆ್ಯದು ಸೇರು.

।೧।೦ ಜೇನು ದಿನ ೧ಕ್ಕೆ ಹೇರುಮಾನ ◡ ಬೇಳೆಯಲ್ಲು ವರುಷ ೧ಕ್ಕೆ ಹೇರು ಕಾಲುಬಟ್ಟಿಯು ವಂದು ಕಾಲು ಹಾನೆ.

೨।೦ ಸಕ್ಕರೆ ದಿನ ೧ಕ್ಕೆ ನಡವ ಸೇರು ।೦ ಕಾಲರಲ್ಲು ವರುಷ ೧ಕ್ಕೆ ನಡವ ಮಣು ಯರಡು ಕಾಲು.

೩೬೦೦ ಬಾಳೆಹಣ್ಣು ದಿನ ೧ಕ್ಕೆ ೧೦ ಹತ್ತರಲ್ಲು ವರುಷ ೧ಕ್ಕೆ ಮೂರು ಸಾವಿರದ ಊರ ನೂರು

- ಅಂತ್ತು ಬಗೆ ಊರು

ಯೀ ನೈವೇದ್ಯವಂನ್ನು ಸರ್ವರ್ರಿಗೂ ಕೊಡಿಶಿ ಕೊಡುವದು.

ಮಹಾಂನ್ಯಾಸ ಪೂರ್ವಕವಾಗಿ ನಡೆಯುವಂಥಾ ರುದ್ರಾಭಿಷೇಕಕ್ಕೆ ವರ್ಷ ೧ಕ್ಕೆ

೧೯೫ ಹಾಲು ದಿನ ೧ಕ್ಕೆ ಹೇರು ಸೇರು ।೦ ಕಾಲರಲ್ಲು ವರುಷ ೧ಕ್ಕೆ ಹೇರು ವಂದು ಭಟ್ಟಿಯು ಆ್ಯದು ಹಾನೆ.

೧೯೫ ಮೊಸರು ದಿನ ೧ಕ್ಕೆ ಹೇರು ಸೇರು ।೦ ಕಾಲರಲ್ಲು ವರುಷ ೧ಕ್ಕೆ ಹೇರು ವಂದು ಭಟ್ಟಿಯು ಆ್ಯದು ಹಾನೆ.

೧೯೫ ತುಪ್ಪ ದಿನ ೧ಕ್ಕೆ ನಡವ ಸೇರು ◡ ಬೇಳೆಯಲ್ಲು ವರುಷ ೧ಕ್ಕೆ ನಡವ ವಂದು ಮಣು ಆ್ಯದು ಸೇರು.

।೧।೦ ಜೇನು ದಿನ ೧ಕ್ಕೆ ಹೇರುಮಾನ ◡ ಬೇಳೆಯಲ್ಲು ವರುಷ ೧ಕ್ಕೆ ಹೇರು ಕಾಲು ಭಟ್ಟಿಯು ವಂದು ಕಾಲು ಹಾನೆ.

೨।೦ ಸಕ್ಕರೆ ದಿನ ೧ಕ್ಕೆ ನಡವ ಸೇರು ।೦ ಕಾಲರಲ್ಲು ವರುಷ ೧ಕ್ಕೆ ನಡವ ಮಣು ಯರಡು ಕಾಲು

।೧। ವಳ್ಳೆಂಣ್ಣೆ ದಿನ ೧ಕ್ಕೆ ಹೇರುಮಾನ ◡ ಬೇಳೆಯಲ್ಲು ವರುಷ ೧ಕ್ಕೆ ಹೇರು ಕಾಲುಭಟ್ಟಿಯು ವಂದೂ ಕಾಲು ಹಾನೆ

।।೨।। ಕಬ್ಬಿನ ರಸ ದಿನ ೧ಕ್ಕೆ ಹೇರುಮಾನ ।೦ ಕಾಲರಲ್ಲು ವರುಷ ೧ಕ್ಕೆ ಹೇರು ಅರೆಭಟ್ಟಿಯು ಯರಡುವರೆ ಹಾನೆ.

೩೬೦ ಯಳನೀರು ದಿನ ೧ಕ್ಕೆ ೧ ವಂದರಲ್ಲು ವರುಷ ೧ಕ್ಕೆ ಮುಂನ್ನೂರ ಅರವತ್ತು

೧೪೪೦ ನಿಂಬೆ ಹಂಣು ದಿನ ೧ಕ್ಕೆ ೪ ನಾಲ್ಕರಲ್ಲು ವರುಷ ೧ಕ್ಕೆ ವಂದು ಸಾವಿರದ ನಾನೂರ ನಾಲ್ವತ್ತು.

೧೮೦ ಕರ್ಪೂರ ದಿನ ೧ಕ್ಕೆ ರುಪಾಯಿ ತೂಕ ।।೦ ಅರೆಯಲ್ಲು ವರುಷ ೧ಕ್ಕೆ ರುಪಾಯಿ ತೂಕ ನೂರಯಂಬತ್ತು.

೯೦ ಸಾಂಬ್ರಾಣಿ ದಿನ ೧ಕ್ಕೆ ರುಪಾಯಿ ತೂಕ ।೦ ಕಾಲರಲ್ಲು ವರುಷ ೧ಕ್ಕೆ ರುಪಾಯಿ ತೂಕ ತೊಂಬತ್ತು

೩೬೦ ತೆಂಗಿನ ಕಾಯಿ ದಿನ ೧ಕ್ಕೆ ೧ ವಂದರಲ್ಲು ವರುಷ ೧ಕ್ಕೆ ಮುಂನೂರ ಅರವತ್ತು.

೭೯೨೦ ಅಡಕೆ ಹೋಳು ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲು ವರುಷ ೧ಕ್ಕೆ ಯೇಳುಸಾವಿರದ ವಂಭೈನೂರ ಯಿಪ್ಪತ್ತು.

೭೯೨೦ ಬಾಳೆಹಣ್ಣು ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲು ವರುಷ ೧ಕ್ಕೆ ಯೇಳುಸಾವಿರದ ವಂಭೈನೂರ ಯಿಪ್ಪತ್ತು.

೭೯೨೦ ವೀಳ್ಯೆದೆಲೆ ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲೂ ವರುಷ ೧ಕ್ಕೆ ಯೇಳು ಸಾವಿರದ ವಂಭೈನೂರ ಯಿಪ್ಪತ್ತು

- ಅಂತ್ತು ಬಗೆ ಹದಿನೈಯಿದು

ಪೂಜೆ ನೈವೇದ್ಯ ಮಂಗಳಾರ್ತಿ ಬಗ್ಗೆ ಸಹ ವರುಷ ೧ಕ್ಕೆ

೭೨೦ ತೆಂಗಿನಕಾಯಿ ದಿನ ೧ಕ್ಕೆ ೨ ಯರಡರಲ್ಲು ವರುಷ ೧ಕ್ಕೆ ಯೇಳನೂರ ಯಿಪ್ಪತ್ತು.

೫೪೦೦ ಬಾಳೆಹಂಣು ದಿನ ೧ಕ್ಕೆ ೧೫ ಹದಿನೈದರಲ್ಲು, ವರುಷ ೧ಕ್ಕೆ ಆ್ಯದು ಸಾವಿರದ ನಾನೂರು

೫೪೦೦ ವೀಳ್ಯೆದೆಲೆ ದಿನ ೧ಕ್ಕೆ ೧೫ ಹದಿನೈದುರಲ್ಲು ವರುಷ ೧ಕ್ಕೆ ಆ್ಯದು ಸಾವಿರದ ನಾನೂರು

೫೪೦೦ ಅಡಿಕೆ ಹೋಳು ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಆ್ಯದು ಸಾವಿರದ ನಾನೂರು.

೭೨೦ ಕರ್ಪೂರ ದಿನ ೧ಕ್ಕೆ ರುಪಾಯಿ ತೂಕ ೨ ಯರಡರಲ್ಲು ವರುಷ ೧ಕ್ಕೆ ರೂಪಾಯಿ ತೂಕ ಯೇಳನೂರ ಯಿಪ್ಪತ್ತು.

೨೭೦ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ।।।೦ ಮುಕ್ಕಾಲರಲ್ಲೂ ವರುಷ ೧ಕ್ಕೆ ರುಪಾಯಿ ತೂಕ ಯಿಂನೂರ ಯಪ್ಪತ್ತು.

೧೪೪೦ ಊದಬತ್ತಿ ದಿನ ೧ಕ್ಕೆ ೪ ನಾಲ್ಕರಲ್ಲು ವರುಷ ೧ಕ್ಕೆ ವಂದು ಸಾವಿರದ ನಾನೂರ ನಾಲ್ವತ್ತು.

೯೬।।। ತುಪ್ಪ ಅಂನ್ನ ಶಿದ್ಧಿ ಬಗ್ಗೆ ದಿನ ೧ಕ್ಕೆ ರೂಪಾಯಿ ತೂಕ ೩ ಮೂರಲ್ಲು ವರುಷ ೧ಕ್ಕೆ ಹೇರು ಹಾನೆ ಊರು ಮುಕ್ಕಾಲು

೨।೦ ಹಾಲು ಸಾಯಂಕಾಲದಲ್ಲು ನೈವೇದ್ಯದ ಬಗ್ಗೆ ಹೇರು ಸೇರು।।೦ ಅರೆಯಲ್ಲು ವರುಷ ೧ಕ್ಕೆ ಹೇರು ಭಟ್ಟಿ ಯರಡು ಕಾಲು

೪।।೦ *ವಳ್ಳೆಂಣೆ ದಿನ ೧ಕ್ಕೆ ಹೇರು ಮಾನ ೨ ಯರಡರಲ್ಲು ವರುಷ ೧ಕ್ಕೆ ಹೇರುಭಟ್ಟಿ ನಾಲ್ಕುವರೆ । ಯಿ ಯಂಣೆಯಲ್ಲು ದಿನ ೧ಕ್ಕೆ ಅಲಂಕಾರ ದೀಪ ೩, ತ್ರಿಕಾಲ ಪೂಜೆ ವ್ಯಾಳ್ಯದಲ್ಲು ಊಗುವಂತಾ ಯೇಕಾರ್ತಿ ೧, ಆ್ಯದು ನೆಲೆ ದೊಡ್ಡಾರ್ತಿ*

೧, ಚಕ್ರಾರ್ತಿ ೧, ಶೆಷ್ಪಾರ್ತಿ ೧, ಪಂಚಾರ್ತಿ ೧, ಕೂರ್ಮಾರ್ತಿ ೧, ಗುಂಬಾರ್ತಿ ೧, ಅಂತು ಆರ್ತಿ ೭ ಯೇಳೂ ಯಿದಲ್ಲದೆ ವಿಶೇಷಗಟ್ಲೆ ದಿವಸದಲ್ಲು ಆಗುವಂಥಾ ಮಂಗಳಾರ್ತಿ ದಳೀದೀಪ ಮುಂತ್ತಾದಕ್ಕೆ ಸಹಾ ಸದರ್‍ರಿ ಹೇರು ಯರಡು ಮಾನ ಯಂಣೆಯಿಂದಲೇ ಮಾಡಿಸುವುದು.

೪॥೦ ಅರಳೆ ದಿನ ೧ಕ್ಕೆ ನಡವ ಸೇರು॥೦ ಅರೆಯಲ್ಲು ವರುಷ ೧ಕ್ಕೆ ನಡವ ಮಣು ನಾಲ್ಕುವರ್‍ರೆ

- ಅಂತ್ತು ಬಗೆ ಹಂನೊಂದು

ಗಣಾಧೀಶ್ವರ ದೇವರಿಗೆ ತ್ರಿಕಾಲದ ಪೂಜೆಗೆ ಕೊಡತಕ್ಕ ವಿವರಾ ಅಮೃತಪಡಿ ಬಗ್ಗೆ ವರುಷ ೧ಕ್ಕೆ

೨೨॥೦ ಅಕ್ಕಿ ದಿನ ೧ಕ್ಕೆ ಹೇರು ಸೇರು ೫ ಐದರಲ್ಲು, ವರುಷ ೧ಕ್ಕೆ ಹೇರುಭಟ್ಟಿ ಯಿಪ್ಪತ್ತೆರಡುವರೆ

ಯೀ ನೈವೇದ್ಯವಂನ್ನು ಕಟ್ಟೆಗೆ ಚಾಕ್ರಿಜನ ೨, ಶಾನುಭೋಗ ಜನ ೧, ಅಡಿಗೆ ಜನ ೨, ಅಂತ್ತು ಜನ ೫ ಐದಕ್ಕೆ ಕೊಡಿಶಿ ಕೊಡುವುದು.

ಪೂಜೆ ನೈವೇದ್ಯ ಮಂಗಳಾರ್ತಿ ಬಗ್ಗೆ ಸಹ ವರುಷ ೧ಕ್ಕೆ -

೩೬೦ ತೆಂಗಿನ ಕಾಯಿ ದಿನ ೧ಕ್ಕೆ ೧ ವಂದರಲ್ಲೂ, ವರುಷ ೧ಕ್ಕೆ ಮುಂನೂರ ಅರವತ್ತು.

೫೪೦೦ ಬಾಳೇಹಂಣು ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು

೫೪೦೦ ವೀಳ್ಯದೆಲೆ ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು.

೫೪೦೦ ಅಡಿಕೆ ಹೋಳು ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು

೨೭೦ ಕರ್ಪೂರ ದಿನ ೧ಕ್ಕೆ ರೂಪಾಯಿ ತೂಕ ।॥೦ ಮುಕ್ಕಾಲರಲ್ಲು ವರುಷ ೧ಕ್ಕೆ ರೂಪಾಯಿ ತೂಕ ಯಿಂನೂರ ಯಪ್ಪತ್ತು.

೧೮೦ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ॥೦ ಅರೆಯಲ್ಲು ವರುಷ ೧ಕ್ಕೆ ರೂಪಾಯಿ ತೂಕ ನೂರಯಂಬತ್ತು.

೩।೫ ವಳ್ಳೆಂಣೆ ದಿನ ೧ಕ್ಕೆ ಹೇರುಮಾನ ೧॥೦ ವಂದುವರೆಯಲ್ಲು ವರುಷ ೧ಕ್ಕೆ ಹೇರು ಮೂರು ಕಾಲು ಬಟ್ಟಿಯು ಐದು ಹಾನೆ। ಯಿೂ ಯಂಣೆಯಲ್ಲು ದಿನ ೧ಕ್ಕೆ ಅಲಂಕಾರ ದೀಪ ೨ ತ್ರಿಕಾಲ ಪೂಜೆವ್ಯಾಳ್ಯದಲ್ಲು ಆಗುವಂಥಾ ಯೇಕಾರ್ತಿ ೧, ಮೂರು ನೆಲೆ ಆರ್ತಿ ೧, ಚಕ್ರಾರ್ತಿ ೧, ಶೇಷ್ಪಾರ್ತಿ ೧, ಪಂಚಾರ್ತಿ ೧, ಕೂರ್ಮಾರ್ತಿ ೧, ಅಂತ್ತು ಆರ್ತಿ ೬ ಆರು। ಯಿದಲ್ಲದೆ ವಿಶೇಷ ಗಟ್ಲೆ ದಿವಸದಲ್ಲು ಆಗುವಂಥಾ ಮಂಗಳಾರ್ತಿ ದೀಪ ಮುಂತ್ತಾದಕ್ಕೆ ಸಹಾ ಸದರ್‍ರಿ ಹೇರು ವಂದೂವರೆ ಮಾನ ಯಂಣೆಯಿಂದಲೆ ಮಾಡಿಸುವುದು.

- ಅಂತ್ತು ಬಗೆ ಯೇಳು.

ಕುಮಾರೇಶ್ವರ ದೇವರಿಗೆ ತ್ರಿಕಾಲದ ಪೂಜೆಗೆ ಕೊಡತಕ್ಕ ವಿವರಾ-

ಅಮೃತ ಪಡಿ ಬಗ್ಗೆ ವರುಷ ೧ಕ್ಕೆ -

೨೨॥೦ ಅಕ್ಕಿ ದಿನ ೧ಕ್ಕೆ ಹೇರು ಸೇರು ೫ ಐದರಲ್ಲು ವರುಷ ೧ಕ್ಕೆ ಹೇರುಭಟ್ಟಿ ಯಿಪ್ಪತ್ತೆರಡುವರೆ

ಯೀ ನೈವೇದ್ಯವಂನ್ನು ಪೂಜೆ ಮಾಡುವ ಶ್ಯಾಂತ್ರಿಗಾರ ಜನ ೪ ಪಾರುಪತ್ಯೆಗಾರ ಜನ ೧, ಉಭಯಂ ಜನ ೫, ಐದಕ್ಕೆ ಕೊಡಶಿ ಕೊಡುವುದು.

ಪೂಜೆ ನೈವೇದ್ಯ ಮಂಗಳಾರ್ತಿ ಬಗ್ಗೆ ಸಹ ವರುಷ ೧ಕ್ಕೆ -

೩೬೦ ತೆಂಗಿನಕಾಯಿ ದಿನ ೧ಕ್ಕೆ ೧ ವಂದರಲ್ಲೂ ವರುಷ ೧ಕ್ಕೆ ಮುಂನೂರ ಅರವತ್ತು

೫೪೦೦ ಬಾಳೆಹಂಣು ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು

೫೪೦೦ ವೀಳ್ಯದೆಲೆ ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು

೫೪೦೦ ಅಡಿಕೆ ಹೋಳು ದಿನ ೧ಕ್ಕೆ ೧೫ ಹದಿನೈದರಲ್ಲು ವರುಷ ೧ಕ್ಕೆ ಐದು ಸಾವಿರದ ನಾನೂರು.

೨೭೦ ಕರ್ಪೂರ ದಿನ ೧ಕ್ಕೆ ರೂಪಾಯಿ ತೂಕ ।॥೦ ಮುಕ್ಕಾಲರಲ್ಲು ವರುಷ ೧ಕ್ಕೆ ರೂಪಾಯಿ ತೂಕ ಯಿಂನೂರ ಯಪ್ಪತ್ತು.

೧೮೦ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ॥೦ ಅರೆಯಲ್ಲು ವರುಷ ೧ಕ್ಕೆ ರೂಪಾಯಿ ತೂಕ ನೂರಯಂಬತ್ತು.

೩।೫ ವಳ್ಳೆಂಣೆ ದಿನ ೧ಕ್ಕೆ ಹೇರು ಮಾನ ೧॥೦ ವಂದೂವರೆಯಲ್ಲು ವರುಷ ೧ಕ್ಕೆ ಹೇರು ಮೂರುಕಾಲು ಭಟ್ಟಿಯು ಐದು ಹಾನೆ ಯಿೂ ಯಂಣೆಯಲ್ಲು ದಿನ ೧ಕ್ಕೆ ಅಲಂಕಾರ ದೀಪ ೨, ತ್ರಿಕಾಲದ ಪೂಜೆ ವ್ಯಾಳ್ಯದಲ್ಲು ಆಗುವಂಥಾ ಯೇಕಾರ್ತಿ ೧, ಮೂರು ನೆಲೆ ಆರ್ತಿ ೧, ಚಕ್ರಾರ್ತಿ ೧, ಶೆಷ್ಪಾರ್ತಿ ೧, ಪಂಚಾರ್ತಿ ೧, ಕೂರ್ಮಾರ್ತಿ ೧, ಅಂತ್ತೂ ಆರ್ತಿ ೬ ಆರು ಯಿದಲ್ಲದೆ ವಿಶೇಷ ಗಟ್ಲೆ ದಿವಸದಲ್ಲು ಆಗುವಂಥ ಮಂಗಳಾರ್ತಿ ದೀಪ ಮುಂತಾದ್ದಕ್ಕೆ ಸಹ ಸದರ್‍ರಿ ಹೇರು ವಂದೂವರೆ ಮಾನ ಯಂಣೆಯಿಂದಲೇ ಮಾಡಿಸುವುದು.

- ಅಂತ್ತು ಬಗೆ ಯೇಳು

ಸಾಯಂಕಾಲದಲ್ಲು ದೇವರು ನಾಲ್ಕರ ಸಲಾಮಿನ ದೀವಟಿಗ್ಯೆ । ಉಗ್ರಾಣ ಮುಂತ್ತಾದ ಜಾಗಾದಲ್ಲು ಹತ್ತಿಸುವ ದೀಪದ ಬಗ್ಗೆ ವರುಷ ೧ಕ್ಕೆ -

॥೨॥೦ ಸಲಾಮಿನ ದೀವಟಿಗೆ ೨ಕ್ಕೆ ದಿನ ೧ಕ್ಕೆ ವಳ್ಳೆಂಣ್ಣೆ ಹೇರುಮಾನ ।೦ ಕಾಲರಲ್ಲು ವರುಷ ೧ಕ್ಕೆ ಹೇರು ಅರೆಭಟ್ಟಿಯು ಯರಡೂವರ್‍ರೆ ಹಾನೆ.

।೧।೦ ದೇವಸ್ಥಾನದ ಉಗ್ರಾಣದಲ್ಲಿ ಲೆಖ್ಖ ಬರೆಯುವ್ವ ಸಹಾ ದೀಪ ೨ ಯರಡಕ್ಕೆ ದಿನ ೧ಕ್ಕೆ ಕೈಯಂಣೆ ಹೇರು ಮಾನ ◡ ಬೇಳೆಯಲ್ಲೂ ವರುಷ ೧ಕ್ಕೆ ಹೇರು ಕಾಲುಭಟ್ಟಿಯು ವಂದು ಕಾಲು ಹಾನೆ.

೧೯೫ ದೇವಸ್ಥಾನದ ಯಿದಿರ್‍ರಿನ ಯರಡು ಪಾರ್ಶ್ವದಲ್ಲು ಹತ್ತಿಸುವಂಥಾ ಕಂದೀಲು ತುಪ್ಪ ದೀಪ ೧ಕ್ಕೆ ದಿನ ೧ಕ್ಕೆ ತೆಂಗಿನ ಯೆಂಣೆ ಹೇರುಮಾನ ।೦ ಕಾಲರಲ್ಲೂ ದೀಪ ೨ಕ್ಕೆ ಯಂಣೆ ಹೇರುಮಾನ ॥೦ ಅರ್‍ರೆಯಲ್ಲೂ ವರುಷ ೧ಕ್ಕೆ ಹೇರು ವಂದು ಭಟ್ಟಿಯು ಉೈದು ಹಾನೆ.

॥೩॥ ನಡೆಯಾಲ ಬಳಿ ದೀಪ ೧ಕ್ಕೆ ದಿನ ೧ಕ್ಕೆ ಕೈಯಂಣೆ ಹೇರುಮಾನ । ೀ ಕಾಲು ಬೇಳೆಯಲ್ಲೂ ವರುಷ ೧ಕ್ಕೆ ಹೇರುಬಟ್ಟಿ ಮುಕ್ಕಾಲು ಭಟ್ಟಿಯು ಮೂರು ಮುಕ್ಕಾಲು ಹಾನೆ.

- ಅಂತ್ತೂ ಯಂಣೆ ಬಗೆ ಮೂರು.

ದೇವಸ್ಥಾನದ ಚಾಕ್ರಿ ಜನ ೨೭ಕ್ಕೆ ವಿವರಾ ಶ್ಯಾಂತಿಗಾರ ಜನ ೪, ಉಪಾಧಿ ಜನ ೧೧, ಪಾರುಪತ್ಯಗಾರ ಜನ ೧, ಶ್ಯಾನಭೋಗ ಜನ ೧, ಕಟ್ಟಿಗೆ ಚಾಕ್ರಿ ಜನ ೨, ಅಡಿಗೆ ಜನ ೨, ಪರ್‍ರಿಚಾಕ್ರಿ ಜನ ೫, ಉಗ್ರಾಣದ ಚಾಕ್ರಿ ಜನ ೧, ಅಂತ್ತು ಜನ ೨೭ಕ್ಕೆ ವರುಷ ೧ಕ್ಕೆ*

ಶ್ರೀ ನಂದೀಶ್ವರ ದೇವರ್‍ರಿಗೆ ವರುಷ ೧ಕ್ಕೆ ಪ್ರದೋಷ ೨೪ಕ್ಕೆ ಕೊಡತಕ್ಕ ವಿವರಾ -

೯೬ ಕೇಸಕ್ಕಿ ಪ್ರದೋಷ ೧ಕ್ಕೆ ಹೇರುಹಾನೆ ।೦ ಕಾಲರಲ್ಲು ಪ್ರದೋಷ ೨೪ಕ್ಕೆ ಹೇರುಹಾನೆ ಉಾರು.

೯೩ ಯೇಳು ಪ್ರದೋಷ ೧ಕ್ಕೆ ಹೇರು ಹಾನೆ ೀ ಬೇಳೆಯಲ್ಲು ಪ್ರದೋಷ ೨೪ಕ್ಕೆ ಹೇರುಹಾನೆ ಮೂರು

।೨ ಬೆಲ್ಲ ಪ್ರದೋಷ ೧ಕ್ಕೆ ನಡವ ಸೇರು ॥೦ ಅರೆಯಲ್ಲು ಪ್ರದೋಷ ೨೪ಕ್ಕೆ ನಡವ ಕಾಲು ಮಣು ಯರಡು ಸೇರು

೨೪ ತೆಂಗಿನಕಾಯಿ ಪ್ರದೋಷ ೧ಕ್ಕೆ ೧ ವಂದರಲ್ಲು ಪ್ರದೋಷ ೨೪ಕ್ಕೆ ಕಾಯಿ ಯಿಪ್ಪತ್ತನಾಲ್ಕು.

- ಅಂತ್ತು ಬಗೆ ನಾಲ್ಕು.

ದೇವಸ್ಥಾನದ ಲೆಕ್ಕ ಬರೆಯು ಬಗ್ಗೆ ವರುಷ ೧ಕ್ಕೆ -

೨೦ ಬಿಳಿ ಕಾಗದ ಪಂಚಗ ಯಿಪ್ಪತ್ತು

೨ ಕರಡೆ ಕಾಗದ್ದ ಗಡ್ಡೆ ಯರಡು

ವಿಶೇಷಗಟ್ಲೆ ಪಂಚಪರ್ವ ಮುಂತ್ತಾದಕ್ಕೆ ದೇವರು ೪ಕ್ಕೆ ಕೊಡತಕ್ಕ ವಿವರಾ -

೧ ಯುಗಾದಿ ಪಾಡ್ಯ ವಂದು	*೨೪ ಪ್ರದೋಷ ಯಿಪ್ಪತ್ತನಾಲ್ಕು*
೧ ಭಾನುಬಿದಿಗೆ ವಂದು	*೧ ಅನಂತ ಚತುರ್ದಸಿ ವಂದು*
೧ ಅಕ್ಷ ತದಿಗೆ ವಂದು	*೧೨ ಪೌರ್ಣಮಿ ಹಂನೆರಡು*
೧ ರಥ ಸಪ್ತಮಿ ವಂದು	*೧೨ ಅಮಾವಾದಸಿ ಹಂನೆರಡು*
೧ ಗೋಕುಲ ಅಷ್ಟಮಿ ವಂದು	*೧೨ ಸಂಕ್ರಮಣ ಹಂನೆರಡು*
೫ ಶ್ರಾವಣ ಸೋಮವಾರ ಉೈದು	*೧ ಮಾರ್ಗಿಶಿರದಲ್ಲೂ ಉಾರ್‍ರಿದ್ರ ನಕ್ಷತ್ರಾ ವಂದು*
೫ ಕಾರ್ತಿಕ ಸೋಮವಾರ ಉೈದು	೭೭

ಅಂತ್ತು ವಿಶೇಷಗಟ್ಲೆ ಪಂಚಪರ್ವ ಮುಂತ್ತಾದ ದಿನ ೭೭ ಯಪ್ಪತ್ತೇಳಕ್ಕೆ ಓಂಕಾರೇಶ್ವರ ದೇವರ್‍ರಿಗೆ ರುದ್ರಾಭಿಷೇಕ ೭೭ ಕ್ಕೆ

೯೯॥ೀ ಹಾಲು ದಿನ ೧ಕ್ಕೆ ಹೇರುಮಾನ ॥೦ ಅರೆಯಲ್ಲು ದಿನ ೭೭ಕ್ಕೆ ಹೇರುಹಾನೆ ವಂಬತ್ತು ವರೆಯು ಬೇಳೆ

೯೯॥ೀ ಮೊಸರು ದಿನ ೧ಕ್ಕೆ ಹೇರುಮಾನ ॥೦ ಅರೆಯಲ್ಲು ದಿನ ೭೭ಕ್ಕೆ ಹೇರುಹಾನೆ ವಂಬತ್ತು ವರೆಯು ಬೇಳೆ.

೯೨।ೀ॥ ತುಪ್ಪ ದಿನ ೧ಕ್ಕೆ ರುಪಾಯಿ ತೂಕ ೫ ಉೈದರಲ್ಲು ದಿನ ೭೭ಕ್ಕೆ ಹೇರು ಹಾನೆ ಯರಡು ಕಾಲು ಬೇಳೆ ಅರೆವೀಸ

೯೪॥।ೀ ಜೇನು ದಿನ ೧ಕ್ಕೆ ಹೇರುಮಾನ ।೦ ಕಾಲರಲ್ಲು ದಿನ ೭೭ಕ್ಕೆ ಹೇರುಹಾನೆ ನಾಲ್ಕು ಮುಪ್ಪಾಗು ವೀಸ.

।೯।೦ ಸಕ್ರೆ ದಿನ ೧ಕ್ಕೆ ನಡವಸೇರು ।೦ ಕಾಲರಲ್ಲು ದಿನ ೭೭ಕ್ಕೆ ನಡವ ಕಾಲು ಮಣು ವಂಬತ್ತು ಕಾಲು ಸೇರು.

೯೪॥।ೀ ವಳ್ಳೆಂಣೆ ದಿನ ೧ಕ್ಕೆ ಹೇರುಮಾನ ।೦ ಕಾಲರಲ್ಲು ದಿನ ೭೭ಕ್ಕೆ ಹೇರುಹಾನೆ ನಾಲ್ಕು ಮುಪ್ಪಾಗು ವೀಸ

೯೪॥।ೀ ಕಬ್ಬಿನ ರಸ ದಿನ ೧ಕ್ಕೆ ಹೇರುಮಾನ ।೦ ಕಾಲರಲ್ಲು ದಿನ ೭೭ಕ್ಕೆ ಹೇರುಹಾನೆ ನಾಲ್ಕು ಮುಪ್ಪಾಗು ವೀಸ

೭೭ ಯಳನೀರು ದಿನ ೧ಕ್ಕೆ ೧ ವಂದರಲ್ಲು ದಿನ ೭೭ಕ್ಕೆ ಯಪ್ಪತ್ತೇಳು

೩೦೮ ನಿಂಬೆಹಂಣು ದಿನ ೧ಕ್ಕೆ ೪ ನಾಲ್ಕರಲ್ಲೂ ದಿನ ೭೭ಕ್ಕೆ ಮುಂನೂರಯೆಂಟು

೩೮॥ ಕರ್ಪೂರ ದಿನ ೧ಕ್ಕೆ ರುಪಾಯಿ ತೂಕ ॥೦ ಅರೆಯಲ್ಲು ದಿನ ೭೭ಕ್ಕೆ ರುಪಾಯಿ ತೂಕ ಮೂವತ್ತೆಂಟುವರೆ

೧೯।೦ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ೦।೦ ಕಾಲರಲ್ಲು ದಿನ ೭೭ಕ್ಕೆ ರುಪಾಯಿ ತೂಕ ಹತ್ತೊಂಬತ್ತು ಕಾಲು

೭೭ ತೆಂಗಿನಕಾಯಿ ದಿನ ೧ಕ್ಕೆ ೧ ವಂದರಲ್ಲು ದಿನ ೭೭ಕ್ಕೆ ಯಪ್ಪತ್ತೇಳು

೧೬೯೪ ಬಾಳೇಹಂಣು ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲು ದಿನ ೭೭ಕ್ಕೆ ಸಾವಿರದ ಉಾರನೂರ ತೊಂಭತ್ತನಾಲ್ಕು.

೧೬೯೪ ವೀಳ್ಯೆದೆಲೆ ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲು ದಿನ ೭೭ಕ್ಕೆ ಸಾವಿರದ ಉಾರ ನೂರ ತೊಂಬತ್ತನಾಲ್ಕು.

೧೬೯೪ ಅಡಿಕೆ ಹೋಳು ದಿನ ೧ಕ್ಕೆ ೨೨ ಯಿಪ್ಪತ್ತೆರಡರಲ್ಲು ದಿನ ೭೭ಕ್ಕೆ ಸಾವಿರದ ಉಾರನೂರ ತೊಂಬತ್ತನಾಲ್ಕು.

- ಅಂತ್ತು ಬಗೆ ಹದಿನೈದು

ದೇವರು ನಾಲ್ಕಕ್ಕೆ ಬಕ್ಷ ಪರಮಾಂನ್ನ ನೈವೇದ್ಯದ ಬಗ್ಗೆ ದಿನ ೭೭ಕ್ಕೆ

೪॥।೨॥ ಉದ್ದಿನ ಬೇಳೆ ದಿನ ೧ಕ್ಕೆ ಹೇರುಸೇರು ೫ ಉೈದರಲ್ಲು ದಿನ ೭೭ಕ್ಕೆ ಹೇರು ನಾಲ್ಕು ಮುಕ್ಕಾಲು ಬಟ್ಟಿಯು ಯರಡುವರೆ ಹಾನೆ

---

* ಇಲ್ಲಿಂದ ನಿರೂಪದಲ್ಲಿ ೫ನೇ ಪುಟದ ಭಾಗ ಇಲ್ಲ. ೬ನೇ ಪುಟದಲ್ಲಿ ಅದರ ಮುಂದುವರೆದ ೭ ಸಾಲುಗಳನ್ನು ಈ ಲೇಖನದಲ್ಲಿ ದಾಖಲಿಸಿಲ್ಲ.

೧೭।।। ವಳ್ಳೆಂಣೆ ದಿನ ೧ಕ್ಕೆ ಹೇರು ಸೇರು ೧।।೦ ವಂದೂವರೆಯಲ್ಲು ದಿನ ೭೭ಕ್ಕೆ ಹೇರು ವಂದೂ ಕಾಲು ಬಟ್ಟೆಯು ಯೇಳು ಮುಕ್ಕಾಲು ಹಾನೆ.

೧೫೪ ತೆಂಗಿನಕಾಯಿ ದಿನ ೧ಕ್ಕೆ ೨ ಯರಡರಲ್ಲು ದಿನ ೭೭ ಕ್ಕೆ ನೂರ ಐವತ್ತನಾಲ್ಕು

೧೫।೬ ಬೆಲ್ಲ ದಿನ ೧ಕ್ಕೆ ನಡವ ಸೇರು ೮ ಯೆಂಟರಲ್ಲು ದಿನ ೭೭ ಯಪ್ಪತ್ತೇಳಕ್ಕ ಹದಿನೈದು ಕಾಲು ಮಣು ಊರು ಸೇರು.

೧೯।೦ ಯಾಲಕ್ಕಿ ದಿನ ೧ಕ್ಕೆ ರೂಪಾಯಿ ತೂಕ ।೦ ಕಾಲರಲ್ಲು ದಿನ ೭೭ಕ್ಕೆ ರೂಪಾಯಿ ತೂಕ ಹತ್ತೊಂಬತ್ತು ಕಾಲು

೧।।।೭ ಅಕ್ಕಿ ದಿನ ೧ಕ್ಕೆ ಹೇರುಹಾನೆ ೧ ವಂದರಲ್ಲು ದಿನ ೭೭ಕ್ಕೆ ಹೇರು ವಂದೂ ಮುಕ್ಕಾಲು ಬಟ್ಟೆಯು ಯೇಳುಹಾನೆ

೯೬।।◡ ತುಪ್ಪ ದಿನ ೧ಕ್ಕೆ ಹೇರುಮಾನ ।।೦ ಅರೆಯಲ್ಲು ದಿನ ೭೭ ಕ್ಕೆ ಹೇರು ವಂಬತ್ತುವರೆಯು ಬೇಳೆ ಹಾನೆ.

- ಅಂತ್ತು ಬಗೆ ಯೇಳು

ಯಿ ಬಗೆ ವಿಶೇಷಗಟ್ಲೆ ಪಂಚಪರ್ವದಲ್ಲೂ ಊಗುವಂಥಾ ನೈವೇದ್ಯದ ಪ್ರದೋಷ ಯಿಪ್ಪತ್ತನಾಲ್ಕರಲ್ಲು ಊಗುವಂಥಾ ಭಕ್ಷ್ಯವಂನ್ನು ಸರ್ವರ್‍ರಿಗೂ ವಿನಿಯೋಗ ಮಾಡಿಸುವದು। ಉಳಿಕೆ ಪಂಚಪರ್ವದಲ್ಲು ಊಗುವಂಥಾ ಭಕ್ಷ್ಯ ಪರಮಾಂನ್ನ ನೈವೇದ್ಯ ಸಹಾ ದೇವಸ್ಥಾನದ ಚಾಕ್ರಿ ಜನಕ್ಕೆ ಕೊಡಿಶಿ ಕೊಡುವುದು.

ಚೈಯಿತ್ರ ಶು ೧ ದಾರಾಭ್ಯ ವೈಶ್ಯಾಕ ಬ ೩೦ ವರ್‍ರಿಗೆ ತಿಂಗಳು ೨ರ ದಿನ ೬೦ಕ್ಕೆ ಸಾಯಂಕಾಲದಲ್ಲು ದೇವರು ನಾಲ್ಕರ ವಸಂತ್ತ ಪೂಜೆಗೆ ಕೊಡತಕ್ಕ ವಿವರಾ -

೧।।೦ ಕಡ್ಲೆಬೇಳೆ ದಿನ ೧ಕ್ಕೆ ಹೇರುಹಾನೆ ೧ ವಂದರಲ್ಲು ದಿನ ೬೦ಕ್ಕೆ ಹೇರುಬಟ್ಟೆ ವಂದೂವರೆ.

೧।।೦ ಹೆಸ್ರು ಬೇಳೆ ದಿನ ೧ಕ್ಕೆ ಹೇರುಹಾನೆ ೧ ವಂದರಲ್ಲು ದಿನ ೬೦ಕ್ಕೆ ಹೇರುಬಟ್ಟೆ ವಂದುವರೆ

೧೨ ಬೆಲ್ಲ ದಿನ ೧ಕ್ಕೆ ನಡವ ಸೇರು ೮ ಯೆಂಟರಲ್ಲು ದಿನ ೬೦ಕ್ಕೆ ನಡವ ಮಣು ಹಂನ್ನೆರಡು

೩೦ ಯಾಲಕ್ಕಿ ದಿನ ೧ಕ್ಕೆ ರೂಪಾಯಿ ತೂಕ ।।೦ ಅರೆಯಲ್ಲು ದಿನ ೬೦ಕ್ಕೆ ರೂಪಾಯಿ ತೂಕ ಮೂವತ್ತು

೩೦ ವಳ್ಳೆ ಮೆಣಸು ದಿನ ೧ಕ್ಕೆ ರೂಪಾಯಿ ತೂಕ ।।೦ ಅರೆಯಲ್ಲು ದಿನ ೬೦ಕ್ಕೆ ರೂಪಾಯಿ ತೂಕ ಮೂವತ್ತು

೧೨೦ ವೀಳ್ಯೆದೆಲೆಕಟ್ಟು ದಿನ ೧ಕ್ಕೆ ೨ ಯರಡರಲ್ಲೂ ದಿನ ೬೦ಕ್ಕೆ ವಂದು ನೂರಯಿಪ್ಪತ್ತು

೧।।೦ ಅಡಿಕೆ ಹೋಳು ದಿನ ೧ಕ್ಕೆ ನಡವ ಸೇರು ೧ ವಂದರಲ್ಲು ದಿನ ೬೦ಕ್ಕೆ ನಡವ ಮಣು ವಂದುವರೆ

೬೦ ತೆಂಗಿನಕಾಯಿ ದಿನ ೧ಕ್ಕೆ ೧ ವಂದರಲ್ಲು ದಿನ ೬೦ಕ್ಕೆ ಅರವತ್ತು

೩೦೦ ಬಾಳೆಹಣ್ಣು ದಿನ ೧ಕ್ಕೆ ೫ ಐದರಲ್ಲು ದಿನ ೬೦ಕ್ಕೆ ಮುಂನೂರು

।೫ ಶ್ರೀಗಂಧ ದಿನ ೧ಕ್ಕೆ ನಡವ ಸೇರು ।೦ ಕಾಲರಲ್ಲು ದಿನ ೬೦ಕ್ಕೆ ನಡು ಕಾಲು ಮಣು ಐದು ಸೇರು

೯೨ ಕರ್ಜೂರ ತಿಂಗಳು ೧ಕ್ಕೆ ನಡವ ಸೇರು ೧ ವಂದರಲ್ಲು ತಿಂಗಳು ೨ಕ್ಕೆ ಯರಡಕ್ಕೆ ನಡುಸೇರು ಯರಡು

೯೧ ಅಗಿಲು ತಿಂಗಳು ೧ಕ್ಕೆ ನಡವ ಸೇರು।।೦ ಅರೆಯಲ್ಲು ತಿಂಗಳು ೨ಕ್ಕೆ ನಡವ ಸೇರು ವಂದು

- ಅಂತ್ತು ಬಗೆ ಹಂನ್ನೆರಡು

ಯಿಂತಿಷ್ಟು ಜೇನಿಸಿನಲ್ಲೂ ದೇವರು ನಾಲ್ಕಕ್ಕೆ ವಸಂತ್ತ ಪೂಜೆ ಮಾಡಿ ಸರ್ವರ್‍ರಿಗೂ ಕೊಡಿಶಿ ಕೊಡುತ್ತಾ ಬರುವದು ಯಿದಲ್ಲದೆ ನಾನಾ ತರದ ಹಂಣು ಹಂಪಲು ಹೂಉ ಸಹಾ ಕೊಡಿಶಿ ಕೊಡುವುದು.

ಊಷಾಢ ಶು ೧೧ ರಲ್ಲು ಪ್ರಥಮ ಯೇಕಾದಸಿಗೆ ದೇವರು ನಾಲ್ಕಕ್ಕೆ ನೈವೇದ್ಯದ ಬಗ್ಗೆ ಕೊಡತಕ್ಕ ವಿವರಾ -

೫ ತೆಂಗಿನಕಾಯಿ ಐದು

೯೨ ಕಡಲೇಬೇಳೆ ಹೆರಾನೆ ಯರಡು

೧೦೦ ಬಾಳೆಹಂಣು ನೂರು

೯೫ ಅಕ್ಕಿ ಹೇರು ಹಾನೆ ಐದು

।।೦ ಬೆಲ್ಲ ನಡುವ ಮಣು ಅರ್‍ರೆ

೯೦।।। ತುಪ್ಪ ಹೆರಾನೆ ಮುಕ್ಕಾಲು

೨ ವೀಳ್ಯೆದೆಲೆ ಕಟ್ಟು ಯರಡು

೧ ಅಡಿಕೆ ನಡವ ಸೇರು ವಂದು

೯೨ ಹೆಸರು ಬೇಳೆ ಹೆರಾನೆ ಯರಡು

೧ ಕರ್ಪೂರ ರೂಪಾಯಿ ತೂಕ ವಂದು

।।೦ ಸಾಂಬ್ರಾಣಿ ರೂಪಾಯಿ ತೂಕ ಅರ್‍ರೆ. ೧೧

ಅಂತ್ತೂ ಬಗೆ ಹಂನ್ನೊಂದು। ಯಿದಲ್ಲದೆ ನಾನಾತರದ ಹಂಣು ಹಂಪಲು ಮುಂತ್ತಾಗಿ ನೈವೇದ್ಯ ಮಾಡಿಶಿ ಸರ್ವರ್‍ರಿಗೂ ಕೊಡಿಶಿ ಕೊಡುತ್ತಾ ಬರುವದು.

ಊಷಾಢ ಶುದ್ಧ ೧೧ ಊರಾಭ್ಯ ಯಿ ಬ ೩ರ ವರ್‍ರಿಗೆ ದಿನ ೨೦ಕ್ಕೆ ಉಯ್ಯಾಲೆ ಉತ್ಸವದ ಬಗ್ಗೆ ಓಂಕಾರೇಶ್ವರ ದೇವರ್‍ರಿಗೆ ಪೂಜೆ ಮಂಗಳಾರ್ತಿ ಬಗ್ಯೆ ಕೊಡತಕ್ಕ ವಿವರಾ -

೬೦ ತೆಂಗಿನಕಾಯಿ ದಿನ ೧ಕ್ಕೆ ೩ ಮೂರಲ್ಲೂ ದಿನ ೨೦ ಕ್ಕೆ ಅರವತ್ತು

೨೦೦೦ ಬಾಳೆ ಹಂಣು ದಿನ ೧ಕ್ಕೆ ೧೦೦ ನೂರಲ್ಲು ದಿನ ೨೦ಕ್ಕೆ ಯೆರಡು ಸಾವಿರಾ

೨ ಬೆಲ್ಲ ದಿನ ೧ಕ್ಕೆ ನಡವ ಸೇರು ೪ ನಾಲ್ಕರಲ್ಲು ದಿನ ೨೦ಕ್ಕೆ ನಡವ ಮಣ ಯರಡು

೯೨।। ತುಪ್ಪ ದಿನ ೧ಕ್ಕೆ ಹೇರುಮಾನ ।।೦ ಅರೆಯಲ್ಲು ೨೦ಕ್ಕೆ ಹೇರುಹಾನೆ ಯರಡುವರೆ.

೫ ಯಾಲಕ್ಕಿ ದಿನ ೧ಕ್ಕೆ ರೂಪಾಯಿ ತೂಕ ।೦ ಕಾಲರಲ್ಲು ದಿನ ೨೦ಕ್ಕೆ ರೂಪಾಯಿ ತೂಕ ಐದು

೪೦ ವೀಳ್ಯೆದೆಲೆ ಕಟ್ಟು ದಿನ ೧ಕ್ಕೆ, ೨ ಯರಡರಲ್ಲು ದಿನ ೨೦ಕ್ಕೆ ನಾಲ್ವತ್ತು.

॥೦ ಅಡಿಕೆ ದಿನ ೧ಕ್ಕೆ ನಡವ ಸೇರು ೧ ವಂದರಲ್ಲು ದಿನ ೨೦ಕ್ಕೆ ನಡವ ಮಣ ಅರ್ರೆ.

೧೦ ಕರ್ಪೂರ ದಿನ ೧ಕ್ಕೆ ರೂಪಾಯಿ ತೂಕ ॥೦ ಅರ್ರೆಯಲ್ಲು ದಿನ ೨೦ಕ್ಕೆ ರೂಪಾಯಿ ತೂಕ ಹತ್ತು

೫ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ।೦ ಕಾಲರಲ್ಲು ದಿನ ೨೦ಕ್ಕೆ ರೂಪಾಯಿ ತೂಕ ಐದು

೯೫* ವಳ್ಳೆಂಣೆ ದಿನ ೧ಕ್ಕೆ ಅಲಂಕಾರ ದೀಪ ಮಂಗಳಾರ್ತಿಗೆ ಸಹಾ ಹೇರುಮಾನ ವಂದರಲ್ಲು ದಿನ ೨೦ಕ್ಕೆ ಹೇರುಹಾನೆ ಐದು

೫ ಶ್ರೀಗಂಧ ದಿನ ೧ಕ್ಕೆ ನಡವ ಸೇರು ।೦ ಕಾಲರಲ್ಲು ದಿನ ೨೦ಕ್ಕೆ ನಡವ ಸೇರು ಐದು

೯೦॥ ಕರ್ಚೋರ ದಿನ ೨೦ಕ್ಕೆ ನಡವ ಸೇರು ಅರ್ರೆ

೯೦। ಅಗಿಲು ದಿನ ೨೦ಕ್ಕೆ ನಡವ ಸೇರು ಕಾಲು ೧೩

- *ಅಂತ್ತು ಬಗೆ ಹದಿಮೂರು। ಯಿದಲ್ಲದೆ ನಾನಾತರದ ಹಂಣು ಹಂಪಲು ಮುಂತ್ತಾಗಿ ದೇವರ್ರಿಗೆ ನೈವೇದ್ಯ ಮಾಡಿಶಿ ಸರ್ವರ್ರಿಗೂ ಕೊಡಿಶಿ ಕೊಡುವುದು* -

ಭಾದ್ರಪದ ಶು ೪ ಆರಾಭ್ಯ ಯೀ ಶು ೭ವರ್ರಿಗೆ ಗಣಾಧೀಶ್ವರ ದೇವರ್ರಿಗೆ ದಿನ ೫ಕ್ಕೆ ಪೂಜೆ ಮುಂತಾದಕ್ಕೆ ಕೊಡತಕ್ಕ ವಿವರಾ –

ಯೀ ದೇವರ್ರಿಗೆ ಶುದ್ಧ ೪ಲು ಪಂಚಾಮೃತ ಅಭಿಷೇಕಕ್ಕೆ

॥೦ ಹಾಲು ಹೇರುಮಾನ ಅರೆ

॥೦ ಮೊಸರು ಹೇರುಮಾನ ಅರೆ

।೦ ತುಪ್ಪ ಹೇರುಮಾನ ಕಾಲು

।೦ ಜೇನು ಹೇರು ಮಾನ ಕಾಲು

।೦ ಸಕ್ಕರೆ ನಡವ ಸೇರು ಕಾಲು

೧೦ ಬಾಳೆ ಹಂಣು ಹತ್ತು ೬

- *ಅಂತ್ತೂ ಬಗೆ ಆರು*

ಯೀ ದೇವರ್ರಿಗೆ ಶುದ್ಧ ಚವುತಿ ದಿವಸ ಮೋದಕದ ನೈವೇದ್ಯದ ಬಗ್ಗೆ –

೯೨॥ ಕಡ್ಲೆಬೇಳೆ ಹೆರಾನೆ ಯೆರಡುವರೆ

೯೨ ಉದ್ದಿನಬೇಳೆ ಹೆರಾನೆ ಯೆರಡು

೯೦॥ ಯೆಳ್ಳು ಹೆರಾನೆ ಅರೆ

೯೫ ಅಕ್ಕಿ ಹೆರಾನೆ ಐಯಿದು

॥೦ ಬೆಲ್ಲ ನಡವ ಮಣು ಅರ್ರೆ

೫ ತೆಂಗಿನ ಕಾಯಿ ಐಯಿದು

೧ ಯಾಲಕ್ಕಿ ರುಪಾಯಿ ತೂಕ ವಂದು (ಯಾಲಕ್ಕಿ ೧)

೯೦॥ ತುಪ್ಪ ಹೆರಾನೆ ಅರ್ರೆ (೯೦॥ ತುಪ್ಪ) ೮

ಅಂತ್ತು ಬಗೆ ಯಂಟು। ಯೀ ನೈವೇದ್ಯವಂನ್ನು ದೇವಸ್ಥಾನದ ಚಾಕ್ರಿಯವರ್ರಿಗೆ ಕೊಡಿಶಿ ಕೊಡುವುದು

ಯೀ ಶು ೩ ಆರಾಭ್ಯ ಯೀ ಶು ೭ವರ್ರಿಗೆ ದಿನ ೫ಕ್ಕೆ ಗಣಾಧೀಶ್ವರ ದೇವರ್ರಿಗೆ ಅಪ್ಪ ಕಜ್ಜಾಯದ ಬಗ್ಗೆ –

೯೫ ಅಕ್ಕಿ ಹೇರುಹಾನೆ ಐದು

೫ ತೆಂಗಿನಕಾಯಿ ಐದು

॥೦ ಬೆಲ್ಲ ನಡವ ಮಣ ಅರ್ರೆ

೯೧। ತುಪ್ಪ ಹೇರುಹಾನೆ ವಂದು ಕಾಲು

೧। ಯಾಲಕ್ಕಿ ರುಪಾಯಿ ತೂಕ ವಂದುಕಾಲು ೫

ಅಂತ್ತೂ ಬಗೆ ಐದು ಯೀ ನೈವೇದ್ಯವಂನ್ನು ದೇವಸ್ಥಾನದ ಚಾಕ್ರಿ ಜನಕ್ಕೆ ಕೊಡಿಶಿ ಕೊಡುವುದು.

ಯೀ ಗಣಾಧೀಶ್ವರ ದೇವರ್ರಿಗೆ ಪೂಜೆ ಮಂಗಳಾರತಿ ಬಗ್ಗೆ ದಿನ ೫ಕ್ಕೆ

೧೦ ತೆಂಗಿನಕಾಯಿ ಹತ್ತು

೫೦ ಬಾಳೆ ಹಂಣು ಐವತ್ತು

೫೦ ವೀಳ್ಯೆದೆಲೆ ಐವತ್ತು

೫೦ ಅಡಿಕೆ ಹೋಳು ಐವತ್ತು

೨॥ ಕರ್ಪೂರ ರೂಪಾಯಿ ತೂಕ ಯರಡುವರ್ರೆ

೧।೦ ಸಾಂಬ್ರಾಣಿ ರೂಪಾಯಿ ತೂಕ ವಂದುಕಾಲು

ಅಂತ್ತು ಬಗೆ ಆರು ಯೀ ಹಂಣು ಕಾಯಂನ್ನು ವಿನಿಯೋಗ ಮಾಡಿಸುವದು

ಯೀ ಗಣಾಧೀಶ್ವರ ದೇವರ್ರಿಗೆ ಪಂಚ ಕಜ್ಜಾಯದ ಬಗ್ಗೆ –

೯೩ ಯೆಳ್ಳು ಹೇರುಹಾನೆ ಮೂರು

೯೨ ಹುರ್ರಿ ಕಡಲೆ ಹೇರುಹಾನೆ ಯರಡು

೯೦॥ ಹೆಸರು ಬೇಳೆ ಹೇರುಹಾನೆ ಅರ್ರೆ

।೧ ಬೆಲ್ಲ ನಡು ಕಾಲುಮಣು ವಂದು ಸೇರು

೩ ತೆಂಗಿನಕಾಯಿ ಮೂರು

೯೧ ತುಪ್ಪ ಹೇರುಮಾನ ವಂದು

೧ ಯಾಲಕ್ಕಿ ರೂಪಾಯಿ ತೂಕ ವಂದು

ಅಂತು ಬಗೆ ಯೇಳು। ಯೀ ಬಗೆ ಪಂಚಕಜ್ಜಾಯವಂನ್ನು ನೈವೇದ್ಯ ಮಾಡಿಶಿ ಸರ್ವರ್ರಿಗು ಕೊಡಿಶಿ ಕೊಡುವದು

ಆಶ್ವಿಜ ಶು ೧ ದಾರಾಭ್ಯ ಯೀ ಶುದ್ಧ ದಶಮಿ ವರ್ರಿಗೆ ನವರಾತ್ರಿ ಹಬ್ಬದ ಸಂಮಂದ ದೇವರು ನಾಲ್ಕಕ್ಕೆ ಕೊಡತಕ್ಕ ವಿವರಾ –

೩೦ ದೇವರು ನಾಲ್ಕರ ಪೂಜೆ ಬಗ್ಗೆ ಮಂಗಳಾರ್ತಿಗೆ ಸಹ ದಿನ ೧೦ಕ್ಕೆ ತೆಂಗಿನ ಕಾಯಿ ದಿನ ೧ಕ್ಕೆ ೩ ಮೂರಲ್ಲು ದಿನ ೧೦ಕ್ಕೆ ಮೂವತ್ತು

---

* ನಿರೂಪದಲ್ಲಿ '೯' ಸಂಕೇತ ಬಿಟ್ಟು ಹೋಗಿದೆ.

೩೦೦ ಬಾಳೆಹಂಣು ದಿನ ೧ಕ್ಕೆ ೩೦ ಮೂವತ್ತರಲ್ಲು ದಿನ ೧೦ಕ್ಕೆ ಮುಂನೂರು
೧೦ ವಿಳ್ಯೆದೆಲೆ ದಿನ ೧ಕ್ಕೆ ಕಟ್ಟು ೧ ವಂದರಲ್ಲು ದಿನ ೧೦ಕ್ಕೆ ಕಟ್ಟು ಹತ್ತು
೯೫ ಅಡಿಕೆ ದಿನ ೧ಕ್ಕೆ ನಡವ ಸೇರು ||೦ ಅರೆಯಲ್ಲು ದಿನ ೧೦ಕ್ಕೆ ನಡವ ಸೇರು ಉೖದು
೧೦ ಕರ್ಪೂರ ದಿನ ೧ಕ್ಕೆ ರೂಪಾಯಿ ತೂಕ ೧ ವಂದರಲ್ಲು ದಿನ ೧೦ಕ್ಕೆ ರೂಪಾಯಿ ತೂಕ ಹತ್ತು
೫ ಸಾಂಬ್ರಾಣಿ ದಿನ ೧ಕ್ಕೆ ರೂಪಾಯಿ ತೂಕ ||೦ ಅರೆಯಲ್ಲು ದಿನ ೧೦ಕ್ಕೆ ರೂಪಾಯಿ ತೂಕ ಉೖದು
- ಅಂತ್ತು ಬಗೆ ಊಾರು.

ಯೊ ನವರಾತ್ರಿ ದಿನ ೧೦ಕ್ಕೆ ದೇವರು ನಾಲ್ಕಕ್ಕೆ ದಿನ ೧ಕ್ಕೆ ವಂದೊಂದು ಬಗೆ ಬಕ್ಷ್ಯ ಮಾಡತಕ್ಕ ಬಗ್ಗೆ ಪರಮಾಂನ್ನಕ್ಕೆ ಸಹಾ ಕೊಡತಕ್ಕ ವಿವರಾ -

೩೦ ತೆಂಗಿನಕಾಯಿ ದಿನ ೧ಕ್ಕೆ ಮೂರಲ್ಲು ದಿನ ೧೦ಕ್ಕೆ ಮೂವತ್ತು.
೨||೦ ಬೆಲ್ಲ ದಿನ ೧ಕ್ಕೆ ನಡವ ಮಣ |೦ ಕಾಲರಲ್ಲು ದಿನ ೧೦ಕ್ಕೆ ನಡವ ಯರಡೂವರೆ ಮಣ
|೦ ಅಕ್ಕಿ ದಿನ ೧ಕ್ಕೆ ಹೇರುಹಾನೆ ೧ ವಂದರಲ್ಲು ದಿನ ೧೦ಕ್ಕೆ ಹೇರು ಬಟ್ಟಿ ಕಾಲು
೯೬ ಗೋದಿ ಹುಡಿ ದಿನ ೧ಕ್ಕೆ ಹೇರುಹಾನೆ ೨ ಯರಡರಲ್ಲು ದಿನ ೩ಕ್ಕೆ ಹೇರುಹಾನೆ ಊಾರ್‍ರು
೯೬ ಕಡಲೆಬೇಳೆ ದಿನ ೧ಕ್ಕೆ ಹೇರುಹಾನೆ ೨ ಯರಡರಲ್ಲು ದಿನ ೩ಕ್ಕೆ ಹೇರುಹಾನೆ ಊಾರ್‍ರು.
|೦ ಉದ್ದಿನ ಬೇಳೆ ದಿನ ೧ಕ್ಕೆ ಹೇರುಹಾನೆ ೨ ಯರಡರಲ್ಲು ದಿನ ೫ಕ್ಕೆ ಹೆರ್‍ರುಭಟ್ಟಿ ಕಾಲು.
೯೬ ವಳ್ಳೆಂಣೆ ದಿನ ೧೦ಕ್ಕೆ ಹೇರುಹಾನೆ ಊಾರು
೯೨|| ತುಪ್ಪ ದಿನ ೧ಕ್ಕೆ ಹೇರುಹಾನೆ |೦ ಕಾಲರಲ್ಲು ದಿನ ೧೦ಕ್ಕೆ ಹೆರಾನೆ ಯರಡೂವರೆ
೯೫ ತೊಗ್ರಿಬೇಳೆ ದಿನ ೧ಕ್ಕೆ ಹೇರುಹಾನೆ ||೦ ಅರೆಯಲ್ಲು ದಿನ ೧೦ಕ್ಕೆ ಹೇರುಹಾನೆ ಉೖದು.
ಅಂತ್ತು ಬಗೆ ವಂಬತ್ತು!..... ಯೀ ನೈವೇದ್ಯವಂನ್ನು ದೇವಸ್ಥಾನದ ಚಾಕ್ರಿ, ಜನಕ್ಕೆ ಕೊಡಿಶಿ ಕೊಡುವುದು.

ಊಾಶ್ವೀಜ ಬ ೧ಳಲ್ಲು ನರಕ ಚತುರ್ದಶಿ ಉದ್ದಿಶ್ಯ ದೇವಸ್ಥಾನದ ಚಾಕ್ರಿ ಜನಕ್ಕೆ ಅತಿಥಿ ಊಾಗಿ ಬಂದಂಥ ಸ್ಥಳ, ಪರಸ್ಥಳದ ಬ್ರಾಹ್ಮರಿಗೆ ಸಹಾ ಆಭ್ಯಂಗನಕ್ಕೆ ಕೊಡತಕ್ಕ ವಿವರಾ -

೯೨|| ವಳ್ಳೆಂಣ್ಣೆ ಹೇರುಹಾನೆ ಯರಡೂವರೆ
೯೨|| ಶೀಗೆಹುಡಿ ಹೇರುಹಾನೆ ಯರಡೂವರೆ
- ಉಭಯಂ ಬಗೆ ಯರಡು ಯಿದಕ್ಕೆ ತಕ್ಕ ಅಡಿಗಬ್ಬು ಸಹ ಕೊಡಿಶಿ ಕೊಡುವದು.

ಕಾರ್ತಿಕ ಶು ೧ಲ್ಲು ದೀಪಾವಳಿ ಹಬ್ಬದ ಬಗ್ಗೆ ದೇವರು ನಾಲ್ಕಕ್ಕೆ ಪೂಜೆ ನೈವೇದ್ಯ ಮಂಗಳಾರ್ತಿ ಬಗ್ಗೆ ಸಹಾ ಕೊಡತಕ್ಕ ವಿವರಾ -

೫ ತೆಂಗಿನಕಾಯಿ ಉೖದು
೫೦ ಬಾಳೇಹಂಣು ಉೖವತ್ತು
೧ ವೀಳ್ಯೆದೆಲೆ ಕಟ್ಟು ವಂದು
||೦ ಅಡಿಕೆ ನಡವ ಸೇರು ಅರ್‍ರೆ
೧ ಕರ್ಪೂರ ರೂಪಾಯಿ ತೂಕ ವಂದು
೯೩ ಗೋಧಿ ಹುಡಿ ಹೇರುಹಾನೆ ಮೂರು
೯೩ ಕಡಲೆಬೇಳೆ ಹೇರುಹಾನೆ ಮೂರು
೯೦|| ತೊಗ್ರಿಬೇಳೆ ಹೇರುಹಾನೆ ಅರೆ
||೦ ಸಾಂಬ್ರಾಣಿ ರೂಪಾಯಿ ತೂಕ ಅರೆ
೯೦|| ತುಪ್ಪ ಹೇರುಹಾನೆ ಅರ್‍ರೆ
||೦ ಬೆಲ್ಲ ನಡವ ಮಣು ಅರ್‍ರೆ
||೦ ಯಾಲಕ್ಕಿ ರೂಪಾಯಿ ತೂಕ ಅರ್‍ರೆ
|೦ ವಳ್ಳೆಂಣೆ ಹೇರುಹಾನೆ ಕಾಲು
೯೧ ಅಕ್ಕಿ ಹೇರುಹಾನೆ ವಂದು
೯೦|| ಮೊಸರು ಹೆರಾನೆ ಅರ್‍ರೆ
ಅಂತು ಬಗೆ ಹದಿನೈದು - ಯೀ ಬಗೆ ಬಕ್ಷ್ಯ ಪರಮಾಂನ್ನವನ್ನು ದೇವಸ್ಥಾನದ ಚಾಕ್ರಿ ಜನಕ್ಕೆ ಕೊಡಿಶಿ ಕೊಡುವುದು.

ಕಾರ್ತಿಕ ಶು ೧ ದಾರಾಭ್ಯ ಯೊ ಬ ೩೦ ವರ್‍ರಿಗೆ ದಿನ ೧ಕ್ಕೆ ಓಂಕಾರೇಶ್ವರ ದೇವರ ಸಂನ್ನಿಧಿಯಲ್ಲು ಸಾಯಂಕಾಲ ಊಾದಮೇಲೆ ಪ್ರದೋಷ ಕಾಲದಾರಾಭ್ಯ ಮಹಾಪೂಜೆ ಊಾಗುವ ಪರ್‍ರಿಯಂತ್ರ ದೀಪ ೧೧ ಹಂನ್ನೊಂದು ಮಹಾ ಪೂಜೆವ್ಯಾಳ್ಯದಲ್ಲು ಅಲಂಕಾರ ದೀಪ ೧೦೦ ನೂರು ಉಭಯಂ ದೀಪ ೧೧೧ ನೂರಹಂನ್ನೊಂದು ಪ್ರದೋಷ ಕಾಲದಲ್ಲು ಹತ್ತಿಸುವಂಥಾ ಊಾಕಾಶದೀಪಕ್ಕೆ ಸಹಾ

||೨|| ವಳ್ಳೆಂಣ್ಣೆ ದಿನ ೧ಕ್ಕೆ ಹೇರುಹಾನೆ ||| ಮುಕ್ಕಾಲರಲ್ಲು ತಿಂಗಳು ೧ಕ್ಕೆ ಹೇರು ಅರೆ ಭಟ್ಟಿಯು ಯರಡುವರೆ ಹಾನೆ
೯೭||೦ ಅರಳೆ ದಿನ ೧ಕ್ಕೆ ನಡವ ಸೇರು |೦ ಕಾಲರಲ್ಲು ತಿಂಗಳು ೧ಕ್ಕೆ ನಡವ ಸೇರು ಯೇಳುವರೆ.
ಉಭಯಂಬಗೆ ಯರಡು

ಕಾರ್ತಿಕದಲ್ಲು ಊಾಗುವಂಥಾ ಉತ್ತುವಾನ್ ದ್ವಾದಶಿ ಉದಿಶ್ಯ ದೇವರು ನಾಲ್ಕಕ್ಕೆ ವೃಂದಾವನದ ಪೂಜೆ ಮಂಗಳಾರ್ತಿ ಬಗ್ಗ ಸಹಾ ಕೊಡತಕ್ಕ ವಿವರಾ -

೫ ತೆಂಗಿನಕಾಯಿ ಉೖದು
೧೫೦ ಬಾಳೆಹಂಣು ನೂರ ಉೖವತ್ತು
೯೨ ಹೆಸ್ರು ಬೇಳೆ ಹೇರುಹಾನೆ ಯರಡು
೯೨ ಕಡಲೇಬೇಳೆ ಹೇರುಹಾನೆ ಯರಡು
೩ ವೀಳ್ಯೆದೆಲೆ ಕಟ್ಟು ಮೂರು

ಮಾಘದಲ್ಲು ಶಿವರಾತ್ರಿ ದಿವಸ ಓಂಕಾರೇಶ್ವರ ದೇವರ್‍ರಿಗೆ ರಾತ್ರೆ ಜಾವ ನಾಲ್ಕರಲ್ಲು ಮಹಾಂನ್ಯಾಸ ಪೂರ್ವಕವಾಗಿ ಊಾಗುವಂಥಾ ರುದ್ರಾಭಿಷೇಕಕ್ಕೆ ಕೊಡತಕ್ಕ ವಿವರಾ -

೧ ಹಾಲು ಹೇರುಮಾನ ವಂದು
೧ ಮೊಸರು ಹೇರು ಮಾನ ವಂದು
||೦ ತುಪ್ಪ ಹೇರುಮಾನ ಅರೆ

॥೦ ಜೇನು ಹೇರುಮಾನ ಅರೆ
॥೦ ವಳ್ಳೆಂಣೆ ಹೇರುಮಾನ ಅರೆ
॥೦ ಸಕ್ರೆ ನಡುಸೇರು ಅರೆ
೧ ಕಬ್ಬಿನ ರಸ ಹೇರುಮಾನ ವಂದು
೪ ಯಳನೀರು ನಾಲ್ಕು
೧೬ ನಿಂಬೆ ಹಣ್ಣು ಹದಿನಾರು
೪ ತೆಂಗಿನಕಾಯಿ ನಾಲ್ಕು
೮೮ ಬಾಳೆಹಣ್ಣು ಯಂಬತ್ತೆಂಟು
೮೮ ವೀಳ್ಯದೆಲೆ ಯಂಬತ್ತೆಂಟು
೮೮ ಅಡಿಕೆ ಹೋಳು ಯಂಬತ್ತೆಂಟು
೪ ಕರ್ಪೂರ ರೂಪಾಯಿ ತೂಕ ನಾಲ್ಕು
೨ ಸಾಂಬ್ರಾಣಿ ರೂಪಾಯಿ ತೂಕ ಯರಡು
- ಅಂತ್ತು ಬಗೆ ಹದಿನೈದು

ಶಿವರಾತ್ರೆ ದಿವಸ ರಾತ್ರೆ ಜಾವ ನಾಲ್ಕರಲ್ಲು ಮಹಂನ್ಯಾಸ ಪೂರ್ವಕವಾಗಿ ಓಂಕಾರೇಶ್ವರ ದೇವರ್‍ರಿಗೆ ರುದ್ರಾಭಿಷೇಕ ಮಾಡಿದಂಥಾ ದೇವರ ಶಾಂತಿಗಾರ ಜನ ೪ ನಾಲ್ಕು, ಉಪಾದಿ ಜನ ೧೧ ಹಂನ್ನೊಂದು ಉಭಯಂ ಬ್ರಾಂಹ್ಮಣ ಜನ ೧೫ ಹದಿನೈದಕ್ಕೆ ಕಂಟೀರಾಯಿ ಗ ॥೦ ಅೖದು ಹಣದ ಮೇಲೆ ಗ ।೧ ಊರು ಹಣದ ವಳಗೆ ದೋತ್ರ ಜೋಡಿ ೧೫ ಹದಿನೈದು ಕೊಡಿಶಿ ಕೊಡುವುದು ದೋತ್ರ ದೊರೆಕದಿದ್ರೆ ಜನ ವಂದಕ್ಕೆ ಕಂಟಿರಾಯಿ ಗ ॥೦ ಅೖದು ಹಣದ ಪ್ರಕಾರ ಕೊಡಿಶಿ ಕೊಡುತ್ತಾ ಬರುವುದು.

ಚೈಯಿತ್ರ ದಾರಾಭ್ಯ ಪಾಲ್ಗುಣ ಬ ೩೦ ವರ್‍ರಿಗೆ ವರುಷ ೧ಕ್ಕೆ ಪಾಉರ್ನಾಮಿ ಹಂನೆರೆಡು ಆಮಾವಾದ್‌ಸೆ ಹಂನೆರಡು ಉಭಯಂ ಯಿಪ್ಪತ್ತನಾಲ್ಕಕ್ಕೆ ಪಕ್ಷೋತ್ಸವದ ಬಗ್ಗೆ ಓಂಕಾರೇಶ್ವರ ದೇವರ್‍ರಿಗೆ ಕೊಡತಕ್ಕ ವಿವರಾ -

೨೪ ತೆಂಗಿನಕಾಯಿ ಯಿಪ್ಪತ್ತು ನಾಲ್ಕು
।।೪ ಹೆಸರುಬೇಳೆ ಹೇರು ಅರೆಭಟ್ಟಿಯು ನಾಲ್ಕು ಹಾನೆ
।।೪ ಕಡಲೆಬೇಳೆ ಹೇರು ಅರೆಭಟ್ಟಿಯು ನಾಲ್ಕು ಹಾನೆ
೨೪೦ ಬಾಳೆಹಂಣು ಯಿಂನ್ನೂರ ನಾಲ್ವತ್ತು
।।।೬ ಅಡಿಕೆ ನಡವ ಮುಕ್ಕಾಲು ಮಣು ಊರು ಸೇರು
೬೦ ವೀಳ್ಯೆದೆಲೆ ಕಟ್ಟು ಅರವತ್ತು
೨೪ ಕರ್ಪೂರ ರುಪಾಯಿ ತೂಕ ಯಿಪ್ಪತ್ತನಾಲ್ಕು
೧೨ ಸಾಂಬ್ರಾಣಿ ರುಪಾಯಿ ತೂಕ ಹಂನ್ನೆರಡು
೬ ಶ್ರೀಗಂಧ ನಡವ ಸೇರು ಊರು
೨೪ ಗಂಧದ ಯಂಣೆ ರುಪಾಯಿ ತೂಕ ಯಿಪ್ಪತ್ತನಾಲ್ಕು
।೨ ಬುಕ್ಕಿ ಹಿಟ್ಟು ನಡವ ಕಾಲುಮಣು ಯರಡು ಸೇರು
೨೪ ಕಚೋರ ರೂಪಾಯಿ ತೂಕ ಯಿಪ್ಪತ್ತನಾಲ್ಕು
॥೦ ಅಗಿಲು ನಡವ ಸೇರು ಅರ್‍ರೆ
೩ ಬೆಲ್ಲ ನಡವ ಮಣ ಮೂರು
೬ ಯಾಲಕ್ಕಿ ರೂಪಾಯಿ ತೂಕ ಆರು
೬ ಮೆಣಸು ರೂಪಾಯಿ ತೂಕ ಊರು
।।।೦ ವಳ್ಳೆಂಣೆ ದೀವಟಿಗ್ಯೆ ದೀಪಕ್ಕೆ ಸಹಾ ಹೇರು ಮುಕ್ಕಾಲು ಭಟ್ಟಿ
- ಅಂತ್ತು ಬಗೆ ಹದಿನೇಳು

ಯಿೂ ಬಗೆ ಪಕ್ಷೋತ್ಸವವಂನ್ನು ಮಾಡಿಸುತ್ತ ಸದರ್‍ರಿ ಬರೆದ ವಿನಿಯೋಗವನ್ನು ಸರ್ವರ್‍ರಿಗು ಕೊಡಿಶಿ ಕೊಡುತ್ತಾ ಬರುವುದು.

ಓಂಕಾರೇಶ್ವರ ದೇವರ್‍ರಿಗೆ। ಊ ತ್ರಿಮೂರ್ತಿದೇವರ್‍ರಿಗೆ, ಗಣಾಧೀಶ್ವರ, ಕುಮಾರೇಶ್ವರ, ಶ್ರೀ ನಂದೀಶ್ವರ ಸಹಾ ದೇವರು ಅೖದಕ್ಕೆ ಪ್ರತಿ ದಿವಸದಲ್ಲು ಧರ್‍ರಿಸು ಬಗ್ಗೆ ವರುಷ ೧ಕ್ಕೆ ಕೊಡತಕ್ಕ ವಿವರ -

೫ ಯುಗಾದಿ ಹಬ್ಬದ ಸಮಂದ ಚೈಯಿತ್ರ ಶು ೧ ಲು ದೇವರು ೫ಕ್ಕೆ ಬಚ್ಚಕಾನಿ ದೋತ್ರ ಜೋಡಿ ಅೖದು
೫ ದೀಪಾವಳಿ ಹಬ್ಬದ ಸಮಂದ ಕಾರ್ತಿಕ ಶು ೧ ಲು ದೇವರು ೫ಕ್ಕೆ ಬಚ್ಚಕಾನಿ ದೋತ್ರ ಜೋಡಿ ಅೖದು
೧ ಶಿವರಾತ್ರೆ ಹಬ್ಬದ ಸಮಂದ ಮಾಗ ಬ ೧೪ ಲು ಓಂಕಾರೇಶ್ವರ ದೇವರ್‍ರಿಗೆ ಬಚ್ಚಕಾನಿ ದೋತ್ರ ಜೋಡಿ ವಂದು

ಅಂತ್ತು ಹಬ್ಬದ ಸಂಮಂದ ಬಚ್ಚಕಾನಿ ದೋತ್ರ ಜೋಡಿ ಹಂನೊಂದಕ್ಕೆ ದರ ಜೋಡಿ ೧ಕ್ಕೆ ಕಂಟಿರಾಯಿ ಹದಿನೈದು ಹಣದ ಮೇಲೆ ಕಂಟಿರಾಯಿ ಯರಡು ವರಹಾದ ವಳಗೆ ಬಚ್ಚಕಾನಿ ಪಟ್ಟೆದೋತ್ರವಾಗ್ಯ ಬಚ್ಚಕಾನಿ ಪಟ್ಟೆ ಕಂಬಿ ಬಿಳಿ ದೋತ್ರವಾಗ್ಯ ತರ್‍ರಿಶಿಕೊಡುತ್ತ ಬರುವುದು.

ಓಂಕಾರೇಶ್ವರ, ಗಣಾಧೀಶ್ವರ, ಕುಮಾರೇಶ್ವರ, ಶ್ರೀ ನಂದೀಶ್ವರ ದೇವರ್‍ರಿಗೆ ಸಹಾ ವರುಷ ೧ಕ್ಕೆ ಊಗುವಂಥಾ ಸಮಾರಾದನೆ ವಿವರಾ -

೧ ಚೈಯಿತ್ರ ಶು ೧೨ಲ್ಲು ಓಂಕಾರೇಶ್ವರ, ಗಣಾಧೀಶ್ವರ, ಕುಮಾರೇಶ್ವರ ಶ್ರೀ ನಂದೀಶ್ವರ, ಸಹಾ ಪ್ರತಿಷ್ಠೆ ಊದಂಥಾ ವರುಷದ ಹೆಚ್ಚಿನ ಸಮಾರಾದನೆ ವಂದು
೧ ಶ್ರಾವಣದಲ್ಲು ಓಂಕಾರೇಶ್ವರ ದೇವರ್‍ರಿಗೆ ಕಡೆ ಸೋಮುವಾರದ ಸಮಾರಾದನೆ ವಂದು
೧ ಭಾದ್ರಪತ ಶು ೪ ಲು ಗಣಾಧೀಶ್ವರ ದೇವರ್‍ರಿಗೆ ಚಉತಿ ಸಮಾರಾದನೆ ವಂದು
೧ ಕಾರ್ತೀಕ ಶು ೧೫ಲ್ಲು ಕೃತ್ತಿಗಾ ದೀಪೋತ್ಸವದ ಸಂಮಂದ ದೇವರು ನಾಲ್ಕರ ಹೆಸರಲ್ಲು ಸಮಾರಾದನೆ ವಂದು
೧ ಮಾರ್ಗಶಿರ ಶು ೬ ಲು ಕುಮಾರೇಶ್ವರ ದೇವರ್‍ರಿಗೆ ಶ್ರಷ್ಟಿ (ಷ್ಠಿ) ಸಮಾರಾದನೆ ವಂದು
೧ ಫಾಲ್ಗುಣ ಶು ೧ ಲು ಓಂಕಾರೇಶ್ವರ ಗಣಾಧೀಶ್ವರ, ಕುಮಾರೇಶ್ವರ, ಶ್ರೀ ನಂದೀಶ್ವರ ಸಹಾ ದೇವರು ನಾಲ್ಕಕ್ಕೆ ಉತ್ಸವದ ಸಂಮಂದ ಸಮಾರಾದನೆ ವಂದು

೧ ಯಿಶು ೨ ಲು ದೇವರು ೪ ನಾಲ್ಕರ ಹೆಸರಲ್ಲು ಆದ ಅವಭೃತದ ಸಮಾರಾದನೆ ವಂದು

ಅಂತ್ತು ವರುಷ ವಂದಕ್ಕೆ ದೇವರ ಹೆಸರಲ್ಲು ಆುಾಗುವಂಥಾ ಸಮಾರಾದನೆ ಯೇಳಕ್ಕೆ ಕೂಡಿದಂಥಾ ಬ್ರಾಂಹ್ಮಣ ಸರ್ವೇ ಜನರ್ರಿಗು ಭೋಜನ ದಕ್ಷಿಣೆ ತಾಂಬೂಲ ಮುಂತ್ತಾದಕ್ಕೆ ಕೊಡತಕ್ಕ ವಿವರಾ-

೧೪ ಅಕ್ಕಿ ಹೇರುಭಟ್ಟಿ ಹದಿನಾಲ್ಕು

॥೮ ಉಪ್ಪು ಹೇರುಭಟ್ಟಿ ಅರೆಬಟ್ಟಿಯು ಯೆಂಟು ಹಾನೆ

॥೮ ಮೆಣಶಿನಕಾಯಿ ನಡವ ಅರೆಮಣು ಯಂಟು ಸೇರು

೫| ಹುಣುಸಿ ಹಂಣು ನಡವ ಮಣು ಅುೈದು ಕಾಲು

೧|೨॥ ತೊಗ್ರಿಬೇಳೆ ಹೇರು ವಂದು ಕಾಲು ಬಟ್ಟಿಯು ಯರಡುವರೆ ಹಾನೆ

e೩॥ ವಳ್ಳೆಮೆಣಸು ನಡವ ಸೇರು ಮೂರುವರೆ

e೩॥ ಕೊತ್ತುಂಬರ್ರಿ ನಡವ ಸೇರು ಮೂರುವರೆ

||| ಜೀರ್ರಿಗೆ ನಡವ ಸೇರು ಮುಕ್ಕಾಲು ಬೇಳೆ

e೧||| ಮೆಂತ್ಯ ಹೇರು ವಂದು ಮುಕ್ಕಾಲು ಹಾನೆ

e೧||| ಸಾಸುವೆ ಹೇರು ವಂದು ಮುಕ್ಕಾಲು ಹಾನೆ

|೪ ಯೆಳ್ಳು ಹೇರು ಕಾಲು ಬಟ್ಟಿಯು ನಾಲ್ಕು ಹಾನೆ

೧೫||| ಬೆಲ್ಲ ನಡವ ಮಣು ಹದಿನೈದು ಮುಕ್ಕಾಲು

೨॥೫ ಗೋಧಿ ಹುಡಿ ಹೇರು ಯರಡೂವರೆ ಬಟ್ಟಿಯು ಅುೈದು ಹಾನೆ

೨॥೫ ಕಡಲೆಬೇಳೆ ಹೇರು ಯರಡೂವರೆ ಬಟ್ಟಿಯು ಅುೈದುಹಾನೆ

೨॥೫ ಉದ್ದಿನ ಬೇಳೆ ಹೇರು ಯರಡೂವರೆ ಬಟ್ಟಿಯು ಅುೈದುಹಾನೆ

೧೯ ವಳ್ಳೆಂಣೆ ಹೇರು ವಂದು ಬಟ್ಟಿಯು ವಂಭತ್ತು ಹಾನೆ

॥೮ ತುಪ್ಪ ಹೇರು ಅರೆಬಟ್ಟಿಯು ಯಂಟು ಹಾನೆ

|೪ ಹೆಸರುಬೇಳೆ ಹೇರು ಕಾಲುಬಟ್ಟಿಯು ನಾಲ್ಕು ಹಾನೆ

|||೫ ಮೊಸರು ಹೇರು ಮುಕ್ಕಾಲು ಬಟ್ಟಿಯು ಅುೈದು ಹಾನೆ

೧೪೦ ತೆಂಗಿನ ಕಾಯಿ ನೂರ ನಾಲ್ವತ್ತು

೧೪ ಯಾಲಕ್ಕಿ ರುಪಾಯಿ ತೂಕ ಹದಿನಾಲ್ಕು

e೩॥ ಹಸೀಶುಂಟಿ ನಡವ ಸೇರು ಮೂರುವರೆ

e೩॥ ಅರ್ರಿಶಿನ ನಡವ ಸೇರು ಮೂರುವರೆ

|||೫ ಅಡಿಕೆ ನಡವ ಮುಕ್ಕಾಲು ಮಣು ಅುೈದು ಸೇರು

೨೦ ವೀಳ್ಯೆದೆಲೆ ಕಟ್ಟು ಯಪ್ಪತ್ತು

e೭ ಶ್ರೀಗಂಧ ನಡವ ಸೇರು ಯೇಳು

e೦||| ಅಗಿಲು ನಡವ ಸೇರು ಮುಕ್ಕಾಲು ಬೇಳೆ

e೦| ಕಚೋರ ನಡವ ಸೇರು ಕಾಲು

೧೪ ಗಂಧದ ಯಂಣೆ ರೂಪಾಯಿ ತೂಕ ಹದಿನಾಲ್ಕು

e೭ ಬುಕ್ಕಿ ಹಿಟ್ಟು ನಡವ ಸೇರು ಯೇಳು

೩೧॥೦* ದಕ್ಷಿಣೆಯ ಬಗ್ಗೆ ಸಮಾರಾಧನೆ ವಂದಕ್ಕೆ ಕಂಟಿರಾಯಿ ನಾಲ್ಕು ಅರೆ ವರಹಾದಲ್ಲು ಸಮಾರಾದನೆ ಯೇಳಕ್ಕೆ ಕಂಟಿರಾಯಿ ಮೂವತ್ತೊಂದು ಅರೆ ವರಹಾ

- ಅಂತ್ತು ಬಗೆ ಮೂವತ್ತೊಂದು

ಅಂತು ಸದರಿ ಬರೆದ ಸಾಮಾನು ಯಿದಲ್ಲದೆ ಹಸ್ರುವಾಣಿ ಬಾಳೆಯಲೆ ಅಡಿಗಬ್ಬು ಮುಂತ್ತಾಗಿ ಕೊಡಿಶಿ ಕೊಟ್ಟು ಸಮಾರಾದನೆಯಂನ್ನು ಮಾಡಿಸುತ್ತಾ ಬರುವುದು.

ದೇವಸ್ಥಾನದ ನಿತ್ಯಗಟ್ಲೆ ದೀವಟಿಗೆ ಬಗ್ಯೆ ದೇವರು ನಾಲ್ಕರ ಅಭಿಷೇಕ ಆುಾಗುತ್ತಲೇ ವರಸು ಬಗ್ಯೆ ಸಹಾ ವರುಷ ೧ಕ್ಕೆ ಕೊಡತಕ್ಕ ವಿವರ -

೧ ದೇವರು ನಾಲ್ಕರ ಅಭಿಷೇಕ ಆುಾಗುತ್ತಲೇ ವರಸೂ ಬಗ್ಗೆ ವರುಷ ೧ಕ್ಕೆ ದೇವರು ೧ಕ್ಕೆ ಪರಕಾಳೆ ಚಲುಕ ನಾಲ್ಕರಲ್ಲು ದೇವರು ನಾಲ್ಕರ ಚಲುಕ ೧೬ಕ್ಕೆ ಕಂಟಿರಾಯಿ ಅುೈದು ಹಣದ ಮೇಲೆ ಯೇಳು ಹಣದ ವಳಗೆ ಪರಕಾಳೆ ವಂದು

೧೦೦** ನಿತ್ಯಗಟ್ಲೆ ದೇವಸ್ಥಾನದಲ್ಲಿ ಗರ್ಬಗೃಹ ಆುಾರತಿ ಮುಂತ್ತಾದ ತಿಕ್ಕಿ ದುರಸ್ತು ಮಾಡಿಕೊಂಡು ನಿತ್ಯಗಟ್ಲೆ ದೀವಟಿಗೆ ಬಗ್ಗೆ ದಟ್ಟಿ ೫ಕ್ಕೆ ಕಂಟಿರಾಯಿ ಗ॥೩ ಯೆಂಟು ಹಣದ ಮೇಲೆ ಕಂಟಿರಾಯಿ ೧/೦ ವಂದು ವರಹಾದ ವಳಗೆ ವರುಷ ೧ಕ್ಕೆ ದಟ್ಟಿನೂರು ಉಭಯಂದಟ್ಟಿ ಪರಕಾಳೆ ಸಹಾ ನೂರೊಂದಂನ್ನು ಕೊಡಿಶಿಕೊಡುವದು.

ದೇವಸ್ಥಾನದಲ್ಲು ನಿತ್ಯಗಟ್ಲೆ ಅಮೃತಪಡಿ ನಂದಾದೀಪ ವಿಶೇಷಗಟ್ಲೆ ಪಂಚಪರ್ವ ಮುಂತ್ತಾದ ದೇವತಾ ಸೇವೆಯಂನ್ನು ಕಾಲತ್ರಯ ಆುಾಚರ್ರಿಶಿ ಕೊಂಡು ಯಿರತಕ್ಕ ಬಗ್ಗೆ ನೇಮಿಶಿ ಮಡಗಿ ಯಿರುವ ವಿನಿಯೋಗದ ಜನಕ್ಕೆ ವರುಷ ೧ಕ್ಕೆ ಕೊಡುವ ಸಂಬಳದ ವಿವರಾ-

೧೮/೦ ಪಾರುಪತ್ಯಗಾರ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹದಿನೆಂಟು ವರಹಾ

೧೬/೦ ಶ್ಯಾನಭೋಗ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹದಿನಾರು ವರಹಾ

೨೬/೦ ಶ್ಯಾಂತಿಗಾರ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಗ ೧೯/೦ ಹತ್ತೊಂಬತ್ತು ವರಹಾದಲ್ಲು ಜನ ೪ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಯಪ್ಪತ್ತಾರು ವರಹಾ

೧೯೮/೦ ಉಪಾದಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಗ ೧೮/೦ ಹದಿನೆಂಟು ವರಹಾದಲ್ಲು ಜನ ೧೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ನೂರತೊಂಬತ್ತೆಂಟು ವರಹಾ

---

* ನಿರೂಪದಲ್ಲಿ ವರಹದ ಚಿಹ್ನೆ ನಮೂದಿಸಿಲ್ಲ

** ನಿರೂಪದಲ್ಲಿ ೧೦೧ಕ್ಕೆ ಬದಲಾಗಿ ೧೦೦ ಎಂದು ಬರೆದಿದೆ.

೩೦|/೦ ಕಟ್ಟಿಗೆ ಚಾಕ್ರಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಗ ೧೫|/೦ ಹದಿನೈದು ವರಹಾದಲ್ಲು ಜನ ೨ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯ ಮೂವತ್ತು ವರಹಾ

೩೦|/೦ ಅಡಿಗೆ ಜನ ೧ಕ್ಕೆ ವರುಷ ೧ಕ್ಕೆ ಕಂಟಿರಾಯಿ ಗ ೧೫ |/೦ ಹದಿನೈದು ವರಹಾದಲ್ಲು ಜನ ೨ಕ್ಕೆ ವರುಷ ೧ಕ್ಕೆ ಕಂಟಿರಾಯಿ ಮೂವತ್ತು ವರಹಾ

೧೫|/೦ ಉಗ್ರಾಣದ ಚಾಕ್ರಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟೀರಾಯಿ - ಗ ೧೫|/೦ ಹದಿನೈದು ವರಹಾ

೭೫|/೦ ಪರ್ರಿ ಚಾಕ್ರಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟೀರಾಯಿ ೧೫|/೦ ಹದಿನೈದು ವರಹಾದಲ್ಲು ಜನ ೫ಕ್ಕೆ ವರುಷ ೧ಕ್ಕೆ ಕಂಟೀರಾಯಿ ಯಪ್ಪತ್ತೈದು ವರಹಾ

೯|/೦ ಓಂಕಾರೇಶ್ವರ ದೇವರಿಗೆ ನಿತ್ಯದಾ ಪ್ರತಿಯಲ್ಲು ತ್ರಿದಳ ಯಿರುವಂಥಾ ೧೧೧ ನೂರ ಹನ್ನೊಂದು ದಳ ಬಿಲ್ವ ಪತ್ರೆಯನ್ನು ಸಮರ್ಪಣೆಯಾಡು ಬಗ್ಯೆ ಬಿಲ್ವ ಪತ್ರಿ ತರುವ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟೀರಾಯಿ ವಂಭತ್ತು ವರಹಾ

೨೫|/೦ ಶ್ರುತಿಯ ಉರ್ರಿ ಜನ ೨ಕ್ಕೆ ವರುಷ ೧ಕ್ಕೆ ಕಂಟಿರಾಯಿ

೧೫|/೦ ಮಉರ್ರಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹದಿನೈದು ವರಹಾ

೧೦|/೦ ಶ್ರುತಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟೀರಾಯಿ ಹತ್ತು ವರಹಾ

೨೫|/೦ ಉಭಯಂ ಜನ ೨ ಯರಡಕ್ಕೆ ಯಿಪ್ಪತ್ತೈದು ವರಹಾ

೧೦|/೦ ಡವಣೆ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹತ್ತು ವರಹಾ

೧೦|/೦ ಡೋಳಿನ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹತ್ತು ವರಹಾ

೯|/೦ ತಾಳದ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ವಂಭತ್ತು ವರಹಾ

೯|/೦ ಶಂಕ ಜಾಗಟೆ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ವಂಬತ್ತು ವರಹಾ

೮೦|/೦ ಮೇಳ ವಂದಕ್ಕೆ ಹೆಂಣು ಜನ ೩, ಗಂಡು ಜನ ೩, ಉಭಯಂ ಜನ ೬ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ

೪೫|/೦ ಹೆಂಣು ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ೧೫|/೦ ಹದಿನೈದು ವರಹಾದಲ್ಲು ಜನ ೩ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ನಾಲ್ವತ್ತೈದು ವರಹಾ

೧೫|/೦ ಮದಳೆ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹದಿನೈದು ವರಹಾ

೧೧|/೦ ತಾಳದ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಹನ್ನೊಂದು ವರಹಾ

೯|/೦ ಶ್ರುತಿ ಜನ ೧ಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ವಂಬತ್ತು ವರಹಾ

೮೦|/೦ ಅಂತ್ತು ಯಂಬತ್ತು ವರಹಾ

೬೧೦|/೦ ಅಂತ್ತು ದೇವಸ್ಥಾನದ ಚಾಕ್ರಿ ಜನ ೪೦ ನಾಲ್ವತ್ತಕ್ಕೆ ವರುಷ ೧ಕ್ಕೆ ಸಂಬಳ ಕಂಟಿರಾಯಿ ಊರಾರು ನೂರ ಹತ್ತು ವರಹಾವಂನ್ನು ಸದರ್ರಿ ಜನಕ್ಕೆ ಸಂಬಳ ಕೊಡುವಲ್ಲು ನಾಂಣ್ಯವಟ್ಟು ಹಿಡಿಯದೆ ಅರ್ಜಿ ಬಾಜಾರದ ದಾರಣೆ ಮೇರೆ ಕೊಡಿಶಿ ಕೊಡುತ್ತಾ ಬರುವುದು.

ಅಂತ್ತು ವರುಷ ೧ ವಂದಕ್ಕೆ ಅಮೃತ ಪಡಿ ನಂದಾದೀಪ ವಿಶೇಷಗಟ್ಲೆ ಪಂಚಪರ್ವ ಮುಂತ್ತಾದಕ್ಕೆ ವಳವಿವರದ ಪ್ರಕಾರ ಜವಳಿ, ಜೇನಿಶಿ ಕ್ರಯ ನಗದು ಸಹಾ ಕಂಟೀರಾಯಿಗ ೬೧೧|/೦ ಊರಾರುನೂರ ಹನ್ನೊಂದು ವರಹಾಕ್ಕೆ ವಿವರಾ -

೮೨|/ ೨।।। ದಪ್ಪದ ಅಕ್ಕಿ ಕಂಟೀರಾಯಿ |/೧ ವಂದಕ್ಕೆ ಅಕ್ಕಿ ಹೇರುಸೇರು ೧೩ ಹದಿಮೂರಲ್ಲು ಅಕ್ಕಿ ಹೇರು ಬಟ್ಟಿ ೧೪೩।೯ ನೂರ ನಲ್ವತ್ತು ಮೂರುಕಾಲು ವಂಬತ್ತು ಹಾನೆಗೆ ಕ್ರಯ ಕಂಟೀರಾಯ ಯಂಬಂತ್ತೆರಡು ವರಹಾಲು ಯರಡು ಹಣ ಮುಪ್ಪಾಗುಮೂರುವೀಸ

|/೨ ಸಂಣ ಅಕ್ಕಿ ಕಂಟಿರಾಯಿ ಹ ೧ ವಂದಕ್ಕೆ ಹೇರುಸೇರು ೧೨ ಹಂನೆರಡರಲ್ಲು ಹೇರುಬಟ್ಟಿ ।೨ ಕಾಲು ಯರಡು ಹಾನೆಗೆ ಕ್ರಯ ಕಂಟಿರಾಯಿ ಯರಡು ಹಣ.

೬೬|/೪ ತುಪ್ಪ ಹೇರು ಸೇರು ೧ ವಂದಕ್ಕೆ ಕಂಟಿರಾಯಿ |/೧ ವಂದು ಹಣದಲ್ಲು ಹೇರು ಬಟ್ಟಿ ೮।೨ ಯಂಟೂಕಾಲು ಯರಡು ಹಾನೆಗೆ ಕ್ರಯ ಕಂಟಿರಾಯಿ ಅರವತ್ತು ಊರಾರು ವರಹಾಲು ನಾಲ್ಕು ಹಣ.

೧೦೬|/।।೦।। ।। ವಳ್ಳೆಂಣೆ ಕಂಟಿರಾಯಿ ಹ ೧ ವಂದಕ್ಕೆ ಹೇರು ಹಾನೆ ।।।೦ ಮುಕ್ಕಾಲರಲ್ಲು ಹೇರು ಬಟ್ಟಿ ೧೯।।।೯। ಹತ್ತೊಂಬತ್ತು ಮುಕ್ಕಾಲು ಬಟ್ಟಿಯು ವಂಬತ್ತು ಕಾಲು ಹಾನೆಗೆ ಕ್ರಯ ಕಂಟಿರಾಯಿ ನೂರು ಊರಾರು ವರಹಾಲು ಅೖದು ಹಣ ಅಡ್ಡು ಬೇಳೆ ಅರೆವೀಸ.

೨|/ ೩।।। ಹಾಲು ಕಂಟಿರಾಯಿ |/೧ಕ್ಕೆ ಹೇರುಹಾನೆ ೮ರಲ್ಲು ಹೇರುಬಟ್ಟಿ ೪।।।೦।। ನಾಲ್ಕು ಮುಕ್ಕಾಲು ಬಟ್ಟಿಯು ಅರೆಯುಬೇಳೆ ಹಾನೆಗೆ ಕ್ರಯ ಕಂಟಿರಾಯಿ ಯರಡು ವರಹಾಲು ಮೂರು ಹಣ ಮುಪ್ಪಾಗು ವೀಸ

೨|/೩।।। ಮೊಸರು ಕಂಟಿರಾಯಿ ೧ ವಂದಕ್ಕೆ ಹೇರು ಹಾನೆ ೮ ಯಂಟರಲ್ಲು ಹೇರುಬಟ್ಟಿ ೪।।।೦।। ನಾಲ್ಕು ಮುಕ್ಕಾಲು ಬಟ್ಟಿಯು ಅರೆಯು ಬೇಳೆ ಹಾನೆಗೆ ಕ್ರಯ ಕಂಟಿ ರಾಯಿ ಯರಡು ವರಹಾಲು ಮೂರುಹಣ ಮುಪ್ಪಾಗು ವೀಸ

೪|/।।೪। ಬೆರ್ರಿಕೆ ಮೊಸರು ಕಂಟಿರಾಯಿ ಹ ೧ವಂದಕ್ಕೆ ಹೇರು

ಹಾನೆ ೮ ಯಂಟರಲ್ಲು ಹೇರುಬಟ್ಟಿ ೯।।೫ ವಂಬತ್ತು ಮುಕ್ಕಾಲು ಬಟ್ಟಿಯು ಉೈದು ಹಾನೆಗೆ ಕ್ರಯ ಕಂಟಿರಾಯಿ ನಾಲ್ಕು ವರಹಾಲು ವಂಬತ್ತು ಹಣ ಹಾಗು ಬೇಳೆ.

೨▽।।೨।।◡ ಜೇನು ಕಂಟಿರಾಯಿ ▽೧ ವಂದಕ್ಕೆ ಹೇರುಹಾನೆ ೧ ವಂದರಲ್ಲು ಹೇರುಬಟ್ಟಿ ।।೭।।◡ ಅರೆಬಟ್ಟಿಯು ಯೇಳು ಅರೆಯುವೀಸ ಹಾನೆಗೆ ಕ್ರಯ ಕಂಟಿರಾಯಿ ಯರಡು ವರ ಹಾಲು ಯೇಳು ಹಣ ಅಡ್ಡ ವೀಸ

೧▽೩।।।೦।। ಕಬ್ಬಿನರಸ ಕಂಟಿರಾಯಿ ಹ ೧ ವಂದಕ್ಕೆ ಹೇರುಹಾನೆ ೨ ಯರಡಲ್ಲು ಹೇರುಬಟ್ಟಿ ।।೭।। ಅರೆಬಟ್ಟಿಯು ಯೇಳು ಅರೆಯು ವೀಸ ಹಾನೆಗೆ ಕ್ರಯ ಕಂಟಿರಾಯಿ ವಂದು ವರಹಾಲು ಮೂರು ಹಣ ಮುಪ್ಪಾಗು ಅರೆವೀಸ

೨೦▽೨।।೦ ಕೈಯಂಣ್ಣೆ ಕಂಟಿ ▽೧ ವಂದಕ್ಕೆ ಹೇರುಹಾನೆ ।।೦ ಅರೆಯಲ್ಲು ಹೇರು ಬಟ್ಟಿ ೨।।೧। ಯರಡೂವರೆ ಬಟ್ಟಿಯು ವಂದೂ ಕಾಲು ಹಾನೆಗೆ ಕ್ರಯ ಕಂಟಿರಾಯಿ ಯಿಪ್ಪತ್ತು ವರಹಾಲು ಯರಡು ಹಣ ಅಡ್ಡ

೯▽೦ ತೆಂಗಿನಯೆಂಣೆ ಕಂಟಿ ▽೧ ವಂದಕ್ಕೆ ಹೇರುಹಾನೆ ।।೦ ಅರೆಯಲ್ಲು ಹೇರುಬಟ್ಟಿ ೧೫ ವಂದು ಬಟ್ಟಿಯು ಉೈದು ಹಾನೆಗೆ ಕ್ರಯ ಕಂಟಿರಾಯಿ ವಂಬತ್ತು ವರಹಾ

೯▽।।೪।◡। ಉಪ್ಪು ಕಂಟಿ ▽೧ ವಂದಕ್ಕೆ ಹೇರುಹಾನೆ ೩ ಮೂರಲ್ಲು ಹೇರುಬಟ್ಟಿ ೭।೮ ಯೇಳು ಕಾಲು ಬಟ್ಟಿಯು ಯಂಟು ಹಾನೆಗೆ ಕ್ರಯ ಕಂಟಿರಾಯಿ ವಂಬತ್ತು ವರಹಾಲು ವಂಬತ್ತು ಹಣ ಹಾಗು ವೀಸು ಕಾಣೆ

೧೩▽೧◡। ತೊಗ್ರಿಬೇಳೆ ಕಂಟಿ ▽೧ ವಂದಕ್ಕೆ ಹೇರುಹಾನೆ ೨।।೦ ಯರಡೂವರೆಯಲ್ಲು ಹೇರುಬಟ್ಟಿ ೮೮ ಯಂಟು ಬಟ್ಟಿಯು ಯಂಟು ಹಾನೆಗೆ ಕ್ರಯ ಕಂಟಿರಾಯಿ ಹದಿಮೂರು ವರಹಾಲು ಹಣ ವಂದು ಮೂರು ವೀಸುಕಾಣೆ.

▽೨ ಸಾಸುವೆ ಕಂಟಿ▽೧ ವಂದಕ್ಕೆ ಹೇರು ಸೆ ೧೩ ಹದಿಮೂರಲ್ಲು ಹೇರು ಬಟ್ಟಿ ।೩ ಕಾಲು ಬಟಿಯು ಮೂರು ಹಾನೆಗೆ ಕ್ರಯ ಕಂಟಿರಾಯಿ ಯರಡು ಹಣ.

▽।।೩◡ ಯೇಳು ಕಂಟಿ ▽೧ ವಂದಕ್ಕೆ ಹೇರು ಸೆ ೫ ಉೈದರಲ್ಲು ಹೇರು ಬ ।।೦।। ಅರೆಬಟ್ಟಿಯು ಅರೆಹಾನೆಗೆ ಕ್ರಯ ಕಂಟಿರಾಯಿ ಯೆಂಟ್ಟುಹಣ ಮೂರು ವೀಸ

▽।।೧।।◡ ಶೀಗೆಹುಡಿ ಕಂಟಿ ಹ ೧ ವಂದಕ್ಕೆ ಹೇರುಹಾನೆ ೪ ನಾಲ್ಕರಲ್ಲು ಹೇರುಬಟ್ಟಿ ।।೬।। ಅರೆಬಟ್ಟಿಯು ಊರುವರೆ ಹಾನೆಗೆ ಕ್ರಯ ಕಂಟಿರಾಯಿ ಊರು ಹಣ ಅಡ್ಡಬೇಳೆ

೧೩▽।।೪।।।◡ ಉದ್ದಿನಬೇಳೆ ಕಂಟಿ ▽೧ ವಂದಕ್ಕೆ ಹೇರು ಸೆ ೫ ಉೈದರಲು ಹೇರುಬಟ್ಟಿ ೮।।೯।। ಯಂಟು ಅರೆಬಟ್ಟಿಯು ವಂಬತ್ತುವರೆ ಹಾನೆಗೆ ಕ್ರಯ ಕಂಟಿ ಹದಿಮೂರು ವರಹಾಲು ವಂಬತ್ತು ಹಣ ಮುಪ್ಪಾಗು ವೀಸ

೪▽।।೧।◡। ಹೆಸ್ರುಬೇಳೆ ಕಂಟಿ ▽೧ ವಂದಕ್ಕೆ ಹೇರು ಸೆ ೫ ಉೈದರಲ್ಲು ಹೇರು ಬಟಿ ೨।।೬ ಯರಡು ಮುಕ್ಕಾಲು ಬಟ್ಟಿಯು ಊರು ಹಾನೆಗೆ ಕ್ರಯ ಕಂಟಿರಾಯಿ ನಾಲ್ಕು ವರಹಾಲು ಊರು ಹಣ ಹಾಗು ಬೇಳೆಯು ಕಾಣೆ

೮▽೧।।।೦ ಕಡ್ಲೆಬೇಳೆ ಕಂಟಿ ▽೧ ವಂದಕ್ಕೆ ಹೇರು ಸೆ ೫ ಉೈದರಲ್ಲು ಹೇರುಬಟಿ ೫೪।। ಉೈದು ಬಟಿಯು ನಾಲ್ಕು ವರೆ ಹಾನೆಗೆ ಕ್ರಯ ಕಂಟಿರಾಯಿ ಯೆಂಟು ವರಹಾಲು ಹಣ ಮುಪ್ಪಾಗ

▽೧ ಹುರಿಗಡಲೆ ಕಂಟಿ ▽೧ ವಂದಕ್ಕೆ ಹೇರು ಸೆ ೪ ನಾಲ್ಕರಲ್ಲು ಹೇರು ಹಾ ೨ ಯರಡಕ್ಕೆ ಕ್ರಯ ಕಂಟಿರಾಯಿ ವಂದು ಹಣ

೪▽।।೦।।◡ ಗೋಧಿ ಹುಡಿ ಕಂಟಿ▽೧ ವಂದು ಹಣಕ್ಕೆ ಹೇರು ಸೆ ೫ ಉೈದರಲ್ಲು ಹೇರು ಬ ೨।।।೪ ಯರಡು ಮುಕ್ಕಾಲು ಬಟ್ಟಿಯು ನಾಲ್ಕು ಹಾನೆಗೆ ಕ್ರಯ ಕಂಟಿರಾಯಿ ನಾಲ್ಕು ವರಹಾಂಲು ಉೈದು ಹಣ ಅಡ್ಡ ವೀಸ

▽೦।।◡। ಮೆಂತ್ಯ ಕಂಟಿ ▽೧ ವಂದಕ್ಕೆ ಹೇರು ಸೆ ೫ ಉೈದರಲ್ಲು ಹೇರು ಹಾನೆ ೧।।। ವಂದು ಮುಕ್ಕಾಲಿಗೆ ಕ್ರಯ ಕಂಟಿರಾಯಿ ಅಡ್ಡ ಮೂರು ವೀಸುಕಾಣೆ

೨೫▽೧।।।◡।।। ಬೆಲ್ಲ ನಡುಮಣು ೧ ವಂದಕ್ಕೆ ಕಂಟಿರಾಯಿ ▽೩।। ಮೂರು ಹಣ ಅಡ್ಡದಲ್ಲು ನಡುಮಣು ೭೧।।।೯ ಯೆಂಪ್ಪೊತ್ತೊಂದು ಮುಕ್ಕಾಲು ಮಣು ವಂಬತ್ತು ಸೇರ್‍ರಿಗೆ ಕ್ರಯ ಕಂಟಿರಾಯಿ ಯಿಪ್ಪತ್ತೈದು ವರಹಾಲು ಹಣ ಮುಪ್ಪಾಗು ಬೇಳೆಯು ಮುಕ್ಕಾಣೆ

೮▽೩।।◡।। ಅಡಿಕೆ ನಡು ಮಣು ೧ ವಂದಕ್ಕೆ ಕ್ರಯ ಕಂಟಿ ಗ ।।೩ ಯೆಂಟು ಹಣದಲ್ಲು ನಡುಮಣು ೧೦।೮ ಹತ್ತು ಕಾಲು ಮಣು ಯೆಂಟು ಸೇರ್‍ರಿಗೆ ಕ್ರಯ ಕಂಟಿರಾಯಿ ಯೆಂಟು ವರಹಾಲು ಮೂರು ಹಣ ಅಡ್ಡ ವೀಸು, ಅರೆವೀಸ

೧▽।।೪◡ ಯಾಲಕ್ಕಿ ನಡು ಸೇರು ೧ ವಂದಕ್ಕೆ ಕಂಟಿರಾಯಿ▽೩ ಮೂರು ಹಣದಲ್ಲು ನಡವ ಸೇರು ೬।◡ ಊರಾರೂ ಕಾಲು ಬೇಳೆಗೆ ಕ್ರಯ ಕಂಟಿರಾಯಿ ವಂದು ವರಹಾವು ವಂಬತ್ತು ಹಣ ಬೇಳೆ

೮▽೦◡ ಸಕ್ರೆ ನಡುವ ಮಣು ೧ ವಂದಕ್ಕೆ ಕ್ರಯ ಕಂಟಿರ ಗ ೧।।೧ ಹದಿನಾರು ಹಣದಲ್ಲು ನಡವ ಮಣು ೫೦।। ಉೈದು ಮಣು ಅರೆ ಸೇರ್‍ರಿಗೆ ಕ್ರಯ ಕಂಟಿರಾಯಿ ಯಂಟು ವರಹಾಲು ಮೂರು ವೀಸ

೨೨▽೪ ಕರ್ಪೂರ ನಡವ ಮಣು ೧ ವಂದಕ್ಕೆ ಕ್ರಯ ಕಂಟೀರಾಯಿ ಗ ೧೬▽೦ ಹದಿನಾರು ವರಹಾದಲ್ಲು ನಡುಮಣು ೧।೬ ವಂದೂಕಾಲು ಮಣು ಊರು ಸೇರ್‍ರಿಗೆ ಕ್ರಯ ಕಂಟಿರಾಯಿ ಯಿಪ್ಪತ್ತೆರೆಡು ವರಹಾಲು ನಾಲ್ಕು ಹಣ

೪▽೨ ಸಾಂಬ್ರಾಣಿ ನಡವ ಮಣು ೧ ವಂದಕ್ಕೆ ಕ್ರಯ ಕಂಟಿ, ೬▽೦ ಊರು ವರಹಾದಲ್ಲು ನಡವ ಮಣು ।।೮ ಅರೆ

ಮಣು ಯೆಂಟು ಸೇರ್‍ರಿಗೆ ಕ್ರಯ ಕಂಟಿರಾಯಿ ನಾಲ್ಕು ವರಹಾಲು ಯೆರಡು ಹಣ

॥೧ ಕುಂಕುಮ ಕಂಟಿರಾಯಿ ೧ ವಂದು ಹಣಕ್ಕೆ ನಡವಸೇರು ೧ ವಂದರಲ್ಲು ನಡವ ಸೇರು ೬ ಉಾರಕ್ಕೆ ಕ್ರಯ ಕಂಟಿರಾಯಿ ಉಾರು ಹಣ

೧೯/೩ ಊದುಬತ್ತಿ ನಡವ ಮಣು ೧ ವಂದಕ್ಕೆ ಕ್ರಯ ಕಂಟಿರಾಯಿ ಗ ೪/೦ ನಾಲ್ಕು ವರಹಾದಲ್ಲು ನಡವ ಮಣು ೪॥೩ ನಾಲ್ಕು ಮುಕ್ಕಾಲು ಮಣು ಮೂರು ಸೇರಿಗೆ ಬತ್ತಿ ೧೪೪೦ ಕ್ಕೆ ಕ್ರಯ ಹತ್ತೊಂಬತ್ತು ವರಹಾಲು ಮೂರು ಹಣ

೧೪/೪। ಅರಳೆ ನಡವ ಮಣು ೧ ವಂದಕ್ಕೆ ಕ್ರಯ ಕಂಟಿರಾಯಿ ೩/೦ ಮೂರು ವರಾಹದಲ್ಲು ನಡವ ಮ ೪॥೨॥ ನಾಲ್ಕು ಮುಕ್ಕಾಲು ಮಣು ಯರಡುವರೆ ಸೇರ್‍ರಿಗೆ ಕ್ರಯ ಕಂಟಿರಾಯಿ ಹದಿನಾಲ್ಕು ವರಹಾಲು ನಾಲ್ಕು ಹಣ ಹಾಗು ಬೇಳೆ

೧೧/೩॥ ॥ ಮೆಣಸಿನಕಾಯಿ ನಡುವ ಮಣು ೧ಕ್ಕೆ ಕ್ರಯ ಕಂಟಿರಾಯಿ ಗ ॥೩ ಯಂಟು ಹಣದಲ್ಲು ನಡುಮಣು ೧೪೪೮ ಹದಿನಾಲ್ಕು ಮಣು ಯೆಂಟು ಸೇರ್‍ರಿಗೆ ಕ್ರಯ ಕಂಟಿರಾಯಿ ಹನೊಂದು ವರಹಾಲು ಮೂರು ಹಣ ಅಡ್ಡ ವೀಸು ಅರೆ ವೀಸ

೨/೪॥ ॥ ವಳ್ಳೆಮೆಣಸು ನಡು ಮಣು ೧ ವಂದಕ್ಕೆ ಕ್ರಯ ಕಂಟಿರಾಯಿ ಗ ೨/೦ ಯರಡು ವರಹಾದಲ್ಲು ನಡುಮಣು ೧೯॥ ವಂದು ಮಣು ವಂಬತ್ತು ಮುಕ್ಕಾಲು ವೀಸ ಸೇರ್‍ರಿಗೆ ಕ್ರಯ ಕಂಟಿರಾಯಿ ಯರಡು ವರಹಾಲು ನಾಲ್ಕು ಹಣ ಮುಪ್ಪಾಗು ಬೇಳೆಯು ಅರೆವೀಸ

೧/೦। ಜೀರ್‍ರಿಗೆ ನಡುಸೇರು ೧ ವಂದಕ್ಕೆ ಕ್ರಯ ಕಂಟಿರಾಯಿ /೦॥ ಮುಪ್ಪಾಗದಲ್ಲು ನಡುಮಣು ।೩॥ ಕಾಲುಮಣು ಮೂರು ಮುಕ್ಕಾಲು ಮೂರು ವೀಸ ಸೇರ್‍ರಿಗೆ ಕ್ರಯ ಕಂಟಿರಾಯಿ ವಂದು ವರಹಾಲು **ಹಾಗು** ಮೂರು ವೀಸು ಕಾಣಿ

॥೧ ಕೊತಂಬ್ರಿನ ಮಣು ೧ ವಂದಕ್ಕೆ ಕ್ರಯ ಕಂಟಿರಾಯಿ ಗ ॥೦ ಐದು ಹಣ ನಡವ ಮಣು ೧೯೮॥ ವಂದು ಮಣು ಯೆಂಟೂವರೆ ಸೇರ್‍ರಿಗೆ ಕ್ರಯ ಕಂಟಿರಾಯಿ ಉಾರು ಹಣ ವೀಸ

/೪॥ ॥ ಅರ್‍ರಿಶಿನ ನಡುಮಣು ೧ ವಂದಕ್ಕೆ ಕ್ರಯ ಕಂಟಿರಾಯಿ /೪ ನಾಲ್ಕು ಹಣದಲ್ಲು ನಡವ ಮಣು ೧೯೮॥ ವಂದು ಮಣು ಯಂಟೂವರೆ ಸೇರ್‍ರಿಗೆ ಕ್ರಯ ಕಂಟಿ ರಾ ನಾಲ್ಕು ಹಣ ಮುಪ್ಪಾಗು ವೀಸು ಅರೆವೀಸ

೪/೬॥ ಹುಣಸೇಹಣ್ಣು ನಡುಮಣು ೧ಕ್ಕೆ ಕ್ರಯಕಂಟಿ /೨ ಯರಡು ಹಣದಲ್ಲು ನಡುಮಣು ೨೩॥೦ ಯಿಪ್ಪತ್ತ ಮೂರು ಕಾಲು ಮಣುವಿಗೆ ಕ್ರಯ ಕಂಟಿರಾಯಿ ನಾಲ್ಕು ವರಹಾಲು ಉಾರು ಹಣ ಅಡ್ಡ

*೪॥೧। ಶ್ರೀಗಂಧ ನಡುಮಣು ೧ ವಂದಕ್ಕೆ ಕ್ರಯ ಕಂಟಿ ಗ ೧॥೦ ಹದಿನೈದು ಹಣದಲ್ಲು ನಡುಮ ೩೬೩॥ ಮೂರು ಮಣು ಮೂರುವರೆ ಸೇರ್‍ರಿಗೆ ಕ್ರಯ ಕಂಟಿರಾಯಿ **ನಾಲ್ಕು ವರಹಾಲು** ಆರು ಹಣ **ಹಾಗು** ವೀಸ

/೪। ಅಗಿಲುನ । ಮಣು ೧ ವಂದಕ್ಕೆ ಕ್ರಯ ಕಂಟಿರಾಯಿ ಗ ೨ /೦ ಯರಡು ವರಹಾದಲ್ಲು ನಡುಸೇರು ೮॥ ಯೆಂಟು ಅರೆಯು ಬೇಳೆಗೆ ಕ್ರಯ ಕಂಟಿರಾಯಿ ನಾಲ್ಕು ಹಣ **ಹಾಗು** ವೀಸ

/೩ ರಕ್ತ ಚಂದಣ ನಡ ಮ ೧ ವಂದಕ್ಕೆ ಕ್ರಯ ಕಂಟಿರಾ ಗ ೨ /೦ ಯರಡು ವರಹಾದಲ್ಲು ನಡು ಸೇರು ೬ ಉಾರಕ್ಕೆ ಕ್ರಯ ಕಂಟಿರಾಯಿ ಮೂರು ಹಣ

/೧೯೦॥ ಹಶೀಶುಂಟಿ ನ। ಮಣ ವಂದಕ್ಕೆ ಕ್ರಯ ಕಂಟಿಹ ೨॥ ಯರಡು ಹಣ ಅಡದಲ್ಲು ನ। ಮಣು ।೬॥ ಕಾಲು ಮಣು ಆರುವರೆಯು ವೀಸಕ್ಕೆ ವಂದು ಹಣ ಅರೆ ವೀಸ

/೩॥ ಕಚೋರ ನಡು ಸೇರು ೧ ವಂದಕ್ಕೆ ಕ್ರಯ ಕಂಟಿರಾಯಿ ಹಣದಲ್ಲು ನಡುಸೇರು ೩॥ ಮೂರು ವರೆಯು ಬೇಳೆ ಸೇರ್‍ರಿಗೆ (ಶೆ?)ಶ್ವರ (ಕಂ)ಟಿರಾಯಿ ಮೂರು ಹಣ ಅಡ್ಡ ಬೇಳೆ

೪/೦ ಗಂಧದ ಯಂಣೆ ರೂಪಾಯಿ ತೂಕ ೧ ವಂದಕ್ಕೆ ಕ್ರಯ ಕಂಟಿರಾಯಿ /೧ ವಂದು ಹಣದಲ್ಲು ರೂಪಾಯಿ ತೂಕ ೪೦ ನಾಲ್ವತ್ತಕ್ಕೆ ಕ್ರಯ ಕಂಟಿರಾಯಿ ನಾಲ್ಕು ವರಹಾ

೧॥೪॥೦* ಬುಕ್ಕಿ ಹಿಟ್ಟು ನಡುಸೇರು ೧ ವಂದಕ್ಕೆ ಕ್ರಯ ಕಂಟಿರಾಯಿ /೧ ವಂದು ಹಣದಲ್ಲು ನಡುಮಣು ।೯॥೦ ಕಾಲುಮಣು ವಂಬತ್ತು ಅರೆ ಸೇರ್‍ರಿಗೆ ಕ್ರಯ ಕಂಟಿರಾಯಿ ವಂದು ವರಹಾಲು ವಂಬತ್ತು ಹಣ ಅಡ್ಡ

*೧೭॥೨। ತೆಂಗಿನಕಾಯಿ ಕಂಟಿರಾಯಿ /೧ ವಂದಕ್ಕೆ ೧೬ ಹದಿನಾರಲ್ಲು ತೆಂಗಿನಕಾಯಿ ೨೮೩೯ ಯರಡು ಸಾವಿರದ ಯಂಟು ನೂರ ಮುವತ್ತೊಂಬತ್ತಕ್ಕೆ ಕ್ರಯ ಕಂಟಿರಾಯಿ ಹದಿನೇಳು ವರಹಾಲು ಯೇಳು ಹಣ **ಹಾಗು** ಮೂರುವೀಸ

೧೩/೧। ಬಾಳೆ ಹಂಣು ೧೦೦೦ ವಂದು ಸಾವಿರಕ್ಕೆ ಕ್ರಯ ಕಂಟಿರಾಯಿ /೪ ನಾಲ್ಕು ಹಣದಲ್ಲು ಬಾಳೆಹಂಣು ೩೨,೮೩೨ ಮೂವತ್ತೆರಡು ಸಾವಿರದ ಯಂಟುನೂರ ಮೂವತ್ತೆರಡಕ್ಕೆ ಕ್ರಯ ಕಂಟಿರಾಯಿ ಹದಿಮೂರು ವರಹಾಲು ಹಣ **ಹಾಗು** ಬೇಳೆ

---

* ನಿರೂಪದಲ್ಲಿ ವರಹದ ಚಿಹ್ನೆ ನಮೂದಿಸಿಲ್ಲ.

*೨॥೨॥ ◡ ಯಳನೀರು ಕಂಟಿರಾಯಿ ೧ ವಂದಕ್ಕೆ ೧೬ ಹದಿನಾರಲ್ಲು ಯಳನೀರು ೪೪೧ ನಾನೂರ ನಲವತ್ತೊಂದಕ್ಕೆ ಕ್ರಯ ಕಂಟಿರಾಯಿ ಯರಡು ವರಹಾಲು ಯೇಳು ಹಣ ಅಡ್ಡ ವೀಸ

▽೨ ನಿಂಬೆಹಂಣು ಕಂಟಿರಾಯಿ ▽೧ ವಂದಕ್ಕೆ ೮೦೦ ಯೆಂಟನೂರಲ್ಲು ನಿಂಬೆಹಂಣು ೧೭೬೪ ಸಾವಿರದ ಯೇಳುನೂರ ಅರವತ್ತು ನಾಲ್ಕಕ್ಕೆ ಕ್ರಯ ಕಂಟಿರಾಯಿ ಯರಡು ಹಣ ಮೂರು ವೀಸಾ

▽೩॥೦ ◡ ॥ ವೀಳ್ಯೆದೆಲೆ ಕಟ್ಟು ಕಂಟಿರಾಯಿ ▽೧ ವಂದಕ್ಕೆ ಕಟ್ಟು ೧೬ ಹದಿನಾರ್‍ರಲ್ಲು ಕಟ್ಟು ೫೬೧॥ ಐನೂರ ಅರವತ್ತೊಂದುವರೆಗೆ ಕ್ರಯ ಕಂಟಿರಾಯಿ ಮೂರು ಅರೆ ವರಹಾಲು ವೀಸು ಅರೆವೀಸಾ

▽೩ ಬಿಳಿ ಕಾಗದ ಪಂಚ ಗ ೨೦ ಯಿಪ್ಪತ್ತಕ್ಕೆ ಕ್ರಯ ಕಂಟಿರಾಯಿ ಮೂರು ಹಣ

೧▽೦ ಕರಡೆ ಕಾಗದ ಗಡ್ಡೆ ೨ ಯರಡಕ್ಕೆ ಕ್ರಯ ಕಂಟಿರಾಯಿ ವಂದು ವರಹ

*೧೬॥೦ ಬಚ್ಚಕಾನಿ ದೋತ್ರ ಜೋಡಿ ೧೧ ಹನ್ನೊಂದಕ್ಕೆ ಕ್ರಯ ಕಂಟಿರಾಯಿ ಹದಿನಾರುವರೆ ವರಹಾ.

*೭॥೦ ದೋತ್ರ ಜೋಡಿ ೧೫ ಹದಿನೈದಕ್ಕೆ ಕ್ರಯ ಕಂಟಿರಾಯಿ ಯೇಳು ಅರೆ ವರಹಾ

॥೨ ಪರಕಾಳೆ ೧ ವಂದಕ್ಕೆ ಕ್ರಯ ಕಂಟಿರಾಯಿ ಯೇಳು ಹಣ

॥೦ ದಪ್ಪದ ಹಚ್ಚಡ ೧ ವಂದಕ್ಕೆ ಕ್ರಯ ಕಂಟಿರಾಯಿ ಐದು ಹಣ

೧೮▽೦ ದಟ್ಟಿ ೧೦೦ ನೂರಕ್ಕೆ ಕ್ರಯ ಕಂಟಿರಾಯಿ ಹದಿನೆಂಟು ವರಹಾ

*೩೧॥೦ ದಕ್ಷಿಣೆ ಬಗ್ಯೆ ಕಂಟಿರಾಯಿ ಮೂವತ್ತೊಂದುವರೆ ವರಹಾ

೬೧೧▽೦ ಅಂತ್ತು ಜವಳು ಜೇನಿಶಿ ಕ್ರಯ ನಗದು ಸಹಾ ಕಂಟಿರಾಯಿ ಆರನೂರ ಹಂನೊಂದು ವರಹಾ

ಓಂಕಾರೇಶ್ವರ ದೇವರ್‍ರಿಗೆ ನಿತ್ಯಗಟ್ಲೆಯಲ್ಲು ತ್ರಿದಳ ಇರುವಂಥಾ ೧೧೧ ನೂರಹಂನೊಂದು ದಳ ಬಿಲ್ವಪತ್ರೆ ದೂರ್ವೆ, ತುಂಬೆಹೂಲು ಮುಂತ್ತಾದ ನಾನಾ ತರದ ಪುಷ್ಪವಂನ್ನು ಸಮರ್ಪಣೆ ಮಾಡಿಸುತ್ತಾ ಬರುವದು। ಯಿದಲ್ಲದೆ ಶ್ರಾವಣ ಮಾಸ ಯೀ ಯರಡು ತಿಂಗಳು ನಿತ್ಯಂಪ್ರತಿಯಲ್ಲು ಹೇರಳವಾಗಿ ಬಿಲ್ವಪತ್ರೆ ಯಂನ್ನು ಸಮರ್ಪಣೆ ಮಾಡಿಸುವುದು.

ಯೀ ದೇವಸ್ಥಾನಕ್ಕೆ ಅತಿಥಿಯಾಗಿ ಬಂದಂಥಾ ಸ್ಥಳ ಪರಸ್ಥಳದ ಬ್ರಾಂಹ್ಮರ್‍ರಿಗೆ ಮೂರು ಹೊತ್ತು ಊಟದ ಬಗ್ಗೆ ಅಕ್ಕಿ ಜೀನಿಸು ಮುಂತ್ತಾಗಿ ಸಾಮಾನಂನ್ನು ಅರಮನೆ ಉಗ್ರಾಣದಿಂದ ಕೊಡಿಶಿ ಕೊಡುವುದು.

ಯೀ ದೇವಸ್ಥಾನದ ಚಿನ್ನ ಬೆಳ್ಳಿ ನಗ, ಕಂಚು, ತಾಂಮ್ರ, ಹಿತ್ತಾಳೆ ಮುಂತ್ತಾದ ಪಂಚಲೋಹದ ನಗಗಳು ಹಳತಾಗಿ ವಡಕಾದಂಥಾ ನಗಕ್ಕೆ ಬದಲು ಹೊಸ್ತಾಗಿ ಅರಮನೆ ತರದಿಂದ ನಗಗಳಂನ್ನು ಮಾಡಿಸಿ ಕೊಡುತ್ತಾ ಬರುವದು.

ಅಂತ್ತು ವರುಷ ವಂದಕ್ಕೆ ಓಂಕಾರೇಶ್ವರ, ಗಣಾಧೀಶ್ವರ, ಕುಮಾರೇಶ್ವರ, ಶ್ರೀ ನಂದೀಶ್ವರ ದೇವರ್‍ರಿಗೆ ಸಹಾ ಆಚಂದ್ರಾರ್ಕವಾಗಿ ಶಾಶ್ವಿತದಿಂದ ನಡೆದು ಬರತಕ್ಕ ಬಗ್ಗೆ ನಿತ್ಯಗಟ್ಲೆ ಅಮೃತಪಡಿ, ನಂದಾದೀಪ ವಿಶೇಷ ಗಟ್ಲೆ ಪಂಚಪರ್ವ, ಸಂಬಳಗಾರ ಮುಂತ್ತಾದ ಜನಕ್ಕೆ ಸಹ ಅಪ್ಪಣೆ ಕೊಡಿಶಿ ಇರುವ ಕಂಟಿರಾಯಿ ಗ ೧೨೨೧▽೦ ವಂದು ಸಾವಿರದ ಇಂನ್ನೂರ ಇಪ್ಪತ್ತೊಂದು ವರಹಾಕ್ಕೆ ಹಣದಿಂದ ಜೇನಿಶಿ ಜವಳಿ, ಮುಂತ್ತಾದ್ದರ್‍ರಿಂದ ಉತ್ತಾರವಂನ್ನು ಧರ್ಮಸಂಗ್ರಹದ ಬಗ್ಗೆ ಅರಮನೆ, ದಿವಾನ್ ಕಚೇರ್‍ರಿ, ಹಸ್ತಾಂತ್ರ ದಿಂದ ಪ್ರತಿ ವತ್ಸರದಲ್ಲು ಕೊಡಿಶಿ ಕೊಟ್ಟು ಸೇವಾರ್ಥವಾಗಿ ವಿನಿಯೋಗಕ್ಕೆ ನೇಮಿಶಿ ಯಿರುವಂತ್ತಾ ವರ್‍ರಿಂದ ಕಾಲತ್ರಯದಲ್ಲು ಶಾಸ್ತ ಪ್ರಕಾರ ದೇವತಾ ಸೇವೆಯಂನ್ನು ಸಾಂಗವಾಗಿ ಮಾಡಿಸುತ್ತಾ ದಿನಂಪ್ರತಿ ವಿಚಾರ್‍ರಿಶಿ ಕೊಂಡು ವರುಷಂ ಪ್ರತಿ ದೇವಸ್ಥಾನದ ಲೆಖ್ಖ ಪಕ್ಕ ಮುಂತಾದ್ದಂನ್ನು ಜಡತಿ ತೆಗೆದುಕೊಳ್ಳುತ್ತಾ ಬರುವದಾಗಿ ಯಂಬ ತಸ್ತೀಕು ನಿರೂಪಕ್ಕೆ ಅಪ್ಪಣೆ ಪ್ರಕಾರ ಕಲಿವರ್ಷ ೪೯೨೨ ನೇ ವಿಕ್ರಮ ಸಂವತ್ಸರದ ನಿಜ ಜೇಷ್ಠ ತಾರ್‍ರೀಕು ೨೨ನೇ ಭಾನುವಾರ ಬರೆದಾತ ಕರಣಿಕ ಲಿಂಗಪ್ಪೈಯ

ಶ್ರೀ ವಿ. ಲಿಂಗರಾಜೇಂದ್ರ ವಡೆಯರವರು

---

* ನಿರೂಪದಲ್ಲಿ ವರಹದ ಚಿಹ್ನೆಯ ನಮೂದಿಲ್ಲ.

(ಈ ನಿರೂಪವನ್ನು ನೋಡಲು ನೆರವಾದವರು ಕೊಡಗು ದೇವಾಲಯಗಳ ದತ್ತಿ ನಿಧಿ ಸಮಿತಿಯ ಮೇನೇಜರ್ ಭಾಗಮಂಡಲದ ಶ್ರೀ ಎಸ್. ಎಸ್. ಸಂಪತ್ಕುಮಾರ್ ಅವರು. ಈ ನಿರೂಪದ ೫ನೇ ಪುಟವು ಕಂಡುಬರಲಿಲ್ಲ. ಅಂತಾಗಿ ಆ ಭಾಗವು ಇಲ್ಲಿ ನಿರೂಪಿತವಾಗಿಲ್ಲ. ದತ್ತಿ ನಿಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ಸದಸ್ಯರು ನೀಡಿದ ನೆರವಿಗೆ ಲೇಖಕ ಆಭಾರಿ. ಈ ನಿರೂಪವನ್ನು ಅಂದವಾಗಿ ಬರೆದುಕೊಟ್ಟು ಸಹಕರಿಸಿದ ಶ್ರೀಮತಿ ಎಂ. ಜಿ. ಪದ್ಮ ವಿರೂಪಾಕ್ಷಯ್ಯ ಅವರಿಗೂ ಕೃತಜ್ಞತೆಗಳು.)

ಡಾ|| ಬಿ. ನಂಜುಂಡಸ್ವಾಮಿ*

ಬಿಜ್ಜಾವರದ ಚನ್ನಬಸಪ್ಪಗೌಡ-ಸಂಪಾದನೆ ಶಿವಲಿಂಗಸ್ವಾಮಿಗಳು ಮತ್ತು ಮುಮ್ಮಡಿಕೃಷ್ಣರಾಜರ ಪ್ರತ್ಯೇಕ ದಾಖಲೆಗಳು

ಐತಿಹಾಸಿಕ ದಾಖಲೆಗಳ ಸಂಗ್ರಹ, ಸಂಪಾದನೆ, ಅಧ್ಯಯನ ಅಷ್ಟು ಪ್ರೋತ್ಸಾಹಕರವಾಗಿ ನಡೆಯದೆ ಇರುವ ಇಂತಹ ಸಂದರ್ಭದಲ್ಲಿ ಸಹ ನಾಡುನುಡಿಗೆ ಸಂಬಂಧಪಟ್ಟ ದಾಖಲೆಗಳು, ಹಲವರ ಆಸಕ್ತಿಯಿಂದ ಪ್ರಕಟವಾಗುತ್ತಾ ಬಂದಿವೆ. ಆಯಾ ಪ್ರದೇಶದಲ್ಲಿ ಆಸಕ್ತ ವಿದ್ವಾಂಸರು ಮುಂದುವರಿಸಬೇಕಾದ ಮುಖ್ಯ ಕೆಲಸ ಇದಾಗಿದೆ.

ಮಹಾನಾಡ ಪ್ರಭು ಬಿಜ್ಜಾವರದ ಚನ್ನಬಸಪ್ಪ ಗೌಡರಿಗೆ ಸಂಪಾದನೆ ಶಿವಲಿಂಗ ಸ್ವಾಮಿಗಳು ಬರೆದ ಪತ್ರ

ತುಮಕೂರು ಪರಿಸರದ "ಮಧುಗಿರಿ-ಬಿಜ್ಜಾವರ" ಅರಸು ಮನೆತನಕ್ಕೆ ಸಂಬಂಧಪಟ್ಟ ಈ ದಾಖಲೆ : ಹೈದರ್, ಟಿಪ್ಪು, ಮರಾಠರು, ಬ್ರಿಟಿಷರಿಂದ ಸಾಕಷ್ಟು ಕಂಗಾಲಾದ ಈ ಮನೆತನ, ಕಡೆಯ ಪಾದದಲ್ಲಿ ಎಂತಹ ಸಂಕಷ್ಟವನ್ನು ಎದುರಿಸಿದೆ ಅನ್ನುವುದನ್ನು ತಿಳಿಸುತ್ತದೆ. ತಾವೇ ಕಟ್ಟಿ ಬೆಳೆಸಿದ ಭಕ್ತಿ, ಶ್ರದ್ಧೆಯಿಂದ ನಡೆದುಕೊಂಡ ಮಠದ ಒಡವೆಗೆ ಆಸೆ ಪಟ್ಟದ್ದು, ಅದನ್ನು ಮಠದ ಪರಂಪರೆಯ ಸ್ವಾಮಿಗಳು ನವಿರಾಗಿ, ಪರಿಸ್ಥಿತಿಯನ್ನು ವಿವರಿಸಿದ ಪತ್ರ, ಚನ್ನಬಸಪ್ಪ ಗೌಡನ ಸಂಕಷ್ಟ ಪರಿಸ್ಥಿತಿ, ಸಹ ಇದರಿಂದ ವೇದ್ಯವಾಗುತ್ತದೆ.

ಸಂಪಾದನೆ ಶಿವಲಿಂಗಸ್ವಾಮಿಗಳವರು ಪತ್ರವನ್ನು ರತ್ನಗಿರಿಯಿಂದ ಬರೆದಿದ್ದಾರೆ. ಪತ್ರದಲ್ಲಿ ಮಠದ ಹೆಸರು, ಊರು ಮತ್ತು ಕಾಲ ಸ್ಪಷ್ಟವಾಗುವುದಿಲ್ಲ. ಸಿದ್ಧಾಪುರದಲ್ಲಿ ಗದ್ದುಗೆಯಾಗಿರುವ ಬೋಳಬಸವೇಶ್ವರರೆ ಸಂಪಾದನೆ ಬೋಳಬಸವೇಶ್ವರರು ಎಂಬುದನ್ನು [ನೋಡಿ: *ಸತ್ಯಶುದ್ಧ ಕಾಯಕ* ಸಂಪುಟ ೮ ಸಂಚಿಕೆ (೧-೪)] ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದೇನೆ. ಆ ಊಹೆಯ ಮೇಲೆ ಸಂಪಾದನೆ ಶಿವಲಿಂಗಸ್ವಾಮಿಗಳು ಸಿದ್ಧಾಪುರದ ಬೋಳಬಸವೇಶ್ವರರ ಪರಂಪರೆಯವರು ಆಗಿರಬಹುದು. ಇದನ್ನು ಇನ್ನಷ್ಟು ಸ್ಪಷ್ಟಪಡಿಸಲು "ಸಿದ್ಧಾಪುರದ ಬೋಳಬಸವೇಶ್ವರರ ದೇವಾಲಯದ" ಅರ್ಚಕರ ಹತ್ತಿರ ಇರುವ ದಾಖಲೆಗಳನ್ನು ಪರಿಶೀಲಿಸಿದರೆ ವಿಷಯ ಸ್ಪಷ್ಟವಾಗಬಹುದು.

ಮಧುಗಿರಿ ಚರಿತ್ರೆಗಳನ್ನು ಮೂಲದಾಖಲೆಗಳಲ್ಲಿ ಅಧ್ಯಯನ ಮಾಡಿ ಸಾಕಷ್ಟು ಲೇಖನ ಬರೆದ ಹಿರಿಯರಾದ ದಾಸಪ್ಪನವರ ಕಾವ್ಯ ನಾಮ ಉಮಾಪತಿ. ಫೆಬ್ರವರಿ ೧೯೩೪ರ ಜಯಕರ್ನಾಟಕದಲ್ಲಿ ಬರೆದ "ಮಧುಗಿರಿ ಮಹಾನಾಡ ಪ್ರಭುಗಳ ಚರಿತ್ರೆ" ಆ ಲೇಖನದಲ್ಲಿ ಚನ್ನಬಸಪ್ಪ ಗೌಡನ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ.

ಈ ದೊಡ್ಡ ಕಣ್ಣಯ್ಯಗೌಡನು ೨೫ ವರ್ಷಕಾಲ ಆಳಿ ತೀರಿಹೋದ ಮೇಲೆ, ಚನ್ನಬಸಪ್ಪ ಗೌಡನು ಪಟ್ಟಕ್ಕೆ ಬಂದು ಒಂಬತ್ತು ತಿಂಗಳಾಗಲು, ರತ್ನಗಿರಿಯ ರಾಜರಿಗೆ ಆಶ್ರಯಕೊಟ್ಟರೆಂಬ ನೆವದಿಂದ ಟಿಪ್ಪುಸುಲ್ತಾನರು ಫೌಜು ತೆಗೆದುಕೊಂಡು ಬಂದು ದೊಡ್ಡ ಮಾಲೂರ ಬಳಿ ಇಳಿಸಿ ಮಿಡಿಗೇಶಿ ಠಾಣ್ಯ ಹಾಕಿಕೊಂಡರು. ಕ್ರಿ. ಶ. ೧೭೯೦ರಲ್ಲಿ ಲಾರ್ಡ್ ಕಾರನ್ ವಾಲೀಸ್ ಸಾಹೇಬರು ಶ್ರೀರಂಗಪಟ್ಟಣದ ಮೇಲೆ ಹೊರಟ್ಟಿದ್ದಾರೆಂದು ತಿಳಿದು ಚನ್ನಬಸಪ್ಪಗೌಡನು ಅವರ ಮರೆಬಿದ್ದನು. ಅವರು "ನಿಮ್ಮ ಸಂಸ್ಥಾನಕ್ಕೆ ಹೋಗಿ ಸ್ಥಳ ಸ್ವಾಧೀನ ಮಾಡಿಕೊಂಡಿರಿ" ಎನ್ನಲು ಮತ್ತೆ ಮಿಡಿಗೇಶಿಗೆ ಬಂದು ಏಳು ತಿಂಗಳಾದ ಮೇಲೆ ಶ್ರೀರಂಗಪಟ್ಟಣದಲ್ಲಿ ಕುಂಪಿಣಿಯವರಿಗೂ ಸುಲ್ತಾನರಿಗೂ ಸಲ್ಲಾ ಆದ ವರ್ತಮಾನ ಕೇಳಿ ಇನ್ನು ಉಳಿಗಾಲವಿಲ್ಲವೆಂದು ಸಂಸ್ಥಾನ ಬಿಟ್ಟು ಕುಟುಂಬ ಸಮೇತ ವೇಮುಲ ಪಾಳೆಯಗಾರರ ಹತ್ತಿರ ಹೋಗಿ ಒಂಬತ್ತು ತಿಂಗಳಿದ್ದು, ಅಲ್ಲಿಂದ ಕಣಿವೆ ಕೆಳಗಿನ ಮೊಗಲ್ ವೆಂಕಟಗಿರಿಗೆ ಹೋಗಿ ಕೃಷ್ಣಗಿರಿ ಬಳಿ ಕರ್ನಲ್ ರೀಟ್ಸ್ ಸಾಹೇಬರಿರಲು ಅವರನ್ನು ಕಂಡು ತನ್ನ ದುರವಸ್ಥೆಯನ್ನು ಹೇಳಿಕೊಂಡನು. ಆತನು "ಇಷ್ಟರಲ್ಲೇ ನಮ್ಮ ದಂಡು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಲು ಬರುತ್ತೆ, ನಾನು ಬೆಂಗಳೂರಿಗೆ ಬರುತ್ತೇನೆ.

* ಪಂಡಿತ್ ತಾರಾನಾಥ್ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ತುಮಕೂರು - ೫೭೨ ೧೦೨.

ನೀವು ನಿಮ್ಮ ಸಂಸ್ಥಾನಕ್ಕೆ ಹೋಗಿ, ಫೌಜ ಜಮಾಯಿಸಿ ಬೊಂಬಾಯಿ ಕಡೆಯಿಂದ ಬರುವ ನಮ್ಮ ದಂಡಿಗೆ ರಸದು ಮುಂತಾದವು ಸರಿಯಾಗಿ ಬರುವಂತೆ ನೋಡಿಕೊಳ್ಳಿ ಎಂದು ಹೇಳಿದರು. ಅಲ್ಲಿಂದ ಸ್ಥಳಕ್ಕೆ ಬರಬೇಕೆಂದು ವೆಂಕಟಗಿರಿಗೆ ಬಂದು ಸೇರಲು ರೀಟ್ಸ್ ಸಾಹೇಬರಿಂದ ಗವರ್ನರ್ ಜನರಲ್ ಸಾಹೇಬರು ಕೃಷ್ಣಗಿರಿಗೆ ಬರುತ್ತಾರೆ; ನೀವು ಬಂದಲ್ಲಿ ಭೇಟಿ ಮಾಡಿಸಿ ಜವಾಬ್ ಕೊಡಿಸುತ್ತೇನೆ" ಎಂದು ಉತ್ತರ ಬರೆದರು.

ಅದರಂತೆ ಕೃಷ್ಣಗಿರಿಗೆ ಹೋಗಲು ಜನರಲ್ ಸಾಹೇಬರು ಶ್ರೀರಂಗಪಟ್ಟಣಕ್ಕೆ ಹೊರಟು ಹೋಗಿದ್ದರು. ರೀಟ್ಸ್ ಸಾಹೇಬರು "ನಾವು ಹಿಂದಣೆಯಿಂದ ನಿಮ್ಮ ವಿಚಾರ ತಿಳಿಸಿ ಇಸ್ತಿಹಾರ್ ನಾಮ ಕಳುಹಿಸುತ್ತೇವೆ; ನೀವು ನಿಮ್ಮ ಸ್ಥಳಕ್ಕೆ ಹೋಗಿ ಎಂದರು. ಅದರಂತೆ ಚನ್ನಬಸಪ್ಪಗೌಡನು ಈ ಸೀಮೆಗೆ ಬಂದು ಬೇಡ ತ್ತೂರಿನಲ್ಲಿ ನಿಂತನು. ಅಲ್ಲಿಗೆ ಜನರಲ್ ಹ್ಯಾರಿಸ್ ಸಾಹೇಬರಿಂದ "ಟಿಪ್ಪು ಸುಲ್ತಾನರು; ಕುಂಪಣಿ, ನಿಜಾಮ, ಮರಾಟಿ ಈ ಮೂರು ಜನಗಳಲ್ಲಿ ದ್ವೇಷ ಮಾಡಿ ಪಾದ್‌ಷಹಾ ಎಂದು ಬಿರುದು ಪಡೆದಿದ್ದಾರೆ. ಅವರನ್ನು ಸೋಲಿಸಲು ಮೂರು ಸರ್ಕಾರದವರೂ ದಂಡು ಕೂಡಿಸಿ ನಮ್ಮ ವಶಕ್ಕೆ ಕೊಟ್ಟಿದ್ದಾರೆ. ನಿಮಗೆ ಯಾವ ತೊಂದರೆಯನ್ನು ಕೊಡುವುದಿಲ್ಲ; ನೀವು ಶತ್ರುಗಳ ಬಾತಮಿ ತರಿಸಿ ಕಳುಹಿಸುವುದಲ್ಲದೆ ಸೈನ್ಯಕ್ಕೆ ಸರಬರಾಯಿ ವಗೈರೆ ಒದಗಿಸತಕ್ಕದ್ದು" ಎಂದು ತಾ।। ೯ನೇ ಮಾರ್ಚಿ ೧೭೯೯ರಲ್ಲಿ ಉತ್ತರ ಬಂತು. ಅದರಂತೆ ನಡೆದುಕೊಂಡು ಕಾದು ಕುಳಿತಿರಲು, ರೀಟ್ಸ್ ಸಾಹೇಬರಿಂದ "ನಮ್ಮ ಕುಂಪಣಿ ಇಲಾಖೆ ತಪ್ಪಿ ರಾಜ್ಯ ಯಾವತ್ತೂ ಮೈಸೂರಿಗೆ ಸೇರಿ ಹೋಯಿತು. ನೀವು ಅಲ್ಲಿರುವ ಕೆಲಸವಿಲ್ಲ ಬೆಂಗಳೂರಿಗೆ ಬರುವುದು" ಎಂದು ಪತ್ರ ಬಂತು. ಅದೇ ಮೇರೆಗೆ ಗೌಡನು ಬೆಂಗಳೂರಿಗೆ ಹೋಗಲು ಅವರು "ನಿಮ್ಮ ವಕೀಲರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಡಿ, ಅಲ್ಲಿ ಹೇಳಿ ಸನ್ನದು ಮಾಡಿಸಿಕೊಡುತ್ತೇವೆ" ಎಂದರು. ಅದರಂತೆ ಗೌಡನು ಕಪ್ಪಯ್ಯ, ಶಿವರಾಮಯ್ಯ ಎಂಬ ವಕೀಲರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಲು ರೀಟ್ಸ್ ಸಾಹೇಬರು ಚನ್ನಪಟ್ಟಣಕ್ಕೆ ಹೋಗಿದ್ದರು. ಈ ಸುತ್ತಾಟದಲ್ಲಿ ನಿರಾಶೆ ಹೊಂದಿ ಚನ್ನಬಸಪ್ಪ ಗೌಡನು ತೀರಿಹೋದನು. ಇಷ್ಟು ವಿಷಯ ಚನ್ನಬಸಪ್ಪಗೌಡರ ಬಗ್ಗೆ ತಿಳಿದುಬರುತ್ತದೆ.

ಸಂಪಾದನೆ ಶಿವಲಿಂಗ ಸ್ವಾಮಿಗಳ ನಿರೂಪ

ತನ್ನ ಜೀವನದಲ್ಲಿ ಮಧುಗಿರಿ ಪಾಳೆಪಟ್ಟು ಉಳಿಸಲು ಸಾಕಷ್ಟು ಕಷ್ಟಪಟ್ಟ ಚನ್ನಬಸಪ್ಪಗೌಡನಿಗೆ ಹಣದ ಮುಗ್ಗಟ್ಟು ಬಹಳ ಇದ್ದು, ನಮ್ಮ ವಂಶಸ್ಥರೆ ಮಠಕ್ಕೆ ಹಿಂದೆ ಕೊಟ್ಟಿದ್ದು ಎಂದು ತನ್ನ ಅನುಚರರಿಂದ ಹಸುಗಳನ್ನು ತರಿಸಿರಬೇಕು. ಅದಕ್ಕೆ ಸ್ವಾಮಿಗಳು ಚನ್ನಬಸಪ್ಪಗೌಡನಿಗೆ ಈ ನಿರೂಪವನ್ನು* ಸ್ವಲ್ಪ ಕಠಿಣವಾಗಿ ಬರೆದಿದ್ದಾರೆ.

ಶ್ರೀ ಸಾಂಬಶಿವ

ಶ್ರೀಮತ್ಪರತತ್ವಪರಮಾನಂದ ಪರಂಜ್ಯೋತಿ ಪರಿಪೂರ್ಣ ಅಪ್ರಮೆಯ ಅನುಪಮ ಅಪ್ರತರ್ಕ್ಯ ಮಹಾಗ್ನ್ಯಾನ ಪ್ರಭಾಮಯ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರ ಣ ಸಮಾಧ್ಯಷ್ಟಾಂಗ ಯೋಗ ಯೋಗೀಶ್ವರ ದೇಹೆಂದ್ರಿಯ ಮನಃ ಪ್ರಾಣಾದ್ಯಂತಃ ಕರಣಗುಣ ಧರ್ಮಕರ್ಮ ನಿರ್ಲೆಪನ ಸಕಲಭುವನಾಂತರ ನಿತ್ಯನಿರ್ಮಲಸ್ವರೂಪ ಭಕ್ತಹೃತ್ಕಮಲ ಕರ್ಣಿಕಾಂತರ್ವಾ ಸಮತ್ತ ಮಧುಕರಾಯಮಾನೆಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗಾಂಗಿತಾಂಗ ಗುರುಲಿಂಗ ಜಂಗಮ ಪ್ರಸಾದ ಪಾದೋದಕಾದ್ಯಷ್ಟಾವರಣ ಪಂಚಾಚಾರ ಪ್ರತಿಷ್ಠಾಸ್ಥಾಪ ನಾಚಾರ್ಯರಾದ ಸಂಪಾದನೆ ಶಿವಲಿಂಗಸ್ವಾಮಿಗಳವರ್‍ರು

ಅಸ್ಮದತ್ಯಂತ ಪ್ರಿಯಭಕ್ತನಾದ ಶ್ರೀಮನ್ಮಹಾನಾಡುಪ್ರಭು ಬಿಜ್ಜವರದ ಮುಮ್ಮಡಿ ಚಿಕ್ಕಪ್ಪಗೌಡರ ಚಂನಬಸಪ್ಪಗೇ ತ್ರಿಸಂಧ್ಯಾ ಶಿವಪೂಜಾಕಾಲತ್ರಯದಲ್ಲಿಯು ಧನಕನಕ ವಸ್ತುವಾಹನ ಪ್ರಾಜ್ಯರಾಜ್ಯ ಸಮೃದ್ಧಿಯಾಗಲೀ ಯಂದು ಹರಶಿ ಕಳುಯಿಸ್ತ ಆಶೀರ್ವಾದ ಸಾಂಪ್ರತ್ತವು ನಾವು ನಿಂನ ಶ್ರೆಯೊಭಿವೃದ್ಧಿಯಂನು ಕುರಿತು ತಪೊನಿಷ್ಠತೆಯಿಂದಾ ರತ್ನಗಿರಿಯಲ್ಲಿ ಯಿಧೆವೆ। ನಂಮ್ಮ ಮಠದ ದನಗಳು ಕೆಲವು ಪುಟೇನಹಳೀಯಲ್ಲಿ ಬಿಡಿಶಿಯಿತ್ತು। ಯಲಕೂರು ಯಿಂದಾ ಮಂದಿ ಆ ಪ್ರಾಂತ್ಯಕೆ ಸ್ವಾರಿ ಹೋಗಿ ಯಿದ್ದಾಗ್ಯೆ ಆ ಬಗ್ಗೆ ಜೀವದನಗಳಂನು ತೆಗೆದುಕೊಂಡು ಬಂದುಯಿಧಾರೆಂಬುದಾಗಿ ಶೃತವಾಗಿಯಿರುವದರಿಂದಾ ಮಠಕೆ ಸಕಲೋಪಯೋಗ್ಯವಾಗಿ ಯಿರುವಧೇನುಗಳು ಮುಂತಾದ್ದು ಆಗಿಯಿರುವದರಿಂದಾ ಯಿ ವಿವರ ನಿನಗೆ ತಿಳಿದು ಯಿಧೆಯೊ ಯಿಲ್ಲವೊ ಯಂಬದಾಗಿ ಯಿಗ ಶ್ರೀಮುಖವಂನು ವೀರ್‍ರೈನ ಸಂಗಡ ಕಳುಯ್ಸಿಯಿಧೀತ್ತು ನೀನು ಪ್ರಾಗ್ನನಾದ್ದರಿಂದಾ ವಿಶೇಷ ಬರಸತ್ಕದುಯಿಲ್ಲ ಮಠದವಡವೆಯಂನು ವಿಚಾರ ಮಾಡಿ ಕಳೂಯ್ಸಿಕೊಟು ಶ್ರೆಯಸ್ಸಂಪಾದನೆ ಮಾಡಿಕೊಂಡು ಯಿರುವದು*.

ಇಂತಿ ಅನೇಕ ಆಶೀರ್ವಾದಾಃ

ತೋಂಟದ ಸಿದ್ಧಲಿಂಗೇಶ್ವರರ ಸೇವೆಗೆ - ಮುಮ್ಮಡಿ ಕೃಷ್ಣರಾಜ ಒಡೆಯರವರು ಕೊಟ್ಟ ನಿರೂಪ

ತೋಂಟದ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ಮಠವನ್ನು ಸ್ವಾಮಿ ನಿರ್ವಿಕಲ್ಪ ಸಮಾಧಿಗೆ ದಯಮಾಡಿಸಿದ ನಂತರ

* (ಈ ನಿರೂಪದ ಅಧ್ಯಯನದಲ್ಲಿ ಮಾರ್ಗದರ್ಶನ ಮಾಡಿದ ಶ್ರೀ ಟಿ. ಕೆ. ನಂಜುಂಡಪ್ಪನವರಿಗೆ ಧನ್ಯವಾದಗಳು.)

ಚಿಟ್ಟಿಗದೇವರ ಮುಖಾಂತರ ದಾನಿವಾಸ ದೊರೆಗಳು ತಮ್ಮ ಸೇವೆಯನ್ನು ಸಲ್ಲಿಸಿ ಶಾಸನವನ್ನು ಸಹ ಬರೆಸಿದ್ದಾರೆ. ತೋಂಟದ ಸಿದ್ಧಲಿಂಗೇಶ್ವರರಿಗೆ ಸಂಬಂಧಪಟ್ಟ ಪುರಾಣ, ಕಾವ್ಯ, ಸಾಂಗತ್ಯ ಚಂಪೂ ಗ್ರಂಥಗಳು ಹಾಗು ದೇವಸ್ಥಾನದಲ್ಲಿ ಉಪಲಬ್ಧವಿದ್ದ ಶಾಸನವು ಪ್ರಕಟವಾಗಿವೆ.

ಹೈದರಾಲಿ - ಟಿಪ್ಪುವಿನ ಆಡಳಿತದ ನಂತರ ಮೈಸೂರು ಸಂಸ್ಥಾನದ ಆಡಳಿತದ ಧರ್ಮಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕೈಗೆ ಬಂದ ಮೇಲೆ ನಾಡಿನ ನಾನಾ ಪರಂಪರೆಯ ಮಠ.ದೇವಸ್ಥಾನಗಳಿಗೆ, ವಿದ್ವಾಂಸರಿಗೆ, ಧರ್ಮದತ್ತಿಗಳನ್ನು ಕೊಟ್ಟು ಪೋಷಣೆ ಮಾಡುತ್ತಾ ಬಂದರು.

ಮುಮ್ಮಡಿಯವರು, ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಸೇವೆಗೆ ಕೊಟ್ಟ ನಿರೂಪಗಳ ಉಲ್ಲೇಖವನ್ನು ತೋಂಟದ ಸಿದ್ಧಲಿಂಗೇಶ್ವರ ದೇವಾಲಯದ ಲಿಂ॥ ಶ್ರೀ ನಂಜಪ್ಪಯ್ಯನವರು ರಚಿಸಿದ "ಸ್ಥಳ-ಪುರಾಣ" ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್‌ರವರು ಕ್ರಿ. ಶ. ೧೮೧೮ ಮತ್ತು ೧೮೨೩ರ ಕಾಲಮಾನದ ನಿರೂಪದ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಪೂರ್ಣ ಪಾಠ ಕೊಟ್ಟಿಲ್ಲ.

ಎಡೆಯೂರು ಗ್ರಾಮಠಾಣ ದಫ್ತರ್‌ನಲ್ಲಿ - ೧೮೨೨, ಚಿತ್ರಭಾನು ಸಂವತ್ಸರದ ಕಾರ್ತಿಕ ಶು ೧೨, ಕುಷ್ಕಿ, ಮಹಾರಾಜ ರಾಜ ಕೃಷ್ಣರಾಜಒಡೆಯರು ಕೊಟ್ಟಿರುತ್ತಾರೆ (ಗ್ರಾಮಠಾಣ Record ನಲ್ಲಿ ಸ್ಪಷ್ಟವಾಗಿ ಬರೆದಿದೆ. ಆದರೆ ಮೂಲ ಸನ್ನದ್ದು ಸಿಕ್ಕಿಲ್ಲ) Jangama Inam ಚಿತ್ರಮಠದ ಗುರುಶಿದ್ದಯ್ಯನ ಮಗ ಶಿದ್ವಿರೈಯ್ಯಗೆ ಶಾಲಿವಾಹನ ಶಕವರ್ಷ ೧೭೬೮, ಇದರ ಇಂಗ್ಲೀಷ್ ಕ್ಯಾಲೆಂಡರ್ ದಿನಾಂಕ ಕ್ರಿ. ಶ. ೧೮೨೨ರ ನವೆಂಬರ್ ೨೬ರ ಮಂಗಳವಾರ.

ಧರ್ಮಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕೊಟ್ಟ ೧೮೧೮, ೧೮೨೨, ೧೮೨೩ನೇ ವರ್ಷದ ನಿರೂಪಗಳಲ್ಲಿ ೧೮೨೩ರ ನಿರೂಪ ಮಾತ್ರ ಲಭ್ಯವಿದ್ದು, ಆ ನಿರೂಪ, ತೋಂಟದ ಸಿದ್ಧಲಿಂಗೇಶ್ವರರ ಬಗ್ಗೆ ಮೈಸೂರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಇದ್ದ ಭಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಕೈಯಲ್ಲಿ ತಯಾರು ಮಾಡಿದ ಒರಟು ಕಾಗದದ ಮೇಲೆ ರಾಗಿ ಮಸಿಯಿಂದ ಬರೆದಿರುವ ಈ ನಿರೂಪದ ಶಿರೋಭಾಗದಲ್ಲಿ ಮುದ್ರೆ ಇದ್ದು ಅದರಲ್ಲಿ ಸೂರ್ಯ - ಚಂದ್ರರ ಚಿನ್ಹೆ ಇದೆ. "ಶ್ರೀ ಚಾಮರಾಜವಡೇರ ತನುಜ ಕೃಷ್ಣರಾಜವಡೇರ್" ಎಂದಿದೆ, ಮುದ್ರೆಯ ಕೆಳಭಾಗ ಕೃಷ್ಣರಾಜವಡಯರವರ್ರು ಎಂದು ಲಿಖಿಸಲ್ಪಟ್ಟಿದೆ. ಹದಿನೇಳು ಸಾಲಿನ ಈ ಪತ್ರದಲ್ಲಿ ಐದನೇ ಸಾಲು ಲುಪ್ತವಾಗಿದೆ. ನೂರಾರು ವರ್ಷ ಪತ್ರವನ್ನು ಮಡಚಿ ಇಟ್ಟಿದ್ದರಿಂದ ಆ ಸಾಲು ತ್ರುಟಿತವಾಗಿದೆ, ಓದಲು ಸಾಧ್ಯವಿಲ್ಲವಾಗಿದೆ. ನಿರೂಪದ ಪಾಠವನ್ನು ಮುಂದೆ ನೀಡಿದೆ. ಶಾಲಿವಾಹನ ಶಕ ೧೭೪೫ ಸ್ವಭಾನು ಸಂವತ್ಸರ ಭಾದ್ರಪದ ಶು ೭ ಗುರುವಾರ ಈ ಸನ್ನದಿನ ಇಂಗ್ಲೀಷ್ ದಿನಾಂಕಕ್ಕೆ ಹೊಂದಿಕೊಳ್ಳುತ್ತದೆ.

☀ ☽

ಶ್ರೀ ಚಾಮರಾಜ ವಡೇರ ತನುಜ ಕೃಷ್ಣರಾಜ ವಡೇರ್
ಕೃಷ್ಣರಾಜವಡಯರವರ್ರು

ಸ್ವಭಾನು ಸಂವತ್ಸರದ ಭಾದ್ರಪದ ಶು ೭ ಗುರುವಾರದಲು ಶ್ರೀಮತ್ತು ಕುಣಿಗಿಲ ಆಮೀಲ ವೆಂಕಟಾಚಲೈಯ ಬರಶೀ ಕಳುಹಿದ ನಿರೂಪ ಅದಾಗೀ ತಾಲುಕು ಮಜಕೂರ್ರು ಯಡೆಯೂರ್ರು ಶಿಧೇಶ್ವರ ದೇವರಿಗೆ ತಿಂಗಳು ವಂದಕೆ ಗು/೧೦ ಲು ಸಾಲ್ಲಿನಾ ಕಂಟಿರಾಯಿ ೧೨/೦ ತಸದಿಕು ಯಿರುವದರಲ್ಲಿ ಪಡಿತರದೀಪಾರಾದನೆ (ಸಲುವಾಗಿ ವರುಷಕೆ ಸಾಲಿಯಾನಾ) x x x x x x ತಸರಿಕು ಶಿವಾಯಿ ಖುಷಿಕಿ ಗು ೮॥೨ ಜಮಾ ಸರ್ವಮಾನ್ಯವಾಗಿ ನಡೆಸತಕದಕೆ ಅಪಣೆ ಕೊಡಿಶೀ ಯಿಧಿತ್ತು ಸಾಗುವಳಿ ಆಗಿಯಿರು ವಾರದ ಭೂಮಿ ಆಗಲ್ಲಿ ಯಿ ದೇವಸ್ತಾನದ ಯಿಲಾಖೆಯವರು ಮಾಡಿರು ಕಂದಾಯದ ಭೂಮಿ ಆಗಲ್ಲಿ ಸದರ ಮೇರೆ ಕಂಟಿರಾಯಿ ಯಂಟುವರಹಾವ್ರೂ ಯೇಳು ಹಣಕೆ ಸರಿಯಾಗಿ ವಿಂಗಡಿಶೀ ಕೊಟು ಯೀ ಭೂಮಿಗಳಲ್ಲಿಂಗಮುದ್ರೆ ೮॥೨* ಶಿಲಾಪ್ರತಿಷ್ಠೆ ಮಾಡಿಶಿ ಕೊಟು ಯಿ ಸ್ವಭಾನು ಸಂ॥ ಆರಭ್ಯ ಯಿ ನಾಮತಿ ದಾಖಲು ಮಾಡಿ ಹರಸಲು ತಾಜಾ ಸಂನದುವುಜೂರು ಮಾಡದೆ ಯಿ ದೆವಸ್ತಾನದ ಪಡಿತರ ದೀಪಾರದನೆ ಮುಂತ್ತಾದಕೆ ಸರ್ವಮಾನ್ಯವಾಗಿ ನಡಶೀಕೊಂಡು ಬರ್ರುವದು ಯಿೂ ಸಂನದು ನಕಲು ಶಿರಸ್ತೆದಾರ ದಫ್ತರಕೆ. ಬರಶೀ ಅಸಲುದೆವಸ್ತಾನಕೆ ಕೊಡವದು ತಾರಿಕು ೧೧ನೆ ಮಾಹೆ ಶಪಟಂಬರ ಸನ್ ೧೮೨೩ನೇ ಇಸವಿ ಖತ್ತಾ ಕೃಷ್ಣಪಾ ಮುನಿಷಿ ಹಜೂರ್ರು ಸಾಲ್ಲಿಯಾನಾ ಕಂಟಿರಾಯಿ ಯಂಟುವರಹಲು ಕೊಟ್ಟು ಹುಂಡಿಯ ಭೂಮೀ ನಡಶಿದೆ ಬಿಟ್ಟು ಯಿರ್ರುವ ರುಜು ಶ್ರೀಕೃಷ್ಣ

---

* ೭ ಎಂದು ಇರಬೇಕಾದದ್ದು ಸಂಖ್ಯೆ ೨ ಎಂದು ತಪ್ಪಾಗಿ ಲಿಖಿಸಲ್ಪಟ್ಟಿದೆ. ಈ ನಿರೂಪವನ್ನು ಓದಲು ಸಹಾಯ ಮಾಡಿದ ಬಿ. ರಾಜಶೇಖರಪ್ಪನವರಿಗೆ, ನಿರೂಪದ ಮೂಲ ಪ್ರತಿಯನ್ನು ಅವಲೋಕನೆಗೆ ಅವಕಾಶ ಮಾಡಿಕೊಟ್ಟ ಸಿದ್ಧಲಿಂಗೇಶ್ವರರ ಅರ್ಚಕ ವಂಶಸ್ಥರಾದ ಶ್ರೀ ಸಿದ್ಧಲಿಂಗಪ್ಪನವರಿಗೆ ಧನ್ಯವಾದಗಳು.

[(ನಿರೂಪಗಳಲ್ಲಿ ಯಂಟುವರಹ ಯೇಳು ಹಣ ಎಂಬುದನ್ನು ೮/॥೨ ಎಂದು ಅಥವಾ ಚಿಹ್ನೆರಹಿತವಾಗಿ ೮॥೨ ಎಂದು ಬರೆವ ಪದ್ಧತಿ ಇದೆ. ಇಲ್ಲಿ ಒಳಗಿನ ಪ್ರತಿ ಗೀಟಿನ ಮೌಲ್ಯ ೨೧/೨ ಹಣವಾಗಿ ಎರಡು ಗೀಟಿಗೆ ೫ ಹಣ ಮತ್ತು ೨ ಹಣ ಸೇರಿ ಯೇಳು ಹಣ ಆಗುತ್ತದೆ. ಈ ದೃಷ್ಟಿಯಿಂದ ನಿರೂಪದಲ್ಲಿ ದಾಖಲಾಗಿರುವ ಬಗೆ ೮॥೨ ಸರಿಯಾಗಿರುವಂತಿದೆ. - (ಸಂ.)]

ಆರ್. ಕಾವಲಮ್ಮ*

ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೈಫಿಯತ್ತು

ಬ್ರಿಟೀಷರು ಭಾರತಕ್ಕೆ ತೃಪ್ತಿಕರವಾದ ಆಡಳಿತವನ್ನು ನೀಡದಿದ್ದರೂ ಕೆಲವು ಬ್ರಿಟೀಷ್ ವಿದ್ವಾಂಸರು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗೆ ಸಲ್ಲಿಸಿರುವ ಅಪಾರ ಸೇವೆಯನ್ನು ಮರೆಯುವಂತಿಲ್ಲ. ಅಂತಹ ಹಲವು ವಿದ್ವಾಂಸರಲ್ಲಿ ಲೆಫ್ಟಿನೆಂಟ್ ಕರ್ನಲ್ ಮೆಕೆಂಜಿಯವರು ಪ್ರಮುಖರು. ಭಾರತೀಯ ಸಂಸ್ಕೃತಿ ಮತ್ತು ಜಾನಪದದ ಬಗ್ಗೆ ಆಸಕ್ತಿಯನ್ನು ಹೊಂದಿದ್ದ ಇವರು ಭಾರತದಾದ್ಯಂತ ಸಂಚರಿಸಿ, ಸಮೀಕ್ಷೆ ನಡೆಸಿ ಅನೇಕ ಮಾಹಿತಿಗಳನ್ನು ಸುಮಾರು ೨೦೭೦ ಕೈಫಿಯತ್ತುಗಳ ಮೂಲಕ ಸಂಗ್ರಹಿಸಿದ್ದಾರೆ. ಅಪರೂಪದ ಮಾಹಿತಿಗಳನ್ನೊಳಗೊಂಡ ಇಂತಹ ಒಂದು ಕೈಫಿಯತ್ತು ಮೈಸೂರು ಅರಮನೆ ಗ್ರಂಥಾಲಯಕ್ಕೆ ಗ್ರಂಥ ಪರಾಮರ್ಶೆಗೆಂದು ಹೋದಾಗ ಕಂಡುಬಂದಿತು. ೫೦೦ಕ್ಕೂ ಹೆಚ್ಚು ದೊಡ್ಡ ದೊಡ್ಡ ಹಾಳೆಗಳಲ್ಲಿ ರಾಗಿ ಮಸಿಯಿಂದ ಸುಂದರ ಶೈಲಿಯ ಇಂಗ್ಲೀಷ್ ಭಾಷೆಯಲ್ಲಿರುವ ಈ ಕಡತವು, ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ ದಾಖಲೆಯಾಗಿದೆ. ಇದರಲ್ಲಿ ಪುಟ ಸಂಖ್ಯೆ ೩೨೫ ರಿಂದ ೩೫೬ರ ವರೆಗಿನ ೩೧ ಪುಟಗಳು (೩೫೬ನೇ ಪುಟದಲ್ಲಿ ಕೇವಲ ಒಂದು ಸಾಲು ಮಾತ್ರವಿದೆ) ಮಧುಗಿರಿ ಮತ್ತು ಮಿಡಿಗೇಶಿಗೆ ಸಂಬಂಧಿಸಿವೆ.

ಮಧುಗಿರಿಯ ಬಗ್ಗೆ ಸಿ. ವಿ. ಬೋರಯ್ಯ ಬ್ರಾಹ್ಮಿನ್ ಎಂಬುವರು ನೀಡಿದ ಮಾಹಿತಿಯನ್ನು ೬ನೇ ಸೆಪ್ಟೆಂಬರ್ ೧೮೦೧ರಲ್ಲಿ ದಾಖಲಿಸಿದ್ದಾರೆ. ಮಿಡಿಗೇಶಿಯ ಬಗ್ಗೆ ತಿರುಪತಯ್ಯ ಶಾನುಭೋಗ ಎಂಬುವರು ನೀಡಿದ ಮಾಹಿತಿಯನ್ನು ೭ನೇ ಅಕ್ಟೋಬರ್ ೧೮೦೧ರಲ್ಲಿ ದಾಖಲಿಸಲಾಗಿದೆ. ಈ ಕೈಫಿಯತ್ತಿನಲ್ಲಿ ಸಂಗ್ರಹಿಸಿರುವ ಮಾಹಿತಿಯನ್ನು ಈ ಕೆಳಗಿನಂತೆ ವಿಭಾಗಿಸಲಾಗಿದೆ.

೧. *ಮಧುಗಿರಿ ಜಿಲ್ಲೆಯು ಒಳಗೊಂಡಿರುವ ೧೨ 'ತರಫ್'ಗಳು ಮತ್ತು ಪ್ರತಿ ತರಫ್‌ಗಳಲ್ಲಿರುವ ಹಳ್ಳಿ, ಕರೆ, ಕುಂಟೆ, ಬಾವಿ, ನದಿ, ಕಾಲುವೆ, ದುರ್ಗ, ಕೋಟೆ ಮುಂತಾದವುಗಳ ವಿವರ.*
೨. *ಮಧುಗಿರಿಯನ್ನಾಳಿದ ವಿವಿಧ ಅರಸರ ಇತಿಹಾಸ.*
೩. *ಮಧುಗಿರಿಯಲ್ಲಿರುವ ಕೋಟೆ ಮತ್ತು ಕಟ್ಟಡಗಳ ವಿವರಣೆ.*
೪. *ಇತರ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಉಲ್ಲೇಖಗಳು*
೫. *ಮಧುಗಿರಿಯಲ್ಲಿದ್ದ ಭೂ ಸರ್ವೆಯ ಪದ್ಧತಿ ಮತ್ತು ವಿವಿಧ ಅಳತೆ ಮಾನಗಳ ವಿವರಣೆ.*
೬. *ಮಿಡಿಗೇಶಿ ಇತಿಹಾಸದ ಬಗ್ಗೆ ವಿವರಣೆ*
೭. *ಮಿಡಿಗೇಶಿಯ ಬಗ್ಗೆ ತಮ್ಮ ಷರಾ*

ಪುಟಸಂಖ್ಯೆ ೩೨೫ ರಿಂದ ೩೩೨ರ ವರೆಗಿನ ಉಲ್ಲೇಖದಲ್ಲಿ ಮಧುಗಿರಿ ೧೨ ತರಫ್‌ಗಳು ಹೊಂದಿರುವ ಹಳ್ಳಿ, ಕೆರೆ ಕಾಲುವೆ, ದುರ್ಗ ಮುಂತಾದವುಗಳ ವಿವರಣೆಯನ್ನು ಅಂಕಿ ಸಂಖ್ಯೆಗಳ ಮೂಲಕ ನೀಡಲಾಗಿದೆ.

ಆಶ್ಚರ್ಯಕರವೆಂಬಂತೆ ನಮಗೆ ತಿಳಿಯದ ಎಷ್ಟೋ ವಿಚಾರಗಳು ಇಲ್ಲಿ ದಾಖಲಾಗಿವೆ. ಇಂದು ಹೇಳ ಹೆಸರಿಲ್ಲದ ಹಲವು ಊರುಗಳು ಈ ಹಿಂದೆ ಆಡಳಿತ ವಿಭಾಗಗಳಾಗಿದ್ದಲ್ಲದೆ ಸಂಪದ್ಭರಿತ ಪ್ರದೇಶ ಕೂಡ ಆಗಿದ್ದವೆಂದು ಈ ದಾಖಲೆಯಿಂದ ತಿಳಿದುಬರುತ್ತದೆ. ಕ್ರಿ. ಶ. ೧೮೦೧ರಲ್ಲಿ ಮಧುಗಿರಿ ಜಿಲ್ಲಾ ಕೇಂದ್ರವಾಗಿದ್ದು ೧೨ ತರಫ್‌ಗಳನ್ನು ಒಳಗೊಂಡಿತ್ತೆಂದು ಸ್ಪಷ್ಟವಾದ ಅಂಕಿ ಸಂಖ್ಯೆಯಿಂದ ಮೆಕೆಂಜಿಯವರು ತಿಳಿಸಿದ್ದಾರೆ. (ವಿವರದ ಪಟ್ಟಿ ನೋಡಿ)

ಮಧುಗಿರಿ ಪಾಳೆಯಗಾರರ ಇತಿಹಾಸ

ಮೆಕೆಂಜಿಯವರು ಮಧುಗಿರಿ ಪಾಳೆಯಗಾರರ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ೮ ದೊಡ್ಡ ಪುಟಗಳಲ್ಲಿ ವಿವರಿಸಿದ್ದಾರೆ: *ಕ್ರಿ. ಶ. ೧೩೭೯ರಲ್ಲಿ ಮಾರೆಗೌಡ ಮತ್ತು ಅವನ ಸಹೋದರರು ವಿಜಯನಗರದ ಅರಸರ ಪ್ರೀತಿ ಮತ್ತು ಕೃಪೆಗೆ ಪಾತ್ರರಾಗಿ ಅವರಿಂದ ಮಾನ್ಯತೆಯನ್ನು ಪಡೆದು ವಿವಿಧ ಪ್ರದೇಶಗಳಲ್ಲಿ ಹೊಸ ಪಾಳೆಯಪಟ್ಟುಗಳನ್ನು ಸ್ಥಾಪಿಸುತ್ತಾರೆ. ಈ ಪಾಳೆಯಗಾರರು*

* ಇತಿಹಾಸ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ - ೫೮೩ ೧೦೧.

ಮಧುಗಿರಿ ಜಿಲ್ಲೆಯ ವಿವರ (೧೮೦೧ನೇ ಸೆಪ್ಟೆಂಬರ್ ೬)

ತರ್ಫ್‌ಗಳ ಸಂಖ್ಯೆ	ತರ್ಫ್‌ಗಳ ಹೆಸರು	ಊರುಗಳು	ನದಿಗಳು	ಕಾಲುವೆಗಳು	ಸೇದುವ ಬಾವಿಗಳು I	ಕಪಿಲೆ ಬಾವಿಗಳು II	ಮೆಟ್ಟಿಲು ಬಾವಿಗಳು III	(I+II+III) ಒಟ್ಟು	ದೊಣೆಗಳು	ದುರ್ಗ (ಗಿರಿ)	ಸ್ಥಳ ದುರ್ಗ	ಬುರುಜುಗಳು	ಪಗೋಡಗಳು	ಅಗ್ರಹಾರಗಳು	ಮಸೀದಿ	ತೋಟಗಳು	ಸುಸ್ಥಿತಿಯಲ್ಲಿರುವ ಕೆರೆಗಳು	ದುಃಸ್ಥಿತಿಯಲ್ಲಿರುವ ಕೆರೆಗಳು
೧.	ಮಧುಗಿರಿ	೪೬		೨೩	೪	೩	೨	೯	೧೬	೧	೨೦	೩೮	೧೪	೧೧	೨	೪	೪	೩
೨.	ಚಂದ್ರಗಿರಿ	೪೯		೧೦	೧೮	೪	೪	೨೬	-	೧	೨೩	೧೦	೬	೨	-	೨೮	೬	೨
೩.	ಮಿಡಿಗೇಶಿ	೪೨		೨೪	೧೦	-	೧೦	೨೦	-	೨	೨೩	೭	೫	೨	೧	೧	೫	-
೪.	ಕೊಡಗೇನಹಳ್ಳಿ	೧೫		೨	-	೫	-	೫	-	೧	೯	೬	೫	೨	-	೪	೫	-
೫.	ಹಂಪಸಮುದ್ರಂ	೧೨	೧	-	-	೧೫	೧	೧೬	-	-	೭	೪	-	-	-	-	೪	೧
೬.	ಹಿರೇಮಾಲೂರು	೨೭	೧	೧೧	-	೯	೧	೧೦	-	-	೧೧	೪	-	-	-	-	೫	-
೭.	ಅಲ್ಲೂರು	೪೦		೬	-	೧೭	೨	೧೯	-	-	೧೩	೧೦	೧೩	೧	-	೩	೬	-
೮.	ಸಿದ್ಧಾಪುರ	೩೯		೧೫	-	-	೩	೩	-	-	೧೧	-	೩	೧	-	೧೧	೪	-
೯.	ಕೋಡ್ಲಾಪುರ	೩೧		೧೧	-	-	೩	೩	-	-	೧೪	೪	೨	೧	-	-	೩	೧
೧೦	ಚಿಕ್ಕಮಾಲೂರು	೨೯		೬	-	೩೦	೧೧	೪೧	-	-	೧೪	೧	೧	-	-	-	೧೨	-
೧೧	ಕಿತ್ತಗಳಿ	೨೯		೨	-	-	೭	೭	-	-	೭	೪	೪	-	-	೭	೩	-
೧೨	ಕಡಗತ್ತೂರು	೨೩	೧	೬	೨	೭	೩	೧೨	-	-	೧೫	೧೦	೮	೩	-	೪	೩	-
	ಒಟ್ಟು	೩೮೨	೩	೧೧೬	೩೪	೯೦	೪೭	೧೭೧	೧೬	೫	೧೬೭	೯೮	೬೧	೨೪	೩	೬೨	೬೦	೭

ಮುಮ್ಮಡಿ ಪಟ್ಟಣ, ಬಿಜ್ಜಾವರ ಮತ್ತು ಮಧುಗಿರಿ ಹಾಗೂ ಸಿದ್ಧಾಪುರಗಳಲ್ಲಿ ಕೋಟೆ ಮತ್ತು ಕಟ್ಟಡಗಳನ್ನು ಕಟ್ಟಿಸಿರುವ ಬಗ್ಗೆ ಹಾಗೂ ಕರಿತಿಮ್ಮ ಚಿಕ್ಕಪ್ಪಗೌಡ ಹಾಗೂ ಇಮ್ಮಡಿ ಚಿಕ್ಕಪ್ಪಗೌಡರು ಪ್ರಮುಖ ಅರಸರಾಗಿದ್ದು ಇವರ ಅನೇಕ ಸಾಧನೆಗಳ ಬಗ್ಗೆ ವಿವರಿಸಿದ್ದಾರೆ. ನಂತರ ಬಂದ ಅರಸರು ಅಸಮರ್ಥರಾದುದರಿಂದ ಮೈಸೂರು ಒಡೆಯರಾದ ಚಿಕ್ಕದೇವರಾಜರು ಮಧುಗಿರಿಯನ್ನು ವಶಪಡಿಸಿಕೊಂಡು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸಿರುತ್ತಾರೆ. ಚಿಕ್ಕದೇವರಾಜ ಒಡೆಯರ ನಂತರ ಮಧುಗಿರಿಯು ಮರಾಠರ ಆಳ್ವಿಕೆಗೆ ಒಳಪಡುತ್ತದೆ. ನಂತರ ಹೈದರ್ ಮತ್ತು ಟಿಪ್ಪು ಮತ್ತೆ ಮಧುಗಿರಿಯನ್ನು ವಶಪಡಿಸಿಕೊಂಡು ಅಭಿವೃದ್ಧಿ ಪಡಿಸುತ್ತಾರೆ.

ಹೀಗೆ ಕ್ರಿ. ಶ. ೧೩೭೯ ರಿಂದ ೧೭೯೯ರ ವರೆಗೆ ಮಧುಗಿರಿಯನ್ನು ಆಳಿದ ವಿವಿಧ ಅರಸರ ಬಗ್ಗೆ ವಿವರವಾದ ಮಾಹಿತಿಯನ್ನು ಕೈಫಿಯತ್ತು ನೀಡುತ್ತದೆ. ಅಲ್ಲದೆ ಬಹುತೇಕ ಐತಿಹಾಸಿಕ ಅಂಶಗಳು ಇತರ ಆಧಾರಗಳಾದ, "ಮಧುಗಿರಿ ಪಾಳೆಯಗಾರರ ವಂಶಾವಳಿ", "ಶಾಸನಗಳು", "ಇಮ್ಮಡಿಚಿಕ್ಕ ಭೂಪಾಲ ಸಾಂಗತ್ಯ" ಮುಂತಾದ ಸಮಕಾಲೀನ ಆಧಾರಗಳು ಹೇಳಿರುವ ಅಂಶಗಳಿಗೆ ಹೋಲಿಕೆಯಾಗುತ್ತಿರುವುದರಿಂದ ಈ ದಾಖಲೆಯು ಮಧುಗಿರಿಪಾಳೆಯಗಾರರ ಇತಿಹಾಸವನ್ನ ತಿಳಿಯಲು ಹೆಚ್ಚು ಉಪಯುಕ್ತವಾಗಿದೆ ಮತ್ತು ಅರಸರ ಹೆಸರುಗಳು ಹಾಗೂ ಕಾಲಾನುಕ್ರಮದ ಉಲ್ಲೇಖ ಕೂಡ ಸರಿಯಾಗಿದೆ. ಆದ್ದರಿಂದ ಇದು ನಂಬಲರ್ಹವಾದ ದಾಖಲೆಯಾಗಿದೆ.

ಮಧುಗಿರಿಯ ಕೋಟೆ ಮತ್ತು ಕಟ್ಟೆಗಳ ವಿವರ

ಮೆಕೆಂಜಿಯವರು ಮಧುಗಿರಿ ದುರ್ಗ ಹಾಗೂ ಸುತ್ತಮುತ್ತಲಿನ ಪ್ರಾಚೀನ ಕಟ್ಟಡಗಳ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ. ಮಧುಗಿರಿದುರ್ಗವು ಕಲ್ಲು ಮತ್ತು ಗಾರೆಯಿಂದ ಬಲವಾಗಿ ನಿರ್ಮಿಸಲಾಗಿದ್ದು ನೆಲಮಟ್ಟದಿಂದ ಬೆಟ್ಟದ ಕುಂಬಿಯವರೆಗೆ ೧೨ ಕೋಟೆ ಗೋಡೆಗಳನ್ನು ಹೊಂದಿದ್ದು ೧೫ ಬಾಗಿಲುಗಳನ್ನು ಒಳಗೊಂಡಿದೆ. ನೆಲಮಟ್ಟದಲ್ಲಿ ನಿರ್ಮಿಸಿರುವ ಕೋಟೆಯನ್ನು 'ಪಯಣಕಿಲ್ಲ' ವೆಂದು ಕರೆಯುತ್ತಾರೆ. ಈ ಕೋಟೆಯ ಗೋಡೆಯು ಊರನ್ನು ಸುತ್ತುವರಿದಿದ್ದು ಮೂರು ಬಾಗಿಲುಗಳನ್ನು ಒಳಗೊಂಡಿದೆ. ಅವುಗಳನ್ನು ಬಂಡಿ ತಿಮ್ಮಣ್ಣನ ಬಾಗಿಲು, ರಾಟೆಬಾಗಿಲು, ನೀರ್‌ಬಾಗಿಲುಗಳೆಂದು ಕರೆಯುತ್ತಾರೆ. ಈ ಮೇಲೆ ಹೇಳಿರುವ ಬಾಗಿಲುಗಳು ಈಗ ಸಂಪೂರ್ಣ ನಾಶವಾಗಿದ್ದು ಊರಿನ ಪಶ್ಚಿಮಕ್ಕೆ ೨೦ ಅಡಿ ಎತ್ತರದ

ಒಂದು ಬಾಗಿಲಿದ್ದು ಅದನ್ನು 'ದಂಡೂರ ಬಾಗಿಲು' ಎಂದು ಕರೆಯುತ್ತಾರೆ.

ದುರ್ಗದ ಮೇಲೆ ಇರುವ ವಿವಿಧ ಬಾಗಿಲು ಮತ್ತು ಕಟ್ಟಡಗಳು

೧. ಅನೂಗ ಬಾಗಿಲು, ೨. ಅಪಮಾನ್ ಬಾಗಿಲು, ೩. ವದ್ರ ಕುಂಟಬಾಗಿಲು ಮತ್ತು ೪. ಕೂಪಕೊಂಡಲು (ಇದು ಅಪೂರ್ಣಗೊಂಡಿದೆ). ಈ ೨ ಮತ್ತು ೪ನೇ ಬಾಗಿಲುಗಳ ಮಧ್ಯದಲ್ಲಿ ಒಂದು ಮಹಲು ಮೂರು ಮ್ಯಾಗಜಿನ್ಸ್, ನಾಲ್ಕು ಉಗ್ರಾಣಗಳು ಮತ್ತು ಫಿರಂಗಿಯ ಟ್ಯಾಂಕ್ ಇದೆ, ೫. ಬಕಸೂಂ (Bakasoom) ಒಂದು ಟ್ಯಾಂಕ್, ಕಂದಕ ಮತ್ತು ಎರಡು ಫಿರಂಗಿಗಳಿವೆ, ೬. ಮೈಸೂರ್ ರಾಟೆ ಬಾಗಿಲು, ೭. ರೂಡ ಬಾಗಿಲು, ೮. ರಂಗದಾಮ್ ಬಾಗಿಲು, ೯. ಗಾರೆ ಬಾಗಿಲು - ಮರಾಠರ ಕಾಲದ ಮೇಲ್ಭಾವಣಿ ಇರುವ ಮಹಲು ೩ಗನ್ಸ್‌ಗಳು ಮತ್ತು ಒಂದು ಟ್ಯಾಂಕ್ ಇವೆ. ೧೦. ವದ್ರಕುಂಟು ಮತ್ತು ೧೧. ಅಂತರಾಟದ ಬಾಗಿಲು - ಐದು ದೋಣೆಗಳು, ಎರಡು ಗನ್‌ಗಳಿವೆ, ೧೨. ಕೈಲಾಸದ ಬಾಗಿಲು - ಒಂದು ಮಹಲ್, ೧೩ ಮತ್ತು ೧೪. ಕುಂಬಿ ಬಾಗಿಲು - ಮೂರು ದೋಣೆಗಳು, ಮ್ಯಾಗಜಿನ್ ಮತ್ತು ಗೋಪಾಲ ಕೃಷ್ಣ ದೇವಾಲಯ ಹಾಗೂ ಎರಡು ಕಣಜಗಳಿವೆ.

ಮೆಕೆಂಜಿ ಉಲ್ಲೇಖಿಸಿರುವ ಅನೇಕ ಬಾಗಿಲು ಮತ್ತು ಕಟ್ಟಡಗಳ ಬಗ್ಗೆ MAR ನ ವಾರ್ಷಿಕ ವರದಿಗಳಲ್ಲಿಯೂ ವಿವರಿಸಲಾಗಿದೆ. ಆದರೆ MAR ನಲ್ಲಿ ಕೇವಲ ಅಂತರಾಟ, ಕುಂಬಿ ಮತ್ತು ಕೈಲಾಸದ ಬಾಗಿಲುಗಳ ಬಗ್ಗೆ ವಿವರಿಸಲಾಗಿದೆ. ಈ ದಾಖಲೆಯಲ್ಲಿ ಉಲ್ಲೇಖಿಸಿರುವ ಬಾಗಿಲುಗಳ ಹೆಸರು ಇಂದು ಬಳಕೆಯಲ್ಲಿಲ್ಲ ಮತ್ತು ಬೇರೆ ಯಾವುದೇ ಇತರ ಆಧಾರಗಳಲ್ಲಿ ವಿವರಿಸಿಲ್ಲ. ಈ ಕೈಫಿಯತ್ತಿನಲ್ಲಿ ಅನೇಕ ತೆಲುಗು ಪದಗಳ ಬಳಕೆಯಾಗಿರುವುದು ಕಂಡುಬರುತ್ತದೆ. ಮಧುಗಿರಿ ಊರಿನಲ್ಲಿ ಪ್ರಸಿದ್ಧ ವೆಂಕಟರಮಣ, ಮಲ್ಲೇಶ್ವರ, ಚೌಡೇಶ್ವರಿ, ಕೇಶವಸ್ವಾಮಿ ದೇವಾಲಯಗಳು ಮತ್ತು ಬೆಟ್ಟದ ಬುಡದಲ್ಲಿ ಒಂದು ಜೈನಬಸದಿ ಇವೆ. ವೆಂಕಟರಮಣ ಮತ್ತು ಮಲ್ಲೇಶ್ವರ ದೇವಾಲಯಗಳು ದೊಡ್ಡದಾಗಿದ್ದು ಸುಂದರವಾಗಿವೆ ಎಂದು ಮಧುಗಿರಿಯ ದೇವಾಲಯಗಳ ಬಗ್ಗೆ ವಿವರಣೆ ನೀಡಲಾಗಿದೆ.

ದುರ್ಗ ಮತ್ತು ಕೋಟೆ ಹಾಗೂ ಇತರ ಕಟ್ಟಡಗಳ ಬಗ್ಗೆ ಅವರು ನೀಡಿರುವ ವಿವರಣೆಯನ್ನು ಅನುಸರಿಸಿ ಸಮೀಕ್ಷೆ ನಡೆಸಿದರೆ ಎಲ್ಲ ಕಟ್ಟಡಗಳ ಅವಶೇಷಗಳು ಕಂಡುಬರುತ್ತವೆ. ಆದರೆ ಅವರು ಹೆಸರಿಸಿರುವ ವಿವಿಧ ಬಾಗಿಲುಗಳು ಯಾವುವು ಎಂಬುದು ತಿಳಿಯುವುದಿಲ್ಲ. ಆದರೆ ಬೆಟ್ಟದ ಬುಡದಿಂದ ತುದಿಯವರೆಗೆ ೧೫ ಬಾಗಿಲುಗಳಿದ್ದು ಕೆಲವು ಸುಸ್ಥಿತಿಯಲ್ಲಿದ್ದರೆ ಮತ್ತೆ ಕೆಲವು ಹಾಳಾಗಿರುವುದು ಕಂಡುಬರುತ್ತದೆ.

೧. ಮೈಸೂರು ಒಡೆಯರ ಕಾಲದಲ್ಲಿ
೨. ಹೈದರ್ ಕಾಲದಲ್ಲಿ ಎ) ಕರ್ನಾಟಕದವರು ಬಿ) ಮುಸ್ಲಿಮರು
೩. ಟಿಪ್ಪು ಕಾಲದಲ್ಲಿ ಎ) ಕರ್ನಾಟಕದವರು ಬಿ) ಮುಸ್ಲಿಮರು
೪. ೧೮೦೧ರಲ್ಲಿ ಬ್ರಿಟೀಷರ ಆಳ್ವಿಕೆಯಲ್ಲಿ - ಇದ್ದ ಸೈನ್ಯದಳ:

ಅಶ್ವದಳ	ಕಾಲ್ದಳ	ಒಟ್ಟು
೪೦೦೦	೧೨,೦೦೦	೧೬,೦೦೦
	೨೫,೦೦೦	
	೩೦೦	
		೨,೮೦೦
	೩೦೦	
	೪೦೦	೭೦೦
	೩೦	
	೫೦	೮೦

ಮಧುಗಿರಿ ಜಿಲ್ಲೆಯ ಬಗ್ಗೆ ಇತರ ವಿವರ

ಸ್ಥಳ ಪರಿಚಯ : ಮಧುಗಿರಿಯು, ಪೂರ್ವಕ್ಕೆ ಪೆನುಗೊಂಡೆ, ದಕ್ಷಿಣಕ್ಕೆ ತುಮಕೂರು ಪಶ್ಚಿಮಕ್ಕೆ ಶಿರಾ, ಉತ್ತರಕ್ಕೆ ರತ್ನಗಿರಿ ಮತ್ತು ಪಾವಗಡಗಳಿಂದ ಸುತ್ತುವರೆದಿದೆ.

ವಿಭಾಗಗಳು : ಮಧುಗಿರಿ ಜಿಲ್ಲೆಯನ್ನು ೧೨ ತರಫ್‌ಗಳನ್ನಾಗಿ ವಿಭಾಗಿಸಲಾಗಿದ್ದು ಅವು ೩೮೨ ಹಳ್ಳಿಗಳನ್ನು ಹೊಂದಿದ್ದವು ಮತ್ತು ಅವುಗಳಲ್ಲಿ ೫೫೪೯ ಕುಟುಂಬಗಳು, ೫೭೬೪ ಮನೆಗಳು, ೬೭ ಕೆರೆ, ೧೦೭ ಕುಂಟೆಗಳು ಮತ್ತು ೧೭೧ ಬಾವಿಗಳು ಇದ್ದವು.

ಜನಸಂಖ್ಯೆ : ೨೭,೭೪೫ ಇದ್ದಿತು.

ಮಣ್ಣು : ಇಲ್ಲಿ ೪ ಬಗೆಯ ಮಣ್ಣನ್ನು ಕಾಣಬಹುದು. ಕೆಂಪು, ಕಪ್ಪು, ಹಳದಿ ಮತ್ತು ಮರಳು. ಈ ಮಣ್ಣು ವಿವಿಧ ಬಗೆಯ ಆಹಾರ ಧಾನ್ಯಗಳನ್ನು ಬೆಳೆಯಲು ಯೋಗ್ಯವಾಗಿದೆ.

ಉತ್ಪಾದನೆ : ಹೆಸರು, ಉದ್ದು ಎಣ್ಣೆಕಾಳು, ಹುರುಳಿ, ಜೋಳ, ಸಜ್ಜೆ, ಗೋಧಿ, ರಾಗಿ ಮುಂತಾದ ಅನೇಕ ಸಣ್ಣ ಬೆಳೆಗಳನ್ನು ಬೆಳೆಯುತ್ತಾರೆ. ಕೆಲವು ತೋಟಗಳಲ್ಲಿ ದಾಳಿಂಬೆ, ಸೀಬೆ, ರಾಂಫಲ, ಮಾದಲ ಮತ್ತು ಮಾವಿನ ಹಣ್ಣುಗಳನ್ನು ತೋಟದ ಬೆಳೆಗಳಾಗಿ ಬೆಳೆಯುತ್ತಿದ್ದರು.

ಖನಿಜ : ಮಧುಗಿರಿಯ ಕೆಲವು ಪ್ರದೇಶಗಳಲ್ಲಿ ಕಬ್ಬಿಣದ ಅದಿರು ದೊರೆಯುತ್ತಿದ್ದು, ಪ್ರಮುಖ ನಾಲ್ಕು ಹಳ್ಳಿಗಳಲ್ಲಿ ಕಬ್ಬಿಣದ ಕೈಗಾರಿಕೆಗಳಿವೆ. ಅವು ಗರಣೆ, ತುಂಗೋಟಿ ಶೆಟ್ಟಿಹಳ್ಳಿ ಮತ್ತು ಬೋರನ್‌ಜಾಬ್ (Boranzab) ಎಂದಿದೆ ಆದರೆ ಈ ಮೂರು ಹಳ್ಳಿಗಳು ಇಂದಿಗೂ ಹೆಸರಾಗಿವೆ. ಆದರೆ 'ಬೋರನ್ ಜಾಬ್' ಯಾವ ಊರು ಎಂದು ತಿಳಿಯುವುದಿಲ್ಲ.

ಭಾಷೆ : ಇಲ್ಲಿಯು ಮುಕ್ಕಾಲು ಭಾಗ ಜನರು ಕನ್ನಡ ಭಾಷೆಯನ್ನಾಡುತ್ತಾರೆ. ಉಳಿದಂತೆ ತೆಲುಗು ಮತ್ತು ಮರಾಠಿಯನ್ನು ಮಾತನಾಡುತ್ತಾರೆ.

ಭೂ ಸರ್ವೆಯ ವಿವಿಧ ಅಳತೆಗಳ ಬಗ್ಗೆ ವಿವರಣೆ

ಮೆಕೆಂಜಿಯವರು ಈ ಮಾಹಿತಿಯನ್ನು ಸೆಪ್ಟೆಂಬರ್, ೧೮೦೧ರಲ್ಲಿ ಮಿಡಿಗೇಶಿಯ ಶಾನುಭೋಗರಿಂದ ಸಂಗ್ರಹಿಸಿರುತ್ತಾರೆ. ಇಲ್ಲಿಯ ಕೃಷಿ ಭೂಮಿಯನ್ನು ನೀರಾವರಿ ಮತ್ತು ಬೆದ್ದಲು ಅಥವಾ ಒಣಬೇಸಾಯ ಭೂಮಿ ಎಂದು ವಿಂಗಡಿಸಿದ್ದಾರೆ. ಸಾಮಾನ್ಯವಾಗಿ ಹಳ್ಳಿಯ ಅಧಿಕಾರಿಗಳು ಭೂಮಿಯನ್ನು ಸರ್ವೇ ಮಾಡಿ, ವಾರ್ಷಿಕ ಉತ್ಪನ್ನದ ಬಗ್ಗೆ ತಮ್ಮ ಪುಸ್ತಕಗಳಲ್ಲಿ ದಾಖಲಿಸುತ್ತಾರೆ.

ಭೂ ಅಳತೆಯ ಮಾದರಿ

ಇಲ್ಲಿಯ ಜನರು ನಿರ್ದಿಷ್ಟ ಭೂ ಅಳತೆಯ ವಿಧಾನವನ್ನು ಹೊಂದಿಲ್ಲ. ೧೨ ಗಜದ 'ಬಂಬೂ' ಅಥವಾ ಹಗ್ಗವನ್ನು ಬಳಸುತ್ತಾರೆ. ೧೨ ಗಜದ ಭೂಮಿಗೆ ಒಂದು 'ಗುಡ್ಡ' ವೆಂದು ೫ ಗುಡ್ಡ ಪೂ. ಪ., ೬ ಗುಡ್ಡ ಉ.ದ. ಭೂ ಪ್ರಮಾಣವನ್ನು 'ವಕ್ಕಲು' ಎಂದು ಇಂತಹ ೨೦ ವಕ್ಕಲು ಭೂಮಿಯನ್ನು ಒಂದು 'ಕಂಡುಗ' ಎನ್ನುತ್ತಾರೆ.

೧ ಕಂಡುಗವನ್ನು ಚಿಕ್ಕ ಚಿಕ್ಕ ಅಳತೆಗಳಲ್ಲಿ : ೨ ಹೊಟ್ಟೆ ಕೊಳಗ, ೪ ಅಗುಳು, ೮ ಎಕಲಾಡಿ ಬಳ್ಳ, ೧೬ ವಕಲಾಡಿ ಬಳ್ಳ, ೨೦ ವಕ್ಕಳಗಳು, ೪೦ ಹೆಬ್ಬಳ್ಳ, ೮೦ ಬಳ್ಳಗಳು, ೧೬೦ ಎಮ್ಮಾಣ, ೩೨೦ ವಮ್ಮಾಣ, ೬೪೦ ಅರವಣ, ೧೨೮೦ ಸೊಲಿಗೆಗಳು, ೨೫೬೦ ಗುಡಾ*

ಅನೇಕ ಕಡೆ ಸಕ್ಕಾರ್ ಜನರು (ಜಮೀನ್ದಾರ್) ತಮ್ಮ ಭೂಮಿಯನ್ನು ರೈತರಿಗೆ 'ಸಮಪಾಲು' ಗೇಣಿಗೆ ನೀಡುತ್ತಿದ್ದರು. ಬೆಳೆದ ಉತ್ಪಾದನೆಯಲ್ಲಿ ೨೧/೨ ಕೊಳಗವನ್ನು ತೆಗೆದು ಉಳಿದ ಬೆಳೆಯನ್ನು ಎರಡು ಸಮಭಾಗ ಮಾಡಿ ರೈತರು ಮತ್ತು ಜಮೀನ್ದಾರರು ತೆಗೆದುಕೊಳ್ಳುತ್ತಿದ್ದರು. ಈ ೨೧/೨ ಕೊಳಗದಲ್ಲಿ ಒಂದು ಕೊಳಗವನ್ನು ಆಪತ್ಕಾಲಕ್ಕಾಗಿ ಇಟ್ಟರೆ, ಇನ್ನೊಂದು ಕೊಳಗವನ್ನು ೧೨ ಜನ 'ಆಯಗಾರ'ರಿಗೆ ಹಂಚುತ್ತಿದ್ದರು. ಉಳಿದ ೧/೨ ಕೊಳಗ ಬೆಳೆಯಲ್ಲಿ ಒಂದು ಭಾಗ ಶಾನುಭೋಗನಿಗೆ ಮತ್ತೊಂದು ಭಾಗವನ್ನು ಊರಿನಗೌಡನಿಗೆ ನೀಡುತ್ತಿದ್ದರು.

ಭೂ ಉತ್ಪನ್ನವನ್ನು ರೈತರು, ಜಮೀನ್ದಾರ ಹಾಗೂ ಇತರ ಸರ್ಕಾರಿ ಸೇವಕರಿಗೆ ಹೇಗೆ ಹಂಚಿಕೆಯಾಗುತಿತ್ತೆಂದು ಹಾಗೂ ಅಳತೆಯ ವಿವಿಧ ಪ್ರಮಾಣಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಲ್ಲಿ ಈ ಕೈಫಿಯತ್ತು ತುಂಬಾ ಸಹಕಾರಿಯಾಗಿದೆ.

ಮಿಡಿಗೇಶಿ ಇತಿಹಾಸದ ಬಗ್ಗೆ ಪು. ಸಂ. ೩೪೯ರಿಂದ ೩೫೩ರ ವರೆಗೆ ವಿವರಿಸಲಾಗಿದೆ. ಮಿಡಿಗೇಶಿ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದ್ದು ಅದರ ಪೂರ್ಣ ಇತಿಹಾಸವನ್ನು ತಿಳಿಯಲು ಆಧಾರಗಳ ಕೊರತೆ ಇದೆ. ಆದರೆ ಮೆಕೆಂಜಿಯವರು ಕ್ರಿ. ಶ. ೧೮೦೧ರ ಅಕ್ಟೋಬರ್‌ನಲ್ಲಿ ಮಿಡಿಗೇಶಿ ತಿರುಪತಯ್ಯ ಶಾನುಭೋಗರಿಂದ ಸಂಗ್ರಹಿಸಿದ ಮಾಹಿತಿಯು ಮಿಡಿಗೇಶಿ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಕ್ರಿ. ಶ. ೧೩೩೭ ರಿಂದ ೧೭೯೯ರ ಅವಧಿಯಲ್ಲಿ ಮಿಡಿಗೇಶಿಯನ್ನು ಆಳಿದ ವಿವಿಧ ಅರಸರ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಪ್ರಮುಖವಾಗಿ ಮಿಡಿಗೇಶಿಯನ್ನು ಆಳಿದ ನಾಗಿರೆಡ್ಡಿ ಮತ್ತು ಮಧುಗಿರಿ ಪಾಳೇಯಗಾರ ಇಮ್ಮಡಿ ಚಿಕ್ಕಪ್ಪಗೌಡನೊಂದಿಗೆ ನಡೆದ ಯುದ್ಧವು ಮುಖ್ಯ ಘಟನೆಯಾಗಿದೆ. ಮೈಸೂರು ಒಡೆಯರು ಮಿಡಿಗೇಶಿಯನ್ನು ಆಕ್ರಮಿಸಿ ಅನಂತರ ಮಧುಗಿರಿ ಪಾಳೆಯಗಾರ ತಿಮ್ಮಪ್ಪ ಗೌಡರಿಗೆ ಜಹಗೀರಾಗಿ ನೀಡಿರುವುದು, ಹಾಗೆ ಮುಂದುವರಿದು ಹೈದರ್ ಟಿಪ್ಪು ಮಿಡಿಗೇಶಿಯನ್ನು ಗೆದ್ದು ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವುದು ತಿಳಿಯುತ್ತದೆ.

ಇಲ್ಲಿ ತಿಳಿಸಿರುವ ರಾಜನ ಹೆಸರು, ಕಾಲ ಮತ್ತು ಘಟನೆಗಳು ಇತರ ಆಧಾರಗಳೊಂದಿಗೆ ಹೋಲಿಕೆಯಾಗುವುದರಿಂದ ಈ ಕೈಫಿಯತ್ತು ಉತ್ತಮ ಆಕರವಾಗಿದೆ.

ಮಿಡಿಗೇಶಿಯ ಬಗ್ಗೆ ಇತರ ವಿಚಾರಗಳು

ಕೊನೆಯ ಎರಡು ಪುಟ ಮತ್ತು ಅಂತಿಮ ಪುಟದಲ್ಲಿರುವ ಒಂದು ಸಾಲು ಮಿಡಿಗೇಶಿಯಲ್ಲಿರುವ ೨೯ ಜಾತಿಗಳ ಉಲ್ಲೇಖ ಹಾಗೂ ಮಿಡಿಗೇಶಿ ಕಾಡಿನಲ್ಲಿರುವ ವಿವಿಧ ಪ್ರಾಣಿಗಳಾದ ಹುಲಿ, ಕರಡಿ, ತೋಳ, ಜಿಂಕೆ, ಮೊಲ ಮುಂತಾದ ಪ್ರಾಣಿಗಳ ಹೆಸರನ್ನು ತಿಳಿಸುತ್ತದೆ. ಹಾಗೆಯೇ ಇಲ್ಲಿ ವಿವಿಧ ಬಗೆಯ ಆಹಾರ ಧಾನ್ಯಗಳಾದ ರಾಗಿ, ಭತ್ತ, ನವಣೆ, ಸಜ್ಜೆ, ಕೊರಲೆ, ಹೆಸರು, ಉದ್ದು, ತೊಗರಿ ಮತ್ತು ಎಣ್ಣೆ ಕಾಳುಗಳನ್ನು ಬೆಳೆಯುತ್ತಾರೆಂದು ಉಲ್ಲೇಖ ಮಾಡಿದೆ. ಮತ್ತು ಒಂದು ರೀತಿಯ ಉಪ್ಪನ್ನು ತಯಾರಿಸುತ್ತಾರೆಂದು ಹೇಳಿದೆ.

೩೧ ಪುಟಗಳಲ್ಲಿ ಮಧುಗಿರಿ ಮತ್ತು ಮಿಡಿಗೇಶಿಗೆ ಸಂಬಂಧಿಸಿದ ಇತಿಹಾಸ, ಕೋಟೆ, ಕಟ್ಟಡ, ತರಫ್‌ಗಳ ವಿವರ, ಪ್ರತಿ ಹಳ್ಳಿಯು ಹೊಂದಿರುವ ಕೆರೆ, ಕುಂಟೆ, ಬಾವಿ, ಕೋಟೆ, ನದಿ, ಹೊಂಡ ಜನಸಂಖ್ಯೆ ಗಣಿಗಾರಿಕೆ ಮೊದಲಾದ ವಿಚಾರಗಳನ್ನು ಸಮಗ್ರವಾಗಿ ದಾಖಲಿಸಲಾಗಿದ್ದು ಇದೊಂದು ಅಪರೂಪ ದಾಖಲೆಯಾಗಿರುವುದರಿಂದ ಮೆಕೆಂಜಿಯವರ ಈ ಶ್ರಮದ ಸೇವೆಯನ್ನು ಮರೆಯುವಂತಿಲ್ಲ

* (೨೫೬೦ ಗುಡಾಗಳ ಬದಲು ೫೧೨೦ ಎಂದಿದೆ. ಆದರೆ ೨೦ ವಕ್ಕಳಗಳು ನಂತರ ದ್ವಿಮಾನ ಇರುವುದರಿಂದ ೨೫೬೦ ಎಂದಾಗುತ್ತದೆ.)

ಕುಂ. ಬಾ. ಸದಾಶಿವಪ್ಪ*

ಹರಪನಹಳ್ಳಿ ಪರಿಸರದ ಹೊಸ ಶಾಸನಗಳು ಮತ್ತು ಯಕ್ಷಗಾನ ಕವಿಗಳು - ಒಂದು ಟಿಪ್ಪಣಿ


ಒಂದು ನೆಲೆಯ - ಪ್ರದೇಶದ ಇತಿಹಾಸ, ಸಾಂಸ್ಕೃತಿಕ, ರಾಜಕೀಯ ಸಂದರ್ಭಗಳನ್ನು ತಿಳಿಯಲು ಆಕರಗಳು ಅವಶ್ಯಕ. ಶಾಸನ, ಕಂಚಿನಪತ್ರ, ತಾಳೆಗರಿ, ಹಸ್ತಪ್ರತಿ ಬಹುಜನ ಶ್ರೀಸಾಮಾನ್ಯರು ಬಳಗುವ ಗಾದೆಮಾತುಗಳು, ಇವುಗಳ ರಕ್ಷಣೆ ನಾಡಿನ ಸಂಸ್ಕೃತಿಯ ರಕ್ಷಣೆಗೆ ನೆರವಾಗುತ್ತದೆ. ಹರಪನಹಳ್ಳಿ ತಾಲೂಕಿನಲ್ಲಿ ಶಾಸನಗಳು ವಿಪುಲ. ಪಕ್ಕದ ಪ್ರಸಿದ್ಧ ಬಾಗಳಿಯಲ್ಲಿ ಸುಮಾರು ೬೦ಕ್ಕೂ ಹೆಚ್ಚು ಶಾಸನಗಳು ದೊರಕಿವೆ. ಸದ್ಯ ಅರಸನಾಳು ಮತ್ತು ಹಲುವಾಗಲು ಗ್ರಾಮಗಳಲ್ಲೂ ಎರಡು ಅಪ್ರಕಟಿತ ಶಾಸನಗಳು ದೊರಕಿವೆ.

೧. ಅರಸನಾಳು ಗ್ರಾಮದ ಈಶ್ವರ ದೇವಾಲಯವನ್ನು ಕೆಡವಿ ಹೊಸದಾಗಿ ಕಟ್ಟುವ ಸಮಯದಲ್ಲಿ ಅದರ ಬಾಗಿಲ ಹೊಸ್ತಿಲ ಕೆಳಭಾಗದ ಕಲ್ಲಿನಲ್ಲಿ ಒಂದು ಶಾಸನ ದೊರೆಯಿತು. ಶಾಸನದ ಕಲ್ಲಿನ ಉದ್ದ ೪ ಅಡಿ ಒಂದು ಅಂಗುಲ, ಅಗಲ ೬ ಅಂಗುಲ, ಗಾತ್ರ ೨ ಅಡಿ ೮ ಅಂಗುಲ. ಬಲಭಾಗದಲ್ಲಿ ಚಂದ್ರ ಎಡಭಾಗದಲ್ಲಿ ಸೂರ್ಯ ಚಿತ್ರಗಳಿವೆ. ಶಾಸನಪಾಠದ ರೀತ್ಯಾ "ಶಾಲಿವಾಹನ ಶಕ ೧೫೧೦ ಗರ್ಭಗಡಿ ಗಿರಿಯಣ್ಣನ ಆಳ್ವಿಕೆಯಲ್ಲಿ ಅಜ್ಜಯ್ಯನ ಮಗಳಿಗೆ ಪುಣ್ಯ ಆಗಲಿ ಎಂದು ಒಂದು ಗುಡಿಯನ್ನು ನಿರ್ಮಿಸಿದೆ" ಎಂದಿದೆ.

ಶಾಸನೋಕ್ತ ಗಿರಿಯಣ್ಣ ಗರ್ಭಗಡಿ ರಾಜ್ಯವನ್ನು ಆಳಿದ ನಾಯಕ. ಅವನ ಬಗ್ಗೆ ಈಗಲೂ ಹಲುವಾಗಲು ಗ್ರಾಮದಲ್ಲಿ ಹೀಗೆ ಹೇಳುವರು:

ಹಲುವಾಗಿಲು ಗ್ರಾಮಕ್ಕೆ ಪ್ರವೇಶ ಮಾಡುವಾಗ ಎಡಭಾಗಕ್ಕೆ ಬರುವ ಕಣ ಮತ್ತು ಹೊಲದ ಭಾಗದಲ್ಲಿ ಕೆಲವು ಕಲ್ಲುಗಳು ಕಾಣುವುವು. ಅವುಗಳನ್ನು ಹುಗಿದಂತೆ ಕಾಣುತ್ತದೆ. ಅಲ್ಲಿ (ದನಗಳು) ಆಡಲು ಹೋದ ಆಕಳು, ಎಮ್ಮೆ ಹಿಂಡದಿದ್ದರೆ, "ಅದು ಗಿರಿಯಣ್ಣನ ಕಾಟ, ಹರಿಚಿಸೊಪ್ಪು, ಬಗಳೆಸೊಪ್ಪಿನ ಪಲ್ಯ, ಜೋಳದ ರೊಟ್ಟಿ, ನೈವೇದ್ಯ ಮಾಡಿರಿ" ಎಂದು ಜನರು ಹೇಳುವರು.

೨. ಹಲುವಾಗಲು ಗ್ರಾಮಕ್ಕೆ ಸೇರಿದ್ದ ಸಿದ್ದಾಪುರ ಊರಿಗೆ ಸಮೀಪ ಇರುವ ಸ್ಥಳಕ್ಕೆ ಗಡ್ಡಿ ಎಂದು ಕರೆಯುವರು. ಮೊದಲು ಗೌಡರಿಗೆ ಸೇರಿದ್ದು ಈಗ ಕೊಲ್ಲಾಪುರದ ಕುರುಬರಿಗೆ ಸೇರಿದೆ. ಅಲ್ಲಿ ಒಂದು ಶಾಸನ ದೊರಕಿದೆ.



* ನಾರಾಯಣಭಟ್ಟರ ವಠಾರ, ಶಂಕರಮಠದ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ - ೫೮೩ ೧೩೧.

ಶಾಸನ ಪಾಠ

"ಸ್ವಸ್ತಿ ಶಕ ವರ್ಷ ೧೬೨೪ ಚಿತ್ರಭಾನು ಸಂವತ್ಸರ ಆಶ್ವೀಜ ಶುದ್ದ ೧೦ ರಾಜ ಮಾನ್ಯ ಅಚ್ಚಪ್ಪ ನಾಯಕರ ಮಕ್ಕಳು ಯಾನುಂ ಇವರು ಸಕರಾರ್ಜನೆಗೆ ಸರ್ವಮಾನ್ಯ ನಿಮಿತ್ಯ ಹರಿಯಪ್ಪ ನಾಯಕರು ಅವರ ಮಗ ರಾಮಣ್ಣ ನಾಯಕನಿಗೆ ಸರ್ವಮಾನ್ಯ ನಿಮಿತ್ಯ ಗರ್ಭಗಡಿ ಗ್ರಾಮದ ಪಟ್ಟೇವು"

ಮೇಲಿನ ಶಾಸನಕ್ಕೆ ಸಂಬಂಧಿಸಿದಂತೆ ಸ್ವಲ್ಪ ದೂರದಲ್ಲಿ ನಾಲ್ಕು ದೊಡ್ಡ ಕಲ್ಲುಗಳು ನಾಲ್ಕು ದಿಕ್ಕಿಗೆ ಕಾಣುವುವು. ಒಂದು ಕೋಟೆ ಗುಡ್ಡದ ಮೇಲೆ ಕಾಣುವುದು. ಅದು ಹಾಳಾಗಿದೆ. ಪಕ್ಕದಲ್ಲಿ ಗರ್ಭಗಡಿ ಎಂಬುವ ಹೆಸರಿನ ಒಂದು ಹಳ್ಳಿ ಈಗಲೂ ಇದೆ. ಗರ್ಭಗಡಿ ರಾಜ್ಯದ ಬಗ್ಗೆ ಹೆಚ್ಚು ಅಧ್ಯಯನ ಅಗತ್ಯ.

ಯಕ್ಷಗಾನ ಭಾಗವತ ಕವಿಗಳು

ಹರಪನಹಳ್ಳಿ ದೂಸರ ಓಣಿಯಲ್ಲಿ ಯಕ್ಷಗಾನದ ಒಬ್ಬ ಕವಿ ದೊರಕುವನು. ಅವನ ಹೆಸರು ಯಳಮಲಿ ಚೆನ್ನಬಸಪ್ಪ. ಅವನು ಬರೆದ ಕೃತಿಗಳು*(೧) ಪಾಂಡವ ವಿಜಯ(೨) ಕನಕಾಂಗಿ ಕಲ್ಯಾಣ*

ಇದೇ ತಾಲ್ಲೂಕಿನ ಪೂರ್ವದಿಕ್ಕಿನಲ್ಲಿ ಬೆಣ್ಣೆಹಳ್ಳಿ ಎಂಬುವ ಹೆಸರಿನ ಒಂದು ಗ್ರಾಮ ಈಗಲೂ ಇದೆ.

೪. ಈ ಗ್ರಾಮದಲ್ಲಿ ಒಬ್ಬ ಯಕ್ಷಗಾನ ಕವಿ ದೊರಕುವನು. ಅವರಿಗೆ ಬೆಣ್ಣೆಹಳ್ಳಿ ಪಟ್ಟದದೇವರು ಎಂದೇ ಕರೆಯುವರು. ಅವರ ಹೆಸರು ಈವರೆಗೂ ಗೊತ್ತಾಗಿಲ್ಲ. ಅವರು ಸನ್ಯಾಸಿ. ಅವರು ರಚಿಸಿದ ಕೃತಿಗಳು *೧) ಸುಶೀಲರಾಯನ ಕಾಳಗ ೨) ಚಿತ್ರಸೇನ ೩) ಲಕ್ಷ್ಮೀ ಸ್ವಯಂವರ,*

ಈ ಕವಿ ತನ್ನ ಹಾಡಿನಲ್ಲಿ "ಅವನಿಗುತ್ತಮವೆನಿಪ ನವನೀತ ಪುರ" ಎಂದು ಹೇಳಿರುವನು ಬೆಣ್ಣೆಹಳ್ಳಿಗೆ ಸಂಸ್ಕೃತದಲ್ಲಿ ನವನೀತಪುರ ಎಂದು ಕರೆಯಲಾಗಿದೆ.

ಶ್ರೀ ಯಳಮಲಿ ಚೆನ್ನಬಸಪ್ಪನವರು ಗೃಹಸ್ಥರು. ಈಗಲೂ ಅವರ ವಂಶಕ್ಕೆ ಸೇರಿದವರು ಹರಪನಹಳ್ಳಿ ಮತ್ತು ದಾವಣಗೆರೆಗಳಲ್ಲಿರುವರು. ಆದರೆ ಬೆಣ್ಣೆಹಳ್ಳಿ ಪಟ್ಟದದೇವರು ಸನ್ಯಾಸಿಗಳು ಇದ್ದುದರಿಂದ ಅವರಿಗೆ ಸಂಬಂಧಿಸಿದವರು ದೊರಕಿಲ್ಲ. ಅವರ ಬಳಿ ಇದ್ದ ತಂಬೂರಿಯನ್ನು ಯಾರೋ ಮೈಸೂರಿನವರು ಬಂದು ತೆಗೆದುಕೊಂಡು ಹೋಗಿರುವರು ಎಂಬುವ ಸುದ್ದಿ ಮಾತ್ರ ಇದೆ. ಈ ಇಬ್ಬರು ಯಕ್ಷಗಾನ ಭಾಗವತ ಕವಿಗಳು. ಕಾಲ ೧೯ನೇ ಶತಮಾನದ ಕೊನೆ; ೨೦ನೇ ಶತಮಾನದ ಆದಿ, ಅವರನ್ನು ಕಂಡವರು ಇಪ್ಪತ್ತು ವರ್ಷಗಳ ಹಿಂದೆ ಜೀವಿಸಿದ್ದರು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಭಾವಚಿತ್ರ
*೨. ಶ್ರೀ ಬಿ,ಆರ್,ದೇವೇಂದ್ರಪ್ಪ ಹಲುವಾಗಿಲು - ನೆರವು.

ಸಾಸಲು ಜೆ. ವಿಶ್ವನಾಥ್*
ಡಾ॥ ಎಂ. ಜೆ. ಮಂಜುನಾಥ**

ನಿರ್ಲಕ್ಷಿತ ಬೆಂಗಳೂರಿನ ಸನಿಹದಲ್ಲಿರುವ ನಾಲ್ಕು ಕೋಟೆಗಳು

ಬೆಂಗಳೂರಿನ ಆಸುಪಾಸಿನಲ್ಲಿಯೇ ಇದ್ದರೂ ಗಿರಿದುರ್ಗಗಳೇ ಆಗಿದ್ದರೂ ಸಹ ಇತಿಹಾಸ ತಜ್ಞರ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ನಾಲ್ಕು ಕೋಟೆಗಳ ಬಗ್ಗೆ ಪ್ರಸ್ತುತ ಪ್ರಬಂಧ ರಚಿಸಲಾಗಿದೆ.

ಈ ನಾಲ್ಕು ಕೋಟೆಗಳಲ್ಲಿ ಸಾಸಲು ಹೋಬಳಿಯ ತೋಡಲು ಬಂಡೆ ಗ್ರಾಮದ ಕೋಟೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರಿನ ಬಳಿಯಲ್ಲಿರುವ ಬೆಟ್ಟದಾಸನಪುರದ ಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಮಾಕಳಿ ದುರ್ಗ, ದೊಡ್ಡ ಬೆಳವಂಗಲ ಹೋಬಳಿಯ ಹುಲುಕಡಿಬೆಟ್ಟದಕೋಟೆಗಳ ಬಗ್ಗೆ ಇದುವರೆಗೆ ಏನೂ ದಾಖಲಾಗಿಲ್ಲ. ಇನ್ನು ಮಾಕಳಿ ದುರ್ಗ, ಹುಲುಕಡಿಬೆಟ್ಟದ ಕೋಟೆ, ಬೆಟ್ಟದಾಸನಪುರದ ಕೋಟೆ ಇವುಗಳ ಬಗ್ಗೆ ಕರ್ನಾಟಕ ರಾಜ್ಯ



ಗ್ಯಾಸೆಟಿಯರ್‌ನಲ್ಲಿ ಮಾಹಿತಿಯಿದ್ದರೂ ಸಹ ಅವೆಲ್ಲವೂ ಕೇವಲ ೪-೫ ಸಾಲುಗಳಷ್ಟಿದ್ದು ಆ ಕೋಟೆಯ ಬಳಿಯ ದೇವಾಲಯಗಳ ಬಗ್ಗೆಯೇ ಹೆಚ್ಚಿನ ಮಾಹಿತಿ ನೀಡುತ್ತವೆ.

ಮೊದಲಿಗೆ *ಬೆಟ್ಟದಾಸನಪುರದ ಕೋಟೆಯ* ಬಗ್ಗೆ ಗಮನಿಸೋಣ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಬೆಟ್ಟದಾಸನಪುರವು ಬೇಗೂರಿನಿಂದ ೩ಕಿ.ಮೀ. ದೂರದಲ್ಲಿದೆ. ಊರಿನ ಹೊರಭಾಗದಲ್ಲಿರುವ ಒಂದು ಏಕಶಿಲಾ ಬಂಡೆಯ ಮೇಲ್ಭಾಗದಲ್ಲಿ ಒಂದು ಕಲ್ಲಿನ ಕೋಟೆಯಿದೆ. ಕಣಶಿಲೆಯ ಕಲ್ಲಿನ ತುಂಡುಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಯಾವುದೇ ರೀತಿಯ ಬಂಧಕ ಸಾಮಾಗ್ರಿಗಳನ್ನೂ ಬಳಸದೆ ನಿರ್ಮಿಸಿರುವ ಈ ಕೋಟೆಯ ವಿಸ್ತೀರ್ಣ ಸುಮಾರು ೧ ಹೆಕ್ಟೇರ್‌ಗಿಂತಲೂ ದೊಡ್ಡದಾಗಿದೆ. ಈ ಕೋಟೆಯ ನಾಲ್ಕೂ ಮೂಲೆಗಳಲ್ಲಿಯೂ ನಾಲ್ಕು ದೊಡ್ಡ ಬುರುಜುಗಳಿದ್ದು ಇವು ೧೫ ಅಡಿಗಳಷ್ಟು ಎತ್ತರವಾಗಿವೆ. ಕೋಟೆಯ ಗೋಡೆ ೧೦ ಅಡಿಗಳಷ್ಟು ಎತ್ತರವಾಗಿದ್ದು ಕೆಳಭಾಗದಲ್ಲಿ ೫ ಅಡಿಗಳಷ್ಟು ಮಂದವಾಗಿದ್ದು ಕ್ರಮೇಣ ಸಣ್ಣದಾಗುತ್ತಾ ಬಂದು ಮೇಲ್ಭಾಗದಲ್ಲಿ ಮೂರು ಅಡಿಗಳಷ್ಟು ಮಂದವಾಗಿದೆ. ಈ ಕೋಟೆಯ ಕೆಲವು ಭಾಗಗಳು ಹಾಗೂ ಬುರುಜುಗಳು ಶಿಥಿಲಾವಸ್ಥೆಯಲ್ಲಿದ್ದು ಇನ್ನು ಕೆಲವು ಭಾಗಗಳು ನೆಲಕಚ್ಚಿವೆ.

ಈ ಕೋಟೆಯ ಒಳಭಾಗದಲ್ಲಿ ಕಾಶಿವಿಶ್ವನಾಥ ಹಾಗೂ ತಿಮ್ಮರಾಯಸ್ವಾಮಿಯ ದೇವಾಲಯಗಳಿವೆ. ಮೈಸೂರು ಒಡೆಯರ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯಗಳ ಬಳಿಯಲ್ಲಿಯೇ ಹಳೆಯದಾದ ಒಂದು ದೊಡ್ಡ ಕಟ್ಟಡದ ಬಹುಶಃ ಅರಮನೆಯೊಂದರ ಅವಶೇಷಗಳಿವೆ. ಈ ಕೋಟೆಯು ವಿಜಯನಗರ ಪೂರ್ವದ್ದಾಗಿದ್ದು ಬಹುಶಃ ೧೨ - ೧೩ನೆಯ ಶತಮಾನದ್ದೆಂದು ಹೇಳಬಹುದು.

ದೊಡ್ಡಬಳ್ಳಾಪು ತಾಲ್ಲೂಕಿನ ಸಾಸಲು ಹೋಬಳಿಯ *ತೋಡಲುಬಂಡೆ ಗ್ರಾಮದ* ಸನಿಹದಲ್ಲಿರುವ ಏಕಶಿಲಾ

* ಕನ್ನಡ ಉಪನ್ಯಾಸಕ, ಎಸ್.ಜೆ.ಆರ್.ಸಿ. ಮಹಿಳಾ ಕಾಲೇಜು, ಬೆಂಗಳೂರು.
** ಕನ್ನಡ ಉಪನ್ಯಾಸಕ, ಬೆಂ. ವಿ. ವಿ., ಸ್ನಾತಕೋತ್ತರ ಕೇಂದ್ರ, ಕೋಲಾರ.



ಬಂಡೆಯೊಂದರ ಮೇಲೆ ಒಂದು ಸಣ್ಣಕೋಟೆಯಿದೆ. ಆಯತಾಕಾರದ ಈ ಕೋಟೆಯಲ್ಲಿ ಬುರುಜುಗಳೇನೂ ಇಲ್ಲ. ಕಣಶಿಲೆಯ ತುಂಡುಗಳು (ಹಾಗೂ ಸಣ್ಣಪುಟ್ಟ ಚಪ್ಪಡಿ ತುಂಡುಗಳನ್ನು) ಒಂದರ ಮೇಲೊಂದನ್ನು ಪೇರಿಸಿ ಬಂಧಕ ಸಾಮಾಗ್ರಿಗಳನ್ನು ಬಳಸದೆ ನಿರ್ಮಿಸಿರುವ ಈ ಕೋಟೆಗೆ ಎರಡು ಪ್ರವೇಶ ದ್ವಾರಗಳಿವೆ. ಉತ್ತರ ದಿಕ್ಕಿನ ಗೋಡೆಯಲ್ಲಿ ಅಳವಡಿಸಿರುವ ಈ ದ್ವಾರಗಳಲ್ಲಿ ಒಂದು ದೊಡ್ಡ ಮಹಾದ್ವಾರವಿದ್ದು ಅದರ ಪಕ್ಕದಲ್ಲಿಯೇ ಒಂದು ಸಣ್ಣ ಬಾಗಿಲಿದೆ. ಕೋಟೆಯ ಒಳಭಾಗದಲ್ಲಿ ಈಗ ತೀರಾ ಶಿಥಿಲವಾಗಿರುವ ಶ್ರೀರಾಮನ ದೇವಾಲಯವಿದೆ. ಗರ್ಭಗೃಹದಲ್ಲಿ ಈಗ ಶ್ರೀರಾಮನ ವಿಗ್ರಹವಿಲ್ಲ. ಈ ದೇವಾಲಯದ ಎದುರಿನಲ್ಲಿರುವ ಗರುಡಗಂಬದಲ್ಲಿ ಆಂಜನೇಯನ ಉಬ್ಬು ಶಿಲ್ಪವಿದೆ. ಕೋಟೆಯ ಪೂರ್ವದಿಕ್ಕಿನ ಗೋಡೆಯು ಶಿಥಿಲವಾಗಿ ಕುಸಿದಿದೆ. ಉಳಿದ ಭಾಗವೆಲ್ಲಾ ಸುಭದ್ರವಾಗಿದ್ದು ಕೋಟೆಯ ಒಳಭಾಗದಲ್ಲಿಯೂ ಹಳೆಯ ದೊಡ್ಡಮನೆಯೊಂದರ ಅಡಿಪಾಯ ಮತ್ತಿತರ ಅವಶೇಷಗಳಿವೆ.

ಹುಲುಕಡಿಬೆಟ್ಟದ ಕೋಟೆ: ದೊಡ್ಡ ಬಳ್ಳಾಪುರ ತಾಲ್ಲೂಕಿಗೆ ಸೇರಿದ ದೊಡ್ಡಬೆಳವಂಗಲ ಹೋಬಳಿಯ ಹುಲುಕಡಿ ಬೆಟ್ಟದ ಮೇಲಿರುವ ಈ ಕೋಟೆಯು ನಿಜವಾದ ಅರ್ಥದಲ್ಲಿ ಗಿರಿದುರ್ಗವೆಂದು ಕರೆಯಬಹುದಾದ ಸುಭದ್ರವಾದ ಕೋಟೆಯಾಗಿದೆ. ದೊಡ್ಡದಾದ ಈ ಕೋಟೆಯು ೫ - ೬ ಹೆಕ್ಟೇರ್‌ನಷ್ಟು ವಿಶಾಲವಾಗಿದೆ. ದೊಡ್ಡ ಬೆಟ್ಟದ ಮೇಲಿರುವ ಈ ಕೋಟೆಯನ್ನು ಅಲ್ಲಿಯೇ ದೊರೆಯುವ ದೊಡ್ಡ ಬಂಡೆಗಳನ್ನು ತಮಗೆ ಬೇಕಾದ ಆಕಾರಕ್ಕೆ ತುಂಡರಿಸಿಕೊಂಡು ಒಂದರ ಮೇಲೊಂದರಂತೆ ಪೇರಿಸಿ ಸುಭದ್ರವಾಗಿ ನಿರ್ಮಿಸಲಾಗಿದೆ. ಕೋಟೆಯ ಸುತ್ತಲೂ ಪ್ರಪಾತವಿರುವುದರಿಂದ ಕೋಟೆ ಮತ್ತಷ್ಟು ದುರ್ಗಮವಾಗಿ ಶತ್ರುಗಳಿಗೆ ದುರ್ಭೇದ್ಯವಾಗಿದೆ. ಕೋಟೆಯ ಮೂಲೆಗಳಲ್ಲಿ ದೊಡ್ಡದಾದ ಹಾಗೂ ಎತ್ತರವಾದ ಬುರುಜುಗಳಿದ್ದು ಕಾವಲು ಗೋಪುರಗಳಂತೆ ಬಳಸಲು ಉಪಯುಕ್ತವಾಗಿವೆ. ಆ ಬುರುಜುಗಳ ಮೇಲೆ ನಿಂತು ನೋಡಿದರೆ ಬಹುದೂರದವರೆಗಿನ ಪ್ರದೇಶವು ಸ್ಪಷ್ಟವಾಗಿ ಕಾಣುತ್ತದೆ. ಕೋಟೆಗೋಡೆಯು ಎರಡು ಹಂತಗಳನ್ನು ಹೊಂದಿದ್ದು ಮಧ್ಯದಲ್ಲಿ ಕಲ್ಲು ಮಣ್ಣುತುಂಬಿ ಹೊರ ಮತ್ತು ಒಳಭಾಗದಲ್ಲಿ ಕಲ್ಲಿನ ದೊಡ್ಡ ತುಂಡುಗಳನ್ನು ಬಳಸಿಕೊಂಡು ತುಂಬಾ ಮಂದವಾಗಿರುವಂತೆ ನಿರ್ಮಿಸಲಾಗಿದೆ. ಈ ಗೋಡೆಯು ೪-೫ ಅಡಿಗಳಷ್ಟು ಮಂದವಾಗಿದೆ. ಕೋಟೆಯ ಮಧ್ಯದಲ್ಲಿ ಒಂದು ದೊಡ್ಡ ಕೋಣೆಯಿದ್ದು ಅದರ ಗೋಡೆಯೂ ಸಹ ತುಂಬಾ ಸುಭದ್ರವಾಗಿದ್ದು ಈ ಕೋಣೆಗೆ ಯಾವುದೇ ಬಾಗಿಲಾಗಲೀ ಕಿಟಕಿಯಾಗಲೀ ಇಲ್ಲ. ಸ್ಥಳೀಯರು ಇದನ್ನು ಮದ್ದಿನ ಮನೆಯೆಂದು ಕರೆಯುತ್ತಾರೆ.

ಈ ಕೋಟೆಯ ಒಳಭಾಗದಲ್ಲಿ ಒಂದು ವೀರಭದ್ರ ದೇವಾಲಯ ಹಾಗೂ ಒಂದು ಶಿವಾಲಯವಿದೆ. ಈ ಹುಲುಕಡ್ಡಿ ಊರಿನ ಬಗ್ಗೆ ವಿಷ್ಣುವರ್ಧನನ ಕ್ರಿ.ಶ. ೧೧೧೫ರ ಒಂದು ಶಾಸನವಿದೆ. ಆ ಶಾಸನದಲ್ಲಿ ಇದನ್ನು ಪುರ್ಕೋಡಿ ಎಂದು ಕರೆಯಲಾಗಿದೆ. ಈ ಊರಿಗೆ ಸಮೀಪದ ಅಕ್ಕತಮ್ಮನಹಳ್ಳಿಯಲ್ಲಿ ದೊರೆತ ಗಂಗ ರಾಚಮಲ್ಲನ ಕ್ರಿ.ಶ.೯೮೦ರ ಒಂದು ಶಾಸನದಲ್ಲಿ ಇದನ್ನು ಪುಱುಡಿ ಎಂದು ಕರೆಯಲಾಗಿದೆ. ಒಟ್ಟಿನಲ್ಲಿ ಈ ಹುಲುಕಡಿ ಕೋಟೆಯು ಕ್ರಿ.ಶ.೧೦ನೆಯ ಶತಮಾನದ ಕಾಲಕ್ಕಾಗಲೇ ಅಸ್ಥಿತ್ವದಲ್ಲಿತ್ತೆಂದು ಹೇಳಬಹುದು.

ಮಾಕಳಿದುರ್ಗ. ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಗೆ ಸೇರಿದ ಈ ಗಿರದುರ್ಗವು-ಸಾಸಲಿನಿಂದ ೧೨ಕಿ.ಮೀ ಹಾಗೂ ಘಾಟಿಸುಬ್ರಹ್ಮಣ್ಯದಿಂದ ೧೨ಕಿ.ಮೀ.ದೂರದಲ್ಲಿದೆ. ಬೆಟ್ಟದ ಬುಡದಿಂದ ಸುಮಾರು ಮೂರು ಕಿಲೋ ಮೀಟರ್‌ಗಳಷ್ಟು ದುರ್ಗಮವಾದ ಕುರುಚಲು ಕಾಡಿನ ಬಳಸುದಾರಿಯಲ್ಲಿ ಸಾಗಿದರೆ ಈ ದುರ್ಗವನ್ನು ತಲುಪಬಹುದು. ಈ ಕೋಟೆಯಂತಹ ದುರ್ಗಮವಾದ, ಸುಭದ್ರವಾದ ಹಾಗೂ ದೊಡ್ಡದಾದ ಕೋಟೆ ಬೆಂಗಳೂರು ಜಿಲ್ಲೆಯಲ್ಲಿಯೇ ಮತ್ತೊಂದು ಕೋಟೆ ಇಲ್ಲವೆಂದು ಹೇಳಿದರೆ ಅದರಲ್ಲಿ ಅತಿಶಯೋಕ್ತಿಯಿಲ್ಲ. ಕೋಟೆಯ ಒಳಭಾಗವಿಡೀ ಈಗ ಪೊದೆ, ಕುರುಚಲು ಗಿಡಗಳಿಂದ ಆವೃತ್ತವಾಗಿದ್ದು ಹಲವು ಪ್ರಾಚೀನ ಕಟ್ಟಡಗಳ ಅವಶೇಷಗಳಿಂದ ಕೂಡಿದ್ದು ಕರಡಿ, ಕಾಡುಹಂದಿ, ಮುಳ್ಳುಹಂದಿ, ತೋಳ, ನರಿ, ಹಾವುಗಳಂತಹ ಪ್ರಾಣಿಗಳ ಆವಾಸಸ್ಥಾನವಾಗಿದೆ. ಈ ಕೋಟೆಯು ಎರಡು ಮೂರು ಸುತ್ತುಗಳಿಂದ ಕೂಡಿದ್ದು ಹಲವು ಬುರುಜುಗಳಿವೆ. ಕೋಟೆಯ ಒಳಭಾಗದಲ್ಲಿ ಒಂದು ಮದ್ದಿನ ಮನೆಯಿದ್ದು ಅದರ ಒಂದು ಭಾಗದಲ್ಲಿ ದುಂಡನೆಯ ರಂಧ್ರವಿದೆ. ಆ ಕಟ್ಟಡದ ಸನಿಹದಲ್ಲಿಯೇ ಒಂದು ಶಿವಾಲಯವಿದೆ. ಇದೂ ಸಹ ಸುಮಾರು ೯-೧೦ನೆಯ ಶತಮಾನದ ಕೋಟೆಯಾಗಿರಬಹುದೆಂದು ತೋರುತ್ತದೆ.

ನಮ್ಮ ನಾಡಿನ ಹೆಮ್ಮೆಯ ಐತಿಹಾಸಿಕ ಪರಂಪರೆಯ ಸ್ಮಾರಕಗಳಾಗಿರುವ ಈ ಕೋಟೆಗಳನ್ನು ಉಳಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯ

ಕೆಳದಿ ಗುಂಡಾಜೋಯಿಸ್*

ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಪತ್ರಾಗಾರದಲ್ಲಿ ಕೆಳದಿ ಇತಿಹಾಸೋತ್ತರ ಆಕರಗಳು

ಕ್ರಿ.ಶ. ೧೭೬೩ ರಲ್ಲಿ ಕೆಳದಿ ಸಂಸ್ಥಾನವು ನವಾಬ್ ಹೈದರಾಲಿಯ ಆಕ್ರಮಣಕ್ಕೆ ತುತ್ತಾಗಿ ವಶವಾಯಿತು. ಕೆಳದಿ ರಾಜಧಾನಿ ಬಿದನೂರು ಆತನ ಕೈಸೇರಿದ ಕೂಡಲೇ ಹೈದರನು ಬಿದನೂರಿಗೆ ಹೈದರ್‌ನಗರವೆಂದು ಹೆಸರಿಟ್ಟು ಅಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ ಹೈದರಿ ಅಥವಾ ಬಹದ್ದುರಿ ನಾಣ್ಯಗಳನ್ನು ಚಲಾವಣೆ ಮಾಡಿದನು. ಇಲ್ಲಿಯ ಆಡಳಿತ ನೋಡಿಕೊಳ್ಳಲು ಮಧುಗಿರಿಯ ವೆಂಕಪ್ಪಯ್ಯನಿಗೆ(೧) ದಿವಾನ್‌ಗಿರಿಯನ್ನಿತ್ತು ಅವನು ಹೈದರ್‌ನಗರದಲ್ಲಿ ನೆಲಸುವಂತೆ ಮಾಡಿದನು. ಹೈದರ್‌ನಗರ ಕಾಲಕ್ರಮೇಣ ನಗರ ಎಂದಾಯಿತು. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ 'ನಗರ' (ಹಳೇನಗರ) ದಲ್ಲಿ ಮರೆತು ಹೋದ ಕೆಳದಿ ಸಾಮ್ರಾಜ್ಯದ ಅಪಾರ ಅವಶೇಷಗಳು ಈಗಲೂ ಕಣ್ಣಿಗೆ ಕಟ್ಟಿದಂತೆ ಗೋಚರಿಸುತ್ತವೆ. ದಿ ೭-೧೨-೧೭೮೨ರಲ್ಲಿ ಹೈದರನ ಮರಣಾನಂತರ(೨) ದಿ ೨-೧-೧೭೮೩ರಂದು ಈತನ ಮಗ ಟಿಪ್ಪು ಸುಲ್ತಾನ್ ಸರ್ವಾಧಿಕಾರಿಯಾದನು. ಇದೇ ಸಮಯದಲ್ಲಿ ಮುಂಬಯಿ ಕಡೆಯಿಂದ ಜನರಲ್ ಮ್ಯಾಥ್ಯೂಸನು ಬಿದನೂರಿಗೆ ಧಾವಿಸಿ ಬಂದು ಮುತ್ತಿಗೆ ಹಾಕಿದನು. ಬಿದನೂರಿನ ಕಿಲ್ಲೇದಾರನಾಗಿದ್ದ ಷೇಕ್ ಅಯಾಜನು ಈತನನ್ನು ಎದುರಿಸಲಾರದೇ ಇದ್ದುದರಿಂದ ಬಿದನೂರು (ಹೈದರ್‌ನಗರ) ಕೋಟೆ, ಹಣ, ಆಭರಣಗಳನ್ನು ಮ್ಯಾಥ್ಯೂಸನು ವಶಪಡಿಸಿಕೊಂಡು ಮುಂಬಯಿಗೆ ಹೊರಟುಹೋದನು.(೩) ಕೆಲವು ದಿನಗಳಲ್ಲಿ ಟೀಪುವು ಅಪಾರ ದಂಡಿನೊಂದಿಗೆ ಬಿದನೂರಿಗೆ ಬಂದಿಳಿದನು. ಮ್ಯಾಥ್ಯೂಸನಿಗೆ ಇದು ಅನಿರೀಕ್ಷಿತ ಆಘಾತವುಂಟಾಗಿ ಅವನು ಸೋತುಹೋಗಿದ್ದರಿಂದ ಬಿದನೂರು ಅನಾಯಾಸವಾಗಿ ಟಿಪ್ಪುವಿನ ವಶವಾಯಿತು. ದಿ ೨೨-೬-೧೭೯೯ರಂದು ಆದ ಒಪ್ಪಂದದಂತೆ ಕೆಳದಿ ಸಂಸ್ಥಾನದ ಬಿದನೂರು (ನಗರ)(೪) ಬ್ರಿಟಿಷರ ಮುಖಾಂತರ ಮೈಸೂರು ರಾಜ್ಯಕ್ಕೆ ಸೇರಿತು. ಹೈದರಾಲಿ ಮತ್ತು ಟೀಪೂವಿನ ಪತ್ರ ವ್ಯವಹಾರಗಳು ಬಿದನೂರನ್ನು ಕುರಿತು ಹಾಗೂ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಗೆ ವಹಿಸಿದ ಅಧಿಕಾರಗಳ ಆಕರಗಳು ಈ ಕೆಳಕಂಡಂತಿವೆ.

1. Articles of Firmaund Granted by the Nawab Hyder Ali Khan Bahadur, May 27, 1763.(೫) (Article 6,10) ನವಾಬನ ಮುದ್ರೆ ಹಾಗೂ ಸಹಿಗಳಿರುವ ಪತ್ರವು Bednur, the 10th of Morjee, 1176, on the 27th of May Anno Domini, 1763, 23-2-1766, English Treaty with Hyder Ali - 3-4-1769, 8-8-1770.
2. English East India Company and the Nawab Tippoo Sultan Bahadoor on his own behalf for the countries of Seringapatam, Hyder Nagar etc., and all his other possessions settled by Anthony Sadleir, George Leonard Staunton, and John Hudleston, Esquires on behalf of the Honourable English East India Company, for all their possessions and for the Carnatic Payen Ghat by virtue of powers delegated to the honourable the president and select committee of Fort St George for that purpose by the honourable the Governor General and Council appointed by the king and Parliament of Great Britain to direct and control all political affairs of the honourable English East India Company

* ಕೆಳದಿ, ಸಾಗರತಾಲೂಕು, ಶಿವಮೊಗ್ಗ ಜಿಲ್ಲೆ, ೫೭೭೪೦೧, ಕೆಳದಿವಸ್ತು ಸಂಗ್ರಹಾಲಯ

in India, and by the said Nawab, agreeable to the following articles which are to be strictly and invariably observed, as long as the son and the moon shall last,(೬) by both parties; that is to say, by the English Company and the three Governments of Bengal,(೭) Madras and Bombay, and the Nawab Tippoo Sultan Bahadur - ಇಂತಹ ಪತ್ರಗಳಲ್ಲಿ ಟಿಪ್ಪು ಹಾಗೂ ಇಂಗ್ಲೀಷ್ ಅಧಿಕಾರಿಗಳ ಸಹಿಯಿರುವ ಅಭಿಲೇಖೆಯಲ್ಲಿ 'ಹೈದರ್ ನಗರ'ವೂ ಒಂದು ಸಂಸ್ಥಾನವಾಗಿದ್ದ ಉಲ್ಲೇಖಗಳನ್ನೂ ಗಮನಿಸಬಹುದು. ಪ್ರಕೃತ ಇಂತಹ ಪತ್ರಗಳ ಮಾಲಿಕೆ ಯಲ್ಲಿ ಕೆಳದಿ ಸಂಸ್ಥಾನವು ಮೈಸೂರಿಗೆ ವಿಲೀನವಾದ ನಂತರದ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಬಿದನೂರು (ನಗರ) ಇತಿಹಾಸ ಕುರಿತು ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಪತ್ರಾಗಾರಗಳಲ್ಲಿ ಕಂಡು ಬರುವ ಉಲ್ಲೇಖಗಳನ್ನು ಮಾತ್ರ ಇಲ್ಲಿ ನಿರೂಪಿಸಿ ಕೊಡಲಾಗಿದೆ.

ಡ್ಯೂಕ್ ಆಫ್ ವೆಲ್ಲಿಂಗ್‌ಟನ್ನಿನ ಪತ್ರಾಗಾರ ವಿವರ

ದಿ. ೨-೧೨-೧೭೯೯ರಿಂದ ಆರ್ಥರ್ ವೆಲ್ಲಸ್ಲಿಯಿಂದ ಆರಂಭಗೊಂಡು ದಿ. ೨-೩-೧೮೦೫ರಲ್ಲಿ ದಿವಾನ್ ಪೂರ್ಣಯ್ಯನವರಿಗೆ ಬರೆದ ಪತ್ರಗಳಲ್ಲಿ ೧೭೯೯ರಿಂದ ೧೮೦೫ರ ವರೆಗಿನ ಕರ್ನಾಟಕ ಐತಿಹಾಸಕ್ಕೆ ಸಂಬಂಧಿಸಿದ ಅಂಶಗಳು ಈ ಕೆಳಕಂಡಂತಿವೆ.

೧. ಆರ್ಥರ್ ವೆಲ್ಲಸ್ಲಿಯು ಶ್ರೀರಂಗಪಟ್ಟಣ ಮೊಕ್ಕಾಂನಿಂದ ಬರೆದ ಪತ್ರಗಳು - ೭೩
೨. ಅಲ್ಲಿನ ಸ್ಥಳಗಳ ಹೆಸರುಗಳು: ವೀರರಾಜೇಂದ್ರಪೇಟೆ, ಸ್ಲೋನಿನದಿ, ಕಣ್ಣಾನೂರು, ತಲಚೇರಿ, ಚಿತ್ರದುರ್ಗ, ಹರಿಹರ, ಆರ್ಚಿನೆಲ್ಲಿ, ಚಿನ್ನನಾಗಮಂಗಲ, ಬೇಲೂರು, ಕರಪ್, ಚೈಲೂರು, ಕಳ್ಳಂಬೆಳ್ಳ, ದಾವಣಗೆರೆ, ಸಿರಾ, ವುಡನೆಲ್ಲಿ, ಯೇಯಮಂಗಲಂ, ತುಂಗಭದ್ರಾತೀರ, ಕನ್ನೆ ಬಿದನೂರು, ಹಾವೇರಿ, ವರದಾತೀರ, ಸವಣೂರು, ಶಿರಹಟ್ಟಿ ಲಕ್ಷ್ಮೇಶ್ವರ, ದಮ್ಮಲ್, ಮಲಪ್ರಭಾ, ಸೌಂದತ್ತಿ, ಕಿತ್ತೂರು, ಹುಬ್ಬಳ್ಳಿ, ಕರ್ತಿಕೆರಾ, ಜಾಲಿಹಾಳ್, ಕನ್ನುಗೇರಿ, ಯಪಲ್ ಪೆರ್ಸ್ವಿ, ನೌಲಿ, ಕನ್ನಗೆರಿ, ಕೊಪ್ಪಳ, ಕೊಲೂರು, ಸಕೊಂಡಾ, ಹೊಸಕೋಟೆ, ನೆಲ್ಲೋಡಿ, ಮಿಸರಿಕೊಟಾ, ಅಂಬ್ರಗಿ, ಚೆನ್ನಪಟ್ಣ, ವಿಂಕಟಗೆರಿ, ಫೋರ್ಟ್ ಸೆಂಟ್ ಜಾರ್ಜ್, ಟ್ರಿಂಕಾಮಲೆ, ಬೊಂಬಾಯಿ, ವರಗಮ್, ತಿಮಿಲ್ಲೂ, ಪಾದಶಾಪುರ. ೫೯
೩. ಮಿ. ವೆಬ್‌ರ ಪತ್ರಗಳು - ೨
೪. ವಿಲಿಯಂ ಕಿರ್ಕ್‌ಪತ್ರಿಕ್ ಪತ್ರಗಳು - ೧
೫. ಹೆನ್ರಿ ರಸ್ಸೆಲ್ (ಯಪಲ್‌ಪೆರಿಯಿಂದ) - ೨
೬. ಅಲೆಕ್ಸ್ ಮೆಕ್ ಫಾರ್‌ಲೇನ್. (Alex Mc Farlane) ಪತ್ರಗಳು. - ೩
೭. ಆರ್. ಟ್ಯೂರಿಂಗ್ - (೧) (R. Turing) ಪತ್ರಗಳು-೧
೮. ಹೆಚ್. ಮ್ಯಾಕೀ (H.mackay) ಪತ್ರ-೧
೯. ಕ್ಯಾಪ್ಟನ್ ರಾಬರ್ಟ್ ಮನ್ರೋ ಪತ್ರ.-೧
೧೦. ಮೀಗ್ನನ್ (Meignan) ಪತ್ರ-೧
೧೧. ಬ್ರಿಗೇಡಿಯರ್ ಹಾಡ್ಗ್‌ಸನ್ ಪತ್ರಗಳು -೨
೧೨. ಜೆ. ಸಾರ್ಟೋರೀನ್ಸ್ (J. Sartorins) ಪತ್ರ-೧
೧೩. ಜಿ. ಲ್ಯಾಂಗ್ ಕ್ಯಾಪ್ಟನ್ (G. Lang Captain) ಪತ್ರಗಳು - ೨
೧೪. ಆರ್.ಬಾರ್ಕ್ಲೇ (R.Barclay) ಪತ್ರ. -೧

ಒಟ್ಟು ೧೫೦ ಪತ್ರಗಳು.

ಕೆಳದಿ ಇತಿಹಾಸೋತ್ತರ ಸಂಗತಿಯ ಪತ್ರಗಳು

೧. ಆರ್ಥರ್ ವೆಲ್ಲಸ್ಲಿಯ ಪತ್ರಗಳು - ೨೪
೨. ರಕ್ಷಣಾ ಮತ್ತು ಸೈನ್ಯ ಇಲಾಖೆಯ ಕಾರ್ಯದರ್ಶಿ ಆರ್.ಟ್ಯೂರಿಂಗ್ (R. Turning) ಪತ್ರ,- ೧
೩. ಕರ್ನಲ್ ಪಾಮರ್ಸ್ ಪತ್ರ - ೧
೪. ಆರ್. ಬಾರ್ಕ್ಲೇ (R. Barclay) ಪತ್ರ - ೧

ಒಟ್ಟು ೨೭ ಪತ್ರಗಳು

ಕೆಳದಿ ಇತಿಹಾಸೋತ್ತರ ಸಂಗತಿಗಳನ್ನೊಳಗೊಂಡ ಪತ್ರಾಗಾರದಲ್ಲಿ ಶ್ರೀರಂಗಪಟ್ಟಣದಿಂದ ಬರೆದ ಆರ್ಥರ್ ವೆಲ್ಲಸ್ಲಿಯಿಂದ ಆರಂಭಿಸಿ ಆರ್. ಬಾರ್ಕ್ಲೇ ರವರೆಗಿನ ಪತ್ರಗಳು ಮಹತ್ವಪೂರ್ಣವಾಗಿದ್ದು ವಿಪುಲ ಆಕರಗಳನ್ನೊಳಗೊಂಡಿವೆ. ಬಿದನೂರುರಾಜ್ಯ, ಕೌಲೇದುರ್ಗ, ನಗರ (ಬಿದನೂರಿಗೆ ಹಿಂದೆಯೇ ತಿಳಿಸಿದಂತೆ ನಗರವೆಂಬುದಾಗಿಯೂ ಕರೆಯಲಾಗಿದೆ), ಚಂದ್ರಗುತ್ತಿ, ಕನ್ನೇಬಿದನೂರು, ಕಾರೀಬಿದನೂರಿನ ಇತಿಹಾಸ ಗಳೂ, ಪೂನಾದ ಪರಶುರಾಮ ಭಾವೋ ಹಾಗೂ ಈತನ ಪುತ್ರ, ಪೈಚ್‌ರಾಜಾ (ಗೈಬು ರಾಜ?) ನಗರ - ಹರಿಹರದ ಮುಖ್ಯ ಅಮಲ್‌ದಾರ, ಬೆಂಕಿ ನವಾಬ, ಬಲ್ಲಂರಾಜ, ಮೇಜರ್ ಮನ್ರೋ ಮುಂತಾದವರ ಸಂಗತಿಗಳೂ ಹಾಸುಹೊಕ್ಕಾಗಿ ಸಮ್ಮಿಳಿತ ಗೊಂಡಿವೆ. ತಮಿಳು ಭಾಷೆಯ ದಿನಚರಿಯಲ್ಲಿ ಆನಂದರಂಗ ಪಿಳ್ಳೆಯು ಹಾಗೂ ಆಗಿನ ಮದರಾಸ್ ಪ್ರಾಂತದ ಗೌರ್ನರ್ ಜನರಲ್ ಉಲ್ಲೇಖಿಸಿದಂತೆ(೮) ಬಿದನೂರು ರಾಜ್ಯವೆಂಬುದಾಗಿ ಉದ್ಗರಿಸಲಾಗಿದೆ. ಬಿದನೂರು ಕೆಳದಿ ಇತಿಹಾಸ ಹಾಗೂ ಶಾಸನಗಳಲ್ಲಿ ಉಲ್ಲೇಖಿಸಿದಂತೆ ಕೆಳದಿಯ ರಾಜಧಾನಿಯು ಮಾತ್ರವಾಗಿದ್ದು ಕೆಳದಿ ರಾಜ್ಯವೆಂಬುದಾಗಿ ಪರಿಗಣಿಸತಕ್ಕುದಾಗಿದೆ;

ಹಾಗೆಯೇ ಕೆಳದಿಯನ್ನು ಪಾಳೆಯಪಟ್ಟಿ ಗಿಂತಲೂ ರಾಜ್ಯದ ಸ್ಥಾನಮಾನದಲ್ಲಿ ಗೌರವಿಸಿ ಉಲ್ಲೇಖಿಸಿರುವುದನ್ನು ಇತಿಹಾಸ ವಿದ್ವಾಂಸರು ಗಮನಿಸತಕ್ಕುದಾಗಿದೆ.[೯]

ಪತ್ರಾಗಾರದಲ್ಲಿರುವ ಮಾದರಿಯ ಪತ್ರಗಳು

ಕೆಳದಿ ಇತಿಹಾಸೋತ್ತರ ಮಾಹಿತಿಯನ್ನು ಕುರಿತು ಡ್ಯೂಕ್ ಆಫ್ ವೆಲ್ಲಿಂಗ್‌ಟನ್‌ನ ಪತ್ರಾಗಾರಗಳಲ್ಲಿರುವ ಹಲವು ಮಾದರಿಗಳನ್ನು ಇಲ್ಲಿ ನಿರೂಪಿಸಲಾಗಿದೆ.

ನಂ. ೧೮೦

Seringapatam, November 30th 1801.

Sir,

I inclose an extract of a letter which I have received from the Chief Secretary of Government relative to the repairs of the ***Fort of Nuggar,*** *respecting which I had a conversation with the Dewan in your presence some time ago.*

I shall be obliged to you if you will procure from the Dewan the estimate of the expense to be incurred in the proposed repairs, as mentioned in the the first paragraph of the inclosed extract.

I imagine that the repair which the Dewan proposes to give to the Fort of Nuggur will not be greater than that alluded to in the second paragraph of the inclosed extract; and if that should be the case I will use the discretion given to me to authorize expense on that account.

I have the honour to be,

Sir,

Your most obedient humble servant

J.H. piele Esqr *Arthur Wellesley*

Extract of letter from the Secretary of Government Military Department to the Honorable *Col. Wellesley*, dated 23rd November 1801.

"3. His Excellency the Commander in Chief has communicated to the Governor in Council your letter to the Deputy Adjutant General, of the 8th instant, and his Lordship in Council concurs in your opinion respecting the expediency of rendering the fort of Nugger a permanent military station for the Troops of the Company, and likewise approves your suggestion for entrusting the repairs which it may be determined to execute to that fortress to the superintendence of the Dewan of the Rajah of Mysore: it will however be desirable before the repairs which may be requisite, shall be commenced upon an extensive scale, that an estimate should be prepared of the expense likely to attend that work, for the consideration of the Governor in Council, and I am directed to desire that orders may be given for that purpose.

4. His Lordship in Council however permits you to use your discretion with regard to the execution of such repairs to the fortifications of ***Nugger,*** *as may be in your opinion immediately required for the security of that place."*

ಈ ಪತ್ರಗಳಿಂದ ಕೆಳದಿ ರಾಜಧಾನಿ ಬಿದನೂರು ಅಥವಾ ನಗರದ ಕೋಟೆಯು ಬ್ರಿಟಿಷರಿಗೆ ಎಷ್ಟು ಪ್ರಾಮುಖ್ಯವಾದ ಮಿಲಿಟರಿ ಕೇಂದ್ರವಾಗಿತ್ತೆಂಬುದು ವ್ಯಕ್ತಪಡುತ್ತದೆ. ಭಾರತ ಸರಕಾರದ ಪುರಾತತ್ವ ಅವಶೇಷಗಳಲ್ಲಿ ಈ ಕೋಟೆಯು ಪ್ರಾಮುಖ್ಯವಾಗಿದ್ದರೂ ಪ್ರಸಿದ್ಧಿ ಹೊಂದದೆ ಕೇವಲ ಫಲಕವನ್ನು ಮಾತ್ರ ಕಾಣಬಹುದಾಗಿದೆ.

ದಿನಾಂಕ ೧೯-೫-೧೮೦೪ರಂದು ಆರ್.ಬಾರ್‌ಕ್ಲೇ ನಗರ (ಕೆಳದಿ ರಾಜಧಾನಿ)ದ ಕಮ್ಯಾಂಡಿಂಗ್ ಅಧಿಕಾರಿಗೆ ಬರೆದ ಪತ್ರವೊಂದು ಗಮನಾರ್ಹವಾಗಿದ್ದು ಈ ಕೆಳಕಂಡಂತಿದೆ -

To

The Officer Commanding Nuggur

Sir

The Honorable Major General Wellesley directs me to transmit to you the accompanying copy of an Arzee from the Ammildar of Nugger to the Dewan of Mysore, stating certain instances where in you have interfered in the Police of the Town of Nuggur. In consequence of which the Major General has directed me to inform you that you ought not to interfere in the police, or in the disputes between the inhabitants of Nuggur, or the adjacent districts, excepting when you may be applied to by the Aumil,

or other civil officer of the Rajah's Government for military and, in support of their authority.And he desires that you will conduct yourself accordingly in all future cases.

In reparation of the injury which their just and necessary authority has sustained, by your interference, in the case stated in the Arzie, Major General Wellesley desires that you will send a message to Shunkeriya, the Amildar, informing him that you have received the General's orders on the subject of the disturbance which took place during the marriage of Narrainya, which you are directed to make the Amildar aquainted with, and requesting that he will attend you for that purpose accompanied by the Sheristadar, and such others of the officers of the Government and of the principal inhabitants of the Town, as he may choose to have present on the occassion, and when they have met at your quarters you will state to the Aumildar, in clear and distinct terms, that Major General Wellesley has disapproved of your interference in support of the pretentions of Narrainya to certain privileges in the celebration of his marriage, at ***Nuggur,*** *and that you will in the same manner, inform the Amildar of the only case wherein you will, in future, interfere in the* ***Police of Nuggur,*** *or in the disputes between the inhabitants of that Town, or the adjacent districts.*

Major General Wellesley imagines that you have been guided in the affair above alluded to by the interested representations of Narrain pillah the conicopoly of the Pay Office at Nuggur, stated in the Arzie to be your Dubashi he therefore desires that, that man be ordered to attend when the Aumildar comes to your house, to hear the Major General's orders above detailed, and that you will inform him, in presence of the Amildar, &c., that if the General ever hears of Narrain Pillah's interference again, in many matter whatever, not immediately belonging to the office which he holds in the company's service, he will try him as a camp fallower, punish him, and turn him down into the Carnatic.

In case you should not be able to explain the subject of this latter yourself in the country language to the parties concerned, The Hon. Major General Wellesley desires that you will employ any of the European officers in the Garrison who may be capable of doing so, or any of the Native Officers, and on no account to employ Narrain pillah to interpret for you on that occasion.

Camp at the Boreghart *(Signed)*
19th May 1804 *R.Barclay*
Deputy Adjutant General
in Mysore,&c.,

ನಂ. ೧೭೬ ನೇ ಪತ್ರದಲ್ಲಿ ಆರ್ಥರ್ ವೆಲ್ಲಸ್ಲಿಯ ಇದರ ಪೂರ್ವಭಾವಿ ವಿವರಣೆಗಳಿವೆ. ಅದರ ಪಾಠಾಂತರ ಈ ರೀತಿ ಇದೆ.

Camp at Worgam, May 21st 1804

My dear Sir,

I have received your letter of the 10th instant, and I enclose a copy of the orders which have been sent to Captain Stuart, who is the officer commanding at Bednore at present, Pournaya will probably be able to let you know the consequences of these orders.

Ever my dear Sir
Captain Wilks, *yours most sincerely*
Arthur Wellesley

ಪತ್ರ ಸಂಖ್ಯೆ ೧೭೯

Seriangapatam,
December 1st, 1804,
Sir ,

I have had the honour of receiving your letter of this date. It is my opinion that the ordinance at Nuggur cannot be better disposed of than in the forts of Mysore and Bangalore.

The Military stores at Bednore are of no use

for the company's Service; and I will give directions to the Officer Commanding at Bednore to hand them over to Ram Row, excepting such of them as may be necessary for the Garrison.

I have the honour to be

Sir

Your most obedient humble servant

Major Wilks *Aurthur Wellesley*

ದಿ ೧೯-೫-೧೮೦೪ರಲ್ಲಿ ಉಲ್ಲೇಖಿಸಿರುವ The Officer Commanding Nuggurಗೆ ಬರೆದ ಆರ್.ಬರ್ಕ್ಲೆಅವರ ಹಾಗೂ ದಿ ೧-೧೨-೧೮೦೪ರಂದು ಶ್ರೀರಂಗಪಟ್ಟಣದಿಂದ ಆರ್ಥರ್ ವೆಲ್ಲಸ್ಲಿಯು ಬರೆದ ಪತ್ರಗಳಲ್ಲಿರುವ Officer Commanding at Bednore ನ ಹೋಲಿಕೆಗಳನ್ನು ಗಮನಾರ್ಹವಾಗಿ ಅವಲೋಕಿಸಬಹುದು. ಇದರಿಂದ ಬಿದನೂರು, ನಗರವೆಂಬುದು ಸ್ಪಷ್ಟವಾಗಿದ್ದು ಈ ಕಾಲದಲ್ಲಿ ಕೆಳದಿ ಇತಿಹಾಸೋತ್ತರ ಕಾಲದ ಬಿದನೂರಿನ ಅಧಿಕಾರಿ ರಾಮರಾವ್ ಎಂಬುದು ಸ್ಪಷ್ಟಗೊಳ್ಳುತ್ತದೆ. [*ಬಹುಶಃ ಈ ಅಧಿಕಾರಿ ಮಹಾರಾಷ್ಟ್ರದ ಬಾದಾಮಿಯಿಂದ ಬಂದು ೧೭೯೯ರಲ್ಲಿ ದಿವಾನ್ ಪೂರ್ಣಯ್ಯನವರಿಂದ ನಗರದ ಫೌಜದಾರನಾಗಿ ನೇಮಕಗೊಂಡು ೧೮೦೫ರವರೆಗೆ ಅಲ್ಲಿ ಅಧಿಕಾರದಲ್ಲಿದ್ದು ನಂತರ ಸವಾರಿ ಕಚೇರಿ ಭಕ್ಷಿಗಿರಿ ಪಡೆದ ರಾಮರಾವ್ ಎಂಬ ವ್ಯಕ್ತಿಯಗಿರಬೇಕು. ನಗರ ಪ್ರಾಂತ್ಯದಲ್ಲಿ ತನ್ನ ಬಂಧು ವರ್ಗದ ಜನರನ್ನು ನೇಮಿಸಿಕೊಂಡು ಪ್ರಬಲನಾಗಿದ್ದ. ಇವನ ಅಧಿಕಾರ ವ್ಯಾಪ್ತಿ ಬಹಳ ವಿಸ್ತಾರವಾಗಿತ್ತು- (ಸಂ.)*]

ಉಪಸಂಹಾರ

ಮೈಸೂರು ಒಡೆಯರ ಚರಿತ್ರೆ ಕುರಿತು ಒಂದಿಲ್ಲೊಂದು ರೂಪದಲ್ಲಿ ವಿಪುಲ ಮಹಾಪ್ರಬಂಧಗಳು ಉಪಲಬ್ಧವಿವೆ. ಆನಂದರಂಗಪಿಳ್ಳೆಯ ತಮಿಳು ದಿನಚರಿಯಲ್ಲಿ ಪ್ರಸ್ತಾಪಿಸಿದಂತೆ ಮೈಸೂರು ಇತಿಹಾಸದಂತೆಯೇ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯಲ್ಲಿ ಕೆಳದಿಗೆ ಪ್ರಾಮುಖ್ಯತೆಯಿರುವುದನ್ನು ವಿದ್ವಾಂಸರು ಅಲ್ಲಗಳೆಯುವಂತಿಲ್ಲ ಸಮೃದ್ಧ ಆಕರಗಳಿಂದ ಕೂಡಿದ ಕೆಳದಿ ಇತಿಹಾಸದ ಕಡೆಗೆ ಅಧ್ಯಯನ ನಡೆಯುತ್ತಿದ್ದರೂ ಅದು ಅತ್ಯಲ್ಪವೆಂದೇ ಹೇಳಬಹುದು. ಅದರಲ್ಲೂ ೧೭೬೩ರಲ್ಲಿ ಕೆಳದಿ ಪತನಾನಂತರ ಹೈದರಲ್ಲಿ ಟಿಪ್ಪೂವಿನಿಂದ ಬ್ರಿಟಿಷರ ಕಾಲದವರೆಗೆ ಇರುವ ಆಕರಗಳು ಸೆಂಟ್ ಫೋರ್ಟ್ ಜಾರ್ಜ್, ಕಿರ್ಮಾನಿ, ದಿ ಲಾಟೂರ್, ಜಾಕೋಬಸ್ ಕ್ಯಾಂಟರ್ ವಿಶ್ಚರ್ ಮುಂತಾದವರ ಆಕರ ಸಾಮಾಗ್ರಿಗಳೊಂದಿಗೆ ದಿವಾನ್ ಪೂರ್ಣಯ್ಯನವರ ಕಾಲದ ಚಾರಿತ್ರಿಕ ಸಂಗತಿಗಳು ಕೆಳದಿ ಇತಿಹಾಸೋತ್ತರ ಕಾಲದ ಚರಿತ್ರೆಯ ಅಧ್ಯಯನಕ್ಕೆ ವಿಪುಲವಾಗಿ ಸಹಕಾರಿಯಾಗುತ್ತವೆ. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಅನೇಕ ಹಸ್ತಪ್ರತಿಗಳು, ಶಾಸನಗಳು ಬಂಗಾಳ ಸರಕಾರಕ್ಕೆ ರವಾನಿಸಿದ್ದು ಇವುಗಳ ಕ್ಯಾಟಲಾಗ್ ಅಲಭ್ಯ.

ಹಲವು ಕಾಲ ಮೈಸೂರು ಒಡೆಯರಿಗೆ ಶ್ರೀರಂಗಪಟ್ಟಣವು ಹಾಗೂ ಬೆಂಗಳೂರು ರಾಜಧಾನಿಯಾಗಿದ್ದಾಗಲೂ ಅವರನ್ನು ಮೈಸೂರು ಒಡೆಯರೆಂದೇ ಪ್ರಸ್ತಾಪಿಸಲಾಗಿದೆ. ಅದೇ ರೀತಿಯಲ್ಲಿ ಇತಿಹಾಸ ಹಾಗೂ ಶಾಸನಗಳಲ್ಲಿ ಕೆಳದಿ ಮೂಲ ಸಂಸ್ಥಾನದ ಅರಸರು ಎಂದೇ ಸ್ಪಷ್ಟ ನಿರ್ದೇಶನವಿರುವಾಗ ಇಕ್ಕೇರಿ ಪಾಳೆಯಗಾರರು, ಬಿದನೂರು ಹಾಗೂ ನಗರ ಪಾಳೆಯಗಾರರು ಎನ್ನುವ ಬದಲು ಕೆಳದಿ ಸಂಸ್ಥಾನದ ಅರಸರೆಂದೇ ಪರಿಗಣಿಸಿ ಪ್ರಸ್ತಾಪಿಸುವುದುಚಿತ. ಅಂತೇ ಆನಂದರಂಗಪಿಳ್ಳೆಯ ತಮಿಳು ದಿನಚರಿಯಲ್ಲಿರುವಂತೆಯೇ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಪತ್ರಾಗಾರದಲ್ಲಿಯೂ ಅನೇಕ ಪಾಳೆಯಪಟ್ಟುಗಳನ್ನು ಒಳಗೊಂಡ ಕೆಳದಿಯು (ಬಿದನೂರು) ರಾಜ್ಯದ ಸ್ಥಾನಮಾನಕ್ಕೇರಿ[೧೧] ಉಲ್ಲೇಖಿಸಿರುವುದನ್ನು ಗಮನಿಸಬೇಕಾಗುತ್ತದೆ.

ಕ್ರಿ. ಶ. ೧೬೬೩ರಲ್ಲಿ ಕೆಳದಿ ರಾಜ್ಯದಲ್ಲಿ ಸಂಚರಿಸಿದ ಇಟಲಿ ಪ್ರವಾಸಿ ಪಿಯತೋ ಡೆಲ್ಲಾವಲ್ಲೆ, ಫ್ರೆಂಚ್‌ನ ಬುಕನನ್ ಕರ್ನಲ್ ಮೆಕಂಜಿ ಮುಂತಾದವರು ಆ ಕಾಲದಲ್ಲಿದ್ದ ಕೆಳದಿ ಜೋಯ್ಸರು, ಸಂತೆಬೆನ್ನೂರು ನಾಡಿಗರು[೧೨], ಕಾಸರವಳ್ಳಿ ಚಿನ್ನ ಭಾಹ್ಯ ಶೀನ್ರಾಳಿ ಮನೆತನ ಸಾಹುಕಾರರು ಭಂಡಾರದ ವಂಶೀಕರು ಮುಂತಾದವರ ಮನೆಯಲ್ಲಿ ಉಳಿದು ಆತಿಥ್ಯವನ್ನು ಪಡೆದು ಚಾರಿತ್ರಿಕಾಂಶಗಳನ್ನು ಕಲೆ ಹಾಕಿದ ವಿವರಗಳೂ ಮೋಡೀ ಲಿಪಿಗಳಲ್ಲಿ ಉಪಲಬ್ದವಿವೆ. ಇವುಗಳೆಲ್ಲವೂ ಕೆಳದಿ ಇತಿಹಾಸೋತ್ತರ ಚರಿತ್ರೆಯನ್ನು ರೂಪಿಸಲು ಆಕರಗಳಾಗಿವೆ. ಈ ದಿಸೆಯಲ್ಲಿ ಕೆಳದಿ ಸಂಶೋಧನಾಲಯವೂ ಆಸಕ್ತಿ ತಳೆದು ಹಲವಷ್ಟು ಆಕರಗಳನ್ನು ಸಂಗ್ರಹಿಸಿರುವುದೂ ಗಮನಾರ್ಹವಾಗಿದೆ. ಸಾಹಸೀ ಮನೋಭಾವದ ಪ್ರಾಮಾಣಿಕ ಚಾರಿತ್ರಿಕ ಅಧ್ಯಯನಶೀಲರಿಗೆ ಈ ದಿಸೆಯಲ್ಲಿ ಸಂಶೋಧನೆ ಕೈಗೊಳ್ಳಲು ಆಕರಗಳು ಕಾಯ್ದು ಕುಳಿತಿವೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ದಿ ೨೭-೫-೧೭೬೩ರಂದು ಹೈದರಾಲಿಯು ಬಿದನೂರಿನಲ್ಲಿ ಇಂಗ್ಲೀಷ್ ಕಂಪೆನಿಗೆ ನೀಡಿದ ಪರವೀಸಾ ಪತ್ರ ಗಮನಾರ್ಹವಾದುದು. (ನೋಡಿ, ಗ. ಐಗಳ್: ದಕಜತಾ ಇ. ಪು. ೪೩೧)

೨. **ಶ್ರೀ ಮನ್ಮಹಾರಾಜರ ವಂಶಾವಳಿ** ಪು.೨೩೨,

೩. **ಬೆಂಗಳೂರು ಇತಿಹಾಸ** (ಬ.ನ.ಸುಂದರರಾವ್, ಬೆಂಗಳೂರು) ಶೇಕ್ ಅಯಾಜಿನ ಕುರಿತು ಪತ್ರವೊಂದು ತವನಂದಿ ಗ್ರಾಮದಲ್ಲಿದೆ. ಅನುಬಂಧ ನೋಡಿರಿ.

೪. **ಮಹಿಸೂರು ಸಂಸ್ಥಾನದ ಚರಿತ್ರೆ** - ಎಂ. ಶಾಮರಾವ್, ಪು.೩೯

೫. Aitchison, C.V. *A Collection of Treaties Engangements and Sannads* (1909), Vol.IXPP.194-195, 196, 197, 198, 200
೧೮೬೯ರಲ್ಲಿ ನ್ಯಾಯಾಧೀಶರಿಂದ ಪ್ರಕಟವಾದ "ನ್ಯಾಯದರ್ಪಣ" ಕೃತಿಯಲ್ಲಿರುವ "ನಗರ" (ಕೆಳದಿ) ಪ್ರಾಮುಖ್ಯತೆಯನ್ನು ಗಮನಿಸಬಹುದು.

೬. ದ. ಭಾರತದಲ್ಲಿರುವ ಶಾಸನಗಳಲ್ಲಿರುವಂತೆ.

೭. ಬಂಗಾಳ ಸರಕಾರದಲ್ಲಿ ಕಮೀಷನ್ ಆಡಳಿತವಿರುವ ಮೈಸೂರಿಗೆ "ನಗರ"ವೂ ತುಕಡಿ ಅಥವಾ ವಿಭಾಗವಾಗಿದ್ದುದನ್ನು ೧೮೬೯ರ 'ನ್ಯಾಯದರ್ಪಣ' ಕೃತಿಯಲ್ಲಿ ನೋಡಿರಿ (ಅನುಬಂಧ).

೮. **ಇತಿಹಾಸ ದರ್ಶನ** ಸಂ. ೧೩/೧೯೯೮ ರಲ್ಲಿರುವ ಲೇಖನ ನೋಡಿರಿ. ಪು. ೨೪೫

೯. ಆರ್ಥರ್ ವೆಲ್ಲಸ್ಲಿಯು ಹುಬ್ಬಳ್ಳಿ ಮೊಕ್ಕಾಂನಿಂದ ೩೦-೧೦-೧೮೦೦ ರಂದು ಕರ್ನಲ್ ಕ್ಲೋಸ್‌ಗೆ ಬರೆದ ಪತ್ರ ನಂ ೧೪೮ ಪುಟ ೧೭೪. (The Mysore letters and Dispatches of the Duke of wellington).

೧೦. ಇಂತಹ ಮೂಲ ಆಕರ ಸಾಮಾಗ್ರಿಗಳನ್ನು ಅಲಭ್ಯವೆಂದು QJMS/Vol XXXVI No, ಜುಲೈ ೧೯೪೫ ರ ಸಂಚಿಕೆಯಲ್ಲಿ ಹಯವದನ ರಾವ್‌ರವರು ತಿಳಿಸುತ್ತಾರೆ.

೧೧. *The Mysore Letters and Dispatches of the Duke of Wellington* ಪುಟ 174. ಮಂಗಳೂರು ಜಿಲ್ಲೆಯ ತುಪಾಕಿ ಸುಬ್ಬಂಣಾಚಾರ್ಯರಿಂದ ೧೮೬೯ರಲ್ಲಿ ಪ್ರಕಟವಾದ (ನ್ಯಾಯಲಯ ಇತಿಹಾಸ ಕುರಿತು) ನ್ಯಾಯದರ್ಪಣ ಕೃತಿಯ ಪುಟ ೮ರಲ್ಲಿ ಪ್ರಕಟವಾದ ಐತಿಹಾಸಿಕ ಸಂಗತಿಯೂ ಇದಕ್ಕೆ ಪುಷ್ಟಿ ನೀಡುತ್ತದೆ. (ಅನುಬಂಧ ನೋಡಿ)

ಡಾ॥ ಚನ್ನಕ್ಕ ಪಾವಟೆ*

ಹಾನಗಲ್ಲು ಪರಿಸರದ ವೀರಗಲ್ಲುಗಳು

ಪಶ್ಚಿಮ ಘಟ್ಟಗಳ ಸದಾ ಹಸಿರು ಮುರಿಯುತ್ತಿರುವ ಪ್ರದೇಶದ ಚಿನ್ನದಂಚು, ಬನವಾಸಿ ಪನ್ನಿರ್ಚ್ಛಾಸಿರ. ಅದರ ವೈವಿಧ್ಯಮಯ ಪರ್ವತ ಶ್ರೇಣಿಗಳು, ಕಣ್ಮನಗಳಿಗೆ ಮನರಂಜನೆ ನೀಡುವ ನದಿ ಕಣಿವೆಗಳು, ಸಸ್ಯ ಹಾಗು ಪ್ರಾಣಿ ಸಂಕುಲದ ನೆಲೆವನೆಯಾದ ವಿಶಾಲ ಬಯಲು ಪ್ರದೇಶಗಳು, ಬಾದಾಮಿ ಚಾಲುಕ್ಯರ ರಾಷ್ಟ್ರಕೂಟರ, ಹೊಯ್ಸಳ, ಯಾದವ, ವಿಜಯನಗರ ದವರ ಶಾಸನ, ಶಿಲ್ಪಕಲಾ ಸಂಪತ್ತು, ಆ ಎಲ್ಲ ಸಾಮ್ರಾಜ್ಯಗಳ ಐತಿಹಾಸಿಕ ಮಹತ್ತು ಸಾರುವ ಅಖಂಡ ಪ್ರಾಚ್ಯವಿದ್ಯಾಶಿಲ್ಪ, ದೇವಸ್ಥಾನಗಳು ವಾಸ್ತುವಿಶೇಷಗಳು ಅದರಲ್ಲೂ, ರಾಷ್ಟ್ರಕೂಟ ಕಾಲದ ವೈಶಿಷ್ಟ್ಯಪೂರ್ಣ ವೀರಗಲ್ಲುಗಳು, ವಿಶೇಷತೆ ಮೆರೆವ ಅಲ್ಪ ಪ್ರಮಾಣದ ಮಾಸ್ತಿಕಲ್ಲುಗಳು, ಗ್ರಾಮದೇವತೆಯರ ವಿಗ್ರಹಗಳು ಒಂದೇ ಎರಡೇ ಅಂದು ಆಳಿದ ಪ್ರಭು ಪ್ರಜಾವರ್ಗದ ಶೌರ್ಯ, ಸಾಹಸ, ಸ್ವಾಮಿನಿಷ್ಠೆ, ಜೋಳವಾಳಿ ವೇಳೆವಾಳಿ ನಮ್ಮ ಮುಂದೆ ಇಂದಿಗೂ ಮೆರೆವ ಸ್ಮರಣಸಂಪುಟಗಳು.

ಹಾನಗಲ್ಲ ಪರಿಸರದ ಪ್ರಾಚ್ಯ ಅವಶೇಷಗಳಲ್ಲಿ ಇತ್ತೀಚೆಗೆ ನನ್ನ ಗಮನ ಸೆಳೆದ ಮೂರು ಊರುಗಳಿಗೆ ಸೇರಿದ ಐದು ವೀರಗಲ್ಲುಗಳು ಪೂರ್ಣವಾದವು. (೧) ಚಿಕ್ಕನಂದಿಹಳ್ಳಿ (೨) ಚಿಲ್ಲೂರು (೩) ಮಾಸಣಗಿಯ ವೀರಗಲ್ಲು ಶಾಸನಗಳು. ಇವು ಮೂರು ಅಪ್ರಕಟಿತ ವೀರಗಲ್ಲುಗಳು ಪ್ರಥಮಬಾರಿಗೆ ಇಲ್ಲಿ ಪ್ರಕಟಗೊಳ್ಳುತ್ತಿವೆ.

ಬಾದಾಮಿ ಚಾಲುಕ್ಯ ಕಾಲದ ವಾಸ್ತು ಹಾಗೂ ಶಿಲ್ಪಕಲಾ ಸಮೃದ್ಧಿ ಇಲ್ಲಿಯದು. ರಾಷ್ಟ್ರಕೂಟರ ತನ್ಮೂಲಕ ಚಲ್ಲಕೇತನರ ಆಳ್ವಿಕೆಯ ಸಂದರ್ಭದಲ್ಲಿ ಐತಿಹಾಸಿಕತೆ ಮಹತ್ವ ಮೆರೆದ ಕೇಂದ್ರಗಳಿವು.

ಹಾನಗಲ್ಲ ಪರಿಸರ ಬ್ಯಾಡಗಿಯಿಂದ ನೈರುತ್ಯಕ್ಕೆ ೪ಕಿ.ಮೀ. ದೂರದ ಪ್ರದೇಶ ಮಾಸಳಿಗೆ ಅಥವಾ ಮಾಸಣಗಿ ಬ್ಯಾಡಗಿಯ ಮುಖ್ಯ ಸ್ಥಳ. ಅಷ್ಟೇ ಚಾರಿತ್ರಿಕ ಮಹತಿ ಮೆರೆದವು. ಪ್ರಾಚೀನ ಕರ್ನಾಟಕದಲ್ಲಿ ಸತ್ತಳಿಗೆ ಎಪ್ಪತ್ತರ ಪ್ರಮುಖ ಸ್ಥಳ. ಮಾಸಣಗಿ ಪರಿಸರದ ೩ ಕಿ.ಮೀ. ಅಂತರದಲ್ಲಿರುವ ಚಿಕ್ಕನಂದಿಹಳ್ಳಿ, ಹಿರೇನಂದಿಪಳ್ಳಿಗಳು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟ



ಮಾಸಳಿಗೆಯಾ ಒಂದು ವೀರಗಲ್ಲು

* ರೀಡರ್, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩.

ಪ್ರದೇಶಗಳು. ಅಲ್ಲಿ ದೊರಕಿದ ಎರಡು ವೀರಗಲ್ಲು ಪ್ರಮುಖ ವಾದವು.

ಚಿಕ್ಕನಂದಿಹಳ್ಳಿ ಹೊಲದಲ್ಲಿ ಒಂದು ಹಾಳು ದೇವಸ್ಥಾನ ಬಹುಶಃ ಅದೊಂದು ವೀರರಗುಡಿ. ಅದರ ಅಕ್ಕಪಕ್ಕದಲ್ಲಿ ಎದುರಿಗೆ ಬಿದ್ದಿರುವ ಎರಡು ಸುಂದರ ಸ್ತೂಪಾಕಾರದ ವೀರಗಲ್ಲುಗಳು, ಅವುಗಳ ಮೇಲೆ ಕಂಡರಿಸಿದ ವೈವಿಧ್ಯಮಯ ಶಿಲ್ಪ ಬಾದಾಮಿ ಚಾಲುಕ್ಯರ ಅಮೂಲ್ಯ ಶಿಲ್ಪಕಲೆಯನ್ನು ಪ್ರತಿನಿಧಿಸುವ ಸ್ತೂಪಗಳಾಗಿರುವದು ವಿಶೇಷ. ಈ ಸ್ತೂಪಗಳು ಕ್ರಿ.ಶ.೮ ನೆಯ ಶತಮಾನದ ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯನ ಆಳ್ವಿಕೆಯ ಎರಡು ಶಿಲೆಗಳು.

ಪ್ರಸ್ತುತ ಶಿಲ್ಪದಲ್ಲಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಮುಗುಂದನಾಡನ್ನಾಳುವ ದೋಸಿರಾಜಿಗರ ಸೇನಾವರಸನಿಂದ ದಾನ ಹಾಗೂ ಕಣ ಅರ್ಕದಿಯ ಎಂಬವನ ವೀರಮರಣದ ಶಿಲೆ ಒಂದಾದರೆ, ಅಂಥಹದೇ ಇನ್ನೊಂದು ಪಕ್ಕದ ಶಿಲೆಯಲ್ಲಿ ಶಿರಿಯಣ ಎಂಬವನ ವೀರಮರಣದ ಸ್ಮಾರಕ. ಅಲ್ಲಿಯೆ ತ್ರುಟಿತ ಶಿಲೆಯೊಂದರ ಮೇಲೆ ವ್ಯಕ್ತಿಯೊಬ್ಬನ ಮರಣದ ಪ್ರಸ್ತಾಪವಿದೆ.

ಚಿಕ್ಕನಂದಿಹಳ್ಳಿಯ ಬಲದ ಶಿಲ್ಪದ ಮೇಲ್ಭಾಗ ಮೊದಲನೆಯ ಪಟ್ಟಿಕೆಯಲ್ಲಿ ಬಹುಶಃ ಲೋಡಿಗೆ ಒರಗಿ ಕುಳಿತಿರುವ ಚಾಲುಕ್ಯ ವಿಕ್ರಮಾದಿತ್ಯ ದೊರೆ, ಆತ ಕುಳಿತ ರಾಜಗಂಭೀರ ಚಿತ್ರ ಅವನ ಇಕ್ಕೆಲಗಳಲ್ಲಿ ವಿಶೇಷ ವಿನ್ಯಾಸದಲ್ಲಿ ನಿಂತ ಇಬ್ಬರು ಚಾಮರಧಾರಿಯರು, ಎರಡನೆಯ ಭಾಗದಲ್ಲಿ ಆಕಾಶಕ್ಕೆ ಹಾರುತ್ತಿರುವ ಮೈಮಣಿತದ ಇಬ್ಬರು ದೇವತೆಯರು ನಿಂತ ಮನೋರಂಜಕ ಚಿತ್ರ. ಮೂರನೆಯ ಭಾಗದಲ್ಲಿ, ಚಾಲುಕ್ಯ ವಿಕ್ರಮಾದಿತ್ಯನ ರಾಜ್ಯದ ಆಡಳಿತದ ಸುಂದರ, ಉಬ್ಬು ಶಿಲ್ಪಕಲೆಯಲ್ಲಿ ಕಂಡರಿಸಿಡ ಚಿತ್ರಗಳು.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಸೇನಾವರಸರೆಂಬ ಮಾಂಡಲಿಕರು ಮುಗುಂದನಾಡನ್ನು ಆಳುತ್ತಿದ್ದರು. ಅವರಲ್ಲಿ ದೋಸಿರಾಜಿಗರ ಸೇನಾವರಸ, ರಣ ಅರ್ಕದಿಯ ಎಂಬ ಹೆಸರುಗಳನ್ನು ಗಮನಿಸಬೇಕು ಸೇನಾವರಸರೆಂಬ ಪ್ರತಿಷ್ಠಿತ ಮಂಡಲೇಶ್ವರರನ್ನು ಗುರುತಿಸಿದ ನೇಗಿನಹಾಳರ ಪ್ರಯತ್ನವನ್ನು ಮೆಚ್ಚಬೇಕು.

ಎಡದ ವೀರಗಲ್ಲು ಶಿಲ್ಪವೂ ಮೊದಲನೆಯ ವೀರಗಲ್ಲಿನಂತೆ ಅಷ್ಟೇ ವಿನ್ಯಾಸಪೂರ್ಣವಾಗಿ ಕಂಡರಿಸಲ್ಪಟ್ಟಿದೆ. ಬಲದ ವೀರಗಲ್ಲಿನ ಪಕ್ಕದಲ್ಲಿ ಒಂದು ಪಾಳುಕಲ್ಲಿನ ಮೇಲೆ ಇನ್ನೊಬ್ಬ ವೀರ ಮರಣ ಹೊಂದಿದ ಪ್ರಸ್ತಾಪವಿದೆ.

ಇಲ್ಲಿಯ ವೀರರಗುಡಿ ಈ ಎರಡೂ ಶಿಲ್ಪಗಳ ಮಧ್ಯಕ್ಕಿದ್ದು ಒಳಭಾಗದಲ್ಲಿ ಯಾವುದೇ ದೇವವಿಗ್ರಹಗಳಿಲ್ಲ. ಇಲ್ಲಿಂದ ಸುಮಾರು ೧ ಫರ್ಲಾಂಗು ಅಂತರದಲ್ಲಿ ಎದುರಿಗೆ ಹಿರೇನಂದಿಹಳ್ಳಿ. ಅಲ್ಲಿಯ ಸುಂದರ ಶಿವದೇವಸ್ಥಾನ, ಯಾವುದೇ ಕಲಾವಿಶೇಷತೆ ಇಲ್ಲದಿದ್ದರೂ ತನ್ನದೇ ಆದ ಗಾಂಭೀರ್ಯ ಬೀರುವಂತಿದೆ. ದೇವಸ್ಥಾನದ ಹೊರಭಾಗದಲ್ಲಿ ಇಕ್ಕೆಲಗಳಲ್ಲಿ ಒಂದೆಡೆ ಸೂರ್ಯಶಿಲ್ಪ ಮುಕ್ಕಾಗಿದ್ದರೆ, ಇನ್ನೊಂದೆಡೆ ಶಂಖ ಚಕ್ರ ಗದಾಪದ್ಮಧಾರಿಯಾದ ಶ್ರೀ ವಿಷ್ಣುವಿನ ವಿಗ್ರಹವಿದೆ. ಗರ್ಭಗೃಹದ ಶಿವಲಿಂಗ ಮತ್ತು ಎದುರಿನ ನಂದಿ ಅಷ್ಟೇ ಭವ್ಯ ವಿಗ್ರಹಗಳಾಗಿವೆ. ದೇವಾಲಯ ಸರಳ ವಾಸ್ತುವಿನಿಂದ ಕೂಡಿದ್ದು ತನ್ನದೇ ಆದ ಸರಳ ಶೋಭೆ ಹೊಂದಿದೆ.



ಚಿಲ್ಲೂರ ವೀರಗಲ್ಲು

ಎರಡನೆಯದು ರಾಷ್ಟ್ರಕೂಟ ಪರಿಸರದ ಚಿಲ್ಲೂರು ವೀರಗಲ್ಲು. ಸವಣೂರು ತಾಲೂಕು ಚಿಲ್ಲೂರು ಕೇಂದ್ರಸ್ಥಳ. ರಾಷ್ಟ್ರಕೂಟರಷ್ಟು ಪ್ರಾಚೀನತೆ ಪಡೆದ ಸ್ಥಳ. ಸವಣೂರಿನಿಂದ ಉತ್ತರಕ್ಕೆ ನಾಲ್ಕು ಕಿ.ಮೀ. ದೂರದ ಗ್ರಾಮ ಹುಲಗೂರ ರಸ್ತೆಯಲ್ಲಿರುವ ರಾಷ್ಟ್ರಕೂಟ ಅಮೋಘ ವರ್ಷನ ಉಲ್ಲೇಖದ ಚಲ್ಲಕೇತನ ಬಂಕೇಯನ ಆಳ್ವಿಕೆಯ ಕಾಲದಲ್ಲಿ ರೂಪುಗೊಂಡ ವೀರಗಲ್ಲು. ಗೋಗ್ರಹಣ ಕಾಲದಲ್ಲಿ ವೀರಮರಣ ಪಡೆದ ಮಾಚ, ಸಜುಗ, ಚಟ್ಟರ ಸ್ಮರಣಶಿಲೆ ಇದು.

ವೀರಗಲ್ಲು ತುಂಬ ವೈಶಿಷ್ಟ್ಯಪೂರ್ಣ. ಅಷ್ಟೇ ಗಂಭೀರ, ವೈವಿಧ್ಯಮಯ ಶಿಲ್ಪ. ರಾಷ್ಟ್ರಕೂಟ ಕಾಲದ ಅಷ್ಟೇ ವಿಶಿಷ್ಟರೂಪದ ಶಿಲ್ಪ ಚಿಲ್ಲೂರಿನದು. ಕಲ್ಲು ನೆಲದಲ್ಲಿ ಹೂತಿದ್ದು ಶಿಲ್ಪದ ಒಂದು ಪಟ್ಟಿಕೆ ಸಂಪೂರ್ಣ ನೆಲದಲ್ಲಿ ಮರೆಯಾಗಿದೆ. ಮೇಲಿನ ಮೂರು ಯುದ್ಧಸಂದರ್ಭದ ಶಿಲ್ಪ ವಿನ್ಯಾಸದ ಕಂಡರಣೆ ತುಂಬ ಅರ್ಥವತ್ತಾಗಿದೆ. ಗ್ರಾಮಸ್ಥರ ಬಾಯಲ್ಲಿ ಈ ವೀರಗಲ್ಲು 'ಚೀಲಪ್ಪ' ಎಂಬ ಅಭಿಧಾನ ಹೊಂದಿದೆ.

ಯುದ್ಧವರ್ಣನೆಯನ್ನು ಮೂರು ಹಂತಗಳಲ್ಲಿ ಚಿತ್ರಿಸಿದ



ಪಟ್ಟಿಕೆಗಳಲ್ಲಿ ಮೂರು ಮೂರು ಗೊಂಬೆಗಳು, ಮೂರು ಸ್ತರದ ಗೊಂಬೆಗಳ ವಿನ್ಯಾಸದಲ್ಲಿ ಬದಲಾವಣೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಕಲ್ಲಿನ ಮೇಲ್ಭಾಗದಲ್ಲಿ ಮಧ್ಯೆ ನಾಲ್ಕು ಗೋಪುರ ಅಕ್ಕ ಪಕ್ಕದ ಎರಡು ಒಟ್ಟು ಆರು ಗೋಪುರಗಳು. ಮಧ್ಯದ ಪಟ್ಟಿಕೆಯ ಮೇಲೆ ನೇಗಿಲಿನ ಚಿತ್ರ. ರಾಷ್ಟ್ರಕೂಟರ ಹೋರಾಟದಲ್ಲಿ ವೀರಮರಣ ಹೊಂದಿದ ಅವರ ಶೌರ್ಯಸಾಹಸಕ್ಕೆ ಸಮನಾಗು ವಂತೆ ಕಂಡರಿಸಲ್ಪಟ್ಟ ಈ ಶಿಲ್ಪ. ಸಂಶೋಧಕರ ಗಮನ ಸೆಳೆಯುವಂತಿದೆ. ಮಧ್ಯದ ೩ ಪಟ್ಟಿಕೆಯ ಮೇಲೆ ಬರಹವಿದೆ.

ಬ್ಯಾಡಿಗೆಯಿಂದ ನೈರುತ್ಯಕ್ಕೆ ನಾಲ್ಕು ಕಿ.ಮೀ. ದೂರದ ಮಾಸಣಗಿ ಚಾರಿತ್ರಿಕ ಪ್ರದೇಶ. ಸತ್ತಳಿಗೆ ಎಪ್ಪತ್ತರ ಸ್ಥಳ. ಊರಲ್ಲಿಯ ವೀರಗಲ್ಲು ಮೂಲತಃ ಯುದ್ದ ವಿವರಣೆಯ ಶಿಲ್ಪ. ಶಿಲ್ಪಿಗೆ ಅಲ್ಲಿ ವೀರಮರಣ ಪಡೆದ ವ್ಯಕ್ತಿಗಳ ಹೆಸರು ಬರೆಯಲು ತುಸು ಜಾಗ ಬಿಡುವ ವ್ಯವಧಾನವಿಲ್ಲದೆ ಕಲ್ಲಿನ ತುಂಬ ಕೊರೆದ ಶಿಲ್ಪ ಸಂಶೋಧಕರಿಗೆ ಸವಾಲೆಸೆಯುವಂತಿದೆ. ಇದು ದೇವಗಿರಿ ಯಾದವರ ಕಾಲದದಲ್ಲಿ ಯಾದವ ಕನ್ನರನ ಆಳ್ವಿಕೆಯಲ್ಲಿ ಜರುಗಿದ ಯುದ್ಧವೊಂದರಲ್ಲಿ ಕಗ್ಗಗೌಡನ ಮಗ ಮಾಳಿಗೌಡನ ವೀರಮರಣದ ಪ್ರಸ್ತಾಪ ಇಲ್ಲಿದೆ.

ಹೀಗೆ ಹಾನಗಲ್ಲು ಪರಿಸರದ ವೀರಗಲ್ಲುಗಳು ತಮ್ಮದೇ ಆದ ಶಿಲ್ಪ ವಿನ್ಯಾಸ ಹೊಂದಿದ್ದು ವೀರಗಲ್ಲುಗಳ ಮಾಲಿಕೆಯಲ್ಲಿಯೇ ವಿಶೇಷತೆ ಮೆರೆದಿವೆ ಎಂದೇ ಹೇಳಬೇಕಾಗುತ್ತದೆ

ಡಾ।। ಚನ್ನಬಸಪ್ಪ ಎಸ್. ಪಾಟೀಲ*

ಕವಿ ಸೋಮದೇವನ ಎರಡು ನಿಸಿದಿಗಳು

ಈಗಿನ ಕೊಪ್ಪಳ ಜಿಲ್ಲೆಯ ಕೇಂದ್ರಸ್ಥಾನವಾದ ಕೊಪ್ಪಳ ನಗರವು ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ೧೯೯೨ರಲ್ಲಿ ಅತಿಯಾಗಿ ಬಿದ್ದ ಮಳೆಯಿಂದ ಅಲ್ಲಿಯ ಕೋಟೆಯ ಒಂದು ಭಾಗ ಕುಸಿದು ಬಿದ್ದಾಗ ೫೩ ಶಾಸನಗಳು ಬೆಳಕಿಗೆ ಬಂದವು. ಇವುಗಳಲ್ಲಿ ಹೆಚ್ಚಿನವು ನಿಸಿದಿ ಕಲ್ಲುಗಳು. ನಿಸಿದಿಕಲ್ಲುಗಳನ್ನು ಮಧ್ಯದಲ್ಲಿ ತುಂಡರಿಸಿ ಕೋಟೆ ಕಟ್ಟುವುದಕ್ಕೆ ಬಳಸಲಾಗಿತ್ತು. ಇವುಗಳಲ್ಲಿ ಕವಿ ಸೋಮದೇವನಿಗೆ ಸಂಬಂಧಿಸಿದ ಎರಡು ನಿಸಿದಿಗಳಿವೆ.

ಕಂಬಗಳಂತಿರುವ ನಿಸಿದಿಗಳ ಮುಂಬದಿಯಲ್ಲಿ ನಿಂತ ಭಂಗಿಯಲ್ಲಿರುವ ತೀರ್ಥಂಕರನ ಶಿಲ್ಪವಿದ್ದು ಉಳಿದ ಬದಿಗಳಲ್ಲಿ ಶಾಸನಗಳಿವೆ. ತೀರ್ಥಂಕರನ ಬದಿಗಳಲ್ಲಿರುವ ಅರೆಗಂಬಗಳ ಮೇಲೆ ಕಪೋತ, ಶಾಲಾಶಿಖರ ಮತ್ತು ಕಲಶಗಳಿವೆ. ಪ್ರತಿಯೊಂದು ನಿಸಿದಿಯ ಮೇಲೆ ಪ್ರತ್ಯೇಕವಾದ ಶಾಸನವಿದೆ. ಒಂದನೇ ನಿಸಿದಿಯ ಎರಡು ಬದಿಗಳಲ್ಲಿ ಮತ್ತು ಎರಡನೆ ನಿಸಿದಿಯ ಮೂರು ಬದಿಗಳಲ್ಲಿ ಶಾಸನಗಳಿವೆ. ಮಧ್ಯದಲ್ಲಿ ತುಂಡರಿಸಿದ್ದರಿಂದ ಎರಡು ನಿಸಿದಿಗಳು ನಾಲ್ಕು ಭಾಗಗಳಾಗಿವೆ.

ಈ ಶಾಸನಗಳು ಹಂಪ. ನಾಗರಾಜಯ್ಯ ಅವರ **ಕೊಪ್ಪಳ ಶಾಸನಗಳು** ಮತ್ತು ಚನ್ನಬಸಪ್ಪ ಎಸ್.ಪಾಟೀಲ ಮತ್ತು ವಿನೋದಾ ಪಾಟೀಲರ *Inscriptions of Koppal District* ನಲ್ಲಿ ಪ್ರಕಟಗೊಂಡಿವೆ. ಮೊದಲನೆ ಗ್ರಂಥದಲ್ಲಿ ಪಾಠ ಮತ್ತು ಸಾರಾಂಶ ಪ್ರಕಟವಾಗಿದ್ದರೆ ಎರಡನೆಯದರಲ್ಲಿ ಸಾರಾಂಶ ಮಾತ್ರ ಪ್ರಕಟವಾಗಿದೆ. ಹಂಪ. ನಾಗರಾಜಯ್ಯನವರು ಎರಡು ಶಾಸನಗಳನ್ನು ಒಂದೇ ಶಾಸನವೆಂದು ಪ್ರಕಟಿಸಿದ್ದಾರೆ. ಶಾಸನಗಳ ಪಾಠವನ್ನು ಅನುಕ್ರಮವಾಗಿ ಪ್ರಕಟಿಸಿಲ್ಲ ಮತ್ತು ಪಾಠದಲ್ಲಿ ವ್ಯತ್ಯಾಸಗಳಿವೆ.

ಪ್ರಸ್ತುತ ಶಾಸನ ಸಂ.	ಬದಿ	ಸಾಲುಗಳು	ಹಂಪನಾ ಶಾ . ಸಂ.	ಸಾಲುಗಳು
೧	೧	೧-೫	೩೪	೩೦-೩೪
		೬-೮	೩೪	೧೫-೧೮
		೯-೧೦	--	--
	೨	೧೧-೧೫	೩೪	೩೫-೩೯
		೧೬-೧೯	೩೪	೫-೮
೨	೧	೧-೪	೩೪	೧-೪
		೫-೮	೩೩	೩೪-೩೭
	೨	೯-೧೨	-	-
		೧೩-೧೯	೩೪	೧೮-೨೨
	೩	೨೦-೨೪	೩೪	೨೫-೨೯
		೨೫-೩೦	೩೪	೯-೧೪

ಒಂದನೆಯ ನಿಸಿದಿಯ ಶಾಸನವು ಸೋಮದೇವ ಪಂಡಿತನು ಶಕ ವರ್ಷ ೯೦೫, ತಾರಣ ಸಂವತ್ಸರ, ಕಾರ್ತಿಕ ಸಿತ (ಶುದ್ಧ) ಪಂಚಮಿ, ಅಂದರೆ ಕ್ರಿಸ್ತಶಕ ೯೮೪, ಅಕ್ಟೋಬರ್ ೨ರಂದು ಸ್ವರ್ಗಸ್ಥನಾದನೆಂದು ತಿಳಿಸುತ್ತದೆ. ಈತನ ಗುರು ನೇಮಿದೇವ ಮತ್ತು ಸಹೋದರ ವಾದೀಂದ್ರ ಕಾಳಾನಳ ಮಹೇಂದ್ರದೇವ. ಸೋಮದೇವನನ್ನು ಕವಿರಾಜ, ತಾರ್ಕಿಕ ಚಕ್ರವರ್ತಿ, ವಾದೀಭ ಪಂಚಾನನ ಎಂದು ವರ್ಣಿಸುತ್ತದೆ. ಈತನು (ರಾಷ್ಟ್ರಕೂಟ ಮೂರನೇ) ಕೃಷ್ಣದಿಂದ ಅಭಿಷೇಕಗೊಂಡು, ನೊಳಂಬಾಂತಕ (ಗಂಗ ಎರಡನೇ ಮಾರಸಿಂಹ)ನಿಂದ ಸ್ತುತಿಗೊಂಡು, ಚಾಳುಕ್ಯ ಚಕ್ರೇಶ್ವರ (ಅರಿಕೇಸರಿ)ಯಿಂದ ಪಾದಪೂಜೆ ಪಡೆದಿದ್ದನೆಂದು ತಿಳಿಸುತ್ತದೆ.

ಎರಡನೆಯ ನಿಸಿದಿಯ ಶಾಸನವು ಸೋಮದೇವನು ಶಕವರ್ಷ ೯೩೨, ಸಾಧಾರಣ ಸಂವತ್ಸರ, ಅಕ್ಷಯ ತೃತೀಯ

* ಉಪನಿರ್ದೇಶಕ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು - ೫೭೦ ೦೦೧.

(ವೈಶಾಖ ಶುದ್ಧ ೩) ಅಂದರೆ ಕ್ರಿ.ಶ.೧೦೧೦, ಎಪ್ರಿಲ್ ೨೦ರಂದು ಮಡಿದನೆಂದು ಮತ್ತು ಚಂದ್ರಪ್ರಭದೇವರು ಪರೋಕ್ಷ ವಿನಯವಾಗಿ ನಿಸಿದಿಯನ್ನು ಮಾಡಿಸಿದರೆಂದು ತಿಳಿಸುತ್ತದೆ. ಈ ಶಾಸನವೂ ಸಹ ಕವಿಯ ಬಿರುದುಗಳನ್ನು, ಗುರುವನ್ನು ಮತ್ತು ಸಹೋದರನನ್ನು ಉಲ್ಲೇಖಿಸುತ್ತದೆ. ಭರತಮುನಿಯ ನಾಟ್ಯಶಾಸ್ತ್ರ, ಕಾವ್ಯ, ಶಬ್ದಶಾಸ್ತ್ರ ಮತ್ತು ನೃಪಾಗಮಗಳಲ್ಲಿ ಪಾಂಡಿತ್ಯವನ್ನು ಹೊಂದಿದ ಸೋಮದೇವನಿಗೆ ಸಮನಾದವರು ಹಿಂದೆ ಇರಲಿಲ್ಲ ಮತ್ತು ಮುಂದೆಯೂ ಇರಲಾರರೆಂದು ತಿಳಿಸುತ್ತದೆ.

ಒಂದನೆಯ ಶಾಸನ

ಒಂದನೇ ಬದಿ

೧ ಶಕನೃಪ ಕಾಳಾತೀತ ಪಂಚೋತ್ತ
೨ ರ ನವಶತೇತ್ರ ತಾರಣ ವರ್ಷ್ಷೇ[ಸು]
೩ ಕಾರ್ತ್ತಿಕ ಸಿತ ಪಞ್ಚಮ್ಯಾಂ ಸ್ವರ್ಗ್ಗಮಾ
೪ [ರ್ಗ್ಗ]ತ್ಸೋಮದೇವ ಪಂಡಿತದೇವಃ ॥
೫ [ತ] ಸ್ಯಾಶೀತಿ ವಿವಾದಿವಾದ ವಿಜಯೀನ್ದ್ರ ನೇ
೬ ಮಿದೇವೋ ಗುರು [ಭ್ರಾತಾಯ] ಸ್ಯ [ಮಹೇಂದ್ರ]
೭ ದೇವ ವಿಬುಧೋ ವಾದೀನ್ದ್ರ ಕಾಳಾನಳಃ ॥
೮ ಯಸ್ಯಾಸೀತ್ಕವಿರಾಜ ಇತ್ಯಭಿನುತಃ ಶಿ
೯ ಷ್ಯೋಬುಧಃಸ ಸ್ವಯಂ ಜೀಯಾತ್ತಾರ್ಕ್ಕಿಕ ಚಕ್ರ
೧೦ ವರ್ತ್ತಿ ಚರಿತಃ ಶ್ರೀ ಸೋಮದೇವೋಮುನಿಃ ॥

ಎರಡನೆ ಬದಿ

೧೧ ಅರ್ಗ್ಘೇದ್ದೀರ್ಗ್ಘ ಭುಜದ್ವಯ
೧೨ ಸ್ಸಮಭಜದ್ಯಂ ಕೃಷ್ಣರಾ
೧೩ ಜಂ ಸ್ಸ್ವಯಂ ಯತ್ರ ಸ್ತೋತ್ರ ಪ
೧೪ ವಿತ್ರವಾಗ್ಗುಂಫನತೋ ದೇವೋ ನೊ
೧೫ ಳಂಬಾಂತಕಃ । ಶಾಸ್ತ್ರೀಯಾ
೧೬ ಚಳಿಞ್ಚತಾಮುಪಗತಶ್ಚಾ
೧೭ ಳುಕ್ಯ ಚೀಕ್ರೇಶ್ವರಃ ಸೋಯಂ
೧೮ ಕಸ್ಯ ನ ವರ್ಣ್ಣನೀಯ[ಂ] ಮಹಿ
೧೯ ಮಾ ವಾದೀಭ ಪಞ್ಚಾನನಃ

ಎರಡನೆಯ ಶಾಸನ

ಒಂದನೆ ಬದಿ

೧ ಶಕ ಕಾಳೇ ದ್ವಾತ್ರಿಂ
೨ ಶನ್ನುವ ಶತ ಸಂಖ್ಯಾಗತೇ
೩ ತು ಕವಿರಾಜಃ ಸಾಧಾ
೪ ರಣ ವರ್ಷೆಕ್ಷಯ ತೃತೀ
೫ ಯ ದಿವಸೆ ಗತಸ್ಸಿದ್ಧಿಃ ॥

ಎರಡು ಶಾಸನಗಳ ದಿನಾಂಕಗಳು ಬೇರೆ ಬೇರೆಯಾಗಿದ್ದು, ಈ ಎರಡು ದಿನಾಂಕಗಳಂದು ಸೋಮದೇವನು ಸ್ವರ್ಗಸ್ಥನಾದನೆಂದು ತಿಳಿಸುತ್ತವೆ. ಆದರೆ ಕವಿಯು ಕ್ರಿಸ್ತಶಕ ೯೮೪ರಂದು ಮಡಿದನು ಮತ್ತು ೨೬ ವರ್ಷಗಳ ನಂತರ ಕ್ರಿ.ಶ. ೧೦೧೦ರಲ್ಲಿ ಚಂದ್ರಪ್ರಭ ದೇವರು ಪರೋಕ್ಷವಿನಯವಾಗಿ ನಿಸಿದಿಯನ್ನು ಮಾಡಿಸಿದರೆಂದು ಅನ್ವಯಿಸಬೇಕಾಗುತ್ತದೆ.

ಈ ಸೋಮದೇವನೇ ಯಶಸ್ತಿಲಕ ಮತ್ತು ನೀತಿವಾಕ್ಯಾಮೃತ ಕೃತಿಗಳನ್ನು ರಚಿಸಿದ ಪ್ರಸಿದ್ಧ ಕವಿ ಸೋಮದೇವ ಸೂರಿ.

ಒಂದನೇ ಶಾಸನದ ಒಂದನೇ ಬದಿ



ಒಂದನೇ ಶಾಸನದ ಎರಡನೆ ಬದಿ



೬ ಚಂದ್ರಪ್ರಭದೇವರ ಪರೋ

೭ ಕ್ಷ ವಿನಯದಿಂ ಮಾಡಿ

೮ ಸಿದರ್

ಎರಡನೆ ಬದಿ

೯ ಕಯಸ್ಯಾಸೀತಿ ವಿವಾದಿವಾದಿ ವಿಜ

೧೦ ಯಿ ಶ್ರೀ ನೇಮಿದೇವೋ ಗುರು ಬ್ರಾ

೧೧ ತಾಯಸ್ಯ ಮಹೇಂದ್ರದೇವ ವಿಬು

೧೨ ಧೋ ವಾದೀಂದ್ರ ಕಾಳಾನಳಃ। ಯಸ್ಯಾ

೧೩ [ಸೀತ್ಕವಿರಾಜ ಇ] ತ್ಯಭಿನು ತಶಿ

೧೪ ಷ್ಯೋ [ಬುಧಃ ಸಸ್ವಯಂ] ಜೀಯಾತ್ತಾ

೧೫ ರ್ಕ್ಕಿಕ ಚಕ್ರವರ್ತ್ತಿ ಚರಿತಃ ಶ್ರೀ ಸೋ

೧೬ ಮದೇವೋ ಗುರುಃ।। ಭರತೇ ನಾಟಕೇ

೧೭ ಕಾವ್ಯೇ ಶಬ್ದಶಾಸ್ತ್ರೇ ನೃಪಾಗಮೇ ಕವಿ

೧೮ ರಾಜ ಸಮಾಯೋಗ್ಯೇ ನ ಭೂತೋ ನ ಭ

೧೯ ವಿಷ್ಯತಿ ।।

ಮೂರನೆ ಬದಿ

೨೦ [ರ್ತ್ಥೆನ್ನೇ]ಷ್ವರ್ತ್ಥಯತಜ್ವಿ[ರಾ]

೨೧ ರ್ತ್ಥೇಪರತಾಂ ಯಜ್ಜಿತ್ಥಿ

೨೨ ತ ಪ್ರಾದಿಭಿಸ್ಸಂದರ್ಬ್ಬೇಷು

೨೩ ನಿಗರ್ಬ್ಬಿತೋಕ್ತಿಷು ಚ ಯಂ।।

೨೪ [ಗದ್ಯ]ಮಭ್ಯಸ್ಯತಿ।..

೨೫ ˉಸ್ತಸ್ಯಚತಸ್ಯ...

೨೬ ಹತ್ಯೌದಾರ್ಯ್ಯಂಮಾಚಾ


೨೭ ರ್ಯ್ಯಕಂ । ಸಾಶ್ಚರ್ಯ್ಯ ಕವಿ

೨೮ ರಾಜ ಏಷ ಕವಿತಾ ಸಾ

೨೯ ಮ್ರಾಜ್ಯ ದೀಕ್ಷಾ

೩೦ ಗುರುಃ ।।

ಎರಡನೆ ಶಾಸನದ ಮೂರು ಬದಿಗಳು



(ಈ ಶಾಸನಗಳನ್ನು ಓದಿ ಪ್ರಬಂಧವನ್ನು ಸಿದ್ದಪಡಿಸಲು ನೆರವಾದ ಶ್ರೀ ಸೀತಾರಾಮ ಜಾಗೀರ್‌ದಾರ್ ಅವರಿಗೆ ನನ್ನ ಕೃತಜ್ಞತೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಹಂಪ. ನಾಗರಾಜಯ್ಯ; ೧೯೯೮, **ಕೊಪ್ಪಳ ಶಾಸನಗಳು**, ರತ್ನತ್ರಯ ಪ್ರಕಾಶನ, ಮೈಸೂರು, ಪು.೯೪-೯೬.

*೨. Channabasappa S. Patil and Vinoda C. Patil, 1998, *Inscriptions of Koppal District*, Directorate of Archaeology and Museums, Mysore, P.61, No.208; p. 69, No.236.

*೩. K.K. Handiqui, 1949, *Yasastilaka and Indian Culture;* B. Sheik Ali, 1976, *History of the Western Gangas*, Mysore, pp. 296-298.

ಡಾ॥ ಜಿ. ವಿ. ಕಲ್ಲಾಪುರ*

ಕೆಳದಿ ವಸ್ತುಸಂಗ್ರಹಾಲಯದಲ್ಲಿನ 'ಸಿಡಿದಲೆಗಲ್ಲು' ಶಾಸನ

ಪ್ರಾಚೀನ ಭಾರತದಲ್ಲಿ ಆತ್ಮಹತ್ಯೆಯನ್ನು ಪಾಪವೆಂದು ಕರೆದು ನಿಷೇಧಿಸಿದೆ. ಅದರೂ ಸ್ಮೃತಿ ಪುರಾಣೇತಿಹಾಸಗಳು ಕೆಲವು ಬಗೆಯ ಆತ್ಮಹತ್ಯೆಯನ್ನು ಅಥವಾ ದೇಹತ್ಯಾಗಗಳನ್ನು ಒಪ್ಪಿ ಮನ್ನಿಸಿವೆ. ಅ) ಬ್ರಾಹ್ಮಣರ ಕೊಲೆ, ಸುರಪಾನ ಮುಂತಾದ ಮಹಾಪಾತಕಗಳನ್ನು ಮಾಡಿದವರು ಪ್ರಾಯಶ್ಚಿತ್ತ ರೂಪವಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬಹುದು. ಆ) ವಾನಪ್ರಸ್ಥನು ತೀರ್ಥಯಾತ್ರೆಗಾಗಿ ಹೊರಟು ದಾರಿಯಲ್ಲಿ ದೊಡ್ಡ ರೋಗದಿಂದ ಪೀಡಿತನಾಗಿ ತನ್ನ ನಿತ್ಯಕರ್ಮಗಳನ್ನು ಮಾಡಲು ಅಸಮರ್ಥನಾದರೆ ದೇಹತ್ಯಾಗವನ್ನು ಮಾಡಬಹುದು. ಇ) ವೃದ್ಧನೂ, ದೊಡ್ಡ ರೋಗಿಯು ಆಗಿರುವ ವ್ಯಕ್ತಿಯೂ ಕರ್ಮಗಳನ್ನು ಮಾಡಲಾರದಷ್ಟು ದುರ್ಬಲನಾದರೆ ಎತ್ತರದಿಂದ ಬಿದ್ದೋ, ಬೆಂಕಿಯನ್ನು ಪ್ರವೇಶಿಸಿಯೋ ಉಪವಾಸ ಮಾಡಿಯೋ, ತೀರ್ಥಯಾತ್ರೆ ಹೊರಟೋ ಅಥವಾ ಪ್ರಯಾಗದಲ್ಲಿ ವಟವೃಕ್ಷದಿಂದ ಧುಮುಕಿಯೋ ದೇಹತ್ಯಾಗವನ್ನು ಮಾಡಬಹುದು.[೧] ಈ) ಗೃಹಸ್ಥನು ಆರೋಗ್ಯ ಶಾಲಿಯಾಗಿದ್ದರೂ ತನ್ನ ಜೀವಿತದ ಕಾರ್ಯಗಳೆಲ್ಲವೂ ಮುಗಿದವು ಎಂಬ ಭಾವನೆ ಬಂದಿದ್ದರೆ, ಲೌಕಿಕ ಭೋಗಗಳ ಅಸೆಗಳೆಲ್ಲವೂ ಬತ್ತಿ ಹೋಗಿದ್ದರೆ, ವೇದಾಂತಿಯಾಗಿ ಜೀವನದ ನಶ್ವರತೆಯನ್ನು ಅನುಭವಿಸಿದ್ದರೆ, ಮೇಲೆ ತಿಳಿಸಿದಂತೆ ದೇಹ ತ್ಯಾಗವನ್ನು ಮಾಡಬಹುದು. ಉ) ಧಾರ್ಮಿಕ ದೇಹತ್ಯಾಗ ಎಂದರೆ ಮೋಕ್ಷಾಪೇಕ್ಷಿಯಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳ ಬಹುದು. ಊ) ಗಂಡ ಸತ್ತಮೇಲೆ ಹೆಂಡತಿ ದೇಹತ್ಯಾಗ ಮಾಡಬಹುದು.[೨]

ಕರ್ನಾಟಕದ ಶಾಸನಗಳಲ್ಲಿ ಇಂತಹ ಧಾರ್ಮಿಕ ದೇಹತ್ಯಾಗ ಗಳ ಹಲವು ನಿದರ್ಶನಗಳಿವೆ[೩] ಈ ಶಾಸನಗಳಲ್ಲಿ ಅಗ್ನಿಪ್ರವೇಶ, ನದಿಗೆ ಹಾರಿ ಪ್ರಾಣತ್ಯಾಗ ಮಾಡುವುದು ಮುಂತಾದ ದಾಖಲೆ ಗಳಿವೆ. ಇವುಗಳಿಗಿಂತ ಭಿನ್ನವಾದ ರೀತಿಯ ದೇಹತ್ಯಾಗವೆಂದರೆ 'ಸಿಡಿದಲೆ' ಕೊಡುವುದು. ಸಿಡಿದಲೆ ಕೊಡುವ ವಿಧಾನ - ತಲೆಯನ್ನು ಕೊಡಬೇಕಾದ ವ್ಯಕ್ತಿ ಧ್ಯಾನಭಂಗಿಯಲ್ಲಿ ಕುಳಿತು ಕೊಳ್ಳುತ್ತಾನೆ, ಅವನ ಜುಟ್ಟಿಗೆ ನೆಲದಲ್ಲಿ ಹುಗಿದ ಗಳವೊಂದರ ತುದಿಯನ್ನು ಬಾಗಿಸಿ ಕಟ್ಟಿರುತ್ತಾರೆ. ಅವನ ತಲೆಯನ್ನು ಇನ್ನೊಬ್ಬನು ಕತ್ತಿಯಿಂದ ಹಾರಿಸಿದಾಗ ತಲೆಯು ಮೇಲಕ್ಕೆ ಚಂಗನೆ ಸಿಡಿಯುತ್ತದೆ.[೪] ವಿವಿಧ ಕಾರಣಗಳಿಗಾಗಿ ಸಿಡಿದಲೆ ಕೊಟ್ಟ ಶಾಸನಗಳ ವಿವರ ಈ ಕೆಳಗಿನಂತಿದೆ:

೧. ಅರಸನಿಗೆ ಗಂಡುಮಗುವಾಗಲಿ ಎಂಬ ಹರಕೆ ಹೊತ್ತು ಅಕಟೆ ಎಂಬುವನು ಶಿರವನ್ನು ಕತ್ತರಿಸಿಕೊಂಡ ವಿಷಯ ಕ್ರಿ. ಶ. ೯೯೧ರ ಹೆಚ್ಚೆ ಶಾಸನದಲ್ಲಿದೆ. *(ಎ.ಕ. ೮, ಸೊರಬ ೪೭೬)*

೨. ಮಹಾಸಾಮಂತ ಬೊಪ್ಪರಸನ ರಾಣಿ ಮಾಯಾದೇವಿ ಗಂಡು ಹಡೆಯಬೇಕೆಂದು ಕೊಂಡಸಬಾವಿಯ ಬ್ರಹ್ಮ ದೇವರಿಗೆ ಹರಕೆ ಹೊತ್ತ ದೇಕೆಯನಾಯಕ ಸಿಡಿದಲೆ ಕೊಟ್ಟ ವಿವರ. *(ಎಂಎಆರ್ ೧೯೧೪-೧೫, ಪು. ೨೨)*

೩. ಬಸರಾಳದ ಎರಡು ಶಾಸನಗಳಲ್ಲಿ ೩ ಸ್ತರಗಳಿದ್ದು ಕೆಳಗಿನ ಸ್ತರದಲ್ಲಿ ಕುದುರೆಯ ಮೇಲೆ ಕುಳಿತ ವೇಳವಾಳಿಯ ಮೆರವಣಿಗೆ, ಮಧ್ಯದ ಸ್ತರದಲ್ಲಿ ಬಗ್ಗಿಸಿದ ಗಳಕ್ಕೆ ಕೂದಲು ಕಟ್ಟಿಕೊಂಡು ಕೈಮುಗಿದು ಕುಳಿತ ವೇಳವಾಳಿ, ಅವನ ಮಗ್ಗಲು ಬಾಗಿದ ಖಡ್ಗ ಹಿಡಿದು ರುಂಡ ಹಾರಿಸಲು ಸಿದ್ಧನಾದ ವ್ಯಕ್ತಿ, ಮೇಲಿನ ಸ್ತರದಲ್ಲಿ ಈಶ್ವರ ಲಿಂಗದೆದುರು ಕೈಮುಗಿದು ಕುಳಿತ ವೇಳವಾಳಿ ಚಿತ್ರಗಳಿವೆ. *(ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ, ಪು. ೩೦೯)*

೪. ನಗರಗೆರೆಯಲ್ಲಿಯೂ ಬಹುಶಃ ರುಂಡ ಕತ್ತರಿಸಲು ಸಿದ್ಧನಾದ ವ್ಯಕ್ತಿ ಕೆಳಗಿನ ಸ್ತರದಲ್ಲಿ ಗಳಕ್ಕೆ ಕೂದಲು ಕಟ್ಟಿಸಿಕೊಂಡು ಕೈಮುಗಿದು ಕುಳಿತ ವೇಳವಾಳಿ ಮಧ್ಯದ

* ಕೆಳದಿ ವಸ್ತು ಸಂಗ್ರಹಾಲಯ, ಶಿವಮೊಗ್ಗ ಜಿಲ್ಲೆ, ಕೆಳದಿ - ೫೭೭ ४೦೧.

ಸ್ತರದಲ್ಲಿದ್ದರೆ ಸ್ವರ್ಗದ ಚಿತ್ರ ಮೇಲಿನ ಸ್ತರದಲ್ಲಿದೆ. *(ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, ಚಿತ್ರ ೧೧ಎ)*

೫. ಅಬ್ಬಲೂರಿನ ಶಾಸನದಲ್ಲಿ ಬಗ್ಗಿಸಿದ ಟೊಂಗೆಗೆ ತಲೆಗೂದಲು ಕಟ್ಟಿಸಿಕೊಂಡು ರುಂಡಹಾರಿಸಿಕೊಂಡ ಗಂಡ, ಇಬ್ಬರು ಹೆಂಡಿರ ಸಿಡಿದಲೆ ಶಿಲ್ಪವಿದೆ. *(ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪು ೬೪-೬೫)*

೬. ಹುಂಚದ ಚಂದ್ರಪ್ರಭ ಬಸ್ತಿ ಹೊರಭಿತ್ತಿಯ ಮೇಲೆ ಇರುವ ಶಾಸನದಲ್ಲಿ ಸಿಡಿದಲೆಯ ಉಲ್ಲೇಖವಿದೆ *(ಎ.ಕ. ೮, ನಗರ ೫೯, ಕ್ರಿ. ಶ. ೧೦೬೬)*

ಶಾಸನಗಳಲ್ಲದೆ ಕೆಲವು ಸಾಹಿತ್ಯ ಕೃತಿಗಳಲ್ಲಿಯೂ ಸಿಡಿದಲೆಯ ಉಲ್ಲೇಖಗಳಿರುವುದನ್ನು ಗಮನಿಸ ಬಹುದು:

೧. *ಶಿವೋದಯನಾಯಕನ ಅವ್ವೆ ಹೊನ್ನವ್ವೆ ನಾಯಕಿತಿ ಮಡಿಯಲು... ಕಿತ್ತಿಹೊನ್ನಿ ಸಿಡಿದಲೆ ಕೊಡುತ್ತಾಳೆ. ಹೆಣ್ಣುಮಗಳಿಗೆ ಹೆಣ್ಣುಮಗಳು ವೇಳೆವಾಳಿಯಾದ ಉದಾಹರಣೆ ಇದು (ವಡ್ಡಾರಾಧನೆ, ಗುರುದತ್ತಭಟ್ಟಾರಕರ ಕಥೆ)*

೨. *ತಲೆಗೆ ಮುಂದಲೆಯಾಗಿ ಲೆಂಕರ್ಕುಡುವ ಸಿಡಿದಲೆಯ (ಅನಂತನಾಥ ಪುರಾಣಂ, ೧೧, ೭೪)*

೩. *ಎಳಿಗೆಯಿಂದಿರಿದಾದಿ ಕುಮಾರಕ ನೂಳಿಗದ ಚಿನನಾಗ ಆಳಿದೊಡೆಯವಡಿಗಳ ಮುಂದೆ ತಲೆಯಿತ್ತು ಮೇಳಿಸಿದನು ಸಗ್ಗವೆಣ್ಣು (ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ೧೬, ೧೦)*



ಸಾಹಿತ್ಯದ ಉಲ್ಲೇಖಗಳನ್ನು ಗಮನಿಸಿದರೆ 'ಸಿಡಿದಲೆ' ಸಂಪ್ರದಾಯವು ಬಹಳವಾಗಿತ್ತೆಂದು ಹೇಳಬಹುದು. ಶಾಸನಗಳ ಉಲ್ಲೇಖದ ಪ್ರಕಾರ ಇದುವರೆಗೂ ಕೇವಲ ಆರು ಶಾಸನಗಳು ಮಾತ್ರ ದೊರಕಿದ್ದು ಅವುಗಳ ವಿವರಗಳನ್ನು ಮೇಲೆ ಕೊಡಲಾಗಿದೆ. ಆ ಸಾಲಿಗೆ ಸೇರುವ ಇದು ಏಳನೇ ಶಾಸನವಾಗುತ್ತದೆ.

ಈ ಶಾಸನವು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಕಚ್ಚಿಗೆಬೈಲು ಗ್ರಾಮದ ಕಾಡಿನಲ್ಲಿ ದೊರಕಿದ್ದು, ಇದರ ಜೊತೆಗೆ ಪದ್ಮನಾಭ ತೀರ್ಥಂಕರನ ಸುಂದರವಾದ ಮೂರ್ತಿ, ನಾಲ್ಕು ನಿಶಿದಿ ಶಾಸನಗಳು ದೊರಕಿವೆ. ಅವುಗಳನ್ನು ಕೆಳದಿ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. 'ಸಿಡಿತಲೆಗಲ್ಲು' ಸುಂದರವಾದ ಶಿಲ್ಪಕಲೆಯಿಂದ ಕೂಡಿದ್ದು ಮೇಲ್ಭಾಗ ಒಡೆದಿದೆ. ಶಾಸನದ ಮೊದಲ ಮೂರು ಸಾಲುಗಳ ಕೊನೆಯ ಕೆಲವು ಅಕ್ಷರಗಳು ತುಟಿತವಾಗಿವೆ. ಮೊದಲಿಗೆ ಶಾಸನದ ಶಿಲ್ಪಕಲೆಯನ್ನು ವರ್ಣಿಸಿ ಕೊನೆಯಲ್ಲಿ ಶಾಸನ ಪಾಠವನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ಕಚ್ಚಿಗೆಬೈಲು ಸಿಡಿಗಲ್ಲಿನ ಶಿಲ್ಪವರ್ಣನೆ

ಈ ಶಿಲಾಶಾಸನವನ್ನು ಮೂರು ಸ್ತರಗಳಲ್ಲಿ ಕೆತ್ತಲಾಗಿದೆ. ಎರಡು ಪಟ್ಟಿಕೆಗಳಲ್ಲಿ ಮಾತ್ರ ಶಾಸನ ಪಾಠವಿದೆ. ಮೂರು ಸ್ತರಗಳಲ್ಲಿ ಶಿಲ್ಪಕೆತ್ತನೆಯಿದೆ.

ಕೆಳಗಿನ ಸ್ತರ: ಕೈಮುಗಿದು ಧ್ಯಾನಭಂಗಿಯಲ್ಲಿ ಕುಳಿತಿರುವ 'ಲೆಂಕವಾಳಿ', ಅವನ ಬಲಭಾಗದಲ್ಲಿ ಲೆಂಕವಾಳಿ ತಲೆಯ ಕೂದಲಿಗೆ ಸಿಡಿಗಂಬದ ತುದಿಯನ್ನು ಕಟ್ಟಲಾಗಿದೆ. ಆ ಕಂಬವನ್ನು ವ್ಯಕ್ತಿಯೊಬ್ಬ ತನ್ನ ಎಡಭುಜದಿಂದ ಬಲವಾಗಿ ಒತ್ತಿಹಿಡಿದು ಬಲಗೈಯಲ್ಲಿ ಕಂಬವನ್ನು ಹಿಡಿದು ನಿಂತಿದ್ದಾನೆ. ಅವನ ಹಿಂದೆ ಒಬ್ಬ ವ್ಯಕ್ತಿ ನಿಂತಿದ್ದಾನೆ, ಅವನ ಹಿಂದೆ ಒಬ್ಬ ವ್ಯಕ್ತಿ ಒಂದು ಕಂಬದ ಮೇಲೆ ತನ್ನ ಬಲಗೈಯನ್ನು ಮಂಡಿಯನ್ನು ಊರಿಕೊಂಡು ಹಸ್ತದಲ್ಲಿ ಓಲಗ ಅಥವಾ ಕೊಂಬನ್ನು ಹಿಡಿದು ಉದುತ್ತಾ ನಿಂತಿರುವನು, ಎಡಗೈಯಲ್ಲಿ ಕಂಬವನ್ನು ಹಿಡಿದುಕೊಂಡಿರುವನು.

ಲೆಂಕವಾಳಿಯ ಎಡಭಾಗದಲ್ಲಿ ಎಡಗೈಯನ್ನು ಮುಂದಕ್ಕೆ ಚಾಚಿ, ಬಲಗೈಯಲ್ಲಿ ಕತ್ತಿಯನ್ನು ಎತ್ತಿ ಹಿಡಿದು ರುಂಡವನ್ನು ಹಾರಿಸಲು ಸಿದ್ಧನಾಗಿ ನಿಂತಿರುವನು. ಅವನ ಹಿಂದೆ ಒಬ್ಬ ವ್ಯಕ್ತಿ ಎಡಗೈಯಲ್ಲಿ ಚೂರಿಯನ್ನು ಹಿಡಿದು, ಬಲಗೈಯಲ್ಲಿ ತನ್ನ ಹಿಂದಿರುವ ಹೆಂಗಸಿನ ಬಲಗೈಯನ್ನು ಹಿಡಿದು ನಿಂತಿರುವನು. ಆ ಹೆಂಗಸು ಬಲಗಾಲನ್ನು ತನ್ನ ಎಡಗೈಯಲ್ಲಿ ಹಿಡಿದು ಒಂಟಿಗಾಲಲ್ಲಿ ನಿಂತಿರುವಳು. ಬಹುಶಃ ಸತಿ ಹೋಗಲು ಸಿದ್ಧವಾಗಿರುವ 'ಲೆಂಕವಾಳಿ'ಯ ಪತ್ನಿಯಿರಬಹುದು. ಅವಳ ಹಿಂದೆ ಎಡಗೈಯಲ್ಲಿ ಸೊಂಟದ ಬಳಿ ಕತ್ತಿಯನ್ನು ಹಿಡಿದು ನಿಂತಿರುವ ವ್ಯಕ್ತಿ ಇದ್ದಾನೆ. ಈ ಎಲ್ಲ ಶಿಲ್ಪಗಳ ತಲೆಯ ಕೂದಲನ್ನು

ಮುಡಿ ಕಟ್ಟಲಾಗಿದೆ. ಕಿವಿಯಲ್ಲಿನ ಓಲೆಗಳು ಕೋಡಬಳೆಯಾಕಾರದಲ್ಲಿವೆ. ಹೆಂಗಸಿನ ಕುತ್ತಿಗೆಯಲ್ಲಿ ಸರವಿದೆ. ಲೆಂಕವಾಳಿಯ ಕಿವಿಗಳಲ್ಲೂ ದೊಡ್ಡದಾದ ಓಲೆಗಳನ್ನು ಗಮನಿಸಬಹುದು.

ಮಧ್ಯ ಸ್ತರ: ಪಲ್ಲಕ್ಕಿಯಲ್ಲಿ ಕುಳಿತಿರುವ 'ಲೆಂಕವಾಳಿ' ಶಿಲ್ಪ, ಎಡ ಬಲಗಳಲ್ಲಿ, ಎಡ ಬಲಗೈಗಳಲ್ಲಿ ಪಲ್ಲಕ್ಕಿಯನ್ನು ಹಿಡಿದು, ಬಲ ಎಡಗೈಗಳನ್ನು ಸೊಂಟದ ಮೇಲಿಟ್ಟು ನೃತ್ಯ ಭಂಗಿಯಲ್ಲಿ ನಿಂತಿರುವ ವ್ಯಕ್ತಿಗಳ ಶಿಲ್ಪಗಳಿವೆ. ಬಲ ಭಾಗದಲ್ಲಿನ ಶಿಲ್ಪಗಳು ಎಡಗೈಯನ್ನು ಮೇಲಕ್ಕೆ ಎತ್ತಿ, ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡು ನೃತ್ಯಭಂಗಿಯಲ್ಲಿ ನಿಂತಿರುವ ಸುಂದರವಾದ ಶಿಲ್ಪಗಳಿವೆ. ಎಡಭಾಗದಲ್ಲಿ ಬಲಗೈಗಳನ್ನು ಮೇಲಕ್ಕೆ ಎತ್ತಿ ಎಡಗೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡ ನೃತ್ಯಭಂಗಿಯಲ್ಲಿ ನಿಂತಿರುವ ಶಿಲ್ಪಗಳಿವೆ. ಈ ಎಲ್ಲ ಶಿಲ್ಪಗಳೂ ಕಚ್ಚೆ ಹಾಕಿರುವ ಸೀರೆಯನ್ನು ಧರಿಸಿದ್ದು ಸುಂದರವಾದ ನೆರಿಗೆಗಳಿಂದ ಕೂಡಿದೆ. ಎಲ್ಲರ ತಲೆಗೂದಲನ್ನು ತುರುಬಿನಿಂದ ಸಿಂಗರಿಸಲಾಗಿದೆ.

ಮೇಲಿನ ಸ್ತರ: ಈ ಪಟ್ಟಿಕೆಯು ಒಡೆದು ಹೋಗಿದ್ದು ಕೆಲವು ಶಿಲ್ಪಗಳನ್ನು ಹೀಗೆ ಗುರುತಿಸಲಾಗಿದೆ. ಸುಂದರವಾದ ಪೀಠದ ಮೇಲೆ ಬಲಗಾಲನ್ನು ಕೆಳಗೆ ಇಳಿಬಿಟ್ಟು, ಎಡಗಾಲನ್ನು ಪೀಠದ ಮೇಲೆ ಇಟ್ಟು, ಬಲಗೈಯನ್ನು ಬಲಗಾಲಿನ ಮೇಲೆ ಇಳಿಬಿಟ್ಟು ಕುಳಿತಿರುವ ಶಿಲ್ಪವಿದೆ. ಬಹುಶಃ ಗುರುವಿನ ಚಿತ್ರವಿರಬಹುದು. ಆ ಪೀಠದ ಪಕ್ಕದಲ್ಲಿ ಕುಳಿತಿರುವ ಶಿಷ್ಯನ ಶಿಲ್ಪವಿದೆ. ಅವರ ಎರಡು ಬದಿಗಳಲ್ಲಿ ನಿಂತಿರುವ ವ್ಯಕ್ತಿಗಳ ಕಾಲುಗಳು ಮಾತ್ರ ಕಾಣುತ್ತಿದ್ದು, ಬಹುಶಃ ಚಾಮರ ಹಿಡಿದಿರುವ ಸೇವಕರಿರಬಹುದು. ಈ ಶಿಲ್ಪಗಳನ್ನು ಹಾಗೂ ಶಾಸನದಲ್ಲಿನ ಕಂದ ಪದ್ಯವನ್ನು ಗಮನಿಸಿದರೆ ಗುರುವಿನ ಆಜ್ಞೆಯಂತೆ 'ಲೆಂಕವಾಳಿ'ಯು ಸಿಡಿತಲೆ ಕೊಟ್ಟಿರಬಹುದೆಂದು ಊಹಿಸಬಹುದಾಗಿದೆ.

ಶಾಸನ ಪಾಠ

೧ ಸ್ವಸ್ತಿ ಶ್ರೀಮನ್ಮಹಾ ಪ್ರಧಾನಂ.....
೨ ಮಗ ಬೆದ್ದರಸಂ ಧಾತುಸಂವತ್ಸ.....
೩ ರದ ಶು ಪಂಚಮಿ ಸೋಮವಾರದ.....
೪ ಸುರಲೋಕ ಪ್ರಾಪ್ತನಾದಂ ಶ್ರೀ ಜಿನನಾಥಂ ಬೆದ್ದರಸಂಗನು
೫ ಯದಿಂ ಲೆಂಕವಾಳಿಯೊಳೆ ವೀರತನಂ ತನಗೆನಿ **ಸಿಡಿದ**
೬ **ಲೆಯಂ** ದೊಂಗಿನ ಬೆಸವಂ ಕೊಟ್ಟು ಪೊರ್ದಿದಂ ಸಗ್ಗದ **ಸುಖವಂ**

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಥಾಮಸ್ ವಾಟರ್ಸ್; ಅಲ್ಬರೂನಿಸ್ ಇಂಡಿಯಾ - ೨, ಪು. ೧೭೦.
೨. ಪಿ. ವಿ. ಕಾಣೆ; ಹಿಸ್ಟರಿ ಆಫ್ ಧರ್ಮಶಾಸ್ತ್ರ ಸಂ. ೪, ಪು. ೬೦೪.
೩. ಎಸ್.ಐ.ಐ. ೯, ನಂ. ೯, ೯೦೦ ಕ್ರಿ. ಶ., ಎಂ.ಎ.ಆರ್. ೧೯೪೨, ಪು. ೨೦೦, ೧೧೩೩ ಕ್ರಿ.ಶ., ಎ.ಕ. ೧, ಸಂ. ೬೨, ಸು. - ೧೧೦೦ ಕ್ರಿ. ಶ., ಎ.ಕ. ೭, ಶಿಕಾ ೧೩೬, ಕ್ರಿ.ಶ. ೧೦೬೮ ಇತ್ಯಾದಿ. ಹೆಚ್ಚಿನ ವಿವರಗಳಿಗೆ ನೋಡಿ ಎಂ. ಚಿದಾನಂದಮೂರ್ತಿ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು,** ಡಾ. ಎಂ. ಎಂ. ಕಲಬುರ್ಗಿ : ಸಮಾಧಿ - ಬಲಿದಾನ - ವೀರಮರಣ ಸ್ಮಾರಕಗಳು.
೪. **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು. ೩೭೯.
೫. ಅಗ್ನಿಪ್ರವೇಶ ಮಾಡುವುದು, ಕಂಬಗಳ ಮೇಲಿಂದ ಜಿಗಿಯುವುದು, ಸಿಡಿತಲೆ ಕೊಡುವುದು, ಇತರೆ ವಿಧಾನಗಳು ಇವು ವೇಳವಾಳಿ ಹಾಗೂ ಲೆಂಕವಾಳಿ ವಿಧಾನಗಳು. ಹೆಚ್ಚಿನ ವಿವರಗಳಿಗೆ ನೋಡಿ ಡಾ. ಎಂ. ಚಿದಾನಂದಮೂರ್ತಿಯವರ **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು.**

ಡಾ|| ಬಿ. ಎಸ್. ಸುಭದ್ರಾ*

ವಾರಾಣಾಸಿಯ ಜಂಗಮವಾಡಿಮಠದ ಸಮಾಧಿ ಮಂದಿರಗಳ ಕನ್ನಡ ಶಾಸನಗಳು

ಕೊಡಗು ಸಂಸ್ಥಾನದ ಕೊನೆಯ ಅರಸು ಚಿಕ್ಕ ವೀರ ರಾಜೇಂದ್ರ ಒಡೆಯರ್ (೧೮೨೦-೧೮೩೪) ಅವರ ಸಮಾಧಿ ಮಂದಿರ ಉತ್ತರಪ್ರದೇಶ ರಾಜ್ಯದ ಕಾಶಿಯ ಜಂಗಮವಾಡಿಮಠದ ಆವರಣದಲ್ಲಿದ್ದು, ಈ ಬಗ್ಗೆ ಒಂದು ಶಿಲಾಶಾಸನವೂ ಆ ಮಂದಿರದ ಹೊರಗೋಡೆಯಲ್ಲಿದೆ.

ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಅಂಶಗಳು ಹೀಗಿವೆ: ಆಂಗ್ಲರ 'ನೆಲದಾಹ' ನೀತಿಗೆ ಭಾರತದ ಅನೇಕ ರಾಜ್ಯಗಳಂತೆ ಕೊಡಗು ಸಂಸ್ಥಾನವೂ ಬಲಿಯಾಯಿತು. ಕೊಡಗು ಸಂಸ್ಥಾನದ (ಚಿಕ್ಕವೀರರಾಜೇಂದ್ರ) ಆಂಗ್ಲರೊಂದಿಗೆ ಮೈತ್ರಿಯಿಂದಲೇ ಇದ್ದರೂ, ಮೈಸೂರು ಸಂಸ್ಥಾನದ ನಂತರ ಈತನ ಸಂಸ್ಥಾನವನ್ನು ಕಬಳಿಸಲು ಸಂಚು ನಡೆಸಿದ ಆಂಗ್ಲರು ದಾಳಿ ನಡೆಸಿ ಕೊಡಗನ್ನು ಆಕ್ರಮಿಸಿದರು. ಕ್ರಿ. ಶ. ೧೮೩೪ರ ಏಪ್ರಿಲ್ ೬ರಂದು ಬ್ರಿಟಿಷರಿಗೆ ಈತ ಶರಣಾದ. ಬ್ರಿಟಿಷರು ಈತನನ್ನು ರಾಜ್ಯ ಭ್ರಷ್ಟಗೊಳಿಸಲಾಗಿ ಕೊಡಗು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿತು. ರಾಜ್ಯ ವಿಹೀನನಾದ ಚಿಕ್ಕವೀರರಾಜೇಂದ್ರ ವಡೆಯರ್‌ಗೆ ಜೀವನಾಂಶ ದೊರೆಯಿತು. ಮೊದಲು ವೆಲ್ಲೂರಿನಲ್ಲೂ, ಅನಂತರ ಕಾಶಿಯಲ್ಲೂ ಈ ರಾಜನನ್ನು ಕುಟುಂಬ ಸಮೇತ ನೆಲೆಗೊಳಿಸಲಾಗಿತ್ತು. ತನ್ನ ರಾಜ್ಯವನ್ನು ಮರಳಿ ಪಡೆಯಲು ಈತ ಕ್ರಿ. ಶ. ೧೮೫೨ರಲ್ಲಿ ತನ್ನ ಮಗಳು ಗೌರಮ್ಮ ಹಾಗೂ ಇಬ್ಬರು ರಾಣಿಯರು ಸಮೇತ ಇಂಗ್ಲೆಂಡಿಗೆ ಹೋಗಿ ಮನವಿ ಮಾಡಿದರೂ ಫಲಕಾರಿಯಾಗಲಿಲ್ಲ. ಈತನ ಪ್ರೀತಿಯ ಮಗಳು ಗೌರಮ್ಮ ಕ್ರೈಸ್ತಮತ ಸ್ವೀಕರಿಸಿ, "ವಿಕ್ಟೋರಿಯಾ ಗೌರಮ್ಮ" ನಾಗಿ ಆಂಗ್ಲನೊಬ್ಬನನ್ನು ಲಗ್ನವಾದಳು. ೨೪-೯-೧೮೫೯ರಲ್ಲಿ ಲಂಡನ್ನಿನಲ್ಲಿ ಈ ದೊರೆ ಮೃತನಾದ.

ಪ್ರಸ್ತುತ ಶಾಸನ ಸರಳವಾಗಿದ್ದು, ನೇರವಾಗಿ ವಿಷಯವನ್ನು ಹೇಳುತ್ತಿದೆ. "ಹಾಲೇರಿ ಸಂಸ್ಥಾನದ ಕೊಡಗು ದೇಶದ ಮಹಾರಾಜ ಶ್ರೀ ವೀರರಾಜೇಂದ್ರ ವಡೆಯರ್‌ರವರು ವಿಲಾಯತಿಯಲ್ಲಿ ಶಿವಾಧೀನವಾದರು. ಇವರ ದೇಹವನ್ನು ಹಿಂದೂಸ್ಥಾನದ ಕಾಶೀಕ್ಷೇತ್ರಕ್ಕೆ ತಂದು, ಅವರ ಪಟ್ಟದ ರಾಣಿಯಾದ ನಂಜಮ್ಮಾಜಿ ಮತ್ತು ಪುತ್ರರಾದ ಲಿಂಗರಾಜ ವಡೆಯರ್, ಸೋಮಶೇಖರ ವಡೆಯರ್, ವೀರಭದ್ರ ವಡೆಯರ್, ನಂಜರಾಜ ವಡೆಯರ್, ಪದ್ಮರಾಜ ವಡೆಯರ್ ಎಲ್ಲರೂ ಕೂಡಿ, ಸುಬೇದಾರ ಕೊಡಗರ ಮಹಾವೀರ ಆಚೈಯ್ಯನಿಗೆ ಅಪ್ಪಣೆಕೊಟ್ಟು, ವೀರಶೈವ ಮಠ-ಜಂಗಮವಾಡಿಯಲ್ಲಿ ಲಿಂಗಮುದ್ರೆ ಕಲ್ಲಿನೊಳಗೆ ಸಮಾಧಿ ಮಾಡಿ, ಗದ್ದಿಗೆಯನ್ನು ಕಟ್ಟಿಸಿ, ಕ್ರಿ. ಶ. ೧೮೬೨ನೆಯ ಸೆಪ್ಟೆಂಬರ್* ೧೨ನೆಯ ತಾರೀಖು ಲಿಂಗ ಪ್ರತಿಷ್ಠೆ ಮಾಡಿಸಿ, ಆ ಲಿಂಗಕ್ಕೆ 'ಶ್ರೀ ವೀರೇಶ್ವರ' ಎಂದು ಹೆಸರಿಟ್ಟರು. ಮೇಸ್ತ್ರಿ 'ಮೂಲ್‌ಚಂದ್' ಇದನ್ನು ಕಟ್ಟಿಸಿದನು. ಸರ್ವಜನರೂ ತಿಳಿಯುವ ಉದ್ದಿಶ್ಯ ಇದನ್ನು ಬರೆಸಿದೆ".

ಹೀಗೇ ಈ ಶಾಸನ ಕೊಡಗಿನ ಅಂತಿಮ ಅರಸು ಇಮ್ಮಡಿ ವೀರರಾಜೇಂದ್ರನ ಸಮಾಧಿಮಂದಿರದ ಬಗ್ಗೆ ಬೆಳಕು ಚೆಲ್ಲುತ್ತದೆ. ಶಾಸನ ೧೯ನೆಯ ಶತಮಾನದ ಕನ್ನಡ ಲಿಪಿಯನ್ನು ಹೋಲುತ್ತದೆ.

ಎರಡನೆಯ ಶಾಸನ ಇಮ್ಮಡಿ ವೀರರಾಜೇಂದ್ರ ವಡೆಯರ್‌ರವರ ಪಟ್ಟದ ಪುತ್ರರಾದ ಲಿಂಗರಾಜೇಂದ್ರ ವಡೆಯರ್‌ರ ಸಮಾಧಿಗೆ ಸಂಬಂಧಿಸಿದೆ. ಈ ಶಾಸನವನ್ನು ಎದುರಿನಲ್ಲೇ ಇರುವ ಮತ್ತೊಂದು ಸಮಾಧಿಮಂದಿರದ ಹೊರಗೋಡೆಯ ಮೇಲೆ ಕೆತ್ತಲಾಗಿದೆ. ಈ ಶಾಸನದ ಪ್ರಕಾರ, "ಹಾಲೇರಿ ಸಂಸ್ಥಾನದ ಕೊಡಗು ದೇಶದ ಮಹಾಜೆ ವೀರ ರಾಜೇಂದ್ರ ವಡೆಯರವರ ಪಟ್ಟದ ಪುತ್ರರಾದ ಲಿಂಗರಾಜೇಂದ್ರ ವಡೆಯರ್‌ರವರು ಕ್ರಿ. ಶ.* ೧೯೩೦ರ ಫೆಬ್ರವರಿ ತಿಂಗಳು ಮಾಘ ಬಹುಳ ೧೩ ಶುಕ್ರವಾರ ರಾತ್ರಿ ೧೨ ಘಂಟೆಗೆ ಶಿವಾಧೀನರಾದರು. ಅವರ ಪಟ್ಟದ ರಾಣಿಯರಾದ ದೇವಮ್ಮಾಜಿ, ಚಿನ್ನಮ್ಮಾಜಿಯವರು ಜಮಾದಾರ ಶಿವೈಯನಿಗೆ ಅಪ್ಪಣೆಕೊಟ್ಟು, ವೀರಶೈವ

* ಲೆಕ್ಚರರ್, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬.

ಮಠ ಜಂಗಮವಾಡಿಯಲ್ಲಿ ಲಿಂಗಮುದ್ರೆ ಕಲ್ಲಿನೊಳಗೆ ಸಮಾಧಿ ಮಾಡಿ, ಗದ್ದುಗೆಯನ್ನು ಕಟ್ಟಿಸಿ, ಫೆಬ್ರವರಿ ೫ ನೇ ಮಾಘ ಬ ೧೪ ಶುಕ್ರವಾರ ೧೯೦೩*ರಲ್ಲಿ ಲಿಂಗ ಪ್ರತಿಷ್ಠೆ ಮಾಡಿಸಿ, ಆ ಲಿಂಗಕ್ಕೆ "ಲಿಂಗೇಶ್ವರ" ಎಂದು ಹೆಸರಿಟ್ಟರು. ಮೇಸ್ತ್ರಿ ಜಯ ಮಂಗಲ ಇದನ್ನು ಕಟ್ಟಿಸಿದನು. ಸರ್ವಜನರಿಗೆ ತಿಳಿಯುವುದಕ್ಕೆ ಇದನ್ನು ಬರೆಸಿದೆ".



ಹೀಗೆ ಈ ಶಾಸನ ಚಿಕ್ಕವೀರರಾಜೇಂದ್ರ ವಡೆಯರ್‌ನ ಪಟ್ಟದ ಪುತ್ರ ಯುವರಾಜ ಲಿಂಗರಾಜೇಂದ್ರ ಒಡೆಯರ್‌ನ ಸಮಾಧಿ ಮಂದಿರ ವಿಷಯ ತಿಳಿಸುತ್ತದೆ.

ಎರಡು ಕನ್ನಡ ಶಾಸನಗಳನ್ನೊಳಗೊಂಡ "ವೀರೇಶ್ವರ" ಹಾಗೂ "ಲಿಂಗೇಶ್ವರ" ಎಂಬ ಸಮಾಧಿಮಂದಿರಗಳು ಕಾಶಿಯ ಜಂಗಮವಾಡಿ ಮಠದ ಆವರಣದಲ್ಲಿವೆ. ಈಗ ಇವು ಹಾಳು ಬಿದ್ದಿವೆ. ಕೊಡಗಿನ ದೊರೆಗಳೂ ಈ ಜಂಗಮವಾಡಿ ಮಠಕ್ಕೆ ಅನೇಕ ದಾನ-ದತ್ತಿಗಳನ್ನು ಬಿಟ್ಟಿರುವ ಬಗ್ಗೆ ಈ ಮಠದಲ್ಲಿ ದಾಖಲೆಯಿದೆ. ಈ ಮಠದ ಇಂದಿನ ಪೀಠಾಧಿಪತಿಗಳು, ಶ್ರೀ ಕಾಶಿವಿಶ್ವಾರಾಧ್ಯ ಶ್ರೀ ಜ್ಞಾನಸಿಂಹಾಸನಾಧೀಶ್ವರ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು.

ಶಿಲ್ಪಶಾಸ್ತ್ರದ ದೃಷ್ಟಿಯಿಂದ ವೀರರಾಜೇಂದ್ರ ವಡೆಯರ ಗದ್ದುಗೆಯ ಶಿಖರ ಗುಮ್ಮಟದಂತಿದ್ದು, ಗೋಡೆಗಳಲ್ಲಿ ಜಾಲಂಧ್ರಗಳಿವೆ. ಒಂದು ಅಂಕಣದ ಈ ಗದ್ದುಗೆ ಇಂಡೋ-ಸಾರ್ಸನಿಕ್ ಶೈಲಿಯಲ್ಲಿದೆ. ಎದುರಿಗೇ ಇರುವ ಈತನ ಪಟ್ಟದ ಪುತ್ರನಾದ ಲಿಂಗರಾಜೇಂದ್ರ ವಡೆಯರ ಗದ್ದುಗೆ ನಾಗರೀಶೈಲಿಯ ಶಿಖರಗಳುಳ್ಳ ಪುಟ್ಟ ದೇವಾಲಯದಂತಿದೆ. ಬಳಿಯಲ್ಲೇ ಇಂದಿಗೂ ಇರುವ "ರಾಣೀವಾಡೆ" ಎಂಬ ಹೆಸರಿನ ಕಟ್ಟಡ ಹಿಂದೆ ಕೊಡಗಿನ ರಾಣಿಯರ ಆವಾಸಸ್ಥಾನವಾಗಿದ್ದು, ಈಗ ಛತ್ರವಾಗಿದೆ. ಅಂದು ಅವರು ಪೂಜಿಸುತ್ತಿದ್ದ ಎರಡು ಸಣ್ಣ ಶಿವಗುಡಿಗಳೂ ಈ ರಾಣೀವಾಡೆಯಲ್ಲಿ ಇಂದಿಗೂ ಇವೆ

(ಈ ಕ್ಷೇತ್ರಕಾರ್ಯದಲ್ಲಿ ನೆರವಾದ ನನ್ನ ಹಿರಿಯ ಸೋದರ ಶ್ರೀ ಬಿ. ಎಸ್. ಅಣ್ಣಾಜಿರಾವ್ ಹಾಗು ಮಾತೃಶ್ರೀ ಮಹಾಲಕ್ಷ್ಮಮ್ಮನವರಿಗೂ ಕೃತಜ್ಞತೆಗಳು).

---

* ಈ ನಕ್ಷತ್ರ ಗುರುತಿನ ಮೂರು ಸಂದರ್ಭಗಳ ಬಗ್ಗೆ ಅನುಬಂಧದಲ್ಲಿ ಸಂಪಾದಕರ ಟಿಪ್ಪಣಿಗಳನ್ನು ನೋಡಿ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಎಪಿಗ್ರಾಫಿಯ ಕರ್ನಾಟಕ (ಕೊಡಗು ಜಿಲ್ಲೆ) ಸಂಪುಟ ಒಂದು-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ೧೯೭೨
*೨. 'ಕರ್ನಾಟಕ'- ಕನ್ನಡ ವಿಷಯ ವಿಶ್ವಕೋಶ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

ಸಂಪಾದಕರ ಟಿಪ್ಪಣಿಗಳು

ಈ ಶಾಸನದ ೫ ನೇ ಸಾಲಿನಲ್ಲಿ ಬರುವುದು **ಮಣ್‌ರ ಅಚ್ಚೈಯ**, ಕೊಡಗಿನ ಮನೆಪೆದಕ್ಕೆ (ಮನೆತನದ ಹೆಸರು) ಅನುಗುಣವಾದ ಸೂಕ್ತ ಪಾಠ. ಅದು 'ಮಹಾವಿರ' ಅಲ್ಲ; ಹೀಗೆಯೇ ಶಾಸನದಲ್ಲಿರುವ ತೇದಿ '೧೮೬೨ನೇ ಪೆಬರವರಿ' ವಿನಾ '೧೮೬೨ನೇ ಸೆಪೆಬರ್' ಅಲ್ಲ. ಹೀಗೆ ಲೇಖಕರು ಬರೆದುಕೊಟ್ಟಿರುವ ೧ನೇ ಶಾಸನದ ಪಾಠದಲ್ಲಿ ೧೫ರಷ್ಟು ವ್ಯತ್ಯಾಸಗಳು (ನಾವು ಶ್ರೀ ಎಂ. ಬಿ. ಪಾಟೀಲರಿಂದ ಪಡೆದ) ಛಾಯಾಚಿತ್ರವನ್ನು ಗಮನಿಸಿದಾಗ ಕಂಡುಬಂದ ಕಾರಣ 'ಸತ್ಯಶುದ್ಧಕಾಯಕ' ದ್ವೈಮಾಸಿಕದ ಸಂಪಾದಕ ಪ್ರೊ॥ ಬಿ. ರಾಜಶೇಖರಪ್ಪ ಅವರು ಅದರ ಸಂಪುಟ - ೧, ಸಂಚಿಕೆ - ೫ (ಮೇ - ಜೂನ್ ೧೯೯೧), ಪು. ೫೮-೫೯ರಲ್ಲಿ ಪರಿಷ್ಕರಿಸಿ ನೀಡಿರುವ ಶಾಸನ ಸಾಲಿನ ಕ್ರಮಾನುಸಾರದ ಸೂಕ್ತಪಾಠವನ್ನು ಹೋಲಿಸಿ ಲೇಖಕರ ಪಾಠವನ್ನು ಪರಿಷ್ಕರಿಸಿ ಈ ಕೆಳಗೆ ನೀಡಿದೆ.

ಕಾಶಿ ಜಂಗಮವಾಡಿ ಮಠದ
ಚಿಕ್ಕವೀರರಾಜೇಂದ್ರನ ಸಮಾಧಿ ಶಾಸನ


೧ ಶ್ರೀ
೨ ಸಂಸ್ಥಾನ ಹಾಲೇರೀ ಕೊಡಗು ದೇಶದ
ಮಹಾರಾಜ ಶ್ರೀ ವೀರರಾಜೇಂದ್ರ ವಡೆಯರವರೂ॥
ವಿಲಾಯಿತಿಯಲ್ಲು। ಶಿವಾಧೀನವಾ
೨ ದ್ರು ಅವರ ದೇಹವಂನ್ನು ಹಿಂದೂಸ್ತಾನ್ ಕಾಶಿಕ್ಷೇತ್ರಕೆ
ತಂದು। ಅವರ ಪಟ್ಟದ ರಾಣಿಯಾದ
ನಂಜಮ್ಮಾಜಿಯವರು। ಅವರ ಪುತ್ರರಾದ। ಲಿಂಗರಾಜ
೪ ವಡೆಯರವರು ಸೋಮಶೇಖರ ವಡೆಯರವರು
ವೀರಭದ್ರ ವಡೆಯರವರು ನಂಜರಾಜ ವಡೆಯರವರು
ಮುದ್ದರಾಜ ವಡೆಯರವರು ಪದ್ಮರಾಜ ವಡೆಯರವರೂ।
೫ ಸಹ ಕೂಡಿ ಶುಭೆದಾರ ಕೊಡಗರ ಮಣ್‌ರ ಅಚ್ಚೈಯನಿಗ
ಅಪ್ಪಣೆಕೊಟ್ಟು। ವೀರಶೈವ ಮಠ ಜಂಗಂಬಾಡಿ ಲಿಂಗಮುದ್ರ
ಕಲ್ಲಿನೊಳಗೆ ಜಾಗಾದಲ್ಲು ಸಮಾದಿ ಮಾ
೬ ಡಿ ಗದ್ದಿಗೆಯಂನ್ನು ಕಟ್ಟಿಸಿ। ಸಂನ್ ೧೮೬೨ನೇ
ಪೆಬರವರಿ ತಾರಿಕು। ೧೩ನೆ ದುರುಮತಿ
ಸಂವತ್ಸರಧ ಮಾಘ ಶುದ್ಧ ೧೩ ಬುಧವಾರ
ದಿವಾ ಘಂಟ್ಟೆ ೧೧॥ಂಗೆ ಲಿಂ
೭ ಗ ಪ್ರತಿಷ್ಟೆ ಮಾಡಿಸಿ ಆ। ಲಿಂಗಕೆ ಶ್ರೀ ವಿರೆಶ್ವರಯಂಥಾ
ಹೆಸರು ಸಹ ಮಡ್ಗಿಯಿದೆ॥ ॥ ಮೇಸ್ತ್ರಿ ಮೂಲ್‌ಚಂದ್
ಕಟ್ಟಿದ್ದೂ ಯಿದು ಸರ್ವೆಜನರು ತಿಳಿಯುವ ಉ
೮ ದ್ದಿಶ್ಯ ಬರಸಿಯಿದೆ॥

(ಕೆಳಗೆ 'ಶ್ರೀಗುರು ಪ್ರಸನ್ನಂ॥' ಎಂದು ಆರಂಭವಾಗಿ ನಾಗರೀ ಲಿಪಿಯಲ್ಲಿ ಹಿಂದಿ ಭಾಷೆಯಲ್ಲೂ ಶಾಸನದ ಇದೇ ವಿಷಯವನ್ನು ಬರೆಯಿಸಿದೆ.)

ಇನ್ನು ಲೇಖಕರು ಬರೆದುಕೊಟ್ಟಿರುವ ೨ನೇ ಶಾಸನದ ಪಾಠದ ಸಾಲುಗಳು ಕ್ರಮಾನುಸಾರವಾಗಿವೆ. ಆದರೆ ಅವರ ಪಾಠದಲ್ಲಿ ೧೭ರಷ್ಟು ವ್ಯತ್ಯಾಸಗಳು ಛಾಯಾಚಿತ್ರವನ್ನು (ಶ್ರೀ ಎಂ. ಬಿ. ಪಾಟೀಲ್ ಅವರ ಕೃಪೆ) ಗಮನಿಸಿದಾಗ ಕಂಡುಬಂದ ಕಾರಣ** ಲೇಖಕರ ಪಾಠವನ್ನು ಪರಿಷ್ಕರಿಸಿ ಕೆಳಗೆ ನೀಡಿದೆ.

ಕಾಶಿ ಜಂಗಮವಾಡಿ ಮಠದ ಪಟ್ಟದ ಲಿಂಗರಾಜೇಂದ್ರ ಒಡೆಯನ
ಸಮಾಧಿ ಮಂದಿರದ ಶಾಸನ

೧ ಸಂವಸ್ಥಾನ ಹಾಲೇರಿ ಕೊಡಗ ದೆಶ
೨ ದಾ ಮಹಾಜೆ ಶ್ರೀ ವಿರರಾಜೆಂದ್ರ ವಡೆ



೩ ಯುರವರ ಪಟ್ಟದಾ ಪುತ್ರರಾದಾ ಲಿಂಗರಾ
೪ ಜೆದ್ರ ವಡೆಯರವರು ಸಂಮತ್ತ ೧೯೩೦ ಮಾ
೫ ಘ ಬ॥೧೩॥ ಸುಕ್ರವಾರಾ ರಾತ್ರಿ ॥೧೨॥ ಘಂಟೆ
೬ ಕೆ ಶಿವಾಧೀನವಾದರೂ ಅವರಾ ಪಟ್ಟದ
೭ ರಾಣಿಯವರೂ ದೇವಂಮ್ಮಾಜಿ ಚೆಂನ್ನಮ್ಮಾ
೮ ಜಿಯವರೂ ಜಮಾದಾರ ಶಿಧ್ಧೈಯನಿಗೆ ಅ
೯ ಪಣೆ ಕೊಟು ವೀರಶೈವ ಮಠಾ ಜಂಗಮ
೧೦ ಬಾಡಿ ಲಿಂಗ ಮುದ್ರೆಕಲ್ಲಿನೊಳಗೆ ಜಾಗದ
೧೧ ಲ್ಲೂ - ಸಮಾಧಿ ಮಾಡಿ ಗದುಗೆಯಂನ್ನು ಕಟ್ಟಿ
೧೨ ಸಿ ॥ ತಾ॥ ರೀ॥ ೫ನೆ ಫೆಬರವರಿ ಸಂನ್। ೧೮೭೩ನೆ
೧೩ ಮಾಘವ ॥೧೪॥ ಸುಕ್ರವಾರ ॥ ಸಂಮ್ಮತ ॥ ೧೯೩೦ ॥
೧೪ ಲಿಂಗ ಪ್ರತಿಷ್ಠಿ ಮಾಡಿಸಿ ॥ ಆ ಲಿಂಗಕ್ಕೆ ಲಿಂಗೆಶ್ವರಾ ಯಂ

೧೫ ತಾ ಹೆಸರೂ ಮಡಿಗಿಯಿಧೆ ಮಿಾಸ್ತಿ ಜೆಯಮಂ
೧೬ ಗಲ್ಲ ಕಟ್ಟೆದುಯಿದು ಸರ್ವಜನರಿಗೆ ತಿಳಿಯು
೧೭ ವದಕ್ಕೆ ಬರಶಿಯಿಧೆ॥

ಶಾಸನದ ೪ ಮತ್ತು ೧೩ನೇ ಸಾಲಿನಲ್ಲಿ ಅನುಕ್ರಮವಾಗಿ 'ಸಂಮತ್ತ' ೧೯೩೦, 'ಸಂಮ್ಮತ' ೧೯೩೦ ಎಂದಿದ್ದು, ೧೨ನೇ ಸಾಲಿನಲ್ಲಿ ಲಿಂಗಪ್ರತಿಷ್ಠೆಯ ತೇದಿಯನ್ನು ೫ನೇ ಫೆಬರವರಿ ಸಂನ್ ೧೮೭೩ ಎಂದು ನಮೂದಿಸಿದೆ. ಇದಕ್ಕೆ ಕಾರಣ ಉತ್ತರ ಭಾರತದ ವಿಕ್ರಮ ಸಂವತ್ಸರ ಅಥವಾ ಸಂವತ್ ಎಂದು ಕರೆದು ಅನುಸರಿಸುವ ಪದ್ಧತಿ ಆಗಿದೆ. ಈ 'ಸಂವತ್' (ಶಾಸನದಲ್ಲಿ ಸಂಮತ್ತ ಹಾಗು ಸಂಮ್ಮತ ಎಂದು ಲಿಖಿತವಾಗಿರಬೇಕು) ಹಾಗು ಕ್ರಿ. ಶ. ಕ್ಕೂ ವ್ಯತ್ಯಾಸ ೫೭ ವರ್ಷಗಳಿವೆ. ಅಂದರೆ (ಸಂನ್) ಕ್ರಿ. ಶ. ೧೮೭೩ + ೫೭ = ಸಂವತ್ ೧೯೩೦ ಆಗುತ್ತದೆ. ಅಂತಾಗಿ ಪಟ್ಟದ ರಾಣಿಯ ಪುತ್ರ ಲಿಂಗರಾಜೇಂದ್ರ ವಡೆಯ ಶಿವಾಧೀನವಾದದ್ದು ಸಂವತ್ ೧೯೩೦ ಅರ್ಥಾತ್ ಕ್ರಿ. ಶ. ೧೮೭೩ ವಿನಾ ಕ್ರಿ. ಶ. ೧೯೩೦ ಅಲ್ಲ. ಅಲ್ಲದೆ ಐ. ಮಾ. ಮುತ್ತಣ್ಣನವರ *(Tiny Model state of India, 1953 p. 100)* ಕೃತಿಯಲ್ಲಿ *'The only legitimate son of the last Raja (coorg) died in Benares in 1874'* ಎಂದು ಪಟ್ಟದ ಪುತ್ರ ಲಿಂಗರಾಜೇಂದ್ರ ವಡೆಯನ ಕುರಿತು ಹೇಳಿದೆ. ಇಲ್ಲಿ ಒಂದು ವರ್ಷದಷ್ಟು ವ್ಯತ್ಯಾಸ ಬಹುಶಃ ಶಿವಾಧೀನದ ತೇದಿ ಹಾಗೆ ಗದ್ದುಗೆ ಮೇಲೆ ಲಿಂಗ ಪ್ರತಿಷ್ಠೆಯ ಕಾಲದ ಬಗ್ಗೆ ತಿಳುವಳಿಕೆಯ ವ್ಯತ್ಯಾಸದ ಅಥವಾ ಲಿಪಿ ಗೊಂದಲದ ಕಾರಣವಿರಬಹುದು; ಈ ಮಾತು ಶಾಸನದ ೫ನೇ ಸಾಲಿನ 'ಮಾಘ ಬ॥೧೩॥ ಸುಕ್ರವಾರ, ೧೩ನೇ ಸಾಲಿನ ಮಾಘವ ॥೧೪॥ ಸುಕ್ರವಾರ'ದ ಸಂದರ್ಭಕ್ಕೂ ಅನ್ವಯವೆ ನಿಸುತ್ತದೆ.

[ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮೃತ್ಯುಂಜಯ ವಿಶೇಷ ವ್ಯಾಖ್ಯಾನ ಮಾಲೆ - ೧೩ ಆಶ್ರಯದಲ್ಲಿ **ಕೊಡಗಿನ ಹಾಲೇರಿ ವೀರಶೈವ ಅರಸುಮನೆತನ ಕುರಿತು ೨೪-೨೫ನೇ ಆಗಸ್ಟ್ ೧೯೯೫ ರಲ್ಲಿ ಎಂ. ಜಿ. ನಾಗರಾಜ್ ಅವರು ನೀಡಿದ ಉಪನ್ಯಾಸದಲ್ಲಿ ಮಂಡಿಸಿದ್ದ ಈ ಪಾಠವನ್ನು ಹೋಲಿಸಿದೆ. - (ಸಂ.)]

ಚಂದನಾ ವೈ. ನೀಲಪ್ಪ*

ಹರಿಹರದಲ್ಲಿ ಯತಿ ಸಮಾಧಿಗಳು

ಹರಿಹರದಂತಹ ಪುಣ್ಯಕ್ಷೇತ್ರಕ್ಕೆ ಹಲವಾರು ಪೂಜ್ಯರು ಬಂದು ಹೋಗಿರಬಹುದು. ಅವರಲ್ಲಿ ಕೆಲವೇ ಕೆಲವರು ನೆಲೆಸಿ ತಮ್ಮ ಸಮಾಧಿಗಳನ್ನು ಮುಂದಿನ ಸಮಾಜಕ್ಕಾಗಿ ಬಿಟ್ಟು ಹೋಗಿದ್ದಾರೆ. ತಮ್ಮ ಶಾಶ್ವತ ಛಾಪನ್ನು ಉಳಿಸಿದ್ದಾರೆ. ಇಂದಿನ ವರೆಗೆ ಈ ಸಮಾಧಿಗಳ ಬಗ್ಗೆ ಕೆಲವೇ ಹಿರಿಯರಿಗೆ ತಿಳಿದಿದ್ದು, ಜನಸಾಮಾನ್ಯರಿಂದ ನಿರ್ಲಕ್ಷಕ್ಕೊಳಗಾಗಿವೆ. ಈ ಲೇಖನದ ಮೂಲಕ ಆ ಪೂಜ್ಯರ ಸಮಾಧಿಗಳ ಮೇಲೆ ಬೆಳಕು ಬೀರುವುದಾಗಿದೆ.

ಹರಿಹರ ದೇವಾಲಯದ ದಕ್ಷಿಣ ಭಾಗದಿಂದ ತುಂಗಭದ್ರ ಹೊಳೆಗೆ ಹೋಗಲು ಪಾವಟಿಗೆಗಳ ನೇರ ದಾರಿಯಲ್ಲಿ ಎಡ ಪಕ್ಕಕ್ಕೆ ಒಂದು ಕಾಲುದಾರಿ. ಈ ಕಾಲು ದಾರಿಯಲ್ಲಿ ಇಪ್ಪತ್ತು ಗಜಗಳಷ್ಟು ಮುಂದುವರಿದರೆ ಐದು ಸಮಾಧಿಗಳನ್ನು ಕಾಣಬಹುದು. ಕೆಲವು ದಿನಗಳ ಹಿಂದೆ ನಮ್ಮ ಹರಿಹರದ ಖ್ಯಾತ ಲೇಖಕಿ, ಲಲಿತಮ್ಮ ಡಾ।। ಚಂದ್ರಶೇಖರ್‌ರವರು ಬರೆದ "ಶ್ರೀ ಶ್ರೀ ಶಿವಾನಂದ ತೀರ್ಥರು" ಎಂಬ ಪೂಜ್ಯರೊಬ್ಬರ ಜೀವನ ಚರಿತ್ರೆಯ ಬಿಡುಗಡೆ ಸಂದರ್ಭದಲ್ಲಿ ಈ ಐದು ಸಮಾಧಿಗಳ ಪರಿಚಯವಾಯಿತು. ನಂತರ ಹರಿಹರದ ವಯೋವೃದ್ಧರುಗಳೆಲ್ಲರ ಮನೆಗಳಿಗೆ ಭೇಟಿ ಇತ್ತು ಅವರಿಂದ ಈ ಸಮಾಧಿಗಳ ಬಗ್ಗೆ ವಿಚಾರಣೆ ನಡೆಸಿ ಹೆಚ್ಚಿನ ಮಾಹಿತಿ ಪಡೆಯಲಾಯಿತು.

ಈ ಹಿರಿಯರ ಅನುಭವದ ಮಾತುಗಳ ಆಧಾರದ ಮೇಲೆ ಮತ್ತು ನಮ್ಮ ಅಕಾದೆಮಿಯ ಗೌರವಾಧ್ಯಕ್ಷರಾದ ಪ್ರೊ।। ಜಿ. ಎಸ್. ದೀಕ್ಷಿತ್‌ರವರ ಚಿಕ್ಕಪ್ಪ ಶ್ರೀಪಾದ ದೀಕ್ಷಿತರು ತಮ್ಮ ಕೊನೆಗಾಲದಲ್ಲಿ ತಮ್ಮ ಮಗಳ ಕೈಯಿಂದ (ಸಾವಿತ್ರಿಬಾಯಿ) ಶ್ರೀಮತಿ ಲಲಿತಮ್ಮ ಡಾ।। ಚಂದ್ರಶೇಖರವರಿಗೆ ಬರೆದಿರುವ ಒಂದು ಪತ್ರ ಕೂಡ ಆಧಾರವಾಗಿದೆ.

ಈ ಮಾಹಿತಿಗಳ ಆಧಾರದ ಮೇಲೆ ನದಿ ಪರಮಹಂಸ ಸ್ವಾಮಿಯ ಸಮಾಧಿಯ ಮತ್ತು ಇತರ ಸಮಾಧಿಗಳ ಬಗ್ಗೆ ಪ್ರಸ್ತುತಲೇಖನವಿದೆ

ಹರಿಹರ ಕ್ಷೇತ್ರದಲ್ಲಿನ ಈ ಐದು ಸಮಾಧಿಗಳ ಜೊತೆಗೆ ಹರಿಹರೇಶ್ವರನ ತೋಟದ ಆವರಣದಲ್ಲಿರುವ ಎರಡು ಸಮಾಧಿಗಳು ಮತ್ತು ಶ್ರೀ ನಾರಾಯಣ ಗುರೂಜಿಯವರ ಇತ್ತೀಚಿನ ಸಮಾಧಿಯ ಪರಿಚಯವೂ ಈ ಲೇಖನದ ಉದ್ದೇಶ.

ಹರಿಹರೇಶ್ವರ ದೇವಾಲಯದ ದಕ್ಷಿಣ ಭಾಗದಲ್ಲಿ ಒಟ್ಟು ಆರು ಸಮಾಧಿಗಳಿದ್ದು ಅವುಗಳಲ್ಲಿ ಐದು ಯತಿವರ್ಯರದು ಮತ್ತು ಒಂದು ಗೋಮಾತೆಯದು ಎಂದು ಗುರುತಿಸಲ್ಪಟ್ಟಿದೆ. ಅವುಗಳ ಹೆಸರಿಂತಿವೆ :

೧ ಹೊಸತಾಗಿ ವಾಸ್ತು ರಚನೆಯಾಗಿರುವ ಅತಿ ದೊಡ್ಡ ಸಮಾಧಿ ಶ್ರೀ ಶ್ರೀ ಗುಂಡಿಸ್ವಾಮಿಗಳದು (ನದಿ ಪರಮಹಂಸ ಸ್ವಾಮಿ)

೨ ಶ್ರೀ ಶ್ರೀ ಗುಂಡಿ ಸ್ವಾಮಿಗಳ ಪರಮ ಶಿಷ್ಯ ಚಿಂತಾಮಣಿ ಜೋಯಿಸರದು

೩ ಶ್ರೀ ದೇವರಬೆಳೆಕೆರೆಕೃಷ್ಣ ಶಾಸ್ತ್ರಿಗಳ ಅಜ್ಜ ನಾರಾಯಣ ಶಾಸ್ತ್ರಿ ಎಂಬ ಯತಿವರ್ಯರದು.

೪ ಶ್ರೀ ನಿರಾಕಾರತೀರ್ಥ ಸ್ವಾಮಿಯವರದು

೫ ಸಹಜಾನಂದಸ್ವಾಮಿಯವರದು ಮತ್ತು

೬ ಗೋಮಾತೆಯದು

ಹರಿಹರೇಶ್ವರನ ತೋಟದಲ್ಲಿರುವ ಎರಡು ಸಮಾಧಿಗಳು:

೭ ನಾರಾಯಣಾಶ್ರಮದಲ್ಲಿರುವ ಪಾಪನಾಶಿನಿಸ್ವಾಮಿಯವರದು

೮ ಶ್ರೀನಾರಾಯಣ ಗುರುಜಿಯವರದು.

ಈಗಾಗಲೇ ದಾವಣಗೆರೆಯ ದೀಕ್ಷಿತ್ ಪ್ರಿಂಟಿಂಗ್ ಪ್ರೆಸ್‌ನ ಶ್ರೀಪಾದ ದೀಕ್ಷಿತರು ಮತ್ತು ಚಿಂತಾಮಣಿಜೋಯಿಸರ ಮಗ

* ಶ್ರವಣ ಟ್ಯುಟೋರಿಯಲ್ಸ್, ೩೧೨, 'ಇ' ಬ್ಲಾಕ್, ನಡುವಲ್‌ಪೇಟೆ, ಹರಿಹರ - ೫೭೭ ೬೦೧.

ಬಿಷ್ಟಪ್ಪ ಜೋಯಿಸರು ಈ ಕುರಿತು ಲಘು ಕೈಪಿಡಿ ಅಚ್ಚು ಮಾಡಿಸಿ ಬಿಡುಗಡೆ ಮಾಡಿರುವುದು ತಿಳಿದು ಬಂದಿದೆ.

ಈ ಎಲ್ಲಾ ಸಮಾಧಿಗಳಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿರುವುದು ನದೀಪರಮಹಂಸಸ್ವಾಮಿ ಅರ್ಥಾತ್ ಗುಂಡಿಮಹಾಸ್ವಾಮಿಗಳ ಸಮಾಧಿ. ಸುಮಾರು ೧೯ನೇ ಶತಮಾನದ ಉತ್ತರಾರ್ಧದಲ್ಲಿ ಹರಿಹರಕ್ಕೆ ಇವರು ಆಗಮಿಸಿರಬೇಕು. ಹೈದರಾಬಾದ್ ಕಡೆಯಿಂದ ಬಂದವರಿರಬೇಕು. ಏಕೆಂದರೆ ಆಗ ಅವರು ಇಲ್ಲಿಯ ಜನರಿಗೆ ಹಂಚಿದ ನಾಣ್ಯಗಳು ಇಂದಿಗೂ ಹರಿಹರದ ಹಲವರಲ್ಲಿದ್ದು ಅವು ಹೈದರಾಬಾದ್ ಸಂಸ್ಥಾನಕ್ಕೆ ಸೇರಿದುವು ಎಂದು ಕಂಡು ಬರುತ್ತದೆ. ನದೀ ಪರಮಹಂಸಸ್ವಾಮಿಗಳ ಆಶೀರ್ವಾದವೆಂದು ಈ ನಾಣ್ಯಗಳು ಪೂಜಾಗೃಹವನ್ನು ಸೇರಿವೆ. ಇದರಿಂದ ಪ್ರಸ್ತುತ ಯತಿಗಳು ಜನ ಸಾಮಾನ್ಯರ ಮೇಲೆ ಎಷ್ಟೊಂದು ಪ್ರಭಾವ ಬೀರಿದವರೆಂದು ಸ್ಪಷ್ಟವಾಗುತ್ತಿದೆ.

ಈ ಸ್ವಾಮಿಯವರ ಯಾವದೇ ಶಾಸನ ಇಲ್ಲಿಲ್ಲ. ಒಂದೇ ಒಂದು ಕೈಪಿಡಿ ಜೊತೆಗೆ ಶ್ರೀಪಾದದೀಕ್ಷಿತರು ಮಗಳು ಸಾವಿತ್ರಿ ಬಾಯಿಯವರಿಂದ ಲಲಿತಮ್ಮನವರಿಗೆ ಬರೆದ ಪತ್ರ ನನಗೆ ಲಭ್ಯವಾಗಿದೆ. ಹರಿಹರದ ದತ್ತಾತ್ರೇಯದೀಕ್ಷಿತರೂ ಈ ಯತಿಗಳ ಬಗ್ಗೆ ಪ್ರಸ್ತಾಪಿಸಿ ಬರೆದಿದ್ದಾರೆ. ಈ ಯತಿಗಳ ಬಗ್ಗೆ ಹರಿಹರದ ವಯೋವೃದ್ಧರ ಅನುಭವವನ್ನು ನಾನು ಕೇಳಿ ತಿಳಿದಿರುವಲ್ಲಿ ಶ್ರೀಗಳು ಹರಿಹರದ ಜನತೆ ಮೇಲೆ ಅಪಾರ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಇದನ್ನು ಇತಿಹಾಸದಲ್ಲಿ ದಾಖಲಿಸುವುದು ಅಗತ್ಯವೆನಿಸುತ್ತದೆ.

ಉತ್ತರ ಭಾರತದ ಪ್ರಯಾಗ, ಕಾಶಿ ಮತ್ತು ಅಲಹಾಬಾದ್‌ನಂತಹ ಹಲವಾರು ಪೂಣ್ಯಕ್ಷೇತ್ರಗಳ ಪರ್ಯಟನೆ ಮುಗಿಸಿದ ಯತಿಗಳು ದಕ್ಷಿಣ ಕಾಶಿ ಎಂದು ಪ್ರಸಿದ್ಧಿಯಾಗಿರುವ ಹರಿಹರಕ್ಕೆ ನದೀಪರಮಹಂಸರು ಸುಮಾರು ೧೮೮೦ರಲ್ಲಿ ಆಗಮಿಸಿರಬೇಕು. ಸಂಸ್ಕೃತಿ ಸಾಂಪ್ರದಾಯಗಳನ್ನು ಮೈಗೂಡಿಸಿಕೊಂಡ ನಮ್ಮ ಪ್ರೊ|| ಜಿ. ಎಸ್ ದೀಕ್ಷಿತ್‌ರವರ ಅಜ್ಜನ ನಿತ್ಯ ಜೀವನದಲ್ಲಿ ಪರಸ್ಥಳಗಳಿಂದ ಆಗಮಿಸಿದ ಬ್ರಾಹ್ಮಣರಿಗೆ ಭೋಜನಕ್ಕೆ ಕರೆಯುವುದು ಒಂದು ನಿತ್ಯಕಾರ್ಯವಾಗಿತ್ತು. ಶ್ರೀಪಾದದೀಕ್ಷಿತರು ತಮ್ಮ ತಂದೆಯ ಆಶಯದಂತೆ ಯತಿಗಳನ್ನು ಮೊದಲನೇ ಬಾರಿ ಮನೆಗೆ ಭಿಕ್ಷಕ್ಕೆ ಕರೆತಂದರು. ಕೆಂಪು ವರ್ಣ ಎತ್ತರದ ಮೈಗಟ್ಟು, ನರೆತ ಕೂದಲು, ಮುಖದಲ್ಲಿ ತೇಜಸ್ಸು ಇದ್ದ ೭೫-೮೦ರ ಸುಮಾರಿನ ಈ ವಯೋವೃದ್ಧರನ್ನು ಕಂಡರೆ ಪೂಜ್ಯಭಾವನೆ ಮೂಡುವಂತೆ ಮಾಡುತ್ತಿತ್ತು. ಆ ನಂತರ ಹರಿಹರದಲ್ಲೇ ಇದ್ದರೂ ಯಾರ ಮನೆಗೂ ಭಿಕ್ಷಕ್ಕೆ ಹೋಗುತ್ತಿರಲಿಲ್ಲವಂತೆ. ಮೊಸರವಲಕ್ಕಿ ತೆಗೆದುಕೊಂಡು ಅವರಿದ್ದಲ್ಲಿ ಹೋದರೂ ನಿರಾಕರಿಸುತ್ತಿದ್ದರು. ಇವರ ಈ ಹಟದ ಸ್ವಭಾವದಿಂದ ಹರಿಹರದ ಬ್ರಾಹ್ಮಣವೃಂದವು ಕಳವಳಗೊಂಡು ತಂಡ ತಂಡವಾಗಿ ಅವರಿದ್ದಲ್ಲಿಗೆ ಹೋದಾಗ ಅವರ ಕೋಪಿಷ್ಠ ಗುಣದ ಪರಿಚಯ ಜನತೆಗಾಯಿತು. ಪ್ರತಿನಿತ್ಯ ಮುಂಜಾನೆ ೪ ಘಂಟೆಗೆ ಎದ್ದು ನದೀ ಸ್ನಾನ ಮಾಡಿ ಬಟ್ಟೆ ಮುಸುಕು ಧರಿಸಿ ಈಗ ಸಮಾಧಿ ಇರುವ ಸ್ಥಳದಲ್ಲಿ ಕುಟೀರದಲ್ಲಿ ವಾಸಿಸುತ್ತಿದ್ದರು. ಆಗಾಗ ಅಕ್ಕ ಪಕ್ಕದ ಬ್ರಾಹ್ಮಣರ ಮನೆಗೆ ಭೇಟಿಯಿತ್ತು ನಂತರ ಅಶ್ವತ್ಥನಾರಾಯಣ ಕಟ್ಟೆಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದರು. ನಂತರ ತಮ್ಮ ಗುಡಿಸಲೊಳಗೆ ತೋಡಿರುವ ಗುಂಡಿಯೊಳಗೆ ಕುಳಿತು ಧ್ಯಾನಾರೂಢರಾಗಿರುತ್ತಿದ್ದರು. ಜನರಿಂದ ರವೆಉಂಡಿ ಮಾತ್ರ ಸ್ವೀಕರಿಸುತ್ತಿದ್ದರಂತೆ. ಗುಂಡಿಯೊಳಿಗೆ ಧ್ಯಾನ ಮಾಡುವುದರಿಂದ ಇವರಿಗೆ *ಗುಂಡೀಸ್ವಾಮಿಗಳೆಂದು* ಅನ್ವರ್ಥ ನಾಮ ರೂಢಿಗೆ ಬಂತು.

ಇವರು ಒಮ್ಮೆ ಅಂಗಡಿಗೆ ಹೋಗಿ ತಮಗೆ ಬೇಕಾದ ದಿನಸುಗಳನ್ನು ಖರೀದಿಸಿ ಒಂದು ಚಿನ್ನದ ನಾಣ್ಯ ಅಂಗಡಿಯವನಿಗೆ ಕೊಟ್ಟರು ಎಂದು ಶ್ರೀಪಾದ ದೀಕ್ಷಿತರ ಪತ್ರ ತಿಳಿಸುತ್ತದೆ. ಆದರೆ ಆ ಚಿನ್ನದ ನಾಣ್ಯ ಈಗ ಲಭ್ಯವಿಲ್ಲ.

ಅವರು ಹರಿಹರದಲ್ಲಿ ಚಲಾವಣೆ ಮಾಡಿದ ಬೆಳ್ಳಿ ನಾಣ್ಯಗಳು ಲಭ್ಯವಿದ್ದು ಅವು ಹೈದರಾಬಾದ್ ನಿಜಾಮನ ಸಂಸ್ಥಾನಕ್ಕೆ ಒಳಪಟ್ಟಿರಬಹುದೆನಿಸುತ್ತದೆ. ಅಂಗಡಿಯವರು ನಾಣ್ಯಕ್ಕೆ ಚಿಲ್ಲರೆ ವಾಪಾಸು ಕೊಡಲು ಹೋದಾಗ ವರ್ತಕನ ಜೊತೆ ಜಗಳವಾಡಿ ಚಿಲ್ಲರೆ ಪಡೆಯದೆ ಹೋಗಿರುವರೆಂದು ತಿಳಿದು ಬರುತ್ತದೆ. ಅಂತಹ ವರ್ತಕನಿಗೆ ವ್ಯಾಪಾರದಲ್ಲಿ ಶುಕ್ರದೆಸೆ ಪ್ರಾರಂಭವಾಯಿತೆಂದು ಐತಿಹ್ಯವಿದೆ. ಇವರು ಯಾರೆಲ್ಲರಿಗೆ ನಾಣ್ಯವನ್ನು ತಮ್ಮ ಸ್ವಇಚ್ಛೆಯಿಂದ ನೀಡುತ್ತಿದ್ದರೋ ಅವರೆಲ್ಲರಿಗೂ ಶುಕ್ರದೆಸೆಯೆ ಒದಗಿತ್ತು. ಮೊದ ಮೊದಲು ನಿಷ್ಠಾವಂತ ಸ್ವಭಾವಿ ವರ್ತಕರು ಚಿಲ್ಲರೆ ವಾಪಾಸು ಕೊಡಲು ಪ್ರಯತ್ನಿಸಿದರಾದರೂ, ನಂತರ ಸ್ವಭಾವವರಿತು ಅವರಿಚ್ಛೆಯಂತೆ ನಡೆದು ಕೊಂಡರಂತೆ.

ಕೆಲವು ಕಾಲದ ನಂತರ ನಾಡಿಗೇರ ಮನೆತನದ ಒಂದು ಹೆಣ್ಣು ಮಗಳಿಂದ ಅಡುಗೆ ಮಾಡಿಸುವುದನ್ನು ಪ್ರಾರಂಭಿಸಿದರು. ಬೆಳಗಿನ ಪೂಜಾವಿಧಿಗಳನ್ನು ಪೂರೈಸಿ ಅನಂತರ ಭುಂಜಿಸುತ್ತಿದ್ದರು. ಕೆಲವೊಮ್ಮೆ ನದಿಯಿಂದ ತೆರಳುತಿದ್ದ ಯಾರಾದರೂ ಹೆಂಗಸನ್ನು ಕರೆದು ಅಡಿಗೆ ಮಾಡಿಸುತ್ತಿದ್ದರು. ಅವರ ಮನೆಯವರು ಯಾರಾದರೂ ಇದಕ್ಕೆ ಅಡ್ಡಿ ಪಡಿಸಲು ಬಂದರೆ ವ್ಯಾಜ್ಯಕ್ಕೆ ಇಳಿಯುತ್ತಿದ್ದರಂತೆ. ಕಾಲಕ್ರಮೇಣ ಹರಿಹರದ ಹಲವರು ಇವರ ಶಿಷ್ಯ ಸ್ಥಾನ ಪಡೆದರು. ಅವರಲ್ಲಿ ಶಾನುಭೋಗರ ಶೀನಪ್ಪ, ಚಿಂತಾಮಣಿಜೋಯಿಸರು (ಬಿಷ್ಟಪ್ಪ ಜೋಯಿಸರ ತಂದೆ ಪ್ರಮುಖರು. ದೂರದ ಊರಿನಿಂದ ಬಂದ ಒಬ್ಬ ದರ್ಜಿಯು ಇವರ ಶಿಷ್ಯನಾದನು. ಅವನಿಗೆ ರಾತ್ರಿ ವೇಳೆ ಗುಂಡೀ ಸ್ವಾಮಿಗಳು

ವಿಶೇಷವಾಗಿ ಪಾಠ ಮಾಡುತ್ತಿದ್ದರಂತೆ. ಅವನು ಉಳಿದವರೊಡನೆ ಮಾತನಾಡದ ಒಬ್ಬಮೌನಿ ಶಿಷ್ಯನಾಗಿದ್ದ.

ಪವಾಡರೂಪೀ ವ್ಯಕ್ತಿತ್ವದ ಕತೆಗಳು: ಹುಡುಗರು ಇವರ ಜ್ಞಾನ ಪರೀಕ್ಷೆ ಮಾಡಲು ಹಾತೊರೆಯುತ್ತಿದ್ದರಂತೆ. ಉದಾಹರಣೆಗೆ "ಶೀನಪ್ಪ ಅವರ ಮನೆಯಲ್ಲಿ ಏನು ಮಾಡುತ್ತಿದ್ದಾನೆ?" ಎಂದು ಕೇಳುತ್ತಿದ್ದರು. ಅದಕ್ಕುತ್ತರವಾಗಿ ಯತಿಗಳು ಚಾಪೆಯ ಮೇಲೆ ಮಲಗಿದ್ದಾನೆ ಎಂದರೆ ಮಕ್ಕಳ ಹಿಂಡು ಹೊ... ಎಂದು ಕೂಗುತ್ತಾ ಶೀನಪ್ಪನ ಮನೆಗೆ ಓಡುತ್ತಿತ್ತು. ಅಲ್ಲಿ ಅವರು ಚಾಪೆ ಮೇಲೆ ಮಲಗಿರುವುದನ್ನು ಖಾತ್ರಿ ಪಡಿಸುತ್ತಿತ್ತು. ಇಂಥ ಜ್ಞಾನಶಕ್ತಿಯನ್ನು ತಮ್ಮ ಪರಮ ಶಿಷ್ಯನಿಗೂ ಧಾರೆ ಎರೆದಿದ್ದರು.

ಒಮ್ಮೆ ಹುಡುಗರು ಇಬ್ಬರಿಗೂ ಒಂದೇ ಪ್ರಶ್ನೆ ಕೇಳಿದಾಗ ಇಬ್ಬರೂ ಬೇರೆ ಬೇರೆ ಉತ್ತರ ಕೊಟ್ಟರು, ಆದರೆ ಅವರುತ್ತರಿಸಿದ ಕಾಲಕ್ಕನುಗುಣವಾಗಿ ಎರಡೂ ಉತ್ತರಗಳು ಸರಿಯಾಗಿದ್ದುದು ಆಶ್ಚರ್ಯಕರವೆನಿಸಿತ್ತು. ಇಂಥ ಜ್ಞಾನ ಕಂಡು ಹರಿಹರದ ಜನತೆ ಪ್ರಭಾವಗೊಂಡಿತ್ತು.

ಒಮ್ಮೆ ದಿವಾನ್ ಶೇಷಾದ್ರಿ ಅಯ್ಯರವರು ಪೂಜ್ಯರ ದರ್ಶನಕ್ಕೆ ಬಂದಾಗ, ನೀನು ಮೈಸೂರು ಸಂಸ್ಥಾನಕ್ಕೆ ಅಧಿಪತಿ. ನಾನು ಈ ಗುಡಿಸಲಿಗೆ ಅಧಿಪತಿ ಎಂದು ಅವರಿಗೆ ರವೆಉಂಡೆ ಖರ್ಜೂರ ಹಂಚಿದರು. ವಯಸ್ಸಾದ ಯತಿಗಳಿಗೆ ಒಬ್ಬ ಮಹಾಶಯರು ಖರ್ಜೂರ ಜಜ್ಜಿ ಕೊಡಲು ಮುಂದಾದಾಗ ಅವರಿಗೆ ಬೈದು "ನನಗೆ ಕೈಗಳಿವೆ ಪ್ರತಿಷ್ಠೆ ಬೇಡ" ಎಂದರು.

ಮತ್ತೊಮ್ಮೆ ಗುಂಡಿಸ್ವಾಮಿಗಳು ಗುಂಡಿಯೊಳಗೆ ಕುಳಿತು ಧ್ಯಾನಾರೂಢರಾದಾಗ ಪ್ರವಾಹ ಬಂದು ಗುಂಡಿಯ ಸುತ್ತಲೂ ಒಳಗೆಲ್ಲ ನೀರಿನಿಂದಾವೃತವಾಯಿತು. ಯಾರು ಹೋಗಿ ಕರೆದರೂ ಯತಿಗಳು ಎದ್ದು ಬಾರಲಿಲ್ಲ. ಸ್ವತಃ ಶೇಷಾದ್ರಿ ಅಯ್ಯರ್ ಬಂದು ಯತಿಗಳನ್ನು ವಿನಂತಿಸಿದಾಗ "ನನ್ನ ಚಿಂತೆ ನಿನಗೇಕೆ? ನಿನ್ನ ಮನೆಯ ಲಕ್ಷ್ಮಿ ಹೊರಟು ಹೋಗುತ್ತಿದ್ದಾಳೆ ಬೇಗ ಮನೆಗೆ ಹೋಗು" ಎಂದರು. ದಿವಾನರು ಮನೆಗೆ ಹೋದಾಗ ಅಲ್ಲಿ ಅವರ ಮಡದಿ ಅಂತಿಮ ಉಸಿರು ಎಳೆದಿದ್ದರು. ಇಂತಹ ಹಲವಾರು ಘಟನೆಗಳು ಅವರ ತಪೋಶಕ್ತಿಗೆ ನಿದರ್ಶನಗಳಾಗಿವೆ. ೧೯೦೧ರಲ್ಲಿ ವಿಕ್ಟೋರಿಯಾ ರಾಣಿಯ ಸಾವಿನ ಬಗ್ಗೆ ಭವಿಷ್ಯ ನುಡಿದು "ಆಕೆಗೆ ಆಯಸ್ಸು ಮಗಿದಿದೆ ಯಾರು ಚಿಂತಿಸ ಬೇಕಾಗಿಲ್ಲ" ಎಂದು ಆಕೆಯ ಸಾವಿನ ಬಗ್ಗೆ ಮುಂಚಿತವಾಗಿ ತಿಳಿಸಿದ್ದರು. ಮತ್ತೊಮ್ಮೆ ಇವರು ಧ್ಯಾನಾಸಕ್ತರಾದಾಗ ಗುಂಡಿ ಜಲಾವೃತವಾಗಿ ನೀರು ತುಂಬಿತು. ಮಾರನೆ ದಿನ ಪ್ರವಾಹ ಇಳಿದಾಗ ಸಂರಕ್ಷಿತವಾಗಿ ಯತಿಗಳು ನೀರು ತುಂಬಿದ ಗುಂಡಿಯೊಳಗೆ ಧ್ಯಾನಾಸಕ್ತರಾಗಿ ಕುಳಿತಿರುವುದನ್ನು ಜನರು ಕಂಡರು. ಹೀಗಾದ ಒಂದು ವಾರದ ನಂತರ ಒಂಟೆತ್ತಿನ ಗಾಡಿಯನ್ನು ಶೀನಪ್ಪನವರಿಂದ ತರಿಸಿ ಕೃಷ್ಣತೀರಕ್ಕೆ ಹೋಗಬೇಕೆಂದು ಹೊರಟರು. ಜೊತೆಗೆ ಯಾರೂ ಬರದಂತೆ ಕಟ್ಟಾಜ್ಞೆ ಮಾಡಿದರು. ಈಗಿನ ದಿವಟೂರುವರೆಗೆ ಪಯಣಿಸಿ ಗಾಡಿ ನಿಲ್ಲಿಸಿ ಮರದ ಬುಡದಲ್ಲಿ ಬಟ್ಟೆ ಹಾಸಿ ಮಲಗಿದರು. ಎಚ್ಚರಗೊಂಡ ಮೇಲೆ ಕುಡಿಯಲು ನೀರು ಕೇಳಿದರು. ಗಾಡಿ ಹೊಡೆಯುವಾತ ಊರೊಳಗೆ ಕ್ರಮಿಸಿ ಒಬ್ಬಳು ಮಡಿ ಹೆಂಗಸು ಮತ್ತು ಒಂದಿಬ್ಬರು ಬ್ರಾಹ್ಮಣರನ್ನು ಕರೆದುಕೊಂಡು ಬಂದರು. ಸ್ವಲ್ಪ ನೀರು ಕುಡಿದು ಒಬ್ಬರ ತೊಡೆ ಮೇಲೆ ತಲೆಯಿಟ್ಟು ಪ್ರಾಣ ತ್ಯಾಗ ಮಾಡಿದರು. ನಂತರ ಅವರ ದೇಹವನ್ನೂ ಹರಿಹರಕ್ಕೆ ತಂದು ಈಗಿರುವ ಸಮಾಧಿ ಸ್ಥಾನದಲ್ಲಿ ಮಣ್ಣು ಮಾಡಿದರಂತೆ. ಈ ಸ್ಥಳವನ್ನು ಅವರಿಗೆ ನಮ್ಮ ಶ್ರೀ ಹರಿಹರ ಶ್ರೀನಿವಾಸರಾವ್ ಅವರ ತಾತ ಕೊಟ್ಟರೆಂದು ತಿಳಿದು ಬರುತ್ತದೆ. ಈ ಸಮಾಧಿ ಮೇಲ್ವಿಚಾರಣೆಯನ್ನು ಚಿಂತಾಮಣಿ ಜೋಯಿಸರು ನೋಡಿಕೊಳ್ಳುತ್ತಿದ್ದರು.

ನದೀಪರಮಹಂಸಸ್ವಾಮಿಗಳಿಗೆ ಇಂದಿಗೂ ಭಕ್ತಿಯಿಂದ ಸೇವೆ ಸಲ್ಲಿಸುವ ಭಕ್ತರು ಇದ್ದರೆ. ತಿಮ್ಮಣಭಟ್ಟರು ಈಗ ಸಮಾಧಿದೇಗುಲದ ಪೂಜೆ ನಡೆಸಿ ಕೊಡುತ್ತಿದ್ದಾರೆ. ಈ ಸಮಾಧಿಗೆ ಶ್ರದ್ಧೆಯಿಂದ ಸೇವೆ ಸಲ್ಲಿಸಿ ಅಭಿವೃದ್ಧಿಗೊಂಡವರು ಹಲವಾರು ಮಂದಿ. ಖಾದರ್‌ಸಾಬ್ ಎಂಬ ಡ್ರೈವರನಿಗೆ ಖಾಯಿಲೆಯು ಡಾ|| ನಂದಾವರೆ ಅವರ ಔಷಧಿಗೆ ಬಗ್ಗದಾದಾಗ ಸಮಾಧಿಗೆ ಶ್ರದ್ಧೆಯಿಂದ ಸೇವೆಸಲ್ಲಿಸಲು ಡಾಕ್ಟರರ ಕನಸಿನ ಮೂಲಕ ಪ್ರೇರಣೆ ಆಗಿ ಅದರಂತೆ ನಡೆದುಕೊಂಡಾಗ ಡ್ರೈವರನು ಗುಣಮುಖ ವಾದನೆಂದು ಡಾಕ್ಟರ್‌ರಿಂದ ತಿಳಿದು ಬಂದಿತು.

ಅದರಂತೆ ಎಸ್. ಟಿ. ನಾರಾಯಣರಾವ್ ಮತ್ತು ಓಬಳಪ್ಪ ಎಂಬ ಆರಕ್ಷಕ ಅಧಿಕಾರಿಗಳು ನದಿ ಪರಮಹಂಸರಿಗೆ, ಸೇವೇ ಸಲ್ಲಿಸಿ ತಮಗೆ ಒದಗಿ ಬಂದ ಕಂಟಕದಿಂದ ಮುಕ್ತರಾದರು.

ನದೀ ಪರಮಹಂಸರು ಹರಿಹರದಲ್ಲಿ ರಾಮ ಸಪ್ತಾಹ ಪ್ರಾರಂಭಿಸಿದ ಮೊದಲಿಗರೆಂದು ತಿಳಿದು ಬಂದಿದೆ. ಶಿವಗಂಗಾ ಮಠದ ಸ್ವಾಮಿಗಳು ಅವರ ದರ್ಶನಕ್ಕೆ ಬಂದು ದರ್ಶನ ಪಡೆದರೆಂದು ಉಲ್ಲೇಖವಿದೆ. ನಂತರ ಬೀರೂರಿನಲ್ಲಿ ಕಣ್ಣಕಟ್ಟಿ ರಾಮಣ್ಣ ಹರಿಹರದಂತೆಯೇ ರಾಮೋತ್ಸವವನ್ನು ತಮ್ಮ ಊರಿನಲ್ಲೂ ಪ್ರಾರಂಭಿಸಿದರೆಂದು ತಿಳಿದು ಬರುತ್ತದೆ. ಈಗಿನ ಸಮಾಧಿ ಮತ್ತು ವಾಸ್ತು ಕಟ್ಟಡ ಡಾ|| ನಂದಾವರೆ ಮತ್ತು ರಾಮಶ್ರೇಷ್ಠಿ ಎಂಬ ವರ್ತಕರ ದೇಣಿಗೆಯಾಗಿದೆ. ಇದರಲ್ಲಿ ಶಿವಲಿಂಗದ ಪ್ರತಿಷ್ಠಾಪನೆ ಇದ್ದು, ವೈಷ್ಣವ ಸಮಾಧಿಯಲ್ಲಿ ಶೈವ ಧರ್ಮದ ಪ್ರಭಾವದ ಪ್ರತೀಕವಾಗಿದೆ.

೨ನೇ ಸಮಾಧಿ ನದೀಪರಮಹಂಸಸ್ವಾಮಿಗಳ ಪರಮ ಶಿಷ್ಯ ಚಿಂತಾಮಣಿಜೋಯಿಸರದು.

೩ನೇ ಸಮಾಧಿ ನಿರಾಕಾರತೀರ್ಥಯತಿಗಳದು. ಇವರ ಪೂರ್ವಾಶ್ರಮದ ಹೆಸರು ನಾಗಪ್ಪ, ಉತ್ತರ ಕರ್ನಾಟಕದವರೆಂದು ತಿಳಿದು ಬರುತ್ತದೆ. "ಹಾಲು ರಾಮೇಶ್ವರ ಮಹಾತ್ಮೆ" ಯನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದರು. ಡಿ ಇ. ಮಿಡ್ಲ್‌ಸ್ಕೂಲಿನವರು ಅರಮತ್ತು ವರುಷಗಳ ಹಿಂದೆ ಇದನ್ನು ಪ್ರಕಟಿಸಿರುವುದಾಗಿ ತಿಳಿದು ಬರುತ್ತದೆ.

೪ನೇ ಸಮಾಧಿ ದೇವರಬೆಳಕೆರೆ ಕೃಷ್ಣಶಾಸ್ತ್ರಿಗಳ ಅಜ್ಜಿ ನಾರಾಯಣಶಾಸ್ತ್ರಿಗಳದು.

೫ನೇ ಸಮಾಧಿ ಸಹಜಾನಂದಸ್ವಾಮಿಗಳದು. ಇದನ್ನು ರಾಮಜ್ಜನ ಸಮಾಧಿ ಎಂದು ಕರೆಯುವ ರೂಢಿ ಇದೆ.

೬ನೇ ಸಮಾಧಿ ಗೋಮಾತೆಯದು ಎಂದು ಹಿರಿಯರ ಹೇಳಿಕೆಗಳಿಂದ ತಿಳಿದು ಬಂದಿದೆ.

೭ನೇ ಸಮಾಧಿ ಹರಿಹರೇಶ್ವರನ ಪೂಜೆಗಾಗಿ ದಾನ ಬಿಟ್ಟ ಹೂತೋಟದ ಜಮೀನಿನಲ್ಲಿ ಇದೆ. ಇದು ಟೈಪಿಸ್ಟ್ ಶ್ರೀನಿವಾಸ ಮೂರ್ತಿಯವರ ಪೂಜಾರಿಕೆಗೆ ಒಳಪಟ್ಟಿದೆ. ಈ ಸಮಾಧಿ ಪಾಪನಾಶಿನಿ ತೀರ್ಥಸ್ವಾಮಿಯವರದು. ಇವರು ರಾಘವೇಂದ್ರ ಸ್ವಾಮಿಗಳ ಸಮಕಾಲೀನರು. ಇವರದೊಂದು ಮೂರ್ತ ಸ್ವರೂಪ ಟೈಪಿಸ್ಟ್ ಶ್ರೀನಿವಾಸಮೂರ್ತಿಯವರ ಪಕ್ಕದ ಮನೆಯ ರಾಮಣ್ಣ ನವರಲ್ಲಿದೆ. ವರುಷಕ್ಕೊಮ್ಮೆ ಶ್ರಾವಣ ಶುದ್ಧ ಬಹುಳ ಅಮವಾಸ್ಯೆಯ ದಿನ ಇವರ ಆರಾಧನೆ ಈಗಲೂ ತಪ್ಪದೆ ನಡೆಯುತ್ತಿದೆ.

೮ನೇ ಸಮಾಧಿ ಇತ್ತೀಚೆಗೆ ಎಂದರೆ ೧೯೮೭ರಲ್ಲಿ ಸಮಾಧಿ ಗೊಂಡ ಶ್ರೀ ಶ್ರೀ ನಾರಾಯಣ ಮಹಾರಾಜರದು. ಇದು ಹರಿಹರದ ನಾರಾಯಣಸ್ವಾಮಿ ಆಶ್ರಮದಲ್ಲಿದೆ. ಇವರು ಶತಾಯುಗಳು. ನದೀ ಪರಮಹಂಸರು ಸಮಾಧಿಯಾದ ಸ್ಥಳದಲ್ಲಿ ಪೂರ್ವದಲ್ಲಿ ವಾಸಿಸುತ್ತಿದ್ದು ನಂತರ ಈಗಿನ ಕಿರ್ಲೋಸ್ಕರ್ ಕಾರ್ಖಾನೆ ಹಿಂಬದಿ ಆಶ್ರಮ ಕಟ್ಟಿಕೊಂಡು ವಾಸಿಸಿದರು. ಇವರು ಸಂಸಾರಿಗಳು ಕೂಡ. ೧೯೮೫ರಲ್ಲಿ ಪಂಚಕಲ್ಯಾಣಿ ಕುದುರೆ ತಂದು ೧೦೧ ಯಜ್ಞ ಕುಂಡಗಳನ್ನು ನಿರ್ಮಿಸಿ, ಅಶ್ವಮೇಧ ಯಾಗ ಮಾಡಿದರು. ಈ ಯಾಗಕ್ಕೆ ಎಲ್ಲರಿಂದ ಬಹಳ ವಿರೋಧವಿತ್ತು. ಹೈದರಾಬಾದಿನಲ್ಲಿ ಇವರ ಆಶ್ರಮವಿದೆ. ಅಲ್ಲಿ ಹರಿಹರೇಶ್ವನ ಪ್ರತಿಷ್ಠಾಪನೆ ಮಾಡಿದ್ದಾರೆ. ಇಲ್ಲಿಯ ಆಶ್ರಮ ದೇವಾಲಯದಲ್ಲಿ ರಾಮ ಸೀತಾ ಲಕ್ಷ್ಮಣರ ಮೂರ್ತಿಗಳು ಇದ್ದು ಇದು ಅಯೋಧ್ಯೆಯ ಮೂರ್ತಿ ಎಂದು ಇದರ ಮೇಲೆ ಬರೆಸಿದ್ದಾರೆ. ಪಕ್ಕದಲ್ಲಿ ಸುಂದರ ಆಂಜನೇಯ ದೇವಾಲಯವನ್ನು ನಿರ್ಮಿಸಿದ್ದಾರೆ. ಈಗ ಇಲ್ಲಿ ಅವರ ಶ್ರೀಮತಿಯವರು ಆಶ್ರಮದ ಮೇಲ್ವಿಚಾರಣೆ ನಡೆಸುತ್ತಿದ್ದಾರೆ

(ಈ ಪ್ರಬಂಧಕ್ಕೆ ಸಹಕಾರ ನೀಡಿದ ಹರಿಹರದ ಹಲವಾರು ವಯೋವೃದ್ಧರೆಲ್ಲರಿಗೂ ನನ್ನ ನಮನಗಳು.)

ಆರ್. ವೆಂಕಟೇಶಮೂರ್ತಿ*
ಹೆಚ್. ಆರ್. ಹೇಮರಾಜು**


ಹುಣಸೂರಿನ ಬ್ರಿಟಿಷ್ ಸಮಾಧಿಗಳು - ಒಂದು ಹೊಸ ಶೋಧ

ಶ್ರೀಯುತ ಬಿ.ಎಲ್. ರೈಸರವರು ಮೈಸೂರು ಗೆಸೆಟಿಯರ್ ನಲ್ಲಿ, ಹುಣಸೂರಿನ ಹಳೆಯ ಬ್ರಿಟಿಷ್ ರುದ್ರಭೂಮಿಯ ಬಗ್ಗೆ ನಮೂದಿಸುತ್ತ, 'ಇದೇ ಸ್ಥಳದಲ್ಲಿದ್ದ ಮದರಾಸು ಕಮಸ್ಸೇರಿಯಟ್ (ಆಹಾರ ಸರಬರಾಜು ಇಲಾಖೆ) ಮತ್ತು ಪಬ್ಲಿಕ್ ಕ್ಯಾಟಲ್ ಡಿಪಾರ್ಟ್‌ಮೆಂಟ್ (ಸಾರ್ವಜನಿಕ ಪಶುಸಂಗೋಪನಾ ಇಲಾಖೆ)ಗಳಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನು ಸಮಾಧಿ ಮಾಡಿದ್ದಾರೆಂದೂ ಅವರ ಕಾಲ ೧೮೨೧ ರಿಂದ ೧೯೦೧' ಎಂದು ನಮೂದಿಸಿರುತ್ತಾರಾದರೂ, ರುದ್ರಭೂಮಿಯ ಸ್ಥಾನವನ್ನು ದಾಖಲಿಸಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಹುಣಸೂರು ಕಾಫಿ ವರ್ಕ್ಸ್ ಹಿಂಭಾಗದಲ್ಲಿ ಲಕ್ಮಣತೀರ್ಥ ನದಿಯ ಪೂರ್ವದಂಡೆಯಲ್ಲಿ ಈ ಬ್ರಿಟಿಷ್ ರುದ್ರಭೂಮಿ ಪತ್ತೆಯಾಯಿತು. ಪೂರ್ವ - ಪಶ್ಚಿಮ ಸುಮಾರು ೧೨೦ ಅಡಿ, ಉತ್ತರ - ದಕ್ಷಿಣ ೩೦೦ ಅಡಿಗಳಷ್ಟು ವಿಸ್ತೀರ್ಣವನ್ನು ಹೊಂದಿ ಒಂದು ಕಾಲಕ್ಕೆ ಸುಸ್ಥಿತಿಯಲ್ಲಿದ್ದ ಈ ರುದ್ರಭೂಮಿಯ ಸುತ್ತಲೂ ಇದ್ದ ಗೋಡೆಯ ಸುಮಾರು ಭಾಗ ಉರುಳಿ ಬಿದ್ದಿರುವುದಲ್ಲದೆ ಮುಂಭಾಗದಲ್ಲಿ ಇದ್ದಿರಬಹುದಾದ ದೊಡ್ಡ ಗೇಟು ಕಾಣೆಯಾಗಿದೆ.

ಇಲ್ಲಿ ಬ್ರಿಟಿಷರ ಕಾಲದ ೩೨ ಸಮಾಧಿಗಳು ಉತ್ತಮ ಸ್ಥಿತಿಯಲ್ಲಿವೆ. ಇವುಗಳಲ್ಲಿ ೨೬ ಸಮಾಧಿಗಳ ಮೇಲೆ ಬರೆದಿರುವ ವಿವರಗಳು ಇನ್ನೂ ಉಳಿದುಕೊಂಡಿವೆ. ೭ -೮ ಸಮಾಧಿಗಳು ಭಗ್ನಗೊಂಡಿವೆ.

ವಿವಿಧ ರೀತಿಯಲ್ಲಿ ನಿರ್ಮಿತವಾಗಿರುವ ಈ ಸಮಾಧಿಗಳು ನಾಲ್ಕು ಸಾಲಿನಲ್ಲಿದ್ದು ಹೆಚ್ಚಿನವು ಗಾರೆ ಮತ್ತು ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿವೆ. ಉಳಿದ ಕೆಲವು ಸಾಣೆ ಹಿಡಿದ ಕಡಪ, ಹೊಳಪುಗೊಳಿಸಿದ ಗ್ರಾನೈಟ್ ಕಲ್ಲುಗಳ ಮೇಲು ಹಾಸುಗಳನ್ನು ಹೊಂದಿವೆ. ಇನ್ನು ಕೆಲವು ಅಮೃತಶಿಲೆಯಿಂದ ಮಾಡಲಾಗಿವೆ. ಕಲ್ಲಿನ ಮತ್ತು ಅಮೃತಶಿಲೆಯ ಸಮಾಧಿಗಳು ಎರಡು - ಮೂರು ಹಂತದಲ್ಲಿದ್ದು ಶಿರೋಭಾಗದಲ್ಲಿ ಹಲವು ಆಕಾರಗಳಲ್ಲಿ ಶಿಲುಬೆಗಳನ್ನು ಕೆತ್ತಿ ನಿಲ್ಲಿಸಲಾಗಿದೆ. ಕೆಲವದರಲ್ಲಿ ಹಾಸುಗಲ್ಲಿನ ಮೇಲೆಯೇ ಮಧ್ಯಭಾಗದಲ್ಲಿ ಶಿಲುಬೆಯನ್ನು ಕೆತ್ತಿ, ಖಾಲಿ



*ನಂ. ೫೭೪, ಎಸ್. ಆರ್. ಎಸ್. ಕೆ. ಕೆ. ಇ. ಬಿ. ಕ್ವಾರ್ಟರ್ಸ್, ಹುಟಗಳ್ಳಿ, ಬೆಳವಾಡಿ ಅಂಚೆ, ಮೈಸೂರು - ೫೭೧ ೧೮೬.
**ನಂ. ೫, 'ಡಿ'ಬ್ಲಾಕ್, ಟೆಲಿಕಾಂ ಕ್ವಾರ್ಟರ್ಸ್, ಇಂದಿರಾನಗರ, ಬೆಂಗಳೂರು - ೫೬೦ ೦೩೮.

ಜಾಗವಿರುವಲ್ಲಿ ವಿವರಗಳನ್ನು ಕಂಡರಿಸಲಾಗಿದೆ. ಕೆಂಪು ಗ್ರಾನೈಟ್‌ನಲ್ಲಿ ಮಾಡಿರುವ ಕ್ರಿ. ಶ. ೧೯೦೧ರ ಸಮಾಧಿಯು ಅತ್ಯಂತ ಸುಂದರವಾಗಿದ್ದು, ಬುಡವು ಸಣ್ಣ ಸಣ್ಣ ಕಲ್ಲುಗಳಿಂದ ನಿರ್ಮಿತವಾದ ಗುಡ್ಡದ ರೂಪದಲ್ಲಿದ್ದು, ಮುಂಭಾಗದಲ್ಲಿ ಮೇಲೆ - ಕೆಳಗೆ ಸುರುಳಿ ಸುತ್ತಿದ ಪತ್ರ (ರಾಯಸ) ದಲ್ಲಿ ವಿವರವನ್ನು ಕೆತ್ತಲಾಗಿದೆ. ಹಾಗೂ ಶಿಲುಬೆಯನ್ನು ಗಂಟುಗಳುಳ್ಳ ಮರದ ದಿಮ್ಮಿಯ ರೂಪದಲ್ಲಿ ಕೆತ್ತಿ ಗುಡ್ಡದ ಮೇಲೆ ನಿಲ್ಲಿಸಲಾಗಿದೆ. ಗಾರೆ ಮತ್ತು ಇಟ್ಟಿಗೆಗಳ ಸಮಾಧಿಗನ್ನು ಮೂರು - ನಾಲ್ಕು ಹಂತದಲ್ಲಿ ಕಟ್ಟಲಾಗಿದ್ದು ಸುಮಾರು ೧೫ ಅಡಿಗಳಷ್ಟು ಎತ್ತರವಾಗಿದ್ದು, ಮಧ್ಯಭಾಗ ಅಥವಾ ಕೆಳಭಾಗದಲ್ಲಿ ಚೌಕಾಕಾರದ ಕಡಪ ಅಥವಾ ಅಮೃತ ಶಿಲೆಯ ಫಲಕಗಳನ್ನು ಅಂಟಿಸಿ ವಿವರಗಳನ್ನು ಕಂಡರಿಸಲಾಗಿದೆ.

ಈ ಸಮಾಧಿಗಳ ಫಲಕಗಳಲ್ಲಿ ಕಂಡರಿಸಲಾಗಿರುವ ವಿವರಗಳು **ಸಮಾಧಿ ಶಾಸನಗಳು** ಎಂಬ ಹೊಸ ವರ್ಗದೊಂದಿಗೆ ಹಾಗೂ ಈ ಸಮಾಧಿಗಳ ಶೋಧ ಮತ್ತು ಇವುಗಳ ಗರ್ಭದಿಂದ ಹೊರಬಂದ ವಿಷಯಗಳೊಂದಿಗೆ ಹುಣಸೂರು ತಾಲ್ಲೂಕು ಐತಿಹಾಸಿಕವಾಗಿ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಶಾಸನಗಳ ಸಾರಾಂಶ

ಸಂಖ್ಯೆ (ಶಾಸನಗಳ ಪಾಠವನ್ನು ಕೊನೆಯಲ್ಲಿ ನೀಡಲಾಗಿದೆ)

೧. ಜಾಸ್ ಕಾರ್ಟರ್‌ನ ನೆನಪಿಗಾಗಿ ಹಾಕಿಸಲಾಗಿರುವ ಶಾಸನ.

೨. ದಯಾನಳ ಪತಿಯಾಗಿ ಮಕ್ಕಳಿಗೆ ತಂದೆಯಾಗಿ ಕುಡಾರ್ಡ್ ಎಂಬುವವನು ತನ್ನ ಪ್ರೀತಿ ಪೂರ್ವಕವಾದ ವಿಷಾದವನ್ನು ವ್ಯಕ್ತಪಡಿಸುತ್ತ, ರೋಧಿಸಬೇಡಿ, ಪುನಃ ಎಲ್ಲರೂ ಭೇಟಿ ಆಗೋಣ ಎಂಬುದಾಗಿ ಶಾಸನವನ್ನು ಹಾಕಿಸಿರುತ್ತಾನೆ.

೩. ಹುಣಸೂರಿನಲ್ಲಿ ಥಾಮಸ್‌ಪಾಲ್ ಸಬ್‌ಓವರ್ಸೀರ್ ಆಗಿ ೩೨ ವರ್ಷಗಳ ಕಾಲ ಸೇವೆ ಸಲ್ಲಿಸಿ ತನ್ನ ಪತ್ನಿ ಮತ್ತು ಮಗನನ್ನು ಆಗಲಿದ್ದಾನೆ. ಇದು ತುಂಬಲಾರದ ನಷ್ಟ ಎಂಬುದಾಗಿ ಆತನ ಪತ್ನಿ ಈ ಸಮಾಧಿಯನ್ನು ಕಟ್ಟಿಸಿದ್ದಾಳೆ.

೪. ಕ್ಯಾಪ್ಟನ್ ಡಬ್ಲ್ಯು. ಹೆಚ್. ಬಡ್, ಸಬ್ ಅಸಿಸ್ಟೆಂಟ್ ಕಮಿಸನರಿ ಜನರಲ್‌ನ ಮಗಳಾದ ಮೇರಿ ಸುಸನ ಲೂಯಿಸಳು ಎಡತೊರೆಯಲ್ಲಿ ನಿಧನ ಹೊಂದಿದ್ದು, ಇವಳ ನೆನಪಿಗಾಗಿ ಹಾಕಿಸಿರುವ ಶಾಸನ.

೫. ಕ್ಯಾಪ್ಟನ್ ವಿಲಿಯಂ ಹೆನ್ರಿ ಬಡ್‌ನ ಅತ್ಯಂತ ಪ್ರೀತಿ ಪಾತ್ರಳಾದ ಪತ್ನಿ ಲೂಸಿ ಅಕುಸ್ಪ ಮೇರಿ, ಇವಳ ಸ್ಮರಣಾರ್ಥವಾಗಿ ಸಂಬಂಧಿಕರು ಮತ್ತು ಸ್ನೇಹಿತರು ಈ ಸಮಾಧಿಯನ್ನು ಕಟ್ಟಿಸಿರುತ್ತಾರೆ.

೬. ಸೇಲಂ ಜಿಲ್ಲೆಯ ನಂತೇರಂಪಿಲ್ಲಿಯಲ್ಲಿ ನಿಧನ ಹೊಂದಿದ ಕ್ಯಾಪ್ಟನ್ ಮತ್ತು ಶ್ರೀಮತಿ ಬಡ್ ಕಿರಿಯ ಮಗಳು ಅಲೀಸ್‌ಳ ಸ್ಮರಣಾರ್ಥ, ಅವಳ ತಂದೆ ತಾಯಿ ಹಾಕಿಸಿರುವ ಶಾಸನ.

೭. ಅಲೆಗ್ಸಾಂಡರ್ ಮಾರ್ಕಿಲೆಸ್ ನಿಧನ ಹೊಂದಿದ್ದರಿಂದ, ಗೌರವ ಸ್ಮರಣಾರ್ಥ ಅವನ ತಂದೆ, ವಿಲಿಯಂ ಜೊಸಿಕ್ ಗ್ರೇಸ್ ಹಾಕಿಸಿರುವ ಶಾಸನ.

೮. ಹುಣಸೂರ್‌ನಲ್ಲಿ ನಿಧನ ಹೊಂದಿದ ವಿಲಿಯಂ ಮ್ಯಾಕ್‌ಲೆನ್ ಸ್ಮರಣಾರ್ಥ ಹಾಕಿಸಿರುವ ಶಾಸನ.

೯. ಮೇರಿ ಏವಲಿನ್ ಸ್ಮರಣಾರ್ಥ ಅವಳ ತಂದೆ ತಾಯಿಯಾದ ಜಾರ್ಜ್ ಮತ್ತು ಕ್ಯಾಥೆರಿನ್ ರಸೆಲ್‌ರವರು ಹಾಕಿಸಿದ ಶಾಸನ.

೧೦. ಜಾರ್ಜ್ ರಸೆಲ್, ಸಬ್ ಓವರ್‌ಸೀರ್, ಕಮಿಸೇರಿಯಟ್ ಡಿಪಾರ್ಟ್‌ಮೆಂಟ್, ಇವನ ಸ್ಮರಣೆಗಾಗಿ ಕಟ್ಟಿಸಿರುವ ಸಮಾಧಿ.

೧೧. ನಿಧನ ಹೊಂದಿದ ವಿಲಿಯಂ ಹೆನ್ರಿ ಮರಣವನ್ನಪ್ಪಿದ್ದು ಆಗ್ನೆಸ್ ಎಂಬ ತಮ್ಮ ಪ್ರೀತಿಯ ಮಕ್ಕಳ ನೆನಪಿಗಾಗಿ ಜಾನ್ ಮತ್ತು ಮೇರಿಲಾಡನ್‌ರವರು ಕಟ್ಟಿಸಿರುವ ಸಮಾಧಿ.

೧೨. ನಿಧನ ಹೊಂದಿದ ಜಾನ್ ಫಾಕ್ನರ್, ಅಸಿಸ್ಟೆಂಟ್ ಒಪೋಥಿಕಾರಿ, ಮಡ್ರಾಸ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್, ಆತನ ನೆನಪಿಗಾಗಿ ಹಾಕಿಸಲಾಗಿರುವ ಶಾಸನ.

೧೩. **ಮೇಲಿನ ಹಂತ** : ಡಬ್ಲ್ಯು. ಜೆ. ಗೇಸ್, ಇವನ ಪತ್ನಿ ಚಾರೊಲೆಟ್ ಮತಿಲ್ಡ ನಿಧನ ಹೊಂದಿದಾಗ, ***ಓ ಪ್ರೀತಿಯ ತಾಯಿ ನೀನು ನಿಧನ ಹೊಂದಿದ್ದಕ್ಕಾಗಿ ನನಗೆಷ್ಟು ನೋವಾಗಿದೆ ಎಂದು ನೀನು ಚಿಂತಿಸು.***
ಕೆಳಹಂತ : ಆರ್. ಬ್ಲೊಫೆಲ್ಡ್‌ನ ಪತ್ನಿ ಚಾರೊಲೆಟ್ ಮತಿಲ್ಡ ಎಂಬುವಳು ಬರ್ಮಾದ ಹಾದಿಯಲ್ಲಿದ್ದ ಉಗಿ ಹಡಗಿನಲ್ಲಿ ದಿನಾಂಕ ೮ನೇ ಅಕ್ಟೋಬರ್ ೧೮೬೮ರಂದು ಬೆಳಿಗ್ಗೆ ಕ್ಷಿಪ್ರಸನ್ನಿ (ಅಪೊಪ್ಲೆಕ್ಸ್) ಆಘಾತದಿಂದ ನಿಧನ ಹೊಂದಿದ್ದರ ಸ್ಮರಣಾರ್ಥವಾಗಿ, ಅವಳ ಹಿರಿಯ ಮಗಳಾದ ಎಂ. ಗೇಸ್, ಬೆಂಗಳೂರು, ಇವಳು ಹಾಕಿಸಿರುವ ಶಾಸನ.

೧೪. ದಿನಾಂಕ ೬ನೇ ನವೆಂಬರ್ ೧೮೬೪ರಂದು ನಿಧನ ಹೊಂದಿದ ಈಸ್ತರ್ ಹೆರ್ಡ್.

೧೫. ಜಾರ್ಜ್ ಹೊರ್ಟನ್ ಎಂಬುವವನ ಸ್ಮರಣಾರ್ಥ ಹಾಕಿಸಲಾಗಿರುವ ಶಾಸನ.

೧೬. ಸಿಸಿಲಿಯ ಮತ್ತು ಥಾಮಸ್ ಥಾಟೆ ರಸೆಲ್ ರವರ ಎರಡೂ ಮಕ್ಕಳು ದಿನಾಂಕ ೧೮ನೇ ಜುಲೈ ೧೮೭೨ರಂದು ಜನಿಸಿ, ೭ನೇ ಜನವರಿ ೧೮೭೫ರಂದು ನಿಧನ ಹೊಂದಿದ ಜಾರ್ಜ್ ಹೂಸನ್ ಹಾಗೂ ದಿನಾಂಕ ೨೩ನೇ ಜುಲೈ ೧೮೭೩ರಲ್ಲಿ ಜನಿಸಿ, ದಿನಾಂಕ ೮ನೇ ಜನವರಿ ೧೮೭೫ರಂದು ಮರಣ ಹೊಂದಿದ ಮಕ್ಕಳ ನೆನಪಿಗಾಗಿ ಹಾಕಿಸಲಾಗಿರುವ ಶಾಸನ. (ಕೊನೆಯಲ್ಲಿ ಕೌಲಿ ಬೆಂಗಳೂರು ಎಂದಿರುತ್ತದೆ).

೧೭. ನಿಧನ ಹೊಂದಿದ, ಥಾಮಸ್ ಕಟೆ ರಸೆಲ್‌ನ ಪ್ರೀತಿ ಪಾತ್ರಳಾದ ಪತ್ನಿ ಮತ್ತು ಮಿ ER (ಇಂಜನಿಯರ್?) ಹೂಸನ್‌ನ ಪುತ್ರಿ ಸಿಸಿಲಿಯ ಹಾಗೂ ಅವಳ ಬಾಲ್ಯಾವಸ್ಥೆಯ ಮಗುವಿನ ನೆನಪಿಗಾಗಿ ಈ ಶಾಸನವನ್ನು ಹಾಕಿಸಿದೆ.

೧೮. ಹುಣಸೂರ್‌ನಲ್ಲಿ ಮರಣವನ್ನಪ್ಪಿದ ಜಾನ್ ಬ್ರೀವರ್‌ನ ಪ್ರೀತಿ ಪಾತ್ರಳಾದ ಪ್ರತಿ ಜಾನ್ ಟೈಲರ್ ಲ್ಯಾಂಬರ್ಟ್ ಬ್ರೀವರ್‌ಳ ನೆನಪಿಗಾಗಿ ಹಾಕಿಸಿರುವ ಶಾಸನ.

೧೯. ಪ್ರೀತಿಯ ಪತ್ನಿ ಮತ್ತು ಮಕ್ಕಳಿಂದ ಪ್ರೀತಿಗೊಳಪಟ್ಟಿದ KL (ಕರ್ನಲ್?) ಎಫ್. ಕಿಂಗ್, ಏಡನ್‌ನಲ್ಲಿ ಜನಿಸಿ, ಎಡೊತೊರೆಯಲ್ಲಿ ಮೇ ೧೮೮೧ರಂದು ಮರಣಹೊಂದಿದ ಈತನನ್ನು ಹುಣಸೂರ್‌ನಲ್ಲಿ ಹೂಳಲಾಗಿದೆ.

(ಕೊನೆಯಲ್ಲಿ ಸ್ಮಾಲರ್ ಅಂಡ್ ಕಂ...ಬೆಂಗಳೂರು ಎಂದು ಕಂಡರಿಸಲಾಗಿದೆ)

೨೦. ದಕ್ಷಿಣ ಕೊಡಗಿನ ಗೌರಿಬೆಟ್ಟ ಎಸ್ಟೇಟ್‌ನಲ್ಲಿ ೮ನೇ ಸೆಪ್ಟೆಂಬರ್ ೧೮೮೪ರಂದು ನಿಧನ ಹೊಂದಿದ ಚಾರ್ಲ್ಸ್ ಮ್ಯಾಗ್‌ಪರ್ಸನ್ ಗ್ರಾಂಟ್ ಮತ್ತು ಇದೇ ಸ್ಥಳದಲ್ಲಿ ದಿನಾಂಕ ೧೩ನೇ ಡಿಸೆಂಬರ್ ೧೮೮೪ ರಂದು ಮರಣವನ್ನಪ್ಪಿದ ಈತನ ಪುತ್ರ ಚಾರ್ಲ್ಸ್ ಮ್ಯಾಗ್‌ಪರ್ಸನ್, ಇವರ ಪ್ರೀತಿಯ ನೆನಪಿಗಾಗಿ ಹಾಕಿಸಲಾಗಿದೆ.

೨೧. ಅಟ್ವೆಲ್ ಲೇಕ್ ಅಲೆಗ್ಸಾಂಡರ್‌ನ ಅತ್ಯಂತ ಪ್ರೀತಿಪಾತ್ರಳಾದ ಪತ್ನಿ ಕ್ಯಾಥರಿನ್ (ಕಾಟೆ) ಎಂಬುವಳು ದಿನಾಂಕ ೪ನೇ ಆಗಸ್ಟ್ ೧೮೮೭ರಂದು ಭಾರತದ ಕೂರ್ಗ್‌ನ ಪೊಲ್ಲಿಬೆಟ್ಟದ ವೂಶುಳ್ಳಿ (ಹೊಸಳ್ಳಿ), ಇಲ್ಲಿ ಮರಣವನ್ನಪ್ಪಿರುತ್ತಾಳೆ. ಇವಳ ಸ್ಮರಣಾರ್ಥ ಹಾಕಿಸಿರುವ ಶಾಸನ.

[ಕೊನೆಯಲ್ಲಿ : ಸ್ಯಾಂಡರ್ಸ್ (ಲಂಡನ್) ಇಂಗ್ಲಂಡ್ ಎಂದು ಕಂಡರಿಸಲಾಗಿದೆ.]

೨೨. ಮೆಕ್ಸಿಕೋದ ತಪಚಾಲುವಿನ ರಾಬರ್ಟ್ ಒಕ್ಲೀವ್ ಸ್ಟೀವೆನ್‌ಸನ್‌ನ ಪ್ರೀತಿಯ ಪತ್ನಿ ಮತ್ತು ಕೂರ್ಗ್‌ನ ಗೌರಿಬೆಟ್ಟದ ದಿವಂಗತ ಚಾರ್ಲ್ಸ್ ಮ್ಯಾಕ್‌ಪರ್ಸನ್ ಗ್ರಾಂಟ್‌ನ ಪುತ್ರಿಯಾದ ಲೆನ ಎಂಬುವಳು ೮ನೇ ಜೂನ್ ೧೮೯೫ರಂದು ಮೈಸೂರಿನಲ್ಲಿ ನಿಧನ ಹೊಂದಿದ್ದು ಅವಳ ಪ್ರೀತಿಯ ನೆನಪಿಗಾಗಿ ಹಾಕಿಸಿರುವ ಶಾಸನ.

೨೩. ೨೧ನೇ ನವೆಂಬರ್ ೧೮೯೭ ರಂದು ಮರಣವನ್ನಪ್ಪಿದ ಬಾರ್ಬರ ಮೇರಿ ವಿಲ್ಕಿನ್‌ಸನ್ ಪ್ರತಿಯ ನೆನಪಿಗಾಗಿ ಹಾಕಿಸಿರುವ ಶಾಸನ.

೨೪. ೧೮ನೇ ಮಾರ್ಚ್ ೧೯೦೧ರಂದು ಹುಣಸೂರ್‌ನಲ್ಲಿ ಮರಣವನ್ನಪ್ಪಿದ ಡಬ್ಲ್ಯು.ಇ.ಪೆಟ್ರಿಕ್‌ಹೆ ಎಂಬುವನ ಪ್ರೀತಿಯ ಪತ್ನಿ ಕ್ಯಾಥೆರಿನ್ ಮೇರಿ ಮದರ್‌ವೆಲ್ ಎರೂತ್‌ಳ ನೆನಪಿಗಾಗಿ ಪ್ರೀತಿಪೂರ್ವಕವಾಗಿ ಇದನ್ನು ಹಾಕಿಸಲಾಗಿದೆ.

೨೫. ೨೪ನೇ ಜುಲೈ ೧೯೦೫ರಂದು ಮದ್ರಾಸ್‌ನ ಎಗ್ಮೋರ್‌ನಲ್ಲಿ ಮರಣವನ್ನಪ್ಪಿದ ಚಾರ್ಲ್ಸ್ ಮ್ಯಾಕ್‌ಪರ್ಸನ್ ಗ್ರಾಂಟ್‌ನ ೭೯ ವರ್ಷದ ವಿಧವೆ ಪತ್ನಿ ಮಾರ್ಗರೆಟ್ ಗ್ರಾಂಟ್‌ಳ ಪ್ರೀತಿಯ ನೆನಪಿಗಾಗಿ ಹಾಕಿಸಲಾಗಿರುವ ಶಾಸನ.

೨೬. ಚಾರ್ಲ್ಸ್ ಮ್ಯಾಕ್‌ಪರ್ಸನ್ ಗ್ರಾಂಟ್ ಜೂನಿಯರ್.

ಈ ಶಾಸನಗಳಲ್ಲಿ ಮೃತಪಟ್ಟವರ ಜನಿಸಿದ ಮತ್ತು ಗತಿಸಿದ ದಿನಾಂಕ, ತಿಂಗಳು ಮತ್ತು ವರ್ಷಗಳನ್ನು ನಮೂದಿಸಲಾಗಿದೆ. ಮುಂದಿನ ಪುಟಗಳಲ್ಲಿ ಈ ವಿವರಗಳನ್ನು ಆಂಗ್ಲಭಾಷೆಯ ಶಾಸನಪಾಠಗಳಲ್ಲಿ ನೀಡಲಾಗಿದೆ. ಪ್ರಸ್ತುತ, ಗತಿಸಿದ ವರ್ಷವನ್ನೇ ಶಾಸನದ ಕಾಲಗಣನೆಗಾಗಿ ಪರಿಗಣಿಸಲಾಗಿದೆ.

ಶ್ರೀಯುತ ರೈಸ್ ರವರು ದಾಖಲಿಸಿರುವಂತೆ ಕ್ರಿ. ಶ. ೧೮೨೧ ರಿಂದ ಕ್ರಿ. ಶ. ೧೯೦೧ರ ವರೆಗಿನ ಅವಧಿಯ ಜೊತೆಗೆ ನಂತರದಲ್ಲಿ ಕ್ರಿ. ಶ. ೧೯೦೫ರ ಸಮಾಧಿಯೊಂದು ಸೇರ್ಪಡೆಯಾಗಿದೆ. ಈ ಸಮಾಧಿಗಳಲ್ಲಿ ೨ ತಿಂಗಳ ಮಗುವಿನಿಂದ ಹಿಡಿದು ೭೯ ವರ್ಷದ ವೃದ್ಧರವರೆವಿಗೂ ಸಮಾಧಿಸ್ಥರಾಗಿದ್ದು, ಹತ್ತು ಜನ ಬೇರೆ ಬೇರೆ ಕುಟುಂಬದವರನ್ನು ಹೊರತು ಪಡಿಸಿದರೆ, ಒಂದೇ ಕುಟುಂಬದ ಅಂದರೆ ಬಡ್ ಕುಟುಂಬದ ಮೂರು, ಗ್ರೇಸ್ ಕುಟುಂಬದ ಎರಡು, ರಸೆಲ್ ಕುಟುಂಬದ ಐದು ಹಾಗೂ ಮ್ಯಾಕ್ ಪರ್ಸನ್ ಕುಟುಂಬದ ಐದು ಸಮಾಧಿಗಳಿದ್ದು, ಉಳಿದವು ಬೇರೆ ಬೇರೆ ಕುಟುಂಬದವರದ್ದಾಗಿದೆ. ಸಮಾಧಿಸ್ಥರಾಗಿರುವ ಎಲ್ಲರೂ ಕ್ರೈಸ್ತ ಧರ್ಮೀಯರಾಗಿದ್ದು, ಪ್ರಾಟಿಸ್ಟೆಂಟ್ ಅಥವಾ ಕ್ಯಾಥೋಲಿಕ್ ವರ್ಗಗಳಲ್ಲಿ ಯಾವ ವರ್ಗಕ್ಕೆ ಸೇರಿದವರೆಂಬುದು ತಿಳಿದುಬರುವುದಿಲ್ಲ.

ಇಲ್ಲಿ ಕೆತ್ತಲಾಗಿರುವ ವಿವರಗಳಲ್ಲಿ ಹುಣಸೂರು, ಎಡತೊರೆ (ಈಗಿನ ಕೆ. ಆರ್. ನಗರ), ಸೇಲಂ ಬಳಿಯ ನಂತೆರಂಪಳ್ಳಿ, ಬರ್ಮಾ ಹಾದಿಯಲ್ಲಿದ್ದ ಉಗಿಹಡಗಿನ ಮೇಲೆ, ಕೊಡಗಿನ ಗೌರಿಬೆಟ್ಟ ಎಸ್ಟೇಟ್, ಪೊಲ್ಲಿ ಬೆಟ್ಟದ ಬಳಿಯ ಹೊಸಳ್ಳಿ, ಮೈಸೂರು ಹಾಗೂ ಮದರಾಸಿನ ಎಗ್ಮೋರ್‌ಗಳಲ್ಲಿ ಮೃತಪಟ್ಟಿರುವರೆಂದು ತಿಳಿಸಿದೆ. ನಿಧನಗೊಂಡಿರುವುದಕ್ಕೆ ಕಾರಣಗಳನ್ನು ಎಲ್ಲಾ ಶಾಸನಗಳಲ್ಲಿ ತಿಳಿಸಿಲ್ಲವಾದರೂ ಚಾರೊಲೆಟ್ ಮತಿಲ್ಡ ಎಂಬುವವಳು ಹಡಗಿನಲ್ಲಿದ್ದಾಗ ಕ್ಷಿಪ್ರಸನ್ನಿಯಿಂದಲೂ, ಕರ್ನಲ್ ಕಿಂಗ್ ನಿಶ್ಯಕ್ತಿಯಿಂದಲೂ, ಬಡ್ ಕುಟುಂಬದ ನಾಲ್ಕು ವರ್ಷದ ಬಾಲಕಿ ಅಲಿಸ್ ಸೇಲಂನಲ್ಲಿ ಕಾಲರಾದಿಂದಲೂ ನಿಧನ ಹೊಂದಿರುತ್ತಾರೆ. ದೂರದ ಊರುಗಳಲ್ಲಿ ಗತಿಸಿದ ವ್ಯಕ್ತಿಗಳ ಮೃತ ದೇಹವನ್ನೋ ಅಥವಾ ಪೆಟ್ಟಿಗೆಯನ್ನೋ, ಸುಲಭವಾದ ಸಾರಿಗೆ ಸೌಲಭ್ಯಗಳಿಲ್ಲದ ಆ ದಿನಗಳಲ್ಲಿ ಅದೂ ಕಾಡು ರಸ್ತೆಯಲ್ಲಿ ಇಲ್ಲಿಯವರೆವಿಗೂ ಹೇಗೆ ತಂದು ಸಮಾಧಿ ಮಾಡಿದರು ಎಂಬುದು ಕುತೂಹಲವನ್ನುಂಟು ಮಾಡುವ ವಿಷಯ.

ಗತಿಸಿದವರ ಮೂಲಗಳನ್ನು ಕೆಲವು ಶಾಸನಗಳು ತಿಳಿಸುತ್ತವೆ. ಶ್ರೀಮತಿ ಜೇನ್ ಟೇಲರ್ ಲ್ಯಾಂಬರ್ಟ್ ಬ್ರೀವರ್ ಎಂಬುವವಳು ಸ್ಕಾಟ್‌ಲೆಂಡ್‌ನ ರಾಕ್ಸ್‌ಬರ್ಗ್‌ಷೈರ್‌ನವಳೆಂದೂ, ಶ್ರೀಮತಿ ಕೆಥರಿನ್ ಸ್ಕಾಟ್‌ಲೆಂಡ್‌ನ ಬೆನೆಫ್‌ನವಳೆಂದೂ, ಕರ್ನಲ್‌ಕಿಂಗ್ ಏಡನ್‌ನಲ್ಲಿ ಜನಿಸಿದನೆಂದೂ ಹಾಗೂ ಶ್ರೀಮತಿ ಲೀನಾಳ ಪತಿ ಮೆಕ್ಸಿಕೋದ ತಪಚಾಲ್‌ನವನೆಂದೂ ತಿಳಿದು ಬರುತ್ತದೆ.

ಕ್ರಿ. ಶ. ೧೮೨೧ರ ಶಾಸನದಲ್ಲಿ ದಾಖಲಾಗಿರುವ ಡೆಪ್ಯೂಟಿ ಎ. ಎ. ಎಫ್. ಟಿ., ಕಮಿಷನರ್ ಆಫ್ ಕಂ. ಆಫ್ ಆರ್ಡಿನೆನ್ಸ್ ಎನ್ನುವಲ್ಲಿ ಎ. ಎ. ಎಫ್. ಟಿ ಎಂಬುದರ ಅರ್ಥ ತಿಳಿದು ಬರುವುದಿಲ್ಲ. ಶಾಸನ ಸಂಖ್ಯೆ ೧೩ರ ಎರಡು ಹಂತದ ಒಂದೇ ಸಮಾಧಿಯಲ್ಲಿ ಪ್ರತ್ಯೇಕವಾಗಿರುವ ಎರಡು ಶಾಸನಗಳಿದ್ದು ಕ್ರಿ. ಶ. ೧೮೫೮ರ ಶಾಸನದಲ್ಲಿ, ಗತಿಸಿರುವ ಚಾರೊಲೆಟ್ ಮತಿಲ್ಡಳ ಪತಿ ಕಂಡಕ್ಟರ್ ಡಬ್ಲ್ಯು. ಜೆ. ಗೇಸ್‌ನ ಪತ್ನಿ ಎಂದೂ, ಹತ್ತು ವರ್ಷದ ನಂತರ ಕೆಳಹಂತದ ಕ್ರಿ. ಶ. ೧೮೬೯ರ ಶಾಸನದಲ್ಲಿ ಕಂಡಕ್ಟರ್ ಆರ್. ಬ್ಲೊಫೆಲ್ಡ್‌ನ ಪತ್ನಿ ಎಂದೂ ನಮೂದಿತ ವಾಗಿರುವುದು ಗೊಂದಲವನ್ನುಂಟುಮಾಡುತ್ತದೆ. ಆದರೆ ಕೆಳಹಂತದ ೧೮೬೮ರ ಶಾಸನದ ಕೊನೆಯಲ್ಲಿ ಎಂ.ಗೇಸ್‌ನ ಹಿರಿಯ ಪುತ್ರಿ ಶಾಸನವನ್ನು ಹಾಕಿಸಿರುವುದಾಗಿ ದಾಖಲಾಗಿದೆ. ಕೆಲವು ಶಾಸನಗಳ ಅಂತ್ಯದಲ್ಲಿ ಒಂದು ಸಾಲಿನ ಹೆಸರು, ಊರು ಅಥವಾ ಕೇವಲ ಹೆಸರುಗಳನ್ನು ಕಂಡರಿಸಲಾಗಿದೆ. ಅವುಗಳೆಂದರೆ

೧ ಡಬ್ಲ್ಯು. ಬ್ರೌನ್ ಕ್ಯಾಥಡ್ರೆಲ್ ಬಾಂಬೆ (ಶಾ. ಸಂ. ೫)
೨. ಬೆಂಗಳೂರು ಸ್ಕಲ್ಪ್‌ಚರ್ ಡಬ್ಲ್ಯು. ಟಿ. ಲಾರಿ (ಶಾ. ಸಂ. ೬)
೩. ಬೆಂಗಳೂರು ಮೂರ್ತಿ (ಶಾ. ಸಂ. ೧೧)
೪. ಕೌಲಿ ಬೆಂಗಳೂರು (ಶಾ. ಸಂ. ೧೬)
೫. ಸ್ಮಾಲರ್ ಅಂಡ್ ಕೊ... ಬೆಂಗಳೂರು (ಶಾ. ಸಂ. ೧೯)
೬. ಸ್ಯಾಂಡರ್ಸ್ (ಲಂಡನ್) ಇಂಗ್ಲಂಡ್ (ಶಾ. ಸಂ. ೨೧)

ಈ ಹೆಸರುಗಳು ಶಾಸನವನ್ನು ಕಂಡರಿಸಿದವರದೇ ಅಥವಾ ಸಮಾಧಿಗಳ ಕಟ್ಟಡ ಮತ್ತು ವಿನ್ಯಾಸವನ್ನು ರೂಪಿಸಿದವರದೇ ಎಂಬುದು ಸ್ಪಷ್ಟವಾಗುವುದಿಲ್ಲ.

ವೃತ್ತಿಗಳತ್ತ ಗಮನಹರಿಸಿದರೆ ಆರು ಜನ ಗೃಹಿಣಿಯರು (ಹೌಸ್ ವೈಫ್), ಡೆಪ್ಯುಟಿ ಎ. ಎ. ಎಫ್. ಟಿ., ಕಮಿಷನರ್ ಆಫ್ ಕಂ. ಆಫ್ ಆರ್ಡಿನೆನ್ಸ್ (೧೮೨೧). ಕಂಡಕ್ಟರ್ (೧೮೨೩), ಸಬ್ ಓವರ್ಸಿಯರ್, ಪಬ್ಲಿಕ್‌ಕ್ಯಾಟಲ್ ಡಿಪಾರ್ಟ್‌ಮೆಂಟ್ (೧೮೨೬), ಸಬ್ ಅಸಿಸ್ಟೆಂಟ್ ಕಮಿಸ್ಸರಿ ಜನರಲ್ (೧೮೩೯), ಅಸಿಸ್ಟೆಂಟ್ ಕಮಿಸ್ಸರಿ ಜನರಲ್ (೧೮೫೦), ಎಮಿಸೇರಿಯಟ್ ಸ್ಟ್ಯಾಫ್ ಸರ್ಜನ್ (೧೮೫೦), ಸಬ್ ಓವರ್‌ಸಿಯರ್ - ಕಮಸೆರಿಯಟ್ ಡಿಪಾರ್ಟ್‌ಮೆಂಟ್ (೧೮೫೪), ಆಸಿಸ್ಟೆಟ್ ಅಪೋಥಿಕರಿ, (ಔಷಧಿ ನೀಡುವವ) ಮದ್ರಾಸ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ (೧೮೫೪), ಕಂಡಕ್ಟರ್ - ಕಮಿಸರಿಯಟ್ ಡಿಪಾರ್ಟ್‌ಮೆಂಟ್ (೧೮೫೮), ೫೬ನೇ ರೆಜಿಮೆಂಟ್‌ಗೆ ಸೇರಿದ ಸೇನೆ ನೌಕರ (೧೮೭೩), ಕರ್ನಲ್ (೧೮೮೧) ಇತ್ಯಾದಿ ಮೃತ ವ್ಯಕ್ತಿಗಳ ವೃತ್ತಿಗಳನ್ನು ಶಾಸನಗಳು ತಿಳಿಸುತ್ತವೆ. ಶ್ರೀಯತ ಬಿ. ಎಲ್. ರೈಸ್ ರವರು ದಾಖಲಿಸಿರು ವಂತೆ ಈ ಎಲ್ಲ ಹುದ್ದೆಗಳು ಆಹಾರ ಸರಬರಾಜು ಇಲಾಖೆ (ಕಮಸೇರಿಯಟ್) ಮತ್ತು ಸಾರ್ವಜನಿಕ ಪಶು ಇಲಾಖೆ (ಪಬ್ಲಿಕ್ ಕ್ಯಾಟಲ್ ಡಿಪಾರ್ಟ್‌ಮೆಂಟ್)ಗಳಿಗೆ ಸಂಬಂಧಿಸಿದ ವೃತ್ತಿಗಳಾಗಿದ್ದು, ಇಲ್ಲಿ ಸಮಾಧಿಸ್ಥರಾಗಿರುವ ಎಲ್ಲರೂ ಇಲ್ಲಿನ ಇಲಾಖೆಗಳ ನೌಕರರು ಮತ್ತು ಅವರ ಕುಟುಂಬ ವರ್ಗದವರೇ ಆಗಿರುತ್ತಾರೆ.

ಇದರ ಜೊತೆಗೆ, ಕ್ರಿ. ಶ. ೧೮೫೦ರ ಶಾಸನದಲ್ಲಿ ಮೃತ ಅಲೆಗ್ಸಾಂಡರ್ ಮಾರ್ಕಿಲೆಸ್‌ನ ತಂದೆ ವಿಲಿಯಂ ಜೊಸಿಕ್, ದೂತವಾಸದ ಸಿಬ್ಬಂದಿ ಶಸ್ತ್ರ ಚಿಕಿತ್ಸಕ (ಎಮಿಸೇರಿಯಟ್ ಸ್ಟ್ಯಾಫ್ ಸರ್ಜನ್) ಎಂದೂ, ಕ್ರಿ. ಶ. ೧೮೫೪ರ ಶಾಸನದಲ್ಲಿ ಮೃತ ಜಾನ್ ಫಾಕ್ನರ್, ಮದ್ರಾಸ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ (ಔಷಧಿ ನೀಡುವ ಸಹಾಯಕ) ಅಸಿಸ್ಟೆಂಟ್ ಒಪೋಥಿಕರಿ ಎಂದೂ ನಮೂದಿತವಾಗಿರುವುದನ್ನು ಗಮನಿಸಿದಾಗ, ಇಲ್ಲಿದ್ದ ಇಲಾಖೆ ಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ನೌಕರರ ಅನುಕೂಲಕ್ಕಾಗಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿತ್ತು ಎಂಬುದು ಖಚಿತವಾಗುತ್ತದೆ.

ಹುಣಸೂರು, ಅಮೃತಮಹಲ್ ತಳಿಯ ಉತ್ಪಾದನೆಯಲ್ಲಿ ಪ್ರಮುಖ ಕೇಂದ್ರವೆಂದು ಹೆಸರು ಗಳಿಸಿತ್ತು. ಅದರೊಂದಿಗೆ ಒಂದು ಚರ್ಮ ಹದ ಮಾಡುವ ಕೇಂದ್ರ, ಒಂದು ಕಂಬಳಿ ತಯಾರಿಕಾ ಕೇಂದ್ರ ಮತ್ತು ಒಂದು ಮರದ ದಿಮ್ಮಿಗಳ ದಾಸ್ತಾನು ಮಳಿಗೆಗಳನ್ನೂ ಪಡೆದಿತ್ತೆಂದೂ, ಕ್ರಿ. ಶ. ೧೮೬೪ರ ವರೆಗೆ ಮದರಾಸಿನ ಕಮಸ್ಸೇರಿಯಟ್ ಅವುಗಳನ್ನು ನಡೆಸಿಕೊಂಡು ಬರುತ್ತಿತ್ತೆಂದೂ, ಮೈಸೂರು ಗೆಜೆಟಿಯರ್‌ನಲ್ಲಿ ಶ್ರೀಯುತ ರೈಸ್‌ರವರು (ಪುಟ ೬೮೪) ದಾಖಲಿಸಿರುತ್ತಾರೆ.

ಇದಕ್ಕೆ ಪೂರಕವಾಗಿ ಕ್ರಿ. ಶ. ೧೮೧೩ರಲ್ಲಿ ಮದರಾಸು ಕಮಸ್ಸೇರಿಯಟ್‌ನ ಕ್ಯಾಪ್ಟನ್ ಹ್ಯಾರಿ ಎಂಬುವವನಿಗೆ ಅಮೃತ ಮಹಲ್ ತಳಿ ಉತ್ಪಾದನಾ ಘಟಕವನ್ನು ಮತ್ತು ಇದಕ್ಕೆ ಸಂಬಂಧಿಸಿದ ಗೋಮಾಳವನ್ನು ಹಸ್ತಾಂತರ ಮಾಡಲಾಗಿರುತ್ತದೆ. ಹಾಗೂ ಕರ್ನಲ್ ಡೇವಿಡ್‌ಸನ್ ಎಂಬಾತನು ದಿನಾಂಕ ೫-೧೧-೧೮೨೩ರಲ್ಲಿ, ಮದರಾಸಿನ ಕಮಿಸ್ಸರಿ ಜನರಲ್ ರವರಿಗೆ ಪತ್ರ ಮುಖೇನ ಕೇಂದ್ರದ ಪ್ರಗತಿ ಮತ್ತು ಸಾಧನೆಗಳ ವರದಿಯನ್ನು ಒಪ್ಪಿಸಿರುತ್ತಾನೆ. ಈ ಕಮಸ್ಸೇರಿಯಟ್ ಘಟಕವನ್ನು ಕೆಲವು ಕಾಲ ಇಲ್ಲಿನ ನೌಕರರ ಸುಪರ್ದಿಗೆ ನೀಡಿದ ಕಾರಣ ಅಮೃತಮಹಲ್

ತಳಿಯು ಉತ್ತಮಗೊಳ್ಳದೇ ಹೋಯಿತೆಂದೂ, ೧೩ ವರ್ಷಗಳ ನಂತರ ತಳಿಯನ್ನು ಸಂರಕ್ಷಿಸಲು ವಿಶೇಷ ಕಾರ್ಯಾಚರಣೆ ನಡೆಸಲ್ಪಟ್ಟಿತೆಂದೂ ತಿಳಿದುಬರುತ್ತದೆ. (ಹಿಸ್ಟರಿ ಆಫ್ ಅಮೃತ ಮಹಲ್ - ಕ್ಯಾಪ್ಟನ್ ಎಂ. ಎ. ರೌಲಂಡ್ಸನ್).

ಅಂದಿನ ಕಾಲಕ್ಕೆ ಹಚ್ಚ ಹಸಿರಿನಿಂದ ಕೂಡಿದ್ದ ಗೋಮಾಳವು ಪ್ರಸ್ತುತ ಮುನೇಶ್ವರ ಕಾವಲ್ (ಪುರಭವನ ಕಟ್ಟಡವಿರುವ ಸ್ಥಳ) ಎಂದು ಕರೆಸಿಕೊಂಡು ತನ್ನ ವಿಸ್ತೀರ್ಣವನ್ನು ಸಂಕುಚಿತಗೊಳಿಸಿ ಕೊಂಡಿದೆ. ಈ ಮೈದಾನದ ಪಕ್ಕದಲ್ಲಿರುವ ರಸ್ತೆಗೆ ಬ್ರಿಟಿಷರ ಕಾಲದಲ್ಲಿ ನಾಮಾಂಕಿತಗೊಂಡ ಸ್ಟೋರ್ಸ್ ಸ್ಟ್ರೀಟ್ ಎಂಬ ಹೆಸರು ಕಂಡುಬರುತ್ತದೆ. ಸ್ಟೋರ್ಸ್ ಎಂಬುದರ ಅರ್ಥ ದಾಸ್ತಾನು ಮಳಿಗೆ ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ, ರಸ್ತೆಯ ಅಂಚಿಗಿರುವ ಚೌಕಾಕಾರದ ದೊಡ್ಡದಾದ ಜಾಗವನ್ನು ಪರಿಶೀಲಿಸಿದರೆ, ಉತ್ತರಕ್ಕೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾಗಿರುವ ಸುಮಾರು ೪೦ ಅಡಿಗಳಷ್ಟು ಎತ್ತರದ ಬುರುಜು ಕಂಬಗಳು, ದಕ್ಷಿಣಕ್ಕೆ ದೊಡ್ಡ ಪ್ರವೇಶದ್ವಾರ ಮತ್ತು ಬದಿಯಲ್ಲಿ ಕಿಂಡಿಗಳಿರುವ ವೃತ್ತಾಕಾರದ ಎರಡು ಕಾವಲು ಕೊಠಡಿ, ಮಧ್ಯದಲ್ಲಿ ವಿಸ್ತಾರವಾದ ಖಾಲಿ ಜಾಗ ಹಾಗೂ ಪ್ರವೇಶದ್ವಾರದ ಎಡಭಾಗಕ್ಕೆ ಒಂದು ಅಂತಸ್ತಿನ ಕಟ್ಟಡ ಮತ್ತು ಅದಕ್ಕೆ ಹೊಂದಿಕೊಂಡಂತೆ ಸಾಲು ಕೊಠಡಿಗಳು ಹಾಗೂ ಕಟ್ಟಡಕ್ಕೆ ಉಪಯೋಗಿಸಲಾಗಿರುವ ಸಾಮಗ್ರಿಗಳು, ಎಲ್ಲವೂ, ಸಾರ್ವಜನಿಕ ಪಶುಇಲಾಖೆ, ಆಹಾರ ಸರಬರಾಜು ಇಲಾಖೆ ಮತ್ತು ಆಹಾರ ಪದಾರ್ಥಗಳ ಉಗ್ರಾಣಗಳು ಈ ಕಟ್ಟಡದಲ್ಲಿಯೇ ವಾಸ್ತವ್ಯ ಹೊಂದಿದ್ದವು ಎಂಬುದನ್ನು ಖಚಿತಪಡಿಸುತ್ತವೆ. ಈ ಕಾರಣದಿಂದಲೇ ಈ ರಸ್ತೆಗೆ ಸ್ಟೋರ್ಸ್ ಸ್ಟ್ರೀಟ್ ಎಂದು ನಾಮಾಂಕಿತವಾಗಿರುತ್ತದೆ.

ಅಲ್ಲದೆ ಪ್ರವೇಶದ್ವಾರದ ಎದುರುಗಡೆ ಮತ್ತು ಎಡಭಾಗ ದಲ್ಲಿರುವ ಕಟ್ಟಡ ಹಾಗೂ ಸಮುಚ್ಚಯದ ಪೂರ್ವ ಭಾಗಕ್ಕೆ ಅನತಿ ದೂರದಲ್ಲಿ (ಚರ್ಚಿನ ಪಕ್ಕದ ರಸ್ತೆಯಲ್ಲಿ) ಇಂದಿಗೂ ಸುಸ್ಥಿತಿಯಲ್ಲಿರುವ ದೊಡ್ಡ ಬಂಗಲೆಗಳಿಗೆ ಉಪಯೋಗಿಸ ಲಾಗಿರುವ ಸಾಮಗ್ರಿಗಳು ಮತ್ತು ವಿನ್ಯಾಸಗಳು, ಬ್ರಿಟೀಷರು ಇಲ್ಲಿ ನೆಲಸಿದ್ದರು ಎಂಬುದನ್ನೂ ಸಹ ಖಚಿತಪಡಿಸುತ್ತವೆ. ಈಗ ಅಲ್ಲಲ್ಲಿ ಅಲ್ಪ ಸ್ವಲ್ಪ ಬದಲಾವಣೆಗೊಳಪಟ್ಟಿರುವ ಈ ಕಟ್ಟಡಗಳಲ್ಲಿ ಶಾಲೆ ಹಾಗೂ ಸರ್ಕಾರಿ ಕಛೇರಿಗಳು ಸ್ಥಾಪಿತಗೊಂಡಿರುತ್ತವೆ.


ಕಮಸ್ಸೇರಿಯಟ್ ಇಲಾಖೆಯ ವಿಭಾಗವು ಇಲ್ಲಿದ್ದುದು ಖಚಿತವಾಗುತ್ತಿದಂತೆಯೇ ಮತ್ತೊಂದು ಮುಖ್ಯವಾದ ಅಂಶವು ನಮ್ಮ ಗಮನವನ್ನು ಸೆಳೆಯುತ್ತದೆ. ಮಾಂಕ್ಸ್ ದ್ವೀಪದ ಚರ್ಚ್ ನೌಕರನೊಬ್ಬನ ಪುತ್ರನಾದ ಮಾರ್ಕ್ ಕಬ್ಬನ್ ಕ್ರಿ. ಶ. ೧೮೦೧ರಲ್ಲಿ (ಹದಿನಾರನೇ ವಯಸ್ಸಿನಲ್ಲಿ) ಭಾರತಕ್ಕೆ ಬಂದು ತನ್ನ ಚಿಕ್ಕಪ್ಪನಾದ ಮೇಜರ್ ವಾಕ್ಸ್ (ಆಗಿನ ಮೈಸೂರು ರೆಸಿಡೆನ್ಸಿಯ ಸೈನ್ಯಾಧಿಕಾರಿ) ಬಳಿ ಕೆಲಸಕ್ಕೆ ತೊಡಗಿಕೊಂಡು ಸ್ಥಳೀಯ ಸಂಸ್ಕೃತಿಯ ಪರಿಚಯ ಮಾಡಿಕೊಂಡನೆಂದೂ, ಮುಂದೆ ಕಮಸ್ಸೇರಿಯಟ್ ಇಲಾಖೆಯಲ್ಲಿ ನೌಕರಿ ಪಡೆದು, ಅಲ್ಲಿನ ಮುಖ್ಯಸ್ಥನಾಗಿದ್ದ ಕರ್ನಲ್ ಮೋರಿಸನ್ ಎಂಬುವವನು ರೆಸಿಡೆಂಟ್ ಹುದ್ದೆಗೆ ಬಡ್ತಿ ಹೊಂದಿ ತಿರುವಂನಂತ ಪುರಕ್ಕೆ ತೆರಳಿದ ನಂತರ, ಈತನೇ ಅಲ್ಲಿನ ಮುಖ್ಯಸ್ಥನಾಗಿ ಮುಂದುವರೆದನೆಂದು ತಿಳಿದುಬರುತ್ತದೆ. (ಶ್ರೀ ಬಿ. ಎಲ್. ರೈಸ್, ಮೈಸೂರು ಗ್ಯಾಸೆಟಿಯರ್ - ಪುಟ ೪೩೨)।

ಮೈಸೂರು ಸರ್ಕಾರವು ದಿನಾಂಕ ೧.೧.೧೮೮೨ರಲ್ಲಿ ಅಮೃತಮಹಲ್ ತಳಿ ಉತ್ಪಾದನಾ ಘಟಕವನ್ನು ಮದ್ರಾಸ್ ಸರ್ಕಾರದಿಂದ ಕೊಂಡುಕೊಂಡಿರುತ್ತದೆ. ಆಗ ೩೦ ಮಂದೆಗಳಲ್ಲಿ ೧೨, ೫೦೨ ರಾಸುಗಳಿದ್ದು, ೪೬೧೮ ಹಸುಗಳು ಮತ್ತು ೧೭೭ ಬೀಜದ ಹೋರಿಗಳಿದ್ದವು. ನಂತರ ಮದರಾಸು ಸರ್ಕಾರಕ್ಕೆ ಎತ್ತುಗಳನ್ನು (೩ ವರ್ಷ ಪ್ರಾಯ) ವರ್ಷಕ್ಕೆ ೪೦೦ ರಂತೆ ಹತ್ತು ವರ್ಷ ಸರಬರಾಜು ಮಾಡಿದ್ದು, ನಂತರ ಇದನ್ನು ಕ್ರಿ. ಶ. ೧೮೮೬ರಲ್ಲಿ (ನಾಲ್ಕು ವರ್ಷ ಪ್ರಾಯದ ೨೦೦ರಂತೆ) ಕಡಿಮೆ ಗೊಳಿಸಲಾಗಿರುತ್ತದೆ. ಕ್ರಿ. ಶ. ೧೮೯೪ರಲ್ಲಿ ಆರು ದರೋಗಾಗಳು (ದನ ಕಾಯುವವರು) ೨೩ ಮಂದೆಗಳನ್ನು ನೋಡಿಕೊಳ್ಳುತ್ತಿದ್ದ ರೆಂದೂ, ಆಗ ಹುಣಸೂರಿನಲ್ಲಿ ಅವುಗಳನ್ನು ಕೊಂಡುಕೊಳ್ಳದೆ, ಇತರೆಡೆಗಳಿಂದ ಅವುಗಳನ್ನು ಕೊಂಡು ಮದರಾಸಿಗೆ ಕಳುಹಿಸುತ್ತಿದ್ದರೆಂದೂ ತಿಳಿದುಬರುತ್ತದೆ. (ಶ್ರೀ ಬಿ. ಎಲ್. ರೈಸ್, ಮೈಸೂರು ಗ್ಯಾಸೆಟಿಯರ್).

ಮುಂದುವರೆದು, ಕಾಫಿ ಬೀಜದ ಬೆಳೆ ಮತ್ತು ಅದು ತರುವ ಲಾಭವನ್ನು ಅರಿತ ಬ್ರಿಟೀಷರು, ಈ ಸಮಾಧಿಗಳಿರುವ ನದಿ ದಂಡೆಯ ಮೇಲೆ ಕ್ರಿ. ಶ. ೧೮೬೦ರಲ್ಲಿ ದೊಡ್ಡ ಕಟ್ಟಡದ ಸಂಕೀರ್ಣವೊಂದನ್ನು ಕಟ್ಟಿ ಕಾಫಿ ಕ್ಯೂರಿಂಗ್ (ಸಂಸ್ಕರಣೆ) ವರ್ಕ್ಸ್‌ನ್ನು ಸ್ಥಾಪಿಸಿರುತ್ತಾರೆ. ಈ ಕಟ್ಟಡದ ಪ್ರವೇಶದ್ವಾರದಲ್ಲಿ ಆ ಕಟ್ಟಡದ ಮೇಲ್ಭಾಗ (BS) ಎಂಬ ಲೋಗೋ ಗುರುತಿರುವ ದೊಡ್ಡ ಗಂಟೆಯೊಂದು ಸ್ಥಾಪಿತಗೊಂಡಿದ್ದು ಇದರಲ್ಲಿ ೧೮೭೩ ಎಂದು ಕಂಡರಿಸಲಾಗಿದೆ. ಅಂದರೆ ಕ್ರಿ.ಶ. ೧೮೬೪ರಲ್ಲಿ ಕಮಸ್ಸೇರಿಯಟ್ ವಿಭಾಗವು ಸ್ಥಗಿತಗೊಂಡಿದ್ದರೂ, ಬ್ರಿಟೀಷ್ ಕುಟುಂಬಗಳು, ಪಕ್ಕದ ಘಟ್ಟ ಪ್ರದೇಶವಾದ ಕೊಡಗಿನಲ್ಲಿ ಬೆಳೆದ ಕಾಫಿ ಬೀಜವನ್ನು ಇಲ್ಲಿಗೆ ತಂದು ಒಣಗಿಸಿ ಸಂಸ್ಕರಿಸುವ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಮೇಲೆ ತಿಳಿಸಲಾದ ಸ್ಟೋರ್ ಸ್ಟ್ರೀಟ್ ಈ ಘಟಕಕ್ಕೆ ಹತ್ತಿರವಾಗಿದ್ದು, ಈ ರಸ್ತೆ ಮತ್ತು ಅಕ್ಕಪಕ್ಕದಲ್ಲಿ ಬ್ರಿಟೀಷರ ಕಾಲದಲ್ಲಿಯೇ ವಲಸೆ ಬಂದಿದ್ದ ಸ್ಥಳೀಯ ಜನರನ್ನು (ಈಗಲೂ ಇಲ್ಲಿ ತಮಿಳು ಭಾಷಿಕ ಕುಟುಂಬಗಳು ನೆಲಸಿರುತ್ತವೆ) ತಮ್ಮ ಘಟಕದ ಕೆಲಸಗಳಿಗೆ ತೊಡಗಿಸಕೊಂಡಿದ್ದು, ಅವರಿಗೆ ಕೆಲಸದ ವೇಳೆಯ ಆರಂಭ ಮತ್ತು ಮುಕ್ತಾಯವನ್ನು

ಸೂಚಿಸುವ ಸಲುವಾಗಿ ಈ ಗಂಟೆಯನ್ನು (ಸೈರನ್) ಉಪಯೋಗಿಸುತ್ತಿದ್ದರು ಎಂದು ಹೇಳಬಹುದಾಗಿದೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಕ್ರಿ. ಶ. ೧೮೧೩ರಲ್ಲಿ ಆರಂಭಗೊಂಡ ಆಹಾರ ಸರಬರಾಜು ಮತ್ತು ಸಾರ್ವಜನಿಕ ಪಶು ಇಲಾಖೆಗಳು ಕ್ರಿ. ಶ. ೧೮೬೪ರವರೆವಿಗೆ ಅಂದರೆ ೫೧ ವರ್ಷಗಳು ಉತ್ತಮ ಸ್ಥಿತಿಯಲ್ಲಿದ್ದು, ಶಕ್ತಿಯುತವಾದ ಅಮೃತ ಮಹಲ್ ತಳಿಯ ಎತ್ತುಗಳನ್ನು ಹಾಗೂ ಆಹಾರ ಸಾಮಗ್ರಿಗಳನ್ನು ಸೈನ್ಯಕ್ಕೆ ನಿರಂತರವಾಗಿ ಒದಗಿಸಿದ್ದು, ತದನಂತರ ಹಲವಾರು ಕಾರಣಗಳಿಂದಾಗಿ ಕುಂಠಿತಗೊಂಡಿರುತ್ತದೆ. ಕ್ರಿ. ಶ. ೧೮೮೨ರಲ್ಲಿ ಮೈಸೂರು ಸರ್ಕಾರವು, ಮದರಾಸು ಸರ್ಕಾರದಿಂದ ಈ ಅಮೃತಮಹಲ್ ತಳಿ ಉತ್ಪಾದನಾ ಘಟವನ್ನು ಕೊಂಡುಕೊಂಡು ಕೆಲವು ಕಾಲ ಸರಬರಾಜು ಮಾಡಿದ್ದು, ಕ್ರಿ. ಶ. ೧೮೯೪ರ ವೇಳೆಗೆ ಈ ಕೇಂದ್ರವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು ಹಾಗೂ ಇದಾದ ನಂತರ ಕಾಫಿ ಸಂಸ್ಕರಣ ಘಟಕವಿದ್ದುದರಿಂದ ಕ್ರಿ. ಶ. ೧೯೦೫ರ ವರೆವಿಗೂ ಈ ಸ್ಥಳದಲ್ಲಿಯೇ ವಾಸ್ತವ್ಯ ಹೂಡಿದ್ದ ಬ್ರಿಟೀಷ್ ಜನರು ಬಹುಶಃ ಮುಂದೆ ತಮ್ಮ ವಾಸವ್ಯವನ್ನು ಇಲ್ಲಿಂದ ತೆರವು ಮಾಡಿದ್ದಾರೆಂದು ಹೇಳಬಹುದಾಗಿದೆ.



ಅನುಬಂಧ

ಶಾಸನ ಪಾಠಗಳು

ಜಿಲ್ಲೆ ಃ ಮೈಸೂರು — ತಾಲ್ಲೂಕು ಃ ಹುಣಸೂರು

ಸ್ಥಳ ಃ ಹುಣಸೂರು ಕಾಫಿ ವರ್ಕ್ಸ್‌ನ ಹಿಂಭಾಗ (ರುದ್ರ ಭೂಮಿಯಲ್ಲಿ ಕಟ್ಟಲಾಗಿರುವ ಸಾಮಾಧಿ ಶಾಸನಗಳು)

ಶಾ.ಸಂ. ೧ — ಕ್ರಿ.ಶ. ೧೮೨೧

SACRED
TO THE MEMORY
MR JAS CARTER
DEPY AFFT
COMMISSIONER OF COMY
OF ORDINANCE
WHO DIED AT HOLSOOR
THE 7THE JUNE 1821
AGED 50 YEARS

ಶಾ.ಸಂ. ೨ — ಕ್ರಿ.ಶ. ೧೮೨೩

IN THE MEMORY
OF
MRS DIANA CUDDARD
WIFE OF MR CONDUCTOR CUDDARD
WHO DIED AT HOONSOOR THE 6TH DAY OF
JANUARY 1823
AGED 36 YEARS TO WHOOM AND FOUR CHILD
REN IS THIS MONUMENT EREC
TED BY A DIFOONFOLET HUSBAND
AND FATHER AS A TRIBUTE
OF FINORE AND AFFECTIONATE REGRETT
WEEP NOT PREPARE
IN DEATH WE WILL MEET AGAIN
(tom, brick and morter, kadapa slab)

ಶಾ.ಸಂ. ೩ — ಕ್ರಿ.ಶ. ೧೮೨೬

SACRED
TO THE MEMORY
OF

ಶಾ.ಸಂ. ೪ — ಕ್ರಿ.ಶ. ೧೮೩೯

IN MEMORY OF
MARY SUSANA LOUISA
ELDEST DAUGHTER OF

MR THOMAS WALL
LATE SUB OVERSEER OF THE PUBLIC
CATTLE DEPOT AT HUNSORE WHO DE
PARTED THIS LIFE ON THE
13 TH DAY OF DE
CEMBER AD 1826
AGED 52 YEARS
HE SERVED THE HONBLE
COMPANY FOR A PERIOD
OF 32 YEARS HAS LEFT A WIDOW AND A SON
TO DEPLORE HIS IRREPIRABLE LOSS
THIS TOMB IS ERECTED BY HIS DISCONSOLATE WIFE
BLESSED.....DEAD WHICH DIE IN THE LORD
(high brick and morter construction with a kadapa slab)

CAPTAIN W H BUDD
SUB ASSISTANT COMMISSARY GENERAL
WHO DIED AT EDATHORE
ON THE 27 TH DAY OF
JANUARY 1839
AGED SIX YEARS AND 4 MONTHS

ಶಾ.ಸಂ. ೫ ಕ್ರಿ.ಶ. ೧೮೫೦

IN MEMORY OF
LUCY AUCUSPA MARY
THE BELOVED WIFE OF
CAPTAIN WILLIAM HENARY BUDD
ASSISTANT COMMISSARY GENERAL
WHO DEPARTED THIS LIFE
ON THE 31 ST JANUARY 1850
IN THE 38TH YEAR OF HER AGE
SINCERELY AND RESERVEDLY REGRETTED BY ALL WHO NEW HER
SHE LIVED AND DIED A SINCERE AND HUMBLE CHRISTIAN
CHERISHING THROUGH LIFE AS HER
ONLY GROUND AND HOPE FOR ETERNITY
A SIMPLE AND UNSWERING FAITH IN THE SAVING MERITS
OF CHRISTS ATONEMENT : AND ENJOYING IN HER
LOST MOMENTS AS SHE HAD EVER THOUGHT THAT
...ITH HUMBLY EXPECTED A QUITE COMPOSSER
...ERENITY IF MIND AND A PERFECT RESIGNATION
...E DEVINE WILL WHICH WERE UNEXPRESSABLY
...ING AND SOOTHING TO HERSELF AND EMINENTLY
...TIVE AND CONSUTORY TO HER AFFLICTED RELATIVES
AND FRIENDS
W. BROWN
CATHEDRAL
BOMBAY
(Slab is marble, three step brick and morther construction)

ಶಾ.ಸಂ. ೬ ಕ್ರಿ.ಶ. ೧೮೫೦

IN MEMORY OF
ALICE
YOUNGEST DAUGHTER OF
CAPTAIN AND MRS BUDD
SHE DIED OF CHOLERE AT
NANTERAMPILLAY IN
THE SALME DISTRICT
ON THE 16TH OF MARCH 1850 AGED 4 YEARS

BANGALORE SCULPTURE W. T. LAWRY.

ಶಾ.ಸಂ. ೭ ಕ್ರಿ.ಶ. ೧೮೫೦

Sacred
To the memory of
ALEXANDER MARCELLUS
Youngest son of
emmissariat staff serjeon
WILLIAM JOSICH GRACE
who died at hoonsoor
the 26th day of april 1850 died one year
eight months and 14 days
...here is that radiant sleep see it and weeped

(single, tomb type, used marter and bricks, kadapa slab)

ಶಾ.ಸಂ. ೮ ಕ್ರಿ.ಶ. ೧೮೫೩

SACRED
TO THE MEMORY
OF

ಶಾ.ಸಂ. ೯ ಕ್ರಿ.ಶ. ೧೮೫೪

SACRED
TO THE MEMORY
MARY EVELYN

WILLIAM MC LEAN
WHO DIED AT HOONSOOR
3RD DECEMBER 1853
AGED 39 YEARS
TILL CHRIST SHALL COME TO ROUSE
THE SLUMBERING DEAD
FAREWELL PALE LIFELESS CLAY
A LONG FAREWELL
(carged flat slab)

WHO DEPARTED THIS LIFE ON THE
14TH MARCH 1854
AGED 1 YR 4 MONTHS AND 4 DAYS
THE INFANT DAUGHTER OF GEORGE AND CATHERINE
RUSSEL

THY WELL BE DONE

ಶಾ.ಸಂ. ೧೦ ಕ್ರಿ.ಶ. ೧೮೫೪

SACRED
TO THE
MEMORY
OF
GEORGE
RUSSELL
SUB OVERSEER
OF THE
COMMISSARIAT DEPART
WHO DEPARTED THIS LIFE
ON THE
16TH MARCH 1854
AGED
41 YEARS 3 MONTHS 19 DAYS
READER PREPARE TO MEET THY GOD
(granite slab)

ಶಾ.ಸಂ. ೧೧ ಕ್ರಿ.ಶ. ೧೮೫೪

SACRED
TO THE MEMORY OF
WILLIAM HENRY
WHO DIED ON THE
17TH MARCH 1854
AGED 5 YEARS AND 10 MONTHS
AND OF

AGNES
WHO DIED ON THE 10 JULY
OF THE SAME YEAR
AGED 1 MONTH
THE BELOVED CHILDREN
OF
JOHN AND MARY LAUDON

Bangalore Murthy
(Granite Slab)

ಶಾ.ಸಂ. ೧೨ ಕ್ರಿ.ಶ. ೧೮೫೪

SACRED
TO THE
MEMORY
OF
JOHN FAUKNER
ASSISTANT OPOTHICARY
MADRAS MEDICAL ESTABLISHMENT
WHO DEPARTED THIS LIFE
ON THE
20 TH MARCH 1854
AGED 39 YEARS AND 2 MONTHS

BLESSED ARE THE DEAD WHICH DIED IN THE LORD

ಶಾ.ಸಂ. ೧೩ ಕ್ರಿ.ಶ. ೧೮೫೮

TOP
IN MEMORY
OF
CHOROLATTE MATILDA
THE BELOVED WIFE OF
CONDUCTOR
W.J. GACE
COMMISSARIOT DEPART
WHO DIED ON THE 9TH DAY OF MAY 1858
AGED XLVIII YEARS
OH MOTHER DEAR WOULD BE A SIN
TO WISH.....BACK HERE

ಶಾ.ಸಂ. ೧೪ ಕ್ರಿ.ಶ. ೧೮೬೪

ESTHER HEARD
1864
6 NOV AE 2 MONTH

(A big granite cross)

YET OF....THINK HOW SHOULD FEEL
IF SUCH A THING COULD BE
DEATH

LOWER ಕ್ರಿ.ಶ. ೧೮೬೮

CHOROLETTE MATHILDA
WIFE OF CONDUCTOR R BLOFELD
COMMISSARIOT DEPT
ON BOARD STEM SHIP BURMAH
ON THE MORNING OF THE 8 TH OCT 1868
OF HEAD APOPLE
THE EDLEST DAUGHTER OF M. GACE
BANGALORE

(tomb type, marter and bricks doubled storied)

ಶಾ.ಸಂ. ೧೫ ಕ್ರಿ.ಶ. ೧೮೭೩

SACRED
TO THE MEMORY
OF
GEORGE HORTON
(on the flower base)

(on the botton base)

LATE OF THE 56TH REGT
WHO DIED 3RD NOV 1873
AGED 31

(granite, flower top and flat two storied base)

ಶಾ.ಸಂ. ೧೬ ಕ್ರಿ.ಶ. ೧೮೭೫
SACRED TO THE MEMORY OF
GEORGE HUSON
BORN 18THE JULY 1872
DIED 7 TH JANY 1875
ALSO
WILLIAM EDWARD
BORN 23 RD JULY 1873
DIED 8TH JANY 1875
BOTH THE CHILDREN OF
CECELIA AND THOMAS THATE RUSSEL
THY WILL BE DONE

COWLY BANGALORE

(Granite slab on the matter and brick construction)

ಶಾ.ಸಂ. ೧೭ ಕ್ರಿ.ಶ. ೧೮೭೫
SACRED
TO
THE MEMORY OF
CECILIA
THE BELOVED WIFE OF
THOMAS KATE RUSSEL
AND
SECOND DAUGHTER OF MR
ER HUSON
WHO DIED ON THE 3RD MAY 1875
AGED 20 YEARS
DEEPLY REGRETTED BY ALL
WHO KNEW
ALSO TO THE MEMORY
OF AN INFANT SON WHOOM
THE LORD LOVETH HE CHASTENATH

(Brick and marter with granite slab)

ಶಾ.ಸಂ. ೧೮ ಕ್ರಿ.ಶ. ೧೮೭೮
THY WILL BE DONE
TO THE MEMORY OF
JANE TAYLOR LAMBERT BREWER
THE BELOVED WIFE OF
JOHN BREWER
WHO DIED AT HOONSOOR
ON THE 26TH JULY 1878
BORN ON THE 17TH JANUARY 1847
AT ROXBURGHSHIRE SCOTLAND
WATCH AND PRAY FOR

(flat sone slab bed, cross at behind)

NOT WHEN THE TIME IS
BLESSED ARE THE DEAD
DIE IN THE LORD

(polished granite)

ಶಾ.ಸಂ. ೧೯ ಕ್ರಿ.ಶ. ೧೮೮೧
SACRED
KL. F. KIND
ASSIENCE
AGED 40 YEARS AND 3 MONTHS
WHO RESTED FROM HIS LABOURES
ON 12TH MAY 1881
DEEPLY LAMINATED AND LOVED BY HIS DEAR WIFE
AND CHILDREN BORN AT ADEN DIED AT
EDOTORE
BURRIED AT HUNSUR
THOU ART MY ROLE OF RICH
TEOUSNESS
MY JESUS AND MY ALL

Small and co... Bangalore

(Granite, single milestone type)

ಶಾ.ಸಂ. ೨೦ ಕ್ರಿ.ಶ. ೧೮೮೪

IN LOVING MEMORY
OF
CHARLES MAGPHERSON GRANT
WHO DIED AT
GOWRIE BETTA EXTAGE SOUTH COORG
THE 8TH SEPTEMBER 1884
AGED 59 YEARS

ALSO HIS SON

CHARLES MAGPHERSON
WHO DIED AT THE SAME PLACE
ON THE 13TH DECEMBER 1884
AGED 29 YEARS
HAVE LOVED THEE WITH AN
EVERLASTING LOVE THEREFORE
WITH LOVING KINDNESS HAVE
I DRAWN THEE

(Three steps granite slad, flat)

ಶಾ.ಸಂ. ೨೧ ಕ್ರಿ.ಶ. ೧೮೮೪

SACRED TO THE MEMORY OF
CATHARINE (KATE)
DEARLY BELOVED WIFE OF
ATWELL LAKE ALEXANDER
WHO DIED AT WOSHULLI POLLIBETTA, CORD, INDIA
4TH AUG 1887
AGED 30 YEARS

SANDERS (LONDON) ENGLAND

(small, three pices of marble one upon another)

ಶಾ.ಸಂ. ೨೨ ಕ್ರಿ.ಶ. ೧೮೯೫

IN LOVING MEMORY
OF
LENA
BELOVED WIFE OF
ROBERT OCLIVE STEVENSON
TAPACHALU, MEXICO
+
AND DAUGHER OF THE LATE
CHARLES MACPHERSON GRANT
OF GOWRIE BETTA COORG
WHO DIED IN PEACE AT MYSORE
ON THE 8THE JUNE 1895
AGED 38
I AM THE PESERUCTION AND THE LIFE

(white marble sheet, white granite, cross on the tob slab)

ಶಾ.ಸಂ. ೨೩ ಕ್ರಿ.ಶ. ೧೮೯೭

IN
LOVING MEMORY OF
BARBARA MARY WILKINSON
BORN 22ND SEPTEMBER 1897
DIED 21ST NOVEMBER 1897
BECAUSE I LOVE THOUGH SHALT LIVE ALSO
GOOD NIGHT BELOVED SLEEP AND TAKE THY
REST
LAY DOWN THY HEAD UPON THY SAVIOUR'S
BREAST

(POLISHED GRANITE, VERTIAL CROSS)

ಶಾ.ಸಂ. ೨೪ ಕ್ರಿ.ಶ. ೧೮೯೫

SACRED
TO THE MEMORY OF
KATHERENE MARY MOTHERWELL EARRUTH
BELOVED WIFE OF W. E. PETHRIC HAY
BORN AT BANEF SCOTLAND
28TH AUGUST 1849
DIED AT HUNSUR
18 TH MARCH 1901

YES I HAVE LOVED THEE WITH AN
EVERLASTING LOVE THEREFORE WITH
LOVING KINDNESS HAVE I DRAWN THEE

(Red granite, rock type with a cross of red granite sculptured as wood)

ಶಾ.ಸಂ. ೨೫ ಕ್ರಿ.ಶ. ೧೯೦೧

IN LOVING MEMORY OF
MARGARET GRANT
WIDOW OF
CHARLES MACPHERSON GRANT
WHO DIED AT EGMORE MADRAS
ON THE 24TH OF JULY 1905
AGED 79 YEARS
THE MEMORY OF THE JUST IS BLESSED

(Three steps granite, polished, Cross in the behind)

ಶಾ.ಸಂ. ೨೬ ಕ್ರಿ.ಶ. ಇಲ್ಲ

CHARLES MACPHERSON GRANT JUNIOR

(Granite two steps - polished)

ಡಾ|| ಮೃತ್ಯುಂಜಯ ರುಮಾಲೆ*

ಈಸ್ಟಇಂಡಿಯ ಕಂಪನಿ ಕಾಲದ ಬಳ್ಳಾರಿ ಜಿಲ್ಲಾ ಆಡಳಿತ ವಿಭಾಗಗಳು ಮತ್ತು ಬ್ರಿಟಿಶರ ಸಮಾಧಿಗಳು

ಐತಿಹಾಸಿಕ ಸ್ಮಾರಕಗಳು ಕೇವಲ ಇತಿಹಾಸದ ಪಳೆಯುಳಿಕೆಗಳು ಮಾತ್ರವಾಗಿ ಮುಖ್ಯವಾಗದೆ ಐತಿಹಾಸಿಕ ಘಟನೆಗಳನ್ನು ಅವುಗಳು ಪ್ರತಿನಿಧಿಸಬಲ್ಲವು, ಗರ್ಭಸ್ಥಗೊಳಿಸಿ ಕೊಂಡಿರಬಲ್ಲವು ಎಂಬುದಕ್ಕೆ ಸಾಕ್ಷಿಯಾಗಿ ಕೆಲವು ಸ್ಮಾರಕಗಳು ನಮಗೆ ಗಮನಾರ್ಹವೆನಿಸುತ್ತವೆ. ಇಂಥ ಸ್ಮಾರಕಗಳು ನಾನಾ ಪ್ರಕಾರದಲ್ಲಿವೆ. ಸಮಾಧಿಗಳು ಇತಿಹಾಸಪೂರ್ವದಿಂದ ಹಿಡಿದು ತೀರಾ ಇತ್ತೀಚಿನ ಬ್ರಿಟಿಷ್‌ರ ಆಡಳಿತದವರೆಗೂ ಹಾಗು ಆಡಳಿತ ವಿಭಾಗಗಳೂ ಐತಿಹಾಸಿಕ ಮೌಲ್ಯವನ್ನು ಪ್ರತಿನಿಧಿಸುತ್ತವೆ.

ಹೀಗೆ ಇತಿಹಾಸದ ಘಟನೆಗಳನ್ನು ನೆನಪಿಸುವ ಮಹತ್ವದ ಅಂಶಗಳನ್ನು ಪ್ರಸ್ತುತ ಪ್ರಬಂಧ ನೀಡುತ್ತದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿ ಇರುವ ರಾಮಗಢದ ಬೆಟ್ಟದಲ್ಲಿ (ಸಮುದ್ರ ಮಟ್ಟದಿಂದ ೩,೨೫೬ಅಡಿ ಎತ್ತರ) ಇರುವ ಬ್ರಿಟಿಷ್ ಸೈನ್ಯಾಧಿಕಾರಗಳ ಮತ್ತು ಕುಟುಂಬದವರ ಸಮಾಧಿ ಗಳಿರುವ ಸ್ಮಶಾನವೂ ಹೀಗಾಗಿ ಗಮನ ಸೆಳೆಯುತ್ತದೆ.

ಕ್ರಿ. ಶ. ೧೮೦೦ರಿಂದ 'ವಿಶಾಲ ಬಳ್ಳಾರಿ ಪ್ರದೇಶ'ಕ್ಕೆ ಮೊಟ್ಟ ಮೊದಲ ಪ್ರಧಾನ ಜಿಲ್ಲಾಧಿಕಾರಿಯಾಗಿದ್ದ (Principal Collector) ಸರ್. ಥಾಮಸ್‌ಮನ್ರೋ ಆಡಳಿತದ ಅನುಕೂಲ ಕ್ಕಾಗಿ ಸ್ವಾಧೀನ ಪಡಿಸಿಕೊಂಡ ಜಿಲ್ಲೆಗಳ ವ್ಯಾಪ್ತಿಯನ್ನು ನಾಲ್ವರು ಉಪಜಿಲ್ಲಾಧಿಕಾರಿಗಳಿಗೆ ಹಂಚುತ್ತಾನೆ. ೧೮೦೮ರಲ್ಲಿ ಸ್ವಾಧೀನ ಪಡಿಸಿಕೊಂಡ ಜಿಲ್ಲೆಗಳನ್ನು ಬಳ್ಳಾರಿ ಮತ್ತು ಕಡಪ ವಿಭಾಗಗಳೆಂದು ಎರಡು ಭಾಗಗಳಾಗಿ ವಿಂಗಡಿಸುತ್ತಾನೆ. ಆಗ ಬಳ್ಳಾರಿ ವಿಭಾಗಕ್ಕೆ ಹದಿನೈದು ತಾಲೂಕುಗಳಿದ್ದವು. ಆನಂತರ ೧೮೮೨ರಲ್ಲಿ ಬಳ್ಳಾರಿ ಜಿಲ್ಲಾಡಳಿತವು ಬಳ್ಳಾರಿ ವಿಭಾಗವನ್ನು ಬಳ್ಳಾರಿ ಮತ್ತು ಅನಂತಪುರ ಎಂದು ಆಡಳಿತದ ಅನುಕೂಲಕ್ಕಾಗಿ ಪುನರ್ ವಿಂಗಡನೆ ಮಾಡಿತು. ಇದರಿಂದ ಒಟ್ಟು ಹದಿನೈದು ತಾಲೂಕುಗಳಿದ್ದ ಬಳ್ಳಾರಿ ವಿಭಾಗವನ್ನು ಬಳ್ಳಾರಿಗೆ ಎಂಟು ತಾಲೂಕು ಮತ್ತು ಅನಂತಪುರಕ್ಕೆ ಏಳು ತಾಲೂಕುಗಳ ಮೂಲಕ ಹಂಚಲಾಯಿತು. ಕ್ರಮೇಣ ಈ ಶತಮಾನದ ಪ್ರಾರಂಭದಲ್ಲಿ ಬಳ್ಳಾರಿ ವಿಭಾಗದ ಎಂಟು ತಾಲೂಕುಗಳನ್ನು ಮೂರು ಭಾಗ ಮಾಡಲಾಯಿತು. ಆದೋನಿ ಮತ್ತು ಆಲೂರು ತಾಲೂಕುಗಳನ್ನು ಆದೋನಿ ವಿಭಾಗವೆಂದೂ, ಬಳ್ಳಾರಿ ಮತ್ತು ರಾಯದುರ್ಗವನ್ನು 'ಬಳ್ಳಾರಿ ವಿಭಾಗ' ವೆಂದೂ ಹಡಗಲಿ, ಹರಪನಹಳ್ಳಿ, ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳನ್ನು 'ಹೊಸಪೇಟೆ ವಿಭಾಗ' ವೆಂದೂ ಗುರುತಿಸ ಲಾಯಿತು.

ಹೊಸಪೇಟೆ ವಿಭಾಗ ಗಾತ್ರದಲ್ಲಿಯೂ, ಸಂಪನ್ಮೂಲ ದಲ್ಲಿಯೂ ವಿಶಾಲವಾಗಿದ್ದರಿಂದ ಇಂಡಿಯನ್ ಸಿವಿಲ್ ಸರ್ವೀಸಸ್ (Indian Civil Services) ನಿಂದ ಆಡಳಿತ ನಡೆಸಲ್ಪಟ್ಟಿದ್ದರೆ, ಆದೋನಿ ಮತ್ತು ಬಳ್ಳಾರಿ ವಿಭಾಗಗಳು ಉಪಜಿಲ್ಲಾಧಿಕಾರಿ (Deputy Collector)ಗಳಿಂದ ಆಡಳಿತ ನಡೆಸಲ್ಪಡುತ್ತಿದ್ದವು. ೧೯೧೦ರಲ್ಲಿ ಪುನಃ ರಾಯದುರ್ಗ (ರಾಯದುರ್ಗ ಕೂಡ್ಲಿಗಿ), ಹೊಸಪೇಟೆ (ಹಡಗಲಿ, ಹರಪನಹಳ್ಳಿ, ಹೊಸಪೇಟೆ), ಆದೋನಿ (ಆದೋನಿ, ಆಲೂರು) ಮತ್ತು ಬಳ್ಳಾರಿ (ಬಳ್ಳಾರಿ ಸಿರಗುಪ್ಪ) ಎಂದು ವಿಭಾಗಿಸಿ ಆಡಳಿತವನ್ನು ನಿಯಂತ್ರಿಸಿಕೊಳ್ಳಲಾಯಿತು.

೧೯೨೯ರಲ್ಲಿ ಆದೋನಿ ತಾಲೂಕಿನ ವಾಯವ್ಯ ಭಾಗವನ್ನೂ ಮತ್ತು ಆಲೂರು ತಾಲೂಕಿನ ಉತ್ತರ ಭಾಗವನ್ನು ಸಿರುಗುಪ್ಪಕ್ಕೆ ಸೇರಿಸಲಾಯಿತು.

೧೯೩೧ರಲ್ಲಿ ಹಡಗಲಿಯನ್ನು ಉಪತಾಲೂಕನ್ನಾಗಿಯೂ ಮಾಡಲಾಯಿತು.

೧೯೫೧ರಲ್ಲಿ ಪುನರ್‌ಹಂಚಿಕೆ ಮತ್ತು ಮಾರ್ಪಾಡುಗಳನ್ನು ಮಾಡಿ ಇಡೀ ಪ್ರದೇಶಕ್ಕೆ ಒಂದು ಭೌಗೋಳಿಕ ಸ್ವರೂಪವನ್ನು ನೀಡಿ ಪ್ರಸ್ತುತ 'ಬಳ್ಳಾರಿ ಜಿಲ್ಲೆ'ಗೆ ಒಂದು ರೂಪ ನೀಡಲಾಯಿತು.

* ಕನ್ನಡ ವಿಭಾಗ, ವಿಜಯನಗರ ಕಾಲೇಜು, ಹೊಸಪೇಟೆ - ೫೮೩ ೨೦೧.

ಆದರೆ ಈ ವಿಭಾಗೀಕರಣದ ಇತಿಹಾಸದಲ್ಲಿ ಒಂದು ವಿಶೇಷ ಮತ್ತು ಕುತೂಹಲಕಾರಿ ಅಂಶವೆಂದರೆ ಇಂದು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ 'ಸಂಡೂರು' ಮಾತ್ರ ಎಲ್ಲೂ ವಿಭಾಗೀಕರಣದಲ್ಲಾಗಲೀ ಯಾವುದೇ ರೀತಿಯ ಹಂಚಿಕೆಗಾಗಲೀ ಒಳಪಡದೇ ಇರುವುದು. ಮತ್ತು ಸದ್ಯ ಐತಿಹಾಸಕ ಸ್ಮಾರಕಗಳಾಗಿ ಪರಿಗಣಿಸುತ್ತಿರುವ ಬ್ರಿಟಿಷ್ ಸಮಾಧಿಗಳು ಸಂಡೂರು ತಾಲೂಕಿನಲ್ಲಿ ಇರುವುದು ಮತ್ತಷ್ಟು ಕುತೂಹಲಕ್ಕೆ ಕಾರಣ ವಾಗುತ್ತದೆ. ಇದರ ಹಿಂದೆ ಇರುವ ಸಂಡೂರು ಸಂಸ್ಥಾನದ ಒಂದು ಪ್ರಮುಖ ಐತಿಹಾಸಿಕ ಘಟನೆ ಹೀಗಿದೆ:

ಸಂಡೂರು ಸಂಸ್ಥಾನ ಬಳ್ಳಾರಿ ಜಿಲ್ಲೆಯ ಒಂದು ಪ್ರಮುಖ ಮತ್ತು ಜೀವಂತ ಸಂಸ್ಥಾನ. ಇಲ್ಲಿ ಕ್ರಿ. ಶ. ೧೮೧೫ರಲ್ಲಿ ಸಂಡೂರನ್ನು ಶಿವರಾವ್ ಆಳುತ್ತಲಿದ್ದಾಗ ಪೇಶ್ವೆ ಬಾಜೀರಾವ್ ಬಂಡೇಳುತ್ತಾನೆ. ಕುಮಾರಸ್ವಾಮಿಯ ದೇವಸ್ಥಾನಕ್ಕೆ ದರ್ಶನ ಪಡೆಯಲು ಬಂದಿರುವುದಾಗಿ ಸಬೂಬು ಹೇಳುತ್ತ ತನ್ನ ಸೈನ್ಯ ತುಕಡಿಯನ್ನು ಸಿದ್ಧಗೊಳಿಸುವ ಯತ್ನದಲ್ಲಿದ್ದಾಗ ಶಿವರಾವ್ ಅದಕ್ಕೆ ಒಪ್ಪದೆ ಕೆಲವು ಜನರಿಗೆ ಮಾತ್ರ ದರ್ಶನಾವಕಾಶ ನೀಡುತ್ತಾನೆ. ಈ ಸಂಬಂಧ ಪೇಶ್ವೆ ಬಾಜೀರಾವ್ ಮತ್ತು ಶಿವರಾವ್ ಇವರ ನಡುವೆ ಇದ್ದ ಶೀತಲ ಸಮರ ಬಿರುಸಾಗುವ ಸಂದರ್ಭದಲ್ಲಿದ್ದಾಗ ಟ್ರೀಟಿ ಆಫ್ ಬೆಸನ್ (Treaty Of Bassien) ಒಪ್ಪಂದದ ಹಿನ್ನೆಲೆಯಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಪೇಶ್ವೆ ಬಾಜೀರಾಯನಿಗೆ ಸಹಾಯ ಹಸ್ತ ನೀಡುತ್ತದೆ. ಆಗ ಸರ್.ಥಾಮಸ್‌ಮನ್ರೋ ತನ್ನ ಸೇನೆಯೊಂದಿಗೆ ಸಂಡೂರು ಕಣಿವೆಯನ್ನು ವಶಪಡಿಸಿಕೊಳ್ಳಲು ಉದ್ದೇಶಿಸಿ ೧೮ನೇ ಅಕ್ಟೋಬರ್ ೧೮೧೭ರಂದು ಶಿವರಾವ್‌ಗೆ ಪತ್ರ ಬರೆಯುತ್ತಾನೆ. ಕೊನೆಗೆ ಸಂಡೂರನ್ನು ವಶಪಡಿಸಿಕೊಂಡಾದ ಮೇಲೆ ಹಿರೇಹಾಳವನ್ನು ಶಿವರಾವ್‌ಗೆ ಮತ್ತು ಇತರ ಎಂಟು ಗ್ರಾಮಗಳನ್ನು ಈಸ್ಟ್‌ಇಂಡಿಯಾ ಕಂಪನಿಗೆ ಜಹಗೀರು ನೀಡಿ ಸಂಡೂರನ್ನು ನಿಯಮಾನಸಾರವಾಗಿ ಪೇಶ್ವೆ ಬಾಜೀರಾಯನಿಗೆ ಬಿಟ್ಟು ಕೊಡಲಾಗುತ್ತದೆ. ಆದರೆ ಮಾರನೇ ವರ್ಷವೇ ಪೇಶ್ವೆಯ ಬಾಜೀರಾವ್ ಮತ್ತು ಇಂಗ್ಲೀಷ್‌ರ ನಡುವೆ ಯುದ್ಧ ನಡೆದು ಪೇಶ್ವೆ ಬಾಜೀರಾವ್ ಅಧಿಕಾರದಿಂದ ಕೆಳಗಿಳಿಯುತ್ತಾನೆ. ಮನ್ರೋ ಸಂಡೂರನ್ನು ಪುನಃ ಶಿವರಾವ್‌ಗೆ ಕೊಟ್ಟು ಈಸ್ಟ್‌ಇಂಡಿಯಾ ಕಂಪನಿಯೇ ಸೊಂಡೂರನ್ನೂ ೧ ಜುಲೈ ೧೮೧೮ರಿಂದ ಪುನರ್‌ರಚನೆ ಮಾಡಿತು.

ಕ್ರಿ. ಶ. ೧೮೨೭ರಿಂದ ಶಿವರಾವ್‌ನ ಯಜಮಾನ್ಯದಲ್ಲಿ ಸಂಡೂರು ಇದ್ದಾಗಲೂ ಈಸ್ಟ್‌ಇಂಡಿಯಾ ಕಂಪನಿಯೇ ಅದರ ಸಂಪೂರ್ಣ ಅಧಿಕಾರವನ್ನು ಹೊಂದಿತ್ತು. ಈ ಎಲ್ಲಾ ಸಂದರ್ಭದಲ್ಲಿ ಮನ್ರೋ ಮಾಡಿದ ಕಾರ್ಯಾಚರಣೆಯನ್ನು 'ಮನ್ರೋಮಾರ್ಚ್' ಎಂದೇ ಗುರುತಿಸಲಾಗುತ್ತದೆ. ೨-೫-೧೮೪೦ರಲ್ಲಿ ಶಿವರಾವ್‌ನ ಮರಣವಾದನಂತರ ಅಧಿಕಾರಕ್ಕೆ ಬಂದ ವೆಂಕಟರಾವ್ ಸಹ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಮದ್ರಾಸ್ ಸರಕಾರದ ಅನುಮತಿಯಿಂದಲೇ ಅಧಿಕಾರ ಸಾಗಿಸುತ್ತಾನೆ.

ಈ ಹಿಂದೆ ಹೇಳಿದ ಹಾಗೆ ಯಾವಾವುಗಳನು ಸ್ವಾಧೀನ ಪಡಿಸಿಕೊಂಡ ಜಿಲ್ಲೆಗಳೆಂದು ಕರೆಯುತ್ತೇವೆಯೋ ಅವುಗಳನ್ನು ಈಸ್ಟ್ ಇಂಡಿಯಾ ಕಂಪನಿಯು ಕ್ರಿ. ಶ. ೧೮೦೦ರಿಂದ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಇಟ್ಟುಕೊಂಡಿತು. ಜಿಲ್ಲೆಗಳನ್ನು ಸ್ವಾಧೀನ ಪಡಿಸಿಕೊಳ್ಳುವಾಗ, ತಾಲೂಕುಗಳನ್ನಾಗಿ ವಿಭಾಗಿಸುವಾಗ ಸರ್ ಥಾಮಸ್‌ಮನ್ರೋ ಸೈನ್ಯಧ ತುಕಡಿಗಳ ನೆರವು ಪಡೆಯುತ್ತಿದ್ದನು. ಸದರಿ ಬಳ್ಳಾರಿಯಲ್ಲಿ ಥಾಮಸ್‌ಮನ್ರೋ ಪ್ರಧಾನ ಜಿಲ್ಲಾಧಿಕಾರಿಯಾಗಿ (Principal Collector) ಅಧಿಕಾರ ವಹಿಸಿಕೊಂಡಾಗ ಜನರಲ್ ಡುಗ್ಲಾಡ್ ಕಾಂಪ್ಬೆಲ್ ಅವರನ್ನು ಸೈನ್ಯ ಪಡೆಯ ನಾಯಕನನ್ನಾಗಿ ಬಳ್ಳಾರಿಯಲ್ಲಿ ಇರಿಸಿಕೊಳ್ಳಲಾಯಿತು. ಮನ್ರೋ ಅವರಿಗೆ ಸಹಾಯಕರಾಗಿ ಜಿಲ್ಲೆಯ ಉಪಜಿಲ್ಲಾಧಿಕಾರಿಗಳನ್ನು ನಿಯಮಿಸಲಾಯಿತು. ಅವುಗಳಲ್ಲಿ ಒಬ್ಬ ಉಪಜಿಲ್ಲಾಧಿಕಾರಿಯಾದ ಜೇಮ್ಸ್ ಕ್ರೋನ್ ಅವರ ಅಧೀನದಲ್ಲಿ ಬಳ್ಳಾರಿ ತಾಲೂಕು ಇತ್ತು.

ಸರ್. ಥಾಮಸ್‌ಮನ್ರೋ ಮತ್ತು ಡುಗ್ಲಾಡ್ ಕಾಂಪ್ಬೆಲ್ ಸೈನ್ಯದ ತುಕಡಿಗಳಿಂದ ಶ್ರೀಮಂತರ, ಜಮೀನುದಾರರ ಅಧಿಕಾರವನ್ನು ಮೊಟಕುಗೊಳಿಸುವ ಕಾರ್ಯದಲ್ಲಿದ್ದಾಗ ಅವರಿಗೆ ಕಾಯಂ ಆದ ವಸತಿ ಅನುಕೂಲ ಏರ್ಪಡಲೇಬೇಕಾಗಿದ್ದರಿಂದ ಬಳ್ಳಾರಿಯನ್ನು ಸೈನ್ಯ ವಸತಿ ಕೇಂದ್ರಕ್ಕೆ ಅನುಕೂಲ ಮಾಡಿಕೊಳ್ಳಬೇಕಾಗಿತ್ತು. (ಬಳ್ಳಾರಿಯ ಈ ಪ್ರದೇಶವನ್ನು ಇಂದಿಗೂ ಕಂಟೋನ್ಮೆಂಟ್ ಎಂದು ಕರೆಯಲಾಗುತ್ತದೆ) ಆದರೆ ಬಳ್ಳಾರಿಯ ಉಷ್ಣವಾತಾವರಣದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬೇಕಾಗಿದ್ದರಿಂದ ಕ್ರಿ. ಶ. ೧೮೧೭ರಲ್ಲಿ ಸಂಡೂರನ್ನು ಸರ್. ಥಾಮಸ್ ಮನ್ರೋ ವಶಪಡಿಸಿಕೊಂಡಾಗ ಸಂಡೂರಿನ 'ರಾಮಗಢ ನಿಸರ್ಗಧಾಮ'ವನ್ನು ಈ ಸಂದರ್ಭದಲ್ಲಿ ಬಳಸಿಕೊಳ್ಳುವ ಆಲೋಚನೆ ಬಂದಿತು.

ಪೇಶ್ವೆ ಬಾಜೀರಾಯ ಮತ್ತು ಸಂಡೂರಿನ ಶಿವರಾವ್ ಇವರಿಬ್ಬರ ನಡುವಿನ ಕಚ್ಚಾಟವನ್ನು ಬಳಸಿಕೊಂಡ ಈಸ್ಟ್ ಇಂಡಿಯಾ ಕಂಪನಿ ಸಂಡೂರು ಒಂದು ಸಂಸ್ಥಾನವಾಗಿದ್ದಾಗಲೂ ಅದನ್ನು ಅಧಿಕೃತವಾಗಿ ಉಪಯೋಗಿಸಿಕೊಳ್ಳುವ ಅನುಕೂಲಕರ ಪ್ರಸಂಗ ಈಗ ಈಸ್ಟ್‌ಇಂಡಿಯಾ ಕಂಪನಿಗೆ ಒದಗಿ ಬಂತು. ೧೮೪೦ರಲ್ಲಿ ಶಿವರಾವ್‌ನ ಮರಣಾನಂತರ ಅಧಿಕಾರಕ್ಕೆ ಬಂದ ವೆಂಕಟರಾವ್ ಸಂಡೂರಿನಲ್ಲಿ ಕಂಪನಿಗೆ ಅಧೀನವಾಗಿ ಅಧಿಕಾರ ನಡೆಸುತ್ತಿದ್ದ ಕಾಲಕ್ಕಾಗಲೇ ಕಂಪನಿ ಆಡಳಿತ ಮತ್ತು ಸೈನ್ಯ

ಬಲದಿಂದ ಬಳ್ಳಾರಿ ಪ್ರದೇಶದಲ್ಲಿ ತನ್ನ ಯಜಮಾನ್ಯವನ್ನು ಸ್ಥಾಪಿಸಿತ್ತು. ಆ ಕಾರಣದಿಂದ ಸಂಡೂರಿನ 'ರಾಮಗಢ ನಿಸರ್ಗಧಾಮ'ವನ್ನು ಸೈನ್ಯ ತುಕಡಿಯ ಬೇಸಿಗೆ ವಸತಿಗಾಗಿ ಬಳಸಿಕೊಳ್ಳಲು ವೆಂಕಟರಾವ್‌ನ ಸಹಾಯವನ್ನು ನಿರೀಕ್ಷಿಸಿ ತನ್ನ ಕೆಲಸವನ್ನು ಪೂರೈಸಿಕೊಂಡಿತು. ಸುಮಾರು ೧೮೪೦ರಿಂದ ಈ ಭಾಗವನ್ನು ಆಕ್ರಮಿಸಿಕೊಂಡ ಈಸ್ಟ್ ಇಂಡಿಯಾ ಕಂಪನಿಯ ಸೇನಾ ವಿಭಾಗ ಅದನ್ನು (ರಾಮಗಢವನ್ನು) ವಿವಿಧೋದ್ದೇಶ ಗಳಿಗಾಗಿ ಬಳಸಿಕೊಂಡಿತು. ೧೮೪೭ರಲ್ಲಿ ರಾಮಗಢವನ್ನು ಉತ್ತಮ ಆರೋಗ್ಯವರ್ಧಕ ಸ್ಥಳ (Sanitorium) ವಾಗಿ ಮಾರ್ಪಡಿಸಲಾಯಿತು. ಜೊತೆಗೆ ಸೈನಿಕರಿಗಾಗಿ ಆಸ್ಪತ್ರೆಯೊಂದನ್ನು ನಿರ್ಮಿಸಲಾಯಿತು. ಇದು ೧೯೪೦ರ ಸುಮಾರಿನವರೆಗೂ ವ್ಯವಸ್ಥಿತವಾದ ಪ್ರದೇಶವಾಗಿತ್ತು.

ಇಂಥ ಒಂದು ಇತಿಹಾಸಕ್ಕೆ ಸಾಕ್ಷಿಯಾಗಿ ರಾಮಗಢದಲ್ಲಿ ಪಾಳುಬಿದ್ದ ಕಟ್ಟಡಗಳನ್ನು ಬಿಟ್ಟರೆ ಲಿಖಿತ ದಾಖಲೆಗಳಾವು ಅಲ್ಲಿ ಕಾಣಸಿಕ್ಕುವುದಿಲ್ಲ. ಆದರೆ ಅಲ್ಲಿ ಸುಮಾರು ಒಂದು ಎಕರೆ ವ್ಯಾಪ್ತಿಯಲ್ಲಿರುವ ಸ್ಮಶಾನ ಮತ್ತು ಅದರ ಮೇಲಿರುವ ಬರೆಹಗಳು ಬ್ರಿಟಿಶ್‌ರ ಐತಿಹಾಸಿಕ ಪ್ರಜ್ಞೆಗೆ ಸಾಕ್ಷಿಹೇಳುತ್ತವೆ.

ಸಮಾಧಿ ಬರಹಗಳು ನಾಲ್ಕು ಕಾರಣಗಳಿಂದ ಐತಿಹಾಸಿಕ ವಾಗಿ ನಮಗೆ ಮುಖ್ಯವಾಗುತ್ತವೆ. ಸೈನ್ಯಾಧಿಕಾರಿಗಳ ಪದನಾಮ, ಕಾಲ, ವಯಸ್ಸು, ಸಾವಿಗೆ ಕಾರಣ ಇವೆಲ್ಲವುಗಳನ್ನು ಅವು ವಿವರಿಸುತ್ತವೆ. ರಾಮಗಢವನ್ನು Ramadroog ಎಂದು, ಬಳ್ಳಾರಿಯನ್ನು Bellary ಎಂದು, ಹೊಸಪೇಟೆಯನ್ನು Hosepette ಎಂದು ಅವರು ಕರೆಯುತ್ತಿದ್ದ ರೀತಿಯನ್ನು ಇಲ್ಲಿ ಗಮನಿಸಬಹುದು. ತೀರಾ ಹಳೆಯದಾದ ಸಮಾಧಿ ಎಂದರೆ ೧೮೫೫ ಮತ್ತು ಇತ್ತೀಚಿನದೆಂದರೆ ೧೯೧೮ರ ಕಾಲದ್ದು. ಅವರ ಪದನಾಮಗಳು Qr. Mr. Sergeant, High Landers, Asst. Apothecary ಇತ್ಯಾದಿ ವಿವರಗಳು ನಮಗೆ ಲಭ್ಯವಾಗುತ್ತವೆ. ೯೫ ದಿನಗಳ ಒಂದು ಮಗುವಿನಿಂದ ಹಿಡಿದು ೫೮ ವರ್ಷದ ಒಬ್ಬ ವ್ಯಕ್ತಿಯವರೆಗೆ ವಿವಿಧ ವಯಸ್ಸಿನವರ ಸಮಾಧಿಗಳಿವೆ. ಹೃದಯಸ್ಪರ್ಶಿ ಅಂಶವೆಂದರೆ ಒಬ್ಬ ಸೇನಾಧಿಕಾರಿಯ ಹೆಂಡತಿ Georciana Isabella ಸತ್ತಾಗ ರಾಮಗಢದ ಮತ್ತು ಆ ಬೆಟ್ಟದ ಕೆಳಗಿರುವ ಸುಶೀಲಾನಗರ ಎಂಬ ಗ್ರಾಮದ ಜನರು ದುಃಖತಪ್ತರಾಗಿ ಆಕೆಯ ಆತ್ಮಕ್ಕೆ ಶಾಂತಿಕೋರಿ ಪ್ರಾರ್ಥಿಸಿದ್ದಾರೆ.

ಹೀಗೆ ಸಮಾಧಿಗಳು ಒಂದು ಐತಿಹಾಸಿಕ ಸ್ಮಾರಕವಾಗಿ ಗಮನ ಸೆಳೆಯುವ ಅಂಶ ಇಲ್ಲಿ ಮುಖ್ಯವಾದುದು

ಹೆಚ್. ಈ. ಬಸವರಾಜಪ್ಪ*

ಮೈಸೂರು ಸಂಸ್ಥಾನದ ಒಂದು ಭೂದಾಖಲೆ

ಮೈಸೂರು ಸಂಸ್ಥಾನದ ಭೂ ಹಿಡುವಳಿಗಳ ಹಂಚಿಕೆ ಅವುಗಳ ನೋಂದಣಿಯು ಬಹು ಹಿಂದಿನಿಂದ ನಡೆದರೂ, ಹೈದರ್ - ಟಿಪ್ಪು ಕಾಲದಿಂದ ಹಿಡಿದು ಕಮೀಷನರ್ ಕಾಲದವರೆವಿಗೂ ಸ್ಪಷ್ಟ ಲಿಖಿತ ದಾಖಲೆಯುಳ್ಳ ರಿಜಿಸ್ಟರ್‌ಗಳ ಬರವಣಿಗೆಯ ಚಾರಿತ್ರಿಕ ದಾಖಲೆ ನಡೆದಿದ್ದು ಬಹಳ ಕಡಿಮೆ ಎನ್ನಬಹುದು. ೧೯೩೩ಕ್ಕಿಂತ ಮೊದಲು ಬರೆದಿಟ್ಟಿರುವ ಗ್ರಾಮವಾರು ರಿಜಿಸ್ಟರುಗಳು ಅಥವಾ ಭೂ ಹಿಡುವಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಸಿಕ್ಕುವುದು ಕಡಿಮೆ. ಆದರೆ ನಾಲ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಪಷ್ಟವಾಗಿ ಭೂ ದಾಖಲೆಗಳನ್ನು ಗ್ರಾಮಾಂತರ ಮಟ್ಟದಲ್ಲಿ ಶಾನುಭೋಗರು, ಪಟೇಲರುಗಳು ಹಾಗೆಯೇ ತಾಲ್ಲೂಕು ಮಟ್ಟದಲ್ಲಿ ಅಮಲ್ದಾರರು ಸೂಕ್ತ ಗಮನ ಹರಿಸಿ ಅಂತಹ ದಾಖಲೆಗಳನ್ನು ಲಿಖಿತ ರೂಪದಲ್ಲಿಟ್ಟಿದ್ದಾರೆ. ನನ್ನ ಅಧ್ಯಯನದ ಸಂದರ್ಭದಲ್ಲಿ ಅಂತಹ ಕೆಲವು ರಿಜಿಸ್ಟರಗಳಿಗೆ ಸಂಬಂಧಿಸಿದ ವಿವರವನ್ನು ಮುಂದಿನಂತೆ ಚರ್ಚಿಸಿದ್ದೇನೆ.

ಮೈಸೂರು ಸಂಸ್ಥಾನದ ಭೂ ಹಿಡುವಳಿಗಳನ್ನು ಕುರಿತು ಅಧ್ಯಯನ ಮಾಡುವಾಗ ಮೂಲ ಆಕರವಾಗಿ ದೊರೆಯುವ ರಿಜಸ್ಟರ್‌ಗಳಲ್ಲಿ ಒರಿಜಿನಲ್ ಪ್ರಿಲಿಮಿನರಿ ರಿಕಾರ್ಡ್ ಇದನ್ನು ಪ್ರತಿಯೊಂದು ಗ್ರಾಮಕ್ಕೆ ಒಂದರಂತೆ ತಯಾರಿಸಿರುತ್ತಾರೆ. ಈ ರಿಜಿಸ್ಟರ್ ಒಂದು ಗ್ರಾಮದಲ್ಲಿ ಕೃಷಿಗೊಳಪಟ್ಟ ಭೂ ಹಿಡುವಳಿಗಳ ದಾಖಲೆಯನ್ನು ಬರೆದಿಡಲಾಗಿರುತ್ತದೆ. ಈ ರಿಕಾರ್ಡ್ ಒಳಗೊಂಡಿರುವ ಮುಖ್ಯಾಂಶಗಳೆಂದರೆ ಒಂದು ಗ್ರಾಮದ ಭೂ ಹಿಡುವಳಿದಾರರ ಸರ್ವೆ ನಂಬರ್ ಖಾತೆ ನಂಬರ್, ಖಾತೆದಾರನ ಹೆಸರು, ಪೋಡ್ ನಂಬರ್, ಆ ಭೂ ಹಿಡುವಳಿಯ ವಿಸ್ತೀರ್ಣ, ಎಕರೆ ಅಥವಾ ಗುಂಟೆಗಳಲ್ಲಿರುವುದನ್ನು ಲಖಿತ ರೂಪದಲ್ಲಿ ನಮೂದಿಸಲಾಗಿರುತ್ತದೆ. ಈ ರಿಜಿಸ್ಟರ್‌ನಿಂದ ಯಾವ ಪ್ರದೇಶ ಸಾಗುವಳಿಗೆ ಒಳಪಟ್ಟಿದೆ, ಅಥವಾ ಸಾಗುವಳಿಗೆ ಒಳಪಡದೇ ಇದೆಯೋ ಹಾಗೆಯೇ ಇನಾಂ ಜಮೀನು ಅಥವಾ ಖಾಸಗಿ ಒಡೆತನದ ಭೂ ಹಿಡುವಳಿಯೋ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ಒಂದು ಗ್ರಾಮದ ಕೃಷಿ ಯೋಗ್ಯ ಭೂ ಹಿಡುವಳಿಗಳ ಸಂಪೂರ್ಣ ಮಾಹಿತಿಯನ್ನು ನೀಡುವುದರ ಜೊತೆಗೆ ಒಂದು ಪ್ರದೇಶದಲ್ಲಿ ಯಾವ ಸಮುದಾಯದವರು ಹೆಚ್ಚಿನ ಭೂ ಒಡೆತನ ಅಥವಾ ಸ್ವಾಧೀನದಲ್ಲಿ ಭೂ ಹಿಡುವಳಿಗಳನ್ನು ಇಟ್ಟಿಕೊಂಡಿದ್ದಾರೆ. ಎಂಬುದರ ಬಗ್ಗೆ ವಿವರ ಸಿಗುತ್ತದೆ.

ಹಾಗೆಯೇ ಅರ್. ಅರ್. ಫಾರಂ ನಂಬರ್ ೫ ಮತ್ತು ೬ ಇದನ್ನು ಇಂಡೆಕ್ಸ್ ಅಫ್ ಲ್ಯಾಂಡ್ ರಿಜಿಸ್ಟರ್ ಎಂದು ಕರೆಯುತ್ತಾರೆ. ಈ ರಿಜಿಸ್ಟರನ್ನು ಕ್ಷೇತ್ರವಾರಿಗೆ ಬದಲಾಗಿ ಬರೆಯಲ್ಲಟ್ಟಿರುತ್ತದೆ. ಇದೂ ಸಹ ಹಕ್ಕುದಾರನ ಹೆಸರು, ಹಕ್ಕಿನ ಸ್ವಭಾವ, ಭೂ ಹಿಡುವಳಿಯ ಸಂಬಂಧವುಳ್ಳ ಸರ್ವೆ ಸಂಬರ್, ಆದರ ಉಪ ವಿಭಾಗವನ್ನು ತಿಳಿಯಲು ಸಹಾಯ ಮಾಡುತ್ತದೆ. ಈ ರಿಜಿಸ್ಟರ್‌ನ್ನು ಎರಡು ಪ್ರತಿಯಾಗಿ ತಯಾರಿಸುತ್ತಿದ್ದರು. ಒಂದು ಪ್ರತಿ ತಾಲ್ಲೂಕು ಕಛೇರಿಯಲ್ಲಿಯೂ ಮತ್ತೊಂದು ಪ್ರತಿ ಗ್ರಾಮದ ಶಾನುಭೋಗನ ಹತ್ತಿರವಿರುತ್ತಿತ್ತು. ಈ ರಿಜಿಸ್ಟರ್‌ನಲ್ಲಿ ಗ್ರಾಮದ ಒಟ್ಟು ವಿಸ್ತೀರ್ಣ, ಪೋಡು, ಕರಾಬು, ಹುಲ್ಬನ್ನಿ ಸರ್ಕಾರಿ ಜಮೀನು, ರಸ್ತೆಮಾರ್ಗ, ಒಟ್ಟು ಭೂ ಹಿಡುವಳಿಗಳಿಂದ ದೊರೆಯಬಹುದಾದ ಕಂದಾಯದ ಮೊತ್ತ; ಹೀಗೆ ಒಂದು ಗ್ರಾಮದ ಭೂ ವ್ಯವಸ್ಥೆಯನ್ನು ಕುರಿತ ಲಿಖಿತ ದಾಖಲೆ ಇದರಲ್ಲಿ ಇರುತ್ತದೆ. ಮತ್ತೊಂದು, ಪ್ರಮುಖವಾದುದು ಜಮೀನು ಹಕ್ಕಿನ ದಾಖಲೆ ರಿಜಿಸ್ಟರ್: ಇದು ಭೂ ಹಿಡುವಳಿದಾರನ ಹೆಸರು, ಸರ್ವೆ ನಂಬರ್, ಹೊಸದಾಗಿ ಸಾಗುವಳಿಯಾಗಿ ಸೇರುವ ಅಥವಾ ಮಾರಾಟವಾದ ಭೂ ಹಿಡುವಳಿಯ ಬಗ್ಗೆ ವಿವರನ್ನೊಳಗೊಂಡಿರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒರಿಜಿನಲ್ ಪ್ರಿಲಿಮಿನರಿ

* ಸಂಶೋಧಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಾಮಲಾಪುರ - ೫೮೩ ೨೭೬.

ರಿಕಾರ್ಡ್‌ಗಳು ೧೮೬೫-೬೬ರಲ್ಲಿ ಭೂ ಮಾಪನ ಕಾರ್ಯ ಪ್ರಾರಂಭವಾದ ಮೇಲೆ ಭೂ ಹಿಡುವಳಿಗಳಿಗೆ ಸಂಬಂಧಿಸಿದ ರಿಜಿಸ್ಟರ್‌ಗಳನ್ನು ಇಡುವ ಪದ್ಧತಿ ಮುಂದುವರೆದು ಬಂದಿದೆ. ಆದರೆ ೧೮ನೇ ಶತಮಾನಕ್ಕೆ ಮೊದಲು ಕಂದಾಯ ವಸೂಲಿಯ ವ್ಯವಸ್ಥೆ ಭೂ ಹಿಡುವಳಿಯ ಸ್ವಾಧೀನ ಮತ್ತು ಒಡೆತನಗಳು ಹಲವು ಸಂದರ್ಭದಲ್ಲಿ ಬಾಯಿ ಮಾತಿನಲ್ಲಿ ನಡೆದಿರುವುದಕ್ಕೂ ಆಧಾರವಿದೆ. ಹಿಂದೆ ಭೂ ಹಿಡುವಳಿದಾರನು ಹೊಂದಿರುವ ನೇಗಿಲುಗಳ ಸಂಖ್ಯೆ, ಬಿತ್ತುವ ಬೀಜದ ಪ್ರಮಾಣ, ಅವನು ಹೊಂದಿರುವ ಬಿತ್ತುವ ಉಪಕರಣ ಕೂರಿಗೆ, ಅವನು ಎಷ್ಟು ಜೊತೆ ಎತ್ತುಗಳನ್ನು ಕಟ್ಟಿಕೊಂಡಿದ್ದಾನೆ ಎನ್ನುವ ಕೆಲವು ಅಂಶಗಳ ಅಧಾರದ ಮೇಲೆ ಅವನು ದೊಡ್ಡ ಭೂ ಹಿಡುವಳಿದಾರನೆ; ಮಧ್ಯಮ ಅಥವಾ ಸಣ್ಣ ಭೂ ಹಿಡುವಳಿದಾರನೆ ಎಂಬುದನ್ನು ನಿರ್ಧರಿಸುವ ಕ್ರಮ ಜಾರಿಯಲ್ಲಿತ್ತು. ಹೀಗಾಗಿಯೇ ಗ್ರಾಮಗಳಲ್ಲಿನ ಪಟೇಲರು ಮತ್ತು ಶಾನುಭೋಗರು ಸ್ವಜನ ಪಕ್ಷಪಾತ ಮಾಡುತ್ತಿದ್ದರು. ಹಾಗೆಯೇ ಕೆಳಹಂತದ ಜನರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದರೆಂಬ ವಿವರಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ. ಇಂತಹ ಅಹಿತಕರ ಘಟನೆಗಳು ನಡೆಯದಂತೆ ೧೮ನೇ ಶತಮಾನದ ನಂತರ ಜಾರಿಗೆ ಬಂದ ಕೆಲವು ಕಾಯಿದೆಗಳು ಸಾಮಾಜಿಕ ಸಮಾನತೆಯನ್ನು ನೀಡಲು ಪ್ರಯತ್ನಿಸಿದ್ದನ್ನು ಕಾಣಬಹುದು. ಅವುಗಳಲ್ಲಿ ಮೈಸೂರು ಸಂಸ್ಥಾನದ ಭೂ ದಾಖಲೆಯ ವಿವರವನ್ನು ಗಮನಿಸಬಹುದು.

ಜಮೀನು ಹಕ್ಕುಗಳ ದಾಖಲಾತಿ ಸ್ಕೀಮ್ ಗೌರ್ನ್‌ಮೆಂಟ್ ಆರ್ಡರ್ ನಂಬರ್ ೪೫೪೫ ಡೆವಲಪ್‌ಮೆಂಟ್ ಸೆಕ್ರೆಟರಿಯೇಟ್ ನಂಬರ್ ಅರ್. ೪೫೪೫ ಎಲ್. ಎಸ್. ೩೮।೩೨।೫ ಆರ್ ೯-೧೦ನೇಯ ಮಾರ್ಚಿ ೧೯೩೩, ೧೯೨೭ನೆಯ ಇಸ್ವಿ ೧೦ನೇ ನಂಬರಿನ ರೆಗ್ಯುಲೇಷನ್ ಆದ ಜಮೀನು ಹಕ್ಕುಗಳ ದಾಖಲಾತಿಯ ರೆಗ್ಯುಲೇಷನ್‌ನ ನಿಯಮಗಳು ೧೯೩೩ನೇ ಇಸ್ವಿಯ ಮಾರ್ಚ್ ೧೫ನೇ ತಾರೀಖಿನಲ್ಲಾಯಿತು. ಈ ನಂಬರ್‌ನಲ್ಲಾದ ಹೊಸನಗರ, ಹೊಸದುರ್ಗ, ನೆಲಮಂಗಲ ತಾಲ್ಲೂಕುಗಳ ನಮೂದಿತ ಎಲ್ಲಾ ಸರ್ಕಾರಿ ಗ್ರಾಮಗಳಲ್ಲಿ ನಿಯಮಗಳನ್ನು ಅನ್ವಯಿಸತಕ್ಕದೆಂದು ಸರ್ಕಾರದವರು, ಅದೇ ರೆಗ್ಯುಲೇಷನ್‌ನ ಒಂದು ಎರಡನೇ ಪ್ರಕರಣದ ಮೇರೆಗೆ ಸಮಸ್ತ ಜನಗಳ ತಿಳುವಳಿಕೆಗಾಗಿ ಪ್ರಕಟಿಸಿದ್ದಾರೆ.

ಜಮೀನಿನ ವಿಷಯದಲ್ಲಿ ಕೋರ್ಟ್ ವ್ಯವಹಾರಗಳಿಗೆ ಅವಕಾಶವಿಲ್ಲದಂತೆ ಮಾಡುವುದು ಅಂತಹ ಮೊಕದ್ದಮೆಗಳನ್ನು ಕೋರ್ಟಿನವರು ಸುಲಭವಾಗಿ ವ್ಯವಸ್ಥೆ ಮಾಡುವಂತೆ ಸೌಕರ್ಯವನ್ನು ಕಲ್ಪಿಸುವ ದಾಸ್ತಾವೇಜುಗಳನ್ನು ಬರೆದು ರಿಜಿಸ್ಟರ್ ಮಾಡಿಸಲು ರೈತರಿಗೆ ತಗುಲುತ್ತಿರುವ ಅನವಶ್ಯಕವಾದ ವೆಚ್ಚವನ್ನು ತಗ್ಗಿಸುವುದು. ಮೋಸ ಮತ್ತು ಸುಳ್ಳು ಹಕ್ಕುಗಳ ಸೃಷ್ಟನೆ, ಇವುಗಳಿಂದುಂಟಾಗುವ ತೊಂದರೆಗಳಿಂದ ರೈತರುಗಳನ್ನು ಪಾರು ಮಾಡುವುದು ಈ ಜಮೀನು ಹಕ್ಕುಗಳ ದಾಖಲಾತಿಯ ಶಿಸ್ತಿನ ಉದ್ದೇಶಗಳಾಗಿವೆ. ಅಷ್ಟೇ ಅಲ್ಲದೆ ನಾನಾ ಹಿಸ್ಸೆದಾರರುಗಳಲ್ಲಿ ಕಂದಾಯಗಳನ್ನು ಹಿಸ್ಸೆವಾರು ಹಂಚಿಕೆ ಮಾಡುವುದು ಕರ್ತವ್ಯ ಮತ್ತು ಜಮೀನು ಅಬಾದಿನ ಸಾಲಗಳನ್ನು ಕೊಡುವುದು, ಜಮೀನು ಕಂದಾಯವನ್ನು ಸ್ವಲ್ಪ ಕಾಲ ವಸೂಲ ಮಾಡದೆ ನಿಲ್ಲಿಸಿರುವುದು, ವಜಾ ಮಾಡುವುದು; ಅಥವಾ ಕಂದಾಯವನ್ನು ಮಾಫಿ ಮಾಡುವುದು ಇದೇ ಮೊದಲಾದ ವಿಷಯಗಳಲ್ಲಿಯೂ ಈ ಜಮೀನು ಹಕ್ಕು ದಾಖಲಾತಿಯು ಶಿಸ್ತಿನಿಂದ ಸರ್ಕಾರಕ್ಕೆ ರೈತರಿಗೂ ಸಹ ಸಹಾಯವಾಗುವುದು. ಜಮೀನು ಹಕ್ಕುಗಳ ದಾಖಲಾತಿಯನ್ನು ಕರಾರುವಕ್ಕಾಗಿ ತಯಾರು ಮಾಡಲು ಅನುಕೂಲವಾಗುವಂತೆ ಶಾನುಭೋಗರು ಮೊಟ್ಟ ಮೊದಲು ತಮ್ಮ ತಿಳುವಳಿಕೆಗೆ ಬಂದಿರುವಷ್ಟರಮಟ್ಟಿಗೂ ಪ್ರಾಥಮಿಕ ರೆಕಾರ್ಡ್ ಒಂದನ್ನು ವಿಧಾಯಕವಾಗಿಸಿ ನಮೂನೆಯಲ್ಲಿ ತಯಾರು ಮಾಡಬೇಕು. ಒಬ್ಬ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಆ ರೆಕಾರ್ಡ್‌ನಲ್ಲಿರುವ ಸಂಗತಿಗಳು ಸರಿಯಾಗಿವೆಯೇ ಎಂಬ ವಿಚಾರದಲ್ಲಿ ಪ್ರತಿಯೊಂದು ಸಂದರ್ಭವನ್ನು ಕ್ರಮವಾಗಿ ವಿಚಾರಿಸಿ ಪರಿಶೀಲನೆ ಮಾಡಬೇಕು. ಆ ತರುವಾಯ ಈ ಪಟ್ಟಿಯನ್ನು ಅಮಲ್ದಾರ್‌ರವರು, ಅಥವಾ ಈ ಬಗ್ಗೆ ಡೆಪ್ಯೂಟಿ ಕಮೀಷನರ್‌ರವರಿಂದ ವಿಶೇಷ ಅಧಿಕಾರ ಕೊಡಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡಬೇಕು. ಮುಂದೆ ಜಮೀನು ಹಕ್ಕುಗಳ ದಾಖಲಾತಿಯ ರಿಜಿಸ್ಟರ್‌ಅನ್ನು ತಯಾರು ಮಾಡುವುದಕ್ಕೆ ಈ ದಾಖಲೆಯೇ ಆಧಾರವಾಗಿರುತ್ತದೆ. ಆದಕಾರಣ ಈ ದಾಖಲೆಯು ಕರಾರುವಕ್ಕಾಗಿರುವಂತೆ ದೃಢಪಡಿಸುವುದಕ್ಕಾಗಿ ಜಮೀನಿನ ಅನುಭವದಾರರು ಜಮೀನಿನಲ್ಲಿ ಹಕ್ಕುಗಳಿರುವ ಇತರರು ಕರಾರುವಕ್ಕಾಗಿ ವಿಚಾರಣೆ ಮಾಡುವ ಅಧಿಕಾರಿಗಳಿಗೆ ತಮ್ಮ ತಿಳುವಳಿಕೆಯಲ್ಲಿರುವ ಎಲ್ಲಾ ವಿವರಗಳನ್ನು ಒದಗಿಸಬೇಕೆಂದು ಕೋರಲಾಗಿದೆ.

ಒಂದು ಜಮೀನಿನ ಹಿಸ್ಸೆಗಳ ಎಲ್ಲೆಯ ಗುರುತಿನ ವಿಷಯಗಳಲ್ಲಿ ವಿವಾದಗಳಿರುವ ಸಂದರ್ಭಗಳಲ್ಲಿ ಸರ್ವೆ ಇಲಾಖೆಯ ಅಧಿಕಾರಿಗಳು ವಿಧಾಯಕವಾದ ನೋಟೀಸ್ ಕೊಟ್ಟು ನಂತರ ಅಂತಹ ಹಿಸ್ಸೆಗಳನ್ನು ಅಳತೆ ಮಾಡುವುದಕ್ಕೂ ಮತ್ತು ವಿಚಾರಣೆಗಳನ್ನು ನಡೆಸುವುದಕ್ಕೂ ಒಂದು ಗ್ರಾಮಕ್ಕೆ ಹೋದಾಗ ಅಂತಹ ಜಮೀನಿನ ಎಲ್ಲಾ ಪ್ರಯೋಜನಾಂಶವುಳ್ಳ ಎಲ್ಲಾ ಜನರು ಈ ಅಧಿಕಾರಿಗಳಿಗೆ ನ್ಯಾಯ ಸಮ್ಮತವಾದ ಎಲ್ಲಾ ಸಹಾಯವನ್ನು ಮಾಡತಕ್ಕದ್ದು. ಜಮೀನು ಹಕ್ಕುಗಳ ದಾಖಲಾತಿಗೆ ಸಂಬಂಧಪಟ್ಟ ರೆಗ್ಯುಲೇಷನ್ನಿನ ಐದನೇ ಪ್ರಕರಣದ ಮೇರೆಗೆ ಈ ಹಿಸ್ಸೆವಾರ್‌ನಾಮೆಯನ್ನು ಸಾದರಪಡಿಸಿದ ಮಾಡಿದ ತಾರೀಖಿನ್ನಾಗಲಿ

ಅಥವಾ ಆರು ತಿಂಗಳ ನಂತರ ಜಮೀನಿಗೆ ಸಂಬಂಧಪಟ್ಟ ಎಲ್ಲಾ ತರಹ ಹಕ್ಕುಗಳ ಸಂಪಾದನೆಯನ್ನು ಜನರು ಸರ್ಕಾರಕ್ಕೆ ವರದಿ ಮಾಡಬೇಕು. ಈ ರೆಗ್ಯುಲೇಷನ್ನಿನ ಏಳನೇ ಪ್ರಕರಣದ ಮೇರೆಗೆ ಹಕ್ಕುಗಳ ದಾಖಲಾತಿಯನ್ನು ಶೇಖರಿಸುವ ಮತ್ತು ತಿದ್ದುಪಡಿ ಮಾಡುವ ಕೆಲಸದಲ್ಲಿ ನೇಮಕವಾಗಿರುವ ಒಬ್ಬ ರೆವಿನ್ಯೂ ಅಧಿಕಾರಿ ದಾಖಲಾತಿಯನ್ನು ಬರೆದಿಡುವುದಕ್ಕೆ ಅಥವಾ ತಿದ್ದುಪಡಿ ಮಾಡುವುದಕ್ಕೆ ಬೇಕಾದ ಸಮಾಚಾರವನ್ನು ಮತ್ತು ದಸ್ತಾವೇಜು ವನ್ನು ಒದಗಿಸುವಂತೆ ಅಥವಾ ಹಾಜರು ಮಾಡುವಂತೆ ಕೇಳಿದಾಗ, ಕೇಳಿದ ತಾರೀಖಿನಿಂದ ಒಂದು ತಿಂಗಳೊಳಗಾಗಿ ಜನರು ಸದರಿ ಅಧಿಕಾರಿಯವರಿಗೆ ಸಮಾಚಾರವನ್ನು ಮತ್ತು ದಸ್ತಾವೇಜುಗಳನ್ನು ಒದಗಿಸಬೇಕು. ಈ ಕಾರಣಗಳಿಂದ ರೆಗ್ಯುಲೇಷನ್ನಿನ ಐದನೇ ಮತ್ತು ಏಳನೇ ಪ್ರಕರಣಗಳ ನಿಯಮಗಳಿಗೆ ಜನರು ಗಮನಕೊಟ್ಟು ಅವಶ್ಯಕ್ಕನುಸಾರವಾಗಿ ವರ್ತಿಸಬೇಕು. ಹೀಗೆ ಮಾಡಲು ತಪ್ಪಿದ ಮತ್ತು ತಮ್ಮ ಹಕ್ಕುಗಳನ್ನು ರಿಜಿಸ್ಟರ್ ಮಾಡಿಸಲು ತಪ್ಪಿದ ಜಮೀನು ಹಿಡುವಳಿದಾರರು ಮತ್ತು ಜಮೀನಿನಲ್ಲಿ ಪ್ರಯೋಜ ನಾಂಶವುಳ್ಳವರು ಐದು ರೂಪಾಯಿಗಳಿಗೆ ಮೀರದಂತೆ ಜುಲುಮಾನೆಗೆ ಗುರಿಯಾಗಬೇಕಾಗುವುದು.

ಈ ಜುಲುಮಾನೆ ಮೊಬಲಗನ್ನು ಕಂದಾಯದ ಬಾಕಿಯಂತೆ ವಸೂಲು ಮಾಡಲಾಗುವುದು. ಅಲ್ಲದೆ ಈವರೆಗೆ ಈ ಮೇಲೆ ನಮೂದಿಸಿರುವಂತಹ ನಾನಾ ಪ್ರಯೋಜನಗಳು ತಪ್ಪಿ ಹೋಗುವುದು. ರೆವಿನ್ಯೂ ಅಧಿಕಾರಿಗಳ ಕೋರಿಕೆಯ ಮೇರೆಗೆ ಯಾವ ಅಧಿಕಾರಿಗೆ ಸಮಾಚಾರವು ಒದಗಿಸಲ್ಪಡುವುದೋ ಅಥವಾ ದಸ್ತಾವೇಜುಗಳು ಯಾವ ಅಧಿಕಾರಿಗಳಲ್ಲಿ ಹಾಜರು ಮಾಡಲ್ಪಡುವುದೋ ಆ ಅಧಿಕಾರಿಯು ಸಮಾಚಾರವನ್ನು ಒದಗಿಸಿದ ಅಥವಾ ದಸ್ತಾವೇಜು ಹಾಜರಮಾಡಿದ ವ್ಯಕ್ತಿಗೆ ವಿಧಾಯಕವಾದ ನಮೂನೆಯಲ್ಲಿ ಬರಹ ಮೂಲಕವಾದ ರಶೀತಿಯೊಂದನ್ನು ಕೊಡತಕ್ಕದ್ದು. ಆ ಅಧಿಕಾರಿಗಳು ಹೀಗೆ ಹಾಜರು ಮಾಡಲ್ಪಟ್ಟ ದಸ್ತಾವೇಜನ್ನು ವಾಪಾಸು ಮಾಡುವುದಕ್ಕೆ ಮುಂಚಿತವಾಗಿ, ಅ ದಸ್ತಾವೇಜನ್ನು ಹಾಜರು ಮಾಡಿದ ವಿಷಯವನ್ನು ಮತ್ತು ಹಾಜರು ಮಾಡಿದ ತಾರೀಖನ್ನು ದಸ್ತಾವೇಜಿನ ಮೇಲೆ ನಮೂದಿಸಿ ಅದಕ್ಕೆ ತಮ್ಮ ರುಜು ಹಾಕಿ ವಾಪಾಸುಮಾಡತಕ್ಕದ್ದು.

ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಭೂ ಹಿಡುವಳಿಗಳನ್ನು ಬಹಿರಂಗವಾದ ಹರಾಜಿನ ಮೂಲಕ ಮಾರಾಟ ಮಾಡುವ ವ್ಯವಸ್ಥೆಯೂ ಇತ್ತು. ಈ ಅಧಿಕಾರ ಡೆಪ್ಯೂಟಿ ಕಮೀಷನ್ನರಿಗೆ ಮತ್ತು ಅದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗಿತ್ತು. ಅವರು ಒಂದು ನಿಗದಿಯಾದ ಸರ್ಕಾರಿ ಕಿಮ್ಮತ್ತನ್ನು ಗೊತ್ತು ಮಾಡಬಹುದಾಗಿತ್ತು. ಹುಟ್ಟುವಳಿಯ ಅಬಾದಿನಲ್ಲಿ ನಷ್ಟವಾಗು ವಂತೆ ನೋಡಿಕೊಳ್ಳುವ ಉದ್ದೇಶದಿಂದಲೂ ಹರಾಜು ನಡೆಯುವ ವಿಷಯ ಎಲ್ಲರಿಗೂ ಗೊತ್ತಾಗುವಂತೆ ಪ್ರಕಟಿಸುತ್ತಿದ್ದರು. ಹರಾಜನ್ನು ಸಾಕಷ್ಟು ಬಹಿರಂಗವಾಗಿ ನಡೆಸುತ್ತಿದ್ದರು.

ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ೧೯ನೇ ಶತಮಾನದ ಕೊನೆಯ ವೇಳೆಗೆ ಭೂ ಹಿಡುವಳಿಗೆ ಸಂಬಂಧಿಸಿದ ಕಾಯಿದೆಗಳು ಸ್ಪಷ್ಟ ರೂಪತಾಳಿದವು. ೨೦ನೇ ಶತಮಾನದ ಪ್ರಾರಂಭದ ವೇಳೆಗೆ ಭೂ ಹಿಡುವಳಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರ ಎದುರಿನಲ್ಲೇ ಬಗೆ ಹರಿಸಿಕೊಳ್ಳುವ ಒಂದು ವಾತಾವರಣ ನಿರ್ಮಾಣವಾಗಿರುವ ಬಗ್ಗೆ ಮೇಲಿನ ದಾಖಲೆ ಸ್ಪಷ್ಟಪಡಿಸುತ್ತದೆ.

ಈ ಮೇಲಿನ ದಾಖಲೆಯನ್ನನುಸರಿಸಿ ಮೂರು ಹಂತಗಳಲ್ಲಿ ಭೂ ಹಿಡುವಳಿಗಳನ್ನು ೧೯೩೩ರಲ್ಲಿ ಸದರಿ ರಿಜಿಸ್ಟರ್‌ನಲ್ಲಿ ಕ್ರಮಬದ್ಧವಾಗಿ ದಾಖಲು ಮಾಡುತ್ತಿದ್ದರು. ಮೊದಲ ಹಂತದಲ್ಲಿ ಸರ್ಕಾರವು ಕಚ್ಚಾ ರಿಜಿಸ್ಟರ್ ತಯಾರು ಮಾಡುವಾಗ ಗ್ರಾಮಸ್ತರಿಗೆ ತಾಲ್ಲೂಕಿನ ಅಮಲ್ದಾರರವರಿಂದ ನೋಟೀಸ್ ಮೂಲಕ ತಿಳಿಸುತ್ತಿದ್ದರು. ಅದಕ್ಕೆ ಹೊಸದುರ್ಗ ತಾಲ್ಲೂಕಿನ ಒಂದು ಉದಾಹರಣೆಯನ್ನು ಗಮನಿಸಬಹುದು. ಹೊಸದುರ್ಗ ತಾಲ್ಲೂಕು, ಹೊಸದುರ್ಗ ಹೋಬಳಿ ರಿಕಾರ್ಡ್ ಅಪರೇಟರ್ಸ್ ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಂದ ಶ್ರೀರಂಗಾಪುರ ಗ್ರಾಮಸ್ಥರಿಗೆ ತಿಳಿಯಪಡಿಸು ವುದೇನೆಂದರೆ ಈ ತಾಲ್ಲೂಕಿಗೆ ಅರ್. ಅರ್. ಯು. ೫-೬ ಜಮೀನು ಹಕ್ಕುಗಳ ದಾಖಲಾತಿಯ ಸ್ಕೀಮ್ ಗೌರ್ಮೆಂಟ್ ಆರ್ಡರ್ ನಂಬರ್ ೪೫೪೫ ಎಲ್-ಎಸ್. ೩೫।೩೨।೫ ದಿನಾಂಕ - ೯-೧೦, ೧೯೩೩ನೇ ಹುಕುಂ ಪ್ರಕಾರ ಜಾರಿಗೆ ಬಂದಿರುವುದು ಸರಿಯಷ್ಟೆ. ಈ ಹಂತದಲ್ಲಿ ಪಟೇಲರು ಮತ್ತು ಶಾನುಭೋಗರು ತಯಾರಿಸಿದ ಕಚ್ಚಾ ರಿಜಿಸ್ಟರ್‌ನಲ್ಲಿ ಯಾವುದೇ ರೀತಿಯಿಂದ ಲೋಪದೋಪಗಳು ಕಂಡು ಬರದಂತೆ ಗ್ರಾಮಸ್ಥರ ಸಮ್ಮುಖದಲ್ಲಿ ಸ್ಪೆಷಲ್ ರೆವಿನ್ಯೂ ಅಧಿಕಾರಿಗಳು ಓದಿ ವಿವರವನ್ನು ತಿಳಿಸುತ್ತಿದ್ದರು. ಅದೇ ರೀತಿ ಹೊಸದುರ್ಗ ತಾಲ್ಲೂಕ್ ರೆಕಾರ್ಡ್ ಆಪರೇಟರ್ಸ್ ಡೆಪ್ಯುಟಿ ಅಮಲ್ದಾರ್‌ರವರ ಕಛೇರಿಯಿಂದ ಹೊಸದುರ್ಗ ಹೋಬಳಿ ಶ್ರೀರಂಗಾಪುರ ಗ್ರಾಮದ ಜಮೀನುಗಳ ಹಿಡುವಳಿದಾರರುಗಳು ಮತ್ತು ಜಮೀನುಗಳಲ್ಲಿ ಇತರ ವಿಧವಾದ ಹಕ್ಕುಗಳನ್ನು ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಗ್ರಾಮದ ಜಮೀನುಗಳ ಹಕ್ಕಿನ ದಾಖಲೆಯ ಕಚ್ಚಾ ಹಿಸ್ಸೆ ರಿಜಿಸ್ಟರ್ ತಯಾರಾಗಿ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ರವರಿಂದ ಪರಿಶೀಲನೆ ಅಗಿರುವುದನ್ನು ಶ್ರೀ ರಂಗಾಪುರ ಗ್ರಾಮದ ಹನುಮಂತದೇವರ ದೇವಸ್ಥಾನದಲ್ಲಿ ಸ್ಥಳಕ್ಕೆ ಆಗಮಿಸಿ ತಮ್ಮಗಳಲ್ಲಿರುವ ವಿಶಿಷ್ಟ ದಾಖಲಾತಿಗಳ ಸಮೇತ ಹಾಜರಾಗಿ ತಕರಾರುಗಳಿದ್ದಲ್ಲಿ ತಿಳಿಸಬಹುದು. ಇದರಿಂದ ಕಚ್ಚಾ ರಿಜಿಸ್ಟರ್‌ನಲ್ಲಿ ಯಾವುದೇ ರೀತಿಯಾದ ಲೋಪದೋಷಗಳಿದ್ದರೆ ಸ್ಥಳದಲ್ಲೇ ಎಲ್ಲಾ ಗ್ರಾಮಸ್ಥರ ಸಮ್ಮುಖದಲ್ಲಿ ಬಗೆಹರಿಸುತಿದ್ದರು. ಅದರೆ ಇಂದಿನ

ಗ್ರಾಮ ಲೆಕ್ಕಾಧಿಕಾರಿಗಳು ಯಾರದೋ ಭೂ ಹಿಡುವಳಿಗಳನ್ನು ಮತ್ಯಾರದೋ ಹೆಸರಿಗೆ ನೋಂದಣಿ ಮಾಡಿರುವ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಆದರೆ ೧೯೩೩ರಲ್ಲಿ ಈ ರೀತಿಯಾದ ಅಸ್ಪಷ್ಟವಾದ ಭೂ ಹಿಡುವಳಿಗಳ ನೋಂದಣಿಗೆ ಅವಕಾಶವಿರಲಿಲ್ಲ ಎಂಬುದಕ್ಕೆ ಮೇಲಿನ ವಿವರದಿಂದ ನಮಗೆ ಸ್ಪಷ್ಟತೆ ಸಿಗುತ್ತದೆ.

ಅದೇ ರೀತಿ ಸದರಿ ಆರ್ಡ್‌ರ್ ಅನ್ನು ಅನುಸರಿಸಿ ಶಾನುಭೋಗರು ಮತ್ತು ಪಟೇಲರು ತಯಾರಿಸಿದ ಕಚ್ಚಾ ರಿಜಿಸ್ಟರ್‌ನಲ್ಲಿ ದಾಖಲಾಗಿರುವ ಎಲ್ಲಾ ಅಂಶಗಳು ಕರಾರುವಾಕ್ಕಾಗಿರುತ್ತವೆ ಎಂಬುದನ್ನು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಗ್ರಾಮದ ಜನತೆ ಎದುರಿಗೆ ಓದಿ ಹೇಳುವ ಕಾಲದಲ್ಲಿ ಜನರು ಅವರ ತಿಳುವಳಿಕೆಯಲ್ಲಿರುವ ಎಲ್ಲಾ ವಿವರಗಳನ್ನು ಒದಗಿಸಿ ಅವರ ಜಮೀನಿನ ಹಕ್ಕುಬಾಧ್ಯತೆಗಳಾದ ಕ್ರಯವೇ ಭೋಗ್ಯವೇ ಇದೇ ಮೊದಲಾದ ವಿಷಯಗಳನ್ನು ನಿರ್ಧರಿಸಿಕೊಳ್ಳಬಹುದಾಗಿತ್ತು. ತಮ್ಮ ಹಕ್ಕುಬಾಧ್ಯತೆಗಳೆಲ್ಲವೂ ಸರಿಯಾಗಿದೆ ಎಂದು ತಿಳಿದ ನಂತರ ಗ್ರಾಮಸ್ಥರೇ ಒಪ್ಪಿಗೆ ಪತ್ರವನ್ನು ಸರ್ಕಾರಕ್ಕೆ ನೀಡುವ ಕ್ರಮವು ಜಾರಿಯಲ್ಲಿತ್ತು. ಅದರ ವಿವರ ಹೀಗಿದೆ : 'ಶ್ರೀರಂಗಾಪುರ ಗ್ರಾಮದ ಗ್ರಾಮಸ್ಥರು ಬರೆಸಿಕೊಟ್ಟ ಮಹಜುರು ಶ್ರೀರಂಗಾಪುರ ಗ್ರಾಮದ ಬಾಬ್ತು ಈ ಮೊದಲೇ ಗ್ರಾಮಾಧಿಕಾರಿಗಳಿಂದ ತಯಾರಾಗಿದ್ದ ಪ್ರಿಲಿಮಿನರಿ ಹಿಸ್ಸೆ ರಿಕಾರ್ಡ್‌ನ್ನು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಗ್ರಾಮಕ್ಕೆ ಬಂದು ಜಮೀನನ್ನು ಪರಿಶೀಲಿಸಿ ತಾರೀಖು ೧-೯-೧೯೩೩ರಲ್ಲಿ ಸದರಿ ರೆಕಾರ್ಡ್‌ಗಳನ್ನು ನಮ್ಮಗಳ ಸಮಕ್ಷಮ ಈ ಗ್ರಾಮದ ಹನುಮಂತ ದೇವರ ದೇವಸ್ಥಾನದಲ್ಲಿ ಓದಿರುತ್ತಾರೆ. ಅದೆಲ್ಲವೂ ಸರಿಯಾಗಿರುತ್ತದೆ ಎಂಬುದಾಗಿ ಬರೆಸಿಕೊಟ್ಟ ಮಹಜೂರು'.

ಮೇಲಿನ ದಾಖಲೆಯಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಒಂದು ಗ್ರಾಮದ ವಿವಿಧ ಬಗೆಯ ಭೂ ಹಿಡುವಳಿಗಳನ್ನು ಸಕ್ರಮಗೊಳಿಸಿ ಎಲ್ಲಾ ಭೂ ಹಿಡುವಳಿಗಳನ್ನು ನೋಂದಣಿ ಮಾಡಿಕೊಳ್ಳುವುದು ಅವಶ್ಯಕವಾಗಿತ್ತು. ಅಂದಿನ ಭೂ ಕಂದಾಯ ಇಲಾಖೆಯಲ್ಲಿ ಏಜಂಟರಂತೆ ಕಾರ್ಯನಿರ್ವಹಿಸುತ್ತಿದ್ದ ಪಟೇಲರು ಮತ್ತು ಶಾನುಭೋಗರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು, ಈ ಅಧಿಕಾರಿಗಳಿಂದ ಸ್ವಜನ ಪಕ್ಷಪಾತ, ದಬ್ಬಾಳಿಕೆ ಕೆಳಹಂತದ ಜನತೆಗೆ ಹಿಂಸೆ ಕಿರುಕುಳವನ್ನು ಕೊಡದಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯವಾಗಿತ್ತು. ಜೊತೆಗೆ ಸರ್ಕಾರವು ಒಂದು ಗ್ರಾಮದಿಂದ ಸಂಗ್ರಹಿಸಬಹುದಾದ ಭೂ ಕಂದಾಯದ ಆದಾಯವನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿತ್ತು. ಒಂದು ಗ್ರಾಮ ಸಮುದಾಯದಲ್ಲಿರುವ ಒಟ್ಟು ಜನಸಂಖ್ಯೆ, ಸಾಗುವಳಿ ಭೂಮಿ, ಮತ್ತು ಭೂ ರಹಿತ ಕುಶಲಕರ್ಮಿಗಳ ವರ್ಗ ಜಮೀನುದಾರರಲ್ಲೇ ಪ್ರಬಲ ಭೂ ಹಿಡುವಳಿದಾರರು ಮಧ್ಯಂತರ ಮತ್ತು ಸಣ್ಣ ಹಿಡುವಳಿದಾರರ ಬಗ್ಗೆ ಸ್ಪಷ್ಟ ವಿವರ ಸಿಗುತ್ತಿತ್ತು

(ಈ ಲೇಖನವನ್ನು ತಯಾರಿಸಲು ಸಹಕಾರ ನೀಡಿದ ಪ್ರೊ|| ಲಕ್ಷ್ಮಣ್ ತೆಲಗಾವಿ, ಮುಖ್ಯಸ್ಥರು ಮತ್ತು ನನ್ನ ಮಾರ್ಗದರ್ಶಕರಾದ ಡಾ|| ಟಿ. ವಿ. ವಿಜಯ, ಪ್ರವಾಚಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರುಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧ **ಜಮೀನು ಹಕ್ಕುಗಳ ದಾಖಲಾತಿ ಸ್ಕೀಮ್** ಗೌರ್ಮೆಂಟ್ ಆರ್ಡರ್ ನಂ. ೪೫೪೫ ಡೆವಲಪ್‌ಮೆಂಟ್ ಸೆಕ್ರೆಟರಿಯೇಟ್ ನಂಬರ್ ಅರ್. ೪೫೪೫ ಎಲ್. ಎಸ್ ೩೮|೩೨|೫ ಅರ್ ೯-೧೦ನೇಯ ಮಾರ್ಚಿ ೧೯೩೩, ಹೊಸದುರ್ಗ ತಾಲ್ಲೂಕು ಅಧಿಕಾರಿಗಳ ದಾಖಲೆ ವಿಭಾಗ, ಚಿತ್ರದುರ್ಗ ಜಿಲ್ಲೆ.

೨ **ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿಗೆ ಅನುದಾರವಾಗಿ ರಚಿಸಿದ ನಿಬಂಧನೆಗಳು**, ಮೈಸೂರು ಸರ್ಕಾರ ೨೩.೪.೧೯೩೭.

೩ **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ - ೨ (ಮುಖ್ಯ ಸಂಪಾದಕ) ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು-೧೯೮೫.

೪. ಸಿ. ಬಿ. ದಾಂಮ್ಲೆ; **ಲ್ಯಾಂಡ್ ರಿಫಾರಮ್ಸ್ ಅಂಡ್ ಚೇಂಜಿಂಗ ಅಗ್ರೇರಿಯನ್ ರಿಲೇಷನ್ಸ್**, ನವದೆಹಲಿ, ೧೯೯೩.

ಡಾ॥ ಎ. ಕೆ. ಶಾಸ್ತ್ರಿ*

ಶೃಂಗೇರಿ ಮಠದೊಂದಿಗೆ ಹರಪನಹಳ್ಳಿ ಅರಸುಗಳ ಸಂಬಂಧ

ಇಂದಿನ ಚಿಕ್ಕಮಗಳೂರ ಜಿಲ್ಲೆಯಲ್ಲಿ ಶೃಂಗೇರಿ ಮಠವಿದೆ. ಆದಿಶಂಕರಾಚಾರ್ಯರಿಂದ ಪ್ರಾರಂಭಿಸಲ್ಪಟ್ಟ ಈ ಶೃಂಗೇರಿಮಠದ ಗುರುಪರಂಪರೆ ಇಂದಿಗೂ ಅವಿಚ್ಛಿನ್ನವಾಗಿ ಸಾಗಿ ಬಂದಿದೆ. ವಿಜಯನಗರದ ಸಾಮ್ರಾಟರು ಈ ಮಠವನ್ನು ಮತ್ತು ಇಲ್ಲಿಯ ಗುರುಗಳನ್ನು ಅತ್ಯಂತ ಭಕ್ತಿಯಿಂದ ಕಂಡು ಗೌರವಿಸಿದರೆಂಬುದಕ್ಕೆ ಅವರು ಕಾಲಕಾಲಕ್ಕೆ ನೀಡಿದ ಭೂದಾನ ಶಾಸನಗಳೇ ಸಾಕ್ಷಿ. ಹೀಗಾಗಿ, ಈ ಮಠ ವಿಜಯನಗರ ಕಾಲದಲ್ಲಿ ಧರ್ಮ ಸಂಸ್ಥಾನವಾಗಿ ರೂಪುಗೊಂಡಿತ್ತು. ವಿಜಯನಗರ ಪತನಾ ನಂತರವೂ ಕರ್ನಾಟಕದ ಅನೇಕ ಅರಸುಮನೆತನಗಳು ಈ ಮಠವನ್ನು ಗೌರವಿಸಿ, ವಿಜಯನಗರ ಸಾಮ್ರಾಜ್ಯದ ಸತ್‌ಸಂಪ್ರದಾಯವನ್ನು ಮುಂದುವರೆಸಿದರು. ಈ ದಿಶೆಯಲ್ಲಿ, ಕೆಳದಿ ಮತ್ತು ಚಿತ್ರದುರ್ಗದ ನಾಯಕರು, ಮೈಸೂರಿನ ಒಡೆಯರು, ಹೈದರಲಿ ಮತ್ತು ಟೀಪುಸುಲ್ತಾನ, ಮರಾಠಾ ದೊರೆಗಳು ಮತ್ತು ಬ್ರಿಟಿಷ್ ಕಮಿಶನರ್‌ರು ಪ್ರಮುಖರು[೧] ಹರಪನಹಳ್ಳಿಯ ಅರಸುಗಳೂ ಈ ಮಠದ ಗುರುಗಳನ್ನು ಗೌರವಿಸಿ, ಮಠಕ್ಕೆ ಭೂದಾನ ಮಾಡಿ, ಶ್ರೀ ಶಾರದಮ್ಮನವರ ದೇವಸ್ಥಾನದ ಜೀರ್ಣೋದ್ಧಾರ ಇತ್ಯಾದಿ ಕಾರ್ಯಗಳನ್ನು ಮಾಡಿದರು. ಅದಕ್ಕೆ ಸಂಬಂಧಿಸಿದಂತೆ ಈ ಮಠದ ಕಡತಗಳಲ್ಲಿ[೨] ನಾಲ್ಕು ದಾಖಲೆಗಳು[೩] ಲಭ್ಯವಾಗಿವೆ.

ಹರಿಯಪನಹಳ್ಳಿ, ಹಾರಪ್ಪಹಳ್ಳಿ, ಹರುಪ್ಪಹಳ್ಳಿ, ಹರುಪನಹಳ್ಳಿಸೀಮೆ ಎಂಬೆಲ್ಲ ಹೆಸರುಗಳಿಂದ ಉಲ್ಲೇಖವಾದ ಇಂದಿನ ಹರಪನಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿದೆ. ಕ್ರಿ. ಶ. ೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾದ ನಂತರ ಅನೇಕ ಸಣ್ಣಪುಟ್ಟ ಸ್ವತಂತ್ರ ರಾಜ್ಯಗಳು ಉದಯಸಿದವು. ಬಳ್ಳಾರಿ ಪ್ರದೇಶದಲ್ಲಿಯೇ ಬಳ್ಳಾರಿ, ಸೊಂಡೂರು, ಗುಡೇಕೋಟೆ, ಜರಮಲಿ ಮತ್ತು ಹರಪನಹಳ್ಳಿ ಎಂಬ ಸಂಸ್ಥಾನಗಳು ಉದಯಿಸಿದವು. ದಾದಯ್ಯನಾಯಕ (ದಾದೇನಾಯಕ)ನಿಂದ ಕ್ರಿ. ಶ. ೧೫೬೫ರಲ್ಲಿ ಪ್ರಾರಂಭವಾದ ಹರಪನಹಳ್ಳಿ ಪಾಳೆಯಗಾರರ ಮನೆತನ ಇಮ್ಮಡಿ ಸೋಮಶೇಖರನ ಕಾಲ (ಕ್ರಿ. ಶ. ೧೭೮೭-೧೭೯೯)ದ ವರೆಗೂ ಮುಂದುವರೆದು, ನಂತರ ಬ್ರಿಟಿಷ್ ಆಧಿಪತ್ಯಕ್ಕೆ ಒಳಪಟ್ಟಿತು. ಹರಪನಹಳ್ಳಿಯಲ್ಲಿ ಆಳಿದ ಒಟ್ಟು ಹದಿನಾರು ಪಾಳೆಯಗಾರರನ್ನು ಚಾರಿತ್ರಿಕ ದಾಖಲೆಗಳ ಆಧಾರದಿಂದ ಗುರುತಿಸಬಹುದಾಗಿದೆ. ಈ ಮನೆತನದಲ್ಲಿ ಪಾಳೆಯಗಾರಿಕೆ ನಡೆಸಿದ ಏಕೈಕ ಮಹಿಳೆ - ಹರಿಯಮ್ಮಾಜಿ ನಾಗತಿ (ಕ್ರಿ. ಶ. ೧೭೧೬- ೧೭೨೧).[೪] ಈ ಸ್ಥೂಲ ಹಿನ್ನೆಲೆಯಲ್ಲಿ ಪ್ರಸ್ತುತ, *ಶೃಂಗೇರಿ ಮಠದೊಂದಿಗೆ ಹರಪನಹಳ್ಳಿ ಅರಸುಗಳ ಸಂಬಂಧ* ಎಂಬ ವಿಷಯದ ಮೇಲೆ ಬೆಳಕು ಬೀರುವ ಶೃಂಗೇರಿ ಮಠದ ಕಡತಗಳಲ್ಲಿ ಉಲ್ಲೇಖಗೊಂಡ ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸೋಣ.

ದೊರೆತ ಒಟ್ಟೂ ನಾಲ್ಕು ದಾಖಲೆಗಳಲ್ಲಿ ಬಸವಪ್ಪ ನಾಯಕರ ಸೋಮಶೇಖರನಾಯಕರ ಕಾಲ (ಕ್ರಿ. ಶ. ೧೭೬೮-೧೧೮೭)ಕ್ಕೆ ಸೇರಿದ್ದು ಒಂದು ಮತ್ತು ಇನ್ನುಳಿದ ಮೂರು, ಸೋಮಶೇಖರ ನಾಯಕರ ಬಸವಪ್ಪನಾಯಕರ ಕಾಲ (ಇಮ್ಮಡಿ ಸೋಮಶೇಖರ ನಾಯಕ: ಕ್ರಿ. ಶ. ೧೭೮೭-೧೭೯೯)ಕ್ಕೆ ಸೇರಿದವುಗಳು.

ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳು[೫] (ಕ್ರಿ.ಶ. ೧೭೪೧-೧೭೬೮) ಕಳುಹಿಸಿದ *ಶಿವಸ್ಮರಣೆಪೂರ್ವಕ ಪತ್ರಿಕೆ, ಉಡುಗೊರೆ, ವಿಭೂತಿ ಮತ್ತು ವ್ಯಾಸಾಕ್ಷತೆ* ತನಗೆ ತಲುಪಿ ಸಂತೋಷವಾಗಿರುವದಾಗಿ ಮತ್ತು ಶ್ರೀಗಳವರಿಂದ ಆಶೀರ್ವಾದ ಪತ್ರಿಕೆ ತಂದ ಅನಂತನಾರಾಯಣದೀಕ್ಷಿತ ಸುಬಾಪಂತನ ಸಂಗಡ ಉಡುಗೊರೆಯನ್ನು ತಾನು ಕಳಿಸಿರುವದಾಗಿ, ಬಾಗಳಿ ಬಸವಪ್ಪನಾಯಕರ ಸೋಮಶೇಖರ ನಾಯಕರು ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಗೆ ಬರೆದ ಬಿನ್ನವತ್ತಳೆಯಿಂದ ವಿದಿತವಾಗುತ್ತದೆ. ತಮ್ಮ ರಾಜ್ಯದಲ್ಲಿ ಯಾರು ಬಂದು

* ಟಿ. ಎಸ್. ಎಸ್. ರೈಸ್ ಮಿಲ್ ಕೆಳಗೆ, ಶಿರಸಿ (ಉ. ಕ.) ೫೮೧ ೪೦೨.

ಪ್ರವರ್ತಿಸಿದಾಗ್ಯೂ, ಶೃಂಗೇರಿ ಪೀಠದ ಹೆಸರು ಹೇಳಿಕೊಂಡು, ಶ್ರೀಗಳವರ ಹೆಸರಿನ ಮೇಲೆ ರಾಜ್ಯಭಾರ ನಡೆಸಿಬರುವದೇ ಸರಿ ಎಂಬ ಅಂಶವನ್ನೂ ನಾಯಕನು ಬಿನ್ನವತ್ತಳೆಯಲ್ಲಿ ಉಲ್ಲೇಖಿಸಿರುವದು ಗಮನಾರ್ಹವಾಗಿದೆ. ಹೀಗಾಗಿ, ಶೃಂಗೇರಿ ಮಠಕ್ಕೆ ಸಂಬಂಧಿಸಿದ ಹರಪನಹಳ್ಳಿಯ ಎಲ್ಲ ಪಾಳೆಯಗಾರರ ದಾಖಲೆಗಳು ಲಭ್ಯವಿಲ್ಲದಿದ್ದರೂ, ಸಾಮಾನ್ಯವಾಗಿ ಹರಪನಹಳ್ಳಿಯ ಪಾಳೆಯಗಾರರೆಲ್ಲ ಶೃಂಗೇರಿಮಠ ಮತ್ತು ಅಲ್ಲಿಯ ಗುರುಗಳನ್ನು ಗೌರವಿಸುತ್ತಿದ್ದರೆಂಬುದು ಮೇಲ್ಕಾಣಿಸಿದ ದಾಖಲೆಯಿಂದ ಸ್ಪಷ್ಟವಾಗುತ್ತದೆ. ಶೃಂಗೇರಿಯ ಶಾರದಾ ಗುರುಪೀಠ ಅನಾದಿಯಿಂದ ಪ್ರಸಿದ್ಧವಾಗಿರುವ ಮತ್ತು ಶ್ರೀ ಶಾರದಮ್ಮನವರ ನವರಾತ್ರೆ ಮಹೋತ್ಸವ ಕುರಿತ ಅಂಶಗಳೂ ಬಿನ್ನವತ್ತಳೆಯಲ್ಲಿವೆ. ಶೃಂಗೇರಿಗೆ ಸಂಬಂಧಿಸಿದ ಒಟ್ಟೂ ನಾಲ್ಕು ದಾಖಲೆಗಳಲ್ಲಿ ಮೇಲ್ಕಾಣಿಸಿದ ದಾಖಲೆಯೊಂದರಲ್ಲಿ ಮಾತ್ರ ಶೃಂಗೇರಿ ಗುರುಗಳ ಸಕಲ ಬಿರುದಾವಳಿಗಳನ್ನು ಉಲ್ಲೇಖಿಸಲಾಗಿದೆ. ಬಿರುದಾವಳಿಗಳು ಇಂತಿವೆ:

"ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರಿಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯಾನಾದ್ಯವಿಛಿಂನ ಗುರುಪರಂಪರಾ ಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರ ಆದಿ ರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜ ಗುರು ಭೂಮಂಡಲಾಚಾರ್ಯ ಋಶ್ಯಶೃಂಗಪುರವರಾಧೀಶ್ವರ ತುಂಗಭದ್ರಾತೀರವಾಸ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀ ಸಚ್ಚಿದಾನಂದ ಭಾರತ್ತಿ ಸ್ವಾಮಿ ಗುರುಕರಕಮಲ ಸಂಜಾತರಾದ ಶ್ರುಂಗೇರಿ ಶ್ರೀಮದಭಿನವ ಸಚ್ಚಿದಾನಂದ ಭಾರತ್ತಿಸ್ವಾಮಿಗಳವರಿಗೆ..."

'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಸವಪ್ಪ ನಾಯಕರ ಬಿರುದನ್ನೂ ಬಿನ್ನವತ್ತಳೆಯಲ್ಲಿ ನಮೂದಿಸಲಾಗಿದೆ.

ಇನ್ನುಳಿದ ಮೂರು ದಾಖಲೆಗಳು ಇಮ್ಮಡಿ ಸೋಮಶೇಖರ ನಾಯಕರು ಶೃಂಗೇರಿ ಮಠದೊಂದಿಗೆ ಇರಿಸಿಕೊಂಡ ಸಂಬಂಧವನ್ನು ಸೂಚಿಸುತ್ತವೆ. ಶಾಲಿವಾಹನ ಶಕ ವರ್ಷ ೧೭೦೭ (ಕ್ರಿ. ಶ. ೧೭೮೬)ನೆಯ, ವಿಶ್ವಾವಸು ಸಂವತ್ಸರದ ಮಾರ್ಗಶಿರ ಶುದ್ಧ ೭ರಂದು, ಶ್ರೀ ಮಹಾನುಭಾವ ನಾಯಕಾಚಾರ್ಯ, ಭಾಷೆಗೆ ತಪ್ಪುವ ನಾಯಕರಗಂಡ, ಮಾರಾಂತಗೆಲ್ವ, ಬಾಗಳಿ ಸೋಮಶೇಖರ ನಾಯಕರ ಬಸವಪ್ಪನಾಯಕರು, ತಮ್ಮ ಸಂಸ್ಥಾನಕ್ಕೆ ಕಲ್ಯಾಣವಾಗಲೆಂದು, ಶ್ರೀ ಶಾರದಾ ಮತ್ತು ಶ್ರೀ ಚಂದ್ರಮೌಳೀಶ್ವರ ದೇವರ ದೀಪಾರಾಧನೆ ಮತ್ತು ದೇವಸ್ಥಾನದ ಸೇವೆ ಸರಿಯಾಗಿ ನಡೆಯುವ ಬಗ್ಗೆ, ಕೊಗಳಿ ವೆಂಟ್ಯಕ್ಕೆ ಸಲ್ಲುವ, ಕೊಟೂರು ಸೀಮೆಯೊಳಗಿನ ಕುಂಚುರ ಪಟರಿ ಹರಿಹೆಬಳಿಯೊಳಗಿನ ಬಸವಾಪುರ ಗ್ರಾಮವನ್ನು ಸರ್ವಮಾನ್ಯವಾಗಿ ಶೃಂಗೇರಿಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರಿಗೆ ನೀಡಿದರು. "**ಹರಪನಹಳ್ಳಿ ಅರಸುಗಳು। ತಂಮ ಹೆಸರಲ್ಲು। ಅಂಮನವರ ಸಂನಿಧಿಯಲ್ಲು। ನಡವ ಧರ್ಮದ ಬಗ್ಯೆ। ಬಿಟ್ಟ ಗ್ರಾಮದ ಸಾಧನ ಪ್ರತಿ**" ಎಂಬುದಾಗಿ ದಾನಪಟ್ಟೆಯ ಪ್ರಾರಂಭದಲ್ಲಿ ನಮೂದಿಸಲಾಗಿದೆ. *ಸರ್ವಮಾನ್ಯವಾಗಿ ಬಿಟ್ಟ ಬಸವಾಪುರ ಗ್ರಾಮದ ನಿಧಿ (ಸಂಪತ್ತು), ನಿಕ್ಷೇಪ (ಗುಪ್ತಧನ), ಜಲ (ಬಾವಿ, ಕೆರೆ, ಸರೋವರಗಳಲ್ಲಿ ನಿಂತಿದ್ದು), ತರು (ದೇವೋಪಯೋಗಿ ವೃಕ್ಷ), ಪಾಷಾಣ (೧. ಕಲ್ಲು; ಬಂಡೆ; ೨. ಔಷಧಿ ರೂಪದ ವಿಷ), ಅಕ್ಷಿಣಿ (ಕಣ್ಣಿಗೆ ಕಾಣುವ ಸಂಪತ್ತು), ಆಗಾಮಿ (ಭವಿಷ್ಯದಲ್ಲಿ ಬೆಳೆಯಬಹುದಾದ ಸಂಪತ್ತು), ಸಿದ್ಧ (ನೈಸರ್ಗಿಕವಾಗಿ ಹುಟ್ಟಿದ್ದು), ಸಾಧ್ಯ (ಪ್ರಯತ್ನಪೂರ್ವಕವಾಗಿ ಮಾಡಿದ್ದು)ಂಗಳೆಂಬ* ಅಷ್ಟಭೋಗ *ತೇಜಸ್ವಾಮ್ಯ (ಕೀರ್ತಿಯುತ ಮತ್ತು ಸತ್ವಯುತ ಒಡೆತನ)* ಮತ್ತು *ಸಕಲೋತ್ಪತ್ಯವನ್ನು* ಆಗುಮಾಡಿಕೊಂಡು, ಸುಖದಲ್ಲಿ ಅನುಭವಿಸಿಕೊಂಡು, ಶ್ರೀ ದೇವತಾ ದೀಪಾರಾಧನೆ ಮತ್ತು ದೇವಸ್ಥಾನದ ಧರ್ಮವನ್ನು ಚಿರಕಾಲ ನಡೆಸಿಕೊಂಡು ಬರುವಂತೆ ಶ್ರೀಗಳವರಿಗೆ ಬರೆಸಿಕೊಟ್ಟ ಭೂಸ್ವಾಸ್ಥ್ಯ ಸರ್ವಮಾನ್ಯ ಗ್ರಾಮದಾನಪಟ್ಟೆ, ಎಂಬುದಾಗಿ ದಾನಪಟ್ಟೆಯಲ್ಲಿ ಕಾಣಿಸಲಾಗಿದೆ. ಸಾಮಾನ್ಯವಾಗಿ, ಇನ್ನುಳಿದ ಶಾಸನಗಳ ಅಂತ್ಯದಲ್ಲಿ ಸಾಕ್ಷಿಗ್ರಂಥಗಳಿರುವಂತೆ, ಪ್ರಸ್ತುತ ಸಾಧನದ ಅಂತ್ಯದಲ್ಲೂ, "ಸ್ವದದ್ಯುಗಣಂ ಪುಣ್ಯಂ" ಮತ್ತು "ದಾನಪಾಲನಯೋರ್ಮಧ್ಯೇ ದಾನಾಚ್ಛ್ರೇಯೋನು ಪಾಲನಮ್ ದಾನಾತ್ ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಮ್॥[೭] [ದಾನ ಹಾಗೂ ರಕ್ಷಣೆ, ಇವುಗಳಲ್ಲಿ ದಾನಕ್ಕಿಂತ ರಕ್ಷಣೆ ಮೇಲು ದಾನದಿಂದ ಸ್ವರ್ಗವನ್ನು ಪಡೆಯುತ್ತಾನೆ; ರಕ್ಷಣೆಯಿಂದ ಶಾಶ್ವತವಾದ (ನಾಶವಿಲ್ಲದ) ಪದವಿಯನ್ನು ಪಡೆಯುತ್ತಾನೆ.]

ಅದೇ ವಿಶ್ವಾವಸು ಸಂವತ್ಸರದ ಮಾರ್ಗಶಿರ ಶು. ೭ರಂದು, ಶೃಂಗೇರಿ ಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳಿಗೆ[೮] ಸರ್ವಮಾನ್ಯವಾಗಿ ಬಿಟ್ಟ ಬಸವಾಪುರ ಗ್ರಾಮಕ್ಕೆ ಸಂಬಂಧಿಸಿ, ತೋರಣ ಕಟ್ಟಿಕೊಟ್ಟು ಹೇಳಿದ ಪ್ರಕಾರ ನಡೆದುಕೊಳ್ಳುವಂತೆ, ಬಾಗಳಿ ಸೋಮಶೇಖರ ನಾಯಕರು ಬಸವಪ್ಪ ನಾಯಕರೈಯನವರು ಹರುವೆ ಬಳಿಯ ಬಸವಾಪುರದ ಗೌಡಸೇನಬಾಗಗೆ ಆಜ್ಞಾಪಿಸಿದರು[೯].

ಶ್ರೀ ಶಾರದಾಮ್ಮನವರ ಸೇವೆ ಸಾಂಗವಾಗಿ ನಡೆಯಲೆಂದು ಬಸವಾಪುರ ಗ್ರಾಮವನ್ನು ಗೊತ್ತುಮಾಡಿಸಿ, ಬಸವಾಪುರ ಗ್ರಾಮದ ಉತ್ಪತ್ತಿಹಣ, ಹರಪನಹಳ್ಳಿ ನಾಣ್ಯ ೫೦ ಗದ್ಯಾಣಗಳನ್ನು ಶ್ರೀ ಶಾರದಾಂಬಾ ದೇವಸ್ಥಾನದ ಪ್ರಾಕಾರದ ಜೀರ್ಣೋದ್ಧಾರಕ್ಕಾಗಿ ಸೋಮಶೇಖರ ನಾಯಕರು ಶೃಂಗೇರಿಯ ಸ್ವಾಮಿಗಳಿಗೆ ನೀಡಿದ್ದಕ್ಕೆ ಸಂಬಂಧಿಸಿ, ಶೃಂಗೇರಿ ಮಠದ ಕಡತವೊಂದರಲ್ಲಿಯ ಬಿನ್ನವತ್ತಳೆಯಿಂದ ತಿಳಿದುಬರುತ್ತದೆ. ಬಿನ್ನವತ್ತಳೆಯ ಕೆಲವು ಮಹತ್ವದ ವಾಕ್ಯಗಳು ಇಂತಿವೆ:

"...... ದೊಡ್ಡ ಬಿರವಾವಳಿ ಬರದು। ಶ್ರೀ ಮನ್ನ

ಮಹಾನಾಯಕಾಚಾರ್ಯರಾದ। ಬಾಗಳಿ ಸೋಮಶೇಖರ ನಾಯಕರ ಬಸವಪ್ಪನಾಯಕರವರು ಮಾಡುವ ಬಿಂನಹಾ। ನಾಲು ಯೀ ಮಾರ್ಗಶಿರ ಶು ೯ ವರ್ರಿಗೆ। ಪರ್ರಿಣಾಮದಲ್ಲು ಯಿದೆವೆ। ತಂಮ ನಿಜಾನಂದ। ವೈಭವಾತ್ತಿಶಯಗಳಿಗನವರತ್ತಲು ಬರಶಿ ಕಳುಹಿಸು ರ್ರಿತ್ತಿ ಮಾಡ್ಡಿಸಬೇಕು। ತ್ತರುವಾಯ। ಶ್ರೀ ಶಾರದಾಂಮನವರ। ದೆವಸ್ತಾನದ। ಪ್ರಾಕಾರ ಜಿರ್ನೊರ್ಧಾರ ಮಾಡ್ಡಿಸುವ ನಿಮಿತ್ತ। ಆಗತ್ತಕ್ಕ ಸೆವೆ ಬಗ್ಯೆ। ವೆಂಕಟಶಾಸ್ತ್ರಿಯಂನ್ನು ಕಳುಹಿಸಿಕೊಟಿಧಿತ್ತೆ। ವಿಸ್ತರ್ರಿಸಲಾಗಿ। ಅಭಿಪ್ರಾಯವಂನ್ನು ಅಂತ್ತಃಕರಣಕೆ ತ್ತಂದು। ಯೀ ಜಿರ್ನೊರ್ಧಾರದ ಬಗ್ಯೆ ಆಗತ್ತಕ್ಕ। ಸಾನ್ನುಕೂಲವ ಮಾಡ್ಡಿಸಿ ಶಾಶ್ವತ್ತ ಧರ್ಮ ನಡವಂತ್ತೆ ಮಾಡ್ಡಸಬೇಕೆಂಬ ಹಾಗೆ। ಬರಶಿ ಕಳುಹಿ ಲಿಖಿತ್ತದಿಂದಲ್ಲು। ವೆಂಕಟಶಾಸ್ತ್ರಿ ವಿಸ್ತರಿಸಿದ್ರಿಂದ। ಅಭಿಪ್ರಾಯ ತ್ತಿಳದು। ಸಂತೊಷಿತ್ತರಾದೆಲು। ಕಳುಹಿಸಿದಂಥಾ ಪ್ರಸಾದ ಮಂತ್ರಾಕ್ಷತ್ತೆ ಉಡಗರೆ ಸಹಾ ತೆಗದುಕೊಂಡದಾಯಿತ್ತು। ಯಿದೆನಿವರು। ಸಂಸ್ಥಾನದ। ಶ್ರೆಯೊಭಿಉ್ರಧಿಗೆ ಕಾರಣವಲ್ಲದೆ। ಯಿತ್ತರಲಿಲ್ಲ। ತ್ತದಾನ್ನುಸಾರ ತ್ತಾಉ ಬರಶಿ ಕಳುಹಿಸ್ತ ಪ್ರಕಾರಕ್ಕೆ ಶ್ರೀ ಅಂಮನವರ। ಸೆವೆ। ಸಾಂಗವಾಗಿ ನಡವ ಬಗ್ಯೆ ಬಸಾಪುರದ ಗ್ರಾಮವಂನ್ನು ಗೊತ್ತುಮಾಡ್ಡಿಸಿಕೊಟು। ಯಿತ್ಯಾದಿ ವಿವರಗಳಂನ್ನು ವೆಂಕಟಶಾಸ್ತ್ರಿಗಳ ಸಂಗಡ ಹೆಳಿ ತ್ತಮಗೆ ವಸ್ತ್ರವಂನ್ನು ಕೊಟುಕಳುಹಿಸಿಯಿರೆತ್ತೆ। ತ್ತೆಗದುಕೊಂಬಂತ್ತೆ ಮಾಡ್ಡಿಸಬೇಕು। ಮೇಲಾದ ವಿವರವಂನ್ನು ವೆಂಕಟಶಾಸ್ತ್ರಿಯು ವಿವರಿಸಿದರ್ರಿಂದ। ಅಂತ್ತರ್ಯಕೆ। ಬಂದಿತ್ತಾಗಿ। ಯಿಾ ವಿಶ್ವಾವಸು ಸಂ।ರದ।ಗ್ರಾಮದ ಉತ್ತ್ಪತ್ಯದ ಹಣ। ಹರಪನಹಳ್ಳಿ ನಾಂಣ್ಯ ೧೫೦ ಅಯಿವತ್ತು ವರಹಾಂನ್ನು ಕೊಟುಕಳುಹಿಸಿಯಿಧೆತ್ತೆ। ಪರಾಂಬರ್ರಿಸುವಂತ್ತೆ ಮಾಡಿಸಬೇಕು.....'[೧೦]

ಬಿನ್ನವತ್ತಳೆಯ ಕೊನೆಯಲ್ಲಿ, ಅಲ್ಲಿ ಬದುಕು ಮಾಡುವವರಾದ ಹರಪುರದ ಸುಭೇದಾರ ನರಸಪ, ಪಾರುಪತ್ಯಗಾರ ಗೋವಿಂದಪ್ಪ, ಹರಪುರದ ಮುದ್ದೋಪಂತ, ಹಂಪರಸ್ಯಯ, ಅರಶಿಕೆರೆ ಮಲುಕಪ್ಪ, ಭೀಮಪ್ಪ, ಅನ್ನದಾನಿ ಸೆಟ್ಟರು, ವಿಠಲದಾಸ, ರಾಘವೇಂದ್ರನಾಯಕ ಮತ್ತು ಗುತ್ತಳದ ದೇಸಾಯಿ ಹನುಮಂತಗೌಡ ಎಂಬ ಹತ್ತು ಜನರ ಬಿನ್ನವತ್ತಳೆಗಳು ಎಂದು ಉಲ್ಲೇಖಿಸಲಾಗಿದೆ.

ಒಟ್ಟಿನಲ್ಲಿ, ಶೃಂಗೇರಿ ಮಠದೊಂದಿಗೆ ಹರಪನಹಳ್ಳಿ ಅರಸುಗಳು ಇರಿಸಿಕೊಂಡ ಭಕ್ತಿ ಮತ್ತು ಗೌರವಯುತ ಸಂಬಂಧವನ್ನರಿಯಲು, ಶೃಂಗೇರಿ ಮಠದ ಕಡತಗಳಲ್ಲಿ ದೊರಕಿದ ಮೇಲ್ಕಾಣಿಸಿದ ಚಾರಿತ್ರಿಕ ದಾಖಲೆಗಳು ಪ್ರಯೋಜನಕಾರಿಯಾಗಿವೆ. ಶೃಂಗೇರಿ ಜಗದ್ಗುರುಗಳ ಮತ್ತು ಹರಪನಹಳ್ಳಿ ಅರಸುಗಳ ಬಿರುದಾವಳಿಗಳು, ಶೃಂಗೇರಿ ಮಠದಿಂದ ಶಿವಸ್ಮರಣೆ ಪೂರ್ವಕ ಆಶೀರ್ವಾದ ಪತ್ರಿಕೆ, ಉಡುಗೊರೆ, ವಿಭೂತಿ, ವ್ಯಾಸಾಕ್ಷತೆ, ಇವುಗಳನ್ನು ಹರಪನಹಳ್ಳಿ ನಾಯಕರು ಸ್ವೀಕರಿಸಿದ ಸಮಾಚಾರ, ಶೃಂಗೇರಿ ಪೀಠದ ಹೆಸರು ಹೇಳಿಕೊಂಡು ರಾಜ್ಯಭಾರ ನಡೆಸಿರುವ ವಿಷಯ, ನಾಯಕರಿಂದ ಶ್ರೀಗಳವರಿಗೆ ಉಡುಗೊರೆ, ಶೃಂಗೇರಿ ಶ್ರೀ ಶಾರದಾಂಬೆಯ ನವರಾತ್ರ ಮಹೋತ್ಸವ, ಶ್ರೀ ಶಾರದಾ ಮತ್ತು ಚಂದ್ರಮೌಳೀಶ್ವರ ದೇವರ ದೀಪಾರಾಧನೆ, ಬಸವಾಪುರ ಗ್ರಾಮವನ್ನು ಸರ್ವಮಾನ್ಯವಾಗಿ ಶೃಂಗೇರಿಮಠಕ್ಕೆ ನೀಡಿದ ದತ್ತಿ ಗ್ರಾಮದತ್ತಿಗೆ ಸಂಬಂಧಿಸಿ ತೋರಣ ಕಟ್ಟಿಕೊಡುವಂತೆ ಬಸವಾಪುರದ ಗೌಡಸೇನಬಾಗಗೆ ಸೋಮಶೇಖರನಾಯಕರ ಓಲೆ, ಶ್ರೀ ಶಾರದಾಂಬಾ ದೇವಸ್ಥಾನದ ಪ್ರಾಕಾರದ ಜೀರ್ಣೋದ್ಧಾರಕ್ಕಾಗಿ ಸೋಮಶೇಖರ ನಾಯಕರಿಂದ ೫೦ ಗದ್ಯಾಣಗಳ ಕೊಡುಗೆ, ಬಸವಾಪುರ ಗ್ರಾಮದಲ್ಲಿ ಬದಕು ಮಾಡುವವರ ಬಿನ್ನವತ್ತಳೆಗಳು, ಇತ್ಯಾದಿ ವಿಷಯಗಳ ಮೇಲೆ, ಉಲ್ಲೇಖಿತ ದಾಖಲೆಗಳು ಬೆಳಕು ಬೀರುತ್ತವೆ. ಕರ್ನಾಟಕದ ಪ್ರಾದೇಶಿಕ ಚರಿತ್ರೆಯ ತುಟಿತ ಕೆಲವು ಕೊಂಡಿಗಳನ್ನು ಪುನಹ ಕೂಡಿಸಲು ಇಂಥ ಚಾರಿತ್ರಿಕ ದಾಖಲೆಗಳು ಮಹತ್ವದ್ದಾಗಿವೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಹೆಚ್ಚಿನ ಮಾಹಿತಿಗಾಗಿ ಲೇಖಕರ '**ಶೃಂಗೇರಿ ಧರ್ಮಸಂಸ್ಥಾನ**', ಶೃಂಗೇರಿ ಮಠ, ೧೯೮೩, ಮತ್ತು '**ಎ ಹಿಸ್ಟೋರಿ ಆಫ್ ಶೃಂಗೇರಿ**', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨, ನೋಡಿರಿ.

*೨. ಉದ್ದನೆಯ ಬಟ್ಟೆಗೆ ಅಂಟುಮಿಶ್ರಿತ ಹುಣಸೆಪುಡಿಯನ್ನು ಹಚ್ಚಿ, ಗಾರೆಗಲ್ಲಿನಿಂದ ತಿಕ್ಕಿ, ಕಾಡಿಗೆ ಲೇಪಿಸಿ, ಒಣಗಿಸಿ, ನಂತರ ಪುಸ್ತಕ ರೂಪದಲ್ಲಿ ಮಡಿಚಿ, ಆ ಹಾಳೆಗಳ ಮೇಲೆ ಸೀಸದಂಥ ಬಳಪದ ಕಲ್ಲಿನಿಂದ ಬರೆಯಲಾಗುತ್ತಿತ್ತು. ಇಂಥ ಪುಸ್ತಕವೇ ಕಡತ. ಹೆಚ್ಚಿನ ಮಾಹಿತಿಗಾಗಿ, ಲೇಖಕರ '**ಕನ್ನಡದಲ್ಲಿ ಕಡತಗಳು**', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೭, ನೋಡಿರಿ.

*೩. ಕ. (ಕಡತ) ೨೫, ದಾ (ದಾಖಲೆ) ೪೬; ಕ. ೨೭, ದಾ. ೪೩, ೪೩ಎ; ಕ. ೬೬, ದಾ. ೬೩.

*೪. ಹೆಚ್ಚಿನ ಮಾಹಿತಿಗಾಗಿ, ಕುಂ. ಬಾ. ಸದಾಶಿವಪ್ಪ : **ಹರಪನಹಳ್ಳಿ ಪಾಳೆಯಗಾರರು**, ಕನ್ನಡ ಸಾಹಿತ್ಯಪರಿಷತ್ತು, ಬೆಂಗಳೂರು, ೧೯೯೬, ನೋಡಿರಿ.

*೫. ಉಲ್ಲೇಖಿತ ಪ್ರಥಮ ಶ್ರೀ ಅಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳು ಶೃಂಗೇರಿ ಪೀಠದ ಗುರುಪರಂಪರೆಯಲ್ಲಿ ೨೮ನೆಯವರು.

*೬. ಕ. ೨೫, ದಾ. ೪೬

*೭. ಕ. ೨೭, ದಾ. ೪೩

*೮. ಕ. ೨೭, ದಾ. ೪೩ಎ; ತೃತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು (ಕ್ರಿ. ಶ. ೧೭೭೦-೧೮೧೪) ಗುರುಪರಂಪರೆಯಲ್ಲಿ ೩೦ ನೆಯವರು.

*೯. ಕ. ೨೭, ದಾ. ೪೩ಎ.

*೧೦. ಕ. ೬೬, ದಾ. ೬೩.

ಎಸ್. ಎಲ್. ಶ್ರೀನಿವಾಸ ಮೂರ್ತಿ*

ಪಾರುವೇಟೆ - ಒಂದು ಶಾಸನೋಕ್ತ ಸಾಹಸಕ್ರೀಡೆ

ಪ್ರಾಚೀನ ಕಾಲದಿಂದಲೂ ಬೇಟೆಯನ್ನು ಆಹಾರ ಸಂಗ್ರಹಣೆ, ದುರ್ಬಲರ ರಕ್ಷಣೆ, ಹಾಗೂ ಮನರಂಜನೆಗಾಗಿ ವೀರರು ಆಗಾಗ್ಗೆ ಕೈಗೊಳ್ಳುತ್ತಿದ್ದರು.

ಮೇಲಿನ ಈ ಉದ್ದೇಶಗಳಿಗಲ್ಲದೆ ಬೇಟೆಯನ್ನು ಕೆಲವು ದೇವಾಲಯಗಳಲ್ಲಿ ಪೂಜಾ ಸಂಬಂಧಿಯಾದ ಕ್ರಿಯೆಯಾಗಿಯೂ ಕೈಗೊಳ್ಳುತ್ತಿದುದರ ಪ್ರಸ್ತಾಪ ಶಾಸನಗಳಲ್ಲಿ ಉಲ್ಲೇಖಿತವಾಗಿದೆ. **ಪಾರುವೇಟೆ** ಅಥವಾ **ಪಾರಿವೇಂಟೆ** ಎಂದು ಕರೆಯಲಾಗುವ ಈ ಸಾಹಸ ಕೃತ್ಯದ ವಿವರಗಳನ್ನು ಸಂಗ್ರಹಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶ.

ಪಾರುವೇಟೆ, ಪಾರಿವೇಂಟೆ, ಪಾರಿವೇಟ್ಟೆ, ಪಾರಧ ಎಂದು ಮುಂತಾಗಿ ಹೆಸರಿರುವ ಈ ಬೇಟೆಯ ವಿಧದ ವಿವರಗಳಿಗೆ ಬರುವ ಮೊದಲು ಈ ಶಬ್ದದ ನಿಷ್ಪತ್ತಿಯನ್ನು ಗುರುತಿಸುವುದು ಆವಶ್ಯಕ. ಕಿಟೆಲ್ ತಮ್ಮ ಶಬ್ದಕೋಶದಲ್ಲಿ ಈ ಶಬ್ದಕ್ಕೆ The Chase; Game that is hunted ಎಂಬ ಅರ್ಥವನ್ನು ಕೊಟ್ಟು ಇದು ಸಂಸ್ಕೃತದ ಪಾಪರ್ದ್ಧಿ ಎಂಬ ಶಬ್ದದ ತದ್ಭವವೇ ಎಂದು ಸಂದೇಹಿಸಿದ್ದಾರೆ.(೧) ಸಾಹಿತ್ಯ ಪರಿಷತ್ತಿನ ಬೃಹತ್ ಕನ್ನಡ ನಿಘಂಟಿನಲ್ಲಿ i) ದೇವಾಲಯದಲ್ಲಿ ನಡೆಯುವ ಒಂದು ಉತ್ಸವ ವಿಶೇಷ; ii) ಬೇಟೆ, ಶಿಕಾರಿ ಎಂಬ ಅರ್ಥಗಳಿವೆ.(೨) ತೆಲುಗು ಹಾಗೂ ತಮಿಳು ಶಬ್ದಕೋಶಗಳಲ್ಲಿಯೂ ಇದಕ್ಕಿಂತ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

ಈ ಯಾವ ಅರ್ಥಗಳಿಂದಲೂ ಪಾರುವೇಟೆ ಎಂಬ ಶಬ್ದದ ನಿಷ್ಪತ್ತಿ ಅಥವಾ ಪ್ರಕ್ರಿಯೆಯ ವಿವರಣೆ ದೊರೆಯುವುದಿಲ್ಲ ಎನ್ನುವುದು ಸ್ಪಷ್ಟ. ಈ ಶಬ್ದದ ಪೂರ್ವಾರ್ಧದಲ್ಲಿರುವ 'ಪಾರು' ಎಂಬ ಮಾತಿಗೆ ನೋಡು, ಗಮನಿಸು, ಕಾದುನೋಡು, ಓಡು ಎಂಬ ಅರ್ಥಗಳಿರುವದರಿಂದ ಇದು 'ಹೊಂಚಿಕಾದು ಆಡುವ ಬೇಟೆ' ಅಥವಾ ಮರಸು ಬೇಟೆ ಎಂಬ ನಿರ್ಣಯಕ್ಕೆ ಬರುವ ಸಾಧ್ಯತೆಗಳಿವೆ.

ಆದರೆ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ "ಗೋರಿವೇಂಟೆ, ಪಳಹರವೇಂಟೆ, ಪಟವೇಂಟೆ, ವಿದ್ಯಾಧರರ ಬೇಂಟೆ, ಚಿತ್ರ ವೇಂಟೆ, ಅಂಟುಜಲ ವೇಂಟೆ, ತೋಹಿನ ಬೇಂಟೆ, ಘನಸೋಹುವೇಂಟೆ",(೩) 'ಸೊಕ್ಕಾನೆವೇಂಟೆ, ಎರಲೆವೇಂಟೆ, ಮರೆವೇಂಟೆ, ಮಲತೆಕ್ಕಲನ ಬೇಂಟೆ, ಹೆಬ್ಬುಲಿವೇಂಟೆ, ಕತ್ತುರಿಯ ಬೆಕ್ಕುಗಳ ಬೇಂಟೆ, ಝುಲ್ಲರಿಯ ಮಿಗವೇಂಟೆ, ಗಂಡಿನ ಸಿಂಗ ವೇಂಟೆ, ಪಲವುಪಕ್ಕಿಗಳ ಬೇಂಟೆ, ಉಡುವೇಂಟೆ, ಮೊಲವೇಂಟೆ, ಜಲದಿರ್ಕೆಯೊಳ್ಜಲ ಜಂತುಗಳ ಬೇಂಟೆ'(೪) ಇತ್ಯಾದಿ ಬೇಟೆಯ ವಿಧಗಳ ಸಾಲಿನಲ್ಲಿ ಪಾರುವೇಂಟೆಯ ಪ್ರಸ್ತಾಪವಿಲ್ಲದಿರುವುದು ಗಮನಾರ್ಹ.

ಈ ಹಿನ್ನಲೆಯಲ್ಲಿ ದ್ರವಿಡಿಯನ್ ಎಟಿಮಲಾಜಿಕಲ್ ಡಿಕ್ಷನರಿಯು 'ಪಾಱ' ಎಂಬ ಶಬ್ದಕ್ಕೆ 'ದೇವಾಲಯ' ಎಂಬ ಅರ್ಥವನ್ನು ಸೂಚಿಸಿರುವುದು ಗಮನಿಸಬೇಕಾದ ಅಂಶ.(೫) ಈ ಅರ್ಥವನ್ನು ಇಟ್ಟುಕೊಂಡರೆ "ಪಾಱ'ಮೇಂಟೆ ಅಥವಾ ಪಾರಿವೇಂಟೆ' ಎಂಬ ಶಬ್ದಕ್ಕೆ ದೇವಾಲಯಕ್ಕೆ ಸಂಬಂಧಿಸಿದ ಬೇಟೆ ಎಂಬ ನಿಶ್ಚಿತವಾದ ಅರ್ಥವು ಹೊರಡುವುದು.(೬)

ಪಾರುವೇಟೆಯನ್ನು ಹೆಸರಿಸುವ ಸದ್ಯದ ಉಪಲಬ್ಧ ಶಾಸನವೆಂದರೆ ಆಂಧ್ರದ ಚಿತ್ತೂರು ಜಿಲ್ಲೆಯ ಕಾಳಹಸ್ತಿಯಲ್ಲಿರುವ ಶ್ರೀಕಾಳಹಸ್ತೀಶ್ವರ ದೇವಾಲಯದಲ್ಲಿರುವ ಅಚ್ಯುತರಾಯನ ಶಾಸನ.(೭) ದೇವಾಲಯದ ಮೂರನೆಯ ಪ್ರಾಕಾರದ ಪಶ್ಚಿಮದಿಕ್ಕಿನ ಗೋಡೆಯ ಮೇಲಿರುವ ಈ ಶಾಸನವು ಶ್ರೀಮನ್ಮಹಾರಾಜ, ರಾಜಪರಮೇಶ್ವರ, ವೀರಪ್ರತಾಪ ಇತ್ಯಾದಿ ಬಿರುದಾಂಕಿತನಾದ ಅಚ್ಯುತರಾಯನು ಶಕಾಬ್ದ ೧೪೫೧ರ ವಿರೋಧಿ ಸಂವತ್ಸರದ ಕಾರ್ತೀಕ ಬಹುಳ ಪಂಚಮಿಯಲ್ಲಿ ಕಾಳಹಸ್ತಿಗೆ ಬಿಜಯ ಮಾಡಿ ಶ್ರೀ ಕಾಳಹಸ್ತೀಶ್ವರನ ಸನ್ನಿಧಿಯಲ್ಲಿ ಪಟ್ಟಾಭಿಷೇಕವನ್ನು ಮಾಡಿಕೊಂಡ ಸಂದರ್ಭದಲ್ಲಿ ದೇವರಿಗೆ


* ಕನ್ನಡ ಉಪನ್ಯಾಸಕ, ವಿಜಯ ಕಾಲೇಜು, ಬಸವನಗುಡಿ, ಬೆಂಗಳೂರು - ೫೬೦ ೦೦೪.

“ಮಕರ ಸಂಕ್ರಮಣದ ಮರುದಿನ ಪಾರಿವೇಂಟೆಯಾಗಿ ಗಿರಿ ಪ್ರದಕ್ಷಿಣ ಮಾಡುವಾಗ ಅಚ್ಯುತರಾಯ ಮಹಾರಾಯರು ತೋಟದೊಳಗಣ ಮಂಟಪದಲಿ ಬಿಜಯಮಾಡಿ ಅವಧರಿಸುವ ಮಹಾನೈವೇದ್ಯದ ೨೦ ಹರಿವಾಣ”ಗಳನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಬೇಟೆಯು ನಡೆಯುತ್ತಿದ್ದ ದಿನದ ಬಗ್ಗೆ ಇಲ್ಲಿ ತಿಳಿಯುವುದಾದರೂ ಅದರ ವಿವರಗಳೇನೆಂಬುದು ಗೊತ್ತಾಗುವುದಿಲ್ಲ.

ಪಾರುವೇಟೆಯ ವಿವರಗಳನ್ನು ಅರಿಯಲು ಕೋಲಾರ ಜಿಲ್ಲೆಯ ಟೇಕಲ್, ಅರಾಬಿಕೊತ್ತನೂರು ಮುಂತಾದ ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳಗಳಲ್ಲಿ ೨೦ ನೇ ಶತಮಾನದ ೫ - ೬ನೇ ದಶಕಗಳವರೆಗೆ ಆಚರಣೆಯಲ್ಲಿತ್ತು ಎನ್ನಲಾದ ‘ಪಾರುವಾಟೋತ್ಸವ’ ಎಂಬ ದೇವಾಲಯ ಸಂಬಂಧಿ ಉತ್ಸವದ ವಿವರಗಳನ್ನು ಗಮನಿಸಬೇಕು. ಈ ಎರಡು ಸ್ಥಳಗಳು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು ಅನೇಕ ಕಾಡುಪ್ರಾಣಿಗಳಿಗೆ ಆಶ್ರಯವಿತ್ತಿದ್ದುವು. ಈಗ ಇಲ್ಲಿ ಅವುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆಯಾದರೂ ಪೂರ್ಣವಾಗಿ ಇಲ್ಲದಿಲ್ಲ.[೮]


ವಿಷ್ಣುವಿನ ಹತ್ತು ಮುಖ್ಯ ಅವತಾರಗಳಲ್ಲದೆ ಪ್ರಾದೇಶಿಕವಾಗಿ ಕಂಡುಬರುವ ವೆಂಕಟೇಶ್ವರ ಹಾಗೂ ಬೇಟರಾಯ ಎಂಬ ದೇವರ ಹಿನ್ನೆಲೆಯಲ್ಲಿ ಬೇಟೆಯ ಅಂಶಗಳಿರುವುದು ಸರ್ವವಿದಿತ. ಈ ಒಂದು ಅಂಶವನ್ನು ಪ್ರಧಾನವಾಗಿರಿಸಿಕೊಂಡು ಈ ಪಾರುವಾಟೋತ್ಸಪವನ್ನು ಏರ್ಪಡಿಸುತ್ತಿರಬಹುದು. (ಟೇಕಲ್ ಹಾಗೂ ಅರಾಬಿಕೊತ್ತನೂರುಗಳಲ್ಲಿನ ವರದರಾಜ ಸ್ವಾಮಿ ದೇವಾಲಯಗಳಲ್ಲಿ ಈ ಉತ್ಸವ ನಡೆಯುತಿತ್ತು). ಆದರೆ ಕಾಳಹಸ್ತಿ, ಬನವಾಸಿ, ಶಿವಗಂಗೆ[೯] ಯಂತಹ ಶೈವ ಕ್ಷೇತ್ರಗಳಲ್ಲಿ ಇದನ್ನು ನಡೆಸುತ್ತಿದ್ದ ಹಿನ್ನೆಲೆ ಏನೋ ತಿಳಿಯದು. ಟೇಕಲ್ ಹಾಗೂ ಅರಾಬಿಕೊತ್ತನೂರುಗಳ ಸ್ಥಳೀಯರಿಂದ ಸಂಗ್ರಹಿಸಿದ ಮಾಹಿತಿಯಂತೆ ಈ ಉತ್ಸವವು ಕೆಳಕಂಡಂತೆ ನಡೆಯುತ್ತಿತ್ತು:

ಉತ್ಸವದ ಒಂದೆರಡು ವಾರಗಳ ಮೊದಲು (ಸಾಧಾರಣವಾಗಿ ಅದು ಮಕರಸಂಕ್ರಮಣದ ಮರುದಿನ ಅಥವಾ ಯುಗಾದಿಯ ನಂತರದ ಎರಡನೆಯ ಷಷ್ಠಿಯಂದು ನಡೆಯುತ್ತಿದುದು ವಾಡಿಕೆ) ಸಮೀಪದ ಬೆಟ್ಟಗುಡ್ಡಗಳಲ್ಲಿ ಸುಮಾರು ೨ ಅಡಿ ಅಗಲ ಹಾಗೂ ೮-೧೦ ಅಡಿ ಉದ್ದನ ಬೋನುಗಳನ್ನು ಕಲ್ಲಿನಿಂದ ರಚಿಸಲಾಗುತ್ತಿತ್ತು. ಬೋನಿನ ಒಂದು ತುದಿಯನ್ನು ಕಲ್ಲಿನಿಂದಲೇ ಮುಚ್ಚಿ ಬೋನಿನೊಳಗೆ ಮೇಕೆ ಅಥವಾ ಕುರಿಯ ಮರಿಯನ್ನು ಕಟ್ಟಿ ಇನ್ನೊಂದು ತುದಿಯಿಂದ ಹುಲಿ ಅಥವಾ ಚಿರತೆ ಒಳನುಗ್ಗಲು ಅನುವು ಮಾಡಿರಲಾಗುತ್ತಿತ್ತು. ಅದು ಕಲ್ಲಿನ ಬೋನಿನ ಒಳಹೊಕ್ಕು ಮರಿಯನ್ನು ಹಿಡಿದು ಹಿಂದಿರುಗಿ ಬರಲು ಯತ್ನಿಸುತ್ತಿರುವಷ್ಟರಲ್ಲಿ ಬೋನಿನ ಬಾಯಿಗೆ ಮರ, ಕಬ್ಬಿಣಗಳಿಂದ ಮಾಡಲಾದ ಮತ್ತೊಂದು ಬೋನನ್ನು ಇಟ್ಟು ಹುಲಿ ಅದರಲ್ಲಿ



ಚಿತ್ರ-೧. ಕಲ್ಲಿನ ಬೋನು, ಅರಾಬಿಕೊತ್ತನೂರು

ಹೊಗುವಂತೆ ಬಲಾತ್ಕರಿಸಲಾಗುತ್ತಿತ್ತು ಎನ್ನಲಾಗಿದೆ. (ಇಂದಿಗೂ ಈ ಎರಡೂ ಗ್ರಾಮಗಳ ಬಳಿಯ ಬೆಟ್ಟಗಳಲ್ಲಿ ಕಲ್ಲಿನ ಬೋನುಗಳು ಉಳಿದುಬಂದಿವೆ. ಅರಾಬಿಕೊತ್ತನೂರಿನ ಬಳಿಯ ಬೆಟ್ಟದಲ್ಲಿರುವ ಬೋನೊಂದರ ಮುಂದಿನ ಕಲ್ಲು ಬಂಡೆಯ ಮೇಲೆ ೧೯೧೧ ಎಂದು ಸ್ಪಷ್ಟವಾಗಿ ಕಂಡರಿಸಲಾಗಿದೆ. ಬಹುಶಃ ಇದು ಆ ಬೋನನ್ನು ನಿರ್ಮಿಸಿದ ವರ್ಷವೆಂದು ತೋರುತ್ತದೆ. ಟೇಕಲ್‌ನಲ್ಲಿನ ವರದರಾಜ ಸ್ವಾಮಿ ದೇವಾಲಯದಲ್ಲಿ ಹಿಂದೆ ಬಳಸುತ್ತಿದ್ದ ಮರದ ಬೋನು ಇಂದಿಗೂ ಅನಾಥವಾಗಿ ಬಿದ್ದಿದೆ.



ಈ ರೀತಿಯಲ್ಲಿ ಹುಲಿ ಅಥವಾ ಚಿರತೆಯನ್ನು ಹಿಡಿದ ನಂತರ ಇಡಿಯ ಬೋನನ್ನು ಉಪಾಯವಾಗಿ ದೇವಾಲಯದ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗುತ್ತಿತ್ತು. ಉತ್ಸವ ದಿನದವರೆಗೆ ಅತ್ಯಲ್ಪ ಆಹಾರವನ್ನು ಕೊಟ್ಟು ಅದನ್ನು ಕೆರಳಿಸಲಾಗುತ್ತಿತ್ತು.

ಉತ್ಸವದ ದಿನದಂದು ಅದರ ಸೊಂಟಕ್ಕೆ ಉದ್ದವಾದ ಕಬ್ಬಿಣದ ಸರಪಳಿಯ ಒಂದು ತುದಿಯನ್ನು ಕಟ್ಟಿ ಮತ್ತೊಂದು ತುದಿಯನ್ನು ವಿಶಾಲವಾದ ಬಯಲಿನಲ್ಲಿ ನೆಟ್ಟ ಸುಮಾರು ನಾಲ್ಕು ಅಡಿ ಎತ್ತರದ ಮರದ ಕಂಬಕ್ಕೆ ಕಟ್ಟಿ ನಂತರ ಹುಲಿಯನ್ನು ಬೋನಿನಿಂದ ಹೊರಬಿಡುತ್ತಿದ್ದರು. ಒಬ್ಬ ಅಥವಾ ಅನೇಕ ವೀರರು ಆ ದೇವಾಲಯದ ಪ್ರಧಾನ ದೇವತೆಯ ಪ್ರತಿನಿಧಿಯಾಗಿ ಆ ಪ್ರಾಣಿಯ ಜೊತೆಗೆ ಹೋರಾಡಿ ಕೊನೆಗೆ ಅದನ್ನು ಕೊಲ್ಲುತ್ತಿದ್ದರು. ಇದು ಪಾರುವಾಟೋತ್ಸವ ಅಥವಾ ಪಾರಿವೇಟೆಯ ಸ್ಥೂಲ ಚಿತ್ರ.

ಪಾರುವೇಟೆಯ ಹೆಸರನ್ನು ಪ್ರಸ್ತಾಪಿಸದಿದ್ದರೂ ಟೇಕಲ್ಲಿನಲ್ಲಿರುವ ಎರಡನೆ ದೇವರಾಯನ ಕಾಲದ ಎರಡು ಶಾಸನಗಳು ಈ ಸಾಹಸ ಕ್ರೀಡೆಯನ್ನು ಉಲ್ಲೇಖಿಸಿವೆ. ಅವುಗಳಲ್ಲಿ ಮೊದಲನೆಯದು ಅಲ್ಲಿನ ವರದರಾಜಸ್ವಾಮಿ ದೇವಾಲಯದ ಪಶ್ಚಿಮದಲ್ಲಿರುವ ಹುಲಿ ಬಂಡೆಯ ಮೇಲಿರುವ ವಿಜಯಾಭ್ಯುದಯ ಶಕ ವರ್ಷ ೧೪೩೮ರ ಪ್ರಮಾದೀಚ ಸಂವತ್ಸರದ ಶಾಸನ.(೧೦) ಇದರಲ್ಲಿ ಶ್ರೀಮನ್ ಮಹಾಮಾಂಡಳೇಶ್ವರ, ಮೇದಿನೀಮೀಸರ ಗಂಡ, ಕಠಾರಿ ಸಾಳುವ, ಪಕ್ಷಿ ಸಾಳುವ ಇತ್ಯಾದಿ ಬಿರುದಾಂಕಿತನಾದ ಸಾಳುವ ತಿಪ್ಪರಾಜವೊಡೆಯರ ಕುಮಾರ ಸಾಳುವ ಗೋಪರಾಯನ ಮಂತ್ರಿಯಾದ ಸಿಂಗರಾಜನು ಹಿಂದೆ ಅಲ್ಲಿದ್ದ ಕೋಟೆ ಹಾಳಾಗಿದ್ದುದರಿಂದ ಹೊಸ ಎರಡು ಸುತ್ತಿನ ಕೋಟೆಯನ್ನು ಹಾಗೂ ವರದರಾಜ ದೇವರ ಮುಖ ಮಂಟಪದ ಸನ್ನಿಧಿಯಲ್ಲಿ ರಾಜಗಂಭೀರವೆಂಬ ಕೊತ್ತಳವನ್ನು ನಿರ್ಮಿಸಿದ ಶುಭ ಸಂದರ್ಭದಲ್ಲಿ *"ಆ ಗೋಪರಾಜನು ಆ ಕುಮಾರ ತಿಪ್ಪಯನು ಹುಲಿಗಳನೂ ಯಿಡಿ ತರಿಸಿ ಬೇಂಟೆಯ ನಾಡಿದ"* ಎಂಬ ಉಲ್ಲೇಖವಿದೆ. **'ಹುಲಿಗಳನು ಯಿಡಿ ತರಿಸಿ'** ಎಂಬ ಮಾತುಗಳು ಈ ಕಲಾಪ ಪಾರುವೇಟೆಯಲ್ಲದೆ ಬೇರಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ರೋಮಾಂಚಕವಾದ ಈ ಹೋರಾಟದಲ್ಲಿ ಕೇವಲ ಯೋಧರಲ್ಲದೆ ಅವರ ನೆಚ್ಚಿನ ಬೇಟೆ ನಾಯಿಗಳೂ ಪಾಲ್ಗೊಳ್ಳುತ್ತಿದ್ದವೆಂಬುದನ್ನು ಅದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು(೧೧) ಸೂಚಿಸುತ್ತದೆ. **ಈ ಸಂಪಿಗೆ ಎಂಬ ಬೇಟೆ** *ನಾಯಿಯು ಹುಲಿಯ ಬಾಲವನ್ನು ಹಿಡಿದೆಳೆದು ಅದನ್ನು ಹೆದರಿಸುತ್ತಿತ್ತು,* ಎಂಬ ಬರಹದ ಮೇಲೆ ಪ್ರಾಣಿಯೊಂದನ್ನು ಕೆತ್ತಲಾಗಿದೆ. ಈ ಶಾಸನವನ್ನು ಸಂಪಾದಿಸಿರುವ ಬಿ. ಎಲ್. ರೈಸರು ಅದು ಹುಲಿಯ ಚಿತ್ರವೆಂದು ಹೇಳಿದ್ದಾರಾದರೂ(೧೨) ಬರಹದ ಆಧಾರದ ಮೇಲೆ ಅದು ನಾಯಿಯದೆಂದು ಊಹಿಸಬಹುದು.

ಬಹುಶಃ ವಿಜಯನಗರ ಆಳ್ವಿಕೆಯ ಕಾಲದಿಂದ ಆರಂಭವಾದ ಈ ಸಾಹಸಕ್ರೀಡೆಯು ಮುಂದೆ ಟಿಪ್ಪು ಸುಲ್ತಾನನ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಧಾರ್ಮಿಕ ಹಿನ್ನೆಲೆಯಲ್ಲೇ ಮುಂದುವರೆದರೂ ರಾಜಾಸ್ಥಾನದಲ್ಲಿ ಮನರಂಜನೆಯ ಸಾಧನವಾಯಿತು. ಜೇಮ್ಸ್ ಸ್ಕರ್ರಿ ಎಂಬ ಆಂಗ್ಲ ಖೈದಿಯು ಶ್ರೀರಂಗ ಪಟ್ಟಣದಲ್ಲಿ ತಾನು ಕಂಡ ದೃಶ್ಯಗಳನ್ನು ಹೀಗೆ ದಾಖಲಿಸಿದ್ದಾನೆ:

ಜಟ್ಟಿಗಳ ಹೋರಾಟದ ನಂತರ ``This being over the tigers and buffaloes would be introduced, the former in large boxes as they were caught in jungles. The largest had generally chains round thier loins. I have seen one of these last mentioned tigers defeat nine buffaloes, each of which would have been an overmatch for the fiercest bull I ever saw in Europe... Many of the smaller ones (tigers) were let loose singly on the pulligars or pikemen. one of these fierce creatures although he had twenty or more pikes in him at once, broke them and sprung over their heads, killing one man, and wounding two others..."(೧೩)

ಸ್ವಾತಂತ್ರ್ಯ ಪೂರ್ವದಲ್ಲಿ ಪಾರುವೇಟೆಯನ್ನು ನಡೆಸಲು ಸರ್ಕಾರದಿಂದ ಅನುಮತಿಯನ್ನು ಪಡೆಯುವುದು ಆವಶ್ಯಕವಾಗಿತ್ತು ಎಂದು ಅದನ್ನು ಕಣ್ಣಾರೆ ಕಂಡ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಆದರೆ ಇಂತಹ ಒಂದು ಅನುಮತಿ ಪತ್ರದ ಪ್ರತಿಯನ್ನು ನೋಡಲು ರಾಜ್ಯ ಪತ್ರಾಗಾರದಲ್ಲಿ ನಡೆಸಿರುವ ಹುಡುಕಾಟ ಇನ್ನೂ ಫಲಪ್ರದವಾಗಿಲ್ಲ.

(ಪಾರುವೇಟೆಯ ಬಗ್ಗೆ ಮೊತ್ತ ಮೊದಲ ಬಾರಿಗೆ ನನ್ನ ಗಮನ ಸೆಳೆದ ಶ್ರೀ ಕೆ. ಆರ್. ನರಸಿಂಹನ್‌ರವರಿಗೆ ಹಾಗೂ ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಶ್ರೀ ಪಿ. ವಿ. ಕೃಷ್ಣಮೂರ್ತಿ, ಡಾ॥ ಕೆ. ಆರ್. ಗಣೇಶ್, ಡಾ॥ ರಾ. ಗಣೇಶ್, ಶ್ರೀ ಕೆ. ಎಸ್ ನಾಗರಾಜ್ ಹಾಗೂ ಟೇಕಲ್ ಮತ್ತು ಅರಾಬಿಕೊತ್ತನೂರುಗಳ ಗ್ರಾಮಸ್ಥರಿಗೆ ಕೃತಜ್ಞತೆಗಳು.)

*['ಪಾರುವೇಂಟೆ' ಶಬ್ದವನ್ನು ಜನಪದ ಹಿನ್ನೆಲೆಯಲ್ಲಿಯೂ ವಿಶದೀಕರಿಸಬಹುದೆನ್ನಿಸುತ್ತದೆ. 'ಪಾರು' ಎಂಬ ಶಬ್ದಕ್ಕೆ 'ಹಾರು' ಎಂಬ ಅರ್ಥವೂ ಇರುವತ್ತ ಗಮನಹೋಗಬೇಕು. ಕೊಡಗಿನ ಜಾನಪದ ಹಬ್ಬಗಳಲ್ಲಿ (ಶಿವಗಣಪರವಾದ ಕೋತೂರು ಮಾರಮ್ಮ, ಅಮ್ಮತ್ತಿ ಬಳುಗುಂದ, ಬಿಟ್ಟಂಗಾಲ ಇತ್ಯಾದಿ ಕಡೆಯ ಭದ್ರಕಾಳಿ, ಭಗವತಿ ಹಬ್ಬಗಳಲ್ಲಿ - ದೇಗುಲದ ಹೊರಗೆ - ಹಾಗು ಸಪ್ತಮಾತೃಕಾ ಸಬತಾಯಿ ಸುಗ್ಗಿಕಟ್ಟೆ ಹಬ್ಬಗಳಲ್ಲಿ) 'ಪಾರುಕುಂಞ' ಎಂಬ ಹರಕೆಯಾಟವಿದೆ. ಇದರಲ್ಲಿ ಕೋಳಿಮರಿಗಳನ್ನು ತಂದು ದೇಗುಲದ ಮುಂದೆ ಹರಕೆಯಾಗಿ ಹಾರಿಸುತ್ತಾರೆ. ಇದು ಕಾಡಿನೊಳಗೆ ಕೋಣನ ಬೇಟೆ ಆಡಿ ಬಂದು ಕೊನೆಯ ಮಜಲಾಗಿ ದೇಗುಲದ ಮುಂದೆ ಜನಪದ ಹಾರಿಸುವ ಹರಕೆಯ ಕ್ರೀಡೆಯೂ ಹೌದು. ಆನಂತರ ಕೋಳಿಮರಿಗಳು ಕೆಳಗೆ ಬೀಳುವಲ್ಲಿ ಯಾರಿಗೆ ಸಿಗುವುದೋ ಅವರು ಅವನ್ನು ಪ್ರಸಾದವೆಂದು ಮನೆ ಅಡಿಗೆಗೆ ಒಯ್ಯುತ್ತಾರೆ. ಈ ಹಿನ್ನೆಲೆಯಲ್ಲಿಯೂ ಕರ್ನಾಟಕದ ಉಳಿದ ಭಾಗಗಳಲ್ಲಿ ಈ ಕ್ರೀಡೆ ಪ್ರಚಲಿತವಿದೆಯೇ ಎಂಬುದನ್ನೂ ಗಮನಿಸಬಹುದು. ಇನ್ನು ವೈಷ್ಣವ ಯಾ ಶಿವಕ್ಷೇತ್ರವಿರಲಿ ಭಕ್ತರು ತಾವುಣ್ಣುವುದನ್ನು ಅರ್ಪಿಸುವ ಒಂದು ಪದ್ಧತಿ ಪ್ರಾಚೀನದಿಂದಲೂ ಇದೆ. ಶಿವ ಕಿರಾತ ವೇಷಿಯಾಗಿ ಬೇಟೆಯಾಡಿದವ. ಅಯ್ಯಪ್ಪ (ಕೊಡಗಿನ ಎಲ್ಲ ಗ್ರಾಮಗಳಲ್ಲಿ ಅವನು ಬೇಟೆಗಾರ ಎಂದು ಮಣ್ಣಿನ ನಾಯಿಗಳನ್ನೇ ಜೊತೆಗಾರರೆಂದು ಅವನ ನೆಲೆಯಲ್ಲಿ ಅರ್ಪಿಸುವ ರೂಢಿ ಇಂದಿಗೂ ಇದೆ) ಹೇಳಿ ಕೇಳಿ ಬೇಟೆಗಾರ; ಈಶ್ವರನೆಂದೂ ಪ್ರಚಲಿತ. ಬೇಡರ ಕಣ್ಣಪ್ಪ ಬೇಟೆಯಾಡಿ ತಂದ ಬೇಟೆಯನ್ನು ಶಿವನಿಗೆ ಶೈವಕ್ಷೇತ್ರದಲ್ಲಿ ಅರ್ಪಿಸಿದ ಕತೆ ಇದೆ. ಇದಲ್ಲದೆ ಕಾಶ್ಮೀರಿ ಬ್ರಾಹ್ಮಣ ಪಂಡಿತರ ಕುಟುಂಬಗಳು ಶಿವರಾತ್ರಿಯಂದು ಶಿವನಿಗೆ ಮಾಂಸವನ್ನು ಎಡೆ ಮಾಡುವ ಪದ್ಧತಿ ಹೊಂದಿರುವ ಬಗ್ಗೆ ಡೆಕ್ಕನ್ ಹೆರಾಲ್ಡ್‌ನ ಭಾನುವಾರದ ಸಂಚಿಕೆಯಲ್ಲಿ ಇತ್ತೀಚೆಗೆ ಪ್ರಕಟವಾಗಿರುವುದನ್ನು ಗಮನಿಸಬಹುದು.
- (ಸಂ.)]*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. Kittel. F.: *A Kannada-English dictionary* (AES Edn.), ಪುಟ. ೯೭೫. ೧೯೮೪

*೨. **ಕನ್ನಡ ನಿಘಂಟು** ಸಂ. ೬. ಬೆಂಗಳೂರು ೧೯೯೦, ಪುಟ-೫೫೬೭

*೩. **ಹರಿಶ್ಚಂದ್ರ ಕಾವ್ಯ** : (ಸಂ) ಬಸವಾರಾಧ್ಯ, ಎನ್., ಬಸಪ್ಪ, ಎಸ್., ೫ನೇ ಸ್ಥಲ, ೪೯ನೇ ಪದ್ಯ, ಪುಟ - ೭೬. ಮೈಸೂರು, ೧೯೫೫

*೪. **ಮಹಾದೇವಿಯಕ್ಕನ ಪುರಾಣ**: (ಸಂ) ಚಂದ್ರಯ್ಯ ಬಿ. ನಂ. ಮೈಸೂರು ೧೯೬೮. ಸ್ಥಲ ೩೧, ಪದ್ಯ - ೨೯

*೫. *A Dravidian Etymological Dictionary:* (Ed) T. Burrow, Emeneow. ೨ನೇ ಮು. ಲಂಡನ್ ೧೯೮೪. ಪು ೩೬೫

*೬. ಯೋಚಿಸಿ: ಪಾರುವ (ಹಾರುವ), ಪಾರುಪತ್ಯೆಗಾರ ಇತ್ಯಾದಿ.

*೭. *SII Vol - IX* part - II, no - 551, page - 571

*೮. ಅರಾಬಿಕೊತ್ತನೂರಿಗೆ ಕಳೆದ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಕ್ಷೇತ್ರಕಾರ್ಯಕ್ಕೆಂದು ಹೋದಾಗ ನಾಲ್ಕುದಿನಗಳ ಹಿಂದಷ್ಟೇ ಚಿರತೆಯೊಂದು ತನ್ನ ದನವನ್ನು ಗಾಯಗೊಳಿಸಿ ಓಡಿ ಹೋಯಿತೆಂದು ಅಲ್ಲಿನ ಗೃಹಿಣಿಯೊಬ್ಬಳು ದೂರಿದಳು.

*೯. ಬನವಾಸಿ ಹಾಗೂ ಶಿವಗಂಗೆಗಳಲ್ಲಿ ಈ ರೀತಿಯ ಸಂಪ್ರದಾಯವಿತ್ತೆಂದು ತಿಳಿಸಿದವರು ಶ್ರೀ ಬಿ. ನಂಜುಂಡ ಸ್ವಾಮಿ ಅವರು.

*೧೦. **ಎ. ಕ. ಸಂ x**, ಮಾಲೂರು ಸಂಖ್ಯೆ - ೧

*೧೧. ಅದೇ, ಸಂಖ್ಯೆ - ೨

*೧೨. ಅದೇ, ಇಂಗ್ಲಿಷ್ ಭಾಷಾಂತರ

*೧೩. *The Last siege of seringapatam:* Rev. E. W. Thompson. p.p. 23-25. (A Guide to the records in the Divisonal Archives, Mysore, part I ಇಲ್ಲಿ ಉದ್ಧೃತ, ಪು, ೪೫-೪೬).

ಡಾ॥ ಸೂರ್ಯನಾಥ ಕಾಮತ್*

'ಗೌಡ' ಶಬ್ದದ ಮೂಲ

ಊರಿನ ಪಟೇಲ ಎಂಬ ಅರ್ಥದಲ್ಲಿ 'ಗೌಡ' ಎಂಬ ಪದ ಬಳಕೆಯಲ್ಲಿ ಇತ್ತು. ಉತ್ತರ ಕರ್ನಾಟಕದಲ್ಲಿ 'ಗೌಡಿಕೆ' ಎಂದರೆ ಪಟೇಲಿಕೆ ಎಂದೇ ಅರ್ಥ. ಈ ಶಬ್ದ ಶಾಸನಗಳಲ್ಲಿ 'ಗಾವುಂಡ', 'ಗಾಮುಂಡ' ಎಂಬ ರೂಪಗಳಲ್ಲಿ ಬಂದಿದೆ. ಇದು 'ಗ್ರಾಮ ಕೂಟ' ಎಂಬ ಶಬ್ದದಿಂದ ಬಂತೆಂದು ಅಳ್ತೇಕರರು ಹೇಳಿದ್ದಾರೆ.(೧) ಆದರೆ ಅವರು ಉಲ್ಲೇಖಿಸಿರುವ ಸಾಲೊಟಗಿ ಶಾಸನದಲ್ಲಿ 'ಗ್ರಾಮಕೂಟ' ಶಬ್ದವಿಲ್ಲ. ("ಏತತ್ ಪಾವಿಟ್ಟಗೆ ಗ್ರಾಮಪತಿಃ" ಎಂದಿದೆ).(೨)

'ಗ್ರಾಮಕೂಟಾಧ್ಯಕ್ಷ' ಎಂಬ ಪದವನ್ನು ಕೌಟಿಲ್ಯನು ಒಮ್ಮೆ ಬಳಸಿದ್ದಾನೆ.(೩) ಆದರೆ 'ಗ್ರಾಮವೃದ್ಧ' ಎಂಬ ವ್ಯವಸ್ಥೆಗೆ ಕೌಟಿಲ್ಯ ಹೆಚ್ಚು ಮಹತ್ವ ಕೊಟ್ಟಿದ್ದಾನೆ. ಈ **ಗ್ರಾಮವೃದ್ಧ** ಎಂಬ ಅವನು ನೀಡಿದ ಕಲ್ಪನೆ ನಮ್ಮ ಶಾಸನಗಳಲ್ಲಿ ಬರುವ ಗ್ರಾಮಸಭೆಗಳ ಕಲ್ಪನೆಗೆ ಸಂವಾದಿಯಾಗಿದೆ. 'ಗ್ರಾಮವೃದ್ಧ' ಎಂಬ ವ್ಯವಸ್ಥೆಯನ್ನು ಅವನು ಏಳು ಬಾರಿ ಉಲ್ಲೇಖಿಸಿದ್ದಾನೆ.(೪)

"ಗ್ರಾಮದ ಇಚ್ಛೆಯು ಊರಿನ ಗಣ್ಯ ನಿವಾಸಿಗಳಿಂದ ಪ್ರಕಟವಾಗಬೇಕು. ಇವರನ್ನು ಗ್ರಾಮವೃದ್ಧರೆಂದು ಕರೆಯಬಹುದು" ಎನ್ನುತ್ತ "ಗ್ರಾಮದ ಹಿರಿಯರು, ರಕ್ಷಕರು ಹಾಗೂ ಗ್ರಾಮದ ಆಸ್ತಿಗಳ, ಅಪ್ರಾಪ್ತವಯಸ್ಕರ ಹಾಗೂ ದೇವಾಲಯಗಳ ಸರ್ವಸ್ಥರೆಂದು ಇವರನ್ನು ಕರೆಯಬಹುದು" ಎಂದು ಕೌಟಿಲ್ಯನ ಹೇಳಿಕೆ. (೨.೧.೨೭ ಹಾಗೂ ೩.೫೦.೨೦).

"ನೆರೆಹೊರೆಯಲ್ಲಿ ಭೂಮಿ ಹೊಂದಿರುವ ಇಬ್ಬರು ಕೃಷಿಕರ ಭೂಮಿಗಳ ಗಡಿಯ ತಂಟೆಗಳನ್ನು ಪರಿಹರಿಸಲು ಗ್ರಾಮವೃದ್ಧರು ನೆರವಾಗಬೇಕು" (೩.೯.೧೫) ಎಂದೂ ಅವನು ಹೇಳಿದ್ದಾನೆ. ಗ್ರಾಮದ ಭೂಮಿ ಇಲ್ಲದೆ ಜಲಾಶಯವನ್ನು ಮಾರುವಾಗ ಇವರ ಹಾಜರಾತಿ ಇರಬೇಕೆಂದೂ ಕೌಟಿಲ್ಯನು ಗ್ರಾಮವೃದ್ಧರನ್ನು ಕುರಿತು ಹೇಳಿದ್ದಾನೆ (೩.೯.೩). ಸಾಲವಿತ್ತವನೊಬ್ಬನು ಊರಲ್ಲಿ ಇರದಿದ್ದಾಗ ಸಾಲಗಾರನು ಕೊಡಬೇಕಾದ ಸಾಲದ ಮೊತ್ತವನ್ನು ಸಾಲವಿತ್ತವನ ಪರವಾಗಿ ಗ್ರಾಮವೃದ್ಧರು ಸ್ವೀಕಾರ ಮಾಡಬಹುದು" ಎಂದು ಗ್ರಾಮವೃದ್ಧರ ಕರ್ತವ್ಯಗಳ ಬಗ್ಗೆ ಕೌಟಿಲ್ಯನು ಹೇಳಿದ್ದಾನೆ (೩.೧೨.೧೨). ಅಲ್ಲದೆ ಗ್ರಾಮಿಕನು ಗ್ರಾಮವೃದ್ಧರ ಸಲಹೆ ಪಡೆಯಬೇಕೆಂದೂ ಇಲ್ಲಿ ಹೇಳಿದೆ (೩.೯.೧೩). 'ಗ್ರಾಮ ಕೂಟಾಧ್ಯಕ್ಷ' (೪.೪.೯), 'ಗ್ರಾಮಣಾಧ್ಯಕ್ಷ' (೪.೪.೫) ಎಂದು ಬೇರೆ ಬೇರೆ ಕಡೆ ಉಲ್ಲೇಖಿಸಿದ ಅಧಿಕಾರಿಯೇ ***ಗ್ರಾಮಿಕ*** ಅಥವಾ ಊರ ಪ್ರಮುಖನಾಗಿದ್ದು ಅವನನ್ನು **ಗ್ರಾಮಕೂಟ** ಎಂದಿಲ್ಲ. 'ಗ್ರಾಮ ಕೂಟಾಧ್ಯಕ್ಷ' ಎಂಬಲ್ಲಿ ಗ್ರಾಮಕೂಟದ ಅಥವಾ ಗ್ರಾಮವೃದ್ಧರ ಸಭೆಯ ಅಧ್ಯಕ್ಷ ಎಂದು ಅರ್ಥ ಮಾಡಿಕೊಳ್ಳಬೇಕು. ಊರ ಪ್ರಮುಖ ಅಥವಾ ***ಗ್ರಾಮಿಕ*** ಗ್ರಾಮವೃದ್ಧರ ಸಭೆಯ ಅಧ್ಯಕ್ಷತೆ ವಹಿಸಬೇಕು ಇಲ್ಲವೆ ಗ್ರಾಮವೃದ್ಧರಿಗೆ ಸಲಹೆ ನೀಡಬೇಕು; ಸಭೆ ಆದನಂತರ ನಿರ್ಣಯಕ್ಕೆ ಬರಬೇಕು. ಈತನ ಹೆಸರು 'ಗ್ರಾಮಕೂಟ' ವಂತೂ ಅಲ್ಲ. ಗ್ರಾಮಕೂಟಾಧ್ಯಕ್ಷ ಅಥವಾ ಗ್ರಾಮಿಕ ವೇದಗಳಲ್ಲಿ ಉಲ್ಲೇಖಿಸಿದ '**ಗ್ರಾಮಣಾ**' ಇರಬಹುದು. "ಗ್ರಾಮ ಸ್ವಾಮಿಯು ಊರಿಗೆ ಬರುವ ಹೇರು ಪ್ರಾಣಿಗಳ ಸಮುದಾಯ ವನ್ನು ರಕ್ಷಿಸಬೇಕು" ಎಂದು ಕೌಟಿಲ್ಯ ಹೇಳಿದ್ದು (೪.೧೩.೮) '**ಗ್ರಾಮಸ್ವಾಮಿ**' ಎಂಬುದು 'ಗ್ರಾಮಿಕ'ನಿಗೆ ಸಮಾನಾರ್ಥ ಪದವಿರಬಹುದು.

ಕರ್ನಾಟಕದಲ್ಲಿ ಆಳಿದ ಗಂಗರು, ಮನು ಹಾಗು ಕೌಟಿಲ್ಯರ ಪದ್ಧತಿಯಂತೆ ಆಡಳಿತ ನಡೆಸಿದರೆಂದು ಹೇಳಿಕೊಂಡಿರುವುದು ಸರ್ವವಿದಿತ. ನಲ್ಲಾಳ ತಾಮ್ರಪಟದಲ್ಲಿ ದುರ್ವಿನೀತನನ್ನು "ನೀತಿಶಾಸ್ತ್ರದಲ್ಲಿ ಚಾಣಕ್ಯ" ಎಂದು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಹೀಗಾಗಿ ಕೌಟಿಲ್ಯನು ಹೇಳಿದ ಗ್ರಾಮವೃದ್ಧರ ವ್ಯವಸ್ಥೆಯೂ ಗಂಗರಲ್ಲಿ ಬಂದಿದೆಯನ್ನಲು ಸಾಕಷ್ಟು ಆಧಾರಗಳಿವೆ.

ರೈಸ್ ಅವರು ಕ್ರಿ. ಶ. ಸು. ೫೦೦ರ ದೆಂದು ಹೇಳಿರುವ

* (ನಿ) ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್, 'ಕೀರ್ತಿ', ೭೯೮, ೧೧ನೇ ಮುಖ್ಯರಸ್ತೆ
೭ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು - ೫೬೦ ೦೧೯.

ಚಿತ್ರದುರ್ಗ ತಾ॥ನ ಗಂಜಿಗಟ್ಟಿ ಶಾಸನವು ಗಂಗರದೆಂದು ಅವರಲ್ಲಿ ಹೇಳಿರದಿದ್ದರೂ ಅದು ಗಂಗರದೆಂದು ಭಾವಿಸಬಹುದು. ಭೂದಾನವೊಂದಕ್ಕೆ "ಪಿಟ್ಟಂಗೆರೆಯ ಪನ್ನೆರಡು ಗಾಮುಣ್ಡ ಪ್ರಜೆಯರ್ ಸಾಕ್ಷಿ" ಎಂದು ಹೇಳಿದ್ದು ಇದು ಗಾಮುಣ್ಡರ ಬಗೆಗಿನ ***ಕರ್ನಾಟಕದ ಪ್ರಥಮ ಶಾಸನೋಲ್ಲೇಖನ.***[೫] ಈ ಶಾಸನದಲ್ಲಿ ಸಾಕ್ಷಿಗಳನ್ನು 'ಗಾಮುಣ್ಡ ಪ್ರಜೆಗಳು' ಎಂದಿದೆ. ಇವರ ಸಂಖ್ಯೆ ೧೨. ಕ್ರಿ. ಶ. ೫-೬ನೇಯ ಶತಮಾನದಲ್ಲಿ ರೈತ ನಿವಾಸಿಗಳೇ ಖಚಿತವಾಗಿ ಗ್ರಾಮಗಳ ಮುಖ್ಯ ಪ್ರಜೆಗಳಾಗಿದ್ದು ೧೦೦-೨೦೦ ಮನೆಗಳಿರುವ ಊರಲ್ಲಿ ಊರ ಸಮುದಾಯದ ಅಥವಾ ಗ್ರಾಮಸಭೆಯ ೧೨ ಮುಖ್ಯರನ್ನು ಇಲ್ಲಿ 'ಗಾಮುಣ್ಡ ಪ್ರಜೆ' ಎಂದಿದ್ದು ಇಲ್ಲಿ ಗಾಮುಣ್ಡ ಎಂಬ ಪದ ಗ್ರಾಮವೃದ್ಧರು, ಊರ ಹಿರಿಯರ ಸಭೆಯ ಪ್ರಮುಖರು ಎಂದು ಅರ್ಥೈಸಬೇಕು. ಒಂದು ಊರಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಗೌಡ (ಅಥವಾ ಪಟೇಲ)ರಿರುವ ಉದಾಹರಣೆಗಳು ಅಪರೂಪಕ್ಕೆ ಇದೆಯಾದರೂ *ಐದು-ಆರನೇಯ ಶತಮಾನದಲ್ಲಿ ಒಂದು ಪುಟ್ಟ ಊರಿಗೆ ೧೨ ಜನ ಗೌಡ (ಅಥವಾ ಪಟೇಲ)ರಿರುವುದು ಸಾಧ್ಯವಿಲ್ಲ.*

ಊರ ಸಭೆಯನ್ನು ಉಲ್ಲೇಖಿಸಿ ಬೇರೆ ಬೇರೆ ಕಾಲದ ಶಾಸನಗಳಲ್ಲಿ (ಗಂಗ ಶ್ರೀ ಪುರುಷನ ಕಾಲದಲ್ಲಿ) "ಕನ್ನಡ ವಳ್ಳಿಯ ಪಗ್ನಿರ್ವರು" (೧೨), "ಕೆಲ್ಲ ಪುಸೂರ ಪಗ್ನಿರ್ವರು" (೧೨), "ನಗರ್ತಿಪಗ್ನಿರ್ವರು" ಎಂದೆಲ್ಲ ಪಿಟ್ಟಂಗೆರೆಯಲ್ಲಿದ್ದಂತೆ ೧೨ ಊರ ಹಿರಿಯರ ಸಭೆಯನ್ನು ಉಲ್ಲೇಖಿಸಿದರೆ "ತಲೆಕಾಡಾ ಇಳ್ಪತ್ತಯ್ವರ್" (೨೫) ಎಂದು ಹೇಳುವ ಕ್ರಿ. ಶ. ೭೨೬ರ ಶಾಸನವಿದೆ. ಹುಲಕುಂದ ಶಾಸನದಂತೆ ಆ ಊರ ಹಿರಿಯರ ಸಂಖ್ಯೆ ೪೦, ಮದಲೂರಲ್ಲಿ ಇವರ ಸಂಖ್ಯೆ ೭೪.

ಕ್ರಿ. ಶ. ೮೧೨ರ ಕಡಬ ಶಾಸನದಲ್ಲಿ "ರಾಚಮಲ್ಲ ಗಾಮುಂಡನೂ ಗಂಗ ಗಾಮುಂಡನೂ ಮೊದಲಾಗಿ" ಎಂದು ಎರಡು ಹೆಸರು ಮಾತ್ರ ಹೇಳಿ "ಊರ ಎಳ್ಪದಿಂಬರ" (೭೦)ನ್ನು ಉಲ್ಲೇಖಿಸಿದೆ. ಹೊಯ್ಸಳರ ಕಾಲದ ೧೧೦೨ರ ಶಾಸನದಲ್ಲಿ ಊರ ಸಭೆಯನ್ನು ಉಲ್ಲೇಖಿಸುವಲ್ಲಿ "ಭಾರಂಗಿಯ ಆರುವತ್ತೊಕ್ಕಲಾದ ಮಂಚಗೌಡ ಕೇತಗೌಡ ಮುಂತಾದವರನ್ನು ಒಡಂಬಡಿಸಿ" ಎಂದಿದೆ (ಸೊರಬ ೨೩೭). ಹೊಯ್ಸಳರ ೧೧೧೭ರ ಒಂದು ಶಾಸನದಲ್ಲಿ (ಕೃಷ್ಣರಾಜಪೇಟೆ ಮಾಳಗೂರು) "ಗಾಮುಣ್ಡರಯ್ವತ್ತೊಕ್ಕಲು" ಎಂದಿದೆ. ಈ ಎಲ್ಲ ಉದಾಹರಣೆಗಳನ್ನು ಗಮನಿಸಿದರೆ *ಗ್ರಾಮವೃದ್ಧರೆಂದು ಕೌಟಿಲ್ಯನು ಉಲ್ಲೇಖಿಸಿದವರೇ ಕರ್ನಾಟಕದ ಈ ಗಾಮುಣ್ಡರು.* ಇವರು ಪ್ರತೀ ಹಳ್ಳಿಯ ರೈತರಲ್ಲಿ ಪ್ರಮುಖರಾದವರು.

ಬಹುಶಃ ಒಂದು ಹಳ್ಳಿಯಲ್ಲಿ ನೆಲೆನಿಂತು ಆ ಊರಲ್ಲಿ ಸರಕಾರದಿಂದ ಮಾನ್ಯತೆ ಪಡೆದ ಊರಸಭೆ ಅಸ್ತಿತ್ವಕ್ಕೆ ಬಂದಾಗ ಆಗ ಇದ್ದ ಕುಟುಂಬದ ಮುಖ್ಯಸ್ಥರು ಊರ ಪ್ರಜೆಗಾಮುಣ್ಡರೆನಿಸಿ ಊರಿನ ಸಭೆಯ ಸದಸ್ಯರಾದರು. ತಲಕಾಡಿನಲ್ಲಿ ಇವರ ಸಂಖ್ಯೆ ೨೫. ಧಾರವಾಡ ಜಿಲ್ಲೆಯ ಎಲೆಶಿರೂರಲ್ಲಿ ೧೦೦೫ ರಿಂದ ೧೧೩೮ರ ವರೆಗೂ ಐವತ್ತೊಕ್ಕಲೇ ಇದ್ದರೆಂದು ಪ್ರೊ॥ ದೀಕ್ಷಿತರು ತೋರಿದ್ದಾರೆ.[೬]

ಆದರೆ ಹಳ್ಳಿ ಬೆಳೆದು ಪಟ್ಟಣವಾದಾಗ ಇತರ ವೃತ್ತಿಯ ಜನರೂ ಊರ ಸಭೆಯಲ್ಲಿ ಸೇರಿದರು. ಬಳ್ಳಿಗಾವೆಯಿ ಅಳ್ಳೆರ ಶಾಸನದಲ್ಲಿ ಊರ ಸಭೆಯನ್ನು "ಪಾರ್ವರುಂ ಪ್ರಜೆಯಂ" ಎಂದಿದ್ದು ಇಲ್ಲಿ ಬ್ರಾಹ್ಮಣರೂ (ಅಗ್ರಹಾರದವರೂ) ರೈತರೂ ಸೇರಿದ್ದರೆಂದು ಭಾವಿಸಬಹುದು. ಇಗ್ಗಲಿಯ ೧೦ನೇಯ ಶತಮಾನದ ಶಾಸನದಲ್ಲಿ (ನಂಜನಗೂಡು, ೨೪) "ಇಲ್ಲಿಯ ಪುರದ ಒಕ್ಕಲಿನವರು" ಎಂದು ರೈತರಾದ ತೊರೆಕಾವಗೌಡ, ಬಿವಗದ ಗೌಡ ಎಂದು ಉಲ್ಲೇಖಿಸಿ, ಮುಂದೆ ಇಲ್ಲಿನ "ಬೆಸಮಕ್ಕಳಾರೆಂದೊಡೆ" ಎನ್ನುತ್ತ ಬಿಳಿಯಾಚಾರಿ, ಕುಂಬಾಚಾರಿ ಎಂಬ ಇತರ ವೃತ್ತಿಯವರ ಹೆಸರೂ ಇದೆ. ತಲಕಾಡಿನಲ್ಲಿ ಕೂಡ ೯೩೫ರಲ್ಲಿ "ತಲೆಕಾಡಿನಾ ಮಹಾನಗರ ಮುಂಪಟ್ಟಣ ವಸಂತಕ ಮಂಚಯನುಂ ಇಪ್ಪತ್ತೈವರುಂ" ಎಂದು ತ್ರಿವರ್ಗದ ಕೂಡಿ ಕೈಕೊಂಡ ನಿರ್ಣಯಗಳನ್ನು ಹೇಳಿದೆ. ಇಲ್ಲಿ ವ್ಯಾಪಾರಿಗಳು, ರೈತರು (೨೫; ಇದು ೭೨೬ರಲ್ಲಿ ಇದ್ದ ಸಂಖ್ಯೆ; ಹಿಂದೆ ನೋಡಿದೆ) ಹಾಗೂ 'ಪಟ್ಟಣ ವಸಂತ' ಎಂಬ ವ್ಯಕ್ತಿಯ ಹೆಸರು ಹೇಳಿದೆ (ಹಳ್ಳಿ ಬೆಳೆದು ಪಟ್ಟಣವಾದಾಗ ರೈತರ ಮಹತ್ವ ಕುಂದಿ, ಊರ ಸಭೆಯಲ್ಲಿ ವ್ಯಾಪಾರಿಗಳಿಗೂ ಇತರರಿಗೂ ಮಹತ್ವ ಬಂದುದು ಕಾಣಿಸುತ್ತಿದೆ. ಇದು ಲಕ್ಷ್ಮೇಶ್ವರದ ಶಾಸನಗಳಲ್ಲಿ ಇನ್ನೂ ಸ್ಪಷ್ಟವಾಗುತ್ತದೆ.) ಮುಂದೆ ತಲಕಾಡಿನ ಊರ ಸಭೆಯಲ್ಲಿ 'ತೆಲ್ಲಿಗ ಸಮುದಾಯ' ಸೇರಿದ್ದು ಕಾಣಬರುತ್ತದೆ.

ಹಳ್ಳಿಗಳಲ್ಲಿ ಗಾಮುಣ್ಡ ಅಥವಾ ಗ್ರಾಮವೃದ್ಧರೆಂದರೆ ರೈತರು ಗ್ರಾಮವೃದ್ಧರ ಕರ್ತವ್ಯಗಳನ್ನು ಕೌಟಿಲ್ಯ ಸೂಚಿಸಿರುವ ಈ ಗಾಮುಣ್ಡರೇ ಕರ್ನಾಟಕದಲ್ಲಿ ಮಾಡುತ್ತಿದ್ದರೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಈ 'ಗಾಮುಣ್ಡ'ರ ವಂಶಸ್ಥರನ್ನು 'ಗೌಡ' ಎಂಬ ಹೆಸರಿನಿಂದ ಕರೆಯುವುದು ರೂಢಿಯಾಯಿತು.

ಹಾಗಾದರೆ ಊರಗೌಡನಿಗೆ ಏನು ಹೆಸರಿತ್ತು? ದಾವಣಗೆರೆ ತಾ॥ನ ಕಬ್ಬೂರ ೧೧೧೪ರ ಶಾಸನದಲ್ಲಿ ಕಬ್ಬೂರ ಮೊಚ ಗಾವುಂಡನ ಅನುಮತಿ ಪಡೆದ ಒಂದು ನಿರ್ಣಯವಿದೆ. ಬಹುಶಃ ಊರ ಗೌಡನಿಗೆ **ಮೂಲಿಗ** ಎನ್ನುತ್ತಿದ್ದರು. ಕಬ್ಬೂರಲ್ಲಿ ಮಾಚಗಾವುಂಡನೇ 'ಮೂಲಿಗ' ಬೆಳಗುತ್ತಿಯಲ್ಲಿ ಮೂಲಿಗರು ೧೧೨೨ರಲ್ಲಿ ಬೊಮ್ಮಗವುಡ ಮತ್ತು ಮಾಚಗವುಡ. ಇವರನ್ನು 'ಪ್ರಭುಗವುಡ' ಎಂದೂ ಕರೆದಿದೆ ಹೀಗಾಗಿ ಊರ ಗೌಡನಿಗೆ ಮೂಲಿಗ, ಪ್ರಭುಗಾವುಂಡ ಎಂಬ ಅಭಿದಾನವಿತ್ತು. ಹೊನ್ನಾಳಿ ತಾಲೂಕಿನ (ಸಂ. ೭೦) ಒಂದು ಶಾಸನದಲ್ಲಿ "ಬೆಳಗುವತ್ತಿದು ಮೂಲಿಗ ಬೊಮ್ಮಗವುಡ ಹಾಗೂ ಮಾಳಗವುಡ, ಬಡತೂರ

ಕೇತಗವುಡ ಮುಂತಾದ ಊರ ಪ್ರಭು ಗಾವುಂಡರು" ಎಂದಿರುವುದನ್ನು ಗಮನಿಸಬಹುದು. ಕೆಲವೆಡೆ ಇವರನ್ನು 'ಪ್ರಭುಗಳು' ಎಂದಿದೆ. ೧೧೨೧ರ ಆನೆಕೊಂಡ ಶಾಸನದಂತೆ (ದಾವಣಗೆರೆ ೩) ಬೆಳ್ಳೂರಿಗೆ ಮೂವರು ಪ್ರಭುಗಳಿದ್ದರು. ಬೆಳ್ಳೂರು ಆಗ ದೊಡ್ಡ ಪಟ್ಟಣ. ಆದರೆ ದೇವಳಿಗೆ ನಾಡು ಎಂಬ ಚಿಕ್ಕಮಗಳೂರು ಪರಿಸರ ನಾಡಲ್ಲಿ ೭೨ ಊರುಗಳಿದ್ದು ಅದರ ೭೨ ಪ್ರಭುಗಳ ಉಲ್ಲೇಖ ಶಾಸನದಲ್ಲಿ ಇದೆ (ಎಂದರೆ ಊರಿಗೊಬ್ಬ ಪ್ರಭು ಎಂದಾಯಿತು). ಇದೇ ರೀತಿ ೧೨೯೮ರ ಒಂದು ಶಾಸನದಲ್ಲಿ ಮಣ್ಣುನಾಡ ಸಮಸ್ತ ಪ್ರಭುಗವುಡುಗಳೆಂದು ಆರು ಊರಿನ ಆರು ಗೌಡರ ಹೆಸರು ಹೇಳಿದೆ (ಚಾ. ನಗರ, ೨೩೬).

ಈಗಾಗಲೇ ಕಂಡಂತೆ ಕೆಲವು ಊರುಗಳಿಗೆ ಒಂದಕ್ಕು ಹೆಚ್ಚು ಗೌಡರು (ಪಟೇಲರ) ಇದ್ದ ಅಪರೂಪದ ಪ್ರಸಂಗಗಳಿದ್ದರೂ (ಮೇಲೆ ಕಂಡ ಬೆಳ್ಳೂರು ಅಥವಾ ಬೆಳಗುತ್ತಿ) ಕಾಲಕ್ರಮದಲ್ಲಿ 'ಏಕಭೋಗ' ಗೌಡಿಕೆ ರೂಢಿಗೆ ಬಂತು. ಎಂದರೆ ಊರಿಗೆ ಒಬ್ಬನೇ ಗೌಡನೆಂದು ಅರ್ಥ. ಇವರಿಗೆ 'ಗೌಡುಂಬಳಿ', 'ಗೌಡಿಕೆಯ ಕೊಡಿಗೆ' ಇರುತ್ತಿತ್ತೆಂದು ಶಾಸನಗಳು ಹೇಳಿವೆ. ಕೆಲವೆಡೆ ಇವರಿಗೆ ದಂಡಿಗೆ (ಪಲ್ಲಕ್ಕಿ) ಉಂಬಳಿಯೂ ಇತ್ತು.

ಊರ ಗೌಡನಿಗೆ ಗ್ರಾಮಪತಿ, ಗ್ರಾಮಣಿ, ಹೆಗ್ಗಡೆ, ನಾಯಕ, ಊರಾಳ, ಭೋಜಕ ಎಂಬ ಶಬ್ದಗಳನ್ನು ಬಳಸಿದ್ದು ಶಾಸನಗಳಲ್ಲಿ ಕಾಣಬರುತ್ತದೆ.

ಆದರೆ, 'ಗಾಮುಣ್ಡ' ಎಂಬ ಶಬ್ದ ಮೂಲತಃ 'ಗ್ರಾಮವೃದ್ಧ' ಎಂದರೆ ಊರಹಿರಿಯ ಅಥವಾ ಗ್ರಾಮಸಭೆಯ ಸದಸ್ಯ ಎಂಬ ಅರ್ಥದಲ್ಲಿ ಮೊದಲು ಬಳಕೆಯಾಗಿತ್ತೆಂದು ಇಲ್ಲಿ ಸ್ಪಷ್ಟಪಡಿಸಬೇಕು. ಹಳ್ಳಿಗಳಲ್ಲಿದ್ದ ರೈತ ಗಾವುಣ್ಡರ ವಂಶಸ್ಥರನ್ನೆಲ್ಲ ಈಗ 'ಗೌಡ' ಎಂದು ಕರೆಯಲಾಗುತ್ತಿದೆ.

ಪಟೇಲರ ಬಗ್ಗೆ 'ಸ್ಥಾನಿಕಪ್ರಭು' ಎಂಬ ಶಬ್ದ ೧೧೮೨ರಲ್ಲಿ ಬಳಕೆಯಾಗಿದೆ (ಹಾಸನ ೨೪೦). ಬೆಳಗೋಡಿನ ಸ್ಥಾನಿಕ ಪ್ರಭು ಎಂಬ ಉಲ್ಲೇಖ ವಿಜಯನಗರ ಕಾಲದ ಶಾಸನದಲ್ಲಿ ಇದೆ (ಮಂಜರಾಬಾದ್ ೨೨). ಇದರಿಂದ ಪ್ರತ್ಯೇಕವಾಗಿ 'ಮಹಾಪ್ರಭು' ಶಬ್ದವಿದೆ. ಉದಾಹರಣೆಗೆ 'ಕುಡುಗನಾಡ ಮಹಾಪ್ರಭು' (೧೧೫೭; ಗುಂಡಲ್ಲಿ ಪೇಡೆ ೨೧೫). ಇದೇ ರೀತಿ ಮೈಸೂರು ತಾಲೂಕಿನ ಮರಕೆ ಶಾಸನದಲ್ಲಿ ..... ನಾಡ ಮಹಾಪ್ರಭು ಮರವಸೆಯ ಕೇತಗವುಡ (ಮೈಸುರ ೧೯೧) ನ ಉಲ್ಲೇಖವಿದೆ. ಇಂಥ ಉದಾಹರಣೆಗಳು ಅನೇಕ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಅಳತೇಕರ್, ಸ. ಅ., **ರಾಷ್ಟ್ರಕೂಟಾಸ್ ಅಂಡ್ ದೆಯರ್ ಟೈಂಸ್** ಪು. ೧೮೯.
*೨. **ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್** ಸಂ. ೪, ಪು. ೬೪.
*೩. ಕಾಂಗಿ, ಆರ್. ಪಿ. (ಸಂ.) **ಕೌಟಿಲ್ಯಾಸ್ ಅರ್ಥಶಾಸ್ತ್ರ** (ಮೋತಿಲಾಲ್ ಬನಾರಸಿದಾಸ್, ದೆಹಲಿ, ೧೯೭೨) ಸಂ. ೧, ೩೦೯ (೪.೪.೯).
*೪. ಕಾಂಗಿ, ೨.೧.೨೭; ೩.೫.೨೦; ೩.೧೨.೧೨; ೩.೯.೧೫; ಇತ್ಯಾದಿ.
*೫. **ಎಪಿಗ್ರಾಫಿಯಾ ಕರ್ನಾಟಿಕಾ** (ಹಳೆಯದು) ೧೧, ಚಿತ್ರದುರ್ಗ ೨೪.
*೬. ದೀಕ್ಷಿತ್ ಜಿ. ಎಸ್., **ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಇನ್ ಮಿಡೀವಲ್ ಕರ್ನಾಟಕ** (ಧಾರವಾಡ).

ಡಾ|| ವಿಠ್ಠಲ ಪೋತದಾರ*

ಪೆರ್ಜುಂಕ, ವಡ್ಡರಾವುಳ, ಕಿರುದರೆ - ಕಿರುಕುಳ ಪದಗಳ ಒಂದು ಅಧ್ಯಯನ

ಪ್ರಾಚೀನ ಕರ್ನಾಟದಲ್ಲಿಯ ತೆರಿಗೆ ವ್ಯವಸ್ಥೆ ಅನೇಕ ವೈಶಿಷ್ಟ್ಯಗಳಿಗೆ ಹೆಸರುವಾಸಿಯಾಗಿದ್ದು, ಇದರ ಅಧ್ಯಯನ ಇತಿಹಾಸದ ಆಸಕ್ತರನ್ನು ನಿರಂತರವಾಗಿ ಆಕರ್ಷಿಸುತ್ತಿದ್ದು, ವಿವಿಧ ಪ್ರಕಾರದ ವಿಚಾರಗಳನ್ನು ಮಂಡಿಸಲು ಅವಕಾಶ ನೀಡಿದೆ. ಈ ಅಧ್ಯಯನದ ಸಮಯದಲ್ಲಿ ಕೆಲವು ಕ್ಲಿಷ್ಟಕರವಾದ ಪದಗಳು ಸಹ ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಅಂತಹ ಮೂರು ಪದಗಳನ್ನು ಶಾಸನಗಳ ಸಹಾಯದಿಂದ ಅಭ್ಯಸಿಸಿ, ಅವುಗಳ ಅರ್ಥವನ್ನು ಕಂಡುಹಿಡಿಯಲು ಪ್ರಯತ್ನಿಸಲಾಗಿದೆ.

ಪೆರ್ಜುಂಕ, ವಡ್ಡರಾವುಳ, ಕಿರುದೆರೆ - ಕಿರುಕುಳ - ಕಿರುಕುಳಾಯ ಈ ಪದಗಳನ್ನು ತೆರಿಗೆಗೆ ಸಂಬಂಧಿಸಿದಂತೆ - ಶಾಸನಗಳಲ್ಲಿ ಅನೇಕ ವೇಳೆ ಕಾಣುತ್ತೇವೆ. ಶಾಸನಗಳಲ್ಲಿಯ ಉಲ್ಲೇಖಗಳಿಂದ ಇವು ಬಹು ಮುಖ್ಯ ತೆರಿಗೆಗಳೆಂದು ಕಂಡು ಬಂದರೂ ಸಹ ಇವುಗಳ ಸ್ವರೂಪವನ್ನು ತಿಳಿಯುವುದು ಕಷ್ಟಸಾಧ್ಯ. ಈಗ ಒಂದೊಂದಾಗಿ ಈ ತೆರಿಗೆಗಳನ್ನು ಪರಿಶೀಲಿಸೋಣ

ಪೆರ್ಜುಂಕ, ಹೆರ್ಜುಂಕ, ಹೆಜ್ಜುಂಕ: ಈ ತೆರಿಗೆ ಪದವನ್ನು *ಪಿರಿಯ ಸುಂಕ* ಅಥವಾ *ಹಿರಿಯಸುಂಕ* ಎಂದು ವಿವರಿಸಬಹುದು. ಪದದ ಅಕ್ಷರಶಃ ಅರ್ಥದಿಂದ ಇದನ್ನು ಒಂದು 'ದೊಡ್ಡ ತೆರಿಗೆ' ಎಂದು ಹೇಳಬಹುದು. ಆದ್ದರಿಂದಲೇ ಬಿ. ಎಲ್. ರೈಸ್ ಅವರು ಇದನ್ನು '*ಸಗಟು ವಸ್ತುಗಳ ಮೇಲೆ ವಿಧಿಸುವ ಒಂದು ಅಬ್ಕಾರಿ ಶುಲ್ಕ*' (customs duty) ಎಂದು ಅರ್ಥೈಸುತ್ತಾರೆ.(೧)

ಶಾಸನಗಳಲ್ಲಿ ಈ ತೆರಿಗೆಯನ್ನು ವಿವಿಧ ಪ್ರಕಾರದ ತೆರಿಗೆಯಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಲಾಗಿದೆ. ಉದಾಹರಣೆಗೆ, ಕ್ರಿ. ಶ. ೧೧೧೭ರ ಶಾಸನದ ಸಾಲುಗಳನ್ನು ಗಮನಿಸಿದಾಗ ಇದೊಂದು '*ವಸ್ತುಗಳು ಮಾರುಕಟ್ಟೆ ಪ್ರವೇಶಿಸುವಾಗ ವಿಧಿಸಲಾಗುತ್ತಿದ್ದ ಸುಂಕವಾಗಿತ್ತು*' ಎಂದು ಗೊತ್ತಾಗುತ್ತದೆ [(entry tax) "ಬೆಳ್ವೊಲದಿಂ ಬಂದ ಭಂಡಕ್ಕೆ ಹೆಜ್ಜಂಕಮನ್ನೆೈದುಕೊಳ್ವರು"].(೨) ಆದರೆ ಕ್ರಿ. ಶ. ೧೧೧೮ರ ಶಾಸನದಿಂದ ಇದನ್ನು ಸಗಟುವಸ್ತುಗಳ ಮೇಲೆ ವಿಧಿಸಲಾಗುತ್ತಿತ್ತು ಎಂಬ ಅಂಶ ಗೊತ್ತಾಗುತ್ತದೆ(ಪೆರ್ಜುಂಕದ ದೆಸೆಯಿಂ ಬಿಟ್ಟ ಎತ್ತು ಇಪ್ಪತ್ತೈದು).(೩) ಅಂದರೆ ಇಪ್ಪತ್ತೈದು ಎತ್ತುಗಳ ಮೇಲೆ ಸಾಗಿಸಿದ ಹೊರೆಗೆ ಅಥವಾ ವಸ್ತುಗಳ ಮೇಲೆ ವಿಧಿಸಿದ ಸುಂಕ ಎಂದು ಅರ್ಥೈಸಬಹುದು. ಇಂತಹ ವಿವರ ಕ್ರಿ. ಶ. ೧೧೦೭ರ ಶಾಸನದಲ್ಲಿಯೂ ದೊರೆಯುತ್ತದೆ (ಮಲ್ಲಪಯ್ಯ ನಾಯಕರು ಬಿಟ್ಟ ಹೆಜ್ಜುಂಕಮುಮಂ ೫೨೫ ಎತ್ತಿಂಗೆ).(೪)

ಇದೇ ರೀತಿಯಾಗಿ ಈ ತೆರಿಗೆಯನ್ನು ಸಾರಿಗೆ ವ್ಯವಸ್ಥೆಯ ಮೇಲೆ(೫), ಕೃಷಿ ಭೂಮಿಯ ಮೇಲೆ(೬) ಗ್ರಾಮ ಅಥವಾ ನಗರ ಮಟ್ಟದಲ್ಲಿ(೭) ಮತ್ತು ಪ್ರಾಂತ್ಯ ಮಟ್ಟದಲ್ಲಿ(೮) ವಿಶೇಷವಾಗಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುವ ವಾಣಿಜ್ಯ ಚಟುವಟಿಕೆಗಳ ಮೇಲೆ ವಿಧಿಸಿದ ಉಲ್ಲೇಖಗಳನ್ನು ಗಮನಿಸಿದರೆ, ಇದು ನಿಜವಾದ ಅರ್ಥದಲ್ಲಿ ಒಂದು ದೊಡ್ಡ ತೆರಿಗೆ (Super Tax) ಆಗಿರಬೇಕು.

ವಡ್ಡರಾವುಳ: ಈ ಪದವು ಶಾಸನಗಳಲ್ಲಿ ಒಂದು ತೆರಿಗೆಯಾಗಿ ಸೂಚಿತವಾಗಿದ್ದರೂ ಸಹ ಇದರ ಅರ್ಥವಿಶ್ಲೇಷಣೆ ಸ್ವಲ್ಪ ಕ್ಲಿಷ್ಟಕರವಾಗಿದೆ. ಈ ತೆರಿಗೆಯು ಅನೇಕ ಸಂದರ್ಭಗಳಲ್ಲಿ ಪೆರ್ಜುಂಕದ ಜೊತೆಗೆ ಉಲ್ಲೇಖಗೊಂಡಿದ್ದು, ಎರಡೂ ತೆರಿಗೆಗಳನ್ನು ಒಬ್ಬನೇ ತೆರಿಗೆ ಅಧಿಕಾರಿ ಸಂಗ್ರಹಿಸಿದ ಬಗ್ಗೆ ತಿಳಿದು ಬರುತ್ತದೆ. ಈ ತೆರಿಗೆಯು ಎರಡು ಪದಗಳನ್ನು **ವಡ್ಡ** ಮತ್ತು **ರಾವುಳ** ಒಳಗೊಂಡಿದೆ. ವಡ್ಡ(೯) ಎಂಬ ಪದ ಸಂಸ್ಕೃತದ ವೃದ್ಧ ಅಂದರೆ ಹಿರಿಯ, ದೊಡ್ಡ ಎಂಬ ಅರ್ಥವನ್ನು ನೀಡಿದರೆ, ರಾವುಳ ಪದವನ್ನು ಅರ್ಥೈಸುವದು ಜಟಿಲವೆನಿಸಿದೆ. ಆದರೆ ಡಾ|| ಕೆ. ವಿ. ರಮೇಶ ಅವರು ಈ ಪದದ ಮೂಲವನ್ನು ಸಂಸ್ಕೃತ ಪದವಾದ ವೃದ್ಧರಾಜಕುಲದೊಡನೆ ಗುರುತಿಸಿ, ಇದೊಂದು ರಾಜಮನೆತನದ ಹಿರಿಯರ ನಿರ್ವಹಣೆಗಾಗಿ (Maintenance) ಸಂಗ್ರಹಿಸುತ್ತಿದ್ದ

* ಇತಿಹಾಸ ಉಪನ್ಯಾಸಕ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಂಗಳೂರು - ೫೬೦ ೦೬೪.

ತೆರಿಗೆ ಎಂದು ಅರ್ಥೈಸುತ್ತಾರೆ. ಆದರೆ ಅನೇಕ ಶಾಸನಗಳಲ್ಲಿಯ ವಿವರಣೆಯನ್ನು ಗಮನಿಸಿದಾಗ ಈ ಸಲಹೆ ಸಮ್ಮತವೆನಿಸುವುದಿಲ್ಲ. ವಡ್ಡರಾವುಳ ಮತ್ತು ಹೆರ್ಜುಂಕ ಎರಡು ಬೇರೆ ತೆರಿಗೆಗಳು ಆದರೂ ಸಹ ಅನೇಕ ಸಂದರ್ಭಗಳಲ್ಲಿ ಇವನ್ನು ಒಂದೇ ವಸ್ತುವಿನ ಮೇಲೆ ಆಕರಿಸಿದ ವಿವರಗಳು ದೊರೆಯುತ್ತವೆ. ಉದಾಹರಣೆಗೆ, ಕ್ರಿ. ಶ. ೧೧೪೧ರ ಶಾಸನವು ಪೆರ್ಜುಂಕ ಮತ್ತು ವಡ್ಡರಾವುಳವನ್ನು ಏಕಮಾತ್ರ ತೋಟದ ಮೇಲೆ ವಿಧಿಸಿದ್ದನ್ನು ತಿಳಿಸುತ್ತದೆ[೧೧] (ಶ್ರೀ ಕಾಣಿಯ ಮೂಲಾಸ್ಥಾನದೇವರ ತೋಂಟದ ಪೆರ್ಜುಂಕಮುಮಂ ವಡ್ಡರಾವುಳಮುಮಂ). ಇದೇ ರೀತಿಯ ವಿವರವನ್ನು ಕ್ರಿ. ಶ. ೧೧೦೬ರ ಶಾಸನವು ಸಹ ನೀಡುತ್ತದೆ (ಪನ್ನಾಯದ ಎಲೆಯ ಹೇರಿನ ವಡ್ಡರಾವುಳ ಹೆರ್ಜುಂಕಂ).[೧೨] ಇಂತಹ ಉದಾಹರಣೆಗಳ ಸಹಾಯದಿಂದ ಹೆರ್ಜುಂಕವನ್ನು ಸಗಟು ವಸ್ತುಗಳ ಸಾಗಾಟದ ಮೇಲೆ ವಿಧಿಸಿದ ಸುಂಕ ಮತ್ತು ವಡ್ಡರಾವುಳವನ್ನು ನಿಜವಾದ ವಸ್ತುಗಳ ಮೇಲೆ ವಿಧಿಸಿದ ತೆರಿಗೆ ಎಂದು ಊಹಿಸಬಹುದು. ಆದರೆ ಈ ಅರ್ಥಕ್ಕೆ ವ್ಯತಿರಿಕ್ತವಾಗಿ ಕ್ರಿ. ಶ. ೧೧೧೮ರ ಶಾಸನವೊಂದು "ಇರ್ಪತ್ತು ಎತ್ತಿನ ವಡ್ಡರಾವುಳದ ಸುಂಕ" ಎಂಬ ವಿವರನ್ನು ನೀಡಿದಾಗ, ವಡ್ಡರಾವುಳವನ್ನು ಇಪ್ಪತ್ತು ಎತ್ತುಗಳ ಮೇಲೆ ಅಂದರೆ ಅವುಗಳು ಸಾಗಿಸುವ ವಸ್ತುಗಳ ಮೇಲೆ **ಸಾಗಾಟ ಕರ**ವಾಗಿ ವಸೂಲು ಮಾಡಿದ ಅಂಶ ಗೊತ್ತಾಗುತ್ತದೆ.

ಈ ರೀತಿಯಾಗಿ ಈ ಎರಡೂ ತೆರಿಗೆಗಳೂ ಶಾಸನಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಅರ್ಥವನ್ನು ಕೊಡುವ ತೆರಿಗೆ ಪದಗಳಾಗಿ ಗೋಚರಿಸಿದರೂ ಸಹ, ಇವುಗಳನ್ನು ವಿಶೇಷವಾಗಿ ಅಲ್ಪ ಪ್ರಮಾಣದ ವಾಣಿಜ್ಯ ಚಟುವಟಿಕೆಗಳ ಮೇಲೆ ವಿಧಿಸದೇ ಸಗಟು ವ್ಯಾಪಾರದ ಚಟುವಟಿಕೆಗಳ ಮೇಲೆ ವಿಧಿಸಿದ್ದನ್ನು ಕಂಡಾಗ ಇವು ಪ್ರಾಚೀನ ಕಾಲದಲ್ಲಿಯ ಎರಡು ಪ್ರಮುಖ ತೆರಿಗೆಗಳಾಗಿರಬಹುದೆಂದು ಊಹಿಸಬಹುದು.

ಕಿರುದೆರೆ, ಕಿರುಕುಳ: ಮೇಲಿನ ಪದಗಳಿಗೆ ವಿರುದ್ಧವಾದ ಅರ್ಥವನ್ನು ಕೊಡುವ ತೆರಿಗೆ ಪದ ಕಿರುದೆರೆ, ಕಿರುಕುಳ, ಕಿರುಕುಳಾಯ - ಇದನ್ನು ಚಿಕ್ಕಪ್ರಮಾಣದ ವಹಿವಾಟಿನ ಮೇಲೆ ವಿಧಿಸುತ್ತಿದ್ದರು. ಬಿ. ಎಲ್. ರೈಸ್ ಅವರು ಈ ಮೂರು ಪದಗಳನ್ನು ``Taxes on miscellaneous and petty retail articles" ಎಂದು ವಿವರಿಸುತ್ತಾರೆ.[೧೩] ಕಿರು ಎಂದರೆ ಚಿಕ್ಕದು, ಕಡಿಮೆ ಎಂದರ್ಥ. ಆದ್ದರಿಂದ ಕಿರುದೆರೆ, ಕಿರುಆಯ, ಕಿರುಸುಂಕ[೧೪] ಎಂಬ ಶಬ್ದಗಳು ಒಂದು ಚಿಕ್ಕ ತೆರಿಗೆ ಅಥವಾ ಆದಾಯ ಎಂಬ ಅರ್ಥವನ್ನು ನೀಡುತ್ತವೆ. ಆದರೆ ಕ್ರಿ. ಶ. ೧೧೯೭-೯೮ರ ಶಾಸನದಲ್ಲಿ ಕಿರುಕುಳತೆರೆ ಎಂಬ ಪದವನ್ನು ಬಳಸಲಾಗಿದೆ.[೧೫] ಮತ್ತೊಂದು ವಿಶೇಷತೆ-ಯೆಂದರೆ ಕ್ರಿ. ಶ. ೧೦೫೫ರ ಶಾಸನದಲ್ಲಿ ಸಿದ್ಧಾಯ, ಕಿರುದೆರೆ, ಕಿರುಕುಳ ಎಂಬ ತೆರಿಗೆ ಪದಗಳನ್ನು ಸೂಚಿಸಲಾಗಿರುವುದರಿಂದ,[೧೬] ಕಿರುಕುಳ, ಕಿರುದೆರೆ ಅಥವಾ ಕಿರುಸುಂಕಕ್ಕಿಂತ ಭಿನ್ನ ಅರ್ಥವನ್ನು ನೀಡುವ ಪದವಾಗಿರುವದು ಗೋಚರವಾಗುತ್ತದೆ. ಇದೇ ರೀತಿಯಾಗಿ ಕ್ರಿ. ಶ. ೧೦೮೮ರ ಶಾಸನವು ಬಣ್ಣಿಗೆ, ಸಾದ, ಕಿರುದೆರೆ ಮತ್ತು ಕಿರುಕುಳಾಯ ಎಂಬ ತೆರಿಗೆಗೆಳನ್ನು ಪ್ರತ್ಯೇಕವಾಗಿ ಸೂಚಿಸುತ್ತದೆ.[೧೭] ಈ ಶಾಸನದ ವಿವರದಿಂದ ಕಿರುಕುಳ ಎಂಬುದು ಒಂದು ತೆರಿಗೆಯ ಅಥವಾ ಒತ್ತಾಯ ಪೂರ್ವಕವಾಗಿ ವಸೂಲಿ ಮಾಡುತ್ತಿದ್ದ ಒಂದು ವಂತಿಗೆಯೆ ಅಥವಾ ಆದಾಯವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಆದರೆ ಕ್ರಿ. ಶ. ೧೦೭೪ರ ಶಾಸನ ಮನೆವಣ, **ಪಿರಿಯರವಣ**, ಕಾಳ್ಗೊಚ್ಚು, ಮೇಟಿಗಂಡೂಗ, ಅಂಗಡಿಯ ತಿಂಗಳಿನ ಬೇಳೆ ಮುಂತಾದ ಆದಾಯವನ್ನು ಕಿರುದೆರೆ ಎಂದು ಪರಿಗಣಿಸುತ್ತದೆ.[೧೮] ಇದೇ ರೀತಿಯಾಗಿ ಕ್ರಿ. ಶ. ೧೨೨೮ರ ಶಾಸನವು ಅಲ್ಲ-ಬೆಲ್ಲ-ಅರಿಷಿಣ ಮುಂತಾದವುಗಳನ್ನು ಕಿರುಕುಳ ಎಂದು ವರ್ಗೀಕರಿಸಿದ್ದನ್ನು ಗಮನಿಸಿದರೆ (ಅಲ್ಲ ಬೆಲ್ಲ ಅರಿಷಿಣ ಮೊದಲಾಗಿ ಕಿರುಕುಳವೆಲ್ಲವಂ),[೧೯] ಕಿರುಕುಳ ಪದವನ್ನು ಬಿಡಿವಸ್ತುಗಳು ಎಂಬ ಅರ್ಥದಲ್ಲಿ ಉಪಯೋಗಿಸಿದ್ದನ್ನು ಗಮನಿಸಬಹುದು. ಆದ್ದರಿಂದ ಕಿರುದೆರೆ, ಕಿರುಸುಂಕ ಪದಗಳು 'ತೆರಿಗೆ' ಎಂಬ ಅರ್ಥವನ್ನು ನೀಡಿದರೂ ಸಹ ಕಿರುಕುಳ ಪದವು ತೆರಿಗೆ ಮತ್ತು ಬಿಡಿವಸ್ತು ಎಂಬ ಎರಡೂ ಅರ್ಥಗಳನ್ನು ನೀಡುತ್ತದೆ. ಅಂತಹ ಸಂದರ್ಭದಲ್ಲಿ ಕನ್ನಡ ಪದವಾದ ಕಿರುಕುಳ ಎಂಬುದನ್ನು ಒಂದು ದಂಡರೂಪದ ತೆರಿಗೆಯಾಗಿ ಅಧಿಕಾರದಲ್ಲಿದ್ದವರು ತಮ್ಮ ವಿರೋಧಿಗಳ ವಿರುದ್ಧ ಉಪಯೋಗಿಸಿದ ಸಾಧ್ಯತೆ ಕೂಡ ಇರಬಹುದು. ಇಂತಹ ನಿರ್ಧಾರಕ್ಕೆ ಬರುವದಕ್ಕಿಂತ ಮೊದಲು ಇನ್ನೂ ಹೆಚ್ಚಿನ ಸಂದರ್ಭಗಳನ್ನು ಗಮನಿಸುವ ಅವಶ್ಯಕತೆ ಇದೆ.

ಒಟ್ಟಿನಲ್ಲಿ ಪೆರ್ಜುಂಕ, ವಡ್ಡರಾವುಳ, ಕಿರುದೆರೆ, ಕಿರುಕುಳ ಪದಗಳು ಶಾಸನಗಳಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಕಂಡು ಬಂದರೂ ಸಹ, ಅವು ಬೇರೆ ಬೇರೆ ಸಂದರ್ಭಗಳಲ್ಲಿ ಬದಲಾದ ಅರ್ಥವನ್ನು ನೀಡುವದರಿಂದ ಅವುಗಳ ಸರಿಯಾದ ಸ್ವರೂಪವನ್ನು ಗುರುತಿಸುವುದು ಸಮಸ್ಯಾತ್ಮಕವೆನಿಸಿ**ದೆ**

ದಯವಿಟ್ಟು ಈ ಅಂಶಗಳನ್ನು ಪರಿಶೀಲಿಸಬಹುದೆ?

[ಶಾಸನಗಳಲ್ಲಿ ಕಿಱುಕುಳ, ಕಿಱುದೆಱೆ, ಕಿಱುಕುಳಾಯ ಎಂದು ಮೂಲತಃ ಶಕಟರೇಫಯುಕ್ತವಾಗಿಯೂ ಈ ಶಬ್ದಗಳು ಬಳಕೆಗೊಂಡಿವೆ. ಕಿಱುಕುಳ ಎಂದರೆ ಚಿಲ್ಲರೆತೆರಿಗೆ ಎಂಬುದು ಸಾಮಾನ್ಯ ಅರ್ಥ. ೧೧೯೭ರ ಶಾಸನವೊಂದರಲ್ಲಿ ಮಗ್ಗದೆಱೆ, ಗಾಣದೆಱೆ ಸಮಸ್ತ ಕಿಱುಕುಳತೆಱೆ ಮಾರಾಟ;... ಕೊಟರು; ೧೨೭೦ರ ಶಾಸನವೊಂದರಲ್ಲಿ ಮಗ್ಗದೆಱೆ, ಆಡುದೆಱೆ ಮುಖ್ಯವಾದ ಎಲ್ಲಾ ಕಿಱುಕುಳಂಗಳು; ೧೨೨೯ರ ಶಾಸನವೊಂದರಲ್ಲಿ ಅಲ್ಲ ಬೆಲ್ಲ ಅರಿಸಿನ ಮೊದಲಾಗಿ ಕಿಱುಕುಳವೆಲ್ಲವಂ ಪಸಾರಕೊಂದೊಂದ ಕೊಟ್ಟರ್; ೧೦೬೨ರ ಶಾಸನವೊಂದರಲ್ಲಿ ಕಿಱುದೆಱೆ ಕಿಱುಕುಳಾಯಂ ಪಾಯದ್ರಮ್ಮಂ; ೧೧೧೯ರ ಶಾಸನವೊಂದರಲ್ಲಿ ತೆಱೆಯಂ ಕಿಱುದೆಱೆಯಂ ಪೊಲತೆಱೆಯಂ ಮಾನ್ಯಕ್ಕೆ ಬಂದ ತೆಱೆಯಂ, ಎಂದೆಲ್ಲ ಉಕ್ತವಾಗಿವೆ. ಇವುಗಳಿಂದ ಅರ್ಥವನ್ನು ಹೆಕ್ಕಿ ಚಿಲ್ಲರೆ ಸಾಮಗ್ರಿಗಳ ಮೇಲೆ ಹಾಕುತ್ತಿದ್ದ ತೆರಿಗೆ 'ಕಿಱುಕುಳ' ಎಂಬ ಅರ್ಥವನ್ನು ವಿದ್ವಾಂಸರು ನೀಡಿದ್ದಾರೆ.

'ಅಲ್ಲ ಬೆಲ್ಲ... ಪಸಾರಕ್ಕೊಂದೊಂದಕೊಟ್ಟರು' ಎನ್ನುವಾಗ ಬಹುಶಃ ಸಂತೆಯಲ್ಲಿ ಅಂಗಡಿ ಮುಂದೆ ಪ್ರದರ್ಶನಕ್ಕಿಡುತ್ತಿದ್ದ ಸಣ್ಣವಸ್ತುಗಳ ಮೇಲೆ ಹಾಕುತ್ತಿದ್ದ ಅಂದರೆ ಚಿಲ್ಲರೆ ಸಾಮಗ್ರಿಗಳ ಮೇಲಿನ ತೆರಿಗೆ ಎಂದಿದ್ದಿರಬೇಕು. ಬಹುಶಃ ಇದು ಮೊದಲಿಗೆ ಇದ್ದ ರೂಢಿಗನುಗುಣವಾದ ಅರ್ಥವಿರಬೇಕು. ಮಗ್ಗದೆಱೆ ಮುಖ್ಯವಾದ ಕಿಱುಕುಳ ಎನ್ನುವಾಗ ಮುಂದಿನ ಕಾಲಕ್ಕೆ ಕಸುಬಿನ ಮೇಲೂ ವಿಧಿಸುತ್ತಿದ್ದ ಮುಖ್ಯ ತೆರಿಗೆ ಎಂಬ ಅರ್ಥವೂ ಕಾಣಬರುತ್ತದೆ. ಯಾವುದೋ ಅವಧಿಯಲ್ಲಿ ಇದು ಒತ್ತಾಯ ಗೊಂಡಿರಬಹುದಾಗಿದ್ದು, 'ತೂಂದರೆ', 'ಕಾಟ' ಎಂಬ ಸಾಹಿತ್ಯಕ ಕೃತಿಗಳ ಅರ್ಥವೂ ಮುಂದೆ ಇದಕ್ಕೆ ಆರೋಪಿತವಾಗಿರಬಹುದು. 'ಕಿಱುಕುಳಾಯ', ಕಿಱುಕುಳ ತೆರಿಗೆಗಳಿಂದ ಬರುವ ವರಮಾನವೆನ್ನಲಾಗಿದೆ. ಕಿಱುದೆಱೆ ಶಬ್ದದಲ್ಲಿಯೆ ಅಡಗಿರುವ ಅರ್ಥದಂತೆ ಒಂದು ಸಣ್ಣ ತೆರಿಗೆ. ಚಿಲ್ಲರೆ ತೆರಿಗೆ ಎನ್ನುವುದೂ ಉಂಟು.

ಪೆರ್ಜುಂಕ ಬೆಲೆಯುಳ್ಳ ಸರಕು ಹಾಗು ಪ್ರಾಣಿಗಳ ಮೇಲೆ ಹಾಕುತ್ತಿದ್ದ ಒಂದು ಬಗೆ ತೆರಿಗೆ ಎಂಬ ಅರ್ಥವಿರುವುದರಿಂದ ಪ್ರಾಣಿಗಳು ಹೇರನ್ನು ಹೊತ್ತು ಬರುವಲ್ಲಿ ಹೇರಿನ ಮೇಲಿನ ಸುಂಕ ಎಂಬ ಅರ್ಥವನ್ನು ವಿದ್ವಾಂಸರು ಆರೋಪಿಸಿರಬಹುದು.

ವಡ್ಡರಾವುಳ: ಎಂಬಲ್ಲಿ ವಡ್ಡ ಎಂದರೆ ಹಿರಿಯ, ರಾವುಳ ಎಂದರೆ ತೆರಿಗೆ ಎಂಬರ್ಥವೂ ಇರುವುದರಿಂದ ಅದನ್ನು ದೊಡ್ಡ ತೆರಿಗೆ ಎಂದು ಅರ್ಥೈಸಬಹುದು; ೧೦೫೩ರ ಶಾಸನವೊಂದರಲ್ಲಿ, ಶ್ರೀಮತ್ ವಡ್ಡರಾವುಳದ ಪೆರ್ಗ್ಗಡೆ ಸೋಮನಾಥಯ್ಯಂಗಳ ಬೆಸದೆ; ೧೦೬೭ರ ಶಾಸನವೊಂದರಲ್ಲಿ ಶ್ರೀಮತ್ ವಡ್ಡರಾವುಳದ ದಂಣ್ಡನಾಯಕಂ ನಾರಣಮಯ್ಯಂಗಳ್ ಎಂದಿರುವ ಕಾರಣ, ಈ ಹಿರಿ ತೆರಿಗೆ ಅಧಿಕಾರ ಬಹುಶಃ ರಾಜವಂಶಿಕ ಸಾಮಂತರಿಗಿದ್ದಿರಬಹುದಾದ ಕಾರಣ ಅದು ರಾಜಕುಲದವರ ಅಧಿಕಾರವೆಂದು ಮೊದಲಿಗೆ ಅರ್ಥವಿದ್ದು ಕೆಲ ವಿದ್ವಾಂಸರು ಹಾಗೆ ಅರ್ಥೈಸಲು ಕಾರಣವಾಗಿರಬಹುದು ಅಥವಾ ವಡ್ಡ=ಗುರು, ರಾವುಳ=ತೆರಿಗೆ ಎಂಬ ಅರ್ಥವನ್ನೂ ಗಮನಿಸಿದರೆ ಗುರು ಅರ್ಥಾತ್ ಮಠ, ದೇಗುಲಸಂಬಂಧೀ ತೆರಿಗೆ ಒಪ್ಪಿಸುವುದು ಅಥವಾ ರಾಜಗುರುಗಳಿಗೆ ಅರ್ಪಿಸುತ್ತಿದ್ದ ತೆರಿಗೆ ಎಂಬ ಅರ್ಥವೂ ಒಂದು ಕಾಲಕ್ಕೆ ಇದ್ದು ಅನಂತರ ಪರ್ಯಾಯ ಅರ್ಥಗಳಿಗೆ ಎಡೆಯಾಗಿರಬಹುದೆ? - (ಸಂ.)]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. Rice B. L. *Mysore and Coorg from Inscription.*, 175; ಡಾ॥ ಚಿದಾನಂದಮೂರ್ತಿಯವರು ಈ ಪದವನ್ನು ಪೇರುಸುಂಕ ಅಂದರೆ 'ಹೇರಿನ ಮೇಲಿನ ಸುಂಕ' ಎಂದು ಅರ್ಥೈಸಿದ್ದು ಸರಿಯಲ್ಲ, (ಚಿದಾನಂದಮೂರ್ತಿ ಎಂ. **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** - ಕ್ರಿ. ಶ. ೪೫೦-೧೧೫೦ ಪುಟ ೪೦೦)

*೨. KI, V ಸಂಖ್ಯೆ ೧೬

*೩. Kulkarni V. S.: *Historical and Cultural Studies of the region around Basavakalyana* (ಪಿ ಎಚ್. ಡಿ. ಪ್ರಬಂಧ) ಶಾಸನ ಸಂಖ್ಯೆ ೫೩

*೪. Shelke G. C.: *A History of Marathwada region* (ಪಿಎಚ್. ಡಿ. ಪ್ರಬಂಧ), ಶಾಸನ ಸಂಖ್ಯೆ ೭

*೫. EI, XXVIII ಪುಟ ೩೫, ಕ್ರಿ. ಶ. ೧೦೮೨

*೬. SII, XVIII, ಶಾಸನ ಸಂಖ್ಯೆ ೧೫೮

*೭. ಅದೇ, ಶಾಸನದ ಸಂಖ್ಯೆ ೧೪೫; ಹೋಲಿಸಿ ತೋಂಟದ ಹೆಜ್ಜುಂಕ, ಅದೇ XI ಭಾಗ II, ಶಾಸನ ಸಂಖ್ಯೆ ೧೫೨, ಕ್ರಿ. ಶ. ೧೧೦೩

*೮. SII, IX ಭಾಗ I, ಶಾಸನ ಸಂಖ್ಯೆ ೨೨೩, ಕ್ರಿ. ಶ. ೧೧೨೭

*೯. ಹೋಲಿಸಿ ವಡ್ಡವ್ಯವಹಾರಿ

*೧೦. ರಮೇಶ ಕೆ. ವಿ.: 'ವಡ್ಡರಾವುಳ ಮತ್ತು ಬೆಳ್ಕೊಡೆ' (**ಸಾಧನೆ**, ಸಂಚಿಕೆ I ಪುಟ ೧೮೯, ಬೆಂಗಳೂರು ವಿಶ್ವವಿದ್ಯಾಲಯ, ೧೯೭೨)

*೧೧. SII, XVIII ಶಾಸನ ಸಂಖ್ಯೆ. ೧೪೫

*೧೨. ಅದೇ IX ಭಾಗ I ಶಾಸನ ಸಂಖ್ಯೆ ೧೭೦

*೧೩. Rice. B. L. ಮೇಲೆ ಗಮನಿಸಿ, ಪುಟ ಸಂಖ್ಯೆ ೧೭೫

*೧೪. KI, II ಶಾಸನ ಸಂಖ್ಯೆ, ಕ್ರಿ. ಶ. ೧೧೧೪

*೧೫. SII, IX ಭಾಗ I ಶಾಸನ ಸಂಖ್ಯೆ ೨೨೪, ಕ್ರಿ. ಶ ೧೧೯೭-೯೮

*೧೬. KI, I ಶಾಸನ ಸಂಖ್ಯೆ ೧೭

*೧೭. SII, XVIII ಶಾಸನ ಸಂಖ್ಯೆ ೯೩; ಗಮಾನಿಸಿ ಅದೇ ಶಾಸನ ಸಂಖ್ಯೆ ೯೬, ಕ್ರಿ. ಶ. ೧೦೬೨

*೧೮. ಅದೇ XX, ಶಾಸನ ಸಂಖ್ಯೆ ೪೭

*೧೯. KI, VI, ಶಾಸನ ಸಂಖ್ಯೆ ೭೩

ಡಾ॥ ಹೆಚ್. ಎಸ್. ಉಷಾರಾಣಿ*

ಸಿಂಗನಲ್ಲೂರು ಒಕ್ಕಲು ಕಟ್ಟಳೆ

ವಿಜಯನಗರ ಸಾಮ್ರಾಜ್ಯದ ವೈಭವಕ್ಕೆ ಕೃಷಿಕರ ಶ್ರಮ ಬಹುಮಟ್ಟಿಗೆ ಕಾರಣವಾಗಿತ್ತು. ಕೃಷಿಕರೇ ಸಮಾಜದ ಬೆನ್ನೆಲುಬು. ಗೌಡುಪ್ರಜೆಗಳು (ರೈತರು) ತೆರಿಗೆ ತಪ್ಪಿಸದೆ ಖಜಾನೆ ಭರ್ತಿಯಾಗಿರುವಂತೆ ನೋಡಿಕೊಳ್ಳಲು ಕಟ್ಟಳೆಗಳನ್ನು ಮಾಡಲಾಗುತ್ತಿತ್ತು. ಈ ದಿಸೆಯಲ್ಲಿ ಸಂಗೀತ ವಿದ್ಯಾಸಾಗರ ಸಾಹಿತ್ಯ ವಿದ್ಯಾಕಲಾವಿಶಾಲವತಾರ ಎನಿಸಿದ ಶ್ರೀ ವೀರದೇವರಾಯನ ಕ್ರಿ. ಶ. ೧೪೦೮ರ ಸಿಂಗನಲ್ಲೂರು ಗ್ರಾಮದ ಶಾಸನ(೧) ಸ್ವಾರಸ್ಯಕರ ಮಾಹಿತಿ ನೀಡುತ್ತದೆ.

ಉಲ್ಲೇಖಿತ ಶಾಸನದಲ್ಲಿ, ಬಂಡಿಯಹಳ್ಳಿ, ಮೋದೆಯ ಹಳ್ಳಿಯ ಗೌಡರು (ಹದಿನೆಂಟು ಸಮಯಕ್ಕೆ ಮುಖ್ಯವಾಗಿ), ಸೆಟ್ಟಿಗಳು, ಬ್ರಾಹ್ಮಣರು ಸೇನಬೋವರು ಮತ್ತು ಹದಿನೆಂಟು ಸಮಯ ಉಪಸ್ಥಿತರಿದ್ದು ಹದಿನೆಂಟು ಸಮಯದ ಒಕ್ಕಲುಗಳಿಗೆ ಮಾಡಿದ ಕಟ್ಟಳೆ ಹೀಗಿದೆ: ಮೊದಲಿಗೆ ತೆರಬೇಕಾದ ತೆರಿಗೆಗೆ ಸಂಬಂಧಿಸಿದಂತೆ *"ಮಂಣು ಮನೆಯ ಮೇಲೆ ಚತುಸೀಮೆ ಸಂಕ್ಯಾಸಮದ ಮೇಲೆ ಕುಳವಕಟ್ಟಿಕೊಂಬೆಲು ನಷ್ಟಿಯನಱಿಧು ಒಟ್ಟತು ತುಷ್ಟಿಯನಱಿತು ಕಟ್ಟಿಕೊಂಬೆಲು ಅರಮನೆಯರ ಮೊತ್ತವನೂ ತಪ್ಪದೆ ತಿಱುವೆಲು ಅರಮನೆ ಇಂದ ಖಾಣ ಧಾನ್ಯ ಯೆತ್ತು ತುಪ್ಪ ಸಬಿರವ ಮಾಟ್ಟದಳ (?) ಮೊಳ ಮುಂತಾದ ವೆಚ ವಿರಾಡವನೂ ಕುಳ ಸರಿದಿಯಲಿ ತೆಱುವೆಲೂ ಅರಮನೆಯಿಂದ ಬಂದ ಉತ್ತಾರ ಬಂದಡೆ ಕುಳಸರದಿಯಲಿ ಊತ್ತರಿಸಿ ಕೊಂಬೆಲು ಸಾಲಬಳಿಯ ಸಿಧಾಯವನೂ ದಾಸಹಳಿಯ ದಂಡವನೂ ಅರತುಗಳಿಗೆ ತೆಱುವೆಲು ತಪ್ಪ ತಗುದಿ ದಂಡ ಉಂಡಿಗೆ ಎಂದು ನೆಡೆವಳಿಕಾಱ ಪ್ರಭುಗಳು ಕೊಳಸಲ್ಲ"* ಎಂದು ತೆರಿಗೆ ತೆರಲು ಬದ್ಧರಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇಷ್ಟಾದರೂ ತೆರಿಗೆ ತಪ್ಪಿಸಿಕೊಂಡಲ್ಲಿ ವಿಧಿಸಿದ ಕಟ್ಟಳೆಯ ಸ್ವರೂಪ ಕುತೂಹಲಕರವಾದುದು ಅದು ಹೀಗಿದೆ:

೧. ಈ ನಾಡಹಳಿ ಹಿರಿಯೂರುಗಳ ಹದಿನೆಂಟು ಜಾತಿಗೂ ಒಕ್ಕಲು ಹೊಣೆಯಿಲ್ಲ.

೨. ಗುಱುತುಗಳಿಗೆ ಊರಲು ಒಕ್ಕಲು ಓಡಿಹೋದಡೆ ಆಊರು ಆ ಗಉಡನೂ ಆ ಒಕ್ಕಲನಾಳ್ವಾನೂ ತೆಱುವರು,

೩. ಒಕ್ಕಲು ಊರುಗಳು ಓಡಿದೆಡೆ ಗವುಡುಗಳೂ ಯಿದಿರು ಹೊಣೆಯ ಕೊಡಸಲ್ಲ, ಹದಿನೆಂಟು ಸಮಯದವರೂ ಹೋಗಿ ಆ ಒಕ್ಕಲು ಊರನೂ ತಂದು ಅವರು ಇದ ಊರಲ್ಲಿಯಿರಿಸಿ ರಾಜಾರ್ತ್ತವನು ತೀಱಿಸಿ ಕೊಡುವರು.

೪. ನಾಡವಳಿಕ್ಕಾಱ ಪ್ರಭುಗಳು ಸಂಜಾತದ ಹಳಿಗಳಲು ಒಕ್ಕಲುಗಳ ಕಯ್ಯಲು ನಾಲ್ಕೆರಡು ಹೊಂನು ಕೊಂಡ ದಱಿಂದ ಓಡಿಹೋದೆಡೆ ಆ ನಷ್ಟವನೂ ಪ್ರಭುಗಳೇ ಕಟ್ಟಿಕೊಂಡು ತೆಱುವರು.

೫. ಗಉಡುಗಳಿಂದ ಅನ್ಯಾಯವಿಲ್ಲದೆ ಒಕ್ಕಲು ಓಡಿಹೋದಡೆ ನಾಡಾಗಿ ಆ ಒಕ್ಕಲು ಸಿದ್ದಾಯ ಕಟ್ಟಿಕೊಂಡು ತೆಱುವರು,

೬. ನಂಮ ನಾಡಸ್ಥಳದಲ್ಲಿ ಊರುಗಳೂ ಓಡಿಹೋದೆಡೆ ಆ ನಷ್ಟವನೂ ಆ ಸ್ಥಳದ ಗಉಡುಗಳೇ ಕಟ್ಟಿಕೊಂಡು ತೆಱುವರು ಎಂದು ಹೇಳಲಾಗಿದೆ.

೭. ಇನ್ನು ಉತ್ತರಾಧಿಕಾರಿಗಳಿಗೆ ಸಂಬಂಧಿಸಿದಂತೆ ಮಾಡಿರುವ ನಿಯಮ ಸರ್ವಸಾಮಾನ್ಯವಾದುದು. ಅದರಂತೆ "ಒಕ್ಕಲುಗಳು ಸತ್ತು ಕೆಟ್ಟು ಹೋದರೆ ತಂದೆಯ ಒಡವೆ ಮಗಗೆ ಅಂಣನೊಡವೆ ತಂಮಗೆ ತಂಮನೊಡವೆ ಅಂಣಗಾಗಿ ಸತ್ತವನ ಒಡವೆಯನೂ ತೆಗೆದುಕೊಂಡು ಅವನು ಅರಮನೆಗೆ ತೆಱುವ ಸಿದ್ದಾಯವನು ವರುತ ವರುಶಂ ಪ್ರತಿ ತೆತ್ತುಬಹರು" ಎಂದು ಸೂಚಿತವಾಗಿದೆ. ಒಟ್ಟಿನಲ್ಲಿ ಮೇಲಿನ ಕಟ್ಟಳೆ ಒಂದೆಡೆ ಒಕ್ಕಲು ಹದಿನೆಂಟು

* ೪೩೩ 'ಇ' ಬ್ಲಾಕ್, ಜೆ. ಪಿ. ನಗರ, ಮೈಸೂರು - ೫೭೦ ೦೦೮.

ಜಾತಿಗೂ ಹೋಣೆಗಾರರಲ್ಲ ಎಂದು ಸೂಚಿಸಿದ್ದರೂ ಸಂಪೂರ್ಣ ಹೋಣೆಗಾರರು ಎಂಬ ಅಂಶ ಗಮನಾರ್ಹ. ಇದು ಪರಸ್ಪರರು ಬದ್ಧರಾಗಿರುವಂತೆ ಮಾಡಿದೆ. ಹಾಗಾಗಿ ಸ್ವಯಂಶಿಸ್ತು ಮೂಡಿ ರಾಜ್ಯದ ಆರ್ಥಿಕ ಸುಭದ್ರತೆಗೆ ಕೃಷಿಕರೇ ಹೋಣೆಗಾರರಾಗಿದ್ದ ರೆಂಬುದು ನನ್ನ ನಿಲುವು. ಇದನ್ನು ಸಮರ್ಥಿಸಿದ ಡಾ॥ ಸೂರ್ಯನಾಥ್ ಕಾಮತ್ ಅವರು ಮೈಸೂರು ಪ್ರದೇಶದಲ್ಲಿ ಶಾಂತಿ ಶಿಸ್ತು ಕಾಪಾಡುವ ಉದ್ದೇಶದಿಂದ ಈ ತೆರನಾದ ಕಟ್ಟಳೆಗಳ್ಳಿದ್ದವೆಂಬುದಕ್ಕೆ ಇದೊಂದು ಉತ್ತಮನಿದರ್ಶನ. ಅಲ್ಲದೆ ಟಿಪೂಸುಲ್ತಾನ ಮುಂದೆ ಇಂತಹ ಕಟ್ಟಳೆಗಳನ್ನು ಕೃಷಿಕರಿಗೆ ಮಾಡಿದ್ದನೆಂದು ತಿಳಿಸಿದರು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಎಪಿಗ್ರಾಫಿಯಾ ಕರ್ನಾಟಕ** (ಪರಿಷ್ಕೃತ ಆವೃತ್ತಿ) ಸಂಪುಟ ೪ ಕೊಳ್ಳೇಗಾಲ ಶಾಸನ ಸಂಖ್ಯೆ ೫೬.

ಶ್ರೀಮತಿ ಸ್ಮಿತಾ ಸುರಬೇನಾಕರ್*

ಪಲಾಶಿಕಾ ಪನ್ನಿರ್ಬ್ಬಾಸಿರ - ಭೌಗೋಳಿಕ ವ್ಯಾಪ್ತಿ ಗುರುತಿಸುವ ಪ್ರಯತ್ನ

ಕದಂಬ ಕುಲೋತ್ಪನ್ನರ ಶೌರ್ಯ, ಧೈರ್ಯ, ದೇಶಪ್ರೇಮ, ಸ್ವಧರ್ಮ ನಿಷ್ಠೆಯಿಂದ ಹೊಸ ರೂಪ ಪಡೆದು ಕನ್ನಡದ ಸೊಗಡಿನ ಸಿರಿ ಹರಿಸಿದ್ದ ಪಲಾಶಿಕಾ, ಪಲಸಿಗೆ, ಹಲಸಿ ದೇಶ ಎಂದು ಮುಂತಾಗಿ ಶಾಸನೋಕ್ತವಾದ ಐತಿಹಾಸಿಕ ಪ್ರದೇಶ ನಿತ್ಯಹರಿದ್ವರ್ಣ ವನದ ಸಹ್ಯಾದ್ರಿಯ ಬೆಟ್ಟದ ಸಾಲಿನ ನಿಸರ್ಗ, ರಮಣೀಯ ಸುಂದರ ಆಯಕಟ್ಟಿನ ಸ್ಥಳವಾದ ಅಂದಿನ **ಪಲಾಶಿಕಾ** ಇಂದು 'ಹಲಸಿ' ಎಂದು ಹೆಸರಾಗಿದೆ. ಕರ್ನಾಟಕ ಇತಿಹಾಸದ ವಿವಿಧ ಹಂತಗಳಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಮತ್ತು ಧಾರ್ಮಿಕವಾಗಿ ಬಹು ಮಹತ್ವದ ನೆಲೆಯಾಗಿ ಬೆಳೆದು ಬಂದ ಹಲಸಿ, ಸಾಂಸ್ಕೃತಿಕವಾಗಿ ವೈಶಿಷ್ಟ್ಯಪೂರ್ಣ. ಈ ಪ್ರದೇಶದ ಫಲವತ್ತಾದ ನೆಲಜಲದ ಆಶ್ರಯದಲ್ಲಿದ್ದ ಜನಸಮುದಾಯ ಪ್ರಗತಿ ಪಥದತ್ತ ಮುನ್ನಡೆದು ಸನಾತನ ಸಂಸ್ಕೃತಿಯ ಸಂಕೇತವಾದ ಸರ್ವಧರ್ಮ ಸಹಿಷ್ಣುತೆಯನ್ನು ಮೈಗೂಡಿಸಿಕೊಂಡಿತು. ಆದಿ ಕದಂಬರ ರಾಜಾಶ್ರಯದಲ್ಲಿ ಬಿರಿದ ಮೊಗ್ಗು ಗೋವೆ ಕದಂಬರ ಆಳ್ವಿಕೆಯ ಅವಧಿಯಲ್ಲಿ ಈ ಹಲಸಿ ವಿಕಸಿತ ಸುಮವಾಗಿ ನಾಡಿನ ತುಂಬೆಲ್ಲ ತನ್ನ ಸಂಸ್ಕೃತಿಯ ಸೌರಭವನ್ನು ಹರಡಿತು.

ಪ್ರಾಚೀನ ಕಾಲದಿಂದಲೂ ಹಲಸಿಯು ಕುಂತಳನಾಡಿನ ಬನವಾಸಿಯನ್ನಾಳಿದ ಆದಿಕದಂಬರ ಉಪರಾಜಧಾನಿಯಾಗಿ ಸೌಂದರ್ಯದಲ್ಲಿ ಇಡೀ ಕುಂತಳರಾಜ್ಯವನ್ನು ಮೀರಿಸುವಂತಿತ್ತು ಶಾಸನಗಳಲ್ಲಿ ನಂದನವನಕ್ಕೆ ಸಮವೆಂದು ಹಲಸಿಯನ್ನು ಹೋಲಿಸಲಾಗಿದೆ. ಅಷ್ಟೇ ಅಲ್ಲದೇ ಶೈವ, ವೈಷ್ಣವ ಮತ್ತು ಜೈನ ವಾಸ್ತುಶಿಲ್ಪ ಶೈಲಿಯ ವಿಕಸಿತ ಹಂತದ ನೆಲೆ ಎನಿಸಿದೆ.

"ಹಲಸಿಗೆನಾಡು ನಾಡೇ ಸೊಗೆಯಪ್ಪುದು ಭೂತಳಯಕೆ ಶೋಭೆಯಂ..." ಎಂದು ಮುಂತಾಗಿ ಶಾಸನ ಕವಿಗಳು ಹಲಸಿಯ ನಿಸರ್ಗ ಸಿರಿಯನ್ನು ಮನದಣಿಯೇ ಬಣ್ಣಿಸಿದ್ದಾರೆ.

ಪ್ರಾಚೀನ ಪಲಾಸಿಕ ಪ್ರದೇಶದ ಭೌಗೋಳಿಕ ವ್ಯಾಪ್ತಿಯು ಇಂದಿನ ಹಲಸಿ ಗ್ರಾಮಕ್ಕೆ ಮಾತ್ರ ಸೀಮಿತವಾಗಿರದೇ ಪಲಾಶಿಕಾ ಪನ್ನಿರ್ಬ್ಬಾಸಿರ ಎಂದು ಶಾಸನೋಲ್ಲೇಖಿತವಾಗಿ ಅನೇಕ ನಗರಗಳು, ಗ್ರಾಮಗಳು, ಪಟ್ಟಣಗಳು, ಚಿಕ್ಕ ಹಳ್ಳಿಗಳ ಸಮೂಹದಿಂದ ಬಹಳ ಕ್ರಿಯಾಶೀಲವಾಗಿತ್ತು. ಮನಗುಂಡಿ ಶಿಲಾಶಾಸನದಲ್ಲಿ ಕವಿಯು ಹಲಸಿ ದೇಶದ ಭೌಗೋಳಿಕ ಸ್ಥಿತಿಯನ್ನು ಕುಂತಳರಾಜ್ಯಕ್ಕೆ ಹೋಲಿಸಿ ಬರೆದಿದ್ದಾನೆ. ಈ ಶಾಸನದ ಪ್ರಕಾರ ಮೇರುಪರ್ವತ ದಿಂದಾವೃತವಾದ ಜಂಬೂದ್ವೀಪದ ದಕ್ಷಿಣಕ್ಕೆ ಭರತಶ್ರೀಯಲ್ಲಿ ಕುಂತಳ ರಾಜ್ಯದಲ್ಲಿ ಪಲಸಿಗೆ ದೇಶವಿತ್ತು, ಎಂದಿದೆ. ಅಂದಿನ ಅನೇಕ ಗ್ರಾಮಗಳು ಇಂದು ನಾಶವಾಗಿ ಹೋಗಿರುವುದರಿಂದ, ಹಲವಾರು ಶಾಸನಗಳು ತ್ರುಟಿತವಾಗಿದ್ದರಿಂದ ಅಲ್ಲದೇ ಬಹುಪಾಲು ಶಾಸನಗಳು ಅಪ್ರಕಟಿತ ಶಾಸನಗಳಾದ್ದರಿಂದ ಹಲಸಿಗೆ ನಾಡಿನ ಭೌಗೋಳಿಕ ವ್ಯಾಪ್ತಿ ಮತ್ತು ಗಡಿಗಳನ್ನು ನಿರ್ದಿಷ್ಟವಾಗಿ ಗುರುತಿಸುವುದು ಕ್ಲಿಷ್ಟಕರವಾಗಿದೆ. ಪಲಾಶಿಕಾ ಪನ್ನಿರ್ಬ್ಬಾಸಿರ ಎಂದು ಕರೆಯಲ್ಪಡುವ ಈ ವಿಭಾಗವು ಈಗಿನ ಬೆಳಗಾಂವ ಜಿಲ್ಲೆಯ ಖಾನಾಪೂರ, ಬೈಲಹೊಂಗಲ ತಾಲೂಕಿನ ಕೆಲವು ಗ್ರಾಮಗಳನ್ನು, ಧಾರವಾಡಜಿಲ್ಲೆಯ ಪಶ್ಚಿಮ ಭಾಗವನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯ ಪೂರ್ವ - ಉತ್ತರ ಭಾಗವನ್ನು ಒಳಗೊಡಿತ್ತು ಎಂಬ ಅಂಶ ಶಾಸನಗಳಿಂದ ತಿಳಿದು ಬರುತ್ತದೆ.

ಈ ಹಿನ್ನೆಲೆಯಲ್ಲಿ ಗೋವೆಯ ಕದಂಬರ ಶಾಸನಗಳನ್ನು ಅವಲೋಕಿಸಿದಾಗ ಇವರ ಶಾಸನಗಳು ಬೆಳಗಾಂವ ಜಿಲ್ಲೆಯ ಖಾನಾಪೂರ, ಬೈಲಹೊಂಗಲ ತಾಲೂಕಿನ ಕೆಲವು ಗ್ರಾಮಗಳಲ್ಲಿ, ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಕಲಘಟಗೆ ತಾಲೂಕುಗಳ ಅನೇಕ ಗ್ರಾಮಗಳಲ್ಲಿ ದೊರೆತಿವೆ. ಆದ್ದರಿಂದ ಹಲಸಿಗೆನಾಡು ಈ ಮೇಲೆ ಹೇಳಿದ ತಾಲೂಕುಗಳ ಭಾಗಗಳನ್ನೊಳಗೊಂಡು ವಿಸ್ತಾರವಾಗಿತ್ತೆಂದು ಹೇಳಬಹುದು.

ಭೌಗೋಳಿಕವಾಗಿ ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು

* ಆರ್.ಪಿ.ಡಿ. ಮಹಾವಿದ್ಯಾಲಯ, ಬೆಳಗಾಂವಿ.

ಆಡಳಿತದ ಅನುಕೂಲತೆಗೋಸ್ಕರ ವಿಂಗಡಿಸುವ ಕ್ರಮವನ್ನನುಸರಿಸಿ ಕದಂಬ ದೊರೆಗಳು ತಮ್ಮ ಸಾಮ್ರಾಜ್ಯವನ್ನು ದೇಶ, ಪ್ರಾಂತ್ಯ, ವಿಷಯ, ನಾಡು, ಕಂಪಣ, ಮಂಡಲ, ಗ್ರಾಮ ಎಂದು ಮುಂತಾದ ಭಾಗಗಳನ್ನಾಗಿ ವಿಂಗಡಿಸಿರುವುದನ್ನು ಗಮನಿಸಿ ಹೇಳುವುದಾದರೆ - ಹಲಸಿ ಈ ರೀತಿಯ ಆಡಳಿತ ವಿಭಾಗವಾಗಿತ್ತು. ಕದಂಬ ಹರಿವರ್ಮನ ಹಲಸಿ ತಾಮ್ರ ಶಾಸನದಲ್ಲಿ ಅಲ್ಲಿಯ ಜಿನಾಲಯಕ್ಕೆ ಸುದ್ದಿಕುಂದೂರ ವಿಷಯದೊಳಗಿನ ವಸಂತವಾಟಕ ಗ್ರಾಮವನ್ನು ದಾನಮಾಡಿದ ಬಗ್ಗೆ ಉಲ್ಲೇಖವಿದೆ. ಆದ್ದರಿಂದ ಪಲಾಶಿಕೆಯು ಸುದ್ದಿಕುಂದೂರ (ಈಗಿನ ನರೇಂದ್ರ) ವಿಷಯದಲ್ಲಿದ್ದಿರಬಹುದು. ಗೋವೆ ಕದಂಬರ ಶಾಸನಗಳು ಹಲಸಿಯನ್ನು ಪಲಸಿಗೆ ನಾಡು, ಪಲಸಿಗೆದೇಶ ಎಂದು ಕರೆದಿವೆ. ರೈಸರು ಹೇಳಿದ ಹಾಗೆ ಸಾವಿರಹಳ್ಳಿಗಳ ಸಂಖ್ಯೆಯ ವಿಭಾಗಕ್ಕೆ ನಾಡೆನ್ನುವುದನ್ನು ಒಪ್ಪುವುದಾದರೇ ಹಲಸಿಗೆ - ೧೨೦೦೦ ಬಹುಶ: ೧೨ ನಾಡುಗಳನ್ನು ಒಳಗೊಂಡ ವಿಶಾಲ ಆಡಳಿತ ವಿಭಾಗವಾಗಿತ್ತೆಂಬುದು ಸಿದ್ಧವಾಗುತ್ತದೆ.

ಅನೇಕ ಆಡಳಿತ ವಿಭಾಗಗಳು ಆಯಾ ವಿಭಾಗಗಳ ಮುಖ್ಯ ಸ್ಥಳಗಳ ಹೆಸರಿನಿಂದಲೇ ಕರೆಯಲ್ಪಡುತ್ತಿದ್ದವು. ಬನವಾಸಿಯ ಮತ್ತು ಶಿರ್ಶಿ ಸುತ್ತಮುತ್ತಲಿನ ಪ್ರದೇಶವನ್ನು ಬನವಾಸಿದೇಶ ಎಂತಲೂ ಹಲಸಿಗೆಯ ಸುತ್ತಲಿನ ಪ್ರದೇಶವನ್ನು ಹಲಸಿನಾಡು ಎಂತಲೂ ಕರೆಯಲಾಗುತ್ತಿತ್ತು. ಅನೇಕ ಸಲ ಅವು ಆಳರಸರ ಮನೆತನಗಳ ಹೆಸರನ್ನೇ ಹೊಂದಿರುತ್ತಿದ್ದವು. ಚೋಳಮಂಡಲ, ಕದಂಬ ಮಂಡಲ, ಗಂಗವಾಡಿ ಎಂಬಂತೆ. ಈ ಆಡಳಿತ ವಿಭಾಗಗಳನ್ನು ಹೆಸರಿಸುವಲ್ಲಿ ಪ್ರಚಲಿತವಿದ್ದ ಇನ್ನೊಂದು ಪದ್ದತಿಯೆಂದರೆ ವಿಭಾಗಗಳ ಹೆಸರಿನ ಜೊತೆಗೆ ಸಂಖ್ಯೆಗಳನ್ನು ಜೋಡಿಸುವುದು (Numerical suffix) ಬನವಾಸಿ-೧೨೦೦೦ ಹಲಸಿ-೧೨೦೦೦ ಕೊಂಕಣ-೯೦೦, ಗಂಗವಾಡಿ-೯೬೦೦೦ ಮುಂತಾಗಿ.

ಈ ಆಡಳಿತ ವಿಭಾಗಗಳ ಹೆಸರುಗಳಿಗೆ ಜೋಡಿಸಲಾದ ಸಂಖ್ಯೆಗಳು ಏನನ್ನು ಸೂಚಿಸುತ್ತವೆ, ಎಂಬ ಬಗ್ಗೆ ವಿದ್ವಾಂಸರಲ್ಲಿ, ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ವಿಭಾಗಗಳು ತಮ್ಮ ಅಧೀನಕ್ಕೊಳಪಟ್ಟ ತಮ್ಮ ಗ್ರಾಮಗಳ ಕಂದಾಯವನ್ನು ಸಂಗ್ರಹಿಸುತ್ತಿದ್ದುದರಿಂದ ಬಹುಶ: ಈ ಸಂಖ್ಯೆಗಳು ಆಯಾ ಆಡಳಿತ ವಿಭಾಗಗಳಲ್ಲಿದ್ದ ಕಂದಾಯ ಭಾಗಗಳನ್ನು ಸೂಚಿಸುತ್ತಿದ್ದಿರಬೇಕೆ! ಎನ್ನುವದು ಒಂದು ಅಭಿಪ್ರಾಯವಾದರೆ, ಈ ಸಂಖ್ಯೆಗಳು ಆಯಾ ಭಾಗ ವಿಭಾಗಗಳಲ್ಲಿನ ಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತಿರ ಬೇಕೆನ್ನುವುದು ಇನ್ನೊಂದು ಅಭಿಪ್ರಾಯ. ಈ ಸಂಖ್ಯೆಗಳು ಆದಾಯದ ಮೊತ್ತವನ್ನು ಅಥವಾ ಅದರೊಳಗಿರುವ ನಾಡುಗಳ ಸಂಖ್ಯೆಯನ್ನು ಸೂಚಿಸುತ್ತಿದ್ದಿರಬೇಕು.

ಹಲಸಿ-೧೨೦೦೦ ವಿಭಾಗವು ಕದಂಬರ ರಾಜಧಾನಿಗಳಲ್ಲೊಂದಾಗಿದ್ದು ಬಹುಶಃ ೧೨೦೦೦ ಹಳ್ಳಿಗಳನ್ನೊಳಗೊಂಡ ಒಂದು ದೊಡ್ಡ ನಾಡಾಗಿತ್ತು. ಈ ವಿಭಾಗವು ಮೂಲತಃ ಕರಹಾಡ -೪೦೦೦ ಕೊಂಡಿ-೩೦೦೦ದಂಥ ದೊಡ್ಡ ವಿಭಾಗಗಳು ಸೇರಿದಂತೆ ಹನ್ನೆರಡುಸಾವಿರ ಗ್ರಾಮಗಳನ್ನೊಳಗೊಂಡಿರಬೇಕು. ಗುರವ ಅವರು ಅಭಿಪ್ರಾಯಪಟ್ಟಂತೆ ಗೋವೆಯ ಕದಂಬರ ಕಾಲಕ್ಕೆ ಬೆಳಗಾಂವಿ ಜಿಲ್ಲೆಯ-೩೦೦ ಉತ್ತರ ಕನ್ನಡ ಜಿಲ್ಲೆಯ-೪೦೦ ಮತ್ತು ಧಾರವಾಡ ಜಿಲ್ಲೆಯ - ೪೦೦ ಹೀಗೆ ೧೧೦೦ ಗ್ರಾಮಗಳನ್ನೊಳಗೊಂಡಿತ್ತು. ಹೀಗೆ ಗ್ರಾಮಗಳ ಸಂಖ್ಯೆ ಕಡಿಮೆ ಯಾದರೂ ಪಲಸಿಗೆ-೧೨೦೦೦ ಎಂಬ ಹಳೆಯ ಹೆಸರು ಹಾಗೇ ಉಳಿದುಕೊಂಡಿರಬಹುದು.

ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಅವಧಿಯಲ್ಲಿ ಗೋವೆಯ ಕದಂಬರ ಶಾಸನಗಳಲ್ಲಿ ಪಲಾಶಿಕಾ ಪನ್ನಿರ್ಚ್ಛಾಸಿರ ಎಂದು ಕರೆದಿರುವುದರಿಂದ ಇದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ೧೨೦೦೦ ಗ್ರಾಮಗಳನ್ನು ಹೊಂದಿತ್ತೆಂದು ಹೇಳಬೇಕಾಗುತ್ತದೆ. ಕುಂದೂರು-೫೦೦, ಉಣಕಲ್ಲು-೩೦, ಸಬ್ಬಿ-೩೦ ಮಾವಳೆ-೫೦೦ ಇವು ಪಲಸಿಗೆ-೧೨೦೦೦ ವಿಭಾಗದ ಉಪವಿಭಾಗಳಾಗಿದ್ದವು. ಮಾರಜವಾಡಿ ಮತ್ತು ಕೆಲಗೇರಿ ಕಂಪಣಗಳು ಹಲಸಿಗೆನಾಡಿನಲ್ಲಿದ್ದವು. ಹೀಗಾಗಿ ಪಲಸಿಗೆಯು ಮುಂದಿನ ಅವಧಿಯಲ್ಲಿಯೂ ೧೨೦೦೦ ಗ್ರಾಮಗಳನ್ನು ಒಳಗೊಂಡಿತ್ತೆಂದು ಸ್ಪಷ್ಟವಾಗುತ್ತದೆ. ಈಗ ಅದರಲ್ಲಿದ್ದ ಉಪ-ವಿಭಾಗಗಳು ಮತ್ತು ಕಂಪಣಗಳನ್ನು ಗಮನಿಸ ಬಹುದು.

ಕೆಲಗೇರಿ ಕಂಪಣ: ಖಾನಾಪೂರದ ಪಶ್ಚಿಮಕ್ಕೆ ೧೦ ಮೈಲು ದೂರದಲ್ಲಿರುವ ಹಲಸಿಗೆ ತಾಮ್ರಶಾಸನೋಕ್ತ ಹಾಗು ಮುಖ್ಯ ಗ್ರಾಮವಾಗಿದ್ದ ಕಲಗೇರಿ, ಹಲಸಿಗೆ-೧೨೦೦೦ದ ಅತಿದೊಡ್ಡ ಕಂಪಣವಾಗಿತ್ತು. ಇದರಲ್ಲಿದ್ದ ಗ್ರಾಮಗಳು

೧. ಕುಪ್ಪಟಗೇರಿ - ಖಾನಾಪೂರದ ಪೂರ್ವಕ್ಕೆ ೩ ಮೈಲು ದೂರದಲ್ಲಿದೆ.
೨. ಸಿಂಧೊಳ್ಳಿ - ಹಲಸಿ ಆಗ್ನೇಯಕ್ಕೆ ೭ ಮೈಲು ದೂರದಲ್ಲಿದೆ.
೩. ಭಾಲಿಕೆ - ಹಲಸಿ ಪಶ್ಚಿಮಕ್ಕೆ ೭ ಮೈಲು ದೂರದಲ್ಲಿದೆ.
೪. ಕಿರುಕಲಸಿಗೆ - ಹಲಸಿ ದಕ್ಷಿಣಕ್ಕೆ ೩ ಮೈಲು ದೂರದಲ್ಲಿದೆ.
೫. ಮಾಗೋಡ - (ದೇವರ ಶೀಗಿಹಳ್ಳಿ) ಇದು ಬೈಲಹೊಂಗಲ ತಾಲೂಕಿನಲ್ಲಿದೆ.

ಕುಂದೂರು - ೫೦೦: ಧಾರವಾಡಕ್ಕೆ ಐದು ಮೈಲು ದೂರದಲ್ಲಿರುವ ನರೇಂದ್ರ ಗ್ರಾಮದ ಹಿಂದಿನ ಹೆಸರು ಕುಂದೂರು. ಇದರ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಕೊಟಬಾಗಿ ಶಾಸನದಲ್ಲಿ 'ಹಲಸಿಗೆ ದೇಶ ಸಂಮಂಧ ಕುಂದೂರವಿಷಯ ಕೊಟ್ಟಿಬಾಗೆನಾ(ಮ) ಗ್ರಾಮ(೨) ಎಂದಿದೆ. ಇದರಿಂದ ಹಲಸಿಗೆ

ನಾಡಿನ ಕುಂದೂರ ವಿಷಯದಲ್ಲಿರುವ ಕೊಟಬಾಗಿ ಗ್ರಾಮವಾಗಿತ್ತೆಂದು ಸ್ಪಷ್ಟವಾಗುತ್ತದೆ. ಕುಂಭಾಪುರ ಶಾಸನದಲ್ಲಿ 'ಹಲಸಿಗೆ ಪನ್ನಿಚ್ಛಾಸಿರದೊಳಗ(ಣ)ಯ್ನೂರರ ಮೊದಲಬಾಡ ರಾಜಧಾನಿ ಕುಂದೂರಲು ....ಮತ್ತವಯ್ನೂರರ ಬಳಿಯ ಬಾಡ ಧಾರವಾಡ....... ಭಾಡ ಧಾರವಾಡ..... ಕುಂದೂರಯ್ನೂರರ ಬಳಿಯ ಬಾಡ ಕೌಲಗೇರಿಯ ಸ್ಥಾನಮಾನ್ಯರ' ಎಂದಿದೆ. ಇದರಿಂದ ಧಾರವಾಡ, ಕೌಲಗೇರಿಗಳು ಕುಂದೂರ-೫೦೦ ವಿಭಾಗದಲ್ಲಿದ್ದವೆಂದು ಸ್ಪಷ್ಟವಾಗುತ್ತದೆ. ಕನಕೂರಿನ ಶಾಸನದಲ್ಲಿ 'ಕೊಂಕಣಾಧಿಪತಿ ಶ್ರೀಮನ್ಮಹಾಮಂಡಳೇಶ್ವರಂ ಜಯಕೇಶಿದೇವರ ವಿವಾಹಮಹೋತ್ಸವ ಕಾಲದಲ್ಲಿ ಶ್ರೀಮತ್ರಿಭುವನಮಲ್ಲ ದೇವರು ಕುಂದೂರೈನೂರರ ಬಳಿಯ ಬಾಡ ಕನಕಾಪುರಮಂ ಶ್ರೀಸೌರಾಷ್ಟ್ರದ ಶ್ರೀಸೋಮನಾಥದೇವರ ಧೂಪಕ್ಕೆ ಕೊಟ್ಟೆವದು ನಿನ್ನ ಧರ್ಮವಾಗಿ ನೀ ಕುಡೆಂದು ಬೇಡಲು....." ಎಂದಿದೆ. ಕುಂದೂರ-೫೦೦ರ ಕನಕಾಪುರವು ಇಂದಿನ ಧಾರವಾಡದ ಕನಕೂರ ಆಗಿದೆ. ಇದರ ಉಪವಿಭಾಗಗಳು ಯಾವುವೆಂಬುದು ತಿಳಿದು ಬರುವುದಿಲ್ಲ. ಈ ಕುಂದೂರ-೫೦೦ಕ್ಕೆ ಅಮ್ಮಿನಭಾವಿ ಕೊಟಬಾಗಿ, ಧಾರವಾಡ, ನರೇಂದ್ರ, ತಡಕೋಡ ಮರೆಯವಾಡ, ಕೌಲಗೇರಿ ಗ್ರಾಮಗಳು ಸೇರಿದ್ದವೆಂದು ತಿಳಿದುಬರುತ್ತದೆ.

ಮುಗುಂದ-೩೦: ಮುಗದ ಶಾಸನದಲ್ಲಿ "ಪಲಸಿಗೆ ಪನ್ನಿಚ್ಛಾಸಿರದೊಳಗೆ ಮಹಾರಾಜವಾಡಿನಾಡೆಂಬುದು ಭೂಲಲನಾಪಮದಕ್ಕೆ ತಿಲಕವೆನಿಪ್ಪದು ಮುಗುಂದ ಮತ್ತೆಂದು" ಎಂದು ಮುಗುಂದ-೩೦ನ್ನು ಕರೆಯಲಾಗಿದೆ. ಮಾರಜವಾಡಿನಾಡಿನ ಕಂಪಣವಾಗಿದ್ದು, ಮೂವತ್ತು ಗ್ರಾಮಗಳ ಈ ವಿಭಾಗದ ಮುಖ್ಯ ಗ್ರಾಮ ಇಂದಿನ ಧಾರವಾಡ ತಾಲೂಕಿನ ಮುಗದ ಗ್ರಾಮವಾಗಿದೆ. ಈ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳು ಈ ವಿಭಾಗದೊಳಗಿದ್ದವು. ನಿಗದಿಗ್ರಾಮದ ಶಾಸನದಲ್ಲಿ "ಮಾರಜವಾಡಿನಾಡಿನ ಕಂಪಣ ಮುಗುಂದ ಮೂವತ್ತರ ಬಳಿಯ ಬಾಡ ನಿಗುಂದೆಯ" ಎಂದಿದೆ. ಇದರಿಂದ ಮುಗುಂದ-೩೦ ವಿಭಾಗದಲ್ಲಿ ನಿಗದಿ(ತಾ: ಧಾರವಾಡ) ಗ್ರಾಮವು ಇತ್ತೆಂದು ತಿಳಿಯುತ್ತದೆ.

ಮಾರಿಜವಾಡಿ ನಾಡು: ಇದು ಪಲಸಿಗೆ-೧೨೦೦೦ದ ಉಪವಿಭಾಗವಾಗಿತ್ತು. ಈ ಮಾರಿಜವಾಡಿನಾಡು ಎಷ್ಟು ಗ್ರಾಮಗಳನ್ನು ಒಳಗೊಂಡಿತ್ತು ಎಂಬುದು ತಿಳಿದು ಬರುವುದಿಲ್ಲ. 'ಪಲಸಿಗೆ ಪನ್ನಿರ್ಚ್ಛಾಸಿರದೊಳಗೆ ಮಹಾರಾಜವಾಡಿನಾಡೆಂಬುದು ಭೂಲಲನಾಪಮದಕ್ಕೆ ತಿಲಕವೆನಿಪುದ..... ಮುಗುಂದ ಮೂವತ್ತು" ಎಂದಂತು ಮುಗುಂದಶಾಸನದಲ್ಲಿ ಉಲ್ಲೇಖವಿದೆ.

ಉಣಕಲ್ಲು-೩೦: ಮೂವತ್ತು ಗ್ರಾಮಗಳ ಈ ವಿಭಾಗದ ಮುಖ್ಯಗ್ರಾಮವು ಹುಬ್ಬಳ್ಳಿಗೆ ಸಮೀಪವಿರುವ 'ಉಣಕಲ್ಲು' ಗ್ರಾಮವೇ ಆಗಿದೆ. ಹುಬ್ಬಳ್ಳಿ ತಾಲೂಕಿನ ಅವರಗೋಳ ಶಾಸನದಲ್ಲಿ 'ಪಲಸಿಗೆ ನಾಡೊಳ್ಮಿಕ್ಕೆ ಕಂಪಣ ಉಣಕಲ್ಲ ಬಳಿಯ ಬಾಡವೆಂಬ ಗೋಳದೊಳು' ಎಂದಿದೆ. ಇದು ಹಲಸಿಗೆ -೧೨೦೦೦ದ ಕಂಪಣವಾಗಿತ್ತೆಂದು ತಿಳಿಯುತ್ತದೆ.

ಸಬ್ಬಿ-೩೦: ಪಲಸಿಗೆ-೧೨೦೦೦ದ ಉಪವಿಭಾಗವಾದ ಇದು ಇಂದಿನ ಹುಬ್ಬಳ್ಳಿ ತಾಲೂಕಿನ ಛಬ್ಬಿ. ಇದು ಮೂವತ್ತು ಗ್ರಾಮಗಳ ಕೇಂದ್ರವಾಗಿದ್ದ ಆಡಳಿತ ವಿಭಾಗವಾಗಿತ್ತು. ಹುಬ್ಬಳ್ಳಿ ತಾಲೂಕಿನ ಪೂರ್ವ-ದಕ್ಷಿಣ ಭಾಗವನ್ನು ಮತ್ತು ಕುಂದಗೋಳ ತಾಲೂಕಿನ ಪಶ್ಚಿಮಭಾಗದ ಗಡಿ ಪ್ರದೇಶದ ಗ್ರಾಮಗಳನ್ನು ಇದು ಒಳಗೊಂಡಿತ್ತು.

ಕಂಪಣ-ರಜೀ: ಮಾರಜವಾಡಿನಾಡಿನ ಕಂಪಣವಾದ ಇದರ ಉಲ್ಲೇಖ ತೇಗೂರು ಶಾಸನದಲ್ಲಿ ಬರುತ್ತದೆ. 'ಮಾರಜವಾಡಿನಾಡ ಕಂಪಣಂ ರ(ಜೀ) ಬಳಿಯ ಬಾಡ ಕೊಳನೂರ' ಎಂದಿದೆ ಇದರಿಂದ ಕೂಳನೂರು(ಈಗಿನ ತೇಗೂರ ತಾ: ಧಾರವಾಡ) ರಜೀ ಕಂಪಣಕ್ಕೆ ಸೇರಿತ್ತೆಂದು ವಿದಿತವಾಗುತ್ತದೆ.

ಮಾವಳೆ-೫೦೦: ತಂಬೂರ ಶಾಸನದಲ್ಲಿ ಉಲ್ಲೇಖಿತವಾದ ಮಾವಳೆ-೫೦೦ ಪಲಸಿಗೆ-೧೨೦೦೦ದ ಉಪವಿಭಾಗವಾಗಿತ್ತು. ಶಾಸನದಲ್ಲಿ 'ಪಲಸಿಗೆ ಪನ್ನಿಚ್ಛಾಸಿರದೊಳಗಣ ಕಂಪಣಂ ಮಾವಳೆಯಯ್ನೂರಕ್ಕೆಂ ವಿಶಿಷ್ಟವೆನಿಪ ತಮ್ಮಿಯೊರೊಳ್....." ಎಂದಿದೆ. ಈ ವಿಭಾಗದ ಉಪವಿಭಾಗಗಳ ಉಲ್ಲೇಖ ಸಿಗುವುದಿಲ್ಲ ಹಾಗೂ ಯಾವ ಗ್ರಾಮಗಳನ್ನು ಇದು ಒಳಗೊಡಿತ್ತೆಂದೂ ತಿಳಿದು ಬರುವುದಿಲ್ಲ.

ಪುಲ್ಲಂಬೆ-೭೦: ಮನಗುಂಡಿ ಶಾಸನದಲ್ಲಿ ಉಲ್ಲೇಖಿತವಾದ ಪುಲ್ಲಂಬೆ-೭೦ ಪಲಸಿಗೆ-೧೨೦೦೦ದ ಉಪವಿಭಾಗವಾಗಿದೆ. 'ಆ ಕ್ಷತ್ರೀಯ ಪವಿತ್ರನ ನಾಡೊಳು ಹುಲ್ಲಿಂಬಿಯ ಎಪ್ಪತ್ತರೊಳಗೆ' ಎಂದಿದೆ. ಈ ವಿಭಾಗದ ಉಪವಿಭಾಗಗಳ ಉಲ್ಲೇಖ ಸಿಗುವುದಿಲ್ಲ ಮನಗುಂಡಿ ಇನ್ನೊಂದು ಶಾಸನದಿಂದ ಹುಲ್ಲಂಬೆ-೭೦ರ ಒಂದು ಗ್ರಾಮ ಮನಗುಂಡಿ ಎಂದು ತಿಳಿಯುತ್ತದೆ. ಇದರಿಂದ ಹಲಸಿಗೆ-೧೨೦೦೦ ಪುಲ್ಲಂಬಿ-೭೦ ಮನಗುಂಡಿ ಎಂದು ವಿಭಾಗ, ಉಪವಿಭಾಗ ಮತ್ತು ಗ್ರಾಮಗಳು ಸ್ಪಷ್ಟವಾಗುತ್ತವೆ.

ಕಿತ್ತೂರ-೩೦: ಸಿದ್ದಾಪೂರ ಶಾಸನದಲ್ಲಿ ಕಿತ್ತೂರ-೩೦ರ ಒಂದು ಗ್ರಾಮ ಹೊಸವೊಳಲು ಎಂಬ ಉಲ್ಲೇಖವಿದೆ. ಮೂವತ್ತು ಹಳ್ಳಿಗಳನ್ನೊಳಗೊಂಡ ಹಲಸಿ-೧೨೦೦೦ದ ಉಪವಿಭಾಗವಾದ ಇದು ಬೈಲಹೊಂಗಲ ತಾಲೂಕಿನ ದಕ್ಷಿಣದ ಪಶ್ಚಿಮಕ್ಕೆ ಮತ್ತು ಧಾರವಾಡ ತಾಲೂಕಿನ ಗಡಿ ಪ್ರದೇಶದಲ್ಲಿ ಬರುತ್ತದೆ.

ದೇಗಾಂವ್: ಪಲಸಿಗೆ-೧೨೦೦೦ದ ಮುಖ್ಯ ಕಂಪಣವಾದ ದೇಗಾಂವ ಇದು ಈ ಕಂಪಣದ ಪ್ರಮುಖ ಗ್ರಾಮವಾಗಿತ್ತೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.

ದೇಗಾಂವ ಕಂಪಣದಲ್ಲಿದ್ದ ಗ್ರಾಮಗಳೆಂದರೆ ಮಿಂದವಳ್ಳಿ,

(ಬೈಲೂರು) ಕುಲವಳ್ಳಿ ಬಸರಕೋಡ, ದೇಗುಲಹಳ್ಳಿ ಮತ್ತು ಕೇರೆವಾಡ.

ವೇಣು ಗ್ರಾಮ-೭೦ ಕೋಡ ಕೆಲಸಮಯ ಹಲಸಿಗೆ ನಾಡಿನ ಭಾಗವಾಗಿತ್ತು.

ಹಲಸಿಗೆ ೧೨೦೦೦ ವಿಭಾಗದಲ್ಲಿ ಒಳಗೊಂಡಿದ್ದ ಸಮಸ್ತ ಉಪ ವಿಭಾಗಗಳನ್ನು, ಅವು ಒಳಗೊಂಡಿದ್ದ ಎಲ್ಲ ಗ್ರಾಮಗಳನ್ನು, ಆ ಗ್ರಾಮಗಳ ಸದ್ಯದ ಹೆಸರನ್ನೂ ಪತ್ತೆ ಹಚ್ಚುವದು ಕಷ್ಟದಾಯಕ ಕೆಲಸ. ಪ್ರಾರಂಭದಲ್ಲಿ ಗ್ರಾಮ ನೆಲೆಯಾಗಿದ್ದ ಹಲಸಿಯೂ ಆದಿಕದಂಬರ ಪ್ರೋತ್ಸಾಹದಿಂದ ಹೊಸ ರೂಪ ಪಡೆದು ನಗರ ಲಕ್ಷಣಗಳನ್ನು ಪಡೆಯಿತು. ಮತ್ತು ಸುಮಾರು ೨೦೦ ವರ್ಷಗಳ ಕಾಲ ಕದಂಬರ ಉಪರಾಜಧಾನಿಯಾಗಿ ವಿಜೃಂಭಣೆಯಿಂದ ಮೆರೆಯಿತು. ಮುಂದೆ ಗೋವಕದಂಬರ ಕಾಲದಲ್ಲಿ ಆಡಳಿತ ವಿಭಾಗದ ಮುಖ್ಯ ನೆಲೆಯಾಗಿ ಮಂಡಲವಾಗಿ ನಾಡಾಗಿ, ದೇಶವಾಗಿ, ದೇಶದ ರಾಜಧಾನಿಯನಗರವಾಗಿ ಬೆಳೆದಿತ್ತು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಎಪಿಗ್ರಾಫಿಯಾ ಇಂಡಿಕಾ, ಸಂಪುಟ ೧೩.
೨. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್, ಸಂಪುಟ ೧೧ ಮತ್ತು ೧೫.
೩. ಕರ್ನಾಟಕ ಇನ್‌ಸ್ಕ್ರಿಪ್ಶನ್ಸ್ - ಸಂಪುಟ ೫
೪. ಧಾರವಾಡ ತಾಲೂಕಿನ ಶಾಸನಗಳು
೫. ಜೆ. ಎಮ್. ಮೊರೇಸ್, ಕದಂಬ ಕುಲ
೬. ಅ. ಸುಂದರ (ಸಂಪುಟ ಸಂ.); ಕರ್ನಾಟಕ ಚರಿತ್ರೆ, ಸಂಪುಟ - ೧.
೭. ಚಿದಾನಂದಮೂರ್ತಿ ಎಂ.; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
೮. ಜೆ. ಎಂ. ನಾಗಯ್ಯ; ಆರನೆಯ ವಿಕ್ರಮಾದಿತ್ಯನ ಶಾಸನಗಳು - ಒಂದು ಅಧ್ಯಯನ.
೯. ಆರ್. ಎನ್. ಗುರವ್.; ದಿ ಕದಂಬಾಸ್ ಆಫ್ ಗೋವಾ ಅಂಡ್ ದೇರ್ ಇನ್ಸ್‌ಕ್ರಿಪಶನ್ಸ್.


ಡಾ|| ಪಿ. ವಿ. ಕೃಷ್ಣಮೂರ್ತಿ*

ಮುಮ್ಮಡಿ ವೀರಬಲ್ಲಾಳನ ಕಾಲದ ಹೆಸರ್ ಕುಂದಾಣೆರಾಜ್ಯದ ನಾಡುಗಳು

ಹೊಯ್ಸಳ ಇಮ್ಮಡಿ ನರಸಿಂಹನ (೧೨೨೦-೩೫) ಮಗನಾದ ಸೋಮೇಶ್ವರನ ಕಾಲಕ್ಕೆ (೧೨೩೫-೫೩) ತಮಿಳುನಾಡಿನ ಈರೋಡ್- ಕೊಯಮತ್ತೂರು ಜಿಲ್ಲೆಯ ತಿಂಗಳೂರು, ಮುದಿಗೊಂಡಾನ್, ಧರ್ಮಪುರಿ ಜಿಲ್ಲೆಯ ಅಧಮಾನ್‌ಕೋಟೆ ಮತ್ತು ಉತ್ತರ ಆರ್ಕಾಡಿನ ದಾಮಲಚೆರುವು ಪ್ರದೇಶಗಳು, ಅಂದರೆ ಉತ್ತರ ಕೊಂಗು, ಅದಿಮಾನನ ರಾಜ್ಯ ಮತ್ತು ಮಗದೈಮಂಡಲದ ಬಹುಭಾಗ ಅವನ ಆಳ್ವಿಕೆಗೆ ಒಳಪಟ್ಟಿತು. ಆತನು ಸು. ಕ್ರಿ. ಶ. ೧೨೩೫ರಲ್ಲಿ ಚೋಳ ಮಂಡಲದ ಮಧ್ಯದಲ್ಲಿ 'ಸ್ವಭುಜಬಲ ವಿನಿರ್ಜಿತ ಚೋಳಮಂಡಲೆ ಮನೋವಿನೋದಾಯ ನಿರ್ಮಿತಂ-ವಿಕ್ರಮಪುರ ನಾಮಧೇಯಂ ಮಹಾರಾಜಧಾನಿಂ' ಅಂದರೆ ವಿಕ್ರಮಪುರ ಎಂಬ ರಾಜಧಾನಿಯನ್ನು ಸ್ಥಾಪಿಸಿದನು. ಅದೇ, ತಿರುಚಿನಾಪಳ್ಳಿಯ ಉತ್ತರಕ್ಕೆ ಸುಮಾರು ೧೪ ಕಿ.ಮೀ ದೂರದಲ್ಲಿರುವ ಸಮಯಪುರಂನ ಹೊರವಲಯದಲ್ಲಿರುವ ಕಣ್ಣಾನೂರು. ಮುಂದೆ ಇಮ್ಮಡಿ ಸೋಮೇಶ್ವರನು ತನ್ನ ರಾಜಧಾನಿಯನ್ನು ದೋರಸಮುದ್ರದಿಂದ ಈ ಕಣ್ಣಾನೂರಿಗೆ ಬದಲಿಸಿದನು.

ತಮಿಳುಪ್ರಾಂತ್ಯದಲ್ಲಿ ಹೆಚ್ಚು ಪ್ರಭಾವಶಾಲಿಯಾದ ಸೋಮೇಶ್ವರನು ಚೋಳ-ಪಾಂಡ್ಯರ ರಾಜಕೀಯ ದೊಂಬರಾಟದಲ್ಲಿ ತಾನೂ ಭಾಗಿಯಾದನು. ಈತನಿಗೆ ಬಿಜ್ಜಲಾ ಮತ್ತು ದೇವಲಾ ಎಂಬ ಇಬ್ಬರು ರಾಣಿಯರಿದ್ದರು. ಅವರಲ್ಲಿ ಕ್ರಮವಾಗಿ ಮುಮ್ಮಡಿ ನರಸಿಂಹ ಹಾಗೂ ರಾಮನಾಥರೆಂಬ ಮಕ್ಕಳು ಜನಿಸಿದರು. ಇವರು ಬೆಳೆದಂತೆ ಪರಸ್ಪರ ದ್ವೇಷ - ಅಸೂಯೆಗಳನ್ನು ಬೆಳಸಿಕೊಂಡರು. ಆಗ ಸೋಮೇಶ್ವರನು ತನ್ನ ರಾಜ್ಯವನ್ನು ಇಬ್ಭಾಗಮಾಡಿ ರಾಜ್ಯದ ಉತ್ತರ ಭಾಗವನ್ನು ಪ್ರಧಾನತಃ ಕನ್ನಡ ಪ್ರದೇಶಗಳನ್ನು ನರಸಿಂಹನಿಗೂ; ದಕ್ಷಿಣದ ಭಾಗವನ್ನು, ಅಂದರೆ ಕೋಲಾರ,ಧರ್ಮಪುರಿ, ಸೇಲಂ, ಚಿತ್ತೂರು ಜಿಲ್ಲಾ ಪ್ರದೇಶಗಳು ಮತ್ತು ಉತ್ತರ ಆರ್ಕಾಡು ಜಿಲ್ಲೆಯ ಪಶ್ಚಿಮಾರ್ಧ ಭಾಗ, ತಂಜಾವೂರು ಜಿಲ್ಲೆಯ ಸ್ವಲ್ಪ ಭಾಗ - ಇವುಗಳನ್ನು ರಾಮನಾಥನಿಗೂ ಹಂಚಿಬಿಟ್ಟನು. ರಾಮನಾಥನು ತನ್ನ ಸೋದರನಾದ ನರಸಿಂಹನೊಡನೇ ಕಾದಾಟಕ್ಕೆ ತೊಡಗಿದನು. ಆ ಸಂದರ್ಭದಲ್ಲಿ ತನ್ನ ರಾಜ್ಯದ ಉತ್ತರಕ್ಕಿದ್ದ ಘಟ್ಟಗಳ ಮೇಲಿನ ಕುಂದಾಣೆ ಎಂಬ ಸ್ಥಳವನ್ನು ತನ್ನ ಒಂದು ಪ್ರಾದೇಶಿಕ ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸಿದನು. ಮುಂದೆ ಪ್ರಬಲರಾದ ಪಾಂಡ್ಯರು ಕ್ರಿ. ಶ. ೧೨೫೧-೫೨ರ ಸುಮಾರಿಗೆ ಕಣ್ಣಾನೂರನ್ನು ವಶಪಡಿಸಿಕೊಳ್ಳುವುದರೊಂದಿಗೆ ರಾಮನಾಥನ ರಾಜ್ಯದ ದಕ್ಷಿಣ ಪ್ರಾಂತ್ಯಗಳು ಕೈ ತಪ್ಪಿಹೋದವು. ಆಗ ರಾಮನಾಥನು ತನ್ನ ರಾಜಧಾನಿಯನ್ನು ಕುಂದಾಣೆಗೆ ಬದಲಿಸಿದನು. ನರಸಿಂಹನಾದರೋ ರಾಮನಾಥನನ್ನು ಎದುರಿಸಿ ತನ್ನ ರಾಜ್ಯವನ್ನು ಉಳಿಸಿಕೊಂಡನು. ಕ್ರಿ.ಶ. ೧೨೯೫ರಲ್ಲಿ ರಾಮನಾಥನು ಮಡಿದ ನಂತರ ಅವನ ಮಗನಾದ ವಿಶ್ವನಾಥನು ಅಧಿಕಾರಕ್ಕೆ ಬಂದನು. ಆತನ ಪ್ರಸ್ತಾಪ ಉತ್ತರ ಆರ್ಕಾಡಿನ ತಿರಪತ್ತೂರು, ಧರ್ಮಪುರಿ ಜಿಲ್ಲೆಯ ಕೃಷ್ಣಗಿರಿ ತಾಲೂಕಿನ ದೇವರ ಕುಂದಾಣೆ, ಕಂಬಯನಲ್ಲೂರು ಮುಂತಾದ ಸ್ಥಳಗಳಲ್ಲಿನ ಶಾಸನಗಳಲ್ಲಿ ಬಂದಿದೆ. ಅಲ್ಪಕಾಲ ಜೀವಿಸಿದ್ದ ಈತ ಕ್ರಿ.ಶ. ೧೨೯೮ರಲ್ಲಿ ಮಡಿದ. ಆ ವೇಳೆಗಾಗಲೇ ಅಂದರೆ, ಕ್ರಿ.ಶ. ೧೨೯೧ರಲ್ಲಿ ಪಟ್ಟಕ್ಕೆ ಬಂದು ಪ್ರಬಲನಾಗತೊಡಗಿದ್ದ ಮುಮ್ಮಡಿ ನರಸಿಂಹನ ಮಗನಾದ ಮುಮ್ಮಡಿ ವೀರಬಲ್ಲಾಳನು ತಮಿಳುನಾಡಿನ ಧರ್ಮಪುರಿ, ಸೇಲಂ, ನೀಲಗಿರಿ, ಕೊಯಮತ್ತೂರು ಪ್ರದೇಶಗಳನ್ನು ಆಕ್ರಮಿಸಿ; ಮತ್ತೆ ಆ ಪ್ರದೇಶಗಳ ಮೇಲೆ ಹೊಯ್ಸಳರ ಆಳ್ವಿಕೆ ನೆಲೆಗೊಳ್ಳುವಂತೆ ಮಾಡಿದ್ದನು. ಅನಂತರದಲ್ಲಿ ಮಗದೈ ಮತ್ತು ತೊಂಡೈಮಂಡಲಗಳೂ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಒಳಪಟ್ಟವು. ಒಟ್ಟಾರೆ ಇಬ್ಭಾಗವಾಗಿ ಶಿಥಿಲಗೊಳ್ಳತೊಡಗಿದ್ದ ಹೊಯ್ಸಳ ಸಾಮ್ರಾಜ್ಯ ಈ ಮುಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಒಗ್ಗೂಡಿತು. ಹಿಂದೆ ರಾಮನಾಥನು ಸ್ಥಾಪಿಸಿದ್ದ ಪ್ರಾದೇಶಿಕ ರಾಜಧಾನಿ ಕುಂದಾಣೆಯ

* ಜಬಜೆ-೫೧೧, ೧೨ನೇ ಕ್ರಾಸ್, ಮಾರತ್ತಹಳ್ಳಿ, ಬೆಂಗಳೂರು - ೫೬೦ ೦೩೭.



ಪ್ರಾಮುಖ್ಯತೆಯೇನೂ ಕಡಿಮೆ ಆಗಿರಲಿಲ್ಲ. ಅದು ಆ ಹೆಸರಿನ ರಾಜ್ಯವೊಂದರ ಕೇಂದ್ರ ಸ್ಥಳವಾಗಿ ರೂಪುಗೊಂಡಿತ್ತು.

ಕ್ರಿ. ಶ. ೧೩೦೧ರ ಮುಮ್ಮಡಿ ವೀರಬಲ್ಲಾಳನ ಕೆಲವು ಶಾಸನಗಳು ಬೆಂಗಳೂರು, ಕೋಲಾರ ಮತ್ತು ಧರ್ಮಪುರಿ ಜಿಲ್ಲೆಯಲ್ಲಿದ್ದು ಕುಂದಾಣಿ ರಾಜ್ಯವನ್ನು ಪ್ರಸ್ತಾಪಿಸುತ್ತವೆಯಲ್ಲದೆ, ಆ ಕುಂದಾಣಿರಾಜ್ಯಕ್ಕೆ ಸೇರಿದ ಹಲವು ನಾಡುಗಳ ಪಟ್ಟಿಯನ್ನು ನೀಡುತ್ತವೆ. ಅಂತೆಯೇ ಕುಂದಾಣಿರಾಜ್ಯ ಮತ್ತು ಆ ರಾಜ್ಯದಲ್ಲಿ ಅಂತರ್ಗತವಾಗಿದ್ದ ನಾಡುಗಳ ಪರಿಚಯ ಹಾಗೂ ಅವುಗಳ ಭೌಗೋಳಿಕವ್ಯಾಪ್ತಿ ಇತ್ಯಾದಿಗಳನ್ನು ಪರಿಶೀಲಿಸುವ ಪ್ರಯತ್ನ ಈ ಪ್ರಬಂಧದ ಆಶಯವಾಗಿದೆ.

ಮೇಲೆ ಪ್ರಸ್ತಾಪಿಸಿದ ಮುಮ್ಮಡಿ ವೀರಬಲ್ಲಾಳನ ಕ್ರಿ. ಶ. ೧೩೦೧ರ ಶಾಸನಗಳು ಬಹುಮಟ್ಟಿಗೆ ಶೈವದೇವಾಲಯಗಳಲ್ಲಿದ್ದು, ತನಗೂ ತನ್ನ ರಾಜ್ಯಕ್ಕೂ ಶುಭವುಂಟಾಗಲಿ ಎಂದು ಕೋರಿ, ಹೆಸರ್ ಕುಂದಾಣಿರಾಜ್ಯಕ್ಕೆ ಸೇರಿದ ಹಲವು ನಾಡುಗಳಲ್ಲಿನ ದೇವಾಲಯಗಳ, ಸ್ಥಾನಿಕರ ಮತ್ತು ಮಠಪತಿಗಳನ್ನು ಕುರಿತು ನೀಡಿರುವ ಆದೇಶಗಳನ್ನು ತಿಳಿಸುವಂತಹವಾಗಿವೆ. ಈ ಶಾಸನಗಳು ಬೆಂಗಳೂರು ಜಿಲ್ಲೆಯ, ಬೆಂಗಳೂರು ಸಮೀಪದ ಮಡಿವಾಳ ತಾವರೆಕೆರೆಯ ಸೋಮೇಶ್ವರ,[೧] ದೊಮ್ಮಲೂರಿನ ಚೊಕ್ಕನಾಥ- ವರ್ತೂರು ಸಮೀಪದ ಗುಂಜೂರು[೨] ಗ್ರಾಮದ ಸೋಮೇಶ್ವರ,[೩] ನೆಲಮಂಗಲ ತಾಲೂಕಿನ ಐಗಂಡಪುರದ[೪] ಧರ್ಮೇಶ್ವರ; ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಡಿವಾಳದ[೫] ಗಂಗಾಧರೇಶ್ವರ, ಲಕ್ಕೂರು[೬] ಗ್ರಾಮದ ಸೋಮೇಶ್ವರ, ತೇಕಲ್ ಹೊ॥ ಹಳ್ಳಿಗಾನ ಹಳ್ಳಿಯಲ್ಲಿದ್ದ ಈಶ್ವರ[೭] ಚಿಕ್ಕಬಳ್ಳಾಪುರ ತಾಲೂಕಿನ ನಂದಿಯ ಕಮಠೇಶ್ವರ[೮] ಹಾಗೂ ಧರ್ಮಪುರಿ ಜಿಲ್ಲೆ ಹೊಸೂರು ತಾಲೂಕಿನ ಚೂಡಾಪುರಂನ ಏಕಾಮ್ರನಾಥ[೯] ಮುಂತಾದ ದೇವಾಲಯಗಳಲ್ಲಿ ಕಂಡುಬಂದಿವೆ.

ಈ ಶಾಸನಗಳಲ್ಲಿ ಹೆಸರ್‌ಕುಂದಾಣಿ ರಾಜ್ಯಕ್ಕೆ ಸೇರಿದ ಎರಿವಿನಾಡು, ಮಾಶಂಡಿನಾಡು, ಮುರುಶುನಾಡು, ಶೊಕ್ಕನಾಯನ್ ಪಟ್ರು, ಪೆಣ್ಣೆಯಾಂಡಾರ್ ಮಡನಾಡು, ಐಂಬುಲಿಗೂರುನಾಡು, ಎಲವೂರ್‌ನಾಡು, ಕೈವಾರನಾಡು,

ಕುವಳಾಲನಾಡು, ಇಲೈಪಾಕ್ಕನಾಡು, ವೆಪ್ಪೂರ್‌ನಾಡು, ಎಱುಮಜೈನಾಡು, ಅಂಬಡಕ್ಕ ನೋಣ್ಬುಂಗುಟಿ, ತೇಕಲ್‌ನಾಡು, ಪೆರಿಯನಾಡು, ಏಯಿಲ್‌ನಾಡು, ತಗಡೈನಾಡು, ಪುರಮಲೈನಾಡು, ಆದಿಗೈಮಾನಾಡು ಹಾಗೂ ಪುಲಿಯೂರ್ ನಾಡು ಮುಂತಾದವು ಪ್ರಸ್ತಾಪಿತವಾಗಿವೆ. ಅಲ್ಲದೆ ಈ ಶಾಸನಗಳಲ್ಲಿ ದೇವದಾನಂ, ತಿರುವಿಡೆಯಾಟ್ಟಂ, ಮಡಪುರಂ, ಪಳ್ಳಿಚ್ಚಂದಂ ಎಂಬ ದಾನ ಪ್ರಕಾರಗಳೂ; ಕಾಣಿಕ್ಕೈ, ತಱಿಯಿಱಿ, ತಟ್ಟಾರ್ ಪಟ್ಟಾರ್, ನಱ್‌ಪಶು ಶಾರಿಗೈ - ಉಟ್‌ಪಟ್ಟು ಎಂಬ ಕರಗಳ ಹಾಗೂ **ಪೂಜೆ, ಅಮೃತಪಡಿ, ಅಂಗರಂಗ ಭೋಗ** ಮುಂತಾದ **ತಿರುಪಣಿಗಳ** ಪ್ರಸ್ತಾಪವೂ ಬಂದಿದೆ.

ಹೆಸರ್ ಕುಂದಾಣಿರಾಜ್ಯದ ನಾಡುಗಳೆಂದು ಉಕ್ತವಾಗಿರುವ ಈ ನಾಡುಗಳೆಲ್ಲ, ಬಹುಮಟ್ಟಿಗೆ, ಬೆಂಗಳೂರು, ಕೋಲಾರ, ಅದಕ್ಕೆ ಹೊಂದಿಕೊಂಡಿರುವ ಇಂದಿನ ತಮಿಳುನಾಡಿನ ಧರ್ಮಪುರಿ, ಉತ್ತರ ಆರ್ಕಾಡು, ದಕ್ಷಿಣ ಆರ್ಕಾಡು ಜಿಲ್ಲೆಗಳ ವ್ಯಾಪ್ತಿಯೊಳಗೆ ಬರುವಂತಹ ನಾಡುಗಳಾಗಿದ್ದವು.

ಹೆಸರ್ ಕುಂದಾಣಿ ರಾಜ್ಯ

ಹೆಸರ್ ಕುಂದಾಣಿಯನ್ನು ಗುರುತಿಸುವಿಕೆಯಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಿ. ಎಲ್. ರೈಸ್ ಅವರು ಅದು ದೇವನಹಳ್ಳಿ ಸಮೀಪದ ಕುಂದಾಣವೇ ಇರಬೇಕೆಂದು ಹೇಳಿರುತ್ತಾರೆ. ಆದರೆ ಹೆಸರ್‌ಕುಂದಾಣಿ ರಾಜ್ಯಕ್ಕೆ ಸೇರಿದ ಶಾಸನೋಕ್ತ ನಾಡುಗಳ ಭೌಗೋಳಿಕ ವಿತರಣೆ ಹಾಗೂ 'ವಿರವಿನಾಡಿ'ನ ಪ್ರಸ್ತಾಪಗಳ ಹಿನ್ನೆಲೆಯಲ್ಲಿ ಗಮನಿಸಿದರೆ: ಪ್ರಸ್ತುತ ಕುಂದಾಣಿ ಸ್ಥಳವು ನಿಸ್ಸಂಶಯವಾಗಿ ಇಂದಿನ ಧರ್ಮಪುರಿ ಜಿಲ್ಲೆಯ ಹೊಸೂರು, ಕೃಷ್ಣಗಿರಿ ಹಾಗೂ ಕೋಲಾರ ಜಿಲ್ಲೆಯ ಮಾಲೂರು, ಬಂಗಾರಪೇಟೆ ತಾಲೂಕು ಪ್ರದೇಶಗಳು ಸಂಧಿಸುವ ಹೊಸೂರಿನ ಈಶಾನ್ಯ ಹಾಗೂ ಬಂಗಾರಪೇಟೆಯ ದಕ್ಷಿಣಕ್ಕಿರುವ ಕೃಷ್ಣಗಿರಿ ತಾಲೂಕಿನ ಕುಂದಾಣಿ ಎಂಬ ಗ್ರಾಮವೇ ಆಗಿದ್ದು ಅದನ್ನು ***ದೇವರ ಕುಂದಾಣಿ ಗ್ರಾಮ*** ಎಂದು ಈಗ ಕರೆಯುತ್ತಾರೆ. ಇದು ನಿಜಕ್ಕು ಒಂದು ಆಯಕಟ್ಟಿನ ಸ್ಥಳದಲ್ಲಿದೆ. ಸುತ್ತಲು ಪೂರ್ವ ಘಟ್ಟಗಳ ಬೆಟ್ಟ ಸಾಲುಗಳಿಂದ ಆವೃತವಾಗಿರುವ ಈ ಸ್ಥಳ ಮಾರ್ಕಂಡೇಯ ನದಿಯ ದಡದಲ್ಲಿದೆ. ನೈಸರ್ಗಿಕ ರಕ್ಷಣೆ ಮತ್ತು ನೀರಿನ ಸೌಕರ್ಯವನ್ನು ಪಡೆದಿರುವ ಈ ಸ್ಥಳವು ಹಲವು ಪ್ರಾಗೈತಿಹಾಸಿಕ ಕುರುಹುಗಳನ್ನೊಳಗೊಂಡಂತೆ, ಹಂಪಿಯ ಗತವೈಭವವನ್ನು ನೆನಪಿಸುವ ರೀತಿಯ ವಾಸ್ತು ರಚನೆಗಳಿಂದ ಕೂಡಿರುವ ಸಂಗತಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮನವರಿಕೆಯಾಯಿತು. ಬೆಟ್ಟದ ಮೇಲೆ ಕೋಟೆಯ ಪಳೆಯುಳಿಕೆಗಳು ಉಳಿದಿವೆ. ದೇವಸಮುದ್ರ ಎಂದು ಶಾಸನೋಕ್ತವಾದ ಕೆರೆಯೊಂದು ಇದೆ. ಆದುದರಿಂದಲೇ ಆ ಊರಿಗೆ *ದೇವಸಮುದ್ರದ ಕುಂದಾಣಿ - ದೇವರ ಕುಂದಾಣಿ* ಎಂಬ ಹೆಸರು ಈಗ ಪ್ರಚಲಿತವಾಗಿದೆ ಎಂದು ತೋರುತ್ತದೆ. ಈ ಸ್ಥಳದ ಉತ್ತರಕ್ಕೆ ಹಳೆಯ ಕುಂದಾಣಿ ಎಂದು ಕರೆಯುವ ಪ್ರದೇಶವಿದೆ. ಇದು ಹಿಂದೆ ಅಂದರೆ ಕ್ರಿ. ಶ. ೮೨೦ರ ಶಾಸನದಲ್ಲಿ (Bn-೪೦) ಉಕ್ತವಾಗಿರುವಂತೆ ಗಂಗ ಅಱುಸಾವಿರ ಪ್ರದೇಶದ ಸ್ಥಳವಾಗಿದ್ದಿತು. ಮೇರೂರು ಕುಂದಾಣಿ ಎಂದು ಅಲ್ಲಿ ಕರೆಯಲಾಗಿದೆ. ಕುಂದಾಣ, ಕುಂದಾಣಿ ಎಂಬ ಹೆಸರಿನ ಸ್ಥಳಗಳು ಹಲವು ಇರುವುದರಿಂದ 'ಮೇರೂರು', 'ಹೆಸರ್' ಎಂಬ ವಿಶೇಷಣಗಳು ಅವಕ್ಕೆ ಸೇರಿಸಿರಬೇಕು. 'ಮೇರೂರು' ಮತ್ತು 'ಹೆಸರ್' ಎಂಬ ವಿಶೇಷಣಗಳು ಒಂದೇ ಸ್ಥಳವನ್ನೇ ಅಥವಾ ವಿಭಿನ್ನ ಸ್ಥಳವನ್ನು ಸೂಚಿಸುತ್ತವೆಯೋ? ನಿರ್ದುಷ್ಟವಾಗಿ ಹೇಳಲಾಗದು. ಆದರೆ **ಹೆಸರ್** ಎಂಬುದು 'ಕೀರ್ತಿ' ಎಂಬ ಅರ್ಥದಲ್ಲಿ ಅಂದರೆ ಹೆಸರಾದ, ಪ್ರಸಿದ್ಧವಾದ ಎಂಬರ್ಥದಲ್ಲಿಯೇ ಇಲ್ಲಿ ಪ್ರಯುಕ್ತವಾಗಿದೆಯೆಂದು ಭಾವಿಸಬಹುದಾಗಿದೆ.

ಒಟ್ಟಾರೆ ಹೊಯ್ಸಳ ರಾಮನಾಥನ ಕಾಲದಿಂದೀಚೆಗೆ ಹೊಯ್ಸಳ ಸಾಮ್ರಾಜ್ಯದ ಒಂದು ಮುಖ್ಯಸ್ಥಳವಾಗಿ, ಗುರುತಿಸಲ್ಪಟ್ಟದ್ದು; ಆ ನಂತರದಲ್ಲಿ ಅವರ ರಾಜಧಾನಿ ಹಾಗೂ ಒಂದು ರಾಜ್ಯದ ಕೇಂದ್ರ ಸ್ಥಳವಾಗಿ ಪರಿಗಣಿತವಾದುದಕ್ಕೆ ಆ ಸ್ಥಳದ ಭೌಗೋಳಿಕ ಪರಿಸರವೇ ಕಾರಣವಾಗಿದ್ದಿತೆಂದು ಹೇಳಬೇಕಾಗಿದೆ. ಇನ್ನು ಈ ಹೆಸರ್‌ಕುಂದಾಣಿ ರಾಜ್ಯದಲ್ಲಿ ಸಮಾವೇಶಗೊಂಡಿದ್ದ ನಾಡುಗಳ ಪರಿಚಯ ಹಾಗೂ ಭೌಗೋಳಿಕ ವ್ಯಾಪ್ತಿಯ ಬಗ್ಗೆ ಪರಿಶೀಲಿಸೋಣ:

ವಿರಿವಿನಾಡು : ಎಂಬುದು ಕುಂದಾಣಿ ಗ್ರಾಮದ ಸುತ್ತಮುತ್ತಲ ಪ್ರದೇಶವನ್ನು ಒಳಗೊಂಡಿದ್ದಂಥ ನಾಡಾಗಿದ್ದಿತು.

ಮಾಶಾಂದಿನಾಡು : ಬೆಂಗಳೂರು ಜಿಲ್ಲೆಯ ಆನೇಕಲ್ ತಾಲೂಕಿನ ಉತ್ತರ ಭಾಗ ಅಂದರೆ ಸರ್ಜಾಪುರ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಹೊಸೂರು ತಾಲೂಕಿನ ಬಾಗಲೂರು, ಬೇರಿಕೆ ಮುಂತಾದ ಸ್ಥಳಗಳನ್ನೊಳಗೊಂಡಿದ್ದಂಥ ಪ್ರದೇಶ.

ಮುರುಶುನಾಡು : ಮೊರಸುನಾಡು ಎಂದು ಕನ್ನಡ ಶಾಸನಗಳಲ್ಲಿ ಸಾಮಾನ್ಯವಾಗಿ ಉಕ್ತವಾಗಿರುವ ಈ ನಾಡು ಗಂಗರ ಕಾಲದಿಂದಲೂ ಪ್ರಸಿದ್ಧವಾಗಿದೆ. ಆನೇಕಲ್, ಹೊಸೂರು, ಡೆಂಕಣಿ ಕೋಟೆ, ಹೊಸಕೋಟೆ ಮುಂತಾದ ತಾಲೂಕು ಪ್ರದೇಶಗಳನ್ನು ಒಳಗೊಂಡಿದ್ದ ಒಂದು ಪ್ರಸಿದ್ಧವಾದ ನಾಡು ಇದಾಗಿದ್ದಿತು. ಈ ಪ್ರದೇಶದಲ್ಲಿ ವಾಸಿಸುವ ಕೃಷಿಕರನ್ನು ಮೊರಸು ಒಕ್ಕಲಿಗರೆಂದು ಕರೆಯಲಾಗಿದೆ.

ಕೈವಾರನಾಡು : ಇಂದಿನ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಪಶ್ಚಿಮ, ಶಿಡ್ಲಘಟ್ಟ, ಹೊಸಕೋಟೆ ತಾಲೂಕುಗಳ ಪೂರ್ವಭಾಗ ಹಾಗೂ ಕೋಲಾರ ತಾಲೂಕಿನ ಉತ್ತರ ಭಾಗಗಳನ್ನು ಒಳಗೊಂಡಿದ್ದಿತು.

ಕುವಲಾಳ ನಾಡು : ಇಂದಿನ ಕೋಲಾರ ಸ್ಥಳದ ಸುತ್ತಮುತ್ತಲ ಪ್ರದೇಶಗಳನ್ನು ಒಳಗೊಂಡಂಥ ಒಂದು ಪ್ರಾಚೀನ ಆಡಳಿತ ವಿಭಾಗ.

ಇಳೈಪಾಕ್ಕನಾಡು : ಎಂಬುದು ಬೆಂಗಳೂರಿನ ಉತ್ತರಕ್ಕಿರುವ ಇಂದಿನ ಎಲಹಂಕ ಅಂದರೆ ಕನ್ನಡ ಶಾಸನಗಳಲ್ಲಿ ಉಕ್ತವಾಗಿರುವ ಎಲಹಕ್ಕನಾಡೇ ಆಗಿದ್ದು, ಬೆಂಗಳೂರು ಉತ್ತರ, ದಕ್ಷಿಣ, ದೇವನಹಳ್ಳಿ, ನೆಲಮಂಗಲ, ತಾಲೂಕುಗಳ ಹಲವು ಭಾಗಗಳನ್ನು ಒಳಗೊಂಡಿದ್ದು ಒಂದು ನಾಡು.

ವೆಪ್ಪೂರ್‌ನಾಡು : ಬೆಂಗಳೂರು ದಕ್ಷಿಣ ತಾಲೂಕಿನ ಬೇಗೂರು ಸ್ಥಳದ ಪ್ರಾಚೀನ ರೂಪ ಬೆಂಪೂರು. ಅದೇ ತಮಿಳಿನಲ್ಲಿ ವೆಪ್ಪೂರ್ ಎಂದಾಗಿ ಮುಂದೆ ಬೇಹೂರು ಬೇಗೂರು ಎಂದು ಬದಲಾಗಿದೆ. ಪ್ರಸಿದ್ಧ ಬೇಗೂರಿನ ವೀರಗಲ್ಲು ಶಾಸನದಲ್ಲಿ ಬೆಂಪೂರು - ೧೨ರ ಉಲ್ಲೇಖದೊಂದಿಗೆ ಅದರ ಸುತ್ತಮುತ್ತಲ ೧೨ ಗ್ರಾಮಗಳನ್ನು ಹೆಸರಿಸಿದೆ. ಇಂದಿನ ಬೇಗೂರು ಸುತ್ತಮುತ್ತಲ ಹಲವು ಗ್ರಾಮಗಳನ್ನೊಳಗೊಂಡಂತೆ ವೆಪ್ಪೂರುನಾಡು ಇದ್ದಿತು.

ಎಱುಮರೆನಾಡು : ಎಂಬುದು ವಾಸ್ತವವಾಗಿ ಮಾಶಾಂದಿ ನಾಡಿನ ಭಾಗ ಇಂದಿನ ಸರ್ಜಾಪುರದ ಸಮೀಪದಲ್ಲಿರುವ ಎಮರೆ ಎಂಬ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತಲ ಹಲವು ಗ್ರಾಮಗಳು ಸೇರಿ ಈ ನಾಡು ರೂಪ ತಾಳಿದ್ದಿತ್ತೆಂದು ಹೇಳಬಹುದು.

ತೇಕಲ್‌ನಾಡು : ಮಾಲೂರು ತಾಲೂಕಿನ ಮಾಸ್ತಿ ಸಮೀಪದ ಸ್ಥಳ ತೇಕಲ್. ಈ ಸ್ಥಳವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಮುತ್ತಲ ಹಲವಾರು ಗ್ರಾಮಗಳ ವ್ಯಾಪ್ತಿ ಈ ನಾಡಿಗಿದ್ದಿತೆಂದು ತೋರುತ್ತದೆ. ಕ್ರಿ. ಶ. ೯ನೇ ಶತಮಾನದ ಬಾಣರಸರ ಶಾಸನವೊಂದು ಈ ನಾಡನ್ನು 'ತೇಕಲ್ನಾಡೆಳ್ಪತ್ತು' ಎಂದು ಉಲ್ಲೇಖಿಸುತ್ತದೆ.

ತಗಡೈನಾಡು : ಇಂದಿನ ಧರ್ಮಪುರಿಯ ಪೂರ್ವನಾಮ ತಗಡೂರು. ಆ ತಗಡೂರಿನ ಸುತ್ತಮುತ್ತಲ ಪ್ರದೇಶವೇ ತಗಡೂರ್‌ನಾಡು ಅಥವಾ ತಗಡೈನಾಡು ಈ ನಾಡಿನಲ್ಲಿ ಪುರಮಲೈನಾಡು ಅಂತರಗತವಾಗಿದ್ದಿತು.

ಪುರಮಲೆನಾಡು : ದಕ್ಷಿಣ ಆರ್ಕಾಡು ಜಿಲ್ಲೆಯ ಪಶ್ಚಿಮ ಭಾಗಗಳು ಹಾಗೂ ಧರ್ಮಪುರಿ ಜಿಲ್ಲೆಯ ಹರೂರು ತಾಲೂಕಿನ ಭಾಗಗಳನ್ನು ಒಳಗೊಂಡಿದ್ದಂಥ ಪ್ರಾದೇಶಿಕ ವಿಭಾಗ ಇದಾಗಿದ್ದಿತು. ಅಂದರೆ ಪೆನ್ನಾರ್ ನದಿಯ ದಕ್ಷಿಣ ಮತ್ತು ವಾಣಿಯಾರ್ ನದಿಯ ಪಶ್ಚಿಮದ ಪ್ರದೇಶಗಳು ಈ ನಾಡಿನಲ್ಲಿ ಅಂತರ್ಗತವಾಗಿದ್ದವು.

ಎಯಿಲ್‌ನಾಡು : ಎಂಬುದು ದಕ್ಷಿಣ ಆರ್ಕಾಡು ಜಿಲ್ಲೆಯ ದಿಂಡಿವನಂ ತಾಲೂಕಿನ ಎಯಿರ್‌ಕೊಟ್ಟ ಎಂಬ ಸ್ಥಳದ ಸುತ್ತಮುತ್ತಲ ಪ್ರದೇಶ ಅಂದರೆ ಜಾವಡಿ ಬೆಟ್ಟಗಳ ಉತ್ತರ ಮತ್ತು ವಾಣಿಯಾಂಬಾಡಿಯ ಪಶ್ಚಿಮ ಪ್ರದೇಶಗಳು ಇದರಲ್ಲಿ ಅಂತರಗತ ವಾಗಿದ್ದವು.

ಐಂಬುಟಗೂರ್ ನಾಡು : ಇದು ಪಡುವೂರ್ ಕೋಟ್ಟಂಗೆ ಸೇರಿದ ನಾಡು. ಉತ್ತರ ಆರ್ಕಾಡು ಜಿಲ್ಲೆಯ ಭಾಗಗಳು ಇದರಲ್ಲಿ ಅಂತರಗತವಾಗಿದ್ದವು.

ಪೆರಿಯನಾಡು : ಮೊರಸುನಾಡಿನ ಪಶ್ಚಿಮಕ್ಕೆ ಹೊಮ್ಮಳಿಗೆ ನಾಡಿನ (ಪೊಣ್ಮಣಿಗ ನಾಡು) ಭಾಗವಾಗಿದ್ದ ಆನೇಕಲ್ ತಾಲೂಕಿನ ಇಗ್ಗಲೂರು, ಬನ್ನೇರುಘಟ್ಟ ಪರಿಸರದ ಒಂದು ನಾಡಾಗಿದ್ದಿತು.

ಪುಲಿಯೂರ್ ನಾಡು : ಹೊಸಕೋಟೆ, ಬೆಂಗಳೂರು ದಕ್ಷಿಣ ತಾಲೂಕಿನ ಹಲವು ಭಾಗಗಳು ಈ ನಾಡಿನಲ್ಲಿ ಸಮಾವೇಶ ಗೊಂಡಿದ್ದವು. ಇದನ್ನು ಕುಂಜನಾಡು ಎಂದು ಕೂಡ ಕರೆದಿರುವುದು ಕಂಡುಬರುತ್ತದೆ.

ಅದಿಗೈಮಾನಾಡು : ಎಂಬುದು ಧರ್ಮಪುರಿ ಜಿಲ್ಲೆಯ ಸಾಕಷ್ಟು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದ್ದ ಒಂದು ಪ್ರಾಚೀನ ವಿಭಾಗ 'ಅದಿಗಮಾನ್' ಎಂಬ ರಾಜವಂಶೀಯರು ಈ ಪ್ರದೇಶವನ್ನು ಆಳಿದ್ದರೆಂದು ಪ್ರತೀತಿ.

ಅಂಬಡಕ್ಕಿ ನೊಣ್ಣುಂಗುಟಿ' : ಹೊಸಕೋಟೆ ತಾಲೂಕಿನ ಇಂದಿನ ನಂದಗುಡಿ ಗ್ರಾಮದ ಸುತ್ತಮುತ್ತಲ ಪ್ರದೇಶ ಇದು ಆಗಿರಬೇಕು.

ಎಲವೂರ್‌ನಾಡು / ಇಲವೂರ್ ನಾಡು : **ಶೊಕ್ಕ ನಾಯನ್ ಪಟ್ಟು ಹಾಗೂ ಪೆನ್ನೈಯಾಂಡರ್ ಮಡನಾಡುಗಳ** ಪ್ರದೇಶ ಯಾವುದಾಗಿದ್ದಿತ್ತೆಂಬುದನ್ನು ಶೋಧಿಸುವ ಕೆಲಸ ಆಗಬೇಕಾಗಿದೆ.

ಈ ಮೇಲಿನ ನಾಡುಗಳೆಲ್ಲವು ಇಂದಿನ **ದೇವರ ಕುಂದಾಣಿ** ಅಥವಾ ಹಿಂದಿನ **ಹೆಸರ್‌ಕುಂದಾಣಿ** ಸ್ಥಳದ ಅಂದರೆ ವಿರವಿನಾಡಿನ ಸುತ್ತಮುತ್ತಲಿನ ನಾಡುಗಳೇ ಆಗಿರುವ ಅಂಶ ನಕ್ಷೆಯಿಂದ ತಿಳಿಯುತ್ತದೆ. ಇಡೀ **ಹೆಸರ್ ಕುಂದಾಣಿ ರಾಜ್ಯದ** ಈ ನಾಡುಗಳು, ಬಹುಮಟ್ಟಿಗೆ ಪ್ರಾಚೀನ ಪೆರ್ಬಾಣವಾಡಿಯ ದಕ್ಷಿಣಾರ್ಧ ಪ್ರದೇಶದ ವ್ಯಾಪ್ತಿಯನ್ನು ಪಡೆದುಕೊಂಡಿರುವುದು ಗಮನಾರ್ಹ ಸಂಗತಿ. ಚದುರಿದಂತೆ ಹರಡಿರುವ ಬೆಟ್ಟಗುಡ್ಡಗಳು; ಅಲ್ಲಲ್ಲೆ ಕಾಡು-ಮೇಡುಗಳಿಂದ ಕೂಡಿ, ಪ್ರಾಗೈತಿಹಾಸಿಕ ಕಾಲದಿಂದಲೂ ಪ್ರಾಮುಖ್ಯತೆಯನ್ನು ಪಡೆದ, ಪ್ರದೇಶವಾಗಿ ಇದು ಗಮನ ಸೆಳೆಯುತ್ತದೆ. ದಕ್ಷಿಣ ಭಾರತದ ಅನೇಕ ನಿರ್ಣಾಯಕ ಸಮರಗಳ ತಾಣ, ಇಲ್ಲವೆ ಪಥ ಈ ಪ್ರದೇಶವೇ ಆಗಿದ್ದಿತೆಂಬುದು ಇತಿಹಾಸದಿಂದ ತಿಳಿದುಬರುವ ಸಂಗತಿ. ಒಟ್ಟಾರೆ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ **ಹೆಸರ್‌ಕುಂದಾಣಿ ರಾಜ್ಯ** ಒಂದು ಗಣನಾರ್ಹ ಸ್ಥಾನವನ್ನು ಪಡೆದಿದ್ದಿತು.

ಈ ನಾಡುಗಳನ್ನು ಉಲ್ಲೇಖಿಸುವ ಹೊಯ್ಸಳರ ವೀರ ಬಲ್ಲಾಳನ ಶಾಸನಗಳಲ್ಲಿ ಪ್ರಯುಕ್ತವಾಗಿರುವ ದಾನ ಪ್ರಕಾರ, ಕರ, ಪೂಜಾಕೈಂಕರ್ಯಗಳಿಗೆ ಸಂಬಂಧಿಸಿದ ತಮಿಳು ಪಾರಿಭಾಷಿಕ ಪದಗಳ ಪರಿಚಯವನ್ನು ಸೂಕ್ಷ್ಮವಾಗಿ ಇಲ್ಲಿ ಮಾಡಿಕೊಳ್ಳ ಬಹುದಾಗಿದೆ:

ದೇವದಾನಂ : ದೇವಾಲಯಗಳಿಗೆ ಬಿಟ್ಟ ಭೂ ಅಥವಾ ಗ್ರಾಮದತ್ತಿ.

ತಿರುವಿಡಿಯಾಟ್ಟಂ : ವೈಷ್ಣವ ದೇವಾಲಯಗಳಿಗೆ ಬಿಟ್ಟ ಕರರಹಿತವಾದ ಭೂ ಅಥವಾ ಗ್ರಾಮಗಳ ದಾನ.

ಮಠಪುರಂ : ಮಠಗಳಿಗೆ ಬಿಟ್ಟ ಭೂ ಅಥವಾ ಗ್ರಾಮದತ್ತಿ.

ಪಳ್ಳಿಚ್ಛಂದಂ : ಜೈನ ದೇವಾಲಯಗಳಿಗೆ ಬಿಟ್ಟ ಕರರಹಿತವಾದ ಭೂ ಅಥವಾ ಗ್ರಾಮ ದತ್ತಿ.

ಸಿದ್ಧಾಯಂ : ನಿರ್ದಿಷ್ಟಪಡಿಸಿದ, ನಗದಾಗಿ ನೀಡಬೇಕಾದ ಸಣ್ಣ ಪುಟ್ಟ ತೆರಿಗೆಗಳು.

ಕಾಣಿಕೆ : ದೇವರಿಗೆ, ರಾಜ ಅಥವಾ ಅನ್ಯ ಗೌರವಾನ್ವಿತರಿಗೆ ಸಾಂದರ್ಭಿಕವಾಗಿ ನೀಡುವ ಕೊಡುಗೆಗಳು.

ತಱಿಯಿಱು : ಮಗ್ಗಗಳ ಮೇಲಿನ ತೆರಿಗೆ

ತಟ್ಟಾರ್ ಪಾಟ್ಟಮ್ : ಚಿನ್ನದ ಆಭರಣಗಳನ್ನು ಮಾಡುವ ಅಕ್ಕಸಾಲಿಗರ ಮೇಲಿನ ತೆರಿಗೆ

ಉಟ್‌ಪಟ್ಟು : ಕೆರೆಗಳಲ್ಲಿ ತುಂಬಿದ ಹೂಳನ್ನು ಹೊರತೆಗೆಯಲು ಏರ್ಪಟ್ಟ ಗುತ್ತಿಗೆಗೆ ಸಂಬಂಧಿಸಿದಂತೆ ಇದ್ದ ತೆರಿಗೆ ಇದಾಗಿದೆ. ಇದು ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಂಡುಬರುವ 'ಬಿತ್ತುವಟ್ಟ' ಎಂಬುದರ ಪರ್ಯಾಯ ರೂಪವಿದ್ದಂತೆ ತೋರುತ್ತದೆ.

ಅಮುದುಪಡಿ : ಅಮೃತಪಡಿ

ಭೋಗಂ : ದೇವರ ಅಂಗರಂಗ ಭೋಗಗಳು

ತಿರುಪಣ್ಣೆ : ಪವಿತ್ರ ಸೇವೆಗಳು ಎಂಬರ್ಥದಲ್ಲಿ ಬಂದಿದೆ.

ಹೆಸರ್ ಕುಂದಾಣಿ ರಾಜ್ಯವನ್ನು ಮತ್ತು ಆ ರಾಜ್ಯದಲ್ಲಿ ಅಂತರ್ಗತವಾಗಿದ್ದ ನಾಡುಗಳನ್ನು ಪ್ರಸ್ತಾಪಿಸುವ ಎಲ್ಲ ಶಾಸನಗಳು ೧೩೦೧-೧೩೦೨ರ ಅವಧಿಗೆ ಸೇರಿದವಾಗಿವೆ. ಹೊಯ್ಸಳ ರಾಮನಾಥ ಮತ್ತು ಅವನ ಮಗ ವಿಶ್ವನಾಥನ ಆಳಿಕೆಯ ಕೊನೆಯ ವೇಳೆಗಾಗಲೇ ಈ ಪ್ರದೇಶದಲ್ಲಿ ಸಾಕಷ್ಟು ಅರಾಜಕತೆ ಉಂಟಾಗಿದ್ದಿತು. ಆ ಅರಾಜಕತೆಯನ್ನು ಹೋಗಲಾಡಿಸಿ ಸದೃಢ ಆಡಳಿತ ವ್ಯವಸ್ಥೆಯನ್ನು ನೆಲೆಗೊಳಿಸುವ ಕ್ರಮಗಳಲ್ಲಿ ಒಂದಾಗಿ ಈ ರಾಜ್ಯದ ಅನೇಕ ನಾಡುಗಳ ಪ್ರಸಿದ್ಧ ದೇವಾಲಯಗಳ ಆಡಳಿತ ವ್ಯವಸ್ಥೆಯನ್ನು ಸಕ್ರಮಗೊಳಿಸುವ ಕೆಲಸವನ್ನು ಮುಮ್ಮಡಿ ವೀರಬಲ್ಲಾಳನು ಕೈಗೊಂಡನೆಂದು ತಿಳಿಯಬಹುದಾಗಿದೆ. ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ 'ದೇವಾಲಯ' ಎಂಬ ಸಂಸ್ಥೆ ತನ್ನದೇ ಆದ ಒಂದು ವಿಶಿಷ್ಟ ಕೊಡುಗೆಯನ್ನು ನೀಡಿದ್ದಿತೆಂಬ ಅಂಶ ಪ್ರಸ್ತುತ ಹೆಸರ್‌ಕುಂದಾಣಿ ರಾಜ್ಯದ ಈ ಶಾಸನಗಳ ಪರಿಶೀಲನೆಯಿಂದಲೂ ಮನಗಾಣಬಹುದಾಗಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಎ.ಕ. ೯., (ರೈಸ್ ಆವೃತ್ತಿ) ಬೆಂಗಳೂರು ೬೫, ಮಡಿವಾಳ (ತಾವರೇಕೆರೆ)
*೨. ಮೈ.ಆ.ರಿ. ೧೯೧೧, ಪು. ೫೦
*೩. ಅದೇ., ಬೆಂಗಳೂರು ೫೧, ಗುಂಜೂರು
*೪. ಅದೇ., ನೆಲಮಂಗಲ ೩೮, ಅಯಗಂಡಪುರ
*೫. ಎ.ಕ. ೧೦., (ರೈಸ್ ಆವೃತ್ತಿ) ಮಾಲೂರು ೧೦೦, ಮಡಿವಾಳ
*೬. ಅದೇ., ೭೧, ಲಕ್ಕೂರು
*೭. ಮೈ.ಆ.ರಿ., ೧೯೧೪; ಪು. ೪೪, ಕ್ರಿ. ಶ. ೧೩೦೬
*೮. ಎ. ಕ. ೧೦., (ರೈಸ್ ಆವೃತ್ತಿ) ಚಿಕ್ಕಬಳ್ಳಾಪುರ ೨೦, ನಂದಿ
*೯. ARIE ೧೯೭೦-೭೧/ಬಿ ೪೮೪.

ಡಾ|| ಚನ್ನಬಸವ ಹಿರೇಮಠ*

ಎಡೆದೊರೆ ಪದದ ನಿಷ್ಪತ್ತಿ

ಪ್ರಾಚೀನ ಕರ್ನಾಟಕದಲ್ಲಿ ಎಡೆದೊರೆ ಹೆಸರಿನ ಮೂರು ಆಡಳಿತ ವಿಭಾಗಗಳಿದ್ದುದು ಶಾಸನಗಳಿಂದ ತಿಳಿಯುತ್ತದೆ. ಅವುಗಳೆಂದರೆ ಎಡೆದೊರೆ - ೨೦೦೦, ಎಡೆದೊರೆ - ೧೦೦೦ ಮತ್ತು ಎಡೆದೊರೆ - ೭೦ ವಿಭಾಗಗಳು ಅವು ಕ್ರಮವಾಗಿ ಇಂದಿನ ರಾಯಚೂರು, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿವೆ.

ಎಡೆದೊರೆ - ೨೦೦೦ ವಿಭಾಗವನ್ನು ಕುರಿತು ಮೊದಲು ಪ್ರಸ್ತಾಪಿಸಿದವರು ಡಾ|| ಜೆ. ಎಫ್. ಫ್ಲೀಟರು. ಅವರು ತಮಗೆ ಲಭ್ಯವಾದ ಶಾಸನಾಧಾರಗಳಿಂದ ಈ ವಿಭಾಗದ ಮೇರೆಯನ್ನು ಉತ್ತರಕ್ಕೆ ಕೃಷ್ಣಾನದಿ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ನಡುವಿನ ಪ್ರದೇಶವೇ ಎಡೆದೊರೆನಾಡು ಎನ್ನುತ್ತ, ಅದು ಸ್ಥೂಲವಾಗಿ ಇಂದಿನ ರಾಯಚೂರು ಜಿಲ್ಲೆಯ ವ್ಯಾಪ್ತಿಯನ್ನೊಳಗೊಂಡಿದೆ ಎಂದು ಸರಿಯಾಗಿಯೆ ಗುರುತಿಸಿದ್ದಾರೆ.(೧) ಆದರೆ ಮುಂದೆ ಈ ವಿಭಾಗದ ಬಗ್ಗೆ ಅಧ್ಯಯನ ನಡೆಸಿದ, ವಿದ್ವಾಂಸರು ಫ್ಲೀಟರು ಹೇಳಿದ 'ಎರಡು ನದಿಗಳ ನಡುವಿನ ಪ್ರದೇಶ'ವೆಂಬ ಮಾತನ್ನೇ ಆ ಪದದ ನಿಷ್ಪತ್ತಿ ಎಂದು ತಪ್ಪಾಗಿ ಅರ್ಥೈಸುತ್ತ ಬಂದಿದ್ದಾರೆ.

ಪ್ರಾಚೀನ ಎಡೆದೊರೆ - ೨೦೦೦ ನಾಡನ್ನು ಮುಸ್ಲಿಂ ಅರಸರ ಕಾಲದಲ್ಲಿ **ದೋ ಆಬ್** ಎಂದು ಕರೆಯಲಾಯಿತು. ತುಂಗಭದ್ರಾ ನದಿಯ ದಂಡೆಯ ಮೇಲಿದ್ದ ವಿಜಯನಗರದವರು, ಕೃಷ್ಣಾ ನದಿಯ ಆಚೆಗಿದ್ದ ಬಹಮನಿ ಸುಲ್ತಾನರು ಈ ಎರಡು ನದಿಗಳ ಮಧ್ಯದಲ್ಲಿರುವ ರಾಯಚೂರು - ಮುದಗಲ್ಲು ಕೋಟೆಗಳನ್ನು ವಶಪಡಿಸಿಕೊಳ್ಳಲು ನಿರಂತರ ಹೋರಾಡುತ್ತ ಬಂದಿದ್ದಾರೆ. ಆದ್ದರಿಂದ ದೋ ಆಬ್ ಪದವು ಪ್ರಾಚೀನ ಎಡೆದೊರೆ ನಾಡಿನ ವ್ಯಾಪ್ತಿ, ಅದರ ಫಲವತ್ತತೆ ಹಾಗೂ ಚಾರಿತ್ರಿಕ ಮಹತ್ವವನ್ನು ಸೂಚಿಸುತ್ತದೆಯಲ್ಲದೆ ನಿಷ್ಪತ್ತಿಯನ್ನು ಹೇಳುವುದಿಲ್ಲ.

ಕರಡಿಕಲ್ಲು ಭಿಲ್ಲಮರಾಯನನ್ನು ಚರಿತ್ರೆಯಲ್ಲಿ ಗುರುತಿಸುವ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಡಾ|| ಬಸವಲಿಂಗ ಸೊಪ್ಪಿಮಠರು 'ಎಡೆದೊರೆ' ಪದದ ನಿಷ್ಪತ್ತಿಯ ಬಗ್ಗೆ ಚರ್ಚಿಸಿದ್ದಾರೆ. ಕೃಷ್ಣಾನದಿಯನ್ನು ಶಾಸನಗಳು ಪೆರ್ದ್ದೊರೆ ಎಂದು ಕರೆದಿವೆ. ಎಡೆದೊರೆ ನಾಡಿನ ಉಪವಿಭಾಗಗಳಾದ ಕರಡಿಕಲ್ಲು - ೪೦೦, ಮೊರಟ - ೩೦೦ ಮತ್ತು ಮೊಸಳಿಕಲ್ಲು - ೩೦೦ಗಳು ಕೃಷ್ಣಾನದಿಯ ಸಮೀಪದಲ್ಲಿವೆ. ಈ ನಾಡಿನ ವ್ಯಾಪ್ತಿ ಆ ಮೇಲೆ ತುಂಗಭದ್ರೆಯವರೆಗೆ ಚಾಚಿದೆ. ಅಷ್ಟು ಮಾತ್ರಕ್ಕೇ ಕೃಷ್ಣಾ - ತುಂಗಭದ್ರಾ ನಡುವಣ ಎಡೆ (ಸ್ಥಳ) ಎಂದು ಎಡೆದೊರೆಯನ್ನು ಗುರುತಿಸಬೇಕಾಗಿಲ್ಲವೆಂದು ಹೇಳಿ, ಪೆರ್ದ್ದೊರೆ > ಹೆರ್ದ್ದೊರೆ > ಎರ್ದ್ದೊರೆ > ಎರದೊರೆ > ಎಡದೊರೆ (ಎಡೆದೊರೆ) ಆಗಿರಬೇಕೆಂದು ಅದರ ನಿಷ್ಪತ್ತಿಯನ್ನು ಸೂಚಿಸಿದ್ದಾರೆ.(೨)

ಎಡೆದೊರೆ ಆಡಳಿತ ವಿಭಾಗವು ತಮಿಳು(ಕನ್ನಡ) ಶಾಸನಗಳಲ್ಲಿ ಇಡೈತೊರೈ ಎಂದು ಉಲ್ಲೇಖವಾಗಿದೆ. ತಮಿಳು ಭಾಷೆಯಲ್ಲಿ ಇಡೈ ಅಥವಾ ಇಡ ಎಂದರೆ ಸ್ಥಳ ಎಂದೇ ಅರ್ಥವಿದೆ. ಅದು ಇತರ ದ್ರಾವಿಡ ಭಾಷೆಗಳಾದ ತುಳು, ಮಲೆಯಾಳಂಗಳಲ್ಲಿ ಇಡೆ ಎಂದೂ; ಕನ್ನಡ, ತೆಲುಗು ಭಾಷೆಗಳಲ್ಲಿ ಎಡೆ-ಎಡ ಎಂದೂ ಬಳಕೆಯಾಗಿದೆ. ದ್ರಾವಿಡ ಭಾಷೆಗಳಲ್ಲಿ ಪದಾದಿಯ ಇ > ಎ, ಪ > ಹ ಬದಲಾವಣೆ ಸಾಮಾನ್ಯವಾಗಿದೆ. ಎಂದರೆ ಇಡೆ > ಎಡೆ (ಎಡೆದೊರೆ), ಪಿರಿದು > ಹಿರಿದು (ಪೆರ್ದೊರೆ) ಪ್ರಕ್ರಿಯೆ ಸಹಜವಾಗಿದೆ. ಆದ್ದರಿಂದ ಸೊಪ್ಪಿಮಠರು ಊಹಿಸಿದಂತೆ ಪೆರ್ದೊರೆಯು ಎರ್ದೊರೆ > ಎಡೆದೊರೆಯಾಗಿ ಬದಲಾವಣೆ ಹೊಂದಲಾರದು.

ಎಡೆದೊರೆ ಪದದ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ. ಶ. ೭- ೮ನೇ ಶತಮಾನದ ಬಸವನಪುರ ಶಾಸನದಲ್ಲಿದೆ.(೩) ಅದನ್ನು ಎಡೆದೊರೆನಾಡು ವಿಷಯವೆಂದು ಶಾಸನವು ಸ್ಪಷ್ಟವಾಗಿ

* ಕನ್ನಡ ಪ್ರಾಧ್ಯಾಪಕ, ಎಲ್.ವಿ.ಡಿ. ಕಾಲೇಜು, ರಾಯಚೂರು - ೫೮೪ ೧೦೧.

ಉಲ್ಲೇಖಿಸಿದೆ. ಆದ್ದರಿಂದ ಈ ವೇಳೆಗಾಗಲೇ ಅದು ಒಂದು ಆಡಳಿತ ವಿಭಾಗವಾಗಿದ್ದಿತು. ಮೈಸೂರು ಜಿಲ್ಲೆಯಲ್ಲಿ ಬರುವ ಈ ಎಡೆದೊರೆ-೧೦೦೦ ವಿಭಾಗವು ಕಾವೇರಿ ನದಿಯ ಸಮೀಪದಲ್ಲಿದೆ. ಕಾವೇರಿಯು ದಕ್ಷಿಣ ಕರ್ನಾಟಕದ ದೊಡ್ಡ ನದಿಯಾಗಿದ್ದರೂ ಶಾಸನಗಳು ಅದನ್ನು ಪೆರ್ದೊರೆಯೆಂದು ಕರೆದಿಲ್ಲ.[೪]

ಕೃಷ್ಣಾನದಿಯನ್ನು ಶಾಸನಗಳು ಕೃಷ್ಣಬೆಣ್ಣಾ,[೫] ಕೃಷ್ಣವೆಣ್ಣೆ,[೬] ಪೆರ್ದ್ದೊರೆ,[೭] ಹೆದ್ದೊಱು[೮] ಎಂದು ಕರೆದಿವೆ. ರನ್ನನ ಅಜಿತ ಪುರಾಣದಲ್ಲಿಯೂ ಪೆರ್ದ್ದೊರೆಯ ಉಲ್ಲೇಖವಿದೆ. ಅವನು ಬೆಳುಗಲಿ-೫೦೦ ನಾಡು "ಗಟ್ಟಗೆಯುಂ ಪೆರ್ದೊರೆಯುಂ ಪರಿದಲ್ಲಿ ತದ್ದವಾಡಿಗೆ ತೆಂಕಲ್ ತೊಱಗಲೆಗೆ ಬಡಗಣ"ದಲ್ಲಿದೆ ಎಂದು ಹೇಳಿದ್ದಾನೆ.[೯] ಇಲ್ಲಿಯ ಗಟ್ಟಗೆ ಮತ್ತು ಪೆರ್ದೊರೆಗಳು ಕ್ರಮವಾಗಿ ಘಟಪ್ರಭ - ಕೃಷ್ಣಾನದಿಗಳಾಗಿವೆ. ಕೃಷ್ಣಾನದಿಯನ್ನು ಪೆರ್ದೊರೆ ಎಂದು ಕರೆದಂತೆ ತುಂಗಭದ್ರೆಯನ್ನು ಶಾಸನಗಳು 'ಕಿಱುದೊಱು' ಎಂದು ಹೇಳಿವೆ.[೧೦] ಅಂದರೆ ಕೃಷ್ಣೆಯು ಗಾತ್ರದಲ್ಲಿ ತುಂಗಭದ್ರೆಗಿಂತ ದೊಡ್ಡದಾಗಿದ್ದರಿಂದ ಪೆರ್ದೊರೆ (ಪಿರಿದು + ತೊರೆ) ಎನಿಸಿಕೊಂಡಿದೆ. ಆದ್ದರಿಂದ ಸೊಪ್ಪಿಮಠರು ಹೇಳುವ ಕೃಷ್ಣಾನದಿ ಮೂಲದ ಪೆರ್ದೊರೆ > ಎರ್ದೊರೆ > ಎಡೆದೊರೆ ನಿಷ್ಪತ್ತಿಯು ಸಹಜವಾಗಿಯೇ ಬಿದ್ದು ಹೋಗುತ್ತದೆ.

ಇನ್ನು ಡಾ॥ ಸಿ.ಎಸ್. ವಾಸುದೇವನ್ ಅವರು ಎಡದೊರೆ ಎಂದರೆ ಎರಡು ನದಿಗಳ ನಡುವಿನ ಪ್ರದೇಶ. ಎಡ ಎಂದರೆ ಎಡಗಡೆ ಇರುವ ನಾಡು ಇಲ್ಲವೆ ನದಿಯ ಎಡಭಾಗದಲ್ಲಿರುವ ನಾಡು ಎಂದು ಅರ್ಥೈಸಿದ್ದಾರೆ.[೧೧] ಇಲ್ಲಿಯ ಎಡೆದೊರೆ-೧೦೦೦ ವಿಭಾಗವು ಕಪಿಲಾನದಿಯ ಎಡ ಮತ್ತು ಬಲಭಾಗದಲ್ಲಿ ವ್ಯಾಪಿಸಿದೆ. ಇದರಂತೆ ಎಡೆದೊರೆ-೨೦೦೦ ವಿಭಾಗವೂ ಕೃಷ್ಣಾನದಿಯ ಎಡಬಲಗಳಲ್ಲಿ ವ್ಯಾಪಿಸಿದೆ.[೧೨] ಆದ್ದರಿಂದ ಡಾ॥ ವಾಸುದೇವನ್‌ರು ಹೇಳುವ ನದಿಯ ಎಡಭಾಗದ ಪ್ರದೇಶ ಇಲ್ಲವೆ ಎರಡು ನದಿ(ಕಾವೇರಿ ಮತ್ತು ಕಪಿಲ)ಗಳ ನಡುವಿನ ಪ್ರದೇಶವೇ ಎಡೆದೊರೆ ನಾಡು ಎಂಬುದು ಆ ಪದದ ಸರಿಯಾದ ನಿಷ್ಪತ್ತಿಯಾಗಲಾರದು.

ಪ್ರಾಚೀನ ಕರ್ನಾಟಕದಲ್ಲಿ ಸೇವುಣದೇಶ, ಕೊಂಕಣ ವಿಷಯ, ಬೆಳುವಲನಾಡುಗಳಂಥ ಬೆರಳೆಣಿಕೆಯ ವಿಭಾಗಗಳನ್ನು ಬಿಟ್ಟರೆ ಉಳಿದೆಲ್ಲವೂ ಸ್ಥಳನಾಮಗಳೇ ಆಗಿವೆ. ಈ ಸ್ಥಳನಾಮಗಳು ಒಂದು ಪ್ರಕೃತಿವಾಚಿಯಾಗಿ ಮತ್ತೊಂದು ಜನಾಂಗವಾಚಿಯಾಗಿ ಬೆಳೆದು ಬಂದಿವೆ.[೧೩] ಆದ್ದರಿಂದ ಎಡೆಯೂರು, ಎಡೆಯಪುರ, ಎಡೆಹಳ್ಳಿ, ಎಡೆದೊರೆ ಮೊದಲಾದ ಗ್ರಾಮಗಳು ಪ್ರಕೃತಿ ವಾಚಿಯಾಗಿವೆ. ಅವುಗಳನ್ನು ಎಡೆಯ + ಊರು, ಎಡೆಯ + ಪುರ, ಎಡೆಯ + ಹಳ್ಳಿ, ಎಡೆಯ + ತೊರೆ ಎಂದು ಬಿಡಿಸಬಹುದು. ಎಡೆ ಪದಕ್ಕೆ ಸ್ಥಾನ, ಬಳಿ, ಹತ್ತಿರ, ಪ್ರದೇಶ, ನಡುವೆ, ಮಧ್ಯ ಮೊದಲಾದ ಅರ್ಥಗಳಿವೆ. ಸಾಮಾನ್ಯವಾಗಿ ಎಡೆ ಪದದಿಂದ ಮೊದಲಾಗುವ ಗ್ರಾಮಗಳು ನದಿ, ಬಾವಿ, ಕೆರೆಯ ಪಕ್ಕದಲ್ಲಿವೆ. ಆದ್ದರಿಂದ ನೀರಿನ ಸೂಚನೆಯಾಗಿ 'ಎಡೆ' ಪದವು ಸ್ಥಳನಾಮಗಳಲ್ಲಿ ಬಳಕೆಯಾಗಿರಬೇಕು. ಎಂದರೆ ನದಿ, ಬಾವಿಯ ಸಮೀಪದಲ್ಲಿ ಜನವಸತಿ ನಿಂತು ಅದು ಊರಾಗಿ ಬೆಳೆಯಿತು. ಆಗ ಅದನ್ನು ಎಡೆಯಊರು, ಎಡೆಯಹಳ್ಳಿ ಎಂದು ಕರೆಯಲು ಮೊದಲಾಗಿರಬೇಕು. ಇಲ್ಲವೆ ಸ್ಥೂಲವಾಗಿ ಅದು 'ಸ್ಥಳ ಎಂಬ ಅರ್ಥವನ್ನೇ ಹೊಂದಿರಬೇಕು.

ಬಾಗಳಿಯ ಶಾಸನವು ಎಡೆನಾಡ ಪಟ್ಟ(ಣ)ವನ್ನು ಉಲ್ಲೇಖಿಸಿದೆ.[೧೪] ಬಹುಶಃ ಇದು ಎಡೆದೊರೆ-೧೦೦೦ ವಿಭಾಗದ ಮುಖ್ಯಪಟ್ಟಣವಾಗಿರಬೇಕು. ಇಂದಿನ ಚಾಮರಾಜ ನಗರವೇ ಪ್ರಾಚೀನ ಎಡೆದೊರೆ(ನಾಡ) ಪಟ್ಟಣವಾಗಿದೆ.[೧೫] ಆದರೆ ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬರುವ ಎಡೆದೊರೆ ಹೆಸರಿನ ಪಟ್ಟಣವನ್ನು ಗುರುತಿಸಲು ಸಾಧ್ಯವಾಗಿಲ್ಲ. ಬಹುಶಃ ಅವು ಕ್ರಮವಾಗಿ ಕೃಷ್ಣ, ತುಂಗ-ಭದ್ರ ನದಿಗಳು ಪಕ್ಕದಲ್ಲಿರಬೇಕು. ಚಾಮರಾಜನಗರದಂತೆ ಅವುಗಳ ಹೆಸರೂ ಇಂದು ಬದಲಾಗಿರಬೇಕು. ಇಲ್ಲವೆ ಆ ಗ್ರಾಮಗಳೇ ನಾಶವಾಗಿರ ಬೇಕು.[೧೬]

ಒಟ್ಟಿನಲ್ಲಿ 'ಎಡೆದೊರೆ' ಎಂಬುದು ಪ್ರಕೃತಿನಾಮ ವಾಚಿಪದವಾಗಿದೆ. ಅದು ನದಿಯ ಪಕ್ಕದಲ್ಲಿ ಬೆಳೆದುನಿಂತ ಊರನ್ನು ಸೂಚಿಸುತ್ತದೆ. ಎಡೆದೊರೆ ವಿಭಾಗವು ಎರಡು ನದಿಗಳ ಮಧ್ಯದ ವ್ಯಾಪ್ತಿಯನ್ನು ಹೊಂದಿದ್ದರೂ ಅಷ್ಟಕ್ಕೆ ಅದು ಸೀಮಿತವಾಗಿಲ್ಲ. ಕೃಷ್ಣಾನದಿಯನ್ನು ಮಾತ್ರ ಶಾಸನಗಳು 'ಪೆರ್ದೊರೆ' ಎಂದು ಕರೆದಿರುವುದರಿಂದ ಕಪಿಲ(ಕಾವೇರಿ), ತುಂಗ-ಭದ್ರ ನದಿಗಳ ಪರಿಸರದಲ್ಲಿ ಕಾಣಿಸಿಕೊಳ್ಳುವ ಎಡೆದೊರೆ ಹೆಸರಿನ ವಿಭಾಗಗಳನ್ನು ಆ ಪದದ ಮೂಲದಿಂದ ನಿಷ್ಪನ್ನ ಗೊಳಿಸುವುದು ಕಷ್ಟವಾಗಿದೆ. ಆದ್ದರಿಂದ 'ಎಡೆ' ಎಂಬುದಕ್ಕೆ ಸ್ಥಳವೆಂಬ ಅರ್ಥ ನೀಡುವುದೇ ಸರಿಯೆನಿಸುತ್ತದೆ. ಈ ಎಡೆಯು (ಸ್ಥಳ) ಯಾವ ನದಿಯ ಸಮೀಪದಲ್ಲಾದರೂ ಇರಬಹುದು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. *E.I. vol. XII*, No. 32, Notes by Dr. Fleet, p. 296. "Ededore two thousand was a stretch of a country between the rivers Krishna on the north and Tungabhadra on the south, comprising a large part of the present Raichur district".

*೨. **ಆಕರ** (ಸಂಪುಟ ೧-ವೀರಶೈವ), ರಾಯಚೂರು, ೧೯೯೫, ಪುಟ ೧೮

*೩. *E.C. III*, ನಂಜನಗೂಡು ೧೭೫

*೪. ಕೃಷ್ಣಾನದಿಯನ್ನು ಬಿಟ್ಟು ಉಳಿದ ಯಾವ ನದಿಗಳನ್ನು ಶಾಸನಗಳು ಈ ಹೆಸರಿನಿಂದ ಕರೆದಿಲ್ಲ.

*೫. *SII xi - i*, No. 8, ೮, ಕ್ರಿ. ಶ. ೮೬೨, ಹೂವಿನಹಿಪ್ಪರಗಿ, ಬಾಗೇವಾಡಿ (ತಾ) ಬಿಜಾಪುರ(ಜಿ)

*೬. ಅದೇ XVIII, No. 94, ಕ್ರಿ. ಶ. ೧೦೮೮, ದೇವರಗೆಣ್ಣೂರು, ಬಿಜಾಪುರ(ತಾ)

*೭. ಅದೇ XI-i, No. 116, ಕ್ರಿ. ಶ. ೧೦೭೫, ಕೊಪ್ಪ, ಮುದ್ದೇಬಿಹಾಳ(ತಾ)

*೮. *E.C. VIII*, No. 127, ಕ್ರಿ. ಶ. ೧೨ನೇ ಶತಮಾನ, ಕೋರಮಂಗಲ, ಹಾಸನ(ತಾ)

*೯. **ಅಜಿತಪುರಾಣ**(೧-೪೩) ಕ್ರಿ. ಶ. ೧೦ನೇ ಶತಮಾನ

*೧೦. **ಸುರಪುರ ತಾಲೂಕಿನ ಶಾಸನಗಳು**: (ಸಂ) ಹನುಮಾಕ್ಷಿಗೋಗಿ, ೧೯೯೫, ಏವೂರು, ೮ ಕ್ರಿ. ಶ. ೧೦೭೭ ಆಗಸ್ಟ ೬

*೧೧. ಎಡೆನಾಡು - ಒಂದು ಆಡಳಿತಾಂಗ ವಿಭಾಗ - ಒಂದು ಅಧ್ಯಯನ, **ಇತಿಹಾಸ ದರ್ಶನ** ಸಂಪುಟ ೧೨, ೧೯೯೭, ಪು ೧೫೮, ಎಡೆದೊರೆ ಪದವನ್ನು ಎರಡು ತೊರೆ ಎಂದು ಬಿಡಿಸಬರುವುದಿಲ್ಲ. ಹಾಗಾದರೆ ಅದು 'ಇರ್ದೊರೆ'ಯಾಗುತ್ತದೆ. ಇಲ್ಲಿ ಇ ಎ ಬದಲಾವಣೆ ಆಗುವುದಿಲ್ಲ.

*೧೨. **ಸುರಪುರ ತಾಲೂಕಿನ ಶಾಸನಗಳು**, ೩೭, ಕ್ರಿ. ಶ. ೧೦೭೧ "ಎಡೆದೊರೆ ವಿಷಯ ಪ್ರತಿವ(ಬ)ದ್ಧ ಸಗರ ತ್ರಿಶತ ಮಧ್ಯವರ್ತಿನಿ ಕೃಷ್ಣವೇಣ್ಣಾ ನದ್ಯುತ್ತರ ತೀರೋಪಾಶ್ಯತೇ ತಿನ್ತಿಣಿ ಸಿರಿವರ ನಾಮ"
ಅಂದರೆ ಕೃಷ್ಣಾನದಿಯ ಆಚೆಗಿರುವ ಇಂದಿನ ಸುರಪುರ ತಾಲೂಕು ಎಡೆದೊರೆ-೨೦೦೦ ನಾಡಿನಲ್ಲಿ ಸಮಾವೇಶಗೊಂಡಿತ್ತು.

*೧೩. ಗಂಗವಾಡಿ, ನೊಳಂಬವಾಡಿ, ಸಿಂದವಾಡಿ ಮೊದಲಾದವೂ ಜನಾಂಗದಿಂದ ಬಂದ ಸ್ಥಳನಾಮಗಳಾಗಿರಬೇಕು. ಇದು ಮತ್ತೊಂದು ಲೇಖನದ ವಿಷಯವಾಗಿದೆ.

*೧೪. *El iv*, ಚಾಮರಾಜನಗರ, ನಂ. ೧೧೪, ಕ್ರಿ. ಶ. ೧೦ನೇ ಶತಮಾನ
ಈ ಎಡತೊರೆ ಗ್ರಾಮದ ಉಲ್ಲೇಖ 'ಮಂಟೇಸ್ವಾಮೀ ಕಾವ್ಯ'ದಲ್ಲಿಯೂ ಬಂದಿದೆ. "ಇಂದು ರಾಚಪ್ಪಯ್ಯನವರು ದಂಡೆತ್ತಿದೋಯ್ತಾರೆ। ಗಿಂಡಿ ತುಂಬಿದರು ಹಡಪಕ್ಕೆ - ಎಡತೊರೆಯ। ರಂಭೇರಾರುತಿಯ ಬೆಳಗಿದರು" - ಮಂಟೇಸ್ವಾಮಿ ಕಾವ್ಯ (ಸಂ) ಡಾ॥ ಜಿ ಶಂಪ, ಪು. ೭೩೨.

*೧೫. ಈ ವಿಷಯವನ್ನು ನನ್ನ ಗಮನಕ್ಕೆ ತಂದ ಪ್ರೊ॥ ಕ. ವೆಂ. ರಾಜಗೋಪಾಲ ಅವರಿಗೆ ಕೃತಜ್ಞನಾಗಿದ್ದೇನೆ.

*೧೬. ಇಂದಿನ ರಾಯಚೂರು, ಕೊಪ್ಪಳ ಜಿಲ್ಲೆ ಮತ್ತು ಸುರಪುರ ತಾಲೂಕಿನಲ್ಲಿ ಎಡೆಯಹಳ್ಳಿ ಹೆಸರಿನ ಗ್ರಾಮಗಳಿವೆ. ಆದರೆ ಅವು ಎಡೆದೊರೆ - ೨೦೦೦ ವಿಭಾಗದ ರಾಜಧಾನಿಗಳಾಗಿದ್ದುದು ಶಾಸನಗಳಿಂದ ತಿಳಿಯುವುದಿಲ್ಲ.

ಬಿ. ಎಸ್. ರಾಮಭಟ್ಟ*

ಅಂಧಾಸುರ ಒಂದು ಅಧ್ಯಯನ

ಶಿವಮೊಗ್ಗ ಜಿಲ್ಲೆಯ ಆನಂದಪುರದಿಂದ ಸು. ೪ ಕಿ.ಮೀ. ದೂರದ ಅಂಧಾಸುರವು ಇಂದು ಒಂದು ಕುಗ್ರಾಮ. ಇದು ಆನಂದಪುರ ಮತ್ತು ರಿಪ್ಪನ್‌ಪೇಟೆಯ ನಡುವೆ ಇದೆ. ಉತ್ತರದಿಂದ .... ಅಜ್ಞಾತ ಗ್ರಾಮವು ಅನೇಕ ಶತಮಾನಗಳಷ್ಟು ಪ್ರಾಚೀನ ಅವಶೇಷಗಳಿಂದ ಕೂಡಿ ಐತಿಹಾಸಿಕ ಮಹತ್ವ ಪಡೆದಿದೆ.

ಅಂಧಾಸುರವು 'ಅಂಧಕ' ಎಂಬ ಒಂದು ಜನಾಂಗದವರ ನೆಲೆಯಾಗಿತ್ತೆಂದು ಹಲವಾರು ಐತಿಹಾಸಿಕ ಆಧಾರಗಳಿಂದ ಆಲೋಚಿಸಬಹುದಾಗಿದೆ. ಇದನ್ನು ಶಂ.ಬಾ. ಜೋಶಿಯವರು ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಶಾಸನಗಳಲ್ಲಿ[೧] ಈ ಗ್ರಾಮಕ್ಕೆ ಅಂದಾಸುರ,[೨] ಅಂಧಕಾಸುರ[೩] ಮತ್ತು ಖರಪುರ[೪] ಎಂಬ ಹೆಸರುಗಳಿವೆ. ಜೋಶಿಯವರು ಅಂಧಕರನ್ನು ಕುರಿತ ಬೌದ್ಧಗ್ರಂಥ, ಸ್ಕಾಂದಪುರಾಣ, ಪ್ರಿಲಸ್ಕಿ ಎಂಬ ಸಂಶೋಧಕರ ಹೇಳಿಕೆಗಳನ್ನು ಪರಿಶೀಲಿಸಿದ್ದಾರೆ. ಬೌದ್ಧಗ್ರಂಥ 'ಸುತ್ತನಿಪಾತ'ದಲ್ಲಿ ಅಂಧಕರು ಅಶ್ಮಕ ಮೂಲ ಎಂದರೆ ಮಾಳವ ಉಜ್ಜಯಿನಿ ಪ್ರದೇಶದಲ್ಲಿದ್ದವರೆಂದು ಹೇಳಿದೆ.[೫] ಪಾಣಿನಿಯು ಇವರನ್ನು ಸಿಂಧೂ ಪ್ರದೇಶದವರೆಂದು ಹೇಳಿದ್ದಾನೆ.

ಅಂಧಕ > ಅಂಡೆ > ಆಂಧ್ರ > ಅಂಡಾರ್ ಎಂಬುದು ಜನವಾಚಕ ಪದಗಳು ಇವರು ಆಂಧ್ರದವರಿರಬಹುದೆಂದೂ ಹೇಳಲಾಗಿದೆ.[೬] ಅಂಧಕರು ವೀರ ಮಾಲವ ಯೌಧೇಯ ಗಣದವರೆಂದು ಈ ಎಲ್ಲ ಆಧಾರಗಳು ಹೇಳುತ್ತವೆ. ಸ್ಕಾಂದಪುರಾಣ[೭]ದಲ್ಲಿ ಅಂಧಕರನ್ನು ರಕ್ಕಸ ಕುಲದವರೆಂದು ಹೇಳಿದೆ. ಇವರ ನಾಯಕರಿಗೆ ಅಂಧಕಾಸುರ ಅಥವಾ ಅಂಧಾಸುರ ಎಂಬ ಹೆಸರಿದ್ದುದು ಈ ಗ್ರಂಥದಿಂದ ತಿಳಿಯುತ್ತದೆ.

ಅಂಧಕರು ಹಟ್ಟಿಕಾರ ದನಗಾಹಿಗಳು ಹಾಗೂ ಅಂಡೆ ಕುರುಬರು ಎಂದು ಜೋಶಿಯವರು ಗುರುತಿಸಿದ್ದಾರೆ.[೮] ಯಾದವರ ಶ್ರೀಕೃಷ್ಣನು ಇದೇ ಅಂದಕ - ವೃಷ್ಣಿ ಕುಲದವನು. ಇವರೂ ಸಹ ದನಕರುಗಳ ಪಾಲಕರಾಗಿದ್ದು ಗೋವಳರು ಎಂದು ಕರೆಸಿಕೊಂಡಿದ್ದಾರೆ. ವೃಷ್ಣಿ ಎಂದರೆ ವಿಷ್ಣು ಎಂದು ಅರ್ಥೈಸಿದ್ದಾರೆ. ಅಂಧಕ ಮತ್ತು ಅಂದಸ್ ಎಂದರೆ ಋಗ್ವೇದದಲ್ಲಿ ಹಾಲು ಅಥವಾ ರಸ ಎನ್ನಲಾಗಿದೆ. ಅಂದಸ್ ಎಂದರೆ ಹಾಲು ಅಳೆಯುವ ಕೊಳವೆ ಎಂದೂ ಅರ್ಥವಾಗುತ್ತದೆ. ಎಂದರೆ ಅಂಧಕರು ಹಾಲು ಸಂಗ್ರಹಿಸುವ ಹಾಲು ಮತದವರು ಅರ್ಥಾತ್ ದನಗಾಹಿಗಳು. ಮೇಲೆ ಹೇಳಿದ ಕೃಷ್ಣನೂ ಇದೇ ಮನೆತನದವನಿರಬಹುದು.[೯]

ಕ್ರಿ. ಶ. ಸು. ೫ನೆಯ ಶತಮಾನದಲ್ಲಿ ಅಂಧಕರು ಮಾಳವದ ಉಜ್ಜಯಿನಿ ಪ್ರದೇಶದಿಂದ ಕಾರಣಾಂತರದಿಂದ ಬನವಾಸಿ, ಹೈವೆ ಮತ್ತು ತುಳುನಾಡಿನ ಪ್ರದೇಶಕ್ಕೆ ವಲಸೆ ಬಂದರೂ ಸಹ್ಯಾದ್ರಿ ಪ್ರದೇಶದಲ್ಲಿ ನೆಲಸಿದ್ದ ಈ ಅಂಧಕರನ್ನು ಮಲೆನಾಡ ಮಲಪರು ಎಂದು ಕರೆಯಲಾಗಿದೆ.[೧೦]

ಕ್ರಿ. ಶ. ಸು. ೭ನೆಯ ಶತಮಾನದಲ್ಲಿ ಪೊಂಬುಚವನ್ನು ಆಳುತ್ತಿದ್ದ ಅಳುಪರ ಜಯಸಿಂಹನಿಗೆ "ಜಯಸಿಂಹ ಪಾಂಡ್ಯ ಪಟ್ಟಿಯೊಡೆಯ" ಎಂಬ ಪ್ರಶಸ್ತಿಯಿದೆ.[೧೧] ನಂತರ ಪೊಂಬುಚವು ಜಿನದತ್ತರಾಯನ ಕಾಲದಲ್ಲಿ ಶಾಂತರ ರಾಜಧಾನಿಯಾಗಿ 'ಪೊಟ್ಟಿಪೊಂಬುಚ್ಚಪುರ' ಎಂಬ ಹೆಸರು ಪಡೆಯಿತು. ಇಲ್ಲಿಯ ಒಂದು ಶಾಸನದಲ್ಲಿ ಪೊಟ್ಟಿಪೊಂಬುಚ್ಚಪುರವರಾಧೀಶ್ವರಂ... ವೀರಶಾನ್ತರ ದೇವ ಎಂದಿದೆ.[೧೨] ಇಲ್ಲಿ ಪೊಟ್ಟಿ ಎಂಬುದು ಹಟ್ಟಿ ಎಂದರೆ ದನಕರುಗಳನ್ನು ಕೂಡುವ ದೊಡ್ಡಿ ಎಂದಾಗುತ್ತದೆ. ಎಂದರೆ ಪೊಂಬುಚ ಪ್ರಾಂತ್ಯವು ದನಕರುಗಳನ್ನು ಸಮೃದ್ಧವಾಗಿ ಸಾಕುವ ಪ್ರದೇಶವೆಂದು ಹಂಪ. ನಾಗರಾಜಯ್ಯನವರೂ ಸಹ ನಿವೇದಿಸಿದ್ದಾರೆ.[೧೩] ಮೇಲಿನ ಆಧಾರದಿಂದ ಅಂಧಾಸುರ ದೊಂದಿಗೆ ಪೊಂಬುಚದ ಪ್ರದೇಶದಲ್ಲಿಯೂ ನೆಲೆಯೂರಿದ್ದ

* (ನಿ) ಉಪನ್ಯಾಸಕ : ಪದ್ಮಶ್ರೀ ೧೩೯ - ಇ, ೩ನೇ ಕ್ರಾಸ್, ಗೋಪಾಲಗೌಡ ಬಡಾವಣೆ, ಗೋಪಾಳ : ಶಿವಮೊಗ್ಗ - ೫೭೭ ೨೦೧.

ಜನಾಂಗದವರು ಬೇರೆ ಯಾರೂ ಆಗಿರದೆ ಅಂಧಕರು ಎಂಬುದನ್ನು ತಿಳಿಯಪಡಿಸುತ್ತದೆ. ಮಲೆನಾಡಿನ ಮಲಪರು* ಎಂದು ಕರೆಸಿಕೊಂಡಿರುವವರೂ ಸಹ ಪಶುಪಾಲಕರಾಗಿದ್ದ ಅಂಧಕರೇ.

ಇವರು ತಮ್ಮ ದನಕರುಗಳ ಪಾಲನೆಗೆ, ಕುರಿಗಳ ಪೋಷಣೆಗೆ ಹಾಗೂ ತಮ್ಮ ವಾಸಕ್ಕೆ ಯೋಗ್ಯವಾದ ಈ ಮಲೆನಾಡಿನ ಪ್ರದೇಶದಲ್ಲಿ ನೆಲೆಸಿದ್ದು ಸ್ವಾಭಾವಿಕ. ಇಲ್ಲಿ ಉತ್ತಮ ಮಳೆ ಕಾಡು ಮತ್ತು ಹುಲ್ಲು ಸಮೃದ್ಧವಾಗಿತ್ತು. ಅಂಧಾಸುರದಲ್ಲಿ ನೆಲಸಿದ್ದ ಈ ಜನಾಂಗದವರು ಒಂದು ಪುಟ್ಟ ಪಾಳೆಯವಟ್ಟವನ್ನು ಕಟ್ಟಿಕೊಂಡರು. ಇವರ ನಾಯಕನನ್ನು ಅಸುರರೆಂದು ಕರೆಯಲಾಗಿದೆ.(೧೪) ಇವರು ಅಳುಪರ ಕಾಲದಲ್ಲಿಯೇ ಪಾಳೆಯಪಟ್ಟು ಕಟ್ಟಿರಬೇಕು.

ಜಿನದತ್ತರಾಯನು ದಕ್ಷಿಣಾಭಿಮುಖವಾಗಿ ಬರುವ ಮಾರ್ಗದಲ್ಲಿ ಮತ್ತು ನಂತರದ ಅಂಧಕರೊಂದಿಗೆ ಹೋರಾಟವನ್ನು ಪೊಂಬುಚದ ಪಂಚಬಸದಿಯಲ್ಲಿ ನಿಂತಿರುವ ಒಂದು ಶಾಸನವು ಹೀಗೆ ಹೇಳುತ್ತದೆ.

೧. "ಸಿಂಹ ರಥನೆಂಬ ಅಸುರನನ್ನು ಕೊಂದೆಡೆ - ಜಕ್ಕಿಯಬ್ಬೆ ಮೆಚ್ಚಿ ಸಿಂಹ ಲಾಂಛನಮಂ ಕೊಟ್ಟಳ್" (ಸಾಲು ೧೧).
೨. ಅನ್ನಕಾಸುರನೆಂಬ ಸುರನ ಕೊಂದು ಅಂದಾಸುರಮೆಂದು ಮಾಡಿದ (ಸಾಲು ೧೨).
೩. ಕನಕಪುರಕೆ ವಂದಲ್ಲಿ ಕನಕಾಸುರನನ್ನು ಕೊಂದ (ಸಾಲು ೧೨).
೪. ಕುಂದದ ಕೋಟೆಯಳಿರ್ದ ಕರನುಂ ಕರದೂಶನುಮಂ ಕಾದಿ ಯೋಡಿಸಿದ (ಸಾಲು ೧೨).

ಜಿನದತ್ತನು ಸಿಂಹರಥನೆಂಬ ರಕ್ಕಸನನ್ನು ಕೊಂದಾಗ ಜಕ್ಕಿಯಬ್ಬೆಯು ಮೆಚ್ಚಿ ಸಿಂಹಲಾಂಛನವನ್ನು ಕೊಟ್ಟಳು. ಸಿಂಹರಥನು ಎಲ್ಲಿದ್ದನೆಂದು ಶಾಸನದಲ್ಲಿ ಹೇಳಿರದಿದ್ದರೂ ಅಂಧಾಸುರದ ಒಂದು ಸೀಮೆಯವನಾಗಿರಬಹುದು. ನಂತರ ಅನ್ನಕಾಸುರನನ್ನು ಕೊಂದನು. ಅಲ್ಲದೆ ಅಂಧಕಾಸುರಮೆಂದು ಮಾಡಿಸಿದ ಎಂಬಲ್ಲಿ ಜಿನದತ್ತರಾಯನು ಈ ಸ್ಥಳಕ್ಕೆ ಅಂಧಾಸುರ ಎಂಬ ಹೆಸರಿಟ್ಟನೆಂದು ತಿಳಿಯುವ ಸಾಧ್ಯತೆಯಿದೆ. ಆದರೆ ಈ ಅಂಧಾಸುರವನ್ನು ತನ್ನ ನಾಡಿನ ಒಂದು ಸೀಮೆಯನ್ನಾಗಿ ಮಾಡಿದನೆಂದು ತಿಳಿಯಬೇಕು. ಇದನ್ನು ಮುಂದೆ ಹೇಳಿದೆ. ಪೊಂಬುಚಕ್ಕೆ ಕನಕಪುರವೆಂಬ ಹೆಸರಿನಲ್ಲಿ ಬಹುಶಃ ಅಳುವರ ಆಳ್ವಿಕೆಯ ಅಂತ್ಯಕಾಲದಲ್ಲಿ ಈ ಧೀರಯೋಧನು ಪೊಂಬುಚವನ್ನು ವಶಪಡಿಸಿಕೊಂಡಿರಬೇಕು. ಇವನ ಮುಂದಿನ ಧಾಳಿ ಕುಂದದ ಕೋಟೆಗೆ. ಇದು ಇಂದಿನ ಆಗುಂಬೆಯ ಬಳಿ ಇರುವ ಕುಂದಾದ್ರಿ. ಇಲ್ಲಿದ್ದ ಕರ ಮತ್ತು ಕರದೂಶಣ ಎಂಬ ಇಬ್ಬರು ನಾಯಕರನ್ನು ಸೋಲಿಸಿ ಓಡಿಸಿದನು. ಈ ನಾಯಕರೇ ಕುಂದಾದ್ರಿಯಲ್ಲಿ ಕೋಟೆಯನ್ನು ಕಟ್ಟಿಕೊಂಡು ಪಾಳೆಯಪಟ್ಟಿನ ಒಡೆಯರಾಗಿದ್ದಿರ ಬೇಕು. ಅಂಧಾಸುರಕ್ಕೆ 'ಖರಪುರ' ಎಂಬ ಹೆಸರಿತ್ತು ಎಂದು ಹಿಂದೆಯೇ ಹೇಳಿದೆ. ಬಹುಶಃ ಇದರ ನೆನಪಾಗಿ ಈ ಇಬ್ಬರು ನಾಯಕರು ಕರ ಮತ್ತು ಕರದೂಶಣ ಎಂಬ ಹೆಸರಿಟ್ಟುಕೊಂಡಿರ ಬಹುದು. ಶಾಸನೋಕ್ತವಾದ ಈ ಎಲ್ಲ ನಾಯಕರು ಅಂಧಕ ಕುಲದವರೇ ಆಗಿದ್ದು ಬೇರೆ ಬೇರೆ ಪ್ರದೇಶದಲ್ಲಿ ನಾಯಕರಾಗಿದ್ದಿರ ಬೇಕು. ಇವರೆಲ್ಲರೂ ನೆರೆಹೊರೆಯ ಪರಿಸರವನ್ನು ನಡುಗಿಸುತ್ತಿದ್ದ ಧೀರೋದಾತ್ತ ಯೋಧರಾಗಿದ್ದರೆಂದು ಹಂಪ. ನಾಗರಾಜಯ್ಯ ನವರೂ ಹೇಳಿದ್ದಾರೆ.(೧೫)

ಜಿನದತ್ತರಾಯನು ಪೊಂಬುಚದಲ್ಲಿ ನೆಲೆಯೂರಿ ರಾಜ್ಯ ಸ್ಥಾಪನೆ ಮಾಡಿಕೊಂಡ ಕಾಲದಲ್ಲಿ ಅಂಧಾಸುರದಲ್ಲಿ ಒಂದು ಕೋಟೆಯನ್ನು ಬಲಪಡಿಸಿದನು. ಅಲ್ಲದೆ ಸಮೀಪದ ಕೆಲವು ಗ್ರಾಮಗಳನ್ನು ಸೇರಿಸಿ ಅಂಧಾಸುರ ಹನ್ನೆರಡು ಎಂಬ ಒಂದು ಆಡಳಿತದ ಘಟಕವನ್ನಾಗಿ ಮಾಡಿದನು.(೧೭) ಇದನ್ನೇ ಹಿಂದಿನ ಶಾಸನದಲ್ಲಿ "ಅಂಧಾಸುರಮೆಂದು ಮಾಡಿದ" ಎಂದು ಹೇಳಿರುವುದು. ಅಂಧಾಸುರದಕೋಟೆಗೆ ನೆಲದುರ್ಗವೆಂದೂ ಕರೆಯಲಾಗಿದೆ.

ಪೊಂಬುಚದ ಶಾಂತರು ಕಲ್ಯಾಣಿ ಚಾಳುಕ್ಯರ ಸಾಮಂತ ರಾಗಿ ಆಳುತ್ತಿದ್ದರು. ಆಗ ಬಿಜ್ಜರಸ ಮಹಾಮಂಡಳೇಶ್ವರನ ತಮ್ಮ ಗೋವರಸಂ ಸಾಂತಳಿಗೆ ಸಾಸಿರದೊಳೆ ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನಂ ಮಾಡಿ ಸುಖದಿಂ ರಾಜ್ಯಂಗೆಯ್ಯುತ್ತಂ ಅಂಧಾಸುರ ದಲಿರ್ದು ಆಳುತ್ತಿದ್ದನು.(೧೮) ಹೀಗೆ ಶಾಸನೋಕ್ತ ಗೋವರಸನು ಅಂಧಾಸುರದಿಂದಲೇ ಶಾಂತಳಿಗೆ ಸಾವಿರವನ್ನು ಆಳುತ್ತಿದ್ದನೆಂದು ತಿಳಿಯುತ್ತದೆ. ಇವನು ಶಾಂತಳಿಗೆ ನಾಡೊಳ್ ಪೂರ್ವಮೆನಲ್ಕೆ ದೇಗುಲಂ ಬಸದಿಯಂ ಅಗ್ರಹಾರಮನೆ ಮಾಡಿಸಿದಂ ಸಲೆಗೋನ ಭೂಭುಜಂ" ಎಂದರೆ ಗೋನರಸನು ಇಲ್ಲಿ ಸುಂದರವಾದ ದೇವಾಲಯಗಳನ್ನು ಕಟ್ಟಿಸಿದನು. ಅಲ್ಲದೆ ಕೆರೆಕಟ್ಟೆ, ಬಾವಿ ಮತ್ತು ಉದ್ಯಾನವನ್ನು ಮಾಡಿಸಿದನು. ಅಂಧಾಸುರವನ್ನು ಒಂದು ರಾಜಧಾನಿಯಂತೆ ಶೃಂಗರಿಸಿದನು. ಬಲವಾದ ಕೋಟೆ ಕಟ್ಟಿಸಿಕೊಂಡನು. ಇವನ ಕಾಲದಲ್ಲಿ ಕಾಶ್ಮೀರದ ಕಡೆಯಿಂದ ಈಗಾಗಲೇ ಕಾಳಾಮುಖ ಶೈವರು ಅಂಧಾಸುರ ಪ್ರದೇಶಕ್ಕೆ ಬಂದು ನೆಲೆಸಿದ್ದರು. ಗೋನರಸನು ಇವರ ಆರಾಧಕನಾಗಿದ್ದನೆಂದು ತಿಳಿಯುತ್ತದೆ. ಇದರಿಂದ ಇವನು ಅಂಧಾಸುರ ಸೀಮೆಯನ್ನು 'ಗೊರವ ವಾಚಂ' ಮಾಡಿ ಕಾಳಾಮುಖ ರುದ್ರಪಂಡಿತರ ಕಾಲಂ

* ಆದರೆ ಮಲೆನಾಡಿನ ಎಲ್ಲ ಕಡೆಯ ಮಲಪರು ಪಶುಪಾಲಕರಾಗಿರಲಿಲ್ಲವೆನಿಸುತ್ತದೆ. ಕೊಡಗಿನ ಶಾಸನಗಳಲ್ಲಿ ಬರುವ ಅಲ್ಲಿಮ ಮಲೆಪರು ಪಶುಪಾಲನೆಯಲ್ಲಿ ತೊಡಗಿದ್ದ ಸಂಗತಿಯನ್ನು ಸೂಚಿಸುವುದಿಲ್ಲ. ಈ ವಿಷಯವನ್ನು ಪರಿಶೀಲಿಸಬಹುದೆ? - (ಸಂ.)

ಕರ್ಚಿ ಸರ್ವಮಾನ್ಯವನ್ನು ಬಿಟ್ಟುಕೊಟ್ಟನು. ಇದೇ ಶಕವರ್ಷ ೯೬೪ರಲ್ಲಿ ಕುಮಾರಸ್ವಾಮಿಭಟ್ಟ ಸೋಮಯಾಜಿಗಳಿಗೆ ಅಂದಾಸುರ ಗ್ರಾಮ ದಾನವನ್ನು ಮಾಡಿದನು ಎಂದರೆ ಅಂದಾಸುರ ಸೀಮೆಯಲ್ಲಿ ಒಂದು ಗ್ರಾಮವನ್ನು ದಾನವಾಗಿ ನೀಡಿರಬೇಕು. ಅಲ್ಲದೆ ಅಗ್ರಹಾರದ ವೈದಿಕರಿಗೂ ಸೌಕರ್ಯಗಳನ್ನು ಕಲ್ಪಿಸಿದನು.

ಇದೇ ಗೋನರಸನು ಅಂದಾಸುರ - ೧೨ ಮತ್ತು ಅದರೊಳಗಿನ ಶೌರ್ಯ ಮಾರ್ತಾಂಡ ದೇಗುಲದ ಸೀಮೆಗಳು, 'ದೇಗುಲದ ನೈಋತ್ಯದ ನೆಲೆಗಟ್ಟಿನ ಮತ್ತು ಮೂಡಲ್ ಸೇತು ಕೋಟಿವರಂ ಮೇರೆಯಾಗೆ' ಎಂದು ಇದೇ ಆಡಳಿತ ಘಟಕದ ಗಡಿಯನ್ನು ನಿರ್ದಿಷ್ಟಗೊಳಿಸಿದ್ದಾನೆ.[೧೯] ಇವನು ಇಂದಿನ ಆಚಾವುರದಲ್ಲಿರುವ ಎರಡು ವಿಶಾಲವಾದ ಕೆರೆಗಳನ್ನು ಕಟ್ಟಿಸಿದ್ದಾನೆ.

ಕಲ್ಯಾಣಿ ಚಾಲುಕ್ಯರ ಜಯಸಿಂಘದೇವನು ಬನವಾಸಿಯಲ್ಲಿ ಆಳುತ್ತಿದ್ದಾಗ ಇವನ ಪಾದಪದ್ಮಾರಾಧಕ ಮಾಚಿರಾಜನು ಅಂಧಾಸುರದಲ್ಲಿದ್ದು ಶಾಂತಳಿಗೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ನೆಂದು ತಿಳಿಯುತ್ತದೆ. ಕದಂಬ ಕೀರ್ತಿದೇವನು ಪೊಂಬುಚದ ಸಾಮಂತ ಜಗದೇವನ ಮೇಲೆ ದಂಡೆತ್ತಿಬಂದಾಗ ಅಂದಾಸುರದ ಕೋಟೆಗೆ ಮುತ್ತಿಗೆ ಹಾಕಿದನು.[೨೦] ಆದರೆ ಇದಕ್ಕೆ ಮೊದಲೇ ಹೊಯ್ಸಳ ವಿಷ್ಣುವರ್ಧನನು ಈ ಕೋಟೆಯನ್ನು ವಶಪಡಿಸಿ ಕೊಂಡಿದ್ದನು.[೨೧] ಸಾಂತರರ ಆಡಳಿತ ಮುಕ್ತಾಯವಾದ ನಂತರ ಚಾಲುಕ್ಯ ಮತ್ತು ಹೊಯ್ಸಳರ ಅವನತಿಯ ಕಾಲಘಟ್ಟದಲ್ಲಿ ಅಂದಾಸುರವು ಒಂದು ಪಾಳು ಗ್ರಾಮವಾಯಿತು.

ಧಾರ್ಮಿಕ : ಧಾರ್ಮಿಕವಾಗಿ ಅಂದಾಸುರವು ವೈದಿಕ, ಜೈನ, ವೀರಶೈವ ಮತ್ತು ಕಾಳಾಮುಖರ ನೆಲೆಯಾಗಿತ್ತು. ಅಂಧಾಸುರ ಪ್ರಾಂತ್ಯದಲ್ಲಿ ನೆಲೆಸಿದ್ದ ಅಂಧಕರಲ್ಲಿ ಬಹುಪಾಲು ಮಂದಿ ಈಗಾಗಲೇ ಜೈನರಾಗಿದ್ದರು. ಗೋನರಸನು ಕಾಳಾಮುಖ ಪಂಥಕ್ಕೆ ಒಲವು ತೋರಿಸುತ್ತಿದ್ದನು. ತನ್ನ ಗುರುಗಳಾದ ಕ್ರಿಯಾಶಕ್ತಿ ಪಂಡಿತರಿಗೆ ಆಚಾಪುರ ತೀರ್ಥದಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನು.[೨೨] ಮಾಚಿರಾಜನು ಅಂಧಾಸುರದಲ್ಲಿ ಮಾಚೇಶ್ವರ ಆದಿತ್ಯ ಮತ್ತು ವಿಷ್ಣು ದೇವರನ್ನು ಪ್ರತಿಷ್ಠಾಪಿಸಿ ದನು.[೨೩] ಅಲ್ಲದೆ ಅನಂತ ಶಿವಪಂಡಿತರ ಕಾಲಂ ಕರ್ಚಿ ಭೂದಾನ ನೀಡಿದ್ದಾನೆ. ಪೊಂಬುಚದ ದೊರೆ ಜಯಕೇಶಿಯ ತಾಯಿ ಅಳಿಯಾದೇವಿಯು ಅಂದಾಸುರದಲ್ಲಿ ಒಂದು ಬಸದಿಯನ್ನು ಕಟ್ಟಿಸಿದಳು.[೨೪] ಹಿಂದೆ ಹೇಳಿರುವ ಚಾಲುಕ್ಯ ಇಮ್ಮಡಿ ಜಯಸಿಂಹನ ಸಾಮಂತ (೧೦೧೫-೧೦೪೨) ಮಾಚಿರಾಜನು ದೇವರದಾಸಿಮಯ್ಯನ ಶಿಷ್ಯನಾಗಿದ್ದನು. ಇವನನ್ನು ಬುಧಜನ ಮಿತ್ರ ಎಂದು ಕರೆಯುತ್ತಿದ್ದರು. ಮಾಚೇಶ್ವರ ದೇವಾಲಯದಲ್ಲಿ ಲಿಂಗಪ್ರತಿಷ್ಠೆ ಮಾಡಿಸಿದವನು ಇದೇ ಮಾಚಿರಾಜ.

ಕ್ರಮೇಣ ಪೊಂಬುಚದ ಶಾಂತಾರ ದೊರೆಗಳು ಕಾಳಾಮುಖ ಧರ್ಮಗುರುಗಳನ್ನು ಶ್ರದ್ಧಾಭಕ್ತಿಯಿಂದ ಕಾಣುತ್ತಿದ್ದರು. ಜೈನ ದೊರೆ ಬೀರಶಾಂತರನು ಕಾಳಾಮುಖ ಶೈವಗುರು ಸರ್ವಜ್ಞ ಜೀಯರಿಗೆ ತನ್ನ ಸೀವಟದ ಗೊರವರಪಳ್ಳಿಯನ್ನು ಸರ್ವಮಾನ್ಯ ವಾಗಿ ನೀಡಿ ಗೌರವಿಸಿದನೆಂದು ಬಿಲ್ಲೇಶ್ವರದ ಕಾಳ ಭೈರವನ ಗುಡಿಯ ಶಾಸನದಲ್ಲಿದೆ.[೨೫]

ಆಚಾಪುರದ ಇಂದಿನ ಮುರುಘರಾಜೇಂದ್ರ ಮಠವು ಕ್ರಿ. ಶ. ಸು. ೧೧ನೆಯ ಶತಮಾನಕ್ಕಿಂತ ಮೊದಲೇ ಕಾಳಾಮುಖ ಪರಂಪರೆಗೆ ಸೇರಿರಬಹುದಾದ ಸಾಧ್ಯತೆಯಿದೆ. ಈ ಮಠದ ಸಮೀಪದ ಗವಿಮಠ ಮತ್ತು ಇದರ ಸುತ್ತಲಿನ ಕೊಳ, ಹಾಗೂ ಅವಶೇಷಗಳು ಇದಕ್ಕೆ ಆಧಾರವಾಗಿದೆ. ಗವಿಮಠವು ನಿಸ್ಸಂಶಯವಾಗಿ ಕಾಳಾಮುಖರ ಒಂದು ಸಾಧನೆಯ ಸ್ಥಳವಾಗಿತ್ತು. ಹೀಗೆ ಈ ಗುರುಪೀಠದ ಪರಂಪರೆಯು ಅಂಧಕರು ನೆಲಸಿದ್ದ ಪ್ರದೇಶದ ಸಂಕೇತವಾಗಿದೆ.

ಅವಶೇಷಗಳು: ಇಂದು ಅಂದಾಸುರವು ಪಾಳಾಗಿದೆ. ದೇವಾಲಯಗಳೂ ನಾಶವಾಗಿ ಇದರ ಸ್ಥಳದಲ್ಲಿ ಪುಟ್ಟದಾದ ಜಂಬಿಟ್ಟಿಗೆಯ ಗೂಡಿನಂಥಹ ಗುಡಿಗಳಿವೆ. ಇಂಥಹ ಮೂರು ಗುಡಿಗಳು ಮಾತ್ರ ಉಳಿದಿವೆ. ಆದಿತ್ಯ, ವಿಷ್ಣು ಮುಂತಾದ ಮೂರ್ತಿಗಳೂ ಕಣ್ಮರೆಯಾಗಿವೆ. ಆನಂದಪುರಕ್ಕೆ ಹೋಗುವ ರಸ್ತೆಯ ಬಲಪಾರ್ಶ್ವದಲ್ಲಿ ಒಂದು ವಿಶಾಲವಾದ ತೀರ್ಥವಿದ್ದು ಇದರ ನಡುವೆ ಹೆಂಚಿನ ಕಟ್ಟಡದ ಒಂದು ಶಿವಾಲಯವಿದೆ. ಇದರ ಶಿವಲಿಂಗ ಮತ್ತು ಬಸವ ಪ್ರಾಚೀನವೆಂದು ಹೇಳಲಾಗಿದೆ. ತೀರ್ಥವು ಪಾಳಾಗಿ ಪಾವಟಿಗೆಗಳು ಕುಸಿದಿವೆ. ಇನ್ನೂ ಕೆಲವು ತೀರ್ಥಗಳು ಮುಚ್ಚಿ ಹೋಗಿವೆ.

ಗೋನೇರಿಗುಡ್ಡದಲ್ಲಿ ಮರಗಳು ಬೆಳೆದಿವೆ ಇದರ ಸಂದಿನಲ್ಲಿ ಬಸದಿ ಎಂದು ಹೇಳುವ ಒಂದು ಪಾಳು ನಿವೇಶನವಿದೆ. ಇಲ್ಲಿದ್ದ ಶಾಸನವು ನೆಲಕ್ಕೆ ಉರುಳಿದೆ. ಇದರ ಉತ್ತರದಲ್ಲಿರುವ ದಿಣ್ಣೆಗಳನ್ನು ಕೋಟೆ ಎಂದು ಸ್ಥಳೀಯರು ಹೇಳುತ್ತಾರೆ. ಆಚಾವುರ ತೀರ್ಥದ ಹಿಂಭಾಗದಲ್ಲಿ ಅಗ್ರಹಾರವಿತ್ತು ಎಂದು ಹೇಳಲಾಗುತ್ತಿದೆ. ಇಂದಿನ ಆಚಾವುರ, ಮುರುಘಾಮಠ, ಎಡೆಹಳ್ಳಿ ಎಂಬುದು ಚಾಲುಕ್ಯರ ಕಾಲದಲ್ಲಿ ಇಟ್ಟ ಹೆಸರುಗಳು. ಪ್ರಾಚೀನ ಕಾಲದಲ್ಲಿ ಇವೆಲ್ಲವೂ ಅಂದಾಸುರವೇ ಆಗಿತ್ತು.

ಯಾದವರ ಶ್ರೀಕೃಷ್ಣನ ವಂಶದವರೆಂದು ಹೇಳಲಾಗಿರುವ ಅಂಧಕರು ಕ್ರಿ. ಶ. ಸು. ೫ನೆಯ ಶತಮಾನದಲ್ಲಿ ಅಂಧಾಸುರ ಮತ್ತು ಸುತ್ತಮುತ್ತಲಿನ ಪ್ರಾಂತ್ಯಕ್ಕೆ ಬಂದು ನೆಲಸಿರಬೇಕೆಂದು ದೊರೆತಿರುವ ಐತಿಹಾಸಿಕ ಆಧಾರಗಳಿಂದ ಹೇಳಬಹುದಾಗಿದೆ. ಶಂ. ಬಾ. ಜೋಶಿಯವರು ಈ ಸ್ಥಳದ ಬಗ್ಗೆ ಏನನ್ನೂ ಹೇಳಿರದಿದ್ದರೂ ಅಂಧಕರ ಬಗ್ಗೆ ಐತಿಹಾಸಿಕ ಮಾಹಿತಿಗಳನ್ನು ನೀಡಿದ್ದಾರೆ. ಈ ಅಂಧಾಸುರದ ಬಗೆಗೆ ಇನ್ನಷ್ಟು ಮಾಹಿತಿಗಳ ಸಂಗ್ರಹವಾಗಬೇಕಾಗಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಶಂ. ಬಾ. ಜೋಶಿ, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ.
*೨. ಎ. ಕ. ೭, ಸಾಗರ ೧೦೯ ಬಿ ಆಚಾವುರ, ಕ್ರಿ. ಶ. ೧೦೪೨.
*೩. ಅದೇ, ನಗರ ೩೫, ಹೊಂಬುಜ ಕ್ರಿ. ಶ. ?
*೪. ಅದೇ, ಸಾಗರ ೧೫೯, ಕ್ರಿ. ಶ. ?
*೫. ಶಂ. ಬಾ. ಜೋಶಿ, ಪೂರ್ವೋಕ್ತ, ಪು. ೪೯೨.
*೬. *Age of Imperial Unity,* p. 193.
*೭. ಶಂ. ಬಾ. ಜೋಶಿ, ಪು. ೫೧೫.
*೮. ಅದೇ, ಪು. ೫೧೨.
*೯. ಅದೇ, ಪು. ೫೩೭.
*೧೦. ಅದೇ, ಪು. ೫೩೮
*೧೧. *ARSIE 1928-29* No. 526, 529 Varanga SK.
*೧೨. *MAR 1973-74,* 1053.
*೧೩. ಹಂಪ. ನಾಗರಾಜಯ್ಯ: ಸಾಂತರ ಒಂದು ಅಧ್ಯಯನ.
*೧೪. ಶಂ. ಬಾ. ಜೋಶಿ, ಪು. ೫೧೯.
*೧೫. ಎ. ಕ. ೭, ನಗರ ೩೬, ಪೊಂಬುಜ, ಕ್ರಿ. ಶ. ೧೦೮೩.
*೧೬. ಹಂಪ. ನಾಗರಾಜಯ್ಯ., ಪೂರ್ವೋಕ್ತ, ಪು. ೩೮.
*೧೭. ಎ. ಕ. ೭ ಸಾಗರ ೧೦೮ ಆಚಾವುರ, ಕ್ರಿ. ಶ. ೧೦೪೨.
*೧೮. ಅದೇ, ೧೦೯ ಕ್ರಿ. ಶ. ೧೦೪೨.
*೧೯. ಅದೇ, ಸಾಗರ ೧೦೮, ಕ್ರಿ. ಶ. ೧೦೪೩.
*೨೦. ಎ. ಕ. ೭, ಸೊರಬ ೧೭೭, ೫೬೨, ಸೊರಬ ಕ್ರಿ. ಶ. ೧೧೬೩.
*೨೧. ಅದೇ ೧೬೨ ಕ್ರಿ. ಶ. ೧೧೨೩.
*೨೨. ಗೌ. ಮ. ಉಮಾಪತಿ ಶಾಸ್ತ್ರಿ : ವಿರತಿಯಂಕುರ ಪು. ೪೮.
*೨೩. ಎ. ಕ. ೭, ಸಾಗರ ೧೦೮ ಆಚಾವುರ ಕ್ರಿ. ಶ. ೧೦೪೨.
*೨೪. ಅದೇ, ೧೫೯, ಸೇತು, ಕ್ರಿ. ಶ. ೧೧೫೯.
*೨೫. ಅದೇ, ನಗರ ೬೩, ಪೊಂಬುಜ, ಕ್ರಿ. ಶ. ೧೦೬೨.

ಎಸ್. ಎ. ಲಕ್ಷ್ಮೀದೇವಿ*

ಪಶ್ಚಿಮ ಕರಾವಳಿಯ ಶಂಕರನಾರಾಯಣ ಕ್ಷೇತ್ರ ಒಂದು ಪರಿಚಯ

ರಜತಪೀಠೇ, ಕುಮಾರಾದ್ರಿ, ಕುಂಭಕಾಶೀ, ಧ್ವಜೇಶ್ವರ।
ಕ್ರೋಡ, ಗೋಕರ್ಣ, ಮುಕುಂಬಾ ಸಪ್ತೈತೇ ಮೋಕ್ಷದಾಯಕಾ॥

ಸಹ್ಯಾದ್ರಿ ಪರ್ವತದ ಪಶ್ಚಿಮಕ್ಕೆ ಕುಮಾರಾದ್ರಿಯಿಂದ ಗೋಕರ್ಣದವರೆಗಿನ ಪಶ್ಚಿಮ ಕರಾವಳಿಯಲ್ಲಿ ಸಪ್ತ ಮಹಾಕ್ಷೇತ್ರಗಳಿವೆ. ಅವುಗಳಲ್ಲಿ ಕುಂದಾಪುರ ತಾಲೂಕಿನ ಕುಂದಾಪುರ ಶಿವಮೊಗ್ಗ ಹೆದ್ದಾರಿಯಲ್ಲಿರುವ ಕ್ರೋಡ ಶ್ರೀ ಶಂಕರನಾರಾಯಣ ಕ್ಷೇತ್ರವು ಒಂದಾಗಿದ್ದು ಪುರಾಣ ಪ್ರಸಿದ್ಧವೂ, ಐತಿಹಾಸಿಕ ಪ್ರಸಿದ್ಧವೂ ಆಗಿದೆ. ಶ್ರೀ ಶಂಕರನಾರಾಯಣನು ಈ ಕ್ಷೇತ್ರದ ಮುಖ್ಯ ಆರಾಧ್ಯ ದೇವತೆಯಾಗಿದ್ದು, ಕ್ಷೇತ್ರವು 'ಶಂಕರನಾರಾಯಣ' ಎಂಬ ನಾಮಧೇಯದಿಂದ ಪ್ರಖ್ಯಾತವಾಗಿದೆ.

ಈ ಕ್ಷೇತ್ರದಲ್ಲಿ ಪೂರ್ವದಲ್ಲಿ ಮಹಾ ತೇಜಸ್ವಿಯಾದ ಕ್ರೋಡ ಮಹರ್ಷಿಯು ಹರಿಹರನನ್ನು ಕುರಿತು ಘೋರ ತಪಸ್ಸನ್ನು ಮಾಡಿ, ಶಂಕರ ಮತ್ತು ನಾರಾಯಣರು ಒಂದಾಗಿ ಇಲ್ಲಿ ನೆಲಸುವುದಕ್ಕೆ ಕಾರಣೀಭೂತರಾದುದರಿಂದ, ಈ ಕ್ಷೇತ್ರವು 'ಕ್ರೋಡಕ್ಷೇತ್ರ' ವೆಂಬ ನಾಮಧೇಯದಿಂದ ಪ್ರಸಿದ್ಧಿ ಹೊಂದಿದೆ. ಹರಿಹರರಲ್ಲಿ ಭೇದವಿಲ್ಲವೆಂಬುದಕ್ಕೆ ಈ ಶಂಕರನಾರಾಯಣ ಕ್ಷೇತ್ರವು ಒಂದು ಉತ್ತಮ ನಿದರ್ಶನವಾಗಿರುತ್ತದೆ.

ಈ ಕ್ಷೇತ್ರದ ಪೌರಾಣಿಕ ಹಿನ್ನೆಲೆಯು, ಪದ್ಮಪುರಾಣದ ಕಾಂಡದಲ್ಲಿ (೨೪ ಅಧ್ಯಾಯಗಳಲ್ಲಿ ಸಂಸ್ಕೃತಶ್ಲೋಕಗಳಲ್ಲಿ) ರಸವತ್ತಾಗಿ ವರ್ಣಿತವಾಗಿದೆ. ಅಲ್ಲದೆ ಆ ಕಾಲದಲ್ಲಿ ಅತಿ ಧಾರ್ಮಿಕ ಮನೋವೃತ್ತಿಯ ಭಕ್ತಶ್ರೇಷ್ಠ 'ತೌಲವ' ಎಂಬ ರಾಜನು ತನಗಾದ ಸ್ವಪ್ನಸೂಚಿಯ ಪ್ರಕಾರ ಲಿಂಗಾಕಾರದಲ್ಲಿ ಉದ್ಭವಿಸಿದ ಶ್ರೀ ಶಂಕರನಾರಾಯಣನನ್ನು ನೋಡಿ ಶ್ರದ್ಧಾಭಕ್ತಿಯಿಂದ ರಾಜೋಚಿತವಾದ ರಮಣೀಯವಾದ ಹೇಮಶಿಖರದಿಂದ ಅಲಂಕೃತವಾದ ಈ ದೇವಾಲಯವನ್ನು ಕಟ್ಟಿಸಿದನೆಂಬ ಪ್ರತೀತಿವುಂಟು.

ಐತಿಹಾಸಿಕ ಹಿನ್ನೆಲೆ

ಐತಿಹಾಸಿಕವಾಗಿ ಈ ದೇವಾಲಯದ ನಿರ್ಮಾಣ ಕಾಲ ತಿಳಿಯದು. ೧೩ನೇ ಶತಮಾನಕ್ಕೆ ಸೇರುವ ಶಾಸನಗಳಲ್ಲಿ ಈ ದೇವಾಲಯಕ್ಕೆ ದಾನದತ್ತಿಗಳನ್ನಿತ್ತ ಉಲ್ಲೇಖವಿದೆ. ಪೂರ್ವ ಕಾಲದಲ್ಲಿ ಗೋರಾಷ್ಟ್ರದೇಶವನ್ನು ಸದಾಚಾರ ನಿರತನೂ. ಶಾಸ್ತ್ರತತ್ವಜ್ಞನೂ ಆದ ಸುಲೋಚನನೆಂಬ ರಾಜನು ಆಳುತ್ತಿದ್ದು ಶ್ರೀ ದೇವರ ಭಂಡಾರಕ್ಕೆ ಒಂದು ಸಹಸ್ರ ನಿಷ್ಕ ಕಂದಾಯ ಬರುವ ಗ್ರಾಮವನ್ನು ದಾನದತ್ತಿಯಾಗಿ ಅರ್ಪಿಸಿದ ಬಗ್ಗೆಯೂ ಉಲ್ಲೇಖವಿದೆ. ಶಾಸನಗಳಲ್ಲಿ ಆ ದೇವರನ್ನು ಕೊಡಗಿಯ ಶಂಕರ ನಾರಾಯಣ ಎಂದು ಉಲ್ಲೇಖಿಸಲಾಗಿದೆ. ಕೊಡಗಿಯು (ಕೋಡಗಿಯ) ರೂಪಾಂತರವೆ ಕ್ರೋಡವಿರಬೇಕು. ೧೩ನೆಯ ಶತಮಾನಕ್ಕಿಂತ ಒಂದೆರಡು ಶತಮಾನಗಳಿಗೂ ಹಿಂದೆ ಈ ದೇವಾಲಯವಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಥಮ ಬಾರಿಗೆ 'ಕೊಡಗಿಯ ಶಂಕರನಾರಾಯಣ' ವೆಂದು ಉಲ್ಲೇಖಿಸಿರುವುದು ಕ್ರಿ.ಶ. ೧೩೫೭ರ ಒಂದು ಶಿಲಾ ಶಾಸನದಲ್ಲಿ. ಮತ್ತೊಂದು ಕ್ರಿ.ಶ. ೧೫೬೨ರ ಶಿಲಾ ಶಾಸನದಲ್ಲಿ ಶಂಕರನಾರಾಯಣವು ತುಳು ರಾಜ್ಯದ ಪುಣ್ಯಕ್ಷೇತ್ರವೆಂದು ಉಲ್ಲೇಖಿಸಲ್ಪಟ್ಟಿದೆ. ವಿಜಯನಗರದ ಸಂಸ್ಥಾನದ ಮಹಾ ರಾಜರುಗಳು ಈ ದೇವರ ಶ್ರೇಷ್ಠ ಭಕ್ತರಾಗಿದ್ದು, ಈ ದೇವರಿಗೆ ಚಿನ್ನ ಬೆಳ್ಳಿ ಒಡವೆಗಳನ್ನು ಅನೇಕವಾಗಿ ಅರ್ಪಿಸಿ, ದೇವಸ್ಥಾನದ ಶ್ರೇಯೋಭಿವೃದ್ಧಿ ಕಾರ್ಯಗಳಲ್ಲಿ ಆಸಕ್ತಿವುಳ್ಳವರಾಗಿದ್ದರು.

ಕೆಳದಿಯರಸರ ಕಾಲದಲ್ಲಿ ಈ ದೇವಾಲಯವು ಹೆಚ್ಚಿನ ಹಿರಿಮೆಗರಿಮೆಗಳಿಗೇರಿತು. ಕೆಳದಿಯರಸರು ಶ್ರೀಶಂಕರ ನಾರಾಯಣ ದೇವರ ಭಕ್ತರಾಗಿದ್ದು ದೇವರಿಗೆ ಒಡವೆ ವಸ್ತುಗಳನ್ನೂ ಕಾಣಿಕೆಯನ್ನು ಅರ್ಪಿಸಿರುತ್ತಾರೆ. ದೇವಾಲಯದಲ್ಲಿ ಈಗಿರುವ ಭೋಗಮಂಟಪ, ಬೆಳ್ಳಿ ಕೊಪ್ಪರಿಗೆ, ಬೆಳ್ಳಿ ಕಾಲುದೀಪಗಳು ಮುಂತಾದ ಒಡವೆಗಳಲ್ಲಿ "ಕೆಳದಿ ಸೋಮಶೇಖರ ರಾಯರ ಭಕ್ತಿ" ಎಂಬುದಾಗಿ ಲೇಖಿಸಲ್ಪಟ್ಟಿದೆ. ಸಂಸ್ಥಾನದ ರಾಜಮನೆತನ

* ಇತಿಹಾಸ ವಿಭಾಗ, ವಿ. ವಿ. ಎಸ್. ಕಾಲೇಜು, ಬಸವನಗುಡಿ, ಬೆಂಗಳೂರು - ೫೬೦ ೦೦೪.

ದವರು ಈ ದೇವಾಲಯದ ಮೇಲ್ವಿಚಾರಕರಾಗಿದ್ದು. ಪ್ರತಿವರ್ಷ ಧನುಸಂಕ್ರಮಣದ ದಿವಸ ರಥೋತ್ಸವು ಆರಂಭವಾಗಿ 'ಮಹೂರ್ತ ಬಲಿ' ಎಂಬ ಉತ್ಸವವನ್ನು ಆರಂಭಿಸಿದರು. ಅದು ಇಂದಿಗೂ ಜಾರಿಯಲ್ಲಿದೆ.

ಕೆಳದಿಯ ಅರಸರಲ್ಲಿ ಪ್ರಮುಖನಾದ ಶಿವಪ್ಪನಾಯಕನು ಈ ದೇವರ ಭಕ್ತನಾಗಿದ್ದು, ಈ ದೇವಾಲಯದ ಶ್ರೇಯಸ್ಸಿಗೆ ಕಾರಣವಾದ ಅನೇಕ ಕಾರ್ಯಗಳನ್ನು ಕ್ರಿ.ಶ. ೧೭ನೇ ಶತಮಾನ ದಲ್ಲಿ ನೆರವೇರಿಸಿದ್ದಾನೆ.

ಅನಂತರ ಮೈಸೂರಿನ ಟಿಪ್ಪು ಸುಲ್ತಾನನು ೧೮ನೇ ಶತಮಾನದಲ್ಲಿ ತನ್ನ ದಿಗ್ವಿಜಯ ಸಂದರ್ಭದಲ್ಲಿ (ಶ್ರೀರಂಗಪಟ್ಟಣಕ್ಕೆ ವಾಪಸಾಗುವಾಗ) ಈ ಕ್ಷೇತ್ರಕ್ಕೆ ಬಂದಾಗ, ಕ್ಷೇತ್ರದ ಮಹಿಮೆ ತಿಳಿದು, ಅವನೊಡನೆ ತಂದಿದ್ದ ೬೦ ಮಣ ಭಾರದ ದೊಡ್ಡ ಗಂಟೆಯೊಂದನ್ನು ಹೊರಲಾರದೆ ಇಲ್ಲೇ ಬಿಟ್ಟು ಹೋದನು. ಈ ಗಂಟೆಯನ್ನು ಬಾರಿಸಿದರೆ ಸದ್ದು ೮ ಕಿ.ಮೀ ದೂರದವರೆಗೆ ಕೇಳುತ್ತದೆ. ಪ್ರಾತಃಕಾಲದ ಪೂಜಾರಂಭಕ್ಕೆ ಮುನ್ನ ಬಿಟ್ಟರೆ, ಉಳಿದ ವೇಳೆ ಈ ಗಂಟೆಯನ್ನು ಬಾರಿಸುವುದನ್ನು ನಿಲ್ಲಿಸಲಾಗಿದೆ. (ದೇಗುಲದ ಭೋಗಮಂಟಪದ ಕೆಳಸುತ್ತಿನಲ್ಲಿ ಗಂಡು ಭೇರುಂಡವನ್ನು ಕೆಳದಿ ಅರಸರು ಮಾಡಿಕೊಟ್ಟದ್ದು ಎಂದು ಹೇಳಬಹುದು.



ವಾಸ್ತುಶೈಲಿ

ತುಳುನಾಡಿನ ಹೆಚ್ಚಿನ ಸ್ಮಾರಕಗಳು ನಿರ್ಝರದ ಮಳೆಯ ಕಾರಣದಿಂದಾಗಿ ಚಪ್ಪಟೆಯಾಕಾರದ ಅಥವಾ ಅಡ್ಡವಾದ ಮೇಲ್ಛಾವಣಿಯನ್ನು ಹೊಂದಿರುತ್ತವೆ. ಈ ದೇಗುಲವು ಚಪ್ಪಟೆಯಾಕಾರದ ಮೇಲ್ಛಾವಣಿಯನ್ನು ಹೊಂದಿದೆ. ಸರಳವಾದ, ಗಟ್ಟಿಮುಟ್ಟಾದ ಮಹಾದ್ವಾರವಿದ್ದು (ಹೆಬ್ಬಾಗಿಲು) ಅದು ಇಳಿಜಾರಿನ ಮೇಲ್ಛಾವಣಿಯನ್ನು ಹೊಂದಿದೆ. ದೇಗುಲದ ಗರ್ಭಗೃಹದ ಮೇಲಿನ ಶಿಖರವು ಹೊಯ್ಸಳ - ದ್ರಾವಿಡ ಶೈಲಿಯನ್ನು ಹೊಂದಿದೆ. ಮತ್ತು Finials ಗರ್ಭಗೃಹದ ಮೇಲ್ಛಾವಣಿಯು ಹಿಂದೆ ಕಂಡು ಬರುತ್ತದೆ.

ಈ ದೇವಾಲಯದ ಗರ್ಭಗುಡಿಯ ಮಧ್ಯಭಾಗದಲ್ಲಿ ನೆಲದ ಮಟ್ಟಕ್ಕಿಂತ ಕೆಳಭಾಗದಲ್ಲಿ ಜಲದಲ್ಲಿ ಶಿವಕೇಶವಾತ್ಮಕವಾದ ಉದ್ಭವಲಿಂಗವು ಇರುವುದು. ಈ ಲಿಂಗವೇ ಮುಖ್ಯ ದೇವರಾದ "ಶ್ರೀಶಂಕರನಾರಾಯಣ ಸ್ವಾಮಿ". ಈ ಲಿಂಗವು ಅದ್ವೈತ ಸೂಚಕವಾದ ಒಂದೇ ನಾಲದಿಂದ ಹೊರಟು ಮೇಲಕ್ಕೆ ಒಂದು ಕಡೆ ಬಲಭಾಗ; ಶ್ವೇತವರ್ಣದಿಂದ ಕಂಕಣಾಕಾರದಲ್ಲಿದೆ. ಇನ್ನೊಂದು ಕಡೆ ಎಡಭಾಗ; ಮೇಘವರ್ಣದಿಂದ ಗೋಪಾದಗಳ ಚಿಹ್ನೆಗಳಿಂದ ಕೂಡಿದೆ. ಇವೇ ಶ್ರೀಶಂಕರನಾರಾಯಣ ಲಿಂಗದ್ವಯ ಗಳು ಲಿಂಗವು ತಗ್ಗಾದ ಜಲಪ್ರದೇಶದಲ್ಲಿರುವುದರಿಂದ ಗರ್ಭ ಗುಡಿಯ ಮುಂಭಾಗದಿಂದ ಭಕ್ತರಿಗೆ ಮೂಲ ಉದ್ಭವಲಿಂಗ ದರ್ಶನವು ಆಗಲಾರದು. ಆದ್ದರಿಂದ ಕನ್ನಡಿ ಮತ್ತು ದೀಪದ ಬೆಳಕಿನ ಸಹಾಯದಿಂದ ಮೂಲಬಿಂಬ ದರ್ಶನ ಪಡೆಯ ಬಹುದು. ಶಂಕರನಾರಾಯಣದಲ್ಲಿ ಕ್ರೋಡಾತೀರ್ಥ, ಕೋಟಿ ತೀರ್ಥ, ನಾಗತೀರ್ಥ, ಸಿದ್ಧಾಮೃತತೀರ್ಥ, ಸಂತಾನ ತೀರ್ಥ, ಅಗ್ನಿತೀರ್ಥ, ಭಾರ್ಗವತೀರ್ಥ ಇತ್ಯಾದಿ ಹಲವು ತೀರ್ಥಗಳಿವೆ. ಸ್ಯಂದನವೆಂಬ ಮಹಾರಥ, ೧೮೨೧-ಆನಂತ ಉಡ್ಪ' ವರದಹಳ್ಳಿಯ ಶ್ರೀಧರಸ್ವಾಮಿಗಳಿಂದ ಪ್ರತಿಷ್ಠಿತವಾದ ಪಂಚಮುಖಿ ಆಂಜನೇಯ ಸ್ವಾಮಿ, ೩೬೫ ಬತ್ತಿಗಳನ್ನು ಬೆಳಗಿಸಬಹುದಾದ ಉನ್ನತವಾದ ದೀಪಸ್ತಂಭ, ಜೀರ್ಣೋದ್ಧಾರಗೊಂಡ ಪುರಾಣ ಮಂಟಪದ ಅಳಿದುಳಿದ ಕಾಷ್ಠಶಿಲ್ಪ ಫಲಕಗಳು, ಭೋಗಮಂಟಪ, ಬಣ್ಣದ ಚಾವಡಿ ಈ ಮುಂತಾದುವು ಭಕ್ತರಿಗೆ ಆಕರ್ಷಣೆಯ ವಸ್ತುಗಳು.

ಹೊರ ಪ್ರಾಕಾರದ ದಕ್ಷಿಣ ಭಾಗದಲ್ಲಿ ಶ್ರೀ ಗೋಪಾಲ ಕೃಷ್ಣದೇವರು, ಶ್ರೀ ಸುಬ್ರಹ್ಮಣ್ಯ ದೇವರು, ಪಶ್ಚಿಮ ದಿಕ್ಕಿನಲ್ಲಿ ಶ್ರೀ ಗೌರಿಲಕ್ಷ್ಮಿದೇವರು, ಶ್ರೀ ಪಾರ್ಥೇಶ್ವರ ದೇವರು, ಈಶಾನ್ಯ ದಿಕ್ಕಿನಲ್ಲಿ, ಶ್ರೀ ಬೆಳ್ಳಿ ಶಂಕರನಾರಾಯಣ ವಿಗ್ರಹವು ೬ ಅಡಿ ಎತ್ತರವಿದ್ದು, ಮೇಲಿನ ಕೈಗಳಲ್ಲಿ ಯಾವುದೇ ಗುಣ ವಿಶೇಷಣೆ ಗಳಿಲ್ಲದೆ, ಕೆಳಗಿನ ಕೈಗಳು ಭಯ ಮತ್ತು ವರದ ಭಂಗಿಗಳಲ್ಲಿವೆ. ಕಿರೀಟವು ಬಹಳ ಉದ್ದವಾಗಿದೆ. ಹಣೆಯ ಮೇಲಿರುವ ಚಿಹ್ನೆಗಳಿಂದ ಈ ವಿಗ್ರಹ ಶಂಕರನಾರಾಯಣ ಎಂದು ಕಂಡು ಹಿಡಿಯಬಹುದು. ಹಣೆಯ ಎಡಭಾಗದಲ್ಲಿ ಉದ್ದನಾದ ಗೆರೆಯಿದ್ದು, ಬಲಭಾಗದಲ್ಲಿ ಅರ್ಧ ಚಂದ್ರಾಕೃತಿಯ ಚಿತ್ರವಿದೆ. ಹೀಗೆ ಹರಿಹರರೀರ್ವರ ಲಕ್ಷಣಗಳಿವೆ.

ಸಂಸ್ಥಾನಾಧಿಪತಿಗಳು ಇಲ್ಲದಂತಾದ ಕಾಲದಲ್ಲಿ ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಅಂದರೆ ೧೮೧೭ರ ಅನಂತರ ರೆವಿನ್ಯೂ ಅಧಿಕಾರಿಗಳು ದೇವಾಲಯದ ಮೇಲ್ವಿಚಾರಣೆ ತೆಗೆದುಕೊಂಡರು. ಇವರು ದೇವಾಲಯದ ಆಡಳಿತ ನೋಡಿಕೊಳ್ಳಲು ಧರ್ಮ ದರ್ಶಿಗಳನ್ನು ನೇಮಕ ಮಾಡುತ್ತಿದ್ದರು. ಹೆಚ್ಚಿನ ಕಾಲ ಪ್ರಮಾಣದಲ್ಲಿ ಈ ಸ್ಥಳ-ವಂದಿಗರಾದ ಉಡುಪ ಮನೆತನದವರು ಈ ದೇವಾಲಯದ ಧರ್ಮದರ್ಶಿ (ಮೊಕ್ತೇಸರ್) ಗಳಾಗಿ ಕ್ರಿ.ಶ. ೧೮೨೦ರಿಂದ ಇಂದಿನವರೆಗೆ ದೇವಾಲಯದ ಶ್ರೇಯಸ್ಸಿಗಾಗಿ ಶ್ರಮಿಸುತ್ತಿದ್ದಾರೆ.

ದೇಗುಲ, ಹೊದಿಕೆಯಂತಹ ಛಾವಣಿ, ಅದರಲ್ಲೂ ಮೇಲ್ಛಾವಣಿಯಲ್ಲಿನ ಉಭಯ ಕಡೆಗಳಲ್ಲೂ ಚೌಕಟ್ಟಿನ ಮೇಲೆ ತಾಮ್ರದ ಹೊದಿಕೆ ಕೊಟ್ಟಿರುವುದು, ಗರ್ಭಗೃಹ ಮತ್ತು ಪ್ರಾಕಾರದ ಸುತ್ತಲೂ ಕಟ್ಟಿಗೆ (ಮರದ) ಪರದೆಯಂತಿರುವುದು, ಗರ್ಭಗೃಹದ ಅಂತರ ಮತ್ತು ಬಾಹ್ಯ ಭಿತ್ತಿಗಳ ನಡುವಿನ ಪ್ರದಕ್ಷಿಣೆಯ ಕಿರಿದಾದ ಹಾದಿ, ಹೀಗೆ ಹತ್ತು ಹಲವು ಲಕ್ಷಣಗಳನ್ನೊಳಗೊಂಡ ಈ ಕ್ರೋಡಾನಗರಿಯನ್ನು ಕಾಶಿಯೆಂತಲೂ, ವಾರಾಹಿಯ ಶುಕ್ತಿಮತಿ ತೀರ್ಥವೇ ಗಂಗಾನದಿಯೆಂತಲೂ, ಶಿವಕೇಶವಾತ್ಮಕವಾದ ಶಂಕರನಾರಾಯಣನೇ ಸಾಕ್ಷಾತ್ ವಿಶ್ವೇಶ್ವರನೆಂತಲೂ ಪ್ರತೀತಿ ಹೊಂದಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. *Studies in Tuluva History and Culture*

*೨. **ಕುಂದಪ್ರಭ** - ಗ್ರಾಮದರ್ಶನ Aug - 20, 1996, ಶ್ರೀ ರಮೇಶ್ ದೇವಾಡಿಗ, ಪು. ೦೩.

*೩. **ಶ್ರೀ ಶಂಕರನಾರಾಯಣ** - ಸುಗುಣ ಪ್ರಿಂಟರ್ಸ್, ಶ್ರೀ ಶ್ರೀಧರ ಉಡುಪ, ಪು. ೧೮-೧೯.

*೪. **ದಕ್ಷಿಣದ ಸಿರಿನಾಡು** - ಅನಂತ ಪ್ರಕಾಶನ, ಕೆ. ಅನಂತರಾಮು, ಪು. ೧೭೫.

ಟಿ. ಗಿರಿಜ*

ದಾವಣಗೆರೆ ಸ್ಥಳನಾಮದ ಬಗ್ಗೆ ಒಂದು ಸಮೀಕ್ಷೆ

ಕರ್ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯತೆಗಳಿಂದ ಕೂಡಿದ ದಾವಣಗೆರೆ, ಒಂದು ಕಾಲದಲ್ಲಿ ಕರ್ನಾಟಕದ ರಾಜಧಾನಿಯಾಗಲು ಸೂಕ್ತ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿತ್ತು. ದಿನಾಂಕ ೧೫.೮.೧೯೯೭ ರಂದು ನೂತನ ಜಿಲ್ಲೆಯಾಗಿ, ಚಿತ್ರದುರ್ಗದಂತಹ ಐತಿಹಾಸಿಕ ನೆಲೆಗಟ್ಟನ್ನು ಕಳೆದುಕೊಂಡರೂ, ಅಷ್ಟೇ ಮಹತ್ವದ ಭೌಗೋಳಿಕ, ಚಾರಿತ್ರಿಕ ಹಿನ್ನೆಲೆಯುಳ್ಳ ಹರಪನಹಳ್ಳಿ, ಚೆನ್ನಗಿರಿ, ಹೊನ್ನಾಳಿ ತಾಲ್ಲೂಕುಗಳನ್ನು ತನ್ನಲ್ಲಿ ಸೇರಿಸಿಕೊಂಡಿದ್ದು, ಅಷ್ಟೇ ಬಲಿಷ್ಠವಾಗಿರುವ ಜಿಲ್ಲಾ ಕೇಂದ್ರವಾಯಿತು.

ಸುತ್ತಮುತ್ತ ಅನೇಕ ಐತಿಹಾಸಿಕ ಪ್ರದೇಶಗಳನ್ನು ಹೊಂದಿರುವ, ಕರ್ನಾಟಕದ ಕೇಂದ್ರಬಿಂದುವಾಗಿರುವ ದಾವಣಗೆರೆ, ತನ್ನದೇ ಆದ ಕೋಟೆಕೊತ್ತಳ ರಾಜಮಹಾರಾಜರನ್ನು ಹೊಂದಿರದಿದ್ದರೂ - ಸುತ್ತಮುತ್ತ ಇರುವ ಪ್ರಾದೇಶಿಕ ಇತಿಹಾಸ, ಐತಿಹ್ಯ, ಜನಪ್ರಚಲಿತ ವಿಚಾರಗಳಿಂದ, ಸಂಶೋಧನೆಗೆ ಒಳಪಡಿಸುವಷ್ಟು ಮಹತ್ವದ ಸ್ಥಳವಾಗಿದೆ.

ಕ್ರಿ. ಶ. ೧೭೧೧ ರಲ್ಲಿ ಕೇವಲ ೫೦೦ ಮನೆಗಳ ಅಜ್ಞಾತ ಹಳ್ಳಿಯಾಗಿತ್ತು ದಾವಣಗೆರೆ. ಮುಖ್ಯವಾಗಿ ದಾವಣಗೆರೆ ಸ್ಥಳನಾಮದ ಬಗ್ಗೆ ಹೇಳಿದರೆ 'ದಾವಣಗೆರೆ' - ಈ ಹೆಸರು ತನ್ನದೇ ಆದಂತಹ ಸಾರ್ವಭೌಮತ್ವವನ್ನು ಹೊಂದಿದೆ.

ಬಹುಕಾಲದಿಂದ ಜನಸಾಮಾನ್ಯರ, ಸ್ಥಳೀಯರ ಹೇಳಿಕೆಯ ಪ್ರಕಾರ - ಈಗಿರುವ ದಾವಣಗೆರೆಯ ಹಳೆಯ ಊರಿನ ಒಂದು ಭಾಗದಲ್ಲಿ ಹಿಂದೆ ಕೆರೆಯೊಂದಿತ್ತು. (ಈಗಿನ ಬಡಾವಣೆ - ಜಾಲಿನಗರ). ಈ ಕೆರೆಯ ಬಳಿ ಈಶ್ವರ ದೇವಾಲಯವಿದ್ದು... ಈ ಭಾಗದಲ್ಲಿ ನೀರು ಮತ್ತು ಹುಲ್ಲುಗಾವಲಿನ ಅನುಕೂಲವಿದ್ದು, ಈ ಭಾಗದಲ್ಲಿ ಪ್ರಯಾಣ ಮಾಡುತ್ತಿದ್ದ ವ್ಯಾಪಾರಿಗಳು, ಯೋಧರು, ಇತರೆ ಪ್ರಯಾಣಿಕರು ತಮ್ಮ ಎತ್ತುಗಳನ್ನು, ಕುದುರೆಗಳನ್ನು, ಇತರೆ ಪಶುಮಂದೆಯನ್ನು "ದಾವಣಿ" ಹಗ್ಗದಿಂದ ಕಟ್ಟಿ, ತಂಗಿ, ವಿಶ್ರಾಂತಿಪಡೆದು ಮುಂದೆ ಹೋಗುತ್ತಿದ್ದರಂತೆ. ಅದೂ ಒಂದೇ ಹಗ್ಗದಿಂದ ವಿಶಿಷ್ಟವಾಗಿ ಕಟ್ಟುತ್ತಿದ್ದ ವಿಧಾನಕ್ಕೆ "ದವಣೆಕಟ್ಟು" ಎನ್ನುತ್ತಿದ್ದರಂತೆ. ಈ ದವಣೆಕಟ್ಟಿನಿಂದ... ಇಲ್ಲಿಯ ಕೆರೆಯಿಂದ... ಇಲ್ಲಿಯ ಈಶ್ವರದೇವರಿಂದ, ದವಣೆಕೆರೆ, ದಾವಣೆಕೆರೆ, ದಾವಣಗೆರೆಯಾಯಿತೆಂದು ಒಂದು ಅಭಿಪ್ರಾಯ.

ಧರ್ಮದ ತೌರೂರು... ದಾನಿಗಳು ದೇವರಿಗೆ ದಾನಕೊಟ್ಟ ಸ್ಥಳದಲ್ಲಿ ಕೆರೆಕಟ್ಟಿಸಿರಬಹುದು. ಆದ್ದರಿಂದ ದಾನಿಗಳಕೆರೆ - ದಾವಣಗೆರೆಯಾಯಿತೆಂದು ಮತ್ತೊಂದು ಅಭಿಪ್ರಾಯ.

- ಇಲ್ಲಿಯ ಕೆರೆ ತ್ರಿಭುವನೇಶ್ವರ ಕೆರೆ. ತ್ರಿಭುವನೇಶ್ವರ ಲಿಂಗವಿದ್ದುದರಿಂದ, ದೇವನಕೆರೆ - ದೇವನ ಹೆಸರಿನಲ್ಲಿ ಕಟ್ಟಿದ ಕೆರೆ, ದೇವರು ನೆಲೆಸಿದ ಬೀದಿ.... ಎಂದು ಶ್ರೀ ಹೀ. ಚಿ. ಶಾಂತ ವೀರಯ್ಯನವರು ಒಂದೊಂದು ಪದಗಳಿಗೂ ಅರ್ಥ ಹಚ್ಚುತ್ತಾ - ದೇವನಕೆರೆ, ದೇವನಗೆರೆ, ದೇವಣಗೆರೆ, ದ್ಯಾವನಕೆರೆ, ದ್ಯಾವಣಗೆರೆ, ಕೊನೆಗೆ ದಾವಣಗೆರೆ - ಎಂದು ಅಭಿಪ್ರಾಯಪಟ್ಟಿದ್ದಾರೆ. ಉತ್ತರ ಕರ್ನಾಟಕದವರು "ದಾವಣಗೇರಿ" ಎನ್ನುತ್ತಾರೆ. ಮತ್ತು ೧೨ನೇ ಶತಮಾನದಲ್ಲಿ, ದಾವಣಗೆರೆಯ ೩ನೇ ಶಾಸನದ ಪ್ರಕಾರ - ಕ್ರಿ. ಶ. ೧೧೨೧ ರಲ್ಲಿಯ ಒಂದು ದಾನ ಶಾಸನದಲ್ಲಿ ಅಂದರೆ ತ್ರಿಭುವನಮಲ್ಲ ಪಾಂಡ್ಯನ ಕಾಲದಲ್ಲಿ - ತ್ರಿಭುವನ ಪಾಂಡೇಶ್ವರ ದೇವಸ್ಥಾನದ ಆಚಾರ್ಯರಾದ ಬ್ರಹ್ಮಶಿವದೇವರು, ಮಲ್ಲಿಕಾರ್ಜುನ ಗುರುಗಳು, ರುದ್ರಶಕ್ತಿ ದೇವರು ಮುಂತಾದವರಿಗೆ ಬೇಲೂರಿನ ವರ್ತಕರಾದ ದೇವಿ ಶೆಟ್ಟಿಯರು ಭೂದಾನ ನೀಡಿದ ದಾನ ಶಾಸನದಲ್ಲಿ "ದಾವಣಗೆರ್ಯ ಸೀಮೆಯಂ" ಎಂದು ದಾವಣಗೆರೆ ಹೆಸರು ಶಾಸನೋಕ್ತವಾಗಿದೆ. ಈ ಒಂದು ಉಲ್ಲೇಖ ಬಿಟ್ಟರೆ - ಮತ್ತಾವ ಆಧಾರಗಳೂ ಇಲ್ಲ. ಮತ್ತು ಶಾಸನದಲ್ಲಿ "ವಣಿಗರ ದೇವನಗರಿಯಂ" ಎಂದು ಉಲ್ಲೇಖಿಸಿರುವುದರಿಂದ, ದಾವಣಗೆರೆಯನ್ನು ಅನೇಕ ಸಂದರ್ಭಗಳಲ್ಲಿ 'ದೇವನಗರಿ' ಎಂದು ಅಭಿಮಾನದಿಂದ ಹೇಳುತ್ತಾರೆ.

* ೪೯, ೧/೧೩; ಅಕ್ಕಮಹಾದೇವಿ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ - ೫೭೭ ೦೦೨.

ಮೇಲ್ಕಾಣಿಸಿದ ಈ ಎಲ್ಲ ಆಧಾರಗಳನ್ನೇ ನನ್ನ "ದಾವಣಗೆರೆ ದರ್ಶಿನಿ" ಗ್ರಂಥದಲ್ಲಿ 'ದಾವಣಗೆರೆ' ಬಗ್ಗೆ ಉಲ್ಲೇಖಿಸಿದ್ದೇನೆ.

ಆದರೆ ಶ್ರೀ ಟಿ. ಎನ್. ಗಂಡುಗಲಿಯವರು - ಮೇಲ್ಕಾಣಿಸಿದ ಉಲ್ಲೇಖಗಳು ಅಷ್ಟು ಸಮಂಜಸವಲ್ಲ... ದಾವಣಗೆರೆ - ಮೊದಲು, ದ್ಯಾಮವ್ವನಹಳ್ಳಿಯಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಮತ್ತೆ ಹುಡುಕಾಟ ನಡೆಸಿದಾಗ ದಾವಣಗೆರೆ ತಾಲ್ಲೂಕಿನಲ್ಲಿ ಮೂರು ದ್ಯಾಮವ್ವನಹಳ್ಳಿಗಳಿರುವುದು ತಿಳಿಯಿತು.

೧. ಅಕ್ಕಸಾಲಿ ದ್ಯಾಮಜ್ಜಿಹಳ್ಳಿ (ಬೇಚರಾಕ್ ಗ್ರಾಮ)
೨. ಕುರುಡಿ ಬೇತೂರು ದ್ಯಾಮೇನಹಳ್ಳಿ (ಅಣಜಿ ಹತ್ತಿರ)
೩. ಬಾಡಾ ಕ್ರಾಸಿನಲ್ಲಿ - ದ್ಯಾಮೇನಹಳ್ಳಿ ಇದೆ (ಇದು ಇನಾಂದಾರಿ ಗ್ರಾಮ).

- ಈ ಮೂರು ಗ್ರಾಮಗಳು ದಾವಣಗೆರೆಯಿಂದ ಸಾಕಷ್ಟು ದೂರದಲ್ಲಿವೆ. ಈ ಹಳ್ಳಿಗಳಿಗೂ ದಾವಣಗೆರೆಗೂ ಏನೇನೂ ಸಂಬಂಧವಿಲ್ಲ. ಹೇಳಿಕೆಗಳಾಗಲಿ, ಆಧಾರಗಳಾಗಲಿ ಇಲ್ಲ. ಇನ್ನು ದಾವಣಗೆರೆಯಲ್ಲಿ 'ದ್ಯಾಮವ್ವನ ಗುಡಿ' ಇಲ್ಲ.


ದಾವಣಗೆರೆಯ ನಗರದೇವತೆ - ದುಗ್ಗವ್ವ ಅಥವಾ ದುರ್ಗಾಂಬಿಕೆ (ಈಕೆ ದುಗ್ಗತ್ತಿ ಗ್ರಾಮದಿಂದ ಬಂದಳೆಂದು ಪ್ರತೀತಿ). ಆದ್ದರಿಂದ ಅನ್ಯ ಆಧಾರಗಳಿಲ್ಲದೆ ದಾವಣಗೆರೆ - ದ್ಯಾಮವ್ವನ ಹಳ್ಳಿಯಾಗಿತ್ತು ಎನ್ನುವುದನ್ನು ಒಪ್ಪಲಾಗುವುದಿಲ್ಲ.

ಇನ್ನು ಚಿತ್ರದುರ್ಗದ ಖ್ಯಾತ ಸಂಶೋಧಕರಾದ ಶ್ರೀ ಬಿ. ರಾಜಶೇಖರಪ್ಪನವರು ೧೯೯೧ರ ತಮಿಳುನಾಡಿನ ಊಟಿಯಲ್ಲಿ ಜರುಗಿದ, ಭಾರತೀಯ ಸ್ಥಳನಾಮ ಪರಿಷತ್ತಿನ ೧೩ನೇ ಸಮ್ಮೇಳನದಲ್ಲಿ "ದಾವಣಗೆರೆ ಸ್ಥಳನಾಮ ನಿಷ್ಪತ್ತಿಯ ಅಧ್ಯಯನ" ಎನ್ನುವ ಪ್ರಬಂಧದಲ್ಲಿ ಮೇಲೆ ಹೇಳಿರುವ (ನಾನು ಮತ್ತು ಶ್ರೀ ಹೀ. ಚಿ. ಶಾಂತವೀರಯ್ಯ) ಉಲ್ಲೇಖಗಳು - ಜಾನಪದ, ಊಹೆಗಳು, ಕಾಲ್ಪನಿಕ, ದಂತಕತೆಗಳು ಎಂದೂ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲದ ೧೨ ನೇ ಶತಮಾನದ ದಾನ ಶಾಸನ ಒಂದರಲ್ಲಿ "ದಾವಂಣ್ಣನಕೇಱಿ" ಎಂದು ಉಲ್ಲೇಖವಿರುವ ಕಾರಣ ದಾವಣಗೆರೆ ಜಿಲ್ಲೆಯ ದಾವಣಗೆರೆ ಸಹ "ದಾವಣ" ಎನ್ನುವ ವ್ಯಕ್ತಿಯೊಬ್ಬನ ಹೆಸರಿನಲ್ಲಿರುವ ಊರು ಎಂದು ತಿಳಿಯ ಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ".... ಸದ್ಯ ಈ ದಾವಣ ಯಾರು (ಮಂಡ್ಯ ಜಿಲ್ಲೆಯ)? ಯಾವ ಕಾಲದಲ್ಲಿದ್ದ? ಈ ಊರಿಗೆ ಅವನ ಹೆಸರು ಬರುವಲ್ಲಿ ಅವನ ಪಾತ್ರ ಏನು? ಇತ್ಯಾದಿ ಪ್ರಶ್ನೆಗಳಿಗೆ ಸದ್ಯಕ್ಕೆ ಉತ್ತರವಿಲ್ಲ - ಎಂದಿದ್ದಾರೆ. ಮತ್ತು ಹಿಂದಿನ ಊಹೆ, ನಿಷ್ಪತ್ತಿ, ವಿವರಣೆಗಳಿಗಿಂತ - ಇದು (ಅವರದು) ಹೆಚ್ಚು ಸಮರ್ಥನೀಯ, ಸ್ವೀಕರಣೀಯ" ಎಂದಿದ್ದಾರೆ ಮತ್ತು 'ದಾವಣ'ನ ಬಗ್ಗೆ ಇನ್ನೂ ಸಂಶೋಧನೆ ಆಗಿಲ್ಲ ಎಂದಿದ್ದಾರೆ.

ಭಾಷಾವಿಜ್ಞಾನದ ದೃಷ್ಟಿಯಿಂದ ದಾವಣ + ಕೆರೆ ಎರಡೂ ಶಬ್ದಗಳೂ ಸಹ 'ದಾವಣಗೆರೆ' ಯಲ್ಲಿ ಅಡಕವಾಗಿರುವದು ಸ್ಪಷ್ಟ. ಆದರೆ, ದಾವಣ - ಎನ್ನುವುದು ವ್ಯಕ್ತಿನಾಮವಿರಬಹುದು. ಅನೇಕ ಶಾಸನಗಳಲ್ಲಿ ಈ ನಾಮದ ಹಲವು ರೂಪಗಳು ಕಾಣಸಿಗುತ್ತವೆ. ದಾವ, ದಾವಣ, ದಾವಪ್ಪ, ದಾನರಸ, ದಾವದಂಡಾದೀಪ, ದಾವದಂಡನಾಯಕ...... ಇತ್ಯಾದಿ.

ರಾಜಶೇಖರಪ್ಪ ಅವರು ಹೇಳುವ 'ದಾವಣ'ನ ಬಗ್ಗೆ ಅವರ ಅಥವಾ ಇತರೆಯವರ ಸಂಶೋಧನೆ ಪೂರ್ಣಗೊಂಡು, ಒಂದು ಸ್ಪಷ್ಟ ನಿಲುವಿಗೆ ಬರದ ಹೊರತು ಅವರ ಹೇಳಿಕೆ ಅಥವಾ ಅಭಿಪ್ರಾಯವನ್ನು, ಸಮರ್ಥ ಎಂದು ಒಪ್ಪಿಕೊಳ್ಳುವುದು ಸಾಧ್ಯವಾಗದು.

ಯಾವುದೇ ವಿಷಯದ ಬಗ್ಗೆ ಸೂಕ್ತ ಆಧಾರ, ಆಕರಗಳು ದೊರೆಯದಿದ್ದಾಗ, ದಂತಕತೆಗಳನ್ನೇ, ಜನಪ್ರಚಲಿತ ವಿಷಯ



ಗಳನ್ನೇ, ಅದು ಜಾನಪದ, ಕಾಲ್ಪನಿಕವಿರಲಿ. ಅದಕ್ಕೆ ಪ್ರಥಮ ಆದ್ಯತೆ ಕೊಡಲೇಬೇಕಾಗುತ್ತದೆ.

ಇನ್ನು ಮುಖ್ಯವಾಗಿ - ದಾವಣಗೆರೆಯ ನಗರದೇವತೆ ದುರ್ಗಾಂಬಿಕಾ ದೇವಾಲಯದ ಗೋಡೆಗೆ ಹೊಂದಿದಂತೆ ಇರುವ ಶಾಸನ ಸುರಕ್ಷಿತವಾಗಿದೆ.

ಶಾಲಿವಾಹನ ಶಕ ೧೦೬೦ (ಕ್ರಿ. ಶ. ೧೧೩೮)ರಲ್ಲಿ ರಾಯಪಾಂಡ್ಯನು, ಪಾಂಡೇಶ್ವರದೇವರಿಗೆ ಭೂದಾನ ನೀಡಿದ ಶಾಸನ. ೪೦-೫೦ ಸಾಲಿನಲ್ಲಿದೆ. ಕನ್ನಡ ಲಿಪಿಯಲ್ಲಿದ್ದು, ಶಾಸನದ ಕೊನೆಯ ಭಾಗ ನೆಲದಲ್ಲಿ ಹೂತಿದೆ. ಕೆಲವು ಸಾಲುಗಳು, ಅಕ್ಷರಗಳು ತ್ರುಟಿತವಾಗಿವೆ. ಆದರೂ ಓದಬಹುದು.

- ಉಚ್ಚಂಗೀ ನೆಲೆವೀಡಿನಿಂದ ಆಳುತ್ತಿದ್ದ ತ್ರಿಭುವನ ಮಲ್ಲಪಾಂಡ್ಯನ ಮಗ ಈ ರಾಯಪಾಂಡ್ಯ, ಮಹಾಪರಾಕ್ರಮಿ. ನೊಳಂಬವಾಡಿಯನ್ನು ಆಳುತ್ತಿರುವಾಗ, ಪಾಂಡೇಶ್ವರದೇವರ ಪ್ರಧಾನ ಆಚಾರ್ಯರಾದ ಬೀರಮಾಂಡಜೀಯರಿಗೆ, ಪಾಂಡೇಶ್ವರ ದೇವರ ರಂಗಭೋಗ ಹೂವ್ಗು, ನಂದಾದೀವಿಗೆ ನಿತ್ಯ ಪೂಜೆಗೆಂದು ೨೦೦ + ೧೦೦ ಮತ್ತರು ಭೂಮಿಯನ್ನು ದಾನ ನೀಡುತ್ತಾರೆ. ಈ ಪಾಂಡೇಶ್ವರ ದೇವರ ಸುತ್ತಮುತ್ತಲಿನ ಗ್ರಾಮಗಳ ಹಾಗೂ ಊರಬಾಗಿಲ ಬಳಿಯ ಭೂಮಿದಾನ ಕೊಟ್ಟ ಬಗ್ಗೆಯೂ ಉಲ್ಲೇಖಿಸಿದೆ.

- ಈ ಶಾಸನದಲ್ಲಿ ಬರುವ ಗ್ರಾಮಗಳೆಂದರೆ, ಅವಲುಗೋಳ (ದಾವಣಗೆರೆಗೆ ೩ ಕಿ.ಮಿ. ದೂರದಲ್ಲಿರುವ "ಅವರಗೊಳ") ದೊಡ್ಡಘಟ್ಟ, ತುಂಬಿನಹಳ್ಳಿ (ಹತ್ತಿರದ ತುಂಬಿಗೆರೆ) ಬೆಳ್ವ - ಬೆಳ್ಳೂ - ಬೆಳ್ಳೂರು = ಬೇಲೂರು. ಮೂಡಗಿರಿ ಹತ್ತಿರದಲ್ಲಿ ಮೂರು ಗಿರಿಯಾಪುರಗಳಿವೆ. ಮುಖ್ಯವಾಗಿ "ಗಾವಣೆಗನಹಳ್ಳಿ" ಎಂದಿದೆ. ಈ ಗಾವಣೆಗನಹಳ್ಳಿ ಯಾವುದೆಂದು ತಿಳಿದುಬರುತ್ತಿಲ್ಲ.

ಗಾವಣೆಗನಹಳ್ಳಿ - ದಾವಣೆಗನಹಳ್ಳಿಯೇ ದಾವಣಗೆರೆಯೆ ಆಗಿರಬಹುದು - ಎನ್ನುವುದು ನನ್ನ ಅನ್ನಿಸಿಕೆ ಅಥವಾ ಸಂಶಯ. ಸಂಶಯ ಅಷ್ಟೆ. ಸಂಶೋಧನೆ ಅಲ್ಲ.

ಆದ್ದರಿಂದ, ದಾವಣಗೆರೆ ಸ್ಥಳನಾಮದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದರೆ, ಮತ್ತಷ್ಟೂ ಮಾಹಿತಿ ದೊರೆಯಬಹು ದೆನ್ನುವುದು ನನ್ನ ಆಶಯ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಶ್ರೀ ಹೀ. ಚಿ. ಶಾಂತವೀರಯ್ಯ : **ವೇದಾವತಿ - ವಿಶೇಷ ಸಂಚಿಕೆ ಪುಟ - ೮.**

೨. ಶ್ರೀ ಬಿ. ಪರಮೇಶ್ವರಪ್ಪ : **ದಾವಣಗೆರೆ ನಗರಸಭೆ ಸ್ಮರಣಸಂಚಿಕೆ, ೧೯೭೪.**

೩. ಎ. ಕ. ೧೧, ದಾವಣಗೆರೆ ಶಾ. ೧, ಕ್ರಿ. ಶ. ೧೨೨೩.

೪. **ವೇದಾವತಿ ಪುಟ ೪. ೯-೯ ಶಾಸನ - ೩, ೧೧೨೧, ಶಾಸನ - ೨ (೧೧೨೪).**

೫. ದಾವಣಗೆರೆ ೧೭ ನೇ ಶಾಸನ, ಎಕ ೧೧.

೬. ಫ್ರಾನ್ಸಿಸ್ ಬುಕನನ್.

೭. **ಜನತಾವಾಣಿ ಪತ್ರಿಕೆ,** ಟಿ. ಗಿರಿಜ (ನಗರ ದೇವತೆ ದುರ್ಗಾಂಬಿಕಾ ದೇವಾಲಯದ ಬಳಿಯ ಶಾಸನ).

೮. **ದವನಸಿರಿ, ಪು. ೭೨,** ಬಿ. ರಾಜಶೇಖರಪ್ಪ.

೯. ಟಿ. ಗಿರಿಜ: *ಐತಿಹಾಸಿಕ ದಾವಣಗೆರೆ* - **ದವನಸಿರಿ, ಪು. ೫೯.**

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*

ಸಂತೇಬೆನ್ನೂರು ನಾಯಕರು ಮತ್ತು ಕೂಡಲಿ ಮಠಗಳು

ಈಚೆಗೆ ದಾವಣಗೆರೆ ಜಿಲ್ಲೆಗೆ ಸೇರಿರುವ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಕೇಂದ್ರವಾಗಿಟ್ಟುಕೊಂಡು ೧೬ನೇ ಶತಮಾನದ ಆದಿಭಾಗದಿಂದ ಸುಮಾರು ಮೂರುನೂರು ಸಂವತ್ಸರಗಳ ಕಾಲ ಆಡಳಿತ ನಡೆಸಿದ ಒಂದು ರಾಜವಂಶ ಸಂತೇಬೆನ್ನೂರು ನಾಯಕರದು. ಶಿವಮೊಗ್ಗಾ ಜಿಲ್ಲಾ ಕೇಂದ್ರದ ಈಶಾನ್ಯಕ್ಕೆ ೧೬ ಕಿ. ಮೀ. ದೂರ ಇರುವ ಕೂಡಲಿ; ತುಂಗಾ-ಭದ್ರಾ ನದಿಗಳ ಸಂಗಮ ಕ್ಷೇತ್ರವಾಗಿದ್ದು ಇಲ್ಲಿ ಅನೇಕ ಧಾರ್ಮಿಕ ಮಠ-ಮಂದಿರಗಳಿವೆ. ಈಚೆಗೆ ನಾನು ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳನ್ನು ಹಾಗು ಶ್ರೀ ಕೂಡ್ಲಿ ಶೃಂಗೇರಿ ಮಠದ ಪ್ರಾಚೀನ ಲೇಖನ ಸಂಗ್ರಹ ಪುಸ್ತಕವನ್ನು ಪರಿಶೀಲಿಸುತ್ತಿದ್ದಾಗ ಸಂತೇಬೆನ್ನೂರು ನಾಯಕರಿಗೂ ಕೂಡಲಿಯಲ್ಲಿರುವ ಅನೇಕ ಧಾರ್ಮಿಕ ಮಠಗಳಿಗೂ ಸಂಬಂಧಿಸಿದಂತೆ ಹಲವಾರು ಶಾಸನಗಳು, ಸನ್ನದುಗಳು ಇರುವುದು ನನ್ನ ಗಮನಕ್ಕೆ ಬಂದಿತು. ಇವುಗಳಿಂದ ಅವರ ಸಂಬಂಧ ಕುರಿತು ಮತ್ತು ಸಂತೇಬೆನ್ನೂರು ನಾಯಕರ ಬಗ್ಗೆ ಅನೇಕ ಹೊಸ ವಿಷಯಗಳು ದೊರೆಯುತ್ತಿದ್ದು ಅವುಗಳ ಕುರಿತು ವಿವೇಚಿಸುವುದು ಈ ಸಪ್ರಬಂಧದ ಉದ್ದೇಶವಾಗಿದೆ.

ಶಿವಮೊಗ್ಗಾ ಜಿಲ್ಲಾ ಕೂಡಲಿಯಲ್ಲಿ ಕೂಡ್ಲಿ-ಶೃಂಗೇರಿ ಮಠ ಎಂದು ಕರೆಯುವ ಒಂದು ಅದ್ವೈತ ಮಠವೂ, ಕೂಡ್ಲಿ - ಆರ್ಯ ಅಕ್ಷೋಭ್ಯತೀರ್ಥ ಸ್ವಾಮಿಗಳವರ ಮಠ ಎಂಬ ದ್ವೈತ ಪಂಥದ ಮಠವೂ ಹಾಲಿ ಇವೆ. ಇದೇ ದ್ವೈತ ಸಂಪ್ರದಾಯಕ್ಕೆ ಸೇರಿದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆ ಮಠದ ಸ್ವಾಮಿಗಳು ಈ ಕೂಡಲಿಯಲ್ಲಿ ಮಠ ಒಂದನ್ನು ಸ್ಥಾಪಿಸಿಕೊಂಡು ಇದ್ದರೆಂಬ ಹೊಸ ವಿಚಾರ ಎಂ. ಎ. ಆರ್. - ೧೯೨೫ರಲ್ಲಿ ಪ್ರಕಟವಾದ ಒಂದು ತಾಮ್ರಶಾಸನದಿಂದ ನಮಗೆ ತಿಳಿದುಬರುತ್ತದೆ. ಹಾಲಿ ಇಲ್ಲಿ ಸೋದೆ ಮಠವಾಗಲೀ, ಮಠ ಇದ್ದ ಕುರುಹಾಗಲೀ ಇಲ್ಲದಿರುವುದು ಈ ವಿಚಾರದಲ್ಲಿ ಇಲ್ಲಿನ ಜನರಿಗೇ ತಿಳಿಯದಿರುವುದು ಈ ಬಗ್ಗೆ ಕುತೂಹಲ ಮೂಡಿಸುತ್ತದೆ. ಈ ತಾಮ್ರ ಶಾಸನವನ್ನು ಸಂತೇಬೆನ್ನೂರು ನಾಯಕರು ಸೋದೆ ಮಠಕ್ಕೆ ಬರೆದುಕೊಟ್ಟಿದ್ದು ೪೪ ಸಾಲುಗಳುಳ್ಳ ಈ ಶಾಸನದ ಮುಖ್ಯ ಭಾಗ ಈ ರೀತಿ ಇರುತ್ತದೆ.

೧೫೬೮ನೇ ಸರ್ವಜಿತು ಸಂವತ್ಸರದ ಫಾಲ್ಗುಣ ಶುದ್ಧ ೧೫ರಲ್ಲಿ ಸ್ವಾದೆಯ ಹಯಗ್ರೀವ ಸ್ವಾಮಿಗಳವರ ಸಂಸ್ಥಾನದ ಕೃಷ್ಣದೇವರ ಚರಣಾರವಿಂದಕ್ಕೆ ಶ್ರೀಮತ್ ಸಂತೇಬೆನ್ನೂರ ರಾಮಚಂದ್ರ ದೇವರ ಪಾದ ಪದ್ಮಾರಾಧಕರಾದ ಹನುಮಂತ ದೇವರ ನಿಜಭಕ್ತರಾದ ಪುಲ್ಲಾನ್ವಯದ ಕೆಂಗಣ್ಣ ನಾಯಕರ ಪವುತ್ರರಾದ ಇಮ್ಮಡಿ ಹನುಮಪ್ಪ ನಾಯಕರ ಪುತ್ರರಾದ ನಿಚ್ಚಮದವಣಿಗ ಹನುಮಪ್ಪ ನಾಯಕರು ಬರೆಯಿಸಿಕೊಟ್ಟ ದಾನಪಟ್ಟೆ ಕ್ರಮವೆಂತೆಂದರೆ ಆಗರದ ವೇಂಠಕ್ಕೆ ಸಲ್ಲುವ ಗಂಗೆಮತ್ಲ ನಾಡ ಬಸವಾಪಟ್ಟಣ ಹೋಬಳಿ ಹೊಳೆಹೊನ್ನೂರು ಶೀಮೆ ಆಗವೇರಿ ನಾಡವಳಗಣ ಮಲ್ಲಾಪುರದ ಪ್ರತಿನಾಮು ಕೊಡುಮಗ್ಗೆ ಗ್ರಾಮವನ್ನು ತುಂಗಾಭದ್ರಾ ಕೂಡ್ಲಿಯಲ್ಲಿ ಮಠಕಟ್ಟಿಕೊಂಡು ಸ್ನಾನ ಜಪಮಾಡಿಕೊಂಡು ಇರುವ ನಿಮಿತ್ತ ಈ ಗ್ರಾಮದ ಸಿಸ್ತುಗೆ ೨೦ ವರಹ ಭೂಮಿಯನ್ನು ಚಂದ್ರೋಪರಾಗ ಪರ್ವ ಪುಣ್ಯಕಾಲದಲ್ಲಿ ತಮ್ಮ ಮಾತಾಪಿತೃಗಳಿಗೆ ಪುಣ್ಯ ಬರಬೇಕೆಂದು ರಾಮಾರ್ಪಿತವಾಗಿ ಕೊಟ್ಟು ಇದ್ದು ತಮ್ಮ ಶಿಷ್ಯ ಪಾರಂಪರರ್ಯವಾಗಿ ಅನುಭವಿಸಿಕೊಂಡು ಬಹಿರೆಂದು ಬರೆಸಿಕೊಟ್ಟ ಭೂದಾನ ಪಟ್ಟೆ - ಎಂದು ಈ ಶಾಸನದಲ್ಲಿ ನಮೂದಿಸಲಾಗಿದೆ.

ಈ ಶಾಸನದಲ್ಲಿ ಉಕ್ತವಾಗಿರುವ ಕೊಡುಮಗ್ಗೆ ಗ್ರಾಮ ಇಂದಿಗೂ ಇದೆ. ಆದರೆ ಸೋದೆಮಠ ಕೂಡಲಿಯಲ್ಲಿ ಈಗ ಇಲ್ಲ. ಹಿಂದೆಯೂ ಇದ್ದ ಬಗ್ಗೆ ಬೇರೆ ಪುರಾವೆಗಳು ನಮಗೆ ಲಭ್ಯವಿಲ್ಲವಾಗಿ ಈ ವಿಚಾರ, ಹೊಸದಾಗಿ ಈ ಶಾಸನದಿಂದ ಬೆಳಕಿಗೆ ಬಂದಂತಾಗಿದೆ. ಅದರಲ್ಲೂ ಸಂತೇಬೆನ್ನೂರು ನಾಯಕರು

* ವರದಿಗಾರ - ಪ್ರಜಾವಾಣಿ ದೈನಿಕ, ಸಂತೇಬೆನ್ನೂರು - ೫೭೭ ೫೫೨. (ದಾವಣಗೆರೆ ಜಿಲ್ಲೆ).

ಈ ಮಠಕ್ಕೆ ದತ್ತಿ ಕೊಟ್ಟಿರುವುದರಿಂದ ಉಡುಪಿ ಅಷ್ಟಮಠಗಳೊಂದಿಗೆ ಅವರು ಪೂಜ್ಯ ಭಾವನೆ, ಸಂಬಂಧ ಹೊಂದಿದ್ದರೆಂದು ಈ ಶಾಸನ ಸಾಬೀತು ಪಡಿಸುತ್ತದೆ. ಈ ತಾಮ್ರಶಾಸನವನ್ನು ಬೆಂಗಳೂರು ಜಿಲ್ಲೆಯ ಅಬ್ಬೂರಿನಲ್ಲಿರುವ ವ್ಯಾಸರಾಜ ಮಠದ ಏಜೆಂಟರು ಪ್ರಾಚ್ಯ ಸಂಶೋಧನಾ ಇಲಾಖೆಗೆ ಒದಗಿಸಿದ್ದು ಈ ಶಾಸನ ಅವರಲ್ಲಿ ಹೇಗೆ ಸೇರಿತು ಎಂದು ಆಶ್ಚರ್ಯ ತರಿಸುತ್ತಿದೆ. ಇದರಿಂದ ವ್ಯಾಸರಾಜ ಮಠದ ಹಾಗು ಸೋದೆ ವಾದಿರಾಜ ಮಠದ ಗುರು ಪರಂಪರೆ ಸಂಬಂಧದ ಬಗ್ಗೆಯೂ ಬೆಳಕು ನೀಡುತ್ತದೆ. ಈ ಶಾಸನದ ಕಾಲದಲ್ಲಿ ಅಂದರೆ ೧೧.೩.೧೬೪೭ ರಲ್ಲಿ ಸೋದೆ ಮಠದ ಸ್ವಾಮಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವರು ವಿಶ್ವಾಧಿರಾಜೇಂದ್ರ ತೀರ್ಥರೆಂದು ತಿಳಿದುಬಂದಿದ್ದು ಅವರ ಹೆಸರಿಗೆ ಶಾಸನ ಬರೆಯದೆ ಅವರ ಆರಾಧ್ಯ ದೈವ ಕೃಷ್ಣದೇವರ ಪಾದಾರವಿಂದಕ್ಕೆ ಎಂದು ಬರೆದಿರುವುದು ಸೋಜಿಗವನ್ನುಂಟು ಮಾಡುತ್ತದೆ. ದತ್ತಿ ಪಡೆದ ಸ್ವಾದೆಯ ಮಠದ ಸ್ವಾಮಿಗಳು ಅಲ್ಲಿ ಮಠ ಸ್ಥಾಪಿಸಿದ್ದರೆ ಅಥವಾ ಸ್ಥಾಪಿಸಿಯೂ ಮುಂದುವರೆಸಲಿಲ್ಲ ಏಕೆ? ಎಂಬ ಹೊಸ ಪ್ರಶ್ನೆ ಈ ಶಾಸನದಿಂದ ಏಳುತ್ತಿದ್ದು ಇನ್ನಷ್ಟು ಸಂಶೋಧನೆಗೆ ಈ ಶಾಸನ ಎಡೆ ಮಾಡಿಕೊಡುತ್ತದೆ.

ಶ್ರೀ ಮಜಗದ್ಗುರು ಶ್ರೀ ಕೂಡ್ಲಿ - ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ ಭಾಗ - ೧ ರಿಂದ ೧೫ ಸನ್ನದುಗಳನ್ನು ಸಂತೇಬೆನ್ನೂರು ನಾಯಕರು ಆ ಮಠಕ್ಕೆ ಬರೆಯಿಸಿಕೊಟ್ಟದ್ದಾಗಿ ತಿಳಿದುಬರುತ್ತದೆ. ಈ ಸನ್ನದುಗಳಿಂದ ತಿಳಿದು ಬರುವ ಮುಖ್ಯ ವಿಷಯ ಏನೆಂದರೆ ಶೃಂಗೇರಿ ಮಠಾಧೀಶ್ವರರಾಗಿದ್ದ ಶ್ರೀ ನರಸಿಂಹಭಾರತೀ ಸ್ವಾಮಿಗಳು ಕಾಶಿಯಾತ್ರೆಗೆ ಹೋಗಿ ಬಹಳ ದಿನಗಳ ಕಾಲ ಹಿಂತಿರುಗಿ ಬಾರದಿದ್ದುದರಿಂದ ಆ ಪೀಠಕ್ಕೆ ಬೇರೆ ಪೀಠಾಧಿಪತಿಗಳನ್ನು ಅಲ್ಲಿನ ಜನ ಮಾಡಿದರೆಂದೂ ಆನಂತರ ಹಿಂತಿರುಗಿ ಬಂದ ಶ್ರೀ ನರಸಿಂಹ ಭಾರತೀ ಸ್ವಾಮಿಗಳು ಶೃಂಗೇರಿಗೆ ಹೋಗದೆ ಕೂಡಲಿಯಲ್ಲಿ ಉಳಿದುಕೊಂಡಿದ್ದರೆಂದೂ ಅವರು ಅಲ್ಲಿಯೇ ನೆಲೆ ನಿಂತು ಪ್ರತ್ಯೇಕ ಪೀಠ ಪ್ರಾರಂಭಿಸಿ, ಮಠ ಕಟ್ಟಿಕೊಂಡು ಇರುವಂತೆ ಸಂತೇಬೆನ್ನೂರು ನಾಯಕರು ಅವರಿಗೆ ಆಶ್ರಯ ನೀಡಿ, ಅನೇಕ ದತ್ತಿ - ದಾನ ಕೊಟ್ಟಿದ್ದರಲ್ಲದೆ ಕೂಡಲಿಯಲ್ಲಿ ಪ್ರತ್ಯೇಕ ಶೃಂಗೇರಿ ಮಠ ಒಂದು ಅಸ್ಥಿತ್ವಕ್ಕೆ ಬರುವಂತೆ ವ್ಯವಸ್ಥೆ ಕಲ್ಪಿಸಿ ಕೊಟ್ಟರೆಂದೂ ತಿಳಿದುಬರುತ್ತದೆ. ಅದಕ್ಕಾಗಿ ಈಗಲೂ ಕೂಡಲಿಯಲ್ಲಿ ಸಂತೇಬೆನ್ನೂರು ನಾಯಕನ ಉಬ್ಬು ಶಿಲ್ಪವೊಂದಕ್ಕೆ ಮಠದಿಂದ ಗೌರವ-ಪೂಜೆ ಸಲ್ಲಿಸಲಾಗುತ್ತಿದೆ.

ಮುಂದೆ ಶೃಂಗೇರಿ ಮತ್ತು ಕೂಡ್ಲಿ ಶೃಂಗೇರಿ ಮಠಗಳ ಮಧ್ಯೆ ನಡೆದ ವಿವಾದಗಳಲ್ಲಿ ಸಂತೇಬೆನ್ನೂರು ನಾಯಕರು ಕೂಡ್ಲಿ ಮಠದ ಪರವಾಗಿ ನಿಂತು ಕೆಲಸ ಮಾಡಿದರೆಂದೂ ಈ ಸನ್ನದುಗಳಿಂದ ತಿಳಿದುಬರುತ್ತದೆ. ಅಲ್ಲದೆ ಶೃಂಗೇರಿ ಮಠಕ್ಕೆ ಬಿಟ್ಟ ಅನೇಕ ಜಮೀನು ದತ್ತಿ ದಾನಗಳನ್ನು ಕೂಡ್ಲಿ ಮಠಕ್ಕೆ ಬಿಡಿಸಿಕೊಟ್ಟರೆಂದೂ, ಇದರಿಂದ ಈ ನಾಯಕರ ಬಗ್ಗೆ ಶೃಂಗೇರಿ ಮಠದವರಿಗೆ ತೀವ್ರ ಅಸಮಾಧಾನ ಇದ್ದ ವಿಚಾರ ಆ ಮಠದ 'ಗುರುವಂಶ ಕಾವ್ಯ'ದಲ್ಲಿ ವ್ಯಕ್ತವಾಗಿದೆ.

ಸಂತೇಬೆನ್ನೂರು ನಾಯಕರು ಕೂಡ್ಲಿ-ಶೃಂಗೇರಿ ಮಠಕ್ಕೆ ಬರೆಯಿಸಿಕೊಟ್ಟ ೧೫ ಸನ್ನದುಗಳಲ್ಲಿ ೮ ದಾನ ಶಾಸನಗಳೂ ೭ ಲೇಖನಗಳೂ ಆಗಿವೆ. ಈ ಎಲ್ಲಾ ದಾನ ಶಾಸನಗಳ ಮೇಲೆ ಶ್ರೀಪುತ್ರ ಸರಜ ಹನುಮಪ್ಪ ನಾಯಕ ಎಂಬ ಮುದ್ರೆಯೂ ಕೆಳಗೆ 'ಶ್ರೀರಾಮ' ಎಂಬ ಅಂಕಿತವು ನಾಗರೀ ಲಿಪಿಯಲ್ಲಿ ಹಾಕಲಾಗಿದೆ.

ಈ ಕೆಳಕಂಡಂತೆ ೧೫ ಸನ್ನದುಗಳು ಇರುತ್ತವೆ:

೧. ೧೪೮೦ನೇ ಕಾಳಾಯುಕ್ತಿ ಸಂ||ದ ಕಾರ್ತಿಕ ಶುದ್ಧ ೧೫ (೧೫೫೮)
೨. ೧೫೬೯ನೇ ಸರ್ವಧಾರಿ ಸಂ||ದ ಆಷಾಢ ಶುದ್ಧ ೧೫ (೧೬೪೮)
೩. ೧೫೬೯ನೇ ಸರ್ವಧಾರಿ ಸಂ||ದ ಕಾರ್ತೀಕ ಶುದ್ಧ ೧೫ (೧೬೪೮)
೪. ೧೫೭೯ನೇ ಹೇವಿಳಂಬಿ ಸಂ||ದ ಚೈತ್ರಶುದ್ಧ ೧೨ (೧೬೫೭)
೫. ೧೫೭೯ನೇ ಹೇವಿಳಂಬಿ ಸಂ||ದ ಕಾರ್ತೀಕ ಶುದ್ಧ ೧೨ (೧೬೫೭)
೬. ೧೫೭೯ನೇ ಹೇವಿಳಂಬಿ ಸಂ||ದ ಕಾರ್ತೀಕ ಶುದ್ಧ ೧೫ (೧೬೫೭)
೭. ೧೫೮೦ನೇ ವಿಳಂಬಿ ಸಂ||ದ ಆಶ್ವೀಜ ಶುದ್ಧ ೧೫ (೧೬೫೮)
೮. ೧೫೯೧ನೇ ಕೀಲಕ ಸಂ|| (೧೬೬೮)
೯. ೧೫೯೧ನೇ ಕೀಲಕ ಸಂ||ದ ವೈಶಾಖ ಶುದ್ಧ ೩ (೧೬೬೮)
೧೦. ೧೬೦೦ನೇ ಕಾಳಾಯುಕ್ತಿ ಸಂ||ದ ಪುಷ್ಯ ಶುದ್ಧ ೧೫ (೧೬೭೮)
೧೧. ೧೬೦೧ನೇ ಸಿದ್ಧಾರ್ಥಿ ಸಂ||ದ ಆಷಾಢ ಶುದ್ಧ ೩ (೧೬೭೯)
೧೨. ೧೬೦೪ನೇ ದುಂದುಭಿ ಸಂ||ದ ಆಶ್ವೀಜ ಶುದ್ಧ ೧೪ (೧೬೮೨)
೧೩. ೧೬೦೭ನೇ ಕ್ರೋಧನ ಸಂ|| (೧೬೮೫)
೧೪. ೧೬೦೯ನೇ ಪ್ರಭವ ಸಂ||ದ ಆಷಾಢ ಶುದ್ಧ ೧೦ (೧೬೮೭)
೧೫. ೧೭೩೬ನೇ ಭಾವ ಸಂ||ದ ಆಷಾಢ ಕೃಷ್ಣ ೩೦ (೧೮೧೪)

ಇವುಗಳಲ್ಲಿ ಮೊದಲನೇ ಶಾಸನ ಈ ಮಠದ ಎರಡನೇ ಪೀಠಾಧಿಪತಿಗಳಾಗಿದ್ದ ಶ್ರೀ ವಿದ್ಯಾರಣ್ಯಭಾರತಿ ಸ್ವಾಮಿಗಳಿಗೂ, ೨ ರಿಂದ ೭ರ ವರೆಗಿನ ೬ ಶಾಸನಗಳನ್ನು ಐದನೇ ಪೀಠಾಧಿಪತಿಗಳಾಗಿದ್ದ ಶ್ರೀ ಅಭಿನವವಿದ್ಯಾರಣ್ಯಭಾರತಿ ಸ್ವಾಮಿಗಳವರಿಗೂ, ೮ನೇ ಶಾಸನ ತೃತೀಯ ನರಸಿಂಹಭಾರತಿ ಸ್ವಾಮಿಗಳಿಗೂ, (೬ನೇ ಪೀಠಾಧಿಪತಿಗಳು) ೧೦ ರಿಂದ ೧೪ನೇ ಶಾಸನ ೭ನೇ ಪೀಠಾಧಿಪತಿಗಳಾಗಿದ್ದ ದ್ವಿತೀಯ ಶಂಕರ ಭಾರತಿ ಸ್ವಾಮಿಗಳವರಿಗೂ ಬರೆದುಕೊಟ್ಟಿದ್ದಾಗಿವೆ. ಇವುಗಳಲ್ಲಿ ಒಂದನೇ ಶಾಸನ ಸಂತೇಬೆನ್ನೂರು ನಾಯಕರ ಮೊದಲನೇ ಹನುಮಪ್ಪ ನಾಯಕನೂ, ೨ ರಿಂದ ೭ನೇ ಶಾನಸ ಸರಜಾ ಹನುಮಪ್ಪ ನಾಯಕರೂ, ೮ ರಿಂದ ೧೦ನೇ ಶಾಸನ ಎರಡನೇ ಹನುಮಪ್ಪ ನಾಯಕರೂ, ೧೧ ರಿಂದ ೧೩ನೇ ಶಾಸನ ಸೀತಾರಾಮಪ್ಪ ನಾಯಕನೂ, ೧೪ನೇ ಶಾಸನ ೩ನೇ ಹನುಮಪ್ಪ ನಾಯಕನೂ, ೧೫ನೇ ಶಾಸನ ಸರ್ಜಾ ರಂಗಪ್ಪ ನಾಯಕನೂ ಕೂಡ್ಲಿ - ಶೃಂಗೇರಿ ಮಠಕ್ಕೆ ಬರೆಯಿಸಿಕೊಟ್ಟಿರುತ್ತಾರೆ.

ಮೇಲ್ಕಂಡ ಎಲ್ಲಾ ಶಾಸನ / ಸನ್ನದು / ಲೇಖನಗಳನ್ನು

ಪರಿಶೀಲಿಸಿದಾಗ ಈ ಕೆಳಕಂಡ ಹೊಸ ವಿಚಾರಗಳು ನಮಗೆ ತಿಳಿದುಬರುತ್ತವೆ:

೧. ಎಪಿಗ್ರಾಫಿಯಾ ಕರ್ನಾಟಿಕ ಶಾಸನ ಸಂಪುಟ ೭ರಲ್ಲಿ ಪ್ರಕಟವಾಗಿದ್ದು ಚನ್ನಗಿರಿ - ೬೯ ಶಾಸನವೇ (ಚಿಕ್ಕಗಂಗೂರು ಶಾಸನ) ಸಂತೇಬೆನ್ನೂರು ನಾಯಕರ ಮೊದಲ ಶಾಸನವೆಂದು ಈವರೆವಿಗೆ ತಿಳಿಯಲಾಗಿತ್ತು. ಕೂಡ್ಲಿ-ಶೃಂಗೇರಿ ಮಠದ ಈ ಶಾಸನ ಸಂಗ್ರಹದಿಂದ ಇದರಲ್ಲಿ ಪ್ರಕಟವಾಗಿರುವ ಒಂದನೇ ದಾನ ಶಾಸನ ಅದಕ್ಕಿಂತಲೂ ಪೂರ್ವವಾಗಿದ್ದುದಲ್ಲದೆ ಶಕ ೧೪೮೦ ಕ್ಕಿಂತಲೂ ಹಿಂದೆಯೇ ಸಂತೇಬೆನ್ನೂರು ನಾಯಕರು ತಮ್ಮ ರಾಜ್ಯಾಡಳಿತ ನಡೆಸುತ್ತಿದ್ದರೆಂದು ತಿಳಿಯಬಹುದಾಗಿದೆ.

೨. ಈ ಒಂದನೇ ಶಾಸನ ಸಂತೇಬೆನ್ನೂರು ಹನುಮಪ್ಪ ನಾಯಕ ಬರೆಯಿಸಿ ಕೊಟ್ಟಿದ್ದು ಅವನು ಅದರಲ್ಲಿ ತನ್ನ ತಂದೆ ಸೀತಾರಾಮಪ್ಪ ನಾಯಕನೆಂದು ತಿಳಿಸಿದ್ದಾನೆ ಮತ್ತು ತಮ್ಮ ಹಿರಿಯರು ಕೂಡಲೀ ಕ್ಷೇತ್ರದಲ್ಲಿ ಕಟ್ಟಿಸಿಕೊಟ್ಟ ಕೂಡಲಿ ಮಠ ಧರ್ಮಕ್ಕೆಂದು ಹರಿಕೇರಿ ಹೋಬಳಿ ಪಂಚಗ್ರಾಮಗಳನ್ನು ದಾನ ಕೊಡುತ್ತಿರುವುದಾಗಿ ತಿಳಿಸಿದ್ದು ಇದರಿಂದ ಸಂತೇಬೆನ್ನೂರು ಪಾಳೇಪಟ್ಟು ಇನ್ನೂ ಹಿಂದಿನಿಂದಲೇ ಇರಬೇಕೆಂದೂ, ಈ ವಂಶದ ಇನ್ನೂ ಹಲವಾರು ನಾಯಕರು ಆಡಳಿತ ನಡೆಸಿರುವುದಾಗಿಯೂ ತಿಳಿಯಬಹುದಾಗಿದೆ. ಈಗ ಲಭ್ಯ ಇರುವ ದಾಖಲೆಗಳಲ್ಲಿ ಸಂತೇಬೆನ್ನೂರುನಾಯಕರಲ್ಲಿ ಸೀತಾರಾಮಪ್ಪ ನಾಯಕ ಮೊದಲ ನಾಯಕನಾಗುತ್ತಾನೆ.

೩. ಈ ಶಾಸನಗಳಿಂದ ಹರಕೇರಿ ಹೋಬಳಿಗೆ ಸೇರಿದ ಪಂಚ ಗ್ರಾಮಗಳನ್ನು, ಶೆಟ್ಟಿಹಳ್ಳಿ, ಸನ್ಯಾಸಿ ಕೋಡುಮಗ್ಗೆ, ಮಲಳ ಗೊಪ್ಪ, ದಂಡೂರು, ಜಾವಳ್ಳಿ, ಹಂಗರಹಾಳ, ದೇಮಲಾಪುರ ಮತ್ತು ತರೀಕೆರೆಗೆ ಸೇರಿದ ಜಮೀನುಗಳನ್ನು ದತ್ತಿ ಕೊಟ್ಟ ವಿಚಾರ ತಿಳಿದುಬರುತ್ತದೆ.

೪. ದಾನ ಶಾಸನ - ೭ರಲ್ಲಿ ಬಿದನೂರು ರಾಜ್ಯವ ರಾಮಚಂದ್ರಾಪುರ ಪರಿಯಂತ ರಾಜ್ಯ ತಮ್ಮದಾಗಿಸಿಕೊಂಡ ನಿಮಿತ್ತ ಹಾರನಹಳ್ಳಿ ಶೀಮೆಗೆ ವಳಿತವಾದ ಹಂಗರಹಾಳು ಗ್ರಾಮ ಮಠಕ್ಕೆ ದತ್ತಿ ಕೊಡುತ್ತಿರುವುದಾಗಿ ತಿಳಿಸಿದ್ದು ಅವರ ರಾಜ್ಯ ಅಲ್ಲಿಯವರೆಗೂ ಸೇರಿತ್ತೆಂದು ಊಹಿಸಬಹುದಾಗಿದೆ. ಅಲ್ಲದೆ ೧೬೫೮ರಲ್ಲಿ ಸಂತೇಬೆನ್ನೂರು ನಾಯಕರು ಬಿದನೂರು ವಶಪಡಿಸಿಕೊಂಡಿದ್ದರೆಂಬ ವಿಚಾರ ತಿಳಿದುಬರುತ್ತದೆ.

೫. ದಂಡೂರು ಒಂದು ಗ್ರಾಮದ ಬಗ್ಗೆಯೇ ಮೂರು ದಾನ ಶಾಸನಗಳು ಬರೆಸಲ್ಪಟ್ಟಿದ್ದು ಇದರಲ್ಲಿ ಶೃಂಗೇರಿ - ಕೂಡ್ಲಿ ಶೃಂಗೇರಿ ಮಠದ ವಿವಾದ ಉದ್ಭವಿಸಿದಾಗ ಅದು ಕೂಡ್ಲಿ ಮಠಕ್ಕೆ ಸಲ್ಲತಕ್ಕದೆಂದು ಸಂತೇಬೆನ್ನೂರು ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೬. ೧೫ನೇ ಸನ್ನದು ೧೮೧೪ರಲ್ಲಿ ಸರ್ಜಾ ಕೃಷ್ಣಪ್ಪನಾಯಕರ ಪುತ್ರ ಸರ್ಜಾರಂಗಪ್ಪ ನಾಯಕ ಬರೆಯಿಸಿ ಕೊಟ್ಟಿದ್ದು ಸಂತೇಬೆನ್ನೂರು ನಾಯಕರು ೧೫೫೮ ರಿಂದ ೧೮೧೪ರ ವರೆಗೂ ಆಡಳಿತ ನಡೆಸುತ್ತಿದ್ದು ಸಾಬೀತಾಗುತ್ತದೆ. ಈ ಶಾಸನವು ಈವರೆವಿಗೆ ಲಭ್ಯವಿರುವ ಈ ವಂಶದ ನಾಯಕರ ಕಡೆಯ ಶಾಸನವೂ ಆಗಿದೆ.

೭. ಇಲ್ಲಿಯವರೆಗೆ ಸಂತೇಬೆನ್ನೂರು ನಾಯಕರದೆಂದು ಭಾವಿಸಲಾದ ಶಾಸನಗಳಲ್ಲಿ ಬಿ. ಎಲ್. ರೈಸರು ೨೨ ಶಾಸನಗಳನ್ನು ಪ್ರಕಟಿಸಿದ್ದರು. ಪೂನಾದ ಭಾರತೀಯ ಸಂಶೋಧನಾ ಮಂಡಳಿಯಲ್ಲಿ ಒಂದು ತಾಮ್ರ ಶಾಸನ ಇರುವುದನ್ನು ಕೆಳದಿ ಗುಂಡಾಜೋಯಿಸರು ಪತ್ತೆ ಮಾಡಿದ್ದರು. ಹಾವೇರಿ ಜಿಲ್ಲಾ ಕದರಮಂಡಳಿಗೆಯಲ್ಲಿ ಒಂದು ಕಂಬ ಶಾಸನ ಇರುವುದು ಬೆಳಕಿಗೆ ಬಂದಿತ್ತು. ಈಗ ದೊರೆತಿರುವ ಪ್ರಾಚ್ಯ ಸಂಶೋಧನಾ ಮಂಡಳಿಯ ವಾರ್ಷಿಕ ವರದಿಗಳು ಮತ್ತು ಕೂಡ್ಲಿ ಶೃಂಗೇರಿ ಮಠದ ದಾಖಲೆಗಳಿಂದ ಸಂತೇಬೆನ್ನೂರು ನಾಯಕರ ಶಾಸನ ಸಂಖ್ಯೆ ೨೪ ರಿಂದ ೪೦ಕ್ಕೆ ಹೆಚ್ಚಿಗಿದ್ದು ಇಲ್ಲಿ ಪ್ರಸ್ತಾಪಿಸಲ್ಪಡದ ಇನ್ನೂ ಎರಡು ಶಾಸನಗಳು ಎಂ.ಎ.ಆರ್. ನಲ್ಲಿ ಪ್ರಕಟವಾಗಿವೆ. ಅಲ್ಲದೆ ಕೂಡ್ಲಿಯಲ್ಲಿರುವ ಇನ್ನೊಂದು ದ್ವೈತ ಮಠವಾದ ಶ್ರೀ ಕೂಡ್ಲಿ ಆರ್ಯ ಅಕ್ಷೋಭ್ಯ ತೀರ್ಥರ ಮಠಕ್ಕೆ ಸಂತೇಬೆನ್ನೂರು ನಾಯಕರು ಹಲವಾರು ದತ್ತಿ-ದಾನಗಳನ್ನು ಶಾಸನಗಳ ಮೂಲಕ ಕೊಟ್ಟಿರುವುದಾಗಿ 'ಕರ್ನಾಟಕದ ಕೈಫಿಯತ್ತುಗಳು' ಪುಸ್ತಕದಲ್ಲಿ ನಮೂದಿಸಲಾಗಿದೆ. ಹಾಗೆಯೇ ಶೃಂಗೇರಿ ಮಠದ ಕಡತಗಳಲ್ಲಿಯೂ ಕೆಲ ಸಂತೇಬೆನ್ನೂರು ನಾಯಕರ ಶಾಸನಗಳಿರುವುದಾಗಿ ತಿಳಿದುಬಂದಿದೆ. ಇವುಗಳನ್ನೆಲ್ಲಾ ಸಂಶೋಧಿಸಿ ಪ್ರಕಟಿಸಿದಲ್ಲಿ ಸಂತೇಬೆನ್ನೂರು ನಾಯಕರಿಗೆ ಸಂಬಂಧಿಸಿದಂತೆ ಇನ್ನಿಷ್ಟು ಶಾಸನಗಳು, ಹೊಸ ವಿಚಾರಗಳು ತಿಳಿಯಬಹುದಾಗಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ರಾಜ್ಯ ಪ್ರಾಚ್ಯ ಸಂಶೋಧನಾಲಯದ ವಾರ್ಷಿಕ ವರದಿಗಳು - ೧೯೪೫.**

೨. **ಕೂಡ್ಲಿ-ಶೃಂಗೇರಿ ಮಠದ ಪ್ರಾಚೀನ ಲೇಖನ ಸಂಗ್ರಹ.**

೩. **ಕರ್ನಾಟಕದ ಕೈಫಿಯತ್ತುಗಳು:** (ಸಂ) ಡಾ।। ಎಂ. ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

ಕೆ. ನಾರಾಯಣ ನಾಯಕ್*

ಉಡುಪಿ ಜಿಲ್ಲೆಯ ಕೊಡಿಬೆಟ್ಟು ಕೋಡಿಯಲ್ಲಿ ಜಂಗಮ ಮಠದ ಸುಳಿವು

ವಿಭಜನೆ ಪೂರ್ವ ದಕ್ಷಿಣ ಕನ್ನಡ ಜಿಲ್ಲೆಯು ಕಾಸರಗೋಡು ತಾಲೂಕನ್ನು ಒಳಗೊಂಡಂತೆ ತುಳುನಾಡು ಎಂದೇ ಇತಿಹಾಸ ಪ್ರಸಿದ್ಧವಾಗಿದೆ. ಕರ್ನಾಟಕದ ಪಶ್ಚಿಮ ಕರಾವಳಿಯ ಈ ಪ್ರದೇಶವನ್ನು ಆಳಿದವರಲ್ಲಿ ಕೆಳದಿ ನಾಯಕರು (ಕ್ರಿ. ಶ. ೧೪೯೯ - ಕ್ರಿ. ಶ. ೧೭೬೩) ಪ್ರಮುಖರು. ವಿಜಯನಗರದ ಸಾಮಂತರಾಗಿದ್ದ ಇವರು ವಿಜಯನಗರ ಸಾಮ್ರಾಜ್ಯದ ಪತನದ ಬಳಿಕ (ಕ್ರಿ. ಶ. ೧೫೬೫) ಪ್ರಬಲರಾದರು.

ವೀರಶೈವ ಧರ್ಮಾನುಯಾಯಿಗಳಾಗಿ ಕೆಳದಿ ನಾಯಕರು ಸಾಹಸ, ಶೌರ್ಯಗಳಿಗೆ ಹೆಸರಾಗಿರುವಂತೆ ರಾಜ್ಯಾಡಳಿತ, ಕಲೆ, ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆಯನ್ನು ಮಾಡಿರುವರು.

ಕೆಳದಿ ವಂಶದ ಹಿರಿಯ ವೆಂಕಟಪ್ಪನಾಯಕ, ಶಿವಪ್ಪ ನಾಯಕ, ಕೆಳದಿ ಚನ್ನಮ್ಮಾಜಿ ಮುಂತಾದವರು ಶ್ರದ್ಧಾವಂತ ವೀರಶೈವರಾಗಿದ್ದು ಅನೇಕ ವೀರಶೈವ (ಜಂಗಮ) ಮಠಗಳನ್ನು ತಮ್ಮ ರಾಜ್ಯದಲ್ಲಿ ಸ್ಥಾಪಿಸಿದರು. ಈ ಮಠಗಳು ದಾಸೋಹ ಹಾಗೂ ಶಿಕ್ಷಣದ ಕೇಂದ್ರಗಳಾದುವು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಅನೇಕ ದೇವಾಲಯ ಹಾಗೂ ಜಂಗಮ ಮಠಗಳನ್ನು ಇವರು ಸ್ಥಾಪಿಸಿರುವರು. ಹೀಗೆ, ತುಳುನಾಡಿನಲ್ಲಿಯೂ ವೀರಶೈವ ಧರ್ಮವು ಪರಿಚಿತವಾಯಿತು. ಒಟ್ಟು ೬೪ ಮಠಗಳು ಈ ಪ್ರದೇಶದಲ್ಲಿ ಇದ್ದುವು ಎಂಬ ಪ್ರತೀತಿ ಇದೆ. ಶ್ರೀ ಗಣಪತಿರಾವ್ ಐಗಳ್ ಮತ್ತು ಡಾ॥ ಕೆ. ಜಿ. ವಸಂತಮಾಧವ ಇವರು ಈ ಕೆಳಕಂಡಂತೆ ಜಂಗಮ ಮಠಗಳಿದ್ದ ಊರುಗಳ ಪಟ್ಟಿ ಮಾಡಿರುತ್ತಾರೆ. ಅವಿಂತಿವೆ : *ಕೊಲ್ಲೂರು, ಬಸ್ರೂರು, ಸಿದ್ಧಾಪುರ, ಮಣಿಗ, ಬಾಳೆಕುದುರು, ಬೆಣ್ಣೆ ಕುದುರು, ಶಂಕರನಾರಾಯಣ, (ಸಾಗರ?) ಬಾರಕೂರು, ಕಂಡ್ಲೂರು, ಉಪ್ಪೂರು, ಕಲ್ಯಾಣಪುರ, ಬ್ರಹ್ಮಾವರ, ಸುರಾಲ್, ಆಗುಂಬೆ, ಸೋಮೇಶ್ವರ, ಪೆರ್ಡೂರು, ಕೊಂಡಾಡಿ, ಉಡುಪಿ, ನಾಳ, ಕೆರವಾಸೆ, ಕಾರ್ಕಳ, ಸಾಣೂರು, ಮೂಡಬಿದರೆ, ವೇಣೂರು, ಪುಚ್ಚಮೊಗರು, ಗುರುವಾಯಕೆರೆ, ಬೆಳ್ತಂಗಡಿ, ಉಪ್ಪಿನಂಗಡಿ, ಹೊಸಮಠ, ಬೆಳ್ಳಾರೆ, ಪಂಜ, ಬಾಳೇಹಳ್ಳಿ, ನಾಗೂರು, ವಂಡ್ಸೆ, ಹಳೆಗೇರಿ, ಹಲ್ಯನಾಡು, ಎಣ್ಣೆ ಹೊಳೆ, ನಾರಾವಿ, ಮೂಲ್ಕಿ, ಸುರತ್ಕಲ್, ಗುರುಪುರ, ಸುಬ್ರಹ್ಮಣ್ಯ, ಮರಗ, ಮಲ್ಲರ ಕರಿಗಡಿ, ಕೊಡಿಯಾಳ, ಉಳ್ಳಾಳ, ವಿಟ್ಲ, ಮಂಜೇಶ್ವರ, ಬೋಳೂರು, ಮೂಳೂರು, ಕಾಸರಗೋಡು, ಚಂದ್ರಗಿರಿ, ಬಂಟವಾಳ ಮತ್ತು ಹೊಸದುರ್ಗ.* ಹೀಗೆ ಒಟ್ಟು ೬೪ ಮಠಗಳಿರುವ ಊರುಗಳು ಪಟ್ಟಿಯಲ್ಲಿವೆ. ಇನ್ನೂ ೧೦ ಜಂಗಮಮಠಗಳ ಸುಳಿವು ಸಿಗಬೇಕಾಗಿದೆ.

ಕೆಳದಿ ಇತಿಹಾಸದ ಪ್ರಖ್ಯಾತ ಸಂಶೋಧಕರಾಗಿರುವ ಶ್ರೀ ಗುಂಡಾಜೋಯಿಸರು ತಮ್ಮ *"ಉಡುಪಿ ಜಂಗಮಮಠದ ಕೆಳದಿ ಸೋಮಶೇಖರ ನಾಯಕನ ಅಪ್ರಕಟಿತ ಚಾರಿತ್ರಿಕ ದಾಖಲೆ"* ಎಂಬ ಪ್ರಬಂಧವನ್ನು ಪ್ರಸ್ತುತ ಪಡಿಸುತ್ತಾ "ಈ ಜಂಗಮಮಠವು ಈವರೆಗೂ ಗೋಚರಿಸದಿರುವುದೇ ಅಚ್ಚರಿಯೇ ಸರಿ...." ಎಂದಿರುವರು. ಈ ದಿಶೆಯಲ್ಲಿ ಪರಿಶೀಲನೆ ಮಾಡಿದಾಗ, ಉಡುಪಿ ತಾಲೂಕಿನಲ್ಲಿಯೇ ಉಡುಪಿ ನಗರದಿಂದ ೨೦ ಕಿಲೋಮೀಟರ್ ದೂರದಲ್ಲಿ ೮೨ ಕುದಿಗ್ರಾಮದ ಕೊಡಿಬೆಟ್ಟು ಕೋಡಿ ಎಂಬಲ್ಲಿ ಒಂದು ಜಂಗಮ ಮಠದ ಸುಳಿವು ಗೋಚರವಾಯಿತು. ಈ ಪರಿಸರದಲ್ಲಿ ಈಗಲೂ ಜನರು ಇಲ್ಲಿ ಹಿಂದೆ ಜಂಗಮ ಮಠ ಇತ್ತು. ಜಂಗಮರು ಇಲ್ಲಿ ವಾಸಿಸುತ್ತಿದ್ದರು ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಹಚ್ಚ ಹಸುರಿನ ಸುಂದರ ಪ್ರಾಕೃತಿಕ ಪರಿಸರದಲ್ಲಿರುವ ಈ ಜಂಗಮಮಠದ ನೆಲೆಯು ಈಗ ಸಂಪೂರ್ಣ ನಾಮಾವಶೇಷವಾಗಿದೆ.

ಈ ಜಂಗಮ ಮಠದ ನೆಲೆಯು ಸುಮಾರು ೭-೮ ಅಡಿ ಎತ್ತರದ ಸುತ್ತಲೂ ಕಲ್ಲು ಕಟ್ಟಿರುವ ಒಂದು ದಿಬ್ಬವಾಗಿರುತ್ತದೆ.

* ಇತಿಹಾಸ ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಕಾವೂರು, ಮಂಗಳೂರು – ೫೭೫ ೦೧೫.



ಜಂಗಮ ಮಠದ ಪಶ್ಚಿಮ ಬದಿಯ ಎತ್ತರದ ದಿಬ್ಬ ಹಾಗೂ ಮೆಟ್ಟಿಲು ಇರುವ ಪೂರ್ವ ಬದಿ

೭೨ ಅಡಿ ಉದ್ದ ೬೦ ಅಡಿ ಅಗಲದ ಈ ದಿಬ್ಬದ ಮೇಲೆ ಮರಗಿಡ ಮುಳ್ಳು ಕಂಟಿಗಳು ಬೆಳೆದಿವೆ. ಈ ಮಠದ ನೆಲೆಯಿಂದ ಕೆಳಗಿಳಿದು ಬರಲು ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕೆ ಮೆಟ್ಟಲುಗಳು ಇರುವಂತೆ ಕಂಡುಬರುತ್ತದೆ. ಪೂರ್ವದಲ್ಲಿ ಸನಿಹದಲ್ಲಿಯೇ ಒಂದು ಪುರಾತನ ಬಾವಿಯಿದ್ದು, ಇದನ್ನು ಜಂಗಮರು ಕಟ್ಟಿಸಿರುವ ಬಾವಿ ಎಂದೇ ಇಲ್ಲಿಯ ಜನರು ಹೇಳುತ್ತಾರೆ. ಚೌಕಾಕಾರದ, (ಸು. ೬ ಅಡಿ) ಕಲ್ಲಿನಿಂದ ಕಟ್ಟಿರುವ ಬಾವಿಯಲ್ಲಿ ಸ್ವಚ್ಛವಾದ ಸಿಹಿನೀರಿನ ಸೆಲೆಯು ಕಡುಬೇಸಿಗೆಯ ಕಾಲದಲ್ಲೂ ಬತ್ತಿ ಹೋಗುವುದಿಲ್ಲ. ಬಾವಿಕಟ್ಟೆಯಲ್ಲಿ ಎರಡು ಬಿಲ್ವಪತ್ರೆ ಮರಗಳು ಹಾಗೂ ಒಂದು ಪಾರಿಜಾತ ಮರ ಇವೆ. ಇವು ಜಂಗಮರು ನೆಟ್ಟ ಮರಗಳ ಮೂಲದಿಂದಲೇ ಹುಟ್ಟಿಕೊಂಡಿವೆ ಎಂದು ಇಲ್ಲಿಯ ಜನರು ಈಗಲೂ ಹೇಳುತ್ತಾರೆ. ಈ ಜಂಗಮಮಠದ ಬಗ್ಗೆ ಯಾವುದೇ ಶಾಸನವು ಕಂಡುಬಂದಿಲ್ಲ. ಈ ಮಠದ ದಕ್ಷಿಣ ಹಾಗೂ ಪಶ್ಚಿಮದಲ್ಲಿ ಭಿನ್ನವಾದ ಶಿಲಾಮೂರ್ತಿಯ ಚೂರುಗಳು ಕಂಡುಬಂದಿವೆ.

ಈ ಜಂಗಮಮಠದ ನೆಲೆಯ ಸುತ್ತಲೂ ಹೊಲಗದ್ದೆಗಳಿದ್ದು, ಇಲ್ಲೆಲ್ಲಾ ವೀರಶೈವರು ನೆಲೆಸಿ ಕೃಷಿ ನಿರತರಾಗಿರಲೂಬಹುದು. ಇಕ್ಕೇರಿ ನಾಯಕರು ಕೃಷಿಗೆ ಪ್ರೋತ್ಸಾಹ ಕೊಡುತ್ತಿದ್ದರು.

ಈ ಜಂಗಮ ಮಠಗಳು ಕೃಷಿ ಭೂಮಿಯನ್ನು ಹೊಂದಿರುವುದನ್ನು ಈಗಲೂ ಕಾಣಬಹುದು. ಈ ಪರಿಸರದ ಹೊಲಗದ್ದೆಗಳನ್ನು ಹೊಸತಾಗಿ ಕಾಡನ್ನು ಕಡಿದು ನಿರ್ಮಿಸಿದಂತೆ ತೋರುವುದು. ಶ್ರೀ ಗಣಪತಿರಾವ್ ಐಗಳ್‌ರವರು ಉಲ್ಲೇಖಿಸಿರುವ ಕೊಂಡಾಡಿಮಠವು ಇಲ್ಲಿಂದ ಬರೇ ೪ ಕಿಲೋಮೀಟರ್ ದೂರದಲ್ಲಿದೆ. ಇಲ್ಲಿ ಈಗಲೂ ಒಂದು ವೀರಶೈವ ಕುಟುಂಬ ವಾಸಿಸುತ್ತಿದೆ. ಆದರೆ, ಈ ಕೊಡಿಬೆಟ್ಟು ಕೋಡಿಯಲ್ಲಿ ಜಂಗಮಮಠ ಇರುವ ಬಗ್ಗೆ ಯಾವುದೇ ಮಾಹಿತಿ ಇವರಿಂದ ಸಿಕ್ಕಿಲ್ಲ. ಬಹುಶಃ ಕೊಂಡಾಡಿ ಮಠಕ್ಕಿಂತಲೂ ಈ ಮಠವು ಪ್ರಾಚೀನವಾಗಿರಬಹುದು. ಕೊಂಡಾಡಿ ಮಠದಲ್ಲಿಯೂ ಯಾವುದೇ ಶಾಸನ-ದಾಖಲೆ ಲಭ್ಯವಾಗಿಲ್ಲ. ಬಾರಕೂರು ಮಹತ್ತರ ಮಠ ಕ್ರಿ. ಶ. ೧೬೨೧ರಲ್ಲಿ ಮತ್ತು ಸಿದ್ಧಮ್ಮಾಜಿ ಕಟ್ಟಿದ ಸೋಮೇಶ್ವರಮಠ ಕ್ರಿ. ಶ. ೧೬೪೧ರಲ್ಲಿ ಸ್ಥಾಪನೆಯಾಗಿರುವ ಬಗ್ಗೆ ದಾಖಲೆಗಳನ್ನು ಗಮನಿಸಿದರೆ, ಸುಮಾರು ಇದೇ ಕಾಲದಲ್ಲಿ ಈ ಮಠಗಳಿಂದ ಅಷ್ಟೇನೂ ದೂರದಲ್ಲಿಲ್ಲದ ಕೊಡಿಬೆಟ್ಟು ಕೋಡಿ ಮಠವು ಸ್ಥಾಪನೆಯಾಗಿರಲೂಬಹುದು. ಕೊಂಡಾಡಿಮಠದ ಸ್ಥಾಪನೆಯು ಆ ಬಳಿಕ ಆಗಿರಲೂಬಹುದು.

ಐತಿಹ್ಯವೇ ಪ್ರಧಾನ ಆಧಾರವಾಗಿರುವ, ಯಾವುದೇ ಶಾಸನ ಗೋಚರಿಸದಿರುವ, ಈ ಕೊಡಿಬೆಟ್ಟು ಕೋಡಿ ಜಂಗಮ ಮಠದ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯವಿದೆ. ಇಲ್ಲಿಂದ ೫ ಕಿ.ಮೀ. ದೂರವಿರುವ ಹಿರಿಯಡ್ಕದ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಒಂದು ಜಂಗಮಕೋಣೆಯಿದೆ ಎಂದು ತಿಳಿದುಬಂದಿದೆ. ೨ ಕಿಲೋಮೀಟರ್ ದಕ್ಷಿಣದಲ್ಲಿ ಪೆರ್ಣಂಕಿಲ ಗ್ರಾಮದಲ್ಲಿ ಉದ್ಭವ ಶ್ರೀಮಹಾಗಣಪತಿ ಮತ್ತು ಶ್ರೀ ಮಹಾಲಿಂಗೇಶ್ವರ ದೇವಸ್ಥಾನಗಳಿವೆ. ಕೊಡಿಬೆಟ್ಟಿನ ಸನಿಹದಲ್ಲಿಯೇ ಇರುವ ಶ್ರೀವಿಷ್ಣುಮೂರ್ತಿ ದೇವಸ್ಥಾನ, ಇಲ್ಲಿನ ಗ್ರಾಮ ದೇವಸ್ಥಾನವಾಗಿದೆ. ಈ ಮಠದ ನೆಲೆಯ ಸನಿಹದಲ್ಲಿ ದಕ್ಷಿಣದಲ್ಲಿ ಒಂದು ನಾಗಬನವೂ ಇದೆ. ಇಲ್ಲೆಲ್ಲಾ ಈ ಜಂಗಮಮಠದ ಬಗ್ಗೆ ಮೂಲಾಧಾರಗಳಿವೆಯೇ ಎಂದು ನೋಡಬೇಕಾಗಿದೆ. ಹಾಗೂ ಈ ಜಂಗಮ ಮಠ ಏಕೆ ಕಣ್ಮರೆಯಾಯಿತು ಎಂಬುದು

ಇನ್ನೊಂದು ಮುಖ್ಯ ಪ್ರಶ್ನೆಯೇ ಆಗಿದೆ. "ಕೆಳದಿ ಇತಿಹಾಸೋತ್ತರ ಕಾಲದಲ್ಲಿ ಪಳೆಯುಳಿಕೆಯೋಪಾದಿಯಲ್ಲಿ ಅಲ್ಲಲ್ಲಿ ಪಾಳು ಬಿದ್ದಿರುವ ವೀರಶೈವಮಠಗಳು, ಆರ್ಥಿಕ ಹಾಗೂ ಇತರ ದೌರ್ಬಲ್ಯಗಳಿಂದ ತಮ್ಮ ಅಸ್ತಿತ್ವವನ್ನು ಕಳೆದುಕೊಂಡುವು" ಎಂದು ಶ್ರೀಗುಂಡಾಜೋಯಿಸರು ಈ ಬಗ್ಗೆ ಕಳಕಳಿಯಿಂದ ಹೇಳಿರುತ್ತಾರೆ. ಈ ಜಂಗಮಮಠಗಳ ಬಗ್ಗೆ ಶಾಸ್ತ್ರೀಯವಾದ ಯೋಜನೆಯೊಂದಿಗೆ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

ಕೆಳದಿನಾಯಕರ ಕಾಲದಲ್ಲಿ ಸ್ಥಾಪಿತವಾದ ಈ ವೀರಶೈವ ಮಠಗಳ ಈಗಿನ ಪರಿಸ್ಥಿತಿಯನ್ನು ತಿಳಿದುಕೊಂಡು, ಈ ಸ್ಮಾರಕಗಳನ್ನು ಸಂರಕ್ಷಿಸುವ ಅವಶ್ಯಕತೆ ಕರ್ನಾಟಕದ ಜನತೆಯ ಮೇಲಿದೆ. ತುಳುನಾಡು ಮತ್ತು ಇತರ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಈ ವೀರಶೈವ ಮಠಗಳ ಬಗ್ಗೆ ಸಮಗ್ರ ಅಧ್ಯಯನವನ್ನು* ಕರ್ನಾಟಕ ಇತಿಹಾಸ ತಜ್ಞರು ಕೈಗೊಳ್ಳುವುದು ಅತ್ಯವಶ್ಯಕ ಎನಿಸುತ್ತ**ದೆ**

(ಈ ಲೇಖನಕ್ಕೆ ಮಾರ್ಗದರ್ಶನ ಪ್ರೋತ್ಸಾಹ ನೀಡಿದ ಡಾ।। ಕೆ. ಜಿ. ವಸಂತಮಾಧವ, ಇವರಿಗೆ ಕೃತಜ್ಞತೆಗಳು.)

* [ದಕ್ಷಿಣ ಕನ್ನಡ ಜಿಲ್ಲೆಯ ವೀರಶೈವ ಮಠಗಳ ಬಗ್ಗೆ ಹಾಗು ಪ್ರಸಿದ್ಧ ಗುರುಪುರ ಮಠ ಇತ್ಯಾದಿ ಬಗ್ಗೆ ಸಂಶೋಧನ ಲೇಖನವೂ ಪ್ರಕಟವಾಗಿವೆ ನೋಡಿ. ಪು. ಶ್ರೀನಿವಾಸ ಭಟ್ಟ : 'ಗುರುಪುರದ ಜಂಗಮ ಮಠ', **ಬಸವ ಪಥ**, ಆಗಸ್ಟ್ ೧೯೮೦, ಪು. ೮೮; ಪು. ಶ್ರೀನಿವಾಸ ಭಟ್ಟ : 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೀರಶೈವ ಧರ್ಮ' **ಪರಂಜ್ಯೋತಿ** ಆಗಸ್ಟ್ ೧೯೯೩, ಪು. ೩೭; ಎಂ. ಜಿ. ನಾಗರಾಜ್ : 'ಕೊಡಗು ಕೋಲಾರ, ಹಾಸನ ಜಿಲ್ಲೆಗಳ ವೀರಶೈವ ಮಠಗಳು, **ಅಮರವಾಣಿ** (ಎಂ. ಜಿ. ನಂಜುಂಡಾರಾಧ್ಯ ಸಂಸ್ಮರಣ ಸಂಪುಟ) ೧೯೯೪, ಪು. ೨೬೩ ಮತ್ತು **ಇತಿಹಾಸ ದರ್ಶನ** ಸಂ. ೭/೧೯೯೨, ಪು. ೧೬೭ - (ಸಂ.)]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಶ್ರೀ ಕೆಳದಿ ಗುಂಡಾ ಜೋಯಿಸ್ : "ಉಡುಪಿ ಜಂಗಮ ಮಠದ ಕೆಳದಿ ಸೋಮಶೇಖರ ನಾಯಕನ ಅಪ್ರಕಟಿತ ಚಾರಿತ್ರಿಕ ದಾಖಲೆ", **ಇತಿಹಾಸ ದರ್ಶನ** ಸಂ. ೧೨/ ೧೯೯೭.
೨. ಡಾ।। ಕೆ. ಜಿ. ವಸಂತ ಮಾಧವ : *Religions in Coastal Karnataka.*
೩. ಡಾ।। ಸೂರ್ಯನಾಥ ಕಾಮತ್ : *History of Karnataka.*

ಮ. ಸಕಲೇಶ್*

ಹೊಯ್ಸಳ ವಿನಯಾದಿತ್ಯನ ಮಹಾಪ್ರಧಾನಿ ಸನ್ಧಿವಿಗ್ರಹಿ ಚಾವುಣ್ಡರಾಯ (ಚಾವುಣ್ಡರಾಯ ಬಸದಿಯ ನಿರ್ಮಾತೃ)

ಕ್ರಿ. ಶ. ೧೦ನೇ ಶತಮಾನದಲ್ಲಿ ಗಂಗ ಅರಸರಾದ ಇಮ್ಮಡಿ ಮಾರಸಿಂಹನಿಗೂ, ನಾಲ್ವಡಿ ರಾಚಮಲ್ಲನಿಗೂ ಮಂತ್ರಿಯಾಗಿದ್ದ ಚಾವುಂಡರಾಯನು ಗೊಮ್ಮಟೇಶನ ಬೃಹತ್ ವಿಗ್ರಹವನ್ನು ಸ್ಥಾಪಿಸಿದನು. ಸ್ವಾಮಿನಿಷ್ಠೆಗೆ ಹೆಸರಾದ ಇವನು ವಜ್ಜಳ, ನೊಳಂಬ, ರಣಸಿಂಗರಾಜ ಮುಂತಾದವರ ವಿರುದ್ಧ ಯುದ್ಧ ಹೂಡಿ ಶೂರ ಸೇನಾನಿಯೆಂದು ವರ್ಣಿತನಾಗಿದ್ದಾನೆ. ಇವನ ಚಾವುಂಡರಾಯ ಪುರಾಣದಿಂದ ಈತನು ಜಯಿಸಿದ ರಾಜರ ಪಟ್ಟಿಯೆ ಸಿಗುತ್ತದೆ.

ನೃಪಕಾಮನ ಕೋಟೆಯೊಳ್ ರಾಜನೆಂಬಧಟನುಮಂ ಬಾಸನೆಂಬ ಕಚೆಯನುಮಂ ಸಿವರನೆಂಬ ಜಟ್ಟಿಗನುಮಂ ಕೂಣಾಂಕನೆಂಬ ಕಟ್ಟುಗೊಡನುಮಂ ಪೊಯಿಸಳನೆಂಬ ಬಿರುದನುಮಂ ಪೃಥುವನೆಂಬ ಬಿರುದನುಮಂ ಬಿಹನೆಂಬ ಕಲಿಗಳುಮಂ ಬಲ್ಲಾಳ್ಗಳುಮವೊಂದೆ ಮೈಯೊಳ್ ಪೆಣೆದಿರಿದು ಗೆಲ್ದ ಭುಜವಿಕ್ರಮನುಂ.[೧]

ಇದರಲ್ಲಿ ನೃಪಕಾಮನ ಕೋಟೆಯ ಉಲ್ಲೇಖವಿದೆ. ಪೊಯಿಸಳ ಎಂಬುವನ ಹೆಸರು ಸಹ ಬಂದಿದೆ. ಅಂದರೆ ಚಾವುಂಡರಾಯನ ಕಾಲಕ್ಕಾಗಲೇ ಹೊಯಿಸಳರು ಅಂದಿನ ರಾಜಕೀಯ ಇತಿಹಾಸದಲ್ಲಿ ಬೆಳಕಿಗೆ ಬಂದಿದ್ದರು. ಅಲ್ಲದೆ ಕೋಟೆಯನ್ನು ಕಟ್ಟಿಕೊಂಡು ಬಲಯುತರಾಗಿದ್ದರು. ಇಲ್ಲಿ ಹೆಸರಿಸಲಾದ ವೀರರು ನೃಪಕಾಮನ ಕೋಟೆಯಲ್ಲಿ ಚಾವುಂಡರಾಯನ ವಿರುದ್ಧ ಕಾದಾಡಬೇಕಾದರೆ ಹೊಯ್ಸಳರ ಕಡೆಯವರಾಗಿರಬೇಕು. ಒಟ್ಟಾರೆ ಹೊಯ್ಸಳರು ಗಂಗರ ವೈರಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಹೀಗಿರುವಾಗ ಚಾವುಂಡ ರಾಯನು ಪೊಯ್ಸಳನ ಮಹಾಪ್ರಧಾನಿ ಮತ್ತು ಸನ್ಧಿವಿಗ್ರಹಿಯಾಗಲು ಸಾಧ್ಯವೇ ಇಲ್ಲ. ಆದರೆ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ಆಕ್ಷೇಪವನ್ನು ನಿವಾರಿಸಲು ಗಂಗ ಮಂಡಳಿಕರ ಬಳಿ ಮಂತ್ರಿ ಮತ್ತು ಸಂಧಿವಿಗ್ರಹಿಯಾಗಿದ್ದ ಚಾವುಂಡರಾಯನು ಪೊಯ್ಸಳ ನಲ್ಲಿಯೂ ಮಹಾಪ್ರಧಾನಿ, ಸಂಧಿವಿಗ್ರಹಿಯಾಗಿದ್ದನೆಂದು ಕುರುಡಿಹಳ್ಳಿ (ಕುರಾದಹಳ್ಳಿ) ಮತ್ತು ಚಾವುಂಡರಾಯ ಬಸದಿಯ ಶಾಸನವನ್ನು[೨] ಉಲ್ಲೇಖಿಸುವ ಮೂಲಕ ನಿರ್ಧರಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ೧೦ ಮತ್ತು ೧೧ನೇ ಶತಮಾನದಲ್ಲಿ ಆದ ಕನ್ನಡ ಲಿಪಿಯ ಬೆಳವಣಿಗೆಯನ್ನು ಗಮನಿಸಿದಾಗ ಹಾಗೂ ಕುರಾದಹಳ್ಳಿಯಲ್ಲಿಯೆ ಇರುವ ಚಾವುಣ್ಡರಾಯನನ್ನು ಉಲ್ಲೇಖಿಸುವ ಎರಡು ಶಾಸನಗಳನ್ನು ಮತ್ತು ಗೊಮ್ಮಟಶಿಲ್ಪದ ಶಾಸನಗಳನ್ನು ಅಧ್ಯಯನ ಮಾಡಿದಾಗ ಇಬ್ಬರು ಚಾವುಂಡರಾಯ ರಿರುವುದು ಸ್ಪಷ್ಟವಾಗುತ್ತದೆ.

೧೦ನೇ ಶತಮಾನದ ೨೭೨, ೨೭೩ ಮತ್ತು ೨೭೬ ನೆಯ ಶಾಸನಗಳು ಬಾಹುಬಲಿಮೂರ್ತಿಯನ್ನು ಚಾಮುಣ್ಡ ರಾಜಂ ಮಾಡಿಸಿದಂ ಎಂದು ಹೇಳುತ್ತವೆ. ಆದರೆ ಚಿಕ್ಕಬೆಟ್ಟದ ಮೇಲಿರುವ ಚಾವುಂಡರಾಯ ಬಸದಿಯನ್ನು ಸಹ ಈತನೇ ಕಟ್ಟಿಸಿದನೆಂಬ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಲಾಗದು. ಏಕೆಂದರೆ ಈ ಬಸದಿಯ ಮುಂಭಾಗದ ಜಗತಿಯ ಉಭಯ ಪಾರ್ಶ್ವಗಳ ಗೋಡೆಯ ಕೆಳಗಣ ದಿಂಡಿನ ಮೇಲಿರುವ ಶಾಸನ *ಶ್ರೀ ಚಾಮುಣ್ಡರಾಜ ಮಾಡಿಸಿದಂ* ಎಂಬುದನ್ನು ೧೦ನೇ ಶತಮಾನಕ್ಕೆ ಸೇರಿಸಲಾಗದು. ಈ ಶಾಸನದ ಲಿಪಿ ಅವುಗಳಿಗಿಂತ ನಂತರದ ಕಾಲದ್ದು. ೧೧ನೇ ಶತಮಾನಕ್ಕೆ ಸೇರಿದ್ದು. ಇದೇ ಬಸದಿಯ ಪಾರ್ಶ್ವತೀರ್ಥಂಕರನ ವಿಗ್ರಹದ ಪೀಠದ ಮೇಲಿನ ೧೫೦ನೆಯ ಶಾಸನದಿಂದ ಬೆಳ್ಗೊಳದಲ್ಲಿ ಚಾವುಂಡರಾಜನ ಮಗನಾದ ಜಿನದೇವಣ್ಣನು ಜಿನಗೃಹವನ್ನು ಕಟ್ಟಿದ ವಿಷಯ ಬಂದಿದ್ದು ಇದೂ ಸಹ ೧೧ನೇ ಶತಮಾನಕ್ಕೆ ಸೇರಿದ್ದು ಎಪಿಗ್ರಾಫಿಯ ಕರ್ನಾಟಿಕದಲ್ಲಿ ದಾಖಲಾಗಿದೆ.[೩] ಲಿಪಿಯ ಅಧ್ಯಯನಕ್ಕಾಗಿ ಮೂರು ಶಾಸನಗಳನ್ನು ಇಲ್ಲಿ ಕೊಡಲಾಗಿದ್ದು, ಕಾಲಮಾನದ ಪ್ರಕಾರ ಇಬ್ಬರು ಚಾವುಂಡರಾಯರು ಕಂಡು ಬರುತ್ತಾರೆ. ಇದಕ್ಕೆ ಸಹಕಾರಿಯಾಗಿ ಕುರಾದಹಳ್ಳಿಯ ಶಾಸನವನ್ನು ಉಲ್ಲೇಖಿಸಬಹುದು.

* ಸಂಶೋಧಕ, ಇತಿಹಾಸ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

(ಕುರಾದಹಳ್ಳಿ - ಕಲ್ಲೇಶ್ವರದೇವಾಲಯದ ಮುಂದೆ ನೆಟ್ಟಿರುವ ಕಲ್ಲು)[೪]

'...... ಶ್ರೀ ಮತ್ತ್ರಿಭುವನಮಲ್ಲ ವಿನೆಯಾದಿತ್ಯ ಪೊಯ್ಸಳ ದೇವರು ಗಂಗವಾಡಿತೊಂಭತ್ತಱುಸಾಸಿರಮಂ ಸುಖಸಂಕಥಾ ವಿನೋದದಿಂ ನಾಳುತ್ತಮಿರೆ।। ತತ್ಪಾದಪದ್ಮೋಪ ಜೀವಿ ಶ್ರೀ ಮತ್ಪೆರ್ಗ್ಗಡೆ ಚಾವುಣ್ಡರಾಯನಾಸಂದಿನಾಡೊಳಗಣ ದೇಸವಣೆಯ ನಾಳುತ್ತಮಿರೆ।।'

(ಕುರಾದಹಳ್ಳಿ - ಗ್ರಾಮಕ್ಕೆ ಸೇರಿದ ಗುಡ್ಡದಲ್ಲಿ ಹುಟ್ಟು ಬಂಡೆಯೊಂದರ ಮೇಲೆ)[೫]

ಸ್ವಸ್ತಿ ಶ್ರೀಮತು ಮಹಾಮಣ್ಡಳೇಶ್ವರ ಪೊಯ್ಸಳನ ಮಹಾಪ್ರಧಾನಿ ಸನ್ಧಿವಿಗ್ರಹಿ ಚಾವುಣ್ಡರಾಜನಪುತ್ರ ಮಾದಿರಾಜನು ಜಿನದೇವನು ದಣ್ಡನಾಯಕರ್ತ್ತೆಯ್ಲಪಯ್ಯನು ಅಂತು ತಮುತ ಮುವರು ದೇಸವಾಣೆನಾರ್ದ ರಾಯಗಟ್ಟ ಒಳಗಾಗಿ ಕೆರೆಯು ದೇಗಲಮುವ ಮಾಡಿಸಿದ ದ್ವಿಜಕುಳತಿಳಕ।।

ಮೇಲಿನ ಎರಡನೆಯ ಶಾಸನವನ್ನು ಮಾತ್ರ ಗಮನಿಸಿದ ಜೋಯಿಸರು ಶಾಸನಾಂಶವನ್ನು ಮಾತ್ರ ಅನುಸರಿಸಿ ಪೊಯ್ಸಳನಲ್ಲಿ ಚಾವುಣ್ಡರಾಜನು ಮಹಾಪ್ರಧಾನಿ ಮತ್ತು ಸನ್ಧಿವಿಗ್ರಹಿಯಾಗಿದ್ದ ನೆಂದು ಹೇಳಿದ್ದಾರೆ. ಆದರೆ ಇದೇ ಹಳ್ಳಿಯ ಇನ್ನೊಂದು ಶಾಸನದಲ್ಲಿ ವಿನಯಾದಿತ್ಯ ಗಂಗವಾಡಿ ೯೬೦೦೦ವನ್ನು ಆಳುತ್ತಿರು ವಾಗ ಆತನ ಪೆರ್ಗಡೆ ಚಾವುಣ್ಡರಾಯ ಆಸಂದಿನಾಡಿನ ದೇಶವಣೆ ಆಳುತ್ತಿರುವ ವಿಷಯ ಬಂದಿದೆ. ಒಂದೇ ಹಳ್ಳಿಯ ೧೧ನೇ ಶತಮಾನದ ೨ ಶಾಸನಗಳಲ್ಲಿ ಉಲ್ಲೇಖಿತ ಚಾವುಣ್ಡರಾಯ/ರಾಜ ಅಭಿನ್ನರಾಗಿದ್ದಾರೆ. ವಿನಯಾದಿತ್ಯನ ಕಾಲದಲ್ಲಿ ಪೆರ್ಗಡೆ ಚಾವುಣ್ಡರಾಯ ದೇಶವಣೆ ಆಳುತ್ತಿದ್ದು, (ಮುಂದೆ) ಅವನೇ ಹೊಯ್ಸಳರ ಮಹಾಪ್ರಧಾನಿ ಮತ್ತು ಸಂಧಿವಿಗ್ರಹಿಯಾಗಿ ನಿಯುಕ್ತಿಯಾಗಿದ್ದುದನ್ನು ಎರಡೂ ಶಾಸನಗಳ ಸಹಾಯದಿಂದ ರೇಖಿಸಬಹುದು.

ಬಂಡೆ ಶಾಸನದಲ್ಲಿ ಬಂದಿರುವ ಕೆರೆ ಮತ್ತು ದೇಗುಲ ಕಟ್ಟಿಸಿದ ಚಾವುಣ್ಡರಾಯನ ಪುತ್ರ ಜಿನದೇವನೆ ಬೆಳ್ಗೊಳದ ಜನರೆಲ್ಲ ಹೊಗಳುವಂತೆ ದ್ವಿತಳ ಬಸದಿಯನ್ನು ಮತ್ತು ಅಲ್ಲಿಯ ಪಾರ್ಶ್ವನಾಥ ಶಿಲ್ಪವನ್ನು ಮಾಡಿಸಿದ್ದಾನೆಂದು ತಿಳಿಯುತ್ತದೆ. ಜಿನದೇವನು ಅಜಿತಸೇನಮುನಿಗಳ ಶಿಷ್ಯನೆಂದು ಮಾಹಿತಿಯಾಗಿ ಬಂದಿದೆ. ರನ್ನ, ನಾಲ್ಕನೇ ರಾಚಮಲ್ಲ (೯೭೪-೯೮೭), ಇಮ್ಮಡಿ ಮಾರಸಿಂಹ (೯೬೭-೯೭೪), ಚಾವುಂಡರಾಯರಿಗೆ (-೯೯೦) ಗುರುವಾಗಿದ್ದ ಅಜಿತಸೇನರು ಹೊಯ್ಸಳ ವಿನಯಾದಿತ್ಯನ ಕಾಲದಲ್ಲೂ ಬದುಕಿದ್ದು, ಬಹುಶಃ ವಯೋವೃದ್ಧರಾಗಿದ್ದು ಜಿನದೇವಣನ ಗುರುವೂ ಆಗಿದ್ದನು ಎನ್ನುವುದು ಸ್ಪಷ್ಟವಾಗುತ್ತದೆ.

(ಶ್ರವಣಬೆಳಗೊಳ ಚಾವುಂಡರಾಯ ಬಸದಿಯ ಮೇಲಣ ಪಾರ್ಶ್ವತೀರ್ಥಂಕರ ಪಾದ ಪೀಠದಲ್ಲಿ)[೬]*

ಜಿನಗೃಹಮಂ ಬೆಳ್ಗೊಳದೊಳ್ಜನಮೆಲ್ಲಂ ಪೊಗಳೆ ಮನ್ತ್ರಿ ಚಾಮುಣ್ಡನ ನನ್ದನನೊಲವಿಂ ಮಾಡಿಸಿದಂ ಜಿನ ದೇವಣನ ಜಿತಸೇನ ಮುನಿಪರ ಗುಡ್ಡಂ

ಈ ಶಾಸನದಿಂದ ಕುರಾದಹಳ್ಳಿಯಲ್ಲಿ ಬಂದಿರುವ ವಿನಯಾದಿತ್ಯನ ಮಹಾಪ್ರಧಾನಿ ಸನ್ಧಿವಿಗ್ರಹಿ ಚಾವುಂಡರಾಯ ಮತ್ತು ಆತನ ಮಗ ಜಿನದೇವ(ಣ)ರೇ ಶ್ರವಣಬೆಳಗೊಳದಲ್ಲಿ ಕಾಣಿಸಿಕೊಂಡಿದ್ದು ಚಾವುಂಡರಾಯ ಬಸದಿಯ ನಿರ್ಮಾತೃಗಳ ಬಗ್ಗೆ ಹೊಸಬೆಳಕು ಚೆಲ್ಲುತ್ತದೆ. ಇದರಿಂದ ಸಾಂಪ್ರದಾಯಿಕವಾಗಿ ನಂಬಿರುವ ಗೊಮ್ಮಟಶಿಲ್ಪ ಸ್ಥಾಪಿಸಿದ ಚಾವುಂಡರಾಯನೇ ಬೇರೆ, ಚಾವುಂಡರಾಯಬಸದಿಯನ್ನು ನಿರ್ಮಿಸಿದ ಚಾವುಂಡರಾಯನೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಈ ಎರಡನೆಯ ಚಾವುಂಡ ರಾಯನೇ ೧೧ನೇ ಶತಮಾನದಲ್ಲಿ ಮಹಾಮಂಡಳೇಶ್ವರ ಪೊಯ್ಸಳ ವಿನಯಾದಿತ್ಯನ ಕಾಲದಲ್ಲಿ ದೇಶವಣೆ ಆಳುತ್ತಿದ್ದು, ಮಹಾಪ್ರಧಾನಿ ಸನ್ಧಿವಿಗ್ರಹಿಯೂ ಆಗಿದ್ದವನು

* [ಈ ಪಾರ್ಶ್ವತೀರ್ಥಂಕರನ ಶಿಲ್ಪ/ಪಾದಪೀಠವನ್ನು ಹಳೇಬೆಳ್ಗೊಳದಿಂದ ತಂದು ಇಲ್ಲಿ ಸ್ಥಾಪಿಸಿರುವ ಸಾಧ್ಯತೆಗಳಿವೆ. ಆ ವೇಳೆಗೆ ಶ್ರವಣಬೆಳ್ಗೊಳ ಅಷ್ಟು ಪ್ರಸಿದ್ಧಿರಲಿಲ್ಲ. ಹಾಗಾಗಿ ಚಾವುಂಡರಾಯನ ಬಸದಿಯು ೨ನೇ ಚಾವುಂಡರಾಯನಿಂದ ರಚಿತವಾಯಿತೆಂಬ ವಾದ ನಿಲ್ಲಬಹುದೆ? ಅಲ್ಲದೆ ಚಾವುಂಡರಾಯಬಸದಿಯ ವಾಸ್ತು ರಚನೆಯ ದೃಷ್ಟಿಯಿಂದಲೂ ಗಮನಿಸಬೇಕಾದ ಅಗತ್ಯವಿದೆ ಎನಿಸುತ್ತದೆ. (ಸಂ.)]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **'ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ'** ಪುಟ ೪೩೯. (ಸಂಪಾದಕರು: ಕಮಲಾ ಹಂಪನಾ ಮತ್ತು ಕೆ. ಆರ್. ಶೇಷಗಿರಿ)

೨. ಎ. ಕ, ೧೦, ಅರಸೀಕೆರೆ- ೨೫೫, ೧೧ನೇ ಶತಮಾನ
ಎ. ಕ, ೨, ಶ್ರವಣಬೆಳ್ಗೊಳ-೧೫೦. ೧೧ನೇ ಶತಮಾನ

೩. ಎ. ಕ, ೨, ಪೀಠಿಕೆ. ಪುಟ iv

೪. ಎ. ಕ, ೧೦, ಅರಸೀಕೆರೆ-೨೫೪, ೧೧ನೇ ಶತಮಾನ

೫. ಎ. ಕ, ೧೦, ಅರಸೀಕೆರೆ-೨೫೫, ೧೧ನೇ ಶತಮಾನ

೬. ಎ. ಕ, ೨, ಶ್ರವಣಬೆಳ್ಗೊಳ-೧೫೦, ೧೧ನೇ ಶತಮಾನ

ನಾ. ಗೀತಾಚಾರ್ಯ*

ಆದ್ಯ ಶ್ರೀವೈಷ್ಣವ ಕೀರ್ತನಕಾರರಾಗಿ ಬೇಲೂರು ವೈಕುಂಠದಾಸರು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೀರ್ತನ ಸಾಹಿತ್ಯ ಒಂದು ಪ್ರಮುಖ ಸಾಹಿತ್ಯ ಪ್ರಕಾರ. ಮುಖ್ಯವಾಗಿ ದ್ವೈತ ತತ್ವಪ್ರತಿಪಾದನೆಯಲ್ಲಿ ಸಾಗಿಬಂದಿರುವ ಈ ಸಾಹಿತ್ಯ ಪ್ರಕಾರದಲ್ಲಿ ಎಪ್ಪತ್ತರ ದಶಕದಲ್ಲಿ ಅದ್ವೈತ ತತ್ವಪ್ರತಿಪಾದನೆಯ ಕೀರ್ತನಕಾರರೂ ಇದ್ದಾರೆಂಬ ಹೊಸ ಅಂಶವೂ ಸೇರಿಕೊಂಡಿತು. ಮತತ್ರಯದಲ್ಲಿರುವ ಇನ್ನೊಂದು ಮುಖ್ಯ ತತ್ವವಾದ ವಿಶಿಷ್ಟಾದ್ವೈತ ಕೀರ್ತನೆಗಳೂ ೯೦ರ ದಶಕದಲ್ಲಿ ಆವಿಷ್ಕಾರಗೊಳ್ಳುವ ಮೂಲಕ ಮೂರೂ ತತ್ವಗಳು ಈ ಕೀರ್ತನ ಸಾಹಿತ್ಯದಲ್ಲಿರುವುದು ಖಚಿತವಾದಂತಾಗಿದೆ.(೧)

ವಿಶಿಷ್ಟಾದ್ವೈತವು ಹೊಯ್ಸಳ ವಿಷ್ಣುವರ್ಧನ, ವಿಜಯನಗರದ ಕೃಷ್ಣದೇವರಾಯ, ಮೈಸೂರು ಚಿಕ್ಕದೇವರಾಜ ಒಡೆಯ ಮುಂತಾದವರ ರಾಜಧರ್ಮವಾಗಿ ರಾಜಕೀಯವಾಗಿ ಪ್ರಬಲವಾಗಿದ್ದರೂ ಈ ಧರ್ಮದಲ್ಲಿ ಸಾಹಿತ್ಯ ಕಾಣಿಸಿಕೊಳ್ಳಲಿಲ್ಲವೆಂಬುದು ಸಾಮಾನ್ಯವಾದ ಅಭಿಪ್ರಾಯವಾಗಿದ್ದು ವಿದ್ವಾಂಸರು ಅದಕ್ಕೆ ಹಲವು ಕಾರಣಗಳನ್ನು ಊಹೆ ಮಾಡುತ್ತಾರೆ.(೨) ಆದರೆ ಈ ಅಭಿಪ್ರಾಯವನ್ನು ಸುಳ್ಳಾಗಿಸುವಂತೆ ಹಲವು ಕೃತಿಗಳು ಶ್ರೀವೈಷ್ಣವ ತತ್ವ ಪ್ರತಿಪಾದನೆ ಮಾಡುವಲ್ಲಿ ಯಶಸ್ವಿಯಾಗಿವೆ. ಕನಕದಾಸರ ಮೋಹನ ತರಂಗಿಣಿ ಮತ್ತು ಅವರ ಹಲವು ಕೀರ್ತನೆಗಳು, ಲಕ್ಷ್ಮೀಶನ ಜೈಮಿನಿ ಭಾರತ, ಲಕ್ಷ ಕವಿಯ ರುಕ್ಮಾಂಗದಾ ಚರಿತ್ರೆ, ಚಿಕ್ಕದೇವರಾಯನ ಕಾಲದ ಹಲವು ಕೃತಿಗಳು ಇದಕ್ಕೆ ನಿದರ್ಶನವಾಗಿ ನಿಲ್ಲುತ್ತವೆ. ಕೀರ್ತನ ಸಾಹಿತ್ಯದಲ್ಲಂತೂ ಇದರದ್ದೇ ಒಂದು ಪರಂಪರೆಯನ್ನು ಗುರುತಿಸುವಷ್ಟರ ಮಟ್ಟಿಗೆ ವಿಪುಲವಾದ ಸಾಹಿತ್ಯ ದೊರಕಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಒಂದು ಹೊಸ ಅಧ್ಯಾಯದ ನಿರ್ಮಿತಿಗೆ ಕಾರಣವಾಗಿದೆ. ವಿದ್ವಾಂಸರು ಊಹಿಸಿರುವ ಎಲ್ಲ ಅಭಿಪ್ರಾಯಗಳನ್ನು ಮೀರಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ತತ್ವ ಪ್ರತಿಪಾದನೆ, ಇತರ ತತ್ವಗಳಂತೆಯೇ ಗಟ್ಟಿಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎನ್ನಬಹುದು.

ಈಚಿನ ದಿನಗಳಲ್ಲಿ ನಡೆದ ಶ್ರೀವೈಷ್ಣವ ಕೀರ್ತನ ಸಾಹಿತ್ಯ ಶೋಧದಲ್ಲಿ ಬೆಳಕಿಗೆ ಬಂದ ಕೀರ್ತನಕಾರರ ಸಂಖ್ಯೆ ಹತ್ತಕ್ಕಿಂತ ಹೆಚ್ಚು. ಕೀರ್ತನೆಗಳ ಸಂಖ್ಯೆಯಂತು ಸಾವಿರಕ್ಕೂ ಅಧಿಕ. ಆಶ್ಚರ್ಯವೆನಿಸುವ ರೀತಿಯಲ್ಲಿ ಈ ಆವಿಷ್ಕಾರವಾಗಿರುವುದು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಮೆರಗನ್ನು ತಂದಿದೆಯಲ್ಲದೆ ಕೀರ್ತನ ಸಾಹಿತ್ಯ ಪ್ರಕಾರದಲ್ಲಿ ನೂತನ ಚಿಂತನೆಗೆ ಮತ್ತು ಪುನರ್ ಮೌಲ್ಯ ವಿವೇಚನೆಗೆ ನಾಂದಿಯಾಗಿದೆ. ಬೇಲೂರು ವೈಕುಂಠದಾಸರು, ಕವಿ ಲಕ್ಷ್ಮೀಶ, ತುಳಸಿರಾಮದಾಸರು, ರಂಗದಾಸರು, ವೆಂಕಟ ವರದಾರ್ಯರು, ಅಹೋಬಲದಾಸರು, ಶಾಮಶರ್ಮರು, ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರು, ಸಂಪತ್ತೈಯಂಗಾರ್ಯರು, ನಾರಾಯಣ ಶರ್ಮರುಗಳಲ್ಲದೆ ಮಹಿಳಾ ಕೀರ್ತನಕಾರಿಣಿಯರೂ ಇಲ್ಲಿ ಕಾಣಿಸಿಕೊಂಡಿದ್ದಾರೆ. ಯದುಗಿರಿಯಮ್ಮ ತಿರುಮಲಾಂಬ ಮುಂತಾದವರು ಶ್ರೀ ವೈಷ್ಣವ ತತ್ವ ಪ್ರತಿಪಾದನೆಯ ಕೀರ್ತನೆಗಳಲ್ಲಿ ಗಟ್ಟಿ ಸ್ಥಾನ ಗಳಿಸಬಲ್ಲವರಾಗಿದ್ದಾರೆ.(೩)

ಬೇಲೂರು ವೈಕುಂಠದಾಸರು ಕೀರ್ತನ ಸಾಹಿತ್ಯದ ಉಚ್ಛ್ರಾಯ ಸ್ಥಿತಿಯಲ್ಲಿಯೇ ಅಂದರೆ ಮೊದಲ ಘಟ್ಟದಲ್ಲೇ ಕಾಣಿಸಿಕೊಂಡಿದ್ದು ಉಳಿದ ಮೂರು ಘಟ್ಟಗಳಲ್ಲೇ ಅಲ್ಲದೆ ಆನಂತರವೂ ಈ ಆಧುನಿಕ ಕಾಲದಲ್ಲೂ ಕೀರ್ತನ ಪರಂಪರೆ ನಿರಂತರವಾಗಿ ಮುಂದುವರಿಯುತ್ತಲೇ ಇದೆ. ಹುಡುಕುತ್ತಾ ಹೋದರೆ ಇನ್ನು ಹತ್ತಾರು ಕೀರ್ತನಕಾರರು ಸಿಗುವ ಸಾಧ್ಯತೆಯಿದೆ. ಆಧುನಿಕ ವಚನ ಸಾಹಿತ್ಯ ಪರಂಪರೆಯಂತೆ ಆಧುನಿಕ ಕೀರ್ತನ ಸಾಹಿತ್ಯ ಪರಂಪರೆಯೂ ಈ ಶತಮಾನದಲ್ಲಿ ಕಾಣಿಸಿಕೊಂಡಿರುವುದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಮಾಸ್ತಿ, ಪುತಿನ ಅವರುಗಳ ಅನೇಕ ಕೃತಿಗಳು ಇದಕ್ಕೆ

* ಕನ್ನಡ ರೀಡರ್, ಕನ್ನಡ ಸ್ನಾತಕೋತ್ತರ ವಿಭಾಗ, ಶೇಷಾದ್ರಿಪುರಂ ಕಾಲೇಜ್, ಬೆಂಗಳೂರು - ೫೬೦ ೦೨೦.

ಉದಾಹರಣೆಯಾಗಿ ನಿಲ್ಲಬಲ್ಲವು. ಈ ಬಗ್ಗೆ ಆಸಕ್ತರು ಗಮನ ಹರಿಸಬೇಕು; ವಿದ್ವಾಂಸರು ತಮ್ಮ ಆಲೋಚನೆಗಳನ್ನು ಹರಿಯ ಬಿಡಬೇಕಷ್ಟೇ. ಹಾಗೆ ನೋಡಿದರೆ ಈವರೆಗೆ ಲಭ್ಯವಾಗಿರುವ ಶ್ರೀ ವೈಷ್ಣವ ಕೀರ್ತನ ಸಾಹಿತ್ಯ ಕೃತಿಗಳು ಮೊದಲಬಾರಿಗೆ ಪ್ರಕಟವಾದವುಗಳೇನೂ ಅಲ್ಲ. ಬಹಳ ಹಿಂದೆಯೇ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದವುಗಳದ್ದೇ ಹೆಚ್ಚಿನ ಪಾಲು. ವೈಕುಂಠ ದಾಸರ ಕೀರ್ತನೆಗಳಂತೂ ಎಲ್ಲ ಹರಿದಾಸ ಸಾಹಿತ್ಯ ಸಂಗ್ರಹ ಗಳಲ್ಲೂ ಸ್ಥಾನ ಪಡೆದಿದ್ದವಾದರೂ ಇವುಗಳತ್ತ ವಿದ್ವಾಂಸರ ಗಮನ ಹರಿದಿರಲಿಲ್ಲ. ಇವರನ್ನು ಶ್ರೀ ವೈಷ್ಣವ ಪರಂಪರೆಯ ದೃಷ್ಟಿ ಯಲ್ಲಿರಲಿ ದ್ವೈತ ಕೀರ್ತನ ಸಾಹಿತ್ಯ ದೃಷ್ಟಿಯಲ್ಲೂ ಹೆಚ್ಚಿನ ಚರ್ಚೆಗೆ ಒಳಪಡಿಸಿಲ್ಲದಿರುವುದು ಆಶ್ಚರ್ಯವೆನಿಸುತ್ತದೆ. ವಿಶಿಷ್ಟಾದ್ವೈತ ಸಾಹಿತ್ಯವೇ ಕನ್ನಡದಲ್ಲಿ ಬರಲಿಲ್ಲ ಎಂಬ ಗಟ್ಟಿ ಅಭಿಪ್ರಾಯ ಇದ್ದುದು ಒಂದು ಕಡೆಯಾದರೆ ಈ ಕೀರ್ತನಕಾರರ ಶಿಷ್ಯ ಪರಂಪರೆ ಬೆಳೆಯದುದರಿಂದ ಈ ಸಾಹಿತ್ಯ ಪ್ರಚಾರಕ್ಕೆ ಬಾರದುದು ಇನ್ನೊಂದು ಕಡೆಯಿದ್ದೂ ಇದರ ಈವರೆಗಿನ ಅಜ್ಞಾತವಾಸಕ್ಕೆ ಕಾರಣವೆಂದು ಹೇಳಬಹುದೇನೋ! ಈ ದಶಕದಲ್ಲಾದರೂ ಆವಿಷ್ಕಾರಗೊಂಡು ೨೦ನೇ ಶತಮಾನದ ಕೊನೆಯ ವೇಳೆಗೆ ಈ ಇಡೀ ಸಾಹಿತ್ಯ ಪ್ರಕಟಣೆಗೊಂಡುದುದು ೨೧ನೇ ಶತಮಾನದ ಸಾಹಿತ್ಯ ಚರ್ಚೆಗೆ ಶುಭ ಸೂಚನೆಯಾದಂತಾಗಿದೆ.[೪]

ಈ ಶ್ರೀವೈಷ್ಣವ ಕೀರ್ತನ ಪರಂಪರೆಯಲ್ಲಿ ಬೇಲೂರು ವೈಕುಂಠ ದಾಸರೇ ಸದ್ಯಕ್ಕೆ ಆದ್ಯಕೀರ್ತನಕಾರರಾಗಿ ಕಾಣಿಸಿ ಕೊಂಡಿದ್ದಾರೆ. ಇವರು ದಾಸ ಸಾಹಿತ್ಯದ ಉಚ್ಛ್ರಾಯ ಕಾಲದಲ್ಲಿ ಬರುವ ವಾದಿರಾಜರು, ಪುರಂದರದಾಸರೂ ಕನಕದಾಸರ ಸಮಕಾಲೀನರಾಗಿದ್ದು ಇವರುಗಳೊಂದಿಗೆ ನಿಕಟ ಸಂಪರ್ಕವಿಟ್ಟು ಕೊಂಡಿದ್ದ ಪ್ರಮುಖ ಕೀರ್ತನಕಾರರೆಂದೇ ವಿದ್ವಾಂಸರು ವೈಕುಂಠ ದಾಸರನ್ನು ಗುರುತಿಸಿದ್ದಾರೆ. ಈ ಮೂವರು ಪ್ರಧಾನ ಹರಿದಾಸರು ವೈಕುಂಠ ದಾಸರನ್ನು ಅತ್ಯಂತ ಗೌರವಾನ್ವಿತವಾಗಿ ಸ್ತುತಿಸಿರುವುದನ್ನು ನೋಡಿದರೆ ಇವರು ಅವರುಗಳಿಂದ ಗೌರವಿಸಲ್ಪಟ್ಟಿದ್ದ ಹಿರಿಯ ಹರಿದಾಸರಾಗಿ ಬಾಳಿದ್ದವರೆಂದು ಸುಲಭವಾಗಿ ಊಹಿಸಬಹು ದಾಗಿದೆ. ವೈಕುಂಠದಾಸರು ಅವರ ಸಮಕಾಲೀನರಾದ ಈ ಮೂವರೇ ಅಲ್ಲದೆ ಅಚ್ಯುತ ದಾಸರೆಂಬ ಇನ್ನೊಬ್ಬದಾಸರು (ಇವರ ಬಗ್ಗೆ ಹರಿದಾಸ ಸಾಹಿತ್ಯ ಚರಿತ್ರೆಯಲ್ಲಿ ಖಚಿತ ಮಾಹಿತಿ ಲಭ್ಯವಿಲ್ಲ) ಆಂಧ್ರದ ಪ್ರಸಿದ್ಧ ತಾಳಪಾಕಂ ಅಣ್ಣಮಾಚಾರ್ಯರ ಪರಂಪರೆಯ ದಾಸರು, ಹೀಗೆ ಹಲವಾರು ಕೃತಿಗಳನ್ನು ರಚಿಸಿ ಸ್ತುತಿಸಿರುವಷ್ಟು ಪ್ರಧಾನರೆನಿಸಿದ್ದಾರೆ.

ಬೇಲೂರು ವೈಕುಂಠದಾಸರ ಬಗ್ಗೆ ಈವರೆಗಿನ ಹರಿದಾಸ ಸಾಹಿತ್ಯ ಪ್ರಕಟನೆಗಳಲ್ಲಿ ಎಲ್ಲಿಯೂ ವಿಸ್ತೃತವಾದ ಚರ್ಚೆ ನಡೆದಿಲ್ಲ. ಆದರೆ ಎಲ್ಲ ಪ್ರಮುಖ ಕೃತಿಗಳೂ ಇವರ ಹೆಸರನ್ನು ಉಲ್ಲೇಖಿಸುತ್ತವೆ. ಇವರನ್ನು ಶ್ರೀವೈಷ್ಣವ ಸಂಪ್ರದಾಯದ ಕೀರ್ತನ ಕಾರರೆಂದು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. "ಕನಕದಾಸರೊಡನೆ ಕೂಡಿಕೊಂಡು ಹರಿದಾಸ್ಯದ ಕಳೆಯನ್ನು ಮತ್ತಷ್ಟು ಹೆಚ್ಚಿಸಿದ ಇನ್ನೊಬ್ಬ ದಾಸರೆಂದರೆ ವೈಕುಂಠದಾಸರು. ಅವರು ಬೇಲೂರಿ ನವರು. ಬಾಳಿನ ಬಹು ಭಾಗವನ್ನು ಬೇಲೂರಿನಲ್ಲಿಯೇ ಕಳೆದವರು. ಅವರು ವ್ಯಾಸತೀರ್ಥರ ಬಳಿ ಶಿಷ್ಯವೃತ್ತಿಯನ್ನು ಮಾಡಿದರೋ ಇಲ್ಲವೋ ಖಚಿತವಾಗಿ ತಿಳಿದುಬರುವುದಿಲ್ಲ. ಆದರೆ ಪುರಂದರದಾಸರಿಗೂ ಅವರಿಗೂ ಗೆಳೆತನವಿದ್ದ ಉಲ್ಲೇಖವಿದೆ. ಕನಕದಾಸರಂತೂ ವೈಕುಂಠದಾಸರ ಹಿರಿಮೆಯನ್ನು ಒಂದು ಪದದಲ್ಲಿ ಉಳಿಸಿಯೇ ಇದ್ದಾರೆ. ಈ ದಾಸರು ಶ್ರೀವೈಷ್ಣವ ಸಂಪ್ರದಾಯದವರು. ಅವರು ರಚಿಸಿರುವ ಕೀರ್ತನೆಗಳಲ್ಲಿ 'ವೈಕುಂಠ ಕೇಶವ' ಮುದ್ರಿಕೆಯಿದೆ. ಕನಕದಾಸರೂ ಶ್ರೀವೈಷ್ಣವ ದೀಕ್ಷೆಯನ್ನು ತಳೆದವರು. ಕೇಶವನೇ ಅವರ ಇಷ್ಟದೈವ. ಇವು ವೈಕುಂಠದಾಸರಿಗೂ ಅವರಿಗೂ ಒದಗಿದ ಹೆಚ್ಚಿನ ಮೈತ್ರಿಗೆ ಕಾರಣಗಳಿರಬಹುದು. ಅಂತೂ ವೈಕುಂಠದಾಸರ ಕೀರ್ತನೆಗಳಲ್ಲಿ 'ಪ್ರಪತ್ತಿ ಧರ್ಮ' ಎದ್ದು ಕಾಣುತ್ತದೆ. ಅವರ ಕೀರ್ತನೆಗಳನ್ನೆಲ್ಲ ಕಲೆಹಾಕಿ ಪ್ರಕಟಿಸುವ ಕೆಲಸವಿನ್ನೂ ನಡೆದಿಲ್ಲ. ಇದು ಇವರ ಬಗ್ಗೆ ಈವರೆಗೆ ಲಭ್ಯವಿರುವ ಎಲ್ಲ ಮಾಹಿತಿಗಳ ಒಟ್ಟಾರೆ ಅಭಿಪ್ರಾಯವಾಗಿದೆ. ಬೇಲೂರು ಕೇಶವದಾಸರು ತಮ್ಮ 'ಶ್ರೀ ಕರ್ನಾಟಕ ಭಕ್ತಿ ವಿಜಯ' ಕೃತಿಯಲ್ಲಿ ವೈಕುಂಠದಾಸರ ಕೀರ್ತನೆಗಳು ಹಾಗೂ ಅವರ ಪರಂಪರೆಯವರಿಂದ ದೊರೆತಿದೆ ಎಂದು ಹೇಳುವ ಕೆಲವು ಸಂಪ್ರದಾಯದ ಸಂಗತಿಗಳ ಹಿನ್ನೆಲೆಯಲ್ಲಿ ವೈಕುಂಠದಾಸರ ಬಗ್ಗೆ ದೀರ್ಘವಾದ ಒಂದು ವ್ಯಕ್ತಿಚಿತ್ರವನ್ನು ನೀಡುತ್ತಾರೆ.[೬] ಇದೊಂದೇ ಇವರ ಬಗ್ಗೆ ದೊರೆಯುವ ವಿಸ್ತೃತವಾದ ಮಾಹಿತಿಯಾಗಿದೆಯಾದರೂ ಇದರಲ್ಲಿ ದಾಖಲೆಗಳ ಆಧಾರವಿಲ್ಲದಿರುವುದರಿಂದ ವಾಸ್ತವಾಂಶಕ್ಕಿಂತ ಕಾಲ್ಪನಿಕತೆ ನುಸುಳಿರುವ ಸಾಧ್ಯತೆಯಿದೆ. ದಾಸರ ಬಗ್ಗೆ ಬಹಳ ಹಿಂದೆಯೇ ಇಂಥದೊಂದು ಸಮಗ್ರ ಚಿತ್ರಣವನ್ನು ನೀಡಿದ್ದರೂ ವಿದ್ವಾಂಸರು ಇವರನ್ನು ಕುರಿತು ಹೆಚ್ಚಿನ ಚಿಂತನೆ ನಡೆಸದಿರುವುದು ಆಶ್ಚರ್ಯವೆನಿಸುತ್ತದೆ.

ಸಾವಿರಕ್ಕೂ ಹೆಚ್ಚು ಕೀರ್ತನೆಗಳನ್ನು ವೈಕುಂಠದಾಸರು ಬರೆದಿದ್ದಾರೆಂದು ಬಳಕೆಯ ಮಾತಿದ್ದರೂ ಈವರೆಗಿನ ಪರಿವೀಕ್ಷಣೆ ಯಿಂದ ದೊರೆತಿರುವ ಕೀರ್ತನೆಗಳು ಕೇವಲ ೬೫ ಮಾತ್ರ. ಇವರ ಕೀರ್ತನೆಗಳಿರುವ ಆಕರಗಳನ್ನು ಎರಡು ರೀತಿಯಲ್ಲಿ ಗಮನಿಸ ಬಹುದು. ೧) ಪ್ರಕಟಿತ ಗ್ರಂಥಗಳು ೨) ಹಸ್ತ ಪ್ರತಿಗಳು. ಆದರೆ ಈ ಯಾವುವೂ ವೈಕುಂಠದಾಸರದ್ದೇ ಪ್ರತ್ಯೇಕ ಕೀರ್ತನೆಗಳ ಸಂಕಲನಗಳಾಗಿಲ್ಲ. ಪ್ರಕಟಿತ ಗ್ರಂಥಗಳಲ್ಲಿ ಲಿಂಗಸೂಗೂರಿನ ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮೂಡಲದ ಹನುಮಂತ ರಾವ ಗೊರೆಬಾಳರು, ಪ್ರಕಟಿಸಿರುವ 'ಶ್ರೀ ವಾದಿರಾಜಾದಿ ದಾಸವರ್ಯರ ಸ್ತೋತ್ರ ಪದಗಳು' (೧೯೬೭) ಮತ್ತು 'ಹರಿದಾಸರ

ಪದ ಸುಳಾದಿಗಳು' ಗ್ರಂಥಗಳು; ಉಡುಪಿಯ ಶ್ರೀಮನ್ಮಾಧ್ವ ಸಿದ್ಧಾಂತ ಗ್ರಂಥಾಲಯ ಪ್ರಕಟವಾಗಿರುವ 'ದಾಸರ ಪದ ಸಂಗ್ರಹ' (೧೯೭೩) ಕೃತಿಗಳಲ್ಲಿ ಇತರ ದಾಸರ ಹಾಡುಗಳೊಂದಿಗೆ ವೈಕುಂಠ ದಾಸರ ಹಾಡುಗಳೂ ಪ್ರಕಟವಾಗಿವೆ. ಹಸ್ತಪ್ರತಿಗಳಲ್ಲಿ ಕೊರಟಿ ಶ್ರೀನಿವಾಸರಾಯರ ಸಂಗ್ರಹದಲ್ಲಿದ್ದ ಕಾಗದದ ಹಸ್ತಪ್ರತಿ 'ಕೆಲವು ದೇವರನಾಮದ ಹಾಡುಗಳು'; ಕೆಳದಿ ವಸ್ತುಸಂಗ್ರಹಾಲಯ ದಲ್ಲಿರುವ 'ವೇಲಾಪುರಿ ಕೇಶವ ನೀತಿಗೀತ' ಎಂಬ ಓಲೆಗರಿ ಗ್ರಂಥ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ 'ವೈಕುಂಠದಾಸರ ಕೀರ್ತನೆಗಳು' ಎಂಬ ಕಾಗದದ ಹಸ್ತಪ್ರತಿಗಳು ಲಭ್ಯವಾಗಿದ್ದು ಇವುಗಳಲ್ಲಿ ಮೊದಲೆರಡು ಹಸ್ತಪ್ರತಿಗಳಲ್ಲಿ ವೈಕುಂಠದಾಸರ ಕೀರ್ತನೆಗಳೊಂದಿಗೆ ಇತರ ದಾಸರ ಹಾಡುಗಳು ಇವೆ. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಮಾತ್ರ ವೈಕುಂಠ ದಾಸರ ಕೀರ್ತನೆಗಳನ್ನೊಳಗೊಂಡ ಹಸ್ತಪ್ರತಿಯೇ ಆಗಿದ್ದರೂ ಅದರಲ್ಲೂ ಇದೇ ಸಂಪ್ರದಾಯದ ಇನ್ನೊಬ್ಬ ಕವಿ ಲಕ್ಷ್ಮೀಶನ ಕೆಲವು ಕೀರ್ತನೆಗಳು ಇವೆ.

ಕೊರಟಿಯವರ ಸಂಗ್ರಹದ ಹಸ್ತಪ್ರತಿಯಲ್ಲಿ[೭] ವೈಕುಂಠ ದಾಸರ ಕೆಲವು ಕೀರ್ತನೆಗಳೊಂದಿಗೆ 'ಗಜೇಂದ್ರ ಮೋಕ್ಷ' ಮತ್ತು 'ಶನೇಶ್ವರ ದಂಡಕ' ಎಂಬ ಎರಡು ವೈಕುಂಠದಾಸರ ಕೃತಿಗಳೂ ಲಭ್ಯವಿದೆ. ಇದೇ ಗಜೇಂದ್ರಮೋಕ್ಷ ಪುರಂದರದಾಸರ ಮತ್ತು ಲಕ್ಷ್ಮೀಶನ ಹೆಸರಿನಲ್ಲೂ ಈಗಾಗಲೆ ಪ್ರಕಟವಾಗಿದ್ದು ಕೊನೆಯ ಪದ್ಯದ ಅಂಕಿತ ಬದಲಾವಣೆಯನ್ನು ಬಿಟ್ಟರೆ ಉಳಿದಂತೆ ಹೆಚ್ಚಿನ ವ್ಯತ್ಯಾಸವೇನೂ ಇವುಗಳಲ್ಲಿ ಕಂಡುಬರುವುದಿಲ್ಲ. ಕೆಲವು ಪಾಠಾಂತರ ವ್ಯತ್ಯಾಸ ಮಾತ್ರ ಅಲ್ಲಲ್ಲಿ ಕಂಡುಬರುತ್ತಿದ್ದು ಇದರ ನಿಜವಾದ ಕರ್ತೃತ್ವದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಶನೇಶ್ವರ ದಂಡಕ ಶ್ರೀ ವೈಷ್ಣವ ಕೀರ್ತನ ಸಾಹಿತ್ಯದ ಲಕ್ಷಣವಾದ 'ಶ್ರೀ ಹರಿ ಏಕನಿಷ್ಠೆ'ಗೆ ಭಿನ್ನವಾಗಿದ್ದರೂ ಅನೇಕ ಶ್ರೀ ವೈಷ್ಣವ ಕೀರ್ತನಕಾರರು ಈ ನಿಷ್ಠೆಯನ್ನು ದಾಟಿರುವುದರಿಂದ ವೈಕುಂಠ ದಾಸರ ಹೆಸರಿನಲ್ಲೇ ಇದನ್ನು ಸ್ವೀಕರಿಸಲು ಅಡ್ಡಿಯೇನಿಲ್ಲ. ಇದರ ಮೂಲಕ ವೈಕುಂಠದಾಸರು ಕೀರ್ತನೆಗಳ ಜೊತೆಗೆ ದಂಡಕವನ್ನೂ ರಚಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ.

ಕೆಳದಿ ಹಸ್ತಪ್ರತಿ 'ಕೇಶವ ನೀತಿಗೀತ' ಒಂದು ರೀತಿಯಲ್ಲಿ ವಿಶಿಷ್ಟ ಪ್ರತಿಯಾದರೂ ಈಗಾಗಲೆ ಕೆಳದಿ ಗುಂಡಾ ಜೋಯಿಸರು ಅಭಿಪ್ರಾಯ ಪಟ್ಟಿರುವಂತೆ[೮] ವೈಕುಂಠದಾಸರೇ ರಚಿಸಿರುವ ಹಾಡುಗಳ ಸಂಗ್ರಹವಲ್ಲ. ಇದು ಬೇಲೂರಿನ ಕೇಶವನನ್ನು ಕುರಿತಂತೆ ವಿವಿಧ ದಾಸರು ರಚಿಸಿರುವ ಹಾಡುಗಳಿಗೆ ಸ್ವರ-ಪ್ರಸ್ತಾರ ಹಾಕಿರುವ ಸಂಗೀತ ಪ್ರಧಾನ ಕೃತಿ. ಓಲೆಗರಿಯೊಂದರಲ್ಲಿ ಕೀರ್ತನೆಗಳಿಗೆ ಸ್ವರ ಪ್ರಸ್ತಾರ ಹಾಕಿರುವ ಹಿನ್ನೆಲೆಯಲ್ಲಿ ಇದು ವಿಶಿಷ್ಟವೆನಿಸುತ್ತದೆ. ಇದರಲ್ಲಿ ವೈಕುಂಠದಾಸರ ಹಾಡುಗಳೂ ಕೆಲವಿದ್ದು ಸಂಗೀತಕ್ಕೆ ಅಳವಡಿಸುವ ಮುಖ್ಯ ಕೃತಿಗಳಲ್ಲಿ ವೈಕುಂಠ ದಾಸರೂ ಸೇರ್ಪಡೆಯಾಗಿರುವುದು ಇವರಿಗಿರುವ ಪ್ರಾಧಾನ್ಯತೆಯ ದ್ಯೋತಕವಾಗಿಯೂ ಈ ಹಸ್ತಪ್ರತಿ ವಿಶೇಷತೆಯನ್ನು ಪಡೆದಿದೆ ಎನ್ನಬಹುದು.

ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಕೆ. ಎ. ೫೭೯/೧ 'ವೈಕುಂಠದಾಸರ ಕೀರ್ತನೆಗಳು,[೯] ವೈಕುಂಠ ದಾಸರ ಹಾಡುಗಳ ಸಂಕಲನವಾಗಿದೆ. ಇದರಲ್ಲಿರುವ ಕೀರ್ತನೆಗಳು ಉಳಿದ ಹಸ್ತಪ್ರತಿ ಗಳು ಮತ್ತು ಪ್ರಕಟಿತ ಗ್ರಂಥಗಳು ಇದ್ದರೂ ಅವುಗಳಲ್ಲಿಲ್ಲದ ಕೆಲವು ಹೊಸ ಕೀರ್ತನೆಗಳೂ ಇದರಲ್ಲಿರುವುದರಿಂದ ಮತ್ತು ಪಾಠಗಳ ದೃಷ್ಟಿಯಿಂದ ತಕ್ಕಮಟ್ಟಿಗೆ ಉತ್ತಮವೆನಿಸುವ ಪಾಠಗಳಿರುವುದರಿಂದ ಇದುವರೆಗಿನ ಆಕರಗಳಲ್ಲೆಲ್ಲ ಅತ್ಯುತ್ತಮ ಆಕರವಾಗಿ ಇದನ್ನು ಪರಿಭಾವಿಸಬಹುದಾಗಿದೆ. ಇದರಲ್ಲಿ ಲಕ್ಷ್ಮೀಶನ ಕೆಲವು ಕೀರ್ತನೆಗಳೂ ಇದ್ದು ಲಕ್ಷ್ಮೀಶನ ಕೀರ್ತನೆಗಳ ಮೇಲೂ ಇದು ಬೆಳಕು ಚೆಲ್ಲುತ್ತದೆ.

ಇವುಗಳನ್ನು ಬಿಟ್ಟರೆ ಇವರ ಬಗ್ಗೆ ಇನ್ನು ಕೆಲವು ಆಕರಗಳ ಸೂಚನೆಯಿದ್ದರೂ ಅವುಗಳ ಬಗ್ಗೆ ಯಾವ ಮಾಹಿತಿಯೂ ಈವರೆಗೆ ಲಭ್ಯವಾಗಿಲ್ಲ. ಬೇಲೂರು ಕೇಶವದಾಸರು ಹೇಳುವ 'ದಾಸರ ದೌಹಿತ್ರ ಸಂತತಿಯ ಹಿಪ್ಪರಗಿಯ ಜೀರ್ಣವಹಿ ಸಂಗ್ರಹವಾಗಲಿ, ೧೯೩೧ರ ಎಂ.ಎ. ಆರ್‌ನಲ್ಲಿ ದಾಖಲೆಯಾಗಿ ದೆಯೆಂದು ಡಿ. ಎಲ್. ಎನ್. ಸೂಚಿಸಿರುವುದನ್ನು ಜಿ. ವರದರಾಜರಾಯರು ದಾಖಲಿಸಿರುವ ದಾಸರ ವಂಶಸ್ಥರಾದ ರಾಮದಾಸರ ಸಂಗ್ರಹವಾಗಲಿ[೧೦] ದೊರಕಿಲ್ಲ. ಇವುಗಳ ಬಗ್ಗೆ ಯಾರಲ್ಲಿಯೂ ಮಾಹಿತಿಯೂ ಲಭ್ಯವಿಲ್ಲ. ಇವು ಲಭ್ಯವಾದರೆ ವೈಕುಂಠದಾಸರ ಕೀರ್ತನೆಗಳು ಇನ್ನಷ್ಟು ದೊರಕುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ.

ವೈಕುಂಠದಾಸರ ಕಾಲವನ್ನು ಕವಿ ಚರಿತಕಾರರು ಒಂದೆಡೆ ೧೬೮೦ ಎಂದೂ ಇನ್ನೊಂದೆಡೆ ೧೪೫೦ ಎಂದೂ ದಾಖಲಿಸಿದ್ದಾರೆ. ಎರಡನೇ ಉಲ್ಲೇಖಕ್ಕೆ 'ಈಚೆಗೆ ದೊರೆತ ಕೆಲವು ಪ್ರಾಚೀನ ಕಾವ್ಯಗಳು, ಎಂ. ಎಸ್. ಬಸವಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೨೪-೪, ಪು. ೨೮೫ರ ಉಲ್ಲೇಖವನ್ನು ಆಧರಿಸಿ' ಎಂಬ ಟಿಪ್ಪಣಿಯನ್ನು ನೀಡಿದ್ದಾರೆ.[೧೧] ಜಿ. ವರದರಾಜರಾಯರು ೧೫೦೦ ಎಂದಿದ್ದಾರೆ, ಎಸ್. ಕೆ. ರಾಮಚಂದ್ರರಾಯರು ವಾದಿರಾಜರು, ಪುರಂದರ, ಕನಕದಾಸರ ಸಮಕಾಲೀನರೆಂದಿದ್ದಾರೆ. ಬೇಲೂರು ಕೇಶವದಾಸರು ೧೫೮೦ ಎಂದಿದ್ದಾರೆ. ಕೀರ್ತನೆಗಳಲ್ಲಿ ಲಭ್ಯವಾಗುವ ಹಲವು ಸಂಗತಿಗಳ ಮತ್ತು ಸಮಕಾಲೀನ ದಾಸರ ಕಾಲ ಹಾಗೂ ತಾಳ್ಳಪಾಕಂ ಚೆನ್ನಯ್ಯನ ಉಲ್ಲೇಖದ ಹಿನ್ನೆಲೆಯಲ್ಲಿ ದಾಸರ ಕಾಲವನ್ನು ಕ್ರಿ. ಶ. ೧೪೫೦ ರಿಂದ ೧೫೦೦ ರ ಅವಧಿಯಲ್ಲೇ ನಿರ್ಧರಿಸ ಬೇಕಾಗುತ್ತದೆ. ಇದು ದಾಸ ಸಾಹಿತ್ಯದ ಉನ್ನತಿ ಕಾಲವೂ ಆರಂಭ ಕಾಲವೂ ಆಗಿರುವುದರಿಂದ ಇದಕ್ಕಿಂತ ಮೊದಲಿಗೆ ಶ್ರೀವೈಷ್ಣವ

ಪರಂಪರೆಯ ಸಾಹಿತ್ಯವಾಗಲಿ, ಕೀರ್ತನಕಾರರಾಗಲೀ ಲಭ್ಯವಿಲ್ಲದಿರುವುದರಿಂದ ಬೇಲೂರು ವೈಕುಂಠದಾಸರೇ ಈ ಪರಂಪರೆಯಲ್ಲಿ ಆದ್ಯ ಕೀರ್ತನಕಾರರೆನಿಸುತ್ತಾರೆ. ಅಷ್ಟೇ ಏಕೆ ಕನ್ನಡದಲ್ಲಿ ಲಭ್ಯವಿರುವ ಶ್ರೀ ವೈಷ್ಣವ ಸಾಹಿತ್ಯದಲ್ಲಿಯೇ ಮೊದಲಿಗರೆನಿಸುತ್ತಾರೆ.

ಇವರ ಜೀವನ ವಿವರಗಳು, ಕೀರ್ತನೆಗಳ ವೈಶಿಷ್ಟ್ಯ, ಶ್ರೀ ವೈಷ್ಣವ ಕೀರ್ತನ ಸಾಹಿತ್ಯದ ಲಕ್ಷಣಗಳು, ಅದರಲ್ಲಿ ಇವರ ಕೀರ್ತನೆಗಳ ಸ್ಥಾನ, ಒಟ್ಟು ಕೀರ್ತನ ಸಾಹಿತ್ಯದ ಹಿನ್ನೆಲೆಯಲ್ಲಿ ವೈಕುಂಠದಾಸರ ಕೀರ್ತನೆಗಳ ಮಹತ್ವ ಇತ್ಯಾದಿ ವಿವರಗಳನ್ನು ಇನ್ನೊಂದೆಡೆ[೧೨] ಚರ್ಚಿಸಿರುವುದರಿಂದ ಇಲ್ಲಿ ಪ್ರಸ್ತಾಪಿಸದೆ ಶೀರ್ಷಿಕೆಯ ಅಂಶದ ಚರ್ಚೆಗಳಷ್ಟೇ ಇಲ್ಲಿ ಸೀಮಿತ ಮಾಡಿಕೊಳ್ಳಲಾಗಿದೆ.

ಹರಿದಾಸ ಚರಿತ್ರೆಯಲ್ಲಿ ಪ್ರಮುಖ ಕೀರ್ತನಕಾರರಾಗಿರುವ ವಾದಿರಾಜರು ವೈಕುಂಠ ದಾಸರನ್ನು 'ದಾಸೋತ್ತಮನು ನೀನೇ ಶ್ರೀ ವೈಕುಂಠದಾಸೋತ್ತಮನು ನೀನೇ' ಎಂದು ಸ್ತುತಿಸಿದ್ದರೆ ಕನಕದಾಸರು 'ಬಂಟನಾಗಿ ಬಾಗಿಲ ಕಾಯ್ವೆ ಶ್ರೀ ವೈಕುಂಠ ದಾಸರ ದಾಸರ ದಾಸರ ಮನೆಯೆ ಎಂದು ಸ್ತುತಿಸಿದ್ದಾರೆ. ಹೀಗೆ ದಾಸವರ್ಯರಿಂದ ಸ್ತುತಿಸಲ್ಪಟ್ಟಿರುವ ವೈಕುಂಠದಾಸರು ದಾಸ ಸಾಹಿತ್ಯದ ಪ್ರಥಮ ಘಟ್ಟದಲ್ಲಿ ದಾಸ ಶ್ರೇಷ್ಠರಾಗಿದ್ದರೂ ಅವರಿಗೆ ಸಲ್ಲಬೇಕಾದ ನ್ಯಾಸವನ್ನು ಸಾಹಿತ್ಯ ಚರಿತ್ರೆ ಸಂದಾಯ ಮಾಡಿಲ್ಲ. ಇನ್ನು ಮೇಲಾದರೂ ಇವರ ಮಹತ್ವವನ್ನು ದಾಖಲಿಸಬೇಕಾದ ಅಗತ್ಯವಿದೆ. ದಾಸ ಸಾಹಿತ್ಯದ ಪ್ರಾರಂಭದ ಹಂತದಿಂದಲೇ ದ್ವೈತ ಪರಂಪರೆಯೊಂದಿಗೆ ವಿಶಿಷ್ಟಾದ್ವೈತ ಪರಂಪರೆಯೂ ಕಾಣಿಸಿಕೊಂಡು ಬೆಳೆದು ಬಂದಿರುವುದನ್ನೂ ಈ ದಾಖಲೆಯಲ್ಲಿ ಸೇರಿಸಬೇಕಾಗಿದೆ. ಒಟ್ಟಾರೆ ವೈಕುಂಠದಾಸರ ಕೀರ್ತನೆಗಳ ಶೋಧ ಅವರ ಇತಿವೃತ್ತ, ಅವರ ಕೀರ್ತನೆಗಳ ಪರಿಶೀಲನೆ ಕೀರ್ತನ ಸಾಹಿತ್ಯಕ್ಕೇ ಒಂದು ಹೊಸ ಆಯಾಮವನ್ನು ಒದಗಿಸಲಿದೆ. ಈವರೆಗಿನ ಸಾಹಿತ್ಯ ಚರ್ಚೆಗೆ ಹೊಸ ಅಂಶಗಳನ್ನು, ನೂತನ ದೃಷ್ಟಿಕೋನವನ್ನು ಸೇರಿಸಿಕೊಂಡು ಮಾರ್ಪಡಿಸಬೇಕಾಗಿದೆ.

ಈ ಮೂಲಕ ವೈಕುಂಠದಾಸರು ಶ್ರೀ ವೈಷ್ಣವ ಭಕ್ತಿ ಮಾರ್ಗವಾದ 'ಪ್ರಪತ್ತಿ ಧರ್ಮ'ದ[೧೩] ಅನುಷ್ಠಾನದಲ್ಲಿ ಮೊದಲಿಗರೆನಿಸಿದ್ದೂ ಇವರ ನಂತರ ಒಂದು ಪರಂಪರೆಯೇ ಕಾಣಿಸಿಕೊಂಡಿದ್ದು ಕನ್ನಡ ಸಾಹಿತ್ಯ ಚರಿತ್ರೆ ಗುರುತಿಸಿದ್ದ ಕೊರತೆಯನ್ನು ನಿವಾರಿಸುವ ಮಹತ್ವದ ಉಲ್ಲೇಖವಾಗಿದ್ದಾರೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ನೋಡಿ : **ಮೂವರು ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು**, ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರ ೧೯೯೯, ಪ್ರಸ್ತಾವನೆ, ಪು. ೧೨.

*೨. **ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು**, ತುಮಕೂರು ಜಿಲ್ಲಾ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೮ ರಲ್ಲಿ ಹೆಚ್ಚಿನ ವಿವರಗಳನ್ನು ನೋಡಬಹುದು.

*೩. ನೋಡಿ : ನಾ. ಗೀತಾಚಾರ್ಯ: 'ಶ್ರೀ ವೈಷ್ಣವ ಕೀರ್ತನ ಸಾಹಿತ್ಯ : ಹೊಸ ಶೋಧ', **ಇತಿಹಾಸದರ್ಶನ**, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ೧೯೯೮.

*೪. ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆಯು ರೂಪಿಸಿರುವ 'ಸಮಗ್ರ ದಾಸ ಸಾಹಿತ್ಯ ಪ್ರಕಟನ ಯೋಜನೆ'ಯಲ್ಲಿ ಪ್ರಸ್ತುತ ಲೇಖನದ ಲೇಖಕನಿಂದ ಸಂಪಾದಿತವಾಗಿ ಈ ಎಲ್ಲ ಶ್ರೀ ವೈಷ್ಣವ ಕೀರ್ತನೆಗಳೂ ಪ್ರಕಟವಾಗುತ್ತಿವೆ.

*೫. ಎಸ್. ಕೆ. ರಾಮಚಂದ್ರ ರಾವ್: **ದಾಸ ಸಾಹಿತ್ಯ**, ಐಬಿಎಚ್ ಪ್ರ. ಬೆಂಗಳೂರು ೧೯೮೭, ಪು. ೮೭.

*೬. ಬೇಲೂರು ಕೇಶವ ದಾಸರು: **ಶ್ರೀ ಕರ್ನಾಟಕ ಭಕ್ತ ವಿಜಯ**, ಪು. ೨೦೪.

*೭. ಈ ಹಸ್ತಪ್ರತಿ ಮತ್ತು ಪ್ರಕಟಿತ ಗ್ರಂಥಗಳು ಶ್ರೀ ಬಿ. ಎಸ್. ಅನಂತ ಪದ್ಮನಾಭ ರಾವ್ ಅವರಲ್ಲಿದ್ದು ಪರಿಶೀಲನೆಗೆ ನೀಡಿ ಉಪಕರಿಸಿದ್ದಕ್ಕಾಗಿ ಕೃತಜ್ಞನಾಗಿದ್ದೇನೆ.

*೮. ಕೆಳದಿ ಗುಂಡಾಜೋಯಿಸ್: 'ವೇಲಾಪುರಿ ಕೇಶವ ಸೇತಿಗೀತ - ಕೆಳದಿ ಹಸ್ತಪ್ರತಿ', **ಕರ್ನಾಟಕ ಲೋಚನ**, ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೯-೨, ಡಿಸೆಂ. ೯೬, ಪು. ೨೪.
ಈ ಹಸ್ತಪ್ರತಿಯನ್ನು ಪರಿಶೀಲಿಸಲು ಅನುಮತಿಯಿತ್ತ ವಸ್ತು ಸಂಗ್ರಹಾಲಯದ ಗೌರವಾಧ್ಯಕ್ಷರಾದ ಪ್ರೊ॥ ಎಸ್. ಆರ್. ರಾವ್ ಅವರಿಗೂ ಸಂಸ್ಥಾಪಕರಾದ ಕೆಳದಿ ಗುಂಡಾಜೋಯಿಸ್‌ರಿಗೂ ಕ್ಯುರೇಟರರಾದ ವೆಂಕಟೇಶ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

*೯. ಈ ಹಸ್ತಪ್ರತಿಯನ್ನು ಪರಿಶೀಲಿಸಲು ಸಹಕರಿಸಿದ ಅಧ್ಯಯನ ಸಂಸ್ಥೆಯ ನಿರ್ದೇಶಕರಿಗೂ ಸಂಪಾದನಾ ವಿಭಾಗದ ಮುಖ್ಯಸ್ಥರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

*೧೦. ಜಿ. ವರದರಾಜರಾಯರ ಲೇಖನ, 'ಹಸ್ತಪ್ರತಿಶಾಸ್ತ್ರ', ಬಿಎಂಶ್ರೀ ಪ್ರತಿಷ್ಠಾನ, ಬೆಂಗಳೂರು ೧೯೮೫. M.A.R.ನ ಪುಟ ೮೦ರಲ್ಲಿ ಈ ದಾಖಲೆ ಹೀಗಿದೆ 'Library of Mr. Ramdas a Desendent of the famous scholar, musician and poet Vaikuntha Dasa of Bellur'.

*೧೧. **ಕರ್ನಾಟಕ ಕವಿಚರಿತೆ** ಸಂ. ೩, ಅನುಬಂಧ ಪು. ೩.

*೧೨. ಸಮಗ್ರ ದಾಸಸಾಹಿತ್ಯ ಸಂಪುಟ ೩೫, ಭಾಗ - ೧, ಬೇಲೂರು ವೈಕುಂಠ ದಾಸರು ಮತ್ತು ಇತರ ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು, (ಕನ್ನಡ ಸಂಸ್ಕೃತಿ ಇಲಾಖೆಯ ಪ್ರಕಟನೆಗಾಗಿ ಸಲ್ಲಿಸಿರುವ ಹಸ್ತಪ್ರತಿ).

*೧೩. ಇದು ಶ್ರೀ ವೈಷ್ಣವ ಕೀರ್ತನೆಗಳ ವಿಶಿಷ್ಟ ಲಕ್ಷಣವಾಗಿದೆ. ಪ್ರಪತ್ತಿ ಎಂದರೆ ಶರಣಾಗತಿ ಹೆಚ್ಚಿನ ವಿವರಗಳಿಗೆ ನೋಡಿ : ಉಲ್ಲೇಖ - ೧.

ಹರಿಹರ ಶ್ರೀನಿವಾಸರಾವ್*

ಹರಪನಹಳ್ಳಿ ಭೀಮವ್ವನ ಹಾಡುಗಳು - ಸೂಪಶಾಸ್ತ್ರ ವೈದ್ಯಶಾಸ್ತ್ರದ ಹಿನ್ನೆಯಲ್ಲಿ

ಭೀಮವ್ವ ಹೊಸ ಪೇಟೆಯ ತುಂಗಭದ್ರ ಅಣೆ ಕಟ್ಟಿನ ಹಿನ್ನೀರಿನಿಂದ ಮುಳುಗಡೆಯಾಗಿರುವ ನಾರಾಯಣದೇವರಕೇರಿ ಎಂಬಲ್ಲಿ ೧೯ನೇ ಶತಮಾನದ ಆದಿಭಾಗದಲ್ಲಿ ಹುಟ್ಟಿ, ಮದುವೆಯ ನಂತರ ಹರಪನಹಳ್ಳಿಗೆ ಬಂದು ತನ್ನ ಜೀವಿತದ ದೀರ್ಘಾವಧಿಯನ್ನು ಕಳೆದು ಕಾಲವಾದದ್ದು ಕ್ರಿ.ಶ.೧೯೦೧ರಲ್ಲಿ (ಸ್ಥಳ: ಸೊಂಡೂರು).

ಮಧ್ಯಮ ವರ್ಗದ ಮಾಧ್ವಸಂಪ್ರಾದಯಸ್ಥ ಕುಟುಂಬಕ್ಕೆ ಸೇರಿದ ಭೀಮವ್ವ ತನ್ನ ಪತಿವಿಯೋಗದ ನಂತರ ಹರಪನಹಳ್ಳಿಗೆ ೫-೬ಕಿ.ಮೀ ದೂರದಲ್ಲಿರುವ ತಿಮ್ಮಲಾಪುರದೊಡೆಯನಾದ ವೆಂಕಟೇಶ್ವರನಲ್ಲಿ ಅದಮ್ಯ ಭಕ್ತಿಯುಳ್ಳವಳಾಗಿ, ಆತನನ್ನು ಬಗೆಬಗೆಯಾಗಿ 'ಭೀಮೇಶ ಕೃಷ್ಣ' ನೆಂಬ ಅಂಕಿತನಾಮ ದಿಂದ ಬಣ್ಣಿಸುತ್ತಾ ಅನೇಕ ಹಾಡುಗಬ್ಬಗಳನ್ನು ಹೆಣೆದಿದ್ದು, ಇಂದು ಕನ್ನಡನಾಡಿನಲ್ಲಷ್ಟೇ ಅಲ್ಲದೆ ತಿರುಪತಿಯವರೆಗೂ ಈ ನಾದದ ಸೌರಭಹರಡಿದೆ. ಈಕೆ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಯಾಗಿದ್ದ ಜಾಪದದ ಸಿರಿಯಜ್ಜಿ!

ಕೃತಿಗಳು: *ಶ್ರಾವಣ ಶುಕ್ರವಾರದ ಹಾಡು, ಶನಿವಾರದ ಹಾಡು, ಸೋಮವಾರದ ಹಾಡು, ಎಳೆಯಷ್ಟಮಿ, ಮಂಗಳಗೌರಿ ಹಾಡು ಇತ್ಯಾದಿ.*

ಕನ್ನಡ ಭಾಷಾ ಸಾಹಿತ್ಯದ ವೈಶಿಷ್ಟಗಳಲ್ಲಿ ಒಂದಾದ 'ಸಾಂಗತ್ಯ'ದ ಛಂದಸ್ಸಿನಲ್ಲಿ ಕೇವಲ ೮-೧೦ ಪದ್ಯಗಳಲ್ಲಿ ೬೮ ಬಗೆಯ ಅಡುಗೆಗಳನ್ನು ಶುಕ್ರವಾರ, ಶನಿವಾರ ಹಾಡುಗಳಲ್ಲಿ ಸುಲಭವಾಗಿ ಮನಮುಟ್ಟುವಂತೆ ಬಣ್ಣಿಸಿದ್ದಾಳೆ. ದಾಸಸಾಹಿತ್ಯದ ಪ್ರಖರ ಪ್ರಭಾವವನ್ನಿಲ್ಲಿ ಕಾಣಬಹುದಾದರೂ ಈ ನೆಲದ ಭಾಷೆ, ತಿಂಡಿ ತೀರ್ಥಗಳು ನಮ್ಮ ದೈನಂದಿನ ಆರೋಗ್ಯದ ಮೇಲೆ ಬೀರಿರುವ ಪ್ರಭಾವ ಹಾಗೂ ಕಂಪ್ಯೂಟರ್‌ಯುಗದ ಇಂದಿನ ದಿನಗಳಿಗೂ ಹೊಂದಿಕೊಳ್ಳುವ ಬಗ್ಗೆ ಸೂಪ ಶಾಸ್ತ್ರ, ವೈದ್ಯ ಶಾಸ್ತ್ರದ ಮೂಲಕ ಪರಿಶೀಲಿಸಲಾಗಿದೆ. ಇನ್ನೊಂದು ಪ್ರಮುಖ ಅಂಶ ವೆಂದರೆ ಇಲ್ಲಿ ಹೇಳಿರುವ ಅಡುಗೆಗಳನ್ನು ಇಂದಿಗೂ ಶ್ರಾವಣ ಮಾಸದ ಸೋಮವಾರ, ಮಂಗಳವಾರ, ಶುಕ್ರವಾರ, ಶನಿವಾರ ಗಳಂದು ತಯಾರಿಸುವ ಪರಿಪಾಠ ಇದ್ದೇ ಇದೆ.

ಶ್ರಾವಣ ಶುಕ್ರವಾರದ ಹಾಡಿನ ಪದ್ಯಗಳು

ಭಕ್ಷ ಶ್ಯಾವಿಗೆ ಪರಮಾನ್ನ ಚಿತ್ರಾನ್ನ
ಸಣ್ಣಕ್ಕಿ ಶಾಲ್ಯಾನ್ನ ಸೂಪಗಳು।
ಚಕ್ಕುಲಿ ಗಿಲಗಂಚಿ ಛಂದುಪ್ಪೇರಿಯು
ಹಪ್ಪಳ ಸಂಡಿಗೆ ಅಂಬೊ ಅಂಬೊಡೆಗಳು ॥೨೧॥

ಸಕ್ಕರ, ಘೃತ, ಕ್ಷೀರ, ಸಕಲ ಪಾಕ್ವಾನ್ನ
ಮಂಡಿಗೆ ಬೀಸೂರಿಗೆ ಗುಳ್ಳೋರಿಗೆಗಳೂ।
ಚಂದ್ರಸಂತ್ಹೋಲ್ವ ಶ್ಯಾವಿಗೆ ಫೇಣಿ, ಆದಿವ್ಯ
ಬುಂದೆ ಬುರುಬುರಿ ಅನ್ನ ರಸವೂ ॥೨೨॥

ಬೇಕಾದ ಬೇಸನ್ನು ಬಿಳಿಯದ್ವಳೇದುಂಡಿ
ಮೋತಿ ಚೂರು ಚೂರ್ಣ ಲಾಡು।
ಸೇತುಟುಕಂಬಿಳುಪಿನಂತೆ ಜಿಲೇಬಿ
ಸುಖಿಸುಂಡೆ ಮುಖ ವಿಲಾಸಗಳು ॥೨೩॥

ಮೋಳಿಗ್ಗಕ್ಕೋರಿಗೆ ಹೂದೋಸೆ ಆಹಾರ
ತೈಲದಿ ಕರಿದ್ಹೂರಣ ಕಡುಬು।
ಸುರಳಿ ಹೋಳಿಗೆ ಉದ್ದಿನ ಬೇಳೆ
ಮೆಣಸಿನಕಾಯಿ ಇಂಗಿನಿದೊಪ್ಪುವ ಕಡಬು ॥೨೪॥

ಸಾರು ಸಂಬಾರ ಸಾಸಿವೆ ಕಾಯಿಪಲ್ಲೆ
ಉಪ್ಪೇರಿ ಉಪ್ಪಿನಕಾಯಿ ರಸವೂ।
ಖೀರು ಮಾಲತಿ ಗವಲಿ ಪರಡಿ ಪರಮಾನ್ನ
ಮುನಾರ ಚಟ್ಟಣಿ ಕೋಸಂಬ್ರಿಗಳೂ ॥೨೫॥

* ೩೫/೧೫, ಹೊ.ಪಿಕಾಸ್ ಶಾಲೆ ಎದುರು, ೫ನೇ ಬ್ಲಾಕ್, ಬನಶಂಕರಿ ೨ನೇ ಹಂತ, ಬೆಂಗಳೂರು -೫೬೦ ೦೮೫.

ಹಾಗಲಕಾಯಿ ಸೌತೆ ಹಂದರದವರೆ ಹೀರೆ
ಬಾಳೆ ಬೆಂಡೆ ಕುಂಬಳವು।
ಮಾದಲ ತೆಂಗಿನಕಾಯಿ ಕಲಸು ಮೇಲೋಗರ
ಗೆಣಸು ಗುಳದಕಾಯಿ ಬೀಜಗಳು ॥೨೬॥

ನಿಂಬೆಭಾತು ಸೌತೆಭಾತು ಕೇಸರಿಭಾತು
ಕೆನೆಕೆನೆ ಮೊಸರು ಮಗ್ಗರಣೀ।
ಬಿಸಿಹಾಲು ಹೊಸ ಬೆಣ್ಣೆಯಿಂದೊಪ್ಪುವ
ಕಲಸು ಕಬಾಳಿ ಭಾತುಗಳು ॥೨೭॥

ಮುದ್ದು ಮಹಾಲಕ್ಷ್ಮೀಗೆ ನೈವೇದ್ಯ ಮಾಡಿದರು
ಅನಿರುದ್ಧ ಮಾರುತಿ ಸಹಿತಾಗಿ।
ಶುದ್ಧ ಸುಣ್ಣವು ಎಲೆಯಡಿಕೆ ಯಾಲಕ್ಕಿ
ಪತ್ರೆಕಾಯಿ ಕಾಚು ಲವಂಗ ॥೨೮॥

ಕನ್ನಡ ಸಾಹಿತ್ಯದಲ್ಲಿ ಅಡುಗೆ ವಿಚಾರ

ಶಾಕಾಹಾರ, ಮಾಂಸಾಹಾರಗಳನ್ನು ಕುರಿತಂತೆ ಕನ್ನಡದಲ್ಲಿ ಚಾವುಂಡರಾಯನ *ಲೋಕೋಪಕಾರ*[೧] (ಕ್ರಿ.ಶ.೧೦೨೫) ಗುರುಲಿಂಗ ದೇಶಿಕನ **ಲಿಂಗ ಪುರಾಣ** (ಸು. ೧೯ನೇ ಶತಮಾನದ)[೨] ಮೈಸೂರು ವಿಶ್ವವಿದ್ಯಾಲಯದ ೪೨ನೇ ನಂಬರಿನ ಪಾಕಶಾಸ್ತ್ರ[೩] ಇದು ನಾಮಕವಿ ರಚಿಸಿದ ಗದ್ಯಗ್ರಂಥ, ಮೂರನೇ ಮಂಗರಸನ **ಸೂಪಶಾಸ್ತ್ರ** ಇತ್ಯಾದಿ ಗ್ರಂಥ ಸಾಹಿತ್ಯವಿದೆ. ಇಷ್ಟಲ್ಲದೇ ಪ್ರಸಿದ್ಧ ಕವಿಗಳು ತಮ್ಮ ಕಾವ್ಯಗಳಲ್ಲಿ ನವರಸೋತ್ಪತ್ತಿಗೆ ಆಧಾರವೋ ಎನ್ನುವಂತೆ ಸ್ವಯಂವರದ ನಂತರದ ಭೋಜನ ಪ್ರಕರಣ, ರಾಜರ ಭೋಜನ ವೈಭವ, ದೇವರಿಗೆ ನೈವೇದ್ಯ ಮಾಡುವ ವರ್ಣನೆ ರಸಪಾಕವನ್ನು ಕನ್ನಡಿಗರಿಗೆ ಯಥೋಚಿತವಾಗಿ ವಡ್ಡಾರಾಧನೆ, ಸುಕುಮಾರ ಚರಿತೆ[೪], ಬಸವರಾಜದೇವರರಗಳೆ,[೫] ಲೀಲಾವತಿ, ಸಿದ್ಧರಾಮಚಾರಿತ್ರ, ಪಾರ್ಶ್ವನಾಥ ಪುರಾಣ, ಪ್ರಭುಲಿಂಗ ಲೀಲೆ, ಭರತೇಶ ವೈಭವ, ಊಟದ ರಗಳೆ, ಇತ್ಯಾದಿ ಕೃತಿಗಳಲ್ಲಿ ಉಣಬಡಿಸಿದ್ದಾರೆ.

ಕುಮಾರವ್ಯಾಸನು ಪಾಕಶಾಸ್ತ್ರವನ್ನು ಸುವಾರ (ಸೂಪಕಾರ ವಿದ್ಯೆ) ಎಂದೇ ಕರೆದಿದ್ದಾನೆ. ಸರ್ವಜ್ಞನ ಪದಗಳಲ್ಲಿ ಆಹಾರದ ಬಗ್ಗೆ ಸಾಕಷ್ಟು ಮಾಹಿತಿ ಇದೆ. ದಾಸ ಶ್ರೇಷ್ಠರಲ್ಲಿ ಒಬ್ಬರಾದ ಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದಲ್ಲಿ ನಾವು ಸೇವಿಸುವ ಆಹಾರದಲ್ಲಿ ಎಷ್ಟು ರಸಗಳು ದೇಹದ ಯಾವ ಯಾವ ಭಾಗದಲ್ಲಿ ತಯಾರಾಗುತ್ತವೆ, ಅವುಗಳ ಅಭಿಮಾನಿ ದೇವತೆಗಳಾರು? ಆಹಾರದಿಂದ ಉಂಟಾಗುವ ರಸೋತ್ಪತ್ತಿಯಿಂದಾಗಿ ಮಾನವನ ದೇಹದಲ್ಲಿ ಯಾವರೀತಿಯ ಗುಣಗಳು ಉಂಟಾಗುತ್ತವೆ? ಎನ್ನುವುದನ್ನೂ ಸ್ಪಷ್ಟವಾಗಿ ಶರೀರ ಶಾಸ್ತ್ರಕ್ಕೆ ಹೋಲಿಸಿ ಚಿತ್ರಿಸಿದ್ದಾರೆ. ಇದಕ್ಕಾಗಿ ನೈವೇದ್ಯ ಪ್ರಕರಣದಲ್ಲಿ ಭೋಜನ ರಸವಿಭಾಗ ಸಂಧಿ ಎಂದು ಒಂದು ಸಂಧಿಯನ್ನೇ ಮೀಸಲಾಗಿಟ್ಟಿದ್ದಾರೆ.

ಜೀವಕ್ಕೆ ಮೂಲಾಧಾರವೇ ಆಹಾರ; ನಂತರ ನಿದ್ರೆ ಅದರ ನಂತರ ಮೈಥುನವೆಂಬ ರಹಸ್ಯವನ್ನು ಕಂಡುಕೊಂಡ ಭಾರತೀಯರು ವೇದ, ಉದಕಶಾನ್ತಿ ಮಂತ್ರಗಳಲ್ಲಿ ಆಹಾರ ಸೇವನೆಯನ್ನು 'ಅನ್ನಯಜ್ಞ' ವೆಂದೇ ಕರೆದಿದ್ದಾರೆ. ಅದರ ಗುಣ ದೋಷಗಳನ್ನೂ ವಿಶೇಷವಾಗಿ ವಿವರಿಸಿದ್ದಾರೆ. ಇಂದಿನ ಶರೀರವಿಜ್ಞಾನ ದೃಷ್ಟಿಯಿಂದ ನೋಡಿದಾಗಲೂ ದೈಹಿಕ-ಮಾನಸಿಕ ಕ್ರಿಯೆಗಳು ಹಾಗೆಯೇ ನಡೆಯುತ್ತಿವೆ. ಪಾಶ್ಚಾತ್ಯ ವೈಜ್ಞಾನಿಕ ದೃಷ್ಟಿ, ನಮ್ಮಲ್ಲಿಲ್ಲ ಎನ್ನುವವರಿಗೆ ಸವಾಲೆನ್ನಿಸುವಂಥ ಮಹತ್ವದ ಸಂಗತಿಗಳು, ಆಯಾಕಾಲದಲ್ಲಿ , ಆಯಾಭಾಷೆಯಲ್ಲಿ, ಅಲ್ಲಿಯ ಪ್ರಾದೇಶಿಕತೆಯನ್ನು ಅನುಸರಿಸಿ ಬಂದಿವೆ ಎನ್ನುವುದಕ್ಕೆ ಚಾವುಂಡರಾಯನಿಂದ ಮೊದಲ್ಗೊಂಡು, ಭೀಮವ್ವನವರೆಗೆ ಕಾವ್ಯಗಳಲ್ಲಿ ಒಡಮಾಡಿ ನಿಂತಿರುವುದೇ ಸಾಕ್ಷಿಯಾಗಿದೆ.[೬]

ಭೀಮವ್ವನು ಹೇಳಿದ ಶಾಕಾಹಾರಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಅ **ಸಿಹಿ ಪದಾರ್ಥಗಳು:** ಹೋಳಿಗೆ, ಎಣ್ಣೋರಿಗೆ, ಮಂಡಿಗೆ, ಬೀಸೂರಿಗೆ, ಗುಳ್ಳೋರಿಗೆ, ಶ್ಯಾವಿಗೆ ಫೇಣಿ, ಸುರಳಿ ಹೋಳಿಗೆ ಇತ್ಯಾದಿ.
ಅನ್ನದಿಂದ ತಯಾರಾದವು: ೪ ವಿಧಗಳು: ಪರಮಾನ್ನ, ಪಕ್ವಾನ್ನ, ಅನ್ನರಸ, ಶಾಲ್ಯಾನ್ನ
ಪಾಯಸಗಳು: ೪ ವಿಧ: ಖೀರು, ಮಾಲತಿ, ಗವಲಿ, ಪರಡಿ ಪಾಯಸ

ಆ *ಖಾರದ ಪದಾರ್ಥಗಳು: ರಸಗಳು:* ಸಾರು, ಸಾಂಬಾರ, ಅನ್ನರಸ, ಉಪ್ಪಿನಕಾಯಿರಸ, ಸೂಪಗಳು.
ಭಾತುಗಳು: ನಿಂಬೆ ಭಾತು, ಸೌತೇಭಾತು, ಕೇಸರಿಭಾತು, ಕಾಬಾಳೇಭಾತು
ಕಲಸುಮೇಲೋಗರಗಳು:
ಹಾಗಲಕಾಯಿ, ಸೌತೆ, ಹಂದರದವರೆ (ಬಳ್ಳಾರಿ ಭಾಷೆಯಲ್ಲಿ ಚಪ್ಪರದವರೆ) ಹೀರೇಕಾಯಿ, ಬೆಂಡೇಕಾಯಿ, ಕುಂಬಳಕಾಯಿ, ಮಾದಲಕಾಯಿ, ತೆಂಗಿನಕಾಯಿ, ಗೆಣಸು, ಗುಳದಕಾಯಿ ಬೀಜಗಳು

ಇ **ವಿಶೇಷ ಖಾದ್ಯಗಳು:** ಸುಖಿನುಂಡೆ, ಮುಖವಿಲಾಸ, ಉದ್ದಿನ ಕಡುಬು, ಎಣ್ಣೋರಿಗೆ, ಚಪ್ಪರದವರೆ ಭಾತು ಹುರಿಕಡಲೆ ಬೆಲ್ಲದ ಹೂರಣವಿರುವ ಒಂದು ರೀತಿಯ ಕರಿದ ಕಡುಬಿಗೆ ಹರಪನಹಳ್ಳಿ ಭಾಗದಲ್ಲಿ ಕರ್ಜಿಕಾಯಿ, ಕರ್ಚಿಕಾಯಿ ಅಥವಾ ಗಿಲಗಂಚಿ ಎನ್ನುತ್ತಾರೆ. ಉಪ್ಪೇರಿ=Chips.

ಇತ್ತೀಚೆಗೆ ಬೆಂಗಳೂರಿನಲ್ಲಿ ಕನ್ನಡ ಜಾನಪದ ಕೋಶದ ಬಿಡುಗಡೆ ಸಂದರ್ಭದಲ್ಲಿ ಕೇಳಿಬಂದದ್ದೇನೆಂದರೆ ಆಯಾ ಜನಾಂಗದ ಜನ ತಮ್ಮ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಸುತರಾಂ ಉಪಯೋಗಿಸುವುದಿಲ್ಲ ಎನ್ನುವುದು.

ಉದಾ: ಬ್ರಾಹ್ಮಣರಲ್ಲಿ-ಭಕ್ರಿ; ಬ್ರಾಹ್ಮಣೇತರರಲ್ಲಿ-ರೊಟ್ಟಿ

ಆದರೆ ಜನಪದ ಕವಯಿತ್ರಿಯರೆಂದೆನಿಸಿರುವ ದಾವಣಗೆರೆ ಜಿಲ್ಲೆಯವರಾದ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮನಂಥವರಿಗೆ ಇಂಥ ಮಾತುಗಳು ಅನ್ವಯಿಸುವುದಿಲ್ಲ ಎನ್ನುವುದಕ್ಕೆ ಮೇಲೆ ಹೇಳಿದ ಗಿಲಗಂಚಿ, (ಇದು ಇತರರು ಉಪಯೋಗಿಸುವ ಪದವೇ) ಶನಿವಾರದ ಹಾಡಿನಲ್ಲಿ ಬರುವ ಶಬ್ದಗಳು ಹೀಗಿವೆ.

ಹಿಟ್ಟಿನ ಕಡುಬು ಪುಂಡಿ ಪಲ್ಯವನೆಮಾಡಿ
ಅಚ್ಚೆಳ್ಳು ಗಾಣದೆಣ್ಣೆಯನು।
ನುಚ್ಚು ಮಜ್ಜಿಗೆಹುಳಿ ತಿಳಿಯ ಕಟ್ಟಂಬಲಿ
ಇಟ್ಟರು ನೈವೇದ್ಯವನು ॥೭॥

ಹೊಳೆವ ಚಿನ್ನದ ಹರಿವಾಣದೋಳ್
ಕಡುಬು ಕಟ್ಟಂಬಲಿ ಬಡಿಸೆ।
ತರಿಸಿದೆಳ್ಳೆಣ್ಣೆ ಹಿಂಡಿಪಲ್ಯ ತಾಂಬೂಲ
ನಲಿ ನಲಿದಾಡಿ ನೋಡುತಲಿ ॥೮॥

ಇಲ್ಲಿ ಬಂದಿರುವ ನುಚ್ಚು (ಹುಳಿನುಚ್ಚು), ಹಿಟ್ಟಿನ ಕಡುಬು, ಹಿಂಡಿಪಲ್ಯ ಪುಂಡಿಪಲ್ಯ, ಅಂಬಲಿ ಇವೆಲ್ಲವೂ ಹರಪನಹಳ್ಳಿ ಯಲ್ಲಿಯೇ ಏಕೆ ಸಾಮಾನ್ಯವಾಗಿ ಕರ್ನಾಟಕದಾದ್ಯಂತ ಜನಪದರು ಉಪಯೋಗಿಸುವ, ಮನೆ ಮನೆಯಲ್ಲೂ ತಯಾರಿಸುವಂಥ ಆರೋಗ್ಯದ ಭಾಗ್ಯನಿಧಿಗಳೇ ಆಗಿವೆ.

ಅನ್ನವನ್ನು ಜರಿದರೆ ಏನಾಗುತ್ತದೆ? ಎನ್ನುವುದನ್ನು ಬಿಂಬಿಸುವ ಪದ್ಯ ಹೀಗಿದೆ.

ಒಂದೊಂದು ಅಡಿಗೆ ನಿಂದ್ಯವ ಮಾಡಿ ನಗುತಿರೆ
ಕುಂದಿತು ಸಕಲ ಸಂಪತ್ತು
ಬಂದಿತು ಪರರಾಜರಿಂದ ಮುತ್ತಿಗೆ ಧಾಳಿ
ಬಂಧನ ಮಾಡಬೇಕೆಂದೆನುತ।

ತಿನ್ನುವ ಅನ್ನುವನ್ನು ಧಿಕ್ಕರಿಸುವುದರಿಂದ ಉಂಟಾಗುವ ಹಾನಿಯನ್ನು ಹೇಳುವ ಸರ್ವಜ್ಞನ ವಚನವಿದು:

ಕನ್ನವನು ಕೊರಿಸುವುದು। ಭಿನ್ನವನು ತರಿಸುವುದು
ಬನ್ನದ ಸೆರೆಗೆ ಒಯ್ಯುವುದು ಒಂದು ಹಿಡಿ
ಅನ್ನ ನೋಡೆಂದ ಸರ್ವಜ್ಞ॥

ರೂಪಕಗಳು, ಶಬ್ದಶಿಲ್ಪಗಳು, ಬಡತನದ ಬೇಗೆಯಿಂದ ಉದಿಸುವ ಚಿತ್ರಭೇದಕ ನುಡಿಗಳು

ಅಕ್ಕ ಸಾಯಕ್ಕ, ರಾಜನ ಮನೆಯಲ್ಲಿರುತ್ತಾಳೆ. ಮೇಲೆ ಹೇಳಿದಂತೆ ಅನ್ನವನ್ನೂ ಮತ್ತು ಗೌರಿಯನ್ನೂ ತಂಗಿ ಧೇಯಕ್ಕ ಧಿಕ್ಕರಿಸಿ ಮಾತನಾಡಿದಾಗ ಪ್ರಧಾನಿಯ ಮನೆಗೆ ಕೊಟ್ಟಿದ್ದರೂ ಆಕೆಯ ಸಂಪತ್ತೆಲ್ಲಾ ಕರಗಿ ಹೋಗುತ್ತದೆ. ತಿನ್ನಲೂ ಕೂಳಿಲ್ಲದಾಗ ಅಕ್ಕನ ಮನೆಗೆ ಸಹಾಯಕ್ಕೆಂದು ಬರುತ್ತಾಳೆ. ಅಲ್ಲಿ ಆಕೆಯನ್ನು ಸಂಭ್ರಮದಿಂದ ಸ್ವಾಗತಿಸಿದ ದಿನ ಶ್ರಾವಣದ ಸಂಪತ್ತು ಶುಕ್ರವಾರವಾಗಿದ್ದರಿಂದ ೭೪ ಬಗೆಯ ತಿಂಡಿ ತಿನಸುಗಳನ್ನು ವ್ರತಕ್ಕೆಂದು ತಯಾರಿಸಿರುತ್ತಾರೆ. ಮರುದಿನ ಸಂಪತ್ತು ಶನಿವಾರ ಆದ್ದರಿಂದ ಅಕ್ಕ ಗೌರಿ ನೈವೇದ್ಯಕ್ಕೆಂದು ಅಡುಗೆಯ ಕ್ರಮವನ್ನು ಸೊಸೆಯಂದಿರನ್ನು ಕರೆದು ಹೇಳುತ್ತಾಳೆ.

ಬೆಳಗಾಗಲೆದ್ದು ಹೇಳಿದಳೆ ಆ ಸೊಸೆಯರ ಕರೆದು
ಸಾಯಕ್ಕ ಕೆಲಸವ।
ಬಿಳಿಜೋಳ ಕುಟ್ಟಿ ಬೀಸಿರೆ ನೀವು ಇಂದಿನ
ಅಡುಗೆಯ ಕ್ರಮವ ಹೇಳುವೆನು॥

ಹುಳಿನುಚ್ಚು ಮಾಡಿರೆ ತಿಳಿಯ ಕಟ್ಟಂಬಲಿ
ಎಳೆಸೊಪ್ಪ ಪುಂಡಿ ಪಲ್ಯವನು।
ತರಿಸುವೆ ಗಾಣದ ಎಳ್ಳಿನ ತಿಳಿಯೆಣ್ಣೆ
ಹಿಟ್ಟಿನ ಕಡುಬ ನೀವ್ ಎನುತ॥

ಅದಕೇಳಿ ಧೇಯಕ್ಕನ ಹೃದಯ ತಲ್ಲಣಿಸುತ್ತ
ಎದೆಯೊಳಗಲುಗು ನೆಟ್ಟಂತೆ।
ಉರಿಯ ಒಳಗೆ ಉಣ್ಣೆಸುರುವಿದಂತಾಯಿತು
ಸಿರಿಯ ಸಂಪತ್ತಿನಿಂದಾಕೆ।

ಗರಗಸದಿಂದಲಿ ಕೊರೆದುಪ್ಪಸಾಸಿವೆ ಅರೆದ್ವಚ್ಚಿದಂಥ ಮಾತುಗಳು ॥೪೯॥

ಕೆಟ್ಟು ಬಡವರು ಬರಬಾರದು ಜಗದೊಳು
ಅಟ್ಟುಂಬೋ ಮನೆಯ ಬಾಗಿಲಿಗೆ।
ಕಷ್ಟದಿ ಕಾಲ ಕಳೆಯಲಾಗದಿದ್ದರೆ
ಕಟ್ಟಡವಿ ಸೇರೋದೇ ಲೇಸು॥

ಪರರ ಮನೆಯಲಿ ಅಪಹಾಸ್ಯವಾಗುವುದಕ್ಕಿಂತ
ವನವಾಸಗಳು ಲೇಸೆಂದೆನುತ।
ಮನದ ಸರಿತಾಪ ಸೈರಿಸಲಾರದೆದ್ದಳು
ದನವನ್ನೇ ಕಟ್ಟೊ ಮಂದಿರಕೆ॥

ಎತ್ತಿನ ಗೋದಾನಿ ಒಳಗೆ ಕಂದಲದಂಟು*
ಸಪ್ಪೆಗಳನೆ ಹೊದ್ದು ಕೊಂಡು
ಕಚ್ಚುತ್ತಿರಲು ಚಿಕ್ಕಾಡು ಕ್ರಿಮಿಗಳೆಲ್ಲ
ಅತ್ತಿತ್ತಲುಗದೆ ಮಲಗಿದಳು॥

ಅಂತೂ ಕಷ್ಟಪಟ್ಟು ಸಾಯಕ್ಕನ ಸೊಸೆಯರು ಧೇಯಕ್ಕನನ್ನು ಹುಡುಕಿ ತಂದಾಗ, ಅಕ್ಕ ತಂಗಿಯ ಸಿಟ್ಟಿಗೆ ಕಾರಣವೇನೆಂದು ಕೇಳಿದಾಗ

ಹೇಳುವುದೇನು? ಕೇಳುವುದೇನು ನಿಮಗಿಂತ
ಏಳುವಾದೆನೆ ನಾನೆಂದೆನುತ
ಜೋಳದನ್ನವಕಾಣದೆ ನಾ ಬಂದೇನೆ?
ನಾಳೆ ಪೋಗುವೆ ನಮ್ಮ ಮನೆಗೆ
ಭಕ್ಷ್ಯಪಾಯಸ ಮಾಡಿ ನಿನ್ನಿನ ದಿವಸ

* ಕಂದಲದಂಟು-ವಿಶೇಷಪದ = ಹಸು, ಎತ್ತುಗಳು ತಿಂದು ಬಿಟ್ಟಂಥ ಒಣ ಜೋಳದ ಮೇವು.

ಈವತ್ತು ದುರ್ಭಿಕ್ಷ ದಡಿಗೆಯು
ಭಿಕ್ಷಕ್ಕೆ ಬಂದೇನೇ ನಿಮ್ಮ ಮನೆಗೆ ನಾನು
ಆ ಕ್ಷಣ ಜಲವ ತುಂಬಿದಳು॥

ಸುಖಿನುಂಡೆ ತಯಾರಿಸುವ ವಿಧಾನ

ಭೀಮವ್ವ ಹೇಳಿರುವ ಭಕ್ಷ್ಯಗಳನ್ನು ತಯಾರಿಸುವ ವಿಧಾನಗಳೆಲ್ಲ ಹೆಚ್ಚಿನವು ದೊರೆಯುತ್ತವಾದರೂ ಬಾಯಿರುಚಿಯನ್ನೂ, ಮನದ ಬೇಸರವನ್ನೂ ಆಗಾಗ್ಗೆ ಪರಿಹರಿಸಿಕೊಳ್ಳಲು ಬೇಕಾಗಾದ ಈ ತಿಂಡಿಯನ್ನು ಮಾಡಿಕೊಳ್ಳಬಹುದು. ಇಂದಿನ ಅವಶ್ಯಕತೆಗೆ ತಕ್ಕಂತೆ ತಯಾರಿಸಿಕೊಳ್ಳುವ ವಿಧಾನವಿದು.

ಬೇಕಾಗುವ ಪದಾರ್ಥಗಳು: ೧ ಪಾವು ಅಕ್ಕಿ ಹಿಟ್ಟು, ೧ ಹೋಳು ತೆಂಗಿನಕಾಯಿ, ೪೦೦ಗ್ರಾಂ. ಬೆಲ್ಲ, ೫ ಗ್ರಾಂ ಕರೀಎಳ್ಳು, ೧/೨ ಕೆ.ಜಿ. ಎಣ್ಣೆ, ತುಪ್ಪ ಅಥವಾ ರೀಫಂಡ್ ಆಯಿಲ್, ೧೦೦ ಗ್ರಾಂ ಉದ್ದಿನ ಹಿಟ್ಟು, ೪ ಏಲಕ್ಕಿಕಾಯಿ

ಮಾಡುವ ಕ್ರಮ: ಅಕ್ಕಿಹಿಟ್ಟನ್ನು ಕೆಂಪಗೆ ಹುರಿದುಕೊಳ್ಳಬೇಕು. ತೆಂಗಿನಕಾಯಿ ಮತ್ತು ಬೆಲ್ಲದ ಪುಡಿಯನ್ನು ಕಲಸಿಕೊಂಡು ಏಲಕ್ಕಿಯನ್ನು ಬೆರಸಬೇಕು. ಅಕ್ಕಿಹಿಟ್ಟು ಮತ್ತು ಕಾಯಿಬೆಲ್ಲದ ಹೂರಣವನ್ನು ಸೇರಿಸಿ ಸಣ್ಣ ಸಣ್ಣ ಉಂಡೆಗಳನ್ನು ತಯಾರಿಸಿಕೊಂಡು ಅವುಗಳಲ್ಲಿ ಒಂದೊಂದನ್ನೇ ಉದ್ದಿನ ಹಿಟ್ಟಿನಲ್ಲಿ ಅದ್ದಿ ಎಣ್ಣೆ, ತುಪ್ಪ ಅಥವಾ ರೀಫಂಡ್ ಆಯಿಲ್‌ನಲ್ಲಿ ಕರಿಯಬೇಕು.

ವೈದ್ಯಕೀಯ ಹಿನ್ನೆಲೆ

ಮಜ್ಜಿಗೆ: ವೈದ್ಯಗ್ರಂಥ ಭಾವ ಪ್ರಕಾಶದಲ್ಲಿ ೧೦ ವಿಧವಾಗಿ ಮಜ್ಜಿಗೆ ತಯಾರಿಸುವ ವಿಧಾನವನ್ನು ವಿವರಿಸಲಾಗಿದೆ.

೧. *ಉದಶ್ವಿತ್:* ಅರ್ಧನೀರು ಹಾಕಿ ಕಡೆದ ಮಜ್ಜಿಗೆ; ೨. *ಮಥಿತ:* ನೀರಿಲ್ಲದೆ ಕಡೆದ ಮಜ್ಜಿಗೆ, ೩. *ತಕ್ರ:* ಕಾಲುಪಾಲು ನೀರು ಹಾಕಿ ಕಡೆದ ಮಜ್ಜಿಗೆ ಇದರಲ್ಲಿ ಇನ್ನೊಂದು ರೀತಿಯೂ ಬಳಕೆಯಲ್ಲಿತ್ತು. ೪. *ದಂದಾಹತ:* ಒಂದಕ್ಕೆ ಎರಡೂವರೆ ನೀರುಹಾಕಿ ಕಡದದ್ದು, ೫. *ಗೋಳಕ:* ಸಮ ಪ್ರಮಣದಲ್ಲಿ ನೀರು ಹಾಕಿ ಕಡೆದದ್ದು. ೬. *ಕಾಲಶೇಯ:* ಮೂರು ಪಾಲು ನೀರು ಹಾಕಿ ಕಡೆದದ್ದು. ೭. *ಬಾಡಬ:* ಒಂದಕ್ಕೆ ಎರಡುಪಾಲು ನೀರು ಹಾಕಿ ಕಡೆದದ್ದು, ೮. *ಕರಮರ್ದಿತ:* ನೀರು ಹಾಕದೇ ಕೈಯಲ್ಲೇ ಗಲ್ಲೆ ಹೊಡೆದದ್ದು, ೯. *ಮಿಳಿತ:* ಎರಡೂ ಕಾಲು ಅರೆಕಾಲು ನೀರು ಹಾಕಿ ಕಡೆದದ್ದು. ೧೦. *ಅತಿ ಮಿಳಿತ:* ಮೂರು ಪಾಲಿಗಿಂತ ಹೆಚ್ಚು ನೀರು ಹಾಕಿ ಕಡೆದದ್ದು.

ಮಂಗರಸನ ಸೂಪಶಾಸ್ತ್ರದಲ್ಲಿ ಮಜ್ಜಿಗೆಯನ್ನು ಹೇಗೆ ಔಷಧಿಯಾಗಿ ಬಳಸಬೇಕೆಂದು ಹೇಳಿದ್ದಾನೆ (ಪುಟ ೯೩).

ಗೋಳಕ: ಕೆನೆಯ ತೆಗೆಯದೆ ಕಡೆದ ಮಜ್ಜಿಗೆ. ಇದು ವಾತ ಪಿತ್ತವನ್ನು ಕಡಿಮೆ ಮಾಡುತ್ತದೆ.

ಮಥಿತ: ನೀರನ್ನು ಹಾಕದೇ ಕೆನೆಯನ್ನು ತೆಗೆದು ಕಡೆಯುವುದು ಇದು ಪಿತ್ತ ಮತ್ತು ಶ್ಲೇಷ್ಮವನ್ನು ಕೆಡಿಸುವುದು.

ಸಿಂಧು: ೩ ಭಾಗ ಮೊಸರು. ೧ ಭಾಗ ನೀರು ಹಾಕಿ ಕಡೆದು ಬೆಣ್ಣೆಯ ಭಾಗವನ್ನು ಪೂರ್ತಿ ತೆಗೆದು ಹಾಕಿದಂಥದ್ದು. ಇದರಿಂದ ಪ್ರವೇಹ, ಮೂಲವ್ಯಾದಿ ಗುಣವಾಗುತ್ತದೆ.

ತಕ್ರ: ಅರ್ಧನೀರು ಅರ್ಧಮೊಸರನ್ನು ಸೇರಿಸಿ ಕಡೆದು ಬೆಣ್ಣೆಯನ್ನು ಬೇರೆಯಾಗಿ ತೆಗೆದು ಉಪಯೋಗಿಸುವಂಥಾದ್ದು. ಇದು ಆಹಾರವನ್ನು ಸುಲಭವಾಗಿ ಪಚನ ಮಾಡಲು ಜಠರಕ್ಕೆ ಸಹಾಯ ಮಾಡುತ್ತದೆ.

ಒಳ್ಳೆಯ ಆಹಾರವೇ ಒಳ್ಳೆಯ ಸಂಸ್ಕೃತಿಗೆ ಆಧಾರ. (Good food is Good Culture). ಭೀಮವ್ವನು ಹೇಳಿರುವ ಅಡುಗೆಗಳಲ್ಲಿ ಅಂದಿನ ವೈದ್ಯಕೀಯ ಮಾಹಿತಿ ಇಂತಿದೆ:

ಕಾರ್ಬೋ ಹೈಡ್ರೇಟ್ಸ್ ಅಥವಾ ಶರ್ಕರ ಪಿಷ್ಠ ಅಂಶಗಳು:

ಅಕ್ಕಿ, ಗೋಧಿ, ಜೋಳ, ಸಕ್ಕರೆ, ಬೆಲ್ಲ, ಆಲೂಗಡ್ಡೆ (ಉಪ್ಪೇರಿ) ಗೆಣಸು, ಬಾಳೇಹಣ್ಣುಗಳು. ವೈದ್ಯ ವಿಜ್ಞಾನದ ಪ್ರಕಾರ ಪ್ರತಿದಿನ ಕನಿಷ್ಠ ೧೦೦ ಗ್ರಾಂ ಗಳನ್ನಾದರೂ ಶರ್ಕರಪಿಷ್ಠಾಂಶವಿರುವ ಆಹಾರವನ್ನು ಸೇವಿಸಬೇಕು. ಇದು ಶರೀರಕ್ಕೆ ಶಕ್ತಿಯನ್ನು ನೀಡುತ್ತದೆ. ಇವು ಕಡಿಮೆ ಪೂರೈಕೆಯಾದರೆ ಅಪೌಷ್ಠಿಕತೆ ಉಂಟಾಗಿ ಬಹಳ ಬೇಗ ಆಯಾಸವಾಗುತ್ತದೆ. ದೇಹದ ಬೆಳವಣಿಗೆಗೆ ಧಕ್ಕೆಯಾಗುತ್ತದೆ.

ಪ್ರೋಟೀನ್ಸ್: (ಸಸಾರಜನಕ) ಶರೀರ ನಿರ್ಮಾಣದ ಆಹಾರ ಇದಾಗಿದ್ದು ಜೀವಕೋಶಗಳ ರಿಪೇರಿಗೆ ಮತ್ತು ಹೊಸ ಜೀವಕೋಶಗಳ ರಚನೆಗೆ ಅತ್ಯಗತ್ಯವಾದ ಅಂಶವಿದು. ಗರ್ಭಿಣಿಯರಿಗೆ, ಹಾಲುಣಿಸುವ ತಾಯಂದಿರಿಗೆ ಮತ್ತು ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀಡಬೇಕು. ಭಾರತೀಯ ವೈದ್ಯಕೀಯ ಪರಿಷತ್ತಿನ (Indian Institute of Medical Science) ವರು ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಅವನ / ಅವಳ ಶರೀರದ ಪ್ರತಿ ಒಂದು ಕೆ.ಜಿ. ತೂಕದ ಒಂದು ಗ್ರಾಂ. ಇರಬೇಕೆಂದು ನಿಗದಿ ಪಡಿಸಿರುತ್ತಾರೆ. ಒಂದು ಗ್ರಾಂ ಪ್ರೋಟೀನ್ ಸುಮಾರು ೪ ಕಿಲೋ ಕ್ಯಾಲರಿಯಷ್ಟು ಶರೀರಕ್ಕೆ ಶಕ್ತಿಯನ್ನು ನೀಡುತ್ತದೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಶಕ್ತಿ ಸಸಾರಜನಕಕ್ಕೆ ಇದೆ. ಸುಟ್ಟಗಾಯಗಳಿಂದ ತೊಂದರೆ ಪಡುತ್ತಿರವವರಿಗೆ ಕ್ಷಯ ರೋಗದವರಿಗೆ ಮತ್ತು ರೊಮ್ಯೊಟಿಕ್‌ಜ್ವರ (ಮೂಳೆ ಸವೆತದಿಂದುಂಟಾಗುವ ತೊಂದರೆ) ದವರಿಗೆ ಹೆಚ್ಚು ಪ್ರೋಟೀನ್ ಅತ್ಯವಶ್ಯ.

ಪ್ರೋಟೀನ್ ಇರುವ *ಪದಾರ್ಥಗಳು:* ಕಾಳುಗಳು, ಎಣ್ಣೇಬೀಜಗಳು, ಹಾಲು ಇತ್ಯಾದಿ

ಹಾಲಿನಲ್ಲಿ ಪ್ರತಿ ಗ್ರಾಂಗೆ - ೩.೫ ರಿಂದ ೪ ಗ್ರಾಂ
ಕಾಳುಗಳಲ್ಲಿ ಪ್ರತಿ ೧೦ ಗ್ರಾಂಗೆ - ೬
ಗೆಡ್ಡೆಗಳಲ್ಲಿ - ೧ ರಿಂದ ೧.೫ ಗ್ರಾಂ

ವಿಟಮಿನ್ ಬಿ: ಗೋಧಿ, ಕಡ್ಲೆಕಾಯಿ ಬೀಜ, ಬೇಳೆ ಕಾಳುಗಳಲ್ಲಿ ಇದುಹೆಚ್ಚಾಗಿರುತ್ತದೆ.

ಉಪಯೋಗ: ಮೈಚರ್ಮ, ನರವ್ಯೂಹಗಳನ್ನು ಅಭಿವೃದ್ಧಿ ಪಡಿಸುತ್ತದೆ. ರಕ್ತಕಣಗಳು ರೂಪುಗೊಳ್ಳಲು, ಆಹಾರ ಹೀರಿಕೊಳ್ಳಲು ಸಹಾಯವಾಗುತ್ತದೆ.

ಹೀಗೆ ನಮ್ಮ ಶರೀರಕ್ಕೆ ಪ್ರಮುಖವಾಗಿ ವೈದ್ಯರು ಗುರ್ತಿಸಿರುವ ೭ ಘಟಕಗಳಲ್ಲಿ ೩ ನ್ನು ಮಾತ್ರ ಸಂಕ್ಷಿಪ್ತವಾಗಿ ವಿವರಿಸಿದೆ. ಇಂದಿನ ಸರಕುಸಂಸ್ಕೃತಿಯ, ಜಾಹೀರಾತಿನ ಆಹಾರದ ಕೇವಲ ಸೇವನೆಗಿಂತ, ಪುಷ್ಟಿಕರ ಹಾಗೂ ಆರೋಗ್ಯ ಕರವಾದ ಮೇಲಿನಂತಹ ತಿನಿಸುಗಳು ನಮ್ಮ ಮೈಮನಗಳಿಗೆ ಹರ್ಷ ಉಲ್ಲಾಸ ತರಬಲ್ಲವು. ಭೀಮವ್ವನ ಹಾಡುಗಳಲ್ಲಿ ಬರುವ ಸಿಹಿ ಪದಾರ್ಥಗಳು, ಪಾಯಸ, ಭಾತುಗಳು, ಕಲಸು ಮೇಲೋಗರಗಳು ಈ ಘಟಕಗಳ ಆಗರವೆನ್ನುವ ಈ ಹೊಸ ಪರಿಕಲ್ಪನೆಯೊಂದಿಗೆ ಆಹಾರವನ್ನು ಸೇವಿಸಬೇಕು.

ರಸಗಳು: ಜಗನ್ನಾಥದಾಸರ ವಿಶ್ಲೇಷಣೆ

ಶ್ರೀಹರಿಕಥಾಮೃತಸಾರದಲ್ಲಿ ಭೋಜನರಸ ವಿಭಾಗ ಸಂಧಿಯಲ್ಲಿ ರಸಗಳ ಬಗ್ಗೆ ಪ್ರಸ್ತಾಪಿಸುತ್ತಾ, ಹಾಲಿನಲ್ಲಿ ಅಂತರ್ಗತವಾದ ರಸಗಳು ೩೫೪. ೪ ವಿಧವಾದ ಮೊಸರಿನಲ್ಲಿ ೨೯, ಬೆಲ್ಲದಲ್ಲಿ-೫,೧೦೧, ಸು(ರೂ)ಪದಲ್ಲಿ - ೨೦೦೨ ಫಲಗಳಲ್ಲಿ - ಶತಪಂಚವಿಂಶತಿ ಎಂದು ಗುರ್ತಿಸುತ್ತಾರೆ. (೫೨೦)

ಕ್ಷೀರ ಗತ ರಸರೂಪಗಳು ಮೂ
ನ್ನೂರ ಮೇಲೈವತ್ತನಾಲಕು
ಚಾರು ಘೃತ ಗತರೂಪಗಳು ಇಪ್ಪತ್ತರೊಂಭತ್ತು।
ಸಾರಗುಡದೊಳಗೈದು ಸಾವಿರ
ನೂರ ವೊಂದು ಸು(ರೂ)ಪ ದ್ವಿಸಹ
ಸ್ರಾರೆರಡು ಶತಪಂಚವಿಂಶತಿ ರೂಪ ಫಲಗಳಲಿ ॥ ೫॥

ಯಾವ ಯಾವ ಅಡುಗೆಗಳಲ್ಲಿ ಯಾವ ಯಾವ ದೇವತೆಗಳಿದ್ದಾರೆನ್ನುವುದನ್ನು ಈ ಪದ್ಯಗಳಲ್ಲಿ ಗುರ್ತಿಸಿದ್ದಾರೆ.

ಪದಾರ್ಥ	*ಅಭಿಮಾನಿ ದೇವತೆ*
ಅನ್ನ	*ವಾಸುದೇವ*
ಭಕ್ಷಗಳು	*ಸಂಕರುಷಣ*
ಪರಮಾನ್ನ	*ಕೃತೀಶ*
ಘೃತ ಮತ್ತು ಕಟುದ್ರವ್ಯ	*ಅನಿರುದ್ಧ*
ಸೂಪ	*ವಾಸವಾನುಜ*
ಶಾಕ	*ಮೂಲೇಶ*
ಕ್ಷೀರ	*ಸರಸ್ವತಿ*
ಮಂಡಿಗೆ	*ಮಧುವೈರಿ*
ನವನೀತ(ಬೆಣ್ಣೆ)	*ತ್ರಿವಿಕ್ರಮ*
ದಧಿ (ಮೊಸರು)	*ಚಂದ್ರ*
ಸರ್ವ ಆಮ್ಲ (All acids)	*ಗೌರಿ*
ಸಕ್ಕರೆ ಹಾಗೂ ಬೆಲ್ಲ	*ವೃತಾರಿ*
ಸ್ವಾದೋದಕ (ರುಚಿಯಾದ ನೀರು)	*ಬುಧ*
ಲವಣ	*ಜನಾರ್ಧನ*
ವೀಳ್ಯೆ ಎಲೆ	*ಉಪೇಂದ್ರ*
ಎಲ್ಲ ಸುಸ್ವಾದಗಳಲ್ಲಿ	*ರತಿ*

ಮೇಲುನೋಟಕ್ಕೆ ರಸಗಳ ಬಗ್ಗೆ ಹೇಳಿರುವ ಸಂಖ್ಯೆಗಳಾಗಲೀ ಅಥವಾ ವಿವಿಧ ಅನ್ನಭಕ್ಷ್ಯಗಳ ಅಭಿಮಾನಿ ದೇವತೆಗಳು ಕೇವಲ ಪ್ರಾಸಂಗಿಕವಾಗಿಯೋ, ದೈವತ್ವವನ್ನು ಆರೋಪಿಸಿರುವುದೆನ್ನುವ ಅಭಿಪ್ರಾಯ ಸಹಜವಾಗಿಯೇ ಮನಸ್ಸಿನಲ್ಲಿ ಮೂಡುತ್ತದೆ. ಆದರೆ ಜೀವ ರಸಾಯನಶಾಸ್ತ್ರದ ಮೂಲಕ ಇಲ್ಲಿ ಹೇಳಿರುವ ರಸಗಳನ್ನು ಪರಿಶೀಲಿಸಿದಾಗ ವಸ್ತುತಃ ರಸಗಳು ಆಯಾ ಪದಾರ್ಥಗಳಲ್ಲಿರಬಹುದೆಂಬ ಚಿಂತನೆಗೆ ಗ್ರಾಸವಾಗುವುದರಲ್ಲಿ ಸಂಶಯವಿಲ್ಲ. ಹಾಗೆಯೇ ಇತ್ತೀಚಿನ ಆಕ್ಯೂಪ್ರಜರ್ ವೈದಕೀಯ ವಿಧಾನದ ಪ್ರಕಾರ ದೇಹದ ಭಾಗಗಳನ್ನು ಕ್ರಮಬದ್ಧವಾಗಿ, ನಿಧಾನವಾಗಿ ಉತ್ತೇಜನಗೊಳಿಸಿದಲ್ಲಿ ಮನಸ್ಸು ಹಾಗೂ ದೇಹಗಳಲ್ಲಿ ನವಚೈತನ್ಯವು ಪುಟಿದೇಳುತ್ತದೆನ್ನಲು ಈಗಾಗಲೇ ಶರ್ಕರ ಪಿಷ್ಟ, ಪ್ರೋಟೀನ್, ವಿಟಮಿನ್‌ಗಳ ಬಗ್ಗೆ ಹೇಳಿರುವ ಸೂಕ್ಷ್ಮ ಮಾಹಿತಿ ಆಧಾರವನ್ನೊದಗಿಸುತ್ತದೆ.

ಹೀಗೆ ಕರ್ನಾಟಕದ ನಡುಮನೆ ಎಂದೆನಿಸಿರುವ ಹರಪನಹಳ್ಳಿಯ ತೊಟ್ಟಿಮನೆಯ ಯಾವುದೋ ಒಂದು ಮೂಲೆಯಲ್ಲಿ ಜೀವನನಡೆಸುತ್ತಿದ್ದ ಭೀಮವ್ವ ನೇಯ್ದ ಹಾಡುಗಬ್ಬಗಳಲ್ಲಿ ಪಾಕಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಛಂದಸ್ಸು, ಪ್ರಾದೇಶಿಕ ಭಾಷೆಯ ಇನಿದನಿ ಆಕೆಯ ಹೆಸರನ್ನು ತಿರುಪತಿ, ಮೈಸೂರು ವಿಶ್ವವಿದ್ಯಾಲಯದ ಪಾಕಶಾಸ್ತ್ರದಂಥ ಗ್ರಾಂಥಗಳಲ್ಲೂ ಚಿರಸ್ಥಾಯಿಯನ್ನಾಗಿಸಿವೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ೮ನೇ ಅಧಿಕಾರದಲ್ಲಿ ೫೭ ಪದ್ಯಗಳು, ೩೯ನೇ ಸಂಧಿಯಲ್ಲಿ ೫೯ ಪದ್ಯಗಳು; ಪು. ೭೮ ಪಂ. ೧೦. ಸಂ. ದೊ. ಲ. ನ. (೧೯೫೯); ಸ್ಥಲ ೭.....೪
*೨. ೮ನೇ ಅಧಿಕಾರದಲ್ಲಿ ೫೭ ಪದ್ಯಗಳು
*೩. ೩೬ನೇ ಸಂಧಿಯಲ್ಲಿ ೫೯ ಪದ್ಯಗಳು
*೪. ಪು. ೭೮ ಪಂ. ೧೦. ಸಂ. ದೊ. ಲ. ನ. (೧೯೫೯)
*೫. ಸ್ಥಲ ೭
*೬. "ಪಶ್ಯಂತಿ ಧೀರಾಃ ಪ್ರಚರಂತಿ ಪಾಕಾಃ । ಜಹಾಮ್ಯನ್ಯಂ ನಜಹಾಮ್ಯನ್ಯಮರ। ಅಹಮನ್ನಂ ವಶಮಿಚ್ಛರಾಮಿ। ಕೋಮಾನ್ನಂ ಮನುಷ್ಯೋದಯೇತು। ಪರಾಕೇ ಅನ್ನಂ ನಿಹಿತಂ ಲೋಕ ಏತರ್।... ಅನ್ನಂ ಪ್ರಾಣಮನ್ನಮಪಾನ ಮಾಹುಕಿ। ಅನ್ನಂ ಮೃತ್ಯುಂ ತಮು ಜೀವಾತು ಮಾಹುಃ।... ಅನ್ನಂ ಬ್ರಹ್ಮಾಣೋ ಜರಸಂ ವದಂತಿ। ಅನ್ನಮಾಹು ಪ್ರಜನನಂ ಪ್ರಜಾಸಾಮ್। ..." ಉದಕಶಾನ್ತಿ ಪ್ರಯೋಗ, ಪುಟ ೪೧.

ಜಿ. ಎಸ್. ದೀಕ್ಷಿತ್*

ಸೋಮದೇವ ಸೂರಿಯ ನೀತಿವಾಕ್ಯಾಮೃತದ ಟೀಕಾಕಾರ ನೇಮಿನಾಥನ ಕಾಲ ಮತ್ತು ದೇಶ

ಸೋಮದೇವಸೂರಿಯ ನೀತಿವಾಕ್ಯಾಮೃತವು ಸಂಸ್ಕೃತ ರಾಜ ನೀತಿ ಗ್ರಂಥ. ಕೌಟಿಲ್ಯನ ಅರ್ಥಶಾಸ್ತ್ರವು ರಾಜನೀತಿ ಶಾಸ್ತ್ರದಲ್ಲಿ ಮೊದಲನೆ ಗ್ರಂಥವಾದರೆ, ನೀತಿವಾಕ್ಯಾಮೃತವು ಕೊನೆಯ ಗ್ರಂಥ. ಇದರ ಲೇಖಕ ಸೋಮದೇವನು, ಕ್ರಿ.ಶ.೯೮೩ರಲ್ಲಿ[೧] ಕೊಪ್ಪಳದಲ್ಲಿ ನಿಧನ ಹೊಂದಿದನು. ಅದಕ್ಕೆ ಮುಂಚೆ ನೀತಿವಾಕ್ಯಾಮೃತವನ್ನು ಅವನು ಬರೆದಿರಬೇಕು. ಈ ಗ್ರಂಥಕ್ಕೆ ನೇಮಿನಾಥನೆಂಬ ಜೈನ ಕವಿ ಕನ್ನಡದಲ್ಲಿ ಟೀಕೆಯನ್ನು ಬರೆದಿರುವನು. ಈ ಟೀಕೆಯ ಹಸ್ತಪ್ರತಿಗಳು ಮೂಡಬಿದಿರೆ ಮತ್ತು ಕಾರ್ಕಳಗಳಲ್ಲಿರುವ ಜೈನಗ್ರಂಥ ಬಂಡಾರಗಳಲ್ಲಿವೆ. ಇದುವರೆಗು ಈ ಟೀಕೆ ಪ್ರಕಟವಾಗಿಲ್ಲ.

ಟೀಕಾಕಾರ ನೇಮಿನಾಥನ ಕಾಲ ಮತ್ತು ದೇಶಗಳನ್ನು ಪತ್ತೆ ಹಚ್ಚುವುದು ಈ ಪ್ರಬಂಧದ ಉದ್ದೇಶ. ಈ ಟೀಕೆಯ ಕೊನೆಯ ಭಾಗದಲ್ಲಿರುವ ಪದ್ಯ ಮತ್ತು ಗದ್ಯಗಳಿಂದ ಈ ದಿಶೆಯಲ್ಲಿ ಕೆಲವು ಸೂಚನೆಗಳು ದೊರೆಯುತ್ತವೆ. ಆದ್ದರಿಂದ ಆ ಭಾಗಗಳನ್ನು ಈಗ ನೋಡೋಣ. ತನ್ನ ಗುರುಗಳ ಬಗ್ಗೆ ಹೀಗೆ ಹೇಳಿದ್ದಾನೆ: "*ಮೇಘ ಚಂದ್ರ ತ್ರೈವಿದ್ಯ ದೇವ ದಿವ್ಯ ಪ್ರಸಾದಾಸಾದಿತಾತ್ಮ ಪ್ರಭಾವ ಶ್ರೀ ಮದ್ ವೀರಣಂದಿ ಸೈದ್ಧಾಂತಿಕ ದೇವ ಪ್ರಸಾದ ಪ್ರಾಪ್ತ ಪ್ರಸನ್ನ ಕವಿತಾ ರಾಮ ಸಮಾರಾಧಿತ ವಿವಿಧ ಪ್ರೇಮ ನಿಜಕುಲ ಕುವಲಯಾನಂದ ಸೋಮ, ಪೂರ್ವದಲ್ಲಿ ಸಂದೀ ವಿಗ್ರಹೀ ಪದವೀಸನಾಥ ಶ್ರೀ ನೇಮಿನಾಥ ವಿರಚಿತ ನೀತಿವಾಕ್ಯಾಮೃತ ವೃತ್ತಿ.*" ಇದರಿಂದ ತಾನು ತನ್ನು ಗುರು ವೀರಣಂದಿಯಿಂದ ಕವಿತೆಯನ್ನು ಕಲಿತೆನೆಂದು, ಮತ್ತು ಈ ವೀರಣಂದಿಯ ಗುರು ಮೇಘಚಂದ್ರ ತ್ರೈವಿದ್ಯನೆಂದೂ ಹೇಳಿರುವುದಲ್ಲದೆ, ತಾನು ಸಂಧಿವಿಗ್ರಹಿಯಾಗಿದ್ದೆನೆಂದೂ ಮತ್ತು ವೃತ್ತಿಯಿಂದ ನಿವೃತ್ತನಾದ ಮೇಲೆ ಈ ಟೀಕೆಯನ್ನು ಬರೆದೆನೆಂದೂ ಹೇಳಿದ್ದಾನೆ.

ನೇಮಿನಾಥನ ಗುರು ವೀರಣಂದಿಯು ಆಚಾರಸಾರವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ಮೊದಲು ಬರೆದು ನಂತರ ಅದಕ್ಕೆ ತಾನೇ ಕನ್ನಡದಲ್ಲಿ ಟೀಕೆಯನ್ನು ಶಕವರ್ಷ೧೦೭೬ ಅಥವಾ ಕ್ರಿ.ಶ ೧೧೫೩ರಲ್ಲಿ ಬರೆದನೆಂದು ಆ ಟೀಕೆಯ ಕೊನೆಯಲ್ಲಿ ಹೀಗೆ ಹೇಳುತ್ತಾನೆ: "*ಶ್ರೀಮದ್ವೀರಣಂದಿ ಸಿದ್ಧಾಂತ ಚಕ್ರವರ್ತಿಗಳ ಶಕವರ್ಷ ೧೦೭೬ ಶ್ರೀಮುಖಸಂವತ್ಸರ ಜ್ಯೇಷ್ಠ ಶುಕ್ಲ ಸೋಮವಾರದಂದು ತಾವು ಮಾಡಿದಾಚಾರಸಾರಕ್ಕೆ ಕರ್ನಾಟಕ ವೃತ್ತಿಯ ಮಾಡಿದವರ್*". ವೀರಣಂದಿಯ ಗುರು ಮೇಷಚಂದ್ರ ತ್ರೈವಿದ್ಯನು ಕ್ರಿ.ಶ.೧೧೪೮ರಲ್ಲಿ ಪೂಜ್ಯಪಾದಕೃತ 'ಸಮಾಧಿಶತಕಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದನು.[೨] ಇವರಿಬ್ಬರ ಪರಂಪರೆಗೆ ಸೇರಿದ ನೇಮಿನಾಥನು ಅವರ ಪದ್ಧತಿಯನ್ನು ಅನುಸರಿಸಿ ತನ್ನ ಕನ್ನಡ ಟೀಕೆಯನ್ನು ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ಅಥವಾ ೧೩ನೆಯ ಶತಮಾನದ ಆದಿಭಾಗದಲ್ಲಿ ಬರೆದಿರಬೇಕು. ಹೀಗೆ ಹೇಳುವುದಕ್ಕೆ ಇನ್ನೊಂದು ಕಾರಣ, ನೇಮಿನಾಥನು ತನ್ನ ಟೀಕೆಯ ಕೊನೆಯ ಭಾಗದಲ್ಲಿ, ಮೇಘಚಂದ್ರ ಮತ್ತು ವೀರಣಂದಿಗಳನ್ನಲ್ಲದೆ, ಶ್ರೀರಾಮ ಚಂದ್ರಮುನಿಯನ್ನು ಹೀಗೆ ಸ್ತುತಿಸಿದ್ದಾನೆ, **ಶ್ರೀ ರಾಮಚಂದ್ರಮುನಿಚಂದ್ರ ಮಹಂ ನಮಾಮಿ** ಎಂದೂ ಮತ್ತು ಗ್ರಂಥದ ಕೊನೆಯ ವಾಕ್ಯದಲ್ಲಿ ಅದೇ ಮುನಿಯನ್ನು **ತಪೋಜ್ವಲಾಗಿಹೃತ ದರ್ಪಕ ದರ್ಪವಿಶೇಷ ರಾಮಚಂದ್ರ ವ್ರತಿಗಳ್** ಎಂದಿರುವುದರಿಂದ, ಈ ಮುನಿಗಳ ಬಗ್ಗೆ ಅವನಿಗೆ ವಿಶೇಷ ಗೌರವವಿತ್ತೆಂದು ಊಹಿಸಬಹುದು. ಈ ರಾಮಚಂದ್ರಮುನಿಯು ಬೇಲೂರು ೧೨೯ನೆಯ[೩] ಶಾಸನದ ಪ್ರಕಾರ, ಹಳೇಬೀಡಿನ ಸುತ್ತಮುತ್ತಲ ಬಸದಿಗಳಿಗೆ ಕ್ರಿ.ಶ.೧೧೯೬ ರಲ್ಲಿ ಆಚಾರ್ಯನಾಗಿದ್ದನು. ಇವನೇ ಜನ್ನ ಮಹಾಕವಿಯ ಗುರು. ಜನ್ನನು ತನ್ನ ಅನಂತನಾಥಪುರಾಣದಲ್ಲಿ (೧೨೩೦) ಆಗಾಧವಾಗಿ ಇವನನ್ನು ಸ್ತುತಿಸಿದ್ದಾನೆ. ಆದ್ದರಿಂದ ರಾಮಚಂದ್ರಮುನಿಯು ಹನ್ನೆರಡನೆಯ ಶತಮಾನದ ಕಟ್ಟ ಕಡೆಗೆ ಮತ್ತು ಹದಿಮೂರನೆಯ

* 'ಸ್ವಸ್ತಿ', ನಂ. ೧, ನವೋದಯನಗರ, ಧಾರವಾಡ- ೫೮೦ ೦೦೩.

ಶತಮಾನದ ಆದಿಭಾಗದಲ್ಲಿ ಹಳೇಬೀಡಿನಲ್ಲಿ ಪ್ರಭಾವಶಾಲಿಯಾಗಿದ್ದಿರಬೇಕು. ವೀರಣಂದಿಯ ಶಿಷ್ಯ ಮತ್ತು ರಾಮಚಂದ್ರಮುನಿಯ ಅಭಿಮಾನಿಯಾದ ನೇಮಿನಾಥನು ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿಯೂ ಮತ್ತು ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿಯೂ ಜೀವಿಸಿರಬೇಕು ಮತ್ತು ತನ್ನ ಟೀಕೆಯನ್ನು ಸುಮಾರು ೧೨೦೦ರಲ್ಲಿ ಬರೆದನೆಂದು ಹೇಳಬಹುದು.

ನೇಮಿನಾಥನ ಕಾಲವನ್ನು ನಿರ್ಧರಿಸಿದ ನಂತರ, ಅವನ ದೇಶ ಮತ್ತು ವೃತ್ತಿಯ ಬಗ್ಗೆ ಈಗ ತಿಳಿದುಕೊಳ್ಳೋಣ. ನೇಮಿನಾಥನು ಗ್ರಂಥಾಂತ್ಯ ಗದ್ಯದಲ್ಲಿ "ಪೂರ್ವದಲ್ಲಿ ಸಂಧಿವಿಗ್ರಹೀ ಪದವೀಸನಾಥ ಶ್ರೀ ನೇಮಿನಾಥ ವಿರಜಿತ ನೀತಿವಾಕ್ಯಾಮೃತವೃತ್ತಿ" ಎಂದಿರುವುದರಿಂದ ಅವನ ವೃತ್ತಿ ಸಂಧಿವಿಗ್ರಹಿ ಎಂದೂ ಮತ್ತು ಅದರಿಂದ ನಿವೃತ್ತನಾದ ಮೇಲೆ ಈ ವೃತ್ತಿಯನ್ನು ಬರೆದೆನೆಂದು ಹೇಳಿದ್ದಾನೆ. ಗ್ರಂಥಾಂತ್ಯದ ಎರಡನೆಯ ಪದ್ಯದಲ್ಲಿ "ಕೋಡನ ಪೂರ್ವದವಳ್ಳಿಯ ರೂಢಿಗೆ ನಿಲೆಯಾದ ಸಂಧಿವಿಗ್ರಹಿ ನಾಮಂಕೂಡೆ ಜನಂ ಪೊಗಳ್ವಂತಿರೆ ಮಾಡಿದನೀವೃತ್ತಿ" ಎಂದಿರುವುದರಿಂದ ಅವನ ಊರು ಕೋಡನ ಪೂರ್ವದವಳ್ಳಿಯಂದೂ, ಮತ್ತು ಇವನಿಗೆ "ಸಂಧಿವಿಗ್ರಹಿ" ಎನ್ನುವ ಹೆಸರು ಜನಗಳಲ್ಲಿ ರೂಢಿಯಾಗಿ ನೆಲೆಯಾಗಿ ನಿಂತಿತೆಂದೂ, ಜನರು ಹೊಗಳುವಂತೆ ಈ ವೃತ್ತಿಯನ್ನು ರಚಿಸಿದನೆಂದು, ಬರೆ ಸಾಮಾನ್ಯಜನರಲ್ಲಿ ಮಾತ್ರವಲ್ಲ, ಪಂಡಿತರಲ್ಲಿಯೂ ಈ ವೃತ್ತಿ ಪ್ರಶಂಸಿಸಲ್ಪಟ್ಟಿತ್ತೆನ್ನುವುದು 'ಬುಧಜನವಿನುತ' ಎನ್ನುವ ಮಾತಿನಿಂದ ಸ್ಪಷ್ಟವಾಗುತ್ತದೆ.

ಇಷ್ಟೆಲ್ಲಾ ಪ್ರಸಿದ್ದವಾದ ಟೀಕಾಕಾರನ ಊರು ಕೋಡನ ಪೂರ್ವದವಳ್ಳಿ ಎಲ್ಲಿದೆ, ಇವನು ಯಾರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದ ಮತ್ತು ಯಾವಾಗ - ಇವೆಲ್ಲಾ ಕುತೂಹಲಕಾರಿ ಪ್ರಶ್ನೆಗಳಾಗಿವೆ. ಮೊದಲು ಕೋಡನಪೂರ್ವದವಳ್ಳಿಯನ್ನು ತೆಗೆದುಕೊಳ್ಳೋಣ. ಕೋಡ+ಪಳ್ಳಿ-ಪಕಾರಕ್ಕೆ ವಕಾರ ಆದೇಶವಾಗಿ ಕೋಡವಳ್ಳಿ ಆಯಿತು. ಸಂಸ್ಕೃತದಲ್ಲಿ ಮತ್ತು ಕನ್ನಡದಲ್ಲಿ ಪದ್ಯವನ್ನು ಬರೆಯುವಾಗ ಕೆಲವು ಸಲ ಛಂದಸ್ಸಿನ ಸಲುವಾಗಿ ಒಂದು ಹೆಸರಿನ ಎರಡು ಭಾಗಗಳ ಮಧ್ಯ 'ಪೂರ್ವದ' ಎಂಬ ಮಾತು ಸೇರುತ್ತದೆ. ಶ್ರೀರಂಗಪಟ್ಟಣವನ್ನು ಶ್ರೀರಂಗಪೂರ್ವಪಟ್ಟಣವೆಂದು ಬರೆಯಲಾಗಿದೆ. ನಪುಂಸಕಲಿಂಗದ ಅಕಾರಾಂತ ನಾಮಪದಗಳಿಗೆ ವಿಭಕ್ತಿಪ್ರತ್ಯಯವು ಸೇರುವಾಗ "ದ" ಮತ್ತು "ನ" ಆಗಮವಾಗುತ್ತದೆ. ಹಳೆಗನ್ನಡದಲ್ಲಿ ಉಂಟು ಕೋಡ+ಅ=ಕೋಡನ (ಕೋಡದ) ಆದ್ದರಿಂದ ಕೋಡನ ಪೂರ್ವದವಳ್ಳಿ ಎಂಬ ಪ್ರಯೋಗ ವ್ಯಾಕರಣ ನಿಯಮಾನು ಸಾರವಾಗಿದೆ. ಇದರ ಅರ್ಥ ಕೋಡ ಎಂಬ ಪದವು ಪೂರ್ವಪದವಾಗಿ ಉಳ್ಳಕೋಡವಳ್ಳಿ ಆದ್ದರಿಂದ ನಾವು ಹುಡುಕಬೇಕಾದ್ದು ಈ ಕೋಡವಳ್ಳಿಯನ್ನು. ವಿ.ವಿ.ಮಿರಾಶಿಯವರು ಸಂಪಾದಿಸಿರುವ "Inscriptions of the silaharas" ಎನ್ನುವ ಗ್ರಂಥದಲ್ಲಿ ೪೬ನೆ ಸಂಖ್ಯೆಯ ಶಾಸನ ಶಕ ೧೦೪೮ರ ಗಂಡರಾದಿತ್ಯನ ಕೊಲ್ಲಾಪುರದ ತಾಮ್ರ ಪಟಗಳು - ಈ ಶಾಸನದ ಕ್ರಿ.ಶ. ೧೧೨೬. ಈ ಶಾಸನದಲ್ಲಿ ದಾನವಾದ ಗ್ರಾಮ ಕೋಡಿನಿಜವಾಡವು, ಕೋಡವಳ್ಳಿ ಕಂಪಣ ಮತ್ತು ಮಿರಿಂಜೆ (ಮಿರಜ್) ದೇಶದಲ್ಲಿತ್ತು. ಈ ಕೋಡವಳ್ಳಿ ಕಂಪಣದ ಈಗಿನ ಹೆಸರು ಕೋಡೋಲಿ. ಇದು ಕೊಲ್ಲಾಪುರಕ್ಕೆ ಏಳು ಮೈಲಿ ಪೂರ್ವದಲ್ಲಿದೆ. ಈ ಕೋಡವಳ್ಳಿಯು ನಮ್ಮ ನೇಮಿನಾಥನ ಊರಾಗಿರಬೇಕು. ಕೊಲ್ಲಾಪುರದಲ್ಲಿ ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಶಿಲಾಹಾರ ಅರಸು ಗಂಡರಾದಿತ್ಯನು ಆಳುತ್ತಿದ್ದನು. ಇವನು ಮತ್ತು ಇವನ ಸಾಮಂತ ನಿಂಬರಸನು[೪] ಜೈನಯತಿ ಮಾಘಣಂದಿಯ ಶಿಷ್ಯರು. ಈ ಮೂವರು ಕೊಲ್ಲಾಪುರದಲ್ಲಿ ರೂಪನಾರಾಯಣ ಬಸದಿ ಮತ್ತು ಪಾರ್ಶ್ವನಾಥ ಬಸದಿಗಳನ್ನು ಕಟ್ಟಿಸಿ ಅದನ್ನು ಒಂದು ಜೈನತೀರ್ಥವನ್ನಾಗಿ ಮಾಡಿದ್ದರು.[೫] ಮಾಘಣಂದಿಯ ಶಿಷ್ಯ ಮೇಘಚಂದ್ರತ್ರೈವಿದ್ಯ. ಅವನ ಶಿಷ್ಯ ವೀರಣಂದಿ ಸೈದ್ಧಾಂತಿಕ. ಇವರಿಬ್ಬರೂ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಸಂಸ್ಕೃತ ಗ್ರಂಥಗಳಿಗೆ ಕನ್ನಡ ಟೀಕೆಗಳನ್ನು ಬರೆದಿರುವುದನ್ನು ಮತ್ತು ವೀರಣಂದಿಯ ಶಿಷ್ಯ ನೇಮಿನಾಥನು ಆ ಶತಮಾನದ ಅಂತ್ಯದಲ್ಲಿ ಅವರುಗಳನ್ನು ಅನುಸರಿಸಿ ಕನ್ನಡ ಟೀಕೆಯನ್ನು ಬರೆದಿರುವುದನ್ನು ಮೇಲೆ ನೋಡಿದ್ದೇವೆ. ಆ ಶತಮಾನದಲ್ಲಿ ಕೊಲ್ಲಾಪುರದ ಶಿಲಾಹಾರರು ಜೈನ ಮತಕ್ಕೂ ಮತ್ತು ಕನ್ನಡಸಾಹಿತ್ಯಕ್ಕೂ ಉದಾರವಾಗಿ ಪ್ರೋತ್ಸಾಹವನ್ನು ನೀಡಿದರು. ಅವರು ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಕಾರಣ, ಅವರು ಕನ್ನಡಿಗರು, ಅವರ ಮಾತೃಭಾಷೆ ಕನ್ನಡ, ಅವರ ಬಿರುದುಗಳು ಕನ್ನಡದಲ್ಲಿವೆ. ಅವರ ಶಾಸನಗಳೆಲ್ಲಾ ಮೊದಲಿನಿಂದ ಕೊನೆಯವರೆಗು ಕನ್ನಡದಲ್ಲಿವೆ.[೬] ನಮ್ಮ ಟೀಕಾಕಾರ ನೇಮಿನಾಥನು ಕೊಲ್ಲಾಪುರದವನಾದ್ದರಿಂದ ಅಲ್ಲಿಯ ಶಿಲಾಹಾರ ಅವರಿಂದ ಪ್ರೋತ್ಸಾಹಿಸಲ್ಪಟ್ಟಿದ್ದನೆಂದು ನಾವು ಊಹಿಸಬಹುದು.

ನೇಮಿನಾಥನ ಕಾಲ ಮತ್ತು ದೇಶಗಳು ನಿರ್ಧಾರವಾದ ಮೇಲೆ, ಅವನ ವೃತ್ತಿಯ ಬಗ್ಗೆ ಈಗ ತಿಳಿದುಕೊಳ್ಳೋಣ. ಪ್ರೊ|| ಮಾಧವ ಎನ್. ಕಟ್ಟಿಯವರು Journal of the Epigraphical society of India ಇದರ ೧೯೮೭ರ ನಾಲ್ಕನೆಯ ಸಂಪುಟದಲ್ಲಿ ಪ್ರಕಟಿಸಿರುವ ಶಿಲಾಹಾರ ವಿಜಯಾದಿತ್ಯನ ಕಾಲದ ತಾಮ್ರ ಶಾಸನದಲ್ಲಿರುವ ಕೆಲವು ವಿವರಗಳು ನಮಗೆ ಪ್ರಸ್ತುತ. ಪಂಪನ ಅಂದರೆ ಅಭಿನವ ಪಂಪನ ಮೊಮ್ಮಗ ಕೂಜಿರಾಜ(ಯ್ಯ)ನು ಶಿಲಾಹಾರ ಗಂಡರಾದಿತ್ಯನ ಸಂಧಿವಿಗ್ರಹಿಯಾಗಿದ್ದನು. ಈ ಶಾಸನದ ಕಾಲ ೨೧-೧೨-೧೧೫೪. ಈ ತೇದಿಯಾದ ಮೇಲೆ ಯಾರು ಶಿಲಾಹಾರರ ಸಂಧಿವಿಗ್ರಹಿಯಾಗಿದ್ದರೆಂದು ತಿಳಿಯ

ಬರುವುದಿಲ್ಲ. "ಪೂರ್ವದಲ್ಲಿ ಸಂಧಿವಿಗ್ರಹಿ ಪದವೀಸನಾಥನಾಗಿದ್ದ" ನೇಮಿನಾಥನು ಕೊಲ್ಲಾಪುರದ ಶಿಲಾಹಾರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದನೆನ್ನುವುದಕ್ಕೆ ಅವಕಾಶವಿದೆಯೆನ್ನುವುದನ್ನು ಈಗ ನೋಡೋಣ. ಅವನು ಕೊಲ್ಲಾಪುರದವನು. ಅವನಿಗೆ ರಾಜನೀತಿ ಶಾಸ್ತ್ರದಲ್ಲಿ ಅಪಾರ ಆಸಕ್ತಿ ಇತ್ತೆಂದೇ ಅವನು ಆಗ ಕರ್ನಾಟಕದಲ್ಲಿ ಪ್ರಸಿದ್ಧ ರಾಜನೀತಿಶಾಸ್ತ್ರ ಗ್ರಂಥವಾದ ಸೋಮದೇವ ಸೂರಿಯ ನೀತಿವಾಕ್ಯಾಮೃತಕ್ಕೆ ಟೀಕೆಯನ್ನು ಬರೆಯಲು ಆರಿಸಿದನು. ಅವನೇ ಹೇಳುವ ಹಾಗೆ ಅವನು ಸಂಧಿವಿಗ್ರಹಿ ಪದವಿಯಿಂದ ನಿವೃತ್ತನಾದ ಮೇಲೆ ಈ ಟೀಕೆಯನ್ನು ಬರೆದನು. ಆಗ ರಾಜನೀತಿಶಾಸ್ತ್ರದ ತತ್ವಗಳು ಮಾತ್ರ ಗೊತ್ತಿರದೆ ಅವುಗಳ ಆಚರಣೆಯಲ್ಲಿಯೂ ಪರಿಣತನಾಗಿರಬೇಕು. ಆದ್ದರಿಂದಲೇ ಅವನು ನಿವೃತ್ತನಾದ ಮೇಲೂ ಸಂಧಿವಿಗ್ರಹಿ ಎನ್ನುವ ಹೆಸರು ಜನರಲ್ಲಿ ರೂಢಿಯಾಗಿ ನೆಲೆಯಾಗಿ ನಿಂತಿತ್ತು. ಇಂತಹ ಕೊಲ್ಲಾಪುರದ ನಿವಾಸಿ ಅಲ್ಲಿಯೆ ಶಿಲಾಹಾರರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದರೆ ಏನು ಆಶ್ಚರ್ಯ! ಕ್ರಿ.ಶ.೧೧೫೪ರವರೆಗು ಕೊಲ್ಲಾಪುರದಲ್ಲಿ ಯಾರು ಯಾರು ಸಂಧಿವಿಗ್ರಹಿಯಾಗಿದ್ದರೆನ್ನುವುದನ್ನು ನಾವು ಮೇಲೆ ನೋಡಿದ್ದೇವೆ. ಅದಾದ ನಂತರ ವಿಜಯಾದಿತ್ಯ ಮತ್ತು ಎರಡನೆಯ ಭೋಜನ ಕಾಲದಲ್ಲಿ ನೇಮಿನಾಥನು ಆ ಶತಮಾನದ ಕೊನೆಯ ಅವಧಿಯಲ್ಲಿ ಸಂಧಿವಿಗ್ರಹಿಯಾಗಿರಲು ಅವಕಾಶವಿದೆ. ಅವನು ಸಂಧಿವಿಗ್ರಹಿ ಯಾಗಿರುವಾಗ, ಎರಡನೆಯ ಭೋಜನ ಕಾಲದಲ್ಲಿ ದೇವಗಿರಿಯ ಯಾದವ ಸಿಂಘಣನು ಭೋಜನನ್ನು ಸೋಲಿಸಿ ಶಿಲಾಹಾರರನ್ನು ನಿರ್ನಾಮ ಮಾಡಿದನು. ಇದು ಆಗಿದ್ದು ಸು.೧೨೧೨ರಲ್ಲಿ. ಆದ್ದರಿಂದ ನೇಮಿನಾಥನು ೧೧೫೪ರಿಂದ ೧೨೧೨ರೊಳಗೆ ಶಿಲಾಹಾರ ವಿಜಯಾದಿತ್ಯ ಮತ್ತು ಎರಡನೆಯ ಭೋಜನ ಆಸ್ಥಾನದಲ್ಲಿ ಸಂಧಿವಿಗ್ರಹಿ ಯಾಗಿರಬೇಕು.(೭)

ಶಿಲಾಹಾರನು ನಾಶವಾದ ವೇಳೆಯಲ್ಲಿಯೇ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯವು ಕ್ರಿ.ಶ ೧೨೦೦ರಲ್ಲಿ ಕೊನೆಗೊಂಡಿತು. ಹೀಗಾಗುವುದು ಮೊದಲೇ ಅಲ್ಲಿಯ ಜನರಿಗೆ ಗೊತ್ತಿತ್ತು. ಕಲ್ಯಾಣದ ಚಾಲುಕ್ಯರ ಬಲವು ಕುಂದುತ್ತಾ ಬಂದಿತ್ತು. ಉತ್ತರದಿಂದ ಯಾದವರು ದಕ್ಷಿಣದಿಂದ ಹೊಯ್ಸಳರು ಅವರ ಮೇಲೆ ದಾಳಿಮಾಡಲು ಆರಂಭಿಸಿದ್ದರು. ಆಗ ಉತ್ತರ ಕರ್ನಾಟಕರಿಂದ ಸಾಹಿತಿಗಳು, ಕಲಾವಿದರು, ಮತ್ತು ಯೋಧರು ಹೊಯ್ಸಳರ ಆಸ್ಥಾನಕ್ಕೆ ಆಶ್ರಯವನ್ನು ಬಯಸಿ ಹೋದರೆಂದು ಊಹಿಸಿ ಬಹುದು. ಹಂಪೆಯ ಹರಿಹರ, ಬಳ್ಳಿಗಾವೆಯ ಶಿಲ್ಪಿ ದಾಸೋಜ, ಮುಳುಗುಂದದ ಯೋಧ ಅನಂತದಂಡನಾಯಕ, ಇವರಂತೆ ನೇಮಿನಾಥನು ಶಿಲಾಹಾರವು ನಾಶವಾಗುವ ಸ್ವಲ್ಪ ಮುಂಚೆ ಕೊಲ್ಲಾಪುರದಿಂದ ಹಳೇಬೀಡಿಗೆ ಹೋಗಿರಬೇಕು. ಹಳೇಬೀಡಿನಲ್ಲಿ ಈತನು ಇದ್ದುದಕ್ಕೆ ಸಾಕ್ಷಿ ಇವನು ಅಲ್ಲಿ ಪ್ರಭಾವಶಾಲಿಯಾಗಿದ್ದ ರಾಮಚಂದ್ರ ಯತಿಯ ಮನ್ನಣೆಯನ್ನು ಆಶಿಸಿದ್ದು. ಆದ್ದರಿಂದ ಸು.೧೨೦೦ರಲ್ಲಿ ಹಳೇಬೀಡಿನಲ್ಲಿ ನೇಮಿನಾಥನು ತನ್ನ ಟೀಕೆಯನ್ನು ಬರೆದನೆಂದು ಊಹಿಸಬಹುದು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಕೊಪ್ಪಳಶಾಸನಗಳು**: (ಸಂ.) ಹಂಪ ನಾಗರಾಜಯ್ಯ, ಶಾಸನ ಸಂಖ್ಯೆ ೩೪

*೨. ಆರ್ ನರಸಿಂಹಾಚಾರ್: **ಕರ್ನಾಟಕ ಕವಿ ಚರಿತ್ರೆ**, ಸು.೧ ಪುಟ ೧೭೭

*೩. ಎಲ್. ರೈಸ್ ಸಂಪಾದಿತ ಎ.ಕಾ. V ಬೇಲೂರು ೧೨೯೫.

*೪. ಎಂ. ಎಂ. ಕಲಬುರ್ಗಿ: (ಸಂ.) **ನಿಂಬಸಾಮಂತ ಚರಿತೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

*೫. ತೇರವಾಳ ಶಾಸನ ಪಿ.ವಿ.ಮಿರಾಶಿ (ಸಂ.) **ಶಿಲಾಹಾರರ ಶಾಸನಗಳು**, ಪು.೨೩೬ ಮತ್ತು ೭೨, ಅದೇ ಪುಟದಲ್ಲಿರುವ ೩೦ನೆ ಸಂಖ್ಯೆಯ ಗಂಡರಾದಿತ್ಯನ ಕಾಲದ ಕೊಲ್ಲಾಪುರದ ಶೇಷಶಾಯಿ ದೇವಸ್ಥಾನದ ಶಾಸನ.

*೬. ಮಿರಾಶಿಯವರ ಮೇಲೆ ಹೇಳಿದ ಪುಸ್ತಕ ಪ್ರಸ್ತಾವನೆ ಪು. IXXIX.

*೭. ಮೇಲಿನ ಪುಸ್ತಕ, ಪು. XXIV .

ಮತ್ತು

*೧. ಪಿ.ವಿ.ಮಿರಾಶಿಯವರ **ಶಿಲಾಹಾರರ ಶಾಸನಗಳು** ಈ ಪುಸ್ತಕವು, ೧೨ನೆ ಶತಮಾನದಲ್ಲಿ ಕೊಲ್ಲಾಪುರದಲ್ಲಿ ಜೈನ ಮತ್ತು ಕನ್ನಡ ವಾತಾವರಣವು ಇತ್ತು ಎನ್ನುವುದನ್ನು ಸೊಗಸಾಗಿ ತೋರಿಸುತ್ತದೆ.

*೨. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿರುವ '**ನಿಂಬ ಸಾಮಂತ ಚರಿತೆ**' ಯ ಪ್ರಸ್ತಾವನೆಯಲ್ಲಿ ನಮಗೆ ಸಂಬಂಧಪಟ್ಟ ಶಾಸನಗಳ ಸಾರಾಂಶವಿದೆ.

*೩. ಆರ್.ನರಸಿಂಹಾಚಾರ್‌ರ **ಕರ್ನಾಟಕ ಕವಿಚರಿತೆ** ಸಂಪುಟ ೧ ದಲ್ಲಿ ಅಭಿನವ ಪಂಪ ಮೇಘಚಂದ್ರ ಮತ್ತು ಜನ್ನರ ಬಗೆಗಿನ ಮಾಹಿತಿ ಉಪಯುಕ್ತವಾಗಿದೆ.

*೪. ಹಾ.ಮಾ.ನಾಯಕ ಮತ್ತು ಟಿ.ವಿ. ವೆಂಕಟಾಚಲಶಾಸ್ತ್ರೀಯವರ **ಕನ್ನಡ ಸಾಹಿತ್ಯ ಚರಿತ್ರೆ** ಸಂಪುಟ ೩ ಮತ್ತು ೪ರಲ್ಲಿರುವ ಅಭಿನವ ಪಂಪ, ಮೇಘಚಂದ್ರ, ಜನ್ನ, ವೀರಣಂದಿ ಇವರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಲಭ್ಯ.

*೫. **ಗೋವಿಂದ ಪೈ ಸಂಶೋಧನ ಸಂಪುಟದಲ್ಲಿ** ಅಭಿನವ ಪಂಪನ ಕುರಿತ ಲೇಖನಗಳಲ್ಲಿ ಮೇಘಚಂದ್ರ ಮತ್ತು ವೀರಣಂದಿಗಳ ಬಗ್ಗೆ ಚರ್ಚೆ ಇದೆ

*೬. ಬಿ. ಆರ್. ಗೋಪಾಲನವರು ಸಂಪಾದಿಸಿರುವ, ಎ.ಕ. II **ಶ್ರವಣಬೆಳ್ಗೊಳ ಶಾಸನ ಸಂಪುಟದಲ್ಲಿ** ಶಾಸನ ಸಂಖ್ಯೆ ೭೧, ೭೨, ೭೩ ಮತ್ತು ೧೭೩ ನಮಗೆ ಪ್ರಸ್ತುತ.

ಡಾ॥ ಎಫ್. ಟಿ. ಹಳ್ಳಿಕೇರಿ*

ಎಮ್ಮೆ ಬಸವನ ಅಪ್ರಕಟಿತ ಕಾಲಜ್ಞಾನ ಸಾಹಿತ್ಯ

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶಿವಶರಣರ ಸಮಾಜೋ - ಧಾರ್ಮಿಕ ಕ್ರಾಂತಿಯ ತರುವಾಯ ಧರ್ಮ, ತತ್ವ, ಸಾಹಿತ್ಯ, ಸಂಸ್ಕೃತಿಗಳನ್ನು ಪೋಷಿಸಿಕೊಂಡು ಬಂದು, ಅವುಗಳಿಗೆ ಪುನಶ್ಚೇತನ ನೀಡಿ, ಮುನ್ನಡೆಸುವ ಕಾರ್ಯ ವಿಜಯ ನಗರ ಅರಸರ ಕಾಲದಲ್ಲಿ ತುಂಬ ವ್ಯಾಪಕವಾಗಿ ನಡೆಯಿತು. ಆ ಸಮಯದಲ್ಲಿದ್ದ ನೂರೊಂದು ವಿರಕ್ತರು ತಮ್ಮ ಸಾಹಿತ್ಯ ಸಂಪತ್ತನ್ನು ಸಂಗ್ರಹ, ಸಂಕಲನ, ಸಂಪಾದನ ಎಂಬ ಮೂರು ಬಗೆಗಳಲ್ಲಿ ಸಂರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಇದಕ್ಕೆ ಪೂರಕವಾಗಿ ಹಲವಾರು ಕವಿಗಳು ಅಷ್ಟಕ, ತ್ರಿಪದಿ, ತಾರಾವಳಿ, ಕಾಲಜ್ಞಾನ, ದಂಡಕ ಶತಕ ಮುಂತಾದ ವಿವಿಧ ಲಘು ಸಾಹಿತ್ಯ ಪ್ರಕಾರಗಳಲ್ಲಿ ಸೃಜನಶೀಲ ಕೃತಿಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಇವುಗಳಲ್ಲಿ ಕಾಲಜ್ಞಾನ ಸಾಹಿತ್ಯವು ಹೆಚ್ಚು ಜನಪ್ರಿಯವಾದುದಾಗಿದೆ.

ಕನ್ನಡ ಕಾಲಜ್ಞಾನ ಸಾಹಿತ್ಯ

ಸಾಮಾನ್ಯವಾಗಿ ಕಾಲಜ್ಞಾನವೆಂದರೆ ಸದ್ಯೋಭವಿಷತ್ತಿನಲ್ಲಿ ಜರುಗಬಹುದಾದ ಘಟನೆಗಳನ್ನು ತಿಳಿಸುವ ಸಾಹಿತ್ಯವೆಂದು ತಿಳಿಯಲಾಗುತ್ತದೆ. "ಮನುಷ್ಯನಿಗೆ ಹಿಂದಿನ ಜೀವಿತದ ಘಟನೆಗಳನ್ನು ಸ್ಮೃತಿಗೆ ತಂದುಕೊಟ್ಟು, ಮುಂದಿನ ಜೀವನದ ಅಸ್ತಿತ್ವಕ್ಕೆ ಭರವಸೆ ಹುಟ್ಟಿಸುವಲ್ಲಿ ನೆರವಾಗುವ ಜ್ಞಾನವೇ ಕಾಲಜ್ಞಾನ ಸಾಹಿತ್ಯ" ವೆಂದು ಡಾ॥ ವಿ.ಶಿವಾನಂದ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧] ಕಾಲಜ್ಞಾನ ಕವಿಗಳು ಜನಸಮುದಾಯದ ಮಧ್ಯದಲ್ಲಿದ್ದುಕೊಂಡು ಸಾಹಿತ್ಯರಚನೆ ಮಾಡಿದವರು. ಹೀಗಾಗಿ ಕಾಲಜ್ಞಾನ ಸಾಹಿತ್ಯವು ಜನಪದ ಧಾಟಿಯಲ್ಲಿದ್ದು, ಆಡುಮಾತಿನ ಶೈಲಿಯಲ್ಲಿವೆ. ಸ್ಥಳನಾಮ, ರಾಜ, ಮಂತ್ರಿ, ಅಧಿಕಾರಿ, ಗೌಡ ಮುಂತಾದ ಅಧಿಕಾರಿಗಳ ಹೆಸರುಗಳು, ದುರ್ಗಿ, ಕಾಳಿ, ಚೌಡಮ್ಮ, ಉಡಚಮ್ಮ ಮೊದಲಾದ ಗ್ರಾಮದೇವತೆಗಳ ಹೆಸರು, ಯುದ್ಧ, ದೇವಾಲಯಗಳ ನಾಶದ ಉಲ್ಲೇಖಗಳು, ಗಾಳಿ, ಮಳೆ, ನಕ್ಷತ್ರ ಗಿಡ-ಮರ, ಹಗಲು-ರಾತ್ರಿ, ಮೊದಲಾದ ಪ್ರಾಕೃತಿಕ ಉಪಮೆಗಳು, ಎತ್ತು, ಎಮ್ಮೆ, ಕೋಣ, ಆಡು, ಬೆಕ್ಕು, ನರಿ ಮೊದಲಾದ ಪ್ರಾಣಿಗಳ ಸ್ಥಿತಿಗತಿ, ಒಕ್ಕಲುತನ, ವ್ಯಾಪಾರ, ವಿವಿಧ ವೃತ್ತಿಗಳ ವಿವರಗಳು, ಸ್ತ್ರೀ - ಪುರುಷರ ವೃತ್ತಿ ಪ್ರವೃತ್ತಿಗಳು, ಮಾನವನ ಬದುಕಿನ ವೈವಿಧ್ಯಮಯ ಜೀವನ-ಹೀಗೆ ಹಲವಾರು ಸಂಗತಿಗಳನ್ನು ಕಾಲಜ್ಞಾನ ಸಾಹಿತ್ಯದಲ್ಲಿ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಬಸವ, ಚೆನ್ನಬಸವ, ಘಟ್ಟಿವಾಳಯ್ಯ ಮುಂತಾದ ಶಿವಶರಣರ ಕಾಲದಲ್ಲಿ ಈ ಸಾಹಿತ್ಯ ಹುಟ್ಟಿರುವ ಸೂಚನೆ ಗಳಿವೆಯಾದರೂ, ಇದು ವ್ಯಾಪಕವಾಗಿ ಮತ್ತು ಸಮೃದ್ಧವಾಗಿ ಬೆಳೆದು ಬಂದದ್ದು ೧೫,೧೬, ಮತ್ತು ೧೭ನೆಯ ಶತಮಾನಗಳಲ್ಲಿ ಎಂದೇ ಹೇಳಬೇಕು. ಹಂಪೆ, ಕೊಡೇಕಲ್ಲು ಮತ್ತು ತಿಂಥಿಣಿಗಳು ಕಾಲಜ್ಞಾನ ಸಾಹಿತ್ಯದ ಪ್ರಮುಖ ಪ್ರಸಾರ ಕೇಂದ್ರಗಳಾಗಿವೆ. ಎಮ್ಮೆ ಬಸವ, ಕೊಡೇಕಲ್ಲು ಬಸವ, ತಿಂಥಿಣಿ ಮೋನಪ್ಪಯ್ಯ ಕ್ರಮವಾಗಿ ಈ ಕೇಂದ್ರಗಳ ಪ್ರಧಾನ ನಾಯಕರಾಗಿದ್ದಾರೆ. ಹೀಗೆ ೧೨ನೆಯ ಶತಮಾನದಿಂದ ೧೭ನೆಯ ಶತಮಾನದವರೆಗೂ ಈ ಸಾಹಿತ್ಯ ಸೃಷ್ಟಿಯಾಗಿರುವುದರಿಂದ ಇವುಗಳ ರಚನಾಕಾಲದ ವ್ಯಾಪ್ತಿಯನ್ನು ಹೀಗೆ ಗುರುತಿಸಬಹುದು.

ಕಾಲಜ್ಞಾನ ಸಾಹಿತ್ಯ
- ಬಸವಯುಗ
- ಬಸವೋತ್ತರ ಯುಗ
  - ವಿಜಯನಗರ ಸಾಮ್ರಾಜ್ಯೋದಯ ಕಾಲ
  - ವಿಜಯನಗರ ಸಾಮ್ರಾಜ್ಯ ವಿನಾಶೋತ್ತರ ಕಾಲ

* ಪ್ರವಾಚಕ, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬.

ಬಸವಯುಗದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಘಟ್ಟಿವಾಳಯ್ಯ, ಅಕ್ಕನಾಗಮ್ಮ, ಮಡಿವಾಳ ಮಾಚಿದೇವ, ಕೂಗಿನ ಮಾರಯ್ಯ ಮುಂತಾದವರು ಪ್ರಮುಖ ಕಾಲಜ್ಞಾನ ಕವಿಗಳೆಂದು ಹೇಳಬಹುದು. ಬಸವೋತ್ತರ ಯುಗದ ವಿಜಯನಗರ ಸಾಮ್ರಾಜ್ಯೋದಯ ಕಾಲದಲ್ಲಿ ಕರಸ್ಥಲ ನಾಗಿದೇವ, ಎಮ್ಮೆಬಸವ, ಕಾಲಜ್ಞಾನದ ನೀಲಾಂಬಿಕೆ, ಕೋಟೆ ಕಲ್ಲುಬಸವಣ್ಣ, ವಿರೂಪಾಕ್ಷ ಪಂಡಿತ ಮುಂತಾದವರು ಪ್ರಮುಖರೆನಿಸಿದರೆ, ವಿಜಯನಗರ ವಿನಾಶೋತ್ತರ ಕಾಲದಲ್ಲಿ ಸರ್ವಜ್ಞ, ತಿಂಥಿಣಿ ಮೋನಪ್ಪಯ್ಯ, ಚೆನ್ನಪ್ಪ, ಸಾರವಾಡ ಚಿಕ್ಕ ಮುಂತಾದವರು ಪ್ರಮುಖರೆನಿಸಿದ್ದಾರೆ.

ಎಮ್ಮೆ ಬಸವ

ಮಧ್ಯಕಾಲೀನ ಕರ್ನಾಟಕದ ಕಾಲಜ್ಞಾನ ಕವಿಗಳಲ್ಲಿ ಕಾಲಜ್ಞಾನ ಸಾಹಿತ್ಯ ಪರಂಪರೆಯ ಐತಿಹಾಸಿಕ ಪುರುಷ ಎಮ್ಮೆ ಬಸವ ಪ್ರಮುಖ ವ್ಯಕ್ತಿಯೆನಿಸಿದ್ದಾನೆ. ಹಂಪೆಯ ಸಮೀಪವಿರುವ ಜಂಬುಕೇಶ್ವರನ ಪರಮಭಕ್ತನಾದ ಈತ ತ್ರಿಕಾಲಜ್ಞಾನಿಯೂ, ವೀರ ಶೈವಾಗಮಜ್ಞನೂ, ನಿರಹಂಕಾರವುಳ್ಳವನೂ ಆಗಿ ಮೆರೆದಿದ್ದಾನೆ. ವಿಜಯನಗರ ಮಂಡಲೇಶ್ವರ ಸಕಲರಾಜನ ಪುತ್ರ ತಿರುಮಲ ರಾಯನು ಎಮ್ಮೆ ಬಸವನಿಗೆ ಕೊಮರಕೆರೆ (ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನ ಈಗಿನ ಕೊಂಚಿಗೇರಿ) ಎಂಬ ಗ್ರಾಮವನ್ನು ದತ್ತಿ ಬಿಟ್ಟಿದ್ದಾನೆಂಬುದು ಶಾಸನವೊಂದರಿಂದ ತಿಳಿದುಬರುತ್ತದೆ.[೨] ಈ ಶಾಸನದ ಕಾಲ ಕ್ರಿ.ಶ. ಸು ೧೫೪೩. ಅಂದರೆ ವಿಜಯನಗರ ಅರಸ ಸದಾಶಿವರಾಯ (೧೫೪೩ - ೧೫೭೧)ನ ಕಾಲದಲ್ಲಿ ಈತ ಬದುಕಿದವನು. ಕೊಂಚಿಗೇರಿಯಲ್ಲಿ ಎಮ್ಮೆ ಬಸವನ ಸಮಾಧಿಯಿದ್ದು, ಪಕ್ಕದಲ್ಲಿ ಗುರು ಜಂಬುಕೇಶ್ವರನ ದೇವಾಲಯ ವಿದೆ. ಬಳ್ಳಾರಿಯ ಸಮೀಪ ಕುಡಿತಿನಿ ಗ್ರಾಮದಲ್ಲಿಯೂ ಈತನ ಹೆಸರಿನ ಮಠವೊಂದಿದ್ದು, ಅದಕ್ಕೆ **ಎಮ್ಮೆ ಬಸಪ್ಪ ತಾತನವರ ಮಠ**ವೆಂದು ಕರೆಯಲಾಗುತ್ತಿದೆ.

'ಅಯ್ಯಾ ಅರಸುತನಕಿನ್ನು ಕೆಡಗಾಲವಾದೀತು ಹುಯ್ಯಲೊ ಡಂಗುರವ' ಎಂದು ಒಂದು ದಿನ ಎಮ್ಮೆ ಬಸವನು ವಿಜಯ ನಗರದ ವಿನಾಶವನ್ನು ಸಾರುತ್ತ ರಾಜಬೀದಿಯಲ್ಲಿ ಬರುತ್ತಿರಲು, ಕೃಷ್ಣದೇವರಾಯನು ಈತನನ್ನು ಪಟ್ಟದಾನೆಯ ಕಾಲಕೆಳಗೆ ನೂಕಿಸುತ್ತಾನೆ. ಆದರೆ ಆನೆಯು ಆತನಿಗೆ ಶರಣೆಂದು, ಮಸ್ತಕದ ಮೇಲೆ ಕೂಡಿಸಿಕೊಂಡು ರಾಜಬೀದಿಯಲ್ಲಿ ಹೊತ್ತು ತರುತ್ತದೆ. ಈ ಸನ್ನಿವೇಶವನ್ನು ನೋಡಿ ಕೃಷ್ಣದೇವರಾಯನು ಎಮ್ಮೆ ಬಸವನನ್ನು ಸತ್ಕರಿಸುತ್ತಾನೆ.[೩] ಪ್ರಸ್ತುತ ಸಂಪ್ರಬಂಧದಲ್ಲಿ ಈತನ ಅಪ್ರಕಟಿತ ಕಾಲಜ್ಞಾನ ಸಾಹಿತ್ಯವನ್ನು ಕುರಿತು ಪರಿಶೀಲಿಸಲಾಗಿದೆ.

ಎಮ್ಮೆ ಬಸವನ ಅಪ್ರಕಟಿತ ಕಾಲಜ್ಞಾನ ಸಾಹಿತ್ಯ

ಎಮ್ಮೆ ಬಸವನ ಕಾಲಜ್ಞಾನಗಳನ್ನು ಮೊದಲು ಪ್ರಕಟಿಸಿ ದವರು ಮೈಸೂರಿನ ಶ್ರೀ ಶಿವಬಸವಸ್ವಾಮಿಗಳು. ೧೯೪೭ರಲ್ಲಿ ಕಾಲಜ್ಞಾನ ಸಂಗ್ರಹ (ಭಾಗ -೧)ದಲ್ಲಿ ಬಸವಣ್ಣ, ಪ್ರಭುದೇವ, ನಂಜೇಶ, ಕರಸ್ಥಲ, ನಾಗಲಿಂಗ, ರುದ್ರಮುನಿ, ಎಮ್ಮೆ ಬಸವ ಮುಂತಾದವರ ಕಾಲಜ್ಞಾನಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. *ಎಚ್ಚರಿಕೆ ಎಚ್ಚರಿಕೆ, ಕೂಕೂಕೂ, ಮಾನ್ಯರು, ಹೇಗೆ ಮಾಡಿತು ಲೋಕ, ಕಣಿಯ ಕೇಳಿರೋ, ನೋಡಿ ನೋಡಿ* ಎಂದು ಅಂತ್ಯವಾಗುವ ಪಲ್ಲವಿಗಳನ್ನೊಳಗೊಂಡ ಕಾಲಜ್ಞಾನ ಹಾಡುಗಳಿವೆ.

ಇತ್ತೀಚಿಗೆ ನಾನು ಪರಿಶೀಲಿಸಿದ ಕೆಲವು (ತಾಳೆಪ್ರತಿ, ಹಾಗೂ ಕಾಗದ ಪ್ರತಿ) ಹಸ್ತಪ್ರತಿಗಳಿಂದ ಎಮ್ಮೆ ಬಸವನ ಹೊಸ ಕಾಲಜ್ಞಾನ ಹಾಡುಗಳು ಲಭಿಸಿವೆ.[೪] ಅವುಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

	ಪಲ್ಲವಿ	ಪದ್ಯಸಂಖ್ಯೆ
೧.	ಹಾಕೆಲೊ ಮುಂಡಿಗೆಯ	೨೨
೨.	ಸುವ್ವಿ ಬಾ ಸಂಗಯ್ಯ	೨೭
೩.	ಹೇಳಬಂದೆ ಹೇಳಬಂದೆ	೦೫
೪.	ಕೇಳಿ ಕೇಳಿರೋ	೦೬
೫.	ದುಮ್ಮಿಸಾಲಿಯೋ	೫೭
೬.	ಹೇಗೆ ಮಾಡಿರೋ	೦೯
೭.	ಧರ್ಮವ ಬಿಡಬೇಡಿರಣ್ಣ	೧೨
೮.	ಗಜಬಿಜ	೦೫
೯.	ಬಾಬೂಜಿ	೦೫
೧೦.	ಕುಲಿಲಿಲಿ ಕುಲಿಲಿಮಾ	೦೭
೧೧.	ಪ್ರಳಯ ಬಂದಿತಲ್ಲ	೧೧

ಹೀಗೆ ಈತನ ೧೬೬ ಕಾಲಜ್ಞಾನದ ಹಾಡುಗಳು ಹೊಸದಾಗಿ ಲಭ್ಯವಾದಂತಾಗಿವೆ. ಇವುಗಳ ವೈಶಿಷ್ಟ್ಯವನ್ನು ಕುರಿತು ಈಗ ಪರಿಶೀಲಿಸಬಹುದು.

'ಹಾಕೆಲೊ ಮುಂಡಿಗೆಯ' ಎಂಬ ಪಲ್ಲವಿಯನ್ನೊಳಗೊಂಡ ಹಾಡುಗಳಲ್ಲಿ ಉತ್ತರ ದೇಶದ ಖಾನರು ಕರ್ನಾಟಕಕ್ಕೆ ಮುತ್ತಿಗೆ ಹಾಕಿದ ಬಗೆಗೆ ಹೇಳಲಾಗಿದೆ.

"ಲೆಕ್ಕದಲಿ ಎಣಿಸುವರೆ ಎಪ್ಪತ್ತೈದು ಲಕ್ಷಸಾವಿರ ಕುದುರೆ ಸೊಕ್ಕಿದ ಖಾನರೆಲ್ಲ ಹೆದ್ದೊರೆಗಳ ದಾಟಿ ಹೊಕ್ಕರು ಕರ್ನಾಟವಾ" "ಕೂಗಿ ಕಾಗಿಲಿಯ ಬಿದ್ದು ತುರುಕರ ದಂಡು ತಾಗುವವರಾರುಯಿಲ್ಲ ಸಾಗಿತು ಆ ಗಿರಿ ಹೇಮಾದ್ರಿಗೆ ನಡದೀತು ತೆಲುಂಗಾಣ್ಯಕೆ" "ಚೆನ್ನಬಸವಣ್ಣನು ಬರುವದು ಈ ನರರಿಗೆ ಮುನ್ನವೆ ತಿಳಿಯದಲ್ಲಾ ಅನ್ಯಾಯದಲಿ ಗಳಿಸಿದ ಅಭಿಮಾನ ಹೋದೀತು ಭಂಗಾಗಿ"

ಇನ್ನೂ ಮುಂದುವರೆದು ಖಾನರೆಲ್ಲ ಗುಡಿಗೋಪುರಗಳನ್ನು ನಾಶಪಡಿಸಿದುದನ್ನು ಕಾಲಜ್ಞಾನದ ಮೂಲಕ ಹೇಳುತ್ತಾ *"ಹರಿಹರ ದೇವರಿದ್ದ ದೇವಾಲಯವ ತರಿದಾರು ಲೆಕ್ಕವಿಲ್ಲದೆ, ಮುರಿದಾರು ಶಿಖರವನು ಗೋಪುರಗಳ ಕಡೆದಾರು ಕಟ್ಟಿಸುವರಿಲ್ಲ"* ಎಂದು ಕಣ್ಣಾರೆ ಕಂಡಿದ್ದನ್ನು ನೇರವಾಗಿ ಹೇಳಿದ್ದಾನೆ. *ಸುವ್ವಿ ಬಾ ಸಂಗಯ್ಯ* ಎಂಬ ಕಾಲಜ್ಞಾನ ಹಾಡುಗಳಲ್ಲಿ ಹಂಪೆಯ ಗೋಪುರವೆಲ್ಲ ಅಳಿದಾವು,

ಮಾತಂಗವಳಿದೀತು ಭಯವಲ್ಲಿ ತೋರಿತು, ತುಂಗಭದ್ರೆಯಿಂದತ್ತ ಜಂಗಮದ ದಾಸೋಹ, ವಾಲಿಯ ಭಂಡಾರ ಸೂರ‍್ಯಾಡಿ ಹೋದಾವು, ಎಂದು ಅಂದಿನ ವಿಜಯನಗರದ ಅವನತಿಯನ್ನು ಎತ್ತಿ ಹೇಳಿದ್ದಾನೆ.

ಹಂಪೆಯ ವಿರೂಪಾಕ್ಷ ಕೆಂಪನುಡಿಗೆಯನುಟ್ಟು
ಪಂಪಾದೇವಿಯನೊಡಗೊಂಡು।
ಪಂಪಾದೇವಿಯನೊಡಗೊಂಡು ಉಳುವೆಯ
ತಂಪುಳ್ಳ ವನಕೆ ನಡದಾರು॥

*

ಜಂಬುಲಿಂಗಯ್ಯ ಅಂಬಿಕೆದೇವಿಯ ಕೂಡಿ
ರಂಭೆ ಗಂಗೆಯನೊಡಗೊಂಡು।
ರಂಭೆ ಗಂಗೆಯನೊಡಗೊಂಡು ಉಳುವೆಯ
ಇಂಬುಳ್ಳ ವನಕೆ ನಡೆದಾರು॥

ಈ ಹಾಡುಗಳಲ್ಲಿ ವಿರೂಪಾಕ್ಷ - ಪಂಪಾಂಬಿಕೆ, ಜಂಬುನಾಥ ಅಂಬಿಕೆದೇವಿಯರು ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ನೋಡಲಾರದೆ ಉಳುಮೆಯ ಕ್ಷೇತ್ರಕ್ಕೆ ಹೋದರೆಂಬುದನ್ನು ಎಮ್ಮೆ ಬಸವನು ಹೇಳಿದ್ದಾನೆ.

ಎಮ್ಮೆ ಬಸವವಿಗೆ ಚೆನ್ನಬಸವಣ್ಣನ ಮೇಲೆ ವಿಶೇಷವಾದ ಗೌರವ. ಪ್ರತಿಯೊಂದು ಕಾಲಜ್ಞಾನದ ಹಾಡುಗಳಲ್ಲಿ ಈತನನ್ನು ಸ್ತುತಿಸಿದ್ದಾನೆ.

"ಚೆನ್ನಬಸವನು ಬರುವುದು ಈ ನರರಿಗೆ ಮುನ್ನವೆ ತಿಳಿಯದಲ್ಲಾ
ಹಾಕೆಲೊ ಮುಂಡಿಗೆಯ"।

*

"ಚಿನ್ನ ಬೆಳ್ಳಿಯ ಪಟ್ಟ ಮುನ್ನೂರು ಸಾವಿರ
ಚೆನ್ನಬಸವಣ್ಣ ಬರುವಾಗ।
ಚೆನ್ನಬಸವಣ್ಣ ಬರುವಾಗ ಸೂಚನೆಗೆ
ಎಮ್ಮೆ ಬಸವಣ್ಣ ಸಾರೆಂದಾ॥"

*

"ಕೆಟ್ಟಿತ್ತು ಉತ್ತರ ದೇಶವ ಪ್ರಜೆಗಳು ದುಮ್ಮಿಸಾಲಿಯೊ
ಸೃಷ್ಟಿಗೊಡೆಯ ಚೆನ್ನಬಸವಣ್ಣನಾಟದಲ್ಲಿ ದುಮ್ಮಿಸಾಲಿಯೊ"
"ಸೃಷ್ಟಿಗೀಶ್ವರ ಚೆನ್ನಬಸವಣ್ಣ ಬರುವಾಗ
ಹೂಟ್ಬಾಗಿ ಹಾರ‍್ಯಾರಣ್ಣ"

ಸಮಾಜದಲ್ಲಿರುವ ಅನ್ಯಾಯ, ಅಕ್ರಮ, ಅನೀತಿ, ಅನೈತಿಕತೆಗಳನ್ನು ತೊಲಗಿಸಲು "ಚೆನ್ನಬಸವಣ್ಣ ಮತ್ತೆ ಮರ್ತ್ಯಕ್ಕೆ ಬರುತ್ತಾನೆ" ಎಂದು ಜನರಿಗೆ ತಿಳಿಯಪಡಿಸಿದ್ದಾನೆ. ಹಾಗೆ ನೋಡಿದರೆ ಚೆನ್ನಬಸವಣ್ಣನನ್ನು ಕಾಲಜ್ಞಾನ ಕವಿಗಳೆಲ್ಲ ಸ್ತುತಿಸಿದ್ದಾರೆ, ಗೌರವದಿಂದ ಕಂಡಿದ್ದಾರೆ. ಚೆನ್ನಬಸವಣ್ಣ ಕಾಲಜ್ಞಾನ ಸಾಹಿತ್ಯದ ಪ್ರೇರಕ ಗುರು ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಜನಜೀವನದ ನೈಜಚಿತ್ರಣವನ್ನು ಕಾಲಜ್ಞಾನದ ಮುಖಾಂತರ ಎಮ್ಮೆ ಬಸವನು ತುಂಬ ಮನೋಜ್ಞವಾಗಿ ಹೇಳಿದ್ದಾನೆ.

"ಹಣವ ಗಳಿಸಿದೆನೆಂದು ಹಮ್ಮಿಲೆ ಇರಬ್ಯಾಡ
ಉಣಲಿಕ್ಕೆ ದಿನವಿಲ್ಲವಣ್ಣ
ದುರುಳರು ಬಂದರು ದಂತವ ಮುರಿದರು
ಎಣಿಎಣಿಸಿ ಕೊಡಬೇಕಣ್ಣ"
"ಎಲ್ಲ ದೇವರ ಪೂಜೆ ನಿಲ್ಲುತ ಬರುತಾವ"

*

"ಧನಧಾನ್ಯ ಸಂಪದವು ತಮ್ಮದಲ್ಲ
ಮನಿಮಾರು ಸತಿಸುತರು
ಕನಸು ಕಂಡಂಥ ಕನ್ನಡಿಯೊಳಗಿನ ಗಂಟು
ದಿನಮಾನ ಕೆಟ್ಬಾವು"

*

"ಕರ್ಮವು ಹೆಚ್ಚಿತು ಕಡೆ ಮೊದಲಿಲ್ಲದೆ
ಧರ್ಮವ ಬಿಡಬೇಡಿಕಣ್ಣ"

*

"ಅನ್ಯಾಯ ಹೆಚ್ಚೀತು ಆಳಿಗಾಲ ದಿನಬಂತು
ಹನ್ನೊಂದು ಅವತಾರಕಣ್ಣ।
ಇನ್ನೊಂದಿಗೆ ಬಿಡದೆ ವಿಪರೀತ ದಿನ ಬಂತು
ಕಣ್ಣಲಿ ನೋಡಬೇಕಣ್ಣ"॥

*

"ಬಡವರು ಬಲ್ಲಿದರು ಗಳಿಸಿದ್ದುದ
ಉಣಲಿಲ್ಲ ಉಡಲಿಲ್ಲವು"

ಹೀಗೆ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ಅಕ್ರಮಗಳ ಬಗೆಗೆ ಜನರಲ್ಲಿ ತಿಳುವಳಿಕೆಯನ್ನು, ಜೊತೆಗೆ ಎಚ್ಚರಿಕೆಯನ್ನು ಕೊಡುತ್ತ, *ಹೊಟ್ಟೆಗಾಸೆ ಮಾಡಿ ಕಟ್ಟಿದ ನುಡಿಯಲ್ಲ. ದಿಟ್ಟರು ಕೇಳಿರಿ ಕಿವಿಗೊಟ್ಟು ಮನಸೋತು*, ಎಂದು ತನ್ನ ನೈತಿಕತೆಯನ್ನು ತೋರ್ಪಡಿಸಿದ್ದಾನೆ.

ಸೊಸೆ ಬಂದು ನಡೆದಾಗ ಅತ್ತೆಗೆ ಉಳಿವಿಲ್ಲ, ನೀಚರು ಹೆಚ್ಚ್ಯಾರು, ರಂಡೇರು ಬಸುರಾಗಿ ಮಕ್ಕಳ ಹಡೆವರು, ತೊತ್ತಿನ ಮಕ್ಕಳಿಗೆ ಪಟ್ಟವ ಕಟ್ಟ್ಯಾರು, ಅತ್ತಿಯ ತೊತ್ತಿಗೆ ತುಪ್ಪವಾಗರವ, ಹೆತ್ತ ತಂದೆ ತಾಯಿಗೆ ಹೋತುವಾಗರವ, ನಿತ್ಯನೇಮಗಳೆಲ್ಲ ಬಯಲಾಗಿ ಹೋದಾವು, ಎಂದು ಮೊದಲಾಗಿ ಎಮ್ಮೆ ಬಸವನು ಅಂದಿನ ಸಮಾಜದ ನಡತೆಗಳನ್ನು ಆಚಾರ ವಿಚಾರಗಳನ್ನು ಕುರಿತು ನೇರವಾಗಿ ಹೇಳಿದ್ದಾನೆ. ತನ್ನ ಕಾಲಜ್ಞಾನ ರಚನೆಗೆ ಎಮ್ಮೆ ಬಸವನು ಜನಸಾಮಾನ್ಯರ ಆಡುಭಾಷೆಯನ್ನೆ ಬಳಸಿಕೊಂಡಿದ್ದಾನೆ. ಉಟ್ಬಾರು - ಗಿಟ್ಬಾರು ಕಂಡಾರು - ಉಂಡಾರು, ವೇದವು - ಗೀದವು, ಪುರುಷರು - ಗಿರುಷರು, ಅಕ್ಕರಿ - ಕೊಕ್ಕರಿ ಮುಂತಾದ ಪದಗಳನ್ನು ನೇರವಾಗಿಯೇ ತೆಗೆದುಕೊಂಡಿದ್ದಾನೆ.

ಒಟ್ಟಿನಲ್ಲಿ "ಕಾಲಜ್ಞಾನ ಹೇಳುವಲ್ಲಿ ಎಮ್ಮೆ ಬಸವ ತೋರಿದ ಸ್ಥೈರ್ಯ, ಸತ್ಯನಿಷ್ಠುರತೆಗಳು ಪ್ರಶಂಸನೀಯವಾಗಿವೆ. ಈತನ ಕಾಲಜ್ಞಾನದ ನುಡಿಗಳು ಅಂದಿನ ಜನಪದ ಧಾಟಿಯ ಎಲ್ಲ ಮಾಧ್ಯಮಗಳಲ್ಲೂ ಹೊರಹೊಮ್ಮಿವೆ ಎಂಬ ಡಾ॥ ವಿ.ಶಿವಾನಂದ ಅವರ ಮಾತು ಸಮಂಜಸವಾದುದಾಗಿದೆ[೫]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಸಾಧನೆ** ಸಂ.೭ ಸಂ.೭ ಪುಟ: ೪೨೨

*೨. **ಎಪಿಗ್ರಾಫಿಯ ಕರ್ನಾಟಕ** ಸಂ.೩ ಪುಟ: ೨೧೪

*೩. ಹೆಚ್ಚಿನ ವಿವರಗಳಿಗಾಗಿ ನೋಡಿರಿ: "ಎಮ್ಮೆಯ ಬಸವ: ಕೆಲವು ಸಂಗತಿಗಳು"

*೪. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರದ ೨ನೇ ಕ್ರಮಾಂಕದ ತಾಳೆಗರಿ ಪ್ರತಿ, ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದ ೪೯೧ನೆಯ ಕ್ರಮಾಂಕದ ಕಾಗದ ಪ್ರತಿ, ಧಾರಾವಾಡದ ಕನ್ನಡ ಸಂಶೋಧನ ಸಂಸ್ಥೆ (KRI)ಯ ಹಸ್ತಪ್ರತಿ ಭಾಂಡಾರದ ೨೫೫ನೇ ಕ್ರಮಾಂಕದ ಕಾಗದ ಪ್ರತಿ, ಧಾರಾವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ೪೦೪ನೇ ಕ್ರಮಾಂಕದ ತಾಳೆಗರಿ ಪ್ರತಿ - ಈ ನಾಲ್ಕು ಪ್ರತಿಗಳಿಂದ ಎಮ್ಮೆ ಬಸವನ ಅಪ್ರಕಟಿತ ಕಾಲಜ್ಞಾನ ಸಾಹಿತ್ಯವನ್ನು ಗುರುತಿಸಿ ಪರಿಶೋಧಿಸಲಾಗಿದೆ. ಮೇಲೆ ಸೂಚಿಸಿದ ಪ್ರತಿಗಳನ್ನು ಪರಿಶೀಲಿಸಲು ಅವಕಾಶ ಮಾಡಿಕೊಟ್ಟ ಆಯಾ ಸಂಸ್ಥೆಯ ನಿರ್ದೇಶಕರುಗಳಿಗೆ ಕೃತಜ್ಞತೆಗಳು.

*೫. **ಸಾಧನೆ** ಸಂ.೭ ಸಂ.೭ ಪುಟ ೫೧.

ಡಾ॥ ಕೃಷ್ಣ ಕೊಲ್ಹಾರ ಕುಲಕರ್ಣಿ*

ವಿಜಯನಗರದ ನಿರ್ಣಾಯಕ ಯುದ್ಧದಲ್ಲಿ ರಾಮರಾಯನನ್ನು ಕೊಂದವರು ಯಾರು?

ಮಧ್ಯಯುಗೀನ ದಕ್ಷಿಣ ಭಾರತದಲ್ಲಿ ಶಾಹಿಬಾದಶಹರ ಒಕ್ಕೂಟ ಹಾಗೂ ವಿಜಯನಗರದ ಮಧ್ಯ ಕಿ.ಶ್ರ.೧೫೬೫ರಲ್ಲಿ ನಡೆದ ನಿರ್ಣಾಯಕ ಕಾಳಗದಲ್ಲಿ ರಾಮರಾಯನು ಸತ್ತು ವಿಜಯನಗರ ಸೈನ್ಯವು ಸೋತು ಓಡಿ ಹೋಯಿತು. ನಿರ್ಣಾಯಕ ಕಾಳಗ ನಡೆದು ೪೩೫ ವರುಷಗಳಷ್ಟು ಗತಿಸಿದ್ದರೂ ಕಾಳಗದ ಕುರಿತಾದ ಕೆಲವು ವಿಷಯಗಳು ಇಂದಿಗೂ ಸ್ಪಷ್ಟವಾಗಿಲ್ಲ. ಅವುಗಳಲ್ಲಿ

೧. ನಿರ್ಣಾಯಕ ಯುದ್ದ ನಡೆದ ಸ್ಥಳ

೨. ರಾಮರಾಯ ಸತ್ತ ಬಗೆ

೩. ರಾಮರಾಯ ಸತ್ತ ನಿಶ್ಚಿತ ದಿನ

- ಇವುಗಳನ್ನು ಖಚಿತವಾಗಿ ನಿರ್ಧರಿಸುವುದಾಗಿಲ್ಲ ಎಂಬುದು ವಿಶೇಷವಾಗಿದೆ.

ಯುದ್ದ ನಡೆದ ಸ್ಥಳದ ಕುರಿತು ಹೇಳುವಾಗ ಅದನ್ನು ತಾಳಿಕೋಟೆ ಕಾಳಗ, ರಕ್ಕಸಗಿ - ತಂಗಡಗಿ ಕಾಳಗ, ಬನ್ನಿಹಟ್ಟಿ ಕಾಳಗ, ಕೃಷ್ಣಾ ಕಾಳಗ, ಬಯಾಪುರ - ಭೋಗಾಪುರ ಕಾಳಗ ಇತ್ಯಾದಿಯಾಗಿ ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

ರಾಮರಾಯ ಸತ್ತ ಬಗೆಯನ್ನು ಹೇಳುತ್ತ ಅವನನ್ನು

★ *ಬಿಜಾಪುರದ ಅಲಿ ಆದಿಲಶಹನು ಕೊಂದನು.*

★ *ಅಹ್ಮದನಗರದ ಹುಸೇನ ನಿಜಾನಶಹನು ಕೊಂದನು.*

★ *ಕಾಳಗದಲ್ಲಿ ತೋಫಿನ ಬಾಯಿಗೆ ಬಲಿಯಾದನು.*

★ *ಆನೆಯ ಕಾಲಿಗೆ ಸಿಕ್ಕು ಸತ್ತನು. ಸತ್ತವನ ಶಿರಚ್ಛೇದನ ಮಾಡಿ ಪ್ರದರ್ಶಿಸಿದರು.*

★ *ಅವನ ಶಿರವನ್ನು ಕಾಶಿಗೆ ಕಳಿಸಲಾಯಿತು.*

- ಇತ್ಯಾದಿಯಾಗಿ ಅನೇಕ ವಿದ್ವಾಂಸರು ಸಮಕಾಲೀನ ಆಕರಗಳನ್ನು ಆಧರಿಸಿ ಹೇಳಿದ್ದಾರೆ. ಆದರಂತೆ ಆತ ಮಡಿದ ದಿನವೂ ೫ ಜನವರಿ, ೨೩ ಜನವರಿ, ೨೬ ಜನವರಿ ೧೫೬೫ ಎಂದು ನಮೂದಾಗಿವೆ.

ಪ್ರಸ್ತುತ ಪ್ರಬಂಧದಲ್ಲಿ ರಾಮರಾಯನ ಮರಣದ ಕುರಿತು ಉಪಲಬ್ಧವಿದ್ದ ವಿವರಗಳನ್ನು ಚರ್ಚಿಸುತ್ತ, ರಾಮರಾಯನನ್ನು ಖಚಿತವಾಗಿ ಯಾರು ಕೊಂದಿರಬಹುದು ಎಂಬುದರ ಬಗ್ಗೆ ಸಂಭಾವ್ಯತೆಗಳನ್ನು ಕಂಡು ಹಿಡಿಯಲು ಪ್ರಯತ್ನಿಸಲಾಗಿದೆ. ಅದಕ್ಕಾಗಿ ಕನ್ನಡ, ಪರ್ಶಿಯನ್, ಉರ್ದು, ಮರಾಠಿ ಹಾಗು ಇಂಗ್ಲೀಷ್ ಭಾಷೆಗಳಲ್ಲಿ ಉಪಲಬ್ಧವಿದ್ದ ಮೂಲ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ಇವುಗಳನ್ನು ಆಧರಿಸಿ ನಿರ್ಧರಿಸಿದ ಇತ್ತೀಚಿನ ವಿದ್ವಾಂಸರ ಲೇಖನಗಳನ್ನೂ ಗಮನಿಸಲಾಗಿದೆ. ಅವುಗಳಲ್ಲಿ ಸ್ಕಾಟ್, ಬ್ರಿಗ್ಸ, ರಾಬರ್ಟ್ ಸಿವೆಲ್, ಡಾ॥ ಆರ್ ಸುಬ್ರಮಣ್ಯಂ, ಪ್ರೊ॥ ನೀಲಕಂಠಶಾಸ್ತ್ರಿ, ಪ್ರೊ॥ ಎಚ್.ಕೆ. ಶೇರವಾನಿ, ಡಾ॥ ಪಿ.ಎಂ.ಜೋಶಿ, ಡಾ॥ ರಾಧೇಶ್ಯಾಮ ಪ್ರಮುಖರು. ಇವುಗಳ ವ್ಯತಿರಿಕ್ತ ಇನ್ನು ಕೆಲವು ಆಕರಗಳು ಇರಲೂ ಸಾಧ್ಯವಿದೆ.

೧. ಕನ್ನಡದಲ್ಲಿ ಬಹುಮುಖ್ಯರಾದ ಆಕರ, '**ರಾಮರಾಯನ ಬಖೈರು**'. ಅದನ್ನು ಬರೆದವನು ವಿಜಯನಗರದ ರಾಮರಾಯನ ಸನ್ನಿಧಿಯಲ್ಲೆ ಇದ್ದವನು ಎಂದು ಪ್ರಾರಂಭದಲ್ಲಿಯೆ ಹೇಳಿಕೊಂಡಿದ್ದಾನೆ. ಬಖೈರಿನಲ್ಲಿ ರಾಮರಾಯನ ಮರಣದ ಕುರಿತು ಹೀಗೆ ಹೇಳಲಾಗಿದೆ.

"ನಾಲ್ಕೂ ಪಾದುಶಹರ ಸೈನ್ಯ ಹಿಂದೂ ಸೈನ್ಯವನ್ನಾವರಿಸಿತು. ಠಾಣ್ಯವೆಲ್ಲ ಲೂಟಿಯಾಗಿ ಹೋಯಿತು..... ಈ ಮಧ್ಯ ರಾಜ ಭೂವರರು ಆದಿಲಶಾಹಿಯನ್ನು ಕುರಿತು ಹೇಳಿದ್ದು 'ನೀನು ನನ್ನ ಮಗನಾಗಿ ಈ ಪ್ರಕಾರ ನಡೆಯುವುದು ಯುಕ್ತವಲ್ಲ.... ಮಗನಾದುದಕ್ಕೆ ನನಗೊಂದು ಉಪಕಾರವನ್ನು ಮಾಡು. ನನ್ನನ್ನು ವೈರಿ ಕೈಗೆ ಕೊಟ್ಟು ತಲೆ ಹೊಯಿಸಬೇಡ. ನೀನೆ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು.....' ಆದಿಲಷಹನು ಕೊಂಚ ನಿಧಾನಿಸಿ ತರುವಾಯ ತಾನೆ ಫಿರಂಗಿಯನ್ನು ಹಾರಿಸಿ ರಾಜ ಭೂವರರ ತಲೆಯನ್ನು ಹೊಂಲಿದನು".(೧)

* ಕಾಳಮ್ಮನ ಗುಡಿ ಹತ್ತಿರ, ಗೋದಿಬೋಲಿಮಾಳಾ, ವಿಜಾಪುರ.

೨. ಕಾಳಗ ಸಂಭವಿಸಿದ ಅನಂತರ ಸುಮಾರು ಎರಡುನೂರು ವರುಷಗಳ ಅನಂತರ ಕೆಳದಿಯ ನಾಯಕರಲ್ಲಿ ಆಸ್ಥಾನ ಕವಿಯಾಗಿದ್ದ ಲಿಂಗಣ್ಣ ಕವಿಯು ತನ್ನ 'ಕೆಳದಿ ನೃಪ ವಿಜಯ' ಎಂಬ ಚಂಪೂ ಕಾವ್ಯದಲ್ಲಿ ಯುದ್ಧದ ವಿವರಗಳನ್ನು ಹೇಳುತ್ತ .

'ಬಳಿಕ್ಕಂ ವಿಜಾಪುರದ ಆದಿಲಷಹನ ಸಂಚಿನ ಮೇಲಾ ಬಾದಶಹರೊಂದಾಗಿ ಮೋಸದ ಮೇಲೆ ರಾಮರಾಯರಂ ಪಿಡಿದು ಶಿರಚ್ಛೇದನಂ ಗೈದು, ಆ ಶಿರಮಂ ಕಾಶಿಗೆ ಕಳುಹಿ....' ಎಂದು ಮುಂತಾಗಿ ಹೇಳಿದ್ದಾನೆ.

೩. ಅಹಮದನಗರದ ಹುಸೇನ ನಿಜಾಮಶಹನ (ಕ್ರಿ.ಶ.೧೫೫೭ - ೧೫೬೫) ಆಸ್ಥಾನ ಕವಿ 'ಆಫಾತಾಬ' ನು ಹುಸೇನನ ಆಪ್ತ ಮಿತ್ರನಾಗಿದ್ದನು. ಯುದ್ಧವನ್ನು ಕಣ್ಣಾರೆ ಕಂಡವನು. ತನ್ನ ಆಶ್ರಯದಾತನ ಕುರಿತು ಬರೆದ ಪರ್ಶಿಯನ್ ಕಾವ್ಯ '*ತಾರೀಫ-ಎ-ಹುಸೇನಶಾಹ ಬಾದಶಾಹ ದಖಿನ*' ಬಹು ಪ್ರಸಿದ್ಧ ಕೃತಿ. ಅದರಲ್ಲಿ ರಾಮರಾಯನ ಕೊಲೆಯ ಬಗ್ಗೆ ಎರಡು ದ್ವಿಪಂಕ್ತಿಗಳು ಬಂದಿವೆ. ಅವು ಹೀಗಿವೆ:[೩]

ದ್ವಿಪದಿ ಸಂಖ್ಯೆ ೩೧೪: 'ರಾಮರಾಜನು ಭಲ್ಲೆಯಿಂದ ಗಾಯಗೊಂಡನು. ಆತನ ತಲೆ ಭೂಮಿಗೆ ಬಡಿದು ಕಿರೀಟವು ಕೆಳಗೆ ಬಿದ್ದಿತು.

ದ್ವಿಪದಿ ಸಂಖ್ಯೆ ೩೧೬: 'ಬಾದಶಹನು ಒಬ್ಬನಿಗೆ ಬೆರಳೆತ್ತಿ ಸೂಚಿಸಿದಾಗ ಆತನ ತಲೆಯನ್ನು ಬೇರ್ಪಡಿಸಿ ಒಣ ಹುಲ್ಲಿನಲ್ಲಿ ತುಂಬಿದರು.

೪. ನಿಜಾಮಶಹನ ಆಸ್ಥಾನದಲ್ಲಿಯೇ ಇದ್ದ ಇನ್ನೊಬ್ಬ ಕವಿ 'ಅಲಿ ತಾಬಾತಾಬಾ' ಎಂಬವನು 'ಬುರ್ಹಾನ-ಇ-ಮಾಸಿರ್' ಎಂಬ ಚರಿತ್ರ ಗ್ರಂಥವನ್ನು ಬರೆದಿದ್ದಾನೆ. ಪ್ರಸ್ತುತ ಘಟನೆ ಸಂಭವಿಸಿದ ಕೆಲವೆ ಕಾಲದಲ್ಲಿ ಬರೆದ ಈ ಕೃತಿಯಲ್ಲಿ ಹೀಗೆ ಹೇಳಲಾಗಿದೆ:[೪]

'ಯುದ್ಧದ ಮಧ್ಯದಲ್ಲಿ ನಿಜಾಮಶಹನ ಆನೆಯೊಂದು ರಾಮರಾಜನನ್ನು ಹಿಡಿಯಿತು. ರಾಮರಾಜನು ಭಲ್ಲೆಯಿಂದ ಗಾಯಗೊಂಡು ಕೆಳಗೆ ಬಿದ್ದನು. ಅಲಿ ಆದಿಲಶಹ ಬರುವ ಮೊದಲು ಆತನ ತಲೆಯನ್ನು ಕತ್ತರಿಸಲು ನಿಜಾಮಶಹನು ಆಜ್ಞೆ ಮಾಡಿದನು. ತಕ್ಷಣ ಆತನ ತಲೆಯನ್ನು ಕತ್ತರಿಸಿ ನಿಜಾಮ ಶಹನ ಕಾಲಡಿಯಲ್ಲಿ ಇಟ್ಟರು. ಅನಂತರ ಅದನ್ನು ಯುದ್ಧಭೂಮಿಯಲ್ಲಿ ಪ್ರದರ್ಶಿಸ ಲಾಯಿತು'.

೫. ಸಮಕಾಲೀನ ಪಾಶ್ಚಿಮಾತ್ಯ ವಿದ್ವಾಂಸ ಕೌಟೋ ಕೂಡ, *"ನಿಜಾಮಶಹನು, 'ಈಗ ನಿನ್ನ ಮೇಲೆ ಸೇಡು ತೀರಿಸಿಕೊಂಡೆ. ದೇವರು ನನಗೆ ಏನು ಬೇಕಾದರೂ ಮಾಡಲಿ'* ಎಂದು ಉದ್ಗರಿಸುತ್ತ *ತನ್ನ ಕೈಯಿಂದಲೇ ತನ್ನ ವೈರಿಯ ತಲೆ ಕಡಿದನು"* ಎಂದು *ಹೇಳುತ್ತಾನೆ.*[೫]

೬. ಮಹ್ಮದ ಕಾಶೀಮ ಫಿರಿಶ್ತಾನನ 'ಭಾರತೀಯ ಮುಸಲ್ಮಾನರ ಚರಿತ್ರೆ', ಒಂದು ಸುಪ್ರಸಿದ್ಧ ಗ್ರಂಥ. ವಿಜಾಪುರದ ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿದ್ದು ಘಟನೆ ಸಂಭವಿಸಿದ ೩೦ ವರುಷಗಳ ಅನಂತರ ಬರೆದ ಗ್ರಂಥ. ಅದರಲ್ಲಿ ನಿರ್ಣಾಯಕ ಕಾಳಗದ ಕುರಿತು ವಿಸ್ತಾರವಾಗಿ ಕಣ್ಣಿಗೆ ಕಟ್ಟುವಂತೆ ಹೇಳಿದ್ದಾನೆ. ಪ್ರಸ್ತುತ ಸಂದರ್ಭದ ಕುರಿತು ಹೀಗೆ ಹೇಳುತ್ತಾನೆ.

'ಎರಡೂ ಬದಿಗಳು ಯುದ್ದದಲ್ಲಿ ನಿರತವಾಗಿರುವಾಗ ನಿಜಾಮ ಶಹನ ಆನೆಗಳಲ್ಲೊಂದಾದ 'ಗುಲಾಮಅಲಿ' ಎಂಬ ಹೆಸರಿನ ಆನೆಯು ರೂಮೀಖಾನನ ನೇತೃತ್ವದಲ್ಲಿತ್ತು. ಅದು ರಾಮರಾಜನ ಆನೆಗಳ ಮೇಲೆ ಏರಿ ಹೋಗಿ ಅವುಗಳನ್ನು ಬೆಂಬತ್ತಿ ರಾಮರಾಜನ ಬೀಡಾರದವರೆಗೂ ಹೋಯಿತು. ಆನೆಯು ಬಂದು ಘಾಸಿಗೊಳಿಸೀತೆಂಬ ಭಯದಿಂದ ರಾಮ ರಾಜನು ತನ್ನ ಆಸನದಿಂದ ಕೆಳಗಿಳಿದು ನಡೆಯಹತ್ತಿದನು. (ಅಷ್ಟರಲ್ಲಿ ಭೋಯಿಗಳು ಬಂದು ಸಿಂಹಾಸನ ಸಹಿತ ರಾಮರಾಜನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ನಡೆಯಹತ್ತಿದರು). ಅನಿರೀಕ್ಷಿತವಾಗಿ ಆನೆ ಬಂದುದರಿಂದ ಸಿಂಹಾಸನದ ಮೇಲಿದ್ದ ರಾಮರಾಜನನ್ನು ಹೊತ್ತುಕೊಂಡು ಹೋಗುತ್ತಿದ್ದ ಭೋಯಿಗಳು (ಸೇವಕರು) ಪಲ್ಲಕ್ಕಿಯನ್ನು ನೆಲದಮೇಲೆ ಒಗೆದು ಭಯದಿಂದ ಓಡಹತ್ತಿದರು. ನಿಜಾಮಶಹನ ಆನೆಯ ಮಾವುತನು ರತ್ನ ಖಚಿತ ಸಿಂಹಾಸನದ ಆಶೆಯಿಂದ ಆನೆಯನ್ನು ನಿಲ್ಲಿಸಿ ಅದರ ಸೊಂಡಲಿನಿಂದ ಸಿಂಹಾಸನವನ್ನು ಎತ್ತಿ ಮೇಲೆ ತರಲು ಆಜ್ಞೆ ಮಾಡಿದನು. ಅಷ್ಟರಲ್ಲಿ ಅಲ್ಲಿದ್ದ ವಿಜಯನಗರದ ಸರದಾರನೊಬ್ಬ ಆನೆಯನ್ನು ಕೊಲ್ಲಲು ಆಜ್ಞೆಮಾಡಿ, ತನ್ನ ರಾಜನ ರಕ್ಷಣೆಗಾಗಿ ಕೂಗಹತ್ತಿದನು. ಆಗ ಸಿಂಹಾಸನದಿಂದ ಕೆಳಗೆ ಬಿದ್ದವನು ರಾಮರಾಜನೆಂದು ತಿಳಿದ ಮಾವುತನು ತಕ್ಷಣ ಜಾಗ್ರತನಾಗಿ, ಸಿಂಹಾಸನದ ಕಡೆಗೆ ಲಕ್ಷ್ಯ ಕೊಡದೆ, ರಾಮರಾಜನನ್ನು ಎತ್ತಿಕೊಂಡು ರೂಮೀಖಾನನ ಹತ್ತಿರ ಬಂದನು. ಆತನು ತಡ ಮಾಡದೆ, ನಿಜಾಮಶಹನಿಗೆ ತಂದು ಒಪ್ಪಿಸಿದನು. ನಿಜಾಮಶಹನು ಗುರುತು ಹಿಡಿದು ರೆಪ್ಪೆ ಬಡಿಯುವಷ್ಟರಲ್ಲಿ ಆತನ ತಲೆಯನ್ನು ಶರೀರದಿಂದ ಬೇರ್ಪಡಿಸಿ ಭಲ್ಲೆಗೆ ಚುಚ್ಚಿ ಅದೇ ಆನೆಯ ಮೇಲೆ ಎತ್ತರವಾಗಿ ಇಟ್ಟು - ಶತ್ರುಗಳ ಪಾಳೆಯದಲ್ಲಿ ಪ್ರದರ್ಶಿಸಲು ಆಜ್ಞೆ ಮಾಡಿದನು' ಎಂದು ಮೂಲ ಪರ್ಶಿಯನ್ ಪ್ರತಿಯಲ್ಲಿ ಹೇಳಿದೆ.[೬]

ಫಿರಿಶ್ತಾನನ್ನು ಕ್ರಿ.ಶ.೧೮೨೯ರಲ್ಲಿ ಅನುವಾದಿಸಿದ ಕ್ಯಾಪ್ಟನ್ ಬ್ರಿಗ್ಗನು, ಆನೆ ಮುನ್ನುಗಿದ್ದ ವಿವರಣೆಗಳನ್ನು ಹೇಳಿ.

'ಆ ಗದ್ದಲದಲ್ಲಿ ಮಿತ್ರ ಸೈನ್ಯದ ಒಂದು ಪಡೆ ಅವನ ಮೇಲೆ ಬಿದ್ದಿತ್ತು. ಮತ್ತು ಅವನನ್ನು ಬಂಧಿಸಿದರು..... ರಾಮರಾಜನನ್ನು ಸುಲ್ತಾನನಲ್ಲಿಗೆ ಕರೆದೊಯ್ದರು..... ಸುಲ್ತಾನನು ತನ್ನ ಬಂದಿಯ ತಲೆಯನ್ನು ಕಡಿದು ಹಿಂದು ಸೈನ್ಯಕ್ಕೆ ಕಾಣುವಂತೆ ಉದ್ದವಾದ ಭಲ್ಲೆಗೆ ಚುಚ್ಚಿ ಎತ್ತಿ ಹಿಡಿಯಬೇಕೆಂದು ಆಜ್ಞಾಪಿಸಿದನು. ಆದಿಲಶಹನು ರಾಮರಾಯನ ಮರಣಕ್ಕೆ ಬಹಳ ವ್ಯಥೆಪಟ್ಟನು'. ಎಂದು ಅನುವಾದಿಸಿ ಜೊತೆಗೆ ಒಂದು ಸ್ವಾರಸ್ಯಕರವಾದ ಟಿಪ್ಪಣಿಯನ್ನು ಕೊಡುತ್ತಾನೆ. ಅದು ಹೀಗಿದೆ:

'ಕಲ್ಲಿನಲ್ಲಿ ಕಡೆದ ರಾಮರಾಜನ ತಲೆಯ ಪ್ರತಿಕೃತಿ ಇಂದಿಗೂ ಬಿಜಾಪುರದ ಕೋಟೆಯ ಚರಂಡಿಯೊಂದರ ಬಾಯಿಯನ್ನಾಗಿಸಲಾಗಿದೆ ..... ಇದುವರೆಗೆ ಆ ತಲೆ ತಮ್ಮಲ್ಲಿ ಉಳಿದಿರುವ ಶಿರಚ್ಛೇದಕನ ವಂಶಜರು ಕಳೆದ ಇನ್ನೂರೈವತ್ತು ವರುಷಗಳುದ್ದಕ್ಕೂ ಯುದ್ಧದ ವಾರ್ಷಿಕದಂದು ನಿಜವಾದ ತಲೆಗೆ ಪ್ರತಿವರುಷ ಎಣ್ಣೆ ಮತ್ತು ವರ್ಣದ್ರವ್ಯ ಹಚ್ಚಿ ಅದನ್ನು ಅಹಮದನಗರದ ಶ್ರದ್ಧಾ ಭಕ್ತಿಗಳುಳ್ಳ ಮಹಮ್ಮದೀಯರಿಗೆ ಪ್ರದರ್ಶಿಸಲಾಗುತ್ತಿದೆ ಎಂದು ತಿಳಿಯುತ್ತದೆ.' ಇದನ್ನು ಕ್ರಿ.ಶ. ೧೮೨೯ ರಲ್ಲಿ ಬರೆಯಲಾಗಿದೆ.(೭)

ಇವುಗಳು ರಾಮರಾಯನ ಮರಣದ ಕುರಿತು ಉಲ್ಲೇಖಿಸಿದ ಕೆಲವು ಮೂಲ ದಾಖಲೆಗಳು. ಇವುಗಳನ್ನೆ ಆಧರಿಸಿ ಮುಂದೆ ಬಂದ - ವಿದ್ವಾಂಸರು ಲೇಖನಗಳನ್ನು, ಚರಿತ್ರಗ್ರಂಥಗಳನ್ನೂ ಬರೆದಿದ್ದಾರೆ. ಒಟ್ಟಾರೆ ಇವುಗಳಿಂದ ನಿರ್ಧಾರವಾಗುವ ಒಂದು ಸಂಗತಿಯೆಂದರೆ, ಕನ್ನಡದ ಉಲ್ಲೇಖಗಳಲ್ಲಿ ಹೇಳಿದಂತೆ ರಾಮರಾಯನನ್ನು ಬಿಜಾಪುರದ ಆದಿಲಶಹನು ಕೊಂದಿರುವ ಸಾಧ್ಯತೆ ಕಡಿಮೆ. ಬ್ರಿಗ್ಸನ ಟಿಪ್ಪಣಿಯಲ್ಲಿ ಹೇಳಿದಂತೆ 'ಶಿರಚ್ಛೇದಕನ ವಂಶಜರು' ಬಿಜಾಪುರದಲ್ಲಿ ಮಾಡುತ್ತಿದ್ದ ಪೂಜೆ, ಆದಿಲಶಹನ ಪಾಳೆಯದಲ್ಲೆ ಕೊಂದಿರಬಹುದೆಂಬ ಸಂಶಯ ಬರುವುದಾದರೂ, ರಾಮರಾಯನ ಕಲ್ಲಿನ ತಲೆಯ ಬಗ್ಗೆಯೇ ಮೊದಲು ಪ್ರತ್ಯೇಕವಾದ ಅಭ್ಯಾಸವಾಗಬೇಕು. ಆ ಬಗ್ಗೆ ಚರ್ಚೆ ಇಲ್ಲಿ ಅಪ್ರಸ್ತುತ.

ರಾಮರಾಯನು ಸತ್ತದ್ದು ನಿಜಾಮಶಹನ ಪಾಳೆಯದಲ್ಲಿ ಎಂಬುದನ್ನು ಉಳಿದ ದಾಖಲೆಗಳು ಎತ್ತಿ ತೋರಿಸುತ್ತವೆ. ಆದರೆ ಅವನು ಖಚಿತವಾಗಿ ಎಲ್ಲಿ? ಹೇಗೆ? ಮತ್ತು ಯಾರಿಂದ ಎಂಬುದು ಇನ್ನೂ ಸ್ಪಷ್ಟವಾಗುವುದಿಲ್ಲ. ರಾಮರಾಯನು ಯುದ್ಧರಂಗದಲ್ಲಿಯೇ ಸತ್ತು ಆತನ ಹೆಣವನ್ನು ನಿಜಾಮಶಹನ ಹತ್ತಿರ ತಂದಿರಬಹುದೆ? ಅಲ್ಲಿ ಅವನ ತಲೆ ಕತ್ತರಿಸಿ ಪ್ರದರ್ಶಿಸಿದರೆ? ಅಥವಾ ಜೀವಂತವಾಗಿ ಹಿಡಿದೊಯ್ದು ನಿಜಾಮಶಹನ ಎದುರಿಗೆ ಆತನ ತಲೆ ಕತ್ತರಿಸಿದರೆ? ಅವನನ್ನು ನಿಜಾಮಶಹನು ಖುದ್ದಾಗಿ ಶಿರಚ್ಛೇದನ ಮಾಡಿದನೆ? ಅಥವಾ ಅವನ ಆಜ್ಞೆಯಂತೆ ಬೇರೊಬ್ಬರು ಶಿರಚ್ಛೇದನ ಮಾಡಿದರೆ? ಎಂಬುದು ಸ್ಪಷ್ಟವಾಗುವುದಿಲ್ಲ.

೮. ರಫೀಯುದ್ದೀನ ಶಿರಾಜಿ ಎಂಬವನು ಮೊದಲನೆಯ ಅಲಿ ಆದಿಲಶಹನ ಆಪ್ತ ಸಹಾಯಕನಾಗಿದ್ದನು. ಬಾದಶಹನೊಂದಿಗೆ ಕಾಳಗದಲ್ಲಿ ಭಾಗವಹಿಸಿದ್ದನು. ಅನಂತರ ಎರಡನೆಯ ಇಬ್ರಾಹಿಮ ಆದಿಲಶಹನ ಕಾಲದಲ್ಲಿ ಕೋಶಾಧಿಕಾರಿಯಾಗಿದ್ದನು. ಆತನು *ತದ್‌ಕಿರಾತುಲ್‌ಮುಲ್ಕ* ಎಂಬ ಆದಿಲಶಾಹಿಗಳ ಚರಿತ್ರಗ್ರಂಥವನ್ನು ಬರೆದಿದ್ದಾನೆ. ಪರ್ಶಿಯನ್ ಮೂಲ ಪ್ರತಿ ನೋಡಲು ದೊರೆತಿಲ್ಲ. ಅದರ ಅನುವಾದಗಳೂ ಆದದ್ದು ಕಂಡುಬಂದಿಲ್ಲ.

೯. ಬಿಜಾಪುರದ ಇನ್ನೊಬ್ಬ ಇತಿಹಾಸಕಾರ ಮಹಮ್ಮದ ಇಬ್ರಾಹಿಮ ಜುಬೇರಿಯು ಕ್ರಿ.ಶ.೧೮೨೪ರಲ್ಲಿ 'ಬುಸಾತಿನೆ - ಸಲಾತೀನ್' ಎಂಬ ಗ್ರಂಥವನ್ನು ಬರೆದಿದ್ದಾನೆ. ಅದು ಆದಿಲಶಾಹಿಗಳ ಸಂಪೂರ್ಣ ಇತಿಹಾಸ ಗ್ರಂಥವಾಗಿದೆ. ಪ್ರಾರಂಭದಲ್ಲಿ ತನ್ನ ಗ್ರಂಥಕ್ಕೆ ಆಧಾರಮಾಡಿಕೊಂಡ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾನಲ್ಲದೆ ಆಯಾ ಸಂದರ್ಭಗಳನ್ನು ವಿವರಿಸುವಾಗ ಮತ್ತೆ ಪ್ರತ್ಯೇಕವಾಗಿ ಆಧರಿಸಿದ ಗ್ರಂಥಕಾರನ ಹೆಸರನ್ನೂ ನಮೂದಿಸುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ರಾಮರಾಜನ ಮರಣ ಹಾಗು ಅನಂತರದ ವಿಜಯನಗರದ ಲೂಟಿಯ ಬಗ್ಗೆ ಪೂರ್ವೋಕ್ತ ರಫಿಯುದ್ದೀನ, ಶಿರಾಜಿಯನ್ನೆ ಆಧರಿಸಿದ್ದಾಗಿ ಉಲ್ಲೇಖಿಸಿ ಹೀಗೆ ಹೇಳುತ್ತಾನೆ:(೮)

'ಮದಗಜದ ಹಲ್ಲೆಯಿಂದ ಅಲ್ಲಿದ್ದ ಎಲ್ಲರೂ ಒಬ್ಬರೊಬ್ಬರ ಮೇಲೆ ಬಿದ್ದು ತಮ್ಮ ಒಡೆಯ ರಾಮರಾಜನ ಆಶೆಯನ್ನು ಬಿಟ್ಟು ಪ್ರತಿಯೊಬ್ಬರೂ ಓಡಿಹೋಗಹತ್ತಿದರು. ರಾಮರಾಜನು ಜನರ ಗದ್ದಲದಲ್ಲಿ ಸಿಕ್ಕು ಒದ್ದಾಡಿ ಒದೆ ತಿಂದು ಬೀಳುವ ಮನುಷ್ಯನಂತೆ ಗಾಯಾಳುವಾಗಿ ಒಂದೆಡೆ ಬಿದ್ದಿದ್ದನು. ರಾಮರಾಜನ ಖಾಸಾ ಸೇವಕರಲ್ಲಿಯ ಯಾರೊಬ್ಬರೂ ಆತನ ಹತ್ತಿರ ಉಳಿದಿರಲಿಲ್ಲ. ಆದರೆ ದಲಪತರಾವ್ ಎಂಬ ಬ್ರಾಹ್ಮಣನೊಬ್ಬನು ಮಾತ್ರ.... ಇದ್ದು ಧೈರ್ಯವನ್ನು ಹೇಳುತ್ತಿದ್ದ. ಆ ಸಮಯದಲ್ಲಿ ರೂಮೀಖಾನನು ಆನೆಯನ್ನು ನಡಿಸುತ್ತ ನೇರವಾಗಿ ರಾಮರಾಜನ ಎದುರಿಗೆಯೇ ಬಂದನು. ಆನೆಯ ಮೇಲಿನ ಮನುಷ್ಯನು ರಾಮರಾಜನ ಮೇಲೆ ಬಂದಿದ್ದಾನೆಂದು, ಆತನನ್ನು ಕೊಲ್ಲುತ್ತಾನೆಂದು ತಿಳಿದು ದಲಪತರಾವ ಬ್ರಾಹ್ಮಣನು ಧೈರ್ಯ ಹೇಳುತ್ತಿದ್ದವನು ಆತನನ್ನು ಉಳಿಸಲು ಒಮ್ಮೆಲೆ ರಾಮರಾಜನ ಮೇಲೆ ಬಿದ್ದುಬಿಟ್ಟನು. ಮತ್ತು ದೊಡ್ಡದನಿಯಿಂದ ರಾಜನ ಹೆಸರನ್ನು ತೆಗೆದುಕೊಂಡು ಕೂಗಿ - ಕೂಗಿ ಅಳಹತ್ತಿದನು... ರಾಮರಾಜ ಎಂಬ ಹೆಸರನ್ನು ಕೇಳುತ್ತಲೇ ರೂಮೀಖಾನನು ತನ್ನ ಆನೆಗೆ ಸನ್ನೆಮಾಡಿ, ಅದರ ಸೊಂಡೆಯಿಂದ ರಾಮರಾಜನನ್ನು ಎತ್ತಿ ಬೆನ್ನಮೇಲೆ ತೆಗೆದುಕೊಂಡನು. ಮನೋರಥದ ಮುಕ್ತಾಫಲವು ಕೈಗೆ ದೊರೆತ ಸಂತೋಷದಲ್ಲಿ ತಕ್ಷಣ ಆನೆಯನ್ನು ಹಿಂತಿರುಗಿಸಿದನು. ಹಾಗು ವಾಯುವಿನಂತೆ, ವಿದ್ಯುತ್ತಿನಂತೆ ಆನೆಯನ್ನು ಓಡಿಸುತ್ತ ತನ್ನ ಸೈನ್ಯದಲ್ಲಿ ಬಂದನು. ರಾಮರಾಜನನ್ನು ಜೀವಂತವಾಗಿ ತಂದು ನಿಜಾಮಶಹನ ವಶಕ್ಕೆ ಕೊಟ್ಟನು. ಎಂದೂ ದೊರಕದ ವಸ್ತುವಿನ ಅಲಭ್ಯ ಲಾಭದಿಂದ ನಿಜಾಮಶಹನು ಅತ್ಯಂತ ಸಂತೋಷದಿಂದ ರಾಮರಾಜನನ್ನು ಹತ್ತಿರ ಕರೆದುಕೊಂಡು ಕೂಡಿಸಿದನು. ಅವನನ್ನು ಮಾತನಾಡಿಸುತ್ತ ನಿಜಾಮಶಹನು 'ರಾಮರಾಜ ನಿಮ್ಮ ಅವಸ್ಥೆ ಏನಾಗಿದೆ? ಹೇಗಿದ್ದೀರಿ?' ಎಂದು ಕೇಳಿದನು. ಅದನ್ನು ಕೇಳಿದ ರಾಮರಾಜನು ಏನನ್ನೂ ಹೇಳದೆ, ತನ್ನ ಕೈಯಿಂದ ಹಣೆಯಮೇಲೆ ಬಡಿದುಕೊಂಡನು. ಹಣೆಯನ್ನು ಬಡಿದುಕೊಳ್ಳುವುದೆಂದರೆ ತನ್ನ ಹಣೆಯಲ್ಲಿ ಏನು ಬರೆದಿದೆಯೋ ಅದರ ಫಲವನ್ನು ಪಡೆದಿರುವೆ ಎಂದು ಅರ್ಥವಾಗುತ್ತದೆ. ಹೀಗೆ ನಿಜಾಮಶಹ ಮತ್ತು ರಾಮರಾಜರ ಮಧ್ಯೆ ಮಾತುಕತೆಗಳು ನಡೆದಾಗ ಮಧ್ಯ

ಪ್ರವೇಶಿಸಿದ **ಹಕೀಯ ಕಾಸದು ಬೇಗ** ಎಂಬ ನಿಜಾಮಶಹನ ವಿಶ್ವಾಸಿಕ ಸೇವಕನು ಗಾಬರಿಯಿಂದ.... 'ಇದು ಮಾತುಕತೆ ಯಾಡುವ ಸಮಯವಲ್ಲ. ತಕ್ಷಣ ರಾಮರಾಜನನ್ನು ಶೂಲಕ್ಕೇರಿಸಿ ಕೊಲ್ಲಿರಿ. ಆತನ ಭಯದಿಂದ ಮುಕ್ತರಾಗಿರಿ. ಇಲ್ಲದಿದ್ದಲ್ಲಿ ಆದಿಲಶಹನು ರಾಮರಾಜನೊಂದಿಗೆ ಮಗನ ಸಂಬಂಧವನ್ನು ಇಟ್ಟುಕೊಂಡಿದ್ದಾನೆ..... ಬಂದನೆಂದರೆ, ಈಗಲೇ ರಾಮರಾಜನನ್ನು ನಿಮ್ಮ ಕೈಯಿಂದ ಕಸಿದುಕೊಳ್ಳುತ್ತಾನೆ..... ಅನಂತರ ಏನಾಗುತ್ತದೆ ಎಂಬುದು ದೇವರಿಗೇ ಗೊತ್ತು...' ಎಂದು ಹೇಳಿದಾಗ ನಿಜಾಮಶಹನಿಗೆ ಹಕೀಮನ ಮಾತಿನ ಅರ್ಥವಾಯಿತು. ಆಗ ರಾಮರಾಜನ ತಲೆಯನ್ನು ಕಡಿಯಲು ಆಜ್ಞೆ ಮಾಡಿದನು. ಅನಂತರ ಶೂಲಕ್ಕೆ ಏರಿಸಿ ವಿಜಯನಗರದ ಸೈನ್ಯದ ಮಧ್ಯ ನಿಲ್ಲಿಸಿರಿ ಎಂದು ಆದೇಶ ಮಾಡಿದನು".

ಕನ್ನಡದಲ್ಲಿ ದೊರೆಯುವ ಎರಡು ಆಕರಗಳೂ ಭಿನ್ನವಾಗಿವೆ. ಬಖೈರಿಯಲ್ಲಿ ಆದಿಲಶಹನು ರಾಮರಾಯನನ್ನು ಕೊಂದನೆಂದು ಸ್ಪಷ್ಟವಾಗಿ ಹೇಳಿದ್ದರೆ, ಕೆಳದಿನೃಪವಿಜಯದಲ್ಲಿ 'ಆದಿಲಷಹನ ಸಂಚಿನ ಮೇಲೆ ರಾಮರಾಯನನ್ನು ಹಿಡಿದು ಶಿರಚ್ಛೇದನ ಮಾಡಿದರು' ಎಂದು ಹೇಳಿದೆ. ಲಿಂಗಣ್ಣ ಕವಿಯ ವಿಷಯ ಬೇರೆಯಾದ್ದರಿಂದ... ಶಿರಚ್ಛೇದನ ಮಾಡಿದ್ದನ್ನು ಮಾತ್ರ ಹೇಳುತ್ತ 'ಅದನ್ನು ಕಾಶಿಗೆ ಕಳಿಸಿದರು' ಎಂದು ಧಾರ್ಮಿಕ ಸಮಾಧಾನ ಹೇಳಿದ್ದಾನೆ.

ಉಳಿದ ಎಲ್ಲ ಆಕರಗಳೂ ನಿಜಾಮಶಹನತ್ತಲೇ ಬೆರಳು ತೋರಿಸುತ್ತವೆ. ಆಫತಾಬನ ಕಾವ್ಯ 'ತಾರೀಫ...ಇ...ಹುಸೇನ...' ಹಸ್ತಪ್ರತಿಯೊಂದಿಗೆ ಸಮಕಾಲೀನ ಹನ್ನೊಂದು ಬಣ್ಣದ ಚಿತ್ರಗಳಿದ್ದದ್ದು ವಿಶೇಷವಾಗಿದೆ. ಅವುಗಳಲ್ಲಿಯ ಒಂದು ಚಿತ್ರದಲ್ಲಿ ನಿಜಾಮಶಹನು - ಬೆರಳೆತ್ತಿ ವಧೆ ಮಾಡಲು ಸೂಚಿಸಿದ್ದು, ಸೈನಿಕನೊಬ್ಬನು ರಾಮರಾಯನನ್ನು ಹಿಡಿದು ಕೊರಳು ಕತ್ತರಿಸುವ ಚಿತ್ರವಿದೆ. ಅದನ್ನೆ ಆಫತಾಬನು ಒಂದು ದ್ವಿಪದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ (ಸಂಖ್ಯೆ-೩೧೬). ರಾಮರಾಯನ ರುಂಡದ ಪ್ರದರ್ಶನ ಮಾಡಿದ ದಾಖಲೆಯನ್ನು ಆತ ಮಾಡುವುದಿಲ್ಲ. ಬಹುಶಃ ಅದನ್ನೆ ಅನುಸರಿಸಿದ ಅಲಿತಾಬಾತಾಬಾನು ಆಫತಾಬ ಹೇಳಿದ್ದನ್ನೆ ಹೇಳಿ ಕೊನೆಗೆ 'ಅದನ್ನು ಯುದ್ಧ ಭೂಮಿಯಲ್ಲಿ ಪ್ರದರ್ಶಿಸಲಾಯಿತು' ಎನ್ನುತ್ತಾನೆ. ಜೊತೆಗೆ ಇನ್ನೂ ಒಂದು ಮಾತನ್ನು ಹೇಳುತ್ತಾನೆ- 'ಆದಿಲಶಹನು ಬರುವ ಮೊದಲು ಆತನ ತಲೆಯನ್ನು ಬೇರ್ಪಡಿಸಲು ನಿಜಾಮಶಹನು ಆಜ್ಞೆ ಮಾಡಿದನು.'

ಫಿರಿಶ್ತಾನ ವಿವರಣೆ ಇದನ್ನೆ ಹೇಳುತ್ತಿದ್ದರೂ, ರೂಮೀಖಾನನ ಆನೆಗಳಲ್ಲಿಯ ಒಂದು ಆನೆ 'ಗುಲಾಮ ಆಲಿ' ಎಂಬುದಾಗಿ ಅದರ ಹೆಸರನ್ನೂ ಖಚಿತವಾಗಿ ಹೇಳುತ್ತಾನೆ. ಜೊತೆಗೆ ಮಾವುತನಿಗೆ ಕೆಳಗೆ ಬಿದ್ದ ರತ್ನಖಚಿತ ಸಿಂಹಾಸನದ ಆಶೆ, ರಾಮರಾಜನ ಹೆಸರು ಕೇಳಿದ ತಕ್ಷಣ ಜಾಗ್ರತನಾಗಿ ಎಲ್ಲ ಬಿಟ್ಟು ರಾಮರಾಜನನ್ನು ತಂದು ರೂಮೀಖಾನನಿಗೆ ಒಪ್ಪಿಸಿದ್ದು, ಅನಂತರ ರೂಮೀಖಾನನು ಅವನೊಂದಿಗೆ ನಿಜಾಮಶಹನ ಹತ್ತಿರ ಬಂದ... ಇತ್ಯಾದಿಯಾಗಿ ಅಧಿಕ ವಿವರಗಳನ್ನು ಕೊಡುತ್ತಾನೆ.

ಇದೇ ಮಾದರಿಯಲ್ಲಿ ಬರುವ ಇಬ್ರಾಹಿಮ ಜುಬೇರಿಯ ವಿವರಣೆಗಳಲ್ಲಿ 'ಗುಲಾಮ ಅಲಿ' ಆನೆಯ ಪ್ರಸ್ತಾಪವಿಲ್ಲ. ಆದರೆ ಒಂದು ಆನೆ ಶತ್ರುಗಳ ಪಾಳೆಯವನ್ನು ಹೊಕ್ಕು ಗದ್ದಲ ಮಾಡಿದಾಗ ಜನರು ದಿಕ್ಕಾಪಾಲಾಗಿ ಓಡಿಹೋದರು ಎಂದು ಸ್ಪಷ್ಟವಾಗಿ ಹೇಳುವುದಲ್ಲದೆ; ಆ ಗದ್ದಲದಲ್ಲಿ ಸಿಕ್ಕ ರಾಮರಾಯನನ್ನು ದಲಪತ ರಾವ್ ಎಂಬ ಬ್ರಾಹ್ಮಣನು ಸಾಂತ್ವನ ಹೇಳುತ್ತಿದ್ದನೆಂಬುದು; ಅನಂತರ ಬೆನ್ನಹಿಂದೆಯೇ ಬಂದ ರೂಮೀಖಾನನಿಗೆ ಆತ ರಾಮರಾಜನೆಂಬುದೂ ಗೊತ್ತಿಲ್ಲ; ರಾಜನ ರಕ್ಷಣೆಗಾಗಿ ಆತನ ಹೆಸರಿನೊಂದಿಗೆ ದಲಪತರಾಯನು ಕೂಗಿದ್ದು ಅವನ ಬಂಧನಕ್ಕೆ ಕಾರಣವಾಯಿತು. ನಿಜಾಮನ ಹತ್ತಿರ ಬಂದಾಗಲೂ ತಕ್ಷಣ ಕೊಲ್ಲುವ ವಿಚಾರವಿರಲಿಲ್ಲ. ಮಾತುಕತೆಗಳ ಮಧ್ಯ ಕಾಸಮ ಬೇಗ ಬಂದು ನೆನಪಿಸಿದಾಗ ನಿಜಾಮಶಹನು ವಧಿಸಲು ಆದೇಶ ಮಾಡುತ್ತಾನೆ' ಎಂಬ ವಿವರಗಳು ವಿಶೇಷವಾಗಿವೆ. ಅವುಗಳು ಸತ್ಯಕ್ಕೆ ಹತ್ತಿರವೂ ಆಗಿವೆ.

ಆದ್ದರಿಂದ, ರಾಮರಾಯನು ಆಕಸ್ಮಿಕವಾಗಿ ನಿಜಾಮಶಹನ ಸೈನಿಕರ ಕೈಗೆ ಸಿಕ್ಕು - ಸುರಕ್ಷಿತವಾಗಿ ನಿಜಾಮಶಹನ ಹತ್ತಿರ ಬಂದನು. ಅಲ್ಲಿ ಬಾದಶಹನ ಆದೇಶದಿಂದಾಗಿ ಅವನನ್ನು ವಧಿಸಲಾಯಿತು, ಎಂಬುದು ಸದ್ಯ ದೊರೆಯುವ ದಾಖಲೆಗಳಿಂದ ಖಚಿತವಾಗಿ - ಹೇಳಬಹುದು

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. **ಚಾರಿತ್ರಿಕ ದಾಖಲೆಗಳು**: (ಸಂ.) ತಿ.ತಾ.ಶರ್ಮ - ಪುಟ ೧ರಿಂದ ೧೯. (೧೯೭೧)

*೨. **ಕೆಳದಿ ನೃಪ ವಿಜಯ**: (ಸಂ.) ಕೆಳದಿ ಗುಂಡಾಜೋಯಿಸ - ಪುಟ ೧೦೪-೬ (೧೯೭೭)

*೩. ಆಫತಾಬ - **ತಾರೀಫ-ಇ-ಹುಸೇನಶಾಹ ಬಾದಶಾಹ ದಖನ**, ಪುಟ ೨೦೧. ಜಿ.ಪಿ. ಕುಲಕರ್ಣಿ ಮತ್ತು ಮಾಡೆ (ಸಂ) - ೧೯೭೭.

*೪. ಅದೇ - ಪುಟ ೨೦೨.

*೫. ರಾಬರ್ಟ್ ಸಿವೆಲ್ಲ : **ಮರೆತುಹೋದ ಮಹಾಸಾಮ್ರಾಜ್ಯ** ವಿಜಯನಗರ, ಪುಟ ೨೨೧ - ೨೨ (ಸದಾನಂದ ಕನವಳ್ಳಿ ಅನುವಾದ) ೧೯೯೨.

*೬. ಫಿರಿಶ್ತಾ : **ತಾರೀಖ-ಇ-ಫಿರಿಶ್ತಾ** (ಮೂಲಸಂಪುಟ- ೨) ಪುಟ. ೨೫೦ - ೫೨, ಪರ್ಶಿಯನ್ ಆವೃತ್ತಿ ೧೯೩೬.

*೭. ರಾಬರ್ಟ್ ಸಿವೆಲ್ಲ - ಪುಟ ೨೨೧.

*೮. ಜುಬೇರಿ : **ಬಸಾತಿನ - ಸಲಾತಿನ**, ಪುಟ ೧೦೦-೪ (ಮರಾಠಿ ಅನುವಾದ - ಪಾರಸನೀಸ) ೧೯೭೧.

ಡಾ|| ಕೆಳದಿ ವೆಂಕಟೇಶ್ ಜೋಯಿಸ್*

ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ಹರಪನಹಳ್ಳಿ ಪಾಳೇಗಾರರು

ಲಿಂಗಣ್ಣ ಕವಿಯು ಕೆಳದಿ ನೃಪವಿಜಯದ ದಶಮಾಶ್ವಾಸದಲ್ಲಿ ಕ್ರಿ.ಶ.೧೭೧೪ - ೧೭೩೯ರಲ್ಲಿ ಕೆಳದಿಯನ್ನಾಳಿದ ಇಮ್ಮಡಿ ಸೋಮಶೇಖರ ನಾಯಕನ ಕಾಲದಲ್ಲಿ ಹರಪನಹಳ್ಳಿಯ ಪಾಳೆಯಗಾರನ ಸಂಗತಿಯಿಂದ ಆರಂಭಗೊಂಡು ಇಮ್ಮಡಿ ಬಸಪ್ಪನಾಯಕನ ಕ್ರಿ.ಶ.೧೭೩೯ - ೧೭೫೪ರ ಕಾಲದವರೆಗೆ ಹಾಸುಹೊಕ್ಕಾಗಿ ಪ್ರಸ್ತಾಪಿಸಿದ್ದಾನೆ:

ಕಂ|| ಧುರಧೀರಂ ಚಿಂತನ ಕ
ಲ್ಲರೆಯಂ ಬಿಳಿಜೋಡಿಬರಮನಾಯಕನೆಸೆವಾ
ಹರಪುರದರಸನ ಸುಪರಿ
ಸ್ತರಣಗಳಂ ಕೊಂಡು ದಾಳಿಯಿಡಲತಿಚಲದಿಂ.

ವ|| ಪಿಂತೆ ಕ್ರಮದಿಂ ಚಿಂತನಕಲ್ಲುದುರ್ಗದ ಸಂಸ್ಥಾನವಂ ಕಸ್ತೂರಿ ತಿಮ್ಮಪ್ಪನಾಯಕ ಸರ್ಜಪ್ಪನಾಯಕ ಹಿರಿಯ ಚಿಕ್ಕಣ್ಣನಾಯಕ ಹಿರಿಯ ಮೆದಕೆರೆನಾಯಕ ಮೆದಕೆರೆನಾಯಕ ಚಿಕ್ಕಣ್ಣನಾಯಕ ಮೆದಕೆರೆನಾಯಕ ರಂಗಪ್ಪನಾಯಕ ರಘುವಪ್ಪ ನಾಯಕ ರಂಗಪ್ಪನಾಯಕರೆಂಬವರಾಳ್ದರ್ ಆ ತರುವಾಯ ಮಾದುರ್ಗವನಾಳುತಿರ್ದ ಬಿಳಿಚೋಡಿ ಬರಮನಾಯಕನತ್ಯಂತ ಗರ್ವೋದ್ರೇಕದಿನಾದಿಯೊಳುಚ್ಚಂಗಿಯೆಂಬ ಸ್ಥಳದೊಳಿರ್ದ ನಂತರಂ **ಹರಪುರ** (ಪ್ರತಿನಾಮ ಹರಪನಹಳ್ಳಿ) ಯೆಂಬ ಕೋಂಟೆಯಂ ಬಲಿಸಿ ಆ ಕೋಂಟೆಯೊಳಿರ್ದು ರಾಜ್ಯಂಗೆಯ್ದ ದಾದೆನಾಯಕ ರಂಗರಾಜಯ್ಯ ಹಿರಿಯಬಸಂತರಾಯ ಇಮ್ಮಡಿ ಬಸವಪ್ಪನಾಯಕ ಕೊಟ್ಟೂರಪ್ಪ ನಾಯಕ ಹಿರಿಯ ಬಸವಪ್ಪನಾಯಕ ಕೊಟ್ಟೂರಪ್ಪನಾಯಕರೆಂಬಿವರಾಳ್ದನಂತರಂ ಬಸವಪ್ಪನಾಯಕನಾಳ್ದು ಬರುತ್ತಿರಲ್ (ಮುಂಪೇಳ್ದ ಚಿಂತನ ಕಲ್ಲು ಬರಮಣ್ಣನಾಯಕಂ) ಆ ಹರಪನಹಳ್ಳಿ ಬಸವಪ್ಪನಾಯಕನ ಪರಿಸ್ತರಣಗಳಂ ಕೊಂಡು ರಾಜ್ಯಂಗಳನಾಕ್ರಮಿಸುತ್ತುಂ ಮಿಕ್ಕು ಮೀರಿ ಕೈಗೆಯುತ್ತುಂ ಬರಲಾ ಬರಮನಾಯಕನದಟನಾಂಪೊಡಶಕ್ಯಮಾಗಿ ಹರಪನಹಳ್ಳಿಯ ಬಾಗಳಿ ಬಸವಪ್ಪನಾಯಕಂ ದೈನ್ಯೋಕ್ತಿಯಿಂ ರಾಯಸಮಂ ಬರೆದು ಕಳುಪಿ ತಮ್ಮ ಸಂಸ್ಥಾನಮನುದ್ಧರಿಸವೇಳ್ಕೆಂದು ಪೇಳಿಸಲಂತಾಗಲೆಂದು ಗುರುವಪ್ಪ ಮಂತ್ರಿಯೊಡನಸಂಖ್ಯಾತಮಾದ ಸೈನ್ಯಮಂ ತೆರಳ್ಚಿ ಕಳುಹಿ ಯುದ್ದರಂಗದೊಳಾ ಬರಮನಾಯಕನ ಪರಾಕ್ರಮಾತಿಶಯಮಂ ಮುರಿದಾ ಪರಿಸ್ತರಣಗಳಂ ಕೊಂಡು ಬಸವಪ್ಪನಾಯಕಂಗಿತ್ತು ಪರಮ ಪ್ರಖ್ಯಾತಿಯಂ ಪಡೆದಂತಿರುತ್ತುಮಿರಲ್....(೧)

ಚಿಂತನಕಲ್ಲಿನ ಬಿಳಿಜೋಡಿ ಬರಮನಾಯಕನು ಹರಪುರ ಅರಸನ ಕೋಟೆಯನ್ನು ಹಿಡಿದು ಛಲದಿಂದ ಯುದ್ಧಮಾಡಿದನು. ಹಿಂದೆ ಚಿತ್ರದುರ್ಗವನ್ನು ಕಸ್ತೂರಿ ತಿಮ್ಮಪ್ಪನಾಯಕ. ಸರ್ಜಪ್ಪ ನಾಯಕ, ಹಿರಿಯಚಿಕ್ಕಣ್ಣನಾಯಕ ಹಿರಿಯ ಮೆದಕೆರೆ ನಾಯಕ, ಮದಕೆರೆನಾಯಕ ಚಿಕ್ಕಣ್ಣನಾಯಕ, ಮದಕೆರೆನಾಯಕ, ರಂಗಪ್ಪನಾಯಕ, ರಘುವಪ್ಪ ನಾಯಕ ಮತ್ತು ರಂಗಪ್ಪನಾಯಕ ಎಂಬುವವರು ಆಳಿದರು. ಆ ಬಳಿಕ ದುರ್ಗವನ್ನು ಬಿಳಿಜೋಡಿ ಬರಮನಾಯಕನು ಗರ್ವದಿಂದ ಆಳಿದನು. ಹರಪನ ಹಳ್ಳಿಯಲ್ಲಿ ದಾದೆನಾಯಕ, ರಂಗರಾಜಯ್ಯ ಹಿರಿಯ ಬಸಂತರಾಯ, ಇಮ್ಮಡಿ ಬಸವಪ್ಪನಾಯಕ, ಕೊಟ್ಟೂರಪ್ಪನಾಯಕ ಎಂಬುವರು ಆಳುತ್ತಿದ್ದರು. ಅನಂತರ ಬಸವಪ್ಪನಾಯಕ ಕೊಟ್ಟೂರಪ್ಪನಾಯಕ ಎಂಬುವರು ಆಳುತ್ತಿದ್ದರು. ಅನಂತರ ಬಸವಪ್ಪನಾಯಕನು ಅಲ್ಲಿಗೆ ದೊರೆಯಾಗಿದ್ದನು. ಮುಂಚೆ ಹೇಳಿದ ಬರಮಣ್ಣನಾಯಕನು ಹರಪನಹಳ್ಳಿಯ ಬಸವಪ್ಪನಾಯಕನ ರಾಜ್ಯ, ಕೋಟೆ ಆಕ್ರಮಿಸಿ ಗರ್ವದಿಂದ ವರ್ತಿಸಿದನು. ಇವನ ತೊಂದರೆ ಸಹಿಸದ ಹರಪನ ಹಳ್ಳಿಯ ಬಾಗಳಿ ಬಸವಪ್ಪನಾಯಕನು ದೈನ್ಯದಿಂದ ಸಹಾಯವನ್ನು ಪ್ರಾರ್ಥಿಸಿದ ಮೇರೆಗೆ ಕೆಳದಿ ಸೋಮಶೇಖರ ನಾಯಕನು ಹರಪನಹಳ್ಳಿಯ ಸಂಸ್ಥಾನವನ್ನು ಉದ್ಧಾರ ಮಾಡಲು ಗುರುವಪ್ಪ

* ಕೆಳದಿ ಮ್ಯೂಸಿಯಂ, ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

ಮಂತ್ರಿಯೊಡನೆ ಸೈನ್ಯವನ್ನು ಕಳುಹಿಸಿ ಬರಮನಾಯಕನ ಸೊಕ್ಕು ಮುರಿದನು. ಕೋಟೆಯನ್ನು ವಶಪಡಿಸಿಕೊಂಡು ಬಸಪ್ಪನಾಯಕನಿಗೆ ಕೊಟ್ಟು ಖ್ಯಾತಿ ಪಡೆದನು.(೨)

ಹರಪನಹಳ್ಳಿ ಪಾಳೆಯಗಾರರಲ್ಲಿ ಬಾಗಳಿ ಬಸಪ್ಪನಾಯಕ (೧೬೩೭ - ೧೬೩೮) ಮುದಿಬಸಪ್ಪನಾಯಕ (ಗೋಟೆಪ್ಪ ನಾಯಕ) (೧೬೪೩ - ೧೬೬೩) ೨ನೇ (ದತ್ತುಪುತ್ರ)(೩) ಬಸಪ್ಪನಾಯಕ (೧೬೯೦ - ೧೭೦೯) ಕಂಡು ಬರುತ್ತಾರೆ. ಹಾಗೆಯೇ ಕೆಳದಿ ನೃಪವಿಜಯದಲ್ಲಿ ಪ್ರಸ್ತಾಪಿಸಿರುವ ಈ ವಿಷಯವು ಕ್ರಿ.ಶ. ೧೭೧೪ - ೧೭೩೯ರಲ್ಲಿ ಆಡಳಿತ ನಡೆಸಿದ ಇಮ್ಮಡಿ ಸೋಮಶೇಖರ ನಾಯಕನ ಕಾಲಕ್ಕೆ ಸರಿದೂಗುತ್ತದೆ.

ಕಂ॥ ಮಗಗಂ ಪೆಸರಿಟ್ಟುದೆ ಪದ
ಯುಗದರ್ಶನಗೈದ ಹರಪುರಾಧೀಶ್ವರಗಂ
ದಗಣಿತ ಪೊನ್ನುಡುಗೊರೆ ತೊಡ
ವುಗಳನವನಿತ್ತು ಪೆರ್ಮೆಯಿಂ ಮನ್ನಿಸಿದಂ.

ವ॥ ಇಂತು ಮನ್ನಿಸಿದನಂತರಮಾ ಹರಪುರ ಸಂಸ್ಥಾನ ಕ್ಕೊದಗಿದ ಹೇರಳ ಋಣಭಾರಮಂ ತೀರ್ಚಿ ಕಳುಪಲಾ ವಾರ್ತೆಯಂ ಕೇಳ್ದು ಸೇನಾಸಮೂಹಂವೆರಸೈತಂದ ಗುತ್ತಳದ ಹನುಮಂತನಾಯಕನಂ ಗಗನಮಹಲ ಚಾವಡಿಯೊಳ್ ಬೇಟಿಗೊಂಡು ಸನ್ಮಾಂಬಡಿಸಿ(೪)......

ಮಗನಿಗೆ ಹೆಸರಿಟ್ಟು ಆ ಸಂದರ್ಭದಲ್ಲಿ ಚರಣದರ್ಶನಕ್ಕಾಗಿ ಬಂದ ಹರಪನಹಳ್ಳಿಯ ರಾಜನಿಗೆ ಲೆಕ್ಕವಿಲ್ಲದಷ್ಟು ಚಿನ್ನದ ಉಡುಗೊರೆ ಹಾಗೂ ಆಭರಣಗಳನ್ನು ಕೊಟ್ಟು ಅತ್ಯಧಿಕವಾಗಿ ಮನ್ನಿಸಿದನು. ಈ ರೀತಿ ಮನ್ನಿಸಿದ ನಂತರ ಹರಪನಹಳ್ಳಿಯ ಸಂಸ್ಥಾನಕ್ಕೆ ಒದಗಿದ ಹೇರಳ ಸಾಲವನ್ನು ತೀರಿಸಿದನು. ಈ ಸಮಾಚಾರನನ್ನು ಕೇಳಿದ ಗುತ್ತಳದ ಹನುಮಂತನಾಯಕನು ಸೇನಾ ಸಮೂಹಗಳೊಡನೆ ಬರಲು ಅವನನ್ನು ಕೆಳದಿ ಅರಸನು 'ಗಗನ ಮಹಲ್ ಚಾವಡಿ' ಎಂಬಲ್ಲಿ ಭೇಟಿ ಮಾಡಿ ಸನ್ಮಾನಿಸಿ ಕಳುಹಿಸಿಕೊಟ್ಟನು. ಈ ಘಟನೆಯು ಕೆಳದಿ ರಾಜ್ಯವನ್ನಾಳಿದ ಎರಡನೆ ಸೋಮಶೇಖರನ ಕಾಲದಲ್ಲಿ ನಡೆದದ್ದಾಗಿದೆ.

ಇಮ್ಮಡಿ ಬಸಪ್ಪನಾಯಕ

ಮ॥ ಮದಮುಖದುಷ್ಕಿರಾತನಿಕರಾಧಿಪ ಚಿಂತನಕಲ್ಲಧೀಶನಾ
ಮೆದಕೆರೆನಾಯಕಂ ಹರಪುರಾಧಿಪನಂ ಮುರಿದೊತ್ತಿ ನಿಲ್ವೊಡಾ
ಸ್ಪದಗಳಾನೀಯದಂತವನ ರಾಜ್ಯವನಾಕ್ರಮಿಸುತ್ತುಮಾಜಿರಂ
ಗ ದೊಳಿದಿರಾಂತುಪದ್ರವಗಳಂ ರಚಿಸುತ್ತಿರೆ ಶೌರ್ಯದೇಳ್ಗೆಯಿಂ

ಕಂ॥ ಮೆದಕೆರೆನಾಯಕನುರವಣೆ
ಗಿದಿರಾಂಪೊಡಶಕ್ಯಮಾಗಿ ಹರಪುರದರಸಂ
ಸದಯುಬಸವುರ್ವಿಪಂಗೀ
ಹದನಂ ಬಿನ್ನೈಸಿ ಕಳುಪಿ ಮೆರೆವುಗಲಾಗಲ್(೫)

ವ॥ ಇಂತು ಹರಪುರಾಧಿಪನೆನಿಪ ಬಸಂತರಾಯಂ ಮೆದೆಕೆರೆ ನಾಯಕನದಟನಾಂಪೊಡಶಕ್ಯಮಾಗಿ ನಿಮ್ಮ ಪುತ್ರ ವರ್ಗದ ಮನೆತನದವರೆನಿಸಿ ವರ್ತಿಸುತ್ತಿರ್ಪೆಮ್ಮ ಸಂಸ್ಥಾನ ಮನುದ್ಧರಿಸವೇಳ್ಕೆಂದು ಲಿಖಿತಮುಖದಿಂ ಬಿನ್ನವಿಸಿ ಕಳುಪಲ್ ಕೇಳ್ದು ಸಿದ್ದೋಜಿಯೊಡನನುಸಂಧಾನಮಂ ರಚಿಸಿ ತತ್ಸೈನ್ಯಮಂ ಬರಿಸಿ ಸುಬೇದಾರ ಲಿಂಗಪ್ಪನೊಡನೆ ಅಸಂಖ್ಯಾತ ಸೇನಾಸ ಮೂಹಮಂ ತೆರಳ್ಚಿಸಿ ಕಳುಪಿ ತನ್ಮೆದೆಕೆರೆನಾಯಕನ ರಾಜ್ಯಮಂ ನಿಪಾತನಂಗೆಯ್ಸಿದನಂತುಮಲ್ಲದೆಯುಂ....

ಮೆದೆಕೆರೆನಾಯಕನ ಉಪದ್ರವವನ್ನು ತಡೆದುಕೊಳ್ಳಲಾರದೆ ಹರಪುರದ ಅರಸನು ದಯಾವಂತನಾದ ಕೆಳದಿ ಬಸವಪ್ಪ ನಾಯಕನಿಗೆ ಈ ವಿಚಾರವನ್ನು ಬಿನ್ನವಿಸಿ ಪತ್ರ ಕಳುಹಿಸಿ ಶರಣಾದನು. ಹರಪನಹಳ್ಳಿಯ ಅಧಿಪತಿ ವಸಂತರಾಯನು ಮೆದೆಕೆರೆನಾಯಕನ ಉಪಟಳ ಸಹಿಸಲು ಅಸಮರ್ಥನಾದುದ ರಿಂದ ನಿಮ್ಮ ಪುತ್ರವರ್ಗದ ಮನೆತನವಾಗಿರುವ ನಮ್ಮ ಸಂಸ್ಥಾನವನ್ನು ರಕ್ಷಿಸಬೇಕು, ಎಂದು ಹೇಳಿಕೊಂಡ ಮೇರೆಗೆ ಸಿದ್ದೋಜಿಯೊಡನೆ ಸಮಾಲೋಚಿಸಿ ಸುಬೇದಾರ ಲಿಂಗಪ್ಪನೊಡನೆ ಸೇನೆಯನ್ನು ಕಳುಹಿಸಿ ಮೆದೆಕೆರೆನಾಯಕನ ರಾಜ್ಯವನ್ನು ಧ್ವಂಸಮಾಡಿದನು.

ಕಂ॥ ಹರಪುರದರಸನುಮಂ ಭಾ
ಸುರತರ ಸವಣೂರ ಪತಿ ನವಾಬನ ಫೌಜಂ
ಬರಿಸಿ ಬಹುಸೈನ್ಯಸಹಿತಂ
ತೆರಳಿಸಿ ವರ ಸಬ್ಬುನೀಸ ಕೃಷ್ಣಪ್ಪನುಮಂ

ವ॥ ಇಂತು ಮೆದಕೆರೆನಾಯಕನಂ ಜಯಿಸಿದ ಮಹೋತ್ಸವ ಕಾಲದೊಳ್ ನಿಜಸೈನ್ಯ ಸಮೇತನಾಗುತ್ತುಮೆಳ್ತಂದು ಸಂದರ್ಶನಂ ಗೆಯ್ದ ಹರಪುರದರಸನಂ ಸನ್ಮಾನಿಸಿ ಗಜಾಶ್ವವಸ್ತ್ರಾಭರಣಾದಿ ಗಳನಿತ್ತು ಬಹಳ ಸಂತೋಷಂ ಬಡಿಸಿ ಕಳುಪಿ ರಾಜ್ಯಂಗೆಯ್ಯುತ್ತು ಮಿರಲೊಂದವಸರದೊಳ್....(೬)

ಹರಪುರದ ರಾಜನನ್ನು ಸವಣೂರಿನ ದೊರೆನವಾಬನ ಸೈನ್ಯವನ್ನು ಬರಮಾಡಿ ಸಬುನೀಸಕೃಷ್ಣಪ್ಪನನ್ನು ಹೆಚ್ಚಿನ ಸೈನ್ಯದೊಂದಿಗೆ ಕಳುಹಿಸಿದನು. ಮಾಯಕೊಂಡ ಎಂಬಲ್ಲಿ (ಕ್ರಿ.ಶ. ೧೬೬೪ - ೧೬೮೮; ಕ್ರಿ. ಶ. ೧೭೪೨ - ೧೭೬೬) ಯುದ್ಧ ನಡೆದು ಮದಕರಿನಾಯಕನು ಸೋಲನ್ನನುಭವಿಸಬೇಕಾಯಿತು. ಮೆದಕೆರೆನಾಯಕನನ್ನು ಗೆದ್ದ ಮಹೋತ್ಸವ ಕಾಲದಲ್ಲಿ ತನ್ನ ಸೈನ್ಯ ಸಹಿತ ಬಂದು ತನ್ನನ್ನು ಸಂದರ್ಶಿಸಿದ ಹರಪುರದ ರಾಜನನ್ನು ಸನ್ಮಾನಿಸಿದನು. ಇದು ವೀರಬಸವಪ್ಪನಾಯಕನ ಕಾಲದಲ್ಲಿ ನಡೆದದ್ದಾಗಿದ್ದು ಕೆಳದಿ ಬಸವಪ್ಪನಾಯಕನ (೧೭೪೦ - ೧೭೫೫) ಕಾಲಕ್ಕೆ ಸರಿದೂಗುತ್ತದೆ.

ಕೆಳದಿ ಹಾಗೂ ಹರಪನಹಳ್ಳಿ ಪಾಳೆಯಗಾರರಿಗೆ ವಿಶೇಷ ಸ್ನೇಹವಿತ್ತು. ಇದೇ ಹರಪನಹಳ್ಳಿಯ ನಾಯಕರು ವೀರಶೈವ ದೀಕ್ಷೆಯನ್ನು ಪಡೆಯಲು ಕಾರಣವಾಗಿರಬೇಕೆಂಬ ಅಭಿಪ್ರಾಯ ವಿದೆ.

ಈ ಹರಪನಹಳ್ಳಿ ಪಾಳೆಯ ಪಟ್ಟು ಬೇಡನಾಯಕರ ಕೇಂದ್ರವಾಗಿದ್ದಿತ್ತು. ವಿಜಯನಗರದ ವೈರಿಯಾಗಿದ್ದ ಆಲಿ ಆದಿಲ್‌ಷಹನಿಗೆ ಹರಪನಹಳ್ಳಿ ಪಾಳೆಯಗಾರರು ಮಿತ್ರರಾಗಿದ್ದರು. ಆದರೆ ಅವರೂ ಸಹ ಕೊನೆಗೆ ಚಿತ್ರದುರ್ಗದವರಂತೆ ದುರ್ಗತಿಯನ್ನು ಪಡೆಯಬೇಕಾಯಿತು. ಕ್ರಿ.ಶ. ೧೭೫೨ರಲ್ಲಿ ಹರಪನಹಳ್ಳಿ ಪಾಳೆಯಗಾರನು ಹೈದರನಿಗೆ ಶರಣಾಗತನಾದನು.

ಉಪಸಂಹಾರ

ಒಬ್ಬ ಮಹಿಳೆಯೂ ಸೇರಿದಂತೆ ಒಟ್ಟು ೧೬ ಜನರು ಆಡಳಿತ ನಡೆಸಿದ ಹರಪನಹಳ್ಳಿ ಅರಸರ ಕಾಲದಲ್ಲಿ ಕೆಳದಿ ಹರಪನಹಳ್ಳಿ ಬಹಳ ಸ್ನೇಹದಿಂದ ನಡೆದುಕೊಂಡು ಬಂದರಲ್ಲದೆ ಹರಪನಹಳ್ಳಿಯವರಿಗೆ ಅವರ ಕಷ್ಟಕಾಲದಲ್ಲಿ ವಿಶೇಷ ಸಹಾಯ ಸಹಕಾರ ಮಾಡಿರುವುದನ್ನು ಕೆಳದಿ ನೃಪವಿಜಯ ಪ್ರಸ್ತಾಪಿಸುತ್ತದೆ. ಹರಪನಹಳ್ಳಿ ಅರಸರನ್ನು ಅವರ ಸ್ಥಾನಮಾನಗಳಿಗೆ ಅನುಗುಣವಾಗಿ ಗೌರವಿಸಿ ಅವರುಗಳಿಗೆ ಉಡುಗೊರೆಗಳನ್ನು ನೀಡಿದುದಲ್ಲದೆ ಅವರ ಸಾಲವನ್ನು ತೀರಿಸಿರುವುದು ಕೆಳದಿ ಅರಸರು ಆ ಅರಸರ ಮೇಲಿಟ್ಟ ಅಭಿಮಾನವನ್ನು ವ್ಯಕ್ತಪಡಿಸುತ್ತದೆ.

ಡ್ಯೂಕ್ ಆಫ್ ವೆಲ್ಲಿಂಗ್ಟನ್ ಪತ್ರಾಗಾರದಲ್ಲಿ ಹರಪನ ಹಳ್ಳಿಯ ಪ್ರಸ್ತಾಪವಿರುವುದು ಕಂಡು ಬರುತ್ತದೆ. ಶ್ರೀರಂಗಪಟ್ಟಣದ ಮೊಕ್ಕಾಂನಿಂದ ಆರ್ಥರ್ ವೆಲ್ಲಸ್ಲಿಯ ಪತ್ರ - ಸಾರಾಂಶ - ಧೋಂಡೆವಾಘನ ಉಪಟಳದಲ್ಲಿ ಹರಪನಹಳ್ಳಿಯನ್ನು ನೈಜಾಮನಿಗೆ ನೀಡುವ ಕುರಿತು ಇದರಲ್ಲಿ ನಂಜನಗೂಡಿನ ಅಮಲ್‌ದಾರ್ ಕ್ಯಾಪ್ಟನ್, ಫಾರ್ತೀನ್, ಮುತ್ಸದ್ದಿ ಶ್ರೀರಂಗಪಟ್ಟಣದ ಕಿಲ್ಲೇದಾರನಾದ ಸೈಯ್ಯದ್ ಮಹಮ್ಮದ್, ಪೂರ್ಣಯ್ಯ, ಆನವಟ್ಟಿಯಲ್ಲಿ ಸೇನೆಯೊಂದಿಗೆ ಬಚ್ಚರಾವ್ ಮುಂತಾದವರ ಸಂಗತಿಗಳು ಪ್ರಸ್ತಾಪಿಸಲ್ಪಟ್ಟಿವೆ.[೭]

ಕ್ಯಾಪ್ಟನ್ ಮ್ಯಾಕ್ ಫಾರಲೇನ್ ಕರ್ನಲ್‌ವೆಲ್ಲಸ್ಲಿಗೆ ಬರೆದ ಪತ್ರದಲ್ಲಿ ಕೊಲ್ಲಾಪುರರಾಜ. ಪೇಷ್ವೆಯ ಪರಶುರಾಮಭಾವೋನ ಮಗ ಪುನ್ನಲ್ಲಿ ಘಡಕೋಟೆ ವಿಷಯದೊಂದಿಗೆ ಧೋಂಢೆವಾಘನು ಹಲವು ಪಾಳೆಯಗಾರರೊಂದಿಗೆ ಸೇರಿ ೭-೮ಸಾವಿರ ಸೇನೆ ಯೊಂದಿಗೆ ಹರಪನಹಳ್ಳಿಯ ಸಮೀಪ ಜಾಲಿಹಾಳಗೆ ಬೀಡು ಬಿಟ್ಟ ವಿಷಯದ ಪ್ರಸ್ತಾಪವಿದೆ. ಮ್ಯಾಕ್ ಫರ್‌ಲೇನ್‌ರವರ ದಿ. ೭-೩-೧೮೦೦ರಲ್ಲಿ ಪತ್ರದಲ್ಲಿ ಹಲವು ಪಾಳೆಯಗಾರರ ಸಂಗತಿಯೊಂದಿಗೆ ಹರಪನಹಳ್ಳಿಗೆ ಧೋಂಡಿಯಾವಾಘನು ೭-೮ಸಾವಿರ ಕಾಲಾಳಿನೊಂದಿಗೆ ಬರುತ್ತಿರುವ ವಿಚಾರ ಪ್ರಸ್ತಾಪವಿದೆ. ಈ ಪ್ರಬಂಧ ಕೆಳದಿ ನೃಪವಿಜಯಕ್ಕೆ ಸೀಮಿತ ಗೊಳಿಸಿರುವುದರಿಂದ ಉಳಿದ ಚಾರಿತ್ರಿಕ ದಾಖಲೆಗಳನ್ನಿಲ್ಲಿ ಚರ್ಚಿಸಲು ಹೋಗಿಲ್ಲ.

ಶ್ರೀ ಕುಂ.ಬಾ. ಸದಾಶಿವಪ್ಪರವರು ತಮ್ಮ 'ಹರಪನಹಳ್ಳಿ ಪಾಳೆಯಗಾರರು' ಕೃತಿಯಲ್ಲಿ ಮಾಯಕೊಂಡ ಯುದ್ಧವನ್ನು ಪ್ರಸ್ತಾಪಿಸಿದ್ದರೂ ಕೆಲವು ಸಂಗತಿಗಳ ಬಿಟ್ಟುಹೋಗಿರುವುದು ಕಂಡುಬರುತ್ತದೆ. ಶ್ರೀ ಟಿ. ಕೇಶವಭಟ್ಟರು ಹಾಗೂ ಎಂ.ವಿ.ಕೃಷ್ಣರಾವ್‌ರವರೂ ಸಹ ಕೆಳದಿ ನೃಪವಿಜಯದಲ್ಲಿರುವ ಆಕರಗಳನ್ನು ಗಮನಿಸಿದಂತೆ ಕಂಡುಬರುವುದಿಲ್ಲ.

ಈ ಹಿನ್ನೆಲೆಯಲ್ಲಿ ಕೆಳದಿ ನೃಪವಿಜಯವು ಕೆಳದಿ ಅರಸರು ಮತ್ತು ಹರಪನಹಳ್ಳಿ ಪಾಳೆಯಗಾರರ ಸಂಬಂಧವನ್ನು ಕುರಿತು ನಮಗೆ ಸಾಹಿತ್ಯ ಮಾಹಿತಿಯನ್ನು ಒದಗಿಸುತ್ತದೆ

ಅನುಬಂಧ :

ಹರಪನಹಳ್ಳಿ ಪಾಳೆಯಗಾರರು

ಕೆನ್ನವಿ ಆಧಾರದಂತೆ	ಕಾಲ	ಬಳ್ಳಾರಿ ಜಿಲ್ಲಾ ಬ್ರಿಟೀಷ್ ಗ್ಯಾಸೆಟಿಯರ್	ಕಾಲ	ಮೈಸೂರು ಸ್ಟೇಟ್ ಗ್ಯಾಸೆಟಿಯರ್	ಕಾಲ
ದಾದಾನಾಯಕ	-	ದಾದಾನಾಯಕ	೧೫೬೫-೧೫೯೨	Dodayya	೧೫೬೫
ರಂಗರಾಜಯ್ಯ	-	ರಂಗಾನಾಯಕ	೧೫೯೨-೧೬೧೬	Ranganayaka	೧೫೯೨-೧೬೧೬
ಹಿರಿಯಬಸವಂತರಾಯ	-	ಭರ್ಮನಾಯಕ	೧೬೧೬-೧೬೫೦	Baramana Nayaka	೧೬೧೬-೧೬೫೦
ಇಮ್ಮಡಿ ಬಸವಪ್ಪನಾಯಕ	-	ಓಬಣ್ಣ ನಾಯಕ	೧೬೫೦-೧೬೫೫	Obanna Nayaka	೧೬೫೦-೧೬೫೫
ಕೊಟ್ಟೂರಪ್ಪನಾಯಕ	-	ವೀರಮುಮ್ಮಡಿ ನಾಯಕ	೧೬೫೫-೧೬೬೭	Veera mummadiNayaka	೧೬೫೫-೧೬೬೭
ಹಿರಿಯ ಬಸವಪ್ಪ ನಾಯಕ	-	ಮುಮ್ಮಡಿ ನಾಯಕ	೧೬೬೭-೧೬೮೭	Mummad Nayaka	೧೬೬೭-೧೬೮೭
ಕೊಟ್ಟೂರಪ್ಪನಾಯಕ	-	ಬಸವಂತನಾಯಕ	೧೯೮೭-೧೭೦೫	Basavanta Nayaka	-
ಬಸವಪ್ಪನಾಯಕ	-	ಮರಿಕೊಟ್ರಪ್ಪ ನಾಯಕ	೧೭೦೫-೧೭೨೫	Kottrappa Nayaka	೧೬೮೭-೧೭೦೫
ಸೋಮಶೇಖರ ನಾಯಕ	-	ಬಸವಂತನಾಯಕ-II	೧೭೧೫-೧೭೨೧	Mari Kottrappa	೧೭೦೫-೧೭೧೫
		ಮುದಿಬಸವಪ್ಪನಾಯಕ-I	೧೭೨೧-೧೭೪೧		
		(ಗೋಣಪ್ಪ)		Basavanta	೧೭೧೫-೧೭೨೧
		ವೀರಬಸಪ್ಪನಾಯಕ-I	೧೭೪೧-೧೭೪೨		೧೭೧೫-೧೭೨೧
		ಸೋಮಶೇಖರನಾಯಕ	೧೭೪೨-೧೭೬೬	Mudi Basappa Nayaka	೧೭೪೧
		ವೀರಬಸಪ್ಪನಾಯಕ-II	೧೭೬೬-೧೭೬೮	Somasekhara Nayaka	೧೭೬೬
		ಬಸಪ್ಪನಾಯಕ	೧೭೬೮-೧೭೮೭		
		ಸೋಮಶೇಖರನಾಯಕ-II	೧೭೮೭-೧೭೯೯		

(ಈ ಪ್ರಬಂಧ ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ನಾಡಿದ ತಂದೆ ಈ ಕೆಳದಿ ಗುಂಡಾಜೋಯಿಸ್‌ರವರಿಗೆ ಕೃತಜ್ಞತೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಕೆನ್ಯವಿ, ೧೯೭೭ ಕಸಾಪ ಪುಟ.೨೫೮- ೨೫೯.

೨. ಜಿ. ಬಸವಂತಪ್ಪ: 'ಹರಪನಹಳ್ಳಿ ಪಾಳೆಯಗಾರರು', ೮೦ನೇ ವಾರ್ಷಿಕೋತ್ಸವ, ಮಿಥಿಕ್ ಸೊಸೈಟಿ ವಿಚಾರಸಂಕಿರಣ, ಬೆಂಗಳೂರು. ದಿ. ೧೨.೬.೮೮.

೩. ಕುಂ.ಬಾ. ಸದಾಶಿವಪ್ಪ : 'ಹರಪನಹಳ್ಳಿ ಪಾಳೆಯಗಾರರು', ಕಸಾಪ ಬೆಂ. ೧೯೯೬. ಪು.೨೯

೪. ಕೆನ್ಯವಿ, ೧೯೭೭, ಕಸಾಪ, ಪುಟ ೨೬೨ - ೨೬೩.

೫. ಕೆನ್ಯವಿ, ೧೯೭೭, ಕಸಾಪ, ಪುಟ ೨೮೦ - ೨೮೧.

೬. ಕೆನ್ಯವಿ, ೧೯೭೭, ಕಸಾಪ, ಪುಟ ೨೯೦ - ೨೯೧.

೭. ಪತ್ರ ಸಂಖ್ಯೆ ೩೪: ದಿ ೧೪.೨.೧೮೦೦೦ ದಿ. ೧೨.೧.೧೮೦೦.

ಡಾ॥ ಡಿ. ಎನ್. ಯೋಗೀಶ್ವರಪ್ಪ*

ನಾಯಕನಹಟ್ಟಿ ನಾಯಕರ ವಂಶಾವಳಿ - ಒಂದು ವಿವೇಚನೆ

ಚಿತ್ರದುರ್ಗ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ನಾಯಕನ ಹಟ್ಟಿಯು ವಿಜಯನಗರ - ನಗರೋತ್ತರ ಕಾಲದಲ್ಲಿ ಒಂದು ಚಿಕ್ಕ ಸಂಸ್ಥಾನವಾಗಿದ್ದಿತು. ಇಲ್ಲಿ ಆಳ್ವಿಕೆ ಮಾಡಿದ ರಾಜರು ಹಟ್ಟಿನಾಯಕರೆಂದೇ ಇತಿಹಾಸದಲ್ಲಿ ಪ್ರಖ್ಯಾತಿಯಾಗಿದ್ದಾರೆ. ಇವರ ಮೂಲ ಪುರುಷ ಕಾಟೆಮಲ್ಲಪ್ಪನಾಯಕ. ಇವನು ವಿಜಯನಗರ ದೊರೆಗಳ ಕೃಪೆಗೆ ಪಾತ್ರನಾಗಿ ಕೆಲವು ಗ್ರಾಮಗಳನ್ನು ಅವರಿಂದ ಪಡೆದುಕೊಂಡು ಆಳ್ವಿಕೆ ಮಾಡಲಾರಂಭಿಸಿದನು. ಕ್ರಮೇಣ, ವಿಜಯನಗರ ಸಾಮ್ರಾಜ್ಯ ಪತನ ಹೊಂದಿದನಂತರ ಈ ವಂಶದ ನಾಯಕರು ಸ್ವತಂತ್ರರಾಗಲೆತ್ನಿಸಿ, ಆ ವೇಳೆಗಾಗಲೇ ಪ್ರಬಲರಾಗಿದ್ದ ಚಿತ್ರದುರ್ಗ ಅಮರನಾಯಕರ ಆಡಳಿತಕ್ಕೆ ಒಳಪಟ್ಟು, ನಂತರ ರಕ್ತ ಸಂಬಂಧಿಗಳಾಗಿ, ಹೈದರಾಲಿಯ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಲೀನವಾದರು. ಇಂತಹವರ ಇತಿಹಾಸವನ್ನು ರಚನೆ ಮಾಡಲು ಇರುವ ಏಕೈಕ ಪ್ರಮುಖ ಆಧಾರವೆಂದರೆ, ನಾಯಕನಹಟ್ಟಿ ವಂಶಾವಳಿ. ಇದು ಈಗಾಗಲೇ ಯಥಾವತ್ತಾಗಿ ಪ್ರಕಟವಾಗಿದ್ದು ಅದರ ಸಂಪಾದಕರು ಹೀಗೆ ತಿಳಿಸಿದ್ದಾರೆ.(೧) "ದಪ್ಪರಟ್ಟಿನ ಕಾಗದದಲ್ಲಿ ಹತ್ತು ಪುಟಗಳಷ್ಟು ಫುಲ್‌ಸ್ಕೇಪ್ ವ್ಯಾಪ್ತಿಯುಳ್ಳದ್ದು. ಕನ್ನಡ ಮೋಡಿ ಅಕ್ಷರಗಳಲ್ಲಿ ಬರೆದಿದ್ದು ಸುಮಾರು ಒಂದುನೂರು ವರ್ಷಗಳಷ್ಟು ಹಳೆಯದಿರಬಹುದು". ಆದರೆ ಇದರ ಸಂಪಾದಕರು ವಂಶಾವಳಿಯನ್ನು ಅಧ್ಯಯನಮಾಡಿ ಕೆಲವು ವಿವರಗಳನ್ನು ನೀಡಿದ್ದಾರೆ. ಇದನ್ನು ಗಮನಿಸಿದ ನಾನು ನಾಯಕನಹಟ್ಟಿ ವಂಶಾವಳಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಅದರ ಅರ್ಥವನ್ನು ಬಿಡಿಸಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ.

ನಾಯಕನಹಟ್ಟಿ ವಂಶಾವಳಿಯು, ಹಟ್ಟಿನಾಯಕರ ಸ್ಥಾಪಕನಾದ ಮಲ್ಲಯ್ಯ ಮತ್ತು ಅವನ ವಂಶಾವಳಿಯ ಬಗೆಗೆ ೧೪ನೇ ಶತಮಾನದಿಂದ ೧೮ನೇ ಶತಮಾನದ ಕೊನೆಯವರೆಗೆ ಪ್ರಮುಖ ಘಟನೆಗಳ ವಿವರವನ್ನು ನೀಡುತ್ತದೆ. ಹಟ್ಟಿಯ ಬಂಗಾರ ಮಲ್ಲಪ್ಪನಾಯಕ ಕ್ರಿ.ಶ. ೧೭೬೬ರಲ್ಲಿ ಹೈದರಾಲಿಯೊಂದಿಗೆ ಕಲ್ಲಿಕೋಟೆಯನ್ನು ಆಕ್ರಮಿಸಲಿಕ್ಕೆ ಹೋಗಿ ಅಲ್ಲಿಯೇ ಮರಣ ಹೊಂದಿದುದನ್ನು ತಿಳಿಸುತ್ತ ಈ ವಂಶಾವಳಿ ಪೂರ್ಣಗೊಳ್ಳುತ್ತದೆ.

ಶ್ರೀಶೈಲ ಮಲ್ಲೇಶ್ವರ

ಹಟ್ಟಿನಾಯಕರ ಸ್ಥಾಪಕ ಮಲ್ಲಯನ ಮೂಲಸ್ಥಾನ ಶ್ರೀಶೈಲವಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಈ ವಂಶಾವಳಿಯ ಪಾಠ ಶ್ರೀಶೈಲ ಮಲ್ಲೇಶ್ವರನ ಸ್ತುತಿಯಿಂದಲೇ ಆರಂಭವಾಗಿದೆ. ಮಲ್ಲೇಶ್ವರ ಈಗ ಶ್ರೀಶೈಲದಲ್ಲಿ ನೆಲೆಸಿರುವ ಮಲ್ಲಿಕಾರ್ಜುನನೇ ಆಗಿದೆ. ಇವರ ಸ್ಥಾಪಕನೇ ಅಲ್ಲದೆ ಈ ವಂಶದ ಅನೇಕರು 'ಮಲ್ಲ' ಎಂಬ ಹೆಸರನ್ನು ಇಟ್ಟುಕೊಂಡಿರುವುದು ಶ್ರೀಶೈಲದ ಮಲ್ಲಿಕಾರ್ಜುನನೊಂದಿಗೆ ಇದ್ದ ಬಾಂಧವ್ಯವನ್ನು ಸೂಚಿಸುತ್ತದೆ. ಆದಾಗ್ಯೂ ಅವರ ಮೂಲಸ್ಥಾನವನ್ನು ಗುರ್ತಿಸುವುದು ಕಷ್ಟಕರವಾದ ಸಂಗತಿಯೇ ಆಗಿದೆ.

ಶ್ರೀಶೈಲ ಪರ್ವತಕ್ಕೆ ಪ್ರಾಗ್ಭಾಗದಲ್ಲೂ । ಕರ್ರೆಮಲೆ । ಬಿಳೀಮಲೆ ಯಂಬುವ ಶ್ರೀರಂಣ್ಯದಲ್ಲೂ ಒಂಣಕೆ ಲಕ್ಷ ಕಂಪಳೆಯಿಟ್ಟುಕೊಂಡು। ೧ ಕಾಟೆಮಲ್ಲನಾಯಕ ಯಿತನ ತಮ್ಮಂದಿರು ೬ ಅಂತ್ತು ೭ ಯಿವರ ಪರಿವಾರ ಜನರು ಮೆಸರು ೫೦೦ ಜನರು ಸಹಾ ಆ ಸ್ಥಳದಲ್ಲಿ ಸುಖವೃತ್ತಿ ಯಿಂದ್ದಾರು ಯಿಲ್ಲಿ ಅಪ್ಪರಲ್ಲೆ ದೈವಯೋಗದಿಂದ್ದಾ ದ್ವಾದಶ ವರ್ಷ ಅನಾವೃಷ್ಟಿಯಾಗಿ ಕ್ಷಾಮಡಾಂಮ್ರ ಯಿ ದೇಶಕ್ಕೆ ತಟ್ಟಿದ ಪ್ರಯುಕ್ತ ಯಿ ಕಂಪಳ ಯಿ ಜನರು ಯಿರುವುದಕ್ಕೆ ನಿರ್‍ವಯಿಸಲಾರದೆ ಯಿದಕ್ಕೆ ಯೆನು ಯೊಚನೆ ಯಂದೂ ಯಿ ಜನಗಳ ಕಾಟೆ ಮಲ್ಲನಾಯ್ಕನ ಕೇಳಿದರು ಅವರು ಯಿರುವುದಕ್ಕೆ ಯೆಳು ೭ ಮಂದ್ದಿಯೊಚನೆ ಮಾಡಿ ಪಶ್ಚಿಮ ದೇಶದಲ್ಲೂ ಹುಲ್ಲುನೀರೂ ಜನರು ಸೌಖ್ಯದಲ್ಲೂ ಯಾರಾರೆಲ್ಲೆಲ್ಲಿಗೆ ಹೋಗತಕ್ಕದ್ದು ಯೆಂದ್ದೂ ನಿಶ್ವಯಿಸಿ ಯಿ ದೇಶದಲ್ಲು ಗುರು

* ರೀಡರ್, ಇತಿಹಾಸ ವಿಭಾಗ, ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು.

ಗುಹೇಶ್ವರನ ಬೆಟ್ಟಕ್ಕೆ ಪೂರ್ವಭಾಗ ಯೆಳು ಜಂಬ್ವೀಜನ್ನಿಗೇ ಹಳ್ಳಿಗಿಯಿವಗಳ ಮಧ್ಯದಲ್ಲು ಯಿ ಕಂಪಳಕ್ಕೆ ಹಟ್ಟಿಯಿಟ್ಟುಕೊಂಡು ೧೨ ಪೆಟ್ಟಿಗೆ ದೇವರುಗಳ ಸಹ ಯಿದ್ದರು.(೨)

ಮೇಲಿನ ಪ್ಯಾರಾವನ್ನು ಅಭ್ಯಸಿಸಿದಾಗ ಈ ವಂಶದ ಸ್ಥಾಪಕ ಕಾಟೆಮಲ್ಲನಾಯ್ಕ ಹೆಸರೇ ಸೂಚಿಸುವಂತೆ ಇವನು ಅರಣ್ಯದಲ್ಲಿ ನೆಲಸಿರುವ ಜನರ ನಾಯಕ (ಕಾಟಿ = ಕಾಡು) ನಾಗಿದ್ದನು. ಇವನು ೫೦೦ ಜನ ಮ್ಯಾಸಬೇಡರಿರುವ ಗುಂಪಿಗೆ ನಾಯಕನಾಗಿದ್ದು ಆ ಕುಲದ ದೇವರಿಗೆ ಮೀಸಲಾದ ಗೋವುಗಳ ಮುಂದೆ ಅಂದರೆ ಕಂಪಳ ಹಾಗೂ ಹನ್ನೆರಡು ಪೆಟ್ಟಿಗೆ ದೇವರುಗಳನ್ನಿಟ್ಟುಕೊಡಿದ್ದನು. ಈ ಪೆಟ್ಟಿಗೆ ದೇವರುಗಳು ಮ್ಯಾಸಬೇಡರ ದೇವರುಗಳಲ್ಲಿ ಅತ್ಯಂತ ಪ್ರಮುಖವಾದವು(೩) ಹೀಗೆ ಮಲ್ಲಯ್ಯನೊಂದಿಗೆ ಮ್ಯಾಸಬೇಡರ ಎರಡು ಪವಿತ್ರ ವಸ್ತುಗಳಾದ ಪೆಟ್ಟಿಗೆ ಮತ್ತು ಕಂಪಳದ ಸಂಬಂಧವನ್ನು ಇಲ್ಲಿ ಗುರ್ತಿಸಬಹುದು.

ಈ ಸಮಯದಲ್ಲಿ ವಿಜಯನಗರದ ಕಡೆಯಿಂದ ಬಂದ ಒಬ್ಬ ಸಾಧು ಭವ್ಯಮೂರ್ತಿ ಮಲ್ಲಯ್ಯನ ಬಳಿಗೆ ಬಂದು ಅವನನ್ನು ಬಹು ವಿಧವಾಗಿ ಹೊಗಳಿದನು. ಅದಕ್ಕೆ ಮಲ್ಲಯ್ಯ ನಿನಗೇನು ಬೇಕೆಂದು ಕೇಳಿದಾಗ ಆ ಭವ್ಯಮೂರ್ತಿಯು ನೀನು ಸೂರ್ಯ ದೇವರ ವರಪ್ರಸಾದದಿಂದ ಜನಿಸಿದಂಥಾ ಶರಣ ಎಂದು ಹೇಳಿ ಅವನಿಂದ ಬಹುಮಾನವನ್ನು ಸ್ವೀಕರಿಸಿ ವಿಜಯನಗರಕ್ಕೆ ಹಿಂತಿರುಗಿ ಚಕ್ರವರ್ತಿಗೆ ಈ ವೃತ್ತಾಂತವನ್ನು ತಿಳಿಸಿದನು. ಇದರಿಂದ ಕೋಪ ಗೊಂಡ ದೊರೆಯು ತನ್ನ ಅನುಮತಿಯಿಲ್ಲದೆ ತನ್ನ ರಾಜ್ಯದಲ್ಲಿ ಕಂಪಳ ಇಟ್ಟುಕೊಂಡ ಮಲ್ಲಯ್ಯನನ್ನು ಹಿಡಿದು ತರಲಿಕ್ಕೆ ಸೈನ್ಯವನ್ನು ಕಳುಹಿಸಿದನು. ವಿಜಯನಗರ ಸೈನ್ಯ ಮಲ್ಲಯ್ಯನ ಮೇಲೆರಗಿದಾಗ ಅವನು ತನ್ನ ದೇವರಾದ ಸೂರ್ಯನಾರಾಯಣ, ಪರ್ವತಮಲ್ಲೇಶ್ವರ, ಗುರುಗುಹೇಶ್ವರನನ್ನು ಪ್ರಾರ್ಥಿಸಿದನು. ಇದರಿಂದ ಪ್ರೇರಿತವಾದ ಗೋವುಗಳ ದಂಡು ವಿಜಯನಗರದವರ ಮೇಲೆ ಆಕ್ರಮಣ ಮಾಡಿದಾಗ ಅವರ ಸೈನ್ಯ ಪಲಾಯನ ಮಾಡಿತು. ವಿಜಯನಗರದ ದೊರೆಗಳು ಇದರಿಂದ ಆಶ್ಚರ್ಯಗೊಂಡು ಈ ನಾಡಿನಲ್ಲಿ ಯಾರು ಅವನನ್ನು ಹಿಡಿದು ತರುತ್ತಾರೋ ಅವರಿಗೆ ಸನ್ಮಾನ ಮಾಡುತ್ತೇವೆಂದು ಡಂಗೂರ ಹಾಕಿಸಿದಾಗ, ೩೨ ಜನ ಸೂಳೆಯರು ಮಲ್ಲಯ್ಯನನ್ನು ಹಿಡಿದು ತರಲು ರಾಯರ ಅಪ್ಪಣೆ ಪಡೆದುಕೊಂಡು ಹೋದರು. ಅವರು ತಮ್ಮ ನರ್ತನವಿದ್ಯೆ, ಗಾನ ವಿದ್ಯೆ ಮುಂತಾದ ಪ್ರೌಢಿಮೆಯಿಂದ ಒಲಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿ ರಾಯರ ಆಸ್ಥಾನಕ್ಕೆ ಹೋಗಿ "ಆತ ಮಾನವನಲ್ಲಾ ಶರಣಸಂತತಿ ಅವನು ವಬ್ಬರಿಗೂ ವಶವಾಗೊನು ಅಲ್ಲಾ ಮಾಯಾ ಪಾಶಕ್ಕೆ ಸಿಲ್ಕುದೆವನೂ ಯಿದರಿಂದ ಬಿಟ್ಟು ಬಂದವೂ ಆತನ ಮೇಲೆ ಯಾರು ಕೈ ಮಾಡುತ್ತಾರೋ ಅವರು ಜಯಿಸಲಿಕ್ಕೆಯಿಲ್ಲಾ" ಎಂದು ತಿಳಿಸಿದರು.

ಮೇಲೆ ತಿಳಿಸಿದ ವಂಶಾವಳಿಯ ವಿವರಣೆಯಿಂದ ಕಾಟೆಮಲ್ಲನಾಯ್ಕನು ಶ್ರೀಶೈಲದಿಂದ ಕಂಪಣದ ಸಮೇತ ಗುರು ಗುಹೇಶ್ವರನ ಬೆಟ್ಟದ ಹತ್ತಿರಕ್ಕೆ ಬಂದಾಗ ಅಲ್ಲಿ ಅವನು ವಿಜಯನಗರದವರ ದಾಳಿಗೆ ತುತ್ತಾದನು. ಇಂತಹ ಕಷ್ಟಕರವಾದ ಸಮಯದಲ್ಲಿ ಅವನು ಸೂರ್ಯನಾರಾಯಣ, ಪರ್ವತಮಲ್ಲೇಶ್ವರರ, ಗುರುಗುಹೇಶ್ವರರನ್ನು ಸ್ಮರಿಸಿದನು. ಇಲ್ಲಿ ಗುರುಗುಹೇಶ್ವರ ಬಗೆಗೆ ವಂಶಾವಳಿಯು ಮುಂದೆ ಯಾವುದೇ ರೀತಿಯ ಐತಿಹಾಸಿಕ ವ್ಯಕ್ತಿ ಎಂಬಂತೆ ವಿವರವನ್ನು ನೀಡುವುದಿಲ್ಲ. ಇದನ್ನು ಪರಿಶೀಲಿಸಿದಾಗ ನಾಯಕನ ಹಟ್ಟಿಯಲ್ಲಿ ವೀರಶೈವಧರ್ಮದ ಪ್ರಖ್ಯಾತ ಧಾರ್ಮಿಕ ವ್ಯಕ್ತಿಗಳಾದ ತಿಪ್ಪೆರುದ್ರಸ್ವಾಮಿಯ ಎರಡು ಸಮಾಧಿಗಳಿವೆ. ಅವುಗಳಲ್ಲಿ ಒಂದರಲ್ಲಿ ಮ್ಯಾಸಬೇಡರೇ ಪೂಜಾರಿಗಳಾಗಿರುವುದು ಗಮನಾರ್ಹ.(೪) ತಿಪ್ಪೆರುದ್ರಸ್ವಾಮಿಯವರು ಚಳ್ಳಕೆರೆ ಬಳಿಯ ಗುಹೆಯೊಂದರಲ್ಲಿ ತಪಸ್ಸನ್ನಾಚರಿಸಿದ್ದರ ಬಗೆಗೆ ದಂತ ಕತೆಯೊಂದಿದೆ.(೫) ಇದರ ಆಧಾರದ ಮೇಲೆ ವಂಶಾವಳಿಯಲ್ಲಿ ಬರುವ ಗುರುಗುಹೇಶ್ವರ ತಿಪ್ಪೆರುದ್ರಸ್ವಾಮಿಯೇ ಇರಬೇಕೆಂದು ಇದು ಅವರ ಮತ್ತೊಂದು ಹೆಸರು ಇರಬಹುದೆಂದೂ ಹೇಳಬಹುದು.

ಆರಂಭದಲ್ಲಿ ನಾಯಕನಹಟ್ಟಿ ನಾಯಕರ ಮತ್ತು ವಿಜಯ ನಗರ ದೊರೆಗಳ ನಡುವೆ ಮೈತ್ರಿಗಿಂತ ಹೆಚ್ಚಾಗಿ ವೈರತ್ವವನ್ನೇ ವಂಶಾವಳಿಯಲ್ಲಿ ವಿವರಿಸಲಾಗಿದೆ. ವಿಜಯನಗರದ ದೊರೆಯು ಎರಡುಬಾರಿ ಕಾಟೆಮಲ್ಲನಾಯಕನನ್ನು ಬಂಧಿಸಲು ಪ್ರಯತ್ನಿಸಿದನು. ಆದರೆ ಮಲ್ಲಯ್ಯ ತನ್ನ ದೈವಿಶಕ್ತಿಯಿಂದ ಅದನ್ನು ವಿಫಲಗೊಳಿಸಿ ಕಂಪಳವನ್ನು ರಕ್ಷಿಸಿದನು. ಇಲ್ಲಿ ಪವಿತ್ರ ಗೋವುಗಳ ಪಾಲಕನ ದೈವೀಶಕ್ತಿಯ ಮುಂದೆ ರಾಜನ ದಂಡಶಕ್ತಿ ಅಷ್ಟೊಂದು ಪರಿಣಾಮಕಾರಿಯಾಗಲಿಲ್ಲವೆಂದು ಹೇಳಬಹುದು.

ನಿಡಗಲ್ಲು ಅರಸರ ವಂಶಾವಳಿಯಲ್ಲಿ ಆ ವಂಶದ ಸ್ಥಾಪಕ ತಿಪ್ಪ ಸೂರ್ಯದೇವರ ಮಗನೆಂದು ಹೇಳಿಕೊಂಡಿರುವುದು ತಿಳಿದ ಸಂಗತಿಯಾಗಿದೆ. ಇಲ್ಲಿ ಮಲ್ಲಯ್ಯನು ಕೂಡಾ ಸೂರ್ಯದೇವರ ವರಪ್ರಸಾದದಿಂದ ಜನಿಸಿದವನೆಂದು ಹೇಳಿಕೊಂಡಿರುವುದು ಅದಕ್ಕೆ ಹೋಲಿಕೆಯಾಗುತ್ತದೆ. ಏಕೆಂದರೆ ಮಲ್ಲಯ್ಯನು ತನ್ನ ಕಷ್ಟಕರ ಪರಿಸ್ಥಿತಿಯಲ್ಲಿ ಸೂರ್ಯದೇವರನ್ನು ಪ್ರಾರ್ಥಿಸಿರುವುದು ಇದರಿಂದಲೇ ಎಂದು ಊಹಿಸಬಹುದು. ಮಲ್ಲಯ್ಯನನ್ನು ಭವ್ಯಮೂರ್ತಿ ಸಾಧು ಮತ್ತು ಸೂಳೆಯರು "ಶರಣ" ಎಂದು ಕರೆದಿರುವುದು ವಿಶೇಷ ಸಂಗತಿಯಾಗಿದೆ. ಶರಣ ಸಂಸ್ಕೃತ ಪದದ ಸಾಮಾನ್ಯ ಅರ್ಥ ರಕ್ಷಕ, ಆಶ್ರಯದಾತ. ಆದರೆ ಕನ್ನಡ ಪ್ರದೇಶದಲ್ಲಿ ಶರಣ ಪದದ ಅರ್ಥವನ್ನು 'ವೀರಶೈವ ಧರ್ಮದ ಅನುಯಾಯಿ' ಎಂದು ಬಿಡಿಸಬಹುದು. ಆದರೆ ವಂಶಾವಳಿಯಲ್ಲಿ ಈ ಪದವನ್ನು ವಿಭಿನ್ನವಾಗಿ ಬಳಸಲಾಗಿದೆ. ಆ ಸಾಧು ಭವ್ಯಮೂರ್ತಿ

ಮಲ್ಲಯ್ಯನನ್ನು "ಸೂರ್ಯ ವರಪ್ರಸಾದದಿಂದ ಬಂದಂಥಾ ಶರಣ ಎಂದು ವರ್ಣಿಸಿ, ವಿಜಯನಗರದ ದೊರೆಗೆ ಅವನೊಬ್ಬ 'ಸಾಕ್ಷಾತ್ ಶರಣ ಪುರುಷ" ಎಂದು ಪರಿಚಯಿಸಲಾಗಿದೆ. ಸೂಳೆಯರೂ ಕೂಡಾ ಅವನ ಬಗ್ಗೆ ವಿಜಯನಗರದ ದೊರೆಗೆ ಅವನು ಮಾನವನಲ್ಲಾ ಆದರೆ ಶರಣ ಎಂದಿರುವುದು ಕಂಡು ಬರುತ್ತದೆ. ಈ ವಾಕ್ಯಗಳಿಂದ ಶರಣ ಎಂಬ ಪದವನ್ನು ದೈವಿಶಕ್ತಿಯನ್ನು ಹೊಂದಿರುವಂತಹ ಪವಿತ್ರ ಮಾನವ ಎಂದು ಅರ್ಥೈಸಬಹುದು. ಆದ್ದರಿಂದ ವೀರಶೈವ ಧರ್ಮೀಯರು ಬಳಸುವ ಶರಣ ಪದವನ್ನು ಮ್ಯಾಸಬೇಡರು ಗೋವುಗಳ ರಕ್ಷಕನಾದ ಮಲ್ಲಯ್ಯನ ಪವಿತ್ರತೆಯನ್ನು ವರ್ಣಿಸಲಿಕ್ಕೆ ಆಯ್ಕೆಮಾಡಿ ಕೊಂಡಿರುವುದು ತಿಳಿಯುತ್ತದೆ.

ಆರಂಭದಲ್ಲಿ ಪರಸ್ಪರ ವೈರಿಗಳಾಗಿದ್ದ ವಿಜಯನಗರದವರೂ ಮತ್ತು ಕಾಟೆಮಲ್ಲನಾಯ್ಕ ಎರಡನೇ ಹಂತದಲ್ಲಿ ಮಿತ್ರರಾಗಿರುವುದು ಕಂಡುಬರುತ್ತದೆ. ಕಾಟೆಮಲ್ಲನಾಯ್ಕನು ಚಕ್ರವರ್ತಿಯ ಆಹ್ವಾನದ ಮೇರೆಗೆ ವಿಜಯನಗರಕ್ಕೆ ಹೋದನು. ಅಲ್ಲಿ ವಿಜಯನಗರ ಚಕ್ರವರ್ತಿಯು ಅವನ ಧೈರ್ಯ ಶೌರ್ಯಗಳನ್ನು ವರ್ಣಿಸಿ "ನೀನು ಸಂಸ್ಥಾನಕ್ಕೆ ಮುಖ್ಯ ಮಗ ನಿಂನಗೆ ಸಲತಕ್ಕದು, ಕೆಲವು ಬಿರೂದು ಬಾವಳೀ ಕೊಡುತ್ತೇವೆ" ಎಂದಿರುವುದು ಕಾಟೆಮಲ್ಲನಾಯ್ಕನ ಜೈವಿಕ ಹುಟ್ಟು ಬದಲಾವಣೆಯಾಗಿರುವುದು ಗೋಚರಿಸುತ್ತದೆ. ಈ ರೀತಿಯ ವಿಜಯನಗರ ದೊರೆಯೊಂದಿಗಿನ ಮಿಥ್ಯಾ ಸಂಬಂಧದಲ್ಲಿ "ನಾಯಕ" ಹುದ್ದೆಯ ಗುರ್ತಿಸುವಿಕೆಯನ್ನು ಕಾಣಬಹುದು. ವಿಜಯನಗರದ ಚಕ್ರವರ್ತಿಯು ತನ್ನ ಆಸ್ಥಾನದಲ್ಲಿ ಬೇಡ ಕುಲದ ಅವನ, ಮುಖಂಡತ್ವವನ್ನು ಬದಲಾವಣೆ ಮಾಡದೆ ಅದನ್ನು ಮುಂದುವರಿಸಿ, ಅವನಿಗೆ ತನ್ನ ರಾಜ್ಯದಲ್ಲಿ ಮುಕ್ತವಾಗಿ, ಆ ಕುಲದ ಎರಡು ಪವಿತ್ರ ವಸ್ತುಗಳಾದ ಕಂಪಳ ಮತ್ತು ೧೨ ಪೆಟ್ಟಿಗೆ ದೇವರುಗಳ ಸಮೇತ ಸಂಚರಿಸಲಿಕ್ಕೆ ಅನುಮತಿ ನೀಡಿ, ೫೪ ದೇಶಗಳಲ್ಲಿರುವ ವಾಲ್ಮೀಕಿ ವಂಶಸ್ಥ ಜನರುಗಳ ಮುಖಂಡತ್ವವನ್ನು ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗುವುದಕ್ಕೆ ಅಪ್ಪಣೆಕೊಟ್ಟನು.

ಈ ವಂಶಾವಳಿಯಲ್ಲಿ ಕೆಲವು ದೋಷಪಾಠವಿದ್ದು[೬] ಯಿಾ ಕಂಪಳದ ಪೂಜೆಗೆ ಯಿಾಹಂಗೆ ವಿರೂಪಾಕ್ಷನ ಡಬ್ಬವಳಗೆ ಪಾಲು ಪಾಲು ಹಿಸೆ ನಡೆಯೂ ವಪ್ಪಂದ ಮಾಡ್ಸಿ ಕೊಟ್ಟ" - ಇದರ ಅರ್ಥ ಪರಿಪೂರ್ಣವಾಗಿಲ್ಲ. ನನಗೆ ತಿಳಿದಂತೆ ಈ ವಾಕ್ಯದಲ್ಲಿ ಹಂಪೆಯ ವಿರೂಪಾಕ್ಷ ಮತ್ತು ಕಂಪಳದ ನಡುವಿನ ಸಂಬಂಧವನ್ನು ಪರೀಕ್ಷಿಸಬಹುದು. ವಿಜಯನಗರದವರಿಗೆ ಹಂಪೆ ವಿರೂಪಾಕ್ಷ ಪವಿತ್ರವಾದರೆ, ನಾಯಕನಹಟ್ಟಿ ನಾಯಕ ಮಲ್ಲಯನಿಗೆ ಕಂಪಳ ಪವಿತ್ರವಾಗಿದೆ. ವಿಜಯನಗರದವರು ತಮ್ಮ ಅನೇಕ ಶಾಸನಗಳಲ್ಲಿ ಹಂಪೆಯ ವಿರೂಪಾಕ್ಷನನ್ನು ಸ್ಮರಿಸಿರುವುದೂ ಹಾಗೂ ಅವನ ಹೆಸರಿನಲ್ಲಿ ರಾಜ್ಯಭಾರ ಮಾಡಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ವಿಜಯನಗರದ ದೊರೆಯು ತನ್ನ ರಾಣಿಯೊಂದಿಗೆ ಮಲ್ಲಯ್ಯನ ಕಂಪಳವನ್ನು ಪೂಜಿಸಿ ಬಿರುದು ಬಾವಳಿಗಳನ್ನು ನೀಡಿರುವುದು ಬೇಡಕುಲದ ಪವಿತ್ರವಾದ ಕಂಪಳ ಮತ್ತು ಮಲ್ಲಯ್ಯನ ಗೌರವವನ್ನು ಮಾನ್ಯ ಮಾಡುವ ಕಾರ್ಯವಾಗಿದೆ.

ನಂತರ ಮಲ್ಲಯ್ಯನು ವಿಜಯನಗರದಿಂದ ತನ್ನ ಕಂಪಳದ ಸಮೇತ ಕುಂದುರ್ಪೆ ಸಮೀಪದ ಗೋಸಿಕೆರೆಗೆ ತೆರಳಿದನು. ಅಲ್ಲದೆ ಅವನ ಆರುಜನ ಸೋದರರು ರತ್ನಗಿರಿ, ಮಿಡಿಗೇಸಿ, ಹೊಕ್ಕೂಟ್ಟಿ (ಹೊಸಕೋಟೆ) ನಿಡುಗಲ್ಲು, ಶಂಕರಕಲ್ಲು, ಕುಂದುರ್ಪೆ ಮುಂತಾದ ಸ್ಥಳಗಳಲ್ಲಿ ನೆಲೆ ನಿಂತರು. ಹೀಗೆ ಈ ಏಳೂ ಜನ ಸೋದರರು ವಿವಿಧ ಸ್ಥಳಗಳಲ್ಲಿ ನೆಲೆ ನಿಂತುದುದು ಚಿತ್ರದುರ್ಗದ ದಕ್ಷಿಣ ಭಾಗದಲ್ಲಿರುವ ನಾಲ್ಕು ಬೇಡ ನಾಯಕರ ಜೊತೆ ಸುಳ್ಳು ಸಂಬಂಧವನ್ನು ಕಲ್ಪಿಸುವ ಉದ್ದೇಶ ಇರುವಂತೆ ಕಾಣುತ್ತದೆ. ಇವರಲ್ಲಿ ಕಾಟೆಮಲ್ಲನಾಯ್ಕ ಹಿರಿಯವನೆಂದು ತಿಳಿಸಿರುವುದು ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶ. ಇದರಿಂದ ಈ ಭಾಗದಲ್ಲಿ ನಾಯಕನಹಟ್ಟಿ ನಾಯಕರು ತಮ್ಮ ಪರಮಾಧಿಪತ್ಯವನ್ನು ಪಡೆಯಲಿಕ್ಕೆ ಪ್ರಯತ್ನಿಸಿರುವುದು ಕಾಣುತ್ತದೆ.

ಕಾಟೆಮಲ್ಲಯ್ಯನಾಯ್ಕನ ನಂತರ ಅವನ ಹಿರಿಯ ಮಗನಾದ ಸೂರದೆವಿನ ಪಾಪನಾಯ್ಕ ಸಿಂಹಾಸನಕ್ಕೆ ಬಂದನು. ಇವನೇ ಅಲ್ಲದೆ ಮಲ್ಲಯ್ಯನಿಗೆ ಜಗಳೂರು ಪಾಪನಾಯಕ ಹಾಗೂ ಗದರ ಪಾಲನಾಯಕ ಹಾಗೂ ಗದರ ಪಾಲನಾಯಕರೆಂಬ ಮಕ್ಕಳು ಇದ್ದರು. ಇಬ್ಬರು ವ್ಯಕ್ತಿಗಳು ಚಿತ್ರದುರ್ಗ ಜಿಲ್ಲೆಯ ಬೇಡಕುಲದ ಸಮೂಹಕ್ಕೆಲ್ಲಾ ಆರಾಧ್ಯದೇವತೆಗಳಾಗಿದ್ದಾರೆ. ಇವರ ಮೇಲೆ ಜನಪದ ಕಥನಗೀತೆ ದಂತಕಥೆಗಳು, ಹೇರಳವಾಗಿ ಪ್ರಚಲಿತ ದಲ್ಲಿವೆ. ಗಾದರ ಪಾಲನಾಯಕನ ಸಮಾಧಿಯನ್ನು ಈಗಲೂ ಹೊಳಲ್ಕೆರೆ ತಾಲ್ಲೂಕು ಮಿಂಚೇರಿ ಅರಣ್ಯದಲ್ಲೂ, ಪಾಪನಾಯ್ಕನ ಸಮಾಧಿಯನ್ನು ಜಗಳೂರಿನ ದೊಡ್ಡಕೆರೆಯ ಬಳಿಯೂ ಜನರು ತೋರಿಸುವರು.[೭] ಈ ವಂಶಾವಳಿಯಲ್ಲಿ ಈ ವ್ಯಕ್ತಿಗಳನ್ನು ಐತಿಹಾಸಿಕ ವ್ಯಕ್ತಗಳಿಗಿಂತ ಹೆಚ್ಚಾಗಿ ಧಾರ್ಮಿಕ ಮತ್ತು ದಂತಕತೆಯ ನಾಯಕರಂತೆ ಚಿತ್ರಿಸಿರುವುದು ಹಾಗೂ ನಾಯಕನಹಟ್ಟಿಯವರು ತಮ್ಮ ವಂಶಾವಳಿಯಲ್ಲಿ ಇವರನ್ನು ಸೇರಿಸಿಕೊಂಡಿರುವುದು ನಿಜವಾಗಿಯೂ ತಪ್ಪು. ಏಕೆಂದರೆ ಇಲ್ಲಿ ನಾಯಕನಹಟ್ಟಿಯವರು ಮತ್ತೊಮ್ಮೆ ತಾವು ಬೇಡಕುಲದ ನಾಯಕರೆಂದು ತೋರಿಸಿ ಕೊಳ್ಳುವುದಕ್ಕೆ ಬಳಸಿಕೊಂಡಿರಬೇಕೆಂದು ವ್ಯಕ್ತವಾಗುತ್ತದೆ.

ನಾಯಕನಹಟ್ಟಿ ವಂಶಾವಳಿಯಲ್ಲಿ ಬರುವ ಹೊಟ್ಟಳ ನಾಯಕ ನಿಡಗಲ್ಲು ನಾಯಕರಲ್ಲಿ ಒಬ್ಬನಾಗಿದ್ದಾನೆ. ಇವರಿಬ್ಬರ ಮಧ್ಯೆ ಕಂಪಳ ಮತ್ತು ೧೨ ಪೆಟ್ಟಿಗೆ ದೇವರುಗಳ ಒಡೆತನಕ್ಕೋಸ್ಕರ ನಡೆದ ಯುದ್ಧವು ಅಸ್ಪಷ್ಟವಾಗಿದೆ. ಈ ಯುದ್ಧ ಬೇಡಕುಲದ

ಪವಿತ್ರ ವಸ್ತುಗಳಾದ ಕಂಪಳ ಮತ್ತು ಪೆಟ್ಟಿಗೆ ದೇವರುಗಳ ಪ್ರಾಮುಖ್ಯತೆ ಯನ್ನು ತೋರಿಸುತ್ತದೆ. ಈ ಘಟನೆ ಬೇಡನಾಯಕರ ಭಿನ್ನ ಗೋತ್ರಕ್ಕೆ ಸೇರಿದ ಒಂದೇ ಜಾತಿಯವರ ನಡುವಿನ ರಾಜಕೀಯ ವೈರತ್ವವನ್ನು ದಂತಕತೆಯೊಂದರ ಮುಖಾಂತರ ವಿವರಿಸಲು ಪ್ರಯತ್ನಿಸಿರುವುದನ್ನು ಅರ್ಥಮಾಡಿಕೊಳ್ಳಬಹುದು. ಪವಿತ್ರವಸ್ತುಗಳೊಂದಿಗೆ ನಾಯಕನಹಟ್ಟಿಗೆ ವಲಸೆ, ಗಿಡ್ಡೆರಲ ನಾಯಕನು ಕಂಪಳ ಮತ್ತು ಪೆಟ್ಟಿಗೆ ದೇವರುಗಳಿಗೆ ಮುತ್ತಿನ ಕಾಲುವೆಂಡೆ ಒಪ್ಪಿಸಿದ್ದು ನಾಯಕನಹಟ್ಟಿಯವರ ರಾಜಕೀಯ ನೈಪುಣ್ಯತೆಯನ್ನು ತೋರಿಸುತ್ತದೆ. ಇದರ ಮುಖಾಂತರ ಅವರು ಮ್ಯಾಸಬೇಡರ ಜೊತೆಗಿನ ಸಂಬಂಧವನ್ನೇ ಅಲ್ಲದೆ ತಮ್ಮ ಗೌರವ ವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಪ್ರಯತ್ನಿಸಿರುವುದು ಕಂಡುಬರುತ್ತದೆ.

ಗಿಡ್ಡೆರನಾಯಕನ ಮಗನಾದ ಬೋದಿಮಲ್ಲಪನಾಯಕ ಮತ್ತು ಅವನ ಕಾಲದ ನಂತರ ನಾಯಕನಹಟ್ಟಿ ವಂಶಾವಳಿಯಲ್ಲಿ ಬರುವ ಘಟನೆಗಳು ಹೆಚ್ಚು ಐತಿಹಾಸಿಕತೆಯಿಂದ ಕೂಡಿವೆ. ಬೋದಿಮಲ್ಲಪ್ಪನಾಯಕ ಚಿತ್ರದುರ್ಗದ ಚಿಕ್ಕಣನಾಯಕನ (೧೬೭೫-೧೬೮೬) ಸಹೋದರಿಯಾದ ಗಿರಿಜಮ್ಮನಾಗತಿ ಯನ್ನು ವಿವಾಹವಾಗಿದ್ದು ಅವನ ಕಾಲವನ್ನು ನಿರ್ಧರಿಸಲು ಸಹಾಯವಾಗಿದೆ. ಇವರ ವಂಶಾವಳಿಯಲ್ಲಿ ಬರುವ ಹೆಸರುಗಳನ್ನು ಪರಿಶೀಲಿಸಿದಾಗ, ಸಂತತಿಯ ಸ್ಥಾಪಕ ಕಾಟೆಮಲ್ಲನಾಯಕ ಇವನ ನಂತರ ಕ್ರಮವಾಗಿ ಸೂರೆದೆವಿನ ಪಾಪನಾಯ್ಕ, ಕಾಕಳನಾಯ್ಕ, ದೊಡ್ಡೆರಪನಾಯಕ, ಗಿಡ್ಡೆರ್ರಲನಾಯಕ, ಬೋದಿಮಲ್ಲಪ್ಪನಾಯಕ ನಾಯಕನಹಟ್ಟಿಯಲ್ಲಿ ಆಳ್ವಿಕೆ ಮಾಡಿದ್ದಾರೆ. ಇವರುಗಳಲ್ಲಿ "ಮಲ್ಲ" ಎಂಬ ಹೆಸರನ್ನು ಉಪಯೋಗಿಸಿಕೊಂಡಿರುವವನು ಈ ಸಂತತಿಯ ಸ್ಥಾಪಕ ಕಾಟೆಮಲ್ಲನಾಯ್ಕ ಇವನ ನಂತರ ಬೋದಿ ಮಲ್ಲಪ್ಪನಾಯ್ಕನವರೆವಿಗೂ ಯಾರೂ ಕೂಡಾ ಈ ಪದವನ್ನು ಬಳಸಿಕೊಂಡಿಲ್ಲದಿರುವುದನ್ನು ಇವರ ಇತಿಹಾಸದಲ್ಲಿ ಕಾಣುತ್ತೇವೆ. ಆದುದರಿಂದ ಮಲ್ಲಯ್ಯನ ದಂತ ಕಥೆಯೊಂದರಿಂದ ಆರಂಭ ವಾಗಿರುವ ಈ ನಾಯಕನಹಟ್ಟಿ ವಂಶಾವಳಿಯು ಪ್ರಾಯಶಃ ಬೋದಿಮಲ್ಲಪ್ಪನಾಯ್ಕನ ಕಾಲದಲ್ಲಿ ರಚಿತವಾಗಿರುವುದನ್ನು ಪರೋಕ್ಷವಾಗಿ ತಿಳಿಸುತ್ತದೆ.

ಕೊನೆಯದಾಗಿ ಹೇಳುವುದಾದರೆ, ನಾಯಕನಹಟ್ಟಿ ವಂಶಾವಳಿಯಲ್ಲಿ ಬರುವ ಈ ಸಂತತಿಯ ಸ್ಥಾಪಕನ ದಂತಕಥೆಯು ತಾವು ಬೇಡಕುಲದ ನ್ಯಾಯಸಮ್ಮತವಾದ, ಧರ್ಮ ಸಮ್ಮತವಾದ ಮುಖ್ಯಸ್ಥರೆಂದು ಮತ್ತು ಇನ್ನಿತರೇ ಬೇಡನಾಯಕರಿಗಿಂತ ತಾವೇ ಸರ್ವಶ್ರೇಷ್ಠರೆಂದೂ ತೋರಿಸಿಕೊಳ್ಳುವ ಪ್ರಧಾನೋದ್ದೇಶವನ್ನು ಹೊಂದಿರುವಂತೆ ತೋರುತ್ತದೆ. ಬೇಡಕುಲದ ಅನೇಕ ಸಂಕೇತಗಳು, ಸಂಪ್ರಾದಾಯಗಳು - ಕಂಪಳ ೧೨ ಪೆಟ್ಟಿಗೆ ದೇವರೆಂದು ಆರಾಧಿಸುವ ಬೇಡನಾಯಕರು, ಮತ್ತು ಸೂರ್ಯ ದೇವರ ದಂತಕತೆ - ಇವುಗಳನ್ನು ಬಳಸಿಕೊಂಡು ಸಮಗ್ರವಾಗಿ ಅವರ ವಂಶಾವಳಿಯಲ್ಲಿ ತುರುಕಿ ಬೇಡಕುಲದ ತಮ್ಮ ಅಂತಸ್ತು ಗೌರವಗಳನ್ನು ಹೆಚ್ಚಿಸಿಕೊಂಡು, ಹಾಗೂ ಭದ್ರವಾಗಿ ಅವುಗಳನ್ನು ಸ್ಥಾಪಿಸುವ ಪ್ರಯತ್ನವಾಗಿ**ದೆ**

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಪ್ರಭಾಕರ್ ಎಂ. ಎನ್. (ಸಂ) - 'ನಾಯಕನಹಟ್ಟಿ ಬಖೈರು' - **ಚಂದ್ರವಳ್ಳಿ**, ಪು. ೨೬-೩೬- ಚಿತ್ರದುರ್ಗ

೨. ಆದೇ ಪು- ೨೬

೩. ಪೆಟ್ಟಿಗೆ ದೇವರುಗಳ ಬಗ್ಗೆ ಕೃಷ್ಣಮೂರ್ತಿ ಹನೂರುರವರ **ಮ್ಯಾಸಬೇಡರಸಂಸ್ಕೃತಿ** ನೋಡಿ ಪು. ೧೧೮ - ೧೩೩.

೪. ಯೋಗಿಶ್ವರಪ್ಪ ಡಿ.ಎನ್., 'ನಾಯಕನಹಟ್ಟಿ ಪಾಳೆಗಾರರ ರಾಜಗುರುಗಳು', **ಸಿದ್ಧರಾಮಸಂಪದ** - ಪು. ೧೩೫ ಯಲಬುರ್ಗ - ೧೯೯೫

೫. ಟಿ. ಗಿರಿಜಾ., **ಚಿತ್ರದುರ್ಗ ಜಿಲ್ಲಾದರ್ಶಿನಿ**, ಪು. - ೧೬೭ - ೧೭೦

೬. ಪ್ರಭಾಕರ್ ಎಂ. ಎನ್., (ಸಂ) - **ನಾಯಕನಹಟ್ಟಬಖೈರು**, ಪು. ೨೯

೭. ಕೃಷ್ಣಮೂರ್ತಿಹನೂರು., **ಮ್ಯಾಸಬೇಡರಸಂಸ್ಕೃತಿ**, - ಪು. ೫೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳುರು, ೧೯೯೩.

ಡಾ|| ಕೆ. ಜಿ. ವಸಂತಮಾಧವ*

ಕೊಲತ್ತೇರಿ ಅರಸರು - ಕರ್ನಾಟಕ - ತುಳು ಅರಸು ಮನೆತನಗಳ ಐತಿಹಾಸಿಕ ಸಂಬಂಧ : ಕ್ರಿ. ಶ. ೬೦೧-೧೭೬೩ ವರೆಗೆ - ಒಂದು ವಿಶ್ಲೇಷಣೆ

ಕಣ್ಣಾನೂರು ಜಿಲ್ಲೆಯ ಏಳಿಮಲೆ, ಚಿರಕಲ್ ವಳಪಟ್ಟಣ ಕೊಟ್ಟೆಲೂರು ಕೇಂದ್ರಗಳನ್ನಾಗಿ ಆಳಿದ್ದ ಕೊಲತ್ತೇರಿ ಅರಸುಮನೆತನದವರ[೧] ಮತ್ತು ಕರ್ನಾಟಕ - ತುಳು ಅರಸು ಮನೆತನಗಳ ಐತಿಹಾಸಿಕ ಸಂಬಂಧದ ವಿಶ್ಲೇಷಣೆ ಮಾಡುವ ಯತ್ನ ಈ ಪ್ರಬಂಧದ[೨] ಉದ್ದೇಶ. ಈ ದಿಸೆಯಲ್ಲಿ ೧೨ನೇ ಶತಮಾನದ ಅಂತ್ಯದಲ್ಲಿ ಅತ್ಯುಲನಿಂದ ರಚಿತವಾದ ಸಂಸ್ಕೃತ ಕಾವ್ಯ *ಮೂಸಿಕವಂಶ, ಕೇರಳಮಹಾತ್ಮ್ಯಂ, ಕೇರಳೋತ್ಪತ್ತಿ, ಶಿವತತ್ವ ರತ್ನಾಕರ,* ಕೆಳದಿ ನೃಪವಿಜಯ, ಇತ್ತೀಚೆಗೆ ಬಂಗಾಡಿ ಅರಮನೆಯಲ್ಲಿ ಸಿಕ್ಕಿದ ಕೆಲವು ಐತಿಹಾಸಿಕ ದಾಖಲೆಗಳು, ಮಂಜೇಶ್ವರ ದೇವಾಲಯದಲ್ಲಿನ ಕೆಲವು ಕಡತಗಳು ಮಲೆಯಾಳ ಪಾಟುಗಳು ಮತ್ತು ವಿದೇಶಿ ದಾಖಲೆಗಳು ನೆರವಾಗುತ್ತವೆ.

ಕೊಲತ್ತೇರಿ ಅರಸುಮನೆತನ

ಈ ಅರಸುಮನೆತನದವರು ಕ್ರಿ.ಶ. ೯ನೇ ಶತಮಾನದಿಂದ ಏಳಿಮಲೆಯನ್ನು ಕೇಂದ್ರವನ್ನಾಗಿ ಮಾಡಿಕೊಂಡಿದ್ದರೆಂಬ ಸಂಗತಿಯು 'ಮೂಸಿಕವಂಶ'ವೆಂಬ ಕಾವ್ಯದಿಂದ ತಿಳಿದು ಬರುತ್ತದೆ.[೩] ಹದಿಮೂರನೇ ಶತಮಾನದಲ್ಲಿ ಈ ಅರಸು ಮನೆತನದವರು ಸ್ವತಂತ್ರವಾಗಿ ಆಳಿಕೊಂಡಿದ್ದರೆಂದೂ ಮತ್ತು ತಮ್ಮ ರಾಜ್ಯದ ರೇವುಗಳಿಂದ ಕರಿಮೆಣಸು ಶುಂಠಿಗಳನ್ನು ಸಾಗರೋತ್ತರ ಪ್ರದೇಶಗಳಿಗೂ ಮತ್ತು ಕರ್ನಾಟಕದ ರೇವುಗಳಾದ ಮಂಗಳಾಪುರ ವಲಕೂರು (ಬಾರಕೂರು) ವಸುಪುರ (ಬಸ್ರೂರು) ಮತ್ತು ಪೊನ್ನಾವರಂ (ಹೊನ್ನಾವರ)ಗಳಲ್ಲಿ ರಫ್ತು ಮತ್ತು ಆಮದಿನ ವ್ಯಾಪಾರ ರಭಸದಿಂದ ನಡೆಯುತ್ತಿದ್ದುದ್ದನ್ನು ಪ್ರವಾಸಿ ಮಾರ್ಕೊ ಪೊಲೊ ತನ್ನ ವರದಿಯಲ್ಲಿ ಹೇಳಿದ್ದಾನೆ.[೪] ಇದನ್ನು ಹದಿನಾಲ್ಕನೇ ಶತಮಾನದ ಮಧ್ಯಾವಧಿಯಲ್ಲಿ ಬಂದ ಪ್ರವಾಸಿ ಇಬ್ಬನ್‌ಬತುಟಾ ಸಮರ್ಥಿಸಿದ್ದಾನೆ. ಈ ರಾಜವಂಶಸ್ಥರು ತಮ್ಮ ಉಚ್ಛ್ರಾಯದ ಅವಧಿಯಲ್ಲಿ ನೇತ್ರಾವತಿ ನದಿಯ ದಕ್ಷಿಣಕ್ಕೆ ತಮ್ಮ ರಾಜಕೀಯ ವರ್ಚಸ್ಸನ್ನು ಹೊಂದಿದ್ದರು.[೫] ತುಳು ಅರಸುಮನೆತನಗಳಾದ ಕುಂಬಳ, ಅಜಿಲ, ಚೌಟ, ಬಂಗ ಮತ್ತು ಕಾಸರಗೋಡು ಬಲ್ಲಾಳರೊಂದಿಗೆ ರಾಜಕೀಯ ಸಂಬಂಧಗಳನ್ನು ಇಟ್ಟುಕೊಂಡಿದ್ದರು.

ಕೊಲತ್ತೇರಿ - ಕರ್ನಾಟಕ - ಮೂಸಿಕವಂಶ ಕಾವ್ಯದಿಂದ: (೧೪ ಶತಮಾನ) ಮೂಸಿಕ ವಂಶಕಾವ್ಯದಲ್ಲಿ ಈ ಅರಸರುಗಳ ಮತ್ತು ಕರ್ನಾಟಕ ಅರಸುಗಳ ರಾಜಕೀಯ ಸಂಬಂಧಗಳು ಅಲ್ಲಲ್ಲಿ ಉಲ್ಲೇಖವಾಗಿವೆ. ಕಾವ್ಯ ಈ ಮನೆತನದವರನ್ನು ಮೂಸಿಕ ವಂಶಸ್ಥರೆಂದು ತಿಳಿಸಿ ಇವರ ರಾಜಕೀಯ ನೆಲೆ ಏಳಿಮಲೆಯಾಗಿತ್ತೆಂದು ಹೇಳಿದೆ. ಇವರು ಕಾಸರಗೋಡಿನವರೆಗೆ (ಈ ನಗರ ಹೊರತು ಪಡಿಸಿ) ಆಳಿದ್ದರೆಂಬ ಪ್ರತೀತಿಯನ್ನು ಈ ಕಾವ್ಯವು ಸಮರ್ಥಿಸುತ್ತದೆ. ಈ ಅರಸು ಮನೆತನದವರು ಚಾಲುಕ್ಯರೊಡನೆ ಹೋರಾಡಿ ಸೋತು ಹೋದರೆಂಬುದನ್ನು ಮಹಾಕೂಟದ ಸ್ತಂಭ ಶಾಸನವು[೬] ಉಲ್ಲೇಖಿಸಿದ್ದನ್ನು ಗಮನಿಸುವ ಅವಶ್ಯಕತೆ ಇದೆ. ಮೂಸಿಕವಂಶದ ಅರಸ ಛೆಧಿ ರಾಜನ ಮಗಳನ್ನು ಮದುವೆಯಾಗಿದ್ದನು. ಈ ಅರಸನ ಹೆಸರು ಈಶಾನವರ್ಮ. ತನ್ನ ಮಾವ ಛೆಧಿ ರಾಜ ಚಾಲುಕ್ಯರೊಡನೆ ಘರ್ಷಣೆಗೆ ಬಂದು ತನ್ನ ರಾಜ್ಯವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾಗ ಈಶಾನ ವರ್ಮ ಚಾಲುಕ್ಯರೊಡನೆ ಹೋರಾಡಿ ವಿಜಯ ಪಡೆದು ತನ್ನ ಮಾವನ ರಾಜ್ಯವನ್ನು ಉಳಿಸಿದನೆಂದು ಮೂಸಿಕ ವಂಶ ಕಾವ್ಯವೂ ತಿಳಿಸುತ್ತದೆ.[೭] ಇದು ಪ್ರಶ್ನಿಸುವಂತಾದ್ದೆ. ಈ ವಂಶದ ಇನ್ನೊಬ್ಬ ಅರಸ ವಲಿಧರನು ಘಟ್ಟದಿಂದ ಕೆಳಗೆ ಇಳಿದುಬಂದ ಗಂಗರಾಜನನ್ನು ಬಿರುಗಾಳಿಯಲ್ಲಿ ಸಿಕ್ಕಿದ ಹತ್ತಿಯಂತೆ ಓಡಿಸಿದನೆಂದು ಇದೇ ಕಾವ್ಯವು ತಿಳಿಸುತ್ತದೆ.[೮] ಈ ಘಟನೆ ಕ್ರಿ.ಶ.೯೪೯ರಲ್ಲಿ ನಡೆಯಿತೆಂದೂ ಸೋತ ಗಂಗರಸ ನೊಳಂಬಾಂತಕ ಎರಡನೇ ಮಾರಸಿಂಹನೆಂದು ಇತಿಹಾಸಕಾರ ಗೋವಿಂದನ್ ವಾರಿಯರ್

* ಆರಾಧನಾ ಪಾವಂಜೆ, ಹಳೆಯಂಗಡಿ, ದಕ್ಷಿಣ ಕನ್ನಡ.

ಅಭಿಪ್ರಾಯ ಪಟ್ಟಿದ್ದಾರೆ.[೯] ಈ ಮೂಷಿಕ ಅರಸರು ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನ ಸೈನ್ಯವನ್ನು ಎದುರಿಸಿದ್ದನ್ನು ಈ ಕಾವ್ಯ ಅಪರೋಕ್ಷವಾಗಿ ತಿಳಿಸುತ್ತದೆ. ಮೂಷಿಕವಂಶ ಕಾವ್ಯದಲ್ಲಿ ತಿಳಿಸಿದ ಕರ್ನಾಟಕ ಅರಸರ ರಾಜಕೀಯ ಸಂಬಂಧದ ಸಂಗತಿಗಳನ್ನು ಇತ್ತೀಚೆಗೆ ಸಿಕ್ಕಿದ ದಾಖಲೆಗಳ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಶ್ನಿಸುವಂತಾದ್ದಾದರೂ ಈ ಅರಸುಮನೆತನದವರು ಚಾಲುಕ್ಯ, ಗಂಗವಾಡಿಯ ಗಂಗರು ಮತ್ತು ಬನವಾಸಿಯ ರಾಜಕೀಯ ಶಕ್ತಿಗಳೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕವನ್ನು ಇಟ್ಟುಕೊಂಡಿದ್ದರೆಂದೂ ಸಾಮಾನ್ಯವಾಗಿ ಅಭಿಪ್ರಾಯಪಡಬಹುದು. ಇಷ್ಟಲ್ಲದೆ ಈ ರಾಜ್ಯದ ರೇವುಗಳಾದ ಬಲಿಯಪಟ್ಟಣ ಮತ್ತು ಮಡಾಯಿಗಳೊಂದಿಗೆ ಕರ್ನಾಟಕದ ರೇವುಗಳಾದ ಮಂಗಳೂರು, ಬಾರಕೂರು ಬಸ್ರೂರು ಭಟ್ಕಳ ಹೊನ್ನಾವರದೊಂದಿಗೆ ಸಾಗರೋತ್ತರ ವಾಣಿಜ್ಯ ಸಂಪರ್ಕ ಹೊಂದಿತ್ತು. ಈ ಸಾಗರೋತ್ತರ ವ್ಯಾಪಾರವು ಮರಕಾಲ ಜಾತಿಯವರ[೧೦] ವಶವಿದ್ದದ್ದನ್ನು ಈ ಕಾವ್ಯದ ಅಧ್ಯಯನದಿಂದ ತಿಳಿದು ಬರುವ ಇನ್ನೊಂದು ಅಂಶ.

ಕೊಲತ್ತೇರಿ ಅರಸುಗಳು - ಕರ್ನಾಟಕ ಮತ್ತು ತುಳು ಅರಸರು - (೧೪ನೇ ಶತಮಾನದ ನಂತರ)

ಕ್ರಿ.ಶ. ೧೪ನೇ ಶತಮಾನದ ನಂತರ ಈ ಮೂಷಿಕ ಅರಸುಮನೆತನದವರು ವಳಪಟ್ಟಣವನ್ನು ಕೇಂದ್ರವನ್ನಾಗಿಯೂ, ಚಿರ್ಕಲ್ ಇವರ ಇನ್ನೊಂದು ವಂಶಸ್ಥರು ಕಣಾನೂರು ನೀಲೇಶ್ವರಗಳಲ್ಲಿ ಹದಿನೆಂಟನೇ ಶತಮಾನದ ಅಂತ್ಯದವರೆಗೆ ಆಳಿದರು. ಇವರು ಆಳುತ್ತಿದ್ದ ಪ್ರದೇಶ ಕೊಲತ್ತನಾಡು ಎಂದು ಮತ್ತು ಈ ಅರಸುಮನೆತನದವರನ್ನು ಕೊಲತ್ತನಾಡು ಅರಸರೆಂದು ಕೇರಳದ ಇತಿಹಾಸವು ತಿಳಿಸುತ್ತದೆ. ಇವರ ಆಡಳಿತ ಪ್ರದೇಶವು ಕಾಸರಗೋಡಿನ ದಕ್ಷಿಣಕ್ಕೆ ಕಣ್ಣಾನೂರಿನಿಂದ ಉತ್ತರಕ್ಕೆ ಇದ್ದಿತ್ತು.[೧೧] ಆದರೆ ಈ ಅರಸು ಮನೆತನದವರಲ್ಲಿ ಆಗಿಂದಾಗ್ಗೆ ಕಲಹಗಳು ನಡೆದು ಹಲವಾರು ಶಾಖೆಗಳಾಗಿ ಇವರು ಆಳಿಕೊಂಡಿದ್ದರು. ಇಷ್ಟಲ್ಲದೆ ಇವರ ರಾಜ್ಯದ ರಾಜಕೀಯ ಸ್ಥಿತಿ ಗೊಂದಲವಾಗಿತ್ತು. ಇವುಗಳೆಲ್ಲ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ್ದು, ಚಿರಕಲ್ ನೀಲೇಶ್ವರ ಮತ್ತು ಕಣ್ಣಾನೂರಿನಲ್ಲಿ ಆಲಿರಾಜ ವಂಶಸ್ಥರು ಈ ಕೊಲತ್ತೇರಿ ಅರಸರ ಕರ್ನಾಟಕ ಮತ್ತು ಇದರ ರಾಜಕೀಯ ಅಂಗವಾಗಿದ್ದ ತುಳುನಾಡಿನ ಐತಿಹಾಸಿಕ ಸಂಪರ್ಕ ಮತ್ತು ಸಂಬಂಧಗಳ ಬಗ್ಗೆ ಕೆಲವು ಐತಿಹ್ಯಗಳ ತಿಳಿಸಿವೆ. ಇವುಗಳಲ್ಲಿ ಗಮನಾರ್ಹವಾದದ್ದು ಕೇರಳೋತ್ಪತ್ತಿ.[೧೨] ಇದರಂತೆ ಈ ವಂಶದ ರಾಜ ಉದಯವರ್ಮನು ಬಡಗಾರದಿಂದ ಕರ್ನಾಟಕ ಕರಾವಳಿಯಲ್ಲಿರುವ ಗೋಕರ್ಣದವರೆಗೂ ಆಳಿದ್ದನು. ಇವರಲ್ಲಿ ಇನ್ನೊಬ್ಬ ಅರಸನು ಕೋಟೇಶ್ವರದಲ್ಲಿ ತುಲಾಭಾರ ನಡೆಸಿ ಈ ಪ್ರದೇಶಕ್ಕೆ ತುಳುನಾಡು ಆಗುವಂತೆ ಮಾಡಿದನು. ಈ ಕೊಲತ್ತೇರಿಯವರ ರಾಜ್ಯದ ದೇವಸ್ಥಾನ ಗೋಕರ್ಣ ಮಹಾಬಲೇಶ್ವರವಾಗಿತ್ತು. ಆದರೆ ಉತ್ತರದ ಆರ್ಯವಂಶದ ರಾಜರು ದಕ್ಷಿಣಕ್ಕೆ ಬಂದು ರಾಜ್ಯ ಸ್ಥಾಪಿಸಿದ ನಂತರ ಕೊಲತ್ತನಾಡಿನ ಅರಸರು ಗೋಕರ್ಣದಿಂದ ಪಯಸ್ವಿನಿ (ಚಂದ್ರಗಿರಿ) ವರೆಗಿನ ಪ್ರದೇಶವನ್ನು ಕಳೆದುಕೊಂಡರು.[೧೩] ಆದರೆ ಈ ಅಭಿಪ್ರಾಯಕ್ಕೆ ವಿರೋಧವಾಗಿ ಸಮಕಾಲೀನ ಐತಿಹಾಸಿಕ ದಾಖಲೆಗಳು, ಈ ಪ್ರದೇಶದಲ್ಲಿ ಆಳುಪ ವಂಶದವರು ಆಳಿಕೊಂಡಿದ್ದರೆಂದು ತಿಳಿಸುತ್ತವೆ. ಇದನ್ನು ಕಾಸರಗೋಡು ಪ್ರದೇಶದಲ್ಲೂ ಆಳುಪರ ಆಳ್ವಿಕೆ ಶಾ.ಶಕ ೧೨೪೩ರಲ್ಲಿದ್ದಿತ್ತೆಂದು ಇತ್ತೀಚೆಗೆ ಬೆಳಕಿಗೆ ಬಂದ ಕುಂಬಳೆಯ ಸಮೀಪದ ಹೇರೂರಿನಲ್ಲಿ ಸಿಕ್ಕಿದ ಶಾಸನವು ದೃಢೀಕರಿಸುತ್ತದೆ.[೧೪] ಕೊಲತ್ತೇರಿ ಅರಸರಿಗೆ ಕರ್ನಾಟಕ ಕರಾವಳಿಯೊಂದಿಗೆ ಏನಾದರೂ ಸಂಬಂಧವಿದ್ದರೆ ಅದು ಸಾಂಸ್ಕೃತಿಕವಾಗಿತ್ತು.

ವಿಜಯನಗರ ಅರಸರ ಆಳ್ವಿಕೆ ಕಾಲದಲ್ಲಿ ಕೊಲತ್ತೇರಿ ಅರಸರ ಹೆಚ್ಚಿನ ರಾಜಕೀಯ ಪ್ರಾಬಲ್ಯ ತಗ್ಗಿತ್ತು. ಕ್ರಿ.ಶ.೧೫೯೧ರಲ್ಲಿ ಈ ಅರಸರು ವಿಜಯನಗರದೊಂದಿಗೆ ಆಶ್ರಿತ ಅಧೀನರ ಸಂಬಂಧವನ್ನು ಇಟ್ಟುಕೊಂಡಿದ್ದರೆಂದು ಫೆರಿಷ್ಟನ ಇತಿಹಾಸದ ಅಧ್ಯಯನದಿಂದ ತಿಳಿದು ಬರುತ್ತದೆ.[೧೫] ಚಂದ್ರಗಿರಿ ನದಿಯವರೆಗಿನ ಪ್ರದೇಶದಲ್ಲಿ ವಿಜಯನಗರದ ರಾಜಕೀಯ ಪ್ರಭಾವವಿದ್ದಿತ್ತೆಂದು ಈ ಪ್ರದೇಶದ ಅರಾವಾರು, ವಿಟ್ಲ, ದೇಲಂಪಾಡಿ, ಮುಳಿಂಜ, ಸಿರಿಯಾಗಳಲ್ಲಿ ಸಿಕ್ಕಿದ ಶಾಸನಗಳು ಸೂಚಿಸುತ್ತವೆ.[೧೬] ಆದರೆ ಕೊಲತ್ತೇರಿ ಅರಸುಮನೆತನದವರು ಚಂದ್ರಗಿರಿಯ ದಕ್ಷಿಣಕ್ಕೆ ಇರುವ ಪಡುವನ್ನಾಡು ಅಲವತ್ತುನಾಡು ತ್ಯಾಕಟ್ಟು ನಿಲೇಶ್ವರಗಳಲ್ಲಿ ಪ್ರತ್ಯಕ್ಷ ಆಡಳಿತ ನಡೆಸುತ್ತಿದ್ದರು. ಇದರೊಂದಿಗೆ ತಮ್ಮ ರಾಜ್ಯದ ರೇವುಗಳಾದ ನೀಲೇಶ್ವರ ಚಿರವತ್ತೂರು, ಬಲಿಯಪಟ್ಟಣ ಮತ್ತು ಕಣ್ಣಾನೂರುಗಳ ಮುಖಾಂತರ ವಿಜಯನಗರ ಸಾಮ್ರಾಟರೊಂದಿಗೆ ವ್ಯಾಪಾರ ಸಂಪರ್ಕವನ್ನು ಇಟ್ಟುಕೊಂಡಿದ್ದರೆಂದು ವಿದೇಶಿ ಪ್ರವಾಸಿಗರ ವರದಿಗಳಿಂದ ತಿಳಿದು ಬರುತ್ತದೆ.[೧೭] ಇದಕ್ಕೆ ಇದಕ್ಕೆ ಮುಖ್ಯ ಕಾರಣ ಕೊಲತ್ತೇರಿ ರಾಜ್ಯದಲ್ಲಿ ಯಾವಾಗಲೂ ಆಹಾರದ ಕೊರತೆ ಇದ್ದಿತ್ತು. ಇದನ್ನು ಚೀನಿ ದಾಖಲೆಗಳು ತಿಳಿಸುತ್ತವೆ. ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಕೊಲತ್ತೇರಿ ಅರಸರು ತಮ್ಮ ರಾಜ್ಯದ ಉತ್ತರ ಗಡಿಯಲ್ಲಿದ್ದ ರೇವುಗಳಾದ ಬೇಲಕ ಮತ್ತು ಕಾಞಂಗಾಡು(ಹೊಸದುರ್ಗ) ಗಳನ್ನು ವಿಜಯನಗರ ಅರಸರಿಗೆ ಒಪ್ಪಿಸಬೇಕಾಯಿತ್ತೆಂದು ಮಲೆಯಾಳಂ ದಾಖಲೆಯನ್ನು ಆಧರಿಸಿ ಡಿ. ಬಾಲಕೃಷ್ಣನ್ ನಾಯರ್ ತಿಳಿಸಿದ್ದಾರೆ. ಇಷ್ಟಲ್ಲದೇ ಕಾಞಂಗಾಂಡಿನ ವಿಶೇಷ ರೇವು ಸೌಲಭ್ಯದ ಬಗ್ಗೆ ವಿಜಯನಗರದ

ಅರಸ ಕೃಷ್ಣದೇವರಾಯನು ಕೊಲತ್ತೇರಿ ಅರಸನಿಂದ ಈ ರೇವನ್ನು ರಾಜ ನೈತಿಕ ಉಪಾಯಗಳ ಮೂಲಕ ವಶಪಡಿಸಿ ಕೊಂಡನು.[೧೮] ಆದರೆ ಇದನ್ನು ಇತ್ತೀಚೆಗೆ ಲಭ್ಯವಿದ್ದ ಯಾವ ಸಮಕಾಲೀನ ದಾಖಲೆಗಳೂ ಸಮರ್ಥಿಸುವುದಿಲ್ಲ. ಕೃಷ್ಣದೇವ ರಾಯನ ಪ್ರತ್ಯಕ್ಷ ಆಡಳಿತ ಕುಂಬಳ, ಕಾಸರಗೋಡಿಗಿಂತ ದಕ್ಷಿಣಕ್ಕೆ ಹೋಗಲಿಲ್ಲ. ವಿಜಯನಗರ ಸಾಮ್ರಾಜ್ಯ ಮತ್ತು ಕೊಲತ್ತೇರಿ ರಾಜ್ಯಗಳೊಳಗೆ(ಮಲಬಾರ)ಗಳೊಳಗೆ ಆರ್ಥಿಕ ಮತ್ತು ಸಾಂಸ್ಕೃತಿಕ ನಿಕಟ ಸಂಪರ್ಕವಂತು ಇದ್ದೇ ಇತ್ತು. ಇದನ್ನು ಸಮಕಾಲೀನ ದಾಖಲೆಗಳ ಅಧ್ಯಯನವು ದೃಢೀಕರಿಸುತ್ತದೆ.

ಕೃಷ್ಣದೇವರಾಯನ ನಂತರ ಮಲೆಯಾಳಿ ಅರಸರು (ಕೊಲತ್ತೇರಿ) ತುಳು ಅರಸುಗಳೊಂದಿಗೆ ಕೂಡಿ ಹೊರಟು ವಿಜಯನಗರ ಸಾಮ್ರಾಜ್ಯಕ್ಕೆ ಎದುರಾದದೆಂದೂ, ಇದನ್ನು ನಿಗ್ರಹಿಸಲು ವಿಜಯನಗರದ ಸರ್ವಾಧಿಕಾರಿಯಾದ ರಾಮ ರಾಜನು ಕೆಳದಿ ಸದಾಶಿವನಾಯಕನ ನೇತೃತ್ವದಲ್ಲಿ ಒಂದು ಸೈನ್ಯ ತುಕ್ಕಡಿಯನ್ನು ಕಳುಹಿಸಿ ಮತ್ತಿತರ ತುಳು ಕೇರಳ[೧೯] ಅರಸರನ್ನು ಸೋಲಿಸಿ ಅಲ್ಲಿ ವಿಜಯಸ್ತಂಭ ರಚಿಸಿ ಮತ್ತು ಅವರಿಂದ ಹಣವನ್ನು ಕಪ್ಪವನ್ನು ಪಡೆದು ಬಂದನೆಂದೂ ಕೆಳದಿಬಸವರಾಜ ರಚಿಸಿದ ಶಿವತತ್ವ ರತ್ನಾಕರದಲ್ಲಿ[೨೦] ಹೇಳಿದೆ. ಒಂದು ಶತಮಾನದ ನಂತರ ಲಿಂಗಣ್ಣ ಕವಿಯಿಂದ ರಚಿತವಾದ ಕೆಳದಿನೃಪವಿಜಯದಂತೆ ಕೃಷ್ಣದೇವ ರಾಯನ ಅಪ್ಪಣೆ ಪಡೆದು ಕೆಳದಿ ಸದಾಶಿವನಾಯಕನು ಘಟ್ಟವನ್ನು ಇಳಿದು ಪರಶುರಾಮಕ್ಷೇತ್ರಕ್ಕೆ ಬಂದು, ಇಲ್ಲಿರುವ ಕಂಬವನ್ನು ನಿಲ್ಲಿಸಿ ಮೆರೆದ.[೨೧] ಈ ಆಕರಗಳಿಂದ ತಿಳಿದು ಬರುವ ಮುಖ್ಯಸಂಗತಿಯೇನೆಂದರೆ ಕರ್ನಾಟಕದ ಘಟ್ಟದ ಮೇಲಿನ ರಾಜಕೀಯ ಶಕ್ತಿಯು ಕೊಲತ್ತೇರಿ ರಾಜ್ಯದ ಗಡಿಯವರೆಗೆ ಪ್ರಭಾವವನ್ನು ವರ್ಧಿಸಲು ಆರಂಭ ಮಾಡಿತು. ಇದರಿಂದಾಗಿ ತುಳು - ಮತ್ತು ಕೊಲತ್ತೇರಿ ಅರಸರೊಡನೆ ರಾಜಕೀಯ ಸಾಮಿಪ್ಯಕ್ಕೆ ಬರಲು ಕಾರಣವಾಯಿತು. ಈ ಆಕ್ರಮಣದಿಂದಾಗಿ ಕೊಲತ್ತೇರಿ ಅರಸರು ಚಂದ್ರಗಿರಿ ನದಿಯ ಉತ್ತರಕ್ಕೆ ಹೊಂದಿದ್ದ ರಾಜಕೀಯ ವರ್ಚಸ್ಸು ಇಳಿಮುಖಗೊಳ್ಳಲಾರಂಭಿಸಿತು. ಆದರೆ ಚಂದ್ರಗಿರಿಯ ದಕ್ಷಿಣಕ್ಕಿರುವ ಪ್ರದೇಶ ಈ ಅರಸುಮನೆತನದವರ ವಶದಲ್ಲಿತ್ತು.

ಹದಿನೇಳನೇ ಶತಮಾನದ ಆರಂಭದಿಂದ ಹದಿನೆಂಟನೇ ಶತಮಾನದ ಮಧ್ಯಾವಧಿಯವರೆಗೆ ಕೊಲತ್ತೇರಿ ಅರಸರು ಆಗಿಂದಾಗ್ಗೆ ಕೆಳದಿ ಅರಸರಿಂದ ಆಕ್ರಮಣವನ್ನು ಎದುರಿಸಬೇಕಾಗಿ ಬಂತು. ಇದನ್ನು ನಿವಾರಿಸಲು ತುಳು ಅರಸರು ಮತ್ತು ಪಾಶ್ಚಿಮಾತ್ಯ ವ್ಯಾಪಾರ ಶಕ್ತಿಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡರೆಂದು ಸಮಕಾಲೀನ ದಾಖಲೆಗಳು ತಿಳಿಸುತ್ತವೆ.[೨೧ಅ] ಕೆಳದಿನಾಯಕರಾದ ವೆಂಕಟಪ್ಪ, ಒಂದನೇ ಶಿವಪ್ಪ ನಾಯಕ* ಇಮ್ಮಡಿ ಸೋಮಶೇಖರರ ಆಳ್ವಿಕೆಯ ಕಾಲದಲ್ಲಿ ಕೊಲತ್ತೇರಿ ಮತ್ತು ಕರ್ನಾಟಕ ರಾಜ್ಯಶಕ್ತಿ ಒಂದು ಸಂದಿಗ್ಧ ಸ್ಥಿತಿಗೆ ಬಂತು. ಕೆಳದಿ ನೃಪವಿಜಯದಂತೆ ವೆಂಕಟಪ್ಪ ನಾಯಕನು ತುಳು ಅರಸರಾದ ಬಂಗ, ಚೌಟ ಅಜಿಲ ಕುಂಬಳೆ ಸಾಮಂತ ಮತ್ತು ಇನ್ನಿತರ ಬಳ್ಳಾಳರನ್ನು ಸೋಲಿಸಿ ಬಗ್ಗು ಬಡಿದು ಕಾಸರಗೋಡಿನವರೆಗೆ ದಿಗ್ವಿಜಯ ನಡೆಸಿ ಕೊಲತ್ತೇರಿ ಅರಸರೊಡನೆ ಘರ್ಷಣೆಗೆ ಬಂದನು. ಈ ಅರಸ ರಾಜಕೀಯ ಪ್ರಾಬಲ್ಯ ತಗ್ಗಿಸುವ ಇರಾದೆಯಿಂದ ಕುಂಬಳೆ, ಕಾಸರಗೋಡು ಚಂದ್ರಗಿರಿ, ಬಂದ್ಯಡಕ ಕಾಂತಮಂಗಲ ಕುದಂಕುಳಿ, ಪಣೆಯಾಲ ಗಳಲ್ಲಿ ಕೋಟೆಯನ್ನು ಕಟ್ಟಿಸಿದನು! ಇದರಿಂದಾಗಿ ಕೆಳದಿ ರಾಜ್ಯದ ವಿಸ್ತಾರ ಕಾಸರಗೋಡು - ಮಲಬಾರದ ಗಡಿಯವರೆಗೆ ವಿಸ್ತಾರವಾಯಿತು. ಇದನ್ನು ಪ್ರತಿಭಟಿಸಲು ಪೋರ್ಚುಗೀಸರು ಒಂದು ಒಕ್ಕೂಟವನ್ನು[೨೨] ಸ್ಥಾಪಿಸಿದರು. ಇದರಲ್ಲಿ ಬಂಗರಾಜ, ಕಾರ್ನಾಡ ರಾಣಿ ಮತ್ತು ಪರ್ವತ (ಇಳಿಮನೆಯ ಕೊಲತ್ತೇರಿ ಅರಸರು) ರಾಜರು ಒಳಗೊಂಡಿದ್ದರು. ಆದರೆ ಈ ಒಕ್ಕೂಟವನ್ನು ಕೆಳದಿ ವೆಂಕಟಪ್ಪನಾಯಕನು ಛಿದ್ರಗೊಳಿಸಿ ಈ ಒಕ್ಕೂಟಕ್ಕೆ ಹಿಂದಿನಿಂದ ಪ್ರತ್ಯಕ್ಷ ಸಹಾಯ ಮಾಡುತ್ತಿದ್ದ ಪೋರ್ಚುಗೀಸರನ್ನು ಹೀನಾಯವಾಗಿ ಮಂಗಳೂರಿನಲ್ಲಿ ಸೋಲಿಸಿದನೆಂದು ಸಮ ಕಾಲೀನ ಪೋರ್ಚುಗೀಸ ದಾಖಲೆಗಳು ಮತ್ತು ಪೋರ್ಚುಗೀಸ ಇತಿಹಾಸಕಾರ ಅಂತೋನಿಯೊಬೊಕೆರೋನ ಬರಹಗಳು ತಿಳಿಸುತ್ತವೆ.[೨೪] ಸೋತ ಬಂಗರಾಜನು ಕಣ್ಣಾನೂರಿನಲ್ಲಿ ಆಳುತ್ತಿದ್ದ ಕೊಲತ್ತೇರಿ ವಂಶದ ಅರಸನ ಸಹಾಯ ಕೇಳಲು ಕಾಸರಗೋಡಿಗೆ ಓಡಿಹೋದನು. ಅಲ್ಲಿ ಕಣ್ಣಾನೂರಿನ ಅರಸನ ಸಹಾಯ ಪಡೆಯಲು ಯತ್ನಿಸಿ ವಿಫಲನಾದನೆಂದು ಪೋರ್ಚುಗೀಸ ದಾಖಲೆಗಳು ತಿಳಿಸುತ್ತವೆ.[೨೫] ಮತ್ತು ಕೆಳದಿ ವೆಂಕಟಪ್ಪನಾಯಕನ ದಿಗ್ವಿಜಯ ಕಾಸರಗೋಡು ದಾಟಿ ಮುಂದೆ ಹೋಗಲಿಲ್ಲ ಎಂದು ತಿಳಿಸುತ್ತವೆ. ಇಷ್ಟಲ್ಲದೆ ಕಾಸರಗೋಡು ಕೆಳದಿ ರಾಜ್ಯಕ್ಕೆ ಸೇರಿಲ್ಲವೆಂದು ಕ್ರಿ.ಶ.೧೬೨೩ರಲ್ಲಿ ಬಂದ ಪ್ರವಾಸಿ ದೆಲ್ಲಾವೆಲ್ಲಿಯ

---

* ಕ್ರಿ. ಶ. ೧೬೭೯-೩೦ರ ಸುಮಾರಿನಲ್ಲಿ ಕೆಳದಿ ವೀರಭದ್ರ ನಾಯಕನ ಕಾಲದಲ್ಲಿ (ಕೊಲತ್ತೇರಿ ಹಾಗು ಕೋಲರಿತ್ತಿ ಒಂದೇ ಎಂದಾದರೆ), ಯುದ್ಧ ಘಟನೆಯ ಕಾಲ ಒಂದೇ ಆಗಿರುವಂತೆ ತೋರುವ ಕಾರಣ ಕೋಲರಿತ್ತಿಯರು ಕೊಡಗಿನ ರಾಜ ಅಪ್ಪಾಜಿ ರಾಜನೊಂದಿಗೆ ಸೇರಿ ಕೆಳದಿಯವರೊಡನೆ ಯುದ್ಧ ಸಾರಿದಾಗ ಕೆಳದಿ ಸೈನ್ಯ ನೀಲೇಶ್ವರ ಮತ್ತು ಕಣ್ಣಾನೂರನ್ನ ವಶಪಡಿಸಿಕೊಂಡಿತು (ನೋಡಿ ಕೆಳದಿ ಗುಂಡಾ ಜೋಯಿಸ್ ಲೇಖನ-ಸತ್ಯಶುದ್ಧ ಕಾಯಕ, ಸಂ ೧, ಸಂ ೧, ೧೯೯೦, ಪು. ೪೬). ಮಲೆಯಾಳದ ರಾಜನ ಸಹಾಯಕ್ಕೆ ಹೋಗಿದ್ದ ಅಪ್ಪಾಜಿ ರಾಜ ಸೋತು ಹಿಂದಿರುಗಿದ. ಶಿವಪ್ಪನಾಯಕ ಕೊಡಗಿಗೆ ಬಂದು ಸುಲಿಗೆ ಮಾಡಿ ಸೆರೆಹಿಡಿದ. ಕೊನೆಗೆ ಅಪ್ಪಾಜಿರಾಜನ ಪತ್ನಿ ಶಿವಪ್ಪನಾಯಕನಲ್ಲಿ ಪ್ರಾರ್ಥಿಸಿದಾಗ ಅಪ್ಪಾಜಿರಾಜನನ್ನು ಬಿಡುಗಡೆ ಮಾಡಿದ (ಕೊಡಗಿನ ಇತಿಹಾಸ, ಪು.೮೨). ವಂಶಿಕನ ಸಂಬಂಧವೂ ಇಲ್ಲಿ ಹದನುಗೊಂಡ ಬಗೆ ಇದಾಗಿತ್ತು. ಈ ಅಂಶಗಳೂ ಸಹಾಯಕವೆಂದರೆ ಪರಿಶೀಲಿಸಬಹುದೆ? ಈ ಯುದ್ಧದ ಘಟನೆ ಅಪ್ಪಾಜಿ ರಾಜನ ಮಗ ಮುದ್ದರಾಜನ ಕಾಲದ್ದಲ್ಲ. (-ಸಂ).

ವರದಿಯಿಂದ ತಿಳಿದು ಬರುತ್ತದೆ.[೨೬] ಕೊಲತ್ತೇರಿ ಅರಸರು ತುಳು ರಾಜರೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇವರ ರಾಜಕೀಯ ಪ್ರಾಬಲ್ಯ ಚಂದ್ರಗಿರಿಯ ದಕ್ಷಿಣಕ್ಕೆ ಇನ್ನೂ ಇದ್ದಿತ್ತು.

ಕೆಳದಿ ವೀರಭದ್ರನ ಆಳ್ವಿಕೆಯ ಆರಂಭ ಕಾಲದಲ್ಲಿ ತುಳು ಅರಸರು ಕೆಳದಿ ಅರಸರ ವಿರುದ್ಧ ಬಂಡೆದ್ದರು. ಇದನ್ನು ಕ್ರಿ.ಶ.೧೬೩೦ರ ಪೋರ್ಚುಗೀಸ ದಾಖಲೆಯು ಸಮರ್ಥಿಸುತ್ತದೆ.[೨೭] ವೀರಭದ್ರನು ಈ ಬಂಡೆದ್ದ ತುಳುವರಸನನ್ನು ಸೋಲಿಸಿದನು. ಈ ಸಂದರ್ಭದಲ್ಲಿ ಕೊಲತ್ತೇರಿ ಅರಸ ಮಧ್ಯಸ್ತಿಕೆ ವಹಿಸಿ ಕೆಳದಿ ವೀರಭದ್ರನಾಯಕನಿಗೂ ಬಂಗರಾಣಿ ಶಾಂತ ದೇವಿಗೂ ಒಂದು ಒಪ್ಪಂದವನ್ನು ಮಾಡಿಸಿದನು. ಇದು ಕ್ರಿ.ಶ.೧೬೪೩ರಲ್ಲಿ ನಡೆಯಿತು.[೨೮] ಈ ಒಪ್ಪಂದದಲ್ಲಿ ಗಮನಾರ್ಹ ವಿಷಯವಾಗಿ "ಮಳೆಯಾಳದವರಿಂದ ಏನಾದರೂ ಕುರುಹು (ಕುಹಕ)ಗಳು ಬಂದರೂ ನಮ್ಮ ಅರಮನೆಯ ಮುದ್ರೆ ಯೊಳಗಾಗಿ ಇದ್ದು ನಿಮ್ಮ ಆದ್ಯಂತ ಮಂದಿಯ ಕೂಡಿಕೊಂಡು ಅವರಿಗೆ ಬುದ್ಧಿ ಹೇಳಿ ಅರಮನೆ ಕಾರ್ಯದ ಒಳಗೆ ಹಿತ ವಿಶ್ವಾಸಿಗಳು ಬಂತ ಅರಮನೆಗೆ ಬಪ್ಪದು ಬಿರದು" ಎಂಬುದಿದೆ. ಆದರೆ ಈ ಕರಾರಿನ ಕೊನೆಯ ಅಂಶ ಸರಿಯಾಗಿ ಪಾಲಿಸಲಿಲ್ಲ ವೆಂದು ಮುಂದೆ ನಡೆದ ಘಟನೆಗಳು ದೃಢೀಕರಿಸುತ್ತವೆ. ಇಷ್ಟಲ್ಲದೆ ಕೊಲತ ಅರಸು ಮನೆತನದವರು ಪೋರ್ಚುಗೀಸರೊಡನೆ ಕೆಳದಿ ನಾಯಕರ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸುತ್ತಲೇ ಇದ್ದರು. ಇದ್ದರಿಂದಾಗಿ ಕೆಳದಿ ಶಿವಪ್ಪ ನಾಯಕನು ಮಂಗಳೂರು ರಾಜ್ಯದಲ್ಲಿರುವ ತುಳು ಪಾಳೆಯಗಾರರನ್ನು ಬಗ್ಗಿಸಿ ಕೊಲತ್ತ ರಸರನ್ನು ಸೋಲಿಸಿ ಅವರ ರಾಜ್ಯದಲ್ಲಿರುವ ಆಯಕಟ್ಟಿನ ಸ್ಥಳಗಳಾದ ಕಟ್ಟೆರೇಲೂರು, ಚಿತ್ತಾರಿ ಬೇಕಲ ನಿಲೇಶ್ವರಗಳನ್ನು ವಶಪಡಿಸಿಕೊಂಡು ಚಂದ್ರಗಿರಿ ಚಿತ್ತಾರಿ ಮತ್ತು ಬೇಕಲಗಳನ್ನು ಬಲುಗೈಯಿಸಿದನು.[೨೯] ಒಟ್ಟಿನಲ್ಲಿ ಈ ಪ್ರದೇಶದಲ್ಲಿ ಹಿಂದೆ ಇದ್ದ ಕೋಟೆಗಳು ಕೆಳದಿನಾಯಕರ ಜಲಕೋಟೆಯ ರೀತಿಯಲ್ಲಿ ನಿರ್ಮಾಣವಾಯಿತ್ತೆಂದು ಅಭಿಪ್ರಾಯಪಡಬಹುದು. ಇಲ್ಲಿರುವ ತುಳು ಬಂಟರು ಬಿಲ್ಲವರು ಮಲೆಯಾಳಿ ನಾಯರು ಮತ್ತು ತೀಯರು - ಇವರಿಗೆಲ್ಲ ಕೊಲತ್ತ ಅರಸರೊಂದಿಗೆ ನಿಕಟ ಸಂಪರ್ಕ ಇದ್ದುದರಿಂದ ಇವರನ್ನು ಶಿವಪ್ಪನಾಯಕನು ನಂಬದೆ ಉತ್ತರ ಕರ್ನಾಟಕದ ರಾಮರಾಜ ಕ್ಷತ್ರಿಯರೆಂಬವರನ್ನು ಇಲ್ಲಿಗೆ ಕರೆತಂದು ಅವರನ್ನು ಕೋಟೆಕಾಯಲು ನೇಮಿಸಿದನೆಂದು ಸ್ಥಳೀಯ ಜಾನಪದದಲ್ಲಿ ಹೇಳಿದೆ.[೩೦]

ನಂತರ ಕೊಲತ್ತ ಅರಸರು ಕುಂಬಳೆಯರಸರೊಡನೆ ಕೂಡಿಕೊಂಡು ಕುಹಕ ಕುಯುಕ್ತಿಯಿಂದ ಕೆಳದಿ ನಾಯಕರ ವಿರುದ್ಧ ವರ್ತಿಸುವುದನ್ನು ತಿಳಿದು ಇಮ್ಮಡಿ ಸೋಮಶೇಖರ ನಾಯಕನು ಇವರ ಪ್ರಯತ್ನವನ್ನು ಭಂಗಪಡಿಸಿ ಕುಂಬಳೆ ಅರಸನನ್ನು ದುರ್ಗದಲ್ಲಿ ಅಂಕೆಯಲ್ಲಿಟ್ಟನು.[೩೧] ಇಷ್ಟಲ್ಲದೆ ೧೭೩೭ರಲ್ಲಿ ಕಾಞಂಗಾಡಿನಲ್ಲಿ 'ಹೊಸದುರ್ಗ' ಎಂಬ ಕೋಟೆಯನ್ನು ಕಟ್ಟಿಸಿದನು. ಮಲೆಯಾಳಿ ಜಾನಪದಗಳಲ್ಲಿ[೩೨] ಮಲೆಯಾಳಿಗಳು ಈ ಕೋಟೆಗಳನ್ನು ಗೆಲ್ಲುವ ಸಾಹಸ ಮಾಡಿ ಸೋತರೆಂದು ತಿಳಿಸುವುದಿದೆ.

ಒಟ್ಟಿನಲ್ಲಿ ಕೆಳದಿ ನಾಯಕರ ಆಳ್ವಿಕೆಯ ಅಂತ್ಯದಲ್ಲಿ ಕೊಲತ್ತರಸರು ಮಾಡಾಯಿವರೆಗಿನ ಪ್ರದೇಶವನ್ನು ಕಳೆದು ಕೊಂಡರೆಂದು ಇಂಗ್ಲೀಷ್ ದಾಖಲೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ಇಂಗ್ಲೀಷರು ಮತ್ತು ಫ್ರೆಂಚರು ಒಂದು ಏಳಿಮಲೆ ಮಾಡಾಯಿ ಮುಂತಾದ ಸ್ಥಳಗಳನ್ನು ತಮ್ಮ ಸ್ವಾಧೀನ ಮಾಡಿಕೊಂಡರು. ಕೆಳದಿನಾಯಕರು ೧೭೩೭ರ ಬಲಿಯ ಪಟ್ಟಣದ ಹೊಳೆಯವರೆಗಿನ ಪ್ರದೇಶವನ್ನು ಹಿಡಿದರು.

ಉಪಸಂಹಾರ

ಕೊಲತ್ತೇರಿ ಅರಸರ ರಾಜಕೀಯ ಶಕ್ತಿಯ ಪ್ರಾಬಲ್ಯ ಕಾಸರಗೋಡು ದಕ್ಷಿಣಕ್ಕೆ ಸೀಮಿತವಾಗಿತ್ತು. ಆದರೂ ಈ ಅರಸು ಮನೆತನದವರು ತುಳುವ ಅರಸರೊಂದಿಗೆ ಒಂದು ರೀತಿಯ ರಾಜಕೀಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಈ ಸಂಬಂಧ ವನ್ನು ಕೊಲತ್ತೇರಿಯವರು ವಿಸ್ತಾರವಾಗುತ್ತಿದ್ದ ಕರ್ನಾಟಕದ ರಾಜಕೀಯ ಶಕ್ತಿಯನ್ನು ಎದುರಿಸಲು ಉಪಯೋಗಿಸಿ ಕೊಳ್ಳುತ್ತಿದ್ದರು.

ಕೊಲತ್ತೇರಿ ಮತ್ತು ಕರ್ನಾಟಕದ ಅರಸುಗಳ ಐತಿಹಾಸಿಕ ಸಂಬಂಧಗಳು ಘರ್ಷಣೀಯವಾಗಿದ್ದವು. ಇದರ ಪರಿಣಾಮವಾಗಿ ಕೊಲತ್ತೇರಿಯವರು ತಮ್ಮ ರಾಜಕೀಯ ವರ್ಚಸ್ಸನ್ನು ಕಳೆದುಕೊಂಡದ್ದಲ್ಲದೇ ಇವರ ರಾಜ್ಯದ ಭಾಗವಾಗಿದ್ದ ಕಾಸರಗೋಡು - ಮಾಡಾಯಿಯವರೆಗಿನ ಪ್ರದೇಶವನ್ನು ಕಳೆದುಕೊಂಡರು. ಆದರೆ ಸಾಂಸ್ಕೃತಿಕವಾಗಿ ಕೊಲತ್ತೇರಿಯವರು ಮಂಗಳೂರಿನ ದಕ್ಷಿಣಕ್ಕೆ ಇರುವ ಕರ್ನಾಟಕ ಸಂಸ್ಕೃತಿಗೆ ಒಂದು ಸಂದಿಗ್ಧ ಸ್ಥಿತಿಯನ್ನು ತಂದರು. ಇದರಿಂದಾಗಿ ಮಲೆಯಾಳ ಸಂಸ್ಕೃತಿ ತುಳು ಸಂಸ್ಕೃತಿಯೊಂದಿಗೆ ಹೊಂದಿಕೊಂಡು ಮಂಗಳೂರಿನ ದಕ್ಷಿಣಕ್ಕೆ ಪ್ರವರ್ಧಿಸಿದುದು ಮರೆಯಲಾದ ಐತಿಹಾಸಿಕ ಸತ್ಯ. ಒಟ್ಟಿನಲ್ಲಿ ಕರ್ನಾಟಕದ ರಾಜಕೀಯ ಶಕ್ತಿಯು ಮಲಬಾರಿನಲ್ಲಿ ವಿಸ್ತಾರವಾದರೂ, ಸಾಂಸ್ಕೃತಿಕ ದೃಷ್ಟಿಯಲ್ಲಿ ಇವರ ಪ್ರಾಬಲ್ಯ ಕುಂದುತ್ತಾ ಬಂದಿತು. ಇದು ಕರ್ನಾಟಕ ಮತ್ತು ಕೊಲತ್ತೇರಿ ಅರಸರ ಸಂಪರ್ಕದ ಪರಿಣಾಮ

(ಈ ವಿಷಯ ಬರೆಯಲು ಪ್ರೋತ್ಸಾಹಿಸಿದ ಡಾ॥ ಕೆ. ಕೆ. ಎನ್. ಕುರುಪ್, ಉಪಕುಲಪತಿ ಕಲ್ಲಿಕೋಟೆ ವಿಶ್ವವಿದ್ಯಾಲಯ ಮತ್ತು ವಿಷಯ ಸಂಗ್ರಹಿಸಲು ಆರ್ಥಿಕ ಸಹಾಯವನ್ನು ನೀಡಿದ ಭಾರತೀಯ ಇತಿಹಾಸ ಸಂಶೋಧನೆ ಸಂಸ್ಥೆ, ನವದೆಹಲಿ - ಇವರಿಗೂ ಈ ಲೇಖಕರು ಕೃತಜ್ಞತೆಯನ್ನು ಅರ್ಪಿಸಿರುತ್ತಾರೆ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಕೊಲತ್ತೇರಿ ರಾಜ್ಯದ ಇತಿಹಾಸವನ್ನು ಕೇರಳದ ಇತಿಹಾಸಗಾರರು ಸವಿವರವಾಗಿ ವರ್ಣಿಸಿದ್ದಾರೆ. ನೋಡಿ A.Sridhara Menon, *A survey of Kerala History* 1967 kottayam, PP 166-68; K.K.N. kurup: *History of the Tillicherry Factory* (1985, p 12. 13 78 99. 124, 221. kunjan pillay, *studies in Kerala history,* Logan: *Malabar* (AES+9 Madras 1989) 282-400.

*೨. ೧೯೨೩ರಲ್ಲಿ ಗಣಪತಿ ರಾವು ಐಗಳರು ಕೊಲತ್ತೇರಿ ಮತ್ತು ತುಳು ಅರಸರ ರಾಜಕೀಯ ಸಂಬಂಧವನ್ನು ವಿಶ್ಲೇಷಿಸಿದ್ದಾರೆ. ನೋಡಿ ಐಗಳ - **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ** (ಮಂಗಳೂರು ೧೯೨೩) ಪು ೩೭೪ - ೩೮೧. ಆದರೆ ಇತ್ತೀಚೆಗೆ ಸಿಕ್ಕಿದ ಕೆಲವು ಇತಿಹಾಸ ದಾಖಲೆಗಳಾದ ಪೋರ್ಚುಗೀಸ ಬರಹಗಳು, ಮಲೆಯಾಳಿ ಜಾನಪದ ಮತ್ತು ಮಂಜೇಶ್ವರ ಮತ್ತು ಬಂಗಾಡಿ ಅರಮನೆಯ ದಾಖಲೆಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ತಿರುಗಿ ವಿಶ್ಲೇಷಿಸುವ ಅಗತ್ಯವಿದೆ.

*೩. Dr. Unni: *A History of Musika Vamsa,* Trivandrum 1980, Chapter 4, pp. 89-127. ಈ ಅರಸುಮನೆತನ ಕ್ರಿ.ಶ.೭ನೆ ಶತಮಾನದಲ್ಲಿದ್ದಿತ್ತೆಂದು ಕೇರಳದ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

*೪. *The Travels of Marco Polo* (The Marsden), P 298

*೫. i. A Sridhara Menon, opp-cit., PP - 168 - 169
ii. K.K.N. Kurup: opp. cit., PP-12-13

*೬. Sanskrit and Prakrit Inscription, 5th Indian Antiquary VIX 10-19, ಆದರೆ ಇವರು ಕೇರಳದವರಲ್ಲವೆದೂ ವಾದಿಸುವರಿದ್ದಾರೆ. ಏಕೆಂದರೆ ಈ ಶಾಸನವು ಕೇರಳ ಮತ್ತು ಮೂಸಿಕ ಪ್ರತ್ಯೇಕವೆಂದು ಹೇಳಿದೆ.

*೭. **ಮೂಸಿಕ ವಂಶ** [(ಸಂ.) ಉನ್ನಿ], ಪು೧೩೩ - ೨೩೫

*೮. ಅದೇ ಕಾವ್ಯ, ಪು ೧೩೭ - ೧೩೩

*೯. *Bulletin of Ramo Vasman Research Institute,* Trivandrun Vol VIII, ಪುಟ. B.15

*೧೦. ಉನ್ನಿ, ಅದೇ ಗ್ರಂಥ ೨೦೫. ಈ ವಿಚಾರವನ್ನು ಡಾ॥ ನಾರಾಯಣ ಪಿಳ್ಳೆ. ಅವರು ತಾವು ಸಂಪಾದಿಸಿದ ಉನ್ನಿಯ ಚರಿತ್ರೆಯಲ್ಲಿ ವಿವರವಾಗಿ ಚರ್ಚಿಸಿದ್ದಾರೆ

*೧೧. i. K.N. kurup : opp.cit., p - 13; Sridhara Menon : opp.cit., p - 16
ii. K.V.Krishna Iyer: *A Short of History of Kerala* (Ernakalam 1966 pp - 66 - 67) **ಕೊಲತ್ತನಾಡಿನ ರಾಜಕೀಯ ಸ್ಥಿತಿ** ನೋಡಿ ಎಸ್. ಎಸ್. ಸೇನ್. *Haidar Ali* (Calcutta 1969), pp. ೧೪೬-೭.

*೧೨. ಇದು ಮುಸ್ಲಿಂ ರಾಜಕೀಯ ವಂಶ. ಇದು ಹತ್ತೊಂಬತ್ತನೆ ಶತಮಾನದಲ್ಲಿ ಕೇರಳದ ನಂಬೂದರಿಗಳು ರಚಿಸಿದ ಗ್ರಂಥ. ಇದರಲ್ಲಿ ತಿಳಿಸುವ ಹೆಚ್ಚಿನ ಐತಿಹಾಸಿಕ ಸಂಗತಿಗಳು ಕಾಲ್ಪನಿಕವಾಗಿದ್ದು ಇತಿಹಾಸದ ಘಟನೆಗೆ ವಿರುದ್ದವಾಗಿದೆ. ಹೆಚ್ಚಿನ ವಿವರಗಳಿಗೆ ನೋಡಿ.
i. W. V. Saletoor : *History and Architecture,* Madras
ii. District Gazetteer (Madras 1938), p. 169
iii. Ramesh K.V. : *A History of South Kanara,* P 7.

*೧೩. Shungoony Menon, : *A History of Travancore* (Reprint 1984), P. 18; **ಐಗಳ ದಕ್ಷಿಣ ಜಿಲ್ಲೆಯ ಪ್ರಾಚೀನ ಇತಿಹಾಸ**, ಪು. ೩೭೫ ಕೇಶವ ಕೃಷ್ಣಕುಡವ: **ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ**, ಸಂ. ೧, ಪು. ೩೭೫.

*೧೪. ಈ ಶಾಸನವು ಆಳುಪರರಸ ೨ನೇ ಕುಲಶೇಖರನ ಆಳ್ವಿಕೆ ಕಾಲದ್ದು. ಇದರ ಕೂಲಂಕಷ ಆಧ್ಯಯನವು ನಡೆಯುತ್ತಾ ಇದೆ. ಇದನ್ನು ಪತ್ತೆ ಹಚ್ಚಿದವರು ವೆಂಕಟರಾಜ ಪುಣಿಂಚತ್ತಾಯರು. ನೋಡಿ ಸೂಕ್ಷ್ಮ ವಿವರಗಳಿಗೆ ಉದಯವಾಣಿ (ಮಣಿಪಾಲ ತಾ- ೮-೩-೯೯) ಈ ಶಾಸನದಲ್ಲಿ ಗಮನಾರ್ಹ ಸಂಗತಿಯೇನೆಂದರೆ ಮಂಜೇಶ್ವರ ಅರಮನೆಯ ಉಲ್ಲೇಖವಿದೆ.

*೧೫. *The Rise of Mohamamadan power in India* (Tn Brigg) II ಪು. ೩೩೭ - ೩೮

*೧೬. ಉಪ್ಪಂಗಳರಾಮಭಟ್ಟ: **ಗಡಿನಾಡು** (ಕಾಸರಗೋಡು), ೧೯೫೪, ಪು. ೧೪೩ - ೪

*೧೭. *Tomopires. Suma runl'al Ed cirlisao R 362.* The Book of Duart Barbosa (Tr Dames) Vol I. pp. 192 ಹೆಚ್ಚಿನ ವಿವರಗಳಿಗೆ ನೋಡಿ Geniveve Bonchon: *"Sixteenth century malabar and the Indian ocean", India and Indian ocean 1500* - 1800 (Oxford 1987) p. 166-167.

*೧೮. ಶಿವಾನಂದ ಬೇಕಲ್: **ಬೇಕಲಕೋಟೆ ಒಂದು ಚಾರಿತ್ರಿಕ ಅಧ್ಯಯನ** (ಕಾಸರಗೋಡು ೧೯೯೯) ಪು. ೬೧

*೧೯. ಇದು ಕೊಲತ್ತೇರಿ ಅರಸರೇ ಆಗೀರಬೇಕು. ಏಕೆಂದರೆ ಇವರ ರಾಜ್ಯಕ್ಕೂ ಮತ್ತು ತುಳು ಅರಸುಗಳಿಗೂ ಸಾಮಾನ್ಯ ಗಡಿ ಇದ್ದು ಒಂದು ರೀತಿಯ ನಿಕಟ ಸಂಪಕವಿದ್ದಿತ್ತು.

*೨೦. ಶ್ರೀಮತಿ ರಾಧಾ ಕೃಷ್ಣಮೂರ್ತಿ *Shivatatva Ratnakara* A cultural study (keladi 1995), ಪು ೧೦೫.

*೨೧. **ಕೆಳದಿನೃಪವಿಜಯ** (ಸಂ ಆರ್.ಶ್ಯಾಮಶಾಸ್ತ್ರಿ, ಮೈಸೂರು ೧೯೭೩ರ ಮುದ್ರಣ) ದ್ವಿತೀಯಾಶ್ವಾಸಂ ಪದ್ಯ ೪೧, ಪು. ೩೭. ಈ ಕಾವ್ಯದಲ್ಲಿ ಕೃಷ್ಣ ದೇವರಾಯನೆ ಅಪ್ಪಣೆ ಪಡೆದು ಸದಾಶಿವರಾಯನು ಗಂಡೆತ್ತಿ ಬಂದನೆಂದು ಹೇಳಿದ್ದು ಐತಿಹಾಸಿಕ ದೃಷ್ಟಿಯಿಂದ ಸರಿಯಾಗುವುದಿಲ್ಲ.

*೨೧ಎ. ಈ ವಿಚಾರವನ್ನು Alia Sequaria ಮತ್ತು ಕೆ. ಕೆ. ಎಸ್. ಕುರುಪ್, ಸವಿಸ್ತಾರವಾಗಿ ಚರ್ಚಿಸಿದ್ದಾರೆ. ನೋಡಿ: *The Political History of East India Company Factory at Tillicheshy* (MA There Bombay university 194) kurup K.K.N: *History of Tellichesly Factory*, PP. 78, 99 124 - 221

*೨೨. ಕೆನೃವಿ ಪು. ೭೧ ರೈಸ್- ಮೈಸೂರು

*೨೩. ಪೋರ್ಚುಗೀಸ ದಾಖಲೆಯನ್ನು ಅಧ್ಯಯನಿಸಿದ ಫಾದರ ಹೆರಾಸ್ ಅವರು ಈ ಅರಸು ಕನ್ನಣ್ಣೂರಿನ ಸಮೀಪ ಏಳಿಮಲೆ ರಾಜನಾಗಿರಬೇಕು ಎಂದಿದ್ದಾರೆ. ಈ ಅರಸರಿಗೆ ಬಂಗರಾಜ ಮತ್ತು ಪೋರ್ಚುಗೀಸರೊಡನೆ ಸಾಗರೋತ್ತರ ಸಂಪರ್ಕವಿದ್ದಿತ್ತು ಎಂದು ದಾಖಲೆಗಳು ತಿಳಿಸುವುದರಿಂದ ಡಾ|| ಬಿ. ಎಸ್. ಶಾಸ್ತ್ರಿಯವರು ತಿಳಿಸಿದಂತೆ ಈ ಅರಸರು ಕಳಸ ಕಾರ್ಕಳ ರಾಜರಾಗಿರಲಿಕ್ಕಿಲ್ಲ.

*೨೪. ಬಿ. ಎಸ್. ಶಾಸ್ತ್ರಿ : **ಕೆಳದಿ ಅರಸರು ಹಾಗೂ ಪೋರ್ಚುಗೀಸರು** (ಧಾರವಾಡ ೧೯೯೨), P. ೧೯.

*೨೫. ಕನ್ನಣ್ಣಾರಿನಲ್ಲಿ ಆಳುತ್ತಿದ್ದ ಕೊಲತ್ತೇರಿ ಅರಸುಮನೆತನದ ಸಂಬಂಧಿಕರು ಅಂತರಿಕ ತೊಂದರೆಗಳನ್ನು ನಿವಾರಿಸುವುದರಲ್ಲಿ ಮಗ್ನರಾಗಿದ್ದುದ್ದರಿಂದ ಬಂಗರಾಜನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲವೆಂದು ಈ ಅರಸ ಪೋರ್ಚುಗೀಸ ದೊರೆಗೆ ಪತ್ರ ಬರೆದಿದ್ದ. ನೋಡಿ ಪಿಸ್ಸುರ್‌ಲೆಂಕರ್ (Pissurlencar) *Assemtos* I ಪು ೧೫, ೧೬ - ೧೮, ೧೯ ಶಾಸ್ತ್ರಿ, ಅದೇ ಗ್ರಂಥ ಪು ೨೦.

*೨೬. *The Travels of pietro Dello Velle in India,* Vol p. 344 - 45

*೨೭. *Indian Historical Record Commission,* XI 1928 p. 111

*೨೮. ಈ ದಾಖಲೆ ಬಂಗಾಡಿ ಅರಮನೆಯಲ್ಲಿದ್ದುದನ್ನು ಗಣಪತಿರಾವ್ ಐಗಳು ಸಂಶೋಧಿಸಿ ತಮ್ಮ ಗ್ರಂಥ **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ** (೧೯೨೩) ದಲ್ಲಿ ತಿಳಿಸಿದ್ದಾರೆ. ಪು ವ್ಯ. ೪೩೬ - ೪೩೮.

*೨೯. ಕೆನೃವಿ, ಸಪ್ತಮಾಶ್ವಂ ಪದ್ಯ ೨ ಪು ೯೬

*೩೦. ನೋಡಿ **ಐಗಳ ಇತಿಹಾಸ**, ಪು. ೩೭೮

*೩೧. ಕೆನೃವಿ, ದಶಮಾಶ್ವಂ ಪದ್ಯ ೪೩. ಪು ೧೬೩
ಮಲೆಯಾಳಿ ತಚೋಳಿ ಪಾಠದಲ್ಲಿ ತುಳು ನಾಡಿನ ಕೋಟೆಗಳ ಅಭೇಧ್ಯತೆಯ ವಿಚಾರ ತಿಳಿಸುತ್ತದೆ ಇದರಂತೆ "ಮಾವ ಕುಂಞಮ್ಮ ತುಳುನಾಡ ಕೋಟ್ಟೊಡು ತೋಟು ಪ್ಪೋಯಿ ತುಳುನಾಡಿನ ಕೋಟೋಡು ಜಯಿಚ್ಚೊರಾರುಂ ಈ ಲೋಕತ್ರೆಂಜಮೆ ಇಲ್ಲಿ ಪುತ್ರಾ - ನೋಡಿ ವೆಂಕಟರಾಜ ಪುಣಿಂಚತ್ತಾಯ **ತುಳುನಡೆನುಡಿ**, ಪು ೪೦ ಕೊಲತ್ತೇರಿಯ ಸೈನಿಕರು ತುಳುನಾಡಿನ ಕೋಟೆಗಳನ್ನು ಹಿಡಿಯಲು ಪ್ರಯತ್ನಿಸಿ ವಿಫಲವಾದುದನ್ನು ಕೆಳದಿ ನೃಪವಿಜಯಂ ಕಾವ್ಯದಲ್ಲೂ ಮತ್ತು ಪೋರ್ಚುಗೀಸ ದಾಖಲೆಗಳಲ್ಲೂ ಇವೆ. ನೋಡಿ **ಕೆಳದಿ ನೃಪವಿಜಯ**, P. ೧೫೧ ೧೮೦ ಪದ್ಯ ಸಂಖ್ಯೆ ೩೧ ೩೨ Livr o Correspondence Canara in the year 1753 p. 98 - 99. 107. ಶಾಸ್ತ್ರಿ ಬಿ. ಎಸ್., ಅದೇ ಗ್ರಂಥ ಪು ೧೭೩. ೧೭೭.

ಡಾ॥ ಎಂ. ವೈ. ಸಾವಂತ*

ಉತ್ತರ ಕರ್ನಾಟಕದಲ್ಲಿ ಟಿಪ್ಪುಸುಲ್ತಾನನ ಆಳ್ವಿಕೆ ಹಾಗೂ ಅವನ ಕೊಡುಗೆ

ಭವ್ಯ ಇತಿಹಾಸ ಹಾಗೂ ಉಜ್ವಲ ಸಾಂಸ್ಕೃತಿಕ ಪರಂಪರೆ ವುಳ್ಳ ಉತ್ತರ ಕರ್ನಾಟಕದಲ್ಲಿ ಅನೇಕ ರಾಜಮಹಾರಾಜರು ಆಳಿ ಇತಿಹಾಸದ ಪುಟಗಳಲ್ಲಿ ಸೇರಿಹೋದರು. ಅಂಥವರಲ್ಲಿ ಹೈದರ ಆಲಿ ಹಾಗೂ ಅವನ ಮಗ ಟಿಪ್ಪುಸುಲ್ತಾನ ಇವರ ಪಾತ್ರ ವಿಶಿಷ್ಟವಾದುದು ಮರಾಠರೊಡನೆ, ಬ್ರಿಟಿಷ್‌ರೊಡನೆ ಮತ್ತು ಹೈದರಾಬಾದಿನ ನಿಜಾಮರೊಡನೆ, ಹೋರಾಡಿ ದಕ್ಷಿಣ ಭಾರತ ದಲ್ಲಿ ಒಂದು ಸಣ್ಣ ಸಾಮ್ರಾಜ್ಯವನ್ನು ನಿರ್ಮಿಸಿ ಚಾರಿತ್ರಿಕ ಖ್ಯಾತಿಯನ್ನು ಪಡೆದರು. ಕರ್ನಾಟಕ ಇತಿಹಾಸದಲ್ಲಿ ಟಿಪ್ಪು ಸುಲ್ತಾನನ ಸ್ಥಾನ ಹಿರಿದಾದುದು. ತನ್ನ ತಂದೆಯ ಉತ್ತರಾಧಿ ಕಾರಿಯಾಗಿ ಮೈಸೂರು ಸಂಸ್ಥಾನದ ಸರ್ವಾಧಿಕಾರತ್ವವನ್ನು ವಹಿಸಿಕೊಂಡನು. 'ಮೈಸೂರಿನ ಹುಲಿ' ಎಂದು ಚರಿತ್ರೆಕಾರರಿಂದ ಬಣ್ಣಿಸಲ್ಪಟ್ಟ ಆತನು ಶೂರನೂ ಮಹಾತ್ವಾಕಾಂಕ್ಷಿಯೂ ಆಗಿದ್ದನು. ಇವನಲ್ಲಿ ದೇಶಾಭಿಮಾನ ಮತ್ತು ಸ್ವಾಭಿಮಾನಗಳು ಮನೆ ಮಾಡಿದ್ದವು. ಅವನು ಸ್ವಾತಂತ್ರ್ಯ ವೃಕ್ಷವನ್ನು ತನ್ನ ರಾಜಧಾನಿಯಲ್ಲಿ ನೆಟ್ಟಿದ್ದನಲ್ಲದೆ ಫ್ರಾನ್ಸದೇಶದ 'ಜೆಕೊಬಿನ್ ಕ್ಲಬ್' ನ ಸದಸ್ಯ ನಾಗಿದ್ದನು. "ಹೈದರಾಲಿ ಸಾಮ್ರಾಜ್ಯವನ್ನು ನಿರ್ಮಿಸಲು ಜನಿಸಿದನು. ಟಿಪ್ಪು ಅದನ್ನು ನಿರ್ನಾಮ ಮಾಡಲು ಹುಟ್ಟಿದನು" ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ. ಆದರೆ ಮಹತ್ವಾಕಾಂಕ್ಷೆಯಿಂದ ಕೂಡಿದ ಇವನು ತಂದೆಯ ನೀತಿಗಳನ್ನು ಮುಂದುವರಿಸಿದನಾದರೂ ಪರಿಸ್ಥಿತಿ ಅವನಿಗೆ ಪ್ರತಿಕೂಲ ವಾಯಿತು. ಆದರೂ ತನ್ನ ಧ್ಯೇಯ ಸಾಧನೆಗಾಗಿ ಹಗಲಿರುಳು ಶ್ರಮಿಸಿ ಬ್ರಿಟಿಷರನ್ನು ಭಾರತದಿಂದ ಓಡಿಸಬೇಕೆಂಬ ದೃಢಸಂಕಲ್ಪ ಮಾಡಿ ಹುಲಿಯಂತೆ ಬಾಳಿ ಹುಲಿಯಂತೆಯೇ ಮಡಿದನು.

ಟಿಪ್ಪುವು ಮೈಸೂರು ರಾಜ್ಯವನ್ನು ವಿಸ್ತರಿಸಿದ. ಅದು ದಕ್ಷಿಣದ ದಿಂಡಿಗಲ್ಲಿನಿಂದ ಉತ್ತರದ ಧಾರವಾಡದವರೆಗೆ ಪಶ್ಚಿಮದ ಕೊಂಕಣ ಮತ್ತು ಕರಾವಳಿ ಜಿಲ್ಲೆಗಳಿಂದ ಪೂರ್ವದ ಬಳ್ಳಾರಿ ಮತ್ತು ಕರ್ನೂಲುಗಳ ಬಯಲಿನ ಪ್ರದೇಶದವರೆಗೂ ಹಬ್ಬಿತ್ತು. ಉತ್ತರ ಕರ್ನಾಟಕದ ಪ್ರಮುಖ ಆಯಕಟ್ಟಿನ ಕೋಟೆ - ಪ್ರದೇಶಗಳನ್ನು ಗೆಲ್ಲಲು ಮೇಲಿಂದ ಮೇಲೆ ದಂಡೆತ್ತಿ ಬಂದನು. ಕ್ರಿ.ಶ. ೧೭೮೪ ರಿಂದ ೧೭೯೮ರವರೆಗೆ ಹುಬ್ಬಳ್ಳಿ, ಧಾರವಾಡ (ಸದಾಶಿವಗಡ) ಕಾರವಾರ, ಕಿತ್ತೂರು ಹಾಗೂ ಬೆಳಗಾವಿ ಕೋಟೆಗಳನ್ನು ಗೆದ್ದು ಅಲ್ಲಿ ತನ್ನ ಅಧಿಕಾರಿಗಳನ್ನು ನೇಮಿಸಿ ಆಡಳಿತ ನಡೆಸಿದನು. ಉತ್ತರ ಕರ್ನಾಟಕದ ನವಾಬರು, ದೇಸಾಯರು, ಹಾಗೂ ಜಾಹಗೀರದಾರರು ಇವರಿಂದ ಕಪ್ಪಕಾಣಿಕೆಯನ್ನು ಪಡೆದು ಅವಶ್ಯವಿದ್ದಾಗ ಸೈನಿಕ ಸಹಾಯ ಪಡೆಯುತ್ತಿದ್ದನು. ಆದರೆ ಟಿಪ್ಪು ಬ್ರಿಟಿಷರೊಡನೆ ಹೋರಾಡುತ್ತಿರುವಾಗ ಉತ್ತರ ಕರ್ನಾಟಕದ ಕೆಲವು ಸಂಸ್ಥಾನಿಕರು ಪರಿಸ್ಥಿತಿಯ ಲಾಭ ಪಡೆದು ಸ್ವತಂತ್ರ ಆಗಲು ಪ್ರಯತ್ನಿಸಿದರು. ನರಗುಂದದ ದೇಸಾಯಿ ವೆಂಕಟರಾವ ಭಾವೆ ತಾನು ಸ್ವತಂತ್ರ ಎಂದು ಸಾರಿ ಕಪ್ಪಕಾಣಿಕೆಯನ್ನು ಸಲ್ಲಿಸುವದನ್ನು ನಿಲ್ಲಿಸಿದನು. ಇದರಿಂದ ಕುಪಿತಗೊಂಡ ಟಿಪ್ಪು ೧೭೮೫ರಲ್ಲಿ ನರಗುಂದವನ್ನು ಆಕ್ರಮಿಸಲು, ನರಗುಂದದ ದೇಸಾಯಿ ಮರಾಠರ ಆಶ್ರಯಪಡೆದನು. ಹೀಗಾಗಿ ೧೭೮೬ರಲ್ಲಿ ಮೈಸೂರು-ಮರಾಠ ಯುದ್ಧ ನಡೆಯಿತು. ಟಿಪ್ಪು ಮರಾಠರ ಸೈನ್ಯವನ್ನು ಸೋಲಿಸಿ ಮನೋಳಿ, ರಾಮದುರ್ಗ ನರಗುಂದ, ಕಿತ್ತೂರ, ಖಾನಾಪುರ, ದೊಡವಾಡ ಹಾಗೂ ಜಾಂಬೋಟಿ ಕೋಟೆಗಳನ್ನು ಗೆದ್ದು ಕೊಂಡನು. ನರಗುಂದ ಮುತ್ತಿಗೆಯನ್ನು ಮುಂದುವರಿಸಿ ವೆಂಕಟ ರಾವ ಭಾವೆ, ಇವನ ದಿವಾನ್ ಕಾಳೋಪಂತ ಪೇಠೆ ಹಾಗೂ ಅವನ ವಿವಾಹಿತ ಮಗಳನ್ನು ಸೇನಾನಿ ಬುರಾನ್ ಉದ್ದೀನ್ ಸೆರೆ ಹಿಡಿದನು. ನರಗುಂದ ಟಿಪ್ಪುವಿನ ವಶವಾಯಿತು. ೧೭೮೭ರ ಗಜೇಂದ್ರಗಡ ಒಪ್ಪಂದದ ಪ್ರಕಾರ ಅವರನ್ನು ಮುಕ್ತಗೊಳಿಸಿದನು.

೧೭೮೫ರಲ್ಲಿ ಕಿತ್ತೂರಿನ ಮೇಲೆ ದಾಳಿಮಾಡಿ ಅಲ್ಲಿ ಮೈಸೂರು ಸೈನ್ಯದ ಒಂದು ಪ್ರಬಲ ದಳವನ್ನು ಇಟ್ಟನು. ಆದರೆ

* ಇತಿಹಾಸ ವಿಭಾಗ, ಕಿಟೆಲ್ ಆರ್ಟ್ಸ್ ಕಾಲೇಜು, ಧಾರವಾಡ - ೫೮೦ ೦೦೧.

ಇಂಗ್ಲೀಷರ ಧಾಳಿಯ ಹೆದರಿಕೆಯಿಂದಾಗಿ ೧೭೮೭ರ ಎಪ್ರಿಲ್‌ನಲ್ಲಿ ಕಿತ್ತೂರನ್ನು ಮತ್ತೆ ಮರಾಠರಿಗೆ ಬಿಟ್ಟುಕೊಡಲು ನಿರ್ಧರಿಸಿದನು. ಹೀಗೆ ಕಿತ್ತೂರು ಮೂರು ವರುಷಗಳ ಕಾಲ ಟಿಪ್ಪುವಿನ ಆಧೀನದಲ್ಲಿತ್ತು. ಆತನ ಸೇನಾಧಿಕಾರಿ ಬದ್ರುಜ್ ಜಮಾಲಖಾನ ಕಿತ್ತೂರಿನ ಆಡಳಿತವನ್ನು ವಹಿಸಿಕೊಂಡು ದೇಸಾಯರ ಅಧಿಕಾರ ಗಳನ್ನು ಮೊಟಕುಗೊಳಿಸಿ ವರ್ಷಾಸನವನ್ನು ನಿಗದಿ ಮಾಡಿದನು. ಮಲ್ಲಸರ್ಜದೊರೆ ಟಿಪ್ಪುವಿನ ಬಂಧನಕ್ಕೆ ಒಳಗಾದನು. ಅವನನ್ನು ಅವನ ಅಂಗರಕ್ಷಕನಾದ ಕುಂಬಾರ ಮಡಿವಾಳನನ್ನು ಕಬಾಳ ದುರ್ಗದಲ್ಲಿ ಸೆರೆಯಿಟ್ಟನು. ಮೈಸೂರಿನ ಮಾಂಡಲಿಕತ್ವವನ್ನು ಮಲ್ಲಸರ್ಜದೊರೆ ಕೊನೆವರೆಗೂ ಒಪ್ಪಲಿಲ್ಲ.

೧೭೮೬ರಲ್ಲಿ ಸವಣೂರನ್ನು ಟಿಪ್ಪು ವಶಪಡಿಸಿಕೊಂಡಾಗ ನವಾಬ ಹಕಿಂಖಾನನು ಪುಣೆಗೆ ಓಡಿಹೋಗಿ ಪೇಶ್ವೆಯ ಆಶ್ರಯ ಪಡೆದನು. ಮುಂದೆ ಗಜೇಂದ್ರಗಡ ಒಪ್ಪಂದದಂತೆ, ಟಿಪ್ಪು ಸವಣೂರನ್ನು ನವಾಬರಿಗೆ ಮರಳಿಸಬೇಕಾಗಿ ಬಂತು. ನರಗುಂದ, ಬಾದಾಮಿ, ರಾಯದುರ್ಗ ಮತ್ತು ಹರಪನಹಳ್ಳಿಗಳನ್ನು ಮರಾಠರಿಗೆ ಬಿಟ್ಟುಕೊಡಬೇಕಾಯಿತು.

೧೭೭೮ರಲ್ಲಿ ಧಾರವರಾಡ ಕೋಟೆಯನ್ನು ಮರಾಠರಿಂದ ಗೆದ್ದು ಈ ಕೋಟೆಗೆ 'ಖುರ್ಷಿದ್ ಸವಾದ್' ಎಂದು ಹೆಸರಿಟ್ಟು ೭ ಲಕ್ಷ ರೂಪಾಯಿ ಖರ್ಚುಮಾಡಿ ಕೋಟೆಯನ್ನು ದುರಸ್ತಿಗೊಳಿಸಿ ದನೆಂದೂ ಹಾಗೂ ರಕ್ಷಣೆಗಾಗಿ ೧೦ ಸಾವಿರ ಕಾಲ್ದಳ, ೨ಸಾವಿರ ಅಶ್ವದಳ, ೬೦ತೋಪುಗಳನ್ನು ಹಾಗೂ ೩ ಸಾವಿರ ಸಿಬ್ಬಂದಿಗಳನ್ನು ನೇಮಿಸಿದ್ದ ಬಗ್ಗೆ ಆ ಕಾಲದ ಮೋಡೀ ದಾಖಲೆಗಳಿಂದ ತಿಳಿದು ಬರುತ್ತದೆ. ಮೂರನೇ ಮೈಸೂರು ಯುದ್ಧದ (೧೭೯೦-೯೨) ಸಮಯದಲ್ಲಿ ಮರಾಠ ಸೇನಾಪತಿಗಳಾದ ಪರಶುರಾಮಭಾವು ಹಾಗೂ ಧೊಂಡೋಪಂತ ಗೋಖಲೆ ಬ್ರಿಟಿಷ್ ಸೈನ್ಯದ ನೆರವಿನಿಂದ ಕೋಟೆಯ ಕಿಲ್ಲೇದಾರ ಬದ್ರುಜ್ ಜಮಾಲ್‌ಖಾನ್ ಹಾಗೂ ದಿವಾನ್ ಹರಿದಾಸಪಂತನನ್ನು ಸೆರೆಹಿಡಿದು ನರಗುಂದದ ಕೋಟೆಯಲ್ಲಿ ಬಂಧನದಲ್ಲಿಟ್ಟರು. ಹೀಗೆ ಕ್ರಮೇಣ ಮರಾಠರ ಹಾಗೂ ಬ್ರಿಟಿಷರ ಕುತಂತ್ರದಿಂದ ಉತ್ತರ ಕರ್ನಾಟಕವು ಟಿಪ್ಪುವಿನ ಕೈತಪ್ಪಿ ಹೋಯಿತು.

ಆದರೆ ಈ ಭಾಗದಲ್ಲಿ ಟಿಪ್ಪು ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದನು. ಋತುಗಳು, ಯುಗ, ವರ್ಷ ತಿಂಗಳು, ತೂಕ ಮತ್ತು ಆಳತೆಗಳು, ನಾಣ್ಯಗಳು, ಕೋಟೆ, ನಗರಗಳಿಗೆ ಹೊಸ ಹೆಸರನ್ನು ಕೊಡಲಾಯಿತು. ತನ್ನದು 'ಖುದಾದಾದ್' ಸರಕಾರವೆಂದು ಟಿಪ್ಪು ಹೇಳಿಕೊಳ್ಳುತ್ತಿದ್ದ. ತನ್ನ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರದೇಶದ ಸ್ಥಳೀಯ ಕಟ್ಟಳೆಗಳಿಗೆ ಅನುಸಾರವಾಗಿ ಆಡಳಿತ ನಡೆಸಿದನು. ಅಮಲ್ದಾರರು, ಶಿರಸ್ತೆದಾರರು, ಕುಲಕರ್ಣಿ, ಪಟೇಲ, ಶಾನುಭೋಗ ಹುದ್ದೆಗಳನ್ನು ನಿರ್ಮಿಸಿ ಸರಕಾರವು ನೇರವಾಗಿ ಪ್ರಜೆಗಳ ಸುಖ ದುಃಖಗಳನ್ನು ಕೇಳುವಂತೆ ಮಾಡಿದ್ದ. ಅಮಲ್ದಾರರು ಕಂದಾಯವನ್ನು ವಸೂಲು ಮಾಡುತ್ತಿದ್ದರು. ಈ ಭಾಗದ ಕಂದಾಯ ವ್ಯವಸ್ಥೆಯ ಸುಧಾರಣೆಗಾಗಿ 'ಗಜಮೋಜಣಿ' (೩೩ ಇಂಚಿನ ಗಜ) ಎಂಬ ಆಳತೆ ಜಾರಿಗೆ ತಂದ. ತರಿ ಭೂಮಿಗೆ ಕೆಲವು ವರ್ಷಗಳ ನಂತರ ೧/೪ ಭಾಗ ಕಂದಾಯ ವಸೂಲ ಮಾಡುವ ಏರ್ಪಾಡು ಮಾಡಿದ್ದನು. ಕಂದಾಯ ಅಧಿಕಾರಿಗಳಿಗೆ ಅವರು ಸಂಗ್ರಹಿಸಿದ ಕಂದಾಯದ ಶೇಕಡಾ ೨ ೧/೨ ಕಮೀಶನ್ ನೀಡಲಾಗುತ್ತಿತ್ತು. ಊಳಿಗಮಾನ್ಯ ಪದ್ಧತಿಯ ಜಮೀನದಾರರನ್ನು ನಿರ್ಮೂಲನ ಮಾಡಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದ. ಭೂ ಸುಧಾರಣೆಗೆ ತಕಾವಿ ಸಾಲ ಒದಗಿಸಿದ. ಸೈನಿಕರಿಗೆ ಭೂಮಿ ಜಹಗೀರು ಕೊಡುವ ಪದ್ಧತಿಯನ್ನು ನಿಲ್ಲಿಸಿ ನಗದು ಕೊಡುವ ವ್ಯವಸ್ಥೆ ಜಾರಿಗೆ ತಂದ. ಇದು ಜಹಗೀರು ಪದ್ಧತಿಯನ್ನು ತೊಡೆದು ಹಾಕಿತು.

ಟಿಪ್ಪು ಕಬ್ಬು ಬೆಳೆಯಲು, ವಿಳ್ಯೆದೆಲೆ, ಅಡಿಕೆ ತೆಂಗು ಬೆಳೆಯಲು ಪ್ರೋತ್ಸಾಹ ನೀಡಿದ. ಸೋಂದಾ, ಸಿರಸಿ, ಹುಬ್ಬಳ್ಳಿ, ದೇವರಹುಬ್ಬಳ್ಳಿ ಇವು ಅಡಿಕೆ ಮತ್ತು ಹತ್ತಿ ವ್ಯಾಪಾರದ ಪ್ರಮುಖ ಕೇಂದ್ರಗಳಾಗಿದ್ದವು. ಸಿರಸಿಯಿಂದ ಮೆಣಸು, ಏಲಕ್ಕಿ, ಮೆಣಸಿನ ಕಾಯಿ, ಶ್ರೀಗಂಧ ಮತ್ತು ಅಕ್ಕಿ ದೊಡ್ಡ ಪ್ರಮಾಣದಲ್ಲಿ ಸರಬರಾಜಾಗುತ್ತಿತ್ತು. ಅನೇಕ ಕಡೆ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿದ. ಸದಾಶಿವಗಡ ಹತ್ತಿರದ ಕಡವಾಡದಲ್ಲಿ ಒಂದು ಪ್ರಮುಖ ಕೋಠಿ ಇತ್ತು. ಅಲ್ಲಿ ಸರಾಫ ಮತ್ತು ಲೆಕ್ಕಿಗನನ್ನು ನೇಮಿಸಿದ್ದ. ಅಲ್ಲಿ ಚಿಲ್ಲರೆ ವ್ಯಾಪಾರವೂ ನಡೆಯುತ್ತಿತ್ತು. ಅಲ್ಲಿ ದರೋಗಾ ವಾಣಿಜ್ಯ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿದ್ದ. ಕಾರವಾರ ಮತ್ತು ಭಟ್ಕಳ ಆಗಿನ ಮುಖ್ಯ ಬಂದರುಗಳು. ರಫ್ತು ಆಮದುಗಳಿಗೆ ಕರಾವಳಿ ಪ್ರದೇಶಗಳಲ್ಲಿ ಸೌಲಭ್ಯ ಮಾಡಿ ಕೊಟ್ಟಿದ್ದ. ಇದರಿಂದ ಟಿಪ್ಪು ವಾಣಿಜ್ಯ ವ್ಯಾಪಾರಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದ ಎಂದು ತಿಳಿದುಬರುತ್ತದೆ. ದೇಶ ವಿದೇಶಗಳಿಂದ ಬಂದ ಕುಶಲಕರ್ಮಿಗಳು ಇಲ್ಲಿ ನೆಲೆಸಿದರು. ಹೊಸ ಕಸಬು - ಉದ್ದಿಮೆ ಗಳು ಪ್ರಾರಂಭಗೊಂಡವು.

ಅವನ ರಾಜ್ಯದ್ದಲ್ಲಿ ೧೨ ಟಂಕಸಾಲೆಗಳಿದ್ದವು. ಧಾರವಾಡ ದಲ್ಲಿ ಒಂದು ಇತ್ತು. ಇಲ್ಲಿಂದ 'ಖುರ್ಷಿದ್ ಸವಾದ್' ಎಂಬ ನಾಣ್ಯವನ್ನು ಹೊರಡಿಸಿದನು. ಪಗೋಡಾ, ಫನಮ್, ರೂಪಾಯಿ ಹಾಗೂ ವಿವಿಧ ಪ್ರಕಾರದ ನಾಣ್ಯಗಳನ್ನು ಚಲಾವಣೆಯಲ್ಲಿ ತಂದು ಅವುಗಳಿಗೆ ಮುಸ್ಲಿಂ ಮಹಾಪುರುಷರ ಹೆಸರನ್ನಿಟ್ಟಿದ್ದ. ಉದಾ: ಹೈದರಿ ಹೊನ್ನು, ಅಹಮ್ಮದಿ ಹೊನ್ ಮತ್ತು ಜೊಹರಾ ಫರೂಕಿ, ಕಜಮಿ ಇತ್ಯಾದಿ, 'ಸುಲ್ತಾನಿ ಅಸ್ರಫಿ' ಎಂಬ ಬೆಳ್ಳಿನಾಣ್ಯವನ್ನು ಚಲಾವಣೆಗೆ ತಂದನು. ಹೊಸ ನಾಣ್ಯ ಪದ್ಧತಿಯನ್ನು ಜಾರಿಗೆ ತಂದದ್ದು, ವಾಣಿಜ್ಯ ವ್ಯವಹಾರಗಳಲ್ಲಿ ಹೊಸಪ್ರಯೋಗ,

ನೂತನವಾದ ಕಂದಾಯ ವ್ಯವಸ್ಥೆ, ನಗರಗಳ, ಊರುಗಳ, ಕೋಟೆಗಳ ಹೆಸರುಗಳನ್ನು ಬದಲಾವಣೆ ಮಾಡುವುದರಲ್ಲಿ ಅವನಿಗಿದ್ದ ಆಸಕ್ತಿ ಇವೆಲ್ಲಾ ನೋಡಿದರೆ ಅವನೊಬ್ಬ ದೂರ ದೃಷ್ಟಿಯ ಸುಧಾರಕ ಎಂದು ಹೇಳಿದರೆ ತಪ್ಪಾಗಲಾರದು.

ಧಾರವಾಡದ ಒಂದು 'ಕೈಫಿಯತ್'ನ ಪ್ರಕಾರ ಅಲ್ಲಿಯ ಶುಕ್ರವಾರಪೇಟೆಯ ವೆಂಕಟೇಶದೇವರ ಪ್ರತಿಷ್ಠಾಪನೆ ಟಿಪ್ಪುವಿನ ಕಾಲದಲ್ಲಿ ಆಗಿ ಇದರ ಪೂಜಾದಿ ವ್ಯವಸ್ಥೆಗೆ ಸಮೀಪದ ನವಲೂರ ಗ್ರಾಮದ ೧ (ಒಂದು) ಬ್ಯಾಳ(ಬೆಳೆ) ಭೂಮಿಯನ್ನು ದಾನ ಮಾಡಲಾಗಿತ್ತು. ಆಗ ರಾಮಚಂದ್ರಾಚಾರ್ಯ ವ್ಯಾಸಮುದ್ರ ಗುಡಿಯ ಪೂಜಾರಿಯಾಗಿದ್ದರು. ಹಾಗೆಯೇ ಧಾರವಾಡದ ಪೀರ್ಜಾದೆ, ಮುಲ್ಲಾ, ಖತೀಬ ಮತ್ತು ಖಾಜಿಗೆ ಸರ್ವಮಾನ್ಯ ಇನಾಮ ಜಮೀನು ನೀಡಲಾಗಿತ್ತು. ಇದೇ ರೀತಿಯ ಇನಾಮನ್ನು ಪ್ರಮುಖ ಬ್ರಾಹ್ಮಣರಿಗೆ ಪಂಡಿತರಿಗೆ ವರ್ಷಾಸನ ರೂಪದಲ್ಲಿ ನೀಡಲಾಗಿತ್ತು. ಹಾಗೆಯೇ ಇನ್ನೊಂದು ದಾಖಲೆಯ ಪ್ರಕಾರ (ತಾಳೀಬಂದ) ಪರಗಣಾ ರಾಣಿಬೆನ್ನೂರಿನ ೫ ಗ್ರಾಮಗಳನ್ನು ಶೃಂಗೇರಿ ಮಠಕ್ಕೆ ಇನಾಮು ನೀಡಲಾಗಿತ್ತು.

ಟಿಪ್ಪುಸುಲ್ತಾನ ಮತ್ತು ಸವಣೂರಿನ ನವಾಬರು ಸ್ವರ್ಣವಲ್ಲೀ ಮಠದ ಗುರುಗಳನ್ನು ಭಕ್ತಿಯಿಂದ ಕಾಣುತ್ತಿದ್ದರೆಂದು ಕೆಲವು ದಾಖಲೆಗಳಿಂದ ತಿಳಿದು ಬರುತ್ತದೆ. ಅವನ ಸರಕಾರವು, ಪೂರ್ವ ದಿಂದಲೂ ಮಾನ್ಯವಾಗಿ ಬಂದ ಶಿರಸಿ ಮತ್ತು ಮಲ್ಲಾಪುರ ತಾಲೂಕುಗಳಲ್ಲಿರುವ ಒಟ್ಟೂ ೧೧೦೮ ಗ್ರಾಮಗಳನ್ನು ಸ್ವರ್ಣವಲ್ಲೀ ಮಠಕ್ಕೆ ಇನಾಮಾಗಿ ಮಾನ್ಯ ಮಾಡಿತ್ತು. ಹೀಗೆ ಟಿಪ್ಪು ಉತ್ತರ ಕರ್ನಾಟಕದ ಅನೇಕ ಇತರ ಧಾರ್ಮಿಕ ಸಂಸ್ಥೆಗಳಿಗೆ ದಾನದತ್ತಿ ಗಳನ್ನು ನೀಡಿದ ಬಗ್ಗೆ ಉಲ್ಲೇಖಗಳಿವೆ.

ಟಿಪ್ಪುವಿನ ಧರ್ಮ ಸಮನ್ವಯತೆಯನ್ನರಿತ ಮಹಾತ್ಮಾ ಗಾಂಧೀಜಿಯವರು ಟಿಪ್ಪುವನ್ನು ಹಿಂದೂ ಮುಸ್ಲಿಂ ಐಕ್ಯತೆಯ ಮೂರ್ತಿರೂಪನೆಂದು ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಮುಕ್ತ ಮನಸ್ಸಿನಿಂದ ಕೊಂಡಾಡಿದ್ದಾರೆ.

ತನ್ನ ನಾಡಿನ ರಕ್ಷಣೆಗೆ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ದೇಶಭಕ್ತ ಟಿಪ್ಪು ಭಾರತದ ಸ್ವಾತಂತ್ರ್ಯ ಹೋರಾಟ ಗಾರರಿಗೆ ಒಂದು ಉದಾಹರಣೆಯಾದ. ಆತನ ಸ್ವಾಭಿಮಾನ ನಮಗೊಂದು ಆದರ್ಶವಾಗಬಲ್ಲುದು.

ಟಿಪ್ಪುಸುಲ್ತಾನ್ ದ್ವಿ ಶತಮಾನೋತ್ಸವವನ್ನು ವರ್ಷವಿಡೀ ರಾಷ್ಟ್ರೀಯ ಉತ್ಸವವಾಗಿ ಆಚರಿಸಲು ನಮ್ಮ ರಾಜ್ಯ ಸರಕಾರ ಹಾಗೂ ಖಾಸಗೀ ಸಂಘ ಸಂಸ್ಥೆಗಳು ನಿರ್ಧರಿಸಿವೆ. ಟಿಪ್ಪು ಬಲಿದಾನಕ್ಕೆ ಇದು ಸೂಕ್ತ ಗೌರವಾರ್ಪಣೆ ಆಗಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ಕಾಮತ್ ಸೂರ್ಯನಾಥ (ಪ್ರ.ಸಂ.), **ಧಾರಾವಾಡ ಜಿಲ್ಲೆಯ ಗೆಜಿಟಿಯರ್** ಬೆಂಗಳೂರು, ೧೯೯೫.

*೨. ಪುಣೆ ಪತ್ರಾಗಾರ., **'ಕರ್ನಾಟಕ ಜಮಾವ'** ೫೦,೨೭೦:

*೩. ಬಿ. ಷೇಕ್ ಆಲಿ., **ಟಿಪ್ಪು ಸುಲ್ತಾನ್** ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಎನ್.ಬಿ.ಟಿ. ಇಂಡಿಯಾ,೧೯೭೯.

*೪. ನಂಜುಂಡಸ್ವಾಮಿ, ಎ.ಎಸ್., **ಪಾಳೆಯಗಾರರ ಮತ್ತು ಒಡೆಯರ ಇತಿಹಾಸ** ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ,೧೯೮೬.

*೫. ಶಾಸ್ತ್ರಿ ಎ.ಕೆ., **ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ** ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸ್ವರ್ಣವಲ್ಲೀ, ೧೯೯೭.

*೬. ಸರದೇಸಾಯಿ ಜಿ.ಎಸ್., **ನ್ಯೂ ಹಿಸ್ಟರಿ ಆಫ್ ದಿ ಮರಾಠಾಸ್** ಸಂ. ೩. ಮುಂಬಯಿ, ೧೯೭೮.

*೭. **ಸ್ವಾದಿ ಅರಸುಮನೆತನ**, ಶ್ರೀ ತೋಂಟದಾರ್ಯ ಮಠ, ಗದಗ, ೧೯೯೫.

ಡಾ|| ಬಿ. ವಿ. ಸುಧಾಮಣಿ*

ಹದಿನೆಂಟನೇ ಶತಮಾನದ ಪೂರ್ವಾರ್ಧದ ಮೈಸೂರು ಸಂಸ್ಥಾನದ ಸಮಾಜದಲ್ಲಿ ಬಸವಿ ಪದ್ಧತಿ - ಒಂದು ವಿಶ್ಲೇಷಣೆ

ಹದಿನೆಂಟನೇ ಶತಮಾನದ ಪೂರ್ವಾರ್ಧದಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಳಲೆ ಮನೆತನದ ದಳವಾಯಿ ನಂಜರಾಜಯ್ಯ ಬಹುಮುಖ್ಯ ಪಾತ್ರ ವಹಿಸಿದ್ದಾನೆ. ದಳವಾಯಿ ನಂಜರಾಜಯ್ಯ ಸಾಮಾಜಿಕ ಮುಖಂಡನಾಗಿ ಯಥಾ ಸ್ಥಿತಿಯನ್ನು ಕಾಪಾಡುವ ಸಾಮಾಜಿಕ ಧೋರಣೆಯನ್ನು ಅನುಸರಿಸಿದನು. ಈತ ವೈಯಕ್ತಿಕವಾಗಿ ವೀರಶೈವ ಧರ್ಮಾನುಯಾಯಿ ಆಗಿದ್ದು ಆ ಮತದ ಸಿದ್ಧಾಂತಕ್ಕನುಗುಣವಾಗಿ ಚಾತುವರ್ಣ ವಿರೋಧಿಯಾಗಿದ್ದರೂ ಸಾಮರಸ್ಯವನ್ನಾಗಲೀ ಒಗ್ಗಟ್ಟನ್ನಾಗಲೀ ಭಂಗಪಡಿಸಲು ಆತ ಪ್ರಯತ್ನಿಸಲಿಲ್ಲ. ಪರಿಣಾಮವಾಗಿ ಸಮಾಜದಲ್ಲಿ ಪರಂಪರಾನುಗತವಾಗಿ ಸಾಗಿ ಬಂದಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳು, ರೂಢಿ - ಪದ್ಧತಿಗಳು ಎಂದಿನಂತೆ ಮುಂದುವರಿದವು. ಅಂತಹ ಪದ್ಧತಿಗಳಲ್ಲಿ 'ಬಸವಿ' ಬಿಡುವುದೂ ಒಂದಾಗಿದ್ದು ಅದು ಪ್ರಸ್ತುತ ಲೇಖನದ ವಿಷಯವೆನಿಸಿದೆ.

'ಬಸವಿ' ಪದ್ಧತಿಯ ಬಗೆಗೆ ಆಲೋಚನೆ ಮಾಡಿದ ಸಂದರ್ಭದಲ್ಲಿ ಸಹಜವಾಗಿ ಈ ಪದ್ಧತಿ ವಂಶಪಾರಂಪರ್ಯವಾಗಿದ್ದಿತೆ? ಸಮಾಜದಲ್ಲಿ ಯಾವ ವರ್ಗಗಳವರು ಈ ನಂಬಿಕೆಯನ್ನು ಬೆಳೆಸಿಕೊಂಡಿದ್ದರು? ಈ ಪದ್ಧತಿ ರೂಢಿಗೆ ಬರಲು ಕಾರಣಗಳೇನು? ಇತ್ಯಾದಿ ಪ್ರಶ್ನೆಗಳು ಉದ್ಭವವಾಗುತ್ತವೆ. ಹಲವಾರು ದಾಖಲೆಗಳ ನೆರವಿನಿಂದ ಸದರಿ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಮೈಸೂರು ಸಂಸ್ಥಾನದ ಸಮಾಜದ ಕೆಲವು ವರ್ಗಗಳಾದ ಬೆಸ್ತರು, ಕಾಡುಕುರುಬರು, ಬುಡುಬುಡಿಕೆಯವರು, ಕುರುಬರು, ಬೇಡರು, ವಡ್ಡರು ಮುಂತಾದವರು 'ಬಸವಿ ಬಿಡುವ' ಪದ್ಧತಿಯನ್ನು ಪರಂಪರಾನುಗತವಾಗಿ ನಡೆಸಿಕೊಂಡು ಬಂದಿದ್ದರು. ಆದರೆ ಇದು ವಂಶಪಾರಂಪರ್ಯವಾಗಿರಲಿಲ್ಲ. ಈ ವರ್ಗಗಳ ಜನ ತಮ್ಮ ಹೆಣ್ಣು ಮಕ್ಕಳನ್ನು ದೇವಾಲಯಗಳಲ್ಲಿ ಬಸವಿ ಬಿಡಲು ಕೆಲವಾರು ಅಂಶಗಳು, ಸಂದರ್ಭಗಳು ಕಾರಣವಾಗಿದ್ದವು. ಈ ವರ್ಗಗಳ ಜನ ತಮ್ಮ ಹೆಣ್ಣು ಮಗು ಜನಿಸಿದಾಗ ಅದು ತೀವ್ರತರವಾದ ರೋಗಕ್ಕೆ ತುತ್ತಾದಂಥ ಪಕ್ಷದಲ್ಲಿ ಗಿಡಮೂಲಿಕೆಗಳು, ಯಂತ್ರ - ತಂತ್ರಗಳು ಇತ್ಯಾದಿ ಯಾವುದರಿಂದಲೂ ಖಾಯಿಲೆ ವಾಸಿಯಾಗುವುದಿಲ್ಲವೆಂದು ಖಚಿತವಾದಲ್ಲಿ ಅಂತಹ ಸಂದರ್ಭದಲ್ಲಿ ಕುಟುಂಬದ ಹಿರಿಯರು ಆ ಹೆಣ್ಣುಮಗುವಿನ ರೋಗ ಗುಣವಾದಲ್ಲಿ 'ಬಸವಿ ಬಿಡುತ್ತೇವೆಂದು' ತಮ್ಮ ಕುಲದೇವರಿಗೆ ಹರಕೆ ಮಾಡಿಕೊಳ್ಳುತ್ತಿದ್ದರು.[(೧)] ಅಂತೆಯೇ ಹೆಣ್ಣು ಮಕ್ಕಳು ಕನ್ಯೆಯರಾದ ನಂತರವೂ ಅವಿವಾಹಿತರಾಗಿಯೇ ಉಳಿದು ಅವರಿಗೆ ಮುಂದೆ ವಿವಾಹವಾಗುವುದಿಲ್ಲ ಎಂದು ಖಚಿತವಾದಾಗಲೂ ಕೂಡ ಅಂತಹ ಕನ್ಯೆಯನ್ನು ನಿರ್ದಿಷ್ಟ ದೇಗುಲದಲ್ಲಿ ಬಸವಿ ಬಿಡುತ್ತಿದ್ದರು.[(೨)] ಬೇಡರು, ಕುರುಬರು, ವಡ್ಡರಲ್ಲಿ ತಮಗೆ ಗಂಡು ಸಂತಾನ ಇಲ್ಲದೇ ಹೋದಂಥ ಸಂದರ್ಭದಲ್ಲಿ ಹಿರಿಯ ಹೆಣ್ಣುಮಗಳನ್ನು ಬಸವಿ ಬಿಟ್ಟು, ಅವಳಿಗೆ ಜನಿಸಿದ ಮಕ್ಕಳಿಂದ ತಮ್ಮ ವಂಶಾಭಿವೃದ್ಧಿ ಮಾಡಿಕೊಳ್ಳುತ್ತಿದ್ದರು. ಈ ಮೇಲಿನ ಸಂದರ್ಭಗಳಲ್ಲಿ ಬಸವಿ ಬಿಡುವುದು ರೂಢಿಯಲ್ಲಿತ್ತು.

ಬಸವಿ ಬಿಡುವುದು ಕೂಡ ಒಂದು ಸಡಗರದ, ಸಂಭ್ರಮದ ಕಾರ್ಯಕ್ರಮವಾಗಿತ್ತು. ಮೊದಲೇ ನಿಗದಿಪಡಿಸಿದ ಒಂದು ಶುಭದಿನದಂದು ಹರಕೆ ಹೊತ್ತಿರುವ ಕನ್ಯೆಯನ್ನು ವಧುವಿನಂತೆ ಸಿಂಗರಿಸಿ ತಾವು ಹರಕೆ ಹೊತ್ತಿದ್ದ ದೇವಾಲಯಕ್ಕೆ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದರು.[(೩)]

ದೇವಾಲಯದ ಪೂಜಾರಿ ದೇವರಿಗೆ ಅರ್ಚನೆ ಮಾಡಿ, ಮಂಗಳಾರತಿ ಬೆಳಗಿದ ನಂತರ ಕನ್ಯೆಯನ್ನು ಕಂಬಳಿ ಹಾಸಿ ಪೂರ್ವದಿಕ್ಕಿಗೆ ಕೂರಿಸಲಾಗುತ್ತಿತ್ತು. ನಂತರ ತಮ್ಮ ಜಾತಿಯ ಗುರುವಿನ ಅನುಮತಿ ಪಡೆದೇ, ಹಿರಿಯ ಬಸವಿಯ ಕೈಯಿಂದ

* ಪ್ರವಾಚಕರು, ಇತಿಹಾಸ ವಿಭಾಗ, ಮಹಾರಾಣಿಯವರ ಮಹಿಳಾ ಆರ್ಟ್ಸ್ ಕಾಲೇಜು, ಮೈಸೂರು.

ಕಂಕಣ ಕಟ್ಟಿಸಿ ತಾಳಿ ಕಟ್ಟಿಸುತ್ತಿದ್ದರು.[೪] ಸ್ವಜಾತಿಯವರಿಗೆ ಊಟ ಹಾಕಿಸುವುದರ ಮೂಲಕ ಆ ಕಾರ್ಯಕ್ರಮ ಪೂರ್ಣವಾಗುತ್ತಿತ್ತು. ಈ ಎಲ್ಲ ಖರ್ಚನ್ನೂ ಮೊದಲು ಬಸವಿಯ ತಂದೆ ತಾಯಿಗಳೇ ವಹಿಸಿಕೊಂಡಿದ್ದರೂ ನಂತರ ಪ್ರಥಮವಾಗಿ ಆ ಬಸವಿ ಬಳಿಗೆ ಬಂದ ವ್ಯಕ್ತಿಯೇ ಆ ಪೂರ್ಣ ಖರ್ಚನ್ನೂ ಭರಿಸಬೇಕಾಗಿತ್ತು. ಅಂದು ಒಂದು ದೇವಾಲಯದಲ್ಲಿ ಒಬ್ಬಳಿಗಿಂತ ಹೆಚ್ಚು ಬಸವಿಯರಿದ್ದುದು ಕಂಡುಬರುತ್ತದೆ. ಹೀಗೆ ಬಿಟ್ಟ ಬಸವಿಯರಲ್ಲಿ ಶಿವ ದೇವಾಲಯಕ್ಕೆ ಸೇರಿದ ಬಸವಿಯನ್ನು - *ಲಿಂಗಬಸವಿ* ಎಂದೂ, ವೈಷ್ಣವ ದೇಗುಲಕ್ಕೆ ಬಿಟ್ಟ ಬಸವಿಯನ್ನು *ಗರುಡಬಸವಿ* ಎಂದೂ ಕರೆಯಲಾಗುತ್ತಿತ್ತು.[೫] ಬೇಡ ಜನಾಂಗದವರು ಬಸವಿಬಿಟ್ಟ ತಮ್ಮ ಹೆಣ್ಣು ಮಕ್ಕಳನ್ನು 'ಕುಲಂಬಿಡ್ಡ' ಅಥವಾ 'ಕುಲದ ಮಗಳು' ಎಂಬುದಾಗಿ ಕರೆಯುತ್ತಿದ್ದರು.[೬] ಈ ಜನಾಂಗದಲ್ಲಿ ಒಂದು ವಿಶೇಷವೆಂದರೆ ವಿವಾಹಿತ ಸ್ತ್ರೀಯರೂ ಕೂಡ ಬಸವಿ ಆಗಬಹುದಿತ್ತು.[೭] ಬಸವಿಯರು ಅವಿವಾಹಿತರಾಗಿದ್ದು ಅವರಲ್ಲಿ ಜನಿಸಿದ ಮಕ್ಕಳಿಗೆ ಆಕೆಯ ತಂದೆಯ ಆಸ್ತಿಯಲ್ಲಿ ಹಕ್ಕಿರುತ್ತಿದ್ದರೆ, ವಿವಾಹಿತ ಸ್ತ್ರೀಯು ಬಸವಿಯಾದಲ್ಲಿ ಅವಳ ಮಕ್ಕಳಿಗೆ ಆಕೆಯ ತಂದೆಯ ಆಸ್ತಿಯಲ್ಲಿ ಪಾಲಿರುತ್ತಿರಲಿಲ್ಲ.[೮] ಒಟ್ಟಾರೆ ಬಸವಿಯರನ್ನು 'ನಿತ್ಯಸುಮಂಗಲಿ' ಎಂಬುದಾಗಿ ಕರೆಯಲಾಗುತ್ತಿತ್ತು.[೯] ಈ ಪದ್ಧತಿಗೆ ಸಮಾಜದ ಮನ್ನಣೆಯೂ ದೊರೆತಿತ್ತು. ಆದರೆ ಬಸವಿಯರೂ ಕಾಲಕ್ರಮೇಣ ಹಣಕ್ಕಾಗಿ ವೇಶ್ಯೆಯರಂತೆ ನಡೆದುಕೊಳ್ಳಲಾರಂಭಿಸಿದುದರಿಂದ ಸಮಾಜದ ನೈತಿಕ ಮೌಲ್ಯ ಕುಸಿಯಲಾರಂಭಿಸಿತು. ಇದನ್ನು ಮನಗಂಡ ಮೈಸೂರು ಸಂಸ್ಥಾನದ ಸರ್ಕಾರ ೨೦ನೇ ಶತಮಾನದ ಆದಿ ಭಾಗದಲ್ಲಿ ಈ ಪದ್ಧತಿಯನ್ನು ಕಾನೂನು ರೀತ್ಯಾ ನಿಷೇಧಿಸಿ**ತು**.[೧೦]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. Nanjundaiah, H.V: Iyer, A.K., *Mysore Tribes and Castes* Vol.11, pp.24, 550 - 558. *Mysore Census Report*, 1 911, vol.1, p.100.

೨. Stein Burton., *South Indian Temples,* p.53

೩. Hayavadana Rao, C., *'Mysore Castes and Tribes'* in Q.J.M.S Vol XIII, P.475

೪. Hayavadana Rao, C., Ibid

೫. Dubois Abbe, J., *Hindu Manners, Customs and Ceremonies,* oxford, 1906, 3rd edition, p. 133.

೬. Hayavadana Rao, C., Ibid.

೭. Hayavadana Rao, C., Ibid, pp.476-477.

೮. Thurston, Edgar., *Castes and Tribes of Southern India* vol.11, pp.136-137, Nanjundaiah, H. V., Iyer. A. K. *Mysore Tribes*, Ibid, vol.IV, pp.48, 213.

೯. ಗುಂಡಪ್ಪ, ಡಿ. ವಿ., **ಕಲೋಪಾಸಕರು**, ಸಂ.೩, ಮೈಸೂರು, ೧೯೭೦, ಪುಟ ೧೯-೨೦.

೧೦. *Proceedings of the Govt of Mysore,* 28th Jan, 1910.

ಡಾ।। ಲೀಲಾ ಬಿ.*

ಡಾ।। ಬೆಂಜಿಮನ್ ಹೈನ್ ಮತ್ತು ಡಾ।। ಜಾನ್ ಲೇಡನ್ - ಒಂದು ಟಿಪ್ಪಣಿ

ಟಿಪ್ಪೂವಿನ ಪತನದ ಅನಂತರ (೧೭೯೯) ಈಸ್ಟ್ ಇಂಡಿಯಾ ಕಂಪೆನಿ; ತಾನು ಮೈಸೂರಿನಲ್ಲಿ ಆಕ್ರಮಿಸಿದ್ದ ಸ್ಥಳಗಳ ಸರ್ವೇಕ್ಷಣೆಗಾಗಿ ಡಾ।। ಫ್ರಾನ್ಸಿಸ್ ಬುಕನನ್ ಅವರನ್ನು ಗೌರ್‍ನರ್ ಜನರಲ್ ಕಾರನವಾಲೀಸ್ ಅವರ ಕಡೆ ಕಳುಹಿಸಿದ್ದೂ, ೧೮೦೭ರಲ್ಲಿ ಆ ಸಂಬಂಧದಲ್ಲಿ ಪ್ರಕಟವಾದ ಬುಕನನ್‌ನ *'A Journey from Madras through the countries of Mysore, Canara and Malabar'* ಎಂಬ ಪುಸ್ತಕದಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟ ವಿಷಯಗಳು ದಾಖಲಾಗಿರುವದು ಗೊತ್ತಿದೆ. ಫ್ರಾನ್ಸಿಸ್ ಬುಕನನ್ ತಮ್ಮ ಸರ್ವೇಕ್ಷಣ ಕೆಲಸವನ್ನು ಮುಂದುವರಿಸುತ್ತಿದ್ದಾಗ, ಕರ್ನಲ್ ಮೆಕೆನ್‌ಜಿ ಅವರನ್ನು ಇಡೀ ಇಂಡಿಯಾದ ಮೋಜಣಿದಾರನನ್ನಾಗಿ ಕಂಪೆನಿ ನೇಮಿಸಿತು. ಮತ್ತು ಕರ್ನಲ್ ಮೆಕೆನ್‌ಜಿಯವರಿಗೆ ಮೈಸೂರು ಪರಿವೀಕ್ಷಣೆಗೆ ಸಹಾಯಕವಾಗಲೆಂದು ಡಾ।। ಬೆಂಜಿಮನ್ ಹೈನ್ ಮತ್ತು ಜಾನ್‌ಲೇರ್ಡ ಎಂಬ ವೈದ್ಯರನ್ನು ಅನುಕೂಲ ಸಹಾಯಕರೆಂದು ನೇಮಿಸಲಾಗಿತ್ತು. ಡಾ।। ಬೆಂಜಿಮನ್ ಹೈನ್ ತನ್ನ ಇಪ್ಪತ್ತು ವರುಷಗಳ ಪ್ರವಾಸ, ಅನುಭವ - ಇವುಗಳನ್ನು ೧೮೧೪ರಲ್ಲಿ ಬರೆದು ಪ್ರಕಟಿಸಿದ್ದಾನೆ. ಆ ಪುಸ್ತಕದಲ್ಲಿ ಮೈಸೂರಿನ ಬಗ್ಗೆ ವಿಶೇಷವಾದ ಸಂಗತಿಗಳಿವೆ. ಇನ್ನು ಜಾನ್‌ಲೇರ್ಡ್ ಕೇವಲ ಮೂವತ್ತಾರನೇ ವರ್ಷಕ್ಕೇ ಗತಿಸಿದರೂ, ಮೈಸೂರಿನ ಬಗ್ಗೆ ಅವನ ಅನುಭವ ಮತ್ತು ಸಾಹಿತ್ಯ, ಸಂಸ್ಕೃತಿಯಲ್ಲಿ ಅವನಿಗಿದ್ದ ಪರಿಣಿತಿ ಅಸಾಧಾರಣವಾದದ್ದಾಗಿತ್ತು. ಇವರಿಬ್ಬರ ಸಾಧನೆಗಳನ್ನು ಈ ಪ್ರಬಂಧದಲ್ಲಿ ಪರಿಚಯಿಸಲಾಗಿದೆ.

ಡಾ।। ಬೆಂಜಿಮನ್ ಹೈನ್ಸ್

ಸುಮಾರು ಇಪ್ಪತ್ತು ವರುಷ ಇಂಡಿಯಾ ದೇಶದಲ್ಲಿ ಡಾ।। ಬೆಂಜಿಮನ್ ಹೈನ್ಸ್ ಪ್ರವಾಸಮಾಡಿ ತಮ್ಮ ಅನುಭವವನ್ನು *` Tracts, Historical and Statistical, on India with Journals of Several tours through Various parts of the Penisula, also an account of Sumatra in a series of letters, 1813* ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಅನುಭವಗಳ ದಾಖಲೆಯನ್ನು ಈಸ್ಟ್ ಇಂಡಿಯಾ ಕಂಪನಿಗೋಸ್ಕರ ಬರೆದದ್ದು. ಇದರಲ್ಲಿ ಒಂದು ವ್ಯವಸ್ಥಿತ ಕ್ರಮಬದ್ಧವಾದ ಬರವಣಿಗೆಯನ್ನು ಕಾಣಲು ಸಾಧ್ಯವಿಲ್ಲ. ಅವರೇ ಹೇಳುವಂತೆ "none were thought by me of sufficient importance to lay before the world". ಆದರೆ Dr Wilkins ರವರ ಒತ್ತಾಯದ ಮತ್ತು ಹಲವಾರು ಸ್ನೇಹಿತರಿಂದ ಪ್ರೇರೇಣೆ ಪ್ರೋತ್ಸಾಹದಿಂದ ಈ ಬರವಣಿಗೆಯನ್ನು ಒಂದು ಪುಸ್ತಕ ರೂಪದಲ್ಲಿ ರಚಿಸಲಾಯಿತಂತೆ. ಈ ಪುಸ್ತಕವನ್ನು Tract I ಮತ್ತು Tract II ಎಂದು ಮುಂತಾಗಿ ವಿಂಗಡಿಸಲಾಗಿದೆ. ಇಲ್ಲಿ ನಮಗೆ ಹೆಚ್ಚು ಪ್ರಸ್ತುತವಾದದ್ದು Tract II ಮತ್ತು Tract XXIV.

ಹೈನ್ಸ್‌ರವರ ಬರವಣಿಗೆಯಿಂದ ಆರ್ಥಿಕ, ಸಾಮಾಜಿಕ ಮತ್ತು ಮತೀಯ ವಿವರಗಳ ಸಿಂಹಾವಲೋಕನ ಮಾಡಬಹುದು. ಸಮಕಾಲೀನ ಚಾರಿತ್ರಕ ದಾಖಲೆಯೊಂದಿಗೆ ಈ ಬರವಣಿಗೆಯನ್ನು ನೋಡಿದಲ್ಲಿ ವಿಶೇಷವಾದ ಬೆಳಕನ್ನೂ ಕೂಡ ಬೀರಬಹುದು.

ಮೊದಲನೆಯದಾಗಿ ಮೈಸೂರಿಗೆ ಸಂಬಂಧಪಟ್ಟ ಹವಾಮಾನದ ವಿಷಯ., ಯಾವ ಹವಾಮಾನದಲ್ಲಿ ಬಿತ್ತಬೇಕು ಮತ್ತು ಉಳುವ ಯಂತ್ರಗಳು, ಅವುಗಳ ಉಪಯೋಗ. ಬೆಂಗಳೂರಿನಲ್ಲಿ ರಾಗಿ ಬಿತ್ತನೆ. ಇತ್ಯಾದಿ ವಿವರಗಳಿವೆ. ಅಲ್ಲದೆ ಈ ಯಂತ್ರಗಳು ಒರಟಾಗಿದ್ದರೂ ಆ ಕಾಲದಲ್ಲಿ ಅತ್ಯಂತ ಉಪಯುಕ್ತವಾಗಿ ಬಳಕೆಯಲ್ಲಿದ್ದವು.(೧)

ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ವಿಶೇಷವಾಗಿ ಚಲಾವಣೆಯಲ್ಲಿದ್ದುವು. ಎರಡು ರೀತಿ ತೂಕವನ್ನು ಉಪಯೋಗಿಸುತ್ತಿದ್ದರು. ಇದಕ್ಕೆ ಪೇಟೆತೂಕ ಮತ್ತು ಆದಾಯತೂಕ

* ಫ್ಲಾಟ್ ನಂ. ೪೬, ಶಾಮಲ, ೧ನೇ ಅಂತಸ್ತು, ಮಾತುಂಗ, ಮುಂಬಯಿ - ೪೬೦ ೦೧೯.

ಎಂದು ಹೆಸರಿಡಲಾಗಿದೆ. ಪೇಟೆತೂಕದಲ್ಲಿ ಹುಣಸೇಹಣ್ಣು, ಅರಿಶಿನ ಮತ್ತು ಔಷಧಿ ಸಾಮಾನುಗಳನ್ನು ಅಳೆಯಲಾಗುತ್ತಿತ್ತು. ಮತ್ತು ಆದಾಯ ಸಾಮಾಗ್ರಿಗಳಾದ ಕಾಳು, ಬೇಳೆ, ಮತ್ತು ಧಾನ್ಯಗಳನ್ನು ಆದಾಯತೂಕದಲ್ಲಿ ಗಣಿಸಲಾಗುತ್ತಿತ್ತು. ಒಂದೊಂದು ಊರಿನಲ್ಲಿ ಒಂದೊಂದು ತೂಕವನ್ನು ಉಪಯೋಗಿಸುತ್ತಿದರಿಂದ ಹೊರಗಿನವರು ಮೋಸಹೋಗುವ ಸಂಭವವಿತ್ತು. ಸ್ಥಳೀಯರಿಗೆ ಇದರಿಂದ ಲಾಭವಾದರೂ ಹೊರಗಿನಿಂದ ಬಂದ ವ್ಯಾಪಾರಿಗಳಿಗೆ ಲಾಭದಾಯಕವಾಗಿರಲಿಲ್ಲ. ತೂಕದ ವಿಷಯವಾಗಿ ಹೈನ್ಸ್‌ರವರು ಉತ್ತಮವಾಗಿ ವಿಶ್ಲೇಷಿಸಿದ್ದಾರೆ. ಇದರಿಂದ ಆ ಕಾಲದ ಆದಾಯ, ಆರ್ಥಿಕ ಸ್ಥಿತಿಯ ಸೂಕ್ಷ್ಮನೋಟ ಸಿಗುತ್ತದೆ.

ಆರ್ಥಿಕ ಸ್ಥಿತಿ

ಟೀಪೂ ಮತ್ತು ಹೈದರ್ ಕಾಲದಲ್ಲಿ ವಾಣಿಜ್ಯ ವ್ಯವಹಾರ ಉತ್ತಮ ಸ್ಥಿತಿಯಲ್ಲಿರಲಿಲ್ಲ. ಹೈದರ್ ಮತ್ತು ಟಿಪ್ಪೂಸುಲ್ತಾನ್ ಇಬ್ಬರೂ ಹೊರದೇಶದ ಆರ್ಥಿಕ ಸಂಪರ್ಕವನ್ನು ಕಡಿದು ಕೊಂಡಿದ್ದರು. ಇದಲ್ಲದೆ ಹೊರದೇಶಕ್ಕೆ ರಫ್ತುಮಾಡುವ ಉತ್ತಮ ಸರಕುಗಳು ಮೈಸೂರಿನಲ್ಲಿ ಇರಲಿಲ್ಲ. ಶ್ರೀಗಂಧ ಹೆಚ್ಚು ಬೆಳೆದರೂ ಅದು ರಾಜರ ಸ್ವತ್ತಾದ್ದರಿಂದ ಅದರ ರಫ್ತು ಹೆಚ್ಚಿರಲಿಲ್ಲ. ಹರಿಹರ ದಿಂದ ಉತ್ತಮವಾದ ಹತ್ತಿಯ ಬಟ್ಟೆಯನ್ನು ಹೊರಗೆ ಕಳುಹಿಸ ಲಾಗುತ್ತಿತ್ತು. ಆದರೆ ಇದರ ಪ್ರಮಾಣ ಕಡಿಮೆ. ಮೈಸೂರಿನಿಂದ ಉತ್ತರ ಕರ್ನಾಟಕಕ್ಕೆ ಹುರುಳಿ ಇತ್ಯಾದಿಗಳ ಕಳುಹಿಸುತ್ತಿದ್ದರು. ಆದರೆ ಅದಕ್ಕೆ ಅತ್ಯಂತ ಹೆಚ್ಚಿನ ತೆರಿಗೆ ೧೦೦% ವಿಧಿಸ ಲಾಗುತ್ತಿತ್ತು.[೨]

ಉತ್ತಮವಾದ ಗಾಜಿನ ಬಳೆಗಳನ್ನು ಎಲ್ಲಾ ಕಡೆಗೂ ಕಳುಹಿಸಲಾಗುತ್ತಿತ್ತು ಮತ್ತು ಎತ್ತಿನಗಾಡಿಯಲ್ಲಿ ಸಾಮಾನು ಕೊಂಡೊಯ್ದು ಮಾರಾಟ ನಡೆಸುತ್ತಿದ್ದರು. Lambadis ಅಥವಾ ಲಂಬಾಡಿ ಜನಾಂಗ ಸಮುದ್ರ ತೀರದಿಂದ ಮತ್ತು ಊರಿಗೆ ವ್ಯಾಪಾರಕ್ಕೆ ಹೋಗುತ್ತಿದ್ದರು. ಇವರಿಗೆ ನಿಶ್ಚಿತವಾದ ಅಥವಾ ಸ್ಥಳೀಯ ವಸತಿ, ವ್ಯವಸ್ಥೆ ಇದ್ದಿಲ್ಲ. ಇವರು ಸಂಸಾರ ಸಮೇತ ಊರಿಂದೂರಿಗೆ ತಿರುಗುತ್ತ ವ್ಯಾಪಾರ ಮಾಡುವರು. ಹೆಂಗಸರು, ಮರಗಳನ್ನು ಕಡಿದು ದಿಮ್ಮಿಗಳನ್ನು ಸಿದ್ದಪಡಿಸಿ ಪೇಟೆಗೆ ಕಳುಹಿಸು ವರು. ಹೆಂಗಸರು ಕಷ್ಟಪಟ್ಟು ಅಚ್ಚುಕಟ್ಟಾಗಿ ಕೆಲಸ ಮಾಡುವರು. ಇವರು ಹಿಂದೂಗಳು. ಮರಾಠಿ ಅಥವಾ ಹಿಂದೂಸ್ತಾನಿ ಭಾಷೆಯಲ್ಲಿ ಮಾತಾಡುವರು. ಆದರೆ ಇವರಿಗೆ ತೆಲುಗು ಭಾಷೆಯೂ ಬರುವದು. ಯುದ್ಧಕಾಲದಲ್ಲೂ ಈ ಜನಾಂಗ ಭೀತಿ ಇಲ್ಲದೆ ತಿರುಗಾಡುವರು. ಇವರು ಹೆಚ್ಚಿನ ಲಾಭಕ್ಕೆ ತಮ್ಮ ಸರಕುಗಳನ್ನು ಮಾರಾಟಮಾಡುವುದಿಲ್ಲ. ಬೆಂಗಳೂರಿನಲ್ಲಿ ಹೆಚ್ಚಾಗಿ ಬಟ್ಟೆಯನ್ನು ತಯಾರಿಸಿದರೂ ಹೊರಗಿನ ಊರುಗಳಿಗೆ ಕಳುಹಿಸುವದಿಲ್ಲ. ಉಣ್ಣೆ ಬಟ್ಟೆಗೆ ಬೆಲೆ ಜಾಸ್ತಿ. ಹೈನ್ಸ್‌ರವರು ಆ ಕಾಲದಲ್ಲಿ ಬಟ್ಟೆಗೆ ಬೆಲೆ ಎಷ್ಟಿತ್ತು ಎಂಬುದನ್ನು ಪಟ್ಟಿಮಾಡಿರುವರು. ಇದರಲ್ಲಿ ಹರಿಹರದ ಕಂಬಳಿ, ಬೆಂಗಳೂರು ಕಂಬಳಿ, ಹೇರೂರು, ದಾವಣಗೆರೆ, ಚಿತ್ರದುರ್ಗ ಕಂಬಳಿ, ಮತ್ತು ರುಮಾಲು ಉದ್ದ, ಅಗಲ ಹಾಗೂ ಬೆಲೆಗಳ ಸಹಿತ ನಿಖರವಾಗಿ ನಿರೂಪಿಸಿರುವರು. ಇದರಿಂದ ಆ ಕಾಲದ ಬೆಲೆಗಳ ಕಲ್ಪನೆ ಅರಿವಿಗೆ ಬರುವುದು. ರೇಷ್ಮೆಗೆ ಹೆಚ್ಚು ಬೆಲೆಯಿತ್ತು. ಯಾಕೆಂದರೆ, ಬೆಂಗಳೂರು, ಹರಿಹರದಲ್ಲಿ ಮಾತ್ರ ರೇಷ್ಮೆಯನ್ನು ಉತ್ಪಾದಿಸುತ್ತಿದ್ದರು.

ಭಾಷಾಜ್ಞಾನ ಮತ್ತು ವಿದ್ಯಾಭ್ಯಾಸ

ತೆಲುಗು ಭಾಷೆ ವಿಶೇಷವಾಗಿ ಬಳಕೆಯಲ್ಲಿತ್ತು. ಕನ್ನಡ ಮತ್ತು ತಮಿಳು ಭಾಷೆ ಸಾಮಾನ್ಯ ಜನರಿಗೆ ತಿಳಿಯುತ್ತಿತ್ತು. ನಿಡುಗಲ್‌ಗೆ ಬಂದೊಡನೆ ಕನ್ನಡ ಮಾತಿನ ಪ್ರಾಧಾನ್ಯತೆ, ನಿಡುಗಲ್‌ನಿಂದ ಹರಿಹರದವರೆಗೆ ಕನ್ನಡದ ಪ್ರಭಾವ ಇದ್ದರೂ, ಮರಾಠಿಯನ್ನು ಬರವಣಿಗೆ, ಲೆಕ್ಕಪತ್ರಕ್ಕೆ ಬಳಸುತ್ತಿದ್ದರು. ಮರಾಠಿಭಾಷೆ ಅರ್ಥ ವಾಗುತ್ತಿದ್ದು, ಸರ್ಕಾರದ ಹುಕುಂಗಳು ಮರಾಠಿ ಭಾಷೆಯಲ್ಲಿದ್ದವು. ಹಿಂದೂಸ್ಥಾನಿ ಅರ್ಥವಾದರೂ ಹೆಚ್ಚಿನ ಬಳಕೆಯಲ್ಲಿರಲಿಲ್ಲ.

ಮೈಸೂರು ದೇಶದ ಹಿಂದೂಗಳಲ್ಲಿ ಹಲವರು ವಿದ್ಯಾ ವಂತರಿದ್ದರು. ಆದರೆ ಟೀಪೂ, ಹೈದರ್ ಸಂಸ್ಥಾನದಲ್ಲಿ ವಿಜ್ಞಾನಕ್ಕೆ ಮಹತ್ವ ಕಡಿಮೆ. ಅಸಂಖ್ಯಾತ ಹಕೀಮರಿದ್ದು ಮದ್ದು, ಇಂದ್ರಜಾಲ, ಇವುಗಳಲ್ಲಿ ವಿಶೇಷವಾದ ನಂಬಿಕೆ, ಮತ್ತು ಜನರು ಇವುಗಳಲ್ಲಿ ಹೆಚ್ಚಿನ ವಿಶ್ವಾಸವಿಟ್ಟಿದ್ದರು. ಬ್ರಾಹ್ಮಣರಿಗೆ ಮಾತ್ರ ಹೆಚ್ಚಿನ ವಿದ್ಯೆ ಸೀಮಿತವಾಗಿತ್ತು. ಮಿಕ್ಕವರು ಬರೆಯುವದು, ಓದುವದು ಇಷ್ಟರಲ್ಲೇ ತೃಪ್ತಿಪಡುತ್ತಿದ್ದರು.

ಕಲೆಗಳು

ಸಂಗೀತ, ನೃತ್ಯ ಬಳಕೆಯಲ್ಲಿದ್ದವು. ಸಂಗೀತವು ತೆಲುಗು ಭಾಷೆಯಲ್ಲಿ ಹೆಚ್ಚಿನ ಬಳಕೆಯಲ್ಲಿತ್ತು. ನೃತ್ಯಗಾತಿಯರು ತೆಲುಗು ಪದಗಳ ಉಪಯೋಗ ಬಹುವಾಗಿ ಬಳಸುತ್ತಿದ್ದರು. ತೆಲುಗು ಅರ್ಥವಾಗದ ಊರಲ್ಲೂ ತೆಲುಗಿನ ಬಳಕೆಯಿತ್ತು. ಹಾಗೆಯೆ ಮೂರ್ ಮತ್ತು ಪರ್ಷಿಯನ್ ಹಾಡುಗಳೂ ಬಳಕೆಯಿತ್ತು.

ಪೌರಾಣಿಕ ನಾಟಕಗಳಾದ ರಾಮಾಯಣ, ಭಾಗವತವನ್ನು ನಟರು ಹೆಚ್ಚಿನ ಆಸಕ್ತಿ ವಹಿಸಿ ಆಡುತ್ತಿದ್ದರೂ, ಬಳಕೆ ಇದ್ದುದು ಸಂಸ್ಕೃತ ಭೂಯಿಷ್ಠ ಭಾಷೆ. ಅದಕ್ಕೆ ವ್ಯಾಖ್ಯಾನವು ಇರುತ್ತಿರಲಿಲ್ಲ. ಅದರ ಪದಗಳು ಬಹಳ ಕಡಿಮೆ ಜನಕ್ಕೆ ಅರ್ಥವಾಗುತ್ತಿತ್ತು. ವ್ಯಂಗ್ಯ ಹಾಸ್ಯ ಇವು ಬಳಕೆಯಲ್ಲಿತ್ತು. ಎಷ್ಟೋ ವೇಳೆ ಅಧಿಕಾರಿ ಯಾರೇ ಇರಲಿ ನಟರು ತಮ್ಮ ವ್ಯಂಗ್ಯವನ್ನು ಜನರ ಮನ ಸ್ಸಂತೋಷಕ್ಕೆ ಬಳಸುತ್ತಿದ್ದರು. ಮುಖ್ಯವಾಗಿ ದಿವಾನರು, ಬ್ರಾಹ್ಮಣರು - ಇವರುಗಳನ್ನು ಕುರಿತು ಅವರ ತಪ್ಪುಗಳನ್ನು ವ್ಯಂಗ್ಯವಾಗಿ ನವಿರು ಹಾಸ್ಯದಿಂದ ತೋರಿಸಿಕೊಡುತ್ತಿದ್ದರು.

ಕರಾವಳಿ ಕಡೆ, ನೃತ್ಯಗಾರ್ತಿಯರು ಮುಖ್ಯಪಾತ್ರವಹಿಸುತ್ತಿದ್ದರು. ಆದರೆ ಮೈಸೂರಿನಲ್ಲಿ, ಬ್ರಾಹ್ಮಣರ ಹುಡುಗರು, ಹೆಂಗಸಿನ ಪಾತ್ರ ವಹಿಸುತ್ತಿದ್ದರು. ಈ ಬ್ರಾಹ್ಮಣರ ಹುಡುಗರು ಅತ್ಯುತ್ತಮವಾಗಿ ಹೆಣ್ಣುಪಾತ್ರವನ್ನು ನಿರ್ವಹಿಸುತ್ತಿದ್ದರಿಂದ ಪ್ರೇಕ್ಷಕರು ಹಲವು ವೇಳೆ ಇವರು ಗಂಡುಪಾತ್ರಧಾರಿಗಳೆಂಬುದನ್ನು ಮರೆಯುತ್ತಿದ್ದರು ಎಂದು ಹೈನ್ಸ್‌ರವರು ಬರೆದಿದ್ದಾರೆ. ಸಾಮಾನ್ಯವಾಗಿ ರಾತ್ರಿ ೭-೮ ಗಂಟೆಗೆ ನಾಟಕ ಶುರುವಾಗಿ, ರಾತ್ರಿಯೆಲ್ಲಾ ನಡೆಯುತ್ತಿತ್ತು. ೮-೧೦ ದಿವಸ ಊರಿನ ಜನರು ಈ ಸಂಭ್ರಮದಲ್ಲಿ ಭಾಗವಹಿಸುತ್ತಿದ್ದರು.

ಚಿತ್ರಕಲೆ: ಹೈದರ್ ಮತ್ತು ಟಿಪ್ಪೂಸುಲ್ತಾನ್ ಅವರು ಹಲವಾರು ಅರಮನೆ, ಬಂಗ್ಲೆ ಮತ್ತು ದಿವಾನ್‌ಖಾನ್ ಇವುಗಳನ್ನು ಕಟ್ಟಿಸಿದರಷ್ಟೆ. ಇವುಗಳ ಅಂದಕ್ಕೆ ಉಪಯೋಗಿಸಿದ ಆಕರ್ಷಕ ಬಣ್ಣಗಳು ಮತ್ತು ಕುಂಚದಿಂದ ಮೂಡಿಬಂದ ಹಲವಾರು ಕಲಾಕೃತಿಗಳು ಎಲ್ಲರ ಮನಸ್ಸನ್ನೂ ಆಕರ್ಶಿಸಿತ್ತು.

ಈ ಉತ್ತಮ ಬಣ್ಣವನ್ನು ಹೇಗೆ ತಯಾರುಮಾಡಬೇಕು ಎಂಬುದರ ಬಗ್ಗೆ ಪುಸ್ತಕದಲ್ಲಿ ಉತ್ತಮವಾದ ವರ್ಣನೆಯಿದೆ. ಆ ಕಲಾಕೃತಿ ಚಿತ್ರಗಳು ಉಳಿದಿರುವದು ಬಹುಶಃ ಆ ಕಾಲದ ಕಲಾಕಾರನ ಕುಂಚದಿಂದ ಮೂಡಿಬಂದ ಉತ್ತಮ ಬಣ್ಣದ ಸಂಯೋಜನೆಯಿಂದ ಎಂದು ಧಾರಾಳವಾಗಿ ಹೇಳಬಹುದು.

ಉತ್ತಮವಾದ ಚರ್ಮದ ಉಡುಪುಗಳನ್ನು ಹರಿಹರದಲ್ಲಿ ತಯಾರು ಮಾಡುತ್ತಿದ್ದರು. ಹರಿಹರದ 'ಮುಚ್ಚಿಕಾರ' ಜನಾಂಗ ಈ ಕೆಲಸದಲ್ಲಿ ಪರಿಣತಿ ಹೊಂದಿದ್ದರು. ಉತ್ತಮವಾದ ಪುಸ್ತಕದ ಹೊದಿಕೆಯನ್ನು ಇಂದಿಗೂ 'Moracco Leather' ನಿಂದ ಮಾಡುವದನ್ನು ಮತ್ತು ಅವು ಅತ್ಯಂತ ಅಂದವಾಗಿರುವದನ್ನೂ ನಾವು ಕಾಣುತ್ತೇವೆ. 'Moracco Leather' ತಯಾರಿಸುವ ಬಗ್ಗೆ ಧೀರ್ಘವಾದ ಟಿಪ್ಪಣಿ ಇದೆ. ನೂತದಾರಕ್ಕೆ ರಂಗುಕೊಡುವ ಕೆಲಸವನ್ನು ಹರಿಹರದಿಂದ ನೈರುತ್ಯಕ್ಕೆ ಆರು ಮೈಲು ದೂರದಲ್ಲಿರುವ ಸಾರ್ಥಿಯಲ್ಲಿ ಮಾಡುತ್ತಿದ್ದರು. ಇದು ಕರಾವಳಿಯಲ್ಲಿ ಅನುಕರಿಸುವ ವಿಧಾನದ ರೀತಿಯಲ್ಲೇ ಇತ್ತು. (ಇದರ ಬಗ್ಗೆ ಕೂಡ ಧೀರ್ಘ ವಿವರಣೆ ಇದೆ). ಹರಪನಹಳ್ಳಿಯಲ್ಲಿ ರಂಗು ಕೊಡುವ ಕೆಲಸ ಇನ್ನೂ ಚೆನ್ನಾಗಿ ವ್ಯವಸ್ಥಿತ ರೀತಿಯಲ್ಲಿ ನಡೆದಿತ್ತು ಎಂಬುದನ್ನು ಡಾ|| ಹೈನ್ಸ್ ವರದಿ ಮಾಡಿದ್ದಾನೆ. ಇದಲ್ಲದೆ (Tract XXIV) ರಲ್ಲಿ ಮೈಸೂರಿನಲ್ಲಿ ಉಕ್ಕು ತಯಾರಿಸುವ ವಿಧಾನವನ್ನು ಸುದೀರ್ಘವಾಗಿ ವಿವರಿಸಲ್ಪಟ್ಟಿದೆ.

ಹೀಗೆ ಡಾ|| ಬೆಂಜಿಮನ್ ಹೈನ್ಸ್ ತಾವು ತಮ್ಮ ದೀರ್ಘಾವಧಿಯ ಕಂಪೆನಿಯ ಸೇವೆಯಲ್ಲಿ ತಮ್ಮ ಸಮಕಾಲೀನರಂತೆ ತಮ್ಮ ಅನುಭವಗಳನ್ನು ಬರೆದಿಡುವದರ ಮೂಲಕ ಹದಿನೆಂಟನೇ ಶತಮಾನದ ಮೈಸೂರಿನ ಸಾಮಾಜಿಕ ಚರಿತ್ರೆಗೆ ಉತ್ತಮ ಕೊಡಿಗೆ ನೀಡಿದ್ದಾರೆ ಎಂದು ಹೇಳಬಹುದು.

ಡಾ|| ಜಾನ್ ಲೇಡನ್ (೧೭೭೫ - ೧೮೧೧)

ಡಾ|| ಜಾನ್ ಲೇಡನ್ ಸ್ಕಾಟ್‌ಲೆಂಡ್‌ಗೆ ಸೇರಿದವರು. ಅವನ ಜನ್ಮಸ್ಥಳ ಡೆಸ್‌ಹಾಮ್ (೮ ಸೆಪ್ಟೆಂಬರ್ ೧೭೭೫). ಕಿರ್ಕಟೌನ್‌ನಲ್ಲಿ ತಮ್ಮ ಪ್ರಾಥಮಿಕ ಅಭ್ಯಾಸವನ್ನು ಮುಗಿಸಿ (೧೭೯೦-೯೭) ಎಡಿನ್‌ಬರೋ ವಿಶ್ವವಿದ್ಯಾನಿಲಯದಲ್ಲಿ ತನ್ನ ವಿದ್ಯಾಭ್ಯಾಸವನ್ನು ಉನ್ನತ ತರಗತಿಯಲ್ಲಿ ಮುಗಿಸಿದರು. ಮತ್ತು ಬಿಡುವಿದ್ದಾಗ ಭೌತಿಕ ವಿಜ್ಞಾನ ಮತ್ತು ಆಧುನಿಕ ಭಾಷೆಗಳು, ಹೀಬ್ರು ಪರ್ಷಿಯನ್ ಮತ್ತು ಅರಾಬಿಕ್ ಕಲಿಯುವದರಲ್ಲಿ ತೊಡಗಿಕೊಂಡರು. ಇದಲ್ಲದೆ ಆ ಕಾಲದ ಹೆಸರಾಂತ ಕವಿಗಳಾದ ಥಾಮಸ್‌ಬ್ರೌನ್, ಸಿಡ್ನಿಸ್ಮಿತ್ ಹಾರ್ನರ್‌ರವರ ಸಹವಾಸವಾಯ್ತು. (೧೭೯೩-೯೩) ಕ್ಯಾಂಪ್‌ಬೆಲ್‌ರವರ ಮಕ್ಕಳಿಗೆ ಬೋಧಿಸುತ್ತಿದ್ದರು. ೧೭೯೯ರಲ್ಲಿ ರಿಚರ್ಡ್ ಹೇಬರ್‌ರವರ ಪರಿಚಯದಿಂದ ಪ್ರಭಾವಿತರಾದರು. ಇದೇ ಸಮಯದಲ್ಲಿ ಲೇಡನ್‌ರವರು *A Historical and philosophical sketch of the Discoveries and Settlements of the European in Northern and Western Africa at the close of the Eighteenth Century* ಎಂಬ ಪ್ರಬಂಧವನ್ನು ಬರೆದರು. ಇದನ್ನು ಎರಡು ಭಾಗವಾಗಿ Hugh Murray ಪ್ರಕಟಿಸಿದರು. ಅಷ್ಟರಲ್ಲಿ Scotts ರವರ ಪ್ರಭಾವಕ್ಕೆ ಒಳಗಾದ ಜಾನ್ ಲೇಡನ್ ೧೮೦೨ರಲ್ಲಿ Scots Magazine ಸಂಪಾದಕತ್ವವನ್ನು ಹೊಂದಿ ತಮ್ಮ ಪ್ರತಿಭಾನ್ವಿತ ಪದ್ಯ, ಗದ್ಯಗಳಿಂದ ಪರಿಚಿತರಾಗಿದ್ದರು.

ಆದರೆ ಪ್ರತಿಭಾನ್ವಿತರಾದದೂ ನಿಶ್ಚಿತವಾದ ಕೆಲಸವಿದ್ದಿಲ್ಲ. ತಮ್ಮ ಬಿಡುವಿನ ಸಮಯದಲ್ಲಿ ಲೇಡನ್ ವೈದ್ಯಕೀಯಕ್ಕೆ ಸಂಬಂಧಪಟ್ಟ ಮೊದಲನೇ ಹಂತದ ಓದನ್ನು ಮುಗಿಸಿದ್ದರು. ಇಂಡಿಯಾ ಕಡೆ ಅವರ ಒಲವು ಮೂಡುವುದಕ್ಕೆ ಕಾರಣ ಅವರ ಭಾಷಾಪ್ರಭುತ್ವ ಮತ್ತು ಸ್ನೇಹಿತರಾದ ಜಾನ್‌ಮಲ್‌ಕಾಮ್, ಲಾಡನ್ ಮಿಂಟೋ ಮತ್ತು ಮೆಕಿಂಶೋಷ, ವಾಲ್ಟರ್‌ಸ್ಕಾಟ್, ಹೇಬರ್ ಎಲ್ಲರಿಗೂ ಪ್ರತಿಭಾವಂತರಾದ ಲೇಡನ್ ಇಂಡಿಯಾಕ್ಕೆ ಹೋಗಿ ತನ್ನ ಭಾಷಾಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳಬೇಕೆಂದಿತ್ತು. ಆದರೆ ಇಂಡಿಯಾದಲ್ಲಿ ಕೂಡ ಕೆಲಸ ಸಿಗುವದು ಅಷ್ಟೇನೂ ಸುಲಭವಾಗಿರಲಿಲ್ಲ. ಆಗ William Dundes ರವರು Board of Control ನಲ್ಲಿದ್ದರು. Dundes ರವರು ಆರು ತಿಂಗಳಲ್ಲಿ M.D. ಮುಗಿಸುವದಾದರೆ, ಮದ್ರಾಸಿನಲ್ಲಿ Asst Surgeon ಪದವಿಯನ್ನು ಮದ್ರಾಸ್ ಜನರಲ್ ಹಾಸ್ಪಿಟಲ್‌ನಲ್ಲಿ ಕೊಡಿಸುವದಾಗಿ ಆಶ್ವಾಸನೆ ಇತ್ತರು. ಎಡಿನ್‌ಬರೋದಲ್ಲಿ Dip - in - Medicine ಸಂಪಾದಿಸಿದರು. ಆ ಕಾಲಕ್ಕೆ ಎಡಿನ್‌ಬರೋ ವಿಶ್ವವಿದ್ಯಾನಿಲಯ ವೈದ್ಯಕೀಯ ವಿದ್ಯಾಭಾಸಕ್ಕೆ ಹೆಸರುವಾಸಿಯಾದ ಸಂಸ್ಥೆ. St.Andrews ಕಾಲೇಜಿನಿಂದ M.D. ಪದವಿ ಪಡೆದರು.

William Dundes ಲೇಡ್‌ನ್‌ರವರಿಗೆ (೧೮೦೩) ಅಸಿಸ್ಟೆಂಟ್ ಸರ್ಜನ್ ಪದವಿಯನ್ನು ಮದ್ರಾಸ್ ಜನರಲ್ ಹಾಸ್ಪಿಟಲ್‌ನಲ್ಲಿ ಕೊಡಿಸಿದರು. ಲೇಡನ್ ಇಂಡಿಯಾ ಹೌಸ್‌ಗೆ ತಮ್ಮ ಮೆಡಿಕಲ್ ಡಿಗ್ರಿಯಿಂದ ತೃಪ್ತಿಪಡಿಸಿ ಕೆಲಸಗಿಟ್ಟಿಸಿದರೂ, ಮೂಲತಃ ಅವರನ್ನೂ ಅವರ ಸಾಮರ್ಥ್ಯವನ್ನು ಅರ್ಥಮಾಡಿಕೊಂಡ William Dundes ಅವರ ಉದ್ದೇಶ ಲೇಡನ್‌ರವರ ಭಾಷಾಶಾಸ್ತ್ರವನ್ನು ಪ್ರೋತ್ಸಾಹಿಸಲು ಮತ್ತು ತಕ್ಕ ಉತ್ತೇಜನ ನೀಡಲು ಲೇಡನ್ ಸಮರ್ಥವಾದ ವ್ಯಕ್ತಿ ಎಂಬುದು. (೧೮೦೩) ಇಂಡಿಯಾ ತಲಪಿ ಮದ್ರಾಸಿನ ಜನರಲ್ ಹಾಸ್ಪಿಟಲ್‌ನಲ್ಲಿ ನಾಲ್ಕು ತಿಂಗಳ ಕಾಲ ಕೆಲಸಮಾಡಿದರು. ತಮಗೆ ಸಮಯ ಸಿಕ್ಕಾಗ, ದಕ್ಷಿಣದ ಭಾಷೆಗಳ ಅಭ್ಯಾಸದಲ್ಲಿ ತೊಡಗಿದರು. ಮದ್ರಾಸ್ ಗೌರ್ನರ್ ಲಾರ್ಡ್ ವಿಲಿಯಂ ಬೆಂಟಿಕ್ ಲೇಡನ್‌ರವರಿಗೆ ಜವಾಬ್ದಾರಿ ಕೆಲಸವನ್ನು ವಹಿಸಿದ್ದೇ ಅಲ್ಲದೆ, ಮತ್ತು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿಸಿದರು. ಆಗ ತಾನೆ ಟೀಪೂ ಸುಲ್ತಾನನ ಪತನವಾಗಿತ್ತಷ್ಟೆ. ಲೇಡನ್‌ರವರು ಕಮೀಷನರ್ ಅವರಿಗೆ ಡಾಕ್ಟರ್ ಆಗಿ ಬಡ್ತಿ ಪಡೆದರು. ಕರ್ನಲ್ ಮೆಕನ್‌ಜಿ ಅವರಿಗೆ ಸಹಾಯಕ ವಾಗಿ, ಮೋಜಣಿದಾರರಾಗಿ ಮೈಸೂರಿನ ಸುತ್ತಮುತ್ತ ಓಡಾಡಿ ವಾಣಿಜ್ಯ ಮತ್ತು ಬೆಳೆ, ಬೆಳೆಗಳಿಗೆ ತಗುಲುವ ರೋಗಗಳು ಮತ್ತು ಮೈಸೂರು ದೇಶದ ಸ್ಥಳೀಯರ ರೋಗಗಳು, ಅವುಗಳಿಗೆ ಔಷಧ ಮತ್ತು ಪರಿಹಾರ, ಇವುಗಳೆಲ್ಲದರ ಸಂಬಂಧಪಟ್ಟ ವಿಶೇಷವಾದ ವರದಿ ತಯಾರಿಸಿ ಸರ್ಕಾರಕ್ಕೆ ಒಪ್ಪಿಸಿದರು. ಆದರೆ ಈ ರಿಪೋರ್ಟ್ ಇದುವರೆಗೂ ಲಭ್ಯವಿಲ್ಲ. ಲಭ್ಯವಾದಲ್ಲಿ ಮೈಸೂರಿನ ಚರಿತ್ರೆಯ ಮೇಲೆ ವಿಶೇಷವಾದ ಬೆಳಕನ್ನು ಬೀರುವುದರಲ್ಲಿ ಸಂದೇಹವಿಲ್ಲ. ಮೈಸೂರು, ಮಲಬಾರ್ ಮತ್ತು ಮಲಯ ದೇಶದಲ್ಲಿ ವಿಶೇಷವಾಗಿ ಸುತ್ತಾಡಿ ಜಾನ್‌ಲೇಡ್‌ನ್ Language and literature of Indo Chinese Nations ಎಂಬ ಸಂಗ್ರಹ ಲೇಖನ ಬರೆದಿರುವರು. ಓಡಾಟದ ಪರಿಣಾಮವಾಗಿ ಶ್ರೀರಂಗಪಟ್ಟಣದಲ್ಲಿ ಅನಾರೋಗ್ಯದ ನಿಮಿತ್ತ ಮಲಗಬೇಕಾಯ್ತು. ಅನಾರೋಗ್ಯದಿಂದ ಮಲಗಿದಾಗ ಅವರನ್ನು ವಿಶೇಷ ಆಸಕ್ತಿಯಿಂದ ನೋಡಿಕೊಂಡವರು Sir John Malcolm. ಆಗ Sir John Malcolm. ಮೈಸೂರು ದೇಶದ ರೆಸಿಡೆಂಟರಾಗಿದ್ದರು. ಅನಾರೋಗ್ಯದಲ್ಲೂ ಲೇಡನ್ ತಮ್ಮ ದಿನಚರಿ, ಓದು, ೧೦ಘಂಟೆ ಬರವಣಿಗೆ ಮುಂದುವರಿಸಿದ್ದರು. ೧೮೦೬ರಲ್ಲಿ ಡಾ|| ಜಾನ್‌ಲೇಡನ್ ಕಲ್ಕತ್ತೆಯಲ್ಲಿ ನೆಲಸಿ ತಮ್ಮ ಭಾಷಾ, ಸಂಸ್ಕೃತಿ ವ್ಯಾಸಂಗ ಮುಂದುವರಿಸಿದರು. ಕಲ್ಕತ್ತೆಯಲ್ಲಿ ಆಗ ತಾನೆ ಆರಂಭಿಸಿದ್ದ Fort. St. George ಕಾಲೇಜಿನಲ್ಲಿ ಹಿಂದೂಸ್ತಾನಿ ಭಾಷೆಗಳ ಪ್ರಾಧ್ಯಾಪಕರಾದರು. Fort. St. George ಕಾಲೇಜನ್ನು (೧೮೦೦)ರಲ್ಲಿ ಲಾರ್ಡ್ ವೆಲಸ್ಲಿಯವರು ಸ್ಥಾಪಿಸಿದ್ದರು. ಇದು ಇಂಡಿಯಾದಲ್ಲೇ ಪ್ರಾಚ್ಯ ಸಂಸ್ಕೃತಿಯನ್ನು ಬೋಧಿಸಿದ ಮೊದಲನೆ ಕಾಲೇಜು. ಇಲ್ಲಿ ಸಹಜವಾಗಿ ಐರೋಪ್ಯ ಮತ್ತು ಹಿಂದೂಸ್ತಾನಿ ಪ್ರಾಧ್ಯಾಪಕರು ಬೋಧಿಸುತ್ತಿದ್ದರು. ಈ ಕಾಲೇಜಿನ ಮೂಲ ಉದ್ದೇಶ ಬ್ರಿಟೀಷ್ ಸಿವಿಲ್ ಸರ್ವೀಸಿಗೆ ತರಬೇತಿಯನ್ನು ನೀಡಿ ಉತ್ತಮವಾದ ಅಧಿಕಾರಿಗಳನ್ನು ತಯಾರು ಮಾಡಲೆಂಬುದು. ಇದಲ್ಲದೆ ಸರ್ಕಾರದ ಅಧಿಕಾರಿಗಳು ಆಯಾ ಪ್ರಾಂತ್ಯದ ಭಾಷಾ ಜ್ಞಾನವನ್ನು ಹೊಂದಿರಬೇಕು. ಉತ್ತಮ ಸಂಸ್ಕೃತಿಯೊಂದಿಗೆ, ಹಿಂದೂಸ್ತಾನದ ಸಂಸ್ಕೃತಿಯ ಮತ್ತು ಭಾಷಾ ಪರಿಜ್ಞಾನ ಪರಿಚಯವಿರಬೇಕು. ಈ ಉದ್ದೇಶದಿಂದ ಸ್ಥಾಪಿಸಿದ್ದು ಫೋರ್ಟ್ ಸೆಂಟ್ ಜಾರ್ಜ್ ಕಾಲೇಜು. ಕಾಲೇಜಿನಲ್ಲಿ ಹಲವಾರು ಭಾಷಾ ಪಂಡಿತರಿದ್ದರು. ಲೇಡನ್ ಇಲ್ಲಿ ಹಿಂದೂಸ್ಥಾನಿ ಭಾಷಾ ಪ್ರಾಧ್ಯಾಪಕರೆಂದು ಸೇರಿದಾಗ, ೧೮೧೧ರಲ್ಲಿ ಸುದರ್ಶನ ಮತ್ತು ಭಾರತಿರಮಣ ಎಂಬ ತಮಿಳು ಮತ್ತು ಕನ್ನಡ ಪಂಡಿತರಿದ್ದರೆಂದು ತಿಳಿದು ಬರುತ್ತದೆ. ಇದಲ್ಲದೆ ೧೮೦೧ರಲ್ಲಿ ಬವೇರಿರಾವ್ ಎಂಬ ಪಂಡಿತರನ್ನು ಕನ್ನಡ ಕಲಿಸಲು ನೇಮಿಸಿದ್ದರೆಂದೂ ತಿಳಿದುಬರುತ್ತೆ. ಇದು ದಕ್ಷಿಣ ಭಾಷೆಗಳಿಗೆ ಆ ಕಾಲದಲ್ಲಿ ಕೊಟ್ಟಿರುವ ಪ್ರೋತ್ಸಾಹ.

೧೮೦೭ರಲ್ಲಿ ಲೇಡ್‌ನ್ ಏಷ್ಯಾಟಿಕ್ ಸೊಸೈಟಿಯ ಸದಸ್ಯತ್ವವನ್ನು ಹೊಂದಿದ್ದರು. ಇದಲ್ಲದೆ ಹಲವಾರು ಭಾಷೆಗಳಲ್ಲಿ ಅನುವಾದ ಮಾಡಿದ್ದರು. ಇದಲ್ಲದೆ ಕಲ್ಕತ್ತಾದಲ್ಲಿ ಹಲವು ಕಾಲ ನ್ಯಾಯಾಧೀಶ ಪದವಿ ಹೊಂದಿದ್ದರು. ೧೮೧೦ರಲ್ಲಿ ಲಾರ್ಡ್ ಮಿಂಟೋ, ಇವರನ್ನು ಟಂಕಶಾಲೆಯಲ್ಲಿ ಲೋಹಪರೀಕ್ಷೆ ಕೆಲಸಮಾಡಲು ನೇಮಿಸಿದ್ದರು. ಇವರ ಬಹುಮುಖ ಪ್ರತಿಭೆಯ ಕಾರಣ ೧೮೧೧ರಲ್ಲಿ ಲಾರ್ಡ್‌ಮಿಂಟೋರವರ ಅಣತಿಮೇರೆಗೆ ಜಾವಾಕ್ಕೆ ವ್ಯಾಖ್ಯಾನಕಾರ (ದುಭಾಷಿ) ಮುಖ್ಯವಾಗಿ ಮಲೇಶಿಯಾ ಭಾಷೆಯ ಭಾಷಾಂತರಕಾರರಾಗಿ ಇವರು ಹೋಗಬೇಕಾಯಿತು. ಸಹಜವಾಗಿ ಪುಸ್ತಕ ಪ್ರಿಯರಾದ ಡಾ|| ಜಾನ್ ಲೇಡನ್ ಹಲವಾರು ವರ್ಷದಿಂದ ಮುಚ್ಚಿದ್ದ ಡಚ್ ಗ್ರಂಥ ಭಂಡಾರವನ್ನು ಹೊಕ್ಕು ಅದರಲ್ಲೇನಾದರೂ ಅಪರೂಪ ಗ್ರಂಥ, ಓಲೆಗರಿ ಇದೆಯೇನೋ ಎಂದು ಹುಡುಕುವುದಕ್ಕೆ ಹೊರಟಾಗ, ಮಾರಕ ದ್ರವ್ಯ ಸಿಂಪಡಿಸಿದ್ದ ಮತ್ತು ಗಾಳಿ ಬೆಳಕಿಲ್ಲದೆ ಮುಚ್ಚಿದ್ದ ಗ್ರಂಥಭಂಡಾರದ ವಿಷಪೂರಿತವಾದ ಗಾಳಿಯನ್ನು ಸತತ ಸೇವಿಸಿದ್ದರ ಫಲವಾಗಿ (೨೮ ಆಗಸ್ಟ್ ೧೮೧೧)ರಲ್ಲಿ ಮರಣವನ್ನೊಪ್ಪಿದರು.

ಡಾ|| ಜಾನ್‌ಲೇಡನ್‌ರವರ ಹಲವಾರು ಪದ್ಯ ರಚನೆಗಳು Poetical remains of John Leyden ಪುಸ್ತಕದಲ್ಲಿದೆ. (೧೮೧೯). ಅವರು ಬರೆದಿಟ್ಟಿರುವ ಹಲವಾರು ಪದ್ಯಗಳಲ್ಲಿ ನಮಗೆ ಪ್ರಸ್ತುತವಾದದ್ದು 'The Dirge of Tippo Sultan' ಇದು ೩೪ ಪದ್ಯಗಳ ಸಂಕಲನ. ಇದನ್ನು ಟೀಪೂ ಸುಲ್ತಾನನ ಮೇಲೆ ರಚಿಸಿದ ಚರಮಗೀತೆ ಅಂತ ವ್ಯಾಖ್ಯಾನಿಸಬಹುದು. ಇವು ಸಾಕಷ್ಟು

ದೊಡ್ಡದಾಗಿದ್ದು ಪದ್ಯಗಳು ಅರ್ಥಪೂರ್ಣವಾಗಿ, ಸರಳವಾಗಿ ರೂಪುಗೊಂಡಿವೆ.

ಜೀವನದಲ್ಲಿ ವ್ಯಕ್ತಿ ಎಷ್ಟೇ ದೊಡ್ಡವನಾದರೂ ಒಂದು ದಿವಸ ಮಣ್ಣಿನಲ್ಲಿ ಸೇರುವನೆಂದು ಒತ್ತಿ ಹೇಳಿದೆ. ಉಧಾಹರಣೆಗೆ:

How Quickly fled our Sultans state
How Soon his pomp has passed away
How swiftly sped Seringas fate
From Wealth and Power to dire decay

ಮತ್ತೊಂದು ಸಂಕಲನ:

On the Death of Tipoo Sultan (From the Hindustani) - ಇದರಲ್ಲಿ ಐದು ಚರಮಗೀತೆ ಇದೆ. ಇದು ಟೀಪೂ ಸುಲ್ತಾನನ ಶೌರ್ಯ ಮತ್ತು ಪರಾಕ್ರಮ ಎತ್ತಿಹಿಡಿದು, ಸುಲ್ತಾನನ ಪತನವನ್ನು ಮಾರ್ಮಿಕವಾಗಿ ಪ್ರತಿಬಿಂಬಿಸಿದೆ.

His throne is now the Lowly dust
Who late was all our earthly trust
Ah! every month was filled with dust
When fell the gallant Sultan.

ಡಾ|| ಜಾನ್‌ಲೇಡನ್‌ರವರ ಅಕಾಲಿಕ ಮರಣ (೩೬ನೇ ವರುಷದಲ್ಲಿ) ಸಾರಸ್ವತ ಲೋಕಕ್ಕೆ ಮತ್ತು ಭಾಷಾ ಪ್ರಿಯರಿಗೆ, ಮತ್ತು ಜಾನ್ ಮಲ್‌ಕಾಮ್‌ರವರಿಗೆ ತುಂಬಲಾರದ ನಷ್ಟ ವಾಯಿತು.

ಹೀಗೆ ಸಮಕಾಲೀನರಾದ ಡಾ|| ಬೆಂಜಿಮನ್ ಹೈನ್ಸ್ ಮತ್ತು ಡಾ|| ಜಾನ್ ಲೇಡ್‌ನ್ ವೃತ್ತಿಯಲ್ಲಿ ವೈದ್ಯರಾದರೂ ಅವರು ಚಾರಿತ್ರಿಕ ಮತ್ತು ಪ್ರಾಚ್ಯ ಸಂಸ್ಕೃತಿಗಳಿಗೆ ನೀಡಿದ ಕೊಡುಗೆ ಚರಿತ್ರ ಕಾರನಿಗೆ ಆಕಾರವನ್ನು ಒದಗಿಸಬಲ್ಲದು ಎಂದು ಹೇಳಬಹುದು

ಅನುಬಂಧ

Instruments of Tillage

These instruments are remarkable only for their rudeness and simplicity. The following descriptions, with the accompanying figures, will give the reader an accurate idea of them:

Plate II. fig. 1, represents the common plough used all over the peninsula: a is the ploughshare, a piece of iron $1^1/_2$ foot long and $1^1/_2$ inch broad, and the only piece of iron about the whole machine; b is the handle by which the ploughman guides the plough; c c is a piece of wood to which the oxen are fastened; d d, is the wooden plough about $2^1/_2$ feet long.

Fig. 2, represents the weeding plough used about Hurryhurr; e e is a piece of wood 18 inches long, m m pieces of iron ; n the space between the iron three inches long.

Fig. 3, represents a harrow used about Bengalore to precede the drill plough, h h is a piece of wood four feet six inches long, i teeth ten inches long; j, j, the bars of wood to which it is fixed $7^1/_2$ feet long, k the handle two feet nine inches long.

Fig. 4, is an instrument used about Bengalore to even the ground before sowing. It is made of black wood, and the ploughman usually stands upon it in order to increase the weight. The length from l to l is four feet nine inches; m, m, each six feet long.

Fig. 5, is a drill plough used about Bengalore for sowing raghi: a is a cup into which the seed is put, four inches deep; b,b,b, hollow bamboos through which the seed runs into the furrow. They perforate the teeth about the middle, and are three feet six inches long. The length from c to c is four feet nine inches; d is the handle, four feet nine inches long. The pieces of wood e, e, to which the bullocks are fixed, are nine feet long; f is a bamboo with a cup to receive annuma seed, guided by a man who follows the large drill which sows the raghi; the bamboo is one foot three inches long, and the cup $1^1/_2$ inch deep: g is a rope $2^1/_2$ feet long, by which the bamboo is fastened to the drill plough.



Fig. 8.

Fig. 6, is a drill plough used about Hurryhurr for sowing jonnalu. The distace between n and n is three feet; o,o,o,o, are hollow bamboos; p,p,p,p, are teeth armed with qqqq, a share or a piece of iron.

Fig.7, is a plough used to weed raghi about Benalore. The distance between h and h is one foot five inches; i,i,i,i, are pieces of iron sticking.

$1^2/_3$ inches out of the wood; k is the handle two feet long; l the handle to guide, two feet five inches; m, m, the pieces of wood to which the cattle are tied, seven feet long.

Fig. 8, is an instrument used about Hurryhurrr to even the ploughing ground. The distance between r and r is three feet' s, s, is a piece of iron.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. Details of Instruments of Tillage Attached. with Explanations. [Courtesy: Bombay University Library]

೨. ರೈತರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಆಗಾಗ ಬರುತ್ತಿದ್ದ ಯುದ್ಧದಿಂದ ಮತ್ತು ಹೆಚ್ಚಿನ ತೆರಿಗೆಯಿಂದ ಹಲವಾರು ಬಾರಿ ರೈತರು ಎಲ್ಲವನ್ನೂ ಕಳೆದುಕೊಂಡು ಕೂಲಿಗಾರರಾಗಿದ್ದುಂಟು ಎಂದು ೧೭೯೭ರಲ್ಲಿ ಮನ್ರೊ ವಿವರಿಸಿದ್ದಾನೆ. ರೈತ ತಾನು ಬೆಳದದ್ದರಲ್ಲಿ ಅರ್ಧಭಾಗವನ್ನು ಉಳಿಸಿಕೊಂಡರೂ, ಅದರಲ್ಲಿ ತಾನು ಸಾಲಕ್ಕೆ ತೆರಬೇಕಾದ ವಂತಿಗೆ ಮತ್ತು ಸಾಹುಕಾರನಿಗೆ ಕೊಡಬೇಕಾದ ಬಾಕಿ ಇವುಗಳು ಕೊಟ್ಟ ಮೇಲೆ, ರೈತನ ಪಾಲಿಗೆ ಉಳಿಯುವದು ಅತ್ಯಂತ ಶೋಚನೀಯ ಪಾಲು. ಇದರಿಂದ ಉಳುವವನಿಗೆ ಲಾಭ ಎಂದೂ ಇದ್ದಿಲ್ಲ.
See also Maya Gupta : *Lord William Bentick in Madras and the Vellore Mutiny 1803-1807* : p. 57, New Delhi, 1986.

ಪ್ರೊ|| ವಸಂತಕುಷ್ಟಗಿ*

ರಾಷ್ಟ್ರೀಯ ಆಂದೋಲನ : ಕಲಬುರಗಿಯ ನೂತನ ವಿದ್ಯಾಲಯ

ಇಸವಿ ೧೮೯೯, ಪರ್ಯಾಯವಾಗಿ ವರದಾನವೆಂದೇ ಹೇಳಬೇಕು. ಏಕೆಂದರೆ ಲಾರ್ಡ್‌ಕರ್ಜನ್‌ನು ಇದೇ ವರ್ಷ ಹಿಂದೂಸ್ಥಾನಕ್ಕೆ ಬ್ರಿಟಿಷರ ವಾಯ್‌ಸರಾಯನಾಗಿ ಬಂದು, ೧೯೦೫ರವರೆಗೆ ಇಲ್ಲಿಯ ಒಳಗುಟ್ಟುಗಳನ್ನೆಲ್ಲ ತಿಳಿದುಕೊಂಡು ಅನೇಕ ಫಿತೂರಿ ನಡೆಸಿ, ಜಾತಿಭೇದದ ದಳ್ಳುರಿಯ ಬೀಜಬಿತ್ತಿ, ಬ್ರಿಟಿಷರ ಒಡೆದಾಳುವ ನೀತಿಯನ್ನು ಘಂಟಾಘೋಷವಾಗಿಸಿದನು. ಅಷ್ಟೇ ಅಲ್ಲ ೧೯೦೫ರಲ್ಲಿ ವಂಗಭಂಗ ನೀತಿಯನ್ನು ತಂದು ಬಂಗಾಲ ಪ್ರಾಂತವನ್ನು ಒಡೆದು, ಹಿಂದೂ ಮುಸಲ್ಮಾನರ ಮನಸ್ಸುಗಳನ್ನು ಅಲ್ಲೋಲ ಕಲ್ಲೋಲಗೊಳಿಸಿದನು. ಹೀಗಾಗಿ ರಾಷ್ಟ್ರೀಯ ನೇತಾರರಲ್ಲಿ ಒಗ್ಗಟ್ಟಿನ ಛಲ ಬಂದು, ರಾಷ್ಟ್ರದಾದ್ಯಂತ ದೇಶಾಭಿಮಾನವನ್ನು ಶ್ರೀ ಸಾಮಾನ್ಯನಲ್ಲಿಯೂ ಜಾಗ್ರತಗೊಳಿಸಲು ಅವರೆಲ್ಲ ಒಂದು ಬಲತ್ತರವಾದ ಸಂಘಟನೆಯಾದರು. ವಿಶಿಷ್ಟವಾದ ನಾಲ್ಕು ಅಂಶಗಳನ್ನು ಅಳವಡಿಸಿಕೊಂಡು ಸ್ವದೇಶೀ ಚಳವಳಿಯನ್ನು ಹುಟ್ಟುಹಾಕಿ, ಹಿಂದೂಸ್ಥಾನದ ತುಂಬೆಲ್ಲ ರಾಷ್ಟ್ರೀಯ ಜಾಗೃತಿಯನ್ನು ತಂದರು. ಅದ್ದರಿಂದ ಲಾರ್ಡ್ ಕರ್ಜನ್‌ನ ದುಷ್ಟತನವೂ ಕೂಡ ನಮ್ಮದೇಶದ ಸ್ವಾತಂತ್ರ್ಯದ ಆಂದೋಲನದ ಸಂಘಟನೆಗೆ, ದೇಶದ ಜನರೆಲ್ಲರೂ ಒಂದಾಗಲಿಕ್ಕೆ ಕಠೋರ ಕರುಣೆಯಾಗಿ, ೧೮೯೯, ಪರ್ಯಾಯವಾಗಿ ನಮ್ಮ ದೇಶಕ್ಕೆ ಒಂದು ವರದಾನವಾಯಿತೆಂಬುದು ಸ್ಥೂಲ ಅಭಿಪ್ರಾಯ.

ಸ್ವದೇಶೀ ಚಳವಳಿ ಕಾರಣ, ೧೯೦೫ರಲ್ಲಿಯ ವಂಗಭಂಗ ನೀತಿಯಿಂದಾಗಿ ದೇಶದಲ್ಲಿ ಅಸಮಾಧಾನವು ತೋರಿದಾಗ, ಹಿಂದೂಸ್ಥಾನದ ರಾಷ್ಟ್ರೀಯ ನೇತಾರರು ಸ್ವೀಕರಿಸಿದ ಈ ಕೆಳಗಿನ ನಾಲ್ಕು ಅಂಶಗಳನ್ನು ರಾಷ್ಟ್ರೀಯ ಚಳವಳಿಗೆ ಪ್ರಮುಖ ಜೀವಾಂಶಗಳೆಂದು ಪರಿಗಣಿಸಿದರು:

೧. ಪರದೇಶೀ ವಸ್ತ್ರಗಳ ಬಹಿಷ್ಕಾರ; ೨. ಸ್ವದೇಶೀ ವಸ್ತುಗಳಿಗೆ ಮಾನ್ಯತೆ ನೀಡಿ ಸ್ವೀಕರಿಸುವುದು ; ೩. ಕಾರ್ಕೂನು ಕಾರ್ಖಾನೆಯಲ್ಲಿ ಸಿಕ್ಕು ಬಿದ್ದಿದ್ದ ಶಿಕ್ಷಣವನ್ನು ಮುಕ್ತಗೊಳಿಸಿ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವುದು; ೪. ಸ್ವರಾಜ್ಯವನ್ನು ಮತ್ತೆ ಪಡೆಯುವುದು.

ಈ ಮೇಲಿನ ನಾಲ್ಕು ಅಂಶಗಳನ್ನು ಪ್ರಮುಖವಾಗಿ ಇಟ್ಟುಕೊಂಡು ಈ ರಾಷ್ಟ್ರೀಯ ಆಂದೋಲನಕ್ಕೆ ಪ್ರಮುಖ ನೇತಾರರಾಗಿ ಲಾಲಾಲಜಪತರಾಯ್, ಬಾಲಗಂಗಾಧರ ತಿಲಕ್ ಬಿಪಿನ್ ಚಂದ್ರಪಾಲ - ಈ ಮೂವರೂ ತ್ರಿ-ಮೂರ್ತಿಗಳಾಗಿ, 'ಲಾಲ ಬಾಲ ಪಾಲ' ಎಂಬ ಏಕೋಭಾವದ ಅಂಕಿತದಲ್ಲಿ ರಾಷ್ಟ್ರದ ಸ್ವರಾಜ್ಯ ಸಾಧನೆಗೆ ಭದ್ರ ಬುನಾದಿಯನ್ನು ಹಾಕಿದರು. ಇವರಲ್ಲಿ ಬಾಲಗಂಗಾಧರ ತಿಲಕರು, ರಾಷ್ಟ್ರವು ಸ್ವರಾಜ್ಯವನ್ನು ಮತ್ತೆ ಪಡೆಯಬೇಕಾದರೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸೂಕ್ತ ರೀತಿಯಲ್ಲಿ ದೇಶದ ತುಂಬ ಜಾರಿಯಲ್ಲಿ ತರಬೇಕೆಂಬುದರ ಬಗ್ಗೆ ಒತ್ತುಕೊಟ್ಟರು. ದೇಶಾಭಿಮಾನ ಸ್ವಾಭಿಮಾನ, ಸ್ವಾವಲಂಬನೆಯತ್ತ, ಸ್ವದೇಶೀ ಸಂಸ್ಕೃತಿ ಹಾಗು ಸ್ವದೇಶೀ ಇತಿಹಾಸಗಳ ತಿಳಿವಳಿಕೆ, ಬ್ರಿಟಿಷರ ಕುಹಕ ನೀತಿಯ ಪರಿಜ್ಞಾನ ಇತ್ಯಾದಿಗಳನ್ನು ವಿದ್ಯಾರ್ಥಿಗಳು ವಿದ್ಯಾರ್ಥಿ ದಿಸೆಯಲ್ಲಿಯೆ ಚೆನ್ನಾಗಿ ತಿಳಿದುಕೊಂಡು ರಾಷ್ಟ್ರಕರಾಗಬೇಕೆಂಬ ಅಭಿಲಾಷೆಯನ್ನು ಅವರು ತಾಳಿದ್ದರು. ತಿಲಕರ ಈ ಶಿಕ್ಷಣ ನೀತಿಯ ಪ್ರಭಾವವು ಪುಣೆಗೆ ಸಾಂಸ್ಕೃತಿಕವಾಗಿ ಸಮೀಪವಾಗಿದ್ದ ಕಲಬುರ್ಗಿಯಲ್ಲಿ ವಿಶೇಷವಾಗಿ ಬೀರಿತು. ತತ್ ಪರಿಣಾಮವಾಗಿ ಕ್ರಿ.ಶ.೧೯೦೩ನೆಯ ಇಸ್ವಿಯ ಜೂನ್ ೧೩ರಂದು ನೂತನ ವಿದ್ಯಾಲಯವು ಸ್ಥಾಪನೆಗೊಂಡಿತು. ಈ ನೂತನ ವಿದ್ಯಾಲಯ ಎಂಬುದೂ ಕೂಡ ತಿಲಕರ ನವಶಿಕ್ಷಣ ನೀತಿಯ ಅರ್ಥಾತ್ ರಾಷ್ಟ್ರೀಯ ಶಿಕ್ಷಣ ನೀತಿಯ ಅರ್ಥವಿಸ್ತಾರವನ್ನೇ ಧ್ವನಿಸುವ ಹೆಸರು.

ಕಲಬುರ್ಗಿಯು ಪುಣೆಗೆ ಸಾಂಸ್ಕೃತಿಕವಾಗಿ ತೀರ ಸಮೀಪವೆನ್ನಿಸಿದ್ದರೂ, ಕಲಬುರ್ಗಿ ಭಾಗವು ನಿಜಾಂ ಸಂಸ್ಥಾನದ ಆಡಳಿತಕ್ಕೆ

* ಎಂ.ಐ.ಜಿ. - ೨೬, ಆದರ್ಶನಗರ, ೧ನೇ ಫೇಸ್, ಗುಲ್ಬರ್ಗಾ - ೫೮೫ ೧೦೫.

ಒಳಪಟ್ಟ ಭಾಗವಾಗಿತ್ತೆಂಬುದನ್ನು ಮರೆಯುವಂತಿಲ್ಲ. ಅಂತೆಯೇ ದೇಶಕ್ಕೆ ಸ್ವರಾಜ್ಯವು ಬರುವವರೆಗೆ, ಅದೇಕೆ - ನಿಜಾಂ ಸಂಸ್ಥಾನವು ವಿಮೋಚನೆಗೊಂಡು ಹಿಂದೂಸ್ಥಾನದಲ್ಲಿ ಒಂದುಗೂಡುವವರೆಗೆ ದ್ವಿವಿಧ ಪಾರತಂತ್ರ್ಯವನ್ನು ಅನುಭವಿಸಬೇಕಾಯಿತು. ಅದು ಹೇಗೆಂದರೆ, ಬ್ರಿಟಿಷರು ಇಡೀ ಹಿಂದೂಸ್ಥಾನವನ್ನು ಪರೋಕ್ಷವಾಗಿಯೋ ಅಪರೋಕ್ಷವಾಗಿಯೋ ತಮ್ಮ ಹಿಡಿತದಲ್ಲಿಟ್ಟುಕೊಂಡು ಆಳುತ್ತಿದ್ದರು. ಈ ಅಪರೋಕ್ಷತೆಯಲ್ಲಿಯೇ ನಿಜಾಂನ ಹೈದರಾಬಾದ ಸಂಸ್ಥಾನವೂ ಕೂಡ ಸೇರಿತ್ತು. ಹಾಗೆ ನೋಡಿದರೆ ಈ ನಿಜಾಂನಿಗೆ ಬ್ರಿಟಿಷರು ಪ್ರತ್ಯೇಕ ಅಂಚೆ, ರೈಲು, ನಾಣ್ಯ, ಸೈನ್ಯ ಇತ್ಯಾದಿ ಅನೇಕ ಸಾರ್ವಭೌಮತ್ವದ ಅಂಶಗಳನ್ನು ಕರುಣಿಸಿದ್ದರೂ, ಈ ಸಂಸ್ಥಾನಕ್ಕೆ ಸ್ವತಂತ್ರ ಅಸ್ತಿತ್ವವು ಇರಲಿಲ್ಲವೆಂದೇ ಹೇಳಬೇಕು. ಆದರೂ ನಿಜಾಂ ಸಂಸ್ಥಾಪಕನು ತಾನು ಸರ್ವತಂತ್ರ ಸ್ವತಂತ್ರನೆಂಬ ಮನೋಭಾವದಿಂದ ಬಹು ಸಂಖ್ಯಾತರ ಹಿತಾಸಕ್ತಿಗಳನ್ನು ಗಾಳಿಗೆ ತೂರಿ ಮಾರಣಹೋಮ ಮಾಡಿದ್ದನು. ಮಾನವ ಹಕ್ಕುಗಳಿಗೆ ತಿಲಾಂಜಲಿಯನ್ನು ನೀಡಿ ತನ್ನ ಭಾಷೆ ತನ್ನ ಮತವನ್ನು ಅವರ ಮೇಲೆ ಒತ್ತಾಯದಿಂದ ಹೇರಿದ್ದನು. ಈ ರೀತಿಯ ನಿಜಾಂನ ಒತ್ತಾಯದ ಜೊತೆಗೆ ಬ್ರಿಟಿಷರ ನೀತಿಯ ಒತ್ತಾಯವು ಈ ಜನರ ಮೇಲೆ ಬೀಳತೊಡಗಿ, ಈ ಸಂಸ್ಥಾನದ ಜನತೆ ದ್ವಿವಿಧ ಪಾರತಂತ್ರ್ಯವನ್ನು ಅನುಭವಿಸುತ್ತಿದ್ದರೆಂಬುದೇ ಮಾತಿನ ಮರ್ಮ. ಇದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಹುಭಾಷಿಕರು ತಮ್ಮ ಮಾತೃಭಾಷೆ ಮತ್ತು ಸಂಸ್ಕೃತಿಗಳನ್ನು ಮರೆಯುವಂತಾಯಿತು. ಈ ಅನಿಷ್ಟ ರಾಜನೀತಿಯ ದುಷ್ಪಪ್ರಭಾವದಿಂದಾಗಿ ದ್ವಿವಿಧಾ ನೀತಿಯ ಮುಸುಕುಗಳ ಪರದೆಯಲ್ಲಿ ಸಾಮಾನ್ಯ ಜನತೆಯ ಉಸಿರುಗಟ್ಟಿ ಹೋಗಿತ್ತು. ಇದನ್ನು ಇನ್ನಷ್ಟು ಸ್ಪಷ್ಟಪಡಿಸಬೇಕಾದರೆ, ಒಂದು ಮುಸುಕು ಬ್ರಿಟಿಷರು ನೀಡಿದ ಕ್ಲಾರ್ಕುಗಳನ್ನ ಸಿದ್ಧಮಾಡುವ ಶಿಕ್ಷಣ ಕಾರ್ಖಾನೆಯದ್ದಾದರೆ, ಇನ್ನೊಂದು ಮುಸುಕು ನಿಜಾಂನ ಸ್ವಪಕ್ಷಪಾತದಿಂದ ಕೂಡಿದ ಸ್ವಾರ್ಥಹಿತಸಾಧನೆಗೆ ಪೋಷಕವಾಗುವಂತಹ ಶಿಕ್ಷಣ ನೀತಿಯದೆಂದು ಹೇಳಲುಸಾಧ್ಯ. ಈ ಕಾರಣಗಳಿಂದಾಗಿ ಸರಕಾರವು ಹೊಣೆಗೆಟ್ಟ ಸರಕಾರವಾಗಿತ್ತು. ಸಾಮಾನ್ಯ ಪ್ರಜೆ ಸ್ವಾಸ್ಥ್ಯವನ್ನು ಕಳೆದುಕೊಂಡು ದಿಗ್‌ಭ್ರಮೆಗೊಂಡಿದ್ದನು.

ಇಂಥ ಪ್ರತಿರೋಧ ಸ್ಥಿತಿಯಲ್ಲಿ ಕಲಬುರ್ಗಿಯ ಅನೇಕ ತಿಳಿವಳಿಕಸ್ಥರು ಸ್ವರಾಜ್ಯ ಸಂಪಾದನೆಯ ಗುರಿಯಿರುವ ಸ್ವದೇಶೀ ಶಿಕ್ಷಣ ನೀತಿಯನ್ನು ಅಭಿಮಾನದಿಂದ ಗೌರವಿಸಿ, ನೂತನ ವಿದ್ಯಾಲಯ ಶಾಲೆಯನ್ನು ಆರಂಭಿಸಿ ಎದೆಗಾರಿಕೆಯನ್ನು ತೋರಿದರು. ಇದೊಂದು ದಿಟ್ಟ ಸಾಧನೆ.

ಹೀಗೆ ಕಲಬುರ್ಗಿಯ ನೂತನ ವಿದ್ಯಾಲಯ ಶಾಲೆಯು ಅಸ್ತಿತ್ವಕ್ಕೆ ಬರಲು ಪ್ರಮುಖತಃ ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರೇರಣೆಯೇ ಮೂಲ ಕಾರಣವೆಂಬುದನ್ನು ನೆನೆಸಿಕೊಂಡಾಗ ಈ ಶಾಲೆಯ ಬೆಳವಣಿಗೆಯ ಇತಿಹಾಸದ ಬಗ್ಗೆ ರೋಮಾಂಚನವುಂಟಾಗುತ್ತದೆ. ಮತ್ತು ಲೋಕಮಾನ್ಯ ಗಂಗಾಧರ ತಿಲಕರ ವ್ಯಕ್ತಿತ್ವದ ಬಗ್ಗೆ ಆದಮ್ಯ ಗೌರವವು ಮೂಡುತ್ತದೆ. ಏಕೆಂದರೆ ನೂತನ ವಿದ್ಯಾಲಯ ಶಾಲೆಯು ಆರಂಭವಾದದ್ದು, ಲೋಕಮಾನ್ಯರ ಮೇಲೆ ಬ್ರಿಟಿಷ್ ಸರಕಾರವು ರಾಜದ್ರೋಹದ ಎರಡನೆಯ ಮೊಕ್ಕದ್ದಮೆಯನ್ನು ಹಾಕಿ, ಅವರನ್ನು ಮಂಡಾಲೆಯ ಸೆರೆಮನೆಗೆ, ನಡುರಾತ್ರಿಯಲ್ಲಿ ಜನತೆಗೆ ಗೊತ್ತಾಗದ ರೀತಿಯ ಗೌಪ್ಯದಲ್ಲಿ ಕಳಿಸಿದ ಪ್ರಸಂಗದಲ್ಲಿ.

ಈ ಪ್ರಸಂಗವು ದೇಶದಾದ್ಯಂತ ಅಸಂತೋಷವನ್ನುಂಟು ಮಾಡಿತಲ್ಲದೆ, ಆ ರಾಜದ್ರೋಹದ ಮೊಕದ್ದಮೆಯನ್ನು ಹಿಂದೆ ತೆಗೆದುಕೊಳ್ಳಲು ಪ್ರತಿಮೊಕದ್ದಮೆಯನ್ನು ಹೂಡುವುದಕ್ಕೆ ದೇಶದ ಜನತೆಯು, ಸ್ವಯಿಚ್ಛೆಯಿಂದ ಆ ವೆಚ್ಚವನ್ನು ಭರಿಸಲು, 'ತಿಲಕ ರಕ್ಷಕ ನಿಧಿ'ಯನ್ನು ಸಂಗ್ರಹಿಸತೊಡಗಿತು. ಈ ದಿಸೆಯಲ್ಲಿ ಕಲಬುರ್ಗಿಯು ಹಿಂದೆ ಬೀಳಲಿಲ್ಲ. ಆ ಪ್ರಸಂಗದಲ್ಲಿ ಕಲಬುರ್ಗಿಯ ವಿಟ್ಠಲರಾವ್ ದೇವುಳಗಾಂವಕರ್ ವಕೀಲರ ನೇತೃತ್ವದಲ್ಲಿ, ಕೇಶವರಾವ್ ಕೋರಟ್ಕರ್ ಹಾಗೂ ಗಿರಿರಾವ್ ಷಾಟೆ ಅವರ ಸಹಯೋಗದೊಂದಿಗೆ 'ತಿಲಕ ರಕ್ಷಕ ನಿಧಿ' ಯು ಕಲಬುರ್ಗಿ ಭಾಗದಲ್ಲಿ ಸಂಗ್ರಹವಾಗತೊಡಗಿತು. ಅದೇ ಭರಾಟೆಯಲ್ಲಿ ತಿಲಕ ಪ್ರಣೀತ ರಾಷ್ಟ್ರೀಯ ಶಿಕ್ಷಣದ ಜ್ಯೋತಿಯು ಅರ್ಥಾತ್ ಸ್ವದೇಶೀ ಶಿಕ್ಷಣ ನೀತಿಯ ಮೂಲಾಧಾರದಲ್ಲಿ ನೂತನವಿದ್ಯಾಲಯ ಶಾಲೆಯು ತನ್ನ ವಿದ್ಯಾಸಮಯವನ್ನು ಬೆಳಗಿಸಿತು. ಹೀಗೆ ಬೆಳಗುತ್ತಿರುವ ಸಮಯವೇ ಈ ಶಾಲೆಯ ಲಾಂಛನವಾಗಿ, 'ಜ್ಞಾನಮೇವ ಪರಾಶಕ್ತಿ' ಎಂಬ ಘೋಷವಾಕ್ಯದೊಡನೆ ಸ್ವದೇಶೀ ಶಿಕ್ಷಣವನ್ನು ನೀಡಲು ಆಗ ಅಣಿಯಾಯಿತು. ಈ ಆರಂಭಕ್ಕೆ ಕಾರಣರಾದ ಮೇಲಿನ ಮೂವರೂ ಪ್ರಾತಃ ಸ್ಮರಣೀಯರು.

ಈ ತಿಲಕ ಪ್ರಣೀತ ರಾಷ್ಟ್ರೀಯ ಶಿಕ್ಷಣ ಜ್ಯೋತಿಯು ಕಲಬುರ್ಗಿಗಷ್ಟೇ ನಿಲ್ಲದೆ, ಹೈದರಾಬಾದ ಸಂಸ್ಥಾನದ ವಿವಿಧ ಭಾಗಗಳಲ್ಲಿ ವಿದ್ಯಾ ಸಮಯಗಳನ್ನು ಬೆಳಗಿತು. ತತ್‌ಕಾರಣದಿಂದಾಗಿ ಕೇಶವರಾವ್ ಕೋರಟ್ಕರ್ ಅವರು ಹೈದಾರಾಬಾದಿಗೆ ಹೋಗಿ ಅಲ್ಲಿ ವಿವೇಕವರ್ಧನಿ ರಾಷ್ಟ್ರೀಯ ಶಿಕ್ಷಣಸಂಸ್ಥೆಯನ್ನು ಆರಂಭಿಸಿದರು. ಅದರ ಮುಂದಿನ ವರ್ಷ ಅಪ್ಪಾರಾವ್ ಪಾರಗಾಂವಕರ್ ಹಾಗು ದಿಗಂಬರರಾವ್ ಚೌಧರಿಯವರ ಪ್ರಯತ್ನದಿಂದ ಸರಸ್ವತೀ ಭುವನ ಸಂಸ್ಥೆಯು ರಾಷ್ಟ್ರೀಯ ಶಿಕ್ಷಣವನ್ನು ಪ್ರದಾನಮಾಡಲು ಔರಂಗಾಬಾದದಲ್ಲಿ ಸ್ಥಾಪನೆಗೊಂಡಿತು. ಅದೇ ರೀತಿ ಮುಂಬರುವ ವರ್ಷಗಳಲ್ಲಿ ಪರಭಣಿಯಲ್ಲಿ ಒಂದು ನೂತನವಿದ್ಯಾಲಯ, ರಾಯಚೂರಿನಲ್ಲಿ ಪಂಡಿತ ತಾರಾನಾಥರು ಸ್ಥಾಪಿಸಿದ ಹಮ್ದರ್ದ್‌ಶಾಲೆ, ಕುಕನೂರಿನಲ್ಲಿ ವಿದ್ಯಾನಂದ ಗುರುಕುಲ, ಮರಾಠವಾಡಾದ ಹಿಪ್ಪರಗಿಯ ರಾಷ್ಟ್ರೀಯ ಶಾಲೆ, ಅಂಬೇಜೋಗಾಯಿಯ ಯೋಗೀಶ್ವರೀ

ನೂತನ ವಿದ್ಯಾಲಯ, ಭಾಲ್ಕಿಯ ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಬೀದರದ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಮೊದಲಾದ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು. ತಿಲಕ ಪ್ರಣೀತ ರಾಷ್ಟ್ರೀಯ ಶಿಕ್ಷಣ ಪ್ರಸಾರವು ಪರಿಣಾಮಕಾರಿಯಾಗಿ ಸಾಗಿ, ಸ್ವರಾಜ್ಯ ಸಂಪಾದನೆಗಾಗಿ ಜನ - ಜಾಗೃತಿಯು ಈ ಕಾರಣದಿಂದ ಅತ್ಯಂತ ಫಲಪ್ರದವಾಯಿತು. ಇದನ್ನೆಲ್ಲ ಗಮನಿಸಿದಾಗ ಕಲಬುರ್ಗಿಯ ನೂತನ ವಿದ್ಯಾಲಯವೇ ಪ್ರಪ್ರಥಮವಾಗಿ ಹೈದರಾಬಾದ ಸಂಸ್ಥಾನದಲ್ಲಿ ರಾಷ್ಟ್ರೀಯ ಶಿಕ್ಷಣ ಪ್ರದಾನಕ್ಕಾಗಿ ಅಸ್ತಿತ್ವಕ್ಕೆ ಬಂದ ಶಿಕ್ಷಣ ಸಂಸ್ಥೆಯೆಂಬ ಕೀರ್ತಿಗೆ ಪಾತ್ರವಾಯಿತು.

ಆದರೆ ಕಾರ್ಯಸಾಧನೆಯ ನಿಮಿತ್ತಕ್ಕಾಗಿ, ಮೊತ್ತಮೊದಲು ಸ್ಥಾಪನೆಗೊಂಡ ನೂತನ ವಿದ್ಯಾಲಯದಲ್ಲಿ ಮೇಲುನೋಟಕ್ಕೆ ನಿಜಾಂ ಸರಕಾರದ ಪಠ್ಯಕ್ರಮವನ್ನೇ ಅನುಸರಿಸಿದಂತೆ ತೋರಿಸ ಬೇಕಾಯಿತು. ಇಲ್ಲದೇ ಹೋದಲ್ಲಿ ಶಾಲೆಯನ್ನು ನಡೆಸುವುದು ಕಷ್ಟಸಾಧ್ಯವಾಗಿತ್ತು. ಆದರೆ ಶಾಲೆಯ ಒಳವಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯೇ ಅನುಷ್ಠಾನದಲ್ಲಿತ್ತು. ಹೀಗಾಗಿ ಈ ಶಾಲೆಯು ಜಾಗೃತಿ ಕೇಂದ್ರವಾಗಿ ಕಾರ್ಯನಿರ್ವಹಿಸತೊಡಗಿತು. ಈ ವಾಸನೆಯು ನಿಜಾಂ ಸರಕಾರಕ್ಕೆ ಹತ್ತಿದಾಗ ಅದಕ್ಕೆ ತಲೆನೋವು ಆರಂಭವಾಯಿತು. ಆದರೆ ಈ ವಾಸನೆಯನ್ನು ಬಯಲು ಗೊಳಿಸಲು ಸರಕಾರಕ್ಕೆ ಸಾಕ್ಷ್ಯಾಧಾರಗಳು ದೊರೆಯಲಿಲ್ಲ. ಹೀಗಾಗಿ ತನ್ನ ಈ ಸೇಡನ್ನು ತೀರಿಸಿಕೊಳ್ಳಲು ಈ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ವಿಟ್ಠಲರಾವ್ ದೇವುಳಗಾಂವಕರ್ ವಕೀಲರನ್ನು ಗಡೀಪಾರು ಮಾಡಲು ಯೋಚಿಸಿತು. ಜೊತೆಗೆ ಕೇಶವರಾವ್ ಕೋರಟ್ಕರ್ ಅವರನ್ನು ಕೂಡ. ಆದರೆ ಇದೆಲ್ಲ ಸಾಧ್ಯವಾಗದೇ ಇದ್ದಾಗ ನಿಜಾಂ ಸರಕಾರವು ಈ ಶಾಲೆಯ ಮೇಲೆ ಕ(ಖಾ)ಡೀ ನಿಗಾ ಇಡಲು ತನ್ನ ಅಧಿಕಾರಿಗಳಿಗೆ ಆದೇಶಿಸಿತು.

ಇಷ್ಟು ಹೊತ್ತಿಗಾಗಲೇ ಇಂಥ ವಿಷಮಸ್ಥಿತಿಯಲ್ಲಿ ಈ ಶಾಲೆಯ ಪ್ರಥಮ ಶಿಕ್ಷಕರಾಗಿ ನೇಮಕಗೊಂಡಿದ್ದ ಬಾಪೂಜಿ ಗೋವಿಂದರಾವ್ ಸಾಠೆ ಅವರು ಒಂದು ವರ್ಷದ ಪಠ್ಯಕ್ರಮವನ್ನು ಪೂರ್ಣಗೊಳಿಸಿದ್ದರು. ಈ ಪ್ರಥಮವರ್ಷದ ಪ್ರಪ್ರಥಮ ವಿದ್ಯಾರ್ಥಿಗಳ ತಂಡದಲ್ಲಿ ಸರ್ವಶ್ರೀ ಜೀವಬಾಳರಾವ್ ಆಳಂದ, ಅಚ್ಯುತತರಾವ್ ಆಳಂದ, ಧೋಂಡೋ ನಾಯಕ, ಗೋವಿಂದ ಉರ್ಫ್ ಬಾಪುದೇವುಳಗಾಂವಕರ್, ಶ್ರೀಧರ, ನಾರಾಯಣ ಮತ್ತು ಅಂಬಾದಾಸ - ಈ ಏಳು ಜನ ವಿದ್ಯಾರ್ಥಿಗಳಿದ್ದು ತಮ್ಮ ಪ್ರಥಮ ವರ್ಷದ ಪರೀಕ್ಷೆಯಲ್ಲಿ ಯಶಸ್ಸನ್ನು ಗಳಿಸಿ ಮುಂದಿನ ತರಗತಿಗೆ ಪದಾರ್ಪಣ ಮಾಡಿದ್ದರು. ಆಗ ಈ ಶಾಲೆಗೆ ತ್ರ್ಯಂಬಕ ಹರಿಗೋಗಟೆ ಎಂಬವರು ಮುಖ್ಯೋಪಾಧ್ಯಾಯರಾಗಿ ಬಂದರು. ಅವರು ಸ್ವರಾಜ್ಯ ಆಂದೋಲನದ ಕ್ರಾಂತಿಕಾರಿಯಾಗಿದ್ದರು. ಈ ಮುನ್ನ ಅವರು ಇಂದೂರಿನಲ್ಲಿ ರಾಷ್ಟ್ರೀಯ ಶಾಲೆಯೊಂದನ್ನು ನಡೆಸುತ್ತಿದ್ದರು. ಇದು ರಾಷ್ಟ್ರದ್ರೋಹದ ಕಾರ್ಯವೆಂದು ನಿರ್ಣಯಿಸಿ ಬ್ರಿಟಿಷರು ಇವರನ್ನು ಗಡೀಪಾರು ಮಾಡುವಂತೆ ಇಂದೂರಿನ ರಾಜನ ಮೇಲೆ ಒತ್ತಡ ಹೇರಿದರು. ಇದರಿಂದಾಗಿ ಗೋಗಟೆಯವರನ್ನು ಇಂದೂರು ರಾಜ್ಯದಿಂದ ರಾಜನು ಹೊರದೂಡಬೇಕಾಯಿತು. ಮುಂದೆ ಕಲಬುರ್ಗಿಯ ನೂತನ ವಿದ್ಯಾಲಯಕ್ಕೆ ಬಂದ ಮೇಲೆ ಗೋಗಟೆಯವರು ಹೆಚ್ಚಿನ ಉತ್ಸಾಹದಿಂದ ವಿದ್ಯಾರ್ಥಿಗಳಲ್ಲಿ ನಾಗರಿಕರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡತೊಡಗಿದರು. ಇದರ ಸುಳಿವು ಬ್ರಿಟಿಷರಿಗೆ ಹತ್ತಿದಾಗ, ಹೈದರಾಬಾದ ಸಂಸ್ಥಾನದ ನಿಜಾಂನ ಮೇಲೆ ಒತ್ತಡಹೇರಿ, ಗೋಗಟೆ ಅವರನ್ನು ಕುರಿತು ವಿಚಾರಣೆ ಗಳನ್ನು ನಡೆಸಲು ನಿಜಾಂ ಸರಕಾರಕ್ಕೆ ಬ್ರಿಟಿಷ್ ಸರಕಾರದ ಏಜೆಂಟರು ದುಂಬಾಲ ಬಿದ್ದರು.

ಈ ಹಿನ್ನೆಲೆಯಲ್ಲಿ ಗೋಗಟೆಯವರ ವಿರುದ್ಧ ನಿಜಾಂ ಸರಕಾರವು ನಡೆಸಿದ ವಿಚಾರಣೆಗಳ ಹಾಗೂ ಮಾಹಿತಿ ಸಂಗ್ರಹಗಳ ಬಗ್ಗೆ ಅಂದಿನ ಸರಕಾರೀ ಕಾಗದ ಪತ್ರಗಳ ದಾಖಲೆಯಲ್ಲಿರುವ ಬಹು ಮುಖ್ಯ ವಿಷಯಗಳನ್ನು ಈ ಕೆಳಗಿನಂತೆ ಸಂಗ್ರಹಿಸಿ ಹೇಳಬಹುದಾಗಿದೆ.

ನಿಜಾಂ ಸಂಸ್ಥಾನದ ರಾಜಧಾನಿ ಹೈಗಾರಾಬಾದಿನಲ್ಲಿ ಆಗ ಇದ್ದ ಬ್ರಿಟಿಷರ ಏಜೆಂಟ್ ರೆಸಿಡೆಂಟನು, ಗೋಗಟೆಯವರನ್ನು ಕುರಿತ ವಿಚಾರಣೆಗಳ ವಿವರವಾದ ವರದಿಯನ್ನು ಕಳಿಸಲು ನಿಜಾಂ ಸರಕಾರಕ್ಕೆ ಮೇಲಿಂದ ಮೇಲೆ ಜ್ಞಾಪಕ ಪತ್ರಗಳನ್ನು ಬರೆಯ ತೊಡಗಿದಾಗ, "ವಿಚಾರಣೆ ನಡೆದಿದೆ, - ತಪಾಸಣೆ ಪ್ರಾರಂಭ ವಾಗಿದೆ; ಬೇಗನೆ ತಪಾಸಣೆ ಮುಗಿಸಿ ಕ್ರಮದ ಬಗ್ಗೆ ತಿಳಿಸಲಾಗುವುದು" ಎಂದು ಇಂತೆಲ್ಲ ಸಂದರ್ಭಾನುಸಾರವಾಗಿ ವಿಚಾರ ಸರಕಾರವು ಉತ್ತರಿಸುತ್ತಿತ್ತು. ಆದರೆ ಈ ಉತ್ತರಗಳಿಂದ ರೆಸಿಡೆಂಟನು ಸಂತೃಪ್ತನಾಗದೆ ಆಕ್ರೋಶ ತಾಳಿ ಬೇಗ ಸರಿಯಾದ ವರದಿಯನ್ನು ಕಳಿಸಲು ಎಚ್ಚರಿಸಿದನು. ಆಗ ನಿಜಾಂ ಸರಕಾರದ ಓರ್ವ ನಿಷ್ಠಾವಂತ ಅಧಿಕಾರಿಯು, "ಗುಲ್ಬರ್ಗಾದ ನೂತನ ವಿದ್ಯಾಲಯ ಮತ್ತು ಗೋಗಟೆ ಹೆಸರಿನ ವ್ಯಕ್ತಿಯ ಮೇಲೆ ನಾವು ಸೂಕ್ಷ್ಮ ನಿಗಾ (ದೃಷ್ಟಿ) ಇಟ್ಟಿದ್ದೇವೆ. ಸ್ವಲ್ಪ ಅವಕಾಶವು ದೊರೆತರೆ ಸಾಕು ಶಾಲೆಯನ್ನು ಮುಚ್ಚಿಸಿ ಆ ವ್ಯಕ್ತಿಯನ್ನು ಬಂಧಿಸಲಾಗುವುದು" ಎಂದು ವರದಿಯನ್ನು ರೆಸಿಡೆಂಟನಿಗೆ ಸಲ್ಲಿಸಿದಾಗ, ಆ ಬ್ರಿಟಿಷರ ಏಜೆಂಟನಿಗೆ ಸ್ವಲ್ಪ ಸಮಾಧಾನವಾಗಿರಬೇಕು. ಅನಂತರ ನಿಜಾಂ ಸರಕಾರದ ಶಾಲಾ ಅಧಿಕಾರಿಗಳು ಹೊತ್ತುಗೊತ್ತಿಲ್ಲದೆ ಈ ಶಾಲೆಯ ಕಡೆಗೆ ಬಂದು ಹೋಗುವುದು ನಡೆಯಿತು. ಇಲ್ಲದ ಪ್ರಶ್ನೆಗಳನ್ನು ಕೇಳಿ ಸತಾಯಿಸುವುದು ಆರಂಭವಾಯಿತು. ಈ ಉಪಟಳದಿಂದ ಪಾರಾಗಬೇಕಾದರೆ ಗೋಗಟೆ ಅವರಿಗೆ ಮತ್ತು ಆಡಳಿತ ಮಂಡಳಿಗೆ ಸಾಕುಬೇಕಾಯಿತು.

ಇಂಥ ಒಂದು ಸಂದರ್ಭದಲ್ಲಿ ಒಬ್ಬ ಶಾಲಾ ವರಿಷ್ಠ ಅಧಿಕಾರಿಯು ವರದಿ ಮಾಡಿದ ವರದಿಯಿಂದಾಗಿ ಸರಕಾರವು

ಈ ಶಾಲೆಯ ಮೇಲೆ ಇನ್ನಷ್ಟು ಕೆಂಡವನ್ನು ಕಾರುವುದಕ್ಕೆ ಪ್ರಚೋದಿಸಿತು. ಆ ವರದಿಯ ಪಠ್ಯವು ಇಂತಿದೆ:

"ಬಾಲಕರಿಗೆ ಶಿಕ್ಷಣ ನೀಡುವ ದೃಷ್ಟಿಯಿಂದ ಶಾಲೆಯನ್ನು ತೆರೆಯಲಾಗಿದೆಯೆಂಬ ಸಂಚಾಲಕರ ಹೇಳಿಕೆಯು ಅವರು ಹೇಳಿದಂತೆ ಇಲ್ಲ. ಈ ಶಾಲೆಯಿಂದ ಸಮೀಪದಲ್ಲಿ ಬ್ರಾಹ್ಮಣ ಪುರದಲ್ಲಿ ವಿದ್ಯಾರ್ಥಿಗಳು ಸೇರಬಹುದಾದ ಸರಕಾರಿ ಶಾಲೆ ಇದೆ. ವಿದ್ಯಾರ್ಥಿಗಳು ಅಲ್ಲಿ ಸೇರದೇ ಇರುವುದಕ್ಕೆ ಕಾರಣ ಈ ಬಾಲಕರಿಗೆ ರಾಜಕೀಯ ಉದ್ದೇಶವು ನಿಶ್ಚಿತವಾಗಿದೆ. ಸಂಚಾಲಕ ವರ್ಗದಲ್ಲಿ ಧಾರ್ಮಿಕ ಹಾಗು ಇತರ ಚಳುವಳಿಗಳಲ್ಲಿ ಪ್ರಭಾವ ಬೀರಬಲ್ಲ ನಾಗರಿಕರಿದ್ದಾರೆ" ಎಂಬುದೇ ಆ ವರದಿ.

ಈ ವರದಿಗಿಂತಲೂ ಇನ್ನೂ ತೀಕ್ಷ್ಣವಾಗಿರುವ ಮತ್ತೊಂದು ವರದಿಯ ಪಾಠವು ಇಂತಿದೆ:

"ಶಾಲಾ ಸಂಚಾಲಕರು ತಿಲಕರ ಭಕ್ತರಾಗಿದ್ದಾರೆ. ತಿಲಕರ ವಿಚಾರಗಳು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರತೊಡಗಿವೆ. ಇಲ್ಲಿ ರಾಜಕೀಯ ಚರ್ಚೆ ನಡೆಯುವುದರಿಂದ, ಅದರ ಅನಿಷ್ಟ ಪರಿಣಾಮವು ವಿದ್ಯಾರ್ಥಿಗಳ ಮೇಲೆ ಆಗುತ್ತಿದೆ - ಆದ್ದರಿಂದ ಸಂಸ್ಥಾನಕ್ಕೆ ತೊಂದರೆಯಾಗುವ ಶಾಲೆ ಅಸ್ತಿತ್ವದಲ್ಲಿರುವುದು ಒಳ್ಳೆಯದಲ್ಲ" ಎಂಬುದೇ ಆ ವರದಿಯ ಪಾಠ.

ಹೀಗೆ ಈ ಶಾಲೆಯನ್ನು ಮುಚ್ಚಿಸಲು ಅನೇಕ ಉಪಾಯ ಗಳನ್ನು ಯೋಜಿಸಿದರೂ ಫಲಪ್ರದವಾಗಲಿಲ್ಲ. ಇದರಿಂದ ಹತಾಶರಾಗಿ ಬ್ರಿಟಿಷ ರೆಸಿಡೆಂಟನು ನಿಜಾಂ ಸರಕಾರದ ಮುಖಾಂತರ ಒಬ್ಬ ಕ್ರಿಶ್ಚಿಯನ್ ವಿಶೇಷ ಅಧಿಕಾರಿಯನ್ನು ತಪಾಸಣೆಗೆ ನೇಮಿಸುವಂತೆ ಮಾಡಿದನು. ಆ ವಿಶೇಷ ಅಧಿಕಾರಿಯ ತಪಾಸಣೆಯ ವರದಿಯ ಪಾಠವು ಇಂತಿದೆ:

"ಈ ಸಂಸ್ಥೆಗೆ ಒಳ್ಳೆಯ ಸ್ಥಿರತೆಯು ಬಂದಿದೆ. ಶಿಕ್ಷಕರು ಸದಾಚಾರಿಗಳು. ವಿದ್ಯಾರ್ಥಿಗಳ ಶಿಸ್ತು ಅನುಕರಣೀಯ. ಸರಕಾರದ ಸಹಾಯವಿರದಿದ್ದರೂ ಸಂಸ್ಥೆಯನ್ನು ಒಳ್ಳೆಯ ರೀತಿಯಿಂದ ನಡೆಸಲಾಗುತ್ತಿದೆ. ಕಡಮೆ ಸಂಬಳ ಪಡೆದು ಹೆಚ್ಚು ಕೆಲಸ ಮಾಡುವ ಶಿಕ್ಷಕವರ್ಗವೇ ಈ ಸಂಸ್ಥೆಗಿರುವ ವಿಶಿಷ್ಟಬಲ. ಈ ಶಿಕ್ಷಕರ ಶಿಕ್ಷಣಕಾರ್ಯವು ಕೇವಲ ತರಗತಿಗಳಿಗೆ ಮೀಸಲಾಗಿಲ್ಲ. ತರಗತಿಗಳ ಹೊರಗೂ ಶಿಕ್ಷಣ ಕಾರ್ಯವು ನಡೆಯುತ್ತದೆ. ಆ ಮೂಲಕ ವಿದ್ಯಾರ್ಥಿಗಳ ಸಾಂಸ್ಕೃತಿಕ ದರ್ಜೆಯು ಉನ್ನತಮಟ್ಟದ್ದು. ಶಾಲೆಯ ಆವರಣದಲ್ಲಿ ಶಿಕ್ಷಕರೊಂದಿಗೆ ಚರ್ಚಿಸಿದಾಗ ವಾತಾವರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನನ್ನ ಬಳಿಗೆ ಮಾತ್ರ ಎಲ್ಲಿಯೂ ರಾಜಕಾರಣದ ಗಂಧವು ಸುಳಿಯಲಿಲ್ಲ; ಆದ್ದರಿಂದ ಈ ಶಾಲೆಯನ್ನು ಮುಚ್ಚುವಂತೆ ಶಿಫಾರಸ್ಸು ಮಾಡಲು ನನ್ನಿಂದ ಧೈರ್ಯ ಸಾಲುತ್ತಿಲ್ಲ. ಹಾಗೆ ಶಿಫಾರಸ್ಸು ಮಾಡಲಾರೆ. ಪರೀಕ್ಷಾ ಪರಿಣಾಮವೂ ಬಹಳೇ ಒಳ್ಳೆಯದಿದೆ. ಹೆಚ್ಚು ವರ್ಗಾ ಪಡೆಯುವ ಸರಕಾರಿ ಶಾಲೆಯ ಶಿಕ್ಷಕರೊಂದಿಗೆ ಇಲ್ಲಿಯವರನ್ನು ಹೋಲಿಸಿ ನೋಡಿದರೆ ಬಹಳೇ ಒಳ್ಳೆಯವರಿದ್ದಾರೆ." ಎಂಬುದೇ ಆ ವರದಿ.

ಇಂತಹ ವರದಿಯನ್ನು ನಿಜಾಂ ಸರಕಾರದ ಅಧಿಕಾರಿಗಳು ಬ್ರಿಟಿಷ್ ರೆಸಿಡೆಂಟನಿಗೆ ತಿಳಿಸಲು ವಿವಂಚಿತರಾದರು. ಅಷ್ಟರಲ್ಲೆ ರೆಸಿಡೆಂಟನೇ ಈ ಶಾಲೆಯ ಮುಖ್ಯೋಪಾಧ್ಯಾಯರ ಬಗ್ಗೆ ಖಡಾಖಂಡಿತ ನಿರ್ಣಯವನ್ನು ಕಳಿಸಿ ಆ ವಿವಂಚನೆಯನ್ನು ದೂರ ಮಾಡಿದನು. ಆ ನಿರ್ಣಯದ ವಿವರಣೆಯು ಇಂತಿದೆ.

"ಸಾಮ್ರಾಟ್ ಪಂಜಮ್‌ಜಾರ್ಜರವರ ಜನ್ಮದಿನದ ನಿಮಿತ್ತ ಶಾಲೆಯ ಸಭೆಯಲ್ಲಿ ಗೋಗಟೆ ಅವರು ಭಾಷಣಮಾಡಿ, ಈ ಶುಭದಿನದ ಕಾರಣವಾಗಿ ಸರಕಾವು ಮಂಡಾಲೆಯ ಸೆರೆಮನೆ ಯಿಂದ ತಿಲಕರನ್ನು ಬಿಡುಗಡೆ ಮಾಡಬೇಕೆಂದು ಸೂಚಿಸಿದರು; ಅವರ ಈ ಸೂಚನೆಯು ಲೋಕಹಿತಕ್ಕೆ ಬಾಧಕವಾಗಿರುವುದರಿಂದ ಇಂಥ ಮನುಷ್ಯನನ್ನು ನಿಜಾಂ ರಾಜ್ಯದಿಂದ ಹೊರದೂಡಬೇಕು" ಎಂಬುದೇ ಆ ನಿರ್ಣಯಾತ್ಮಕ ವಿವರ.

ಈ ನಿರ್ಣಯವು ನಿಜಾಂ ಸರಕಾರದ ಹೊಣೆಯನ್ನು ಹಗುರಗೊಳಿಸಿತು. ತತ್ ಪರಿಣಾಮವಾಗಿ ಗೋಗಟೆಯವರು ಕ್ರಿ.ಶ. ೧೯೧೨-೧೩ ರಲ್ಲಿ ಗಡೀ ಪಾರಾದರು. ಅನಂತರ ಕ್ರಿ.ಶ. ೧೯೨೦ರಲ್ಲಿ ಗಡೀಪಾರಿನ ಆಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಅವರು ಮನವಿ ಸಲ್ಲಿಸಿದಾಗ, ನಿಜಾಂ ಸರಕಾರವು ಆ ಆಜ್ಞೆಯನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿತು. ಹೀಗಾಗಿ ಗೋಗಟೆಯವರು ಮರಳಿ ನೂತನ ವಿದ್ಯಾಲಯಕ್ಕೆ ಬರಲಿಲ್ಲ.

ಗೋಗಟೆಯವರ ನಿರ್ಗಮದಿಂದ ಈ ಶಾಲೆಯಲ್ಲಿ ರಾಷ್ಟ್ರೀಯ ಶಿಕ್ಷಣಕ್ಕೇನೂ ಹಿಂದೇಟು ಬೀಳಲಿಲ್ಲ. ಅಷ್ಟೊತ್ತಿ ಗಾಗಲೇ ಈ ಶಾಲೆಯಲ್ಲಿ ರಾಷ್ಟ್ರೀಯ ಶಿಕ್ಷಣವನ್ನು ಉದ್ದೀಪನ ಗೊಳಿಸುವ ಶಿಕ್ಷಕರ ತಂಡವೇ ನಿರ್ಮಾಣವಾಗಿತ್ತು. ಅವರೆಲ್ಲ ಆ ಕೊರತೆಯನ್ನು ತುಂಬಿಕೊಂಡು ಮೇಲೆದ್ದು ರಾಷ್ಟಾಭಿಮಾನವನ್ನು ಅರಳಿಸುವ ಶಿಕ್ಷಣ ಪ್ರಸಾರವನ್ನು ನಿರಂತರವಾಗಿ ಮಾಡ ತೊಡಗಿದರು. ಹೀಗಾಗಿ ಈ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಗು ಆಡಳಿತ ವರ್ಗದವರು ತಮ್ಮದೇ ಆದ ಪಾಲನ್ನು ಸಲ್ಲಿಸಿ ಗೌರವಕ್ಕೆ ಪಾತ್ರರಾಗಿದ್ದಾರೆ.

೧. *ನೂತನವಿದ್ಯಾಲಯ ಶಾಲೆಯಲ್ಲಿ ಕ್ರಿ.ಶ.೧೯೦೯ರಿಂದ ರಾಷ್ಟ್ರೀಯ ಹಬ್ಬಗಳಾದ ಗಣೇಶೋತ್ಸವ, ಸರಸ್ವತೀ ಪೂಜೆ, ಶಿವಜಯಂತಿ ಮೊದಲಾದ ಹಬ್ಬಗಳನ್ನು ಆಚರಿಸುತ್ತ ಬಂದಿದ್ದಾರೆ. ಈ ಹಬ್ಬಗಳ ಸಂದರ್ಭದಲ್ಲಿ ದೇಶದ ಖ್ಯಾತ ವಕ್ತಾರರನ್ನು ಕರೆಯಿಸಿ ಉಪನ್ಯಾಸಗಳನ್ನು ಏರ್ಪಡಿಸಿದ್ದಾರೆ. ಆಗಿನ ಸರಕಾರದ ನೇಮದಂತೆ ಈ ಎಲ್ಲ ಉಪನ್ಯಾಸಗಳ ಸಾರಾಂಶವನ್ನು ಮೊದಲು ಉರ್ದುವಿಗೆ ತರ್ಜುಮೆ*

ಮಾಡಿಕೊಟ್ಟು ಸರಕಾರದಿಂದ ಅನುಮತಿಯನ್ನು ಪಡೆಯ ಬೇಕಾಗುತ್ತಿತ್ತು. ಈ ಕ್ರಮದಲ್ಲಿ ಒಪ್ಪಿಗೆ ಪಡೆಯಲು ಅನುಕೂಲ ವಾಗುವಂತೆ ಹೇಗೆ ಬೇಕೋ ಹಾಗೆ ಉರ್ದುವಿನಲ್ಲಿ ಸಾರಾಂಶವನ್ನು ಬರೆದು ಸಾದರಪಡಿಸಿ ಒಪ್ಪಿಗೆಯನ್ನು ಪಡೆದುಕೊಂಡು ಕಾರ್ಯವನ್ನು ಸಾಧಿಸಲಾಗುತ್ತಿತ್ತು. ಇಂಥ ಕಾರ್ಯಕ್ರಮಗಳಲ್ಲಿ ಆಲೂರ ವೆಂಕಟರಾವ್, ಮಹಾತ್ಮಾ ಗಾಂಧೀಜಿ(೧೯೨೪), ಮೌಲಾನಶೌಕತ್ತಾಲಿ (೧೯೨೭), ಠಕ್ಕರಬಾಪಾ (೧೯೩೯), ಘನಶ್ಯಾಮದಾಸಗುಪ್ತಾ(೧೯೪೬), ದ.ರಾ.ಬೇಂದ್ರೆ, ರಂ.ಶ್ರೀ.ಮುಗಳಿ, ವಿ.ಸೀತಾರಾಮಯ್ಯ, ಮಾಸ್ತಿವೆಂಕಟೇಶ ಅಯ್ಯಂಗಾರ್, ಯದುನಾಥ ಥತ್ತೆ ಮೊದಲಾದವರೆಲ್ಲ ಆಗಮಿಸಿ, ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವ ಉದ್ಬೋಧಕ ಭಾಷಣಗಳನ್ನು ನೀಡಿದ್ದಾರೆ.

೨. ಕ್ರಿ.ಶ.೧೯೧೯ರಲ್ಲಿ ನಡೆದ ಜಾಲಿಯಾನವಾಲಾಬಾಗ್ ಹತ್ಯಾಕಾಂಡದ ಅನಂತರ ಕ್ರಿ.ಶ.೧೯೨೦ರಲ್ಲಿ ಮಹಾತ್ಮಾ ಗಾಂಧೀಜಿಯವರು ಅಸಹಕಾರ ಚಳುವಳಿಗೆ ಕರೆನೀಡಿದಾಗ, ಈ ಶಾಲೆಯಿಂದ ರಾಘವೇಂದ್ರರಾವ್ ಕುಕನೂರ ದೇಸಾಯಿ, ಜನಾರ್ದನರಾವ್ ದೇಸಾಯಿ, ರಾಮಸ್ವಾಮಿ ಮೊದಲಾದವರು ಆ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

೩. ಕ್ರಿ.ಶ. ೧೯೨೪ರಲ್ಲಿ ಮಹಾತ್ಮಾಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಿರ್ಣಯವನ್ನು ತೆಗೆದುಕೊಂಡ ಪ್ರಕಾರ, ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ಪ್ರದಾನ ಮಾಡುವ ವ್ಯವಸ್ಥೆಯನ್ನು ತತ್‌ಕ್ಷಣದಿಂದಲೇ ಈ ಶಾಲೆಯಲ್ಲಿ ಅನುವು ಗೊಳಿಸಲಾಯಿತು. ಹೀಗೆ ಮೊದಲ ಹಂತದಲ್ಲಿ ಮಾಧ್ಯಮಿಕ ವಿಭಾಗ ದಲ್ಲಿ ಕನ್ನಡ, ಮರಾಠಿ ಮಾಧ್ಯಮಗಳನ್ನು ಜಾರಿಗೊಳಿಸ ಲಾಯಿತು. ಇದರಿಂದ ಒಳ್ಳೆಯ ಪರಿಣಾಮವುಂಟಾಯಿತು. ಇದೇ ವರ್ಷದಲ್ಲಿ ಮಹಾತ್ಮಾಗಾಂಧೀಜಿ ಅವರು ಹರಿಜನ ಮಕ್ಕಳ ಶಿಕ್ಷಣಕ್ಕೆ ವಿಶೇಷ ಕಾಳಜಿಯನ್ನು ಸಂಪನ್ನಗೊಳಿಸಿದಾಗ, ಈ ಶಾಲೆಯ ಆಡಳಿತ ಮಂಡಳಿಯು ಬ್ರಹ್ಮಪುರದ ಬಳಿ ಹರಿಜನವಾಡಿಯಲ್ಲಿ ಈ ಶಾಲೆಯ ವಿಶೇಷ ಶಾಖೆಯನ್ನು ಆರಂಭಿಸಿತು. ಇದರಿಂದಾಗಿ ಕೆಲವು ದಲಿತ ಮಕ್ಕಳಾದರೂ ಶಿಕ್ಷಣವನ್ನು ಆಗ ಪಡೆಯು ವಂತಾಯಿತು.

೪. ಕ್ರಿ.ಶ.೧೯೨೪ರಲ್ಲಿ ಹೈದರಾಬಾದ ಪೊಲಿಟಿಕಲ್ ಕಾನ್ಫರನ್ಸ ನಡೆದಾಗ ಸುಭಾಷ್ಚಂದ್ರ ಭೋಸರು ಪುಣೆಯಲ್ಲಿ ಸ್ವರಾಜ್ಯ ಸಂಪಾದನೆಯ ಚಳುವಳಿಯನ್ನು ಕುರಿತ ಸ್ಫೂರ್ತಿದಾಯಕ ಭಾಷಣವನ್ನು ನೀಡಿದರು. ಆ ಭಾಷಣವನ್ನು ಕೇಳಿ ಸ್ಫೂರ್ತಿ ಗೊಂಡು ಸಕ್ರಿಯವಾಗಿ ಚಳವಳಿಗೆ ಇಳಿದವರಲ್ಲಿ ಈ ಶಾಲೆಯ ರಾಮುಜಾಗೀರದಾರ ಹಾಗು ಜನಾರ್ದನ ದೇಸಾಯಿ ಅವರು ಪ್ರಮುಖರು.

೫. 'ವಂದೇ ಮಾತರಂ' ಚಳವಳಿಯು, ನಿಜಾಂ ಸಂಸ್ಥಾನದ ವಿಮೋಚನೆಯ ಅಭಿಮಾನಕ್ಕೆ ನಾಂದಿಯಾಯಿತೆನ್ನಬೇಕು. ಏಕೆಂದರೆ ಕ್ರಿ.ಶ.೧೯೩೮ರವರೆಗೆ ನಿಜಾಂ ರಾಜ್ಯದ ಎಲ್ಲ ಶಾಲಾಕಾಲೇಜುಗಳಲ್ಲಿ ಸಮಾರಂಭಗಳಲ್ಲಿ ಯಾವ ತರಹದ ಪ್ರತಿರೋಧವಿಲ್ಲದೆ, ಸರಕಾರಿ ಹುಕಿಮನಂತೆ, "ತಾಬದೆ ಖಾಲಕೆ ಆಲಮ್ ಏ ರಿಯಾಸತ್ ರಾಖೆ। ತುಝುಕೊ ಬಸದಿಜಲಾಲ ಸಲಾಮತ ರಾಖೆ।। (ಸೃಷ್ಟಿಕರ್ತನಾದ ಪರಮಾತ್ಮನು ಈ ನಿಜಾಂ ಸಂಸ್ಥಾನವನ್ನು ವಿಶ್ವದ ಅಂತ್ಯದವರೆಗೆ ರಕ್ಷಿಸಲಿ)" ಎಂಬ ಪ್ರಾರ್ಥನೆಯನ್ನು ಹೇಳಿಸಲಾಗುತ್ತಿತ್ತು. ನಿಜಾಂನು ಏಕಪಕ್ಷೀಯ ವಾಗಿ ಪ್ರಜಾದ್ರೋಹವನ್ನು ಮಾಡತೊಡಗಿದಾಗ, ಆ ಪ್ರಾರ್ಥನೆಯಲ್ಲಿ 'ರಾಖೆ' ಬರುವ ಕಡೆ, 'ನರಾಖೆ' ಎಂದು ಸೇರಿಸಿಹಾಡತೊಡಗಿದರು, 'ನರಾಖೆ' ಎಂದರೆ, "ರಕ್ಷಿಸದಿರಲಿ, ರಕ್ಷಿಸದಿರಲಿ" ಎಂಬ ಅರ್ಥಕೊಡುವಂತೆ ಅಲ್ಲಿ ತಿದ್ದಲಾಗುತ್ತಿತ್ತು. ಇದರಿಂದಾಗಿ ಸರಕಾವು ರೋಷಗೊಂಡಿತು. ಆಗ ಇದನ್ನು ಪ್ರತಿಭಟಿಸಲು ಶಾಲಾಕಾಲೇಜುಗಳಲ್ಲಿ ಸಮಾರಂಭಗಳಲ್ಲಿ 'ತಾಬದೆ ಖಾಲಕೆ' ದ ಬದಲಾಗಿ 'ವಂದೇಮಾತರಂ' ಹಾಡ ತೊಡಗಿದರು.. ಇದು ಮುಂದೆ ಚಳವಳಿಯ ರೂಪತಾಳಿ ಸಂಸ್ಥಾನದಾದ್ಯಂತ ದಳ್ಳುರಿಯಾಗಿ ಹಬ್ಬಿತು. ಈ ಚಳುವಳಿಯು ಕಲಬುರ್ಗಿಗೆ ತಲುಪಿದಾಗ ನೂತನ ವಿದ್ಯಾಲಯ ವಿದ್ಯಾರ್ಥಿ ಗಳು ರಾಷ್ಟ್ರೀಯ ಶಕ್ತಿಯಾಗಿ ಈ ಚಳವಳಿಯಲ್ಲಿ ಧುಮುಕಿದರು. ಅಷ್ಟೊತ್ತಿಗಾಗಲೇ ನಿಜಾಂ ಸರಕಾರವು 'ವಂದೇ ಮಾತರಂ' ಹಾಡುವುದರ ಬಗ್ಗೆ ನಿಷೇಧದ ಆಜ್ಞೆಯನ್ನು ೧೮ನೆಯ ನವೆಂಬರ್ ೧೯೩೮ರಿಂದ ಜಾರಿಗೊಳಿಸಿತ್ತು. ಆದರೆ ಇದರಿಂದ ನಿಜಾಂಸರಕಾರಕ್ಕೆ ಪ್ರಯೋಜನವೇನೂ ಆಗಲಿಲ್ಲ. ತತ್ ಪರಿಣಾಮವಾಗಿ ಈ ಚಳವಳಿಯು ಇನ್ನಷ್ಟು ಸುಸಂಘಟಿತವಾಗಿ 'ಜೈಲುಭರೋ' ಕಾರ್ಯಕ್ರಮದಲ್ಲಿ ತೊಡಗಿತು. ಆಗ ಸಹಸ್ರಾರು ವಿದ್ಯಾರ್ಥಿಗಳು ಜೇಲು ಸೇರಿದರು - ಈ ಅಭಿಯಾನದಲ್ಲಿ ನೂತನ ವಿದ್ಯಾಲಯದಿಂದ ಪ್ರೊ।। ವಿ. ಪಿ. ದೇವುಳ ಗಾಂವಕರ್, ಕೇಶವರಾವ್ ಶ್ರೀಖಂಡೆ, ದಿಗಂಬರರಾವ್ ಕಲ್ಮಣಕರ್, ಕುಸುಮಾಕರ ದೇಸಾಯಿ ಮುಂತಾದವರು ವಂದೇಮಾತರಂ ಚಳವಳಿಯ ಮುಂದಾಳತ್ವವನ್ನು ಹೊಂದಿ ಜೇಲು ಸೇರಿದವರು.

ನಿಜಾಂಸರಕಾರವು ಹೇಳಿಸುತ್ತಿದ್ದ ಪ್ರಾರ್ಥನಾ ಗೀತೆಯ ಬಗ್ಗೆ ಇದ್ದ ಇನ್ನೊಂದು ಪ್ರತಿರೋಧದ ರೀತಿಯನ್ನು ಇಲ್ಲಿಯೇ ದಾಖಲಿಸುವುದು ಯೋಗ್ಯವೆನಿಸುತ್ತದೆ. ಅದೇನೆಂದರೆ ಸಂಸ್ಥಾನದಲ್ಲಿ ವಂದೇಮಾತರಂ ಚಳವಳಿಯು ಸಿಡಿದೇಳುವ ವರೆಗೆ ಕಲಬುರ್ಗಿಯ ನೂತನವಿದ್ಯಾಲಯದಲ್ಲಿ ಮಾತ್ರ ಧೈರ್ಯವಾಗಿ,"ತಾಖದಖಾಲಕೆ" ಎಂಬ ಪ್ರಾರ್ಥಾನಾಗೀತೆಯ ಬದಲಾಗಿ, ಅಲ್ಲಿಯ ಶಿಕ್ಷಕರೂ ವಿದ್ಯಾರ್ಥಿಗಳೂ, "ಹೇ ಪ್ರಭು ಆನಂದದಾತಾ ಜ್ಞಾನ ಹಮಕೋ ದೀಜಿಯೆ" ಎಂಬ ಪ್ರಾರ್ಥನೆಯನ್ನು ಹೇಳುತ್ತಿದ್ದರು. ಇದೂ ಕೂಡ ರಾಷ್ಟ್ರೀಯ

ಶಿಕ್ಷಣದಲ್ಲಿಯ ಪ್ರಸನ್ನತೆಯ ಪ್ರಭಾವ. ಇದನ್ನು ಈ ಶಾಲೆ ತನ್ನ ಆರಂಭದ ದಿನಗಳಿಂದಲೂ ನಡೆಸಿಕೊಂಡು ಬಂದಿತ್ತು. ಅಂದಿನ ಕಾಲದಲ್ಲಿ ಇದೊಂದು ಈ ಶಾಲೆಯ ಮನೋ ದಾರ್ಢ್ಯದ ಸಾಹಸದ ಅಭಿವ್ಯಕ್ತಿ. ಸ್ಥೈರ್ಯದ ಘಟ್ಟ.

೬. ನೂತನ ವಿದ್ಯಾಲಯ ಶಾಲೆಯು ಕ್ರಿ. ಶ. ೧೯೪೨ರ ಚಲೇಜಾವ ಚಳವಳಿಯಲ್ಲಿಯೂ ಕಲಬುರ್ಗಿ ಭಾಗದ ಜನರು ಸಕ್ರಿಯವಾಗಿ ಪಾಲುಗೊಳ್ಳಲು ಪ್ರೇರಣೆಯಾಯಿತು. ತತ್ಪರಿಣಾಮವಾಗಿ ಈ ಚಳವಳಿಯಲ್ಲಿ ಈ ಶಾಲೆಯ ಡಾ॥ ವಿ. ಪಿ. ದೇವುಳಗಾಂವಕರ್, ಅನಿರುದ್ಧದೇಸಾಯಿ, ಅವರಾದಿ ದತ್ತಾತ್ರೇಯರಾವ್, ಕೆ.ಎಂ.ಕೋಟೆ ಮೊದಲಾಗವರು ಧುಮ್ಮಿಕ್ಕಿದರು.

೭. ಹೈದರಾಬಾದ ಸ್ಟೇಟ್‌ಕಾಂಗ್ರೆಸ್ ನಿಷೇಧಿತವಾದಾಗ, ಸ್ವದೇಶೀ ಹಾಗು ಸ್ವರಾಜ್ಯ ಸಂಪಾದನೆಯ ಚಳವಳಿಯನ್ನು ಸಜೀವವಾಗಿ ಇಡಲು ಹೋರಾಟಗಾರರು ಈ ಸಂಸ್ಥಾನ ದಲ್ಲಿ ಆಂಧ್ರಸಭಾ, ಮರಾಠವಾಡಾ ಪರಿಷತ್ತು ಹಾಗು ನಿಜಾಂ ಕರ್ನಾಟಕ ಪರಿಷತ್ತುಗಳನ್ನು ಹುಟ್ಟು ಹಾಕಬೇಕಾಯಿತು. ಈ ಸಂಸ್ಥೆಗಳ ಮುಖಾಂತರ ಆಯಾ ಭಾಷಾಪ್ರದೇಶ ಸಮ್ಮೇಳನಗಳನ್ನು ಏರ್ಪಡಿಸಿ ಸ್ವರಾಜ್ಯ ಸಂಪಾದನೆಯ ಆಂದೋಲನದ ಬಗ್ಗೆ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಲು ಸಾಧ್ಯವಾಯಿತು. ಹೀಗೆ ನಿಜಾಂ ಕರ್ನಾಟಕದಲ್ಲಿ ಸಮ್ಮೇಳನಗಳನ್ನು ನಡಸಲು ನೂತನ ವಿದ್ಯಾಲಯ ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಶಿಕ್ಷಕರು ಕೇಂದ್ರ ಬಿಂದುವಾಗಿ ಶ್ರಮಿಸಿದರು. - ಆ ಪೈಕಿ ಪ್ರೊ॥ ವಿ. ಪಿ. ದೇವುಳಗಾಂವಕರ್ (ಭಾವೂ ಸಾಹೇಬ), ನಾರಾಯಣರಾವ್ ಕಾನಿಹಾಳ, ಸೀತಾರಾಮ ಜೋಶಿ, ಅನಂತಶರ್ಮಾ, ವೆಂಕಟೇಶ ಪದಕಿ ಮೊದಲಾದವರ ಹೆಸರುಗಳನ್ನು ಇಲ್ಲಿ ಪ್ರಮುಖವಾಗಿ ಉಲ್ಲೇಖಿಸಬಹುದು.

೮. ಸ್ವಾಮೀ ರಾಮಾನಂದ ತೀರ್ಥರು ಹೈದರಾಬಾದ ಸಂಸ್ಥಾನೀ ಸ್ಟೇಟ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಹೈದರಾಬಾದ್ ಸಂಸ್ಥಾನದ ವಿಮೋಚನಾ ಚಳವಳಿಯ ನೇತಾರರಾಗಿ ಕಾರ್ಯ ನಿರ್ವಹಿಸುವಾಗ ನೂತನ ವಿದ್ಯಾಲಯ ಶಾಲೆಯು ಅವರಿಗೆ ಸಂಪೂರ್ಣ ಬೆಂಬಲನೀಡಿತು. ಹಾಗು ಹೈದರಾಬಾದ ಸ್ಟೇಟ್ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯಲ್ಲಿ ಈ ಶಾಲೆಯ ಆಡಳಿತ ಮಂಡಳಿಯ ಕಕ್ಕೇರಿ ಹನುಮಂತ ರಾಯರು ಮತ್ತು ಜನಾರ್ಧನರಾಯ್ ದೇಸಾಯಿ ಅವರು ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು ಇತಿಹಾಸ ದಾಖಲೆ. ಅಲ್ಲದೆ ೧೫ನೆಯ ಆಗಸ್ಟ್ ೧೯೪೭ರಂದು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಾಗ, ಹೈದಾರಾಬಾದ್ ಸಂಸ್ಥಾನವನ್ನೂ ನಿಜಾಂನ ಕಪಿಮುಷ್ಠಿಯಿಂದ ವಿಮೋಚನೆಯಾಗಿರದ ಸಂದಿಗ್ಧ ಸಮಯದಲ್ಲಿ, ಧೈರ್ಯ ಸ್ಥೈರ್ಯಗಳಿಂದ ಈ ಶಾಲೆಗೆ ಸಂಬಂಧಪಟ್ಟ ಹನುಮಂತರಾವ್ ಕಕ್ಕೇರಿಯವರು ಕಲಬುರ್ಗಿಯಲ್ಲಿ ನಿಗದಿತ ವೇಳೆಗೆ ನಿಗದಿತ ಸ್ಥಳದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದು ಎಂದೆಂದಿಗೂ ಅಚ್ಚಳಿಯದೆ ಉಳಿಯುವ ಘಟನೆ.

ಈ ರೀತಿ ನೂತನ ವಿದ್ಯಾಲಯ ಶಾಲೆಯು ಹೈದರಾಬಾದ ಸ್ಟೇಟ್ ಕಾಂಗ್ರೆಸ್ಸಿನ ಅಪರೋಕ್ಷವಾಗಿ ಒಂದು ಅವಿಭಾಜ್ಯ ಶಕ್ತಿಯಾಗಿ ಹೈದರಾಬಾದ ವಿಮೋಚನಾ ಚಳವಳಿಯಲ್ಲಿ ಮಹತ್ವದ ಪಾತ್ರವನ್ನೇ ವಹಿಸಿತು - ಏಕೆಂದರೆ ಈ ಶಾಲೆಯ ಶಿಕ್ಷಕರು ಆಡಳಿತ ಮಂಡಳಿಯ ಸದಸ್ಯರೂ ಸ್ವರಾಜ್ಯ ಸಂಪಾದನೆಯ ಗುರಿಯನ್ನು ಇಟ್ಟುಕೊಂಡು ಸ್ವಯಂಸೇವಕರನ್ನು ಸಿದ್ಧಗೊಳಿಸಿದರು. ಕರಪತ್ರಗಳನ್ನು ಅಚ್ಚು ಹಾಕಿಸಿಯೋ ಸೈಕ್ಲೋಸ್ಟೈಲ್ ಮಾಡಿಸಿಯೋ ಅವುಗಳನ್ನು ಹಂಚುವ ವ್ಯವಸ್ಥೆ ಮಾಡುತ್ತಿದ್ದರು. ಗುಪ್ತಚಾರರಾಗಿ, ಭೂಗತ ಕಾರ್ಯ ಕರ್ತರಾಗಿ, ಕಾರ್ಯನಿರ್ವಹಿಸುತ್ತಿದ್ದರು. ಈ ಕಾರ್ಯದಲ್ಲಿ ಡಾ॥ ವಿ. ಪಿ. ದೇವುಳಗಾಂವಕರ್, ನಾರಾಯಣರಾವ್ ಕಾನಿಹಾಳ, ಭೂಸುನೂರಿನ ಭೈರಪ್ಪ ಗೌಡರು, ತ್ರಿಲೋಚನ ದೀಕ್ಷಿತ ಮೊದಲಾದವರು ಅಮೋಘಸೇವೆಯನ್ನು ಸಲ್ಲಿಸಿದರು.

೯. ಹೈದರಾಬಾದ ಸ್ಟೇಟ್‌ಕಾಂಗ್ರೆಸ್ಸಿನ ನೇತೃತ್ವದಲ್ಲಿ ಇಡೀ ಸಂಸ್ಥಾನದ ಜನತೆ ಒಗ್ಗಟ್ಟಾಗಿ, ಹೈದರಾಬಾದ ಸಂಸ್ಥಾನವನ್ನು ವಿಮೋಚನೆ ಗೊಳಿಸಿ, ಹೊಸಗಾರ ಪ್ರಜಾಸತ್ತಾತ್ಮಕ ರಾಜ್ಯವನ್ನು ಸ್ಥಾಪಿಸುವಲ್ಲಿ ಹೋರಾಟವು ೧೫.೮.೧೯೪೭ ರ ಅನಂತರ ತೀವ್ರ ಗತಿಯಲ್ಲಿ ಆರಂಭವಾಯಿತು.

ಆಗ ಅನೇಕರು ಕಲಬುರ್ಗಿಯ ಕಾರಾಗೃಹದಲ್ಲಿ ರಾಜಕೈದಿ ಗಳಾಗಿ ಬಂದಿಯಾದರು. ಹಾಗೆ ಬಂದಿಯಾದವರಲ್ಲಿ ಪ್ರೊ॥ ವಿ. ಪಿ. ದೇವುಳಗಾಂವಕರ್, ಭೀಮಸೇನರಾವ್ ದೇಸಾಯಿ (ಬೆಣ್ಣಕಲ್ಲ), ಅನಿರುದ್ಧ ದೇಸಾಯಿ ಹಾಗು ರಾಘವೇಂದ್ರರಾವ್ ದೇಸಾಯಿ (ಕುಕನೂರು) ಮೊದಲಾದವರು ಪ್ರಮುಖರು - ಇವರೆಲ್ಲ ನೂತನ ವಿದ್ಯಾಲಯ ಶಾಲೆಗೆ ಸಂಬಂಧಪಟ್ಟವರು. ಇವರು ಜೇಲಿನಲ್ಲಿ ಉಳಿದೆಲ್ಲ ರಾಜಕೈದಿಗಳನ್ನು ಸಂಘಟನೆ, ಸಾಮೂಹಿಕ ಪ್ರಾರ್ಥನೆ, ದೇಶದ ಸ್ವಾತಂತ್ರ್ಯದ ಬಗ್ಗೆ ಚಿಂತನೆ ವರ್ತಮಾನ ಪತ್ರಗಳ ವಾಚನ ಇತ್ಯಾದಿಗಳನ್ನು ನಡೆಸುತ್ತಿದ್ದರು. ಇದೆಲ್ಲ ಕೂಡದೆಂದು, ಪ್ರಾರ್ಥನೆಯಂತೂ ಸಲ್ಲದೆಂದೂ ಜೇಲಿನ ಪೋಲಿಸರು ಅಡ್ಡಿಗೊಳಿಸಿದಾಗ ಸತ್ಯಾಗ್ರಹಿಗಳು ಕೇಳಲಿಲ್ಲ. ಹೀಗೆ ಛಲ ಮಾಡಿದಾಗ ಭೀಮಸೇನರಾವ್ ದೇಸಾಯಿ ಅವರಿಗೆ ಲಾಠಿ ಪೆಟ್ಟಾಯಿತು. ರಕ್ತಸ್ರಾವವಾಗಿ ಅವರು ಸ್ಥಳದಲ್ಲಿಯೇ ಪ್ರಾಣತ್ಯಾಗ ಮಾಡಿದರು. ಆಗ ಅವರಿಗೆ ಅಗ್ನಿಸಂಸ್ಕಾರವನ್ನು ಅವರ ಸೋದರ ಬಂಧು, ಅದೇ ಜೇಲಿನಲ್ಲಿದ್ದ ಅನಿರುದ್ಧ ದೇಸಾಯಿ ಅವರು ಮಾಡಿ, ಅನಂತರ ಸಾಮೂಹಿಕ ಭಜನೆ ನಡೆಸಿ ಹುತಾತ್ಮರಿಗೆ ಶಾಂತಿಕೋರಿದರು. ಇಂತಹ ಒಂದು ತ್ಯಾಗಬಲಿದಾನಗಳ ಬಗ್ಗೆ ನೂತನ ವಿದ್ಯಾಲಯಶಾಲೆಯು ತನ್ನ

ಪರಿಸರದಲ್ಲಿ ದಟ್ಟವಾದ ಹೃದಯ ಸಂಸ್ಕಾರವನ್ನು ನೀಡಿದ್ದು ಇತಿಹಾಸ ಸ್ಮರಣೀಯ ವಸ್ತು.

೧೦. ಹೈದರಾಬಾದ ಸಂಸ್ಥಾನವನ್ನು ಆದಷ್ಟು ಬೇಗ ನಿಜಾಂನಿಂದ ವಿಮೋಚನೆಗೊಳಿಸಬೇಕೆಂದು ಕೆಲವು ಸ್ವಾತಂತ್ರ್ಯ ಯೋಧರು ಗಡಿಗಳಲ್ಲಿ ಶಿಬಿರಗಳನ್ನು ಕಟ್ಟಿಕೊಂಡು ಸಂಘರ್ಷಕ್ಕೆ ಸಿದ್ಧರಾಗಿದ್ದರು. ಇಂತಹ ಶಿಬಿರಗಳಲ್ಲಿ ಈ ಶಾಲೆಯ ಪರಿಸರದ ಅನೇಕರು ಸೇರ್ಪಡೆಯಾಗಿದ್ದರು. ಅಂತಹರಲ್ಲಿ ಕೆಲವರು ಶಿಬಿರಾಧಿಪತಿಗಳಾಗಿ ಅಭೂತ ಪೂರ್ವ ಸಾಹಸವನ್ನು ಮೆರೆದಿದ್ದಾರೆ. ಅಂತಹವರಲ್ಲಿ ನಾರಾಯಣರಾವ್ ಕಾನಿಹಾಳ, ದಿಗಂಬರರಾವ್ ಕಲ್ಮಣಕರ್, ದಾಸರಾವ ಮಖ್ತೇದಾರ, ಭೂಸನೂರಿನ ಭೈರಪ್ಪಗೌಡರು ಮೊದಲಾದವರು ಪ್ರಮುಖರು. ಇವರಲ್ಲದೆ ವೈಯಕ್ತಿಕವಾಗಿ ವಿಶಿಷ್ಟವಾದ ಕಾರ್ಯವನ್ನೆಸಗಿದ ಮುರಘರಾಜೇಂದ್ರ ಗಂಗಣೆ(ಮುರಿಗೆಪ್ಪ), ತ್ರಿಲೋಚನ ದೀಕ್ಷಿತ, ಬಲಭೀಮ ಮುರಘಕರ್ ಮೊದಲಾದವರ ದೇಶಾಭಿಮಾನ ಕುರಿತಾದ ಕಾರ್ಯವೈಖರಿ ಮೆಚ್ಚುವಂತಹದ್ದು. ಇವರೆಲ್ಲ ವೇಷ ಮರೆಸಿಕೊಂಡು ಸುದ್ದಿ ಸಮಾಚಾರಗಳನ್ನು ಸಂಗ್ರಹಿಸಿ ಜನರನ್ನು ಕಗ್ಗೊಲೆಯಿಂದ ತಪ್ಪಿಸುತ್ತಿದ್ದರು. ದಿಲ್ಲಿಯಲ್ಲಿಯ ಕಾಂಗ್ರೆಸ್ಸ ಸರಕಾರಕ್ಕೆ ಎಲ್ಲ ಮಾಹಿತಿಯನ್ನು ಒದಗಿಸುತ್ತಿದ್ದರು.

೧೧. ಕಲಬುರ್ಗಿ ಜೇಲಿನಲ್ಲಿ ಶಿಕ್ಷೆಗೊಳಗಾಗಿದ್ದ ಸತ್ಯಾಗ್ರಹಿಗಳಿಗೆ ಈ ಶಾಲೆಯ ಶಿಕ್ಷಕರ ಮನೆಗಳಿಂದ ರೊಟ್ಟಿ ಬುತ್ತಿ ಹೋಗುತ್ತಿದ್ದುವು. ಈ ನಿಟ್ಟಿನಲ್ಲಿ ಇಂದಿರಾಬಾಯಿ ದೇವುಳಗಾಂವಕರ್ ಹಾಗೂ ಕಮಲಾಬಾಯಿ ಕಾನಿಹಾಳ ಅವರ ಸಂಘಟನಾ ವೈಖರಿಯು ಗಮನಾರ್ಹವಾದುದು.

೧೨. ಈ ಶಾಲೆಯ ಶಿಕ್ಷಕರು ಹಾಗು ಬಹುತೇಕ ವಿದ್ಯಾರ್ಥಿಗಳು ಖಾದೀಧಾರಿಗಳಾಗಿದ್ದರು - ಅವರೆಲ್ಲ ಬಹುತೇಕವಾಗಿ ಖಾದೀಟೊಪ್ಪಿಗೆ ಅರ್ಥಾತ್ ಗಾಂಧೀ ಟೊಪ್ಪಿಗೆಯನ್ನು ಧರಿಸಲು ಎಂದೂ ಮರೆಯುತ್ತಿದ್ದಿಲ್ಲ. ಇದನ್ನು ಸಹಿಸದ ರಜಾಕಾರರು ಹಾಗೂ ನಿಜಾಂ ಪೋಲಿಸರು ವಿದ್ಯಾರ್ಥಿಗಳ ನೆತ್ತಿ ಬಡಿದು ಗಾಂಧಿ ಟೊಪ್ಪಿಗೆಯನ್ನು ಅಪಮಾನಕ್ಕೆ ಈಡು ಮಾಡುತ್ತಿದ್ದರು. ಒಂದು ಸಲ ಈ ಶಾಲೆಯ ಶಿಕ್ಷಕರಾಗಿದ್ದ ಖಾದೀಧಾರಿ ವಾಮದೇವದೀಕ್ಷಿತರನ್ನು ವಿವಸ್ತ್ರಗೊಳಿಸಿ ಹೊಡೆದದ್ದುಂಟು.

೧೩. ಈ ಶಾಲೆಯ ಶಿಕ್ಷಕರಲ್ಲಿ ದಾತೇಗುರೂಜಿ, ಭೋಗಲೇ ಗುರೂಜಿ, ಶಂಕರರಾವ್ ಆಳಂದಕರ್, ದತ್ತಾತ್ರೇಯರಾವ್ ಹೇರೂರ, ಶ್ರೀಧರರಾವ್ ಸುಬೇದಾರ, ರಂಗರಾವ್ ಕಾನಿಹಾಳ, ಕಿಶನರಾವ್ ಗುಡೂರ ಮೊದಲಾದ ಶಿಕ್ಷಕರು ತಮ್ಮ ತಮ್ಮ ತರಗತಿಗಳಲ್ಲಿ ರಾಷ್ಟ್ರವೀರರ ಜೀವನ ಚರಿತ್ರೆಗಳನ್ನು ಹೇಳುತ್ತಿದ್ದರು. ದೇಶದ ಇತಿಹಾಸದ ಸತ್ಯಸಂಗತಿಗಳನ್ನು ಬಹಿರಂಗಗೊಳಿಸುತ್ತಿದ್ದರು. ಭಜನೆ, ಪುರಾಣ, ಕೀರ್ತನೆಗಳ ಮುಖಾಂತರವೂ ರಾಷ್ಟ್ರೀಯ ಜಾಗೃತಿಯನ್ನು ವಿದ್ಯಾರ್ಥಿಗಳಲ್ಲಿ ಒಡಮೂಡಿಸುತ್ತಿದ್ದರು. ರಾಷ್ಟ್ರಭಕ್ತಿಗೀತೆಗಳನ್ನು ಹಾಡಿಸುತ್ತಿದ್ದರು. ಇದರ ಸುಳಿವು ನಿಜಾಂ ಸರಕಾರಕ್ಕೆ ಹತ್ತಿದಾಗ ಈ ಶಾಲೆಯನ್ನು ಸುಟ್ಟುಬಿಡುವ ಸಂಚು ಸರಕಾರದ ಪಟ್ಟಿಯಲ್ಲಿ ಸೇರಿತ್ತು. ಅಷ್ಟರಲ್ಲಿ ಸ್ವಾಮಿ ರಾಮಾನಂದತೀರ್ಥರ ನಿರಂತರ ಹೋರಾಟಕ್ಕೆ, ಹಿಂದೂಸ್ಥಾನದ ಅಂದಿನ ಗೃಹಸಚಿವ, ಉಪಪ್ರಧಾನಿ, ಉಕ್ಕಿನ ಮನುಷ್ಯ ಸರ್ದಾರ ಪಟೇಲರ ಮುತ್ಸದ್ದಿತನದ ಎರಕ ಸಿಕ್ಕು, ಪೋಲಿಸ್ ಕಾರ್ಯಾಚರಣೆ ನಡೆದು ಸಾಮೂಹಿಕ ಕಗ್ಗೊಲೆ (ಖತನೇಆವನ) ನಿಂತಿತು. ೧೭.೦೯.೧೯೪೮ರಂದು ಹೈದರಾಬಾದ ಸಂಸ್ಥಾನವು ನಿಜಾಂನ ಕಪಿ ಮುಷ್ಠಿಯಿಂದ ವಿಮೋಚನೆಯಾಯಿತು.

ಹೀಗೆ ನೂತನ ವಿದ್ಯಾಲಯ ಶಾಲೆಯು, ಹೈದರಾಬಾದ ಸಂಸ್ಥಾನದ ವಿಮೋಚನೆಯಾಗಿ ಅದು ಹಿಂದೂಸ್ಥಾನದ ಅವಿಭಾಜ್ಯ ಅಂಗವಾಗುವವರೆಗೆ, ಸ್ವಾತಂತ್ರ್ಯ ಚಳವಳಿಯಲ್ಲಿ ಅತ್ಯಂತ ಯಶಸ್ವಿ ಪಾತ್ರವನ್ನು ವಹಿಸಿತು. ಎಂತಹ ಕಷ್ಟಗಳು ಬಂದರೂ ತಾನು ಹಿಂದಕ್ಕೆ ಸರಿಯದೆ, 'ಸ್ವಾತಂತ್ರ್ಯ ಸಾಧನೆಯೇ ತನ್ನ ಅಂದಿನ ಅಂತಿಮ ಗುರಿ' ಎಂದು ಅದನ್ನು ಸಾಧಿಸಿಯೇ ತೋರಿಸಿತು. ಆದ್ದರಿಂದ ಈ ಶಾಲೆಯು ಕೇವಲ ಅಕ್ಷರಜ್ಞಾನ ಹಾಗೂ ಅಂಕಿಮಗ್ಗಿಗಳ ಜ್ಞಾನವನ್ನು ನೀಡಿ ಕೈ ತೊಳೆದುಕೊಂಡ ಶಾಲೆಯಲ್ಲ. ಇದು ರಾಷ್ಟ್ರೀಯತೆಯ ಅನುಬಂಧವನ್ನು ತನ್ನ ತೆಕ್ಕೆಗೆ ಬರುವ ಎಲ್ಲ ವಿದ್ಯಾರ್ಥಿಗಳಲ್ಲಿ ಸದಾಕಾಲಕ್ಕೂ ಚೇತೋಹಾರಿಗೊಳಿಸುವ ಶಾಲೆಯೆಂಬ ಖ್ಯಾತಿಯನ್ನು ಉಳಿಸಿಕೊಂಡಿದೆ. ಈ ರೀತಿ ಈ ಶಾಲೆ ಇಂದು ಮಾದರಿ ಶಿಕ್ಷಣ ಸಂಸ್ಥೆಯಾಗಿ ಬೆಳೆದು ಆದರ್ಶದ ಮೌಲ್ಯಗಳೊಂದಿಗೆ ಬಾಳ್ವೆಗೆ ಬೆಳಕಾಗಿ ಬಾಳುತ್ತಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*೧. ನೂತನ ವಿದ್ಯಾಲಯ ಶಾಲೆಯಲ್ಲಿಯ ಹಳೆಯ ದಫ್ತರದಲ್ಲಿಯ ಸರಕಾರಿ ದಾಖಲೆಗಳು.
*೨. ಹೈದರಾಬಾದ ಕರ್ನಾಟಕ ೧೯೪೧.
*೩. ನೂತನ ವಿದ್ಯಾಲಯ ಸಂಸ್ಥೆಯ ಪ್ಲಾಟಿನಮ್‌ಜುಬ್ಲಿಯ ಸ್ಮರಣ ಸಂಚಿಕೆ.
*೪. ಗುಲ್ಬರ್ಗಾ ಜಿಲ್ಲಾ ಗ್ಯಾಸೆಟಿಯರ್ ೧೯೯೭.
*೫. ವಂದೇ ಮಾತರಂದಿಂದ ಜನಗಣಮನದವರೆಗೆ - ವಿ. ಎಚ್. ದೇಸಾಯಿ.

ಪ್ರೊ|| ಲಕ್ಷ್ಮಣ್ ತೆಲಗಾವಿ*

ಚಿತ್ರದುರ್ಗ ಮತ್ತು ಹರಪನಹಳ್ಳಿ ನಾಯಕ ಅರಸರ ಸಂಬಂಧ - ಕೆಲವು ಸಮಸ್ಯೆಗಳು

ವಿಜಯನಗರ ಪತನಾನಂತರ ಸ್ವತಂತ್ರಗೊಂಡ ಚಿತ್ರದುರ್ಗ ನಾಯಕ ಸಂಸ್ಥಾನ ತನ್ನ ಸಮಕಾಲೀನ ಇತರ ನಾಯಕ ಸಂಸ್ಥಾನಗಳೊಂದಿಗೆ ರಾಜಕೀಯ, ವೈವಾಹಿಕ ಹಾಗೂ ಇತರ ಸಂಬಂಧಗಳನ್ನು ಹೊಂದಿದ್ದ ಬಗೆಗೆ ಸ್ವಲ್ಪಮಟ್ಟಿಗೆ ಅಧ್ಯಯನಿಸಲಾಗಿದೆ. ಸುರಪುರ, ರಾಯದುರ್ಗ, ಜರಿಮಲೆ, ಗುಡೇಕೋಟೆ, ಕನಕಗಿರಿ, ಆನೆಗೊಂದಿ, ಮತ್ತೋಡು, ತರೀಕೆರೆ, ಸಿರಾ, ಹರ್ತಿಕೋಟೆ, ನಾಯಕನಹಟ್ಟಿ - ಇದೇ ಮೊದಲಾದ ಸಂಸ್ಥಾನಗಳನ್ನು ಈ ಸಂಬಂಧದಲ್ಲಿ ಉದಾಹರಿಸಬಹುದು. ಇವುಗಳೊಡನೆ ಹೆಸರಿಸಬೇಕಾದ ಇನ್ನೊಂದು ಸಂಸ್ಥಾನವೆಂದರೆ ಹರಪನಹಳ್ಳಿ. ಚಿತ್ರದುರ್ಗ ಸಂಸ್ಥಾನದೊಡನೆ ತನ್ನ ಹುಟ್ಟನ್ನು ಕಂಡುಕೊಂಡುದು ಈ ಸಂಸ್ಥಾನ. ಚಿತ್ರದುರ್ಗ - ಹರಪನಹಳ್ಳಿ ಸಂಬಂಧವು ಚಿತ್ರದುರ್ಗದ ಮೊದಲ ದೊರೆ ಅಥವಾ ಸಂಸ್ಥಾಪಕ ದೊರೆ ಮತ್ತಿ ತಿಮ್ಮಣ್ಣನಾಯಕನ ಕಾಲದಿಂದಲೂ ಬೆಳೆದುಬಂದಿದೆ.

ಉಚ್ಚಂಗಿದುರ್ಗ (ಆ ನಂತರ ಹರಪನಹಳ್ಳಿ) ನಾಯಕ ಸಂಸ್ಥಾನದ ಸ್ಥಾಪನೆಗೆ ಕಾರಣನೆನಿಸಿದ ದಾದಯ್ಯನಾಯಕ ಆರಂಭದಲ್ಲಿ ಚಿತ್ರದುರ್ಗ ಸಂಸ್ಥಾನದೊಡನೆ ಹೊಂದಿದ್ದ ಸಂಬಂಧ ಸ್ಪಷ್ಟಗೊಳ್ಳದಿರುವುದು ಇಲ್ಲಿ ಚರ್ಚಿಸಬೇಕಾದ ಮೊದಲನೇ ಸಮಸ್ಯೆಯಾಗಿದ್ದರೆ, ದುರ್ಗದ ಬಿಚ್ಚುಗತ್ತಿ ಭರಮಣ್ಣ ನಾಯಕನು ಹರಪನಹಳ್ಳಿ ಪೇಟೆಯನ್ನು ತನ್ನ ಕೈವಶ ಮಾಡಿಕೊಂಡುದರ ಬಗೆಗೆ ಇತರ ಮೂಲಗಳು ಮೌನ ವಹಿಸಿವೆಯೆಂಬುದು ಎರಡನೇ ಸಮಸ್ಯೆ. ಭರಮಣ್ಣನಾಯಕನು ಯುದ್ಧದಲ್ಲಿ ಸೆರೆಹಿಡಿದು ದುರ್ಗಕ್ಕೆ ಕರೆತಂದು ಸೆರೆಮನೆಯಲ್ಲಿ ಹಾಕಿದುದು ಸೋಮಶೇಖರ ನಾಯಕನನ್ನೇ ಅಥವಾ ಎರಡನೇ ಬಸವಂತ ನಾಯಕನನ್ನೇ ಎಂಬ ಸಮಸ್ಯೆ ಮೂರನೆಯದು. ಈ ಮೂರೂ ಸಮಸ್ಯೆಗಳನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲೆತ್ನಿಸಿದೆ.

ಮೊದಲನೆಯದಾಗಿ, ವಿಜಯನಗರ ಪ್ರತಿನಿಧಿಯಾಗಿ ನೇಮಕಗೊಂಡ ಮತ್ತಿ ತಿಮ್ಮಣ್ಣನಾಯಕ (೧೫೬೮-೧೫೮೯) ತಾನು ಚಿತ್ರದುರ್ಗದಲ್ಲಿ ಸ್ವತಂತ್ರವಾಗಿ ಕೈಗೊಂಡ ಕೋಟೆ-ಕೊತ್ತಲ, ಅರಮನೆ, ಕೆರೆ, ದೇವಾಲಯ ಇತ್ಯಾದಿಗಳ ನಿರ್ಮಾಣದಿಂದಾಗಿ ವಿಜಯನಗರ ಅಥವಾ ಕೇಂದ್ರ ಸರ್ಕಾರದ ಆಗ್ರಹಕ್ಕೆ ತುತ್ತಾದುದು ಸಹಜ. ಪರಿಣಾಮವಾಗಿ, ಈತ ವಿಜಯನಗರ ರಾಜಧಾನಿಯಲ್ಲಿ ಬಂದಿಯಾಗಿ ಅಲ್ಲಿಯೇ ತನ್ನ ಕೊನೆಯುಸಿರೆಳೆಯಬೇಕಾಯಿತು. ತಿಮ್ಮಣ್ಣನಾಯಕನ ಜತೆಯಲ್ಲಿಯೇ ಇದ್ದು, ೧೫೮೯ರಲ್ಲಿ ಈ ನಾಯಕ ಮರಣ ಹೊಂದಿದಾಗ ವಿಜಯನಗರ ರಾಜಧಾನಿಯಿಂದ ದುರ್ಗಕ್ಕೆ ಹಿಂದಿರುಗಿ ಬಂದವರೆಂದರೆ ಅಣ್ಣಗಾರ ಓಬಣ್ಣ ಮತ್ತು ದಾದಯ್ಯನಾಯಕ. ಅಣ್ಣಗಾರ ಬಾಬಣ್ಣ ಮತ್ತಿ ತಿಮ್ಮಣ್ಣನಾಯಕನ ಐದು ಜನ ಮಕ್ಕಳಲ್ಲಿ ಮೊದಲನೆಯವ. ಈಗಲೊಬಣ್ಣ ಮತ್ತು ಗಡ್ಡದ ಮದಕರಿನಾಯಕ ಎಂಬ ಅಡ್ಡ ಹೆಸರುಗಳಿಂದಲೂ ಈತ ಗುರುತಿಸಲ್ಪಡುತ್ತಾನೆ. ಉಳಿದ ಮಕ್ಕಳೆಂದರೆ ದ್ರವ್ಯಾನ್ನದೋಬಣ್ಣ, ಗುಲಪೀನಾಯಕ ಮತ್ತು ಹೊನ್ನವ್ವ. ಆ ನಂತರ ಇವರ ಪೈಕಿ ಅಣ್ಣಗಾರ ಓಬಣ್ಣ ದುರ್ಗದ ನಾಯಕತನ ಪಡೆದುಕೊಂಡರೆ, ದೊಡ್ಡಣ್ಣನು ಉಚ್ಚಂಗಿದುರ್ಗದ ನಾಯಕತನ ವಹಿಸಿಕೊಂಡ. ಹೊನ್ನವ್ವಳನ್ನು ದಾದಯ್ಯನಾಯಕನಿಗೆ ಕೊಟ್ಟು ವಿವಾಹ ಮಾಡುವುದರೊಡನೆ ಆಕೆಗೆ ಉಚ್ಚಂಗಿದುರ್ಗವನ್ನು ಬಳುವಳಿಯಾಗಿ ನೀಡಲಾಯಿತು. ಹೀಗೆ ಮೊದಲಿಗೆ ಚಿತ್ರದುರ್ಗದವರ ವಶದಲ್ಲಿದ್ದ ಉಚ್ಚಂಗಿದುರ್ಗ ಆ ನಂತರ ಹೊನ್ನವ್ವನ ಮೂಲಕ ದಾದಯ್ಯನಾಯಕನ ವಶವಾಗಿ ಹರಪನಹಳ್ಳಿ ಸಂಸ್ಥಾನ ಹುಟ್ಟಿಕೊಂಡಿತೆಂಬುದು ಇಲ್ಲಿ ಸ್ಪಷ್ಟಪಡುವ ಅಂಶ.

ವಾಸ್ತವದಲ್ಲಿ, ಈ ದಾದಯ್ಯನಾಯಕ ಯಾರು? ದಾಖಲೆಗಳಲ್ಲಿ ಈತನನ್ನು ದಾದೇನಾಯಕ, ದಾದಿನಾಯಕ ನೆಂತಲೂ ಕರೆಯಲಾಗಿದೆ. ಹರಪನಹಳ್ಳಿ ಚರಿತ್ರೆಯಲ್ಲಿ

* ಮುಖ್ಯಸ್ಥ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ನಿರೂಪಿತವಾದಂತೆ, ಬಾಗಳಿಯ ಮಾಚಿನಾಯಕನೆಂಬವನ ಮಗ ಈ ದಾದಯ್ಯನಾಯಕ. ಇದಕ್ಕೆ ಶಾಸನವೊಂದರ ಆಧಾರವೂ ಉಂಟು. ಹರಪನಹಳ್ಳಿ ಪಾಳೇಗಾರಿಕೆ ಆರಂಭಿಸುವ ಮುನ್ನ ದಾದಯ್ಯನಾಯಕ ಕಾನಹಳ್ಳಿ ಬಳಿಯಲ್ಲಿ ಇದ್ದು, ಕಾನಹಳ್ಳಿ - ಬಾಗಳಿ - ನೀಲಗುಂದ ಪರಿಸರದಲ್ಲಿ ತನ್ನ *ಕಿರಾತ ಪಡೆ* ಸಹಿತ ಓಡಾಡಿಕೊಂಡಿದ್ದ. ಆದರೆ ಚಿತ್ರದುರ್ಗ ಸಂಸ್ಥಾನಿಕರೊಡನೆ ಈತನಿಗಿದ್ದ ಸಂಬಂಧ ಕುರಿತು ಎಲ್ಲಿಯೂ ಸ್ಪಷ್ಟ ಸೂಚನೆ ಕಂಡುಬರುವುದಿಲ್ಲ.

ಮತ್ತಿ ತಿಮ್ಮಣ್ಣನಾಯಕನು ವಿಜಯನಗರ ರಾಜಧಾನಿಯಲ್ಲಿ ಸೆರೆಮನೆಯಲ್ಲಿ ಸಾವನ್ನಪ್ಪಿದಾಗ ದಾದಯ್ಯನಾಯಕ ಅಣ್ಣಗಾರ ಓಬಣ್ಣನೊಡನೆ ವಿಜಯನಗರದಲ್ಲಿದ್ದನೆಂಬುದನ್ನು; ಆ ನಂತರ ಹೊನ್ನವ್ವನಾಗತಿಯ ಕೈ ಹಿಡಿಯುವುದರೊಡನೆ ದುರ್ಗದವರ ಅಳಿಯನಾದುದನ್ನು ನೋಡಿದರೆ ಈತ ದುರ್ಗದರಸರೊಂದಿಗೆ ನಿಕಟ ಸಂಬಂಧ ಹೊಂದಿದ್ದವನೆಂದೇ ವ್ಯಕ್ತಪಡುತ್ತದೆ. ಆದರೆ ಯಾವ ಬಗೆಯ ಸಂಬಂಧ? ಆರಂಭದಿಂದಲೂ ದಾದಯ್ಯ ನಾಯಕನು ಮತ್ತಿ ತಿಮ್ಮಣ್ಣನಾಯಕನ ಸೇವೆಯಲ್ಲಿದ್ದಿರಬಹುದೇ? ಚಿತ್ರದುರ್ಗ ಸಂಸ್ಥಾನ ತನ್ನ ಅಸ್ತಿತ್ವ ಕಂಡುಕೊಳ್ಳುತ್ತಿದ್ದ ಬಹುಮುಖ್ಯ ಹಂತದಲ್ಲಿ ದಾದಯ್ಯನಾಯಕ ನಿರ್ವಹಿಸಿದ ಪಾತ್ರ ಯಾವುದು, ದುರ್ಗದವರ ಪ್ರೀತಿಗೆ ಪಾತ್ರನಾಗುವಷ್ಟರ ಮಟ್ಟಿಗೆ ಈತ ಬೆಳೆದುದು ಹೇಗೆ, ಹಾಗೂ ಮೂಲದಲ್ಲಿ ದುರ್ಗದವರೊಂದಿಗೆ ದಾದಯ್ಯನಾಯಕ ಹೊಂದಿದ್ದ ಸಂಬಂಧ ಎಂತಹದು, ಇತ್ಯಾದಿ ಅಂಶಗಳು ಇನ್ನೂ ಸ್ಪಷ್ಟಗೊಳ್ಳಬೇಕಿವೆ. ಈತನ ಆಳ್ವಿಕೆಯ ಕಾಲವನ್ನು ೧೫೬೬ರಿಂದ ೧೫೯೨ ಎಂದು ಸೂಚಿಸಲಾಗಿದೆ.

ಎರಡನೇ ಸಮಸ್ಯೆ, ಬಿಚ್ಚುಗತ್ತಿ ಭರಮಣ್ಣನಾಯಕನ (೧೬೮೯-೧೭೨೧) ಆಡಳಿತಾವಧಿಯದು. ಈ ವೇಳೆಗೆ ಚಿತ್ರದುರ್ಗ - ಹರಪನಹಳ್ಳಿ ಸಂಸ್ಥಾನಗಳ ನಡುವೆ ವೈರ ಬಲಿತು ಹಲವಾರು ಕಾಳಗಗಳೂ ಸಂಭವಿಸಿದ್ದವು; ಮುಂದಿನ ಕಾಳಗಗಳಿಗೆ ಸಿದ್ಧತೆಗಳೂ ನಡೆದಿದ್ದವು. ಹರಪನಹಳ್ಳಿ ಸಂಸ್ಥಾನದ ಗಡಿಭಾಗದ ಊರುಗಳು ದುರ್ಗದವರ ವಶವಾಗುತ್ತಿದ್ದುದು ಒಂದೆಡೆಯಾದರೆ, ಇನ್ನೊಂದೆಡೆ ಇಂಥಾ ಕೆಲವಾರು ಪ್ರದೇಶಗಳು ಆಗಾಗ್ಗೆ ಕೈಬಿಟ್ಟು ಹೋಗುತ್ತಿದ್ದವು. ಉದಾಹರಣೆಗೆ, ಮೇಗಳಗೆರೆ, ಚಿಕ್ಕಮೇಗಳಗೆರೆ, ತೆಲಿಗಿ, ನೀಲಗುಂದ, ಕಂಚಿಕೆರೆ, ಗುಡಾಳು, ರಾಮಘಟ್ಟ ಮೊದಲಾದುವು ಇಂಥಾ ಕೆಲವು ಗ್ರಾಮಗಳು. ಆದರೆ ಹರಪನಹಳ್ಳಿ ರಾಜಧಾನಿಯನ್ನೇ ಚಿತ್ರದುರ್ಗದವರು ವಶಪಡಿಸಿಕೊಂಡುದು ದುರ್ಗದವರಿಗೆ ಸಂಬಂಧಿಸಿದಂತೆ ಈ ಕಾಲಘಟ್ಟದ ಪ್ರಮುಖ ರಾಜಕೀಯ ಸಾಧನೆ ಎಂದಾದರೆ, ಹರಪನಹಳ್ಳಿ ಚರಿತ್ರೆಯಲ್ಲಿ ಇದೊಂದು ದೊಡ್ಡ ದುರಂತದ ಘಟನೆ ಎನ್ನಬಹುದು.

ಚಿತ್ರದುರ್ಗ ಪರವಾದ ಚಾರಿತ್ರಿಕ ದಾಖಲೆಗಳಲ್ಲಿ ಈ ಘಟನೆ ಉಲ್ಲೇಖಗೊಂಡಿರುವುದು ಹೀಗೆ : *"ವಿರೋಧಿ ಸಂವತ್ಸರದಲ್ಲಿ ಹರುಪನಹಳ್ಳಿಯವರ ಮೇಲೆ ಕಾರ್ಯ। ಹರುಪನಹಳ್ಳಿಯವರು ಪ್ಯಾಟೆ ಕಡಿದು ಪ್ಯಾಟೆಯಲ್ಲು ವೀರಭದ್ರ ದೇವಸ್ಥಾನದಲ್ಲಿ ಕುಳಿತುಕೊಂಡು ಮೇಳಾ ಕಟ್ಟಿಸಿ ಕುಳಿತುಯಿದ್ದು ಜಗಳವಾದ ಮೇಲೆ ಧರ್ಮಕಾಳೆ ಹಿಡಿಸಿದರು।."* ಇಲ್ಲಿಯ ಸೂಚನೆಯಂತೆ, ಈ ಘಟನೆ ನಡೆದುದು ೧೭೦೯ರಲ್ಲಿ. ಆ ವರ್ಷ ಭರಮಣ್ಣನಾಯಕ ಹರಪನಹಳ್ಳಿ ಪೇಟೆ ವಶಪಡಿಸಿಕೊಂಡು ಪೇಟೆಯ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಕುಳಿತು ಮೇಳಾ ಕಟ್ಟಿಸಿಕೊಂಡುದು ಒಂದು ವಿಶಿಷ್ಟ ಘಟನೆ. ಈ ಕಾಳಗದ ಸಂದರ್ಭದಲ್ಲಿ ಭರಮಣ್ಣನಾಯಕ 'ಧರ್ಮಕಹಳೆ' (ಯುದ್ಧದಲ್ಲಿ ಗೆದ್ದವರು ಕರುಣೆಯಿಂದ ಯುದ್ಧವನ್ನು ನಿಲ್ಲಿಸುವ ಸೂಚನೆಗಾಗಿ ಊದಿಸುವ ಕಹಳೆ) ಹಿಡಿಸಿ ಯುದ್ಧ ನಿಲ್ಲಿಸಿದುದು ಗಮನಾರ್ಹ.

ಚರ್ಚಾರ್ಹ ಸಂಗತಿಯೆಂದರೆ, ೧೭೦೯ರಲ್ಲಿ ಚಿತ್ರದುರ್ಗ - ಹರಪನಹಳ್ಳಿಗಳ ನಡುವೆ ನಡೆದ ಯುದ್ಧ ಸಂದರ್ಭದಲ್ಲಿ ಹರಪನಹಳ್ಳಿಯಲ್ಲಿ ಅರಸನಾಗಿದ್ದವನು (೧೭೦೫-೧೭೧೫)ರ ಮರಿಕೊಟ್ರಪ್ಪನಾಯಕ (ಕುಂ. ಬಾ. ಸದಾಶಿವಪ್ಪ : ಹರಪನಹಳ್ಳಿ ಪಾಳೆಯಗಾರರು : ೧೯೬೬ : ಪು. ೨೧). ಹರಪನಹಳ್ಳಿ ಚರಿತ್ರೆಯಲ್ಲಿ ಈ ಅರಸನ ಬಗೆಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಅಲ್ಲದೆ, ಭರಮಣ್ಣನಾಯಕನು ಹರಪನಹಳ್ಳಿ ಪೇಟೆಯನ್ನು ಪ್ರವೇಶಿಸಿದ ಘಟನೆಯೂ ಪ್ರಸ್ತಾಪಗೊಂಡಿಲ್ಲ. ಹರಪನಹಳ್ಳಿ ಚರಿತ್ರೆ ಈ ಕುರಿತು ಮೌನ ವಹಿಸಿರುವುದು ಸಹಜವಾದರೂ, ಹರಪನಹಳ್ಳಿ ಚರಿತ್ರೆಯಲ್ಲಿ ಕೆಲಸ ಮಾಡಿರುವ ಸಂಶೋಧಕರೂ ಚಿತ್ರದುರ್ಗ ನಾಯಕ ಅರಸರ ದಾಖಲೆಗಳು ಉಲ್ಲೇಖಿಸುವ ಈ ಘಟನೆಯ ವೃತ್ತಾಂತವನ್ನು ನಿರಾಕರಿಸಿದ ಯಾವ ಸೂಚನೆಯೂ ಇಲ್ಲದಿರುವುದು ಇಲ್ಲಿ ಮುಖ್ಯವಾಗುತ್ತದೆ. ಆದರೂ ಸದ್ಯಕ್ಕೆ ಈ ಘಟನೆಯನ್ನು ಇನ್ನಷ್ಟು ಸಮರ್ಥಿಸುವವರೆಗೆ ಇದೊಂದು ಸಮಸ್ಯೆಯಾಗಿಯೇ ಉಳಿಯುತ್ತದೆನ್ನಬಹುದು.

ಮೂರನೇ ಸಮಸ್ಯೆ, ಹರಪನಹಳ್ಳಿ ಅರಸನನ್ನು ಚಿತ್ರದುರ್ಗ ದವರು ಸೆರೆಹಿಡಿದು ತಂದುದಕ್ಕೆ ಸಂಬಂಧಿಸಿದುದು. ಆದರೆ ಈ ಘಟನೆಯ ಬಗೆಗೆ ಚಿತ್ರದುರ್ಗ ಪರವಾದ ದಾಖಲೆಗಳಲ್ಲೆ ಒಮ್ಮತವಿಲ್ಲವೆಂಬುದು ಗಮನಾರ್ಹ. ದಾಖಲೆಯ ಪ್ರಕಾರ ಈ ಘಟನೆ ನಡೆದುದು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ. ಆಗ ಹರಪನಹಳ್ಳಿಯಲ್ಲಿ ಅರಸನಾಗಿದ್ದವನು ಸೋಮಶೇಖರ ನಾಯಕ (೧೭೪೨-೧೭೬೬). ಆದರೆ ಈತನ ಕಾಲಾವಧಿ ಭರಮಣ್ಣ ನಾಯಕನ ಕಾಲಾವಧಿಗೆ ಹೊಂದುವುದಿಲ್ಲವಾದ್ದರಿಂದ ಈ ಘಟನೆಗೂ ಸೋಮಶೇಖರ ನಾಯಕನಿಗೂ ಸಂಬಂಧ ವಿಲ್ಲವೆಂದು ಭಾಸವಾದರೂ, ಚಿತ್ರದುರ್ಗದ ದಾಖಲೆಯೊಂದು ಭರಮಣ್ಣನಾಯಕನಿಗೆ ಸೆರೆಸಿಕ್ಕವನು ಸೋಮಶೇಖರ ನಾಯಕನೆಂದೇ ಹೇಳುತ್ತದೆ.

ಈ ದಾಖಲೆಯ ಪ್ರಕಾರ, ಹರಪನಹಳ್ಳಿ ಸೋಮಶೇಖರ ನಾಯಕ ದುರ್ಗದ ವಿರುದ್ಧ ಯುದ್ಧ ಘೋಷಿಸಿದಾಗ, ಸೋಮಶೇಖರನಾಯಕನ ರಾಣಿ ಅದನ್ನು ತಡೆಯಲು ಪ್ರಯತ್ನಿಸುತ್ತಾಳೆ. ತಮ್ಮ ಸೇನಾಶಿಬಿರ ರಕ್ಷಣೆಗೆ ಸಂಬಂಧಿಸಿದಂತೆ ದುರ್ಗದವರು ವಿಧಿಸಿದ್ದ ಬಿಗಿ ನಿರ್ಬಂಧಗಳನ್ನು ಧಿಕ್ಕರಿಸಿ ಶಿಬಿರ ಪ್ರವೇಶಿಸಿದಾಗ ದುರ್ಗದ ದಂಡಿನವರಿಂದ ಹತಳಾಗುತ್ತಾಳೆ. ಈ ಯುದ್ಧದಲ್ಲಿ ಭರಮಣ್ಣನಾಯಕನು ಸೋಮಶೇಖರ ನಾಯಕನನ್ನು ಸೆರೆಹಿಡಿದು ದುರ್ಗಕ್ಕೆ ಕರೆತಂದು ಸೆರೆಮನೆಯಲ್ಲಿ ಹಾಕಿಸುತ್ತಾನೆ. ಸ್ವಲ್ಪ ಕಾಲಾನಂತರ ಸೋಮಶೇಖರನಾಯಕ ದುರ್ಗದರಸನಲ್ಲಿ ಕ್ಷಮಾಯಾಚನೆ ಮಾಡಿದಾಗ ಆತನನ್ನು 'ಧರ್ಮಸೆರೆ' ಬಿಡಿಸಿ, ಇನ್ನು ಮುಂದೆ ಎಚ್ಚರಿಕೆಯಿಂದ ಇರುವಂತೆ ತಿಳಿವಳಿಕೆ ನೀಡಿ ಹರಪನಹಳ್ಳಿಗೆ ಕಳುಹಿಸಿಕೊಡುತ್ತಾನೆ ಭರಮಣ್ಣನಾಯಕ.

ಇಲ್ಲಿ ಗಮನಿಸಬೇಕಾದ ಒಂದೆರಡು ಮುಖ್ಯ ಸಂಗತಿಗಳಿವೆ ಭರಮಣ್ಣ ನಾಯಕ ಹರಪನಹಳ್ಳಿ ದೊರೆಯನ್ನು ಸೆರೆಹಿಡಿದು ದುರ್ಗಕ್ಕೆ ಕರೆತಂದನಂತರ ಹರಪನಹಳ್ಳಿಯ ಕಾರಭಾರವನ್ನು ಹಾವನೂರು ಹನುಮಂತಗೌಡ ಎಂಬವನಿಗೆ ಕೊಡಿಸಿದನೆಂಬುದು ಬಹುಮುಖ್ಯವಾದ ಅಂಶ. ಅದೇ ವೇಳೆಗೆ ಹರಪನಹಳ್ಳಿ ಸಂಸ್ಥಾನಕ್ಕೆ ಸೇರಿದ ಮೇಗಳಗೇರಿ, ಚಿಕ್ಕಮೇಗಳಗೇರಿ, ಕಂಚಿಕೆರೆ, ಗುಡಾಳು, ತೆಲಿಗಿ, ರಾಮಘಟ್ಟ ಹಾಗೂ ನೀಲಗುಂದಗಳು ಭರಮಣ್ಣ ನಾಯಕನ ವಶವಾಗುತ್ತವೆ. ಹಾವನೂರು ಹನುಮಂತಗೌಡನನ್ನು ಗಮನಿಸುವುದಾದರೆ, ಈತ ಹಾವನೂರು ದೇಸಾಯಿ ಹನುಮಂತ ಗೌಡನೆಂಬುದು ಸ್ಪಷ್ಟ. ಹಾವೇರಿ ಜಿಲ್ಲೆ, ರಾಣೇಬೆನ್ನೂರಿಗೆ ೧೮ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿದಂಡೆ ಮೇಲಿರುವ ಉದ್ಗಟ್ಟಿಯಲ್ಲಿ ಸ್ಥಾಪನೆಯಾದ ಕೂಡಲೀ-ಶೃಗೇರಿ ಮಠದ ಒಂದು ಶಾಖೆಗೆ ಈ ಹನುಮಂತಗೌಡ ದತ್ತಿ ನೀಡಿದುದು ಗಮನಕ್ಕೆ ಬರುತ್ತದೆ. ಇಲ್ಲಿದ್ದ ಚತುರ್ಥ ನರಸಿಂಹ ಭಾರತೀಸ್ವಾಮಿ (ಕಂಬದ ಸ್ವಾಮಿ)ಯ ಪ್ರಭಾವಕ್ಕೆ ಒಳಗಾಗಿ ಈ ಹನುಮಂತಗೌಡ ಉದ್ಗಟ್ಟಿ ಗ್ರಾಮವನ್ನು ಅವರಿಗೆ ದತ್ತಿ ನೀಡುತ್ತಾನೆ (ಹರಪನಹಳ್ಳಿ ಪಾಳೆಯಗಾರರು : ಪು. ೨೩). ಹಾವನೂರು ಹನುಮಂತ ಗೌಡನನ್ನು ಹರಪನಹಳ್ಳಿಯಲ್ಲಿ ಬಂಧಿಸಿಡಲಾಗಿದ್ದಿತೆನ್ನುವ ವಿವರ ನೀಡುವ ಜನಪದ ನೀಳ್ಗತೆಯೊಂದನ್ನು ಹಾವನೂರಿನ ಜಾತ್ರೆಯಲ್ಲಿ ಹಾಡಲಾಗುತ್ತದೆನ್ನುವುದು ಸಹಾ ಗಮನೀಯ ಅಂಶ (ಮಾಹಿತಿ : ಶ್ರೀ ಹರಿಹರ ಶ್ರೀನಿವಾಸರಾವ್). ಏನೇ ಇದ್ದರೂ ಈ ಗೌಡನಿಗೆ ಹರಪನಹಳ್ಳಿಯ ಕಾರಭಾರ ವಹಿಸುವಲ್ಲಿ ಚಿತ್ರದುರ್ಗದವರ ಪ್ರವೇಶವಾದುದನ್ನು ಇಲ್ಲಿ ಗಮನಿಸುವುದಾದರೆ, ಈ ಹಿನ್ನೆಲೆಯಲ್ಲಿ ಹಾವನೂರು - ಚಿತ್ರದುರ್ಗಗಳ ನಡುವಣ ಸಂಬಂಧವನ್ನು ಪರಿಶೀಲಿಸಬೇಕಾಗುತ್ತದೆ. ಇಂಥಾ ಸಂದರ್ಭ ಸೃಷ್ಟಿಯಾದುದರ ಬಗೆಗೆ ಇನ್ನಷ್ಟು ವಿವರಗಳನ್ನು ಕಲೆ ಹಾಕಬೇಕಾಗುತ್ತದೆ.

ಮೇಲೆ ಪ್ರಸ್ತಾಪಿಸಿದ ಹರಪನಹಳ್ಳಿ ಸಂಸ್ಥಾನಕ್ಕೆ ಸೇರಿದ ಏಳು ಊರುಗಳನ್ನು, ಅಂದರೆ ಮೇಗಳಗೇರಿ, ಚಿಕ್ಕಮೇಗಳಗೇರಿ, ಕಂಚಿಕೆರೆ, ಗುಡಾಳು, ತೆಲಿಗಿ, ರಾಮಘಟ್ಟ ಹಾಗೂ ನೀಲಗುಂದ ಗಳನ್ನು ಭರಮಣ್ಣನಾಯಕ ವಶಪಡಿಸಿಕೊಂಡುದು ೧೭೧೬ರಲ್ಲಿ. ಆ ವರ್ಷದಲ್ಲಿ ಹರಪನಹಳ್ಳಿ ಅರಸನಾಗಿದ್ದವನು ಎರಡನೇ ಬಸವಂತನಾಯಕ (೧೭೧೫-೧೭೧೬). ಈ ದೊರೆ ಆಳ್ವಿಕೆ ನಡೆಸಿದುದು ಒಂದು ವರ್ಷ ಮಾತ್ರ. ಈತ ಅಕಾಲ ಮರಣಕ್ಕೆ ತುತ್ತಾದನೆಂದು ಮತ್ತು ಈತನ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲವೆಂದು ಕುಂ. ಬಾ. ಸದಾಶಿವಪ್ಪ ಹೇಳುತ್ತಾರೆ (ಹರಪನಹಳ್ಳಿ ಪಾಳೆಯ ಗಾರರು : ಪು. ೨೨). ಇಲ್ಲಿಯ ಪ್ರಶ್ನೆಯೆಂದರೆ, ಈ ಎಲ್ಲ ಘಟನೆಗಳು ನಡೆದುದು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲೆ ಎನ್ನುವುದಾದರೆ, ಹರಪನಹಳ್ಳಿಯ ಸೋಮಶೇಖರನಾಯಕ ಮತ್ತು ಎರಡನೇ ಬಸವಂತನಾಯಕ - ಈ ಈರ್ವರು ಅರಸರಲ್ಲಿ ಯಾವ ಅರಸ ಚಿತ್ರದುರ್ಗ ನಾಯಕನಿಂದ ಬಂಧಿತನಾಗಿ ಚಿತ್ರದುರ್ಗ ಸೆರೆಮನೆಯಲ್ಲಿದ್ದ? ಇದು ಬಗೆಹರಿಯಬೇಕಿದೆ

HIGHLIGHTS OF THE ARTICLES

1) Microlithic culture in Tumkur District area

- Dr. K. B. Shivatarak

Prof. K. B. Shivatarak evincing keen interest in the archeological research, has brought out to limelight the microlithic culture existed in Tumkur Dt. area. He has listed out 66 places and explained stone models, and their varieties available and technological advances made by the people of those times. He says in conclusion that the life style of those people was a preamble to the ensuing agricultural and domesticated stage of life.

2) A study of prehistoric relics in the Nunkemale area

- H. Tippeswamy

Sri Thippeswamy gives an account of the pre-historic relics obtained during the excavations made by Archeologists and the field work done by him collaborating with discovery troops at the Nunkemale area in Molakalmuru Tq, Chitradurga District. He has delincated folk traditions in vogue in the area. Particularly he draws our attention to the mesolithic and Neolithic tools, Megalithic tombs found in the area.

3) The pre-historic relics recenty found at Herakal

- Ashok K. Kandagal, H. R. Desai

It is opined by the authors on the basis of availability of pre-historic relics that Herakal was a town during the period of Shathavahanas. Mr. Kandagal and Mr. Desai have given their derivation of the place - name, Herekal. They have explained in detail the shape, colour, lines on the mud pots and other relics. They have also cited the opinions of the authorities in the field and enumerated the archeological attempts made by scholars in this area. Especially they draw our attention to one Varaha faced water pot, giving a good description of the same.

4) A Neolithic site at Bommanahalli

- Mysore Nagaraja Sharma

The author has brought out the main features of Neolithic site at Bommanahalli and draws our attention to the new discovery of Head rest of Neolithic age and gives an account Megalithic culture existed at the spot. Especially the author stresses on the 'Kallumallaiah' ritual and the existence of its variety. The article also says that the then residents of Bommanahalli were 7-8 K.M. away from Kaveri river and though they were not depending on Agricultural life they were probably indulged in the experimentation on the agriculture. The authour has shown how this site is unique from other prehistoric sites.

5) An open rock painting and stone age spots at vedic nagar and Dhabangundu

- J. T. Jayaramaiah, M. Lokesh, B. S. Rajesh Babu

The authors in their field study have discovered rock line paintings and seven rounds circular arrangement paintings of stone age in vedic nagar of Mandya district and also curious line paintings of human figures, circle etc. in Bhanbanu Gundu of Puttappana Doddi of Channapatna Tq. It is interesting to note according to the authors, vedic nagar paintings are first of their kind in Karnataka but find second place w.r.t. rock line paintings of India.

6) An unpublished copper coin of Sri Rangaraya

- Dr. R. Gopal

Dr. Gopal draws our attention to the inscribed portion 'SriRanga' on a copper coin, found in the coinage collections of Sri M. Madesh of Kollegal. The author has given the complete description of the figure of the lion and the name inscribed on the coinage. The historical elucidation w.r.t. the name 'Sri Ranga' on the coin by the author is interesting and he concludes that the name pertains to the Governor of vijayanagar in Srirangapatna during the period of Rajavodayar of Mysore (1576-1817). To seek the favour of Rajavodayar, Srirangaraya has printed the coinage limited to the word 'Sri Ranga' leaving the word 'Raya' on the model of Mysore kings and the author opines the present coin is a new addition to the coinage of Karnataka.

7) A Geological role in the structural construction of Bellary Fort

- Dr. H. Chandrashekhar

Dr. Chandrashekhar, at the out set has given a touch of historical background of Bellary fort. He has detailed the nook and corner of the fort with micro-geological special featurers. In his geological explanations he draws our attention immensly to the relative placings of rocks, water storing system, tanks, ditches and how this natural set up has helped the safety of the fort in the reign of the rulers of by gone days. At the sametime he has warned how the internal ground water source of Bellary city has been effected as a result of drying the tanks and ditches converting the spot as sites and buildings raised by the administrative authorities, in this fort area.

8) The antiquities of village Hudem

- Virupakshi Poojarahalli

Mr. Virupakshi in his article deriving the origin of the word Hudem has focussed our attention to its pre-eminence. He has explained the main features of sculptures, veeragals and forts etc., spread over the village. He has also brought out the folk tradition attached to the veeragal and connected history of Nadugadde nayaka, which is interesting. His attempt to realise the internal history underlying in the rituals attached to Boredewaru and worshipping by the descendents of Nadugudde nayakas is to be noted. Though the explanation w.r.t. 'Kudure Kalagada veeragallu' require little more clarification it infuses curiousity among the readers.

9) Sambapura since prehistoric period - a study

- Muthuraju

The author has drawn our attention to the pre-historic relics like tombs, Capstones, axes, pot pieces etc., existing in Sambapura. In addition, the article tells about the place name of Sambapura, sculptures of veerabhadra and vishnu, herostones etc., and an unpublished inscription. The author has made a good attempt in focussing our attention on the search he has made.

10) The recent discoveries in Manne

- Dr. H. S. Gopala Rao

Manne in Nelamangala Tq was a sub-capital of Gangas which had assumed political and cultural importance since 7th century A.D. copper plate discovered in 1978 belongs to Ganga king Sri Vikrama being one and only one in his name. Another inscription belonging to the reign of Ganga prince Marasimha says that the village Masekkali of ponnudike vishaya was donated to Aditya (Surya) temple. Still to day, the then existence of sun temple at Manne was unknown. It is also presumed by the scholars, like K. V. Rajagopal that the kapileshwara temple was itself the then temple.

Dr. Gopala Rao opines that the bricks of special type, found recently in a field at manne probably resemble the bricks of kadamba period; the mud dolls found among the bricks seem to be of 9-10th century, which may indicate that Manne or a place nearly to it might have been a manufacturing centre of Mud dolls.

A Panchaloha ring also had been found and Dr. Rao opines if it represents 'Srichakra' and in such case Sri Chakra Puja might have been in vouge in 9-10th century itself.

An incomplete and broken stone inscription, also has been discovered at Manne.

The author drawing our attention to a weak assumption that Sri vijaya who constructed Jinalaya in Manyapura (Manne) and Srivijaya of Kaviraja Marga are one and the same. This opinion as Dr. Rao feels is left for further discussion.

11) From the concept of God to God's place (Temple)

- Dr. S. K. Joshi

Dr. Joshi in his article has blended philosophy and poetry on the back frame of historical outlines. It is interesting to note in his article how the concept of deification process has its evolution from prehistoric times to the present. The author feels that the belief in man has lead to see from the Nirakara Bhagavantha to Sakara Bhagavantha, medium being a sculpture under going a mental metamorphosis, influenced and embellished by heartful emotions. Seeking identification or unification with God is a time immemorial aspiration of the man. The author stresses that the man hence enjoys God through the medium of sculptures and temples also.

12) Southern Temple - a detailed explanation

- M. N. Prabhakar

Mr. Prabhakar has explained the initial models of three styles of southern tradition of temple architecture especially in Mahakuta, Badami and

Pattada Kallu and says that it is identified as 'Nagarica Dravila' style. The micro-explanations of the different parts of temple are well highlighted, with technical terms in vougue as per the authentic texts on of temples architecture. Inspite of the complexity of the article, the interested readers will be exposed to the technicality of the structures of temple, on a curious plane.

13) An Architectural and sculptural study of shaiva temples of Muluganda

- S. M. Nagabhushana

The author delineates the importance of Mulagund, as a puranic and Historical place. He particularly focusses our attention to the architectural and sculptural styles and values depicted in the temples of Shobhaneshwara Siddeshwara, Nagareshwara, Annadaneshwara, Bharaveshwara and especially to Bhairava sculpture near Annadaneshwara temple in a simple and lucid style of writing. The author puts forth that the temples and sculptures renowned since the period Kalyani Chalukyas and Sindhas of Mulugund, today are in relical conditions and especially shaiva sculptures left uncared.

14) Some more temple sculptures found in Gulbarga Dt.

- Dr. R. M. Shadaksharaiah

The author in his archeological study of the temples and sculptures at Nagai, Diggavi, Ingalagi, Donagam, Halkatta, etc in Gulbarga Dt., has brought out the special features of the temples and sculptures of the area. The historical and sculptural explanations, furnished with a critical view is worthy of attention. Whether it is a Temple, Mutt, Mosque, Basadi the author has taken pains to find the exact location, period of existence and the present condition of these structures. While reading the article, though we feel elaboration, it is a cultural eminence that the author is after all trying to bring out from the study with literary evidence duly to supporting his presentation.

15) Lakshminarasimha and Someshwara temples at Harnahalli

- Dr. B. Pandukumar

The author draws our attention to the architectural & sculptural variations that could be found in Lakshminarasimha and Someshwara temples of Harnahalli village Arasikere Tq, in Hassan District. The author based on the variations he found in his relative study of structures of these temples opines that the Lakshminarasimha temple was built 50 years prior to the construction of Someshwara temple.

16) 12th century Saraswathi idol discovered at Madhana Bhavi

- S. K. Melakara

Sri Melakara has given out the characteristic features of Saraswathi idol discovered and draws our attention to other impartant temples like Ramalingeshwara, Hanuman & Shaivite temples at Madhanabhavi with due illustrations. The summary of the inscription of 1134 AD found near the Saraswathi idol has been given - In the reign of the Bholokamalla Someshwara, donations made by Jayakeshi - II of Goa kadamba dynasty to Kalideva Swamy, has been enumerated.

17) Special feature of Surya idols in Bellary and Davanagere Districts

- Dr. K. B. Sudarshana

Dr. Sudarshan has explained how the Surya cult has interwoven in the life of the people, in terms of Place names, Personal names, Measure names and rituals attached to Surya. Further the beautiful sculptures available in different temples and places of Bellary and Davanagere district has been well explained by the author. Anyhow hint about the 'Shaka Brahmins and their special worship of Surya' in his essay, would have been useful to curious readers in addition to his good cultural explanations and implications of Surya cult in Karnataka, had it been given, since he is well informed about it.

18) A rare herostone of Hero-Baison fight

- D. K. Chittaiah poojar

Mr. Poojar finding a rare herostone at Rangasamudra in the midst of Nidugal Durga of Pavagada Taluk has given a possible thread - bare explanation of the sculpture, in his keen observation. The action of hero, his wearings, the pose of Baison, presence of the tree etc. has also been explained. The author also refers to the folk name of the hero of the hero-stone, vogue among the villagers and the story

attached to the herostone. The author opines that the sculpture belongs to 16-17 century though it may be attributed to vijayanagara times in view of the half effaced botton pane of the hero stone.

19) The Newly discovered Gunda Brahmaiah Idols

- Dr. M. G. Manjunath

The idols of Gunda Brahmaiah are found in many places of Karnataka like Haveri, Gundenahally, Kusakuru, Chitradurga, Banavasi, Nithigere, Bellari, Yelandur, Haradanahalli etc., The temples of Gunda Bhramaiah are also seen through out Karnataka and sometimes their idols are also called as Shoola Brahmaiah. Generally these idols are shown in pairs, each holding Ishtalinga, either in sitting position or standing by the sides of Trident or pike. Veerashaiva puranas depict a story that shiva stole in the palace of Kakathiya king and sought refuge in Gundaiah, Brahmaiah. To save shiva both Gunda Brahmaiah fell on Trident - a story to show the deep allegiance of shaiva devotees. The stories on thems are also seen in many of the Literary works since 12th century. Inscriptional references also can be seen. Mr. Manjunath has discovered some more Gunda Brhma sculptures at Doddagaddavalli, Haranahalli and Nandi etc., and explained the main features of them. It is interesting to note that he supports the view of Sri M. Mallappa, who depicts in his *oregallusure* that Gunda brahmaiahs belong to pre-Basava period. The author also takes a support from the words of Basavanna for this view. The connotation of simulteneous wearing of Janivara type Rudrashihara and holding Ishtalinga raises curiosity among readers.

20) A Manuscript record of Gunda Brahmaiahgalu

- Dr. K. Ravindranath

Dr. Ravindranath has made a cultural study of Gunda Bramhaiahs based on a manuscript. The comparitive literatures he has referred has given a depth to the article. He has thrown a fresh light on the Gundabramaiahs and their life sketches which is worthy of our attention : The dynasty of Gunda Brahmaiahs starts from Kachara a cursed Gandharva who was a servant of Adi Rudra; the parents of Gundaiah and Brahmaiah are different, though they have brotherly relations instead of nephew relations; Gunda Bramaiahs-I are Grand parents of Gunda Bramhaiahs who threw their life on spike. Later Gundaiah had married channamma, while there is no mention of marriage of later Brahmaiah in the manuscript. All these have been well explained in the article.

21) The sarees of Kannada women during vijayanagara period

- Dr. Jostna Kamat

Dr. Smt. Jostna in her enterprising article on sarees explains the varieties in vogue during vijayanagara period and the way of wearing by the females of the day. She illustrates from various literary sources like Manasollasa, Prabhulinga leele, Kabbigara kava Torave Ramayana etc. She not only engrosses herself in explaining the style of wearing sarees depicted in the wall-pictures of Lepakshi Papanasheshwara temple, but also make our feelings embellished with a touch of artisitc appreciation.

22) Symbolic 'Mandala' picture paintings of prasanna Veeranjaneya Swamy temple in Bangaramakki of Uttara Kannada

- Dr. B. S. Shamala Ratnakumari

The author while describing the Mandala paintings of temple which were drawn after a new renovation on 29.3.1997 draws our attention to the inner philosophic meanings, technical aspects and traditional stories attached to them. The author cites the authoritative texts like shrutyagama, Manthra Mahodadhi, Manthra Maharnava for this tradition of Mandala paintings. How our cultural aspects are interwoven in the these paintings also have been highlighted. Anyhow a further study regarding the root of the stimulus for this tradition whether it lies in pre-historic paintings or symbols of Sindu culture or symbols of shakti cult, may be desirable.

23) The line drawings of Nadakalasi

Karuna Mangalavede

The renowned Rameshwara and Mallikarjuna temples of Nadakalasi have beautifull relief Line drawings. The author has in particular described line

drawings on the pillars of Mallikarjuna temple, and cited the opinions of the authorities in this regard. Mrs. Karuna also foccusses our attention to three inscriptions of 13th century in which God Rameshwara used to be called as Billeshwara during the reign of Veeraballala - II and his sub-chief Bommarasa of Kundanadu Kodanadu and the poetical lines depicting the valour of Bammarasa. The demons dance of the prostitutes who after their death became demonce, has been fearcifully depicted in the poetical lines. The author feels the line drawings of Mallikarjuna temple and the descriptions of the inscription cited above has a relative bearing and on this basis the author opines a study of 'Rangabhoga' can be studied in detail.

24) A unpublished inscription of Hebbur

- Dr. K. Vasanthalakshmi

The Hebbur village was renowned as ***Hebburu seeme*** during vijayanagara times. It has an ancient Beteraya swami temple. The new inscription discovered in the front portion of the temples, has 31 lines and its date is indicated as 1530 AD. The text says that the king Achutaraya granted Hebburu seeme to Kameyanayaka. The main purpose of the inscription was to record the services rendered by Kalappanayaka who was the son of Thippanna Nayaka and son-in-law of Kameya Nayaka, to Beteya Tiruvengalanatha Devaru of Hebburu. Further it records that Kalappa Nayaka has found a Mudalapura village at Niduvala sthala in name of Mudaji the daughter of Kamanayaka; on her death installed many trees, and donated the village to the temple. Dr. Vasanthalakshmi while furnishing the other accessory informations brings to our attention the additional constructions made to Mulevasudeva temple by the Kalappa Nayaka in favour of Mudaji and the formation of Kamalapura Agrara. And especially she opines in her derivation 'Ashwahatye' from the word 'Akriti' occured in the inscription may be one of the pancha mahapathaka (five sins). In addition she focusses our attention to the other word 'GurutalpaGamana' - being another kind of sin. The article highlights how the devotion to God has been interwoven in the cultural life of our people.

25) An unpublished inscription from Huliyar

- K. Nanjunda Prasad, Dr. M. G. Manjunath

The authors have traced the historical information from this new inscription and say during the reign of emperor Jagadeka Malla permadi devaru of Kalyani chalukyas, Vishnuvardhana of Hoysala dynasty was his mahamandaleshwara. Later the emperor Veeraballa the grand son of Vishnuvardhana while ruling in Dwara samudra, his minister Govideva was a disciple of parshwanatha Thirthankara and great warriar in the battle, and no body was able to face him. That Govi deva donoted lands etc., for the servicer of Brahmeshwara Devaru of his town. The sculpture on the top of inscription according to the authors seem to be **Mylara** and **Malachi** and details of the sculpture have been well furnished.

26) An unpublished Totagante Inscription of Doddasankanna Nayaka

- Jagadish M. H. Agasi Bagalawara

Sri Jagadish while seeking his source with regard to Veerabhadra of Keladi and Agoreshwara of Ikkeri from Shivatatava Rathnakara and Keladi Nripavijaya focusses our attention on the place names Alavalli and Vatapalli. Based on the new inscription he also concludes, Thotagatti village is the present Totagante village. Further he argues Vatapalli village mentioned in Shivatatva Ratnakara must be Ratapalli or Rattahalli; since Alavalli does not exist in Masoor Area, Elevala village on the right banks of Kumudwathi river might be the correct name and not Mavalli. Dodda sankanna nayaka might have secured virabhadra idol from Rattahalli or Elevala village of Masooru seeme and installed in Keladi.

27) Four unpublished copper plates of Moodabidre

- H. N. Nilakante Gowda, Dr. M. G. Manjunatha

The authors draws our attention to the purports of inscriptions as to the donations made by Jaina Shravakas to Jina Basadis of Moodabidre. Giving the full details of copper plates, the authors delineate the relative features of the inscriptions. Chandranatha Chandogra Parshwanatha and of 24 Thirthankaras have been named in the inscriptions and donations made for the rituals conducted in connection with these Jina Thirthankaras and for free feeding etc.

28) An unpublished Lingarajendra odeya's Nirupa of Omkareshwara temple of Kodagu

- M. G. Nagaraj

The article deals with the construction of Omkareshwara temple by Linga Rajendra Odeya-II of Haleri dynasty in Kodagu and stories connected

with it. It explains the characteristic features of Nirupa given by Lingarajendra Odeya to Omkareshwara temple at the time of its inception with regard to Agamic rituals to be followed in the temple. The Nirupa gives a full structural details of the worship to be done daily, fortnighty, monthly and annually and about the people entrusted with temple work. It is interesting to note that each item prescribed to worship has been recorded with perfect measures vogue in those days. The Nirupa is is one way a replica of the religious, economic and cultural practices followed in those times. The administrative aspects of the temple has been very well recorded and the weights, measures and coinage in vougue in that period has been significantly put forth with mathematical precesion. In toto the Nirupa has a religio-cultural sanctity. It has been well maintained even to this day, by the temple committee.

29) A letter from Sampadane Shivalinga Swami for Channabasappa Gowda the Mahanada prabhu of Bijjavara and donations to yedur Tontada Siddalingeshwara temple by Mummadi Krishna Raja vodeyar

- Dr. B. Nanjundaswami

'Madhugiri Mahanadaprabhu charitre 'gives sufficient details on Channabasappa Gowda. This Gowda incurs wrath of Tippusultan since he gave refuge to the Raja of Rathnagiri. In consequence Tippu made attempts on Gowda's paleyapattu, and even though he sought refuge and help of British it was not fruitful. He was dejected and died. This is one part of the article. Second part deals with correspondence between Channabasappa & the seer Shivalinga Swamy. The third part is entirely different from the first and deals with the donations given by Mummadi Krishna Raja Odeyar to the worship and other rituals of temple Tontada Siddalingeshwara of Yedur.

30) An unpublished Macanji Kaiffiyat pertaining to Madhugiri

- R. Kavallamma

Smt. R. Kavalamma, brings out the main features of Macanji's Madhugiri Kaifiat, which gives an account of villages, Tanks rivers, wells, forts, kings ruled, the land survey and weights, measures in vogue in Madhugiri area and history of Midigesi. The author draws our attention regarding the progress that Madhugiri and Medigesi achieved during British period i.e., 19th century and explains the usefullness of the same to history and culture.

31) The new inscriptions of Harapanahalli and Yakshagan poets

- Kum. Ba. Sadadhivappa

Mr. Sadashivappa has given the text of the new inscriptions in the brief, along with the historical sketch and folk stories attached to them. He has also furnished the brief like sketches of Yakshagana Bhagavatha poets of Harapanahalli area.

32) The Neglected four forts of Bangalore District

- Sasalu J. Vishwanath, Dr. M. G. Manjunatha

The authors have explained the historical importance of the forts of Bettadasanapura of Bangalore Tq, Todalu Bande village fort and Makali Durga of Sasalu hobli in Doddaballapura Tq, Hulukadi hill fort of Dodda Belahongala. The period of construction, features, sculptures, temples available, and the structure of these hill forts have been well placed before the readers. The article in brief gives the main feature of the forts which infuse curiousity among the readers.

33) The post Keladi historical sources in Duke of Wellington Archives

- Keladi Gunda Jois

Sri Jois in his profusely cited English sources, depicts the historical importance of keladi, just as Mysore. The author also draws our attention how Hyder had realised the importance of Bidanur the Keladi capital and Mint treasury was established there during his reign. The author says not only the relics at Bidanur, the records of archives, the Modi writings available also at Jois family of Keladi, Nadig family of Santhe Bennur etc., will be useful sources to construct the post history of Keladi.

34) The (veeragallu) Hero stones of Hanugallu

- Dr. Chennakka Pavate

Dr. Chennakka has discovered three vivid hero stones in Chikka Nandi halli, Chillur and Masanagi. She has explained the characteristic sculptural features of these veeragals with specific historical background. It is interesting to note that veeragals

belong to period of Badami chalukyas of 8th century, Rastrakutas, Challaketana Bankaya and Devagiri yadava kannara. And each of them are robustly sculptured. Thus the speciality of hero stones of Hanugallu area has been well presented.

35) Two Nishidi inscriptions of poet Somadeva

- Dr. Channabasappa S. Patil

Out of 53 inscriptions discovered at Koppala in 1992 two Nisidi inscriptions among them belong to the poet Somadeva. Though these inscription have already been published by Dr. Hampa Nagarajaiah who has taken them as one and the same, Dr. Patil illustrates that they bore different dates. One inscription indicates the date as 984 AD. The second one bore the date 1010 AD. The inscriptions say that Somadeva went to heaven on 984 AD and 1010 AD. Dr. Patil explains the variations as though the poet died in 984 AD the nishidi was constructed in 1010 AD as Parokshavinaya by Chandraprabha Devaru. In his reading of inscriptions, the author seems to have given an acceptable interpretation.

36) 'Siditalegal' Inscription in Keladi Museum

- Dr. G. V. Kallapura

Dr. Kallapura while giving various illustrations of the customs of Sidithalekullu that was vougue in Karnataka, draws our attentions to the inscriptional and literary evidences. According to him it is interesting to note that only six inscriptions are found on Sidithale custom with sculpture and thus the one referred to now available at Keladi Museum is the seventh example. This Sidithale inscription was in Baileshalli forest of Hosanagara Tq of Shimoga District and was shifted to the Keladi Museum for protection. The author has given a complete description of the sculpture of this Sidithale stone and concludes on the basis of text of the inscription, that a lenkavali, at the behest of his Guru has offered 'Sidithale'. Probably even this type of inscriptional sculptures may generally come under the categeory of hero stones, the cause whatever may be.

37) The Kannada Inscriptions on the (Tombs) structures in Jangama Mutt of Varanasi

- Dr. B. S. Subhadra

The writer has focussed her attention on the last days of Chikkaveera Rajendra Vodeya the dethroned king of Kodagu and given details of him and his son's tombs and their architecture. She has drawn our attention on the importance of the inscriptions inscribed on the tombs.

38) The tombs of saints in Harihara

- Chandana Y. Neelappa

Smt. Chandana has made a macro study of the tombs of saints at Harihara, collecting the information from the elders and narrated the life sketch and miracles attributed to those saints. The saints of Harihara unknown to history has been brought to light by the author.

39) The British tombs of Hunasur

- R. Venkateshamurthy, H. R. Hemaraju

The authors, while recording the inscriptions of the tombs, have hecked out and analysed the administrative and historical aspects drawing the same from the lines of inscriptions ranging about 85 years span. They have also regarded other sources for comparitive study. It is interesting to note from the article that the architecture, trade and commerce medical facilities industry, available etc. during those years. The field work conducted by the authors has given more authentic information than the one already recorded.

40) The administrative divisions of Bellary District under East India Company and British tombs

- Dr. Mrutunjaya Rumale

Dr. Rumale links the historical aspects of administrative divisions of Bellary District under East India Company and British officers tombs. Ramaghad the Sandur's **Natures summer resort**, was made a centre for company's army and a developed area. The tombs of the army personnel found there, unfurls the history hidden in them, having the written material like position held in the army, period, age, reason for death etc., on them. The author also narrates an interesting historical story occured between the ruler Shiva Rao of Sandur and Peshwe Baji Rao.

41) A Land record of Mysore state

- H. E. Basavarajappa

The article by Sri Basavarajappa gives an account of how the land records and the office were maintained even in village level during the reign of Nalvadi Krishnaraja Wodeyar in Mysore state. The author has delineated the characteristic features of the reign of the wodeyar in this regard : systematic

maintenance of land records, the strict vigilence on the duties entrusted to patels and shanubhogues, instructions to these officials to serve the people with impartiality and non-official dom; correct indentification of land revenue from each village, its population, cultivable land, landless labourers, categorisation of rich, middle and small class of land lords, etc. which are worthy of our attention.

42) The relations between Harapanahalli kings and Sringeri Mutt

- Dr. A. K. Shastri

Dr. Shastri in his beautiful exquisite simple style of writing has explained how Sringeri Mutt was popular and has inspired Harapanahalli kings in an intimacy touch to rule the land with a cultural devotion. The four records on which he has based his conclusions deserve good attention.

43) Paruvete - An a adventurous / prowess game recorded in inscriptions

- S. L. Srinivasamurthy

The author while deriving the meaning of the paruvete - has considered the different aspects hitherto thought over by authorities and mentioned in Literature as well as rituals conducted in this connection. The author mainly attributes the ritual in connection with hunting of tiger or chitta and tieing it for a pole in front of the temple and as a representative of the diety the heroes use to fight the animal and kill it. Though folk aspects has been touched little in the article the author has taken pains to draw the details from historical sources as indicated in foot notes and he has drawn our attention.

44) The origin of the word 'Gowda'

- Dr. Suryanatha Kamat

Dr. Kamat draws our attention to the references that the word 'Gowda' was used in the sense of village patel. This word has occured as Gavunda, Gamunda in inscriptions. The author says the concept of 'Grama Vruddha' used in Koutilya has a synonymous meaning used in inscriptions and with the Gamundas of Karnataka who were same as Gramvruddha of Koutilya. 'Gramika' who was the leader of the village and the word 'Gramakuta' is not attributed to him.

Citing many references from inscriptions, the author says first reference of 'Gamunda' occurs in Gangigatti inscription of 5th century. Dr. Kamat in his indepth study gives the origin and derivation of the word 'Gowda' convincingly. He says the word 'Gamunda' was orignally used in the sense of Gramavruddha i.e. the elderly man of the village or member of a village assembly. The descendants of Raitha Gaundas who were in village are now being called on 'Gowda'.

45) Vadda Rauula, Kirudere, Kirukula, taxes - a study

- Dr. Vittala Pothadara

Dr. Pothadara has analysed the meanings of the taxes that were in vogue in olden times, mainly based on inscriptions. The author has properly focussed his argument to the possible meanings of the taxes that could be attributed to them. In a simple and placid style the article attracts the attention of the reader w.r.t. the derivations of taxes mentioned above.

46) The Okkalu Kattale of Singanalluru, (The agrarian rules of Singanalluru)

- Dr. H. S. Usha Rani

Dr. Usha Rani opines that the Ryots were responsible for the grandeur of vijayanagara. Rules were framed so that no Ryot can evade remittance of taxes to the treasury. A Singanallur inscription of 1408 AD throws more light in this respect. In the presence of Gowdas, Settis, Brahmins, Shanubhogas and 18 Samayas, the rules were imposed on 18 Samayada Vokkalus so that if any of those vokkalus evade remitting taxes, or run away from the village then the Gowdas and the chief of vokkalus have to bear the responsibility and remit the taxes due. Hence the author says that discipline was maintained by Ryots and hence were responsible for the safety of the kingdom.

47) Palashika pannicchasira - its geographical boundaries

- Smitha Surabenakar

The author while appreciating the natural set up of palashika brings out its historical importance to our attention. She has delineated the boundaries of palashika and villages in the palashika - 12000 like kalageri including its hamlets, kunduru,

Mugunda, Marijavadi, Unakal, Sabbi, Mavale, Pullambe, Kittura, Degov etc. using historical and inscriptional evidences. Even during Adikadambas palashika had its own importance and it assumed the status of sub-capital in the reign of Gova-kadambas. The author has a follow up of its historical importance.

48) Nadus (Districts) of Hesarkundani state in the period of veeraballala - III

- Dr. P. V. Krishnamurthy

The article while describing the historical and political background in Tamilnad during the period of Hoysala Someshwara who shifted his capital from Dorasamudra to Kannanur, focusses our attention to the different divisions (Nadus) of Hesarkundani state in the kingdom of Hoysala Mummadi Veeraballa the grandson of Hoysala Someshwara. Dr. Krishnamurthy based fully on the inscriptions of Veeraballa has given a good account of the different Nadus, types of donations and taxes in vouge of the period including the cultural rituals of the temples. while naming the Nadus the author pin-pointedly makes out the boundaries, areas and taluks, villages included in them. It is interesting to note the Tamil technical terms of donations, varieties of taxes vogue in that area and corresponding Kannada explanations. He also draws our attention to the efficient administrative measures taken by Veeraballa-III w.r.f. temple administration of Hesarkundani state.

49) Ededore - its Etymology

- Dr. Channabasava Hirematha

Dr. Hirematha based fully on the inscriptional evidences, argues that place name 'Ededore' conveys the meaning a spot (=Ede) near river (=tore) and hence its derivation could only be based on its natural setting. The author discusses the different studies made in this direction and draws our attention to the lacuna & limitations those findings.

50) Andhasura - a study

- B. S. Ramabhatta

The author has profusely quoted the references and authorities like Buddhistic literature, Skanda puran, Frelaski's statements, Shambha Joshi, including inscriptional evidences to prove the historical importance of a Andhasura - a small village near Anandapura in shimoga district.

The place name of Andhasura has also been derived in the article. It is interesting to note that 'Krishna' hailed from 'Andhaka' community which was supposed to be community cow-herds.

51) 'Shankaranarayana' Keshtra of west coast

- S. A. Lakshmi devi

Smt. Lakshmi devi has described puranic stories attached to shankaranarayana, and also shown its historical importance based on inscriptions. The bell donated by Tippusultan, the sculpture and architectural details have also been briefly explained. She has drawn our attention to its importance as a Hari-Hara Khestra.

52) The place name Davanagere - A review

- T. Girija

The author has given a survey of the research made by different scholars including her own pre-articles written about the derivation of the place name 'Davanagere'. She has considered evidences from inscriptions, folk-lore and other records. Anyhow the inscriptional contents (1138) she has placed before the readers cannot be overlooked. The author makes us to involve in the different aspects of place name 'Davanagere'. Linguistically and phonetically can 'G' lends itself to 'D' in people's pronunciation has to be looked into, if 'Gavanigana halli' is to be termed as Davanigana halli.

53) The Nayakas of Santhebennur and Koodali Mutts

- Santhe Bennur Sumathindra Nadig

Sri Nadig focusses our attention to the relationship between the Nayakas of Santhebennur and religiou-cultural activities of Koodali Mutts. His findings are based on inscriptions and sannads. These Nayakas stood by Koodli-Sringeri Mutt in a controversy rose between Koodli and Sringeri Mutt. The author draws our attention to the no. of inscriptions of these Nayakas now available are 40.

54) Relics of a Jangama Mutt in Kodibettu Kodi of Udupi Dt.

- K. Narayana Naik

Sri K. Narayana Naik has drawn our attention towards the once existed Jangama Mutt duly discovering its relics in Kodibettu Kodi. He has also listed out the names of Veerashaiva Mutts in S. Kanara Dt, and aspires for further research on these mutts.

55) Chavundaraya the prime minister of Hoysala Vinayaditya

- M. Sakalesh

The author questions the hither to belief that Chavundaraya who was responsible for installation of Gomateshwara at Shravana Belagola is the same person who constructed Basadi at Chikkabetta. According to him two Chavundarays exist in the history for which he cites inscriptions from Kuradahalli. The Gommata Chamundaraya and Basadi builder Chamundaya are different and they were in 10th and 11th century respectively. Gomata Chavundaraya was the minister of Rachamalla the IV and the latter was the prime minister and foriegn minister of Mahamandaleshwara poysala vinayaditya.

56) Belur Vykunta Dasa as a prime Sri Vyshnava Keerthanakara

- N. Geethacharya

Keerthana literature is an important part of Kannada literature; though it has been primarily deemed to have the base in Dyaita philosophy. The fact that Keerthanakaras of Adwaita philosophy also exist in this medium of literature came to light in the decades of 70's according to Sri Geethacharya. Interestingly the fact that keertana literature also has included the vishistadwaita in its compositions, in exuberance, has come to light and it has opened a new chapter in the history of Kannada literature. The author has cited stalwarts like Belur Vykuntadasa, poet lakshmisa, Tulasi Ramadas, Rangadas, Sampathaiengar, Narayanasharma and said some females also exist in this line. Anyhow Belur vykunta dasa has been mainly dealt in the article since he emerged foremost in the first phases of keerthana literature. Still he has not been dealt in detail in Haridasa parampara, a lacuna that the author wishes to pose before the readers. The article deals about the life and literature of this keerthanakara - the references made by some authorities in this regard and stresses that this keerthanakara was responsible for a tradition of Srivyshnava Keerthana literature.

57) The songs of Harapanahalli Bhimavva (relative to food science and medical science)

- Harihara Srinivasa Rao

Mr. Rao giving a brief like sketch of Bhimavva describes her compositions w.r.f. food derivatives and food staffs vogue in our culture. The author has profusely quoted the food varieties explained in our literary sources. A relative study based on modern science by the author attracts our full attention.

58) The place and period of Neminatha the commentator of Somadevasoori's Nitivakyamruta

- Dr. G. S. Dikshit

Prof. Dikshit in his well analysed article, drawing out from the poems and prose at the end part of commentary with supporting evidences from inscriptions fix the period of writing the commentary by Neminatha approximately to 1200 instead of voguely believed 1153 AD. Further with litarary and inscriptional evidences, Pro. Dikshit argues that the place of Neminatha was Kodavalli (Kodoli) 7 miles East to Kollapur. His analysis of place name Kodana Poorvada halli Kodavalli is worth noting; Pro. Dikshit enumerating the historical evidences opines that Neminatha was a 'Sandhi Vigrahi' between 1154-1212 A.D. in the courts of shilahara vijayaditya and Bhoja - II.

59) The unpublished kalagnana literature of Emme Basava

- Dr. F. T. Hallikeri

Dr. Hallikeri citing the opinions of scholars on the origin of kalagnana literature, roughly estimates its inception by about 12th century. He has delineated its main features and in particular the historical contribution of the middle 16th century poet Emmebasava to kalagnana literature, with sufficient illustrations. His kalagnana literature predicts the doom of the vijayanagara empire and has also depicted the social life of the vijayanagara period.

60) Who killed Ramaraya in the ultimate war of vijayanagara

- Dr. Krishna Kollara Kulakarni

Dr. Kulakarni has given an indepth thought over the question he has raised. The references he has placed, open new dimension on the subject. The author in his lucid style has placed systematically the argument and draws a certain conclusion. As a scholar what he has placed before the historians is worthy of attention. According to him Ramaraya the last king of vijayanagara kingdom was taken captive by the

soldiers of Nizamshah of Ahamednagar by accident and brought to the presence of Nizamshah, where he was killed at the behest of Nijamshah.

61) Harapanahalli palegars depicted in Keladi Nrupavijayam

- Dr. Keladi Venkatesh Jois

The article mainly securing the information from Keladi Nrupavijayam describes how Somashekhara Naika - II and Basappa Nayaka - II had come to the rescue of Bagali Basappa Nayaka and Basantharaya, the rulers of Harapana Halli at their behest, against the invasion of Harapanahalli by the Nayakas of Chintankallu Durga Barmappa Nayaka and Madekere Nayaka. In the course of explanation the article draws our attention to the cultural relations and features existed between the keladi and Harapanahalli rulers.

The article is enriched by the citations of poetico-historic citations and a comparitive geneological tree of Harapanahalli rulers furnishing from the authentic sources.

62) The dynasty of Nayakanahatti Nayakas - An Analysis

- Dr. D. N. Yogishwarappa

Nayakanahatti was a famous minor state, and its rulers were famous under the name Hattinayakas. The founder of the dynasty was Kate Mallaiah nayaka who was favoured by vijayanagara kings to rule some villages granted by them. The rulers of the dynasty later became subordinates & relatives to Amaranayakas of Chitradurga in post vijayanagara period. They merged themselves in Mysore state during the period of Hyderali. Dr. Yogishwarappa based on the Nayakanahatti Vamshavali, delineates the main characteristics of the historical evolution of the dynasty. Their family diety was Srishaila Mallikarjuna and many rulers of the dynasty bore the name 'Malla' as a consequence. The author foccusses our attention to the collateral combination of history, culture and folklore interwoven with rituals, symbols, kampala pettige, Surya diety etc., and those Nayakas, claims of superiority over other 'Beda Nayaka' rulers.

63) The Kolatteri and Tulunad kings, their historical relations - an analysis

- Dr. K. G. Vasantha Madhava

The article in its chronological derivation of historical relations between kolatteri kings of Malabar and Tulunad kings of Karnataka stresses the political understanding between them. In consequence, kolatteri kings used this opportunity to face the strong political power of Karnataka. Any how as a result of the incessent conflicts with Karnata kings the political influence and power of kolatteri kings were dwindled and also they lost the area between kasaragodu and madai. The cultural contacts between Malabar and Tulunadu has a fine fusion and its impact could be witnessed in the Southern parts of Mangalore. Dr. V. Madhav has utilised poetics, manuscripts, other literary and historical sources of Malabar, Keladi, Tulunad including foreign records, for his detailed analysis. The article very well explains the battle conflicts between keladi kings and kolatteri kings.

64) The contribution of Tippusultan under his reign in Uttar Karnataka

- Dr. M. Y. Savant

The author Dr. Savant has given an analytical picture of reign of the Tippusultan. The changes that Tippu has brought in administration like the coinage he introduced, new experiments done in commerce, new tax system introduced and his secular donations and his personality as an inspiration model to freedom fighters. All this have been well delineated in this well written article giving a good historical references

65) Basavi system during early half of eighteenth century in Mysore state

- Dr. B. V. Sudhamani

The author throws a light on the Basavi system which was in vougue in Mysore state, among certain communities like fishermen, kadu kurubas, Hunters etc. The author says this system was not hereditary, but when the female child was attacked by serious disease, the family elders used to keep a vow to the family diety: in case the disease is cured the child would be offered as Basavi. Even for want of male child, they were followed this customs. This offering used to be ceremonious and an acceptable practice among them. The married girls also used to be offered as Basavi praying for a male child. But when this system was later degenerated and cultiminated in prostitution the Govt. banned this practice in the early part of 20th century. Dr. Sudhamani draws our attention to the curious fact that the female offered as basavi to shiva temple used to be called as 'Linga basavi' and to vaishnava temple as 'Garuda Basavi'.

66) A note on Dr. Benjiman Hyne and Dr. John Layden

- Dr. B. Leela

Dr. Leela of Mumbai has given a beautiful account of the contributions, made by Dr. Hyne through his writings which throws light on the social History of Mysore in 18th century; she has also drawn our attention towards the literary contribution of Dr. Leyden and the efforts made by him to report in the causes of diseases in Mysore and suggested remedies for the same. Dr. Leela rightly points out though both were doctors by profession the contribution to history and ancient culture is of worth rememberence.

67) Independence Movement and contributions of Nootana vidyalaya of Kalaburgi

- Pro. Vasantha Kushtagi

Pro. Kushtagi in his essay describes in detail the causes for the independence movement and its influence in particular on the people of Hyderabad state. The author gives an account of the reign of Nizam in Hyderabad state and the exhilerating picture of the fight put forth by leaders like swami Ramananda Thirtha for struggle for independence etc. which influenced the people very truly. It is an absorbing account of the Hyderabad that was made to merge with Indian union, due to sincere efforts, sacrifice and national consciousness of the state popular leaders and the people. Mr. Kushtagi makes a particular reference to the role played by 'Nutuna vidyala' since its inception (17.6.1907) till 17.9.1948 in National Independence movement and especially w.r.t. merger of Hyderabad state in Indian union.

68) Relations between Nayaka rulers of Chitradurga and Harapanahalli : some problems

- Pro. Lakshman Telagavi

The political, matrimonial and other relations of Chitradurga Nayaka rulers existed in post Vijayanagara times among other contemporary Nayaka rulers like Surapura, Jarimale, Anegondi, Hartikote, Nayakanahatti have been studied to the little extent. Similarly such relations existed between Harapanahalli and Chitradurga Nayaka rulers since the period of Matti Timmanna Nayaka of Chitradurga. In this connection the first problem to be discussed is the non-clarity of the relations existed between the Dadaiah Nayaka the founder of Ucchangi durga (later Harapanahalli) Nayaka samsthanam. The second one is why some sources are silent regarding the usurp of Harapanhalli by Durgada Bicchugatti Bharamanna Nayaka. And after the capture of Harapanahalli whether Somashekhara Nayaka or Basavantha Nayaka - II was taken captive and jailed in Chitradurga by him, is a third problem. These problems have been posed by Pro. Telagavi. And he has explained how ucchangi durga which was under the control of Chitradurga Nayaka rulers was shaped as Harapanahalli Samsthana through Honnavva who was married to Dadaiah Nayaka, who caused this state. He was the son of Machinayaka and he had a 'Kiratapade' maintained in the surroundings of Kanahalli - Bagali - Nilagund area. What kind of relations he has with Chitradurga Nayaks is not clear. Was he under the services of Matti thimmana Nayaka and which circumstances made him to become so much beloved to Chitradurga Nayakas are yet to be clear.

The incidence of fights between Harapanahalli and Chitradurga Nayakas during the period of Bicchugatti Bharamanna Nayakaya in about 1709 AD and as a consequence Bharammana occupied Harapanahallipete and as a 'Dharma Kahale' sitting in Veerabhadra swamy temple of Harapanahalli; stopped the fight. The researches done in the case of Harapanahalli history hither to have not refuted anything w.r.t. to this incident. Untill this incident is supported by some more evidences it remains as a problem. The third problem is that there is no unanimity in the sources of Chitradurga history regarding, whether Somashekara Nayaka, was taken captive by Bharamanna Nayaka (since the period does not concur) or Basavantha Nayaka - II. The author has well drawn the attention with historical facts and posed the problem to the researchers of the history.

ನೆರವು : ಕು॥ ಎಸ್. ಕೆ. ವೀಣಾ*

ಇತಿಹಾಸ ದರ್ಶನ : ಲೇಖಕ-ಲೇಖನ ಸೂಚಿ

(ಸಂಪುಟ ೧೧ ರಿಂದ ೧೫)

(ಮೊದಲ ಸಂಖ್ಯೆ ಸಂಪುಟವನ್ನು ಎರಡನೆಯದು ಲೇಖನದ ಪ್ರಾರಂಭದ ಪುಟ ಸಂಖ್ಯೆಯನ್ನು ಸೂಚಿಸುತ್ತದೆ.)

* ಮೊದಲ ಬಿ.ಎ. ವಿದ್ಯಾರ್ಥಿನಿ, ಎಸ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು, ಜಯನಗರ, ಬೆಂಗಳೂರು - ೫೬೦ ೦೧೧.

ಜೋಶಿ ಎಸ್. ಕೆ.

ಬೆಳಗಾವಿಯ ರಕ್ಷಣಾ ಗೋಡೆಗಳು, ೧೧-೧೦೨ ; ಕಾಲರಿಂಗಣದಲ್ಲಿ ಕುಣಿವ ಪ್ರಾಚ್ಯ ಧಾರವಾಡದ ಪರಿಸರ, ೧೨-೧ ; ಭಾರತದ ಆರ್ಯರು: ಬೃಹತ್ ಆರ್ಯ ಸಾಂಸ್ಕೃತಿಕ ಸಾಮ್ರಾಜ್ಯದ ಅವಿಭಾಜ್ಯ ಅಂಗ, ೧೩-೧೬೪ ; ದೈವೀಕಲ್ಪನೆಯಿಂದ ದೇವಸ್ಥಾನದವರೆಗೆ : ಚಿಂತನೆ, ೧೫-೩೮.

ಜ್ಯೋತ್ಸ್ನಾಕಾಮತ್

ಕೊರಡಿನಲ್ಲಿ ಕೊರೆದ ಚಿತ್ರಗಳಲ್ಲಿ ಸಾಮಾಜಿಕ ಜೀವನ, ೧೨-೭೩ ; ಶತಕಗಳಲ್ಲಿ ಕನ್ನಡಿಗರ ಸ್ಥಾನ, ೧೩-೧೧೩; ಕನ್ನಡಿಗರೇ ಮರೆತ ಟೋಪಿ : ಕುಲಾವಿ, ೧೪-೧೭೪ ; ವಿಜಯನಗರ ಕಾಲೀನ ಕನ್ನಡತಿಯರ ಸೀರೆಗಳು, ೧೫-೮೦.

ತಮಿಳ್ ಸೆಲ್ವಿ

ಆರತಿಪ್ಪೂರಿನ ಜೈನ ಅವಶೇಷಗಳು, ೧೧-೬೦ ; ಕವಿಕಂದರ್ಪ ಮತ್ತು ಬಾಳಚಂದ್ರಮುನಿ - ಒಂದು ಪರಿಶೀಲನೆ, ೧೩-೨೧೭.

ತಿಪ್ಪೇಸ್ವಾಮಿ ಹೆಚ್.

ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು, ೧೪-೧೯ ; ನುಂಕಿಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ, ೧೫-೬.

ತುಂಕೂರು ಸುನಂದಾ

ಬಸದಿಬೆಟ್ಟ - ಒಂದು ಅಧ್ಯಯನ, ೧೧-೧೮೪.

ದೀಕ್ಷಿತ್ ಜಿ. ಎಸ್.

ಧಾರವಾಡದಲ್ಲಿ ನಡೆದ ಹತ್ತನೆಯ ಸಮ್ಮೇಳನ ಅಧ್ಯಕ್ಷರ ಭಾಷಣ, ೧೨-೯ ; ಕಲ್ಯಾಣ ಕ್ರಾಂತಿಯ ಕಾಲ, ೧೩-೨೩೨ ; ಬಿಜ್ಜಳನ ಸಾವಿನ ಬಗೆ ಮತ್ತು ಕಾಲ, ೧೪-೨೧೦ ; ಸೋಮದೇವ ಸೂರಿಯ ನೀತಿ ವ್ಯಾಕ್ಯಾಮೃತದ ಟೀಕಾಕಾರ ನೇಮಿನಾಥನ ಕಾಲ ಮತ್ತು ದೇಶ, ೧೫-೨೨೭.

ದೇವರಕೊಂಡಾರೆಡ್ಡಿ

ಶಿವಮಾಂಧಾತೃವರ್ಮ್ಮನ ಮುತ್ತೂರು ತಾಮ್ರ ಶಾಸನ, ೧೧-೧೦೭ ; ತುಂಗಭದ್ರಾ ಪ್ರದೇಶದ ವಿರೂಪಾಕ್ಷ ದೇವಾಲಯಗಳು, ೧೩-೯೮; ದಿದ್ದಿಗಿಯ ಕಾಮಕೋಟಿ ಭಳಾರಿಯ ಶಾಸನ, ೧೪-೪೨.

ದೇವರಾಜಸ್ವಾಮಿ ಜಿ. ಕೆ.

ಮೇಳಿಗೆ ಮತ್ತು ಬುಕ್ಕಾಪುರದ ಶಿಲಾಯುಗ ನಿವೇಶನಗಳು ಒಂದು ಶೋಧ, ೧೧-೩೪.

ದೇಸಾಯಿ ಎಚ್. ಆರ್.

ಹೆರಕಲ್ ನೆಲೆಯಲ್ಲಿ ಇತ್ತೀಚೆಗೆ (೧೯೯೯) ದೊರೆತ ಪ್ರಾಗೈತಿಹಾಸಿಕ ಅವಶೇಷಗಳು, ೧೫-೧೦.

ಧ್ರುವನಾರಾಯಣ

ಜವಾಬ್ದಾರಿ ಸರಕಾರದ ವ್ಯವಸ್ಥೆಗೆ ಡಿ. ವಿ. ಜಿ. ಕೊಡುಗೆ, ೧೪-೩೨೮.

ನಂಜುಂಡಪ್ರಸಾದ್ ಕೆ.

ಚಿಕ್ಕನಾಯಕನಹಳ್ಳಿಯ ಎರಡು ಬೆಳ್ಳಿ ನಾಣ್ಯಗಳು, ೧೪-೯೫ ; ಹುಳಿಯಾರ್‌ನ ಅಪ್ರಕಟಿತ ಶಾಸನ, ೧೫-೯೪.

ನಂಜುಂಡಸ್ವಾಮಿ ಬಿ.

ಈ ಶತಮಾನದ ಓಲೆಗರಿಯ ಲಿಪಿಕಾರ ಹಾಗಲವಾಡಿ ಅಳಗಯ್ಯ (ಸುಮಾರು ೧೮೪೦-೧೯೨೮), ೧೧-೨೯೭ ; ಗುಬ್ಬಿ ಹೊಸಹಳ್ಳಿ ಅರಸುಮನೆತನದವರಲ್ಲಿ ದೊರೆತ ಮೈಸೂರು ಅರಸರ ಪ್ರಧಾನ ಚನ್ನಪ್ಪಯ್ಯನ ಪತ್ರ, ೧೨-೨೩೫ ; ಬೆಟ್ಟದಕೋಟೆ ಪ್ರಭುಗಳ ವಂಶಸ್ಥರು ಶಿವಗಂಗೆ ಗಂಗಾಧರೇಶ್ವರನಿಗೆ ಕೊಟ್ಟ ಪೂಜಾದತ್ತಿ ತಾಮ್ರಶಾಸನ, ೧೩-೩೩ ; 'ಹೈದರ್ ನಾಮಾ' ಕೃತಿ ಕರ್ತೃ ಯಾರು? ಸೀಬಿ ನರಸಿಂಹಸ್ವಾಮಿ ದೇವಸ್ಥಾನದ ಮಹಾದ್ವಾರದ ದಕ್ಷಿಣದ ಮಾಳಿಗೆಯಲ್ಲಿ ಕಪ್ಪು ಶಾಯಿಯಿಂದ ಬರೆದಿರುವ ಶಾಸನದ ಪೂರ್ಣಪಾಠ, ೧೪-೨೮೪ ; ಬಿಜ್ಜಾವರದ ಚನ್ನಬಸಪ್ಪಗೌಡ - ಸಂಪಾದನೆ ಶಿವಲಿಂಗ ಸ್ವಾಮಿಗಳು ಮತ್ತು ಮುಮ್ಮಡಿ ಕೃಷ್ಣರಾಜರ ಪ್ರತ್ಯಕ್ಷ ದಾಖಲೆಗಳು, ೧೫-೧೨೨.

ನರಸಿಂಹಮ್ ಡಬ್ಲ್ಯು. ವಿ. ಎಸ್.

ಬಯಕಾರ ರಾಮಪ್ಪನ ೧೬ನೇ ಶತಮಾನದ ಕೆಲವು ಹೊಸ ಶಾಸನಗಳು, ೧೧-೧೨೪.

ನರಸಿಂಹಮೂರ್ತಿ ಎ. ವಿ.

ಸಮ್ಮೇಳನ ಅಧ್ಯಕ್ಷರ ಭಾಷಣ, ೧೧-೯.

ನಾಗಭೂಷಣ ಸಿ.

ವಚನಕಾರ ಆದಯ್ಯನ ಜನ್ಮ ಸ್ಥಳ- ಮರು ಪರಿಶೀಲನೆ, ೧೧-೨೫೬ ; ನಾಗಾವಿ : ಕೆಲವು ಹೆಚ್ಚಿನ ಸಂಗತಿಗಳು, ೧೨-೧೩೭.

ನಾಗಭೂಷಣ ಎಸ್. ಎಂ.

ಬೆಳಗಾವಿ ಸುತ್ತ ಮುತ್ತಲಿನ ಕೆಲವು ಪುರಾತತ್ವ ಶೋಧನೆಗಳು, ೧೧-೧೫ ; ಮುಳಗುಂದ ಶೈವದೇವಾಲಯಗಳ ವಾಸ್ತುಶಿಲ್ಪ - ಒಂದು ಅಧ್ಯಯನ, ೧೫-೪೭.

ನಾಗರಾಜ್ ಎಂ. ಜಿ.

ಕೊಡಗಿನ ಎರಡು ಅಪೂರ್ವ ಜೈನ ಮತ್ತು ಬೌದ್ಧ (!) ಶಿಲಾಶಿಲ್ಪ ಫಲಕಗಳು, ೧೧-೭೨ ; ಹಾಸನಜಿಲ್ಲೆಯ ವೀರಶೈವ ಮಠಗಳು, ೧೨-೨೨೨ ; ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚಾಂಗಾಳ್ವರು, ೧೨-೧೪೦; ಕೊಡಗಿನ ದೊಡ್ಡ ವೀರರಾಜೇಂದ್ರ ಒಡೆಯನ ಶಿಸ್ತು, ಹುಕುಂ ನಾಮ ನಿರೂಪಗಳು, ೧೩-೨೫೮ ; ಹಲ್ಮಿಡಿ ಮತ್ತು ಕಲ್ಕ: ಕೆಲವು ಸಾಂಸ್ಕೃತಿಕ ವಿಶೇಷಗಳು, ೧೩-೧೭೪ ; ಬೆಂಗಳೂರು ಮತ್ತು ಕೊಡಗು ಜಿಲ್ಲೆಗಳ ಕೆಲವು ಅಪ್ರಕಟಿತ ಶಾಸನಗಳು, ೧೪-೨೮ ; ಕೊಡಗು ಮತ್ತು ಕೆಳದಿ ಅರಸರ ವಂಶಿಕ ಸಂಬಂಧಗಳು ೧೪-೨೫೬ ; ಕೊಡಗಿನ ಎರಡನೇ ಲಿಂಗರಾಜೇಂದ್ರ ಒಡೆಯನ ಓಂಕಾರೇಶ್ವರ ದೇಗುಲದ ಅಪ್ರಕಟಿತ ನಿರೂಪ, ೧೫-೧೦೫.

ಯೋಗೀಶ್ವರಪ್ಪ ಡಿ. ಎಸ್.

ಹಾಗಲವಾಡಿ ನಾಯಕರು : ಮಠಗಳ ಸ್ಥಾಪನೆ ಮತ್ತು ಪೋಷಣೆ, ೧೨-೧೯೦ ; ಸಿರಾ ನವಾಬರು ೧೩-೨೭೩ ; ಮದ್ದಗಿರಿ ಮಹಾನಾಡ ಪ್ರಭುಗಳ ರಕ್ಷಣಾ ವ್ಯವಸ್ಥೆ, ೧೪-೧೮೧ ; ನಾಯಕನಹಟ್ಟಿ ನಾಯಕರ ವಂಶಾವಳಿ - ಒಂದು ವಿವೇಚನೆ, ೧೫-೨೪೨.

ರಂಗರಾಜು ಎನ್. ಎಸ್.

ಬಿಳಿಕೆರೆಯ ಹತ್ತಿರ ಬೃಹತ್ ಶಿಲಾಯುಗದ ಸಂಸ್ಕೃತಿ ಪತ್ತೆ, ೧೧-೨೬.

ರಘುನಾಥ ಭಟ್ ಎಚ್. ಆರ್.

ಸ್ವಾದಿಯಲ್ಲಿ ಮತ್ತೊಂದು ಶಿಲಾಶಾಸನ ಶೋಧನೆ, ೧೧-೧೨೨ ; ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಶೋಧನೆ, ೧೨-೨೪೨ ; ಸ್ವಾದಿ ಎಷ್ಟು ಪ್ರಾಚೀನ?, ೧೩-೧೩೮.

ರಡ್ಡೇರ ಆರ್. ಎಸ್.

ಸಗರನಾಡಿನ ಶಿವಶರಣರು, ೧೨-೧೬೫.

ರವೀಂದ್ರನಾಥ ಕೆ.

ಕೊಪ್ಪಳದ ಎರಡು ಅಪ್ರಕಟಿತ ತಾಮ್ರ ಶಾಸನಗಳು, ೧೪-೫೬, ಗುಂಡಬ್ರಹ್ಮಯ್ಯಗಳು : ಒಂದು ದಾಖಲೆ, ೧೫-೭೫.

ರಾಜಗೋಪಾಲ ಕ. ವೆಂ.

ಆದಿತ್ಯರು, ೧೧-೮೯ ; ಹೊಯ್ಸಳ ವಿನಯಾದಿತ್ಯನ ಸೂರ್ಯ, ೧೨-೮೬ ; ಕಿಗ್ಗ - ಒಂದು ಟಿಪ್ಪಣಿ ೧೩-೧೪೦ ; ಶೃಂಗೇರಿ ಪಂಚಾಂಗ (ಒಂದು ಟಿಪ್ಪಣಿ), ೧೪-೧೦೦.

ರಾಜಶೇಖರ ಈ. ಇಚ್ಚಂಗಿ

ಹಿಂದು-ಮುಸ್ಲಿಂ ಧರ್ಮ ಸಮನ್ವಯ ಪ್ರತೀಕ ಶಿರಹಟ್ಟಿಯ ಜಗದ್ಗುರು ಶ್ರೀ ಫಕೀರೇಶ್ವರ ಸಂಸ್ಥಾನ ಮಠ, ೧೧-೨೫೯.

ರಾಜಾರಾಮ ಹೆಗಡೆ

ಬನವಾಸಿ ನಾಗರಖಂಡ ಹಾಗೂ ಸುತ್ತಲಿನ ಪ್ರದೇಶದಲ್ಲಿ ಮಧ್ಯಕಾಲೀನ ಇಟ್ಟಿಗೆಯ ದೇವಾಲಯಗಳು, ೧೧-೧೭೬.

ರಾಜೇಶ್‌ಬಾಬು ಬಿ. ಎಸ್.

ಗಿರಿಗೌಡನ ದೊಡ್ಡಿಯ ಬೃಹತ್ ಶಿಲಾಯುಗದ ಸಮಾಧಿಗಳು - ಒಂದು ಹೊಸ ಶೋಧ, ೧೪-೧೩ ; ಬಯಲು ಬಂಡೆಚಿತ್ರ ಮತ್ತು ಶಿಲಾಯುಗದ ನೆಲೆ ವೇದಿಕೆನಗರ ಮತ್ತು ಬಯಲು ಬಂಡೆ ಚಿತ್ರದ ನೆಲೆ ದಾಬಾಗು ಗುಂಡು, ೧೫-೧೯.

ರಾಧಾಕೃಷ್ಣಮೂರ್ತಿ

ಸೇವಂತಿಕಾ ಪರಿಣಯ - ಕೆಳದಿ ಇತಿಹಾಸದ ಆಕರ ಗ್ರಂಥ, ೧೧-೨೬೭ ; ವಿಜಯನಗರ ಸಂಸ್ಕೃತಿಯ ಆಕರ ಗ್ರಂಥ "ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ", ೧೨-೬೧ ; ವೀರಶೈವ ಸಂಸ್ಕೃತಿಯ ಆಕರ ಗ್ರಂಥ : 'ಶಿವತತ್ವ ರತ್ನಾಕರ', ೧೩-೨೨೨ ; ಕರ್ನಾಟಕದ ಯುದ್ಧನೀತಿಯಲ್ಲಿ ಜ್ಯೋತಿಷ್ಯದ ಪಾತ್ರ, ೧೪-೧೭೮.

ರಾಮಭಟ್ಟ ಬಿ. ಎಸ್.

ಕೆಳದಿ ಅರಸರ ಕಾಲದ ಸಂಗೀತ ಮತ್ತು ನೃತ್ಯ ಪರಂಪರೆ, ೧೩-೨೧೪ ; ಬೆಳಗುತ್ತಿ ಅರಸರು, ೧೪-೧೪೬ ; ಅಂಧಾಸುರ ಒಂದು ಅಧ್ಯಯನ, ೧೫-೨೦೦.

ರಾವ್ ವಿ. ಟಿ. ಎಸ್.

ಕರ್ನಾಟಕ ಭಿತ್ತಿಚಿತ್ರಗಳಲ್ಲಿ ವಿಶಿಷ್ಟವಾದ ಲೇಪಾಕ್ಷಿಯ ಚಿತ್ರಗಳು, ೧೩-೧೨೦.

ರೇಖಾ ಕೆ. ಜಿ.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಜಾನಪದೀಯ ದೈವಗಳು, ೧೧-೨೦೫.

ರೊನಾಲ್ಡ್ ಕುಟಿನ್ಹೊ

ಕನ್ನಡ ಕೈಫಿಯತ್ತುಗಳಲ್ಲಿ ರಾಣಿ ಚೆನ್ನಮ್ಮಾಜಿ, ೧೪-೨೭೮.

ಲಕ್ಷ್ಮಣ್ ತೆಲಗಾವಿ

ಬಳ್ಳಾರಿ ತಾಲ್ಲೂಕು ಹಳೇನೆಲ್ಲುಡಿ ಗ್ರಾಮದ ಸ್ಮಾರಕಗಳು : ಈಚಿನ ಶೋಧಗಳ ಹಿನ್ನೆಲೆಯಲ್ಲಿ, ೧೧-೧೯ ; ಚಿತ್ರದುರ್ಗದ ಪ್ರಾಚೀನ ನಾಮ : ಮರುಪರಿಶೀಲನೆ, ೧೨-೨೦೧ ; ಚಿತ್ರದುರ್ಗ ಕೋಟೆ ಮತ್ತು ಬೆಟ್ಟ ಪರಿಸರದ ಮೂರು ವ್ಯಕ್ತಿಶಿಲ್ಪಗಳು, ೧೪-೧೩೬ ; ಚಿತ್ರದುರ್ಗ ಮತ್ತು ಹರಪನಹಳ್ಳಿ ನಾಯಕ ಅರಸರ ಸಂಬಂಧ - ಕೆಲವು ಸಮಸ್ಯೆಗಳು, ೧೫-೨೭೧.

ಲಕ್ಷ್ಮೀದೇವಿ ಎ. ಎಸ್.

ಪಶ್ಚಿಮ ಕರಾವಳಿಯ ಶಂಕರನಾರಾಯಣ ಕ್ಷೇತ್ರ ಒಂದು ಪರಿಚಯ, ೧೫-೨೦೪.

ಲೀಲಾ ಬಿ.

ಹತ್ತೊಂಬತ್ತನೇ ಶತಮಾನದಲ್ಲಿ ಮಹಿಳೆಯ ಆರೋಗ್ಯ ಹಾಗೂ ಕೌಂಟೆಸ್ ಆಫ್ ಡಫರಿನ್ ಫಂಡ್ : ಇವರಲ್ಲಿ ಮೈಸೂರಿನ ಪಾತ್ರ ಒಂದು ವಿಶ್ಲೇಷಣೆ, ೧೨-೨೧೧ ; ಪ್ಲೇಗ್ ಉಪದ್ರವ ; ಇಂಡಿಯಾದ ಮಾರಕ ರೋಗ (೧೮೯೬-೧೯೦೦) ಕರ್ನಾಟಕಕ್ಕೆ ಸಂಬಂಧ - ಒಂದು ವಿಶ್ಲೇಷಣೆ, ೧೩-೨೮೬ ; ಡಾಕ್ಟರ್ ಪಲ್ಪು ಪದ್ಮನಾಭನ್ : ಒಂದು ವಿಶ್ಲೇಷಣೆ, ೧೪-೩೦೫ ; ಡಾ॥ ಬೆಂಜಮನ್ ಹೈನ್ ಮತ್ತು ಡಾ॥ ಜಾನ್‌ಲೇಡನ್ - ಒಂದು ಟಿಪ್ಪಣಿ, ೧೫-೨೫೭.

ಕರ್ನಾಟಕ ಇತಿಹಾಸ ಅಕಾದೆಮಿ(ರಿ.,)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯

೧೯೯೯ನೆಯ ಸಾಲಿನ ವಾರ್ಷಿಕ ವರದಿ

ಆತ್ಮೀಯ ಸದಸ್ಯರೇ,

ಅಕಾದೆಮಿಯು ೧೩ ಸಾರ್ಥಕ ವರ್ಷಗಳನ್ನು ಮುಗಿಸಿ ಈಗ ತನ್ನ ೧೪ನೆಯ ವರ್ಷಕ್ಕೆ ಅಡಿಯಿಟ್ಟು ಸುಮಾರು ಆರು ತಿಂಗಳುಗಳು ಕಳೆದಿವೆ. ಕಳೆದ ವರ್ಷ ನಾವೆಲ್ಲಾ ಹರಪನಹಳ್ಳಿಯಲ್ಲಿ ಕಲೆತು, ೧೩ನೆಯ ವಾರ್ಷಿಕ ಸಮ್ಮೇಳನವನ್ನು ಅದ್ದೂರಿಯಿಂದ ಆಚರಿಸಿದ ನೆನಪು ಇನ್ನೂ ಹಸಿರಾಗಿಯೇ ಇದೆ. ಈಗ, ಕನ್ನಡಿಗರೆಲ್ಲರೂ ಹೆಮ್ಮೆಪಡುವ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ ೧೪ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಲು ಸಮಾವೇಶಗೊಂಡಿದ್ದೇವೆ. ಕಳೆದ ವರ್ಷದ ಜೂನ್ ತಿಂಗಳಿನಿಂದ ಈವರೆಗೆ ಅಕಾದೆಮಿ ಸವೆಸಿದ ಹಾದಿಯ ಬಗೆಗೆ ನಾವು ಪರಸ್ಪರ ತಿಳಿದು, ಮುಂದಿನ ಹಾದಿಯ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ.

ಡಾ|| ಸೂರ್ಯನಾಥ ಕಾಮತ್ 'ಬದುಕು - ಬರಹ : ಸಮೀಕ್ಷೆ ಗೌರವಾರ್ಪಣೆ'

ಕರ್ನಾಟಕ ಇತಿಹಾಸ ಅಕಾದೆಮಿಯು ಬೆಂಗಳೂರಿನ ಮಿಥಿಕ್ ಸೊಸೈಟಿಯ ಸಹಯೋಗದೊಂದಿಗೆ ೨೦-೪-೧೯೯೯ರಂದು ಖ್ಯಾತ ಇತಿಹಾಸ ತಜ್ಞ ಡಾ|| ಸೂರ್ಯನಾಥ ಕಾಮತ್ ಅವರ ಬದುಕು - ಬರಹ ಕುರಿತು ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡು ಅದೇ ದಿನ ಸಂಜೆ ೬ ಗಂಟೆಗೆ ಅವರನ್ನು ಬಹಳ ಆತ್ಮೀಯವಾಗಿ ಗೌರವಿಸಿತು. ನಿವೃತ್ತ ಶ್ರೇಷ್ಠ ನ್ಯಾಯಮೂರ್ತಿಗಳಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಉದ್ಘಾಟಿಸಿದ ಸಮಾರಂಭದಲ್ಲಿ ಡಾ|| ಶ್ರೀನಿವಾಸ ಹಾವನೂರ್ ಅಭಿನಂದನಾ ಭಾಷಣ ಮಾಡಿದರು ಮತ್ತು ಮಿಥಿಕ್ ಸೊಸೈಟಿಯ ಕಾರ್ಯದರ್ಶಿಗಳಾದ ಡಾ|| ಎಂ. ಕೆ. ಎಲ್. ಎನ್. ಶಾಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಡಾ|| ಎಂ. ಚಿದಾನಂದ ಮೂರ್ತಿ, ಪ್ರೊ|| ಕೆ. ಟಿ. ಪಾಂಡುರಂಗಿ, ಡಾ|| ಎಸ್. ನಾಗರಾಜು, ಡಾ|| ಜ್ಯೋತ್ಸ್ನಾ ಕಾಮತ್ ಅವರುಗಳ ಅಧ್ಯಕ್ಷತೆಯಲ್ಲಿ ನಡೆದ ನಾಲ್ಕು ಪ್ರತ್ಯೇಕ ವಿಚಾರ ಗೋಷ್ಠಿಗಳಲ್ಲಿ ಡಾ|| ಕಾಮತ್ ಅವರ ಬದುಕು ಮತ್ತು ಬರಹ ಕುರಿತು ಹದಿನೆಂಟು ಜನ ವಿದ್ವಾಂಸರು ತಮ್ಮ ವಿಚಾರಗಳನ್ನು ಮಂಡಿಸಿದರು. ಅದೇ ದಿನ ಸಂಜೆ ೬ ಗಂಟೆಗೆ ನಡೆದ ಗೌರವ ಸಮರ್ಪಣೆ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳ ಮಾಜಿ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ವಹಿಸಿದ್ದರು. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ನಿವೃತ್ತ ಜಂಟೀ ನಿರ್ದೇಶಕರಾದ ಡಾ|| ಕೆ. ವಿ. ರಮೇಶ್ ಸಮಾರೋಪ ಭಾಷಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಡಾ|| ಎ. ವಿ. ನರಸಿಂಹಮೂರ್ತಿ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭಕ್ಕೆ ಬೆಂಗಳೂರಿನ ಬಿ. ಆರ್. ಆರ್. ಫ್ಯಾಮಿಲಿ ಟ್ರಸ್ಟ್‌ನ ನೆರವು ವಿಶೇಷವಾಗಿ ಲಭಿಸಿತು.

ಐತಿಹಾಸಿಕ ಪರಂಪರೆ ಉಳಿಸಿ - ೧೯೯೯

೧೯೯೯ನೆಯ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ|| ಕೆ. ಸಿದ್ದಪ್ಪ ಅವರು ೧೪-೮-೧೯೯೯ರಂದು, ಬೆಂಗಳೂರಿನ ಬಿ. ಎಂ. ಎಸ್. ಮಹಿಳಾ ಕಾಲೇಜಿನ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ಉದ್ಘಾಟಿಸಿದರು. ಅತಿಥಿಗಳಾಗಿ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ|| ಎಂ. ವಿ. ಕೃಷ್ಣಪ್ಪ ಆಗಮಿಸಿದ್ದರು. ಅಕಾದೆಮಿಯ ಅಧ್ಯಕ್ಷರಾದ ಡಾ|| ಸೂರ್ಯನಾಥ ಕಾಮತ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ವರ್ಷದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದ ಪ್ರೊ|| ಕೆ. ಸಿದ್ದಪ್ಪ ಅವರು ಇಂತಹ ಕಾರ್ಯಕ್ರಮಗಳಲ್ಲಿ ಆಯಾ ಭಾಗಗಳಲ್ಲಿನ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳೂ ತಮ್ಮ ರಾಷ್ಟ್ರೀಯ ಸೇವಾಯೋಜನೆ ಕಾರ್ಯಕ್ರಮಗಳ ಮೂಲಕ ತೊಡಗಿಕೊಳ್ಳಬೇಕೆಂದು ಕರೆ ನೀಡಿದರು.

ಈ ವರ್ಷರಾಜ್ಯದ ವಿವಿಧ ಭಾಗಗಳಲ್ಲಿ ಅಕಾದೆಮಿಯ ಸದಸ್ಯರು, ಸ್ಥಳೀಯ ಸಂಘ ಸಂಸ್ಥೆಗಳ ನೆರವಿನೊಂದಿಗೆ ನಡೆಸಿರುವ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ.

"ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮಗಳ ಪಟ್ಟಿ ೧೯೯೯ - ೨೦೦೦

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ:	*ಸರ್ವಶ್ರೀ:*
೧೪-೮-೯೯	ಬಿ. ಎಂ. ಎಸ್. ಮಹಿಳಾ ಕಾಲೇಜು ಬಸವನಗುಡಿ	ಪ್ರೊ|| ಕೆ. ಸಿದ್ದಪ್ಪ, ಕುಲಪತಿಗಳು, *(ಬೆಂಗಳೂರು ವಿಶ್ವವಿದ್ಯಾಲಯ)* ಪ್ರೊ|| ಎಂ. ವಿ. ಕೃಷ್ಣಪ್ಪ, ನಿರ್ದೇಶಕರು, *(ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆ)* ಡಾ|| ಸೂರ್ಯನಾಥ ಕಾಮತ್	ರಾಜ್ಯ ಪುರಾತತ್ವ ಇಲಾಖೆಯ ಸಹಯೋಗ
೦೮-೮-೯೯	ಶ್ರೀಕಂಠೇಶ್ವರ ಜೂನಿಯರ್ ಕಾಲೇಜ್ ಮೈಸೂರು	ಶ್ರೀಮತಿ ಶಾಂತಕುಮಾರಿ, (ಮಾಜಿ ಮೇಯರ್, ಮೈಸೂರು)	ಮೈ. ನಾ. ಶರ್ಮ ವಿಷಯ : *ಪ್ರಾಚೀನ ಹಸ್ತ ಪ್ರತಿಗಳು*
೧೦-೮-೯೯	ಶ್ರೀಕಂಠೇಶ್ವರ ಜೂನಿಯರ್ ಕಾಲೇಜ್ ಮೈಸೂರು		ವಿದ್ಯಾರ್ಥಿಗಳಿಗೆ ಪ್ರಾಚ್ಯ ಸಂಶೋಧನಾಲಯ ದಲ್ಲಿ ಮೈ.ನಾ. ಶರ್ಮ ಅವರಿಂದ ಪ್ರಾತ್ಯಕ್ಷಿಕ ಪರಿಚಯ
೧೪-೮-೯೯	ಪದವಿ ಪೂರ್ವ ಕಾಲೇಜು, ರೊಟಿಗವಾಡ, ಧಾರವಾಡ ಜಿಲ್ಲೆ	ಬಿ. ಎಸ್. ಪಾಟೀಲ, ಎ. ಎಲ್. ಪೋಲೀಸ್ ಪಾಟೀಲ, ಕೆ. ಸಿ. ಮಲ್ಲಿಗವಾಡ	ಈ ಮೂರು ಕಾರ್ಯಕ್ರಮಗಳಲ್ಲಿ
೧೫-೮-೯೯	ವೀರ ಪುಲಕೇಶಿ ವಿದ್ಯಾ ಸಂಸ್ಥೆ ರೊಟ್ಟಿಗವಾಡ	ಎ. ಎಲ್. ಪೋಲೀಸ್ ಪಾಟೀಲ, ಎಸ್. ವಿ. ಹಿರೇಗೌಡರ, ಕೆ. ಸಿ. ಮಲ್ಲಿಗವಾಡ	"ಇತಿಹಾಸವೆಂದು ಮೂಗು ಮುರಿಯದೆ" ಲಾವಣಿಯನ್ನು ಹಾಡಲಾಯಿತು
೧೫-೮-೯೯	ವೀರ ಪುಲಕೇಶಿ ವಿದ್ಯಾ ಸಂಸ್ಥೆ ರೊಟ್ಟಿಗವಾಡ, (ವಿದ್ಯಾರ್ಥಿಗಳಿಗಾಗಿ)	ಶ್ರೀಮತಿ ಶೋಭ ಮಲ್ಲಿಗವಾಡ, ಎಸ್. ವಿ. ಹಿರೇಮಠ್, ಕೆ. ಸಿ. ಮಲ್ಲಿಗವಾಡ	
೧೫-೮-೯೯	ಆರೋಕ್ಯ ಮೇರಿ ಶಿಕ್ಷಣ ಕೇಂದ್ರ, ಮೈಸೂರು	ಡಾ|| ಎಚ್ಚೆಸ್ಕೆ	ಮೈ. ನಾ. ಶರ್ಮ ವಿಷಯ : *ಐತಿಹಾಸಿಕ ಸ್ಮಾರಕಗಳು*
೧೫-೮-೯೯ ರಿಂದ ೨೨-೮-೯೯	ಧಾರವಾಡದಲ್ಲಿನ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು	ಡಾ|| ಎಸ್. ಕೆ. ಜೋಷಿ	ಪ್ರಚಾರಾರ್ಥವಾಗಿ ಭಿತ್ತಿಚಿತ್ರದ ಪತ್ರಗಳನ್ನು ವಿತರಿಸಿ "*ಐತಿಹಾಸಿಕ ಪರಂಪರೆ ಉಳಿಸಿ*" ಮಹತ್ವದ ಬಗ್ಗೆ ವಿವರಿಸಿದರು.
೧೭-೮-೯೯	ಸರ್ಕಾರಿ ಪದವಿಪೂರ್ವ ಕಾಲೇಜು, ಚಿನಕುರಳಿ, ಪಾಂಡವಪುರ ತಾಲ್ಲೂಕು	ಎಸ್. ಜೆ. ಪ್ರಭಾಕರ ಸಿ. ಆರ್. ರಂಗಸ್ವಾಮಿ *(ಪ್ರಾಂಶುಪಾಲರು)*	ಸತ್ಯನಾರಾಯಣ ಅವರು *ಶ್ರೀರಂಗಪಟ್ಟಣದ ಬಗ್ಗೆ* ಉಪನ್ಯಾಸ ನೀಡಿದರು.
೧೮-೮-೯೯	ಎಲ್. ವಿ. ಡಿ ಮಹಾ ವಿದ್ಯಾಲಯ ರಾಯಚೂರು	ಡಾ|| ಸಿ. ಎಸ್. ಪಾಟೀಲ್, (ಪುರಾತತ್ವ ಇಲಾಖೆಯ ಉಪ ನಿರ್ದೇಶಕರು), ಎಂ. ನಾಗಪ್ಪ, (ನ್ಯಾಯವಾದಿಗಳು ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರು),	ಎಸ್. ಎಸ್. ಕಾಳೆ (ಪ್ರಾಂಶುಪಾಲರು), ಡಾ|| ಚನ್ನಬಸವ ಹಿರೇಮಠ್, ಶಬ್ಬೀರ್ ಆಲಿ, ಶ್ರೀಮತಿ ಶಕುಂತಲಾ ಗೋಪಶೆಟ್ಟಿ

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ:	*ಸರ್ವಶ್ರೀ:*
೧೯-೮-೯೯	ಸರ್ಕಾರಿ ಕಲಾ ಕಾಲೇಜು, ಬೆಂಗಳೂರು	ಪ್ರೊ|| ಕೆ. ಎನ್. ಹಿರಿಯಣ್ಣಯ್ಯ ಪ್ರೊ|| ಎಂ. ಸಿ. ಕೃಷ್ಣಸ್ವಾಮಿ (ನಿವೃತ್ತ ಪ್ರಾಂಶುಪಾಲರು) ಪ್ರೊ|| ರಾಜಶೇಖರ ಮೂರ್ತಿ, ಎಂ. ಎಸ್., *(ಪ್ರಾಂಶುಪಾಲರು)*	ನಾಣ್ಯಗಳ ಪ್ರದರ್ಶನ ನಡೆಯಿತು.
೨೦-೮-೯೯	ಶಾರದವಿಲಾಸ ಬಿ. ಎಡ್. ಸಂಸ್ಥೆ, ಮೈಸೂರು		ಮೈ. ನಾ. ಶರ್ಮ ಅವರಿಂದ ಸಂಗ್ರಹಿತ ಪ್ರಾಚ್ಯವಸ್ತು ಪ್ರದರ್ಶನ
೨೦-೮-೯೯	ವಿದ್ಯಾದಾನ ಸಮಿತಿ ಹೆಣ್ಣು ಮಕ್ಕಳ ಸಂಯುಕ್ತ ಪದವಿ ಪೂರ್ವ ಕಾಲೇಜು, ಗದಗ, ಸಭಾ ಭವನ	ಎಂ. ಎಸ್. ಕುಲಕರ್ಣಿ, *(ಪ್ರಾಚಾರ್ಯರು)*	ಅ. ದ. ಕಟ್ಟೀಮನಿ
೨೧-೮-೯೯	ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಪದವಿ ಪೂರ್ಣ ಮಹಾವಿದ್ಯಾಲಯ ಸಭಾಂಗಣ	ಪ್ರೊ|| ಆರ್. ಎಸ್. ಪತ್ತೇಪುರ್, *(ಇತಿಹಾಸ ಉಪನ್ಯಾಸಕರು)*	ವಿದ್ಯಾರ್ಥಿಗಳ ಪ್ರಶ್ನೋತ್ತರ ಕಾರ್ಯಕ್ರಮ
೨೧-೮-೯೯	ಹುಲಕೋಟಿ ಸಹಕಾರ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಕಾಲೇಜು ಸಭಾಂಗಣ	ಎಸ್. ಎನ್. ಪಾಟೀಲ, ಪ್ರಾಚಾರ್ಯರು	ವಿದ್ಯಾರ್ಥಿಗಳ ಪ್ರಶ್ನೋತ್ತರ ಕಾರ್ಯಕ್ರಮ
೨೧-೮-೯೯	ಕನಕದಾಸ ಶಿಕ್ಷಣ ಸಮಿತಿಯ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಗದಗ ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಘಗಳ ಸಭಾಂಗಣ	ಪ್ರೊ|| ಬಿ. ಎಫ್. ದಂಡಿನ, ಅ. ದ. ಕಟ್ಟೀಮನಿ	ಸೋಮಶೇಖರ ಎಂ.ವಾಲಿ *(ಸಹಾಯಕ ನಿರ್ದೇಶಕರು, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ)* ಹಾಗು ಪ್ರೊ|| ಟಿ. ಎಸ್. ಹುಳಕಣ್ಣನವರ್ ಅವರುಗಳು *"ಐತಿಹಾಸಿಕ ಪರಂಪರೆ ಉಳಿಸಿ"* ಬಗ್ಗೆ ಮಾತನಾಡಿದರು.
೨೧-೮-೯೯	ಕನ್ನಡ ಸಾಹಿತ್ಯ ಪರಿಷತ್ತು ತಾ. ಘಟಕ, ನಾಗಮಂಗಲ, ನಾಗಮಂಗಲ ಟೌನಿನ ಕಿರಿಯ ಕಾಲೇಜು	ಟಿ. ಬಾಲಕೃಷ್ಣ *(ಕನ್ನಡ ಸಂಘದ ಅಧ್ಯಕ್ಷರು)* ಮಹಾದೇವನ್, ಪದ್ಮನಾಭ, ಮಹಮ್ಮದ್ ಖಲೀಂ ಉಲ್ಲಾ (ಕ್ವಿಜ್ ಮಾಸ್ಟರ್)	ರಸ ಪ್ರಶ್ನೆ ಸ್ಪರ್ಧೆ
೨೨-೮-೯೯	ಡಿ. ಬನುಮಯ್ಯ ಪ್ರೌಢ ಶಾಲೆ, ಮೈಸೂರು		ಪ್ರೊ|| ಚಂದ್ರರಾಜ ಅರಸ್ ವಿಷಯ : *ಕರ್ನಾಟಕದ ಇತಿಹಾಸ ಪರಿಚಯ*
೨೩-೮-೯೯	ಪದವಿಪೂರ್ವ ಕಾಲೇಜು, ಅನಾಥ ಆಶ್ರಮ, ವಿಶ್ವಸ್ತ ಸಮಿತಿ, ಮಲ್ಲಾಡಿಹಳ್ಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಸ್ಥಳ : ವಿಶ್ವಯೋಗ ಮಂದಿರ	ಸಾನ್ನಿಧ್ಯ ಮತ್ತು ಉದ್ಘಾಟನೆ : ಪೂಜ್ಯ ಶ್ರೀ ಶ್ರೀ ನಾರಾಯಣ ಸ್ವಾಮೀಜಿ, ಎಸ್. ಕೆ. ಬಸವರಾಜ್, *(ಆಡಳಿತಧಿಕಾರಿಗಳು ಎಸ್. ಜೆ. ಎಂ. ವಿದ್ಯಾಪೀಠ ಚಿತ್ರದುರ್ಗ)* ಜಿ. ಟಿ. ಗೋವಿಂದರಾಜು, *(ವ್ಯವಸ್ಥಾಪಕರು, ವಿಜಯ ಬ್ಯಾಂಕ್, ಹೊಳಲ್ಕೆರೆ)* *ಆರ್. ಆನಂದ್*	
೨೩-೮-೯೯	ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ಶ್ರೀ ವೀರಶೈವ ಪ್ರಗತಿಶೀಲ ಯುವಕ ಸಂಘದ ಆಶ್ರಯದಲ್ಲಿ	ಜಗದ್ಗುರು ಡಾ|| ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಿ : ಅ. ದ. ಕಟ್ಟೀಮನಿ	ಶಿವಾನುಭವ, ಕಾರ್ಯಕ್ರಮ: ಜಗದ್ಗುರುಗಳು *"ಐತಿಹಾಸಿಕ ಪರಂಪರೆ ಉಳಿಸಿ"* ಆಶೀರ್ವಚನ ನೀಡಿದರು.

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ:	*ಸರ್ವಶ್ರೀ:*
೨೫-೮-೯೯	ಪುಷ್ಕರಿಣಿ ಶಾಲೆ ಮಕ್ಕಳಿಗಾಗಿ		ಡಾ॥ ಎಂ. ಎಸ್. ಕೃಷ್ಣ ಮೂರ್ತಿ ಅವರಿಂದ ಮಾನಸಗಂಗೋತ್ರಿಯ ಪುರಾತತ್ವ ವಸ್ತು ಸಂಗ್ರಹಾಲಯ ಇಲ್ಲಿ ಪ್ರಾತ್ಯಕ್ಷಿಕ ಉಪನ್ಯಾಸ
೨೮-೮-೯೯	ಬಳ್ಳಾರಿಯ ಕೌಲ್‌ಬಜಾರ್ ಸರ್ಕಾರಿ ಪ್ರೌಢಶಾಲೆ	ವೈ. ಹನುಮಂತರೆಡ್ಡಿ ಶ್ರೀಮತಿ ಅನ್ನಪೂರ್ಣ	
೩೦-೮-೯೯	ಲಯನ್ಸ್ ಸಂಸ್ಥೆ ಮೈಸೂರು ಕೇಂದ್ರದ ಸದಸ್ಯರಿಗೆ		ಡಾ॥ ಟಿ. ದಯಾನಂದ ಪಟೇಲ್ ಅವರಿಂದ ಸೋಮನಾಥಪುರದಲ್ಲಿ ಪ್ರಾತ್ಯಕ್ಷಿಕ ಪ್ರದರ್ಶನ
೩೦-೮-೯೯	ಭಾರತೀಯ ಸಂಸ್ಕೃತಿ ವಿದ್ಯಾಪೀಠ, ರಾಮನಗರ	ಡಾ॥ ಎಸ್. ಎಲ್. ತಿಮ್ಮಯ್ಯ, *(ಸಮಾಜ ಸೇವಕರು)* ಡಾ॥ ಕೆ. ಜಿ. ಗೋಪಾಲಕೃಷ್ಣರಾವ್ ಶ್ರೀಮತಿ ಬಿ. ಡಿ. ಶಾಂತ, ಶಿವಾಜಿರಾವ್ ಶ್ರೀಮತಿ ಜೆ. ಶಾಂತಾಬಾಯಿ	ಎಂ. ಜಿ. ನಾಗರಾಜ್: *ಇತಿಹಾಸ ಮತ್ತು ಶಾಸನಗಳು*
೦೬-೯-೯೯	ಬಳ್ಳಾರಿ ತಾಲ್ಲೂಕು, ಕುರಗೋಡು ಸರ್ಕಾರಿ ಕಿರಿಯ ಮಹಾವಿದ್ಯಾಲಯ		ವೈ. ಹನುಮಂತರೆಡ್ಡಿಯವರು *"ಇತಿಹಾಸ ಪರಂಪರೆ ಉಳಿಸಿ"* ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು.
೯-೯-೯೯	ಶ್ರೀ ಜಗದ್ಗುರು ಮರುಘರಾಜೇಂದ್ರ ಮಠ, ಅನಂದಪುರ	ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯ ಶ್ರೀ. ಮನ್ಮಹಾರಾಜ ನಿರಂಜನ ಪ್ರಭುಮಹಾಸ್ವಾಮಿಗಳು, ಕಲ್ಮಠ, ಗುತ್ತಲ ಜಯದೇವಪ್ಪ ಜೈನಕೇರಿ, ಶ್ರೀಮತಿ ದಯಾವತಿ, ಕು॥ ಉಮಾದೇವಿ (ಸಂಗೀತ), ಕುರಾಡಿ ಸದಾಶಿವ ಕಲ್ಲೂರ್	ಎಚ್. ಎಂ. ಸಂಗಯ್ಯ ಅವರಿಗೆ ಸನ್ಮಾನ
೯-೯-೯೯	ಸಭಾ ಭವನ, ಯು. ಕಮಲಾಬಾಯಿ ಪ್ರೌಢಶಾಲೆ ಕಡಿಯಾಳಿ, ಉಡುಪಿ	ಕುರಾಜಿ ಸದಾಶಿವ ಕಲ್ಲೂರ್	ಇತಿಹಾಸ ಮತ್ತು ಸಾಹಿತ್ಯ
೧೦-೯-೯೯	ಕುಮಾರನ್ಸ್ ಪ್ರೌಢಶಾಲೆ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು	ಶ್ರೀಮತಿ ಸತ್ಯವತಿ *(ಪ್ರಾಂಶುಪಾಲರು)*	ಡಾ॥ ಕೆ. ಬಿ. ಸುದರ್ಶನ
೧೧-೯-೯೯	ಕೆಂಗಲ್ ಅಂಜನೇಯಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಬನ್ನಿಕುಪ್ಪೆ, ರಾಮನಗರ ತಾಲೂಕು	ಎಲ್. ಚಿಕ್ಕಪ್ಪಾಜಿ, ರಾಮನಗರ *(ಅಧ್ಯಕ್ಷರು, ಕ. ಸಾ. ಸಂ. ಸಮಿತಿ)* ಶ್ರೀ. ಅಂಕೇಗೌಡ, *(ಮುಖ್ಯೋಪಾಧ್ಯಾಯರು)* ಶಿವಾಜಿರಾವ್	ಶ್ರೀ ಬೋರೇಗೌಡ ವಿಷಯ : 'ಇತಿಹಾಸದಲ್ಲಿ ಭಾಷೆ"
೧೫-೯-೯೯	ಪ್ರೌಢಶಾಲೆ, ಲಕ್ಷ್ಮೀಪುರ ರಾಮನಗರ ತಾಲೂಕು	ಎಲ್. ಚಿಕ್ಕಪ್ಪಾಜಿ, ಗಂಗನರಸಿಂಹಯ್ಯ ಶಿವಾಜಿರಾವ್ ಶ್ರೀಮತಿ ಶಾಂತಾಬಾಯಿ	ಎಲ್. ಸಿ. ರಾಜು ವಿಷಯ : ಇತಿಹಾಸದಲ್ಲಿ ಜಾನಪದ

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ:	*ಸರ್ವಶ್ರೀ:*
೧೯-೯-೯೯	ವಿದ್ಯಾದಾನ ಸಮಿತಿ ಗಂಡು ಮಕ್ಕಳ ಸಂಯುಕ್ತ ಪದವಿ ಪೂರ್ವ ಕಾಲೇಜು, ಗದಗ, ಸಭಾ ಭವನ	ಬಿ. ಟಿ. ಕುಲಕರ್ಣಿ, *(ಪ್ರಾಚಾರ್ಯರು)*	ಅ. ದ. ಕಟ್ಟೀಮನಿ
೨೦-೯-೯೯	ಕಾರ್ಯಕ್ರಮ - ೧ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಾಹಿತ್ಯ ಅಕಾಡೆಮಿ, ದೊಡ್ಡಬಳ್ಳಾಪುರ, ತೂಬಗೆರೆ ಸರ್ಕಾರಿ ಪ್ರೌಢ ಶಾಲೆ ಕಾರ್ಯಕ್ರಮ: ೨	ಎಸ್. ವೆಂಕಟೇಶಪ್ಪ. ಎ. ಆರ್. ಸುಬ್ಬರಾವ್ ಎಂ. ಇ. ಖಲೀಉಲ್ಲಾಖನ್ ಎಲ್. ಕೃಷ್ಣಮೂರ್ತಿ ಎಂ. ಆರ್. ವರದರಾಜ್ ಅಯ್ಯಂಗಾರ್ ಬಿ. ಎ. ವಿಮಲ, ಎಸ್. ವೆಂಕಟೇಶಪ್ಪ	ಅಬ್ದುಲ್ ಕರೀಮ್ ವಿಷಯ : 'ಇತಿಹಾಸದ ಮಹತ್ವ' ಬಿ. ಎಲ್. ರಾಮಕೃಷ್ಣ *ವಿಷಯ :ಇತಿಹಾಸದ ಮಹತ್ವ*
೨೨.೯.೯೯	ಕೊಂಗಾಡಿಯಪ್ಪ ಪ್ರೌಢಶಾಲೆ, ದೊಡ್ಡಬಳ್ಳಾಪುರ		ಎಸ್. ಜಂಬಣ್ಣ *ವಿಷಯ : ಇತಿಹಾಸದ ಹಿರಿಮೆ*
೨೨-೯-೯೯	ಶ್ರೀ ಕ. ವಿ. ಪ್ರ. ಸಮಿತಿಯ ಕಲಾ. ವಿಜ್ಞಾನ ಹಾಗೂ ವಾಣಿಜ್ಯ ಮಹಾ ವಿದ್ಯಾಲಯ, ಹೊಳೆ ಆಲೂರ	ಪ್ರಾ ಎಸ್. ಎಸ್. ಪಟ್ಟಣ ಶೆಟ್ಟಿ ಡಾ|| ಎಸ್. ಸಿ. ಪಾಟೀಲ ಶೀಲಾಕಾಂತ ಪತ್ತಾರ	
೨೨-೯-೯೯	ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ, ನಿರ್ದೇಶನಾಲಯ, ಶಾಸನ ತಜ್ಞರ ಕಚೇರಿ, ಹುಬ್ಬಳ್ಳಿ ಬೇಂದ್ರೆ ಕುಟೀರ, ಗೋಕುಲ ರಸ್ತೆ ಬಸವೇಶ್ವರ ನಗರ	ಡಾ|| ಜೆ. ವಿ. ಕುಲಕರ್ಣಿ *(ನಿವೃತ್ತ ಪ್ರಾಧ್ಯಾಪಕರು, ಮುಂಬೈ)* ಎನ್. ಕೆ. ಜೋಗಳೇಕರ್ *(ಪ್ರಸಿದ್ಧ ಜ್ಯೋತಿಷಿಗಳು, ಧಾರವಾಡ)* ಪ್ರೊ|| ಮೋಹನ ಅ. ಲಂಬಿಕಾಯಿ, *(ಪ್ರಸಿದ್ಧ ವಕೀಲರು, ಧಾರವಾಡ)*	ಡಾ|| ಸೂರ್ಯನಾಥ ಕಾಮತ್ ವಿಷಯ : *ಬರಲಿರುವ ನವಶತಮಾನದಲ್ಲಿ ಐತಿಹಾಸಿಕ ಪರಂಪರೆಯನ್ನು ಉಳಿಸುವ ಕುರಿತು ಎದುರಿಸ ಬೇಕಾದ ಆಹ್ವಾನಗಳು*
೨೩.೯.೯೯	'ಕನಕಪುರ ಶ್ರೀ ದೇಗುಲ ಮಠದ ಶ್ರೀ ನಿರ್ವಾಣಸ್ವಾಮಿ ವಸತಿ ಶಾಲಾವರಣ		ಎಚ್. ಶಿವಮೂರ್ತಿ
೨೩-೯-೯೯	ಸ್ವಾಮಿ ವಿವೇಕಾನಂದ ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಳಲು, ಹೂವಿನಹಡಗಲಿ ತಾಲ್ಲೂಕು	ಟಿ. ಲಕ್ಷ್ಮಯ್ಯ ನಾಯ್ಕ ಎಂ. ವಿ. ಎಂ. ದಯಾನಂದಸ್ವಾಮಿ ಎಚ್. ಎಂ. ರವೀಂದ್ರನಾಥ ಕೆ. ದಯಾನಂದಗೌಡ	
೨೩-೯-೯೯	ಶ್ರೀ ರೇಣುಕಾಚಾರ್ಯ ಪ್ರೌಢ ಶಾಲೆ, ದೊಡ್ಡ ಅಬ್ಬೀಗೆರೆ	ಎಚ. ಬಿ. ಜಾದವ್, ಸುಮತೀಂದ್ರ ನಾಡಿಗ್	ಚನ್ನಗಿರಿ ತಾಲ್ಲೂಕು ಪರಿಚಯ
೨೪-೯-೯೯	ವಿ.ಕೆ.ಕೆ. ಪದವಿಪೂರ್ಣ ಕಾಲೇಜು, ಹಿರೇಹಡಗಲಿ	ಎಂ. ಎಂ. ಗುರುಬಸವರಾಜ್ ಕುಮಾರಿ ಸುಚಿತ್ರಾ ರೆಡ್ಡಿ ಟಿ. ಎಂ. ಶಂಕರಯ್ಯ	
೨೪-೯-೯೯	ಶ್ರೀ ಮಣ್ಣಮ್ಮ ಪ್ರೌಢಶಾಲೆ, ಚನ್ನಗಿರಿ	ಬಿ. ಇ. ಗಿದ್ದಪ್ಪ, ಸುಮತೀಂದ್ರ ನಾಡಿಗ್	ಚನ್ನಗಿರಿ ತಾಲ್ಲೂಕು ಪರಿಚಯ
೨೫-೯-೯೯	ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿ, ಬೆಳಗಾವಿ, ರಾಜಲಖಮಗೌಡ ಕಾನೂನು ವಿದ್ಯಾಲಯ, ತಿಲಕವಾಡಿ, ಬೆಳಗಾವಿ	ಡಾ|| ಎಸ್. ರಾಜಶೇಖರ್ *(ಕುಲಸಚಿವರು, ಕರ್ನಾಟಕ ವಿ. ವಿ. ಧಾರವಾಡ)* ವಿ. ಎನ್. ಜೋಷಿ *(ಪ್ರಾಚಾರ್ಯರು, ಆರ್. ಎಲ್. ಲಾ ಕಾಲೇಜು, ಬೆಳಗಾವಿ)* ಎಸ್. ಎಂ. ಕುಲಕರ್ಣಿ ವಿ. ಸಿ. ಮಾಲಗಿತ್ತಿ - *(ಗೌ. ಕಾರ್ಯದರ್ಶಿಗಳು)*	
೨೫-೯-೯೯	ಗೋಗಟೆ ವಾಣಿಜ್ಯ ಮಹಾವಿದ್ಯಾಲಯ ತಿಲಕವಾಡಿ, ಬೆಳಗಾವಿ	ಡಿ. ಆರ್. ಪಾಲೇಕರ್ *(ಪ್ರಾಚಾರ್ಯರು)* ಮನು ಬಳಗಾರ	

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ:	*ಸರ್ವಶ್ರೀ:*
೨೫-೯-೯೯	ದೇವನಹಳ್ಳಿ ತಾ. ವಿಜಯಪುರ ಸರ್ಕಾರಿ ಪ.ಪೂ. ಕಾಲೇಜು ಆವರಣ		ಎಂ. ರಾಮಚಂದ್ರ
೨೫-೯-೯೯	ಗಂ. ಪ. ಪ. ಬಾ ಕಾಲೇಜು, ಹೂವಿನ ಹಡಗಲಿ	ಎಚ್. ಎಸ್. ಭಾಗವಾಡ್, ಜಿ. ತ್ರಿಲೋಕಿಕರ್ ರುದ್ರಪ್ಪ ಬಾದಾಮಿ, ಡಾ।। ಕೆ. ರುದ್ರಪ್ಪ	
೨೫-೯-೯೯	ಶ್ರೀ ಮಧುಕೇಶ್ವರ ಪ್ರೌಢಶಾಲೆ, ಹೊದಿಗೆರೆ	ಜಿ. ಎಸ್. ಕಲ್ಲಪ್ಪ, ಸುಮತೀಂದ್ರ ನಾಡಿಗ್, ಕೆ. ಜಿ. ತಾರಾನಾಥ್	ಚನ್ನಗಿರಿ ತಾಲ್ಲೂಕು ಪರಿಚಯ ಇತಿಹಾಸ ತಿಳಿಯುವ ಅಗತ್ಯತೆ
೨೭-೯-೯೯	ಶ್ರೀ ಸಿದ್ಧರಾಮೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಗಾವಿ	ಎಸ್. ಬಿ. ಹಿರೇಮಠ *(ಪ್ರಾಚಾರ್ಯರು)* ಪ್ರೊ।। ಸ್ಮಿತಾ ಸುರೇ ಬಾನಕರ	
೨೭-೯-೯೯	ಜನತಾ ಪ್ರೌಢಶಾಲೆ, ಬಸವಪಟ್ಟಣ	ಎಸ್. ಈಶ್ವರಪ್ಪ ಸುಮತೀಂದ್ರ ನಾಡಿಗ್ ತಿಪ್ಪೇರುದ್ರಪ್ಪ	ಚನ್ನಗಿರಿ ತಾಲ್ಲೂಕು ಪರಿಚಯ ಬಸವಾ ಪಟ್ಟಣದ ಧಾರ್ಮಿಕ ಮತ್ತು ಚಾರಿತ್ರಿಕ ಇತಿಹಾಸ
೨೮-೯-೯೯	ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರ, ಭೂತರಾಮನಹಟ್ಟಿ, ಬೆಳಗಾವಿ	ಡಾ।। ಎಚ್. ಬಿ. ವಾಲಿಕರ ಚಂದ್ರಕಾಂತ ಕುಸನೂರ, *(ಹಿರಿಯ ಸಾಹಿತಿಗಳು)* ಡಾ।। ಚನ್ನಕ್ಕ ಪಾವಟೆ *(ಪ್ರಾ।। ಕ. ವಿ. ವಿ. ಧಾರವಾಡ)*	
೨೯-೯-೯೯	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಳಗಾವಿ	ಗುಣಪಾಲ ಪಕ್ಕಳ *(ಪ್ರಾಚಾರ್ಯರು)* ಡಾ।। ಸಿ. ವಿ. ಮಠದ *(ನಿವೃತ್ತ ಪ್ರಾಚಾರ್ಯರು, ಹಾವೇರಿ)*	
೪-೧೦-೯೯	ಜಿ. ಎ. ಸಂಯುಕ್ತ ಪದವಿಪೂರ್ವ ಕಾಲೇಜು, ಬೆಳಗಾವಿ	ಬಿ. ವಿ. ಅಣ್ಣಿಗೇರಿ, *(ಪ್ರಾಚಾರ್ಯರು)* ಡಾ।। ಎಚ್. ಬಿ. ವಾಲಿಕರ	
೩೧-೧೦-೯೯	ಕೋಟೆ ಆವರಣ, ಚನ್ನಗಿರಿ	ವಡ್ನಾಳ್ ರಾಜಣ್ಣ *(ಶಾಸಕರು, ಚನ್ನಗಿರಿ ಕ್ಷೇತ್ರ)* ದೀಪಕ್ ಸಾಗರ್, *(ಕಾರ್ಯದರ್ಶಿ, ಮಲೆನಾಡು ಜಾನಪದ ಕಲಾ ಸಂಘ, ಸಾಗರ)*	ಕೆಳದಿ ಜ್ಯೋತಿ ಮತ್ತು ಕಲಾಜಾಥಾ ಸ್ವಾಗತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ
೧೩-೧೧-೯೯	ತಾಲ್ಲುಕು ಕನ್ನಡ ಸಾಹಿತ್ಯ ಪರಿಷತ್ತು ನೆಲಮಂಗಲ ಮತ್ತು ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ಸ್ಥಳ : ಸರ್ಕಾರಿ ಪದವಿ ಪೂರ್ವ ಕಾಲೇಜು, ತ್ಯಾಮಗೊಂಡ್ಲು	ಡಾ।। ಸೂರ್ಯನಾಥ ಕಾಮತ್ ಡಾ।। ಎಚ್. ಎಸ್. ಗೋಪಾಲರಾವ್ ಎಂ. ವಿ. ನೆಗಳೂರ್, *(ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ತ್ಯಾಮಗೊಂಡ್ಲು)*	
೨೯-೧೧-೯೯	ಸರ್ಕಾರಿ ಪ್ರೌಢಶಾಲೆ, ದಮ್ಮೂರು, ಬಳ್ಳಾರಿ ತಾಲ್ಲೂಕು ಸ್ಥಳ : ಶ್ರೀ ವೆಂಕಾವದೂತರ ಆಶ್ರಮ, ದಮ್ಮೂರು	ಶ್ರೀಮತಿ ಎಸ್. ಬಿ. ಕಲ್ಯಾಣಮ್ಮ ದೊಡ್ಡನಗೌಡ *(ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಬಳ್ಳಾರಿ)* ಜಿ. ಮಾರುತಿ ರೆಡ್ಡಿ (ಅಧ್ಯಕ್ಷರು, *ಶಾಲಾಭಿವೃದ್ಧಿ ಸಮಿತಿ, ಸ. ಪ್ರೌಢಶಾಲೆ, ದಮ್ಮೂರು)* ಡಾ।। ದೇವರಕೊಂಡಾರೆಡ್ಡಿ *(ರೀಡರ್, ಶಾಸನ ಶಾಸ್ತ್ರ ವಿಭಾಗ, ಕನ್ನಡ ವಿ.ವಿ. ಹಂಪಿ)* ಶ್ರೀ ವೈ. ಹನುಮಂತರೆಡ್ಡಿ (ನಿವೃತ್ತ *ಇತಿಹಾಸ ಉಪನ್ಯಾಸಕರು, ಕುರಗೋಡು)* ಶ್ರೀ ಗಂಗಪ್ಪ *(ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಳ್ಳಾರಿ*	

ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಉದ್ಘಾಟಕರು/ಅಧ್ಯಕ್ಷರು/ಅತಿಥಿಗಳು ಸಂಚಾಲಕರು	ಉಪನ್ಯಾಸ / ಇತರ ವಿಷಯಗಳು
		ಸರ್ವಶ್ರೀ: ಬಸವರಾಜ್, ಪ್ರಾಂಶುಪಾಲರು) ಎಸ್. ಎಂ. ಗುರುಪಾದಯ್ಯ ಪಟೆಪ್ಪ ಶ್ರೇಷ್ಠಿ, ಎಸ್. ಎಂ. ಮಸಗಿ	*ಸರ್ವಶ್ರೀ:*
೯-೨-೨೦೦೦	ಕನಕಪುರ ತಾ।। ದೊಡ್ಡಮರಳ ವಾಡಿ ಸರ್ಕಾರಿ ಪ್ರೌಢಶಾಲೆ ಆವರಣ		ಪ್ರೊ।। ಮುನಿರಾಜಪ್ಪ ವಿಷಯ : *ಕರ್ನಾಟಕ ವೈಭವ*
೧೪-೨-೨೦೦೦	ಸರ್ಕಾರಿ ಪದವಿಪೂರ್ವ ಕಾಲೇಜು, ಸಂತೆ ಬೆನ್ನೂರು	ಬಿ. ವೀರಾಚಾರ್ *(ಪ್ರಾಚಾರ್ಯರು)*	ಸುಮತೀಂದ್ರ ನಾಡಿಗ್ ಸುಮತೀಂದ್ರ ನಾಡಿಗ್ ವಿಷಯ : *ಸಂತೆ ಬೆನ್ನೂರು* *ನಾಯಕರು*
೨೧-೦೨-೨೦೦೦	ಶ್ರೀ ಬಸವೇಶ್ವರ ಪದವಿಪೂರ್ವ ಕಾಲೇಜು, ಸಂತೆ ಬೆನ್ನೂರು ಸಹಯೋಗ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಾವಣಗೆರೆ	ಶಿವಮೂರ್ತಿ *(ಪ್ರಾಚಾರ್ಯರು)*	ಸುಮತೀಂದ್ರ ನಾಡಿಗ್ ವಿಷಯ : *ಸಂತೆ ಬೆನ್ನೂರು* *ನಾಯಕರು*

ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ೧೯೯೯	ನೂತನ ವಿದ್ಯಾಲಯ ಜೂನಿಯರ್ ಕಾಲೇಜು, ಕಲಬುರಗಿ, ನೂತನ ವಿದ್ಯಾಲಯ ಡಿಗ್ರಿ ಕಾಲೇಜು, ಕಲಬುರಗಿ, ನೂತನ ವಿದ್ಯಾಲಯ ಕನ್ಯಾಶಾಲೆ, ಕಲಬುರಗಿ, ಸರ್ಕಾರಿ ಜ್ಯೂನಿಯರ್ ಕಾಲೇಜು, ಕಮರಾಪುರ (ಕಲಬುರಗಿ ಜಿಲ್ಲೆ). ಸರ್ಕಾರಿ ಜ್ಯೂನಿಯರ್ ಕಾಲೇಜು, ಗೋಗಿ, (ಶಹಾಪುರ ತಾ). ಸರ್ಕಾರಿ ಜ್ಯೂನಿಯರ್ ಕಾಲೇಜು, ಸುರಪುರ, ಇತಿಹಾಸ ವಿಭಾಗ ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ, ನೃಪತುಂಗ ಮಹಾವಿದ್ಯಾಲಯ, ಸೇಡಂ, ಅಂಬೇಡ್ಕರ್ ಕಾಲೇಜು, ಕಲಬುರಗಿ, ಕನ್ನಡ ಸಾಹಿತ್ಯ ಸಂಘ, ಕಲಬುರಗಿ, ಮರಾಠಿ ಸಾಹಿತ್ಯ ಮಂಡಳ, ಕಲಬುರಗಿ.	'ಇತಿಹಾಸ ಪರಂಪರೆ ಉಳಿಸಿ' ಉಪನ್ಯಾಸ ಕಾರ್ಯಕ್ರಮ, ಪ್ರಾತ್ಯಕ್ಷಿಕೆ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳಲ್ಲದೆ ಕಲಬುರಗಿಯ ಕೋಟೆ, ಮರತೂರಿನ ದೇಗುಲಗಳು, ಸನ್ನತಿ ಶ್ರೀ ಕ್ಷೇತ್ರ, ಖಾಜಾ ಬಂದೇ ನವಾಜ ದರ್ಗಾ, ಸುರಪುರದ ಅರಮನೆ, ಗೋಗಿಯ ದರ್ಗಾ, ಮಾನ್ಯಖೇಟದ ಕೋಟೆ, ಸೇಡಂನ ದೇಗುಲಗಳು, ಭಂಕೂರಿನ ಬಸದಿಗಳು ಇತ್ಯಾದಿ ಐತಿಹಾಸಿಕ ಸ್ಥಳಗಳಲ್ಲಿ ಭಿತ್ತಿ ಪತ್ರಗಳನ್ನು ಆಯಾ ಸ್ಥಳೀಯ ವಿದ್ಯಾರ್ಥಿಗಳನ್ನು ಬಳಸಿಕೊಂಡು ಲಗತ್ತಿಸುತ್ತಾ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಗತವೈಭವದ ಬಗ್ಗೆ ಕಲ್ಪನೆಯನ್ನು ನೀಡಲಾಯಿತು.

ಹದಿಮೂರನೆಯ ವಾರ್ಷಿಕ ಸಮ್ಮೇಳನ :

ಅಕಾದೆಮಿಯ ಹದಿಮೂರನೆಯ ವಾರ್ಷಿಕ ಸಮ್ಮೇಳನವು ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯಲ್ಲಿ ೧೯೯೯ರ ಜೂನ್ ೧೧, ೧೨ ಮತ್ತು ೧೩ನೆಯ ತಾರೀಕುಗಳಂದು ಅತ್ಯಂತ ಯಶಸ್ವಿಯಾಗಿ ನಡೆಯಿತು. ಕರ್ನಾಟಕ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಸ್ಥಳೀಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ. ನಾರಾಯಣದಾಸ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ।। ಎಂ. ಎಂ. ಕಲಬುರ್ಗಿ ಅವರು ಅಕಾದೆಮಿಯ

ಉಪಾಧ್ಯಕ್ಷ ಶ್ರೀ ಎಂ. ಜಿ. ನಾಗರಾಜ್ ಹಾಗೂ ಶ್ರೀ ಪಿ. ವಿ. ಕೃಷ್ಣಮೂರ್ತಿ ಸಂಪಾದಿತ **ಇತಿಹಾಸ ದರ್ಶನದ** ೧೪ನೆಯ ಸಂಪುಟವನ್ನು ಬಿಡುಗಡೆ ಮಾಡಿದರು. ಡಾ|| ಚೆನ್ನಕ್ಕ ಪಾವಟೆ ಅವರ 'ರಾಷ್ಟ್ರಕೂಟ ಸಾಮಂತ ಚಲ್ಲಕೇತನ' ಕೃತಿಯನ್ನು ಅಕಾದೆಮಿಯ ಆಜೀವ ಗೌರವಾಧ್ಯಕ್ಷರಾದ ಡಾ|| ಜಿ. ಎಸ್. ದೀಕ್ಷಿತ್ ಅವರು ಬಿಡುಗಡೆ ಮಾಡಿದರು. ಮುಖ್ಯಅತಿಥಿಗಳಾಗಿ ಪ್ರೊ|| ಎಸ್. ಎಚ್. ಪಟೇಲ್, ಶ್ರೀ ಎ. ಗೋವಿಂದರೆಡ್ಡಿ, ಶ್ರೀ ಎಂ. ವಿ. ಅಂಜನಪ್ಪ ಮತ್ತು ಶ್ರೀಮತಿ ಮಡ್ಡೇರ ದೇವೀರಮ್ಮ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಮ್ಮೇಳನಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದ ಡಾ|| ಶ್ರೀನಿವಾಸ ಹಾವನೂರ ಅವರು ಇತಿಹಾಸ ಮತ್ತು ಸಾಹಿತ್ಯ ಎರಡೂ ಹೇಗೆ ಪರಸ್ಪರ ಪೂರಕವಾಗಿ ದಾಖಲೆಗಳನ್ನು ಉಳಿಸುತ್ತವೆ ಮತ್ತು ಕಳೆದ ಕಾಲದ ಬದುಕನ್ನು ಅರ್ಥೈಸಲು ಎರಡೂ ಎಷ್ಟರ ಮಟ್ಟಿಗೆ ನೆರವಾಗುತ್ತವೆ ಎಂಬುದನ್ನು ತಿಳಿಸುತ್ತಾ ಕರ್ನಾಟಕದ ಇತಿಹಾಸವನ್ನು ಅಧ್ಯಯನ ಮಾಡಿದ ಹಲವು ವಿದೇಶಿ ಇತಿಹಾಸಕಾರರು ಮತ್ತು ಅವರ ಸಾಧನೆಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾದ ಶ್ರೀ ಕುಂ. ಬಾ. ಸದಾಶಿವಪ್ಪ ಅವರು ಮತ್ತು ಇತರ ಪದಾಧಿಕಾರಿಗಳ ನೆರವು ವಿಶೇಷ ಕೃತಜ್ಞತೆಗೆ ಪಾತ್ರವಾಯಿತು.

ಇದೇ ಸಂದರ್ಭದಲ್ಲಿ, ಕಳೆದ ಸಮ್ಮೇಳನದ ನಂತರ ಈವರೆಗೆ ಪಿಎಚ್. ಡಿ., ಪಡೆದಿರುವ ಈ ಕೆಳಕಂಡ, ಅಕಾದೆಮಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಕ್ರ.ಸಂ.	ಪಿ ಎಚ್ ಡಿ / ಡಿ. ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಬಳ್ಳೂರ ಸದಾನಂದ ಮಾರುತಿ	ಡಾ|| ಬಿ. ವಿ. ಶಿರೂರ	ಪ್ರೊ. ಕೆ. ಜಿ. ಕಂದಣಗಾರ: ಒಂದು ಅಧ್ಯಯನ	ಕರ್ನಾಟಕ ವಿ.ವಿ
೨	ಶೀಲಾಕಾಂತ ಪತ್ತಾರ		ಬಾದಾಮಿ : ಒಂದು ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿ.ವಿ ಹಂಪಿ
೩	ಬಿ. ಪಾಂಡುಕುಮಾರ್	ಡಾ|| ಟಿ. ದಯಾನಂದ ಪಟೇಲ್	ಅರಸೀಕೆರೆ, ಹಾರನಹಳ್ಳಿ ಮತ್ತು ಜಾವಗಲ್ಲಿನ ಹೊಯ್ಸಳ ದೇವಾಲಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ	ಮೈಸೂರು ವಿ.ವಿ
೪	ಶಿವಶರಣ ಅರುಣಿ	ಪ್ರೊ|| ಕೆ. ಪದ್ದಯ್ಯ	*History & Culture of Surapura Samsthana, North Karnataka, A. D. 1650 - 1858*	ಪೂನಾ ವಿ. ವಿ

೧೧-೬-೧೯೯೯ರ ಮಧ್ಯಾಹ್ನದಿಂದ ೧೨-೬-೧೯೯೯ರ ಸಂಜೆ ೫-೧೫ರವರೆಗೆ ಹನ್ನೊಂದು ವಿಚಾರ ಗೋಷ್ಠಿಗಳು ನಡೆದು, ಅಕಾದೆಮಿಯ ಸದಸ್ಯರು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತು ತಾವು ಹೊಸದಾಗಿ ತಿಳಿದಿರುವ ಹೊಸ ವಿಚಾರಗಳ ವಿನಿಮಯ ಮಾಡಿಕೊಂಡರು. ಡಾ|| ಎಸ್. ನಾಗರಾಜು, ಡಾ|| ಎಚ್. ಆರ್. ರಘುನಾಥ ಭಟ್, ಡಾ|| ಕೆ. ಜಿ. ವಸಂತಮಾಧವ, ಪ್ರೊ|| ಎಂ. ಧ್ರುವನಾರಾಯಣ, ಡಾ|| ಸಿ. ಎಸ್. ಪಾಟೀಲ್, ಪ್ರೊ|| ವಸಂತ ಕುಷ್ಟಗಿ, ಪ್ರೊ|| ಲಕ್ಷ್ಮಣ ತೆಲಗಾವಿ, ಡಾ|| ರು. ಮ. ಷಡಕ್ಷರಯ್ಯ, ಪ್ರೊ|| ಎಂ. ಜಿ. ನಾಗರಾಜ್, ಡಾ|| ಜ್ಯೋತ್ಸ್ನಾಕಾಮತ್, ಶ್ರೀ ಎಂ. ಬಿ. ಪಾಟೀಲ್ ಅವರುಗಳ ಅಧ್ಯಕ್ಷತೆಯಲ್ಲಿ ನಡೆದ ಹನ್ನೊಂದು ವಿಚಾರ ಗೋಷ್ಠಿಗಳಲ್ಲಿ ೮೭ ಸಂಶೋಧನಾ ಪ್ರಬಂಧಗಳು ಮಂಡನೆ ಆದುವು.

೧೩-೬-೧೯೯೯ರ ಸಂಜೆ ೫-೩೦ಕ್ಕೆ ಅಕಾದೆಮಿಯ ಆಜೀವ ಗೌರವಾಧ್ಯಕ್ಷರಾದ ಡಾ|| ಜಿ. ಎಸ್. ದೀಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷರಾದಿಯಾಗಿ ಎಲ್ಲಾ ಪ್ರತಿನಿಧಿಗಳೂ ಸಮ್ಮೇಳನವನ್ನು ಯಾವುದಕ್ಕೂ ಕೊರತೆ ಇಲ್ಲದಂತೆ ಯಶಸ್ವಿಯಾಗಿ ನಡೆಸಿದ ಸ್ಥಳೀಯ ಸ್ವಾಗತ ಸಮಿತಿಗೆ ಕೃತಜ್ಞತೆಗಳನ್ನು ಸಲ್ಲಿಸಲಾಯಿತು. ಅದೇ ಸಂದರ್ಭದಲ್ಲಿ ಸಮ್ಮೇಳನದ ಆಯೋಜನೆಗೆ ಕಾರಣರಾದ ಶ್ರೀ ಕುಂ. ಬಾ. ಸದಾಶಿವಪ್ಪ ಅವರ ಕೃತಿಗಳನ್ನು ಡಾ|| ಸೂರ್ಯನಾಥ ಕಾಮತ್ ಅವರು ಬಿಡುಗಡೆ ಮಾಡಿ, ಸತ್ಕರಿಸಿ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

ಸ್ಥಳೀಯವಾಗಿ ಐತಿಹಾಸಿಕ ಪರಂಪರೆಯನ್ನು ಉಳಿಸಲು ಶ್ರಮಿಸುತ್ತಿರುವ ನಿವೃತ್ತ ಸಬ್ ಇನ್‌ಸ್ಪೆಕ್ಟರ್ ಶ್ರೀ ಸತ್ಯನಾರಾಯಣ್ ಮತ್ತು ಕೋಗಳಿಯ ಶ್ರೀ ನರಸಪ್ಪ ಅವರನ್ನು ಸಮ್ಮೇಳನದ ಸಂದರ್ಭದಲ್ಲಿ ಸತ್ಕರಿಸಲಾಯಿತು.

ಸರ್ವ ಸದಸ್ಯರ ಸಭೆಯ ವರದಿ - ೧೯೯೯

ದಿನಾಂಕ ೧೨-೬-೧೯೯೯ ಶನಿವಾರ ಸಂಜೆ ೬.೩೦ ಗಂಟೆಗೆ, ಸರ್ವ ಸದಸ್ಯರಿಗೂ ಆ ಮೊದಲೇ ಪತ್ರ ಮುಖೇನ ತಿಳಿಸಿದ್ದ ಪ್ರಕಾರ, ಅಕಾದೆಮಿಯ ಅಧ್ಯಕ್ಷರಾದ ಡಾ। ಸೂರ್ಯನಾಥ ಕಾಮತ್ ಅವರ ಅಧ್ಯಕ್ಷತೆಯಲ್ಲಿ ಅಕಾದೆಮಿಯ ೧೩ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯಲ್ಲಿನ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆದ ಅಕಾದೆಮಿಯ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳು ಕೆಳಕಂಡಂತಿವೆ:

ಸಭೆಯಲ್ಲಿ ೧೪೦ಜನ ಹಾಜರಿದ್ದು, ಅವರ ಹೆಸರುಗಳು ಮತ್ತು ಸಹಿ ಇರುವ ಪಟ್ಟಿಯನ್ನು ಈ ವರದಿಯ ಜೊತೆಗೆ ಲಗತ್ತಿಸಲಾಗಿದೆ.

ಅಂಚೆಯ ಮೂಲಕ ಸರ್ವಸದಸ್ಯರಿಗೂ ಕಳುಹಿಸಿದ್ದ ಸರ್ವ ಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ವಾಚಿಸಿ, ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಡಾ॥ ಎಚ್. ಎಸ್. ಗೋಪಾಲರಾವ್ ಅವರು ಸಭೆಯ ಆರಂಭಕ್ಕೆ ಅನುಮತಿ ಕೋರಿದರು. ಶ್ರೀ ಸಂತೇಬೆನ್ನೂರು ಸುಮಂತೀಂದ್ರ ನಾಡಿಗ್ ಸೇರಿದಂತೆ ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಅನುಮತಿ ನೀಡಿದರು.

ಶ್ರೀಮತಿ ಕೂ. ಸ. ಅಪರ್ಣ ಅವರ ಪ್ರಾರ್ಥನೆಯೊಂದಿಗೆ ಸಭೆಯು ಅರಂಭವಾಯಿತು. ನಂತರ ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಮ್ಮಿಂದ ಅಗಲಿರುವ ಅಕಾದೆಮಿಯ ಸದಸ್ಯರು ಮತ್ತು ಇತರ ಗಣ್ಯರ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷಗಳ ಮೌನ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರದ್ಧಾಂಜಲಿಗೆ ಪಾತ್ರರಾದವರ ಹೆಸರುಗಳು ಕೆಳಕಂಡಂತಿವೆ.

೧. ಅಕಾದೆಮಿಯ ಅಜೀವ ಸದಸ್ಯರಾಗಿದ್ದ ಡಾ॥ ಎಂ. ಬಿ. ನೇಗಿನಹಾಳ, ಬೆಳಗಾವಿ

೨. ಶ್ರೀ ಶ್ರೀ ಶ್ರೀ ಚನ್ನಬಸವ ಪಟ್ಟದೇವರು, ಬಾಲ್ಕಿ

೩. ಶ್ರೀ ವಿದ್ಯಾಚಂದ್ರ ಗುಲಾಬ್‌ಚಂದ್ರ ಕೊಠಾರಿ, ಗುಲಬರ್ಗಾ

೪. ಇತ್ತೀಚೆಗೆ ಭಾರತದ ಗಡಿರಕ್ಷಣೆಯಲ್ಲಿ ಮೃತರಾದ ವೀರಸೈನಿಕರು

ಶ್ರದ್ಧಾಂಜಲಿ ಸಲ್ಲಿಕೆಯ ನಂತರ ಪ್ರಧಾನ ಕಾರ್ಯದರ್ಶಿ ಡಾ॥ ಎಚ್. ಎಸ್. ಗೋಪಾಲರಾವ್ ಅವರು ಅಧ್ಯಕ್ಷರಾದಿಯಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರನ್ನೂ ಸ್ವಾಗತಿಸಿದರು.

೧೯೯೮ನೆಯ ಸಾಲಿನ ವರದಿ

೧೯೯೮ನೆಯ ಸಾಲಿನ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ ಹಾಜರಿದ್ದ ಎಲ್ಲಾ ಸದಸ್ಯರಿಗೂ ವಿತರಿಸಲಾಗಿತ್ತು. ಆದ್ದರಿಂದ ವರದಿಯ ವಾಚನದ ಅವಶ್ಯಕತೆ ಇಲ್ಲವೆಂದೂ, ಅದನ್ನು ಸ್ವೀಕರಿಸಬಹುದೆಂದು ಶ್ರೀ ಕುಂ. ಬಾ. ಸದಾಶಿವಪ್ಪ ಸೂಚಿಸಿದರು. ಸೂಚನೆಯನ್ನು ಶ್ರೀ ಬಿ. ವೀರಭದ್ರಯ್ಯ ಅನುಮೋದಿಸಿದರು. ಸರ್ವಸದಸ್ಯರ ಅನುಮತಿಯೂ ದೊರೆಯಿತು. ವರದಿಯನ್ನು ಓದಲಾಯಿತು ಮತ್ತು ಸ್ವೀಕರಿಸಲಾಯಿತು.

೧೯೯೮ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳು

೧೯೯೮ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು ಕೋಶಾಧಿಕಾರಿ ಶ್ರೀ ಎಂ. ಬಿ. ಪಾಟೀಲರು ಮಂಡಿಸಿದರು. ಅವುಗಳ ಮುದ್ರಿತ ಪ್ರತಿಯನ್ನು ಸಭೆಯ ಅರಂಭದಲ್ಲೇ ವಿತರಿಸಲಾಗಿತ್ತು. ಪರಿಶೋಧಕರು ವರದಿಯನ್ನು ಕನ್ನಡ ಭಾಷೆಯಲ್ಲಿ ನೀಡುತ್ತಿಲ್ಲವೆಂದೂ, ಮುಂದಿನ ವರ್ಷದಿಂದ ಅಕಾದೆಮಿಯೇ ಅದನ್ನು ಕನ್ನಡದಲ್ಲಿ ಅನುವಾದಿಸಿ ಮುದ್ರಿಸಿ ಒದಗಿಸುತ್ತದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು. ೧೯೯೮ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಒಪ್ಪಬಹುದೊಂದು ಪ್ರೊ. ವಸಂತಕುಷ್ಟಗಿ ಸೂಚಿಸಿದ್ದಕ್ಕೆ, ಡಾ। ಚೆನ್ನಕ್ಕಪಾವಟೆ ಅವರು ಅನುಮೋದನೆ ನೀಡಿದರು. ಲೆಕ್ಕ ಪತ್ರಗಳ ವರದಿಯನ್ನು ಓದಲಾಯಿತು ಮತ್ತು ಸ್ವೀಕರಿಸಲಾಯಿತು.

೧೯೯೯ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳು

೧೯೯೯ನೆಯ ಸಾಲಿನ ಮುಂಗಡ ಲೆಕ್ಕಪತ್ರದ ಮುದ್ರಿತ ಪ್ರತಿಗಳನ್ನು ವಿತರಿಸಲಾಯಿತು. ಅದನ್ನು ಕೋಶಾಧಿಕಾರಿ ಶ್ರೀ ಎಂ. ಬಿ. ಪಾಟೀಲರು ಮಂಡಿಸಿ, ಅಕಾದೆಮಿಯ ಆರ್ಥಿಕ ಸ್ಥಿತಿಯ ಬಗೆಗೆ ದೀರ್ಘವಾಗಿ ಪ್ರಸ್ತಾಪಿಸಿ, ಬಾಕಿ ಪಾವತಿ ಮತ್ತು ದೇಣಿಗೆಗೆ ಮನವಿ ಮಾಡಿದರು. ಸಂಸ್ಥಾ ಸದಸ್ಯತ್ವಕ್ಕೆ ಈಗ ಇರುವ ರೂ. ೫೦೦ರ ಶುಲ್ಕವನ್ನು ರೂ. ೧೦೦೦/- (ಒಂದು ಸಾವಿರ)ಕ್ಕೆ ಹೆಚ್ಚಿಸಬಹುದೆಂಬ ಡಾ। ಹೆಚ್. ಚಂದ್ರಶೇಖರ್ ಅವರ ಮತ್ತು ಅಜೀವ ಸದಸ್ಯತ್ವ ಶುಲ್ಕವನ್ನು ರೂ. ೫೦೦/- (ಐದು ನೂರು)ಕ್ಕೆ ಹೆಚ್ಚಿಸಬಹುದೆಂಬ

ಶ್ರೀ ಬಿ. ವೀರಭದ್ರಯ್ಯ ಅವರ ಸೂಚನೆಗಳ ಬಗೆಗೆ ಚರ್ಚೆಯಾಯಿತು. ಅಂತಿಮವಾಗಿ ಡಾ। ಎಸ್. ಸಿ. ಪಾಟೀಲ ಅವರ ಸಲಹೆಯಂತೆ ಅಜೀವ ಸದಸ್ಯತ್ವದ ಶುಲ್ಕವನ್ನು ಈಗಿರುವಂತೆಯೇ ರೂ. ೪೦೦/- (ನಾಲ್ಕು ನೂರು) ಎಂದೇ ಉಳಿಸಿಕೊಳ್ಳಬಹುದೆಂದೂ, ಸಂಸ್ಥೆಗಳ ಸದಸ್ಯತ್ವದ ಶುಲ್ಕವನ್ನು ರೂ. ೨೦೦೦/- (ಎರಡು ಸಾವಿರ)ಗಳಿಗೆ ಹೆಚ್ಚಿಸಬೇಕು ಎಂದು ನಿರ್ಧರಿಸಲಾಯಿತು. ಈ ಬಗೆಗಿನ ಡಾ॥ ಎಸ್. ಸಿ. ಪಾಟೀಲರ ಸೂಚನೆಯನ್ನು ಬಿ. ವೀರಭದ್ರಯ್ಯ ಅನುಮೋದಿಸಿದರು. ಸಾಮಾನ್ಯ ಸದಸ್ಯತ್ವವನ್ನು ತೆಗೆಯಬಾರದೆಂಬ ಶ್ರೀ ಮಹೇಶಪಾಟೀಲ ಅವರ ಸಲಹೆಯ ಬಗೆಗೂ ಚರ್ಚಿಸಲಾಯಿತು. ಶ್ರೀ ಎಂ. ಜಿ. ನಾಗರಾಜ್ ಅವರು ಸಾಮಾನ್ಯ ಸದಸ್ಯತ್ವವಲ್ಲದೆ. ವಿದ್ಯಾರ್ಥಿ ಸದಸ್ಯತ್ವ ಎಂಬ ಒಂದು ವರ್ಗವನ್ನು ಅರಂಭಿಸಬಹುದೆಂದು ಸೂಚಿಸಿದರು. ಚರ್ಚೆಯ ನಂತರ ವಿದ್ಯಾರ್ಥಿ ಸದಸ್ಯತ್ವಕ್ಕೆ ಅಕಾದೆಮಿಯು ಅವಕಾಶ ನೀಡಬೇಕೆಂದೂ, ಆ ಶುಲ್ಕವೂ ವಾರ್ಷಿಕ ರೂ. ೫೦ (ಐವತ್ತು) ಇರತಕ್ಕದ್ದೆಂದೂ, ಈ ಸದಸ್ಯತ್ವವು ನಿಯತ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸತಕ್ಕದ್ದೆಂದೂ, ಈ ವ್ಯಾಪ್ತಿಗೆ ಮುಕ್ತ ವಿಶ್ವವಿದ್ಯಾಲಯ ಅಥವಾ ಬಾಹ್ಯ ವಿದ್ಯಾರ್ಥಿಗಳು ಸೇರುವುದಿಲ್ಲವೆಂದೂ ತೀರ್ಮಾನಿಸಲಾಯಿತು. ವಿದ್ಯಾರ್ಥಿ ಸದಸ್ಯತ್ವ ಸ್ವೀಕರಿಸಿದ ವಿದ್ಯಾರ್ಥಿಗಳು ವಾರ್ಷಿಕ ೫೦/- ರೂಪಾಯಿಗಳನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಬೇಕೆಂದೂ, ಅವರ ವಿದ್ಯಾರ್ಥಿ ಜೀವನ ಮುಗಿಯುತ್ತಿದ್ದಂತೆ ಅವರ ವಿದ್ಯಾರ್ಥಿ ಸದಸ್ಯತ್ವವೂ ಕೊನೆಗೊಳ್ಳುವುದೆಂದೂ ನಿರ್ಧರಿಸಲಾಯಿತು. ಈ ಬಗೆಗಿನ ಸೂಚನೆಯನ್ನು ಶ್ರೀ ಮೋಹನ ಹೆಗಡೆ ಮಂಡಿಸಿದರು ಮತ್ತು ಡಾ. ಎಚ್. ಆರ್. ರಘನಾಥ ಭಟ್ ಸೂಚನೆಯನ್ನು ಅನುಮೋದಿಸಿದರು.

'ಇತಿಹಾಸ ದರ್ಶನ'ದ ಸಂಚಿಕೆಗಳನ್ನು ಅಂಚೆಯಲ್ಲಿ ಕಳುಹಿಸಬೇಕೆಂಬ ಶ್ರೀ ವೈ. ಹನುಮಂತರೆಡ್ಡಿ ಅವರ ಸೂಚನೆಯು ಯಾರಿಂದಲೂ ಅನುಮೋದನೆ ಪಡೆಯಲಿಲ್ಲ. ಉಚಿತವಾಗಿ ಕೊಡುತ್ತಿರುವ ಸಂಚಿಕೆಯನ್ನು ಅಂಚೆಯ ಮೂಲಕವೂ ಕಳುಹಿಸುವುದು ಅಕಾದೆಮಿಯ ಆರ್ಥಿಕ ದೃಷ್ಟಿಯಿಂದ ಅನುಕೂಲಕರವಲ್ಲ ಎಂಬುದು ಅನೇಕ ಸದಸ್ಯರ ಅಭಿಪ್ರಾಯವಾಗಿತ್ತು. ಈಗಿನಂತೆಯೇ 'ಇತಿಹಾಸ ದರ್ಶನ'ದ ವಿತರಣೆಯು ಮುಂದುವರಿಯಬಹುದೆಂದು ಡಾ। ಜ್ಯೋತ್ಸ್ನಾಕಾಮತ್ ಕಾಮತ್ ಸೂಚಿಸಿದರು. ಅದನ್ನು ಡಾ। ಬಿ. ಲೀಲಾ ಸಹಿತ ಸದಸ್ಯರೆಲ್ಲೂ ಅನುಮೋದಿಸಿದರು.

ಅಕಾದೆಮಿಯು ಇನ್‌ಫೋಸಿಸ್ ಸಂಸ್ಥೆಯನ್ನು ಕೋರಿ, ಅಕಾದೆಮಿಗೆ ಕಂಪ್ಯೂಟರ್ ಪಡೆಯಬೇಕೆಂದು ಶ್ರೀ ಸುಮತೀಂದ್ರ ನಾಡಿಗ್ ಸೂಚಿಸಿದರು. ಅದನ್ನು ಡಾ। ದೇವರಕೊಂಡಾರೆಡ್ಡಿ ಅನುಮೋದಿಸಿದರು.

ಅಕಾದೆಮಿಯ ಅರ್ಥಿಕ ಸ್ಥಿತಿಯ ಸುಧಾರಣೆಗಾಗಿ ಹಲವು ಅಭಿಪ್ರಾಯಗಳ ಸಹಿತ ಚರ್ಚೆ ನಡೆದು, ಕೆಲವು ಸೂಚನೆಗಳ ಸ್ವೀಕಾರವಾದ ನಂತರ ೧೯೯೯ರ ಮುಂಗಡ ಲೆಕ್ಕ ಪತ್ರವನ್ನು ಒಪ್ಪಿಕೊಳ್ಳಬಹುದೆಂದು ಡಾ। ಚೆನ್ನಕ್ಕ ಪಾವಟೆ ಸೂಚಿಸಿದರು. ಡಾ॥ ಬಿ. ನಂಜುಂಡಸ್ವಾಮಿ ಅವರು ಸೂಚನೆಯನ್ನು ಅನುಮೋದಿಸಿದರು. ಸರ್ವ ಸದಸ್ಯರ ಅನುಮೋದನೆಯೂ ದೊರೆಯಿತು.

೧೯೯೯ನೇ ಸಾಲಿಗೆ ಆಡಿಟರ್ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸುತ್ತಿರುವ ಕೆ. ವಿ. ಆಚಾರ್ಯ (ಆಚಾರ್ಯ ಮತ್ತು ಕಂಪೆನಿ). ಬೆಂಗಳೂರು ಅವರನ್ನೇ ೧೯೯೯ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗೂ ನೇಮಿಸಿಕೊಳ್ಳಬಹುದೆಂದೂ, ಅವರಿಗೆ ಈ ವರ್ಷ ರೂ. ೨,೦೦೦/- (ಎರಡು ಸಾವಿರ) ಗೌರವಧನ ಕೊಡಬಹುದೆಂದು ಡಾ॥ ಎ. ಕೆ. ಶಾಸ್ತ್ರಿ ಸೂಚಿಸಿದರು. ಆ ಸೂಚನೆಯನ್ನು ಅನುಮೋದಿಸಿದ ಡಾ॥ ಎಸ್. ಕೆ. ಜೋಷಿ ಅವರು ಲೆಕ್ಕ ಪರಿಶೋಧಕರು ಮುಂದೆ ವರದಿಯನ್ನು ಕನ್ನಡದಲ್ಲಿ ಸಲ್ಲಿಸುವಂತೆ ಕೋರಬೇಕೆಂಬ ಸಲಹೆ ನೀಡಿದರು.

ಠರಾವುಗಳ ಮಂಡನೆ

ಬೆಂಗಳೂರು - ಶಿವಮೊಗ್ಗಗಳ ನಡುವೆ ಸಂಚರಿಸುತ್ತಿರುವ ರೈಲಿಗೆ ಕೆಳದಿ ರಾಣಿ ಚೆನ್ನಮ್ಮಾಜಿ ಎಕ್ಸ್‌ಪ್ರೆಸ್ ಎಂದು ಹೆಸರಿಡಬೇಕೆಂದು ರೈಲ್ವೆ ಇಲಾಖೆಯನ್ನು ಅಕಾದೆಮಿಯ ಈ ಸರ್ವಸದಸ್ಯರ ಸಭೆಯು ಕೋರುತ್ತದೆ.

ಸೂಚನೆ : ಶ್ರೀ ಕೆ. ಗುಂಡಾಜೋಯಿಸ್, ಕೆಳದಿ ಅನುಮೋದನೆ : ಶ್ರೀ ಜಯದೇವಪ್ಪ ಜೈನಕೇರಿ, ಶಿವಮೊಗ್ಗ

ಇತರ ವಿಷಯಗಳು :

೧) ಕರ್ನಾಟಕದ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಜಿಲ್ಲಾ ಇತಿಹಾಸ ಅಕಾದೆಮಿಗಳು ಕಾರ್ಯಾರಂಭ ಮಾಡಬೇಕು ಮತ್ತು ಅವುಗಳು ಸ್ವಂತ ಕಟ್ಟಡವನ್ನು ದೊರಕಿಸಿಕೊಂಡು ಕಾರ್ಯಕ್ರಮಗಳಿಗೆ ಅನುಕೂಲ ಮಾಡಿಕೊಳ್ಳಬೇಕು ಎಂಬ ಪ್ರಸ್ತಾವನೆಯನ್ನು ಡಾ॥ ಮೃತ್ಯುಂಜಯ ರುಮಾಲೆ ಅವರು ಠರಾವಿನ ರೂಪದಲ್ಲಿ ಮಂಡಿಸಲು ಆಶಿಸಿದರು. ಅದರೆ ಇತಿಹಾಸ ಅಕಾದೆಮಿಗೆ ಬೆಂಗಳೂರಿನಲ್ಲೇ ಸ್ವಂತ ಕಚೇರಿಯಿಲ್ಲ ಮತ್ತು ಅಕಾದೆಮಿಯ ಉದ್ದೇಶವು ಸ್ಥಿರ ಅಸ್ತಿ ಪಾಸ್ತಿ ಮಾಡುವ ಬದಲು ಇತಿಹಾಸದ ಬಗೆಗೆ ಆಸಕ್ತಿ ಹೆಚ್ಚಿಸುವ, ಸಂಶೋಧನೆಗೆ ಮಹತ್ವ ನೀಡುವತ್ತ ಇರುವುದರಿಂದ ಇಂತಹ ಹಂಬಲಗಳು ಅನವಶ್ಯಕ ಎಂದು ಡಾ॥ ಕಾಮತರು ತಿಳಿಸಿದರು. ಅನೇಕ ಹಿರಿಯ ವಿದ್ವಾಂಸರು ಈ ಅಭಿಪ್ರಾಯಕ್ಕೆ ದನಿಗೂಡಿಸಿದರು.

೨) ಪ್ರಬಂಧ ಮಂಡನೆ ಮಾಡುವವರ ಪರಿಚಯಕ್ಕಾಗಿ ನಿರ್ವಹಣೆ ಮಾಡಿಕೊಳ್ಳುವವರು ಬಳಸಿಕೊಳ್ಳುವ ಸಮಯವನ್ನು ಉಳಿಸಲು, ಪ್ರಬಂಧದ ಸಾರಾಂಶದ ಜೊತೆಗೆ ಪ್ರಬಂಧಕಾರರ ಸಂಕ್ಷಿಪ್ತ ಪರಿಚಯವನ್ನು ನೀಡಬಹುದೆಂದು ಡಾ|| ಎಚ್. ಅರ್. ರಘನಾಥಭಟ್ಟ ಸೂಚಿಸಿದರು. ಆ ಸೂಚನೆಗೆ ಡಾ| ಚೆನ್ನಕ್ಕ ಪಾವಟೆ ಅವರ ಅನುಮೋದನೆಯೂ ದೊರೆಯಿತು.

೩) ವಾರ್ಷಿಕ ಸಮ್ಮೇಳನಗಳನ್ನು ನಾಲ್ಕು ದಿನಗಳ ಕಾಲ ಮಾಡಬೇಕೆಂಬ ಡಾ| ಶ್ರೀನಿವಾಸ ಹಾವನೂರರ ಸಲಹೆಯ ಬಗೆಗೆ ಡಾ|| ಎ.ಕೆ. ಶಾಸ್ತ್ರಿ ಅವರು, ಅದು ಆಶ್ರಯದಾತರಿಗೆ ತೊಂದರೆಯಾಗುತ್ತದೆಯಾದ್ದರಿಂದ ಈಗಿರುವಂತೆಯೇ ವಾರ್ಷಿಕ ಸಮ್ಮೇಳನಗಳ ಅವಧಿ ಮೂರು ದಿನಗಳಿರಲಿ ಎಂದು ಅಭಿಪ್ರಾಯ ಪಡಲಾಯಿತು.

೪) ಧಾರವಾಡದ ಶ್ರೀ ಎಸ್. ಕೆ. ದುಗ್ಗಾಣಿ ಅವರು ಲೋಕಸೇವಾ ಅಯೋಗದಲ್ಲಿ ಕರ್ನಾಟಕ ಇತಿಹಾಸವನ್ನು ಕಡ್ಡಾಯ ಪಠ್ಯವಾಗಿ ಮಾಡಬೇಕೆಂಬ ಸೂಚನೆ ನೀಡಿದರು. ಈಗಾಗಲೇ ಆ ಬಗೆಗೆ ತೀರ್ಮಾನವಾಗಿದೆ ಎಂದು ಡಾ|| ಕಾಮತ್ ಅವರು ತಿಳಿಸಿದರು.

೫) ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ಸಮೀಪದ ಐತಿಹಾಸಿಕ ಸ್ಥಳಗಳ ಪ್ರವಾಸ ಏರ್ಪಡಿಸುವ ಬಗೆಗೆ ಶ್ರೀ ಮಧು ಬಗರೆ ಸೂಚನೆ ನೀಡಿದಾಗ, ಈಗಾಗಲೇ ಆಸಕ್ತರಿಗಾಗಿ ಅಂತಹ ಕಾರ್ಯಕ್ರಮಗಳು ನಡೆಯುತ್ತಿರುವುದನ್ನು ತಿಳಿಸಲಾಯಿತು.

೬) ಐತಿಹಾಸಿಕ ಸ್ಮಾರಕಗಳ ಬಳಿ ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು ಫಲಕಗಳನ್ನು ಹಾಕುವುದರ ಜೊತೆಗೆ ಆಯಾ ಸ್ಮಾರಕಗಳ ಪರಿಚಯಾತ್ಮಕ ವಿಷಯಗಳನ್ನು ಅಲ್ಲಲ್ಲೇ ಪ್ರಕಟಿಸಿ ಉಪಕರಿಸಬೇಕೆಂದು ಶ್ರೀ ಟಿ. ಎಚ್. ಎಂ. ಬಸವರಾಜು ಕೋರಿದರು. ಇದನ್ನು ಸದಸ್ಯರೆಲ್ಲೂ ಅನುಮೋದಿಸಿದರು.

೭) ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡಿಸುವ ಬಗೆಗೆ ಸ್ಪಷ್ಟ ಉದ್ದೇಶವಿರಬೇಕೆಂದು ಡಾ|| ಎಸ್. ನಾಗರಾಜು ಅವರೂ, ಪ್ರಬಂಧಗಳ ಗುಣಮಟ್ಟವು ಮತ್ತಷ್ಟು ಉತ್ತಮಗೊಳ್ಳಬೇಕಂದು ಡಾ|| ಎ. ಕೆ. ಶಾಸ್ತ್ರಿ ಅವರೂ ಅಭಿಪ್ರಾಯಪಟ್ಟರು.

೮) ಪ್ರಬಂಧಗಳ ಗುಣದ ಜೊತೆಗೇ, ಅವುಗಳ ವಿಸ್ತಾರದ ಬಗೆಗೂ ಪ್ರಬಂಧಕಾರರು ಗಮನ ನೀಡಬೇಕೆಂದೂ, ಅವು ದೀರ್ಘವಾಗಿದ್ದಷ್ಟೂ ಪ್ರಕಟಣೆಗೆ ಕಷ್ಟವೆಂದೂ ಡಾ|| ಎಚ್. ಎಸ್. ಗೋಪಾಲರಾವ್ ಅಭಿಪ್ರಾಯ ವ್ಯಕ್ತಪಡಿಸಿ, ಪ್ರಬಂಧ ಮಂಡನೆಯ ಸಂದರ್ಭದಲ್ಲಿ ಸಮಯದ ಬಗೆಗೆ ಸಂಯಮವಿರಬೇಕು ಮತ್ತು ತಮ್ಮ ಅನುಕೂಲಕ್ಕೆ ತಕ್ಕಂತೆ ಪ್ರಬಂಧ ಮಂಡನೆಯ ವಿಷಯದಲ್ಲಿ ಬದಲಾವಣೆಗಳಿಗೆ ಪ್ರಬಂಧಕಾರರು ಪ್ರಯತ್ನಿಸುವುದು ಸರಿಯಲ್ಲ ಎಂದೂ ಮನವಿ ಮಾಡಿದರು.

೯) ಹಂಪಿಯ ಕನ್ನಡ ವಿಶ್ವವಿದ್ಯಾಲಯವು ತನ್ನ ಶಾಸನಶಾಸ್ತ್ರ ವಿಭಾಗದಿಂದ ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟವನ್ನು ಪ್ರಕಟಿಸಿರುವುದನ್ನು ಮೆಚ್ಚಿ, ಉತ್ತರ ಕರ್ನಾಟಕದ ಉಳಿದ ಜಿಲ್ಲಾ ಸಂಪುಟಗಳನ್ನೂ ಬೇಗನೇ ಪ್ರಕಟಿಸುವತ್ತ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಕಾರ್ಯಪ್ರವೃತ್ತರಾಗಬೇಕೆಂದು ಕೋರಲಾಯಿತು.

ಅಧ್ಯಕ್ಷರ ಭಾಷಣ

ಸಮ್ಮೇಳನದ ಪ್ರಬಂಧಗಳು, ಕಾಲಾವಕಾಶ, 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ಎಲ್ಲಾ ಸದಸ್ಯರ ಪಾಲ್ಗೊಳ್ಳುವಿಕೆ. ಸ್ಥಳೀಯ ದೇವಾಲಯಗಳು ಮತ್ತು ಐತಿಹಾಸಿಕ ಸ್ಮಾರಕಗಳ ಬಗೆಗೆ ವಹಿಸಬೇಕಾದ ಆಸಕ್ತಿ ಆ ಬಗೆಗೆ ಪರಿಚಯಾತ್ಮಕ ಲೇಖನಗಳ ಪ್ರಕಟಣೆ ಇತ್ಯಾದಿಗಳ ಬಗೆಗೆ ಡಾ|| ಸೂರ್ಯನಾಥ ಕಾಮತರು ಎಲ್ಲಾ ಸದಸ್ಯರ ಗಮನ ಸೆಳೆದರು.

ಕಾರ್ಗಿಲ್‌ನಲ್ಲಿ ಇತ್ತೀಚೆಗೆ ಮಡಿದ ವೀರಯೋಧರ ಕುಟುಂಬಗಳ ನೆರವಿಗೆ ಸ್ವಯಂ ಪ್ರೇರಣೆಯಿಂದ ಪಡೆಯಬಹುದಾದ ಕೊಡುಗೆಯನ್ನು ಸೈನಿಕ ರಕ್ಷಣಾ ನಿಧಿಗೆ ಅರ್ಪಿಸುವುದಾಗಿ ಡಾ|| ಕಾಮತ್ ತಿಳಿಸಿದರು. (ಸರ್ವಸದಸ್ಯರ ಸಭೆಯ ನಂತರ ಸದಸ್ಯರ ಸ್ವಪ್ರೇರಣೆಯಿಂದ ಸಂಗ್ರಹವಾದ ರೂ. ೨೩೫೦/-ರ ಜೊತೆಗೆ ರೂ. ೨೬೫೦/-ನ್ನು ಅಕಾದೆಮಿಯಿಂದ ನೀಡಿ ರೂ. ೫೦೦೦/-ವನ್ನು ಕಾರ್ಗಿಲ್ ನಿಧಿಗೆ ಸಂದಾಯ ಮಾಡಲಾಗಿದೆ.)

೧೪ನೆಯ ವಾರ್ಷಿಕ ಸಮ್ಮೇಳನಕ್ಕೆ ಕರೆ

ಕ್ರಿ. ಶ. ೨೦೦೦ದಲ್ಲಿ ನಡೆಯಬೇಕಾಗಿರುವ ಅಕಾದೆಮಿಯ ೧೪ನೆಯ ವಾರ್ಷಿಕ ಸಮ್ಮೇಳನವನ್ನು ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಸುವಂತೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು ೧೧-೬-೧೯೯೯ರಂದು ಉದ್ಘಾಟನೆಯ ಸಂದರ್ಭದಲ್ಲಿ ಕರೆ ನೀಡಿದ್ದು, ಸರ್ವಸದಸ್ಯರ ಸಭೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಡಾ|| ದೇವರಕೊಂಡಾರೆಡ್ಡಿಯವರು ಪತ್ರಮುಖೇನವೂ ಅಹ್ವಾನ ನೀಡಿರುವುದರಿಂದ ಅಹ್ವಾನವನ್ನು ಒಪ್ಪಬಹುದೆಂದು ಡಾ|| ಎಸ್. ಕೆ. ಜೋಷಿ ಸೂಚಿಸಿದರು. ಡಾ|| ಎಸ್. ನಾಗರಾಜು ಅನುಮೋದಿಸಿದರು.

ಕೃತಜ್ಞತೆಗಳು :

೧೩ನೆಯ ವಾರ್ಷಿಕ ಸಮ್ಮೇಳನವನ್ನು ತುಂಬಾ ಅಚ್ಚುಕಟ್ಟಾಗಿ ಆಯೋಜಿಸಿ, ಎಲ್ಲಾ ಪ್ರತಿನಿಧಿಗಳ ಮೆಚ್ಚುಗೆಗೆ ಪಾತ್ರರಾಗಿರುವ ಹರಪನಹಳ್ಳಿಯವರೇ ಆದ ಸಚಿವ ಶ್ರೀ ಡಿ. ನಾರಾಯಣದಾಸ್. ಶ್ರೀ ಕುಂ. ಬಾ. ಸದಾಶಿವಪ್ಪ, ಶ್ರೀ ಪರಶುರಾಂ ಮತ್ತಿತರರಿಗೆ ಅಕಾದೆಮಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಡಾ॥ ಎಚ್. ಆರ್. ರಘನಾಥಭಟ್ ಕೃತಜ್ಞತೆಗಳನ್ನು ಸೂಚಿಸಿದರು. ಅಂತೆಯೇ ಸರ್ವಸದಸ್ಯರ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೂ ವಂದನೆ ಸಲ್ಲಿಸಲಾಯಿತು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳು - ೧೯೯೯

೧೯೯೯ನೇ ಸಾಲಿನಲ್ಲಿ ೧೪-೩-೧೯೯೯, ಭಾನುವಾರದಂದು ಮಧ್ಯಾಹ್ನ ೧ ಗಂಟೆಯಿಂದ ೪ ಗಂಟೆಯವರೆಗೆ, ಎರಡನೆಯ ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಐದು ಕೇಂದ್ರಗಳಲ್ಲಿ ನಡೆಸಿದ 'ಇತಿಹಾಸ ಪ್ರಶಸ್ತಿ' ಪರೀಕ್ಷೆಗಳಿಗೆ ಒಟ್ಟು ೪೮೩೪ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಶೇಕಡಾ ೮೦ರಷ್ಟು ವಿದ್ಯಾಥಿಗಳು ಪರೀಕ್ಷೆಗಳಿಗೆ ಹಾಜರಾಗಿದ್ದಾರೆ. ತೇರ್ಗಡೆಯಾದವರ ಪೈಕಿ ಕೆಳಕಂಡ ವಿದ್ಯಾರ್ಥಿಗಳು ಬಹುಮಾನಗಳನ್ನು ಗಳಿಸಿದ್ದಾರೆ.

ಒಂದನೇ ಬಹುಮಾನ (ರೂ. ೧,೦೦೦) : ***ಎಚ್. ಎಂ. ಮಂಜುನಾಥ,*** ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ.

ಎರಡನೇ ಬಹುಮಾನ (ರೂ. ೬೦೦) : **ಅರುಂಧತಿ ತಿಪ್ಪಣ್ಣ ಲಂಗ್ಟಿ,** ವಿದ್ಯಾನಂದ ಗುರುಕುಲ ಪ. ಪೂಸ. ಕಾಲೇಜು, ಕುಕನೂರು, ಕೊಪ್ಪಳ ಜಿಲ್ಲೆ.

ಮೂರನೇ ಬಹುಮಾನ (ರೂ. ೪೦೦) : **ಟಿ. ಮಹಂತೇಶ,** ಶ್ರೀ ಸಿದ್ಧಗಂಗಾ ಪುರುಷರ ವಿಜ್ಞಾನ, ಕಲೆ, ವಾಣಿಜ್ಯ ಕಾಲೇಜು, ತುಮಕೂರು

ಸಮಾಧಾನ ಬಹುಮಾನಗಳು (ರೂ. ೨೦೦)

೧. ಶ್ರೀಕಾಂತ ಕೃಷ್ಣರಾವ್ ಕುಲಕರ್ಣಿ, ವಿದ್ಯಾನಂದ ಗುರುಕುಲ ಪ. ಪೂ. ಕಾಲೇಜು, ಕುಕನೂರು, ಕೊಪ್ಪಳ ಜಿಲ್ಲೆ

೨. ಚಕ್ರಸಾಲಿ ಬಸವರಾಜ ವೀರಪ್ಪ, ಹುಲಕೋಟಿ ಸಹಕಾರಿ ಶಿಕ್ಷಣ ಸಂಘದ ಪ. ಪೂ. ಕಾಲೇಜು, ಗದಗ

೩. ಬಿ. ಸಿ. ತಿಮ್ಮಯ್ಯ, ಶ್ರೀ ಸತ್ಯಸಾಯಿ ಲೋಕಸೇವಾ ಪ. ಪೂ. ಕಾಲೇಜು, ಅಳಿಕೆ, ದ.ಕ. ಜಿಲ್ಲೆ

೪. ಡಿ. ಕಣ್ಣಮ್ಮಾಳ್, ಮರಿಮಲ್ಲಪ್ಪ ಪ. ಪೂ. ಕಾಲೇಜು, ಮೈಸೂರು (ಕೇಂದ್ರಕ್ಕೆ ವಿಶೇಷ ಬಹುಮಾನ)

ಪರೀಕ್ಷೆಗಳ ಯಶಸ್ಸಿಗೆ ಕಾರಣರಾದ ಬೆಂಗಳೂರಿನ ಶ್ರೀ ಸಿ. ಆರ್. ಗಾಡಗೋಳಿ, ಶೇಷಾದ್ರಿಪುರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ॥ ಜಿ. ಎಸ್. ವೆಂಕಟರಾಜು ಮತ್ತು ಇತಿಹಾಸ ವಿಭಾಗದ ಪ್ರೊ॥ ರಾಧಾಕೃಷ್ಣ, ಎಸ್. ಜೆ. ಆರ್. ಸಿ. ಕಾಲೇಜಿನ ಇತಿಹಾಸ ವಿಭಾಗದ ಡಾ॥ ಮಲ್ಲಿಕಾರ್ಜುನ, ಮೈಸೂರಿನ ಶ್ರೀ ಮೈ.ನಾ.ಶರ್ಮ, ಧಾರವಾಡದ ಡಾ॥ ಅಜಿತ ಪ್ರಸಾದ್ ಜೈನ್ ಹಾಗೂ ಡಾ॥ ಎಚ್. ಆರ್. ರಘುನಾಥ ಭಟ್, ಗುಲಬರ್ಗಾದ ಡಾ॥ ಸ್ವಾಮಿರಾವ್ ಕುಲಕರ್ಣಿ ಹಾಗೂ ಮಂಗಳೂರಿನ ಪ್ರೊ॥ ಎಂ. ಆರ್. ಪ್ರಭು ಅವರಿಗೆ ಅಕಾದೆಮಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅಂತೆಯೇ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಪರೀಕ್ಷಾ ಸಂದರ್ಭದಲ್ಲಿ ಸಹಕರಿಸಿದ ಆಯಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ಅಧಿಕಾರ ವರ್ಗ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ಇತಿಹಾಸ ಉಪನ್ಯಾಸಕರು ಹಾಗೂ ಸ್ಥಳಾವಕಾಶ ನೀಡಿದ ಬಸವೇಶ್ವರ ಶಿಕ್ಷಣ ಸಂಸ್ಥೆಗಳ ಅಧಿಕಾರಿ ವರ್ಗಕ್ಕೆ ಅಕಾದೆಮಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕಾರ್ಯಕಾರಿ ಸಮಿತಿ ಸಭೆಗಳು:

೧೯೯೯ನೆಯ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರೀ ಸಮಿತಿಯು ಮೂರು ಬಾರಿ (೨೨-೨-೧೯೯೯, ೧೦-೫-೧೯೯೯, ೧೨-೬-೧೯೯೯) ಸಭೆ ಸೇರಿ, ಅಕಾದೆಮಿಯ ಚಟುವಟಿಕೆಗಳು ಉತ್ತಮವಾಗಿ ನಡೆಯಲು ಕಾರಣವಾಗಿದೆ. ತಮ್ಮ ಎಲ್ಲಾ ಕಾರ್ಯಕ್ರಮಗಳ ನಡುವೆಯೂ ಬಿಡುವು ಮಾಡಿಕೊಂಡು, ಅನೇಕ ಮೇಳೆ ಖುದ್ದಾಗಿ ಪಾಲ್ಗೊಂಡು ಅಥವಾ ಪತ್ರಮುಖೇನ ಸಲಹೆಗಳನ್ನು ನೀಡುತ್ತಾ ಅಕಾದೆಮಿಯ ಕಾರ್ಯಕಾರೀ ಸಮಿತಿಯ ಸದಸ್ಯರೆಲ್ಲರೂ ಸಹಕರಿಸಿದ್ದಾರೆ.

ಸದಸ್ಯಬಲ:

೧೯೯೯ರ ಅಂತ್ಯಕ್ಕೆ ಅಕಾದೆಮಿಯ ಸದಸ್ಯಬಲವು ಈ ಕೆಳಕಂಡಂತಿದೆ.

ಅಜೀವ	ಸಾಮಾನ್ಯ	ಸಂಸ್ಥೆ	ಒಟ್ಟು
೭೯೬	೧೦	೨೫	೮೩೧

ಅಕಾದೆಮಿಯ ಘಟಕಗಳು

ಡಾ|| ಬೆಂ. ಶಾ. ಶ್ಯಾಮಲಾ ರತ್ನಕುಮಾರಿ ಅವರ ಅಧ್ಯಕ್ಷತೆ ಹಾಗೂ ಶ್ರೀಮತಿ ಭಾಗ್ಯರೇಖಾ ಅವರ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ನಗರ ಘಟಕವೂ, ಡಾ|| ಕೆ. ವಿ. ರಮೇಶ ಅವರ ಅಧ್ಯಕ್ಷತೆ ಹಾಗೂ ಶ್ರೀ ಮೈ. ನಾಗರಾಜ ಶರ್ಮ ಅವರ ಕಾರ್ಯದರ್ಶಿತ್ವದಲ್ಲಿ ಮೈಸೂರು ಘಟಕವೂ ಕಾರ್ಯ ನಿರ್ವಹಿಸುತ್ತಿದ್ದು, ಉಳಿದಂತೆ ಧಾರವಾಡ, ಶಿವಮೊಗ್ಗ, ಬಿಜಾಪುರ, ಬಳ್ಳಾರಿ ಘಟಕಗಳು ಕಳೆದ ಅವಧಿಯ ಪದಾಧಿಕಾರಿಗಳ ನೇತೃತ್ವದಲ್ಲಿಯೇ ಮುಂದುವರಿದಿದ್ದು ಅವುಗಳ ಅಧಿಕಾರವು ೨೦೦೦ನೇ ಸಾಲಿನಲ್ಲಿ ಬದಲಾಗುವ ನಿರೀಕ್ಷೆ ಇದೆ.

ಬೆಂಗಳೂರಿನ ನಗರ ಘಟಕವು ಕಳೆದ ಸಾಲಿನಲ್ಲಿ ಅರಂಭಿಸಿದ ಮಾಸಿಕ ಉಪನ್ಯಾಸ ಮಾಲೆಯ ೧೨ ಕಾರ್ಯಕ್ರಮಗಳು ಈವರೆಗೆ ಯಶಸ್ವಿಯಾಗಿ ನಡೆದಿದ್ದು, ಅದು ಇನ್ನು ಮುಂದೆಯೂ ಮುಂದುವರಿಯುವ ಸೂಚನೆಗಳಿವೆ. ಮಾಸಿಕ ಉಪನ್ಯಾಸಗಳನ್ನು ಪ್ರತಿ ತಿಂಗಳ ಮೊದಲ ಶುಕ್ರವಾರ ಸಂಜೆ ೬ ಗಂಟೆಗೆ ಬೆಂಗಳೂರಿನ ರಾಜಾಜಿನಗರದಲ್ಲಿರುವ ಬಸವೇಶ್ವರ ಪದವಿ ಕಾಲೇಜಿನಲ್ಲಿ ನಡೆಯುತ್ತಿದೆ. ಸ್ಥಳಾವಕಾಶ ನೀಡಿ ಸಹಕರಿಸುತ್ತಿರುವ ಕಾಲೇಜಿನ ಅಧಿಕಾರ ವರ್ಗ ಮತ್ತು ಸಹಕರಿಸುತ್ತಿರುವ ಬಸವೇಶ್ವರ ಶಿಕ್ಷಣ ಸಂಸ್ಥೆಗೆ ಅಕಾದೆಮಿಯ ಕೃತಜ್ಞವಾಗಿದೆ.

ಕೃತಜ್ಞತೆಗಳು

ಅಕಾದೆಮಿಯ ಹಲವಾರು ಕಾರ್ಯಗಳಿಗೆ ಸಹಯೋಗ ನೀಡಿ ಸಹಕರಿಸುತ್ತಿರುವ ಬೆಂಗಳೂರಿನ ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಿ. ಆರ್. ಆರ್. ಫ್ಯಾಮಿಲಿ ಟ್ರಸ್ಟ್, ಲಕ್ಷ್ಮೀ ಮುದ್ರಣಾಲಯ, ವಾಗ್ದೇವಿ ಮುದ್ರಣಾಲಯ, ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ, ಪ್ರಗತಿ ಸಹಕಾರ ಬ್ಯಾಂಕ್, ಶ್ರೀ ಅಶೋಕ ಕುಮಾರ್, ಬಸವೇಶ್ವರ ಕಾಲೇಜಿನ ಅಧಿಕಾರ ವರ್ಗ ಮತ್ತು ಸಿಬ್ಬಂದಿ, ಹರಪನಹಳ್ಳಿಯ ಶ್ರೀ ಕುಂ. ಬಾ. ಸದಾಶಿವಪ್ಪ ಮತ್ತು ಅನೇಕ ಸದಸ್ಯ ಗೆಳೆಯರು ಇತಿಹಾಸ ಪ್ರಶಸ್ತಿ ಪರೀಕ್ಷೆಗಳ ಸಂದರ್ಭ ಸಹಕರಿಸಿರುವ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಮತ್ತು ಇನ್ನೂ ಅನೇಕ ವಿಶ್ವಾಸಿಗಳಿಗೆ ಅಕಾದೆಮಿಯ ಕೃತಜ್ಞವಾಗಿದೆ.

ಕಾರ್ಯಕಾರೀ ಸಮಿತಿಯ ಅನುಮತಿಯ ಮೇರೆಗೆ

ಡಾ|| ಸೂರ್ಯನಾಥ ಕಾಮತ್
ಅಧ್ಯಕ್ಷರು

ಎಂ. ಜಿ. ನಾಗರಾಜ್
ಉಪಾಧ್ಯಕ್ಷರು

ಪ್ರೊ|| ಲಕ್ಷ್ಮಣ್ ತೆಲಗಾವಿ
ಉಪಾಧ್ಯಕ್ಷರು

ಡಾ|| ಎಚ್. ಎಸ್. ಗೋಪಾಲರಾವ್
ಪ್ರಧಾನಕಾರ್ಯದರ್ಶಿ

ಎಂ.ಬಿ. ಪಾಟೀಲ್
ಕೋಶಾಧ್ಯಕ್ಷರು

ಡಾ|| ಎಚ್. ಆರ್. ರಘನಾಥ ಭಟ್
ಕಾರ್ಯದರ್ಶಿ

ಡಾ|| ಕೆ. ವಸಂತಲಕ್ಷ್ಮೀ
ಕಾರ್ಯದರ್ಶಿ

"SHREESHA SHARANAM"

ACHARYA & Co.,
CHARTERED ACCOUNTANTS

`SRI KRISHNA'
13/3, Pampamahakavi Road,
Bangalore - 560 004
Phone : 6509606
Fax : 080-6618897

Ref :

Date :.....................

AUDITOR'S REPORT

The Members of Karnataka Itihasa Academy.

We have audited the Balance Sheet of karnataka Itihasa Academy as at 31st December 1999 and Income and expenditure Account on that date annexed the rate and report that:

1. The method of accounting adopted by the Academy is Cash System.
2. We have obtained all the information and explanations which to the best of our knowledge and belief were necessary for the purpose of our Audit.
3. The Balance Sheet and the Income and Expenditure Account dealt with by this report are in agreement with the Books of accounts.
4. In our opinion and to the best of our information and according to the explanations given to us, the accounts give a true and fair view:-
   (i) in the case of Balance Sheet of the State of Affairs of the Academy as at 31st December 1999 and
   (ii) in the case of the Income and Expenditure Account of the Income for the year ended on that date.

For Acharya & Co.
Chartered Accountants

Sd/-
(K.V. Acharya)
Proprietor

Bangalore,
19th June 2000.

KARNATAKA ITHIHASA ACADEMY : Banglore - 560 019

Receipts and Payments account for the year ended 31st December, 1999

RECEIPTS		AMOUNT	PAYMENTS		AMOUNT
To Balance B/f			By Fixed Deposit with the Pragathi		
" Cash in hand	928.41		Co.op Bank Ltd., F.D.R. No.		
" Cash at Syndicate bank			5652 and5692		45,000.00
BWSSB Branch,			" The S.J.B.S.S F.D.R. No. 84		50,000.00
S.B. A/C No. 12467	10,399.70	11,328.11	" K. H. Examination Expenses		1,19,223.00
" Life Membership fees		28,626.00	" Prize Money Awarded		2,905.00
" Annual Membership Fees		350.00	" Heritage Week Celebrations expenses		26,981.00
" Grants received for Heritage			" 12th Annual Conference Expenses		13,404.72
Week Celebrations		25,000,00	" Printing of Ithihasa Darshan Vol. XIV		82,000.00
" K. H. Examination Fees		1,94,889.00	" Postage & Telegrams		6,133.00
" Fixed Deposit (withdrawal of			" Rent		3,960.00
F.D.R. No. 5069 & 4039 with Pragathi			" Printing & Stationery		4,470.00
Co. Op Bank Ltd.)		45,000.00	" Conveyance		3,410.00
" Interest on Fixed Deposits			" Audit Fees for 1998		2,000.00
" The Pragathi Co.Op Bank Ltd.,		29,621.00	" Bank Charges		64.00
" The S.J.B.S Sangha		12,957.00	" Miscellaneous Expenses		
" Interest on S.B. A/C		1,122.00	a) Donations :		
" Interest on Rental Deposit		1,250.00	i) National Defence Fund - Kargil	5,000/-	
" Donations received for 12th			ii) Chief Ministers Orissa		
Annual Conference		16,150.00	Cyclone Victims Relief Fund		
" Sale of Publications		1,905.00		1,000/-	
" Miscellaneous Receipts			b) Others	3,510/-	9,510.00
i) Members contribution for National			By Balance C/d		
Defence Fund Kargil	2,650.00		" Cash on hand	443.69	
ii) Others	1,520.00	4,170.00	" Cash at Syndicate Bank		
			BWSSB Branch, S.B. A/C		
			No. 12467	2,863.70	3,307.39
Total		Rs. 3, 72, 368. 11	Total		Rs. 3, 72, 368. 11

Bangalore
19th June, 2000.

Suryanatha Kamat	H.S. Gopala Rao	M.B.Patil	(K.V. ACHARYA)
President	Gen. Secretary	Treasurer	Chartered Accountant

KARNATAKA ITHIHASA ACADEMY : Bangalore - 560 019

Income and Expenditure Account for the year ended 31st December, 1999

EXPENDITURE		AMOUNT	INCOME		AMOUNT
To. K.H. Examination		1,19,223.00	By Annual Membership Fees		350.00
" Prize Money Awarded		2,905.00	" Grant for Heritage Week		
" Heritage Week Celebrations		26,981.00	Celebrations		25,000.00
" 12th Annual Conference expenses		13,404.72	" K. H. Examination Fees		1,94,889.00
" Printing of Ithihasa Darshan			" Interest		
Vol. XIV		82,000.00	i) On Fixed Deposits		
" Rent		3,960.00	The Pragathi Co. Op Bank Ltd.,	29,621/-	
" Printing & Stationery		4,470.00	The S. J. B. S.S. (N)	12,957/-	
" Postage & Telegrams		6,133.00		42,578/-	
" Travelling & Conveyance		3,410.00	ii) On Rental Deposit	1,250/-	
" Audit Fees		2,500.00	iii) On S.B.A/C	1,222/-	44,950.00
" Bank Charges		64.00	" Donations received for		
" Miscellaneous Expenses			12th Annual Conference		16,150.00
a) Donations:			" Sale of Publications		1,905.00
i) National Defence Fund - Kargil	5,000/-		" Miscellaneous Receipts		
			Members Contribution For		
ii) Chief Minister's Orissa			National Defence Fund	2,650/-	
Cyclone Victims Relief Fund	1,000/-		Others	1,520/-	4,170.00
b) Others	3,510/-	9,510.00			
" Depreciation		258.83			
" Excess of Income over Expenditure		12,594.45			
	Total	Rs. 2,87,414.00		Total Rs.	2,87,414.00

Bangalore	Suryanatha kamath	H. S. Gopala Rao	M. B. Patil	(K.V. ACHARYA)
19th june, 2000.	President	Gen. Secretary	Treasurer	Chartered Accountant

KARNATAKA ITHIHASA ACADEMY : Bangalore - 560 019

Balance Sheet of as at 31st December, 1999

LIABILITIES		AMOUNT	ASSETS		AMOUNT
Life Membership Fees			Furniture & Fixtures	2,588.30	
As per Last Balance Sheet	2,29,292		LESS; Depreciation @ 10%	258.83	2,329.47
ADD: Collected during the year	28,626	2,57,918.00	Rental Deposit		10,000.00
Excess of Income over			Fixed Deposit with		
Expenditure			The Pragathi Co.Op Bank Ltd.		
As per Last Balance Sheet	62,624.41		(Per Sch)	2,20,000.00	
ADD: Excess of Income over			Sri Jagadjyothi Basaveshwara		
Expenditure	12,594,45	75,218.86	Sahakara Sangha (N)		
Outstanding Audit Fees		2,500.00	(Per Sch)	1,00,000.00	3,20,000.00
			CASH AND BANK BALANCES:		
			Cash on hand	443.69	
			Cash at Syndicate Bank	2,863.70	3,307.39
	Total	Rs. 3,35,636.86		Total	Rs. 3,35,636.86

Bangalore	Suryanatha kamath	H. S. Gopala Rao	M. B. Patil	(K.V. ACHARYA)
19th june, 2000.	President	Gen. Secretary	Treasurer	Chartered Accountant

ಕರ್ನಾಟಕ ಇತಿಹಾಸ ಅಕಾದೆಮಿ, (ರಿ) ಬೆಂಗಳೂರು - ೧೯

ಆಯವ್ಯಯ ಪಟ್ಟಿ ವರ್ಷ ೨೦೦೦

ನಿರೀಕ್ಷಿತ ಆದಾಯ	ರೂ.	ನಿರೀಕ್ಷಿತ ಖರ್ಚು	ರೂ.
೧. ಅಜೀವ ಸದಸ್ಯತ್ವದ ಶುಲ್ಕ	೧೦,೪೫೦	೧. ಇತಿಹಾಸ ಪ್ರಶಸ್ತಿ ಪರೀಕ್ಷೆ ೨೦೦೦ ನಿವಳ ಖರ್ಚು	೧,೩೪,೩೭೫
೨. ಸದಸ್ಯರಿಂದ ಬರಬೇಕಾದ ಬಾಕಿ	೧೦,೦೦೦	೨. ೧೫ನೇ ವಾರ್ಷಿಕ ಸಮ್ಮೇಳನ	೧೫,೦೦೦
೩. ಸಾಮಾನ್ಯ ದೇಣಿಗೆ (ಸದಸ್ಯರಿಂದ)	೩,೦೦೦	೩. ಇತಿಹಾಸ ದರ್ಶನ ೧೫ನೇ ಸಂಪುಟ ಮುದ್ರಣ ವೆಚ್ಚ	೭೫,೦೦೦
೪. ಇತಿಹಾಸ ಪ್ರಶಸ್ತಿ ಪರೀಕ್ಷೆ ನಿವ್ವಳ (೨೦೦೦ ಮಾರ್ಚ್)	೨,೦೮,೪೭೦	೪. ಇತರೇ ಕಾರ್ಯಕ್ರಮಗಳಿಗೆ ಮುದ್ರಣ ವೆಚ್ಚ	೧೦,೦೦೦
೫. ಪರಂಪರೆ ಉಳಿಸಿ (ನಿವ್ವಳ) ಸಪ್ತಾಹಕ್ಕೆ ಸರ್ಕಾರದ ಆರ್ಥಿಕ ನೆರವು	೨೫,೦೦೦	೫. ಲೇಖನ ಸಾಮಗ್ರಿ (ಕಛೇರಿ)	೫,೦೦೦
೬. ಠೇವಣಿಗಳ ಮೇಲಿನ ಬಡ್ಡಿ	೪೦,೦೦೦	೭. ಪ್ರಯಾಣ ವೆಚ್ಚ (ಕನವೇಯನ್ಸ)	೫,೦೦೦
೭. ಇತರೇ ಮೂಲಗಳಿಂದ	೨,೦೦೦	೮. ಕಛೇರಿ ಬಾಡಿಗೆ	೬,೦೦೦
	೨,೯೮,೯೨೦	೯. ಲೆಕ್ಕ ತಪಾಸಣಾ ಶುಲ್ಕ	೩,೦೦೦
		೧೦. ಸ್ಥಳೀಯ ಘಟಕಗಳಿಗೆ ನೆರವು	೩,೦೦೦
		೧೧. ಪರಂಪರೆ ಉಳಿಸಿ ಸಪ್ತಾಹದ ವೆಚ್ಚ	೩೫,೦೦೦
		೧೨. ಆರ್ಥಿಕ ನೆರವು (ವಿಶೇಷ ಕಾರ್ಯಕ್ರಮಕ್ಕೆ)	೧೦,೦೦೦
		೧೩. ಇತರೇ ವೆಚ್ಚಗಳು	೫,೦೦೦
ಆದಾಯಕ್ಕಿಂತ ಹೆಚ್ಚಿನ ಖರ್ಚು	೧೪,೪೫೫	೧೪. ವಿಶೇಷ ಉಪನ್ಯಾಸಗಳು ಬೆಂಗಳೂರು ಸ್ಥಳೀಯ ಘಟಕ	೫,೦೦೦
ಒಟ್ಟು	೩,೧೩,೩೭೫	ಒಟ್ಟು	೩,೧೩,೩೭೫

ಕಾರ್ಯಕಾರಿ ಸಮಿತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ

ಪ್ರಾಚೀನ ದೇಗುಲ, ಮೂರ್ತಿ
ನಮ್ಮ ಕಲೆಯ ಕೀರ್ತಿ

ತಾಳೆ ಗ್ರಂಥ ರಕ್ಷಣೆ
ಹಳೆಯ ಪರಂಪರೆಯ ಪೋಷಣೆ

ಪ್ರಾಚೀನ ಶಾಸನಗಳ ನಾಶ
ಇತಿಹಾಸ ಪುರುಷನಿಗೆ ಪಾಶ





ಅವುಗಳ ಸಂರಕ್ಷಣೆ
ನಮ್ಮ ಕರ್ತವ್ಯ

ನೆರವು: ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ





